ಸಿದ್ಧೇಶ್ವರಯೋಗಿಗಳ ರಚನ ಸಂಪುಟ: ೨೨

ವಚನ ಸಾಹಿತ್ಯ

ಭಾಗ-೨



320
5205

ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ - ಗದಗ

ಪೀಠಾರೋಹಣ ರಜತಸಂಪುಟ : ೨೨

ವಚನಶಾಸ್ತ್ರಸಾರ

ಭಾಗ-೨

ಸಂಪಾದಕರು
ಡಾ. ಫ. ಗು. ಹಳಕಟ್ಟಿ

ಪರಿಷ್ಕರಣ
ಪ್ರೊ।। ವಿ. ವೀ. ಸಂಗಮದ
ಪೂಜ್ಯ ಡಾ. ಚೆನ್ನಬಸವ ಮಹಾಸ್ವಾಮಿಗಳವರು ಪಾಂಡೋಮಟ್ಟಿ
ಡಾ. ವೀರಣ್ಣ ರಾಜೂರ
ಶ್ರೀ ಬಸವರಾಜಪ್ಪನವರು ಅಜ್ಜಂಪುರಶೆಟ್ಟರು

ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ

VACHANASHASTRASARA : Ed. by Sri F. G. Halakatti, Revised byProf V. V. Sangamad, Shri Channabasava swamiji, Pandomatti, Basavarajappa Ajjampur Shettaru and Dr. Veeranna Rajoor, and Published by Veerashaiva Adhyayana Samsthe, Shri Jagadguru Tontadarya Samsthana Matha, Dambal-Gadag.

First Edition : July 1999
Price : Rs. 150–00
Pages : xxvii + 525
Copies : 1000

ಗ್ರಂಥ ದಾಸೋಹಿಗಳು

ಶ್ರೀ ಮ. ನಿ. ಪ್ರ. ಅಲ್ಲಮಪ್ರಭು ಮಹಾಸ್ವಾಮಿಗಳು
ಶ್ರೀ ಸಿದ್ಧಸಂಸ್ಥಾನಮಠ, ಚಿಂಚಣಿ–ಶಿರೋಳ.

*

ಶ್ರೀ ಸಂಗಪ್ಪ ರೆಬಿನಾಳ ಸಿಂದಗಿ

© ಪ್ರಕಾಶಕರು

ಪ್ರತಿಗಳು : ಒಂದು ಸಾವಿರ
ಬೆಲೆ : ರೂಪಾಯಿ ಒಂದುನೂರಾಐವತ್ತು
ಮೊದಲ ಮುದ್ರಣ : ಜುಲೈ–೧೯೯೯.

ಮುದ್ರಕರು :
ಫ. ಶಿ. ಭಾಂಡಗೆ
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ–೫೮೨ ೧೦೧
✆ : ೩೭೫೬೬, ೩೫೫೦೯ (O), ೩೬೫೭೮ (R)

ಪ್ರಕಾಶಕರ ಮಾತು

ಶರಣ ಪರಂಪರೆಯ ಇತಿಹಾಸದಲ್ಲಿ ದ್ವಿತೀಯ ಘಟ್ಟವನ್ನು ತೆರೆದ ಅದ್ವಿತೀಯ ವ್ಯಕ್ತಿಗಳು ೧೬ನೆಯ ಶತಮಾನದ ಏಳುನೂರೊಂದು ವಿರಕ್ತರು. ಈ ವಿರಕ್ತ ಸಮುದಾಯಕ್ಕೆ ಶಿವಯೋಗಿ ಸೂರ್ಯನಾಗಿ ಬೆಳಗಿದವರು, ತೋಂಟದ ಶ್ರೀ ಸಿದ್ಧಲಿಂಗಯತಿಗಳು. ದ್ವಿತೀಯ ಅಲ್ಲಮ ಖ್ಯಾತಿಯಿಂದ ಶೂನ್ಯಪೀಠಾರೋಹಣ ಮಾಡಿದ ಇವರು ಬಸವಣ್ಣನ ಸಂಘಟನೆ, ಪ್ರಭುದೇವರ ವೈರಾಗ್ಯದ ಸಂಗಮ ವೆನಿಸಿದ್ದಾರೆ. ಅಲ್ಲಮಪ್ರಭು ಸಂಪ್ರದಾಯದ ಈ ತೋಂಟದಾರ್ಯಪೀಠದ ನೇರ ವಾರಸುದಾರರು, ಗದುಗಿನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು. ಸಾಮಾನ್ಯರ ಸ್ವಾಮೀಜಿ ಎಂದೇ ಪ್ರಸಿದ್ಧರಾದ ಶ್ರೀಗಳು ಈ ಶೂನ್ಯಸಿಂಹಾಸನಾರೋಹಣ ಮಾಡಿದ ೨೫ನೆಯ ವರ್ಷದ ನೆನಪಿನ ನಿಧಿಯೆಂಬಂತೆ ೨೫ ಪುಸ್ತಕಗಳನ್ನು ಹೊರ ತರಲಾಗುತ್ತಿದೆ.

ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ, ವೀರಶೈವ ಪುರಾತನ ಸಾಹಿತ್ಯ ರತ್ನಮಾಲೆ, ವೀರಶೈವ ನೂತನ ಸಾಹಿತ್ಯ ರತ್ನಮಾಲೆ, ಗ್ರಾಮೀಣ ಸಾಹಿತ್ಯ ರತ್ನಮಾಲೆ, ವೀರಶೈವ ಅಪ್ರಕಟಿತ ಗ್ರಂಥ ಮಾಲೆಗಳ ಮೂಲಕ ೨೦೦ಕ್ಕೂ ಹೆಚ್ಚು ಪುಸ್ತಕಗಳು ಕಳೆದ ೨೫ ವರ್ಷಗಳ ಅವಧಿಯಲ್ಲಿ ''ವೀರಶೈವ ಅಧ್ಯಯನ ಸಂಸ್ಥೆ''ಯಿಂದ ಪ್ರಕಟವಾಗಿರುವುದು ಕರ್ನಾಟಕದ ಗ್ರಂಥ ಪ್ರಕಟನೆಯ ಇತಿಹಾಸದಲ್ಲಿಯೇ ಒಂದು ಉಜ್ವಲ ದಾಖಲೆ. ಈ ಐತಿಹಾಸಿಕ ಪ್ರಕಟನೆಯ ಕಾರ್ಯ ಸಾಧ್ಯವಾದದ್ದು ೨೫ ವರ್ಷಗಳ ಹಿಂದೆ ಪೀಠಾರೋಹಣ ಮಾಡಿದ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಹಾಗೂ ಈ ಸಂಸ್ಥೆಯ ರೂವಾರಿಯಾಗಿರುವ ಡಾ. ಎಂ. ಎಂ. ಕಲಬುರ್ಗಿಯವರಿಂದ.

ಶ್ರೀಗಳ ಪೀಠಾರೋಹಣವಾಗಿ ೧೯೯೯ರ ಜುಲೈ ೨೯ ಕ್ಕೆ ಸರಿಯಾಗಿ ಇಪ್ಪತ್ತೈದು ವರ್ಷ ತುಂಬುತ್ತವೆ. ಈ ಅವಧಿಯಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ವೈಚಾರಿಕವಾಗಿ ಶ್ರೀಮಠವಷ್ಟೇ ಅಲ್ಲ ಇಡೀ ಗದಗು ಬೆಳೆದ ಎತ್ತರ ಬೆರಗುಗೊಳಿಸುವಂತಹುದು ; ಸಮರ್ಥ ಸ್ವಾಮಿಯೊಬ್ಬರು ಒಂದು ಜನಾಂಗದ ಬದುಕಿನ ಯೋಚನೆಯ ದಿಕ್ಕನ್ನೇ ಬದಲಿಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗುವಂತಹದು.

'ಭಕ್ತರ ಮುಖದರ್ಪಣದಲ್ಲಿ ಲಿಂಗವ ಕಾಣುವುದು' ಎಂಬ ಶರಣ ವಾಣಿಯನ್ನು ಬದುಕುತ್ತಲಿರುವ ಶ್ರೀಗಳ ಪೀಠಾರೋಹಣ ಬೆಳ್ಳಿಹಬ್ಬವನ್ನು ವಿಧಾಯಕವಾಗಿ ಆಚರಿಸಬೇಕೆಂದು ನಿರ್ಧರಿಸಿದ 'ಶ್ರೀಗಳ ಪಟ್ಟಾಧಿಕಾರ ರಜತೋತ್ಸವ ಸಮಿತಿ' ಸಮಾಜ ಪರವಾದ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ

ಪುಸ್ತಕ ಪ್ರಕಟನೆ ಯೋಜನೆಯೂ ಒಂದು. ಶ್ರೀಗಳಿಗೆ ಬಾಲ್ಯದಿಂದಲೂ ಪುಸ್ತಕ ಗಳೆಂದರೆ ಪ್ರಾಣ. ಆ ಕಾರಣಕ್ಕಾಗಿ ರಜತೋತ್ಸವದ ಸವಿ ನೆನಪಿಗೆ ೨೫ ಪುಸ್ತಕಗಳನ್ನು, ಒಂದು ಅಭಿನಂದನ ಗ್ರಂಥವನ್ನು, ಒಂದು ಗೌರವ ಗ್ರಂಥವನ್ನು ಅರ್ಪಿಸಬೇಕೆಂದು ಸಮಿತಿ ತೀರ್ಮಾನಿಸಿತು. ಅದರ ಫಲಶ್ರುತಿ ಈ 'ಪೀಠಾರೋಹಣ ರಜತ ಸಂಪುಟ ಮಾಲೆ'.

೨೫ ಪುಸ್ತಕಗಳ ಈ ಮಾಲೆಯಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗ ಆಯ್ದ ವಚನಗಳ ಸಂಗ್ರಹಗಳು ; ಎರಡನೆಯ ಭಾಗ ಇತರ ಕೃತಿಗಳು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ 'ಸಮಗ್ರ ವಚನ ಸಂಪುಟ', ವಚನ ಸಾಹಿತ್ಯ ಪ್ರಕಟನೆಯ ಮಹಾಮಾರ್ಗದ ಮೈಲಿಗಲ್ಲು. ಆ ಸಂಪುಟಗಳನ್ನೇ ಆಕರವಾಗಿಟ್ಟುಕೊಂಡು, ಆತ್ಮಶೋಧ–ಮಾನವಸಂದೇಶ–ಸಾಮಾಜಿಕ ನ್ಯಾಯ–ಜನಪರ ಕಾಳಜಿಗಳುಳ್ಳ, ಅಜ್ಞಾನ–ಮೂಢನಂಬಿಕೆಗಳನ್ನು ವಿರೋಧಿಸುವ ಭಾವನಿಷ್ಠ –ಚಿಂತನಪರವೆನಿಸುವ ವಚನಗಳನ್ನು ಇಲ್ಲಿ ಆಯ್ಕೆ ಮಾಡಲಾಗಿದೆ. ಮತತತ್ವ ವಿವೇಚನೆಯ, ಬೆಡಗು ನಿರೂಪಣೆಯ, ಜಟಿಲ ಹಾಗೂ ದೀರ್ಘ ವಚನಗಳನ್ನು ಕೈಬಿಡಲಾಗಿದೆ.

ಒಂದು ''ಪಾರಿಭಾಷಾ ಕೋಶ''ವನ್ನು ಹೊರತುಪಡಿಸಿ ೧೪ ವಚನ ಸಂಪುಟ ಗಳನ್ನು ಕರ್ನಾಟಕ ಸರಕಾರ ಪ್ರಕಟಿಸಿದ್ದಿತು. ಸಂಕೀರ್ಣ ವಚನ ಸಂಪುಟ ೮ ಮತ್ತು ೯ರ ವಚನಗಳನ್ನು ನಮ್ಮ ಆಶಯಕ್ಕನುಗುಣವಾಗಿ ಸಂಗ್ರಹಿಸುವಲ್ಲಿ ಅವು ಎರಡೂ ಸೇರಿ ಒಂದು ಸಂಪುಟ ರೂಪಗೊಂಡಿತು. ಹೀಗಾಗಿ ಸರಕಾರದ ೧೪ ಸಂಪುಟ ಗಳನ್ನವಲಂಬಿಸಿ ೧೩ ವಚನ ಸಂಗ್ರಹ ಸಂಪುಟಗಳನ್ನು ಇಲ್ಲಿ ಸಂಯೋಜಿಸಲಾಗಿದೆ. ಇಲ್ಲಿಂದ ಮುಂದಿನ ೨ ನೆಯ ಭಾಗದ ೧೨ ಕೃತಿಗಳು ಪ್ರಾಚೀನ, ಆಧುನಿಕ ಸಾಹಿತ್ಯದ ರಚನೆಗಳಾಗಿದ್ದು, ಒಟ್ಟು ಇಪ್ಪತ್ತೈದು ಶೀರ್ಷಿಕೆಗಳು ಈ ಮುಂದಿನಂತಿವೆ.

ಭಾಗ : ಒಂದು

೧.	ವಚನ ವಾಹಿನಿ – ೧	ಸಂ : ಮ. ನ. ಜವರಯ್ಯ
೨.	ವಚನ ವಾಹಿನಿ – ೨	ಸಂ : ಓ. ಎಲ್. ನಾಗಭೂಷಣಸ್ವಾಮಿ
೩.	ವಚನ ವಾಹಿನಿ – ೩	ಸಂ : ಟಿ. ಆರ್. ಚಂದ್ರಶೇಖರ
೪.	ವಚನ ವಾಹಿನಿ – ೪	ಸಂ : ಜಯಶ್ರೀ ದಂಡೆ
೫.	ವಚನ ವಾಹಿನಿ – ೫	ಸಂ : ಗಂಗಮ್ಮ ಸತ್ಯಂಪೇಟೆ
೬.	ವಚನ ವಾಹಿನಿ – ೬	ಸಂ : ಜಿ. ಎಂ. ಹೆಗಡೆ
೭.	ವಚನ ವಾಹಿನಿ – ೭	ಸಂ : ಬಿ. ಕೆ. ಹಿರೇಮಠ
೮.	ವಚನ ವಾಹಿನಿ – ೮	ಸಂ : ಎಸ್.ಬಿ. ಕೊಪ್ಪ-ಸಿ.ವಿ.ಪ್ರಭುಸ್ವಾಮಿಮಠ

೯.	ವಚನ ವಾಹಿನಿ – ೯	ಸಂ : ಚಂದ್ರಶೇಖರ ವಸ್ತ್ರದ
೧೦.	ವಚನ ವಾಹಿನಿ – ೧೦	ಸಂ : ಬಸವಲಿಂಗ ಸೊಪ್ಪಿಮಠ
೧೧.	ವಚನ ವಾಹಿನಿ – ೧೧	ಸಂ : ಮೃತ್ಯುಂಜಯ ರುಮಾಲೆ
೧೨.	ವಚನ ವಾಹಿನಿ – ೧೨	ಸಂ : ಚಂದ್ರಶೇಖರ ವಸ್ತ್ರದ
೧೩.	ವಚನ ವಾಹಿನಿ – ೧೩	ಸಂ : ಗುರುಪಾದ ಮರಿಗುದ್ದಿ, ಶ್ರೀನಿವಾಸ ಕುಲಕರ್ಣಿ

ಭಾಗ : ಎರಡು

೧೪.	ಕೊಂಡಗುಳಿ ಕೇಶಿರಾಜನ ಕೃತಿಗಳು	ಸಂ : ಎಂ. ಎಂ. ಕಲಬುರ್ಗಿ
೧೫.	ಹೊಸ ಪದ್ಧತಿಯ ಬಸವಣ್ಣನವರ ವಚನಗಳು	ಸಂ : ಫ. ಗು. ಹಳಕಟ್ಟಿ
೧೬.	ಸಿದ್ಧರಾಮ ಚಾರಿತ್ರ	ಸಂ : ಎಂ. ಬಿ. ನೇಗಿನಹಾಳ
೧೭.	ಪ್ರಭುಲಿಂಗ ಲೀಲೆ	ಸಂ : ಬಿ. ವ್ಹಿ. ಮಲ್ಲಾಪೂರ
೧೮.	ಷಟ್‌ಸ್ಥಲ ಜ್ಞಾನಸಾರಾಮೃತ	ಸಂ : ಆರ್. ಸಿ. ಹಿರೇಮಠ
೧೯.	ಷಟ್‌ಸ್ಥಲ ಶಿವಾಯಣ	ಸಂ : ಎಂ. ಎಂ. ಕಲಬುರ್ಗಿ
೨೦.	ಕಿತ್ತೂರ ಸಂಸ್ಥಾನ ಸಾಹಿತ್ಯ	ಸಂ : ಎಂ. ಎಂ. ಕಲಬುರ್ಗಿ
೨೧.	ವಚನಶಾಸ್ತ್ರಸಾರ ಭಾಗ–೧	ಸಂ : ಫ. ಗು. ಹಳಕಟ್ಟಿ
೨೨.	ವಚನಶಾಸ್ತ್ರಸಾರ ಭಾಗ–೨	ಸಂ : ಫ. ಗು. ಹಳಕಟ್ಟಿ
೨೩.	ನಿರ್ವಚನ	ಸಂ : ಚಂದ್ರಶೇಖರ ವಸ್ತ್ರದ
೨೪.	ಶಂಕರದಾಸಿಮಯ್ಯ ಪುರಾಣ : ಒಂದು ಅಧ್ಯಯನ (ಪಿಎಚ್.ಡಿ.ಪ್ರಬಂಧ)	ಡಾ. ಅನ್ನಪೂರ್ಣ ಜಾಲವಾದಿ
೨೫.	ಹರಿಹರನ ರಗಳೆಗಳು : ಒಂದು ಸಾಂಸ್ಕೃತಿಕ ಅಧ್ಯಯನ(ಪಿಎಚ್.ಡಿ.ಪ್ರಬಂಧ)	ಡಾ. ಸದಾನಂದ ಪಾಟೀಲ

ಈ ಎಲ್ಲ ಕೃತಿಗಳನ್ನು ಸಕಾಲದಲ್ಲಿ ಸಂಪಾದಿಸಿಕೊಟ್ಟ ಎಲ್ಲ ಮಹನೀಯರಿಗೆ ರಜತೋತ್ಸವ ಸಮಿತಿಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

ಈ ಎಲ್ಲ ಕೃತಿಗಳ ಪ್ರಕಟನೆಗೆ ಕಾರಣರಾದ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರನ್ನು ಹಾಗೂ ಕೃತಿಗಳನ್ನು ಪ್ರಕಟಿಸುತ್ತಿರುವ ವೀರಶೈವ ಅಧ್ಯಯನ ಸಂಸ್ಥೆಯವರನ್ನು ಹೃತ್ಪೂರ್ವಕವಾಗಿ ನೆನೆಯುವೆ.

ಈ ಯೋಜನೆಯ ಮಾರ್ಗದರ್ಶಕರಾಗಿ ಪ್ರಕಟನೆಯ ಎಲ್ಲ ಹಂತದಲ್ಲೂ ಕೈಹಿಡಿದು ಮುನ್ನಡೆಸಿದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿಯವರನ್ನು.

ಈ ಪುಸ್ತಕದ ಪ್ರಕಟನೆಗೆ ಗ್ರಂಥದಾಸೋಹದ ನೆರವು ನೀಡಿದ ಪೂಜ್ಯ ಶ್ರೀ ಮ. ನಿ. ಪ್ರ. ಅಲ್ಲಮ ಪ್ರಭುಮಹಾಸ್ವಾಮಿಗಳು ಶ್ರೀ ಸಿದ್ಧಸಂಸ್ಥಾನಮಠ, ಚಿಂಚಣಿ ಶಿರೋಳ ಹಾಗೂ ಸಿಂದಗಿಯ ಶ್ರೀ ಸಂಗಪ್ಪ ರೆಬಿನಾಳ ಅವರನ್ನು,

ಪೀಠಾರೋಹಣ ರಜತೋತ್ಸವ ಸಂಪುಟಗಳ ಗ್ರಂಥ ಪ್ರಕಟನ ಸಮಿತಿಯ ಸದಸ್ಯರಾಗಿ ಗ್ರಂಥ ಪ್ರಕಟಗೊಳ್ಳುವಲ್ಲಿ ಸಹಕರಿಸಿದ ಶ್ರೀಯುತರಾದ ಶೇ. ರಾ. ನರೇಗಲ್, ಎಸ್. ಆರ್. ಗೌಡರ, ಗಂಗಾಧರ ಕಲಬುರ್ಗಿ, ಎಂ. ಎಸ್. ಹುಣಸಿಮರದ, ಜಿ. ಕೆ. ವಾಲಿ, ಎಂ. ಎ. ಹಂಚಿನಾಳ, ಎಂ. ಬಿ. ಹಿರೇಮಠ ಅವರನ್ನು,

ಪ್ರಸ್ತುತ ಯೋಜನೆಯ ಯಶಸ್ವಿಗೆ ಕಾರಣರಾದ ರಜತೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಮಹಾಂತಣ್ಣ ಬಡ್ನಿ, ಕಾರ್ಯಾಧ್ಯಕ್ಷರಾದ ಡಾ. ಎನ್. ಬಿ. ಪಾಟೀಲ ಹಾಗೂ ಇನ್ನುಳಿದ ಪದಾಧಿಕಾರಿಗಳನ್ನು ಈ ಸಂದರ್ಭದಲ್ಲಿ ತುಂಬು ಮನದಿಂದ ನೆನೆಯುತ್ತೇನೆ.

ಡಾ. ಫ. ಗು. ಹಳಕಟ್ಟಿಯವರು ಸಂಪಾದಿಸಿದ ವಚನಶಾಸ್ತ್ರಸಾರ ಭಾಗ–೨ನ್ನು ರಾಣೇಬೆನ್ನೂರಿನ ಪ್ರೊ|| ವಿ. ವೀ. ಸಂಗಮದ ಅವರ ನೇತೃತ್ವದಲ್ಲಿ ಪೂಜ್ಯ ಶ್ರೀ ಚೆನ್ನಬಸವ ಮಹಾಸ್ವಾಮಿಗಳು ಪಾಂಡೋಮಟ್ಟಿ ಹಾಗೂ ಶ್ರೀ ಬಸವರಾಜಪ್ಪನವರು ಅಜ್ಜಂಪುರಶೆಟ್ಟರು ಪರಿಷ್ಕರಿಸಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಪ್ರಾಧ್ಯಾಪಕರೂ ಖ್ಯಾತ ಸಂಶೋಧಕರೂ ಆದ ಡಾ ವೀರಣ್ಣ ರಾಜೂರ ಅವರು ಗ್ರಂಥ ಸಂಪಾದನಾ ಶಾಸ್ತ್ರದ ಹಿನ್ನೆಲೆಯಲ್ಲಿ ಮರುಪರಿಷ್ಕರಿಸಿದ್ದಾರೆ. ಈ ಎಲ್ಲ ಮಹನಿಯರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಗ್ರಂಥದಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳ ಬಗ್ಗೆ ರಾಣೇಬೆನ್ನೂರಿನ ಪ್ರೊ|| ವಿ. ವೀ. ಸಂಗಮದ ಅವರು ಮೌಲಿಕವಾದ ವಿಷಯಗಳನ್ನು ಬರೆದು ಅನುಬಂಧದಲ್ಲಿ ಸೇರಿಸಿದ್ದಾರೆ. ಆ ಲೇಖನಗಳಲ್ಲಿ ಪ್ರಸ್ತಾಪಿಸಲ್ಪಟ್ಟವಿಷಯಗಳ ಹೊಣೆಗಾರಿಕೆ ಅವರ ಮೇಲಿದೆ.

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ, ವಿಶೇಷವಾಗಿ ತಾಳ್ಮೆಯಿಂದ ಅಕ್ಷರ ಜೋಡಿಸಿದ ಸ್ನೇಹಿತ ಸೋಮನಾಥ ಬಾಕಳೆ ಅವರಿಗೆ ಕೃತಜ್ಞತೆ ಸಲ್ಲುತ್ತವೆ.

ಚಂದ್ರಶೇಖರ ವಸ್ತ್ರದ
ಅಧ್ಯಕ್ಷರು, ಗ್ರಂಥ ಪ್ರಕಟನ ಸಮಿತಿ.

■■■

ಪ್ರಸ್ತಾವನೆ

■

ವಚನಶಾಸ್ತ್ರದ ಮೊದಲನೆಯ ಭಾಗವು ೧೯೨೩ರಲ್ಲಿ ಮೊದಲು ಪ್ರಕಟಿಸಲ್ಪಟ್ಟಿತು. ಆ ಗ್ರಂಥದ ಉದ್ದೇಶವು ವಚನಗಳ ಸ್ವರೂಪನ್ನೂ, ಪುರಾತನ ವಚನಕಾರರ ಸಾಮಾನ್ಯ ಧಾರ್ಮಿಕ ತತ್ವಗಳನ್ನೂ ವಿವರಿಸುವದೇ ಮುಖ್ಯವಾಗಿತ್ತು. ಅದು ಪ್ರಕಟವಾದ ತರುವಾಯ ಆ ಗ್ರಂಥದಲ್ಲಿ ಅನುಸರಿಸಿದ ಪದ್ಧತಿಯಂತೆಯೇ ವಚನಕಾರರ ಅನೇಕ ವಚನ ಗ್ರಂಥಗಳು ಈ ವರೆಗೆ ನಮ್ಮಿಂದ ಪ್ರಕಟಿಸಲ್ಪಡುತ್ತ ಬಂದವು.

ಆದರೆ ವೀರಶೈವ ಧರ್ಮದಲ್ಲಿ ಅತ್ಯಂತ ಮಹತ್ವವಾಗಿರುವ ಷಟ್‌ಸ್ಥಲ ಸಿದ್ಧಾಂತವನ್ನು ನಿರೂಪಿಸುವದೇ ಈ ಎರಡನೇ ಭಾಗದ ಮುಖ್ಯ ಉದ್ದೇಶವಾಗಿದೆ. ಈ ಬಗೆಯ ಗ್ರಂಥವನ್ನು ಪ್ರಕಟಿಸಬೇಕೆಂದು ನಮ್ಮ ಉದ್ದೇಶವಿದ್ದುದು ವಚನ ಶಾಸ್ತ್ರಸಾರ ಭಾಗ–೧ ಇದರಲ್ಲಿಯ ಪ್ರಸ್ತಾವನೆಯಿಂದ ವಾಚಕರಿಗೆ ತಿಳಿದು ಬರುವದು. ಈ ವರೆಗೆ ಪ್ರಕಟವಾದ ವಚನ ಗ್ರಂಥಗಳಿಂದ ಶಿವಶರಣರ ಧಾರ್ಮಿಕ ವಿಚಾರಗಳ ಸಾಮಾನ್ಯ ಸ್ವರೂಪವೂ ನೈತಿಕ ಮತ್ತು ಸಾಮಾಜಿಕ ವಿಷಯಗಳ ಸಂಬಂಧವಾಗಿ ಅವರಲ್ಲಿದ್ದ ಅಭಿಪ್ರಾಯಗಳೂ ಹೆಚ್ಚಾಗಿ ತಿಳಿದುಬರುವಂತೆ ಇವೆ. ಆದರೆ ಅವುಗಳಲ್ಲಿ ವೀರಶೈವ ಸಿದ್ಧಾಂತದ ಸಾದ್ಯಂತ ನಿರೂಪಣೆಯು ಇರುವದಿಲ್ಲ. ಆದರೆ ಈಗಿನ ಗ್ರಂಥದಲ್ಲಿ ನಾವು ಈ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡು ಇದಕ್ಕೆ ಸಂಬಂಧಿಸಿದ ವಿಷಯಗಳ ನಿರೂಪಣೆಯನ್ನು ವಚನಕಾರರ ವಚನಗಳಿಂದಲೇ ಈ ಗ್ರಂಥದಲ್ಲಿ ಮಾಡಲು ಪ್ರಯತ್ನಿಸಿದ್ದೇವೆ.

ವೀರಶೈವ ಧರ್ಮದ ತಿರುಳನ್ನು ಆದರ ಎಲ್ಲ ಭಾಗ, ಉಪಭಾಗಗಳೊಡನೆ ಸಮಗ್ರವಾಗಿ ಮತ್ತು ತಾತ್ವಿಕ ರೀತಿಯಿಂದ ನಿರೂಪಿಸುವ ಯಾವ ಗ್ರಂಥವೂ ನಮಗೆ ಈ ವರೆಗೂ ಉಪಲಬ್ಧವಾಗಿಲ್ಲ. ಇದರಿಂದ ನಮ್ಮ ಈ ಪ್ರಯತ್ನವು ಬಿಕ್ಕಟ್ಟಿನದಾಗಿದೆ. ಇಂಥ ಗ್ರಂಥವು ದೊರೆಯಬಹುದೆಂಬ ಆಸೆಯಿಂದ ನಾವು ಈ ಎರಡನೆಯ ಭಾಗವನ್ನು ಪ್ರಕಟಿಸುವ ಸಾಹಸಕ್ಕೆ ಈ ವರೆಗೆ ಬೀಳಲಿಲ್ಲ. ಆದರೆ ಇದರಿಂದ ಕಾಲ ವಿಳಂಬವಾಗಬಹುದೆಂದು ನಮ್ಮ ಮಿತ್ರರು ನಮಗೆ ಸೂಚಿಸಿದ್ದರಿಂದ ನಮಗೆ ದೊರೆತ ಸಿದ್ಧಾಂತ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ವ್ಯವಸ್ಥೆಗೊಳಿಸಿ ಈ ಗ್ರಂಥವನ್ನು ನಾವು ಪ್ರಕಟಿಸಿದ್ದೇವೆ.

ಈ ಗ್ರಂಥದ ಆರಂಭದಲ್ಲಿ ಸೃಷ್ಟಿಯ ರಚನೆ, ಸಾದಾಖ್ಯಗಳು, ಷಡಧ್ವಗಳು ಮೂವತ್ತಾರು ತತ್ವಗಳು ಈ ವಿಷಯಗಳು ೧ ರಿಂದ ೫೪ ಪುಟಗಳ ವರೆಗೆ ವಿವೇಚಿಸಲ್ಪಟ್ಟಿರುತ್ತವೆ. ವೀರಶೈವರು ಶೈವಾಗಮಗಳಲ್ಲಿಯ ವಿಷಯಗಳನ್ನು ತೆಗೆದು ಕೊಂಡು ಅವುಗಳಲ್ಲಿ ಆವಶ್ಯಕ ಬದಲಾವಣೆಗಳನ್ನು ಮಾಡಿ ಇವುಗಳನ್ನು ತಮ್ಮ ಗ್ರಂಥಗಳಲ್ಲಿ ವಿವೇಚಿಸಿರುತ್ತಾರೆ.

ಇದರ ಮುಂದೆ 'ಕರಣಹಸಿಗೆ' ಎಂಬ ವಿಷಯವು ಬಂದಿದ್ದು ಅದರ ವಿವೇಚನೆಯಲ್ಲಿ ಸಾಂಖ್ಯಶಾಸ್ತ್ರದ ತತ್ವಗಳನ್ನು ನಾವು ಕಂಡುಹಿಡಿಯಬಹುದು. ಕರಣಹಸಿಗೆಯಲ್ಲಿ ದೇಹದ ಜ್ಞಾನವು ಹೇಳಲ್ಪಡುತ್ತದೆ. ಕರಣಹಸಿಗೆ ಮತ್ತು ಸೃಷ್ಟಿಯ ಕ್ರಮ ಇವುಗಳು ಷಟ್‌ಸ್ಥಲ ಸಿದ್ಧಾಂತವನ್ನು ಅರಿಯಲಿಕ್ಕೆ ಬಹು ಸಹಾಯಕಾರಿಯಾಗಿರುತ್ತವೆ. ಈ ಎಲ್ಲ ವಿಷಯಗಳು ಪುಟ ೫೫ರಿಂದ ೧೧೯ರ ವರೆಗೆ ಬಂದಿರುತ್ತವೆ.

ಈ ವಿಷಯಗಳ ತರುವಾಯ ವೀರಶೈವ ಕ್ರಿಯೆಗಳು ವಿವೇಚಿಸಲ್ಪಟ್ಟಿರುತ್ತವೆ. ಕ್ರಿಯೆಗಳಲ್ಲಿ ಯಾವ ಯಾವ ಉತ್ಕ್ರಾಂತಿಗಳಾಗುತ್ತ ಹೋಗುತ್ತವೆಂಬುದು ಇಲ್ಲಿ ಹೇಳಲ್ಪಟ್ಟಿರುತ್ತದೆ. ಇವುಗಳ ಪರಸ್ಪರ ಸಂಬಂಧವು ಈ ಪ್ರಕರಣದ ಅಂತ್ಯದಲ್ಲಿ ಸಕೀಲಗಳಲ್ಲಿ ತೋರಿಸಲ್ಪಟ್ಟಿರುತ್ತದೆ. ವೀರಶೈವ ಮತವು ಆಚಾರ ಮತ್ತು ಕ್ರಿಯೆಗಳನ್ನು ಬಿಟ್ಟಿರುವದಿಲ್ಲ. ಕ್ರಿಯೆಗಳನ್ನು ಮಾಡುತ್ತಲೇ ವೀರಶೈವನು ಶೂನ್ಯ ಸ್ಥಿತಿಯನ್ನು ಅಂದರೆ ಸಾಮರಸ್ಯವನ್ನು ಹೊಂದಬೇಕು. ವೀರಶೈವ ಕ್ರಿಯೆಗಳ ವಿವೇಚನೆಯು ವ್ಯಾಖ್ಯೆಗಳ ರೂಪವಾಗಿ ಇಲ್ಲಿ ಮಾಡಲ್ಪಟ್ಟಿರುತ್ತದೆ. ಈ ವಿಷಯಗಳು ಪುಟ ೧೨೧ ರಿಂದ ೧೭೭ ವರೆಗೆ ಬಂದಿವೆ.

ಉಪನಿಷತ್ ಗ್ರಂಥಗಳಲ್ಲಿ ಪರಮಾತ್ಮನ ಸ್ವರೂಪವು ಹೇಗಿರುತ್ತದೆಂಬುದು ವಿಸ್ತೃತವಾಗಿ ವಿವೇಚಿಸಲ್ಪಟ್ಟಿರುತ್ತದೆ. ವಚನಕಾರರು ಈ ವಿಷಯವನ್ನು ಎತ್ತಿ ತಮ್ಮ ಉಕ್ತಿಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ದೇವರ ಬಗ್ಗೆ ಇರುವ ಅವರ ವಿಚಾರಗಳು ವಚನಶಾಸ್ತ್ರಸಾರ ಭಾಗ ೧ ಈ ಗ್ರಂಥದ ಆದಿಯಲ್ಲಿ ಕೊಡಲ್ಪಟ್ಟಿರುತ್ತವೆ. ಆದ್ದರಿಂದ ಈ ವಿಷಯ ಸಂಬಂಧಿಸಿದ ಉಕ್ತಿಗಳನ್ನು ನಾವು ಈ ಗ್ರಂಥದಲ್ಲಿ ಪುನಃ ಉದಹರಿಸಿಲ್ಲ. ಅದರಂತೆಯೇ ವಚನಕಾರರು ನೈತಿಕ ನಡೆಗಳನ್ನೂ, ಭಕ್ತಿಯ ಮಾರ್ಗವನ್ನೂ ತುಂಬಾ ವಿವೇಚಿಸಿದ್ದಾರೆ. ಈ ವಿವರಣೆಗಳಾದರೂ ಮೊದಲನೆಯ ಭಾಗದಲ್ಲಿ ಭಕ್ತಸ್ಥಲದಲ್ಲಿ ಅನೇಕವಾಗಿ ಬಂದಿರುವದರಿಂದ ಅವುಗಳನ್ನು ಸಹ ನಾವು ಇಲ್ಲಿ ಪ್ರಸ್ತಾಪಿಸುವದನ್ನು ಬಿಟ್ಟಿದ್ದೇವೆ.

'ಕ್ರಿಯೆ' ಈ ವಿಷಯದ ತರುವಾಯ ಷಟ್‌ಸ್ಥಲಮಾರ್ಗದ ಸವಿಸ್ತಾರವಾದ ವಿವೇಚನೆಯು ಮುಂದಿನ ಪುಟಗಳಲ್ಲಿ ಬಂದಿರುತ್ತದೆ. ಆದರೆ ಆರಂಭದಿಂದ ೨೨೬ ಪುಟಗಳವರೆಗೆ ವಿವೇಚಿಸಿದ ಅನೇಕ ಬಗೆಯ ವಿಷಯಗಳೆಲ್ಲ ಷಟ್‌ಸ್ಥಲ ಸಿದ್ಧಾಂತಕ್ಕೆ ತಳಹದಿಯಾಗಿವೆ. ಅವುಗಳ ಮೇಲೆಯೇ ಷಟ್‌ಸ್ಥಲದ ವಿವೇಚನೆಯು ಅವಲಂಬಿಸಿರುತ್ತದೆ.

ಈ ಷಟ್‌ಸ್ಥಲ ವಿವೇಚನೆಯಲ್ಲಿ ಎರಡು ಮುಖ್ಯ ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಸ್ಥಲಗಳ ತಾತ್ವಿಕ ವಿವೇಚನೆಯು ಬರುತ್ತದೆ. ಇದರಲ್ಲಿ ೧, ೨, ೩, ೬, ೧೮, ೩೬ ಹೀಗೆ ಸ್ಥಲಗಳಿವೆ. ಅವುಗಳ ಮೂಲಕ ಮನುಷ್ಯನು ಹೇಗೆ ಪ್ರಗತಿಯನ್ನು ಹೊಂದುತ್ತ ಹೋಗುತ್ತಾನೆಂಬುದು ಹೇಳಲ್ಪಟ್ಟಿರುತ್ತದೆ. ಈ ವಿವೇಚನೆಗಳು ಪುಟ ೧೭೯ ರಿಂದ ೨೬೬ ವರೆಗೆ ಬಂದಿರುತ್ತವೆ.

ಷಟ್‌ಸ್ಥಲದ ಎರಡನೆಯ ಭಾಗದಲ್ಲಿ ವಿಕೋತ್ತರಶತಸ್ಥಲ ಅಥವಾ ನೂರೊಂದುಸ್ಥಲಗಳು ವಿವೇಚಿಸಲ್ಪಡುತ್ತವೆ. ಈ ನೂರೊಂದುಸ್ಥಲಗಳ ಆಚರಣೆಯಂತೆ ಮನುಷ್ಯನು ಆಚರಿಸುತ್ತ ಹೋದಲ್ಲಿ ಷಟ್‌ಸ್ಥಲ ಜ್ಞಾನವು ಅವನಿಗೆ ಪ್ರಾಪ್ತವಾಗುತ್ತದೆ. ಆದ್ದರಿಂದ ವೀರಶೈವ ಧರ್ಮದಲ್ಲಿ ವಿಕೋತ್ತರಶತಸ್ಥಲಕ್ಕೆ ಬಹು ಮಹತ್ವದ ಸ್ಥಾನವಿದೆ. ಅದರ ಭೇದವಿಭೇದಗಳ ವಿವೇಚನೆಯು ೨೬೭ ಪುಟದಿಂದ ೪೪೬ ಪುಟಗಳ ವರೆಗೆ ಬಂದಿರುತ್ತದೆ. ಅವುಗಳನ್ನು ವಿವರಿಸುವಲ್ಲಿ ನಾವು ಪ್ರತಿಯೊಂದು ಸ್ಥಲದ ಆದಿಯಲ್ಲಿ ಅವುಗಳ ಮರ್ಮ ಅಥವಾ ತತ್ವಗಳನ್ನು ತಿಳಿಯಪಡಿಸುವ ಉದ್ದಿಶ್ಯವಾಗಿ ಸ್ಥೂಲ ವಿವರಣೆಗಳನ್ನು ಕೊಟ್ಟಿರುತ್ತೇವೆ.

ಕಡೆಗೆ ಅನುಬಂಧಗಳಲ್ಲಿ ಆಯಾ ಪ್ರಕರಣಗಳ ಬಗ್ಗೆ ಆವಶ್ಯಕ ವಿಮರ್ಶೆಗಳು ಸಂಕ್ಷಿಪ್ತವಾಗಿ ಮಾಡಲ್ಪಟ್ಟಿವೆ. ಆದರೆ ಅವು ಸ್ಥೂಲವಿವೇಚನೆಗಳು ಮಾತ್ರ ಇವೆ ಎಂಬುದನ್ನು ನಾವು ವಾಚಕರ ಲಕ್ಷಕ್ಕೆ ತರುತ್ತೇವೆ.

ಈ ಮೇರೆಗೆ ನಾವು ಷಟ್‌ಸ್ಥಲಸಿದ್ಧಾಂತದ ಸ್ವರೂಪವನ್ನು ವಾಚಕರೆದುರಿಗೆ ಇಡಲು ಯತ್ನಿಸಿದ್ದೇವೆ. ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ತೆಗೆದುಕೊಂಡು ಅವುಗಳ ತಿಳುವಳಿಕೆಯನ್ನು ವಚನಕಾರರ ಉಕ್ತಿಗಳಿಂದಲೇ ಮಾಡಿಕೊಡುವ ಪ್ರಯತ್ನವನ್ನು ನಾವು ಇಲ್ಲಿ ಮಾಡಿದ್ದೇವೆ.

ಈ ಮೇರೆಗೆ ಷಟ್‌ಸ್ಥಲ ಶಾಸ್ತ್ರದಲ್ಲಿ ಅನೇಕ ಭೇದಾಭೇದಗಳಿದ್ದರೂ ಅದರ ಸಾಮಾನ್ಯಸ್ವರೂಪದ ಬಗ್ಗೆ ಯಾವ ಬಗೆಯ ಭಿನ್ನಾಭಿಪ್ರಾಯಗಳಿದ್ದುದು ನಮಗೆ ತೋರಿಬಂದಿಲ್ಲ. ಹೀಗಿದ್ದರೂ ಅವುಗಳ ಸ್ವರೂಪನ್ನು ವಿವರಿಸುವಲ್ಲಿ ವಚನಕಾರರು ತಮ್ಮ ತಮ್ಮ ವಿಚಾರ ಧೋರಣೆಯ ಪ್ರಕಾರ ನಾನಾ ರೀತಿಯಿಂದ ಅದನ್ನು ಹೇಳುವದುಂಟು. ಉದಾಹರಣಾರ್ಥವಾಗಿ ಗುಬ್ಬಿ ಮಲುಹಣನು ತನ್ನ ವಿಚಾರಗಳ ಮೇರೆಗೆ ೧೦೧ ಸ್ಥಲಗಳನ್ನು ಮಾಡಿ ಷಟ್‌ಸ್ಥಲ ತತ್ವಗಳನ್ನು ಅರುಹಲು ಪ್ರಯತ್ನಿಸಿದ್ದಾನೆ. ಆದರೆ ಅವನ ಈ ೧೦೧ ಸ್ಥಲಗಳು ವಿಕೋತ್ತರಶತಸ್ಥಲಗಳಲ್ಲ. ಹಾಗೆಯೇ ಲಿಂಗಲೀಲಾವಿಲಾಸಚಾರಿತ್ರವೆಂಬ ಗ್ರಂಥದ ಕರ್ತನಾದ ವಿದ್ಯಾನಗರದ ಕಲ್ಲುಮಠದ ಪ್ರಭುದೇವಾರ್ಯನು ಬೇರೆ ರೀತಿಯಿಂದ ತನ್ನ ೧೬ ಸ್ಥಲಗಳನ್ನು ಮಾಡಿ ವೀರಶೈವ ಧರ್ಮದ ತತ್ವಗಳನ್ನು ನಿರೂಪಿಸಿದ್ದಾನೆ. ಆದರೆ ಇವುಗಳಿಗೂ ವೀರಶೈವ ಸ್ಥಲಗಳಿಗೂ ಏನೂ ಸಂಬಂಧವಿಲ್ಲ. ಶೂನ್ಯಸಂಪಾದನೆಯ ಕರ್ತನು ಬೇರೊಂದು ರೀತಿಯಿಂದ ವೀರಶೈವ ತತ್ವಗಳನ್ನು ವಿವೇಚಿಸಿದ್ದಾನೆ. ಶಿವಶರಣರ ನಡೆಗಳನ್ನು ತೆಗೆದುಕೊಂಡು ಅವುಗಳ ತತ್ವಗಳನ್ನು ಹೇಳುತ್ತ ಹೋಗುತ್ತಾನೆ. ಹೀಗೆ ಅನೇಕರು ಅನೇಕ ವಿಧವಾಗಿ ಷಟ್‌ಸ್ಥಲ ಸಿದ್ಧಾಂತದ ನಿರೂಪಣೆಯನ್ನು ಮಾಡಿದ್ದಾರೆ. ಇದರ ಮೂಲಭೂತ ತತ್ವಗಳನ್ನೇ ನಾವು ಈ ಗ್ರಂಥದಲ್ಲಿ ವಿವರಿಸಲು ಯತ್ನಿಸಿದ್ದೇವೆ.

ಈ ಗ್ರಂಥವನ್ನು ರಚಿಸುವಲ್ಲಿ ನಾವು ತೆಗೆದುಕೊಂಡ ಆಧಾರ ಗ್ರಂಥಗಳ ಬಗ್ಗೆ ಇಲ್ಲಿ ಉಲ್ಲೇಖಿಸುವದು ಅವಶ್ಯವದೆ. ವಚನಶಾಸ್ತ್ರ ಸಾರ ಭಾಗ ೧ ಇದನ್ನು

ರಚಿಸುವಲ್ಲಿ ನಾವು ಯಾವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡಿದ್ದೆವೋ ಅವುಗಳನ್ನೇ ನಾವು ಇಲ್ಲಿಯೂ ತೆಗೆದುಕೊಂಡಿದ್ದೇವೆ. ಈ ೧ನೇ ಭಾಗವನ್ನು ಸಿದ್ಧಪಡಿಸುವಾಗಲೇ ಈ ೨ನೇ ಭಾಗದ ವಿಷಯಗಳೂ ಕೂಡ ನಮ್ಮಿಂದ ಸಂಗ್ರಹಿಸಲ್ಪಟ್ಟಿದ್ದವು. ಆದರೆ ಈಚೆಗೆ ಕೆಲವು ಗದ್ಯಾತ್ಮಕ ಗ್ರಂಥಗಳೂ ವಚನಗಳೂ ದೊರೆತಿದ್ದು ಅವುಗಳಿಂದಲೂ ನಮಗೆ ಈ ಗ್ರಂಥ ರಚನೆಯಲ್ಲಿ ಬಹು ಸಹಾಯವಾಯಿತು.

ಮೊದಲನೆಯ ಭಾಗವಾದ ''ಸೃಷ್ಟಿಯ ರಚನೆ'' ಇದರ ವಿಷಯವಾಗಿ ಕೆಲವು ಗದ್ಯಾತ್ಮಕ ವಿವರಣೆಗಳು ದೊರೆತಿದ್ದು ಅವುಗಳನ್ನು ನಾವು ಇಲ್ಲಿ ಉದಹರಿಸಿದ್ದೇವೆ. ಇವುಗಳೊಡನೆ ಕೆಲವು ಮಹತ್ವದ ವಚನಕಾರರ ಉಕ್ತಿಗಳನ್ನೂ ಕೊಟ್ಟಿರುವೆವು. ಇದರಿಂದ ಈ ವಚನಕಾರರ ಉಕ್ತಿಗಳೂ ಗದ್ಯ ಭಾಗಗಳೂ ಹೇಗೆ ಪರಸ್ಪರ ಸಮ್ಮೇಳನ ಹೊಂದುತ್ತವೆಂಬುದನ್ನು ವಾಚಕರು ಅರಿಯಬಹುದಾಗಿದೆ.

೨ನೆಯ ಭಾಗವಾದ 'ಕರಣಹಸಿಗೆ' ಈ ವಿಷಯವಾಗಿ ನಮಗೆ ದೊರೆತ ಗ್ರಂಥಗಳು ಐದು ಮಾತ್ರ. ಅವುಗಳನ್ನು ರಚಿಸಿದವರ ಹೆಸರುಗಳು ನಮಗೆ ತಿಳಿದಿರುವದಿಲ್ಲ. ಆದರೆ ಚನ್ನಬಸವೇಶ್ವರನ ಕರಣಹಸಿಗೆಯ ಪದ್ಧತಿಯನ್ನೇ ಅವೆಲ್ಲವೂ ಮುಖ್ಯವಾಗಿ ಅವಲಂಬಿಸಿರುತ್ತವೆ. ಆದರೆ ಅವುಗಳಲ್ಲಿಯ ಅನೇಕ ವಿಷಯಗಳು ಮಹತ್ವವಲ್ಲದ ಪುನರುಕ್ತಿಗಳಿಂದ ಬಹಳ ಕೂಡಿಕೊಂಡಿರುತ್ತವೆ. ಆದ್ದರಿಂದ ಇಂಥ ಅನಾವಶ್ಯಕ ಭಾಗಗಳನ್ನು ತೆಗೆದುಹಾಕಿ ಮುಖ್ಯವಾದ ಭಾಗಗಳನ್ನು ಮಾತ್ರ ವಾಚಕರೆದುರಿಗೆ ನಾವು ಇಲ್ಲಿ ಇಟ್ಟಿರುತ್ತೇವೆ.

೩ನೆಯ ಭಾಗದಲ್ಲಿ ವೀರಶೈವ ಕ್ರಿಯೆಗಳು ವಿವರಿಸಲ್ಪಟ್ಟಿವೆ. ಇವುಗಳನ್ನು ತಾತ್ವಿಕ ರೀತಿಯಿಂದ ವಿವೇಚನೆ ಮಾಡುವ ಗ್ರಂಥಗಳು ನಮಗೆ ಹೆಚ್ಚಾಗಿ ದೊರೆತಿಲ್ಲ. ಈಗ ಪ್ರಕಟವಾದವೆಲ್ಲವೂ ಬಹುಶಃ ಆಚಾರ ಭಾಗಕ್ಕೆ ಸಂಬಂಧ ಪಡುತ್ತವೆ. ಆದ್ದರಿಂದ ನಮಗೆ ದೊರೆತವುಗಳಲ್ಲಿ ಹೆಚ್ಚಿಗೆ ಸುವ್ಯವಸ್ಥಿತವಾಗಿದ್ದಂಥ ಒಂದು ಗ್ರಂಥದಲ್ಲಿಯ ವಿಷಯಗಳನ್ನು ತೆಗೆದುಕೊಂಡು ಈ ಮೂರನೆಯ ಭಾಗದಲ್ಲಿ ಸೇರಿಸಿದ್ದೇವೆ. ಇದರಲ್ಲಿ ನಾವು ಬೇರೆ ಇಂಥ ಗ್ರಂಥಗಳಲ್ಲಿಯ ವಿಷಯಗಳನ್ನು ಜೋಡಿಸಿದ್ದಾದರೆ ವಿಷಯಗಳನ್ನು ತಿಳಿಯಲು ಗೊಂದಲವಾಗಬಹುದೆಂದು ಎಣಿಸಿ ನಾವು ಹಾಗೆ ಮಾಡಿಲ್ಲ.

೪ನೆಯ ಭಾಗದಲ್ಲಿ ಷಟ್‌ಸ್ಥಲಕ್ಕೆ ಸಂಬಂಧಿಸಿದ ತಾತ್ವಿಕ ವಿಷಯಗಳು ಮುಖ್ಯವಾಗಿ ಕೊಡಲ್ಪಟ್ಟಿವೆ. ಈ ವಿಷಯವಾಗಿ ನಮಗೆ ದೊರೆತ ಅನೇಕ ವಚನ ಗ್ರಂಥಗಳಲ್ಲಿಯ ವಚನಗಳನ್ನೇ ನಾವು ಆಯ್ದು ಅವುಗಳನ್ನು ಆದಷ್ಟು ಮಟ್ಟಿಗೆ ವ್ಯವಸ್ಥೆಗೊಳಿಸಿ ಈ ಭಾಗವನ್ನು ಸಿದ್ಧಪಡಿಸಿರುತ್ತೇವೆ. ಅವು ಯಾವ ಯಾವ ವಚನಕಾರರವೆಂಬುದನ್ನು ಆ ವಚನಗಳಲ್ಲಿ ಉಲ್ಲೇಖಿಸಿದ ಮುದ್ರಿಕೆಗಳಿಂದಲೇ ಕಂಡುಹಿಡಿಯಬಹುದಾಗಿದೆ. ಅಲ್ಲದೆ ಇಲ್ಲಿ ಕೆಲವು ಗದ್ಯಾತ್ಮಕ ಭಾಗಗಳನ್ನೂ

ವಾಚಕರು ಕಾಣಬಹುದು. ಆದರೆ ಇವು ಯಾರಿಂದ ರಚಿಸಲ್ಪಟ್ಟಿವೆಂಬುದು ನಮಗೆ ಗೊತ್ತಾಗುವದಿಲ್ಲ. ಆದರೆ ಅವೆಲ್ಲವೂ ವಚನ ಗ್ರಂಥಗಳನ್ನೇ ಅನುಸರಿಸುತ್ತವೆ.

೫ನೆಯ ಭಾಗವು ಏಕೋತ್ತರಶತಸ್ಥಲವಾಗಿರುತ್ತದೆ. ಇದರಲ್ಲಿಯ ವಿಷಯಗಳು ನಮಗೆ ದೊರೆದ ಮೂರು ವಚನ ಗ್ರಂಥಗಳ ಸಹಾಯದಿಂದ ನಿರೂಪಿಸಲ್ಪಟ್ಟಿವೆ. ಈ ಬಗ್ಗೆ ಕೆಲವು ಸಂಸ್ಕೃತ ಗ್ರಂಥಗಳೂ ಇವೆ. ಆದರೆ ಏಕೋತ್ತರಶತಸ್ಥಲದ ಮರ್ಮವನ್ನು ನಿರ್ಧರಿಸುವದು ಬಹಳ ತೊಂದರೆಯದು. ಇದರಲ್ಲಿರುವ ಪ್ರತಿಯೊಂದು ಸ್ಥಲದಲ್ಲಿ ಅನೇಕ ಅವಾಂತರ ಭೇದಗಳು ಇವೆ. ಅವುಗಳ ಪರಸ್ಪರ ಸಂಬಂಧವೇನು, ಅವುಗಳಿಂದ ಮೂಲ ಷಟ್‌ಸ್ಥಲದ ಉತ್ಕ್ರಾಂತಿಯು ಹೇಗೆ ಉಂಟಾಗುತ್ತದೆ. ಇವೇ ಮೊದಲಾದ ಮಹತ್ವದ ವಿಷಯಗಳನ್ನು ನಿರ್ಧರಿಸುವಲ್ಲಿ ಅನೇಕ ತೊಡಕಿನ ಪ್ರಶ್ನೆಗಳು ಇದಿರಿಗೆ ಬರುತ್ತವೆ. ಆದರೂ ಈ ಬಗ್ಗೆ ನಮಗೆ ತೋಚಿದ ವಿಚಾರಗಳನ್ನು ಆಯಾ ಸ್ಥಲಗಳ ಆರಂಭದಲ್ಲಿ ನಮ್ಮ ವಿವರಣೆಯಲ್ಲಿ ಕೊಟ್ಟಿದ್ದೇವೆ. ಕೆಲವು ಗ್ರಂಥಗಳಲ್ಲಿ ಈ ಸ್ಥಲಗಳ ನಿರೂಪಣೆಯಲ್ಲಿ ಅನಾವಶ್ಯಕ ವಿಷಯಗಳು ಸೇರಿಕೊಂಡಿವೆ. ಆದರೆ ಅವುಗಳಿಂದ ವಾಚಕರ ವಿಚಾರಕ್ಕೆ ತೊಂದರೆಯಾಗಬಹುದೆಂದು ಎಣಿಸಿ ಅವುಗಳನ್ನು ನಾವು ಇಲ್ಲಿ ಬಿಟ್ಟುಕೊಟ್ಟಿದೇವೆ. ಹೀಗೆ ವಚನಗಳನ್ನು ಆರಿಸುವಲ್ಲಿ ನಾವು ಮುಖ್ಯವಾಗಿ ವಿಜಯನಗರದ ಅರಸನಾದ ಇಮ್ಮಡಿ ದೇವರಾಜನ ಕಾಲದಲ್ಲಿ ಅಂದರೆ ೧೫ ನೇ ಶತಮಾನದ ಮಧ್ಯದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಜಕ್ಕಣಾರ್ಯ ಮಂತ್ರಿಯ ಪದ್ಧತಿಯನ್ನೂ ಉಕ್ತಿಗಳನ್ನೂ ನಾವು ಹೆಚ್ಚಾಗಿ ತೆಗೆದುಕೊಂಡಿದ್ದೇವೆ. ಈತನ ಕಾಲದಲ್ಲಿ ವೀರಶೈವ ಸಮಾಜದಲ್ಲಿ ಅನೇಕ ಷಟ್‌ಸ್ಥಲಜ್ಞರು ಉದಯವಾಗಿ ಅವರು ಅದನ್ನು ಉಚ್ಚಸ್ಥಿತಿಗೆ ತಂದರು. ಆದ್ದರಿಂದ ನಾವು ಈತನ ಉಕ್ತಿಗಳಿಗೆ ಮತ್ತು ವಿಚಾರಗಳಿಗೆ ಮಹತ್ವವನ್ನು ಕೊಟ್ಟಿರುತ್ತೇವೆ.

ಒಟ್ಟಿಗೆ ಈ ಗ್ರಂಥದಲ್ಲಿ ಷಟ್‌ಸ್ಥಲದ ಮೂಲತತ್ವಗಳನ್ನು ಸಂಶೋಧಿಸಿ ಅವುಗಳನ್ನು ನಾವು ಆಯಾ ವಚನಕಾರರ ವಚನಗಳಿಂದಲೇ ವಿವರಿಸಲು ಪ್ರಯತ್ನಿಸಿದ್ದೇವೆ. ಈ ನಮ್ಮ ಪ್ರಯತ್ನವು ಎಷ್ಟರಮಟ್ಟಿಗೆ ಸಾಧ್ಯವಾಗಿದೆಂಬುದನ್ನು ನಿಶ್ಚಯ ಪಡಿಸುವ ಭಾರವನ್ನು ವಾಚಕರ ಕಡೆಗೆ ಬಿಟ್ಟುಕೊಡುತ್ತೇವೆ.

ಈ ವರೆಗೆ ನಾವು ಮಾಡಿದ ವಿವರಣೆಗಳ ಮೇಲಿಂದ ವೀರಶೈವ ಧರ್ಮಕ್ಕೂ ಇತರ ಹಿಂದೂ ಧರ್ಮಗಳಿಗೂ ಆವ ಸಂಬಂಧವಿದೆ, ವೀರಶೈವ ಗ್ರಂಥಕಾರರು ಯಾವ ಧ್ಯೇಯವುಳ್ಳವರಾಗಿರುವರು, ಅವರ ಉತ್ಕ್ರಾಂತಿಯ ತತ್ವಗಳಾವವು, ಷಟ್‌ಸ್ಥಲಶಾಸ್ತ್ರದ ಸ್ವರೂಪು ಆವುದು, ಇವೇ ಮೊದಲಾದ ವಿಷಯಗಳು ಈ ಗ್ರಂಥದ ಸಹಾಯದಿಂದ ತಿಳಿಯಬಹುದೆಂಬುದು ವಾಚಕರ ತಿಳುವಳಿಕೆಗೆ ಬಂದಿರಬಹುದು. ಆದರೆ ಅತ್ಯಂತ ಮಹತ್ವದ ಈ ವಿಷಯಗಳನ್ನು ತಾತ್ವಿಕ ರೀತಿಯಿಂದ ವಿವೇಚಿಸಿದ ಪುರಾತನ ಗ್ರಂಥಗಳು ಮಾತ್ರ ನಮಗೆ ದೊರೆತಿಲ್ಲ. ಆದ್ದರಿಂದ ಆಯಾ ಸ್ಥಲಗಳ ನಿಶ್ಚಿತ ಸ್ವರೂಪು, ಅವುಗಳ ಪರಸ್ಪರ ಸಂಬಂಧ ಮತ್ತು

ಮರ್ಮಗಳ ವಿಷಯವಾಗಿ ಶಂಕೆಗಳು ಉತ್ಪನ್ನವಾಗುವದು ಸ್ವಾಭಾವಿಕವಿದೆ. ಆದ್ದರಿಂದ ಈ ಗ್ರಂಥವನ್ನು ನಾವು ಪ್ರಸಿದ್ಧಿಸದೆ ಬಹು ದಿವಸ ಹಾಗೆಯೇ ಬಿಟ್ಟು ಬಿಟ್ಟಿದ್ದೆವು. ವೀರಶೈವ ಧರ್ಮದ ವಿಷಯಗಳನ್ನು ಯಾರಾದರೂ ಶಿವಾನುಭವಿ ಗಳೊಡನೆ ಚರ್ಚಿಸಿ ಗೊತ್ತುಮಾಡಿಕೊಳ್ಳುವದೇ ಇದರಲ್ಲಿ ನಮ್ಮ ಮುಖ್ಯ ಉದ್ದೇಶ ವಾಗಿತ್ತು. ಆದರೆ ಇದಕ್ಕೆ ಬೇಕಾದ ಅನುಕೂಲ್ಯಗಳು ನಮಗೆ ಒದಗದ್ದರಿಂದ ಈ ಗ್ರಂಥದ ಪ್ರಕಟನೆಯು ಹಾಗೆಯೇ ಉಳಿಯಿತು. ಆದರೆ ಈ ಗ್ರಂಥದಲ್ಲಿಯ ವಿಷಯಗಳನ್ನು ಶ್ರೀಯುತ ಮಂಜಪ್ಪ ಹರ್ಡೇಕರ ಇವರಿಗೆ ನಾನು ಅಕಸ್ಮಾತ್ತಾಗಿ ತೋರಿಸಲಾಗಿ ಅವರು ಈ ಗ್ರಂಥವನ್ನೂ ಅದರಂತೆಯೇ ಕೇವಲ ಆಚಾರ ವಿಷಯಕವಾದ ನಾವು ಸಂಗ್ರಹಿಸಿದ ಬೇರೊಂದು ಗ್ರಂಥವನ್ನೂ ನೋಡಿ ಇವುಗಳನ್ನು ಪ್ರಸಿದ್ಧಿಸುವದು ಬಹು ಅವಶ್ಯವಾದುದೆಂದೂ, ಪ್ರಸಿದ್ಧಿಸಿದ ಬಳಿಕ ಗ್ರಂಥಕ್ಕೆ ಬೇಕಾಗುವ ಸಾಮಗ್ರಿಗಳು ಹೆಚ್ಚಾಗಿ ಮುಂದೆ ದೊರೆಯಬಹುದೆಂದೂ ಅಭಿಪ್ರಾಯಪಟ್ಟರು. ಅವರ ಅಭಿಪ್ರಾಯವು ಸರಿಯಾದದ್ದೆಂದು ನಮಗೂ ತೋರಿ ಗ್ರಂಥ ಪ್ರಕಟನೆಯನ್ನು ಮಾಡಬೇಕೆಂದು ಗೊತ್ತು ಮಾಡಿದೆವು. ಆಗ ಶ್ರೀಯುತ ಮಂಜಪ್ಪನವರು ಕೂಡಲೇ ವಿಜಾಪುರ ಜಿಲ್ಲೆಯಲ್ಲೆಲ್ಲ ಸಂಚರಿಸಿ ಮುದ್ರಣ ಖರ್ಚಿಗೋಸ್ಕರ ೭೭೬ ರೂಪಾಯಿಗಳನ್ನು ಶೇಖರಿಸಿದರು. ಹೀಗೆ ಹಣವನ್ನು ಕೊಟ್ಟವರ ಹೆಸರುಗಳನ್ನು ನಾವು ಈ ಪ್ರಸ್ತಾವನೆಯಲ್ಲಿ ಅಂತ್ಯದಲ್ಲಿ ಸೇರಿಸಿದ್ದೇವೆ. ಹೀಗೆ ಸಹಾಯ ಮಾಡಿದ ಈ ಮಹನೀಯರೆಲ್ಲರಿಗೂ ಇದರಲ್ಲಿ ಅತ್ಯಂತ ಪರಿಶ್ರಮ ಬಟ್ಟ ಶ್ರೀಯುತ ಮಂಜಪ್ಪನವರಿಗೂ ನಾವು ಅತ್ಯಂತ ಆಭಾರಿಯಾಗಿದ್ದೇವೆ. ಒಂದು ವೇಳೆ ಶ್ರೀಯುತ ಮಂಜಪ್ಪನವರು ಹೀಗೆ ಚಟುವಟಿಕೆಯನ್ನು ಆಗ ತೋರಿಸದೆ ಹೋಗಿದ್ದರೆ ಈ ಗ್ರಂಥವು ಅನಿಶ್ಚಯಾತ್ಮಕ ಅವಧಿಯವರೆಗೆ ಪ್ರಕಟವಾಗದೆ ಉಳಿಯುತ್ತಿತ್ತು.

ಮುಂದೆ ಶ್ರೀಯುತ ಮಂಜಪ್ಪನವರು ಈ ನಿಧಿಯನ್ನು ನಮಗೆ ಸಾರ್ವಜನಿಕ ವಾಗಿ ಅರ್ಪಿಸಬೇಕೆಂದು ಎಣಿಸಿ ಬಾಗಲಕೋಟೆಯಲ್ಲಿ ತಾ. ೨೬–೮–೧೯೩೫ ನೇ ದಿವಸ ಶ್ರೀಯುತ ವೀರಭದ್ರಪ್ಪ ಬಸಪ್ಪ ಹಾಲಭಾವಿ ರಿಟಾಯರ್ಡ ಫರ್ಸ್ಟಕ್ಲಾಸ ಸಬ್ ಜಜ್ಜ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಿದರು. ಮತ್ತು ಆಗ ನಮಗೆ ಮೇಲ್ಕಂಡ ನಿಧಿಯು ಒಪ್ಪಿಸಲ್ಪಟ್ಟಿತು. ಹೀಗೆ ಈ ಗ್ರಂಥ ಪ್ರಕಟನಾಕಾರ್ಯದಲ್ಲಿ ನಮಗೆ ಅತ್ಯಂತ ಸಹಾಯ ಮಾಡಿದ ಶ್ರೀಯುತ ಮಂಜಪ್ಪನವರಿಗೂ ಧನ ಸಹಾಯ ಮಾಡಿದ ಎಲ್ಲ ಮಹನೀಯರಿಗೂ ನಾವು ಬಹು ಕೃತಜ್ಞತಾಪೂರ್ವಕವಾಗಿ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ.

ಆದರೆ ಮುಂದೆ ಅಚ್ಚು ಹಾಕುವ ಕಾರ್ಯವನ್ನು ಪ್ರತ್ಯಕ್ಷವಾಗಿ ಕೈಕೊಂಡ ಬಳಿಕ ಗ್ರಂಥದಲ್ಲಿ ಅನೇಕ ಅಪೂರ್ಣತೆಗಳಿರುವದು ನಮ್ಮ ದೃಷ್ಟಿಗೆ ಬೀಳಹತ್ತಿತು. ಅವುಗಳನ್ನೆಲ್ಲ ಶಕ್ಯವಿದ್ದಷ್ಟರ ಮಟ್ಟಿಗೆ ಸರಿಪಡಿಸಿ ಈ ಗ್ರಂಥವನ್ನು ಪೂರ್ಣ

ಗೊಳಿಸಲು ನಮ್ಮಿಂದ ಕಾಲವಿಳಂಬವಾಯಿತು. ಇದಕ್ಕೋಸ್ಕರ ನಾವು ಮೇಲ್ಕಂಡ ಮಹನೀಯರೆಲ್ಲರಿಗೂ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇವೆ.

ಈ ಗ್ರಂಥದ ರೀತಿಯಂತೆಯೇ ಅಷ್ಟಾವರಣ ಪರವಾದ ಹಾಗೂ ಕೇವಲ ಆಚಾರ ವಿಷಯಕವಾದ ಬೇರೊಂದು ಮಹತ್ವದ ಗ್ರಂಥವೂ ಇದ್ದು ಅದನ್ನಾದರೂ ಕೂಡಲೆ ಸಿದ್ಧಪಡಿಸಿ ಪ್ರಸಿದ್ಧಿಸುವೆವು.

ಈ ಗ್ರಂಥದಲ್ಲಿ ಅನೇಕ ನ್ಯೂನತೆಗಳು ಇರುವವೆಂದು ನಾವು ಪೂರ್ಣವಾಗಿ ಅರಿತಿದ್ದೇವೆ. ಷಟ್‌ಸ್ಥಲಶಾಸ್ತ್ರವನ್ನು ಬಲ್ಲವರು ಸಮಾಜದಲ್ಲಿ ಇನ್ನೂ ಅನೇಕರು ಇದ್ದಾರೆ. ಅವರು ಈ ನ್ಯೂನತೆಗಳನ್ನು ನಮಗೆ ತಿಳಿಸಿಕೊಟ್ಟಲ್ಲಿ ನಾವು ಅವರಿಂದ ಬಹು ಉಪಕೃತರಾಗುವೆವು. ಮತ್ತು ಅವುಗಳನ್ನು ಈ ಗ್ರಂಥದ ಮುಂದಿನ ಮುದ್ರಣ ಕಾಲದಲ್ಲಿ ಸೇರಿಸಲು ನಮಗೆ ಬಹಳ ಸಹಾಯವಾಗುವದು.

ವಿಜಾಪುರ
೧೫–೧–೧೯೩೮

ಫ. ಗು. ಹಳಕಟ್ಟಿ
ಸಂಪಾದಕ.

ದ್ವಿತೀಯ ಮುದ್ರಣ

ಮರುಪರಿಷ್ಕರಣ

ಲಿಂ. ಫ. ಗು. ಹಳಕಟ್ಟಿ ಅವರು ಸಂಪಾದಿಸಿದ 'ವಚನ ಶಾಸ್ತ್ರಸಾರ' ಗ್ರಂಥದ ಮೂರು ಸಂಪುಟಗಳು ಅವರ ಅನುಭವ ಹಾಗೂ ಚಿಂತನೆಯ ಅಪೂರ್ವ ಸ್ಮಾರಕಗಳೆನಿಸಿವೆ. ೧೨ನೆಯ ಶತಮಾನದ ನಂತರ ೮೦೦ ವರ್ಷಗಳ ಅವಧಿಯಲ್ಲಿ ಹೀಗೆ ಸಮಗ್ರವಾಗಿ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ವಚನಗಳನ್ನು ಸಂಗ್ರಹಿಸಿ ಸಂಯೋಜಿಸಿದವರು ಮತ್ತೊಬ್ಬರಿಲ್ಲ. ಅವರಿಂದ ಈ ಸಂಪಾದನಾ ಕಾರ್ಯವು ಜರುಗದೇ ಹೋಗಿದ್ದರೆ ತಾಡಓಲೆ ಗರಿಯಲ್ಲಿದ್ದ ವಚನ ಸಾಹಿತ್ಯವು ಲಿಂಗವಂತರ ಮಠಗಳಲ್ಲಿ ಮನೆಗಳಲ್ಲಿ ಗೆದ್ದಲು ಹುಳಕ್ಕೆ ತುತ್ತಾಗುತ್ತಿತ್ತು. ವಿಶ್ವಕ್ಕೆ ಈ ಸಾಹಿತ್ಯದ ಕಾಣಿಕೆ ಸಲ್ಲದೇ ಹೋಗುತ್ತಿತ್ತು. ವಿಶ್ವದ ಸಾಹಿತ್ಯ ಹಾಗೂ ಅನುಭಾವ ಕ್ಷೇತ್ರಗಳು ಹಳಕಟ್ಟಿ ಅವರಿಗೆ ಚಿರಋಣಿಯಾಗಿವೆ.

ವಚನಶಾಸ್ತ್ರಸಾರ ಭಾಗ–೧ರಲ್ಲಿ ಶರಣರ ಅನುಭಾವ–ಅನುಭೂತಿಪರ ವಚನಗಳ ಸಂಪಾದನೆಯಾಗಿದ್ದರೆ, ಭಾಗ–೨ ರಲ್ಲಿ ಲಿಂಗಾಯತರ ತತ್ವಜ್ಞಾನದ ತಂತ್ರಜ್ಞಾನ ಪರವಾದ ಸಾಹಿತ್ಯವು ಸಂಪಾದನೆಗೊಂಡಿದೆ. ಭಾಗ–೩ ಪೂರ್ವಾರ್ಧ ಹಾಗೂ ಉತ್ತರಾರ್ಧವಾಗಿ ಎರಡು ಭಾಗಗಳಲ್ಲಿ ಸಂಪಾದನೆಗೊಂಡಿದೆ. ಇದರಲ್ಲಿ ಲಿಂಗಾಯತ (ವೀರಶೈವ) ಧರ್ಮದ ಆಚರಣೆ ಹಾಗೂ ಕ್ರಿಯಾವಿಧಿ–ವಿಧಾನ ಗಳನ್ನು ಕುರಿತ ಸಾಹಿತ್ಯವು ಸಂಗ್ರಹಗೊಂಡಿದೆ. ಹೀಗಾಗಿ ವಚನಶಾಸ್ತ್ರಸಾರ ಭಾಗ–೧ ಲಿಂಗಾಯತ ಧರ್ಮದ ಆತ್ಮದಂತೆಯೂ, ಭಾಗ–೨ ಲಿಂಗಾಯತ ಧರ್ಮದ ಪ್ರಾಣದಂತೆಯೂ ಹಾಗೂ ಭಾಗ–೩ ಲಿಂಗಾಯತ ಧರ್ಮದ ಅಂಗದಂತೆಯೂ ಇವೆ. ಇವು ಹಳಕಟ್ಟಿ ಅವರ ವಚನ ಸಾಹಿತ್ಯದ ಅಧ್ಯಯನದ ಆಳವನ್ನೂ, ವಿಸ್ತಾರವನ್ನೂ ಪರಿಚಯಿಸುತ್ತವೆ. ಲಿಂಗಾಯತ ಧರ್ಮದ ಯಾವ ಮಠಾಧೀಶರೂ ವಿಶ್ವವಿದ್ಯಾಲಯದ ಯಾವ ವಿದ್ವಾಂಸರೂ ಮಾಡದ ಕಾರ್ಯ ವನ್ನು ಈ ಶರಣರು ಮಾಡಿದುದು ಐತಿಹಾಸಿಕ ಸಂಗತಿ.

ವಚನವು ಸಾಹಿತ್ಯವೋ ಅಥವಾ ಶಾಸ್ತ್ರವೋ ಎಂಬ ಜಿಜ್ಞಾಸೆ ವಿದ್ವಾಂಸರನ್ನು ಕಾಡಿತ್ತು. ಹಳಕಟ್ಟಿ ಅವರು ವಚನ ಸಾಹಿತ್ಯವು ಎಷ್ಟು ವೈಜ್ಞಾನಿಕವಾಗಿದೆಯೋ ಅದಕ್ಕಿಂತ ಹೆಚ್ಚಾಗಿ ಅನುಭಾವಾತ್ಮಕವಾಗಿದೆ ಎಂಬುದನ್ನು ಮನಗಂಡು ಅದಕ್ಕೆ 'ವಚನ ಶಾಸ್ತ್ರ' ಎಂದು (Vachana a Science and a Mysticism) ಕರೆದರು.

ಶರಣರ ವಚನಗಳು ಹೃದ್ಯ ಗೀತೆಗಳಾದಂತೆ ಗದ್ಯ ಗೀತೆಗಳು ಕೂಡ ಆಗಿವೆ. ಪದ್ಯ ಗದ್ಯದ ಈ ಸಂಗಮ ಸಾಹಿತ್ಯ, ಜೀವನದ ಸಮಗ್ರತೆಯನ್ನು ಒಳಗೊಂಡು ದೇವನ ಸಮಗ್ರತೆಯೆಡೆಗೆ ಸಾಗುವ ಜೀವ ದೇವರ ಸಂಪೂರ್ಣತೆಯ, ಸಾಮರಸ್ಯತೆಯ ಸುಂದರ ಸ್ವರೂಪವನ್ನು ನೀಡುತ್ತದೆ. ವಿಶ್ವಸಾಹಿತ್ಯದಲ್ಲಿ ಇದೊಂದು ಅಪೂರ್ವ ಹಾಗೂ ಸಂಪೂರ್ಣ ಯುಗಪ್ರವರ್ತನೆಯ ಮಾರ್ಗವನ್ನು ನಿರ್ಮಾಣ ಮಾಡಿದೆ. ಯುಗಯುಗಗಳು ಕಳೆದರೂ ಈ ಅನುಭಾವಚಿತ್ಸೂರ್ಯನ ಬೆಳಕು ಬೆಳಗುತ್ತಲೇ ಇರುವದು. ಇದಕ್ಕೆ ಎರಡು ಮಾತಿಲ್ಲ.

ಜೀವನವನ್ನು ಸಾಂದರ್ಭಿಕವಾಗಿ ಹಾಗೂ ಸಾಮಾಜಿಕವಾಗಿ ವಿವೇಚಿಸುವುದು ಜೀವನದ ಹೊರನೋಟ ಮಾತ್ರ. ಇದಕ್ಕೆ ಶಾಸ್ತ್ರೀಯವಾಗಿ ಪ್ರವೃತ್ತಿ ಮಾರ್ಗ ವೆಂದೂ ಪ್ರೇಯಸ್ ಮಾರ್ಗವೆಂದೂ (Outward Movement of life) ಕರೆಯುತ್ತಾರೆ. ಆದರೆ ಇದು ಜೀವನದ ಸಮಗ್ರ ಸ್ವರೂಪವಲ್ಲ. ಸಮಗ್ರ ಸ್ವರೂಪವನ್ನರಿಯಲು ಅಂತರಂಗದ ಪ್ರವೇಶವನ್ನು ಮಾಡಲೇಬೇಕಾಗುತ್ತದೆ. ಅಂತರಂಗದ ಯಾತ್ರೆಯನ್ನು ನಿವೃತ್ತಿ ಮಾರ್ಗವೆಂದೂ ಶ್ರೇಯಸ್ ಮಾರ್ಗವೆಂದೂ (Inward movement of life) ಕರೆಯುತ್ತಾರೆ. ಇವೆರಡೂ ಮಾರ್ಗಗಳನ್ನು ಸಮನ್ವಯಗೊಳಿಸಿ ತತ್ವಶಾಸ್ತ್ರವು ಚಿಂತನೆಗೈದು ಜೀವ, ಜಗತ್ತು ಮತ್ತು ದೇವರು ಎಂಬ ತ್ರಿಪುಟಿಯಲ್ಲಿ ವ್ಯಾಖ್ಯಾನಗೈಯ್ಯುತ್ತದೆ. ಈ ಸಂಕಲನತ್ರಯದ ಮೂಲಕ ಅವ್ಯವಸ್ಥ ಜೀವನವನ್ನು ವ್ಯವಸ್ಥೆಗೊಳಿಸಿದಾಗ ಮಾತ್ರ ಲಿಂಗಾಂಗ ಸಾಮರಸ್ಯದ ಗುರಿ ಪ್ರಾಪ್ತವಾಗುವುದು. ಈ ಗುರಿಯನ್ನು ವಚನಶಾಸ್ತ್ರಸಾರದ ಮೂರು ಭಾಗಗಳಲ್ಲಿ ವಿಶ್ಲೇಷಿಸಲಾಗಿದೆ. ವಚನಶಾಸ್ತ್ರಸಾರ ಭಾಗ–೧ ದೇವರನ್ನು ಕುರಿತು ಅನುಭಾವದ ವ್ಯಾಖ್ಯಾನ ನೀಡಿದರೆ, ವಚನಶಾಸ್ತ್ರಸಾರ ಭಾಗ–೨ ರಲ್ಲಿ ವಿಶ್ವೋತ್ಪತ್ತಿ ಕ್ರಮ (Cosmology), ಜಗತ್ತು (Globe), ಕರಣಹಸಿಗೆಯ ಮೂಲಕ ಮಾನವನ ದೇಹ (ಇಂದ್ರಿಯಗಳು ಹಾಗೂ ಭಾವದ ಸಂರಚನೆ), ಭವರೋಗಗಳ ಶಾಸ್ತ್ರಬದ್ಧ ವ್ಯಾಖ್ಯಾನ, ಷಟ್‌ಸ್ಥಲಗಳ ಪರೋಕ್ಷ ಹಾಗೂ ಅಪರೋಕ್ಷ ವಿನ್ಯಾಸರಚನೆ, ಏಕೋತ್ತರ ಶತಸ್ಥಲಗಳ ವಿವರಣೆ, ಲಿಂಗಾಂಗಸಾಮರಸ್ಯದ ಗುರಿ–ಗೆರೆಗಳ ಶಾಸ್ತ್ರ ಬದ್ಧ ಚಿಂತನೆ ಇದೆ. ಭಾಗ–೩ರಲ್ಲಿ ಲಿಂಗಾಯತ ಧರ್ಮದ ಆಚರಣೆ ವಿಧಾನವನ್ನು (Ritualism) ವಿವರಿಸಲಾಗಿದೆ. ಪ್ರತಿಯೊಂದು ಧರ್ಮಕ್ಕೆ ತತ್ವಶಾಸ್ತ್ರ (Philosophy), ತರ್ಕಶಾಸ್ತ್ರ (Logic), ಆಚರಣೆಯಶಾಸ್ತ್ರ (Science of Ritualism) ಇವು ಮೂರು ಅತ್ಯಂತ ಆವಶ್ಯಕ. ವಚನಶಾಸ್ತ್ರದ ಮೂರೂ ಭಾಗಗಳು ಈ ಮೂರು ವಿಧಾನಗಳನ್ನು ಹೆಚ್ಚೂ ಕಡಿಮೆ ಒಳಗೊಂಡಿವೆ. ಹೀಗಾಗಿ ಈ ಮೂರೂ ಭಾಗಗಳು ಲಿಂಗಾಯತ ಧರ್ಮದ ವಿವೇಚನೆಯನ್ನು ಚಚ್ಚೌಕಾಗಿ ಮಂಡಿಸುತ್ತವೆ.

ವಚನಶಾಸ್ತ್ರಸಾರ ಭಾಗ–೨, ವಿಶ್ವರಚನೆ ಹಾಗೂ ಮಾನವ ಜೀವನದ ಅಂತರಂಗದ ವಿವೇಚನೆಯನ್ನು ಪ್ರಧಾನವಾಗಿ ಒಳಗೊಂಡಿದೆ. ವಿಶ್ವವು

ಮಹಾಲಿಂಗವಾದರೆ ಅಂತಿಮವಾಗಿ ಮಾನವನು ಇಷ್ಟಲಿಂಗ (ಕ್ರಿಯಾಲಿಂಗ) ವಾಗಿದ್ದಾನೆ. ಈ ಎರಡರ ಸಮನ್ವವನ್ನು ಕುರಿತು ವಿವೇಚನೆ ಇದೆ. ಇಷ್ಟಲಿಂಗವು ಮಹಾಲಿಂಗದಬೇರಾದರೆ, ಮಹಾಲಿಂಗವು ಇಷ್ಟಲಿಂಗದ ಫಲವಾಗಿದೆ. ಈ ತೆರನಾದ ಬೇರು, ಕಾಂಡ, ಎಲೆ, ಹೂವು, ಕಾಯಿ ಹಾಗೂ ಫಲಗಳು ವಿಶ್ವಜೀವನದಲ್ಲಿಯೂ ವ್ಯಕ್ತಿಜೀವನದಲ್ಲಿಯೂ ಗೋಚರಿಸುತ್ತವೆ. ಈ ಹಂತಗಳನ್ನೇ ಆತ್ಮ, ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂದು ಜಾಗತಿಕ ಹಂತದಲ್ಲಿ ಯೋಚಿಸಬಹುದು. ಅದೇ ರೀತಿ–ಗ್ರಹಗಳು (Planets), ನಕ್ಷತ್ರಗಳು (Stars), ಆಕಾಶಗಂಗೆ (Milkyway), ನೀಹಾರಿಕೆಗಳು (Nebulae), ನಿರ್ವಾತ (Vacum) ಮುಂತಾಗಿ ಆರು ಹಂತಗಳಲ್ಲಿ ವಿಶ್ವದ ರಚನೆಯಾಗಿದೆ. ಮನುಷ್ಯನು ಭೂಮಿಯ ಮೇಲೆ ಜನ್ಮತಾಳಿ ಕಣ್ಣುಬಿಟ್ಟಾಗ ಆತನಿಗೆ ಅಂತವುಳ್ಳ ಜಗತ್ತು ಅನಂತವಾದ ವಿಶ್ವವು ಗೋಚರವಾದವು. ಮನುಷ್ಯನು ತನ್ನ ಸುಖಕ್ಕಾಗಿ ತನ್ನ ದೇಹೇಂದ್ರಿಯಾದಿಗಳನ್ನು ಸಜ್ಜುಗೊಳಿಸಿಕೊಂಡು ಸುಖವನ್ನು ಅರಸುತ್ತ ಹೊರಟನು. ಪ್ರಥಮವಾಗಿ ಕುಟುಂಬ ವೆಂಬ ವರ್ತುಲದಲ್ಲಿ ಸುಖಪಡುತ್ತ ಮುನ್ನಡೆದನು. ನಂತರ ಸಾಮಾಜಿಕವರ್ತುಲ, ಜಾಗತಿಕ ವರ್ತುಲ, ವಿಶ್ವದ ವರ್ತುಲದಲ್ಲಿ ಸುಖವನ್ನರಸುತ್ತ ಮುಂದೆ ಸಾಗಿದ್ದಾನೆ. ತನ್ನಾಚೆಗೆ ಯಾರು ? ಎಂದು ಹುಡುಕುತ್ತ ಜಗತ್ತನ್ನು ಪಡೆಯುತ್ತಾನೆ. ಜಗತ್ತಿನಾಚೆಗೆ ಏನು ? ಎಂದು ಹುಡುಕುತ್ತ ವಿಶ್ವದಾಚೆಗೆ ತಲುಪುತ್ತಾನೆ. ವಿಶ್ವದಾಚೆಗೆ ಏನು ? ಎಂದು ಹುಡುಕುತ್ತ ನಿರ್ವಾತದ ಹಂತಕ್ಕೆ ಬಂದು ನಿಂತಿದ್ದಾನೆ. ಈ ನಿರ್ವಾತವೇ ನಿಶ್ಶೂನ್ಯವೆಂದು, ಪರವಸ್ತುವೆಂದು, ದೇವರೆಂದು ತತ್ವಜ್ಞಾನವು ನಿರ್ದೇಶಿಸುತ್ತದೆ. ಆ ನಿರ್ವಾತವೇ ಹೆಪ್ಪುಗಟ್ಟಿ ವಿಶ್ವವಾಗಿ, ವಿಶ್ವವೇ ಹೆಪ್ಪುಗಟ್ಟಿ ಜಗತ್ತಾಗಿ, ಆ ಜಗತ್ತೇ ಹೆಪ್ಪುಗಟ್ಟಿ ಆರು ತತ್ವಗಳಾಗಿ, ಆರು ತತ್ವಗಳೇ ಹೆಪ್ಪುಗಟ್ಟಿ ೪೪ ಲಕ್ಷ ಜೀವರಾಶಿ ಗಳಾಗಿ, ಈ ಜೀವರಾಶಿಗಳ ಸಾರವೇ ಮನುಷ್ಯನಾಗಿದ್ದಾನೆ. ಈ ಮನುಷ್ಯನೇ ಸಾರಗೊಂಡು ಆತ್ಮನಾಗಿದ್ದಾನೆ. ವೃಕ್ಷವು ಬೀಜಗೊಳ್ಳುವಂತೆ, ಬೀಜವು ವೃಕ್ಷ ಗೊಳ್ಳುವಂತೆ ಬೃಹತ್ತಾದ ಪರಮಾತ್ಮನು ಬೀಜದಂತೆ ಅಣುವಾಗಿ ಆತ್ಮನಾಗಿದ್ದಾನೆ. ಅಣುವಾದ ಆತ್ಮನು, ಬೀಜ ವೃಕ್ಷವಾಗುವಂತೆ– ಪರಮಾತ್ಮನಾಗಬಲ್ಲ ಎಂಬುದು ದಾರ್ಶನಿಕ ಸತ್ಯ (Philosophic truth). ಬೀಜದಲ್ಲಿ ವೃಕ್ಷವಾಗುವ ಎಲ್ಲ ಅಂಶಗಳೂ ಇರುವಂತೆ ಆತ್ಮನಲ್ಲಿ ಪರಮಾತ್ಮನಾಗುವ ಎಲ್ಲ ಅಂಶಗಳೂ ಘನೀಭೂತಗೊಂಡಿವೆ (God is soliditied in the Soul).

ಇಂದಿನ ವೈಜ್ಞಾನಿಕ ಹಾಗೂ ವೈಚಾರಿಕ ದೃಷ್ಟಿಯುಳ್ಳ ಮಾನವನು ಅಣುವಿ ನಿಂದ ಹಿಡಿದು ವಿಶ್ವದ ಮೂಲದವರೆಗೆ ವಿಜ್ಞಾನ ಹಾಗೂ ವೈಚಾರಿಕ ದೃಷ್ಟಿಯಿಂದ ಸಂಶೋಧನೆ ಮಾಡುತ್ತಿದ್ದಾನೆ. ಈ ಸಂಶೋಧನೆಯ ಮಾಧ್ಯಮಕ್ಕೆ ವಿಶ್ವದ ಮೂಲವು ನಿರ್ವಾತವೆಂದು ತಿಳಿಯುತ್ತಿದ್ದಾನೆ. ಹಾಗೆಯೇ ಈ ವಿಶ್ವ ಹಾಗೂ ಜಗತ್ತು ನೂರಾರು ವಸ್ತುಗಳ ಸಂಯೋಜನೆಯಿಂದ ನಿರ್ಮಾಣಗೊಂಡಿಲ್ಲ. ಆದರೆ ಅನಂತ ಶಕ್ತಿಯಿಂದ

ನಿರ್ಮಾಣಗೊಂಡಿದೆ ಎಂಬುದನ್ನು ಐನ್‌ಸ್ಟೀನ್‌ರ ಸಾಪೇಕ್ಷ ಸಿದ್ಧಾಂತದ ಮೇರೆಗೆ ಕಂಡುಕೊಂಡಿದ್ದಾನೆ. ಈ ಅನಂತಶಕ್ತಿಯ ತೌರುಮನೆ ಅನಂತವಾದ ಬೆಳಕಿನ ಮೂಲ ವೆಂದು ಭಾವಿಸುತ್ತಿದ್ದಾನೆ. ಅದನ್ನೇ ವಿಜ್ಞಾನಿಗಳು ನಿರ್ವಾತವೆಂದು ಕರೆಯುತ್ತಿದ್ದಾರೆ. ಈ ನಿರ್ವಾತದ ಮೂಲದಿಂದ ಮಹಾಬೆಳಕೊಂದು ಆಸ್ಫೋಟನಗೊಂಡಿತೆಂದೂ ಅದೇ ವಿಶ್ವವಾಯಿತೆಂದೂ ಹೇಳುತ್ತಾರೆ. ಇದನ್ನೇ ಮಹಾ ಆಸ್ಫೋಟನಸಿದ್ಧಾಂತ ವೆಂದು ಕರೆಯುತ್ತಾರೆ (Big Bung Theory). ಈ ಮಹಾಬೆಳಕೇ ಮಹಾ ಆಕುಂಚನ ವಾದಾಗ ಜೀವಜಾಲಗಳುಳ್ಳ ಜಗತ್ತಾಗಬಹುದು. ಇದನ್ನೇ ಮಹಾ ಆಕುಂಚನ ಸಿದ್ಧಾಂತ (Big Crunch) ಎಂದು ಹೇಳುತ್ತಾರೆ. ಈ ಜಗತ್ತೇ ಆಕುಂಚನಗೊಳ್ಳುತ್ತ ಮಾನವನಾಗಿ, ಮಾನವನೇ ಆಕುಂಚನಗೊಳ್ಳುತ್ತ ಆತ್ಮವಾಗಿ, ಆತ್ಮವು ಮತ್ತೆ ಮಹಾಸ್ಫೋಟಗೊಳ್ಳುತ್ತ ಪರಮಾತ್ಮನಾಗಿ ಸಾಕಾರ ನಿರಾಕಾರದ ಲೀಲೆಯನ್ನು ತೋರಿಸುತ್ತದೆ. ಇದನ್ನೇ ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ :

''ಬಯಲ ರೂಪ ಮಾಡಬಲ್ಲಾತನೇ ಶರಣನು
ಆ ರೂಪವ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ''.

ಬಸವಣ್ಣನವರು ಈ ವಚನದಲ್ಲಿ ವಿಶ್ವೋತ್ಪತ್ತಿ ಹಾಗೂ ವಿಶ್ವಸಾಮರಸ್ಯದ (ಲಿಂಗಾಂಗಸಾಮರಸ್ಯ) ಸ್ವರೂಪವನ್ನು ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಈ ವಿಷಯದ ವೈಜ್ಞಾನಿಕ ವಿವೇಚನೆಯನ್ನೇ ವಚನಶಾಸ್ತ್ರಸಾರದ ಭಾಗ ೨ ರಲ್ಲಿ ವಿಸ್ತೃತವಾಗಿ ನೋಡಬಹುದು.

ವಚನಶಾಸ್ತ್ರಸಾರ ಭಾಗ–೨ ರಲ್ಲಿ ಅಧಿಕೃತ ಹಾಗೂ ಅನಧಿಕೃತ ಸಾಹಿತ್ಯದ ಮಿಶ್ರಣವಿದೆ. ಅಧಿಕೃತ ವಚನಗಳು ಹಾಗೂ ಕರಣಹಸಿಗೆ, ಸಕೀಲ, ಅದ್ಭ, ಏಕೋತ್ತರಶತಸ್ಥಲ ಮುಂತಾದ ಅನಧಿಕೃತ ಸಾಹಿತ್ಯ ಸೇರ್ಪಡೆಯಾಗಿದೆ. ಅನಧಿಕೃತ ಸಾಹಿತ್ಯದ ರಚನೆಕಾರರು ಯಾರೆಂಬುದು ಸ್ಪಷ್ಟವಿಲ್ಲ. ಆದ್ದರಿಂದಲೇ ಇದನ್ನು ಅನಧಿಕೃತ ಸಾಹಿತ್ಯವೆಂದು ಪರಿಗಣಿಸಲಾಗಿದೆ. ಈ ಸಾಹಿತ್ಯವನ್ನು ಹಿಂದೂ ಧರ್ಮದ, ಶೈವಧರ್ಮದ, ಲಿಂಗಾಯತಧರ್ಮದ ಪರಿಭಾವನೆ, ಪರಿಕಲ್ಪನೆಗಳನ್ನು ಮುಂದಿಟ್ಟುಕೊಂಡು ಬರೆಯಲಾಗಿದೆ. ವಚನಗಳನ್ನು ಹೊರತುಪಡಿಸಿ ಈ ಗ್ರಂಥದಲ್ಲಿ ಇನ್ನುಳಿದ ಸಾಹಿತ್ಯವು ಸಟೀಕಾ ಸಾಹಿತ್ಯದಂತಿದೆ. ಈ ಸಾಹಿತ್ಯವನ್ನು ಸುಮಾರು ೧೮ ಅಥವಾ ೧೯ನೇ ಶತಮಾನದಲ್ಲಿ ವಚನ ಸಾಹಿತ್ಯಕ್ಕೆ ಟೀಕೆಯನ್ನು ಬರೆದ ಟೀಕಾಕಾರರೇ ರಚಿಸಿರಬಹುದು.

ಈ ಸಟೀಕಾ ಸಾಹಿತ್ಯವು ಕೆಲವಡೆ ಅನುಭವಾತ್ಮಕವಾಗಿ, ಕೆಲವೆಡೆ ತಂತ್ರ ಜ್ಞಾನಾತ್ಮಕವಾಗಿ ಕೂಡಿದ್ದು ಸ್ಥಲಾತ್ಮಕವಾಗಿ ಸಕೀಲಾತ್ಮಕವಾಗಿ ನಿರೂಪಣೆಗೊಂಡಿದೆ. ಲಿಂಗಸಕೀಲ, ಅಂಗಸಕೀಲ, ವಿಷಯಸಕೀಲ, ತ್ರಿವಿಧಸಕೀಲ, ಷಡ್ವಿಧಸಕೀಲ, ನವವಿಧಸಕೀಲ, ೩೬ ವಿಧ ಸಕೀಲ, ೨೧೬ ವಿಧ ಸಕೀಲವಾಗಿ ಅಲ್ಲಲ್ಲಿ ನಿರೂಪಣೆ

ಗೊಂಡಿದೆ. ಅದೇ ರೀತಿ ತ್ರಿವಿಧಸ್ಥಲ, ಷಟ್‌ಸ್ಥಲ, ನವಸ್ಥಲ, ಏಕೋತ್ತರ ಸ್ಥಲವಾಗಿ ನಿರೂಪಣೆಗೊಂಡಿದೆ. ಕರಣಹಸಿಗೆಯಲ್ಲಿಯ ದೇಹ, ಅಂಗ, ಮನ ಸಂರಚನೆಗೂ ಹಾಗೂ ಇವುಗಳಲ್ಲಿಯ ದೋಷಗಳ ಪರಿಮಾರ್ಜನೆಗೂ ಷಟ್‌ಸ್ಥಲದ ನೇರ ಪ್ರಕ್ರಿಯೆಯನ್ನು ಕುರಿತು ಸಮನ್ವಯಗೊಳಿಸುವದು ಇನ್ನೂ ಅವಶ್ಯವಿದೆ. ಆ ಕಾರ್ಯವನ್ನು ಅನುಭಾವಿಗಳು ಕೈಗೆತ್ತಿಕೊಳ್ಳಬೇಕಾಗಿದೆ.

ಈ ಮರುಸಂಪಾದನೆಯ ಕಾರ್ಯದಲ್ಲಿ ವಿಶ್ವರಚನೆ, ಕರಣ ಹಸಿಗೆ, ನವವಿಧ ಸಕೀಲಗಳನ್ನು ಕುರಿತು ಸಂಬಂಧಪಟ್ಟಲ್ಲಿ ಟಿಪ್ಪಣಿಗಳನ್ನು ಸೇರಿಸಲಾಗಿದೆ. ಇವು ಮೂಲ ರಚನೆಗೆ ಕೆಲವೊಮ್ಮೆ ವ್ಯತ್ಯಸ್ಥವಾಗಿ ಕಾಣಬಹುದು. ನಾನು ನನ್ನ ದೀರ್ಘ ಚಿಂತನೆಯ ಪರಿಣಾಮವಾಗಿ ಕಂಡುಕೊಂಡ ಅನುಭಾವದ ಹಿನ್ನೆಲೆಯಲ್ಲಿ ವಿಚಾರಗಳನ್ನು ಮಂಡಿಸಿದ್ದೇನೆ. ಇವೇ ಆತ್ಯಂತಿಕ ಸತ್ಯವೆಂಬ ಮನೋಭಾವನೆ ನನಗಿಲ್ಲ. ಅನುಭಾವಿಗಳು ಮುಂದುವರೆದು ಇನ್ನೂ ಇದರಲ್ಲಿ ಮಾರ್ಪಾಟು ಮಾಡ ಬಹುದು. ಈ ಗ್ರಂಥದ ಅಧ್ಯಯನ ಹಾಗೂ ಚಿಂತನೆಗೆ ಸಹಾಯಕವಾಗಲೆಂದು ಟಿಪ್ಪಣಿಗಳನ್ನು ಕೊಡಲಾಗಿದೆ. ಇದೇ ರೀತಿ– ಈ ಗ್ರಂಥದ ಕೊನೆಗೆ ಅನುಬಂಧ ಗಳನ್ನು ಸೇರಿಸಲಾಗಿದೆ. ಈ ಅನುಬಂಧಗಳು ಗ್ರಂಥದ ಸಾರವನ್ನು ಸಮೀಕರಿಸಲು ಹಾಗೂ ಆ ಸಾರವನ್ನು ನೆನಪಿಡಲು ಸಹಾಯಕವಾಗಬಹುದಾಗಿದೆ. ಈ ಅನುಬಂಧ ಗಳು ಈ ಗ್ರಂಥದ ಮುಖ್ಯ ಭಾಗಗಳಿಗನುಗುಣವಾಗಿ ವಿಭಜನೆಗೊಂಡು ಸೇರಿಸಲ್ಪಟ್ಟಿವೆ. ಅವುಗಳಲ್ಲಿ ಅಲಲ್ಲಿ ಸ್ವಲ್ಪ ಬದಲಾವಣೆ ಮಾಡಿ ಚಿಂತನೆಯ ಕ್ರಮಬದ್ಧತೆಗೆ ಸಹಾಯಕವಾಗಲೆಂದು ರಚಿಸಲ್ಪಟ್ಟಿವೆ.

ಡಾ. ಫ. ಗು. ಹಳಕಟ್ಟಿಯವರ ಮೂಲಕೃತಿಯ ಸಂದಿಗ್ಧವಾದ ಮತ್ತು ಅಪೂರ್ಣವಾದ ವಿಷಯಗಳನ್ನು ತಿದ್ದುಪಡಿ ಮಾಡಿ ಖಚಿತಗೊಳಿಸಿ ಶುದ್ಧ ಪಾಠಗಳನ್ನು ನೀಡಲಾಗಿದೆ.

ಹಳಕಟ್ಟಿ ಅವರು ಸಂಪಾದಿಸಿದ ವಚನಶಾಸ್ತ್ರಸಾರದ ಮೂರೂ ಭಾಗಗಳು ಎಂದೋ ತೀರಿ ಹೋಗಿವೆ. ಹಿಂದಿನ ತಲೆಮಾರಿನವರಿಗೆ ಲಭ್ಯವಾದ ಈ ಸಾಹಿತ್ಯವು ಇಂದಿನ ತಲೆಮಾರಿನವರಿಗೆ ಲಭ್ಯವಾಗದೆ ಹೋಗಿದೆ. ಹೀಗಾಗಿ ಇಂದಿನ ಮಠಾಧಿ ಪತಿಗಳಿಗೂ ವಿಶ್ವವಿದ್ಯಾಲಯದ ಹಾಗೂ ವಿದ್ಯಾಲಯೇತರ ವಿದ್ವಾಂಸರಿಗೂ ಅಧ್ಯಯನಶೀಲರಿಗೂ ವಚನಸಾಹಿತ್ಯದ ಸಮಗ್ರ ಅಧ್ಯಯನಕ್ಕೆ ಮೂಲಭೂತವಾದ ತೊಡಕುಂಟಾಗಿತ್ತು. ಈ ಐತಿಹಾಸಿಕ ತೊಡಕನ್ನು ಗಮನಿಸಿ, ಕನ್ನಡನಾಡಿನ ಕುಲಗುರುಗಳೆಂದು ಪ್ರಖ್ಯಾತರಾದ ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳವರು ಹಳಕಟ್ಟಿ ಅವರ ಈ ಮಹಾಸಂಪುಟ ಪ್ರಕಾಶನದ ಭಗೀರಥ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಅದರ ಪರಿಣಾಮವಾಗಿ ವಚನಶಾಸ್ತ್ರಸಾರ ಭಾಗ–೧ ಈ ಮೊದಲು ಪ್ರಕಾಶಗೊಂಡು ಅದರ ಪ್ರತಿಗಳೂ ಶೀಘ್ರವಾಗಿ ತೀರಿಹೋಗಿವೆ. ಅನುಭಾವಾತ್ಮಕವಾಗಿರುವ, ಚಿಂತನ ಪರವಾಗಿರುವ

ವಚನಶಾಸ್ತ್ರ ಭಾಗ–೨ನ್ನು ಕನ್ನಡಿಗರ ಕೈಗೆ ನೀಡಬೇಕೆಂದು ಅದಮ್ಯ ಹಂಬಲದಿಂದ ಮಹಾಸ್ವಾಮಿಗಳವರು ಇದರ ಮರುಸಂಪಾದನೆ ಕಾರ್ಯವನ್ನು ನನಗೆ ವಹಿಸಿದರು. ಮಣಿಹವನ್ನು ಸಂತೋಷದಿಂದ ಪೂರೈಸಿದ್ದೇನೆ.

ಈ ಕಾರ್ಯದಲ್ಲಿ ವಚನಸಾಹಿತ್ಯದ ಅಧ್ಯಯನ, ಆಚರಣೆಯುಳ್ಳ ಕಮ್ಮತಹಳ್ಳಿಯ ಶ್ರೀ. ಮ. ನಿ. ಪ್ರ ಚನ್ನಬಸವ ಶಿವಯೋಗಿಗಳು ಸೂಚನೆಗಳನ್ನು ನೀಡುತ್ತ ಸಹಕರಿಸಿದ್ದಾರೆ. ಡಾವಣಗೆರೆಯ ಶ್ರೇಷ್ಠ ವಾಣಿಜ್ಯಪತಿಗಳೂ ಬಸವ ತತ್ವ ಆಚರಣೆಯುಳ್ಳ ದಾನಿಗಳೂ ಆದ ಶ್ರೀ ಎಚ್. ಎಂ. ಸ್ವಾಮಿಯವರು ಒತ್ತಾಯ ಮಾಡಿ ಸಲಹೆ ನೀಡಿ ಸಹಕರಿಸಿದ್ದಾರೆ. ಅದೇ ರೀತಿ ಬಸವತತ್ವ ಆಚರಣೆನಿಷ್ಠ ಪ್ರೊ. ಸಿ.ಎನ್. ಹಿರೇಮಠರು ಈ ಗ್ರಂಥದ ಅಚ್ಚು ಪ್ರತಿಯನ್ನು ಪರಿಶ್ರಮದಿಂದ ತಯಾರಿಸುವಲ್ಲಿ ಸಹಕರಿಸಿದ್ದಾರೆ ಕುಂಬಳೂರಿನ ಗುರುಕುಲಾಶ್ರಮದ ಬಸವತತ್ವ ಕ್ರಿಯಾಶೀಲರಾದ ಶ್ರೀ ಶಿವಾನಂದ ಗುರೂಜಿಯವರು ನನ್ನ ತರುಣ ಮಿತ್ರರಾದ ಅಜ್ಜಂಪುರ ಶೆಟ್ರ ಸಿದ್ಧಮಲ್ಲಪ್ಪನವರು ಮೇಲಿಂದ ಮೇಲೆ ಆಗ್ರಹ ಪಡಿಸಿ ಈ ಕಾರ್ಯ ಪೂರ್ಣಗೊಳ್ಳುವಲ್ಲಿ ಸಹಕರಿಸಿದ್ದಾರೆ. ಈ ಗ್ರಂಥ ಪರಿಷ್ಕರಣೆಯ ಕುರಿತ ಚರ್ಚೆಯಲ್ಲಿ ಪೂಜ್ಯ ಶ್ರೀ ಚೆನ್ನಬಸವಮಹಾಸ್ವಾಮಿಗಳವರು ಪಾಂಡೋಮಟ್ಟಿ ಹಾಗೂ ಬಸವರಾಜಪ್ಪನವರು ಅಜ್ಜಂಪುರಶೆಟ್ಟರು ಅಮೂಲ್ಯ ಸಲಹೆಗಳನ್ನಿತ್ತಿದ್ದಾರೆ. ಈ ಗ್ರಂಥದ ಪಾಠಪರಿಷ್ಕರಣೆಯ ಕಾರ್ಯವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರೂ ಖ್ಯಾತ ಸಂಶೋಧಕರೂ ಆದ ಡಾ. ವೀರಣ್ಣ ರಾಜೂರ ಅವರು ಪೂರೈಸಿದ್ದಾರೆ. ಈ ಕಾರ್ಯದಲ್ಲಿ ಸಹಕರಿಸಿ ಪ್ರೇರಣೆ ಇತ್ತ ಎಲ್ಲ ಪೂಜ್ಯರಿಗೂ ಹಾಗೂ ಶರಣ ಬಂಧುಗಳಿಗೂ ಚಿರಋಣಿಯಾಗಿದ್ದೇನೆ.

ವಿ. ವಿ. ಸಂಗಮದ

■■■

ಮರು ಪರಿಷ್ಕರಣ ವಿಧಾನ

■

ಡಾ. ಫ. ಗು. ಹಳಕಟ್ಟಿ ಅವರ ಐತಿಹಾಸಿಕ ಮಹತ್ವದ ಕೃತಿ '' ವಚನಶಾಸ್ತ್ರಸಾರ ಭಾಗ–೨'' ಶುದ್ಧ ತಾತ್ವಿಕ–ವಿಷಯಗಳಿಂದ ಕೂಡಿದ ವಚನ ಸಂಪುಟ. ಇದರಲ್ಲಿ ವೀರಶೈವದ ಸೃಷ್ಟಿಯ ರಚನೆ, ಕರಣಹಸಿಗೆ, ಕ್ರಿಯೆಗಳು–ಸಕೀಲಗಳು, ಷಟ್‌ಸ್ಥಲಗಳು ಹಾಗೂ ಏಕೋತ್ತರ ಸ್ಥಲಗಳು ಎಂಬ ತಾತ್ವಿಕ ವಿಷಯಗಳನ್ನು ಶಿವಶರಣರ ವಚನ ಮತ್ತು ಅನುಭಾವಿಗಳ ಗದ್ಯಬರಹಗಳ ಆಧಾರದಿಂದ ತುಂಬ ಸಮರ್ಥವಾಗಿ ಸಂಯೋಜಿಸಲಾಗಿದೆ.

ಈ ಕೃತಿ ಸಿದ್ಧಪಡಿಸುವಲ್ಲಿ ಡಾ. ಹಳಕಟ್ಟಿ ಅವರು ಅನೇಕ ಪ್ರಾಚೀನ ಆಕರಗಳನ್ನು ಬಳಸಿಕೊಂಡಿದ್ದಾರೆ. ಆದರೆ ಅವುಗಳ ವಿವರ ಕೊಡದೆ ಇರುವುದು ಮರುಪರಿಷ್ಕರಣ ಕಾರ್ಯಕ್ಕೆ ತುಂಬ ಆತಂಕವನ್ನು ತಂದೊಡ್ಡಿದೆ. ಆದರೂ ಈಗಾಗಲೇ ಪ್ರಕಟವಾದ ವಚನಸಾಹಿತ್ಯ ಮತ್ತು ತಾತ್ವಿಕ ಗ್ರಂಥಗಳ ಹಿನ್ನೆಲೆಯಲ್ಲಿ ಈ ಕೃತಿಯನ್ನು ಶುದ್ಧಗೊಳಿಸುವ ಸಾಹಸಕ್ಕೆ ಕೈಹಾಕಲಾಗಿದೆ. ಇಲ್ಲಿ ಅನುಸರಿಸಿದ ವಿಧಾನಗಳು ಹೀಗಿವೆ :

೧) ಹಳಕಟ್ಟಿ ಅವರ ಆವೃತ್ತಿಯಲ್ಲಿ ಯಾವುದೇ ವಚನ ಅಥವಾ ಗದ್ಯಭಾಗ ತನ್ನಷ್ಟಕ್ಕೆ ತಾನೇ ಸರಿಯಾಗಿದ್ದರೆ– ಅನ್ಯ ಆವೃತ್ತಿಗಳಲ್ಲಿ ಭಿನ್ನಪಾಠಗಳಿದ್ದರೂ–ಅದನ್ನು ಪರಿಷ್ಕರಿಸಲು ಪ್ರಯತ್ನಿಸದೆ ಇದ್ದಂತೆ ಇಟ್ಟುಕೊಳ್ಳಲಾಗಿದೆ.

೨) ಪಾಠದೋಷಗಳಿದ್ದರೆ ವಚನಗಳನ್ನು ಅಂಕಿತಗಳ ಮೇಲಿಂದ ಅನ್ಯ ಆಕರಗಳನ್ನು ಗಮನಿಸಿ ಸರಿಪಡಿಸಿಕೊಳ್ಳಲಾಗಿದೆ. ಗದ್ಯಭಾಗದಲ್ಲಿನ ತಾತ್ವಿಕ ವಿಷಯ ಹಾಗೂ ಪಾರಿಭಾಷಿಕ ಪದಗಳಲ್ಲಿ ಆಗಿದ್ದ ಪಲ್ಲಟವನ್ನು ಅನ್ಯ ತಾತ್ವಿಕ ಗ್ರಂಥಗಳ ಆಧಾರದಿಂದ ಸರಿಪಡಿಸಿಕೊಳ್ಳಲಾಗಿದೆ.

೩) ಅನ್ಯ ಮೂಲಗಳಿಂದ ದೊರೆತ ಯೋಗ್ಯಪಾಠವನ್ನು ಚೌಕಕಂಸಿನಲ್ಲಿಟ್ಟು ಅಂಕಿಗಳಿಂದ ಗುರುತಿಸಿ ೧[ ]೧, ಮೂಲದಲ್ಲಿ ಅಶುದ್ಧ ಪಾಠವನ್ನು 'ಮೂ' ಎಂಬ ಸಂಕೇತದಿಂದ ಅಡಿಯಲ್ಲಿ ಕೊಡಲಾಗಿದೆ.('ಮೂ' ಎಂದರೆ ಮೂಲ ಕೃತಿಯ ಪಾಠ ಎಂದು ಅರ್ಥ).

೪) ಬಿಟ್ಟು ಹೋದ ಪದ ಅಥವಾ ವಾಕ್ಯವನ್ನು ಅನ್ಯ ಆಕರಗಳ ಸಹಾಯದಿಂದ ಕೇವಲ ಚೌಕ ಕಂಸಿನಲ್ಲಿ [ ]ಹಾಕಿ ಸ್ವೀಕರಿಸಲಾಗಿದೆ.

೫) ಒಂದು ಪದ ಸರ್ವರಿಗೂ ಅರ್ಥವಾಗುವುದಿಲ್ಲ ಎನಿಸಿದಲ್ಲಿ ಅದರ ಸಮಾನಾರ್ಥ ಪದವನ್ನು ದುಂಡು ( )ಕಂಸಿನಲ್ಲಿ ಸೇರಿಸಿ ಕೊಡಲಾಗಿದೆ.

೬) ಆಯಾ ಭಾಗದ ವಿಷಯ ಕುರಿತು ಹೆಚ್ಚಿನದೇನನ್ನಾದರೂ ಸಂಕ್ಷಿಪ್ತವಾಗಿ ಹೇಳುವುದಿದ್ದರೆ ಚುಕ್ಕೆ* ಚಿಹ್ನೆಯಿಂದ ಗುರುತಿಸಿ, ಅಡಿಯಲ್ಲಿ 'ಸಂ' ಎಂಬ ಸಂಕೇತದಿಂದ ಸೇರಿಸಲಾಗಿದೆ. ('ಸಂ' ಎಂದರೆ ಸಂಪಾದಕರ ಅಭಿಪ್ರಾಯ ಎಂದು ಅರ್ಥ).

೭) ಒಂದು ವಿಷಯ ಕುರಿತು ಹೆಚ್ಚು ದೀರ್ಘ ವಿವರಣೆ ಕೊಡಬೇಕಾದ ಪ್ರಸಂಗ ಬಂದಲ್ಲಿ ಚುಕ್ಕೆ * ಗುರುತು ಹಾಕಿ, ಅಡಿಯಲ್ಲಿ– 'ನೋಡಿ ಅನುಬಂಧ–೨೦ ಟಿಪ್ಪಣಿಗಳು' ಎಂದು ಸೂಚಿಸಲಾಗಿದೆ. ಟಿಪ್ಪಣಿಗಳನ್ನು ಅನುಬಂಧ ೨೦ರಲ್ಲಿ ಪ್ರತ್ಯೇಕವಾಗಿ ಜೋಡಿಸಲಾಗಿದೆ.

೮) ಒಂದೇ ಅಧ್ಯಾಯದಲ್ಲಿ ಒಂದೇ ವಚನ ಅಥವಾ ಗದ್ಯಭಾಗ ಎರಡು ಬಾರಿ ಬಂದಿದ್ದರೆ ಒಂದನ್ನು ತೆಗೆದು ಹಾಕಿ ಅಡಿಯಲ್ಲಿ ವಿವರಣೆ ಕೊಡಲಾಗಿದೆ. ಉದಾ:

೯) ಎರಡು ಸೇರಿ ಒಂದಾದ ವಚನಗಳನ್ನು ಬಿಡಿಸಿ ಇಡಲಾಗಿದೆ. ಬಿಟ್ಟುಹೋದ ಹಾಗೂ ಪಲ್ಲಟವಾದ ಅಂಕಿತಗಳನ್ನು ಸರಿಪಡಿಸಲಾಗಿದೆ.

೧೦) ಇದು ಗದ್ಯ ಪ್ರಧಾನವಾದ ಕೃತಿ. ಅಲ್ಲಲ್ಲಿ ಬಳಸಿದ ವಚನಗಳಿಗೆ ಮಾತ್ರ ತಲೆಯ ಮೇಲೆ ಕ್ರಮಸಂಖ್ಯೆಯನ್ನು ಕೊಡಲಾಗಿದೆ. ಹಳಕಟ್ಟಿ ಅವರು ಒಂದೊಂದು ಭಾಗಕ್ಕೆ ವಚನದ ಆದಿಯಲ್ಲಿ ಹಾಕಿದ ಸಂಖ್ಯೆಯನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

೧೧) ಮೂಲ ಗ್ರಂಥದಲ್ಲಿ ಹಳಕಟ್ಟಿ ಅವರು ಕೊಟ್ಟ ಎಲ್ಲ ಅನುಬಂಧಗಳನ್ನೂ ಹಾಗೇ ಉಳಿಸಿಕೊಳ್ಳಲಾಗಿದೆ.,

೧೨) ಜೊತೆಗೆ ಟಿಪ್ಪಣಿಗಳು ಮೊದಲಾದ ಏಳು ಅನುಬಂಧಗಳನ್ನು (೧೫ ರಿಂದ ೨೧) ಹೆಚ್ಚಿಗೆ ಜೋಡಿಸಲಾಗಿದೆ.

೧೩) ವಚನಗಳನ್ನು ಪರಿಷ್ಕರಿಸುವಲ್ಲಿ ಕರ್ನಾಟಕ ಸರಕಾರ ಪ್ರಕಟಿಸಿದ ವಚನ ಸಂಪುಟಗಳನ್ನು ಬಳಸಿಕೊಳ್ಳಲಾಗಿದೆ.

೧೪) ಮೂಲದಲ್ಲಿ ಒಂದೊಂದು ಉಪವಿಭಾಗಗಳನ್ನೂ ಪ್ರತ್ಯೇಕ ಅಧ್ಯಾಯದಂತೆ ಮುದ್ರಿಸಲಾಗಿದೆ. ಅದನ್ನು ತೆಗೆದು ಐದು ಮುಖ್ಯಭಾಗಗಳಲ್ಲಿ ಅವುಗಳನ್ನು ಅಳವಡಿಸಿ ವಿಷಯದ ನಿರಂತರತೆಯನ್ನು ಕಾಯ್ದುಕೊಳ್ಳಲಾಗಿದೆ.

೧೫) ಆರಂಭದಲ್ಲಿ ಹಳಕಟ್ಟಿಯವರು ಮೂಲಗ್ರಂಥಕ್ಕೆ ಬರೆದ ಪ್ರಸ್ತಾವನೆಯನ್ನು ಮುದ್ರಣ ದೋಷಗಳನ್ನು ಮಾತ್ರ ತಿದ್ದಿ ಹಾಗೇ ಉಳಿಸಿಕೊಳ್ಳಲಾಗಿದೆ. ಗ್ರಂಥ ಪ್ರಕಟನೆಗೆ ಧನ ಸಹಾಯ ಮಾಡಿದ ದಾನಿಗಳ ವಿವರಗಳನ್ನು ಕೈಬಿಡಲಾಗಿದೆ. ಅನುಕ್ರಮಣಿಕೆಯನ್ನು ಒಂದೊಂದು ಭಾಗದ ಉಪಶೀರ್ಷಿಕೆಗಳನ್ನೆಲ್ಲ ಒಂದೇ ಕಡೆ ಸೇರಿಸಿ ಪುನರ್ ವ್ಯವಸ್ಥೆಗೊಳಿಸಲಾಗಿದೆ.

ಹೀಗೆ ಈ ಕೃತಿಯನ್ನು ಗ್ರಂಥ ಸಂಪಾದನೆಯ ತತ್ವಗಳಿಗನುಗುಣವಾಗಿ

ಅಮೂಲಾಗ್ರವಾಗಿ ಪರಿಷ್ಕರಿಸಿ, ಸಾಧ್ಯವಾದ ಮಟ್ಟಿಗೆ ಶುದ್ಧಗೊಳಿಸಲು ಪ್ರಯತ್ನಿಸ ಲಾಗಿದೆ. ಉಳಿದಿರಬಹುದಾದ ದೋಷಗಳನ್ನು ಪ್ರಾಜ್ಞರು ಸೂಚಿಸಿದಲ್ಲಿ ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಲಾಗುವುದು.

ಈ ಕೃತಿ ಪೂಜ್ಯ ಡಾ. ಸಿದ್ಧಲಿಂಗ ಮಹಾಸ್ವಾಮಿಗಳವರ ಪಟ್ಟಾಭಿಷೇಕ ರಜತಮಹೋತ್ಸವ ಸಂದರ್ಭದಲ್ಲಿ ಪ್ರಕಟಗೊಳ್ಳಲಿರುವ ಇಪ್ಪತ್ತೈದು ಗ್ರಂಥಗಳಲ್ಲಿ ಒಂದಾಗಿ ಬೆಳಕು ಕಾಣುತ್ತಿರುವುದು ಸಂತಸದ ಸಂಗತಿ. ಈ ಗ್ರಂಥ ಪರಿಷ್ಕರಣದ ಕಾರ್ಯವನ್ನು ಕೃಪೆಗೈದ ಪೂಜ್ಯರಿಗೆ ಅನಂತ ಪ್ರಣಾಮಗಳು. ಪ್ರಕಟಣೆಯ ಕಾರ್ಯದಲ್ಲಿ ನೆರವಾದ ಪ್ರೊ. ಚಂದ್ರಶೇಖರ ವಸ್ತ್ರದ ಅವರಿಗೆ ಹಾಗೂ ತ್ವರಿತವಾಗಿ ಮುದ್ರಿಸಿಕೊಟ್ಟ ತ್ವರಿತ ಮುದ್ರಣಾಲಯದ ಮಾಲಿಕರಿಗೆ ಅನಂತ ವಂದನೆಗಳು.

ಡಾ. ವೀರಣ್ಣ ರಾಜೂರ

■■■

ಪರಿವಿಡಿ

■

ಭಾಗ : ಸೃಷ್ಟಿಯ ರಚನೆ ೧–೫೪

ವಿವರಣೆ. ಸರ್ವಶೂನ್ಯ ನಿರಾಲಂಬ, ಶೂನ್ಯಲಿಂಗ, ನಿಃಕಲಲಿಂಗ, ಮಹಾ ಲಿಂಗ, ಪ್ರಣಮ, ಪಂಚಸಾದಾಖ್ಯಗಳ ಉತ್ಪತ್ತಿ ಮಾಯೆ, ಸಾದಾಖ್ಯಗಳು, ಷಟ್‌ಸ್ಥಲ ಬ್ರಹ್ಮಮೂರ್ತಿಗಳು, ಪಂಚಭೂತ ಗಳ ಉತ್ಪತ್ತಿ ಪಂಚಭೂತಗಳ ಸ್ವಭಾವ ಸ್ಥಿತಿಗಳ ನಿಲುಕಡೆಗಳು, ಷಡಧ್ವಗಳು: ಮಂತ್ರಾಧ್ವ, ಪದಾಧ್ವ, ವರ್ಣಾಧ್ವ, ಭುವನಾಧ್ವ, ತತ್ವಾಧ್ವ, ಕಲಾಧ್ವ, ಷಡಧ್ವವರ್ತನೆ, ಮೂವತ್ತಾರು ತತ್ವಗಳು, ಮೂವತ್ತಾರು ತತ್ವಗಳು ಪರಸ್ಪರ ಅಡಗುವ ರೀತಿ, ಜಗದುತ್ಪತ್ತಿಯ ಸಾಮಾನ್ಯ ವಚನಗಳು.

ಭಾಗ–೨ : ಕರಣ ಹಸಿಗೆ ೫೫–೧೧೯

ವಿವರಣೆ, ಕರಣಹಸಿಗೆಯ ಅರ್ಥ, ದೇಹದ ಜ್ಞಾನ : ಪಿಂಡ ಸಂಗ್ರಹ, ದೇಹದೇಹಿಕಂಗಳ ಉತ್ಪತ್ತಿ, ಪಂಚ ವಿಂಶತಿತತ್ವ ಗಳು, ಮಹಾಭೂತಗಳ ಪಂಚೀಕೃತಿಯು, ಬುದ್ಧೇಂದ್ರಿಯಗಳು, ಕರ್ಮೇಂದ್ರಿಯಗಳು, ಕರಣಚತುಷ್ಟಯಗಳು, ದಶನಾಡಿಗಳು, ದಶವಾಯುಗಳು, ಅಷ್ಟಾತ್ಮಗಳು (ಜೀವಾತ್ಮ ಅಂತರಾತ್ಮಾದಿ ಗಳು), ಅಷ್ಟತನುಗಳು (ಸ್ಥೂಲ ಸೂಕ್ಷ್ಮಾದಿ ಗಳು), ಸಪ್ತಧಾತು ಗಳ (ರಸ, ರುಧಿರಾದಿಗಳ) ಉತ್ಪತ್ತಿ, ಪಂಚ ಕೋಶಗಳು (ಅನ್ನಮಯ, ಪ್ರಾಣಮಯಾದಿಗಳು), ಪಂಚಾಗ್ನಿಗಳ ಉತ್ಪತ್ತಿ (ಉದರಾಗ್ನಿ, ಮಂದಾಗ್ನ್ಯಾದಿಗಳು), ಅಂಗಚತುಷ್ಟಯಗಳು (ಅಂಗ, ಪ್ರತ್ಯಂಗ, ಸಾಂಗಾಂಗ ಉಪಾಂಗ), ತನುತ್ರಯಗಳು (ಸ್ಥೂಲ, ಸೂಕ್ಷ್ಮ, ಕಾರಣ), ಗುಣತ್ರಯಗಳು (ಸತ್ವ, ರಜ, ತಮ), ಆತ್ಮತ್ರಯಗಳು (ಜೀವಾತ್ಮ ಅಂತರಾತ್ಮ ಪರಮಾತ್ಮ), ಜೀವ ತ್ರಯಗಳು (ವಿಶ್ವ, ತೈಜಸ, ಪ್ರಾಜ್ಞ), ಅವಸ್ಥಾತ್ರಯಗಳು (ಜಾಗ್ರ, ಸ್ವಪ್ನ, ಸುಷುಪ್ತಿ), ಸತ್ ಚಿತ್ ಆನಂದ, ಸದ್ಭಾವತ್ರಯಗಳು (ಪ್ರಕಾಶನ, ಪ್ರವರ್ತನ, ಮೋಹನ), ಮನತ್ರಯಗಳು (ಮನ, ಮನನ, ಮನನೀಯ), ತ್ರಿಕರಣಗಳು (ಮಾನಸ, ವಾಚಕ, ಕಾಯಿಕ), ಷಟ್‌ಚಕ್ರಗಳು (ಆಧಾರ, ಸ್ವಾಧಿಷ್ಠಾನ ಇತ್ಯಾದಿ),

ಮನುಷ್ಯನ ದುರ್ವ್ಯಾಪಾರಗಳ ವಿವರಣೆ : ಅಷ್ಟಮೂರ್ತಿಮದಗಳು (ಪೃಥ್ವೀಮದ, ಸಲಿಲಮದ ಇತ್ಯಾದಿ), ಅಂತರಂಗದಷ್ಟಮದ ಗಳು (ಸಂಸ್ಥಿತ, ತೃಣೀಕೃತಾದಿಗಳು), ಬಹಿರಂಗದಷ್ಟಮದಗಳು (ಕುಲ, ಛಲಾದಿಗಳು), ಸಪ್ತ ವ್ಯಸನಂಗಗಳು (ತನುವ್ಯಸನ, ಮನವ್ಯಸನಾದಿಗಳು), ಷಡೂರ್ಮಿಗಳು (ಕ್ಷುತ್ ಪಿಪಾಸಾದಿ ಗಳು), ಅರಿಷಡ್ವರ್ಗಗಳು (ಕಾಮ, ಕ್ರೋಧಾದಿಗಳು), ಷಡ್ ಭ್ರಮೆಗಳು (ಜಾತಿ ವರ್ಣಾದಿಗಳು), ಷಡ್ಭಾವ ವಿಕಾರಗಳು (ಅಸ್ತಿತೆ, ಜಾಯತೆ, ಇತ್ಯಾದಿ), ಪಂಚಕ್ಲೇಶಗಳು (ಅವಿದ್ಯೆ, ಅಸ್ಮಿತೆ ಇತ್ಯಾದಿ), ಅಹಂಕಾರತ್ರಯಗಳು (ರಾಜಸಾಹಂಕಾರ, ಸಾತ್ವಿಕಾಹಂಕಾರ, ತಾಮಸಾಹಂಕಾರ), ಇಹಲೋಕದ ತಾಪ ತ್ರಯಗಳು (ಅಧ್ಯಾತ್ಮಿಕ ಆಧಿಭೌತಿಕ, ಆಧಿದೈವಿಕ), ಸ್ವರ್ಗಲೋಕದ ತಾಪತ್ರಯಗಳು (ಕ್ಷಯ, ಅತಿಶಯ, ಸಾಹಸಪತನ), ದುರ್ಭಾವತ್ರಯಗಳು (ಜ್ಞಾನವಿಕೃತಿ, ವರ್ತನ ವಿಕೃತಿ, ಮೋಹನವಿಕೃತಿ), ತ್ರಿದೋಷಗಳು (ವಾತ, ಪಿತ್ತ ಶ್ಲೇಷ್ಮ), ಕರಣಹಸಿಗೆ ಮತ್ತು ಲಿಂಗಾಂಗ ಸಾಮರಸ್ಯ.

ಭಾಗ–೩ : ಕ್ರಿಯೆಗಳು ಮತ್ತು ಸಕೀಲಗಳು ೧೨೯–೧೭೭

ವಿವರಣೆ, ಮಾರ್ಗಕ್ರಿಯೆಗಳು : ಪೂಜಾರಿಗಳು (ಬ್ರಹ್ಮ ವಿಷ್ಣ್ವಾದಿಗಳು), ಅಂಗಗಳು (ಪೃಥಿವ್ಯಾದಿಗಳು), ತನುಗಳು (ಸ್ಥೂಲ, ಸೂಕ್ಷ್ಮಾದಿಗಳು), ಗಣಂಗಳು (ಭಕ್ತ ಮಹೇಶ್ವರಾದಿ ಗಳು), ಹಸ್ತಗಳು (ಸುಚಿತ್ತ ಸುಬುದ್ಧ್ಯಾದಿಗಳು), ಭಕ್ತಿಗಳು (ಶ್ರದ್ಧಾ, ನೈಷ್ಠಿಕಾದಿಗಳು), ಶಕ್ತಿಗಳು (ಕ್ರಿಯಾಶಕ್ತಿ ಜ್ಞಾನಶಕ್ತ್ಯಾದಿಗಳು), ಚಕ್ರಗಳು (ಆಧಾರ ಸ್ವಾಧಿಷ್ಠಾನಾದಿಗಳು), ವರ್ಣಗಳು (ಪೀತ ಶ್ವೇತಾದಿಗಳು), ಅಧಿದೇವತೆಗಳು (ಬ್ರಹ್ಮ ವಿಷ್ಣ್ವಾದಿಗಳು), ಲಿಂಗಗಳು (ಆಚಾರಲಿಂಗ, ಗುರುಲಿಂಗಾದಿ ಗಳು), ಆತ್ಮರುಗಳು (ಜೀವಾತ್ಮ ಅಂತರಾತ್ಮಾದಿಗಳು),

ಮೀರಿದ ಕ್ರಿಯೆಗಳು : ಸಾದಾಖ್ಯಿಗಳು (ಕರ್ಮಸಾದಾಖ್ಯಿ, ಕರ್ತೃ ಸಾದಾಖ್ಯಾದಿಗಳು), ಪ್ರಣಮಗಳು (ನಕಾರ, ಮಕಾರಾದಿಗಳು), ಆಕೃತಿಗಳು (ತಾರಕಾಕೃತಿ, ದಂಡಕಾಕೃತ್ಯಾದಿಗಳು,), ದಿಕ್ಕುಗಳು (ಪೂರ್ವ, ಪಶ್ಚಿಮಾದಿಗಳು), ವೇದಗಳು (ಋಗ್ವೇದ, ಯಜುರ್ವೇದಾದಿಗಳು), ಕಲೆಗಳು (ನಿವೃತ್ತಿ, ಪ್ರತಿಷ್ಠಾದಿಗಳು), ಮುಖಗಳು (ಘ್ರಾಣ, ಜಿಹ್ವಾದಿಗಳು), ಪದಾರ್ಥಗಳು (ಗಂಧ,

ರಸಾದಿಗಳು), ಪ್ರಸಾದಗಳು (ಸುಗಂಧ, ಸುರಸಾದಿಗಳು), ನಾದಗಳು (ಭ್ರಮರ, ವೇಣ್ವಾದಿಗಳು), ಲಕ್ಷಣಗಳು (ಸತ್, ಚಿತ್ ಆನಂದಾದಿಗಳು), ಸಂಜ್ಞೆಗಳು (ಪರ, ಗೂಢ, ಶರೀರಸ್ಥಾದಿಗಳು), ಸಕೀಲಗಳು : ವಿವರಣೆ, ಅಷ್ಟವಿಧ ಸಕೀಲಗಳು, ೧೦೮ ಸಕೀಲಗಳು, ೨೧೬ ಸಕೀಲಗಳು,

ಭಾಗ–೪ : ಷಟ್‌ಸ್ಥಲಗಳು ೧೭೯–೨೬೬

ವಿವರಣೆ, ಪ್ರವೃತ್ತಿ : ಷಟ್‌ಸ್ಥಲಮಾರ್ಗದ ಸಾಮಾನ್ಯವಿವೇಚನೆ, ಅಂಗಲಿಂಗಸ್ಥಲಗಳು, ಮೂರು ಲಿಂಗಸ್ಥಲಗಳು (ಇಷ್ಟ, ಪ್ರಾಣ, ಭಾವ, ಲಿಂಗಗಳು), ಮೂರು ಅಂಗಸ್ಥಲಗಳು (ತ್ಯಾಗಾಂಗ, ಭೋಗಾಂಗ, ಯೋಗಾಂಗ), ಆರು ಲಿಂಗಸ್ಥಲಗಳು (ಆಚಾರಲಿಂಗ, ಗುರುಲಿಂಗಾದಿಗಳು), ಷಡ್ಲಿಂಗಸಾಧನೆ; ೧ನೇ ವಿಧ (ಮೋಹೀ, ಭಕ್ತ ಪೂಜಕಾದಿಗಳು), ೨ನೇ ವಿಧ (ಮೋಹೀ, ಭಕ್ತ ವೀರಾದಿಗಳು), ಆರು ಅಂಗಸ್ಥಲಗಳು (ಭಕ್ತ ಮಹೇಶ್ವರಾದಿಗಳು) ಆರು ಅಂಗಲಿಂಗಸ್ಥಲಗಳ ಸಾಮಾನ್ಯ ವಿವೇಚನೆ, ಹದಿನೆಂಟುಸ್ಥಲಗಳು, ಹದಿನೆಂಟು ಲಿಂಗಸ್ಥಲಗಳು ಹದಿನೆಂಟು ಅಂಗ ಸ್ಥಲಗಳು, ಹದಿನೆಂಟು ಅಂಗಸ್ಥಲಗಳು ಹದಿನೆಂಟು ಲಿಂಗಸ್ಥಲಗಳು ಪರಸ್ಪರ ಕೂಡುವ ಪ್ರಕಾರ, ಮೂವತ್ತಾರು ಸ್ಥಲಗಳು (ಭಕ್ತನಭಕ್ತ ಭಕ್ತನ ಮಹೇಶಾದಿಗಳು), ಮೂವತ್ತಾರು ಆಂಗಸ್ಥಲಗಳ ಮತ್ತು ಲಿಂಗಸ್ಥಲಗಳ ವಿಕಾಸವು, ಸರ್ವಾಂಗಲಿಂಗಿಸ್ಥಲ, ನಿರಾಮಯ ಷಟ್‌ಸ್ಥಲಭೇದ, ನಿರಂಜನಾತೀತ ಷಟ್‌ಸ್ಥಲ ಬ್ರಹ್ಮ ನಿವೃತ್ತಿ : ನಿವೃತ್ತಿಯ ವಿವರಗಳು (ಚಕ್ರ, ಪದ್ಮ ಇತ್ಯಾದಿಗಳ ನಿವೃತ್ತಿ), ಬಯಲು,

ಭಾಗ–೫ : ಏಕೋತ್ತರಶತಸ್ಥಲ ೨೬೭–೩೦೫

ಏಕೋತ್ತರಶತಸ್ಥಲ : ವಿವರಣೆ, ಅಂಗಸ್ಥಲಗಳು, ಭಕ್ತಸ್ಥಲ : ವಿವರಣೆ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಯ ಸ್ಥಲ, ರುದ್ರಾಕ್ಷಿಯ ಸ್ಥಲ, ಪಂಚಾಕ್ಷರಿಯ ಸ್ಥಲ, ಭಕ್ತಿಸ್ಥಲ, ಉಭಯಸ್ಥಲ (ಭಕ್ತ ಜಂಗಮಗಳು), ತ್ರಿವಿಧಸಂಪತ್ತು ಸ್ಥಲ (ಗುರು, ಲಿಂಗ, ಜಂಗಮಗಳು), ಚತುರ್ವಿಧ ಸಾರಾಯಸ್ಥಲ (ಗುರು ಲಿಂಗ ಜಂಗಮ ಪ್ರಸಾದ), ಉಪಾಧಿಮಾಟಸ್ಥಲ, ನಿರುಪಾಧಿ

ಮಾಟಸ್ಥಲ, ಸಹಜಮಾಟ ಸ್ಥಲ. ಮಹೇಶ್ವರಸ್ಥಲ : ವಿವರಣೆ, ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ವಾಗದ್ವೈತನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟ ತನು ಮೂರ್ತಿನಿರಸನಸ್ಥಲ, ಸರ್ವಗತನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕ ಲಿಂಗಸ್ಥಲ. ಪ್ರಸಾದಿಸ್ಥಲ : ವಿವರಣೆ, ಪ್ರಸಾದಿಸ್ಥಲ, ಗುರುಮಹಾತ್ಮೆಯಸ್ಥಲ, ಲಿಂಗಮಹಾತ್ಮೆಯಸ್ಥಲ, ಜಂಗಮ ಮಹಾತ್ಮೆಯಸ್ಥಲ, ಭಕ್ತಮಾಹಾತ್ಮೆಯಸ್ಥಲ, ಶರಣ ಮಹಾತ್ಮೆಯ ಸ್ಥಲ, ಪ್ರಸಾದಮಹಾತ್ಮೆಯಸ್ಥಲ, ಪ್ರಾಣಲಿಂಗಿಸ್ಥಲ : ವಿವರಣೆ, ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾ ರ್ಚನೆಯಸ್ಥಲ, ಶಿವಯೋಗ ಸಮಾಧಿಯಸ್ಥಲ, ಲಿಂಗನಿಜಸ್ಥಲ, ಅಂಗಲಿಂಗಸ್ಥಲ. ಶರಣಸ್ಥಲ : ವಿವರಣೆ, ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನೆಯ ಸ್ಥಲ. ಐಕ್ಯಸ್ಥಲ : ವಿವರಣೆ, ಐಕ್ಯಸ್ಥಲ, ಸರ್ವಾಚಾರಸಂಪತ್ತುಸ್ಥಲ, ಏಕಭಾವಸ್ಥಲ, ಸಹಭೋಜನಸ್ಥಲ. ಲಿಂಗಸ್ಥಲಗಳು : ವಿವರಣೆ, ಆಚಾರಲಿಂಗಸ್ಥಲ : ವಿವರಣೆ, (ಅ) ಗುರುಲಿಂಗ: ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ, (ಬ) ಶಿವಲಿಂಗ : ಕ್ರಿಯಾಲಿಂಗಸ್ಥಲ, ಭಾವಲಿಂಗ ಸ್ಥಲ, ಜ್ಞಾನಲಿಂಗಸ್ಥಲ, (ಕ) ಜಂಗಮಲಿಂಗ : ಸ್ವಯಸ್ಥಲ, ಚರಸ್ಥಲ, ಪರಸ್ಥಲ, ಗುರುಲಿಂಗಸ್ಥಲ : ವಿವರಣೆ (ಅ) ಆಗಮಲಿಂಗ : ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, (ಬ) ಕಾಯಲಿಂಗ : ಸಕಾಯಸ್ಥಲ, ಅಕಾಯ ಸ್ಥಲ, ಪರಕಾಯಸ್ಥಲ, (ಕ) ಆಚಾರಲಿಂಗ : ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲ. ಶಿವಲಿಂಗಸ್ಥಲ : (ಅ) ಅನುಗ್ರಹಲಿಂಗ : ಕಾಯಾನುಗ್ರಹಸ್ಥಲ, ಇಂದ್ರಿ ಯಾನುಗ್ರಹಸ್ಥಲ, ಪ್ರಾಣಾನು ಗ್ರಹಸ್ಥಲ, (ಬ) ಅರ್ಪಿತಲಿಂಗ : ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ, (ಕ) ತನುಗುಣಲಿಂಗ : ಶಿಷ್ಯಸ್ಥಲ, ಶುಶ್ರೂಷಾ ಸ್ಥಲ, ಸೇವ್ಯಸ್ಥಲ, ಜಂಗಮಲಿಂಗಸ್ಥಲ : ವಿವರಣೆ (ಅ) ಒಲವುಲಿಂಗ : ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ, (ಬ) ನಿರೂಪಲಿಂಗ : ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ, (ಕ) ಪ್ರಸಾದಲಿಂಗ : ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲ, (ಡ) ಪಾದೋದಕಲಿಂಗ: ದೀಕ್ಷಾ ಪಾದೋದಕಸ್ಥಲ, ಶಿಕ್ಷಾಪಾದೋದಕ ಸ್ಥಲ, ಜ್ಞಾನಪಾದೋದಕಸ್ಥಲ, ಪ್ರಸಾದಲಿಂಗಸ್ಥಲ : ವಿವರಣೆ, (ಅ) ನಿಷ್ಪತ್ತಿಲಿಂಗ : ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ,

ಜ್ಞಾನನಿಷ್ಪತ್ತಿಸ್ಥಲ, (ಬ) ಆಕಾಶಲಿಂಗ : ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹದಾಕಾಶಸ್ಥಲ, (ಕ) ಪ್ರಕಾಶಲಿಂಗ : ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ, ಮಹಾಲಿಂಗಸ್ಥಲ : ವಿವರಣೆ, (ಅ) ಸ್ವೀಕೃತ ಪ್ರಸಾದಿಸ್ಥಲ ಅಥವಾ ಕೊಂಡುದು ಪ್ರಸಾದಿಸ್ಥಲ, ಶಿಷ್ಟೋದನ ಪ್ರಸಾದಿಸ್ಥಲ ಅಥವಾ ನಿಂದುದೋಗರಸ್ಥಲ, ಚರಾಚರನಾಸ್ತಿಸ್ಥಲ. (ಬ) ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ, (ಕ) ಸ್ವಪ ರಾಜ್ಞಾನಸ್ಥಲ ಅಥವಾ ಸ್ವಯಪರವರಿಯದಸ್ಥಲ, ಭಾವಾಭಾವನಷ್ಟಸ್ಥಲ, ಜ್ಞಾನ ಶೂನ್ಯಸ್ಥಲ.

ಅನುಬಂಧಗಳು : ಅನುಬಂಧಗಳು ೧ ಸೃಷ್ಟಿಯರಚನೆಯ ಬಗ್ಗೆ ಸಾಮಾನ್ಯ ವಿಚಾರಗಳು, (ಅ) ನಾದಬಿಂದುಕಲೆಗಳು (ಬ) ಪಂಚಸಾದಾಖ್ಯಗಳು (ಕ) ಷಡಧ್ವಗಳು. ಅನುಬಂಧಗಳು ೨ : ೩೬ ತತ್ವಗಳು, ಅನುಬಂಧಗಳು ೩ : ಪರಮಾತ್ಮನ ಬಗ್ಗೆ ವಿಚಾರಗಳು, ಅನುಬಂಧಗಳು ೪ : ವೀರಶೈವ ಸಿದ್ಧಾಂತದ ಹೆಸರುಗಳು, ಅನುಬಂಧಗಳು ೫ : ಕರಣಹಸಿಗೆ, ಅನುಬಂಧಗಳು ೬ : ಮಾರ್ಗಕ್ರಿಯೆಗಳು ಮತ್ತು ಮೀರಿದಕ್ರಿಯೆಗಳು,ಅನುಬಂಧ ಗಳು ೭ : ಸಕೀಲಗಳು, ಅನುಬಂಧಗಳು ೮ : ಷಟ್‌ಸ್ಥಲವಿಭಾಗ ಗಳು, ಅನುಬಂಧಗಳು ೯ : ವಿಕೋತ್ತರಶತಸ್ಥಲದ ವಿಭಾಗಗಳು, ಅನುಬಂಧಗಳು ೧೦: ಶಿವಯೋಗ, ಅನುಬಂಧಗಳು ೧೧ : ಉದ್ಧರಣೆಗಳು, ಅನುಬಂಧಗಳು ೧೨ : ವೀರಶೈವರಿಗೆ ಆಧಾರಗ್ರಂಥಗಳು, ಅನುಬಂಧಗಳು ೧೩ : ಶೈವ ವೀರಶೈವ ಭೇದಗಳು, ಅನುಬಂಧಗಳು ೧೪ : ವೀರಶೈವ ಧರ್ಮದ ಉಗಮ ಮತ್ತು ಅದರ ಪ್ರವರ್ತಕರು. ಅನುಬಂಧಗಳು ೧೫-೨೧ : ಪಾರಿಭಾಷಿಕಾ ಪದಕೋಶ–ತಾತ್ವಿಕ ವಿವೇಚನೆ.

■■■

ಭಾಗ : ಒಂದು

ಸೃಷ್ಟಿಯ ರಚನೆ

ಸೃಷ್ಟಿಯ ರಚನೆ

ಸೃಷ್ಟಿಯ ಕ್ರಮದಲ್ಲಿ ಒಂಬತ್ತು ತರಗತಿಗಳಿರುತ್ತವೆ. ಇವುಗಳಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಬಹುದು. ಅವು ಯಾವುವೆಂದರೆ : (೧) ಶೂನ್ಯ ಲಿಂಗ: ಇದರಲ್ಲಿ ಪುನಃ ಮೂರು ಭಾಗಗಳಿರುತ್ತವೆ. ಅವು ಯಾವುವೆಂದರೆ : ಸರ್ವಶೂನ್ಯ ನಿರಾಲಂಬ, ಶೂನ್ಯಲಿಂಗ ಮತ್ತು ನಿಃಕಲಲಿಂಗ. ಇವು ಶೂನ್ಯಲಿಂಗ ದಲ್ಲಿಯ ತರಗತಿಗಳೆಂದು ಹೇಳಬಹುದು. (೨) ಮಹಾಲಿಂಗ : ಇದು ಪ್ರಣವ ರೂಪಾಗಿರುವದು. (೩) ಸಾದಾಖ್ಯಗಳು : ಇವು ಮಹಾಸಾದಾಖ್ಯ, [ಶಿವ ಸಾದಾಖ್ಯ] ಅಮೂರ್ತಿಸಾದಾಖ್ಯ, ಮೂರ್ತಿಸಾದಾಖ್ಯ, ಕರ್ತೃ ಸಾದಾಖ್ಯ, ಕರ್ಮ ಸಾದಾಖ್ಯ ಎಂಬುವಾಗಿದ್ದು ಇವಾದರೂ ಐದು ತರಗತಿಗಳೆಂದು ಹೇಳಬಹುದು.

ಈ ಪ್ರಕಾರ ಸೃಷ್ಟಿಯ ಕ್ರಮದಲ್ಲಿ ಒಂಬತ್ತು ತರಗತಿಗಳಾಗಿವೆ. ಇವುಗಳ ಸ್ವರೂಪವನ್ನು ವಚನಕಾರರು ಅನೇಕ ರೀತಿಯಿಂದ ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

ಶೂನ್ಯಲಿಂಗಗಳು

ಸರ್ವಶೂನ್ಯ ನಿರಾಲಂಬ :

೧

(೧) ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮರೆಂಬ ಅಷ್ಟತನುಮೂರ್ತಿ ಸ್ವರೂಪಗೊಳ್ಳದಂದು, ನಾನು ನೀನೆಂಬ ಭ್ರಾಂತಿ ಸೂತಕ ಪುಟ್ಟದಂದು, ನಾಮ ರೂಪ ಕ್ರಿಯೆಗಳೇನೂ ಇಲ್ಲದಂದು ಸರ್ವಶೂನ್ಯ ನಿರಾಲಂಬನಾಗಿರ್ದೆಯಲ್ಲಾ ನೀನು ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೨

(೨) ಆದಿ ಮಧ್ಯಾವಸಾನವಿಲ್ಲದಂದು, ಆದಿ ಅನಾದಿ ನಾದ ಬಿಂದು ಕ್[ಲ]್ಗಳಿಲ್ಲದಂದು, ಸಾವಯವ ನಿರವಯವವಿಲ್ಲದಂದು, ತತ್ವ ಬ್ರಹ್ಮಾಂಡಾದಿ ಲೋಕಾದಿಲೋಕಂಗಳೇನೂ ಇಲ್ಲದಂದು, ನಿತ್ಯ ನಿರಂಜನ ಪರವಸ್ತು ನೀನೊಬ್ಬನೇ ಇದ್ದಿ ಯಲ್ಲಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೩

(೩) ಆದಿ ಅನಾದಿ ಇಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು, ಸುರಾಳ ನಿರಾಳ ಇಲ್ಲದಂದು, ಭೇದಾ ಭೇದಂಗಳೇನೂ ಇಲ್ಲದಂದು, ನಿಮ್ಮ ನೀವರಿಯದೆ ಇರ್ದಿರಲ್ಲಾ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೆ.

ಶೂನ್ಯಲಿಂಗ :

೪

(೧) ಬ್ರಹ್ಮ ವಿಷ್ಣು, ರುದ್ರ, ಈಶ್ವರ, ಸದಾಶಿವರೆಂಬ ಪಂಚಾದಿ ದೇವತೆಗಳಿಲ್ಲದಂದು, ಈ ಪಂಚೈವರ ಲಯ ಗಮನಂಗಳಿಗೆ ಕಾರಣವಾದ ಶಿವಶಕ್ತಿ ಇಲ್ಲದಂದು, ಈ ಶಿವಶಕ್ತಿಗೆ ಕಾರಣವಾದ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣನೆಂಬ ನಿಃಕಳ ಶಿವತತ್ವವಿಲ್ಲದಂದು, ನೀನು ಶೂನ್ಯನಾಗಿ ಇರ್ದಿಯಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೆ.

೫

(೨) ಆದಿ ಅನಾದಿಗಳಿಲ್ಲದಂದು, ನಾದ ಬಿಂದು ಕಳೆ ಮೊಳೆದೋರದಂದು, ದೇಹಿ ದೇಹಂಗಳು ಉತ್ಪತ್ಯವಾಗದಂದು, ಜೀವಾತ್ಮ ಪರಮಾತ್ಮರೆಂಬವರಿಲ್ಲದಂದು, ಸಕಲ ಚರಾಚರಂಗಳ ಸುಳುಹಿಲ್ಲದಂದು, ನೀನು ಶೂನ್ಯನಾಗಿ ಇರ್ದಿಯಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೆ.

೬

(೩) ಪಂಚಭೂತಂಗಳುತ್ಪತ್ಯವಿಲ್ಲದಂದು, ಅಂಡಜವಳಯ ರಚಿಸದಂದು, ಚತುರ್ದಶ ಭುವನಂಗಳಿಲ್ಲದಂದು, ಪಂಚಾಶತ್‌ಕೋಟಿ ವಿಸ್ತೀರ್ಣದ ಅನಂತ ಕೋಟಿ ಬ್ರಹ್ಮಾಂಡಾದಿ ಲೋಕಂಗಳೇನೂ ಇಲ್ಲದಂದು, ನಾನು ನೀನೆಂಬ ವಾಕ್ಕು ಹುಟ್ಟದಂದು, ಅನಿರ್ವಾಚ್ಯ ಮಹಾಶೂನ್ಯವಾಗಿ ಇರ್ದಿಯಲ್ಲಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೆ.

ನಿಃಕಲಲಿಂಗ :

೭

(೧) ವೇದಶಾಸ್ತ್ರಪುರಾಣಾಗಮಂಗಳುದಯವಾಗದಂದು, ದ್ವೈತಾದ್ವೈತ

೧–೧ ಳಿ (ಮೂ)

ವಿಲ್ಲದಂದು, ಶ್ವೇತ ಮಾಂಜಿಷ್ಠ ಹರಿತ ಕಪೋತ ಮಾಣಿಕ್ಯ ವರ್ಣವೆಂಬ ಈ ಷಡ್ವರ್ಣಮುಖ್ಯವಾದ ಸಮಸ್ತ ವರ್ಣಂಗಳಿಲ್ಲದಂದು, ಸಚ್ಚಿದಾನಂದ ಪರಬ್ರಹ್ಮ ನೀನೆಯಾಗಿ, ಎಲ್ಲ ತತ್ವಂಗಳಿಗೆ ನೀನಾಶ್ರಯವಾಗಿ, ನಿನಗೊಂದಾಶ್ರಯವಿಲ್ಲದೆ, ಎಲ್ಲ ತತ್ವಂಗಳಿಗೆ ನೀನಾದಿಯಾಗಿ, ನಿನಗೊಂದಾಧಾರವಿಲ್ಲದೆ ನಿರಾಧಾರಿಯಾದ ಕಾರಣ ನಿಃಕಲ ಶಿವತತ್ವವೆಂದರಿದೆನು ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೮

(೨) ಅಂಗವಾರು, ಲಿಂಗವಾರು, ಶಕ್ತಿಯಾರು, ಭಕ್ತಿಯಾರು ಇಂತಿವೆಲ್ಲವ ಗರ್ಭೀಕರಿಸಿಕೊಂಡು ಸಚ್ಚಿದಾನಂದ ನಿತ್ಯ ಪರಿಪೂರ್ಣ ನಿರಂಜನ ನೀನಾದಕಾರಣ ನಿನ್ನ ನಿಃಕಲ ಶಿವತತ್ವವೆಂದೆನು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

೯

(೩) ತಂದೆ ಇಲ್ಲದ, ತಾಯಿ ಇಲ್ಲದ, ಹೆಸರಿಲ್ಲದ, ಗುರುವಿಲ್ಲದ, ಹುಟ್ಟಿಲ್ಲದ, ಯೋನಿ ಇಲ್ಲದ ಅಯೋನಿಸಂಭವ ನೀನಾದ ಕಾರಣ ನಿನ್ನ ನಾನು ನಿಃಕಲ ಲಿಂಗವೆಂದೆನಯ್ಯಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ.

೧೦

(೪) ಚಿತ್ತು ಬುದ್ಧಿ ಅಹಂಕಾರ ಹುಟ್ಟದಂದು, ಮನ ಜ್ಞಾನ ಭಾವಂಗಳುತ್ಪತ್ತಿ ಇಲ್ಲದಂದು, ಜ್ಞಾತೃ ಜ್ಞಾನ ಜ್ಞೇಯಂಗಳು ಇಲ್ಲದಂದು, ಜ್ಞಾನ ಸುಜ್ಞಾನ ಮಹಾ ಜ್ಞಾನವೆಂಬ ವೃತ್ತಿಜ್ಞಾನವಿಲ್ಲದಂದು. ಅಖಂಡ ಪರಿಪೂರ್ಣದ್ವಯ ನಿಃಕಲ ನಿಜಜ್ಞಾನಮೂರ್ತಿ ನೀನೇ ಅಯ್ಯಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ.

೧೧

(೫) ನಿರಾಧಾರ, ನಿರಾಲಂಬ, ಸರ್ವಾಧಾರ, ಸರ್ವಜ್ಞ, ಸರ್ವಗತ, ಸರ್ವೇಶ್ವರ, ನಿನ್ನ ನಿರವಯವೆಂದೆನು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

ಮಹಾಲಿಂಗ

೧೨

(೧) ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು ಆ ಚಿತ್ತಿನಿಂದ ಅಕಾರ ಉಕಾರ ಮಕಾರಗಳೆಂಬ ಅಕ್ಷರತ್ರಯಂಗಳಾದವು. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ, ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ ಪ್ರಣಮ ಉತ್ಪತ್ತಿಯಾಯಿತ್ತು ಆ ಓಂಕಾರವೆಂಬ ಪ್ರಣಮವೇ ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೩

(೨) ಸ್ಥಾವರ ಜಂಗಮಾತ್ಮಕಂಗಳ ಲಯಗಮನಂಗಳಿಗೆ ಆಧಾರವಾಗಿ, ನಿರ್ಮಲವಾಗಿ, ಸ್ಥಿರವಾಗಿ, ಸರ್ವಜ್ಞ, ಸರ್ವಾತ್ಮಕ, ನಿರ್ವಿಕಾರ, ನಿತ್ಯಾತ್ಮನಾದ ಪರಮಾತ್ಮ ಲಿಂಗವು. ಗ್ರಂಥ : ''ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮ ನಾದಿವತ್। ಏತಾನಿ ಈಶ್ವರಂ ತೇಜೋ ತಲ್ಲಿಂಗಂ ಪಂಚಸಂಜ್ಞಕಂ ॥'' ಎಂಬ ಪಂಚ ಸಂಜ್ಞೆಯನೊಳಕೊಂಡು, 'ಅಣೋರಣೆಯಾನ್ ಮಹತೋ ಮಹೀ ಯಾನ್' ಎಂದುದಾಗಿ, ಅಣು ಲಿಂಗವು ಮಹತ್ತಕ್ಕೆ ಮಹತ್ತಾಗಿಪ್ಪ ಮಹಾಲಿಂಗದ ನಿಲುಕಡೆ ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೪

(೩) ಪಂಚಶಕ್ತಿಯನು, ಪಂಚಸಾದಾಖ್ಯವನು, ಪಂಚಕಲೆಗಳನು, ಪಂಚಾಕ್ಷರಂಗಳನು, ಪಂಚಭೂತಾತ್ಮವನು ತನ್ನಲ್ಲಿ ಗರ್ಭೀಕರಿಸಿಕೊಂಡು ತಾನು ಚಿದ್ಬ್ರಹ್ಮಾಂಡಾತ್ಮಕನಾಗಿ, ಚಿನ್ಮಯನಾಗಿ, ಚಿದ್ರೂಪನಾಗಿ, ಚಿತ್‌ಪ್ರಕಾಶನಾಗಿ, ಚಿದಾನಂದನಾಗಿ ಸುಖ ದುಃಖ ಭಯ ಮೋಹಂಗಳ ಹೊದ್ದದೆ ಸರ್ವವ್ಯಾಪಕನಾಗಿ ಸರ್ವಚೈತನ್ಯಮಯನಾಗಿರ್ಪ ಪರಂಜ್ಯೋತಿರ್ಲಿಂಗವು ಮಹಾಲಿಂಗ ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

(೪) ಅಷ್ಟತನುಯುಕ್ತವಾದ ಬ್ರಹ್ಮಾಂಡಾದಿ ಚರಾಚರ ಪ್ರಾಣಿಗಳು ತೋರುವ ತೋರಿಕೆ, ಏನೇನೂ ಇಲ್ಲದಂದು ಸರ್ವಶೂನ್ಯ ನಿರಾಲಂಬ ಬ್ರಹ್ಮವು ತಾನೊಂದೇ ಒಪ್ಪುತ್ತಿರ್ದಿತ್ತು ಅಂತಿರ್ದ ಪರಬ್ರಹ್ಮವು ತಾನೊಂದೇ ಘನ ಕಾಠಿನ್ಯ ವನ್ಮೂರ್ತಿ ಸಚ್ಚಿದಾನಂದ ಲಕ್ಷಣಮೆಂದು ಹೇಳುತ್ತಿಹುದಾದ ಕಾರಣ ಒಂದಾನೊಂದು ತಿಳಿದುಪ್ಪವೇ ಗಟ್ಟಿಗೊಂಡು [1][ಹೆ]ರೆದುಪ್ಪವಾದ ಹಾಗೆ ನಿರಂಜನ ಬ್ರಹ್ಮವಾಯಿತ್ತು ಆ ನಿರಂಜನ ಬ್ರಹ್ಮವು ನೆನದ ನೆನಹೆ ನಿರಂಜನೋಂಕಾರಶಕ್ತಿ. ಆ ನಿರಂಜನೋಂಕಾರಶಕ್ತಿಯ ನೆನಹುಮಾತ್ರದಿಂದ ವಾಚ್ಯ ಪ್ರಣಮ ಸ್ವರೂಪವಾದ ಶೂನ್ಯಲಿಂಗವು ಪುಟ್ಟಿತ್ತು ಆ ಶೂನ್ಯಲಿಂಗಕ್ಕಂಗವಾಗಿರುವಂಥಾದ್ದೇ ಮಹಾಜ್ಞಾನಚಿತ್ತು ಆ ಮಹಾಜ್ಞಾನಚಿತ್ತಿನ ನೆನಹುಮಾತ್ರದಿಂದ ಕಲಾಪ್ರಣಮಸ್ವರೂಪವಾದ ನಿಃಕಲ ಬ್ರಹ್ಮವು ಪುಟ್ಟಿತ್ತು ಆ ನಿಃಕಲ ಬ್ರಹ್ಮಕಂಗವಾಗಿರುವಂಥಾದ್ದೇ ಜ್ಞಾನ ಚಿತ್ತು ಆ ಚಿತ್ತಿನ ಚಿನ್ನಾದವೇ ಬ ಕಾರ, ಚಿದ್ಬಿಂದುವೇ ಸ ಕಾರ, ಚಿತ್ಕಳೆಯೇ ವ ಕಾರ. ಆ ಚಿನ್ನಾದ, ಚಿದ್ಬಿಂದು, ಚಿತ್ಕಳೆ, ಮೂಲ ಚಿತ್ತೆಂಬ ಚತುರ್ವಿಧವು ಗಟ್ಟಿಗೊಂಡಖಂಡಗೋಳ ಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು

೧–೧ ಎ (ಮೂ)

ಪ್ರಣಮ (ಪ್ರಣವ)

(೧) ಓಂಕಾರವೆಂಬ ಪ್ರಣಮದಲ್ಲಿ ಅಕಾರ ಉಕಾರ ಮಕಾರ ಈ ಮೂರು ಬೀಜಾಕ್ಷರ. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಮತ್ತಂ ಅಕಾರವೇ ರುದ್ರ, ಉಕಾರವೇ ಈಶ್ವರ, ಮಕಾರವೇ ಸದಾಶಿವ. ಇಂತೀ ಅಕಾರ ಉಕಾರ ಮಕಾರಕ್ಕೆ ನಾದ ಬಿಂದು ಕಳೆಯೇ ಆಧಾರ. ಆ ನಾದ ಬಿಂದು ಕಳೆಗೆ ಪ್ರಕೃತಿಯೇ ಆಧಾರ. ಆ ಪ್ರಕೃತಿಗೆ ಪ್ರಾಣವೇ ಆಧಾರ. ಆ ಪ್ರಾಣಕ್ಕೆ ಲಿಂಗವೇ ಆಧಾರ.

(೨) ಅ ಎಂದಡೆ ಅನಾಹತ, ಉ ಎಂದಡೆ ನಾದ ಉಳಿಯಿತ್ತು ಮ ಎಂದಲ್ಲಿ ಬಿಂದು ಕೂಡಲು ಶಿವಶಕ್ತಿಯಾಗುತ್ತ ಇಹಂತಹ ಓಂಕಾರವಾಯಿತ್ತು

(೩) ಅಕಾರವೆಂಬ ಪ್ರಣವದಲ್ಲಿ ''ಅಗ್ನಿಶ್ಚ ಋಗ್ವೇದಸ್ತಥಾ ರುದ್ರೋಧಿ ದೇವತಾ । ಅಕಾರಚಯಂ ಯಾತಿ ಪ್ರಥಮೇ ಪ್ರಣಮಾಂಶಿಕೆ'' ಉಕಾರವೆಂಬ ಪ್ರಣವದಲ್ಲಿ : ''ಅಂತರಿಕ್ಷೇ ಯಜುರ್ವೇದೋ ಭವೇತ್ ಓಂ ಈಶ್ವರೋ ದೇವತಾಃ । ಉ ಕಾರೇಚ ಲಯಂ ಯಾತಿ ಪ್ರಥಮೆ ಪ್ರಣವಾಂಶಿಕೆ ॥'' ಮಕಾರವೆಂಬ ಪ್ರಣಮದಲ್ಲಿ ''ವಿದ್ಯೇಷು ಸಾಮವೇದೋ ಭವೇತ್ ಓಂ ಸದಾ ಶಿವೋ ದೇವತಾಃ । ಮಕಾರೇ ಚ ಲಯಂ ಯಾತಿ ತೃತೀಯೇ ಪ್ರಣವಾಂಶಿಕೆ । ಅಕಾರೇ ಚ ಉಕಾರೇ ಚ ಮಕಾರೇ ಚ ಕೃತಿಯ್ಯಕೆ । ಇದಮೇಕ ಸಮುತ್ಪನ್ನಂ । ಓಂ ಇತಿ ಜ್ಯೋತಿ ರೂಪಕಂ । ಓಂಕಾರಂ ಪ್ರಭವಾ ವೇದಂ । ಓಂಕಾರಾತ್ಪಿಭವಾ ಸ್ವರಂ । ಓಂಕಾರಾತ್ ಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ ಸರ್ವವ್ಯಾಪಕ ಮೋಂಕಾರಂ ಮಂತ್ರೋನ್ಯತ್ರ ನ ಶೋಭಯೇತ್ । ಪ್ರಣವೋ ಹಿ ಪರಬ್ರಹ್ಮ ಪ್ರಣಮಂ ಪರಮಂ ಪದಂ । ಓಂಕಾರ ವ್ಯಾಪಿ ಸರ್ವತ್ರಂ ಓಂಕಾರ ಗೋಪ್ಯ ಮಾನಸಂ ॥'' ಎಂದಿದು ಪ್ರಣಮದುತ್ಪತ್ತಿ

(೪) ಮಹಾಲಿಂಗಕ್ಕಂಗವಾಗಿ ಪೀಠವಾಗಿರುವ ಓಂಕಾರವೆಂದು ಹೇಳಿಸಿಕೊಳ್ಳುವ ಪ್ರಣವದ ಪರಾಶಕ್ತಿ ಪ್ರಣವದಲುತ್ಪತ್ತಿಯಾದಂಥ ವಿಚಾರವು ಹೇಗೆಂದಡೆ : ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ದರ್ಪಣಾಕೃತಿ, ಜ್ಯೋತಿರಾಕೃತಿಗಳೆಂಬ ಷಷ್ಠಾಕೃತಿಗಳೊಳಗೆ ಓಂಕಾರವೆಂಬ ಪ್ರಣವದ ತಾರಕಾಕೃತಿ ದಂಡಕಾಕೃತಿಗಳೆಂಬ ಉಭಯಾಕೃತಿಗಳನೊಳಕೊಂಡು ತ್ಪತ್ತಿಯಾದಂಥಾದ್ದೇ ಅಕಾರ ಪ್ರಣವ. ಓಂಕಾರ ಪ್ರಣವದ ಕುಂಡಲಾಕೃತಿ, ಅರ್ಧ ಚಂದ್ರಾಕೃತಿಗಳೆಂಬುಭಯಾ ಕೃತಿಗಳನೊಳಕೊಂಡುತ್ಪತ್ತಿಯಾದಂಥಾದ್ದೇ ಉಕಾರ ಪ್ರಣಮವು. ಓಂಕಾರ ಪ್ರಣವದ ಜ್ಯೋತಿರಾಕೃತಿ ದರ್ಪಣಾಕೃತಿಗಳೆಂಬು ಭಯಾಕೃತಿಗಳನೊಳಕೊಂಡುತ್ಪತ್ತಿಯಾದಂಥಾದ್ದೇ ಮಕಾರ ಪ್ರಣಮವು. ಈ ಮೂರು ಬೀಜಾಕ್ಷರ. ಅಕಾರ ಪ್ರಣಮವೇ ಚಿನ್ನಾದಸ್ವರೂಪವಾಗಿಪ್ಪುದು. ಓಂ ಓಂ ಓಂ ಎಂದು ಘೋಷಿಸುತ್ತಿಹುದು. ಅಂತಪ್ಪದೊಂದು ಸುನಾದ

ಘೋಷವನುಳ್ಳುದೇ ಅಕಾರ ಪ್ರಣಮವೆಂಬುದೀಗ ಅಕಾರನಾದವು. ಉಕಾರ ಪ್ರಣಮವೇ ಚಿದ್ಬಿಂದುಸ್ವರೂಪಮಾಗಿರ್ಪುದು. ಜ್ವಲತ್‌ಸ್ತಂಭಾಯಮಾನವಾಗಿ ಝಗರ್ಝಗಿಸಿ ಬೆಳಗುತ್ತಿಹುದೋ ಅಂತಪ್ಪದೊಂದು ಚಿದ್ಬಿಂದು ಪ್ರಕಾಶವನುಳ್ಳುದೇ ಉಕಾರ ಪ್ರಣಮವೆಂಬುದೀಗ ಉಕಾರವೇ ಬಿಂದು. ಮಕಾರ ಪ್ರಣಮವೇ ಚಿತ್ಕಳಾಸ್ವರೂಪಮಾಗಿರ್ಪುದು. ಒಂದಾನೊಂದು ಮಧ್ಯಾಹ್ನ ಕಾಲದ ಚಂಡಸೂರ್ಯ ಕೋಟಿ ಪ್ರಕಾಶವನು ಕೀಳ್ಪಡಿಸಿ ಬೆಳಗಲ್ಪಟ್ಟ ಮಹಾ ಪ್ರಕಾಶವನುಳ್ಳುದೇ ಮಕಾರ ಪ್ರಣಮವೆಂಬುದೀಗ ಮಕಾರ ಪ್ರಣಮವೇ ಕ್ರಿ[ಲಿ]ಯು.

(೫) ಅಕಾರ ಪ್ರಣಮವೇ ರುದ್ರ, ರುದ್ರತತ್ವಸ್ವರೂಪಿನಿಂದ ಸಕಲ ಜಗತ್ತಿನ ಸಂಹಾರ ಕೃತ್ಯವನುಂಟುಮಾಡಿ ನಡೆಸುತ್ತಿಹುದು. ಉಕಾರ ಪ್ರಣಮವೇ ಈಶ್ವರ. ಈಶ್ವರತತ್ವಸ್ವರೂಪಿನಿಂದ ಸಕಲ ಜಗತ್ತಿನ ತಿರೋಧಾನಕೃತ್ಯವನುಂಟುಮಾಡಿ ನಡೆಸುತ್ತಿಹುದು. ಮಕಾರ ಪ್ರಣಮವೇ ಸದಾಶಿವ. ಸದಾಶಿವತತ್ವ ಸ್ವರೂಪಿನಿಂದ ಸಕಲ ಜಗತ್ತಿನನುಗ್ರಹಕೃತ್ಯವನುಂಟುಮಾಡಿ ನಡೆಸುತ್ತಿಹುದು. ಈ ತ್ರಿವಿಧ ಪ್ರಣಮಂಗಳುದಯಾಧಾರ ವಿಶ್ರಾಂತಿಗೆ ನಾದ ಬಿಂದು ಕಳೆಯೇ ಪರನಾದ, ಪರಬಿಂದು, ಪರಕಳೆ ಎಂಬ ಬಸವಾಕ್ಷರತ್ರಯಂಗಳೇ ಆಧಾರ. ಆ ಬಸವಾಕ್ಷರ ತ್ರಯಂಗಳುದಯಾಧಾರವಿಶ್ರಾಂತಿಗೆ ಪ್ರಕೃತಿಯು ಎಂಬುದು ಹೇಳುತ್ತಿಹುದಾದ ಕಾರಣ, ಆ ಸ್ವಭಾವ ಸಂಸಿದ್ಧರೂಪಿಣಿಯಪ್ಪ ಮಹಾಜ್ಞಾನ ಚಿಚ್ಛಕ್ತಿಯೇ ಆಧಾರಾಸ್ಪದಮಾಗಿಪ್ಪಳು.

(೬) ಆ ಪ್ರಕೃತಿಗಾ ಸ್ವಭಾವ ಸಂಸಿದ್ಧರೂಪಿಣಿಯಪ್ಪ ಮಹಾಜ್ಞಾನ ಚಿಚ್ಛಕ್ತಿಯಾಧಾರ ವಿಶ್ರಾಂತಿಗೆ ಶೂನ್ಯಲಿಂಗವೇ ಆಧಾರಾಸ್ಪದಮಾಗಿಹುದು. ಆ ಪ್ರಾಣಕ್ಕೆ ಆ ಗುಣತ್ರಾಣಪ್ರಾಣ ಸ್ವರೂಪಮಾದ ನಿಃಕಲ ಬ್ರಹ್ಮಕ್ಕೆ ಮಹಾಲಿಂಗವೇ ಆಧಾರಾಸ್ಪದಮಾಗಿರುತಿಹುದು. ಅ ಎಂಬ ಊರ್ಧ್ವಸ್ವರವು ಅನಾಹತವು. ಎಂದಿಗೂ ಕೇಡಿಲ್ಲದ ಶಿವಾಕ್ಷರವು. ಉ ಎಂದೊಡೆ ನಾದ ಇಳಿಯಿತು. ಅ ಎಂಬ ಶಿವ ಸ್ವರವು ಉ ಎಂಬ ಶಕ್ತಿ ಸ್ವರದಲ್ಲಿ ಕೂಡಿತು. ಅಲ್ಲಿ ಅವು ಬ ಭವತಿ ಎಂಬ ವ್ಯಾಕರಣ ಸೂತ್ರ ವಿಭಾಗೆಯಿಂದ ಅಕಾರ ಉಕಾರ ಕೂಡಿ ಓಂಕಾರವಾಯಿತು. ಆ ಪ್ರಣಮದ ಸಮಕ್ಷಮದೊಳಗೆ ಮಾ ಎಂಬ ಬಿಂದು ಬಂದು ಕೂಡಲು ಮಕಾರ ಪ್ರಣಮವೆಂಬುದು ಶಿವಶಕ್ತಿಯಾಯಿತ್ತು ಅಕಾರ ಉಕಾರ ಮಕಾರ ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು ಈ ನಾಲ್ಕು ಒಂದಾದಲ್ಲಿ ಪರಶಿವ, ಪರಶಕ್ತಿ ಸ್ವರೂಪವಾಗುತ್ತಲಿರುವಂಥ ಓಂಕಾರವಾಯಿತ್ತು. ಓಂ ಎಂಬುದೂರ್ಧ್ವಸ್ವರೂಪನುಳ್ಳ ಷಟ್‌ಕೃತಿಗಳು ಸಂಪೂರ್ಣವಾದ ಸಾಕಲ್ಯ ಪ್ರಣಮವು ಸೌಜನ್ಯವಾಯಿತು.

(೭) ಅಕಾರವೆಂಬ ಪ್ರಣಮದಲ್ಲಿ ವರ್ಣವೆಂದಡು, ಬೀಜವೆಂದಡು, ಅನ್ನವೆಂದಡು, ಲಿಂಗವೆಂದಡು, ಮಾತೃಕವೆಂದಡು ಒಂದೇ ನಾಮ ಪರ್ಯಾಯ

ವಾಗಿಪ್ಪುದು. ಅದು ಕಾರಣವಾಗಿ ಅಕಾರವೆಂದು ಹೇಳಿಸಿಕೊಂಬ ಪ್ರಣಮದ ಅಕ್ಷರದೊಳಗೆ ಅಗ್ನಿಃ =ತೇಜವೆಂಬುದೊಂದು ತತ್ವವು ; ಋಗ್ವೇದಃ =ಋಗ್ವೇದವೆಂಬುದೊಂದು ವೇದವು; ರುದ್ರಮೂರ್ತಿ ಎಂಬುವದೊಂದು ಅಧಿದೇವತೆಯು; ಇಂದ್ರಾದಿ ನಿರ್ಜರರೆಂಬ ದೇವತೆಗಳು ಉತ್ಪತ್ತಿಯಾದರು. ಉತ್ಪತ್ತಿಯಾಗಿ ಪರಶಿವನ ಸಗುಣಾನಂದ ಸೃಷ್ಟಿಯ ಲೀಲಾವಿಲಾಸ ಉಂಟಾಗಿರುವ ಪರಿಯಂತರ ಉಂಟಾಗಿರ್ದು ಲೀಲೆ ಸಾಕಾದ ಬಳಿಕ ಓಂಕಾರ ಪ್ರಣಮದ ಒಂದನೇ ಅಂಶವಾದ ಅಕಾರ ಪ್ರಣಮದಲ್ಲಿಯೇ ವಿಶ್ರಾಂತಿಯನ್ನು ಐದುತ್ತಿಹುವು. ಉಕಾರ ಪ್ರಣಮದಲ್ಲಿ ವರ್ಣದೊಳಗಂತರಿಕ್ಷ, ಪಂಚಭೂತಗಳೊಳಗೆ ಆಕಾಶವೆಂಬುದೊಂದು ತತ್ವವು ; ನಾಲ್ಕು ವೇದಂಗಳೊಳಗೆ ಯಜುರ್ವೇದವೆಂಬುದೊಂದು ವೇದವು ; ಈಶ್ವರನೆಂಬುದೊಂದಧಿದೇವತೆಯು ; ಇಂದ್ರಾದಿ ಅಪ್ಸರರೆಂಬ ದೇವತೆಗಳು ಉತ್ಪತ್ತಿಯಾದವು. ಲೀಲೆ ಸಾಕಾದ ಬಳಿಕ ಪ್ರಣಮದ ಎರಡನೇ ಅಂಶವಾದ ಉಕಾರ ಪ್ರಣಮದಲ್ಲಿಯೇ ವಿಶ್ರಾಂತಿಯನ್ನು ಐದುತ್ತಿಹವು. ಮಕಾರವೆಂದು ಹೇಳಿಸಿಕೊಳ್ಳುವ ಪ್ರಣಮದಲ್ಲಿ ಲಿಂಗದೊಳಗೆ ವಿದ್ಯಾ ಸುಜ್ಞಾನ ಕಲಾತ್ಮವೆಂಬುವದೊಂದು ತತ್ವವು ; ಮತ್ತಂತುಮಲ್ಲದೆ ಚತುಃಷಷ್ಟಿಕಳಾವಿದ್ಯೆಗಳು ; ಆ ವಿದ್ಯೆಗಳನರಿವಂತಹ ಜ್ಞಾನವು; ಸಾಮವೇದವೆಂಬುವದೊಂದು ವೇದವು ; ಸದಾಶಿವನೆಂಬುವಧಿದೇವತೆಯು ; ಇಂದ್ರಾದಿ ಅಷ್ಟದಿಕ್ಪಾಲರೆಂಬಧಿದೇವತೆಗಳು ಉತ್ಪತ್ತಿಯಾದವು. ಲೀಲೆ ಸಾಕಾದ ಬಳಿಕ ಪ್ರಣಮದ ತೃತೀಯಾಂಶವಾದ ಮಕಾರ ಪ್ರಣಮದಲ್ಲಿ ವಿಶ್ರಾಂತಿಯನ್ನು ಐದುತ್ತಿಹವು.

(೮) ಅ ಕಾರವೆಂಬ ಪ್ರಣಮವು, ಉಕಾರವೆಂಬ ಪ್ರಣಮವು, ಮಕಾರವೆಂಬ ಪ್ರಣಮವು. ಈ ತ್ರಿವಿಧ ಪ್ರಣಮಂಗಳು ಒಂದೇಯಾಗಿ ಸ್ವಯಂ ಜ್ಯೋತಿ ಸ್ವರೂಪವಾದ ಓಂ ಓಂ ಎಂಬ ಊರ್ಧ್ವ ಸ್ವರೂಪವನುಳ್ಳ ಷಟ್‌ಕೃತಿಗಳು ಸಂಪೂರ್ಣವಾದ ಸಾಕಲ್ಯ ಪ್ರಣಮವು. ಈ ಪ್ರಣಮದತ್ತಣಿಂದೆ ನಾಲ್ಕು ವೇದಂಗಳು, ನಾಲ್ಕು ಉಪವೇದಂಗಳು. ಮತ್ತಂತುಮಲ್ಲದೇ ನೂರೊಂದು ವೇದ, ಹದಿನಾರು ಸಾವಿರ ಶಾಸ್ತ್ರ ಮುಂತಾದ ಸಕಲ ನಿಗಮಂಗಳು ಉತ್ಪತ್ತಿಯಾದವು. ಸಪ್ತ ಸ್ವರಂಗಳು, ನಾಲ್ಕು ವೇದಂಗಳನೋದುವ ಸ್ವರಂಗಳು ೪೪ ಲಕ್ಷ ಪ್ರಕಾರವಾದ ಸ್ವರ ಭೇದಂಗಳು ಉತ್ಪತ್ತಿಯಾದವು. ಸಚರಾಚರ ಮೂರು ಭುವನಂಗಳು ಸಪ್ತಭುವನಗಳು ಉತ್ಪತ್ತಿಯಾದವು. ಅಕಾರ ಪ್ರಣಮದಿಂದ ಸ್ವರಾಕ್ಷರ ಹದಿನಾರು, ಉಕಾರ ಪ್ರಣಮದಿಂದ ವಿಕಲಾಕ್ಷರ ಇಪ್ಪತ್ತುನಾಲ್ಕು, ಮಕಾರ ಪ್ರಣಮದಲ್ಲಿ ಹುಟ್ಟಿದ ವ್ಯಾಪಕಾಕ್ಷರ ಹನ್ನೊಂದು. ಇಂತೀ ಐವತ್ತೆರಡಕ್ಷರಂಗಳಿಂದಾದ ಸಕಲ ವೇದಶಾಸ್ತ್ರ, ಪುರಾಣಶಾಸ್ತ್ರ ಅನೇಕ ಬ್ರಹ್ಮಾಂಡಗಳನಂತ ಮೂರ್ತಿಗಳು, ಷಡಧ್ವ ಷಡ್ಗುಣ ವಸ್ತು ತತ್ವಪಂಚಕವು ಸೃಷ್ಟಿಯಾಗುತ್ತಿರ್ದ ಕಾರಣ ಈ ಮೂರು ಕಾರಣಸ್ವರೂಪವಾದ ಪ್ರಣಮಂಗಳು ಉತ್ಪತ್ತಿಯಾದವು.

(೯) ಓಂಕಾರಂ ಸಾಕಲ್ಯ ಪ್ರಣಮವೆಂಬುದು ತಾನು ಸಮಸ್ತದಲ್ಲಿಯೂ ಮೇಲು ಹೊದಿಕೆಯಾಗಿ ಹೊದಿಸಿಕೊಂಡಿರುತ್ತಿಹುದು. ಪರಬ್ರಹ್ಮಾದಿ ಪಂಚಬ್ರಹ್ಮ ವನೊಳಕೊಂಡು ತೋರುವಂಥ ಮಹಾಲಿಂಗಸ್ವರೂಪವೇ ಐದಿಹುದು ಪ್ರಸಿದ್ಧವಲಾ ! ಚಿನ್ನಾದಸ್ವರೂಪಮಾಗಿಪ್ಪುದು ಷಡಕ್ಷರೀಮಂತ್ರ ಸ್ವರೂಪ ಮಾಗಿರ್ಪುದು. ಸಪ್ತಕೋಟಿ ಮಹಾಮಂತ್ರಗಳು ಮಂತ್ರಕೋಟ್ಯಾನುಕೋಟಿಗಳ ಸ್ವರೂಪವಾದಂಥಾದ್ದು ಎಲ್ಲ ಸ್ಥಳಗಳಲ್ಲಿಯೂ ವ್ಯಾಪಕಮಾದ ಚೈತನ್ಯಸ್ವರೂಪಿ ನಿಂದ ವೇದಿಸಿಕೊಂಡಿರ್ಪುದು. ಪರಶಿವನತ್ಯಂತ ರಹಸ್ಯಮಾದ ನಿಜಚಿನ್ಮಯವಪ್ಪ ಹೃದಯ ಮುಖಮಾಗಿರುತಿಹುದು. ಅದು ಹೇಗೆಂದೊಡೆ : ಸಕಾರಾದಿ ಯಕಾರಾಂತ್ಯವಾದ ಪಂಚ ಪ್ರಣಮಂಗಳೇ ಸದಾಶಿವನ ಸದ್ಯೋಜಾತಾದೀಶಾನಾಂತ್ಯ ಮಾದ ಪಂಚಮುಖ ಸ್ವರೂಪದಲ್ಲಿ ಹುಟ್ಟಿದವು. ಹೀಗೆಂದು ಹೇಳುವಂಥಾದ್ದೇ ಪ್ರಣಮದುತ್ಪತ್ತಿ, ಪ್ರಣಮದ ಸೃಷ್ಟಿ, ಪ್ರಣಮದ ನಿರ್ದೇಶ, ಪ್ರಣಮದ ಲಕ್ಷಣ ಎಂದು ಹೇಳುವುದಾದ ಕಾರಣ ಇದು ಪ್ರಣಮೋತ್ಪತ್ತಿ.

ಸಾದಾಖ್ಯಿಗಳು

ಪಂಚಸಾದಾಖ್ಯಿಗಳ ಉತ್ಪತ್ತಿ :

೧೫

(೧) ಅನಾದಿ ಪರಶಿವತತ್ವದಿಂದ ಚಿತ್ತು ಉದಯವಾಯಿತ್ತು, ಆ ನಿರ್ಮಲ ಮಹಾಜ್ಞಾನ ಚಿತ್‌ಸ್ವರೂಪವೇ ಬಸವಣ್ಣ ನೋಡಾ. ಈ ಬಸವಣ್ಣನಿಂದ ನಾದ ಬಿಂದು ಕಳೆ, ಆ ನಾದ ಬಿಂದು ಕಳೆ ಸಮರಸವಾಗಿ ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಲಿಂಗ ಸ್ವರೂಪವಾಯಿತ್ತು ನೋಡಾ. ಆ ಮಹಾಲಿಂಗದಿಂದ ಪಂಚಸಾದಾಖ್ಯಮೂರ್ತಿ ಉತ್ಪತ್ತಿಯಾಯಿತ್ತು ನೋಡಾ. ಇದು ಕಾರಣ ಅನಾದಿ ಶರಣರು ಆದಿಲಿಂಗವೆಂದೆ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

ಮಾಯೆ :

೧೬

(೧) ವಸ್ತುವೆಂದರೆ ಪರಬ್ರಹ್ಮದ ನಾಮ. ಆ ವಸ್ತು ತನ್ನಿಂದ ಭಾವವ ಕಲ್ಪಿಸಿ, ಆ ಭಾವದಿಂದ ಮಾಯೆಯ ಕಲ್ಪಿಸಿ, ಆ ಮಾಯೆಯಿಂದ ಮೋಹವ ಕಲ್ಪಿಸಿ, ಆ ಮೋಹದಿಂದ ಸಕಲಪ್ರಪಂಚವ ಹುಟ್ಟಿಸಿ, ಆ ಪ್ರಪಂಚಿನಿಂದ ಸಮಸ್ತ ಜಗತ್ತು ಹುಟ್ಟಿತ್ತು ನೋಡಾ. ಇಂತಿವೆಲ್ಲವು ನೀನಾಗೆಂದರೆ ಆದವು, ನೀ ಬೇಡವೆಂದರೆ ಹೋದವು ಕಾಣಾ, ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೭

(೨) ಅನಾದಿಯಾಗಿ ಶಿವನುಂಟು, ಮಾಯೆಯುಂಟು. ಇಂತು ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡಾ. ಆದ ನಾವರಿಯೆವಯ್ಯಾ, ಆದಿ ಅನಾದಿ

ಸುರಾಳ ನಿರಾಳವಿಲ್ಲದಂದು ಮಾಯೆಯನು ಕಾಣೆ, ಆತ್ಮನನು ಕಾಣೆ, ಮಹಾದೇವ ತಾನೊಬ್ಬನೇ ಇದ್ದನೆಂಬುದು ಕಾಣಬಂದಿತ್ತು ನೋಡಾ ಶಿವಜ್ಞಾನ ದೃಷ್ಟಿಗೆ. ಆ ಲಿಂಗ ನಿರ್ಮಿತದಿಂದ ಮಾಯೆ ಹುಟ್ಟಿ, ಆ ಮಾಯೆಯಿಂದ ತತ್ವ ಬ್ರಹ್ಮಾಂಡಾದಿ ಲೋಕಾದಿ ಲೋಕಂಗಳು ಹುಟ್ಟಿದವು ನೋಡಾ. ಹೀಗೆ ನಿನ್ನ ನೆನಹು ಮಾತ್ರದಿಂದ ತ್ರಿಜಗಂಗಳುತ್ಪತ್ತಿ ಲಯಂಗಳಿಗೆ ನೀನೇ ಕಾರಣವಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ. ೩

೧೮

(೩) ಬ್ರಹ್ಮಾಂಡವು ಹೇಗೆ ಹುಟ್ಟಿತ್ತು ಹೇಳಿಹೆ ಕೇಳಿರಯ್ಯಾ. ಆದಿ ಅನಾದಿಯಿಂದ ತತ್ವವಾದ ನಿರಾಕಾರ ಪರವಸ್ತು ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪ ಕಲ್ಪಾಂತರ ಇರ್ದು ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ಯವಾಗಿ ನೆನಹುದೋರಲು ಆ ನೆನಹೇ ನಿರ್ಧಾರವಾಗಿ ಚಿತ್ತೆನಿಸಿತ್ತು, ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು. ಆ ಚಿತ್ತು ತ್ರಿವಿಧ ಮೂಲ ಸಹವಾಗಿ ಚತುರ್ವಿಧವು ಗಟ್ಟಿಗೊಂಡು ಅಖಂಡಗೊಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು, ಆ ಮಹಾಲಿಂಗದಿಂದ ಆತ್ಮ ಜನನ. ಆತ್ಮನಿಂದ ಭಾವ ಹುಟ್ಟಿತ್ತು, ಆ ಭಾವದಿಂದ ಮೋಹ ಹುಟ್ಟಿತ್ತು, ಆ ಮೋಹವೆಂದಡೆ, ಮಾಯೆ ಎಂದಡೆ, ಆಶೆ ಎಂದಡೆ, ಮನವೆಂದಡೆ ವಿಕಪರಿಯರ್ಥ. ಇಂತಪ್ಪ ಮೋಹದಿಂದ ತ್ರಿಲೋಕ ಮೊದಲಾಗಿ ಚತುರ್ದಶ ಭುವನದ ಮಧ್ಯದಲ್ಲಿ ಇರುವೆ ಮೊದಲು ಆನೆ ಕಡೆ ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ ದೇವದಾನವ ಮಾನವರು ಮೊದಲಾದ ಹೆಣ್ಣು ಗಂಡು ಸಚರಾಚರಂಗಳೆಲ್ಲವು ಉತ್ಪತ್ಯವಾದವು.*ಇಂತಿವೆಲ್ಲವು ಪರಶಿವನ ನೆನಹುಮಾತ್ರದಿಂದಲೇ ಮರೀಚಿಕಾಜಲದಂತೆ ಸುರಚಾಪದಂತೆ, ತೋರಿ ತೋರಿ ಅಡಗುವವಲ್ಲದೆ, ನಿಜವಲ್ಲ ಮಿಥ್ಯವೆಂದು ತಿಳಿದು ವಿಸರ್ಜಿಸಿ ಬಿಡುವಾತ* ತಾನೇ ಪರಶಿವನೆಂದು ತಿಳಿವುದಯ್ಯಾ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ವಾಯಪ್ರಭುವೆ.

ಮಹಾಸಾದಾಖ್ಯ :

೧೯

(೧) ನಿಃಕಲ ಶಿವನ ಮಧ್ಯದಲ್ಲಿ ಚಿತ್‌ಶಕ್ತಿ ಉದಯವಾದಳು. ಆ ಚಿತ್‌ಶಕ್ತಿಯ ಮಧ್ಯದಲ್ಲಿ ಶಾಂತ್ಯಾತೀತೋತ್ತರೆ ಎಂಬ ಕಳೆ. ಆ ಶಾಂತ್ಯಾತೀತೋತ್ತರೆ ಕಳೆಯ ಮಧ್ಯದಲ್ಲಿ ಮಹಾಲಿಂಗ. ಆ ಮಹಾಲಿಂಗದ ಮಧ್ಯದಲ್ಲಿ [ನಿರ್ಮುಕ್ತಸಾದಾಖ್ಯ ; ಆ ನಿರ್ಮುಕ್ತ ಸಾದಾಖ್ಯದ ಮಧ್ಯದಲ್ಲಿ] ಪಶುಪತಿ ಎಂಬ ಕಲಾಮೂರ್ತಿ. ಆ

* ಈ ಭಾಗ ವೇದಾಂತ ಪ್ರೇರಿತವಾದದ್ದು. ಸಚರಾಚರ ಪ್ರಪಂಚದ ಸಾರವನ್ನು ಸ್ವೀಕರಿಸಿ ಅದರಲ್ಲಿ ಲಿಂಗಚೇತನವನ್ನು ತುಂಬಿ, ಅಂಗವನ್ನಾಗಿ ಪರಿವರ್ತಿಸಿಕೊಂಡು ಪ್ರಸಾದೀಕರಣಗೊಳಿಸುವುದೇ ಯೋಗ್ಯ. ಹೀಗೆಂದು ತಿಳಿದು ವಿಸರ್ಜಿಸುವದು ಯೋಗ್ಯವಲ್ಲ (ಸಂ)

ಪಶುಪತಿಯೆಂಬ ಕಲಾಮೂರ್ತಿಯ ಮಧ್ಯದಲ್ಲಿ ಶಿವನೆಂಬ ಐಕ್ಯನು. ಆ ಶಿವನೆಂಬ ಐಕ್ಯನ ಮಧ್ಯದಲ್ಲಿ ಆತ್ಮನು. ಇಂತು ಮಹಾಸಾದಾಖ್ಯದ ಸೃಷ್ಟಿ.

ಶಿವಸಾದಾಖ್ಯ :

ಆ ನಿಃಕಲ ಶಿವನ ಮಧ್ಯದಲ್ಲಿ ಪರಾಶಕ್ತಿ ಆ ಪರಾಶಕ್ತಿಯ ಮಧ್ಯದಲ್ಲಿ ಶಾಂತ್ಯಾತೀತೆ ಎಂಬ ಕಳೆ. ಆ ಶಾಂತ್ಯಾತೀತೆ ಎಂಬ ಕಳೆಯ ಮಧ್ಯದಲ್ಲಿ ಪ್ರಸಾದ ಲಿಂಗ. ಆ ಪ್ರಸಾದಲಿಂಗದ ಮಧ್ಯದಲ್ಲಿ ಶಿವಸಾದಾಖ್ಯ. ಆ ಶಿವ ಸಾದಾಖ್ಯದ ಮಧ್ಯದಲ್ಲಿ ಮಹಾದೇವನೆಂಬ ಕಳಾಮೂರ್ತಿ. ಆ ಮಹಾದೇವನೆಂಬ ಕಳಾಮೂರ್ತಿಯ ಮಧ್ಯದಲ್ಲಿ ಕ್ಷೇತ್ರಜ್ಞನೆಂಬ ಶರಣ. ಆ ಶರಣನ ಮಧ್ಯದಲ್ಲಿ ಸದಾಶಿವನು. ಆ ಸದಾಶಿವನ ಮಧ್ಯದಲ್ಲಿ ಆಕಾಶ. ಇಂತು ಶಿವಸಾದಾಖ್ಯದ ಸೃಷ್ಟಿ.

ಅಮೂರ್ತಿಸಾದಾಖ್ಯ :

ಆ ನಿಃಕಲ ಶಿವನ ಮಧ್ಯದಲ್ಲಿ ಆದಿಶಕ್ತಿ ಆ ಆದಿಶಕ್ತಿಯ ಮಧ್ಯದಲ್ಲಿ ಶಾಂತಿ ಎಂಬ ಕಳೆ. ಆ ಶಾಂತಿ ಎಂಬ ಕಳೆಯ ಮಧ್ಯದಲ್ಲಿ ಜಂಗಮಲಿಂಗ. ಆ ಜಂಗಮ ಲಿಂಗದ ಮಧ್ಯದಲ್ಲಿ ಅಮೂರ್ತಿಸಾದಾಖ್ಯ. ಆ ಅಮೂರ್ತಿಸಾದಾಖ್ಯದ ಮಧ್ಯ ದಲ್ಲಿ ಭೀಮೇಶ್ವರ[ನೆಂಬ ಕಳಾಮೂರ್ತಿ]. ಭೀಮೇಶ್ವರನೆಂಬ ಕಳಾ ಮೂರ್ತಿಯ ಮಧ್ಯದಲ್ಲಿ ಕರ್ತಾರನೆಂಬ ಪ್ರಾಣಲಿಂಗಿ. ಆ [ಕರ್ತಾರನೆಂಬ] ಪ್ರಾಣಲಿಂಗಿಯ ಮಧ್ಯದಲ್ಲಿ ಈಶ್ವರ. ಆ ಈಶ್ವರನ ಮಧ್ಯ[ದಲ್ಲಿ] ವಾಯು. ಇಂತು ಅಮೂರ್ತಿ ಸಾದಾಖ್ಯದ ಸೃಷ್ಟಿ.

ಮೂರ್ತಿಸಾದಾಖ್ಯ :

ಆ ನಿಃಕಲ ಶಿವನ ಮಧ್ಯದಲ್ಲಿ ಇಚ್ಛಾಶಕ್ತಿ ಆ ಇಚ್ಛಾಶಕ್ತಿಯ ಮಧ್ಯದಲ್ಲಿ ವಿದ್ಯೆ ಎಂಬ ಕಲೆ. ಆ ವಿದ್ಯೆ ಎಂಬ ಕಲೆಯ ಮಧ್ಯದಲ್ಲಿ ಮೂರ್ತಿಸಾದಾಖ್ಯ. ಆ ಮೂರ್ತಿ ಸಾದಾಖ್ಯದ ಮಧ್ಯದಲ್ಲಿ ಮಹಾರುದ್ರನೆಂಬ ಕಳಾಮೂರ್ತಿ. ಆ ಮಹಾರುದ್ರನೆಂಬ ಕಳಾಮೂರ್ತಿಯ ಮಧ್ಯದಲ್ಲಿ ಭಾವನೆಂಬ ಪ್ರಸಾದಿ. ಈ ಭಾವನೆಂಬ ಪ್ರಸಾದಿಯ ಮಧ್ಯದಲ್ಲಿ ರುದ್ರನು. ಆ ರುದ್ರನ ಮಧ್ಯದಲ್ಲಿ ಅಗ್ನಿ. ಇಂತು ಮೂರ್ತಿಸಾದಾಖ್ಯದ ಸೃಷ್ಟಿ.

ಕರ್ತೃಸಾದಾಖ್ಯ :

ಆ ನಿಃಕಲ ಶಿವನ ಮಧ್ಯದಲ್ಲಿ ಜ್ಞಾನಶಕ್ತಿ ಆ ಜ್ಞಾನಶಕ್ತಿಯ ಮಧ್ಯದಲ್ಲಿ ಪ್ರತಿಷ್ಠೆ ಎಂಬ ಕಲೆ. ಆ ಪ್ರತಿಷ್ಠೆ ಎಂಬ ಕಲೆಯ ಮಧ್ಯದಲ್ಲಿ ಗುರುಲಿಂಗ. ಆ ಗುರುಲಿಂಗದ ಮಧ್ಯದಲ್ಲಿ ಕರ್ತೃಸಾದಾಖ್ಯ. ಆ ಕರ್ತೃಸಾದಾಖ್ಯದ ಮಧ್ಯದಲ್ಲಿ ಶರ್ವನೆಂಬ ಕಳಾಮೂರ್ತಿ. ಆ ಶರ್ವನೆಂಬ ಕಳಾಮೂರ್ತಿಯ ಮಧ್ಯದಲ್ಲಿ ಚೈತನ್ಯನೆಂಬ ಮಹೇಶ್ವರ. ಆ ಚೈತನ್ಯನೆಂಬ ಮಹೇಶ್ವರನ ಮಧ್ಯದಲ್ಲಿ ವಿಷ್ಣು. ಆ ವಿಷ್ಣುವಿನ ಮಧ್ಯದಲ್ಲಿ ಅಪ್ಪು. ಇಂತು ಕರ್ತೃಸಾದಾಖ್ಯದ ಸೃಷ್ಟಿ.

ಕರ್ಮಸಾದಾಖ್ಯ :

ಆ ನಿಃಕಲ ಶಿವನ ಮಧ್ಯದಲ್ಲಿ ಕ್ರಿಯಾಶಕ್ತಿ ಆ ಕ್ರಿಯಾಶಕ್ತಿಯ ಮಧ್ಯದಲ್ಲಿ ನಿವೃತ್ತಿ ಎಂಬ ಕಲೆ. ಆ ನಿವೃತ್ತಿ ಎಂಬ ಕಲೆಯ ಮಧ್ಯದಲ್ಲಿ ಆಚಾರಲಿಂಗ. ಆಚಾರಲಿಂಗದ ಮಧ್ಯದಲ್ಲಿ ಕರ್ಮಸಾದಾಖ್ಯ. ಆ ಕರ್ಮಸಾದಾಖ್ಯದ ಮಧ್ಯದಲ್ಲಿ ಭವನೆಂಬ ಕಳಾಮೂರ್ತಿ. ಆ ಭವನೆಂಬ ಕಳಾಮೂರ್ತಿಯ ಮಧ್ಯದಲ್ಲಿ ಅಂತರ್ಯಾಮಿ ಎಂಬ ಭಕ್ತ. ಆ ಅಂತರ್ಯಾಮಿ ಎಂಬ ಭಕ್ತನ ಮಧ್ಯದಲ್ಲಿ ಬ್ರಹ್ಮ. ಆ ಬ್ರಹ್ಮನ ಮಧ್ಯದಲ್ಲಿ ಪೃಥ್ವಿ. ಆ ಬ್ರಹ್ಮನಿಂದ ನರರು, ಸುರರು, ಅಸುರರು, ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಸಕಲ ಚರಾಚರಂಗಳೆಲ್ಲ ಹುಟ್ಟಿದವು. ಇಂತಿವೆಲ್ಲವು ಶಿವನ ನೆನಹು ಮಾತ್ರದಿಂದಾದವೈ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

ಇಂತೀ ಆತ್ಮಾನಾತ್ಮ ತತ್ವಂಗಳಿಗೆ ಮೂಲಕಾರಣವಾದ ಪರಬ್ರಹ್ಮವು ತಾನು ಹ್ಯಾಗಿಪ್ಪುದೆಲೆ ಸ್ವಾಮಿ ಎಂದು ಬೆಸಗೊಂಡಡೆ. ಆ ಸಕಲ ತತ್ವಂಗಳಿಗೆ ಉಪರಿಯಾಗಿ ತೋರುವ ಪರವಸ್ತುವಪ್ಪ ಶಾಶ್ವತವಾದ ನಿರಾಳ ಅಡಿ ಮುಡಿ ಒಡಲ ಘಾತವ ಕಾಣಿಸಿಕೊಳ್ಳದ ತನು ಮನ ಕರಣ ಶೂನ್ಯವಾದ ಲಿಂಗವೇ ನಿಃಕಲಬ್ರಹ್ಮವು. ಇಲ್ಲಿಗೆ ನಿಃಕಲಲಿಂಗಸ್ಥಲ.

ತನ್ನ ಸಗುಣಾನಂದ ಲೀಲೆಗೊದಗಿದಂಥಾದ್ದೇ ಚಿತ್ತು ಆ ಚಿತ್ತಿನ ವಿಲಾಸ ದಿಂದ ತಾನೇ ಆ ನಿಃಕಲ ಲಿಂಗವು, ಆ ಚಿತ್ತಿನ ಚಿನ್ನಾದವೇ ಸುನಾದ, ಆ ಚಿತ್ತುವಿನ ಚಿದ್ಬಿಂದುವೇ ಬಿಂದು ಪ್ರಕಾಶ, ಆ ಚಿತ್ತುವಿನ ಚಿತ್ಕಳೆಯೇ ಪ್ರಕಾಶ ತೇಜೋ ಮೂರ್ತಿಯಾಗಿ, ಈ ಚಿನ್ನಾದ ಚಿದ್ಬಿಂದು ಚಿತ್ಕಳೆ, ಮೂಲ ಚಿತ್ತೆಂಬ ಚತುರ್ವಿಧವು ಗಟ್ಟಿಗೊಂಡು ಅಖಂಡಗೋಳಕಾಕಾರ ತೇಜೋಮೂರ್ತಿಯಾಗಿ ನಿಂದು ಮಹಾಲಿಂಗವೆನಿಸಿತ್ತು ಇಲ್ಲಿಗೆ ಮಹಾಲಿಂಗಸ್ಥಲ.

ಆಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವಾದ ಮಹಾಲಿಂಗವು ತಾನಂದೇ ಕರ್ಮಸಾದಾಖ್ಯ, ಕರ್ತೃಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ, ಶಿವಸಾದಾಖ್ಯವೆಂಬೈದು ಸಾದಾಖ್ಯ ಲಿಂಗಸ್ವರೂಪವ ತಳೆಯಿತು.

ಕರ್ಮಸಾದಾಖ್ಯವೇ ಆಚಾರಲಿಂಗದ ಪ್ರಕಾಶ, ಕರ್ತೃಸಾದಾಖ್ಯವೇ ಗುರುಲಿಂಗಪ್ರಕಾಶ, ಮೂರ್ತಿಸಾದಾಖ್ಯವೇ ಶಿವಲಿಂಗಪ್ರಕಾಶ, ಅಮೂರ್ತಿ ಸಾದಾಖ್ಯವೇ ಜಂಗಮಲಿಂಗಪ್ರಕಾಶ, ಶಿವಸಾದಾಖ್ಯವೇ ಪ್ರಸಾದಲಿಂಗಪ್ರಕಾಶ ಸ್ವರೂಪವ ತಳೆಯಿತು.

ಈ ಐದು ಲಿಂಗದ ಬೆಳಗೇ ಪಂಚಮುಖವೆಂದೆನಿಸಿತು ಎಂಬಲ್ಲಿ ಆಚಾರ ಲಿಂಗ ಪ್ರಕಾಶವೇ ಸದ್ಯೋಜಾತಮುಖ, ಗುರುಲಿಂಗಪ್ರಕಾಶವೇ ವಾಮದೇವ ಮುಖ, ಶಿವಲಿಂಗಪ್ರಕಾಶವೇ ಅಘೋರಮುಖ, ಜಂಗಮಲಿಂಗ ಪ್ರಕಾಶವೇ

ತತ್ಪುರುಷ ಮುಖ, ಪ್ರಸಾದಲಿಂಗಪ್ರಕಾಶವೇ ಈಶಾನಮುಖ– ಇವುಗಳ ಸ್ವರೂಪವನ್ನು ತಳೆಯಿತು.

ಆ ಪಂಚಮುಖದಿಂದಲೇ ಪಂಚಾಕ್ಷರಂಗಳ ಉತ್ಪತ್ತಿ ಎಂಬಲ್ಲಿ ಸದ್ಯೋಜಾತ ಮುಖದಿಂದ ನಕಾರ ಪ್ರಣಮವು. ವಾಮದೇವಮುಖದಿಂದ ಮಕಾರ ಪ್ರಣಮವು. ಅಘೋರಮುಖದಿಂದ ಶಿಕಾರ ಪ್ರಣಮವು. ತತ್ಪುರುಷಮುಖ ದಿಂದ ವಕಾರ ಪ್ರಣಮವು. ಈಶಾನಮುಖದಿಂದ ಯಕಾರ ಪ್ರಣಮವು ಹುಟ್ಟಿದವು.

ಆ ಪಂಚಾಕ್ಷರಂಗಳಿಂದಲೇ ಪಂಚಕಲೆಗಳುತ್ಪತ್ತಿಯು ಎಂಬಲ್ಲಿ, ನಕಾರ ಪ್ರಣಮದಿಂದ ನಿವೃತ್ತಿಕಲೆ, ಮಕಾರ ಪ್ರಣಮದಿಂದ ಪ್ರತಿಷ್ಠಾಕಲೆ, ಶಿಕಾರ ಪ್ರಣಮದಿಂದ ವಿದ್ಯಾಕಲೆ, ವಕಾರ ಪ್ರಣಮದಿಂದ ಶಾಂತಿಕಲೆ, ಯಕಾರ ಪ್ರಣಮದಿಂದ ಶಾಂತ್ಯಾತೀತಕಲೆ ಹುಟ್ಟಿದವು.

ಆ ಪಂಚಕಲೆಗಳಿಂದಲೇ ಪಂಚಶಕ್ತಿಗಳುತ್ಪತ್ತಿ ಅದು ಹೇಗೆ ? ನಿವೃತ್ತಿ ಕಲೆಯಿಂದ ಕ್ರಿಯಾಶಕ್ತಿ, ಪ್ರತಿಷ್ಠಾಕಲೆಯಿಂದ ಜ್ಞಾನಶಕ್ತಿ , ವಿದ್ಯಾಕಲೆಯಿಂದ ಇಚ್ಛಾಶಕ್ತಿ, ಶಾಂತಿಕಲೆಯಿಂದ ಆದಿಶಕ್ತಿ ಶಾಂತ್ಯಾತೀತ ಕಲೆಯಿಂದ ಪರಾಶಕ್ತಿ ಹುಟ್ಟಿದವು.

ಆ ಪಂಚ ಶಕ್ತಿಗಳಿಂದಲೇ ಪಂಚ ಕರಣಂಗಳುತ್ಪತ್ತಿಯು ಎಂಬಲ್ಲಿ–ಕ್ರಿಯಾ ಶಕ್ತಿಯಿಂದ ಚಿತ್ತು, ಜ್ಞಾನಶಕ್ತಿಯಿಂದ ಬುದ್ಧಿ, ಇಚ್ಛಾಶಕ್ತಿಯಿಂದ ಅಹಂಕಾರ, ಆದಿಶಕ್ತಿಯಿಂದ ಮನ, ಪರಾಶಕ್ತಿಯಿಂದ ಜ್ಞಾನವೆಂಬ ಕರಣಂಗಳು ಹುಟ್ಟಿದವು.

ಪಂಚಕರಣಂಗಳಿಂದಲೇ ಪಂಚತನ್ಮಾತ್ರೆಗಳ ಉತ್ಪತ್ತಿಯಾಯಿತ್ತು ಎಂಬಲ್ಲಿ– ಚಿತ್ತೆಂಬ ಕರಣದಿಂದ ಗಂಧ ವಿಷಯವು. ಬುದ್ಧಿ ಎಂಬ ಕರಣದಿಂದ ರಸವಿಷಯವು, ಅಹಂಕಾರವೆಂಬ ಕರಣದಿಂದ ರೂಪ ವಿಷಯವು. ಮನವೆಂಬ ಕರಣದಿಂದ ಸ್ಪರ್ಶನ ವಿಷಯವು, ಜ್ಞಾನವೆಂಬ ಕರಣದಿಂದ ಶಬ್ದ ವಿಷಯವು ಹುಟ್ಟಿದವು.

ಆ ಪಂಚ ತನ್ಮಾತ್ರೆಗಳಿಂದಲೇ ಪಂಚಭೂತಂಗಳುತ್ಪತ್ತಿಯು. ಗಂಧ ವಿಷಯದಿಂದ ಪೃಥ್ವಿಯು, ರಸ ವಿಷಯದಿಂದ ಅಪ್ಪು, ರೂಪ ವಿಷಯದಿಂದ ಅಗ್ನಿ, ಸ್ಪರ್ಶನ ವಿಷಯದಿಂದ ವಾಯು, ಶಬ್ದ ವಿಷಯದಿಂದ ಆಕಾಶವೆಂಬೈದು ತತ್ವಂಗಳು ಹುಟ್ಟಿದವು. ಇಲ್ಲಿಗೆ ಪಂಚಸಾದಾಖ್ಯ ಮೂರ್ತಿಲಿಂಗಸ್ಥಲ.

ಷಟ್‌ಸ್ಥಲ ಬ್ರಹ್ಮಮೂರ್ತಿಗಳು

೨೦

(೧) ಅಖಂಡಮಯ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕ ಸ್ವರೂಪವೇ ಮೂರ್ತಿಬ್ರಹ್ಮವು. ಆ ಪ್ರಣವದ ದಂಡಸ್ವರೂಪವೇ ಪಿಂಡಬ್ರಹ್ಮವು. ಆ ಪ್ರಣವದ ಕುಂಡಲಾಕಾರವೇ ಕಲಾಬ್ರಹ್ಮವು. ಆ ಪ್ರಣವದ

ಅರ್ಧಚಂದ್ರಕವೇ ಬ್ರಹ್ಮಾನಂದಬ್ರಹ್ಮವು. ಆ ಪ್ರಣವದ ದರ್ಪಣಾಕಾರವೇ ವಿಜ್ಞಾನಬ್ರಹ್ಮವು ಆ ಪ್ರಣವದ ಜ್ಯೋತಿಸ್ವರೂಪವೇ ಪರಬ್ರಹ್ಮವು. ಈ ಆರು ಷಟ್‌ಸ್ಥಲಬ್ರಹ್ಮವೆಂದು ಹೇಳಲ್ಪಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

೨೧

(೨) ಓಂ ಪ್ರಥಮದಲ್ಲಿ ದಿವ್ಯನಿರಾಲಂಬಮೂರ್ತಿ ಜಗತ್‌ಸೃಷ್ಟ್ಯಾರ್ಥ ಕಾರಣವಾಗಿ ತತ್ತಾದಲ್ಲಿ, ಪಂಚಬ್ರಹ್ಮಸಾಕಾರವಾದ ಮೂರ್ತಿಯ ಲೀಲಾಸಂಭವ ವಾದಲ್ಲಿ, ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು ಅಂಗ ಕರಂಡ ಆತ್ಮ ಸುಗಂಧ ನೀನಾದೆಯಲ್ಲಾ ವಿಣಾಂಕಧರ ಸೋಮೇಶ್ವರಾ.

ಅರ್ಥ : ಸಾಕಾರಂಗಳನವಲಂಬಿಸದೆ ನಿಃಕಲವಾಗಿದ್ದಿತ್ತು ಪರಬ್ರಹ್ಮ ಮೊಟ್ಟ ಮೊದಲಲ್ಲಿ ಎಂಬುದೀಗ, ಓಂ ಪ್ರಮಥದಲ್ಲಿ ದಿವ್ಯನಿರಾಲಂಬಮೂರ್ತಿ ಎಂಬ ಶಬ್ದಕ್ಕರ್ಥ. ಅಂತು ನಿಃಕಲವಾಗಿರ್ದ ಅಖಂಡ ಚೈತನ್ಯ ಜ್ಞಾನ ವಸ್ತು ತನ್ನ ತಾನೇ ಸೇವ್ಯ ಸೇವಕನಾಗಿರಬೇಕೆಂಬ ಲೀಲಾಚಿಂತನೆದೋರಿ ಅಖಂಡ ತೇಜೋ ಮೂರ್ತಿಯಾದ ಮಹಾಲಿಂಗವಾಯಿತ್ತೆಂಬುದೀಗ, ಜಗತ್‌ಸೃಷ್ಟ್ಯಾರ್ಥಕಾರಣ ಮಾಗಿ ತತ್ತಾದನೆಂಬ ಶಬ್ದಕ್ಕರ್ಥ. ಅಂತಾದ ಮಹಾಲಿಂಗವು ತನ್ನ ಲೀಲೆ ಯಿಂದಲೇ ಪಂಚಸಾದಾಖ್ಯಮೂರ್ತಿಯಾಗಿ ಸಾಕಾರವಾದನೆಂಬುದೀಗ, ತತ್ತಾ ದಲ್ಲಿ ಪಂಚಬ್ರಹ್ಮ ಸಾಕಾರಮೂರ್ತಿ ಯಾದನೆಂಬ ಶಬ್ದಕ್ಕರ್ಥ. ಅಂತು ಪಂಚ ಬ್ರಹ್ಮಸಾಕಾರಮೂರ್ತಿಯಾದ ಮಹತ್ತಾಗುತ್ತದೆ. ಆ ಲಿಂಗವು ಅಣುರೂಪವಾದ ಆತ್ಮನೆಂಬ ಲಿಂಗಸ್ವರೂಪು ತಾನೇಯಾದನೆಂಬುದೀಗ, ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು ಅಂಗಕರಂಡ ಆತ್ಮ ಸುಗಂಧ ನೀನಾದೆಯಲ್ಲಾ ವಿಣಾಂಕಧರ ಸೋಮೇಶ್ವರಾ ಎಂಬ ಶಬ್ದಕ್ಕರ್ಥ.

೨೨

(೩) ಅಖಂಡ ಮಹಾಜ್ಯೋತಿ ಪ್ರಣವದ ಜ್ಯೋತಿಸ್ವರೂಪವಾಗಿಹ ಪರ ಬ್ರಹ್ಮದಲ್ಲಿ ಶಿವನುತ್ಪತ್ಯವಾದನು, ಕ್ಷೇತ್ರಜ್ಞನುತ್ಪತ್ಯವಾದನು, ಕರ್ತನುತ್ಪತ್ಯ ವಾದನು, ಭಾವನುತ್ಪತ್ಯವಾದನು, ಚೈತನ್ಯನುತ್ಪತ್ಯವಾದನು. ಆಕಾಶ ಉತ್ಪತ್ಯ ವಾಯಿತ್ತು ಈ ಆರು ತತ್ವಂಗಳು ಪರಬ್ರಹ್ಮದಲ್ಲಿ ಹುಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೩

(೪) ಅಖಂಡ ಮಹಾಜ್ಯೋತಿ ಪ್ರಣವದ ದರ್ಪಣಾಕಾರವಾಗಿಹ ವಿಜ್ಞಾನ ಬ್ರಹ್ಮದಲ್ಲಿ ಸದಾಶಿವನುತ್ಪತ್ಯವಾದನು. ಮಹದಾಕಾಶ ಉತ್ಪತ್ಯವಾಯಿತು. ಶಬ್ದ ಉತ್ಪತ್ಯವಾಯಿತ್ತು, ಜ್ಞಾನ ಉತ್ಪತ್ಯವಾಯಿತ್ತು, ಶ್ರೋತ್ರ ಉತ್ಪತ್ಯವಾಯಿತ್ತು,

ವಾಕ್ಕು ಉತ್ಪತ್ಯವಾಯಿತ್ತು ಆರು ತತ್ವಂಗಳು ವಿಜ್ಞಾನಬ್ರಹ್ಮದಲ್ಲಿ ಹುಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೪

(೫) ಅಖಂಡ ಮಹಾಜ್ಯೋತಿ ಪ್ರಣವದ ಅರ್ಧಚಂದ್ರಕರೂಪವಾಗಿಹ ಬ್ರಹ್ಮಾನಂದ ಬ್ರಹ್ಮದಲ್ಲಿ ಈಶ್ವರನುತ್ಪತ್ಯವಾದನು, ವಾಯು ಉತ್ಪತ್ಯವಾಯಿತ್ತು ಸ್ಪರ್ಶನ ಉತ್ಪತ್ಯವಾಯಿತ್ತು ಮನ ಉತ್ಪತ್ಯವಾಯಿತ್ತು ತ್ವಕ್ಕು ಉತ್ಪತ್ಯವಾಯಿತ್ತು ಪಾಣೇಂದ್ರಿಯ ಉತ್ಪತ್ಯವಾಯಿತ್ತು ಈ ಆರೂ ತತ್ವಂಗಳು ಬ್ರಹ್ಮಾನಂದಬ್ರಹ್ಮದಲ್ಲಿ ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೫

(೬) ಅಖಂಡ ಮಹಾಜ್ಯೋತಿ ಪ್ರಣವದ ಕುಂಡಲಾಕಾರವಾಗಿಹ ಕಲಾಬ್ರಹ್ಮದಲ್ಲಿ ರುದ್ರನುತ್ಪತ್ಯವಾದನು, ಅಗ್ನಿ ಉತ್ಪತ್ಯವಾಯಿತ್ತು ರೂಪು ಉತ್ಪತ್ಯವಾಯಿತ್ತು, ಅಹಂಕಾರ ಉತ್ಪತ್ಯವಾಯಿತ್ತು, ನೇತ್ರ ಉತ್ಪತ್ಯವಾಯಿತ್ತು, ಪಾದೇಂದ್ರಿಯ ಉತ್ಪತ್ಯವಾಯಿತು. ಈ ಆರು ತತ್ವಂಗಳು ಪಿಂಡಬ್ರಹ್ಮದಲ್ಲಿ ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೬

(೭) ಅಖಂಡ ಮಹಾಜ್ಯೋತಿ ಪ್ರಣವದ ದಂಡಸ್ವರೂಪವಾಗಿಹ ಪಿಂಡಬ್ರಹ್ಮದಲ್ಲಿ ವಿಷ್ಣು ಉತ್ಪತ್ಯವಾದನು, ಅಪ್ಪು ಉತ್ಪತ್ಯವಾಯಿತ್ತು ರಸ ಉತ್ಪತ್ಯವಾಯಿತ್ತು ಬುದ್ಧಿ ಉತ್ಪತ್ಯವಾಯಿತ್ತು ಜಿಹ್ವೆ ಉತ್ಪತ್ಯವಾಯಿತ್ತು, ಗುಹ್ಯ ಉತ್ಪತ್ಯವಾಯಿತ್ತು ಈ ಆರು ತತ್ವಂಗಳು ಪಿಂಡಬ್ರಹ್ಮದಲ್ಲಿ ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೭

(೮) ಅಖಂಡ ಮಹಾಜ್ಯೋತಿ ಪ್ರಣವದ ತಾರಕಸ್ವರೂಪವಾಗಿಹ ಮೂರ್ತಿಬ್ರಹ್ಮದಲ್ಲಿ ಬ್ರಹ್ಮ ಉತ್ಪತ್ಯವಾದನು, ಪೃಥ್ವಿ ಉತ್ಪತ್ಯವಾಯಿತ್ತು, ಗಂಧ ಉತ್ಪತ್ಯವಾಯಿತ್ತು, ಚಿತ್ತು ಉತ್ಪತ್ಯವಾಯಿತ್ತು, ಘ್ರಾಣ ಉತ್ಪತ್ಯವಾಯಿತ್ತು, ಗುದ ಉತ್ಪತ್ಯವಾಯಿತು. ಈ ಆರು ತತ್ವಂಗಳು ಮೂರ್ತಿಬ್ರಹ್ಮದಲ್ಲಿ ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೮

(೯) ಸಹಜದಿಂದ ನಿರಾಲಂಬವಾಯಿತ್ತು ನಿರಾಲಂಬದಿಂದ ನಿರಾಳವಾಯಿತ್ತು ನಿರಾಳದಿಂದ ನಿರವಯವಾಯಿತ್ತು ನಿರವಯದಿಂದ ಅನಾದಿಯಾಯಿತ್ತು ಆದಿಯಲ್ಲಿ ಮೂರ್ತಿಯಾದನೊಬ್ಬ ಶರಣ. ಆ ಶರಣನ ಮೂರ್ತಿಯಿಂದ ಸದಾಶಿವ ನಾದ. ಆ ಸದಾಶಿವನಮೂರ್ತಿಯಿಂದ ಶಿವನಾದ. ಆ

ಶಿವನಮೂರ್ತಿಯಿಂದ ರುದ್ರನಾದ, ಆ ರುದ್ರನಮೂರ್ತಿಯಿಂದ ವಿಷ್ಣುವಾದ, ಆ ವಿಷ್ಣುವಿನಮೂರ್ತಿಯಿಂದ ಬ್ರಹ್ಮನಾದ. ಆ ಬ್ರಹ್ಮನಮೂರ್ತಿಯಿಂದಾದವು ಸಕಲ ಜಗತ್ತುಗಳೆಲ್ಲ. ಇವರೆಲ್ಲ ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಹುಟ್ಟಿ ಬೆಳೆದರು.

ಟೀಕು : ಶಿವನ ಲೀಲಾಮೂರ್ತಿಗಳಾಗದೆ ನಿಃಕಲವಾಗಿಪ್ಪ ನಿಜವಸ್ತು ಸ್ವಭಾವವಾಗಿದ್ದುದೇ ಸಹಜವೆಂಬ ಶಬ್ದಕ್ಕರ್ಥ. ಅಂತಪ್ಪ ನಿಃಕಲವಸ್ತು ತನ್ನ ತಾನೇ ಒಮ್ಮೆ ಸ್ವಲೀಲಾ ಚಿಂತನದೋರಿ ನೆನೆದುದೀಗ, ಚಿತ್ತುವಿನ ಜನಿತವೆಂದು ಹೇಳಲಾಯಿತ್ತು. ಅಂತು ಜನಿಸಿದ ಚಿತ್ತು ಆ ಪರಶಿವನಲ್ಲದೆ ಬೇರೊಂದನವಲಂಬಿಸುವದಿಲ್ಲಮಾಗಿ ಆ ಚಿತ್ತುವಿನ ನಿರಾಲಂಬವೆಂದು ಹೆಸರಿಡಲಾಯಿತ್ತಾಗಿ, ಅಂತು ಸಹಜದಿಂದ ನಿರಾಲಂಬವಾಯಿತ್ತೆಂಬ ಶಬ್ದಕ್ಕರ್ಥ. ಅಂತು ನಿಃಕಲವಸ್ತು ತನ್ನಲ್ಲಿ ತಾನೆ ಒಮ್ಮೆ ಸ್ವಲೀಲಾ ಚಿಂತನದೋರಿದ ಚಿತ್ತಿನ ಪ್ರಭಾವತೆಯ ಕೂಡಿ ಶಿವಚೈತನ್ಯ ಬೆಂಬಳಿವಿಡಿದು ಪ್ರಭಾವಿಸಿತ್ತಾಗಿ, ನಿರಾಲಂಬದಿಂದ ನಿರಾಳವಾಯಿತ್ತೆಂಬ ಶಬ್ದಕ್ಕರ್ಥ. ಅಂತು ಪ್ರಭಾವಿಸಿ ತೋರಿದ ಚಿತ್‌ಚೈತನ್ಯದ ಪ್ರಭಾ ಬೆಳಗಿನ ಕೂಡೆ ಶಿವಕಳೆದೋರಿತ್ತೆಂಬುದೀಗ, ನಿರಾಳದಿಂದ ನಿರವಯವಾಯಿತ್ತೆಂಬ ಶಬ್ದಕ್ಕರ್ಥ. ಅಂತು ನಿರಾಲಂಬವೆಂಬುದೇ ಚಿದ್ಬಿಂದು. ನಿರಾಳವೆಂಬದೇ ನಿರಾಕಾರ ಚೈತನ್ಯವಪ್ಪ ನಾದ. ನಿರವಯವೆಂಬುದೇ ಶಿವಕಳೆ. ಅಂತಾದ ನಾದ ಬಿಂದು ಕಳಾಬೆಳಗೆಲ್ಲ ಪುಟ್ಟಿ ಗೋಳಕಾಕಾರಮಪ್ಪ ಲಿಂಗವಾಗಿತ್ತೆಂಬುದೀಗ, ನಿರವಯದಿಂದ ಅನಾದಿಯಾಯಿತ್ತೆಂಬ ಶಬ್ದಕ್ಕರ್ಥ. ಅಂತಾದ ಚಿಲ್ಲಿಂಗವೇ ಚಿತ್‌ಪ್ರಭಾಮೂರ್ತಿಯಾಗಿ ತನ್ನೊಳಗೆ ಅವಯವಂಗಳಾಗಿ ತೋರಿತ್ತೆಂಬುದೀಗ, ಅನಾದಿಯಲ್ಲಿ ಮೂರ್ತಿಯಾದನೊಬ್ಬ ಶರಣನೆಂಬ ಶಬ್ದಕ್ಕರ್ಥ. ಅಂತು ಮಹಾಲಿಂಗವು ಅಖಂಡ ಚಿತ್‌ಪ್ರಭಾಂಗಸ್ವರೂಪವಾಗುತ್ತಿದೆ. ಶಿವಸಾದಾಖ್ಯ ಮೊದಲಾದ ಸದಾಶಿವಾದಿಯಾದ ರುದ್ರತ್ವ ಕಡೆಯಾದ ಶಿವಮೂರ್ತಿಗಳಾದವು. ಅಂತಾದ ಮಹಾಲಿಂಗದ ಚಿತ್ಪ್ರಭಾಂಗ ಸ್ವರೂಪಗಳಾದ ಆ ಶಿವಮೂರ್ತಿಗಳ ಚಿತ್ಕಲಾಂಶಿಕವೇ ಬ್ರಹ್ಮ ವಿಷ್ಣಾದಿ ಸುರರು ಸಕಲ ಜೀವಂಗಳಾದವು. ಅಂತು ಮಹಾಲಿಂಗದ ಚಿದ್ಭಾವದಿಂದೊಗೆದ ಚಿನ್ಮೂರ್ತಿಗಳೇ ಸದಾಶಿವಾದಿ ರುದ್ರಮೂರ್ತಿಗಳು. ಆ ಚಿನ್ಮೂರ್ತಿಗಳಪ್ಪ ಸದಾಶಿವಾದಿಮೂರ್ತಿಗಳ ಚಿದ್ಭಾವದಿಂದೊಗೆದ ಚಿತ್ಕಲಾಂಶಿಕವೆ ಬ್ರಹ್ಮ ವಿಷ್ಣು ಮೊದಲಾದ ಹಲವಾತ್ಮರುಗಳಾಗಿ ಮೂರ್ತಿಗಳಾದವು. ಅಂತು ಎಲ್ಲ ಮೂರ್ತಿಗಳು ಲಿಂಗದ ಚಿದ್ಭಾವವೆಂಬ ಹಸ್ತದಿಂದೊಗೆದ ಚಿತ್ಕಲಾಂಶಿಕರೆಂಬುದೀಗ, ಇವರೆಲ್ಲರು ನಮ್ಮ ಗುಹೇಶ್ವರನ ಕರಸ್ಥಲದ ಹಂಗಿನಲ್ಲಿ ಹುಟ್ಟಿ ಬೆಳೆದರು ಎಂಬ ಶಬ್ದಕ್ಕರ್ಥ.

೨೯

(೧೦) ಆದಿಯಲೊಬ್ಬ ಶರಣ ಮೂರ್ತಿಯಾದ. ಆತನ ಮೂರ್ತಿಯಿಂದ ಸದಾಶಿವನಾದ. ಆ ಸದಾಶಿವನ ಮೂರ್ತಿಯಿಂದ ಜ್ಞಾನಶಕ್ತಿಯಾದಳು. ಆ

ಸದಾಶಿವಂಗೆಯೂ ಜ್ಞಾನಶಕ್ತಿ ಇಬ್ಬರಿಗೂ ಶಿವನಾದ. ಆ ಶಿವಂಗೆ ಇಚ್ಛಾಶಕ್ತಿಯಾದಳು. ಆ ಶಿವಂಗೆಯೂ ಇಚ್ಛಾಶಕ್ತಿ ಇಬ್ಬರಿಗೂ ರುದ್ರನಾದ. ಆ ರುದ್ರಂಗೆ ಕ್ರಿಯಾಶಕ್ತಿಯಾದಳು. ಆ ರುದ್ರಂಗೆಯೂ ಕ್ರಿಯಾಶಕ್ತಿ ಇಬ್ಬರಿಗೆಯೂ ವಿಷ್ಣುವಾದ. ಆ ವಿಷ್ಣುವಿಂಗೆ ಮಹಾಲಕ್ಷ್ಮಿಯಾದಳು. ಆ ವಿಷ್ಣುವಿಗೆಯೂ ಮಹಾಲಕ್ಷ್ಮಿ ಇಬ್ಬರಿಗೆಯೂ ಬ್ರಹ್ಮನಾದ. ಆ ಬ್ರಹ್ಮಂಗೆ ಸರಸ್ವತಿಯಾದಳು. ಆ ಬ್ರಹ್ಮಂಗೆಯೂ ಸರಸ್ವತಿ ಇಬ್ಬರಿಗೆಯೂ ನರರು, ಸುರರು, ದೇವರ್ಕಳು, ಹೆಣ್ಣು ಗಂಡು, ಸಚರಾಚರಂಗಳು ಸಹಿತವಾಗಿ ಎಂಬತ್ತು ನಾಲ್ಕು ಲಕ್ಷ ಜೀವಜಂತುಗಳು ತೋರುವ ತೋರಿಕೆ ಎಲ್ಲಾ ಹುಟ್ಟಿತ್ತು ಕೂಡಲ ಚೆನ್ನಸಂಗಯ್ಯಾ.

೩೦

(೧೧) ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಆತ್ಮನುತ್ಪತ್ಯವಾದನು. ಆ ಪ್ರಣವದ ದರ್ಪಣಾಕಾರದಲ್ಲಿ ಸದಾಶಿವನುತ್ಪತ್ಯವಾದನು. ಆ ಪ್ರಣವದ ಕುಂಡಲಾಕಾರದಲ್ಲಿ ರುದ್ರನುತ್ಪತ್ಯವಾದನು. ಆ ಪ್ರಣವದ ದಂಡಸ್ವರೂಪದಲ್ಲಿ ವಿಷ್ಣು ಉತ್ಪತ್ಯವಾದನು. ಆ ಪ್ರಣವದ ತಾರಕ ಸ್ವರೂಪದಲ್ಲಿ ಬ್ರಹ್ಮನುತ್ಪತ್ಯವಾದನು ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

೩೧

(೧೨) ಬ್ರಹ್ಮ ವಿಷ್ಣು ರುದ್ರ, ಮಹೇಶ್ವರ, ಸದಾಶಿವ ಈ ಆರು ಶಿವಾಂಗವು ಚಿತ್‌ಶಕ್ತಿ ಕಾರಣವಾಗಿ ಹುಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

೩೨

(೧೩) ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕಸ್ವರೂಪದಲ್ಲಿ ಸದ್ಯೋಜಾತ ಮುಖೋತ್ಪತ್ತಿ, ಆ ಪ್ರಣವದ ದಂಡಸ್ವರೂಪದಲ್ಲಿ ವಾಮದೇವಮುಖೋತ್ಪತ್ತಿ, ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರ ಮುಖೋತ್ಪತ್ತಿ, ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖೋತ್ಪತ್ತಿ, ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನ್ಯಮುಖೋತ್ಪತ್ತಿ, ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ನಿರ್ಭಾವ ಮುಖೋತ್ಪತ್ತಿ ನೋಡಾ [ಅಪ್ರಮಾಣ] ಕೂಡಲ ಸಂಗಮದೇವಾ.

ಪಂಚಭೂತಗಳು

ಪಂಚಭೂತಗಳ ಉತ್ಪತ್ತಿ :

೩೩

(೧) ಅನಾದಿಯ ಮಗನು ಆದಿ, ಆದಿಯ ಮಗನತೀತ, ಅತೀತನ ಮಗನು ಆಕಾಶನು, ಆಕಾಶನ ಮಗನು ವಾಯು, ವಾಯುವಿನ ಮಗನು ಅಗ್ನಿ, ಅಗ್ನಿಯ

ಮಗನು ಅಪ್ಪು, ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯಿಂದ ಸಕಲ ಜೀವರೆಲ್ಲರ ಉದ್ಭವ ಗುಹೇಶ್ವರಾ.*

ಟೀಕು : ಸುಚೈತನ್ಯಲಿಂಗವೆಂಬುದೀಗ, ಅನಾದಿ ಎಂಬ ಶಬ್ದಕ್ಕರ್ಥ. ಆ ಸುಚೈತನ್ಯಲಿಂಗದ ಚಿತ್‌ಪ್ರಭಾ ಬೆಳಗೇ ಮೂರ್ತಿಯಾಯಿತ್ತೆಂಬುದೀಗ, ಅನಾದಿಯ ಮಗ ಆದಿ ಎಂಬ ಶಬ್ದಕ್ಕರ್ಥ. ಅಂತು ಚಿತ್‌ಪ್ರಭಾಂಗ ಸ್ವರೂಪವಾದ ಲಿಂಗವು ಪಂಚಸಾದಾಖ್ಯಮುಖವನೆಯ್ದು ಪಂಚಕಲಾ ಶಕ್ತಿಯುಕ್ತವಾಗಿ ಅತಿಷ್ಠನ ತರವನುಳ್ಳ ಸದಾಶಿವನಾದನೆಂಬುದೀಗ, ಆದಿಯ ಮಗನತೀತನೆಂಬ ಶಬ್ದಕ್ಕರ್ಥ. ಅಂತಪ್ಪ ಸದಾಶಿವನ ಪಂಚಮುಖಗಳಿಂದ ಇಪ್ಪತ್ತೈದು ತತ್ತ್ವಂಗಳಾದವು. ಆ ಇಪ್ಪತ್ತೈದನೆಯದು ಜೀವನಾದ ಕಾರಣ ಪಂಚತತ್ತ್ವಂಗಳಿಂದ ಸಕಲಜೀವಂಗಳು ಹುಟ್ಟಿದವೆಂಬುದು ವಿಕಾರ್ಥ. ಅಂತಾಗಿ ಶಿವನ ಕಲಾಂಶಿಕವಾದ ಪಂಚಬ್ರಹ್ಮ ವೀಗ, ಜಗತ್ತೆಂಬುದೀ ವಚನದ ತಾತ್ಪರ್ಯಾರ್ಥ.

೩೪

(೨) ಏನೆಂದೆನಲಿಲ್ಲದ ಮಹಾಘನಲಿಂಗವು ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತ್ತು. ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ. ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ, ಆತ್ಮನಿಂದಾದುದು ಆಕಾಶ. ಆಕಾಶದಿಂದಾದುದು ವಾಯು. ವಾಯುವಿನಿಂದಾದುದು ಅಗ್ನಿ. ಅಗ್ನಿಯಿಂದಾದುದು ಅಪ್ಪು. ಅಪ್ಪುವಿನಿಂದಾದುದು ಪೃಥ್ವಿ. ಪೃಥ್ವಿಯಿಂದಾದುದು ಸಕಲಜೀವರೆಲ್ಲ. ಇವೆಲ್ಲ ನಿಮ್ಮ ನೆನಹುಮಾತ್ರದಿಂದಾದವು ಸಿಮ್ಮಲಿಗೆಯ ಚನ್ನರಾಮಾ.

೩೫

(೩) ಪರಾಪರವಾಗಿಹ ಪರಬ್ರಹ್ಮ ಲೋಕಾದಿಲೋಕಂಗಳನು ಸೃಜಿಸ ಬೇಕೆಂಬ ನೆನಹುಮಾತ್ರದಲ್ಲಿಯೇ ಆ ಪರಾಪರವಾಗಿಹ ಪರಬ್ರಹ್ಮದಲ್ಲಿ ಪರ ಉತ್ಪತ್ಯವಾಯಿತ್ತು. ಆ ಪರದಲ್ಲಿ ಶಿವನುತ್ಪತ್ಯವಾದನು. ಆ ಶಿವನಲ್ಲಿ ಶಕ್ತಿಯುತ್ಪತ್ಯವಾದಳು. ಆ ಶಕ್ತಿಯಲ್ಲಿ ಬಿಂದು ಉತ್ಪತ್ಯವಾಯಿತ್ತು. ಆ ಬಿಂದುವಿನಲ್ಲಿ ನಾದ ಉತ್ಪತ್ಯವಾಯಿತ್ತು. ಆ ನಾದದಲ್ಲಿ ಸದಾಶಿವನು ಉತ್ಪತ್ಯವಾದನು. ಆ ಸದಾಶಿವನ ಗೋಪ್ಯವಕ್ತ್ರದಲ್ಲಿ ಆತ್ಮನು ಉತ್ಪತ್ಯವಾದನು. ಆ ಸದಾಶಿವನ ಈಶಾನ್ಯವಕ್ತ್ರದಲ್ಲಿ ಆಕಾಶ ಉತ್ಪತ್ಯವಾಯಿತು. ಆ ಸದಾಶಿವನ ತತ್ಪುರುಷವಕ್ತ್ರದಲ್ಲಿ ವಾಯು ಉತ್ಪತ್ಯವಾಯಿತ್ತು. ಆ ಸದಾಶಿವನ ಅಘೋರವಕ್ತ್ರದಲ್ಲಿ ಅಗ್ನಿ ಉತ್ಪತ್ಯವಾಯಿತ್ತು. ಆ ಸದಾಶಿವನ ಸದ್ಯೋಜಾತವಕ್ತ್ರದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು. ಆ ಪರಶಿವನ ಹೃದಯದಲ್ಲಿ ಚಂದ್ರನುತ್ಪತ್ಯವಾದನು. ಆ ಸದಾಶಿವನ ಚಕ್ಷುವಿನಲ್ಲಿ ಸೂರ್ಯನುತ್ಪತ್ಯವಾದನು. ಆ ಸದಾಶಿವನು ಆಕಾಶಕ್ಕೆ ಅಧಿದೇವತೆಯಾಗಿಹನು. ಆ ಸದಾಶಿವ

---

* ಈ ವಚನದಲ್ಲಿ ಅನಾದಿ = ನಿಃಕಲ ಪರಬ್ರಹ್ಮ; ಆದಿ= ಮಹಾಲಿಂಗ; ಅತೀತ= ಆತ್ಮ ಈ ರೀತಿಯಾಗಿ ಅರ್ಥೈಸುವುದು ಏಹಿತ. (ಸಂ)

ನಲ್ಲಿ ಮಹೇಶ್ವರನುತ್ಪತ್ಯವಾಗಿ ವಾಯುವಿಗೆ ಅಧಿದೇವತೆಯಾಗಿಹನು. ಆ ಮಹೇಶ್ವರನಲ್ಲಿ ರುದ್ರನುತ್ಪತ್ಯವಾಗಿ ಅಗ್ನಿಗೆ ಅಧಿದೇವತೆಯಾಗಿಹನು. ಆ ರುದ್ರನಲ್ಲಿ ವಿಷ್ಣು ಉತ್ಪತ್ಯವಾಗಿ ಅಪ್ಪುವಿಗೆ ಅಧಿದೇವತೆಯಾಗಿಹನು. ಆ ವಿಷ್ಣುವಿನಲ್ಲಿ ಬ್ರಹ್ಮನುತ್ಪತ್ಯವಾಗಿ ಪೃಥ್ವಿಗೆ ಅಧಿದೇವತೆಯಾಗಿಹನು. ಆ ಬ್ರಹ್ಮನಲ್ಲಿ ಸರ್ವ ಜೀವಗಳು ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.*

೩೬

(೪) ಸದ್ಯೋಜಾತಮುಖದಲ್ಲಿ ಪೃಥ್ವಿ ಹಟ್ಟಿತ್ತು ವಾಮದೇವಮುಖದಲ್ಲಿ ಅಪ್ಪು ಹುಟ್ಟಿತ್ತು ಅಘೋರಮುಖದಲ್ಲಿ ಅಗ್ನಿ ಹುಟ್ಟಿತ್ತು ತತ್ಪುರುಷಮುಖದಲ್ಲಿ ವಾಯು ಹುಟ್ಟಿತ್ತು ಈಶಾನಮುಖದಲ್ಲಿ ಆಕಾಶ ಹುಟ್ಟಿತ್ತು ಪ್ರಣವದ ಅರ್ಧ ಚಂದ್ರಕದಲ್ಲಿ ಮನಸ್ಸು ಹುಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೩೭

(೫) ಪರಬ್ರಹ್ಮಸ್ವರೂಪವಾಗಿಹ ಪರಮ ಪ್ರಣವದ ಜ್ಯೋತಿಸ್ವರೂಪದಲ್ಲಿ ಆತ್ಮನುತ್ಪತ್ಯವಾದನು. ಆ ಪ್ರಣವದ ಬರ್ಪಣಾಕಾರದಲ್ಲಿ ಆಕಾಶ ಉತ್ಪತ್ಯವಾಯಿತ್ತು ಆ ಪ್ರಣವದ ಅರ್ಧಚಂದ್ರಕದಲ್ಲಿ ವಾಯು ಉತ್ಪತ್ಯವಾಯಿತ್ತು ಆ ಪ್ರಣವದ ಕುಂಡಲಾಕೃತಿಯಲ್ಲಿ ತೇಜ ಉತ್ಪತ್ಯವಾಯಿತ್ತು ಆ ಪ್ರಣವದ ದಂಡಸ್ವರೂಪದಲ್ಲಿ ಅಪ್ಪು ಉತ್ಪತ್ಯವಾಯಿತ್ತು ಆ ಪ್ರಣವದ ತಾರಕಸ್ವರೂಪದಲ್ಲಿ ಪೃಥ್ವಿ ಉತ್ಪತ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

(೬) ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬೈದು ತತ್ವಂಗಳು ಹುಟ್ಟುವು ದಕ್ಕೆ ಓಂಕಾರ ಪ್ರಣಮವೇ ಮೂಲ ಕಾರಣವಾಗಿಪ್ಪುದು. ಪಂಚಮಕ್ಕೆ ಪಂಚಾ ಕೃತಿಗಳು, ಆ ಪಂಚಾಕೃತಿಗಳಿಂದ ಪಂಚಾಕ್ಷರಂಗಳು, ಆ ಪಂಚಾಕ್ಷರಂಗಳೇ ಪಂಚ ಮುಖ ಸ್ವರೂಪವನೈದಿ, ಪಂಚಕಲಾ ಶಕ್ತಿಯುಕ್ತಮಾಗಿ ಸದಾಶಿವನಾದನು. ಆ ಸದಾಶಿವನ ಐದು ವದನಗಳಿಂದ ಪಂಚಭೂತಗಳು ಪುಟ್ಟಿದವಾದ ಕಾರಣ ಈ ಪಂಚಭೂತದ ಈ ಐದು ತತ್ವಂಗಳ ಜನನಕ್ಕೆ ಮೂಲ ಕಾರಣವಾದಂಥಾದ್ದೇ ಓಂಕಾರ ಪ್ರಣಮವು.

ಆ ಸದಾಶಿವಮೂರ್ತಿಯ ಸದ್ಯೋಜಾತಮುಖವೆಂಬ ವದನದೊಳಗೆ ಸರ್ವಾಧಾರಮಯವಾದ ಧರಣೀತತ್ವವು ಪುಟ್ಟಿತು. ವಾಮದೇವಮುಖವೆಂಬ ವದನದೊಳಗೆ ಅಪ್ಪು ಸರ್ವಪಾನ್ಯಪ್ರಕ್ಷಾಳನರೂಪಮಾದುದಕತತ್ವವು ಪುಟ್ಟಿತು. ತತ್ಪುರುಷಮುಖವೆಂಬ ವದನದೊಳಗೆ ವಾಯು ಸರ್ವಚಾಂಚಲ್ಯ ಮಯವಾದ ಸಮೀರತತ್ವವು ಪುಟ್ಟಿತು. ಈಶಾನಮುಖವೆಂಬ ವದನದೊಳಗೆ ಆಕಾಶ ಸರ್ವಾಕಾಶಪ್ರದಮಾದ ವ್ಯೋಮತತ್ವವು ಪುಟ್ಟಿತು.೧

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧

೧+ ಎಂಬುದೀಗ ಈ ತತ್ವಂಗಳು ಪುಟ್ಟಿದವು (ಮೂ).

ಪಂಚಭೂತಂಗಳ ಸ್ವಭಾವ ಸ್ಥಿತಿಗಳ ನಿಲುಕಡೆಗಳು

ಕ್ರಿಯಾಭೇದಗಳು :

(೧) ಚರಪ್ರಾಣಿಗಳ ಭಾರವೆಲ್ಲವ ತಳೆದುಕೊಂಡಿರುವಂಥಾದ್ದೇ ಪೃಥ್ವೀ ತತ್ವ ಮಾಡುವಂಥ ಉದ್ಯೋಗವು. ಪಿಂಡೀಕರಣ, ಹುಡಿಹಿಟ್ಟು, ಹುಡಿಮಣ್ಣು ಧೂಳುಪಾಂಸಾದಿಗಳಿಗೆ ತನ್ನ ದ್ರವವನ್ನು ಕೊಟ್ಟು ಮುದ್ದೆಯನ್ನು ಕಟ್ಟುವ ಕಾರ್ಯ ಮಾಡುವುದೇ ಅಪ್ಪುತತ್ವ ಮಾಡುವ ಉದ್ಯೋಗವು. ಇದಿರಿಟ್ಟು ತರಗೆಲೆ ತೃಣಕಾಷ್ಠಗಳನ್ನು ಸುಟ್ಟು ಬೂದಿಯ ಮಾಡಿ ಬಿಡುವಂಥಾದ್ದು ಮತ್ತು ತಾನಲ್ಲದೆ ಹದಿನೆಂಟು ಧಾನ್ಯಗಳನ್ನು ಪಾಕಪ್ರಯತ್ನವ ಮಾಡಿ ಕೊಡುವುದೇ ಅಗ್ನಿತತ್ವ ಮಾಡುವ ಉದ್ಯೋಗವು. ಸ್ವಸ್ಥಾನದಲ್ಲಿರ್ಪ ವಸ್ತುಗಳನ್ನು ಹೊತ್ತುಕೊಂಡು ಹೋಗಿ ಪರ ಎಲ್ಲೆ ಪರಮಂಡಲ, ಪರಸ್ಥಾನಕ್ಕೆಯ್ದಿ ಹಾಕಿಬಿಡುವುದೇ ವಾಯುತತ್ತ್ವ ಮಾಡುವ ಉದ್ಯೋಗವು. ಸಮಸ್ತ ಚರಾಚರ ಪ್ರಾಣಿಗಳು ಮುಂದೆ ಮುಂದೆ ಚರಿಸುವುದಕ್ಕೆ ತೆರಪುಕೊಟ್ಟುಕೊಂಡಿರುವುದೇ ಆಕಾಶತತ್ತ್ವ ಮಾಡುವ ಉದ್ಯೋಗವು. ಇವು ತಾವೇ ಪಂಚಭೂತಂಗಳ ಕ್ರಿಯಾಭೇದಂಗಳ ನಿಲುಕಡೆಗಳು.

ಕಾಯಕಾಂತಿಗಳು :

(೧) ಪೃಥ್ವೀತತ್ತ್ವವೆಂಬುದು ತಾನು ಹಳದೀವರ್ಣದ ಕಾಂತಿಯಿಂದಿಹುದು. ಅಪ್ಪು ತತ್ವವೆಂಬುದು ತಾನು ಧವಳವರ್ಣದ ಕಾಂತಿಯಿಂದಿಹುದು. ಅಗ್ನಿತತ್ವವೆಂಬುದು ತಾನು ಶೋಣಿತವರ್ಣದ ಕಾಂತಿಯಿಂದಿಹುದು. ವಾಯು ತತ್ತ್ವವೆಂಬುದು ತಾನು ಪಚ್ಚೆವರ್ಣದ ಕಾಂತಿಯಿಂದಿಹುದು. ಆಕಾಶತತ್ತ್ವವೆಂಬುದು ತಾನು ಕಾಡಿಗೆ ವರ್ಣದ ಕಾಂತಿಯಿಂದಿಹುದು. ಇವು ತಾವೇ ಪಂಚಭೂತಂಗಳ ಕಾಯಕಾಂತಿಗಳ ನಿಲುಕಡೆಗಳು.

ಅಧಿಷ್ಠಾನಕರ್ತುಗಳು :

(೧) ಧರಣೀತತ್ತ್ವಕ್ಕೆ ಅಜನೇ ಅಧಿಷ್ಠಾನಕರ್ತುವಾಗಿಪ್ಪನು. ಅಪ್ಪುತತ್ತ್ವಕ್ಕೆ ನಾರಾಯಣನೇ ಅಧಿಷ್ಠಾನಕರ್ತುವಾಗಿಪ್ಪನು. ಹದಿನೆಂಟು ಧಾನ್ಯಗಳಿಗೆ ಆಹುತಿಯನುಳ್ಳ ಅಗ್ನಿತತ್ತ್ವಕ್ಕೆ ಶ್ರೀರುದ್ರಮೂರ್ತಿಯೇ ಅಧಿಷ್ಠಾನನಾಯಕನಾಗಿಪ್ಪನು. ವಾಯುತತ್ವಕ್ಕೆ ಈಶ್ವರಮೂರ್ತಿಯೇ ಅಧಿದೇವತೆಯಾಗಿಪ್ಪನು. ಅಂಬರತತ್ತ್ವಕ್ಕೆ ಸದಾಶಿವಮೂರ್ತಿಯೇ ಅಧಿಷ್ಠಾನನಾಯಕನಾಗಿರ್ಪನು.

ಲೋಕೋತ್ಪತ್ತಿಮಾಡುವಂಥ ಅಜನು, ಲೋಕದ ಸ್ಥಿತಿ ಭೋಗವ ನಡೆಸುವಂಥ ನಾರಾಯಣನು, ಲೋಕದ ೧[ಸಂಹಾರ]೧ಕೃತ್ಯ ನಡೆಸುವಂಥ ರುದ್ರಮೂರ್ತಿಯು, ಲೋಕದ ೨[ತಿರೋಧಾನ]೨ ಕೃತ್ಯವ ನಡೆಸುವಂಥ ಈಶ್ವರ ಮೂರ್ತಿಯು, ಲೋಕದ ಅನುಗ್ರಹಕೃತ್ಯವ ನಡೆಸುವಂಥ ಸದಾಶಿವ ಮೂರ್ತಿಯು ಪಂಚಭೂತಂಗಳಿಗೆ ಅಧಿಷ್ಠಾನಕರ್ತುಗಳಾಗಿಪ್ಪನು.

೧–೧ ಸಂಸಾರ (ಮೂ) ೨–೨ ತಿರೋಭಾವ (ಮೂ).

ಗುಣಧರ್ಮಗಳು :

ಪೃಥ್ವಿಗೆ, ಸರ್ವಾಧಾರಮಯವಾದ ಧರಣೀತತ್ವಕ್ಕೆ ಗಡಗಡವೆಂಬ ಶಬ್ದವು, ಕಠಿಣಸ್ಪರ್ಶನವು, ಸಾಕಾರವಾದ ರೂಪು, ಸ್ವಾದರಸವು, ಸದ್ಗಂಧವು– ಈ ಐದು ಅಸಾಧಾರಣ ಗುಣಗಳಾಗಿರುತಿಹವು. ಕಠಿಣತ್ವ ಬಿರುಸಾಗಿ ತಟ್ಟುವಂಥಾದ್ದೇ ಅದರ ಸ್ವಭಾವವು. ಧಾರಣಾದಿ ಕರ್ಮ, ತದಂಗ ಪೀತವರ್ಣ, ಅಧಿಷ್ಠಾನ ಕರ್ತುವೇ ಅಜನು.

ಅಪ್ಪುವಿಗೆ, ಸರ್ವಪಾನ್ಯ ಪ್ರಕ್ಷಾಳನರೂಪಮಾದುದಕತತ್ವಕ್ಕೆ ಶಬ್ದ ಸ್ಪರ್ಶ, ರೂಪ, ರಸ, ಇವು ಅಸಾಧಾರಣ ಗುಣಂಗಳಾಗಿಪ್ಪವು. ದ್ರವಿಸುವುದೇ ಧರ್ಮ, ತದಂಗ ಶ್ವೇತವರ್ಣ, ಅಧಿಷ್ಠಾನಕರ್ತುವೇ ನಾರಾಯಣನು.

ಅಗ್ನಿಗೆ, ಸರ್ವದಾಹಕ ವಚನರೂಪಮಾದ ಧನಂಜಯತತ್ತ್ವಕ್ಕೆ ಶಬ್ದ ಸ್ಪರ್ಶ, ರೂಪ ಈ ತ್ರಿವಿಧವೂ ಗುಣ. ಉಷ್ಣಿಸುವುದೇ ಅದರ ಧರ್ಮ ಸ್ವಭಾವವು. ಆ ಅಗ್ನಿದೇಹವು ಶೋ೧[ಣಿತ]೧ವರ್ಣದ ಕಾಂತಿಯಿಂದಿಹುದು. ಅಧಿಷ್ಠಾನ ಕರ್ತುವೇ ಶ್ರೀರುದ್ರಮೂರ್ತಿಯು.

ವಾಯುವಿಗೆ, ಸರ್ವಚಾಂಚಲ್ಯಮಯವಾದ ಸಮೀರತತ್ತ್ವಕ್ಕೆ ಶಬ್ದ ಶೀತ, ಸ್ಪರ್ಶನವು; ಚರಿಸುವದೇ ಧರ್ಮ, ತದಂಗ ಹರಿತವರ್ಣ, ಅಧಿಷ್ಠಾನಕರ್ತುವೇ ಈಶ್ವರನು.

ಉತ್ಪತ್ತಿ :

(೪) ಪಂಚಭೂತದುತ್ಪತ್ತಿಯುಃ ಶ್ಲೋಕಃ ''ಸದ್ಯೋಜಾತಸ್ತಥಾ ಭೂಮಿರ್ವಾಮ ದೇವೋದ್ಭವಂ ಜಲಂ । ಅಘೋರಾದ್ವನ್ನಿರುತ್ಪತ್ಯಸ್ತತ್ಪುರುಷಂ ವಾಯು ರುಚ್ಯತೆ । ಈಶಾನ್ಯದ್ಗಗನಾಕಾರಂ ಪಂಚಬ್ರಹ್ಮ ಮಯಂ, ಜಗತ್'' ಎಂದುದಾಗಿ, ಸದ್ಯೋ ಜಾತಮುಖದಲ್ಲಿ ಪೃಥ್ವಿ ಪುಟ್ಟಿತ್ತು ವಾಮದೇವಮುಖದಲ್ಲಿ ಅಪ್ಪು ಪುಟ್ಟಿತ್ತು ಅಘೋರಮುಖದಲ್ಲಿ ಅಗ್ನಿ ಪುಟ್ಟಿತ್ತು ತತ್ಪುರುಷಮುಖದಲ್ಲಿ ವಾಯು ಪುಟ್ಟಿತ್ತು ಈಶಾನಮುಖದಲ್ಲಿ ಆಕಾಶ ಪುಟ್ಟಿತ್ತು ಇಂತೀ ಪಂಚಬ್ರಹ್ಮದಿಂದೆ ಪಂಚ ಮಹಾಭೂತಂಗಳು ಪುಟ್ಟಿದವು.

ಗುಣ ಧರ್ಮ ಕರ್ಮ ವರ್ಣ ಅಧಿದೇವತೆಗಳು :

ಈ ಪಂಚಮಹಾಭೂತಂಗಳ ಗುಣ ಧರ್ಮ ಕರ್ಮವರ್ಣಾಧಿ ದೇವತೆ ಗಳಾವುವೆಂದಡೆ. ಶ್ಲೋಕ : ''ಶಬ್ದಾದಿ ಪಂಚ ವಿಷಯಂ । ಭೂಮವಶ್ಯಾಂಭ ವಂತಿ ಹಿ । ಅಪಾಂಚ ಚತುರ್ಗುಣಾಃ ಪ್ರೋಕ್ತಾಸ್ತ್ರಿಗುಣಂ ಪಾವಕೆ ಸ್ಮೃತಾಃ । ವಾಯೌ ಚ ದ್ವಿಗುಣಂ ಪ್ರೋಕ್ತಂ ಆಕಾಶೇಷ್ಯೇಕಮೇವ ಹಿ।'' ಎಂದಿವು ಗುಣಂ ಗಳು. ''ಕಠಿಣಂ ತತ್ ಪೃಥ್ವಿಶ್ಚ ೨[ಯದ್ರವಂ]೨ ಜಲಮುಚ್ಯತೆ । ಯಥೋಷ್ಣಂ ಚ ವೀತಿ ಹೋತ್ರೋ ಯಶ್ಚಲೋಸ್ತಿ ತಥಾ ತೇಜಂ ವಾಯು ಸಂಚರತಿ ॥

೧–೧ ಣ (ಮೂ) ೨–೨ ಯದ್ಭವಂ (ಮೂ)

ಯೋವಾಕಾಶಸ್ಯ ಆಕಾಶಂ ಭೂತ ಧರ್ಮಮಿತಿ ಸ್ಮೃತಃ ॥'' ಎಂದಿವು ಧರ್ಮಂಗಳು. ''ಧಾರಣಂ ಪಿಂಡೀಕರಣಂ ಪಚನಂ ೧[ವಾ]೧ಹನಾದಿ ಚ । ಸರ್ವಾಶ್ರಯಂ ಚ ಸ್ಯಾದ್ಭೂತ ಕರ್ಮಮಿತಿ ಸ್ಮೃತಃ '' ಎಂದಿವು ಕರ್ಮಂಗಳು. ''ಪೀತಂ ಶ್ವೇತಂ ಚ ರಕ್ತಂ ಚ । ಹರಿತಂ ಕೃಷ್ಣ ಮೇವಚ । ಪೃಥ್ವ್ಯಾದಿ ಪಂಚ ಭೂತಾನಿ । ವರ್ಣಭೇದಂ ಪ್ರಕೀರ್ತಿತಾಃ ॥'' ಎಂದಿವು ವರ್ಣಂಗಳು. ''ಪೃಥ್ವ್ಯಾ ಯಂ ಬ್ರಹ್ಮ ಜಲೇ ವಿಷ್ಣುಸ್ತಥಾ ರುದ್ರೋ ಹುತಾಶನೇ। ಈಶ್ವರೋ ಪವನೋ ದೇವಾ । ಆಕಾಶೇ ತು ಸದಾಶಿವಃ । ಬ್ರಹ್ಮ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ। ಪೃಥ್ವ್ಯಾ ದೀನಾಂ ದೇವತಾಸ್ಯುಃ ಪೀತಾ [ದಿ]ವರ್ಣ ಸಂಜ್ಞಕಂ ॥'' ಎಂದುದಾಗಿ, ಪೃಥ್ವಿಗೆ ಶಬ್ದ ಸ್ಪರ್ಶ,ರೂಪು, ರಸ, ಗಂಧ ಈ ಐದು ಗುಣ. ಕಠಿಣತ್ವವೇ ಧರ್ಮ, ಧಾರಣಾದಿ ಕರ್ಮ, ತದಂಗ ಪೀತವರ್ಣ, ಅಧಿದೇವತೆ ಬ್ರಹ್ಮನು. ಅಪ್ಪುವಿಂಗೆ ಶಬ್ದ, ಸ್ಪರ್ಶ, ರೂಪು, ರಸ ಈ ನಾಲ್ಕು ಗುಣ. ದ್ರವಿಸು ವುದೇ ಧರ್ಮ, ಪಿಂಡೀಕರಣ ಕರ್ಮ, ತದಂಗ ಶ್ವೇತವರ್ಣ, ಅಧಿದೇವತೆ ವಿಷ್ಣು. ಅಗ್ನಿಗೆ ಶಬ್ದ ಸ್ಪರ್ಶ, ರೂಪು ಈ ಮೂರು ಗುಣ. ಉಷ್ಣಿಸುವುದೇ ಧರ್ಮ, ಪಚನಾದಿ ಕರ್ಮ, ತದಂಗ ರಕ್ತವರ್ಣ, ಅಧಿದೇವತೆ ರುದ್ರನು. ವಾಯುವಿಂಗೆ ಶಬ್ದ ಸ್ಪರ್ಶ ಈ ಎರಡು ಗುಣ. ಚಲನವೇ ಧರ್ಮ, ವಾಹನಾದಿ ಕರ್ಮ, ತದಂಗ ಹರಿತವರ್ಣ, ಅಧಿದೇವತೆ ಈಶ್ವರನು. ಆಕಾಶಕ್ಕೆ ಶಬ್ದ ಒಂದು ಗುಣ. ಬಯಲಾಗಿಹುದೇ ಧರ್ಮ, ಸುಳಿವುದಕ್ಕೆ ತೆರಹುಗುಡುವುದೇ ಕರ್ಮ, ತದಂಗ ಕೃಷ್ಣವರ್ಣ, ಅಧಿದೇವತೆ ಸದಾಶಿವನು ಎಂದಿದು ಪಂಚಭೂತದುತ್ಪತ್ಯಂ.

ಶಿವನ ಅಷ್ಟತನುಗಳು :

ಇನ್ನು ಜಗದುತ್ಪತ್ಯದಾದಿಯುಃ ''ಭೂಜಲಾಗ್ನಿ ಮರುದ್ವ್ಯೋಮ ಭಾಸ್ಕರಶ್ಯಶಿ ಚೇತನಃ । ದಿವಾ ಪ್ರಕಾಶತೆ ಸೂರ್ಯಃ । ರಾತ್ರೌ ಚಂದ್ರ ಪ್ರಕಾಶತೆ॥ ಸರ್ವ ಚೇತನಮಾತ್ಮಾ ಚ ಶಿವಾಂಶೋಪ್ಯಷ್ಟಮೂರ್ತಯಃ ॥'' ಎಂದು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಎಂಬಿವು ಶಿವನ ಅಷ್ಟತನುಗಳೇ ಜಗತ್ತಾಗಿಹವು. ಅವಾವೆಂದೊಡೆ : ಚತುರ್ದಶ ಭುವನಂಗಳು, ಸಪ್ತ ಸಮುದ್ರಂಗಳು, ಸಪ್ತದ್ವೀಪಂಗಳು, ಸಪ್ತಕುಲಪರ್ವತಂಗಳು, ಸಮಸ್ತಗ್ರಹಂ ಗಳು ರಾಶಿ ತಾರಾ ಪಥಂಗಳು ಗರ್ಭೀಕರಿಸಿಕೊಂಡು ಬ್ರಹ್ಮಾಂಡವೆನಿಸಿತ್ತು ಎಂದಿದು ಜಗದುತ್ಪತ್ಯಂ.

ಗುಣಗಳು :

(೫) ಸರ್ವಾಧಾರಮಯವಾದ ಧರಣೀತತ್ವಕ್ಕೆ ಪಂಚವಿಂಶತಿ ತತ್ವಂಗಳೇ ಪ್ರಸಿದ್ಧವಾಗಿರುತಿಹವು. ಪೃಥ್ವಿಗೆ ಅಯ, ಶಕಟ, ಮುಸಲಾದಿಗಳ ಸಂಘಟನೆ ಯಿಂದ ಹುಟ್ಟುವಂಥ ಗಡಗಡ ಎಂಬ ಶಬ್ದ ಉಂಟು. ಆ ಶಬ್ದಗುಣವಿದ್ದಲ್ಲಿ ಆಕಾಶತತ್ವ ಉಂಟು. ಆ ಆಕಾಶತತ್ವವಿದ್ದಲ್ಲಿ ಆಕಾಶತತ್ವ ಸಂಬಂಧವಾದ

೧–೧ ಮೋ (ಮೂ).

ರಾಗಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಮುಟ್ಟಿದರೆ ಬಿರುಸಾಗಿ ತಟ್ಟುವಂಥ ಕಠಿಣ ಸ್ಪರ್ಶನ ಉಂಟು. ಸ್ಪರ್ಶನ ಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವವಿದ್ದಲ್ಲಿ ಆ ವಾಯುತತ್ವ ಸಂಬಂಧವಾದ ಧಾವನಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಸಾಕಾರಮಾದ ರೂಪ ಉಂಟು. ಆ ರೂಪುಗುಣವಿದ್ದಲ್ಲಿ ಅಗ್ನಿ ತತ್ವ ಗುಣ ಉಂಟು. ಅಗ್ನಿತತ್ವವಿದ್ದಲ್ಲಿ ಆ ಅಗ್ನಿತತ್ವ ಸಂಬಂಧವಾದ ಕ್ಷುಧಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಮಧುರ ರಸ ಉಂಟು. ರಸಗುಣವಿದ್ದಲ್ಲಿ ಅಪ್ಪು ತತ್ವ ಉಂಟು. ಆ ಅಪ್ಪುತತ್ವವಿದ್ದಲ್ಲಿ ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಸದ್ಗಂಧ ಉಂಟು. ಗಂಧ ಗುಣವಿದ್ದಲ್ಲಿ ಮೂಲ ಪೃಥ್ವೀತತ್ವ ಉಂಟು. ಮೂಲ ಪೃಥ್ವೀತತ್ವವಿದ್ದಲ್ಲಿ ಆ ಮೂಲ ಪೃಥ್ವೀಸಂಬಂಧವಾದ ಶಲ್ಯಾದಿ ಐದು ಗುಣಂಗಳುಂಟು. ಅಂತು ಐದು ಗುಣಂಗಳು ಪಂಚವಿಂಶತಿ ಗುಣಂಗಳೆಂದೇ ಧರಣೀತತ್ವಕ್ಕೆ ಪ್ರಸಿದ್ಧವಾಗಿರುತಿಹವು.

ಸರ್ವ[೧][ಪಾ][೧]ನ್ಯ ಪ್ರಕ್ಷಾಳನ ರೂಪಮಾದುದಕತತ್ವಕ್ಕೆ ವಿಂಶತಿ ಗುಣಂಗಳೇ ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ: ಅಪ್ಪುವಿಂಗೆ ೞಿಜಾರಿನಲ್ಲಿ ಚರಿಸುವಾಗ ಹುಟ್ಟುವ ಬುಳುಬುಳು ಚಳಚಳ ಭೋರ್ಭೋರೆಂಬ ಶಬ್ದ ಉಂಟು. ಶಬ್ದಗುಣವಿದ್ದಲ್ಲಿ ಆಕಾಶತತ್ವ ಉಂಟು. ಆಕಾಶತತ್ವವಿದ್ದಲ್ಲಿ ಆಕಾಶತತ್ವ ಸಂಬಂಧವಾದ ರಾಗಾದೈದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ಶೈತ್ಯ ಸ್ಪರ್ಶನ ಉಂಟು. ಸ್ಪರ್ಶನಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವವಿದ್ದಲ್ಲಿ ಆ ವಾಯುತತ್ವ ಸಂಬಂಧವಾದ ಧಾವನಾದಿ ಐದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ೨[ಧವಳಾದಿ]೨ ವಿಚಿತ್ರ ಬಣ್ಣದ ರೂಪುಂಟು. ರೂಪುಗುಣವಿದ್ದಲ್ಲಿ ಅಗ್ನಿತತ್ವ ಉಂಟು. ಆ ಅಗ್ನಿತತ್ವ ಸಂಬಂಧವಾದ ಕ್ಷುಧಾದಿ ಐದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ಸ್ವಾದರಸ ಉಂಟು. ಆ ಸ್ವಾದರಸವಿದ್ದಲ್ಲಿ ಮೂಲ ಅಪ್ಪುತತ್ವ ಉಂಟು. ಮೂಲ ಅಪ್ಪುತತ್ವವಿದ್ದಲ್ಲಿ ಆ ಮೂಲ ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದೈದು ಗುಣಂಗಳುಂಟು. ಇಂತು ಅಪ್ಪುತತ್ವಕ್ಕೆ ವಿಂಶತಿ ಗುಣಂಗಳೇ ಪ್ರಸಿದ್ಧವಾಗಿರುತಿಹವು.

ಸರ್ವದಾಹಕ ಪಾಚಕ ರೂಪವಾದ ಧನಂಜಯತತ್ವಕ್ಕೆ ಹದಿನೈದು ಗುಣಂಗಳು ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ: ಅಗ್ನಿಗೆ ತೃಣ ಪುಂಜಗಳನಾವರಿಸಿ ಸುಡುವಲ್ಲಿ ಹುಟ್ಟುವ ಪಟಲ್, ಭುಗಿಲ್, ಚಟ ಚಟ ಎಂಬ ಶಬ್ದ ಉಂಟು. ಆ ಶಬ್ದ ಗುಣವಿದ್ದಲ್ಲಿ ಆಕಾಶತತ್ವ ಉಂಟು. ಆಕಾಶತತ್ವಸಂಬಂಧವಿದ್ದಲ್ಲಿ ರಾಗಾದಿ ಐದು ಗುಣಂಗಳುಂಟು. ಮತ್ತಮಾ ಅಗ್ನಿಗೆ ಉಷ್ಣ ಸ್ಪರ್ಶನ ಉಂಟು. ಸ್ಪರ್ಶನ ಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವವಿದ್ದಲ್ಲಿ ವಾಯುತತ್ವ ಸಂಬಂಧ

೧–೧ ಮಾ (ಮೂ) ೨–೨ ನೀಲಾದಿ (ಮೂ)

ವಾದ ಭಾವನಾದಿ ಐದು ಗುಣಂಗಳುಂಟು. ಮತ್ತಮಾ ಅಗ್ನಿಗೆ ಪ್ರಭಾವರ್ಣದ ರೂಪುಂಟು. ರೂಪುಗುಣವಿದ್ದಲ್ಲಿ ಮೂಲ ಅಗ್ನಿತತ್ವ ಉಂಟು. ಮೂಲ ಅಗ್ನಿತತ್ವವಿದ್ದಲ್ಲಿ ಆ ಮೂಲ ಅಗ್ನಿತತ್ವಸಂಬಂಧವಾದ ಕ್ಷುಧಾದಿ ಐದು ಗುಣಂಗಳುಂಟು.

ಸರ್ವ ಚಾಂಚಲ್ಯಮಯವಾದ ಸಮೀರತತ್ವಕ್ಕೆ ಹತ್ತು ಗುಣ ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ: ವಾಯುವಿಂಗೆ ತರು, ಭಿತ್ತಿ, ಶಿಲಾದಿಗಳ ಮೇಲೆ ಬೀಸಿದಲ್ಲಿ ಹುಟ್ಟುವಂಥ ಭಿಸ್ಸೆಂಬ ಶಬ್ದ ಉಂಟು. ಶಬ್ದಗುಣವಿದ್ದಲ್ಲಿ ಆಕಾಶತತ್ವ ಉಂಟು. ಆಕಾಶತತ್ವವಿದ್ದಲ್ಲಿ ಆಕಾಶತತ್ವಸಂಬಂಧವಾದ ರಾಗಾದಿ ಐದು ಗುಣಂಗಳುಂಟು. ಮತ್ತಮಾ ವಾಯುವಿಂಗೆ ೧[ಉಷ್ಣ]೧ ಸೀತ ಸ್ಪರ್ಶನ ಉಂಟು. ಸ್ಪರ್ಶನ ಗುಣವಿದ್ದಲ್ಲಿ ಮೂಲ ವಾಯುತತ್ವ ಉಂಟು. ಆ ಮೂಲ ವಾಯುತತ್ವ ಸಂಬಂಧವಾದ ಧಾವನಾದಿ ಐದು ಗುಣಂಗಳುಂಟು.

ಸರ್ವಾಕಾಶಪ್ರದಮಾದ ಅಂಗದ ತತ್ತ್ವಕ್ಕೆ ಐದು ಗುಣಂಗಳು ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ: ಆಕಾಶಕ್ಕೆ ಗಡಗಡವೆಂಬ ಶಬ್ದ ಉಂಟು. ಶಬ್ದ ಗುಣವಿದ್ದಲ್ಲಿ ಆ ಮೂಲಾಕಾಶತತ್ವ ಉಂಟು. ಆ ಮೂಲಾಕಾಶತತ್ವವಿದ್ದಲ್ಲಿ ಆ ಮೂಲಾಕಾಶಸಂಬಂಧವಾದ ರಾಗಾದ್ಯೈದು ಗುಣಂಗಳುಂಟು.

ಈ ಪ್ರಕಾರದಿಂದೆ ಹೇಳಲ್ಪಟ್ಟಂಥ ವಿಭೇದಗುಣಂಗಳು ಹೆಚ್ಚು ಕಡಿಮೆಯಾಗಿ ತಾರತಮ್ಯವಾಗಿರುವ ಗುಣಂಗಳು ತತ್ತ್ವಂಗಳು ಕೂಡಲಾಗಿ ಎಪ್ಪತ್ತೈದು ಗುಣಂಗಳಾದವು. ಹೀಗೆಂದು ಹೇಳುವಂಥ ೞಿದು ತಾನೇ ಪಿಂಡಸಂಗ್ರಹ ಭೇದವು. ಚತುರ್ದಶ ಭುವನಂಗಳೊಡನೆ ಕೂಡಿದ ಬ್ರಹ್ಮಾಂಡದಲ್ಲಿ ಪಿಂಡಗಳ ಸಮೂಹವು ಉಂಟಾದಂಥ ವಿಚಾರವು.

ಷಡಧ್ವಗಳು

೩೮

(೧) ಮಂತ್ರಾಧ್ವ,ಪದಾಧ್ವವ ತನ್ನಲ್ಲಿ ತಿಳಿದು ಅನುಭವಿಸಬಲ್ಲಾತನೇ ಆಚಾರ್ಯನೆಂಬೆ. ವರ್ಣಾಧ್ವ, ಭುವನಾಧ್ವವ ತನ್ನಲ್ಲಿ ತಿಳಿದು ಅನುಭವಿಸ ಬಲ್ಲಾತನೆ ಆಚಾರ್ಯನೆಂಬೆ. ತತ್ವಾಧ್ವ, ಕಲಾಧ್ವವ ತನ್ನಲ್ಲಿ ತಿಳಿದು ಅನುಭವಿಸ ಬಲ್ಲಾತನೇ ಆಚಾರ್ಯನೆಂಬೆ. ಈ ಷಡ್ವಿಧವ ತನ್ನಲ್ಲಿ ತಿಳಿದು ಅನುಭವಿಸಲರಿಯದೆ ಆಚಾರ್ಯರೆಂಬ ಅನಾಚಾರ್ಯರ ಮೆಚ್ಚುವನೇ ನಮ್ಮ ಅಪ್ರಮಾಣ ಕೂಡಲ ಸಂಗಮದೇವಾ ?

೩೯

(೨) ಈ ಷಡ್ವಿಧದಿಂದವೇ ಅನೇಕಾನೇಕ ವೇದಂಗಳೆಸಗಿತ್ತು ಈ ಷಡ್ವಿಧ ದಿಂದವೇ ಅನೇಕ ಶಾಸ್ತ್ರಂಗಳೆಸಗಿತ್ತು ಈ ಷಡ್ವಿಧದಿಂದವೇ ಅನೇಕ ಪೌರಾಣಂ

೧–೧ ಅನುಷ್ಣ (ಮೂ)

ಗಳೆಸಗಿತ್ತು ಈ ಷಡ್ವಿಧದಿಂದವೇ ಅನೇಕಾಗಮಂಗಳೆಸಗಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಮಂತ್ರಾಧ್ವ :

೪೦

(೧) ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಹೃದಯಮಂತ್ರ ಉತ್ಪತ್ತಿ ಆ ವರ್ಣದ ದರ್ಪಣಾಕಾರ ದಲ್ಲಿ ಶಿರೋಮಂತ್ರ ಉತ್ಪತ್ತಿ ಆ ಪ್ರಣವದ ಅರ್ಧಚಂದ್ರಕದಲ್ಲಿ ಶಿಖಾಮಂತ್ರ ಉತ್ಪತ್ತಿ ಆ ಪ್ರಣವದ ಕುಂಡಲಾಕಾರದಲ್ಲಿ ಕವಚಮಂತ್ರ ಉತ್ಪತ್ತಿ ಆ ಪ್ರಣವದ ದಂಡ ಸ್ವರೂಪದಲ್ಲಿ ನೇತ್ರಮಂತ್ರ ಉತ್ಪತ್ತಿ ಆ ಪ್ರಣವದ ತಾರಕಸ್ವರೂಪದಲ್ಲಿ ಅಸ್ತ್ರಮಂತ್ರ ಉತ್ಪತ್ತಿ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೪೧

(೨) ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನಮುಖ ಉತ್ಪತ್ತಿ ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷಮುಖ ಉತ್ಪತ್ತಿ ಆ ಪ್ರಣವದ ಕುಂಡ ಲಾಕಾರದಲ್ಲಿ ಅಘೋರಮುಖ ಉತ್ಪತ್ತಿ ಆ ಪ್ರಣವದ ದಂಡಸ್ವರೂಪದಲ್ಲಿ ವಾಮದೇವ ವಕ್ತ್ರ ಉತ್ಪತ್ತಿ ಆ ಪ್ರಣವದ ತಾರಕಸ್ವರೂಪದಲ್ಲಿ ಸದ್ಯೋಜಾತ ವಕ್ತ್ರ ಉತ್ಪತ್ತಿ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೪೨

(೩) ಈಶಾನವಕ್ತ್ರದಲ್ಲಿ ಈಶಾನಮಂತ್ರ ಉತ್ಪತ್ತಿ ತತ್ಪುರುಷವಕ್ತ್ರದಲ್ಲಿ ತತ್ಪುರುಷಮಂತ್ರ ಉತ್ಪತ್ತಿ ಅಘೋರವಕ್ತ್ರದಲ್ಲಿ ಅಘೋರಮಂತ್ರ ಉತ್ಪತ್ತಿ ವಾಮದೇವವಕ್ತ್ರದಲ್ಲಿ ವಾಮದೇವಮಂತ್ರ ಉತ್ಪತ್ತಿ ಸದ್ಯೋಜಾತವಕ್ತ್ರದಲ್ಲಿ ಸದ್ಯೋಜಾತಮಂತ್ರ ಉತ್ಪತ್ತಿ ಈ ಹನ್ನೊಂದು ಮಂತ್ರವು ಸಪ್ತಕೋಟಿ ಮಹಾ ಮಂತ್ರಂಗಳ ಸಾರುವಂಥಾದ್ದು ಇವು ಮಂತ್ರಾಧ್ವ ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಪದಾಧ್ವ :

೪೩

(೧) ಅನೇಕ ಕೋಟಿ ಸೂರ್ಯ ಚಂದ್ರಾಗ್ನಿಮಯವಾಗಿಹ ಮಹಾಜ್ಯೋತಿ ರ್ಮಯಲಿಂಗದಲ್ಲಿ ತೊಂಬತ್ತುನಾಲ್ಕು ವ್ಯೋಮವ್ಯಾಪಿ ಪದಂಗಳುತ್ಪತ್ತಿ ಆ ತೊಂಬತ್ತುನಾಲ್ಕು ವ್ಯೋಮವ್ಯಾಪಿ ಪದಂಗಳ ವಿವರವೆಂತೆಂದೊಡೆ: ''ವ್ಯೋಮವ್ಯಾಪಿನೆ, ವ್ಯೋಮರೂಪಾಯ, ಸರ್ವವ್ಯಾಪಿನೆ ಶಿವಾಯ; ಈಶಾನ ಮೂರ್ಧ್ನಾಯ, ತತ್ಪುರುಷ ವಕ್ತ್ರಾಯ, ಅಘೋರ ಹೃದಯಾಯ, ವಾಮದೇವ ಗುಹ್ಯಾಯ, ಸದ್ಯೋಜಾತ ಮಂತ್ರಯೇ ಓಂ ನಮೋ ನಮಃ ; ಗುಹ್ಯಾತೀತ

ಗುಹ್ಯಾಯ, ಗೋಪ್ಯ ಅಭಿಧಾನಾಯ, ಸರ್ವಯೋಗಾದಿವ್ರತಾಯ, ಜ್ಯೋತಿ ರೂಪಾಯ, ಪರಮೇಶ್ವರಪರಾಯ, ಚೇತನ, ಅಚೇತನ, ವ್ಯೋಮಿನ್; ವ್ಯಾಪಿನೆ ಅರೂಪಿಣೆ, ನಿರೂಪಿಣೆ, ಪ್ರಥಮ, ಪ್ರಥಮತೇಜ ಸ್ಥಿತೇಜ, ಜ್ಯೋತಿ ಜ್ಯೋತಿ ಅನುರೂಪ ಅನಿಲನ ಅಧೂಮ; ಅಭಸ್ಮ ಅನಾದೆ, ಧನಾದೆ, ನಾ, ನಾ, ನಾ, ಧೂ, ಧೂ, ಓಂ, ಭೂಃ, ಓಂ ಭುವಃ, ಓಂ ಸ್ವಾಹಾ, ಅನಿಧನ, ನಿಧನೋದ್ಭವ, ಶಿವ, ಶರ್ವ; ಪರಮಾತ್ಮನ್, ಮಹೇಶ್ವರ, ಮಹಾತೇಜ, ಯೋಗಾಧಿಪತೆ, ಮುಂಚ ಮುಂಚ, ಪ್ರಥಮ ಪ್ರಥಮ, ಶರ್ವ ಶರ್ವ, ಭವ ಭವ, ಭವೋದ್ಭವ, ಸರ್ವಭೂತ, ಸುಖಪ್ರದ, ಸರ್ವಸಾನ್ನಿಧ್ಯ, ಕರ, ಬ್ರಹ್ಮ ವಿಷ್ಣು ರುದ್ರ, ಪರ, ಅರ್ಚಿತಾರ್ಚಿತ, ಅಸ್ತುತಾಸ್ತುತ, ಪೂರ್ವಸ್ಥಿತ, ಸಾಕ್ಷಿ, ತರು ತರು, ಪತಂಗ ಪತಂಗ, ಪಿಂಗ ಪಿಂಗ, ಜ್ಞಾನ ಜ್ಞಾನ, ಶಬ್ದ ಶಬ್ದ ಸೂಕ್ಷ್ಮ ಸೂಕ್ಷ್ಮ, ಶಿವ, ಶರ್ವ ಶರ್ವ, ಓಂ ನಮಃ ಶಿವಾಯ. ಓಂ ನಮಃ ಶಿವಾಯ, ನಮೋ ನಮಃ, ಓಂ'' ಅಂತು ತೊಂಬತ್ತು ನಾಲ್ಕು ವ್ಯೋಮವ್ಯಾಪಿ ಪದಂಗಳು. ಇವು ಪದಾಧ್ವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ವರ್ಣಾಧ್ವ :

೪೪

(೧) ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕಾಕೃತಿಯಲ್ಲಿಹ ನಕಾರದಲ್ಲಿ ನಕಾರ ಉತ್ಪತ್ತಿ ಆ ಪ್ರಣವದ ದಂಡಕಾಕೃತಿ ಯಲ್ಲಿಹ ಮಕಾರದಲ್ಲಿ ಮಕಾರ ಉತ್ಪತ್ತಿ ಆ ಪ್ರಣವದ ಕುಂಡಲಾಕೃತಿಯಲ್ಲಿಹ ಶಿಕಾರದಲ್ಲಿ ಶಿಕಾರ ಉತ್ಪತ್ತಿ ಆ ಪ್ರಣವದ ಅರ್ಧಚಂದ್ರಾಕೃತಿಯಲ್ಲಿಹ ವಕಾರದಲ್ಲಿ ವಕಾರ ಉತ್ಪತ್ತಿ ಆ ಪ್ರಣವದ ದರ್ಪಣಾಕೃತಿಯಲ್ಲಿಹ ಯಕಾರದಲ್ಲಿ ಯಕಾರ ಉತ್ಪತ್ತಿ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

೪೫

(೨) ಆ ಪ್ರಣವದ ಜ್ಯೋತಿಸ್ತಂಭಾಕೃತಿಯಲ್ಲಿಹ ಜೀವಾತ್ಮ ಪರಮಾತ್ಮನಲ್ಲಿ ಹಂ ಕ್ಷಂ, ಹಂ ಳಂ, ಎಂಬ ಚತುರಾಕ್ಷರಂಗಳುತ್ಪತ್ತಿ ಆ ಯಕಾರದಲ್ಲಿ ಉತ್ಪತ್ಯವಾದ ಯಕಾರ ಬೀಜದಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ಷೋಡಶಾಕ್ಷರ ಉತ್ಪತ್ತಿ ಆ ವಕಾರದಲ್ಲಿ ಉತ್ಪತ್ಯವಾದ ವಕಾರ ಬೀಜ ದಲ್ಲಿ ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಎಂಬ ದ್ವಾದಶಾಕ್ಷರ ಉತ್ಪತ್ತಿ ಆ ಶಿಕಾರದಲ್ಲಿ ಉತ್ಪತ್ಯ ವಾದ ಶಿಕಾರ ಬೀಜದಲ್ಲಿ ಡ ಢ ಣ, ತ ಥ ದ ಧ ನ, ಪ ಫ ಎಂಬ ದಶಾಕ್ಷರ ಉತ್ಪತ್ತಿ ಆ ಮಕಾರದಲ್ಲಿ ಉತ್ಪತ್ಯವಾದ ಆ ಮಕಾರ ಬೀಜದಲ್ಲಿ ಬ ಭ ಮ, ಯ ರ ಲ ಎಂಬ ಷಡಕ್ಷರ ಉತ್ಪತ್ತಿ ಆ ನಕಾರದಲ್ಲಿ ಉತ್ಪತ್ಯವಾದ ಆ ನಕಾರ ಬೀಜದಲ್ಲಿ ವ, ಶ ಷ ಸ ಎಂಬ ನಾಲ್ಕು ಅಕ್ಷರ ಉತ್ಪತ್ತಿ ಈ ಐವತ್ತೆರಡು ಅಕ್ಷರವು ವರ್ಣಾಧ್ವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಭುವನಾಧ್ವ:

೪೭

(೧) ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ಜ್ಯೋತಿ ಸ್ವರೂಪದಲ್ಲಿಹ ಜೀವಾತ್ಮ ಪರಮಾತ್ಮನಲ್ಲಿ ಜೀವಹಂಸ ಪರಮಹಂಸನುತ್ಪತ್ತಿ ಆ ಜೀವಹಂಸ ಪರಮಹಂಸನ ದೆಸೆಯಿಂದ ಇನ್ನೂರಇಪ್ಪತ್ನಾಲು ಭುವನಂಗಳು, ವಿವರವೆಂತೆಂದೊಡೆ: ಅನಾಶ್ರಿತ, ಅನಾದ, ಅನಂತ, ವ್ಯೋಮರೂಪ, ವ್ಯಾಪಿನಿ, ಊರ್ಧ್ವಗಾಮಿನಿ, ಮೋಚಿಕಾ, ರೋಚಿಕಾ, ದೀಪಿಕೋದಿಕಾ, ಶಾಂತ್ಯಾತೀತೆ, ಶಾಂತಿ, ವಿದ್ಯೆ, ಪ್ರತಿಷ್ಠೆ, ನಿವೃತ್ತಿ, ಸದಾಶಿವ, ಅಚಿಂತ್ಯ; ಸೂಕ್ಷ್ಮ ವಾಮದೇವ, ಸತ್ಯಾನಂದ, ಸರ್ವೇಶ್ವರ, ಶಿವೋತ್ತಮ, ನಿತ್ಯಾನಂದ, ಏಕನೇತ್ರ, ಸದಾನಂದ, ಏಕರುದ್ರ, ನಿಜಾನಂದ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿ, ವಾಮಜ್ಯೇಷ್ಠ, ರೌದ್ರಿ, ಕಲವಿಕರಿಣಿ, ಕಾಳಿ, ಬಲವಿಕರಿಣಿ, ಸರ್ವಭೂತದಮನಿ, ಬಲ ಪ್ರಮದಿನಿ, ಮನೋನ್ಮನಿ, ಅಂಗುಷ್ಠಮಾತ್ರಭುವನಿ, ಮಹಾಭುವನ, ಏಕಿಶಾನ; ಏಕ, ಪಿಂಗಳೇಕ್ಷಣ, ಉದ್ಭವ, ಭವ, ವಾಮದೇವ, ಮಹಾದೇವ, ಶಿಭೇದ, ಏಕವೀರ, ಪಂಚಾಂತಕ, ಶೂರ, ಸಂವರ್ತನ, ಜ್ಯೋತಿ, ಚಂಡ, ಕ್ರೋಧಿ, ಅನಂತ, ಏಕನೇತ್ರಕ, ಭವ್ಯ, ಮಂಗಳ, ಅಜ, ಉಮಾಪತಿ, ಏಕಧೀರ, ಪ್ರಚಂಡ, ಈಶಾನ, ಉಗ್ರ, ಭೀಮ, ಭೌಮ, ಕಾಮಾರಿ, ವೈಷ್ಣವ, ಬ್ರಾಹ್ಮಣ, ವೈಭವ, ಧೃತ, ಅಕೃತ, ಯಾಮ್ಯ, ಪ್ರಜೇಶ, ಸೌಮ್ಯ, ಇಂದ್ರ, ಗಾಂಧರ್ವ, ಯಕ್ಷ, ರಾಕ್ಷಸ, ಪೈಶಾಚಿಕ; ಸ್ಥಲೇಶ್ವರ, ಸ್ಥೂಲೇಶ್ವರ, ಶಂಕುಕರ್ಣ, ಕಾಳಾಂಜಿನ, ಮಂಡಲೇಶ್ವರ, ಮಾಕೋಟ, ದ್ವಿರದ, ಭಗ, ಬಂಧ, ಸ್ಥಾಣು, ಸ್ಪರ್ಣಾಕ್ಷ, ಭದ್ರಕರ್ಣ, ಮಹಾಲಯ, ಅವಿಮುಕ್ತ ರುದ್ರಕೋಟಿ, ವಸ್ತ್ರಪಾದ, ಭೀಮೇಶ್ವರ, ಮಹೇಂದ್ರ, ಅಟ್ಟಹಾಸ, ವಿಮಲೇಶ್ವರ, ನಖಲ, ನಾಖಲ, ಕುರುಕ್ಷೇತ್ರ, ಭೈರವ, ಕೈದಶ, ಮಹಾಬಲ, ಮಧ್ಯಮೇಶ್ವರ, ಮಹೇಂದ್ರಕೇಶ್ವರ, ಜಲಭೇಶ್ವರ, ಶ್ರೀಶೈಲ, ಹರಿಶ್ಚಂದ್ರ, ಅಕುಲಿಶ, ಗ್ರಸನ, ಮುಂಡಿ, ಚಾರಭೂತಿ, ಆಷಾಢಿ, ಪೌಷ್ಕರ, ನೈಮಿಷ, ಪ್ರಭಾಸ, ಅಮರೇಶ್ವರ, ಭದ್ರಕಾಳ, ವೀರಭದ್ರ, ತ್ರಿಲೋಚನ, ವಿಷ್ಣು ಭವ, ವಿವಾಹ, ತ್ರಿದಶೇಶ್ವರ, ತ್ರ್ಯಕ್ಷ, ಗಣ; ದ್ರಕ್ಷ, ವಿಭು, ಶಂಭು, ದೌಷ್ಟ್ರಿ, ವಜ್ರಿ, ಫಣೇಶ, ಉದುಂಬರೀಶ, ಗ್ರಸನ, ಮಾರುತಾಸನ, ಕ್ರತುವರ್ಧನ, ಆನಂದ, ವೃಷಧರ, ಬಲಿಪ್ರಿಯ, ಭೂತಪಾಲ, ಜ್ಯೇಷ್ಠ ಸರ್ವ, ಸುರೇಶಾನ, ವೇದಪಾರಗ, ಜ್ಞಾನಭೂತ, ಸರ್ವಜ್ಞ, ಈಶ, ಸರ್ವವಿದ್ಯಾಧಿಪ, ಪ್ರಕಾಮದ, ಪ್ರಸೀದಡನ, ಶ್ರೀಧರ, ಲಕ್ಷ್ಮೀಧರ, ಜಟಾಧರ, ಸೌಮ್ಯದೇಹ, ಧನ್ಯರೂಪ, ನಿಧೀಶ, ಮೇಘವಾಹನ, ಕಪರ್ದಿ, ಪಂಚಶಿಖಿ, ಪ್ರಪಂಚಾಂತಕ, ಕ್ಷಯಾಂತಕ, ತಿಕ್ಷ್ಣು, ಸುಸೂಕ್ಷ್ಮ ವಾಯುವೇಗ, ಲಘು, ಶೀಘ್ರ, ಸುನಾದ, ಮೇಘನಾದ, ಜ್ವಲಾಂತಕ, ದೀರ್ಘಬಾಹು, ಜಯ, ಭದ್ರ, ಶ್ವೇತ, ಮಹಾಬಲ,

ಪಾಶಹಸ್ತ, ಅತಿಬಲ, ಮಹಾಬಲ, ವಾರುಣೇಶ, ದೌಷ್ಟ್ರವ, ಲೋಹಿತ, ಧೂಮ್ರ, ವಿರೂಪಾಕ್ಷ, ಊರ್ಧ್ವಶೇಷ, ಉಭಯಾನಖ, ಕ್ಷರದೃಷ್ಟ, ಹಂತ, ಮಾರಣ, ನಿರುತಿ, ಧರ್ಮ, ಧರ್ಮಪರೀಣ, ನಿಯೋಕ್ತೃ; ಕರ್ತೃ, ಹರ, ಮೃತ್ಯು, ಯಾಮ್ಯ, ಕ್ಷಯಾಂತಕ, ಭಸ್ಮಾಂತಕ, ಬಭ್ರು, ದಹನ, ಜ್ವಲನ, ಹರಿ, ಹರಿ ಖಾದಕ, ಪಿಂಗ ಹುತಾಶನ, ಜಯರುದ್ರ, ತ್ರಿದಶಾಧಿಪ, ಪಿನಾಕಿ, ಶಾಸ್ತ್ರ, ಅವ್ಯಯ, ವಿಭೂತಿ, ಪ್ರಮರ್ದನ, ವಜ್ರದೇಹ, ಬುಧ, ಅಜಕಪಾಲಿ, ಈಶ್ವರ, ರುದ್ರ, ವಿಷ್ಣು ಬ್ರಹ್ಮ ಹಾಟಕ, ಕೂಷ್ಮಾಂಡಕ, ಕಾಲಾಗ್ನಿರುದ್ರ, ಪ್ರಳಯಕಾಲ, ಮಹಾರುದ್ರ ಅಂತು ಇನ್ನೂರಾ ಇಪ್ಪತ್ತುನಾಲ್ಕು ಭುವನಂಗಳು ಭುವನಾಧ್ವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ತತ್ವಾಧ್ವ :

೪೮

(೧) ಪರಶಿವತತ್ವ ತಾನೇ ತನ್ನ ಲೀಲಾವಿನೋದಕ್ಕೆ ನಿಃಕಲತತ್ವವಾಯಿತ್ತು ಆ ನಿಃಕಲತತ್ವದಲ್ಲಿ ದಶತತ್ವ ಉತ್ಪತ್ಯವೆಂತೆಂದೊಡೆ: ಪರಶಿವ, ಪರಾಶಕ್ತಿ ಸದಾಶಿವ, ಈಶ್ವರ, ಶುದ್ಧವಿದ್ಯೆ, ಮಾಯೆ, ಕಾಲ, ನಿಯತಿ, ಕಲೆ, ವಿದ್ಯೆ, ರಾಗ, ಈ ದಶ ತತ್ವಂಗಳು ನಿಃಕಲತತ್ವದಲ್ಲಿ ಉತ್ಪತ್ಯವಾಯಿತ್ತು ಇನ್ನು ಸಕಲತತ್ವದಲ್ಲಿ ಇಪ್ಪತ್ತುನಾಲ್ಕುತತ್ವ ಉತ್ಪತ್ಯವಾಯಿತ್ತೆಂದೊಡೆ: ಗುಣತ್ರಯ, ಬುದ್ಧಿ ಅಹಂಕಾರ, ಚಿತ್ತ, ಮನ; ಶ್ರೋತ್ರ, ತ್ವಕ್ಕು, ಚಕ್ಷು, ಜಿಹ್ವೆ, ಘ್ರಾಣ, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯ, ಶಬ್ದ ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ತೇಜ, ಅಪ್ಪು, ಪೃಥ್ವಿ, ಇಪ್ಪತ್ತುನಾಲ್ಕು ತತ್ವಂಗಳು ಸಕಲತತ್ತ್ವದಲ್ಲಿ ಉತ್ಪತ್ಯವಾಯಿತ್ತು ಆ ಸಕಲ ನಿಃಕಲತತ್ವ ಮೊದಲಾಗಿ ರಾಗ ಪೃಥ್ವಿತತ್ವ ಕಡೆಯಾಗಿ ಈ ಮೂವತ್ತಾರು ತತ್ವವು ತತ್ವಾಧ್ವ ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಕಲಾಧ್ವ :

೪೯

(೧) ಅಖಂಡ ಜ್ಯೋತಿರ್ಮಯಮಾಗಿಹ ಗೋಳಕಾಕಾರ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಪ್ರತಿಷ್ಠೆ, ಶಾಂತ್ಯಾತೀತೋತ್ತರ ಕಲೆಯುತ್ಪತ್ತಿ ಆ ಪ್ರಣವದ ದರ್ಪಣಾಕಾರದಲ್ಲಿ ಶಾಂತ್ಯಾತೀತ ಕಲೆಯುತ್ಪತ್ತಿ ಆ ಪ್ರಣವದ ಅರ್ಧ ಚಂದ್ರಕದಲ್ಲಿ ಶಾಂತಿಕಲೆಯುತ್ಪತ್ತಿ ಆ ಪ್ರಣವದ ಕುಂಡಲಾಕಾರದಲ್ಲಿ ವಿದ್ಯಾಕಲೆಯುತ್ಪತ್ತಿ ಆ ಪ್ರಣವದ ದಂಡಸ್ವರೂಪದಲ್ಲಿ ಪ್ರತಿಷ್ಠಾಕಲೆಯುತ್ಪತ್ತಿ ಆ ಪ್ರಣವದ ತಾರಕಸ್ವರೂಪದಲ್ಲಿ ನಿವೃತ್ತಿಕಲೆಯುತ್ಪತ್ತಿ ಅಂತು ಷಷ್ಠ ಕಲಾನಾಮಂಗಳು ಕಲಾಧ್ವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಷಡಧ್ವವರ್ತನೆ

೪೯

(೧) ಆಧಾರಚಕ್ರದ ಚತುರ್ದಳಪದ್ಮದ ಮಧ್ಯದಲ್ಲಿಹ ಮಂತ್ರ ಸದ್ಯೋಜಾತ ಮಂತ್ರ. ಅಲ್ಲಿಹ ಪದಗಳು 'ವ್ಯೋಮವ್ಯಾಪಿನೆ, ವ್ಯೋಮರೂಪಾಯ, ಸರ್ವ ವ್ಯಾಪಿನೆ, ಶಿವಾಯ'ವೆಂಬ ನಾಲ್ಕುಪದ. ಅಲ್ಲಿಹ ವರ್ಣ ವ, ಶ, ಷ, ಸ ಎಂಬ ನಾಲ್ಕು ವರ್ಣ. ಅಲ್ಲಿಹ ಭುವನ ಅನಾಶ್ರಿತ, ಅನಾದ, ಅನಂತ, ವ್ಯೋಮರೂಪ, ವ್ಯಾಪಿನಿ, ಊರ್ಧ್ವಗಾಮಿನಿ, ಮೋಚಿಕಾ, ರೋಚಿಕಾ, ದೀಪಿಕೋದಿಕಾ, ಶಾಂತ್ಯಾತೀತೆ, ಶಾಂತಿ, ವಿದ್ಯೆ, ಪ್ರತಿಷ್ಠೆ, ನಿವೃತ್ತಿ, ಸದಾಶಿವ, ಅಂಚಿತ್ಯವೆಂಬ ಹದಿನಾರು ಭುವನ. ಅಲ್ಲಿಹ ತತ್ವ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚತತ್ವ. ಅಲ್ಲಿಹ ಕಲೆ ನಿವೃತ್ತಿಕಲೆ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೫೦

(೨) ಅಲ್ಲಿಂದ ಮೇಲೆ ಸ್ವಾಧಿಷ್ಠಾನಚಕ್ರದ ಷಡುದಳಪದ್ಮದ ಮಧ್ಯದಲ್ಲಿಹ ಮಂತ್ರ ವಾಮದೇವ ಮಂತ್ರ. ಅಲ್ಲಿಹ ಪದ 'ಈಶಾನ ಮೂರ್ಧ್ನಾಯ, ತತ್ಪುರುಷ ವಕ್ತ್ರಾಯ, ಅಘೋರ ಹೃದಯಾಯ, ವಾಮದೇವ ಗುಹ್ಯಾಯ, ಸದ್ಯೋಜಾತ ಮೂರ್ತಯೇ ಓಂ ನಮೋ ನಮಃ' ಎಂಬ ಆರು ಪದ. ಅಲ್ಲಿಹ ವರ್ಣ ಬ ಭ ಮ ಯ ರ ಲ ಎಂಬ ಆರುವರ್ಣ. ಅಲ್ಲಿಹ ಭುವನ ಸೂಕ್ಷ್ಮ, ವಾಮದೇವ, ಸತ್ಯಾನಂದ, ಸರ್ವೇಶ್ವರ, ಶಿವೋತ್ತಮ, ನಿತ್ಯಾನಂದ, ಏಕನೇತ್ರ, ಸದಾನಂದ, ಏಕರುದ್ರ, ನಿಜಾನಂದ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿ, ವಾಮಜ್ಯೇಷ್ಠ, ರೌದ್ರಿ, ಕಲವಿಕರಿಣಿ, ಕಾಳಿ, ಬಲವಿಕರಿಣಿ, ಸರ್ವಭೂತದಮನಿ, ಬಲಪ್ರಮದಿನಿ, ಮನೋನ್ಮನಿ, ಅಂಗುಷ್ಠಮಾತ್ರ ಭುವನಿ, ಮಹಾಭುವನ, ಏಕಿಶಾನ ಎಂಬ ಇಪ್ಪತ್ತುನಾಲ್ಕು ಭುವನ. ಅಲ್ಲಿಹ ತತ್ವ ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ಪಂಚತತ್ವ. ಅಲ್ಲಿಹ ಕಲೆ ಪ್ರತಿಷ್ಠೆ ಕಲೆ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೫೧

(೩) ಅಲ್ಲಿಂದ ಮೇಲೆ ಮಣಿಪೂರಕ ಚಕ್ರದ ದಶದಳಪದ್ಮ, ಆ ಪದ್ಮದ ಮಧ್ಯದಲ್ಲಿಹ ಮಂತ್ರ ಅಘೋರಮಂತ್ರ. ಅಲ್ಲಿಹ ಪದ 'ಗುಹ್ಯಾತೀತ ಗುಹ್ಯಾಯ, ಗೌಪ್ಯ ಅಭಿಧಾನಾಯ, ಸರ್ವಯೋಗಾದಿ ವ್ರತಾಯ, ಜ್ಯೋತಿರೂಪಾಯ, ಪರಮೇಶ್ವರ ಪರಾಯ, ಚೇತನ, ಅಚೇತನ, ವ್ಯೋಮಿನ್' ಎಂಬ ಎಂಟು ಪದ. ಅಲ್ಲಿಹ ವರ್ಣ ಡ, ಢ, ಣ, ತ, ಥ, ದ , ಧ, ನ, ಪ, ಫ ಎಂಬ ಹತ್ತುವರ್ಣ. ಅಲ್ಲಿಹ ಭುವನ ಏಕ, ಪಿಂಗಳೇಕ್ಷಣ, ಉದ್ಭವ, ಭವ, ವಾಮದೇವ, ಮಹಾದೇವ, ಶಿಭೇದ, ಏಕವೀರ, ಪಂಚಾಂತಕ, ಶೂರ, ಸಂವರ್ತನ, ಜ್ಯೋತಿ, ಚಂಡ, ಕ್ರೋಧಿ, ಅನಂತ, ಏಕನೇತ್ರಕ, ಭವ್ಯ, ಮಂಗಳ, ಅಜ, ಉಮಾಪತಿ, ಏಕಧೀರ, ಪ್ರಚಂಡ, ಈಶಾನ,

ಉಗ್ರ, ಭೀಮ, ಭೌಮ, ಕಾಮಾರಿ, ವೈಷ್ಣವ, ಬ್ರಾಹ್ಮಣ, ರೈಭವ, ಕೃತ, ಶಾಕೃತ, ಯಾಮ್ಯ, ಪ್ರಜೇಶ, ಸೌಮ್ಯ, ಇಂದ್ರ, ಗಾಂಧರ್ವ, ಯಕ್ಷ, ರಾಕ್ಷಸ, ಪೈಶಾಚಿಕ ಎಂಬ ನಾಲ್ವತ್ತು ಭುವನ ; ಅಲ್ಲಿಯ ತತ್ವ ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯ ಎಂಬ ಪಂಚತತ್ವ ; ಅಲ್ಲಿಹ ಕಲೆ ವಿದ್ಯಾಕಲೆ ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

೫೨

(೪) ಅಲ್ಲಿಂದ ಮೇಲೆ ಅನಾಹತಚಕ್ರದ ದ್ವಾದಶದಳಪದ್ಮ ಆ ಪದ್ಮದ ಮಧ್ಯದಲ್ಲಿಹ ಮಂತ್ರ ತತ್ಪುರುಷ ಮಂತ್ರ, ಅಲ್ಲಿಹ ಪದ 'ವ್ಯಾಪಿನೆ, ರೂಪಿಣೆ, ಅರೂಪಿಣೆ, ಪ್ರಥಮ, ಪ್ರಥಮ, ತೇಜಸ್ತೇಜ, ಜ್ಯೋತಿರ್ಜ್ಯೋತಿ, ಅರೂಪ, ಅನಿಲಿನ, ಅಧೂಮ'ವೆಂಬ ಹನ್ನೆರಡು ಪದ. ಅಲ್ಲಿಹ ವರ್ಣ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ ಎಂಬ ಹನ್ನೆರಡು ವರ್ಣ ಅಲ್ಲಿಹ ಭುವನ ಸ್ಥಲೇಶ್ವರ, ಸ್ಥೂಲೇಶ್ವರ, ಶಂಕುಕರ್ಣ, ಕಾಳಾಂಜನ, ಮಂಡಲೇಶ್ವರ, ಮಾಕೋಟಿ, ದ್ವಿರದ, ಭಗ, ಬಂಧ, ಸ್ಥಾಣು, ಸ್ವರ್ಣಾಕ್ಷ, ಭದ್ರಕರ್ಣ, ಮಹಾಲಯ, ಅವಿಮುಕ್ತ ರುದ್ರಕೋಟಿ, ವಸ್ತ್ರಪಾದ, ಭೀಮೇಶ್ವರ, ಮಹೇಂದ್ರ, ಅಟ್ಟಹಾಸ, ವಿಮಲೇಶ್ವರ, ನಖಲ, ನಾಖಲ, ಕುರುಕ್ಷೇತ್ರ, ಭೈರವ, ಕೈದಶ, ಮಹಾಬಲ, ಮಧ್ಯಮೇಶ್ವರ, ಮಹೇಂದ್ರಕೇಶ್ವರ, ಜಲಭೇಶ್ವರ, ಶ್ರೀಶೈಲ, ಹರಿಶ್ಚಂದ್ರ, ಅಕುಲಿಶ, ಗ್ರಸನ, ಮುಂಡಿ, ಚಾರಭೂತಿ, ಆಷಾಢಿ, ಪೌಷ್ಕರ, ನೈಮಿಷ, ಪ್ರಭಾಸ, ಅಮರೇಶ್ವರ, ಭದ್ರಕಾಳ, ವೀರಭದ್ರ, ತ್ರಿಲೋಚನ, ವಿಷ್ಣು, ಭವ, ವಿವಾಹ, ತ್ರಿದಶೇಶ್ವರ, ತ್ರ್ಯಕ್ಷ, ಗಣ ಎಂಬ ನಾಲ್ವತ್ತೆಂಟು ಭುವನ. ಅಲ್ಲಿಹ ತತ್ವ ಶ್ರೋತ್ರ, ತ್ವಕ್ಕು, ಚಕ್ಷು, ಜಿಹ್ವಾ, ಘ್ರಾಣವೆಂಬ ಪಂಚತತ್ವ. ಅಲ್ಲಿಹ ಕಲೆ ಶಾಂತಿಕಲೆ ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೫೩

(೫) ಅಲ್ಲಿಂದ ಮೇಲೆ ವಿಶುದ್ಧಿಚಕ್ರ ಶೋಡಶದಳಪದ್ಮ ಆ ಪದ್ಮದ ಮಧ್ಯದಲ್ಲಿಹ ಮಂತ್ರ ಈಶಾನಮಂತ್ರ. ಅಲ್ಲಿಹ ಪದ 'ಅಭಸ್ಮ ಅನಾದೆ, ಧನಾದೆ, ನಾ, ನಾ, ನಾ, ಧೂ, ಧೂ, ಓಂ ಭೂಃ ಓಂ ಭವಃ, ಓಂ ಸ್ವಾಹಾ, ಅನಿಧನ, ನಿದನೋದ್ಭವ, ಶಿವ, ಶರ್ವ' ಎಂಬ ಹದಿನಾರು ಪದ. ಅಲ್ಲಿಹ ವರ್ಣ. ಅ, ಆ, ಇ, ಈ, ಉ, ಊ, ಋ, ೠ, ಌ ೡ ಏ ಐ ಓ,ಔ ಅಂ, ಅಃ ಎಂಬ ಹದಿನಾರು ವರ್ಣ. ಅಲ್ಲಿಹ ಭುವನ ದ್ರಕ್ಷ, ವಿಭು, ಶಂಭು, ದೌಷ್ಟ್ರಿ, ವಜ್ರ, ಫಣೀಶ, ಉದುಂಬರೀಶ, ಗ್ರಸನ, ಮಾರುತಾಶನ, ಕ್ರತುವರ್ಧನ, ಆನಂದ, ವೃಷಧರ, ಬಲಿಪ್ರಿಯ, ಭೂತಪಾಲ, ಜ್ಯೇಷ್ಠ, ಸರ್ವ, ಸುರೇಶಾನ, ವೇದಪಾರಗ, ಜ್ಞಾನಭೂತ, ಸರ್ವಜ್ಞ, ಈಶಾನ, ಸರ್ವವಿದ್ಯಾಧಿಪ, ಪ್ರಕಾಮದ, ಪ್ರಸೀದಡನ, ಶ್ರೀಧರ, ಲಕ್ಷ್ಮೀಧರ, ಜಟಾಧರ, ಸೌಮ್ಯದೇಹ, ಧನ್ಯರೂಪ, ನಿಧೀಶ, ಮೇಘವಾಹನ,

ಕಪರ್ದಿ, ಪಂಚಶಿಖಿ, ಪ್ರಪಂಚಾಂತಕ, ಕ್ಷಯಾಂತಕ, ತಿಕ್ಷು, ಸುಸೂಕ್ಷ್ಮ ವಾಯು ವೇಗ, ಲಘು, ಶೀಘ್ರ, ಸುನಾದ, ಮೇಘನಾದ, ಜ್ವಲಾಂತಕ, ದೀರ್ಘಬಾಹು, ಜಯ, ಭದ್ರ, ಶ್ವೇತ, ಮಹಾಬಲ, ಪಾಶಹಸ್ತ ಅತಿಬಲ, ಮಹಾಬಲ, ವಾರುಣೇಶ, ದೌಷ್ಟ್ರವ, ಲೋಹಿತ, ಧೂಮ್ರ, ವಿರೂಪಾಕ್ಷ, ಊರ್ಧ್ವಶೇಷ, ಉಭಯಾನಖ, ಕ್ಷರದೃಷ್ಟ, ಹಂತ, ಮಾರಣ, ನಿರುತಿ, ಧರ್ಮ, ಧರ್ಮಪರೀಣ, ನಿಯೋಕ್ತೃ ಎಂಬ ಅರವತ್ತುನಾಲ್ಕು ಭುವನ. ಅಲ್ಲಿಹ ತತ್ವ ಗುಣತ್ರಯ, ಬುದ್ಧಿ, ಅಹಂಕಾರ, ಚೇತನ, ಸಕಲವೆಂಬ ಪಂಚತತ್ವ. ಅಲ್ಲಿಹ ಕಲೆ ಶಾಂತ್ಯಾತೀತಕಲೆ ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೫೪

(೬) ಅಲ್ಲಿಂದ ಮೇಲೆ ಆಜ್ಞಾಚಕ್ರದ ದ್ವಿದಳಪದ್ಮ ಆ ಪದ್ಮದ ಮಧ್ಯದಲ್ಲಿಹ ಮಂತ್ರ– ಹೃದಯ, ಶಿರ, ಶಿಖಿ, ಕವಚ, ನೇತ್ರ, ಅಸ್ತ್ರವೆಂಬ ಆರು ಮಂತ್ರ , ಅಲ್ಲಿಹ ಪದ–ಪರಮಾತ್ಮನ್, ಮಹೇಶ್ವರ, ಮಹಾತೇಜ, ಯೋಗಾಧಿಪತೆ, ಮುಂಚ ಮುಂಚ, ಪ್ರಥಮ ಪ್ರಥಮ, ಶರ್ವ ಶರ್ವ, ಭವ, ಭವೋದ್ಭವ, ಸರ್ವಭೂತ, ಸುಖಪ್ರದ, ಸರ್ವ, ಸಾನ್ನಿಧ್ಯ, ಕರ, ಬ್ರಹ್ಮ ವಿಷ್ಣು ರುದ್ರ, ಪರ, ಅರ್ಚಿತಾರ್ಚಿತ, ಅಸುತ್ತಾಸುತ್ತ, ಪೂರ್ವಸ್ಥಿತ, ಸಾಕ್ಷಿ, ತರುತರು, ಪತಂಗ ಪತಂಗ, ಪಿಂಗ ಪಿಂಗ, ಜ್ಞಾನ ಜ್ಞಾನ, ಶಬ್ದ ಶಬ್ದ ಸೂಕ್ಷ್ಮ ಸೂಕ್ಷ್ಮ ಶಿವ, ಶರ್ವ ಶರ್ವ, ಓಂ ನಮಃ ಶಿವಾಯ, ಓಂ ನಮಃ ಶಿವಾಯ, ನಮೋ ನಮಃ ಓಂ ಎಂಬ ನಾಲ್ವತ್ತುಪದ. ಅಲ್ಲಿಹ ವರ್ಣ– ಹಂ ಳಂ, ಹಂ ಕ್ಷಂ ಎಂಬ ನಾಲ್ಕು ವರ್ಣ. ಅಲ್ಲಿಹ ಭುವನ–ಕರ್ತೃ, ಹರ, ಮೃತ್ಯು, ಯಾಮ್ಯ, ಕ್ಷಯಾಂತಕ, [ಭಸ್ಮಾಂತಕ, ಬಭ್ರು, ದಹನ, ಜ್ವಲನ, ಹರಿ, ಹರಿಖಾದಕ], ಪಿಂಗ, ಹುತಾಶನ, ಜಯರುದ್ರ, ತ್ರಿದಶಾಧಿಪ, ಪಿನಾಕಿ, ಶಾಸ್ತ್ರ, ಅವ್ಯಯ, ವಿಭೂತಿ, ಪ್ರಮರ್ದನ, ವಜ್ರದೇಹ, ಬುಧ, ಅಜಕಪಾಲಿ, ಈಶ್ವರ, ರುದ್ರ, ವಿಷ್ಣು, ಬ್ರಹ್ಮ ಹಾಟಕ, ಕೂಷ್ಮಾಂಡಕ, ಕಾಲಾಗ್ನಿರುದ್ರ, ಪ್ರಳಯಕಾಲ, ಮಹಾರುದ್ರನೆಂಬ ಮೂವತ್ತೆರಡು ಭುವನ. ಅಲ್ಲಿಹ ತತ್ವ ಪರಶಿವ, ಪರಾಶಕ್ತಿ ಸದಾಶಿವ, ಈಶ್ವರ, ಶುದ್ಧವಿದ್ಯೆ, ಮಾಯೆ, ಕಾಲ, ನಿಯತಿ, ಕಲೆ, ವಿದ್ಯೆ, ರಾಗವೆಂಬ ಹನ್ನೊಂದು ತತ್ವ. ಅಲ್ಲಿಹ ಕಲೆ–ಶಾಂತ್ಯಾತೀತೋತ್ತರಕಲೆ ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

ಮೂವತ್ತಾರು ತತ್ವಗಳು

೫೫

(೧) ಆತ್ಮತತ್ವ ಇಪ್ಪತ್ತೈದು. ವಿದ್ಯಾತತ್ವ ಹತ್ತು ಶಿವತತ್ವ ಒಂದು. ಅದೆಂತೆಂದೊಡೆ : [೧]ಪ್ರಾಣಾದಿ[೧], ಪಂಚಕಂಗಳೈದು. ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು,

೧–೧ ಭೂತಾದಿ (ಮೂ)

ಶಬ್ದಾದಿ ವಿಷಯಂಗಳೈದು, ವಾಗಾದಿ ಕರ್ಮೇಂದ್ರಿಯಂಗಳೈದು, ಮನವಾದಿ ಪಂಚಕಂಗಳೈದು, ಆತ್ಮತತ್ವ ಇಪ್ಪತ್ತೈದು, ಕರ್ಮಸಾದಾಖ್ಯ, ಕರ್ತೃಸಾದಾಖ್ಯ, ಮೂರ್ತಿ ಸಾದಾಖ್ಯ, ಅಮೂರ್ತಿಸಾದಾಖ್ಯ, ಶಿವಸಾದಾಖ್ಯ, ನಿವೃತ್ತಿಕಲೆ, ಪ್ರತಿಷ್ಠಾಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯಾತೀತಕಲೆ ಇಂತು ವಿದ್ಯಾತತ್ವ ಹತ್ತು ಶಿವತತ್ವ ಒಂದು. ಇಂತು ಮೂವತ್ತಾರು ತತ್ವಂಗಳೊಡನೆ ಶಿವತತ್ವವೇ ತತ್‌ಪದ, ಆತ್ಮ ತತ್ವವೇ ತ್ವಂಪದ, ವಿದ್ಯಾತತ್ವವೇ ಅಸಿಪದ. ಅಕಾರದಲ್ಲಿ ತತ್ಪದ ಐಕ್ಯವಾಯಿತ್ತು ಉಕಾರದಲ್ಲಿ ತ್ವಂಪದ ಐಕ್ಯವಾಯಿತ್ತು ಮಕಾರದಲ್ಲಿ ಅಸಿಪದ ಐಕ್ಯವಾಯಿತ್ತು ಮಕಾರ ಅಕಾರ ಉಕಾರ ಏಕಾರ್ಥವಾಗಿ ಷಟ್‌ಸ್ಥಲಬ್ರಹ್ಮವೆಂಬ ಮಹಾ ಜ್ಯೋತಿರ್ಮಯಲಿಂಗವಾಯಿತ್ತು ಆ ಷಟ್‌ಸ್ಥಲಬ್ರಹ್ಮವೆಂಬ ಮಹಾಜ್ಯೋತಿರ್ಮಯ ಲಿಂಗದಲ್ಲಿ ತ್ವಂಪದ, ಅಸಿಪದವೇ ನಿಕ್ಷೇಪಮಾಗಿಹುದು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

(೨) ಆತ್ಮತತ್ವ ಇಪ್ಪತ್ತೈದು; ತೂರ್ಯತತ್ವ, ವಿದ್ಯಾತತ್ವ ಹತ್ತು; ಭಾವತತ್ವ ಶಿವತತ್ವ ಒಂದು, ಮೂವತ್ತಾರಾದವು. ಈ ಪ್ರಕಾರದಿಂದವೇ ತತ್ ಶಿವತತ್ವ ಒಂದು, ತ್ವಂ ಆತ್ಮತತ್ವ ಇಪ್ಪತ್ತೈದು, ಅಸಿಯ ಭಾವವು ವಿದ್ಯಾತತ್ವ ಹತ್ತು, ಭಕ್ತಿ ಸ್ವರೂಪು. ಓಂಕಾರ ಪ್ರಣವದಿಂದೆ ಬಿಟ್ಟಂಥ ಅಕ್ಷರತ್ರಯಂಗಳು ಅ ಉ ಮಾಕ್ಷರತ್ರಯಂಗಳು ಇಷ್ಟಲಿಂಗದ ತ್ರಿವಿಧ ಸ್ಥಾನದಲ್ಲಿ ವಿಧಾಯವಾಗಿರ್ಪವು. ಅದು ಹೇಗೆಂದಡೆ : ಅನಂತ ತತ್ವ ಭುವನ ಬ್ರಹ್ಮಾಂಡಾದಿಗಳೆಲ್ಲವನು ತೂರ್ಯತತ್ವ ಒಳಕೊಂಡಿರ್ಪುದು. ಆ ತತ್ವಂಗಳನೇ ೩೬ ತತ್ವಂಗಳೊಳಕೊಂಡಿರ್ಪವು. ಆ ೩೬ ತತ್ವಂಗಳನೇ ಪದ ತ್ರಯಂಗಳೊಳಕೊಂಡಿರ್ಪವು. ಆ ಪದತ್ರಯಂಗಳನೇ ಅ ಉ ಮಾಕ್ಷರ ತ್ರಯಂಗಳೊಳಕೊಂಡಿರ್ಪವು. ಆ ಅ ಉ ಮಾಕ್ಷರತ್ರಯಂಗಳೇ ಈ ಇಷ್ಟಲಿಂಗದಲ್ಲಿ ತ್ರಿವಿಧಸ್ಥಾನದಲ್ಲಿ ವಿಧಾಯವಾದ ಅಕ್ಷರವು ದೃಕ್ಕಿನಲ್ಲಿ ತೋರುತ್ತಿರ್ಪುದು. ಅಕಾರವೇ ಶಿವತತ್ವಸ್ವರೂಪವಾಗಿ, ಉಕಾರವೇ ಆತ್ಮತತ್ವ ಇಪ್ಪತ್ತೈದರ ಸ್ವರೂಪವಾಗಿ, ಮಕಾರವೇ ವಿದ್ಯಾತತ್ವ ೧೦ರ ಸ್ವರೂಪವಾಗಿ, ತೂರ್ಯತತ್ವಸ್ವರೂಪವಾಗಿ, ಭಾವತತ್ವಸ್ವರೂಪವಾಗಿ, ತತ್‌ಪದಸ್ವರೂಪವಾಗಿ, ತ್ವಂಪದಸ್ವರೂಪವಾಗಿ, ಅಸಿಪದಸ್ವರೂಪವಾಗಿ, ಅ ಉ ಮಾಕ್ಷರತ್ರಯಸ್ವರೂಪವಾಗಿ, ಬಸವಾಕ್ಷರತ್ರಯ ಸ್ವರೂಪವಾಗಿ, ಅಂಗತ್ರಯಸ್ವರೂಪವಾಗಿ, ಲಿಂಗತ್ರಯಸ್ವರೂಪ ವಾಗಿ, ಭಕ್ತಿತ್ರಯ ಸ್ವರೂಪವಾಗಿ, ಗುರುತ್ರಯಸ್ವರೂಪವಾಗಿ, ಲಿಂಗತ್ರಯ ಸ್ವರೂಪವಾಗಿ, ಜಂಗಮತ್ರಯಸ್ವರೂಪವಾಗಿ, ಪ್ರಸಾದತ್ರಯಸ್ವರೂಪವಾಗಿ, ಪಾದೋದಕತ್ರಯ ಸ್ವರೂಪವಾಗಿ, ವಿಭೂತಿತ್ರಯಸ್ವರೂಪವಾಗಿ, ರುದ್ರಾಕ್ಷತ್ರಯಸ್ವರೂಪವಾಗಿ, ಕ್ರಿಯಾಜ್ಞಾನಭಾವಾಚರಣೆಸ್ವರೂಪವಾಗಿ, ಮಾರ್ಗಕ್ರಿಯಾ ತ್ರಿವಿಧಸ್ವರೂಪವಾಗಿ, ಮೀರಿದ ಕ್ರಿಯಾತ್ರಿವಿಧಸ್ವರೂಪವಾಗಿ, ಸರ್ವಾಚಾರ ಸಂಪತ್ತಿನಾಚರಣೆಸ್ವರೂಪ ವಾಗಿ, ದೃಕ್ಕಿನಲ್ಲಿ ತೋರುತ್ತಿರ್ಪುದು. ಈ ಪ್ರಕಾರದಲ್ಲಿ ಎಲ್ಲಕ್ಕೂ ತಾನಾಶ್ರಯಮಾಗಿ ನಿರುಪಮಲಿಂಗವೇದ್ಯ ಶರಣನಲ್ಲಿ ಉಪಮಿಸಬಾರದ ಮಹಾಲಿಂಗದಲ್ಲಿ ಕೂಡಿದಂಥ

ಶಿವಶರಣನಲ್ಲಿ ಪರಿಪೂರ್ಣತ್ವವನೈದಿದ ಮಹಾಘನಲಿಂಗವು ತನಗಾಶ್ರಯರಹಿತ ಮಾಗಿ ಎಲ್ಲ ತತ್ವಂಗಳಿಗೆ ತಾನೇ ಆಶ್ರಯವಾಗಿ, ತನ್ನಲ್ಲಿ ಗರ್ಭೀಕೃತವಾಗಿರ್ದ ತತ್ವ ನಿರ್ಣಯವೆಂತೆಂದೊಡೆ, ತತ್ವ ಮೂರುತೆರನಾಗಿಹುದು. ಅದಕ್ಕೆ ವಿವರ –ಆತ್ಮತತ್ವ, ವಿದ್ಯಾತತ್ವ, ಶಿವತತ್ವ. ಅಂತು ತತ್ವ ಮೂರುತೆರನು. ಅಲ್ಲಿ ಆತ್ಮ ತತ್ವ ಇಪ್ಪತ್ತೈದು ತೆರನು. ಅವಕ್ಕೆ ವಿವರ –ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬ ಸ್ಥೂಲ ಭೌತಿಕ ಐದು, ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು, ವಾಗಾದಿ ಕರ್ಮೇಂದ್ರಿ ಯಂಗಳೈದು, ಪ್ರಾಣಾದಿ ವಾಯುಗಳೈದು, ಅಂತಃಕರಣಚತುಷ್ಟಯಂಗಳು ನಾಲ್ಕು, ಜೀವನೊಂದು, ಅಂತು ಆತ್ಮ ತತ್ವ ೨೫ ತೆರನು, ಯಜಮಾನತತ್ವವು ಪಂಚವಿಂಶತಿ ಪ್ರಕಾರವು.

ಇನ್ನು ಇಷ್ಟರ ಮೇಲೆ ವಿದ್ಯಾತತ್ವ ೧೦ ತೆರನು. ತೂರ್ಯತತ್ವವು ದಶವಿಧ ಪ್ರಕಾರವು. ಅವಕ್ಕೆ ವಿವರ– ಶಾಂತ್ಯಾತೀತೆ, ಶಾಂತ್ಯಾತೀತಕಲಾ ಪರ್ಯಾಯವನುಳ್ಳ ಪರಾಶಕ್ತಿ ಶಾಂತಿ, ಶಾಂತಿಕಲಾಪರ್ಯಾಯವನುಳ್ಳ ಆದಿಶಕ್ತಿ, ವಿದ್ಯಾ, ವಿದ್ಯಾ ಕಲಾಪರ್ಯಾಯವನುಳ್ಳ ಇಚ್ಛಾಶಕ್ತಿ, ಪ್ರತಿಷ್ಠೆ, ಪ್ರತಿಷ್ಠಾ ಕಲಾಪರ್ಯಾಯವನುಳ್ಳ ಜ್ಞಾನಶಕ್ತಿ, ನಿವೃತ್ತಿ ನಿವೃತ್ತಿ ಕಲಾಪರ್ಯಾಯವನುಳ್ಳ ಕ್ರಿಯಾಶಕ್ತಿ ಈ ಐದು ಈ ಪಂಚವಿಧವು.

ಶಿವಸಾದಾಖ್ಯ, ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗ, ಅಮೂರ್ತಿ ಸಾದಾಖ್ಯ, ಅಮೂರ್ತಿಸಾದಾಖ್ಯಸ್ವರೂಪವಾದ ಜಂಗಮಲಿಂಗವು, ಮೂರ್ತಿ ಸಾದಾಖ್ಯ, ಮೂರ್ತಿಸಾದಾಖ್ಯಸ್ವರೂಪಮಾದ ಶಿವಲಿಂಗವು, ಕರ್ತೃಸಾದಾಖ್ಯ, ಕರ್ತೃಸಾದಾಖ್ಯ ಸ್ವರೂಪಮಾದ ಗುರುಲಿಂಗವು, ಕರ್ಮಸಾದಾಖ್ಯ, ಕರ್ಮಸಾದಾಖ್ಯ ಸ್ವರೂಪಮಾದ ಆಚಾರಲಿಂಗವು ಎಂದು ಹೇಳಿಸುವ ಸಾದಾಖ್ಯಲಿಂಗಗಳು ಪಂಚಕವು. ಅಂತು ಅದಾಗಿ ವಿದ್ಯಾತತ್ವ ೧೦ ತೆರನು, ತೂರ್ಯತತ್ವವು ದಶವಿಧ ಪ್ರಕಾರವು. ಅಂತು ದ್ವಿತೀಯ ತತ್ವ ೩೫. ಇಂತಿವೆಲ್ಲವಕ್ಕೆಯೂ ಉತ್ತರತತ್ವವಾಗಿ ೨೫ ತತ್ವಂಗಳಿಗೆ ಆಶ್ರಯವಾಗಿರುತಿಹ ಶಿವತತ್ವ ೧. ನಿಃಕಲ ಪರಶಿವತತ್ವವು ಏಕವು. ಅಂತು ತತ್ವ ೩೬ ತೆರನು. ಆತ್ಮತತ್ವ ೨೫. ವಿದ್ಯಾತತ್ವ ೧೦, ಶಿವತತ್ವ ೧. ಈ ಪ್ರಕಾರವೇ ತತ್ವಮಸ್ಯಾದಿ ವಾಕ್ಯಾರ್ಥವು ಕಾಣಲಾಯಿತ್ತು ಅದು ಹೇಗೆಂದಡೆ : ತತ್ಪದವೆಂದು, ತ್ವಂಪದವೆಂದು, ಅಸಿಪದವೆಂದು, ಅಂಗಲಿಂಗ ಸಮವೆಂದು, ಜ್ಞಾತೃ, ಜ್ಞಾನ, ಜ್ಞೇಯವೆಂದು, ಜೀವ ಪರಮರೈಕ್ಯವೆಂದು, ಮನ ಮನನ ಮನನೀಯ ವೆಂದು, ದ್ವೈತಾದ್ವೈತ ಯೋಗಮಾರ್ಗವೆಂದು ಮೂರು ತೆರನು. ಆ ಪದತ್ರಯದಲ್ಲಿ ತತ್ಪದವೆಂಬುದರರ್ಥವೇನಯ್ಯಾ ಎಂದೊಡೆ : ಭಾವನಾಮ ಒಂದಾಗಿರ್ದ ಶಿವ ತತ್ವವು. ತ್ವಂ ಪದವೆಂಬುದರರ್ಥವೇನಯ್ಯ ಎಂದರೆ : ಶಿವತತ್ವವೆಂಬಭಿಧಾನ ದೊಡನೆ ಏಕವಾಗಿರ್ದ ೨೫ ತೆರನಾಗುತ್ತಲಿರ್ದ ಆತ್ಮತತ್ವವು. ಅಸಿಪದವೆಂಬು ದರರ್ಥವೇನಯ್ಯ ಎಂದರೆ : ತೂರ್ಯನಾಮ ಒಂದಾಗಿರ್ದ ಶಿವತತ್ವಜ್ಞಾನವೆಂಬ

ಭಿಧಾನದೊಡನೆ ಏಕಮಾಗಿರ್ದ ೧೦ ತೆರನಾಗುತ್ತಿರ್ದ ವಿದ್ಯಾತತ್ವವು. ಈ ಪದತ್ರಯದ ಏಕಾರ್ಥವು.

ಆ ಶಿವತತ್ವದಲ್ಲಿ ತೋರಿದಾತ್ಮತತ್ವವು ೨೫. ಆ ಶಿವತತ್ವದ ಪ್ರಕಾಶವು ವಿದ್ಯಾತತ್ವದ ಬಲದಿಂದ ಆ ಶಿವಪದ ತಾನೆಯಾಯಿತ್ತಾಗಿ ಆ ನಿಃಕಲ ಪರಶಿವಪದವು ಸ್ವಯವೆಯಾಯಿತ್ತಾಗಿ ಅದಕ್ಕೆ ಸಾಕ್ಷಿಯಹ ವಿದ್ಯೆ ಎಂಬ ಶಿವಪದದ ಘನದೃಕ್ಕು ಅನಿಮಿಷ ನಿರೀಕ್ಷಣೆಯಾದಲ್ಲಿ ತೋರುತ್ತಿಹುದೆಂದು ಶಿವತತ್ವದಿಂದಾದ ಆತ್ಮತತ್ವ ೨೫. ಆ ಶಿವತತ್ವದ ಪ್ರಕಾಶದಿಂದಾದ ವಿದ್ಯಾತತ್ವ ೧೦, ಅದರ ಬಲದಿಂದೆ ಚಿತ್ತೇ ಅಂಗ, ಚಿದ್ಘನಲಿಂಗವೇ ಪ್ರಾಣವಾಗಿ ಕಾಣಿಸುತ್ತಿಹುದೆಂದು ಚನ್ನಬಸವೇಶ್ವರ ದೇವರು ನಿರೂಪಮಂ ಕೊಡುತ್ತಲಿದ್ದರು.

ಮೂವತ್ತಾರು ತತ್ವಗಳು ಪರಸ್ಪರ ಅಡಗುವ ರೀತಿ

೫೬

(೧) ಪ್ರಥಮದಲ್ಲಿ ವಸ್ತು ಏನೇನೂ ಇಲ್ಲದಂದು ಮಹಾಘನ ಶೂನ್ಯಬ್ರಹ್ಮ ವಾಗಿದ್ದಡೂ ಅಂತಿರ್ದ ಪರವಸ್ತು ತಾನೇ ತನ್ನ ದಿವ್ಯಾನಂದ ಸ್ವಲೀಲಾಭಾವ ದಿಂದಾದುದು ಆತ್ಮತತ್ವವೆಂಬ ಅಂಗಸ್ಥಲ. ಅಂತಪ್ಪ ಜೀವಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ ತತ್ವಂಗಳಿಪ್ಪತ್ತೈದು. ಅವಾವೆಂದೊಡೆ : ಶ್ರೋತ್ರಾದಿ ಜ್ಞಾನೇಂದ್ರಿಯಂ ಗಳೈದು, ವಾಗಾದಿ ಕರ್ಮೇಂದ್ರಿಯಂಗಳೈದು, ಶಬ್ದಾದಿ ವಿಷಯಂಗಳೈದು, ಪ್ರಾಣಾದಿ ವಾಯುಗಳೈದು, ಮನ ಬುದ್ಧಿ ಚಿತ್ತಹಂಕಾರ ಜೀವಂಗಳೈದು ತನ್ನೊಳಗೆ ಸಮರಸೈಕ್ಯವನೈದಲೋಸ್ಕರ ಭಕ್ತಿ ತದರ್ಥವಾಗಿ ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ಹನ್ನೊಂದು ತತ್ವವಾಯಿತ್ತು. ಹನ್ನೊಂದು ತತ್ವವಾದ ಪರಿಕ್ರಮವೆಂ ತೆಂದೊಡೆ : ಶಾಂತ್ಯಾದಿ ಶಕ್ತಿಗಳೈದು, ಶಿವಾದಿ ಕರ್ತೃಗಳೈದು, ಪರಶಿವತತ್ವ ಒಂದು. ಇಂತೀ ಅಂಗತತ್ವ ಇಪ್ಪತ್ತೈದು, ಲಿಂಗತತ್ವ ಹನ್ನೊಂದು, ಅಂಗತತ್ವ ಲಿಂಗತತ್ವವೆಂಬ ಉಭಯತತ್ವ ಮೂವತ್ತಾರು. ಇಂತಿವರ ಸಾಮರಸ್ಯದ ಐಕ್ಯವೆಂತುಟಯ್ಯಾ ಎಂದೊಡೆ: ನಿವೃತ್ತಿಶಕ್ತಿಯನೈದಿ ವಾಗಾದಿ ಕರ್ಮೇಂದ್ರಿಯಗಳೈದು ಕರ್ಮಸಾದಾಖ್ಯ ವನೊಡಗೂಡಿದಲ್ಲಿ ಪೃಥ್ವಿತತ್ವ ಬಯಲಾಯಿತ್ತು. ಪ್ರತಿಷ್ಠಾಶಕ್ತಿಯನೈದಿ ಶಬ್ದ ವಿಷಯಂಗಳೈದು ಕರ್ತೃಸಾದಾಖ್ಯವನೊಡಗೂಡಿದಲ್ಲಿ ಅಪ್ಪುತತ್ವ ಬಯಲಾಯಿತ್ತು. ವಿದ್ಯಾಶಕ್ತಿಯನೈದಿ ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು ಮೂರ್ತಿಸಾದಾಖ್ಯವ ನೊಡಗೂಡಿದಲ್ಲಿ ತೇಜತತ್ವ ಬಯಲಾಯಿತ್ತು. ಶಾಂತಿ ಶಕ್ತಿಯನೈದಿ ಪ್ರಾಣಾದಿ ವಾಯುಗಳೈದು ಅಮೂರ್ತಿಸಾದಾಖ್ಯವನೊಡಗೂಡಿದಲ್ಲಿ ವಾಯುತತ್ವ ಬಯಲಾ ಯಿತ್ತು. ಶಾಂತ್ಯಾತೀತಶಕ್ತಿಯನೈದಿ ಮನ ಬುದ್ಧಿ ಚಿತ್ತಹಂಕಾರ ಜೀವಂ ಗಳೈದು ಶಿವಸಾದಾಖ್ಯವನೊಡಗೂಡಿದಲ್ಲಿ ಆಕಾಶತತ್ವ ಬಯಲಾಯಿತ್ತು. ಇಂತೀ ಪಂಚ ವಿಂಶತಿತತ್ವಂಗಳು ಲಿಂಗೈಕ್ಯವಾಗಲೊಡನೆ, ಆ ಲಿಂಗತತ್ವ ಹನ್ನೊಂದು ತಾವು ಒಂದೊಂದನೊಡಗೂಡಿ ಏಕಾರ್ಥವಾದಲ್ಲಿ ಕುಳಸ್ಥಳವಡಗಿತು. ಇಂತೀ ಕುಳ

ಸ್ಥಳವಡಗಲೊಡನೆ, ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ವಾರಿಕಲ್ಲು ಕರಗಿ ನೀರಾದಂತೆ ತನ್ನ ಪರಮಾನಂದದಿಂದವೇ ಸರ್ವಶೂನ್ಯವಾಯಿತ್ತು. ಅದೆಂತೆಂದೊಡೆ : ಶ್ರುತಿ– ''ಅನಾದಿಸಿದ್ಧ ಸಂಸ್ಕಾರಂ ಕರ್ತೃ ಕರ್ಮವಿವರ್ಜಿತಂ । ಸ್ವಯಮೇವ ಭವೇದ್ದೇಹೀ ತ್ವಯಮೇವಂ ವಿಲೀಯತೆ ॥ ಅಂತಃಶೂನ್ಯಂ ಬಹಿಃಶೂನ್ಯಂ ಶೂನ್ಯಂ ಶೂನ್ಯಂ ದಶದಿಶಂ । ಸರ್ವಶೂನ್ಯ ನಿರಾಲಂಬಂ । ನಿರ್ದ್ವಂದ್ವಂ ಪರಮಂ ಪದಂ ॥'' ಎಂದುದಾಗಿ, ಇಂತೀ ಅಂಗತತ್ವ ಇಪ್ಪತ್ತೈದು, ಲಿಂಗತತ್ವ ಹನ್ನೊಂದು, ಇಂತೀ ಉಭಯತತ್ವ ಮೂವತ್ತಾರು ವಿಕಾರ್ಥವಾಗಿ ಸರ್ವ ಶೂನ್ಯವನೈದಿ[ದ] ಪರಿಕ್ರಮದ ನಿರ್ಣಯದ ಬೆಡಗು ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿ ಕಾಣಲಾಯಿತ್ತು. ಅದೆಂತೆಂದೊಡೆ: ''ತತ್ಪದೇನೋಚ್ಯತೆ ಲಿಂಗಂ । ತ್ವಂಪದೇನಾಂಗ ಮೀರಿತಂ ।ಉಭಯೋರೈಕ್ಯಭಾವೇನ । ದೋಸಿಪದಂ ಖಲು ॥'' ಎಂದುದಾಗಿ ತತ್ ಪದವೇ ಲಿಂಗ, ತ್ವಂ ಪದವೇ ಅಂಗ, ಈ ಎರಡರ ಐಕ್ಯವೇ ಅಸಿಪದ ಎಂದುದಾಗಿ, ಇಂತು ಸಕಲವಾಗಬಲ್ಲ, ನಿಃಕಲವಾಗಬಲ್ಲ, ಸಕಲನಿಃಕಲಾತೀತನಾಗಿ ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವಾಗಿರಬಲ್ಲನಯ್ಯಾ ನಮ್ಮ ಗುಹೇಶ್ವರಲಿಂಗವು.

ಜಗದುತ್ಪತ್ತಿಯ ಸಾಮಾನ್ಯ ವಚನಗಳು

೧ ನೆಯ ವಚನ :

(೧) ಜಗದುತ್ಪತ್ತಿಗೆ ಮೂಲಕಾರಣನಾಗಿರುವವನೇ ಸದಾಶಿವಮೂರ್ತಿಯು. ಅದು ಹೇಗೆಂದೊಡೆ : ಮೊದಲು ನಿಃಕಲಬ್ರಹ್ಮವು. ಆ ನಿಃಕಲಬ್ರಹ್ಮದಿಂದ ಜ್ಞಾನಚಿತ್ತು. ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿಕ್ಕಳೆಗಳು ಪುಟ್ಟಿದವು. ಆ ಚಿನ್ನಾದ, ಚಿದ್ಬಿಂದು, ಚಿತ್ಕಳೆ, ಮೂಲಚಿತ್ತೆಂಬ ಚತುರ್ವಿಧವು ಗಟ್ಟಿಗೊಂಡು ಅಖಂಡಗೋಳ ಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತು. ಆ ಮಹಾಲಿಂಗದಿಂದ ಒಂದಾ ನೊಂದು ಬೀಜದಲ್ಲಿ ವೃಕ್ಷೋತ್ಪತ್ತಿಯಾದ ಹಾಗೆ ಪಂಚಮುಖವನುಳ್ಳ ಸದಾಶಿವ ಮೂರ್ತಿಯಾದನು.

ಆ ಸದಾಶಿವನ ಸದ್ಯೋಜಾತಾದೀಶಾನಾಂತ್ಯಮಾದೈದು ವದನಂಗಳಿಂದ ಪುಟ್ಟಿದ ಪೃಥ್ವ್ಯಾದಿ ಐದು ತತ್ವಂಗಳೇಕೀಕರಿಸಿ ಚರಾಚರ ಪ್ರಾಣಿಗಳ ಸಮೂಹವನುಳ್ಳ ವಿಶ್ವೋತ್ಪತ್ತಿಯಾದ ಕಾರಣ ಜಗದುತ್ಪತ್ತಿಗೆ ಮೂಲ ಕಾರಣವಾಗಿರುವಂಥಾದ್ದೇ ಸದಾಶಿವಮೂರ್ತಿಯು.

ಸದಾಶಿವನ ಸದ್ಯೋಜಾತಮುಖದಲ್ಲಿ ಪುಟ್ಟಿದ ಪೃಥ್ವಿ, ವಾಮದೇವ ಮುಖದಲ್ಲಿ ಪುಟ್ಟಿದ ಅಪ್ಪು, ಅಘೋರಮುಖದಲ್ಲಿ ಪುಟ್ಟಿದ ಅಗ್ನಿಯು, ತತ್ಪುರುಷ ಮುಖದಲ್ಲಿ ಪುಟ್ಟಿದ ವಾಯು, ಈಶಾನಮುಖದಲ್ಲಿ ಪುಟ್ಟಿದ ಆಕಾಶವು, ನಯನ ಮಧ್ಯದಲ್ಲಿ ಪುಟ್ಟಿದ ಸೂರ್ಯನು, ಮನೋಮಧ್ಯದಲ್ಲಿ ಪುಟ್ಟಿದ ಚಂದ್ರನು, ಗೋಪ್ಯ

ಮುಖದಲ್ಲಿ ಪುಟ್ಟಿದಾತ್ಮನು– ಈ ಅಷ್ಟತನುಗಳೊಳಗೆ ಪಂಚಭೂತಯುಕ್ತವಾದುದೇ ಬ್ರಹ್ಮಾಂಡವು.

ಆ ಬ್ರಹ್ಮಾಂಡದೊಳಗೆ ಹಗಲು ನಾಲ್ಕು ಜಾವದಲ್ಲಿ ಆದಿತ್ಯನು ಬೆಳಗುತಿಹನು. ಇರುಳು ನಾಲ್ಕು ಜಾವದಲ್ಲಿ ಶಶಿಯು ಬೆಳಗುತಿಹನು. ಆತ್ಮನಾಯಿತ್ತಾದೊಡೆ ಆ ಬ್ರಹ್ಮಾಂಡದೊಳಗಿರುವ ಸಮಸ್ತ ಚರಾಚರ ಪ್ರಾಣಿಗಳಿಗೆ ಚೈತನ್ಯಸ್ವರೂಪನಾಗಿರುವನು.

ಸದಾಶಿವನ ಅಂಶಗಳಾದ ಅಷ್ಟತನುಗಳು ಪೃಥ್ವಿ ಸರ್ವಾಧಾರಮಯವಾದ ಧರಣೀತತ್ವವು, ಅಪ್ಪು ಸರ್ವಪಾನ್ಯ ಪ್ರಕ್ಷಾಳನರೂಪವಾದ ಉದಕತತ್ವವು, ಅಗ್ನಿ ಸರ್ವ ದಾಹಕ ಪಚನರೂಪವಾದ ಧನಂಜಯತತ್ವವು, ವಾಯು ಸರ್ವ ಚಾಂಚಲ್ಯ ಮಯವಾದ ಸಮೀರತತ್ವವು, ಆಕಾಶ ಸರ್ವಾಕಾಶಪ್ರದಮಾದ ಅಂಬರತತ್ವವು, ಸೂರ್ಯನು ದಿವಾಪತಿಯಾದ ಆದಿತ್ಯನು, ಚಂದ್ರ ನಿಶಾಪತಿಯಾದ ಶಶಿಯು, ಆತ್ಮ ಸರ್ವ ಚೈತನ್ಯಸ್ವರೂಪವಾದಾತ್ಮನು ಎನಿಸಿಕೊಂಬ ಇವು ತಾವೇ ಸದಾಶಿವನ ಎಂಟಂಗವೇ ಜಗತ್ತಾಗಿಹವು. ಚತುರ್ದಶಭುವನ ಚರಾಚರ ಪ್ರಾಣಿಗಳ ಸಮೂಹವನುಳ್ಳ ವಿಶ್ವಸ್ವರೂಪವಾಗಿರುತಿಹವು.

ಅವಾವೆಂದೊಡೆ : ಚತುರ್ದಶಭುವನಂಗಳು, ಸಪ್ತಸಮುದ್ರಂಗಳು, ಸಪ್ತ ದ್ವೀಪಂಗಳು, ಸಪ್ತಕುಲಪರ್ವತಂಗಳು, ನವಗ್ರಹಗಳು, ಹನ್ನೆರಡುರಾಶಿಗಳು, ಇಪ್ಪತ್ತೇಳು ನಕ್ಷತ್ರಗಳೇ ಆದಿಯಾದ ಅರುವತ್ತಾರುಕೋಟಿ ನಕ್ಷತ್ರಂಗಳು ಆಕಾಶ ಮಂಡಲವನ್ನು ಗರ್ಭೀಕರಿಸಿಕೊಂಡು ಬ್ರಹ್ಮಾಂಡವೆನಿಸಿತ್ತು. ಅಜಾಂಡವೆಂದು ಹೇಳಿಸಿ ಕೊಂಡಿತ್ತು. ಬ್ರಹ್ಮವೇ ನಿರ್ಮಾಣ ಮಾಡಿದ ಕಾರಣದಿಂದ ಬ್ರಹ್ಮಾಂಡವೆಂದು ಹೇಳಿಸಿಕೊಂಡಿತ್ತು. ಮತ್ತಂತುಮಲ್ಲದೆ ಪರಬ್ರಹ್ಮದಪ್ಪಣೆಯಿಂದ ಅಜನೇ ಪಡೆದು ರಚನೆಯಮಾಡಿದ ಕಾರಣದಿಂದಲೂ ಇದಕ್ಕಜಾಂಡವೆಂಬ ನಾಮವು ಪ್ರಸಿದ್ಧವಾಯಿತ್ತು. ಇದು ತಾನೇ ಜಗದುತ್ಪತ್ತಿಯ ಭೇದ.

೨ ನೆಯ ವಚನ

(೨) ಉಡುತಡಿ ಎಂಬ ಪಟ್ಟಣದಲ್ಲಿ ನಿರ್ಮಲ ಸುಮತಿಯರೆಂಬ ಶಿವಭಕ್ತರ ಗರ್ಭದಲ್ಲಿ ಪುಟ್ಟಿ, ತನಗೆ ಮನವಿಟ್ಟು ಭವಿಯಾದ ಕೌಶಿಕರಾಜನಂ ತ್ಯಜಿಸಿ ವೈರಾಗ್ಯದಿಂದ ನಿರ್ವಾಣ ಗುಣಶೀಲೆಯರಾಗಿ ಕಲ್ಯಾಣ ಪಟ್ಟಣಕ್ಕೆ ಬಂದು, ಅಲ್ಲಿ ಬಸವಾದಿ ಪ್ರಮಥ ಗಣಂಗಳ ದರ್ಶನವಂ ಮಾಡಿ ಅಲ್ಲಿಂದ ಶ್ರೀಶೈಲಕ್ಕೆ ಪೋಗಿ ಚನ್ನಮಲ್ಲಿಕಾರ್ಜುನ ಲಿಂಗದ ಕರುಣವಂ ಪಡೆದು ಅಲ್ಲಿಂದಲ್ಲಮಪ್ರಭುಸ್ವಾಮಿಗಳೆಂಬ ಕದಳಿಯಲ್ಲಿ ನಿರ್ವಯಲಾಗಿ ಕೈಲಾಸಕ್ಕೆ ಪೋದ ಮಹಾದೇವಿಯಕ್ಕಗಳೆಂಬ ಚಿಚ್ಛಕ್ತಿಯರು ಷಟ್ಸ್ಥಲ ಪರಿಕ್ರಮವಿಡಿದು ಉಪದೇಶಿಸಿದೂರ್ಧ್ವಸೃಷ್ಟ್ಯಧೋಸೃಷ್ಟಿಗಳ ಕ್ರಮವನ್ನು ಹೇಳುವ ವಚನವು ಮತ್ತಂತುಮಲ್ಲದೆ ಅಂಗಲಿಂಗೋದ್ಭವಂಗಳ ಸ್ವರೂಪವನ್ನು ಹೇಳುವ ವಾಕ್ಯಾನುಭವವು.

ಆದಿ ಎಂದರೆ ಶಕ್ತಿತತ್ವ. ಅನಾದಿ ಎಂದರೆ ಶಿವತತ್ವ. ಆ ಅಂಶಿಕನಾದಾತ್ಮನೇ ಶಾಶ್ವತನಾದಾತ್ಮನು. ಆ ಶಕ್ಯಂಶಮಾದ ದೇಹವೇ ಅಶಾಶ್ವತವಾದುದು ಎಂಬ ನಿಲುಕಡೆಯನ್ನು ತಿಳಿಯಲರಿಯದೆ ಪರಬ್ರಹ್ಮವೆಂದು ನುಡಿವಾತ್ಮಂಗೆ ತನುವಿಲ್ಲ ಕರಣವಿಲ್ಲ. ಇಂದ್ರಿಯ ವಿಷಯಂಗಳ ವ್ಯಾಪಾರಂಗಳಿಲ್ಲ. ಆತ್ಮನೇ ಸಾಕ್ಷಾತ್ಕಾರ ಬ್ರಹ್ಮ ವೆಂದು ಗಳಪುವ ವಾಯುಪ್ರಾಣಿಗಳವರು ತಮಗಿಲ್ಲವೆಂದು ತನುಕರಣೇಂದ್ರಿಯ ವಿಷಯ ಪ್ರಪಂಚಿನಲ್ಲಿ ನುಸುಳಿ ಚರಿಸುವ ಮಿಥ್ಯಾ ಜೀವರುಗಳು ತಾವು ಅಪ್ರಸಿದ್ಧ ವಾದ ಪರಬ್ರಹ್ಮದ ಸಕಲತತ್ವಂಗಳಿಗುಪರಿಯಾಗಿ ತೋರುವ ಪರವಸ್ತುವಿನ ನಿಜದ ನಿಲವಿನ ಸ್ವರೂಪವನ್ನೆತ್ತ ಬಲ್ಲರೋ ? ಆ ಪರಬ್ರಹ್ಮವು ಹೋದ ಹೊಲಬು ಬಂದ ನಿಲುಕಡೆಯನು ಏನೆಂದೂ ತಿಳಿಯರು. ಅವರು ತಿಳಿಯದಿರುವ ವಿಚಾರವು ಹೇಗಿಪ್ಪುದೆಲೆಸ್ವಾಮಿಯೆಂದು ಬೆಸಗೊಂಡೊಡೆ–

ಆದಿ ಎಂದೊಡೆ ದೇಹ, ಅನಾದಿಯೆಂದೊಡೆ ನಿರ್ದೇಹವಾದಾತ್ಮನು. ಆದಿಯೇ ಸಕಲ ಸಾಕಾರವಾದುದು. ಅನಾದಿಯೇ ಆತ್ಮನ ನಿಃಕಲ ನಿರಾಕಾರ ವಾದಾತ್ಮನು. ಆದಿಯೇ ಅಚೇತನವಾದುದು. ಆತ್ಮನೇ ಜಡರಹಿತವಾದಾತ್ಮನು. ದೇಹವೇ ಜೀವಂಗೊಡಲಾಗಿಹುದು. ಆತ್ಮನೇ ಪ್ರಾಣ. ತದ್ದೇಹಕ್ಕೆ ಚೈತನ್ಯ ಸ್ವರೂಪ ನಾಗಿರುವನು. ಆ ದೇಹಾತ್ಮರುಗಳೆಂಬೆರಡರ ಕೂಟವನ್ನು ಭೇದಿಸಿ ತನ್ನ ಶ್ರುತಿ ಮತಿ ಜ್ಞಾನದಿಂದ ವಿಚಾರಿಸಿ ತನ್ನಲ್ಲಿ ತಾನೇ ತಿಳಿದುನೋಡಲು ಆದಿದೇಹದಲ್ಲಿ ಸಂಬಂಧ ವಪ್ಪ ಭೂತಂಗಳು ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬೈದು ತತ್ವಂಗಳು ನಾನಲ್ಲ. ನಿಜಾತ್ಮಸ್ವರೂಪು ಅಲ್ಲ. ದಶವಿಧೇಂದ್ರಿಯಂಗಳು ದಶವಾಯುಗಳು ಅಂತರಂಗದಷ್ಟಮದಂಗಳು ಬಹಿರಂಗದಷ್ಟಮದಂಗಳು ಅಷ್ಟಮೂರ್ತಿಮದಂಗಳು ಅರಿಷಡ್ವರ್ಗಂಗಳು ಷಡೂರ್ಮಿಗಳು ಷಡ್ಭಾವಮೆಗಳು ಷಡ್ಭಾವವಿಕಾರಗಳು ಅಸಿ ಮಸಿ ಕೃಷಿ ವಾಣಿಜ್ಯ ಯಾಚನ ಗೋಪಾಲತ್ವವೆಂಬಾರು ಕರ್ಮಂಗಳು ಮತ್ತಂತು ಮಲ್ಲದೆ ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹವೆಂಬಾರು ಉದ್ಯೋಗಂಗಳು ;ರಸ ರುಧಿರ ಮಾಂಸ ಮೇದಸ್ಸು ಅಸ್ಥಿ ಮಜ್ಜೆ ಎಂಬಾರು ಪ್ರಕಾರ ವಾದ ಧಾತುಗಳು ; ಸಪ್ತವ್ಯಸನಗಳು ತನುತ್ರಯಂಗಳು ಜೀವತ್ರಯಂಗಳು ಜೀವಾತ್ಮ ಅಂತರಾತ್ಮ ಪರಮಾತ್ಮರೆಂಬಾತ್ಮತ್ರಯಂಗಳು ; ಮನ ಮನನ ಮನನೀಯವೆಂಬ ಮನತ್ರಯಂಗಳು ; ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯಂಗಳು ; ಗುಣತ್ರಯಂಗಳು ಸದ್ಭಾವತ್ರಯಂಗಳು ದುರ್ಭಾವತ್ರಯಂಗಳು ಅವಸ್ಥಾತ್ರಯಂ ಗಳು ಇಹಲೋಕದ ತಾಪತ್ರಯಂಗಳು ಪರಲೋಕದ ತಾಪತ್ರಯಂಗಳು ; ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಚತುಃಕರಣಂಗಳು ಈ ಪ್ರಕಾರದಿಂದ ಹೇಳಲ್ಪಟ್ಟವು. ಇಪ್ಪತ್ತೈದೆಪ್ಪತ್ತೈದು ತತ್ವಂಗಳಾದಿಯಾಗಿ ತೋರುವ ತೋರಿಕೆ ಏನೊ ಈ ಸಕಲ ತತ್ವಂಗಳ ಸಾಕಾರಂಗಳೊಂದೂ ನಾನಲ್ಲ. ನಿಜಾತ್ಮಸ್ವರೂಪು ಅಲ್ಲ. ನನ್ನಲ್ಲಿ ಆತ್ಮ ಸಂಬಂಧವಾದ ತತ್ವಂಗಳಿಲ್ಲ. ಈ ಸಕಲ ತತ್ವಂಗಳು ನನ್ನಾತ್ಮನ ಅಧೀನವಾಗಿಪ್ಪವು.

ಚೈತನ್ಯವಿಡಿದು ಚೇಷ್ಟಿಸುತಿಹವು. ನಾನು ಆತ್ಮನು ಈ ಸಕಲತತ್ವಂಗಳ ಅಧೀನವಿಡಿದು ಚೇಷ್ಟಿಸುವಾತನಲ್ಲ. ಆತ್ಮನು ಮತ್ತೆಂಥವನಯ್ಯ ಎಂದೊಡೆ : ತೂರ್ಯ ತೂರ್ಯಾತೀತವಪ್ಪ, ತೂರ್ಯವೆಂದರೆ ಅರಿವು, ಅತೂರ್ಯವೆಂದೊಡೆ ಮರವೆ. ಅತೀತವಪ್ಪ ಅರಿವು ಮರವೆಗಳೆರಡನು ಮೀರಿ ತೋರುವ ಸತ್ತು ಉಂಟಾದ ಚಿತ್ತು ಜ್ಞಾನಮಯ ವಾದ ಆನಂದ ಸುಖಸ್ವರೂಪವಾದ ನಿತ್ಯ ಶಾಶ್ವತವಾದ ಪರಿಪೂರ್ಣ ಜಗದ್ವ್ಯಾಪಕತ್ವವನುಳ್ಳ ಪರಬ್ರಹ್ಮವೇ ತನ್ನ ಆತ್ಮನ ಇರವೆಂದು ತಿಳಿಯಲು, ಆ ತಿಳಿದ ಮಾತ್ರದಿಂದಲೆ ದೇಹದ ಬೆಸುಗೆಯಂ ವಿಸರ್ಜಿಸಿ ಅಡಿ ಮುಡಿ ಒಡಲ ಘಾತವ ಕಾಣಿಸಿಕೊಳ್ಳದ ಪರಬ್ರಹ್ಮದೊಳಗೆ ತಾನೆಂಬ ಭಾವವನು ವಿಕರಸವ ಮಾಡಿ ಕೂಡಲರಿಯದೆ ಮತ್ತೆಯೂ ಹೀಗೆಂದು ತಿಳಿದ ಬಳಿಕಲೂ ತನಗೆ ಗುರುಕಾರುಣ್ಯ ಲಿಂಗಾಂಗ ಸಂಬಂಧವು ದೊರೆಕೊಳ್ಳದ ಕಾರಣ ಪುನಃ ಪಂಚಭೂತಯುಕ್ತವಾದ ದೇಹದಲ್ಲಿ ಸಂಬಂಧಿಯಾಗಿ ಕೂಡಿರುತಿರಲು ದೇಹದಲ್ಲಿ ದೇಹಿಕನಾಗೊಪ್ಪುತಿರಲು ಅದು ಕಾರಣವಾಗಿ, ಅವರುಗಳಿಗಾ ಪರಬ್ರಹ್ಮವು ಹೋದ ಹೊಲಬು ಬಂದ ಬಟ್ಟೆ ನಿಂದ ನಿಲುಕಡೆ ಏನೆಂದು ತಿಳಿಯಬಾರದು. ಇಂತೀ ಆತ್ಮಾನಾತ್ಮ ತತ್ವಂಗಳಿಗೆ ಮೂಲ ಕಾರಣವಾದ ಪರಬ್ರಹ್ಮವು ತಾನು ಹೇಗಿಪ್ಪುದೆಲೆ ಸ್ವಾಮಿ ಎಂದು ಬೆಸಗೊಂಡೊಡೆ–

ಆ ಸಕಲ ತತ್ವಂಗಳಿಗುಪರಿಯಾಗಿ ತೋರುವ ಪರವಸ್ತುವಪ್ಪ ಶಾಶ್ವತವಾದ ನಿರಾಳ ಅಡಿ ಮುಡಿ ಒಡಲ ಘಾತವ ಕಾಣಿಸಿಕೊಳ್ಳದ ತನು ಮನ ಕರಣ ಶೂನ್ಯವಾದ ಲಿಂಗವೇ ನಿಃಕಲಬ್ರಹ್ಮವು, ಇಲ್ಲಿಗೆ ನಿಃಕಲಲಿಂಗಸ್ಥಲ.

ತನ್ನ ಸಗುಣಾನಂದ ಲೀಲೆಗೊದಗಿದಂಥಾದ್ದೇ ಚಿತ್ತು ಆ ಚಿತ್ತಿನ ವಿಲಾಸದಿಂದ ತಾನೆ ಆ ನಿಃಕಲಲಿಂಗವು. ಆ ಚಿತ್ತಿನ ಚಿನ್ನಾದವೇ ಸುನಾದ. ಆ ಚಿತ್ತುವಿನ ಚಿದ್ಬಿಂದುವೇ ಬಿಂದುಪ್ರಕಾಶ. ಆ ಚಿತ್ತುವಿನ ಚಿತ್ಕಳೆಯೇ ಪ್ರಕಾಶ ತೇಜೋ ಮೂರ್ತಿಯಾಗಿ ಈ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲಚಿತ್ತೆಂಬ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಾಗಿ ನಿಂದು ಮಹಾಲಿಂಗವೆನಿಸಿತ್ತು. ಇಲ್ಲಿಗೆ ಮಹಾಲಿಂಗಸ್ಥಲವು.

ಆ ಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವಾದ ಮಹಾಲಿಂಗವು ತಾನೊಂದೇ ಕರ್ಮಸಾದಾಖ್ಯ ಕರ್ತೃಸಾದಾಖ್ಯ ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯ ಶಿವಸಾದಾಖ್ಯವೆಂಬೈದು ಸಾದಾಖ್ಯಲಿಂಗರೂಪವ ತಳೆಯಿತು.

ಕರ್ಮಸಾದಾಖ್ಯವೇ ಆಚಾರಲಿಂಗದ ಪ್ರಕಾಶ. ಕರ್ತೃಸಾದಾಖ್ಯವೇ ಗುರುಲಿಂಗಪ್ರಕಾಶ. ಮೂರ್ತಿಸಾದಾಖ್ಯವೇ ಶಿವಲಿಂಗಪ್ರಕಾಶ. ಅಮೂರ್ತಿ ಸಾದಾಖ್ಯವೇ ಜಂಗಮಲಿಂಗಪ್ರಕಾಶ. ಶಿವಸಾದಾಖ್ಯವೇ ಪ್ರಸಾದಲಿಂಗಪ್ರಕಾಶ ಸ್ವರೂಪವ ತಳೆಯಿತು. ಈ ಐದು ಲಿಂಗದ ಬೆಳಗೇ ಪಂಚಮುಖವೆಂದೆನಿಸಿತು.

ಆಚಾರಲಿಂಗಪ್ರಕಾಶವೇ ಸದ್ಯೋಜಾತಮುಖ. ಗುರುಲಿಂಗಪ್ರಕಾಶವೇ ವಾಮದೇವಮುಖ. ಶಿವಲಿಂಗಪ್ರಕಾಶವೇ ಅಘೋರಮುಖ. ಜಂಗಮಲಿಂಗ

ಪ್ರಕಾಶವೇ ತತ್ಪುರುಷಮುಖ. ಪ್ರಸಾದಲಿಂಗಪ್ರಕಾಶವೇ ಈಶಾನಮುಖ. ಇವುಗಳ ಸ್ವರೂಪವನ್ನು ತಳೆಯಿತು.

ಆ ಪಂಚಮುಖದಿಂದಲೇ ಪಂಚಾಕ್ಷರಂಗಳುತ್ಪತ್ತಿ ಎಂಬಲ್ಲಿ ಸದ್ಯೋಜಾತ ಮುಖದಿಂದ ನಕಾರ ಪ್ರಣಮವು. ವಾಮದೇವಮುಖದಿಂದ ಮಕಾರ ಪ್ರಣವುವು. ಅಘೋರಮುಖದಿಂದ ಶಿಕಾರ ಪ್ರಣಮವು. ತತ್ಪುರುಷಮುಖದಿಂದ ವಕಾರ ಪ್ರಣವುವು. ಈಶಾನಮುಖದಿಂದ ಯಕಾರ ಪ್ರಣಮವು ಹುಟ್ಟಿದವು.

ಆ ಪಂಚಾಕ್ಷರಂಗಳಿಂದಲೆ ಪಂಚಕಲೆಗಳುತ್ಪತ್ತಿಯು ಎಂಬಲ್ಲಿ ನಕಾರ ಪ್ರಣಮದಿಂದ ನಿವೃತ್ತಿಕಲೆ, ಮಕಾರ ಪ್ರಣಮದಿಂದ ಪ್ರತಿಷ್ಠಾಕಲೆ, ಶಿಕಾರ ಪ್ರಣಮದಿಂದ ವಿದ್ಯಾಕಲೆ, ವಕಾರ ಪ್ರಣಮದಿಂದ ಶಾಂತಿಕಲೆ, ಯಕಾರ ಪ್ರಣಮದಿಂದ ಶಾಂತ್ಯಾತೀತಕಲೆ ಹುಟ್ಟಿದವು.

ಆ ಪಂಚಕಲೆಗಳಿಂದಲೇ ಪಂಚಶಕ್ತಿಗಳುತ್ಪತ್ತಿ. ಅದು ಹೇಗೆ ? ನಿವೃತ್ತಿಕಲೆಯಿಂದ ಕ್ರಿಯಾಶಕ್ತಿ, ಪ್ರತಿಷ್ಠಾಕಲೆಯಿಂದ ಜ್ಞಾನಶಕ್ತಿ, ವಿದ್ಯಾಕಲೆಯಿಂದ ಇಚ್ಛಾಶಕ್ತಿ, ಶಾಂತಿಕಲೆಯಿಂದ ಆದಿಶಕ್ತಿ, ಶಾಂತ್ಯಾತೀತಕಲೆಯಿಂದ ಪರಾಶಕ್ತಿಯು ಹುಟ್ಟಿದವು.

ಆ ಪಂಚಶಕ್ತಿಗಳಿಂದಲೇ ಪಂಚಕರಣಂಗಳುತ್ಪತ್ತಿಯು ಎಂಬಲ್ಲಿ ಕ್ರಿಯಾಶಕ್ತಿಯಿಂದ ಚಿತ್ತ, ಜ್ಞಾನಶಕ್ತಿಯಿಂದ ಬುದ್ಧಿ, ಇಚ್ಛಾಶಕ್ತಿಯಿಂದ ಅಹಂಕಾರ, ಆದಿಶಕ್ತಿಯಿಂದ ಮನ, ಪರಾಶಕ್ತಿಯಿಂದ ಜ್ಞಾನವೆಂಬ ಕರಣಗಳು ಹುಟ್ಟಿದವು.

ಆ ಪಂಚಕರಣಗಳಿಂದಲೇ ಪಂಚತನ್ಮಾತ್ರೆಗಳುತ್ಪತ್ತಿಯಾಯಿತ್ತು ಎಂಬಲ್ಲಿ ಚಿತ್ತವೆಂಬ ಕರಣದಿಂದ ಗಂಧವಿಷಯವು, ಬುದ್ಧಿಯೆಂಬ ಕರಣದಿಂದ ರಸ ವಿಷಯವು, ಅಹಂಕಾರವೆಂಬ ಕರಣದಿಂದ ರೂಪು ವಿಷಯವು, ಮನವೆಂಬ ಕರಣದಿಂದ ಸ್ಪರ್ಶನ ವಿಷಯವು, ಜ್ಞಾನವೆಂಬ ಕರಣದಿಂದ ಶಬ್ದವಿಷಯವು ಪುಟ್ಟಿದವು.

ಆ ಪಂಚತನ್ಮಾತ್ರೆಗಳಿಂದಲೇ ಪಂಚಭೂತಂಗಳುತ್ಪತ್ತಿಯು. ಗಂಧ ವಿಷಯದಿಂದ ಪೃಥ್ವಿ, ರಸ ವಿಷಯದಿಂದ ಅಪ್ಪು, ರೂಪು ವಿಷಯದಿಂದ ಅಗ್ನಿ, ಸ್ಪರ್ಶನ ವಿಷಯದಿಂದ ವಾಯು, ಶಬ್ದ ವಿಷಯದಿಂದ ಆಕಾಶವೆಂಬೈದು ತತ್ವಂಗಳು ಹುಟ್ಟಿದವು. ಇಲ್ಲಿಗೆ ಪಂಚಸಾದಾಖ್ಯಮೂರ್ತಿಲಿಂಗಸ್ಥಲ.

ಆ ಪಂಚಭೂತಂಗಳೇ ಪಂಚೀಕರಣವನೈದಿ ಒಂದೊಂದು ತತ್ವಂಗಳು ಐದು ತತ್ವಗಳಲ್ಲಿ ಕೂಡಿ ಇಪ್ಪತ್ತೈದು ತತ್ವಗಳಾಗಿ ಆ ಇಪ್ಪತ್ತೈದು ತತ್ವಯುಕ್ತವಾದ ಶರೀರವು ಶಿವಾಂಶಿಕನಾದ ಮೂಲಾತ್ಮನಿಗೆ ಅಂಗವಾಯಿತ್ತು. ಇಲ್ಲಿಗೆ ಶರೀರ ಸಂಬಂಧಿಸ್ಥಲ.

ಆ ದೇಹಕ್ಕೆ ಅರಿವು ರೂಪಮಾದಿಂದ್ರಿಯಂಗಳು, ಕ್ರಿಯಾರೂಪಮಾದಿಂದ್ರಿಯಗಳು ಪ್ರತ್ಯಂಗವೆನಿಸಿತ್ತು. ದೇಹವಿದ್ದರೂ ಬೇರಾಗಿ ತೋರುತಿಹುದಾದ ಕಾರಣ ಪೃಥಕ್ ಶರೀರವೆಂದೇ ಹೇಳಿಸಿಕೊಂಡಿತು. ಇಲ್ಲಿಗೆ ಸಂಸಾರಸಂಬಂಧಿಸ್ಥಲ.

ಈ ಪ್ರಕಾರದಿಂದ ಹೇಳಲ್ಪಟ್ಟ ಈ ಶರೀರಸಂಬಂಧವನ್ನು ನಿಃಕಲಪರಶಿವನು ತನ್ನಯ ಚಿದಂಶೀಭೂತನಾದ ಮೂಲಾತ್ಮಂಗೆ ಸಂಬಂಧಿಸಿ ಕೊಟ್ಟಪನಾದ ಕಾರಣ ಇಲ್ಲಿಗೆ ಪಿಂಡಸ್ಥಲ.

ಆ ಸ್ವಾಯತ ಮಾಡಿಕೊಟ್ಟ ದೇಹಸಂಬಂಧವಾದ ಪೂರ್ವಾಶ್ರಯವು ಇಪ್ಪತ್ತೈದುತತ್ವಂಗಳು ಯಾವ ಕಡೆಯಿಂದುಂಟಾಯಿತ್ತು ಎತ್ತಣಿಂದ ಬಂದು ದೊರಕೊಂಡಿತ್ತು ಎಂಬಲ್ಲಿ ಮೊದಲು ನಿರಾಕಾರವಾದ ನಿಃಕಲಬ್ರಹ್ಮವು, ಆ ನಿಃಕಲ ಬ್ರಹ್ಮನಿಂದ ಚಿತ್ತು ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಪುಟ್ಟಿದವು. ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲ ಚಿತ್ತೆಂಬ ಚತುರ್ವಿಧವು ಘಟ್ಟಿಗೊಂಡು ಆ ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವೇ ಪಂಚಸಾದಾಖ್ಯಮೂರ್ತಿ ಎಂದೆನಿಸಿತ್ತು. ಆ ಪಂಚಸಾದಾಖ್ಯವೇ ಪಂಚಲಿಂಗ ಪ್ರಕಾಶವೆಂದೆನಿಸಿತ್ತು. ಆ ಪಂಚಲಿಂಗ ಪ್ರಕಾಶವೇ ಪಂಚಮುಖವೆನಿಸಿತ್ತು. ಆ ಪಂಚಮುಖದಿಂದಲೇ ಪಂಚಾಕ್ಷರಂಗಳುತ್ಪತ್ತಿ. ಆ ಪಂಚಾಕ್ಷರಗಳಿಂದಲೇ ಪಂಚಕಲೆಗಳುತ್ಪತ್ತಿ, ಆ ಪಂಚ ಕಲೆಗಳಿಂದಲೇ ಪಂಚಶಕ್ತಿಗಳುತ್ಪತ್ತಿ. ಆ ಪಂಚ ಶಕ್ತಿಗಳಿಂದಲೇ ಪಂಚಕರಣಂಗಳುತ್ಪತ್ತಿ. ಆ ಪಂಚಕರಣಗಳಿಂದಲೇ ಪಂಚತನ್ಮಾತ್ರೆಗಳುತ್ಪತ್ತಿ. ಆ ಪಂಚತನ್ಮಾತ್ರೆಗಳಿಂದಲೇ ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳೆ ಪಂಚಕರಣತ್ವವನೈದಿ ಒಂದೊಂದು ತತ್ವಂಗಳು ಐದು ಐದು ತತ್ವಂಗಳ ಸ್ವರೂಪವನ್ನು ತಾಳಿ. ಇಪ್ಪತ್ತೈದು ತತ್ವಂಗಳಾಗಿ ಆ ಇಪ್ಪತ್ತೈದು ತತ್ವಾತ್ಮಕವಾದ ಶರೀರವು ತನಗೆ ಬಂದು ದೊರಕೊಂಡಿತಲಾ ಎಂದು ವಿವೇಕಿಸುವುದೇ ಪಿಂಡ ಜ್ಞಾನಸ್ಥಲ.

'ಯದ್ದೃಷ್ಟಂ ತನ್ನಷ್ಟಂ' ಎಂದು ಹೇಳುತಿಹುದಾದ ಕಾರಣ, ಯಾವಲ್ಲಿ ಹುಟ್ಟಿದ ವಸ್ತುವೆಂಬುದು ತಾನು ಅದರೊಳಗೆ ಅಡಗುತಿಹುದು. ಅದು ಹೇಗೆಂದೊಡೆ : ಆ ದೇಹಸಂಬಂಧವಾದ ಇಪ್ಪತ್ತೈದು ತತ್ವಂಗಳನ್ನೇ ಪಂಚಭೂತಂಗಳಲ್ಲಿ ಪಂಚ ವಿಷಯಂಗಳನ್ನೇ, ಪಂಚಕರಣಂಗಳಲ್ಲಿ ಆ ಪಂಚಕರಣಂಗಳನ್ನೇ, ಪಂಚ ಶಕ್ತಿಯರಲ್ಲಿ ಆ ಪಂಚಶಕ್ತಿಗಳನ್ನೇ, ಪಂಚಕಲೆಗಳಲ್ಲಿ ಆ ಪಂಚಕಲೆಗಳನ್ನೇ, ಪಂಚಾಕ್ಷರಂಗಳಲ್ಲಿ ಆ ಪಂಚಾಕ್ಷರಂಗಳನ್ನೇ, ಪಂಚಮುಖಂಗಳಲ್ಲಿ ಆ ಪಂಚಮುಖಂಗಳನ್ನೇ, ಆ ಪಂಚಲಿಂಗಪ್ರಕಾಶಂಗಳಲ್ಲಿ ಆ ಪಂಚಲಿಂಗಪ್ರಕಾಶಂಗಳನ್ನೇ, ಪಂಚ ಸಾದಾಖ್ಯಂಗಳಲ್ಲಿ ಆ ಪಂಚಸಾದಾಖ್ಯಂಗಳನ್ನೇ ಮೇಲಣ ಮಹಾಸಾದಾಖ್ಯ ಸ್ವರೂಪವಾದ ಮಹಾಲಿಂಗದಲ್ಲಿ ಅಡಗಿಸಿ, ಮಹಾಲಿಂಗಸ್ವರೂಪವೇ ತಾನು ಎಂದು ತಿಳಿಯುವುದೇ ಸಂಸಾರಹೇಯಸ್ಥಲ.

ಆ ಸಕಲ ಸಂಸಾರ ಪ್ರಪಂಚವನ್ನು ತಿರಸ್ಕರಿಸಿ ಗುರೂಪಾವಸ್ಥೆಯಂ ಮಾಡಲು ಆ ಉಪಾವಸ್ಥೆಗೋಸ್ಕರ ನಿಃಕಲಪರಶಿವನು ತಾನೆ ಗುರುವಾಗಿ ಬಂದು ಕ್ರಿಯಾಘನ ಗುರುಮೂರ್ತಿಯಾಗಿ ಬಿಜಯಂಗೈದ. ಇಲ್ಲಿಗೆ ಗುರುಕಾರುಣ್ಯಸ್ಥಲ.

ಆ ದೇಹ ಸಂಬಂಧವಾದ ಪೂರ್ವಾಶ್ರಯವಂ ಇಪ್ಪತ್ತೈದು ತತ್ವಂಗಳ ವರ್ತನೆಯನ್ನು ನಷ್ಟವಮಾಡಿ ಇಪ್ಪತ್ತೈದು ಮಂತ್ರತತ್ವಂಗಳಾಗಳವಡಿಸಿ ಆ ಮಂತ್ರಾಂಗಕ್ಕೆ ಮಹಾಘನಲಿಂಗವನ್ನು ವೇಧಿಸಿ, ಭಾವಾದಿ ನಯನಗಳಿಂದ ಬಹಿಷ್ಕರಿಸಿ ತನುವಿನ ವಾಮಭಾಗದ ಕರಸ್ಥಳದಲ್ಲಿಪ್ಪ ಇಷ್ಟಲಿಂಗ ಲಕ್ಷಣವೆಂಬ ಕುಮಾರಮೂರ್ತಿಯಲ್ಲಿ ಪುದುಗೊಳಿಸಿ, ಆ ಚಿತ್ಕಲಾಲಿಂಗವನ್ನು ಕೊಟ್ಟು, ಸಂಬಂಧವ ಮಾಡಿತ್ತು ಇಲ್ಲಿಗೆ ಲಿಂಗಧಾರಣಸ್ಥಲ.

ಆ ಚಿತ್ಕಲಾಲಿಂಗವನ್ನು ಕೊಟ್ಟು ಅಂಗಕ್ಕೆ ಸಂಬಂಧವ ಮಾಡಿ ಇತ್ತ ಸದ್ಗುರು ದೇವನು ಶಿಷ್ಯಂಗೆ, ಇಂದ್ರಿಯಂಗಳಲ್ಲಿ ಲಿಂಗಸಂಬಂಧವ ಮಾಡಿಕೊಂಡು ಆಚರಿಸುವಂತಹ ಷಟ್‌ಸ್ಥಲ ಜ್ಞಾನೋಪದೇಶವನ್ನು ಕರುಣಿಸಿಕೊಟ್ಟ ಪರಿಕ್ರಮವು ತರುವಾಯದ ನಿಲುಕಡೆಯು ಹೇಗಿಪ್ಪವೆಲೆ ಸ್ವಾಮಿಯೆಂದು ಬೆಸಗೊಂಡೊಡೆ–

ಮೂಲಾತ್ಮ ಸಹವಾಗಿ ಪಂಚಭೂತಂಗಳನ್ನೆ ಷಡಂಗವೆನಿಸಿ, ಅವರವರ ಮದಗುಣ, ಅಂಶಗುಣಂಗಳಳಿದು, ಆರು ಪ್ರಕಾರವಾದ ಅಂಗಂಗಳಾಗಿರ್ಪುವೆಂದು ತಿಳುಹಿಕೊಟ್ಟು ಎಂಬಲ್ಲಿ ಪೃಥ್ವಿಯಳಿದು ಚಿತ್ಪೃಥ್ವಿ ಸ್ವರೂಪಿನಿಂದ ಭಕ್ತಂಗೆ, ಇದೇ ರೀತಿಯಲ್ಲಿ ಆತ್ಮನಳಿದು ಚಿದಾತ್ಮಸ್ವರೂಪಿನಿಂದೈಕ್ಯಂಗೊಡಲಾಗಿಪ್ಪುದೆಂದು ತಿಳುಹಿಸಿಕೊಟ್ಟು ಆ ಭಕ್ತಾದ್ಯೈಕ್ಯಾಂತವಾದ ಆರಂಗಕ್ಕೆ ನಿವೃತ್ಯಾದಿ ಶಾಂತ್ಯಾತೀತೋತ್ತರಾಂತ್ಯಮಾದ ಆರು ಕಲೆಗಳೇ ಆರು ಪ್ರಕಾರವಾದ ಶಕ್ತಿಗಳಾಗಿರ್ಪುವೆಂದು ತಿಳುಹಿಸಿಕೊಟ್ಟು ಎಂಬಲ್ಲಿ ನಿವೃತ್ತಿ ಕಲಾಪರಿಯಾಯನಾಮವನುಳ್ಳ ಕ್ರಿಯಾಶಕ್ತಿಯೆ ಭಕ್ತಂಗೆ ; ಇದೇ ರೀತಿಯಲ್ಲಿ ಶಾಂತ್ಯಾತೀತೋತ್ತರ ಕಲಾಪರಿಯಾಯನಾಮವನುಳ್ಳ ಚಿಚ್ಛಕ್ತಿಯೈಕ್ಯಂಗೆ ಶಕ್ತಿಯಾಗಿರ್ಪಳೆಂದು ತಿಳಿಸಿಕೊಟ್ಟು, ಆ ಕ್ರಿಯಾದಿ ಚಿದಂತ್ಯಮಾದ ಆರು ಶಕ್ತಿಗಳಿಗೆ ಷಡ್ವಿಧಭಕ್ತಿಯಿಂದಳವಡಿಸಿ, ಅಂಗವ ಮಾಡಿಕೊಟ್ಟು ಎಂಬಲ್ಲಿ ಕ್ರಿಯಾಶಕ್ತಿಗೆ ಶ್ರದ್ಧಾಭಕ್ತಿ ; ಇದೇ ರೀತಿಯಲ್ಲಿ ಚಿಚ್ಛಕ್ತಿಗೆ ಸಮರಸಭಕ್ತಿಯನ್ನು ಅಳವಡಿಸಿ ಲಿಂಗವ ಮಾಡಿಕೊಟ್ಟು ಆ ಶ್ರದ್ಧಾದಿ ಸಮರಸಾಂತ್ಯಮಾದ ಆರು ಭಕ್ತಿಗಳಿಗೆ ಚಿತ್ತ ಬುದ್ಧಿ ಅಹಂಕಾರ, ಮನ, ಜ್ಞಾನ, ಭಾವ ಷಟ್ಕರಣಂಗಳು ಷಡ್ವಿಧ ಹಸ್ತಂಗಳೆಂದೆನಿಸಿ ಅವರವರ ಪೂರ್ವ ಪ್ರವರ್ತನೆಯಳಿದು ಆರು ಪ್ರಕಾರವಾದ ಕರಣಂಗಳಾಗಿರ್ಪವೆಂದು ತಿಳುಹಿಕೊಟ್ಟು ಎಂಬಲ್ಲಿ, ಕುಚಿತ್ತವಳಿದು ಸುಚಿತ್ತವೇ ಶ್ರದ್ಧಾ ಭಕ್ತಿಗೆ ; ಇದೇ ರೀತಿಯಲ್ಲಿ ದುರ್ಭಾವವಳಿದು ಸದ್ಭಾವವೇ ಸಮರಸಭಕ್ತಿಗೆ ಹಸ್ತವಾಗಿರ್ಪುದೆಂದು ತಿಳುಹಿಕೊಟ್ಟು, ಆ ಸುಚಿತ್ತಾದಿ ಸದ್ಭಾವಾಂತ್ಯಮಾದ ಆರು ಕರಕಮಲಂಗಳಿಗೆ, ಆ ಮಹಾಲಿಂಗವೇ ಮೊದಲಾದ ಪಂಚಲಿಂಗಗಳನೆ ಐದುತತ್ವ ಲಿಂಗಗಳನೆ ಆರು ಪ್ರಕಾರವಾದ ಲಿಂಗಗಳಾಗಿರ್ಪವೆಂದು ತಿಳುಹಿಕೊಟ್ಟು ಎಂಬಲ್ಲಿ ಸುಚಿತ್ತ ಹಸ್ತಕ್ಕೆ ಆಚಾರಲಿಂಗವು ; ಇದೇ ರೀತಿಯಲ್ಲಿ ಸದ್ಭಾವಹಸ್ತಕ್ಕೆ ಮಹಾಲಿಂಗವೇ ಲಿಂಗವಾಗಿರ್ಪುದೆಂದು ತಿಳುಹಿಸಿಕೊಟ್ಟು ಆಚಾರಾದಿ ಮಹಾಲಿಂಗಾಂತ್ಯಮಾದ ಆರುಲಿಂಗಗಳಿಗೆ ಷಟ್ಪ್ರಣಮಂಗಳನ್ನೆ ಷಡ್ವಿಧಮಂತ್ರಂಗಳೆಂದೆನಿಸಿ ಆರು ಪ್ರಕಾರಮಾದ ಮಂತ್ರಂ

ಗಳಾಗಿರ್ಪವೆಂದು ತಿಳುಹಿಕೊಟ್ಟು ಎಂಬಲ್ಲಿ ಆಚಾರಲಿಂಗವ ನೆನಹುದಕ್ಕೆ ನಕಾರ ಪ್ರಣಮವೇ ಮಂತ್ರ ; ಇದೇ ರೀತಿಯಲ್ಲಿ ಮಹಾಲಿಂಗವ ನೆನಹುದಕ್ಕೆ ಓಂಕಾರ ಪ್ರಣಮವೇ ಮಂತ್ರವಾಗಿರ್ಪುದೆಂದು ತಿಳುಹಿಕೊಟ್ಟು ಆ ಷಡಕ್ಷರಮಂತ್ರಸ್ವರೂಪವಾದ ಷಡ್ವಿಧಲಿಂಗಂಗಳಿಗೆ ಹೃದಯೇಂದ್ರಿಯ ಸಹವಾಗಿ ಪಂಚೇಂದ್ರಿಯಂಗಳನ್ನೆ ಆರು ಪ್ರಕಾರವಾದ ವದನಂಗಳಾಗಿರ್ಪವೆಂದು ತಿಳುಹಿಕೊಟ್ಟು ಎಂಬಲ್ಲಿ ನಕಾರ ಮಂತ್ರಮೂರ್ತಿಯಾದ ಆಚಾರಲಿಂಗಕ್ಕೆ ಘ್ರಾಣೇಂದ್ರಿಯವೇ ಮುಖ ; ಇದೇ ರೀತಿಯಲ್ಲಿ ಓಂಕಾರ ಮಂತ್ರ ಮೂರ್ತಿಯಾದ ಮಹಾಲಿಂಗಕ್ಕೆ ಹೃದಯೇಂದ್ರಿಯವೇ ವದನವಾಗಿರ್ಪುದೆಂದು ತಿಳುಹಿಕೊಟ್ಟು, ಆ ಷಡ್ವಿಧ ವದನಂಗಳಿಗೆ ಷಡ್ವಿಧ ವಿಷಯಂಗಳನ್ನೆ ದ್ರವ್ಯ ಪದಾರ್ಥಂಗಳೆಂದೆನಿಸಿ ನೈವೇದ್ಯ ದ್ರವ್ಯಂಗಳಾಗಿರ್ಪುದೆಂದು ತಿಳುಹಿಕೊಟ್ಟು, ಎಂಬಲ್ಲಿ ಘ್ರಾಣೇಂದ್ರಿಯ ಮುಖಕ್ಕೆ ಗಂಧವಿಷಯವೇ ಪದಾರ್ಥ ; ಇದೇ ರೀತಿಯಲ್ಲಿ ಹೃದಯೇಂದ್ರಿಯಮುಖಕ್ಕೆ ತೃಪ್ತಿವಿಷಯವೇ ಪದಾರ್ಥವಾಗಿರ್ಪುದೆಂದು ತಿಳುಹಿಕೊಟ್ಟು, ಆ ದ್ರವ್ಯಪದಾರ್ಥಂಗಳೇ ಆ ನೈವೇದ್ಯ ದ್ರವ್ಯಂಗಳೇ ಆಯಾಯ ಮುಖದ ಲಿಂಗಂಗಳಲ್ಲಿ ಆ ಷಡಿಂದ್ರಿಯಂಗಳನ್ನೇ ವದನವ ಮಾಡಿಕೊಂಡಿರುವ ಷಡ್ವಿಧ ಲಿಂಗಂಗಳೊಳಗೆ ನಿರಂತರ ಸಾವಧಾನದಿಂದ ಅಷ್ಟವಿಧ ಸಕೀಲಂಗಳಿಂದರ್ಪಿತಮಾಗಿ ಸಮರ್ಪಣೆಯಾಗಿ ಎಂಬಲ್ಲಿ ಪೃಥ್ವಿಯಳಿದು ಚಿತ್ಪೃಥ್ವಿಯೇ ಒಡಲಾದ ಭಕ್ತನು ಸುಚಿತ್ತಹಸ್ತದಿಂದ ಸುಗಂಧಪದಾರ್ಥವ ಪಿಡಿದು ತನ್ನ ಪ್ರಾಣಸ್ವರೂಪವಾದ ಆಚಾರಲಿಂಗಕ್ಕೆ ಕ್ರಿಯಾಶಕ್ತಿಯುಕ್ತಮಾಗಿ ಶ್ರದ್ಧಾ ಭಕ್ತಿಯಿಂದ ಘ್ರಾಣೇಂದ್ರಿಯಮುಖದಲ್ಲಿ ನಕಾರಮಂತ್ರ ಸ್ಮರಣೆ; ಇದೇ ರೀತಿಯಲ್ಲಿ ಆತ್ಮನಳಿದು ಚಿದಾತ್ಮನೇ ಒಡಲಾದೈಕ್ಯನು ಸದ್ಭಾವಹಸ್ತದಿಂದ ಸುತೃಪ್ತಿಪದಾರ್ಥವಿಡಿದು ತನ್ನ ಪ್ರಾಣಸ್ವರೂಪವಾದ ಮಹಾಲಿಂಗಕ್ಕೆ ಚಿಚ್ಛಕ್ತಿ ಯುಕ್ತ ಮಾಗಿ ಸಮಗಸಭಕ್ತಿಯಿಂದ ಹೃದಯೇಂದ್ರಿಯಮುಖದಲ್ಲಿ ಓಂಕಾರಮಂತ್ರಸ್ಮರಣೆ ಯಿಂದ ಸಮರ್ಪಣೆಯಾಗಿ ಬೀಗಲೊಡನೆ ಅಂಗಲಿಂಗದಾಚರಣೆ ನಿಃಪತಿಯಾದ ಕೂಡಲೆ ಅಂಗಸ್ಥಲಂಗಳಡಗಿ ಷಡ್ವಿಧ ಲಿಂಗಂಗಳಾಚರಣೆಯೆ ತ್ರಿವಿಧಾಂಗಲಿಂಗಂ ಗಳಲ್ಲಿ ಲೀನವಾಗಿ ತ್ರಿವಿಧ ಲಿಂಗಾಂಗಸ್ಥಲಂಗಳಳಿದು ತ್ರಿವಿಧಾಂಗಲಿಂಗಂಗಳಾ ಚರಣೆಯುಳಿದು ಅವಶೇಷವಾಗಿ ಕಾಯಗುರು ಆಚಾರಗುರು ಸಂಬಂಧವೆಂದು ಹೇಳುತ್ತಿಹುದಾದ ಕಾರಣ ಅಂಗಾಪ್ತಸ್ಥಾನ ಸದ್ಭಾವವೆಂಬ ಚತುರ್ವಿಧ ಭಕ್ತಿಯ ಮಾಡುವ ನೆವದಿಂದ ಅಂಗವೆಂಬ ಪದಾರ್ಥವನ್ನು ಗುರುವಿಂಗೆ ಸಮರ್ಪಿಸಲು, ಆ ಗುರುವರ್ಪಿಸಿಕೊಂಡ ಅಂಗವೆಲ್ಲ ಗುರುಸ್ವರೂಪವಾಗಿರ್ಪುದು. ಪ್ರಾಣಲಿಂಗ ಇಷ್ಟಾರ್ಥಲಿಂಗ ಸಂಹಿತೆಯೆಂದು ಹೇಳುತ್ತಿಹುದಾದ ಕಾರಣ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡುವ ಭಕ್ತಿಯ ನೆವದಿಂದ ಪ್ರಾಣ ದ್ರವ್ಯ ಪದಾರ್ಥವನ್ನು ಲಿಂಗಕ್ಕೆ ಸಮರ್ಪಿಸಲು ಆ ಲಿಂಗ ಸಮರ್ಪಿಸಿಕೊಂಡ ಪ್ರಾಣ ದ್ರವ್ಯಪದಾರ್ಥವೆಲ್ಲ ಲಿಂಗಸ್ವರೂಪವಾಗಿರ್ಪುದು.

ಜ್ಞಾನ, ಜ್ಞಾನಜಂಗಮ 'ಸುಜ್ಞಾನಂ ಜಂಗಮಶ್ಚೈವ' ಎಂದು ಹೇಳುತ್ತಿಹುದಾದ ಕಾರಣ ಅನ್ನ, ವಸ್ತ್ರ, ಗಂಧ, ಮಣಿಭೂಷಣ, ತಾಂಬೂಲ, ಗೀತ ಮುಂತಾದ ಸಕಲ ಪದಾರ್ಥಂಗಳಂ ಕೊಟ್ಟು ಮಾಡುವ ಭಕ್ತಿಯ ನೆವದಿಂದ ಜ್ಞಾನದ್ರವ್ಯ ಪದಾರ್ಥವನ್ನು ಜಂಗಮಕ್ಕೆ ಸಮರ್ಪಿಸಲು ಆ ಜಂಗಮವರ್ಪಿಸಿಕೊಂಡ ಜ್ಞಾನದ್ರವ್ಯ ಪದಾರ್ಥವೆಲ್ಲ ಜಂಗಮಸ್ವರೂಪವಾಗಿರ್ಪುದು. ಗುರುವಿನಲ್ಲಿ ಶುದ್ಧಪ್ರಸಾದ. ತನಗೆ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗಸಂಬಂಧವನ್ನು ಕರುಣಿಸಿಕೊಟ್ಟಂಥ ಸದ್ಗುರು ದೇವಂಗೆ ಸಕಲ ಪದಾರ್ಥಂಗಳ ಸಮರ್ಪಿಸಲು ಆ ಗುರು ಸಮರ್ಪಿಸಿಕೊಂಡ ಆ ಗುರುಮುಖದಿಂದುಳುಮೆಯಾಗಿ ಬಂದುದೇ ಶುದ್ಧ ಪ್ರಸಾದ. ಲಿಂಗದಲ್ಲಿ ಸಿದ್ಧ ಪ್ರಸಾದ. ಆ ಗುರುಮುಖದಿಂ ಬಂದ ಇಷ್ಟಲಿಂಗಕ್ಕೆ ಸಕಲ ಪದಾರ್ಥಂಗಳ ಸಮರ್ಪಿಸಲು ಆ ಲಿಂಗ ಸಮರ್ಪಿಸಿಕೊಂಡು ಆ ಲಿಂಗಮುಖಂದಿಂದುಳುಮೆಯಾಗಿ ಬಂದುದೇ ಸಿದ್ಧಪ್ರಸಾದ. ಜಂಗಮದಲ್ಲಿ ಪ್ರಸಿದ್ಧಪ್ರಸಾದ. ಶ್ರೀಗುರುವಿಗೂ ಲಿಂಗಕ್ಕೂ ಪ್ರಾಣ ಕಲಾಚೈತನ್ಯ ಸ್ವರೂಪನಾದ ಚರಲಿಂಗಕ್ಕೆ ಸಕಲ ಪದಾರ್ಥಂಗಳ ಸಮರ್ಪಿಸಲು ಆ ಜಂಗಮವರ್ಪಿಸಿಕೊಂಡು ಆ ಜಂಗಮಮುಖದಿಂದುಳುಮೆಯಾಗಿ ಬಂದುದೇ ಪ್ರಸಿದ್ಧಪ್ರಸಾದ. ಈ ಪ್ರಕಾರದಿಂದ ಹೇಳಲ್ಪಟ್ಟ ಈ ತ್ರಿವಿಧ ಪ್ರಸಾದವು. ಈ ಶುದ್ಧ ಸಿದ್ಧ ಪ್ರಸಿದ್ಧವೆಂಬ ಮೂರು ಪ್ರಸಾದಂಗಳು ಒಂದರೊಳಗೊಂದು ಸಮರಸವಾಗಿ ಎಂಬಲ್ಲಿ ಶುದ್ಧವೇ ಸಿದ್ಧದಲ್ಲಿ, ಸಿದ್ಧವೇ ಪ್ರಸಿದ್ಧದಲ್ಲಿ, ಪ್ರಸಿದ್ಧವೇ ಚಿತ್ಕಲಾ ಪ್ರಸಾದದಲ್ಲಿ ಸಮರಸವಾಗಿ ಮಹಾದೊಡ್ಡಿತ್ತಾವ ಘನಸಾಂದ್ರವಾದ ಪರಿಪೂರ್ಣ ಜಗದ್ವ್ಯಾಪಕತ್ವವನುಳ್ಳ ಪ್ರಸಾದಂ ಚಿತ್ಕಲಾ ಪ್ರಸಾದದಲ್ಲಿ ಕೂಡುವ ಕೂಟವು ಅಳವಟ್ಟು ಅಂಗವಾದ ಶಿವಶರಣನು ಘಟಪಟಾದಿಗಳ ಇದಿರಿಟ್ಟು ಕೊಂಡರಿಯೋಪಾದಿಯಲ್ಲಿ ತನ್ನಿಂದ ವಸ್ತುವ ಭಿನ್ನವಿಟ್ಟುಕೊಂಡು ತಿಳಿವ ಖಂಡಿತ ಜ್ಞಾನಿಯು ಅಲ್ಲ, ಅಜ್ಞಾನಿ ಮುನ್ನವೇ ಅಲ್ಲ, ತನ್ನ ಲಿಂಗದ ನಿಜವನು ತಿಳಿಯದೆ ಇರುವ ಮುಕ್ತಜ್ಞಾನಿಯು ಮುನ್ನವೇ ಅಲ್ಲ, ಶೂನ್ಯನಲ್ಲ, ಜೀವನ ವರ್ತನೆಯುಳ್ಳಾತನು ಅಲ್ಲ, ನಿಶ್ಶೂನ್ಯ ಪರಮನ ವರ್ತನೆಯುಳ್ಳಾತನು ಮುನ್ನವೇ ಅಲ್ಲ, ದ್ವೈತಿ ಅಲ್ಲ, ಲಿಂಗಾಂಗವೆರಡಕ್ಕೆ ಭಿನ್ನವಿಟ್ಟುಕೊಂಡು ಪೂಜಿಸಿ ಫಲಪದಂಗಳ ಪಡೆದನುಭವಿಸಿ ಭವವನ್ನೆಯ್ದಿ ಹೋಗುವ ಸಿದ್ಧಾಂತಮಾರ್ಗವುಳ್ಳಾತನು ಅಲ್ಲ, ಅದ್ವೈತಿ ಮುನ್ನವೇ ಅಲ್ಲ, 'ಆತ್ಮಾಯಃ ಕೇವಲಶ್ಶಿವಃ' ಆತ್ಮನೇ ಬ್ರಹ್ಮವೆಂದು ನುಡಿವ ವೇದಾಂತಮಾರ್ಗವುಳ್ಳಾತನು ಮುನ್ನವೇ ಅಲ್ಲ.

ಈ ಪ್ರಕಾರದಿಂದ ಪೇಳಲ್ಪಟ್ಟ ಈ ಉಭಯಾತ್ಮಕ ತಾನೆಯಾಗಿ ಈ ಎರಡರ ಸ್ವರೂಪವಾಗಿರುವ ಪರಬ್ರಹ್ಮವೇ ಶಿವಶರಣ ತಾನಾಗಿ, ಇದು ಕಾರಣ ಈ ಷಟ್ಸ್ಥಲಂಗಳು ಆಗು ಆಗೆ, ಮಹಾಲಿಂಗ, ಆ ಮಹಾಲಿಂಗದಿಂದ ಐಕ್ಯ, ಐಕ್ಯನಿಂದ ಶರಣ, ಶರಣನಿಂದ ಪ್ರಾಣಲಿಂಗಿ, ಪ್ರಾಣಲಿಂಗಿಯಿಂದ ಪ್ರಸಾದಿ, ಪ್ರಸಾದಿಯಿಂದ ಮಹೇಶ್ವರ, ಮಹೇಶ್ವರನಿಂದ ಭಕ್ತ ಆ ಭಕ್ತನಿಂದ ಸರ್ವಾಚಾರ ಸಂಪತ್ತಿನಾಚರಣೆ

ಆದಂಥಾದ್ದೀಗ ಆಗು ಹೋಗು. ಆ ಸರ್ವಾಚಾರ ಸಂಪತ್ತಿನಾಚರಣೆವಿಡಿದು ಆಚರಿಸುವ ಪರಿಯಂತರವೂ ಆಚರಿಸಿ ಆ ಆಚರಣೆಯು ಸಮಾಪ್ತಿಯಾದ ಬಳಿಕ ಆ ಸರ್ವಾಚಾರ ಸಂಪತ್ತಿನಾಚರಣೆಯೆಲ್ಲ ಭಕ್ತನಲ್ಲಿ ಅಡಗಲು ಆ ಭಕ್ತನೇ ಮಹೇಶ್ವರನಲ್ಲಿ, ಮಹೇಶ್ವರನೇ ಪ್ರಸಾದಿಯಲ್ಲಿ, ಪ್ರಸಾದಿಯೇ ಪ್ರಾಣಲಿಂಗಿಯಲ್ಲಿ, ಪ್ರಾಣಲಿಂಗಿಯೇ ಶರಣನಲ್ಲಿ, ಶರಣನೇ ಐಕ್ಯನಲ್ಲಿ, ಆ ಐಕ್ಯನೇ ಮಹಾಲಿಂಗದಲ್ಲಿ ಅಡಗಿ ಹೋದಂಥಾದ್ದೀಗ ಹೋಗು. ಭಕ್ತನ ಅಷ್ಟವಿಧ ಸಕೀಲ, ಐಕ್ಯನ ಅಷ್ಟವಿಧ ಸಕೀಲ ಸಂಬಂಧವು.

ಭಕ್ತನ ಅಷ್ಟವಿಧ ಸಕೀಲವೇ ಇಷ್ಟಲಿಂಗದ ಶಕ್ತಿಪೀಠದಲ್ಲಿ ; ಮಹೇಶ್ವರನ ಅಷ್ಟವಿಧಸಕೀಲವೇ ಇಷ್ಟಲಿಂಗದ ಕಟಿಯಲ್ಲಿ ; ಪ್ರಸಾದಿಯ ಅಷ್ಟವಿಧ ಸಕೀಲವೇ ಇಷ್ಟಲಿಂಗದ ವರ್ತುಳದಲ್ಲಿ ; ಪ್ರಾಣಲಿಂಗಿಯ ಅಷ್ಟವಿಧ ಸಕೀಲವೇ ಇಷ್ಟಲಿಂಗದ ಗೋಮುಖದಲ್ಲಿ ; ಶರಣನ ಅಷ್ಟವಿಧ ಸಕೀಲವೇ ಇಷ್ಟಲಿಂಗದ ನಾಳದಲ್ಲಿ ; ಐಕ್ಯನ ಅಷ್ಟವಿಧ ಸಕೀಲವೇ ಇಷ್ಟಲಿಂಗದ [೧][ಗೋಳಕದಲ್ಲಿ][೧] ಸ್ವಾಯತವಾಗಿರುವಂಥ ನಿಲುಕಡೆಯನು ಚನ್ನಕಾಯಕಾಂತಿಯ ಲಾವಣ್ಯವನುಳ್ಳಂಥ ಮಲ್ಲಿಕಾ, ಮಲ್ಲಿಗೆ ಹೂವಿನೋಪಾದಿಯಲ್ಲಿ ಅರ್ಜುನ ಧವಳಾಂಗ*ವನುಳ್ಳ ಅಯ್ಯಾ ಎಲೆ ಸ್ವಾಮಿ ಎಂಬುದು ಸರಿ. ಮತ್ತಂತುಮಲ್ಲದೆ ಚನ್ನಾ ಎಂದಡೆ ಮಾದಾರ ಚನ್ನಯ್ಯಗಳು; ಮಲ್ಲಿಕಾ ಎಂದೊಡೆ ಮಲ್ಲಿಕಾದೇವಿಯು, ಅರ್ಜುನಯ್ಯ ಎಂದಡೆ ಕಿರೀಟಿಯು, ಅಯ್ಯ ನಿಮ್ಮ ಭಕ್ತರಾದ ಈ ಮೂವರಭಿಧಾನದಿಂದ ಕರಸಿಕೊಳ್ಳಲ್ಪಟ್ಟೆಲೆ ಲಿಂಗವೆ ನಿಮ್ಮ ಶರಣರೇ ತಿಳಿದಿರ್ಪರು. ಮಿಕ್ಕಿನ ಅಜ್ಞಾನಜೀವಿಗಳೊರ್ವರಿಗೂ ತಿಳಿಯ ಬಾರದು ಎಂಬ ಶಬ್ದಕ್ಕರ್ಥವು.

೩ನೆಯ ವಚನ :

(೩) ಸ್ವತಂತ್ರ ಕರ್ತೃವಾದ ಅಲ್ಲಮಪ್ರಭುಸ್ವಾಮಿಗಳೆಂಬ ನಿರಂಜನ ಗಣಾಧೀಶ್ವರನು ನಿರೂಪಿಸಿದ ಸೃಷ್ಟಿಯ ವಚನ.

ಊರ್ಧ್ವಸೃಷ್ಟಿ, ಅಧೋಸೃಷ್ಟಿಗಳ ಕ್ರಮವನ್ನು ಹೇಳುವ ವಚನ. ಮತ್ತಂತು ಮಲ್ಲದೆ ಅಂಗಲಿಂಗೋದ್ಭವಂಗಳ ಸ್ವರೂಪವನ್ನು ಹೇಳುವ ವಚನ.

ಮೊತ್ತಮೊದಲೊಳಗೆ ಬ್ರಹ್ಮವು ಏನೇನು ಇಲ್ಲದಂದು ಅಷ್ಟತನು ಶಿವಶಕ್ತಿಗಳ ಸಾಕಾರಗಳೊಂದು ಕುರುಹು ಕಾಣಿಸದ ಕಾಲದಲ್ಲಿ ಮಹಾ ದೊಡ್ಡಿತ್ತಾದ ಘನ ಸಾಂದ್ರವಾದ ಶೂನ್ಯ ತನುಶೂನ್ಯ ಮನಶೂನ್ಯ ಕರಣಶೂನ್ಯವಾದ ಬ್ರಹ್ಮನಾ ಗೊಪ್ಪುತ್ತಿರ್ದುದು.

ಅಂತಿರ್ದ ಹಾಗೆ ನಿರವಯ ನಿರಾಕಾರವಾಗೊಪ್ಪುತ್ತಿರ್ದ ಪರವಸ್ತು ತಾನೆ ತನ್ನಯ ಮನೋಹರವಾದ ಸಗುಣಾನಂದ ಲೀಲಾವಿನೋದಕ್ಕೊದಗಿದಂಥಾದ್ದೇ

೧–೧ ಗೋಮುಖದಲ್ಲಿ(ಮೂ)

* ಅರ್ಜುನ ಧವಳಾಂಗವೆಂದರೆ ಸಾತ್ವಿಕವಾದ ಬಿಳಿ ಬಣ್ಣದ ಪ್ರಾರಂಭದ ವರ್ಣ.

ಸ್ವಲೀಲೆ, ಆ ಸ್ವಲೀಲೆಯೇ ಚಿತ್ತು ಆ ಚಿತ್ತಿನ ಸ್ವಭಾವದಿಂದ ಆತ್ಮನೆಂದು ಮೂಲಾತ್ಮ ನೆಂದು ಹೇಳುವ ಅಂಗಸ್ಥಲ ಒಂದಾದುದು. ಅದು ಹೇಗೆಂದೊಡೆ : ಮೊದಲು ನಿಃಕಲಬ್ರಹ್ಮವು. ಆ ನಿಃಕಲಬ್ರಹ್ಮದಿಂದ ಚಿತ್ತು ಆ ಚಿತ್ತುವಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಪುಟ್ಟಿದವು. ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲಚಿತ್ತೆಂಬ ಚತುರ್ವಿಧವು ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತು. ಆ ಮಹಾಲಿಂಗದಿಂದ ಸದಾಶಿವಮೂರ್ತಿ ಪುಟ್ಟಿದನು. ಆ ಸದಾಶಿವನ ಪಂಚಮುಖದಿಂದ ಪಂಚಭೂತಂಗಳು ಪುಟ್ಟಿದವು. ಗೋಪ್ಯ ಮುಖದಲ್ಲಿ ಆತ್ಮನು ಪುಟ್ಟಿದನು. ಅಂತಪ್ಪ ಪರಬ್ರಹ್ಮದಿಂದಾದ ಚಿದಾತ್ಮನೆಂದು ಜ್ಞಾನ ಕಲಾತ್ಮನೆಂದು ಹೇಳುವ ಅಂಗಸ್ಥಲ ಒಂದಕ್ಕೆ ಕವಳಿಗೆಯಾಗಿ ಸೇರಿದ ಇಪತ್ತೈದು ತತ್ವಂಗಳು ಅವೆಂತಾ[ದ]ವೆಲೆಸ್ವಾಮಿ ಎಂದು ಬೆಸಗೊಂಡೊಡೆ–

ಅರಿವು ರೂಪಮಾದ ಶ್ರವಣಾದಿ ಇಂದ್ರಿಯಂಗಳೈದು, ಕರ್ಮ ಕ್ರಿಯಾ ರೂಪಮಾದ ವಾಗಾದಿ ಇಂದ್ರಿಯಂಗಳೈದು, ಶಬ್ದ ವಿಷಯವೇ ಮೊದಲಾದ ವಿಷಯಂಗಳೈದು, ಪ್ರಾಣಾದಿ ವಾಯುಗಳೈದು, ಮನ, ಬುದ್ಧಿ, ಚಿತ್ತ, ಅಹಂಕಾರ ಮೂಲಾತ್ಮನೆಂಬ ಅಂತಃಕರಣಂಗಳೈದು. ಈ ಪ್ರಕಾರದಿಂದ ಹೇಳಲ್ಪಟ್ಟವುಗಳಿಂದ ಕೂಡಿರುವುದೇ ಅಂಗವು. ತನ್ನಲ್ಲಿ ಏಕಾರ್ಥವಾಗಬೇಕೆಂಬ ನಿಮಿತ್ಯ ಭಕ್ತಿಹಿತಾರ್ಥವಾಗಿ ಜೀವಾದ್ಯೈತಭಕ್ತಿಕಾರಣಾರ್ಥವಾಗಿ ಶಿಷ್ಯನು ಉಪಾವಸ್ಥೆ ಭಕ್ತಿ ನಿಮಿತ್ಯಾರ್ಥವಾಗಿ ಎಂಬುವುದು ಸರಿ.

ಮತ್ತಂತುಮಲ್ಲದೆ ಜ್ಞಾನೋದಯವಾಗಲಡಿಗೆರಗಿ ಬಂದ ಜ್ಞಾನಕಲಾತ್ಮನ ವಿಶ್ವಾಸಕ್ಕೋಸ್ಕರ ಪರಾತ್ಪರವಪ್ಪ ಅವುದು ಪರವಾಗಿಹುದೋ ಅದಕ್ಕೆ ಪರವಾದ ಮನೋಹರವಾದ ಮಹಾಲಿಂಗವು ತಾನೇ ಹನ್ನೊಂದು ತೆರನಾಯಿತ್ತು ಏಕಾದಶ ತತ್ವಸ್ವರೂಪವನ್ನು ತಳೆಯಿತು. ಇಂತು ಏಕಾದಶತತ್ವಸ್ವರೂಪವನ್ನು ತಾಳಿದ ಪರಿಕ್ರಮ ತರುವಾಯದ ನಿಲುಕಡೆಯು ಹೇಗಿಪ್ಪುದೆಲೆ ಸ್ವಾಮಿ ಎಂದು ಬೆಸಗೊಂಡೊಡೆ–

೧[ಶಾಂತ್ಯಾತೀತ ಮೊದಲಾದ ಕಲೆಗಳೈದು]೧ ಶಿವಸಾದಾಖ್ಯವೇ ಮೊದಲಾದ ಕರ್ತೃಗಳೈದು, ಈ ಎಲ್ಲಕ್ಕುಪರಿಯಾಗಿ ತೋರುವ ಮೇಲಣ ಮಹಾಲಿಂಗತತ್ವ ತಾನೊಂದು, ಪ್ರಥಮದಲ್ಲಿ ನಿರೂಪಣವ ಪಾಲಿಸಿದ ಅಂಗಸಂಬಂಧವಾದ ತತ್ವಂಗಳಿಪ್ಪತ್ತೈದು, ಲಿಂಗಸಂಬಂಧವಾದ ತತ್ವಗಳು ಹನ್ನೊಂದು, ಅಂಗಲಿಂಗ ಸಂಬಂಧವಾದುಭಯತತ್ವಂಗಳು ಕೂಡಿ ಮೂವತ್ತಾರು ತತ್ವಂಗಳಾದವು. ಈ ಮೂವತ್ತಾರುತತ್ವಂಗಳು ಸಮರಸೈಕ್ಯವೆಂಬುವದು ಸರಿ. ಲಿಂಗತತ್ವ ಇಪ್ಪತ್ತೈದು ಕಲಾಶಕ್ತಿಯರ ಬಲದಿಂದ ಸಾದಾಖ್ಯಂಗಳಲ್ಲಿ ಸಮರಸವಾಗುವ ನಿಲುಕಡೆಯು ಹೇಗಿಪ್ಪುದೆಲೆ ಸ್ವಾಮಿ ಎಂದು ಬೆಸಗೊಂಡೊಡೆ–ಕರ್ಮ ಕ್ರಿಯಾರೂಪವಾದ

೧–೧ ಶಾಂತಿ–ಭಕ್ತಿಮೊದಲಾದ ಶಕ್ತಿಗಳೈದು (ಮೂ)

ವಾಗಾದಿ ಇಂದ್ರಿಯಗಳೈದು, ನಿವೃತ್ತಿಕಲಾ ಪರಿಯಾಯನಾಮವನುಳ್ಳ ಕ್ರಿಯಾ ಶಕ್ತಿಯನ್ನು ಕೂಡಿ ಎಂಬಲ್ಲಿ ಶಿವ ಎಂಬುದೆ ವಾಕ್ಯ, ಶಿವಾಚಾರವನ್ನು ದೃಢವಿಡುವುದೇ ಪಾಣಿ, ಗುರುಮಾರ್ಗಾಚಾರದಲ್ಲಿ ಆಚರಿಸುವುದೇ ಪಾದ, ಅಧೋಗತಿಗಿಳಿಸಿ ಮಲತ್ರಯಂಗಳನ್ನು ವಿಸರ್ಜಿಸಿ ಶಿವಾನುಭವಿಗಳ ಸತ್ಸಂಗದಲ್ಲಿ ಸದಾ ಆನಂದಿಸುವುದೇ ಗುಹ್ಯವು. ಬಿಡುವುದೇ ಪಾಯು. ಈ ರೀತಿಯಾಗಿ ವಾಗಾದಿ ಕರ್ಮೇಂದ್ರಿಯಗಳು ನಿವೃತ್ತಿಯಾಗಿ ನಿವೃತ್ತಿಕಲಾ ಪರಿಯಾಯನಾಮವನುಳ್ಳ ಕ್ರಿಯಾಶಕ್ತಿಯನ್ನೈದಿ ಆ ಕ್ರಿಯಾಶಕ್ತಿಯ ಬಲದಿಂದ ಕರ್ಮಸಾದಾಖ್ಯಸ್ವರೂಪಮಾದ ಆಚಾರಲಿಂಗವನೊಡಗೂಡಿದಲ್ಲಿ ಪೃಥ್ವೀತತ್ವ ಬಯಲಾಯಿತ್ತು.

ಪೃಥ್ವಿಯಳಿದು ಚಿತ್‌ಪೃಥ್ವಿಯ ಸ್ವರೂಪಿನಿಂದ ಭಕ್ತಂಗೊಡಲಾಗಲು ಆ ಭಕ್ತನು ಆಚಾರಲಿಂಗದಂಗವಾಗಿ ಆಚಾರಲಿಂಗದಲ್ಲಿಯೇ ಅಡಗಿದನು ಎಂಬುದರ್ಥ. ಶಬ್ದ ವಿಷಯವೇ ಮೊದಲಾದೈದು ತನ್ಮಾತ್ರೆಗಳು ಪ್ರತಿಷ್ಠಾ ಕಲಾಪರಿಯಾಯ ನಾಮವನುಳ್ಳ ಜ್ಞಾನಶಕ್ತಿಯನ್ನು ಕೂಡಿ ಎಂಬಲ್ಲಿ ಶಬ್ದ ಗುರು, ಸ್ಪರ್ಶನ ಲಿಂಗ, ರೂಪು ಶಿವಲಾಂಛನ, ರಸ ಶಿವಪ್ರಸಾದ, ಗಂಧ ಶಿವನಿರ್ಮಾಲ್ಯ, ಸಬ್ದಾದಿ ವಿಷಯಂಗಳೈದು ನಿವೃತ್ತಿಯಾಗಿ ಪ್ರತಿಷ್ಠಾಕಲಾಪರಿಯಾಯನಾಮವನುಳ್ಳ ಜ್ಞಾನಶಕ್ತಿಯನ್ನು ಕೂಡಿ ಆ ಜ್ಞಾನಶಕ್ತಿಯ ಬಲದಿಂದ ಕರ್ತೃಸಾದಾಖ್ಯಸ್ವರೂಪವಾದ ಗುರುಲಿಂಗವನ್ನೊಡಗೂಡಿದಲ್ಲಿ ಅಪ್ಪುತತ್ವ ಬಯಲಾಯಿತ್ತು.

ಅಪ್ಪುವಳಿದು ಚಿದಪ್ಪುಸ್ವರೂಪಿನಿಂದ ಮಹೇಶ್ವರಂಗೊಡಲಾಗಲು ಆ ಮಹೇಶ್ವರನು ಗುರುಲಿಂಗವಾಗಿ ಗುರುಲಿಂಗದಲ್ಲಿಯೇ ಅಡಗಿದನೆಂಬುದರ್ಥ. ಅರಿವು ರೂಪಮಾದ ಶ್ರವಣಾದಿ ಇಂದ್ರಿಯ ವಿದ್ಯಾಕಲಾ ಪರಿಯಾಯನಾಮವನುಳ್ಳ ಇಚ್ಛಾಶಕ್ತಿಯನ್ನು ಕೂಡಿ ಎಂಬಲ್ಲಿ ಶ್ರೋತ್ರದಲ್ಲಿ ಶಿವಕಥಾ, ಶಿವಪುರಾಣಾದ್ಯರ ವಚನವಲ್ಲದೆ ಅನ್ಯವಪ್ಪ ಮಾಯಾ ಕುಶಾಸ್ತ್ರ ಕುಭಾಷೆಗಳಂ ಕೇಳದಿಹುದು. ತ್ವಕ್ಕಿನಲ್ಲಿ ಶ್ರೀ ವಿಭೂತಿ ರುದ್ರಾಕ್ಷಿ ಶಿವಲಿಂಗಧಾರಣವಲ್ಲದೆ ಅನ್ಯವಪ್ಪ ಮಾಯಾಚೋಹಂಗಳಂ ಧರಿಸದಿಹುದು. ನೇತ್ರದಲ್ಲಿ ಶಿವಲಿಂಗ ನಿರೀಕ್ಷಣೆಯಲ್ಲದೆ ಅನ್ಯವಪ್ಪ ರೂಪುಗಳಂ ನೋಡದಿಹುದು. ಜಿಹ್ವೆಯಲ್ಲಿ ಶಿವಸುಖ ಪ್ರಸನ್ನೇತಿಪ್ರಸಾದ ಸ್ವೀಕಾರವಲ್ಲದೆ ಅನ್ಯವಪ್ಪ ಮಾಯೋಚ್ಛಿಷ್ಟಂಗಳಂ ಭುಂಜಿಸದಿಹುದು. ಘ್ರಾಣದಲ್ಲಿ ಶಿವನಿರ್ಮಾಲ್ಯ ಗಂಧವಲ್ಲದೆ ಅನ್ಯವಪ್ಪ ಮಾಯಾ ದುರ್ವಾಸನೆಯ ಘ್ರಾಣಿಸದಿಹುದು. ಈ ರೀತಿಯಲ್ಲಿ ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು ನಿವೃತ್ತಿಯಾಗಿ ವಿದ್ಯಾಕಲಾಪರಿಯಾಯನಾಮವನುಳ್ಳ ಇಚ್ಛಾಶಕ್ತಿಯನ್ನು ಕೂಡಿ ಆ ಇಚ್ಛಾಶಕ್ತಿಯ ಬಲದಿಂದ ಮೂರ್ತಿಸಾದಾಖ್ಯ ಸ್ವರೂಪವಾದ ಶಿವಲಿಂಗವನ್ನೊಡಗೂಡಿದಲ್ಲಿ ಅಗ್ನಿತತ್ವ ಬಯಲಾಯಿತ್ತು.

ಅಗ್ನಿಯಳಿದು ಚಿದಗ್ನಿಸ್ವರೂಪಿನಿಂದ ಪ್ರಸಾದಿಗೊಡಲಾಗಲು ಆ ಪ್ರಸಾದಿಯು ಶಿವಲಿಂಗದಂಗವಾಗಿ ಆ ಶಿವಲಿಂಗದಲ್ಲಿಯೇ ಅಡಗಿದನೆಂಬುದರ್ಥ. ಪ್ರಾಣ

ವಾಯುವೇ ಮೊದಲಾದ ವಾಯುಗಳೈದು ಶಾಂತಿಕಲಾಪರಿಯಾಯ ನಾಮವನುಳ್ಳ ಆದಿಶಕ್ತಿಯನ್ನು ಕೂಡಿ ಎಂಬಲ್ಲಿ ಪ್ರಾಣವಾಯುವೇ ಸತ್ತು, ಅಪಾನವಾಯುವೇ ಚಿತ್ತು, ವ್ಯಾನವಾಯುವೇ ಆನಂದ, ಉದಾನವಾಯುವೇ ನಿತ್ಯ, ಸಮಾನ ವಾಯುವೇ ಪರಿಪೂರ್ಣ. ಈ ರೀತಿಯಲ್ಲಿ ಪ್ರಾಣಾದಿ ವಾಯುಗಳು ಪಂಚ ಲಕ್ಷಣ ಸ್ವರೂಪಿನಿಂದ ನಿವೃತ್ತಿಯಾಗಿ ಶಾಂತಿಕಲಾ ಪರಿಯಾಯನಾಮವನುಳ್ಳ ಆದಿಶಕ್ತಿಯನ್ನು ಕೂಡಿ ಆ ಆದಿಶಕ್ತಿಯ ಬಲದಿಂದ ಅಮೂರ್ತಿಸಾದಾಖ್ಯ ಸ್ವರೂಪವಾದ ಜಂಗಮ ಲಿಂಗವನ್ನೊಡಗೂಡಿದಲ್ಲಿ ವಾಯುತತ್ವ ಬಯಲಾಯಿತ್ತು. ವಾಯುವಳಿದು ಚಿದ್ವಾಯುಸ್ವರೂಪಿನಿಂದ ಪ್ರಾಣಲಿಂಗಿಗೊಡಲಾಗಲು ಆ ಪ್ರಾಣಲಿಂಗಿಯು ಜಂಗಮಲಿಂಗಕ್ಕಂಗವಾಗಿ ಆ ಜಂಗಮಲಿಂಗದಲ್ಲಿಯೇ ಅಡಗಿದ ನೆಂಬುದರ್ಥ. ಚಿತ್ತ ಬುದ್ಧಿ, ಅಹಂಕಾರ, ಮನ, ಮೂಲಾತ್ಮನೆಂಬೈದಂತಃ ಕರಣಂಗಳು ಶಾಂತ್ಯಾತೀತ ಕಲಾಪರಿಯಾಯ ನಾಮವನುಳ್ಳ ಪರಾಶಕ್ತಿಯನ್ನು ಕೂಡಿ ಎಂಬಲ್ಲಿ ಚಿತ್ತದಲ್ಲಿ ದಾಸೋಹ, ಬುದ್ಧಿಯಲ್ಲಿ ನಿರ್ವಂಚನೆ, ಅಹಂಕಾರದಲ್ಲಿ ನಿರಹಂಕಾರ, ಮನದಲ್ಲಿ ಶಿವಧ್ಯಾನ, ಜೀವನಳಿದು, ಸಜ್ಜೀವ ಈ ರೀತಿಯಲ್ಲಿ ಚಿತ್ತಾದಿ ಕರಣಂಗಳೈದು ನಿವೃತ್ತಿಯಾಗಿ, ಶಾಂತ್ಯಾತೀತಕಲಾಪರಿಯಾಯನಾಮವನುಳ್ಳ ಪರಾಶಕ್ತಿಯನ್ನು ಕೂಡಿ ಎಂಬಲ್ಲಿ ಆ ಪರಾಶಕ್ತಿಯ ಬಲದಿಂದ ಶಿವಸಾದಾಖ್ಯ ಸ್ವರೂಪವಾದ ಪ್ರಸಾದಲಿಂಗ ವನ್ನೊಡಗೂಡಿದಲ್ಲಿ ಆಕಾಶತತ್ವ ಬಯಲಾಯಿತ್ತು.

ಆ ಆಕಾಶವಳಿದು ಚಿದಾಕಾಶ ಸ್ವರೂಪಿನಿಂದ ಶರಣಂಗೊಡಲಾಗಲು ಆ ಶರಣನು ಪ್ರಸಾದಲಿಂಗದಂಗವಾಗಿ ಪ್ರಸಾದಲಿಂಗದಲ್ಲಿಯೇ ಅಡಗಿದನೆಂಬುದರ್ಥ.

ಇಂತು ಈ ದೇಹಸಂಬಂಧವಾಗಿ ಇಪ್ಪತ್ತೈದು ತತ್ವಂಗಳು ಕಲಾದಿ ಶಕ್ತಿಯರ ಬಲದಿಂದ ಸಾದಾಖ್ಯಾದಿ ಲಿಂಗಗಳಲ್ಲಿ ಸಮರಸವಾದ ಕೂಡಲೆ ಆ ಲಿಂಗ ಸಂಬಂಧವಾದ ಹನ್ನೊಂದುತತ್ವಂಗಳು ಒಂದೊಂದುತತ್ವವು ಒಂದೊಂದು ತತ್ವದೊಡನೆ ಬೆರೆಯಲು ಎಂಬಲ್ಲಿ ನಿವೃತ್ತಿಕಲಾ ಪರ್ಯಾಯನಾಮವನುಳ್ಳ ಕ್ರಿಯಾಶಕ್ತಿಯೇ ಪ್ರತಿಷ್ಠಾಕಲಾ ಪರ್ಯಾಯನಾಮವನುಳ್ಳ ಜ್ಞಾನಶಕ್ತಿಯನ್ನು, ಪ್ರತಿಷ್ಠಾಕಲಾ ಪರ್ಯಾಯನಾಮವನುಳ್ಳ ಜ್ಞಾನಶಕ್ತಿಯೇ ವಿದ್ಯಾಕಲಾ ಪರ್ಯಾಯ ನಾಮವನುಳ್ಳ ಇಚ್ಛಾಶಕ್ತಿಯನ್ನು, ವಿದ್ಯಾಕಲಾಪರ್ಯಾಯನಾಮವನುಳ್ಳ ಇಚ್ಛಾ ಶಕ್ತಿಯೇ ಶಾಂತಿಕಲಾ ಪರ್ಯಾಯ [ನಾಮವನುಳ್ಳ] ಆದಿಶಕ್ತಿಯನ್ನು, ಶಾಂತಿ ಕಲಾಪರ್ಯಾ ಯನಾಮವನುಳ್ಳ ಆದಿಶಕ್ತಿಯೆ ಶಾಂತ್ಯಾತೀತ ಕಲಾಪರ್ಯಾಯ ನಾಮವನುಳ್ಳ ಪರಾಶಕ್ತಿಯನ್ನು, ಶಾಂತ್ಯಾತೀತ ಕಲಾಪರ್ಯಾಯ ನಾಮವನುಳ್ಳ ಪರಾಶಕ್ತಿಯೇ ಶಾಂತ್ಯಾತೀತೋತ್ತರ ಕಲಾ ಪರ್ಯಾಯ ನಾಮವನುಳ್ಳ ಚಿಚ್ಛಕ್ತಿಯನ್ನು ಬೆರದೇ ಕಾರ್ಥವಾಗಿರ್ದಾಗ ಎಂಬಲ್ಲಿ ಕರ್ಮಸಾದಾಖ್ಯಸ್ವರೂಪವಾದ ಆಚಾರಲಿಂಗವೇ ಕರ್ತೃಸಾದಾಖ್ಯಸ್ವರೂಪವಾದ ಗುರುಲಿಂಗದಲ್ಲಿ, ಕರ್ತೃಸಾದಾಖ್ಯ ಸ್ವರೂಪವಾದ ಗುರುಲಿಂಗವೇ ಮೂರ್ತಿಸಾದಾಖ್ಯಸ್ವರೂಪವಾದ ಶಿವಲಿಂಗದಲ್ಲಿ,

ಮೂರ್ತಿ ಸಾದಾಖ್ಯಸ್ವರೂಪವಾದ ಶಿವಲಿಂಗವೆ ಅಮೂರ್ತಿಸಾದಾಖ್ಯಸ್ವರೂಪವಾದ ಜಂಗಮಲಿಂಗದಲ್ಲಿ, ಅಮೂರ್ತಿಸಾದಾಖ್ಯಸ್ವರೂಪವಾದ ಜಂಗಮಲಿಂಗವೇ ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗದಲ್ಲಿ, ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗವೇ ಮಹಾಸಾದಾಖ್ಯಸ್ವರೂಪವಾದ ಮಹಾಲಿಂಗದಲ್ಲಿ ಸಮರಸವಾಗಲು ಕುಳಸ್ಥಲ ಅಂಗ ಲಿಂಗದಾಚರಣೆಯಡಗಿತ್ತು. ನಿಃಪತಿಯಾಗಿ ಹೋಯಿತ್ತು.

ಇಂತು ಈ ಅಂಗಲಿಂಗದಾಚರಣೆಯು ನಿಃಪತಿಯಾದ ಕೂಡಲೆ ಪರಾತ್ಪರವಪ್ಪ ಮಹಾಲಿಂಗವು ಒಂದಾನೊಂದು ಪಯೋಧರೋಪಲವು ನೋಡನೋಡುತ ಕರಗಿ ಶೀತಳ ನೀರಾದಂತೆ ತನ್ನ ಪರಮ ನಿರ್ಗುಣಾನಂದ ಲೀಲಾವಿಲಾಸದಿಂದಲೆ ತೋರಿಕೆಯನೆಲ್ಲ ತನ್ನಲ್ಲಿಯೊಳಗೊಂಡು ತಾನೆಂದಿನಂತೆ ನಿರಾಕಾರವಾಯಿತ್ತು. ಆ ವಿಚಾರವು ಹೇಗಿಪ್ಪುದೆಲೆ ಸ್ವಾಮಿ ಎಂದು ಬೆಸಗೊಂಡೊಡೆ, ಗುರುವಾಕ್ಯ ಸದೃಶವಾದ ಹರವಾಕ್ಯವನ್ನು ನಿರೂಪಿಸುತಿಹರು.

ಪೂರ್ವದಲ್ಲಿ ಪ್ರಸಿದ್ಧವಾದ ಖಲದ ತಂಡುಲದೋಪಾದಿಯಲ್ಲಿ ಸಕಲ ತತ್ವಂಗಳಾವರಣವಿಲ್ಲದ ಪರಬ್ರಹ್ಮವು ''ಕರ್ತಾಕರ್ಮವಿವರ್ಜಯೇತ್''– ಕರ್ತಾ ಪೂಜಿಸುವ ಭಕ್ತನು, ಕರ್ಮ ಪೂಜಾಕ್ರಿಯೆಗಳನ್ನು, ವಿವರ್ಜಯೇತ್ ಬಿಡಬೇಕು ; ಅಂದರೆ ಇವೇನು ಇಲ್ಲದೆ ತಾನೊಂದೊಪ್ಪುತ್ತಿರ್ದಿತ್ತು. ಹಾಗೆ ನಿರವಯ ನಿರಾಕಾರ ವಾಗೊಪ್ಪುತ್ತಿರ್ದ ಪರಬ್ರಹ್ಮವು ತಾನೆ ಸಾಕಾರವಾದ ಶರಣನಾದನು. ಸಾಕಾರವಾದ ಶರಣನಾಗಿ ಸರ್ವಾಚಾರ ಸಂಪತ್ತುವಿಡಿದಾಚರಿಸಿ, ಆ ಆಚರಣೆ ಸಮಾಪ್ತವಾದ ಬಳಿಕ ಸ್ವಯಮೇವ ಅವನೆಲ್ಲವ ತನ್ನಲ್ಲೊಳಕೊಂಡು ತಾನೆಂದಿನಂತೆ ನಿರಾಕಾರ ವಾಗುತ್ತಿದ್ದಿತ್ತು. ಅಂತಿರ್ದ ಪರಬ್ರಹ್ಮಕ್ಕೆ ಅಂತರಂಗವು ಬಹಿರಂಗವು ಭೂಮ್ಯಾಕಾಶ ಮೊದಲಾದ ಹತ್ತು ದಿಕ್ಕುಗಳು ಇಲ್ಲ. 'ನಿರ್ದ್ವಂದ್ವಂ' ಕರ್ತುಕರ್ಮಗಳೆಂಬ ಭೇದ ಪ್ರಪಂಚವಿಲ್ಲದಂಥಾದ್ದು 'ಪರಮಂ ಪದಂ' ಉತ್ಕೃಷ್ಟವಾದ ಪರಬ್ರಹ್ಮ ವಾದಂಥಾದ್ದು, ಹೀಗೆಂಬುದಾಗಿ ಶ್ರುತಿವಾಕ್ಯವು ಹೇಳುತ್ತಿಹುದಾದ ಕಾರಣ ಪ್ರಥಮದಲ್ಲಿ ನಿರೂಪಣವ ಪಾಲಿಸಿದ ಅಂಗಸಂಬಂಧವಾದ ತತ್ವಂಗಳಿಪ್ಪತ್ತೈದು, ದ್ವಿತೀಯದಲ್ಲಿ ನಿರೂಪಣವ ಪಾಲಿಸಿದ ಲಿಂಗಸಂಬಂಧವಾದ ತತ್ವಂಗಳು ಹನ್ನೊಂದು, ಈ ಉಭಯ ತತ್ವಂಗಳು ಕೂಡಿ ಮೂವತ್ತಾರು, ಒಂದರೊಳಗೊಂದು ಸಮರಸವಾಗಿ ಎಂಬಲ್ಲಿ ಅಂಗತತ್ವ ಇಪ್ಪತ್ತೈದು ಕಲಾಶಕ್ತಿಯ ಬಲದಿಂದ ಸಾದಾಖ್ಯ ಲಿಂಗಂಗಳಲ್ಲಿ ಸಮರಸವಾಗಿ ಸರ್ವಶೂನ್ಯವನೈದಿದ ಸಮಸ್ತ ತೋರುವ ತೋರಿಕೆ ಎಲ್ಲ ತನ್ನಲ್ಲಿ ಒಳಕೊಂಡು ತಾನೆಂದಿನಂತೆ ನಿರಾಕಾರಸ್ವರೂಪವನ್ನು ತಾಳಿದ ಪರಿಕ್ರಮದ ನಿರ್ಣಯದ ಬೆಡಗು ತತ್ವಮಸ್ಯಾದಿ ವಾಕ್ಯಗಳಲ್ಲಿ ತತ್ ತ್ವಂ ಅಸಿ ಎಂಬ ಪದತ್ರಯಂಗಳ ಸ್ವರೂಪವನ್ನು ಹೇಳುವ ಉಪನಿಷದ್ವಾಕ್ಯದ ಅರ್ಥಂಗಳಲ್ಲಿ ಕಾಣಲಾಯಿತ್ತು. ಅದೆಂತೆಂದೊಡೆ–

ಶ್ಲೋಕ: 'ತತ್ಪದೇನೋಚ್ಯತೆ ಲಿಂಗಂ' ತತ್ಪದದಿಂದ ಹೇಳುವುದೇ ಲಿಂಗ.

ಶಿವತತ್ವನೊಂದೊಳಕೊಂಡು ತೋರುವ ಮಹಾಲಿಂಗವೆಂದು 'ಉಚ್ಯತೆ' ಹೇಳಲ್ಪಟ್ಟಿತು. 'ತ್ವಂ ಪದೇನಾಂಗಮೀರಿತಂ' ತ್ವಂಪದದಿಂದ ಹೇಳುವುದೇ ಅಂಗ, ಇಪ್ಪತ್ತೈದು ತತ್ವವನೊಳಕೊಂಡು ತೋರುವ ಶರೀರವೆಂದು ಈ ರೀತಿ ಹೇಳಲ್ಪಟ್ಟಿತ್ತು. 'ಅನಯೋರೈಕ್ಯಭಾವೇನ ಸಂಬಂಧೋಸಿಪದೇನ ಚ ಅನಯೋಃ' ಈ ಲಿಂಗಾಂಗವೆಂಬೆರಡರ 'ಐಕ್ಯ ಭಾವೇನ' ಕೂಟಸ್ವರೂಪವಾದ ಭಕ್ತಿಯುಳ್ಳ, 'ಪದೇ' ಪದದೊಡನೆ 'ಸಂಬಂಧಃ' ಸಮರಸವು 'ಅಸಿ' ಆಗಿದ್ದಿತು. ಅಂತಹ ವಿದ್ಯಾತತ್ವವನೊಳಕೊಂಡು ತೋರುವ ಅಸಿಪದವಲಾ ಹೀಗೆಂದು ಶ್ರುತಿವಾಕ್ಯವು ಹೇಳುವುದು. ಲಿಂಗಾಂಗವೆಂಬುಭಯ ಪದದ ವಾಕ್ಯವೇ ಅಸಿಪದವು ಮತ್ತು ವಿದ್ಯಾತತ್ವವನೊಳಗೊಂಡು ತೋರುವ ಅಸಿಪದವೆಂದು ಹೇಳುವುದು. ಒಂದು ವೇಳೆ ಪರಶಿವನಿಗೆ ವಿಶ್ವವ ಸೃಜಿಸಿ ವಿನೋದಿಸಬೇಕೆಂಬ ಸಗುಣಾನಂದ ಲೀಲಾವಿಲಾಸದ ನೆನವು ತೋರಿದೊಡೆ, 'ಇದಂ ಭೂತ್ವಾ' ಎಂದು ನೆನೆದಾಕ್ಷಣವೆ ಅನಂತಕೋಟಿ ಬ್ರಹ್ಮಾಂಡ ತಂಡಗಳಂ ಪುಟ್ಟಿಸಿ, ಅವರೊಳಗಿರುವ ದೇವ ದಾನವ ಮಾನವಾದಿಗಳೇ ಭೃತ್ಯರಾಗಿ ತಾನೇ ಕರ್ತನಾಗಿ ಅವರಿಂದ ಪೂಜಾ ನಮಸ್ಕಾರವ ಕೈಕೊಂಡು ಅವರವರ ಮನೋಭೀಷ್ಟಂಗಳಂ ಕೊಟ್ಟು ವಿನೋದಿಸಬಲ್ಲನು. ಒಂದು ವೇಳೆ ಪರಶಿವಂಗೆ ಆ ಲೀಲೆ ಸಾಕಾದೊಡೆ ಹುತಭುಕ್ ಎಂದು ನೆನೆದಾಕ್ಷಣವೆ ಅವನ್ನೆಲ್ಲ ತನ್ನಲ್ಲಿ ಒಳಕೊಂಡು ತಾನೆಂದಿನಂತೆ ನಿರಾಕಾರವಾಗಿರಬಲ್ಲನು. ಸಾವಯವ ನಿರವಯವ ಲೀಲೆಗಳೆರಡನ್ನು ಮೀರಿದಾತನಾಗಿ ಏನೇನು ಇಲ್ಲದ, ತೋರುವ ತೋರಿಕೆ ಒಂದಕ್ಕೂ ಕುರುಹುಗಾಣಿಸದ [ಬ್ರಹ್ಮವಾಗಿ ಒಪ್ಪುತಿರುವನು] ಎಲೆ ಸ್ವಾಮಿ ನಿಮ್ಮ ಷಟ್ಸ್ಥಲ ಬ್ರಹ್ಮಿಗಳಿಗೆ ಕರ್ತನಾದ ಗುಹೇಶ್ವರಲಿಂಗವು ಸರ್ವರ ಹೃದಯಾಂತರ್ಯಾಮಿಯಾದ ಪರಶಿವಲಿಂಗಮೂರ್ತಿಯು ಎಂಬರ್ಥ.

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನವು ಸಮಸ್ತ ಶಿವಶರಣರ ಶ್ರೋತ್ರಮುಖದಲ್ಲಿಯೇ ಮುಕ್ತವಾಯಿತ್ತು. ಇಂತಪ್ಪ ಜ್ಞಾನಶಾಸ್ತ್ರವನ್ನು ಬರೆದು ಪಾಠವ ಮಾಡಿಕೊಂಡು ಜ್ಞಾನಗುರುಗಳಿದ್ದೆಡೆ ಪೋಗಿ ದೀರ್ಘದಂಡ ನಮಸ್ಕಾರವಂ ಮಾಡಿ ಭಕ್ತಿಯುಪಚಾರಂಗಳಿಂದ ಇದರರ್ಥಾಭಿಪ್ರಾಯವನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯ ಮುಖದಲ್ಲಿಂಬುಗೊಂಡು ಅಂಗವ ಮಾಡಿಕೊಂಡು ಆಚರಿಸುವ ಶಿವಶರಣರುಗಳೆಲ್ಲರೂ ನಿರತಿಶಯಜ್ಞಾನದ ನಿಜೈಶ್ವರ್ಯವನ್ನು ಪಡೆದು ಸುಖದಿಂದ ಬಾಳುತಿಹರೆಂಬುದು ಈ ಶಾಸ್ತ್ರದ ಫಲಶ್ರುತಿಯು.

೪ ನೆಯ ವಚನ :

೫೭

(೪) ಕೇವಲ ಸದ್ರೂಪ ನಿಷ್ಕಳಶಿವತತ್ವ ತನ್ನೊಳ್ತಾನೇ ಪ್ರಕಾಶಿಸುತ್ತಿರ್ಪುದರಿಂ ಪರಮಾತ್ಮನೆಂಬ ಸಂಜ್ಞೆಯಿಂ ತನ್ನ ನಿಜಮಹಾತ್ಮೆ ಪ್ರಕಟನೆಗೋಸುಗ ತಾನೇ

ಆತ್ಮನಾಗಿ, ಆತ್ಮನೇ ಆಕಾಶಮಾಗಿ, ಆಕಾಶವೇ ವಾಯುವಾಗಿ, ವಾಯುವೇ ಅಗ್ನಿಯಾಗಿ, ಅಗ್ನಿಯೇ ಜಲಮಾಗಿ, ಆ ಜಲವೇ ಪೃಥ್ವೀ ರೂಪಮಾಗಿ ಗಟ್ಟಿಗೊಂಡು ಆ ಪೃಥ್ವಿಗೆ ಜಲವೇ ಕಾರಣಮಾಗಿ, ಆ ಜಲಕಗ್ನಿಯೇ ಕಾರಣಮಾಗಿ, ಆ ಅಗ್ನಿಗೆ ವಾಯುವೇ ಕಾರಣಮಾಗಿ, ಆ ವಾಯುವಿಗೆ ಆಕಾಶವೇ ಕಾರಣಮಾಗಿ, ಆ ಆಕಾಶಕ್ಕಾತ್ಮನೇ ಕಾರಣಮಾಗಿ, ಆ ಆತ್ಮನಿಗೆ ಪರಮಾತ್ಮನೇ ಕಾರಣಮಾಗಿ, ಒಂದಕ್ಕೊಂದು ತಮ್ಮಲ್ಲಿಯೇ ತಾವು ಸೃಷ್ಟಿ ಸ್ಥಿತಿ ಸಂಹಾರಂಗಳಿಗೆ ಕಾರಣಮಾಗಿರ್ಪ ಆತ್ಮಾದಿ ಷಡ್ಭೂತಂಗಳಿಗೆ ತಾನೇ ಚೈತನ್ಯಸ್ವರೂಪಮಾಗಿರ್ಪ ಪರಮನು ಆತ್ಮ ಸಂಗದಿಂ ಜೀವಕೋಟಿಗಳಂ ಸೃಷ್ಟಿಸಿ, ಕರ್ಮಕ್ಕೆ ಕಾರಣಮಂ ಮಾಡಿ ಕ್ರೀಡಿಸುತ್ತಿರ್ದನದೆಂತೆಂದೊಡೆ : ಜಲವು ತಾನೇ ಪೃಥ್ವೀಸ್ವರೂಪಮಾಗಿ ಬಲಿದು ಆ ಪೃಥ್ವಿಯನ್ನೇ ತನಗಾಧಾರವಂ ಮಾಡಿಕೊಂಡು, ತಾನೇ ಪೃಥ್ವಿಗೆ ಆಧಾರಮಾಗಿ ಪೃಥ್ವಿಯಂ ಪರಿವೇಷ್ಟಿಸಿರ್ಪ ಜಲವೇ ಪತಿಯಾಗಿ ಪೃಥ್ವಿಯಲ್ಲಿ ಪರಿವ ಜಲವೇ ಸತಿಯಾಗಿರ್ಪ ಆ ಜಲಬಂಧದಿಂ ಕುಡ್ಯ ಸೌಧ ಗೃಹಾದಿ ನಾನಾ ಸ್ವರೂಪಂಗಳಾಗಿ ನಿಂತು, ತನ್ನಲ್ಲಿರ್ಪ ಜಲವಾರಿ ಹೋಗಲು, ಆ ಸೃಷ್ಟಿಶಕ್ತಿಯಿಂ ತಾಂ ಗಟ್ಟಿಗೊಂಡು, ಜೀವರಿಗೆ ಜಲಹಿಂಸೆಯಂ ನಿವಾರಣಮಾಡುತ್ತಾ, ಆ ಜಲದಿಂದಲ್ಲೇ ತಾನು ಲಯವನ್ಯೆದುತ್ತಿರ್ಪಂದದಿ ಆ ಪರಮಾತ್ಮನೇ ಆತ್ಮನಂ ಸುತ್ತಿ ಆತ್ಮನಲ್ಲೇ ಸುಳಿದು, ತಾನೇ ಶಿವಶಕ್ತಿ ಸ್ವರೂಪಮಾಗಿ, ತನ್ನಿಂದ ಬದ್ಧಮಾಗಿರ್ಪ ಆತ್ಮಪದಾರ್ಥದಲ್ಲಿ ಜೀವಜಾಲಂಗಳಂ ಸೃಷ್ಟಿಸಿ, ಪೃಥ್ವಿಯಲ್ಲಿ ಬೆಳೆದ ಬೆಳೆಯನ್ನು ಗೃಹದಲ್ಲಿ ತುಂಬಿ, ಶರೀರದಿಂದ ಅನುಭವಿಸುವಂದದಿ ಆತ್ಮನಿಂದ ಬೆಳೆದ ಕರ್ಮದ ಬೆಳೆಯನ್ನು ಜೀವಂಗಳಲ್ಲಿ ತುಂಬಿ, ತದನುಭವಕ್ಕೆ ತಾನೇ ಕಾರಣಮಾಗಿ, ನಿಜ ಮಹಾತ್ಮ್ಯ ಪ್ರಕಟನಮಂ ಮಾಡಿಯಾಡುತ್ತಿರ್ಪ ಭವನೇ ನಿನ್ನ ಸಂಬಂಧಮಾಗಿರ್ಪುದಂ ಭಾವದಲ್ಲಿ ತಿಳಿದು ನೋಡಿದಲ್ಲಿ, ಎಲ್ಲವೂ ನೀನಾಗಿರ್ಪೆಯಲ್ಲದೆ, ಪೆರ ತೊಂದುಂಟೇನಯ್ಯ ? ನಿನ್ನ ಕ್ರೀಡಾನಿಮಿತ್ತ ನಾನೆಂಬ ಬರಿಯ ಭ್ರಮೆಯಂ ಸೃಷ್ಟಿಸಿ, ಕಷ್ಟಬಡುವುದೊಳ್ಳಿತ್ತೇನಯ್ಯಾ.. ಅರಿಯದವನ ಮುಂದೆ ಇಂದ್ರಜಾಲವಂ ಮಾಡಲು, ಪರಿಶೋಭಿಸಬಲ್ಲುದೇ ? ನಿನ್ನ ಮಾಯೆ ಎನಗೆ ಮನೋರಥ ಮಾಗಬಲ್ಲುದೇ ? ಬೇರ ಬಲ್ಲವಂಗೆ ಎಲೆಯಂ ತೋರ ಹೋದರೆ, ಅಪಹಾಸ್ಯ ಕಾರಣಮಾಗಿಹುದು. ಇದನರಿತು ನನ್ನಂ ಕಾಡದಿರು ಕಂಡ್ಯಾ ಮಹಾಘನದೊಡ್ಡ ದೇಶಿಕಾರ್ಯಗುರು ಪ್ರಭುವೆ.

೫೮

ಪೃಥ್ವಿಯು ಜಲದಿಂದಲೇ ಪೂತಮಾಗಿ, ಅದರಿಂದಲೇ ಪೆರ್ಚಿ, ಅದರಿಂದಲೇ ಲಯವಂ ಹೊಂದುವದು. ಅಗ್ನಿಯು ವಾಯುವಿನಿಂದಲೇ ಶುಚಿಯಾಗಿ, ಪೆರ್ಚಿ, ಅದರಿಂದಲೇ ಲಯವಂ ಹೊಂದುವದು. ಆಕಾಶರೂಪಮಾದ ಸಕಲ ಗುಣಂಗಳು ಆತ್ಮನಿಂದಲೇ ಪೆರ್ಚಿ, ಆತ್ಮನಿಂದಲೇ ಪವಿತ್ರಮಾಗಿ, ಆತ್ಮನಿಂದಲೇ ಲಯವಂ

ಹೊಂದುವಲ್ಲಿ ಪೃಥ್ವಿಯು ಲಯಮಪ್ಪಲ್ಲಿ ಕರ್ಮವು ನಷ್ಟವಪ್ಪಂತೆ, ಅಂತಪ್ಪ ಪೃಥ್ವೀ ನಷ್ಟವೇ ಬ್ರಹ್ಮನ ಲಯವು, ಅಗ್ನಿನಷ್ಟವೇ ರುದ್ರನ ಲಯವು, ಆಕಾಶನಷ್ಟವೇ ವಿಷ್ಣುವಿನ ಲಯವು. ಅಂತಪ್ಪ ವಿಷ್ಣುವಿನ ಮಾಯೆಯನಳಿದ ನಿರ್ಮಲಾತ್ಮನೇ ಮಹಾಲಿಂಗವು. ಅಂತಪ್ಪ ಮಹಾಲಿಂಗದಲ್ಲಿ ಜೀವಮೂಲ ದೇಶಮೂಲಗಳಾಗಿರ್ಪ ಜಲವಾಯುಗಳ ಸುಳುಹಡಗಿ, ನಾಹಂ ಭ್ರಮೆಯುಡುಗಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ.

೫೯

ಪೃಥಿವ್ಯಾಪ್ತೇಜೋವಾಯ್ವಾಕಾಶಂಗಳಲ್ಲಿ ಪೃಥಿವ್ಯಾಪ್ತೇಜಸ್ಸುಗಳು ಸಾಕಾರಗಳೂ, ವಾಯ್ವಾಕಾ[ಶಾತ್ಮ]ಂಗಳು ನಿರಾಕಾರಗಳೂ ಆಗಿ, ಸ್ಥೂಲ ಸೂಕ್ಷ್ಮ ಕಾರಣಂಗಳಾಗಿಹವು. ಪೃಥ್ವಿಯಲ್ಲೈದು ಗುಣಗಳೂ, ಜಲದಲ್ಲಿ ನಾಲ್ಕು ಗುಣಗಳೂ, ಅಗ್ನಿಯಲ್ಲಿ ಮೂರು ಗುಣಗಳೂ, ವಾಯುವಿನಲ್ಲೆರಡು ಗುಣಗಳೂ ಇರ್ಪವು. ಆಕಾಶದಲ್ಲೊಂದು ಗುಣವಿರ್ಪುದು. ಆತ್ಮನು ನಿರ್ಗುಣಮಾಗಿ ಸಕಲ ಗುಣಂಗಳಿಗೂ ತಾನು ಕಾರಣಮಾಗಿಹನು. ಅದೆಂತೆಂದೊಡೆ–ನಿರ್ಗುಣಮಾದ ಬಿಂದುಪದಾರ್ಥವು ಸಗುಣರೂಪಮಾದ ಮನುಷ್ಯರಿಗೆ ತಾನು ಕಾರಣಮಾಗಿರ್ಪಂದದಿ ಆತ್ಮನಿಹನು. ಪಂಚವರ್ಣಂಗಳು ಸತ್ವರಜಸ್ತಮೋಗುಣಂಗಳು ನಾದಬಿಂದುಕಲೆಗಳು ಬಾಲ್ಯ ಯೌವ್ವನ ಕೌಮಾರ ವಾರ್ಧಕ್ಯಂಗಳು ಇವೆಲ್ಲವೂ ಪ್ರಪಂಚಕ್ಕೆ ಗುಣಂಗಳಲ್ಲದೆ ಆತ್ಮನ ಗುಣವಲ್ಲ. ಅಂತಪ್ಪ ಆತ್ಮನೇ ಶಿವನು, ಆಕಾಶವೇ ವಿಷ್ಣು, ವಾಯುವೇ ಬ್ರಹ್ಮನು, ಇವು ಒಂದಕ್ಕೊಂದು ಸೃಷ್ಟಿ ಸ್ಥಿತಿ ಸಂಹಾರ ಹೇತುಗಳಾಗಿ, ಎಲ್ಲವೂ ಆತ್ಮನಲ್ಲಿ ಲಯವನೈದುತ್ತಿಹವು. ಅಂತಪ್ಪ ಆತ್ಮಸ್ವರೂಪಮೆಂತೆಂದೊಡೆ, ದೃಷ್ಟಿ ಗೋಚರಮಲ್ಲ. ಒಂದು ವಸ್ತುವಿನಲ್ಲಿ ಸಾಮ್ಯಗೋಚರಮಲ್ಲ. ಅದಾವುದೆಂದೊಡೆ, ವಾಯ್ವಾಕಾಶಾತ್ಮಸ್ವರೂಪಿಗಳಾದ ತ್ರಿಮೂರ್ತಿಗಳು – ವಾಯುರೂಪಮಾದ *ಬ್ರಹನೇ ಶಾರದೆಯು ಆಕಾಶರೂಪಮಾದ ವಿಷ್ಣುವೇ ಲಕ್ಷ್ಮಿಯು, ಆತ್ಮರೂಪ ಮಾದ ಶಿವನೇ ಮಹಾದೇವಿಯು*. ವಾಯುರೂಪಮಾದ ಬ್ರಹ್ಮನು ಆತ್ಮ ರೂಪಮಾದ ಶಾರದೆಯನ್ನು ಕೂಡಿಹನು. ಆಕಾಶರೂಪಮಾದ ವಿಷ್ಣುವು ವಾಯು ರೂಪಮಾದ ಲಕ್ಷ್ಮಿಯಂ ಕೂಡಿಹನು. ಆತ್ಮರೂಪಮಾದ ಶಿವನು ಆಕಾಶರೂಪ ಮಾದ ಮಹಾದೇವಿಯಂ ಕೂಡಿಹನು. ಆತ್ಮನೇ ವಿವೇಕವೆಂದು ತಿಳಿವುದು. ವಿವೇಕವೇ ಸತ್ಯಜ್ಞಾನಾನಂದಸ್ವರೂಪು. ವಿವೇಕದಿಂದ ಸಕಲ ಪ್ರಪಂಚವೆಲ್ಲ ಮಿಥ್ಯೆಯಾಗಿಹುದು. ಅಂತಪ್ಪ ಸಕಲ ಪ್ರಪಂಚವೆಲ್ಲವೂ ಮಿಥ್ಯವೆಂದು ತಿಳಿದು ಪ್ರಪಂಚದಲ್ಲಿ ಹೊಂದಿರ್ಪ ವಿವೇಕವೇ ಮುಕ್ತಿಯು. ಆ ಮುಕ್ತಿಯೇ ಶಿವನು. ಅಂತಪ್ಪ ವಿವೇಕದಲ್ಲಿ ನಾಹಂ ಭಾವವಡಗಿ ಅಂತಪ್ಪ ವಿವೇಕವೇ ಮಹಾಲಿಂಗವು.

೧–೧ ಶ (ಮೂ)

– ನೋಡಿ ಅನುಬಂಧ–೨೦, ಟಿಪ್ಪಣಿಗಳು–೨.

ಅಂತಪ್ಪ ವಿವೇಕಮಿರ್ದಲ್ಲಿ ಪಾಪಂಗಳು ಹೊಂದದೇ ಇಹವು. ಅದು ಕಾರಣ ತಾನು ತಾನಾಗಿರ್ಪ ನಿಜಾನಂದ ಸುಖದೊಳೋಲಾಡುತ್ತಿರ್ಪಂತೆ ಮಾಡಾ ಮಹಾಘನ ದೊಡ್ಡ ದೇಶಿಕಾರ್ಯಗುರು ಪ್ರಭುವೆ.

೬೦

ಗೋಳಕಾಕಾರಮಾದ ಮಹಾಲಿಂಗವೇ ಬೀಜ. ಅದು ಸಕಲ ಪ್ರಪಂಚಗಳನ್ನು ತನ್ನೊಳಗಿಟ್ಟುಕೊಂಡು, ಸಕಲಕ್ಕೂ ತಾನೇ ಕಾರಣಮಾಗಿಹುದು. ಅಂತಪ್ಪ ಮಹಾಲಿಂಗವು ಗುರುತಂತ್ರದಿಂ ಭಕ್ತ ಕ್ಷೇತ್ರದಲ್ಲಿ ತಾನೊಂದೆರಡಾದಲ್ಲಿ , ಶಿವಶಕ್ತಿ ಸ್ವರೂಪಮಾದ ಪರ್ಣಶಾಖೆಗಳು ಅಭೇದಮಾಗಂಕುರಿಸಿ, ಪರ್ಣದಿಂದ ಶಾಖೆಯು ಬಲಿದು, ಶಾಖೆಯಿಂದ ಪರ್ಣವು ಬಲಿದು, ಅಂತಪ್ಪ ಶಾಖಾರೂಪಮಾದ ಮುಖಂಗಳಿಂದೊಪ್ಪುತ್ತಿರ್ಪ *ವೃಕ್ಷವೇ ರುದ್ರನು, ಆ ಪರ್ಣವೇ ವಿಷ್ಣು ಫಲವೇ ಬ್ರಹ್ಮ ಪುಷ್ಪವೇ ಪೃಥ್ವಿ, ಫಲವೇ ಜಲ, ನನೆಯೇ ಅಗ್ನಿ, ಪರ್ಣವೇ ವಾಯು, ಆ ವೃಕ್ಷವೇ ಆಕಾಶ, ಬೀಜವೇ ಆತ್ಮ*. ಅಂತಪ್ಪ ಬೀಜಕ್ಕೆ ನಿಂದಲ್ಲಿ ಫಲಪರ್ಣ ಶಾಖೆಗಳು ವರ್ಧಿಸಿ, ಸುಖವಂ ಕೊಡುತಿರ್ಪವು. ಲಿಂಗಾರ್ಚನೆಯಂ ಮಾಡಿದಲ್ಲಿ ಸಕಲ ದೇವತೆಗಳು ತೃಪ್ತರಾಗಿ ವರ್ಧಿಸುತಿರ್ಪರಾದ ಕಾರಣ, ವೀರಶೈವಮತದಲ್ಲಿ ಆತ್ಮಸ್ವರೂಪಮಾದ ಬೀಜ ಒಂದೆರಡಾದುದೇ ಇಷ್ಟ ಪ್ರಾಣಗಳು. ಫಲಮಧ್ಯದಲ್ಲ ನಂತರೂಪಮಾಗಿ ಸಕಲ ಪ್ರಪಂಚವಂ ತನ್ನೊಳಗಿಟ್ಟುಕೊಂಡು ತನ್ನನ್ನು ತಿಳಿದು ಸೃಷ್ಟಿಗೆ ತಾನೇ ಕಾರಣಮಾಗಿ ಪರಮಾನಂದ ಮಹೀರುಹವು ಫಲಿಸಿ ತೃಪ್ತಿ ರೂಪಮಾಗಿ ಆ ಪ್ರಪಂಚಕ್ಕೆ ತಾನೇ ಕಾರಣಮಾಗಿ, ಮಿಕ್ಕವೆಲ್ಲ ಮಿಥ್ಯವಾಗಿ ತೋರುತ್ತಿರ್ಪುದೇ ಭಾವಲಿಂಗವು. ಅಂತಪ್ಪ ಭಾವಲಿಂಗಸಂಗದಲ್ಲಿ ನಿಸ್ಸಂಗ ನಿರ್ಭಾವಮಾದ ನಿತ್ಯಸುಖವನೆನಗಿತ್ತು ಸಲಹಾ ಮಹಾಘನದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೬೧

ಜೀವ ಪಶುಗಳಂ ಕೊಲ್ವ ಕಾಲವ್ಯಾಘ್ರನಂ ಸಂಹರಿಸಿ, ತತ್ವರೂಪಮಪ್ಪ ವಿಚಿತ್ರವರ್ಣವಪ್ಪ ದಿಗ್ವಸನಮುಳ್ಳುದರಿಂ ವ್ಯಾಘ್ರಚರ್ಮಾಂಬರಧಾರಿಯಾದೆ. ನಿನ್ನ ಶಿರಸ್ಸಿನ ಮೇಲೆ ಕರ್ಮಕೇಶಂಗಳಿಲ್ಲದೆ, ನವಗ್ರಹಸ್ವರೂಪ ಪುಷ್ಪಗಳಿಂ ಪರಿಶೋಭಿಯಾಗಿರುವುದರಿಂದ ಗಗನಕೇಶಿಯಾದೆ. ಅಸ್ಥಿರೂಪಮಾದುದೇ ವಜ್ರವು. ಆ ವಜ್ರವೇ ಪುರುಷರತ್ನವು, ಅದು ಚ್ಯುತಿ ಇಲ್ಲದ್ದು, ರತ್ನಂಗಳೆಂಬ ಅವಯವಂಗಳಿಗೆ ಶಿರೋರೂಪಮಾಗಿಹುದು. ಅದೇ ನಿರ್ಮಲಸ್ವರೂಪಮಪ್ಪ ಜ್ಞಾನವೆಂಬ ಭಾವವು. ಅಂತಪ್ಪ ನಿರ್ಮಲಜ್ಞಾನದಿಂ ಶೋಭಿಸಲ್ಪಟ್ಟುದರಿಂ ಅಸ್ಥಿಮಾಲಾಧರನಾದೆ. ಶೇಷನೇ

– ಇಲ್ಲಿ ವಿವರಿಸಲ್ಪಟ್ಟ ಭೂತಗಳು ಹಾಗೂ ದೇವತೆಗಳು ಹೋಲಿಕೆಯ ವಿಚಾರ ಕ್ರಮಬದ್ಧವಾಗಿಲ್ಲ; ಪೃಥ್ವಿಯೇ (ಬ್ರಹ್ಮ) ಬೇರು, ಜಲವೇ (ವಿಷ್ಣು)ಕಾಂಡ, ಅಗ್ನಿಯೇ (ರುದ್ರ) ಪರ್ಣ, ವಾಯುವೇ (ಈಶ್ವರ) ಪುಷ್ಪ, ಆಕಾಶವೇ (ಸದಾಶಿವ)ಕಾಯಿ, ಆತ್ಮನೇ (ಶಿವ) ಫಲ– ಈ ರೀತಿಯಾಗಿ ಪರಿಗಣಿಸಬೇಕು (ಸಂ)

ಮತಿ ಸ್ವರೂಪ, ಆ ಮತಿಯೇ ವಿವೇಕವು, ಅದಕ್ಕೆ ಭಾವವೇ ಶಿರಸ್ಸು, ಆ ಭಾವ ಸಹಸ್ರಮುಖದಲ್ಲಿ ಶೋಭಿಸುತ್ತಿರ್ಪ ಜ್ಞಾನರತ್ನಂಗಳಿಂ ಮನವೆಂಬ ಪೃಥ್ವಿಗಾಧಾರ ಮಾಗಿರ್ಪ ವಿವೇಕಸರ್ಪಪ್ರಕಾಶದಿಂದೊಪ್ಪುತಿರ್ಪುದರಿಂ ನಾಗಾಭರಣನಾದೆ. ಪೃಥಿವ್ಯಾದಿ ಪಂಚಭೂತಂಗಳಿಗೊಡೆಯನಾದುದರಿಂದ ಭೂತಪತಿಯಾದೆ. ಕಾಲನಿಂ ಕೋಟಲೆಗೊಳುತಿರ್ಪ ಜೀವಂಗಳ ಮೇಲೆ ದಯೆಯಿಂ ಕಾಲಂಗೆ ಕಾಲರೂಪಮಾದ ನಿನ್ನ ಪ್ರಳಯಕಾಲದಲ್ಲಿ ಸಕಲ ಪ್ರಪಂಚಮಂ ಸುಜ್ಞಾನಾಗ್ನಿಯಲ್ಲಿ ದಹಿಸಿ ತದ್ಭಸ್ಮಮಂ ಧರಿಸಿ, ಪ್ರಾಣಿಗಳ ಭವತಾಪಮಂ ತಣ್ಣನೆಮಾಡಿ, ತತ್ಪ್ರಪಂಚಸಂಹಾರಸ್ಥಾನವಾಸಿಯಾಗಿರ್ಪುದರಿಂ ಭಸ್ಮಧಾರಿಯಾದೆ, ಸ್ಮಶಾನವಾಸಿಯೂ ಆದೆ. ನಾಲ್ಕು ವೇದಂಗಳು ನಾಲ್ಕು ಪಾದಂಗಳಾಗಿ, ಬ್ರಹ್ಮಮುಖದಲ್ಲಿ ಗಮಿಸುತ್ತಿರ್ಪ ನಿರ್ಮಲಧರ್ಮರಥಾರೂಢನಾಗಿರ್ಪುದರಿಂದ ನಂದಿವಾಹನಾರೂಢನಾದೆ. ಇಂತಪ್ಪ ನಿನ್ನ ಸುಮಂಗಳ ಸ್ವರೂಪಮಂ ನಾನರಿಯದೆ, ಅಮಂಗಲಗಳನ್ನೇ ಭಾವಿಸಿ, ಅಪರಾಧಿಯಾಗಿರ್ದೆನ್ನ ದುರ್ಗುಣಂಗಳಂ ನಿನ್ನಾಗ್ರಹವೆಂಬ ಚಿದಗ್ನಿಯಿಂ ಸಹಿಸಿ, ಕೋಪಾಂತದಲ್ಲಿ ಬಪ್ಪ ಪರಮ ಶಾಂತಿಯೊಳು ನನ್ನನಿಟ್ಟು ಸಲಹಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.*

■■

* ಈ ವಚನದಲ್ಲಿ ಬರುವ 'ಜೀವ ಪಶುಗಳಂ ಕೊಲ್ವ' ಎಂಬಲ್ಲಿ ಶೈವಪರವಾದ ಕೈಲಾಸದ ಶಿವನ ವರ್ಣನೆಯ ಶಬ್ದಗಳಿಗೆ ಗುಣಾತ್ಮಕವಾದ ಲಕ್ಷಣಗಳನ್ನು ಅರ್ಥೈಸಲು ವಚನಕಾರನು ಪ್ರಯತ್ನಿಸಿದ್ದಾನೆ (ಸಂ).

ಭಾಗ : ಎರಡು

ಕರಣಹಸಿಗೆ

ಕರಣಹಸಿಗೆ

ಮನುಷ್ಯನ ದೇಹದ ಜ್ಞಾನ ಮಾಡಿಕೊಡುವುದೇ ಕರಣಹಸಿಗೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಜ್ಞಾನವಿಲ್ಲದಿದ್ದರೆ, ಮನುಷ್ಯನು ಹೇಗೆ ನಡೆದು ಶ್ರೇಷ್ಠ ಸ್ಥಿತಿಯನ್ನು ಹೊಂದಬೇಕೆಂಬುದನ್ನು ಅರಿಯಲಾರನು. ಆದ್ದರಿಂದ ಷಟ್‌ಸ್ಥಲ ಶಾಸ್ತ್ರದಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಈ ಜ್ಞಾನವಿಲ್ಲದೆ ಹೋದರೆ ಷಟ್‌ಸ್ಥಲದ ಮರ್ಮವು ಗೊತ್ತಾಗಲಾರದು.

ಕರಣಹಸಿಗೆಯಲ್ಲಿ ಮೂರು ವಿಭಾಗಗಳನ್ನು ಮಾಡಬಹುದು. (೧) ದೇಹದ ಜ್ಞಾನ : ಮನುಷ್ಯನ ದೇಹವು ಹೇಗಾಯಿತು, ಅದರಲ್ಲಿ ಯಾವ ಯಾವ ಶಕ್ತಿಗಳಿವೆ, ಆ ಶಕ್ತಿಗಳು ಹೇಗೆ ವ್ಯವಹರಿಸುತ್ತವೆ. ದೇಹದ ಸಹಜ ವ್ಯಾಪಾರಗಳಾವವು, ಜೀವನ ಗುಣಗಳಾವವು ಇವೇ ಮೊದಲಾದ ವಿಷಯಗಳು ಇದರಲ್ಲಿ ಬರುತ್ತವೆ. (೨) ಮನುಷ್ಯನ ದುರ್ವ್ಯಾಪಾರಗಳು : ದೇಹದ ವ್ಯಾಪಾರಗಳನ್ನೂ ಅದರ ಶಕ್ತಿಗಳನ್ನೂ ಸಹಜವಾದ ಮತ್ತು ಸರಿಯಾದ ರೀತಿಯಿಂದ ಉಪಯೋಗಿಸುವದು ಅವಶ್ಯವು. ಆದರೆ ಅವುಗಳ ದುರುಪಯೋಗಮಾಡಿದ್ದಾದರೆ ಮನುಷ್ಯನ ಪ್ರಗತಿಯು ನಿಂತುಹೋಗಿ ಅವನು ಅಧೋಗತಿಗಿಳಿಯುವನು. ಆದ್ದರಿಂದ ಇದರ ಜ್ಞಾನವಾದರೂ ಮನುಷ್ಯನಿಗೆ ಅವಶ್ಯವು. ಈ ವಿಷಯವನ್ನು ವಚನಕಾರರು ಕರಣಹಸಿಗೆಯಲ್ಲಿ ನಿರೂಪಿಸುವದುಂಟು. (೩) ಲಿಂಗಾಂಗ ಸಾಮರಸ್ಯದಲ್ಲಿ ಕರಣಹಸಿಗೆಯ ಉಪಯೋಗ : ಕರಣಹಸಿಗೆಯ ಈ ಜ್ಞಾನವನ್ನು ಲಿಂಗಾಂಗ ಸಾಮರಸ್ಯ ಸ್ಥಿತಿಯನ್ನು ಹೊಂದುವಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದರ ತಿಳಿವಳಿಕೆಯನ್ನು ಮನುಷ್ಯನು ಉಂಟುಮಾಡಿಕೊಳ್ಳತಕ್ಕದ್ದು ಅವಶ್ಯವು. ಇದು ಸೂಚಕ ರೀತಿಯಿಂದ ಈ ಪ್ರಕರಣದ ಕೊನೆಗೆ ವಿವರಿಸಲ್ಪಟ್ಟಿದೆ.

ಕರಣಹಸಿಗೆಯ ಅರ್ಥ :

ಕರಣಹಸಿಗೆ ಎಂಬ ಪ್ರಕರಣವು. ಈ ಶಾಸ್ತ್ರಕ್ಕೆ ತತ್ವಂಗಳ ಸಂಗ್ರಹದ ವಿಭಾಗದ ವಿವರಣೆ ಎಂಬ ನಾಮವು ಏನು ಕಾರಣ ಬಂದಿತೆಲೆ ಸ್ವಾಮಿ ಎಂದು ಬೆಸಗೊಂಡೊಡೆ : ಕರಣವೆಂದೊಡೆ ತತ್ವಂಗಳು, ಹಸಿಗೆ ಎಂದೊಡೆ ವಿಭಾಗವು. ಅದು ಹೇಗೆಂದೊಡೆ, ಒಬ್ಬಾನೊಬ್ಬ ಹಲಾಯುಧನು ಮಳೆಯ ಹದದಿ ಭೂಮಿಯ ಬೆದೆಯನರಿದು ಎತ್ತು ಕುಂಟೆ, ಕೂರಿಗೆ, ನೊಗ, ನೇಗಿಲು, ಮಿಣಿ, ಬಾರಕೋಲು ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಹೂಡಿ ಹೊಡೆದು ಹರಗಿ ಹಸನು ಮಾಡಿ ಹದಿನೆಂಟು ಧಾನ್ಯಗಳನ್ನು ಬಿತ್ತಿ ಕಳೆಮೆಳೆಯಂ ತೆಗೆದು, ಸುರಕ್ಷಿತವಾಗಿ ಸಲಹಿ, ಫಲಪೂರಿತವಾದ ಬಳಿಕ ಲವಿತ್ರವ ತೆಗೆದುಕೊಂಡು ಛೇದಿಸಿ, ಕಂತೆಯಂ ಕಟ್ಟಿ, ಬಣಬೆಯನ್ನೊಟ್ಟಿ, ಕಣನಮಾಡಿ, ಮೇಟಿಯ[೧][ನೆಟ್ಟು][೧], ಒಡ್ಡನ್ನು ಹಾಕಿ, ತುಳಿಸಿ ಹಸನಮಾಡಿ ಒಕ್ಕಿ ತೂರಿ ರಾಶಿಯಂ ಮಾಡಿದ ಬಳಿಕ ಹಸ್ತದಲ್ಲಿ ಕೊಳಗವ ತೆಗೆದುಕೊಂಡು ಅಳೆವಲ್ಲಿ ನೆಲ್ಲಿಷ್ಟಾಯಿತು, ಗೋದಿ ಇಷ್ಟಾಯಿತು, ಕಡಲೆ ಇಷ್ಟಾಯಿತು, ಅವರೆ, ತೊಗರಿ, ಹುರುಳಿ ವಿವಿಧ ಧಾನ್ಯಂಗಳೆಲ್ಲ ಇಷ್ಟಿಷ್ಟಾದವೆಂದು ಅಳೆದಳೆದು ಹಸಿಗೆಯಂ ಮಾಡುವ ಹಾಗೆ, ಇಂತೀ ಬ್ರಹ್ಮಾಂಡವೆಂಬ ಕ್ಷೇತ್ರಕ್ಕಧಿಪತಿಯಪ್ಪ ಪರಶಿವನೆಂಬ ಹಲಾಯುಧನು ?[ಆ]?ದಿಯಲ್ಲಿ ತನ್ನ ಪಂಚಮುಖಗಳಿಂದ ಪಂಚಭೂತಂಗಳಂ ಪುಟ್ಟಿಸಿ ಆ ಪಂಚಭೂತಂಗಳ ತಾರತಮ್ಯದಿಂ ಇಪ್ಪತ್ತೈದು ತತ್ವಗಳಂ ಪುಟ್ಟಿಸಿ ಆ ಇಪ್ಪತ್ತೈದು ತತ್ವಯುಕ್ತವಾದ ಶರೀರವನ್ನು ತನ್ನ ಗೋಪ್ಯ ಮುಖದಲ್ಲಿ ಆತ್ಮನಂ ಪುಟ್ಟಿಸಿ, ಆ ಆತ್ಮನಿಗೆ ಸಂಬಂಧವಂ ಮಾಡಿಕೊಳ್ಳಲು ಆ ಆತ್ಮನು ಅದೇ ಅಹಂ ಭಾವದ ಮರವೆಯಿಂದ ತನ್ನ ನಿಜವಂ ಮರೆದು ಅಜ್ಞಾನಿಯಾಗಿ ಅನೇಕ ಜನ್ಮಂಗಳಲ್ಲಿ ಹುಟ್ಟಿ ಹುಟ್ಟಿ ಬರುವಲ್ಲಿ ಪುಣ್ಯದಿಂದ ದೇವತಾಜನ್ಮ, ಪಾಪದಿಂದ ಸ್ಥಾವರಜನ್ಮ, ಪುಣ್ಯ ಪಾಪಂಗಳ ಸಮಾನತ್ವದಿಂದ ಮನುಷ್ಯಜನ್ಮವಹುದು. ಅಂತಪ್ಪ ಮನುಷ್ಯಜನ್ಮಸಂಬಂಧಿಯಾದಾತ್ಮನ ಸ್ಥೂಲವಲ್ಲದ ಸೂಕ್ಷ್ಮವಲ್ಲದ ಪ್ರಮಾಣವಾದ ದೇಹದಲ್ಲಿಹ ಸಕಲತತ್ವಂಗಳಂ ಬೇರೆ ಬೇರೆ ಹಸಿಗೆಯ ಮಾಡಿ ವಿಸ್ತರಿಸಿ ಹೇಳುತ್ತಿಹುದಾದ ಕಾರಣ ಈ ಶಾಸ್ತ್ರಕ್ಕೆ ತತ್ವವಿಭಾಗವೆಂಬ ಭಿಧಾನವು ಪ್ರಸಿದ್ಧವಾಯಿತ್ತೆಂಬುದೀಗ, ಕರಣಹಸಿಗೆ ಎಂಬ ಶಬ್ದಕ್ಕರ್ಥ.

ದೇಹದ ಜ್ಞಾನ

ಪಿಂಡಸಂಗ್ರಹ

(೧) 'ಪಿಂಡ ಬ್ರಹ್ಮಾಂಡಯೋರೈಕ್ಯಂ' ಎಂದುದಾಗಿ, ಸ್ಥೂಲ ಬ್ರಹ್ಮಾಂಡದೊಳಗುಳ್ಳ ಗುಣಂಗಳು, ಪಿಂಡಾಂಡದಲ್ಲಿ ಸೂಕ್ಷ್ಮರೂಪಿಂದೆ ಸಂಗ್ರಹವಾಗಿ ತೋರ್ಪುವು. ಅದೆಂತೆಂದೊಡೆ : 'ಭೂತಪಂಚಕದೇಹಾನಾಂ' ಎಂದುದಾಗಿ, ಆ ಪಂಚಮಹಾ

೧–೧ ನಟ್ಟಿ (ಮೂ) ?–? ಅನಾ (ಮೂ)

ಭೂತಂಗಳ ಪಂಚಾಂಶಿಕಮಂ ಪಂಚೀಕೃತಿಯನ್ಯೆದುತ್ತಿರಲು ದೇಹವಾಯಿತ್ತು. ಆ ಪಂಚಭೂತಂಗಳಾವಾವೆಂದೊಡೆ : ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ– ಇಂತಿವು ಪಂಚಮಹಾಭೂತಂಗಳು. ಇವರಂಶಿಕವಾವುವೆಂದೊಡೆ : ಗ್ರಂಥ: ''ಅಸ್ಥಿಮಾಂಸ ತ್ವಚೋನಾಡೀ । ರೋಮಶ್ಚೈವತು ಪಂಚಕಂ । ಕ್ಷಿತೇಃ ಪಂಚಗುಣಾಃ ಪ್ರೋಕ್ತಾಸ್ತ ದಂಶಾ ಪರಿಕೀರ್ತಿತಾಃ'' ಎಂದು. ಅಸ್ಥಿ, ಮಾಂಸ, ಚರ್ಮ, ನರ, ರೋಮ, ಈ ಐದು ಪೃಥ್ವಿಯಿಂದಾದವು. ಶ್ಲೋಕ: ''ಲಾಲಾ ಮೂತ್ರಂ ತ್ವಥಾಸ್ವೇದಃ ಶುಕ್ಲ ಶೋಣಿತಮೇವ ಚ । ಅಪಾಂಚೈವಂ ವಿಧಂ ಪ್ರೋಕ್ತಂ ಜ್ಞಾತವ್ಯಂ ಚ ಪ್ರಯತ್ನಕಃ ॥'' ಎಂದು, ಶ್ಲೇಷ್ಮ, ಮೂತ್ರ, ಪಿತ್ತ, ಶುಕ್ಲ, ರಕ್ತ ಈ ಐದು ಅಪ್ಪುವಿನಿಂದಾದವು. ಶ್ಲೋಕ: ''ಕ್ಷುಧಾ ತೃಷ್ಣಾ ತಥಾನಿದ್ರಾಲಸ್ಯಂ ಸಂಗಂ ವಿಶೇಷತಃ । ಅಗ್ನೇಃ ಪಂಚಗುಣಾಃ ಪ್ರೋಕ್ತಾಸ್ತದಂಶಾಃ ಪರಿಕೀರ್ತಿತಾಃ ॥'' ಎಂದು, ಕ್ಷುಧಾ, ತೃಷೆ, ನಿದ್ರೆ, ಆಲಸ್ಯ, ಸಂಗ ಈ ಐದು ಅಗ್ನಿಯಿಂದಾದವು. ಶ್ಲೋಕ: ''ಧಾವನಂ ವಲ್ಗನಂಚೈವಾ । ಕುಂಚನಂ ಚ ಪ್ರಸಾರಣಂ ।ವಿಯೋಗಶ್ಚೇತಿ ವಿಜ್ಞೆಯೋ । ವಾಯೋಃ ಪಂಚ ಗುಣಾಸ್ಮೃತಾಃ'' ಎಂದು, ಪರಿವ, ಪಾರುವ, ಸುಳಿವ, ಕೂಡುವ, ಅಗಲುವ ಈ ಐದು ವಾಯುವಿನಿಂದಾದವು. ಶ್ಲೋಕ: ''ರಾಗ ದ್ವೇಷ ಭಯಂ ಲಜ್ಜಾ ಮೋಹಶ್ಚೈವ ಯಥಾ ತಥಾ । ನಭಃ ಪಂಚ ಗುಣಾಃ ಪ್ರೋಕ್ತಾಸ್ತದಂಶಾಃ ಪರಿಕೀರ್ತಿತಾಃ ॥'' ಎಂದು, ರಾಗ, ದ್ವೇಷ, ಭಯ, ಲಜ್ಜೆ, ಮೋಹ ಈ ಐದು ಆಕಾಶದಿಂದಾದವು. ಇಂತೀ ಪಂಚಮಹಾಭೂತಂಗಳಿಂದ ಪಂಚವಿಂಶತಿ ಗುಣಂಗಳಾದವು. ಇದಕ್ಕೆ ವಿಭೇದ ಗುಣಂಗಳುಂಟು. ಅವಾವೆಂದೊಡೆ : ಪೃಥ್ವಿಗೆ ೨೫ ಗುಣ, ಅಪ್ಪುವಿಗೆ ೨೦ ಗುಣ, ಅಗ್ನಿಗೆ ೧೫ ಗುಣ, ವಾಯುವಿಂಗೆ ೧೦ ಗುಣ, ಆಕಾಶಕ್ಕೆ ೫ ಗುಣ, ಇಂತೀ ವಿಭೇದ ಗುಣಂಗಳು ಕೂಡಲಾಗಿ ೭೫ ಗುಣಂಗಳಾದವು.

(೨) ಇನ್ನು ಸದ್ಗುರುದೇವನು ಮುಮುಕ್ಷುವಾದ ಶಿಷ್ಯಂಗೆ ಪಿಂಡಸಂಗ್ರಹದ ಹಸುಗೆಯನ್ನು ನಿರೂಪಿಸುತ್ತಿಹರು. ಬ್ರಹ್ಮಾದಿ ಸ್ತಂಭಾಂತ್ಯಮಾದ ಪಿಂಡವೂ ಶಿವಾದ್ಯವನೀಪರ್ಯಂತಮಾದ ಅಜಾಂಡವೂ ಈ ಎರಡೂ ಒಂದೇ ಸ್ವರೂಪವಾಗಿರುತಿಹವು. ಅದು ಹೇಗೆಂದೊಡೆ: ಪಿಂಡದ ಹೆಚ್ಚಿಲ್ಲ ಬ್ರಹ್ಮಾಂಡ ಕಡಿಮೆ ಇಲ್ಲ, ಬ್ರಹ್ಮಾಂಡದ ಹೆಚ್ಚಿಲ್ಲ, ಪಿಂಡಾಂಡ ಕಡಿಮೆ ಇಲ್ಲ. ಅದು ಹೇಗೆಂದೊಡೆ: ಪಿಂಡವು ಪಂಚಭೂತ ಪಂಚವಿಂಶತಿ ತತ್ವಾತ್ಮಕವಾದಂಥಾದ್ದು, ಬ್ರಹ್ಮಾಂಡವು ಪಂಚಭೂತ ಪಂಚವಿಂಶತಿ ತತ್ವಾತ್ಮಕವಾದಂಥಾದ್ದು. ಬ್ರಹ್ಮಾಂಡದೊಳಗುಂಟಾದ ಗುಣಂಗಳ ತತ್ವಂಗಳ ಆಶ್ರಯವು ಪಿಂಡದಲ್ಲಿ ಒಂದು ಮಾರು, ಮೂರುವರೆ ಮೊಳ, ತೊಂಬತ್ತಾರು ಅಂಗುಲ ಪರಿಪ್ರಮಾಣವನ್ನುಳ್ಳ ಮನುಜದೇಹದೊಳಗೆ ಸೂಕ್ಷ್ಮರೂಪಿನಿಂದ ಪರಮಾಣುಸ್ವರೂಪಿನಿಂದ ಸಂಗ್ರಹಮಾಗಿ ಆ ಲೋಕದಲ್ಲಿ ಅಕ್ಷರವಡಗಿದ ಹಾಗೆಯೂ, ಅಕ್ಷರದಲ್ಲಿ ಅರ್ಥವಡಗಿದ ಹಾಗೆಯೂ, ಅಡಗಲ್ಪಟ್ಟು ವಾಗಿ ತೋರ್ಪುದು. ಪಿಂಡ ಮರ್ಯಾದೆಯಲ್ಲಿನೋಡಿದರೆ ಕಾಣಬಾರದು. ಶಾಸ್ತ್ರ ಜ್ಞಾನಕ್ಕೆ

ಅಷ್ಟಷ್ಟು ಮಾತ್ರ ಕಾಣಬಹುದು. ಸ್ವಾತ್ಮಜ್ಞಾನಕ್ಕೆ ಪ್ರತ್ಯಕ್ಷವಾಗಿ ಕಾಣ ಬರುತಿಹುದು. ಎಂತೆಂದೊಂಡೆ :

ಶರೀರಂಗಳಿಗೆ ಪೃಥ್ವಿ, ಅಪ್ಪು, ತೇಜ ವಾಯು, ಆಕಾಶವೆಂಬ ಐದು ತತ್ವಂಗಳುಂಟಾಗಿಪ್ಪವು. ಮತ್ತಂತುಮಲ್ಲದೆ ಶರೀರಂಗಳು ಪಂಚಭೂತ ಪಂಚವಿಂಶತಿ ತತ್ವಯುಕ್ತವಾದಂಥಾದ್ದು. ಹೀಗೆಂದು ಶ್ರುತಿವಾಕ್ಯ ಹೇಳುತ್ತಿಹುದಾದ ಕಾರಣ ಆ ಪ್ರಸಿದ್ಧವಾದ ತತ್ವಂಗಳ ಪಂಚ ಪಂಚಾಂಶಿಕಂಗಳ ಸ್ವರೂಪವನ್ನು ಪಂಚೀಕೃತಿಯ ನೈದುತಿರಲು ಒಂದೊಂದು ತತ್ವಂಗಳು ಒಂದೊಂದು ತತ್ವಂಗಳಲ್ಲಿ ಕೂಡಿ ಇಪ್ಪತ್ತೈದು ತತ್ವಂಗಳ ಸ್ವರೂಪವನ್ನು ಐದುತಿರಲು ದೇಹವಾಯಿತ್ತು. ಆ ಪ್ರಸಿದ್ಧವಾದ ಭೂತಂಗಳು ಆವಾವೆಂದೊಡೆ : ಸರ್ವಾಧಾರಮಯವಾದ ಧರಣೀತತ್ವವು, ಸರ್ವ ಪಾನ್ಯ ಪ್ರಕ್ಷಾಳನ ರೂಪಮಾದ ಉದಕತತ್ವವು, ಸರ್ವ ದಾಹಕ ಪಾಚಕ ರೂಪ ಮಾದ ಧನಂಜಯತತ್ವವು, [ಸರ್ವ] ಚಾಂಚಲ್ಯಮಯಮಾದ ಸಮೀರ ತತ್ವವು, ಸರ್ವಾಕಾಶಪ್ರದಮಾದ ಅಂಬರತತ್ವವು, ಇವು ತಾವೇ ಐದು ಪ್ರಕಾರಮಾದ ತತ್ತ್ವಂಗಳ ಅಭಿಧಾನಂಗಳು.

ಈ ಪಂಚಮಹಾಭೂತಂಗಳ ಆಂಶಿಕ ಸಾಂಪ್ರದಾಯಿಕಮಾದ ತತ್ವಂಗಳು ಆವಾವೆಂದೊಡೆ : ಅಸ್ಥಿ= ಶಲ್ಯವು, ಮಾಂಸ = ಪಲಲವು, ತ್ವಕ್ಕು = ಚರ್ಮವು, ನಾಡಿ = ನರಗಳು, ರೋಮ = ನಿವಿರುಗಳು ಎಂದು, ಏವಂ = ಈ ಪ್ರಕಾರದಿಂದ ಪಂಚಕಂ = ಈ ಐದು, ಕ್ಷಿತಿ = ಪೃಥ್ವಿಯ ಐದು ಗುಣಂಗಳು, ಪ್ರೋಕ್ತಾಃ = ಹೇಳಲ್ಪಟ್ಟವು, ಸಃ = ಆ ಗುಣವು, ಅಂಶಃ = ಪೃಥ್ವ್ಯಂಶ ಗುಣಂಗಳೆಂದು, ಪ್ರ = ವಿಶೇಷವಾಗಿ, ಕೀರ್ತಿತಃ = ಹೇಳಲ್ಪಟ್ಟಿತು. ಹೇಗೆಂದೊಡೆ : ಪೃಥ್ವಿಯು ಕಠಿಣವಾದಂಥಾದ್ದು . ಈ ಗುಣಂಗಳು ಕಠಿಣ ಸ್ವರೂಪವಾದಂತಹವು. ಅದು ಕಾರಣ ಈ ಐದು ಪೃಥ್ವಿಯಿಂದ ಹುಟ್ಟಿದ ಗುಣಂಗಳೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಶ್ಲೋಕಾರ್ಥ : ಲಾಲಾ = ಕಫವು, ಮೂತ್ರ = ಅಂಗದ ದುರ್ಜಲವು, ಪಿತ್ತ= ಪಿತ್ತವು, ಶುಕ್ಲ = ವೀರ್ಯವು, ಶೋಣಿತ = ರಕ್ತವು, ಏವಂ = ಈ ಪ್ರಕಾರದಿಂದ, ಅಪಾಂ = ಅಪ್ಪುವಿನ, ಪಂಚಗುಣಾಃ = ಐದು ಗುಣಗಳು, ಪ್ರೋಕ್ತಾಃ = ಹೇಳಲ್ಪಟ್ಟವು. ಅದು ಹೇಗೆಂದೊಡೆ : ಅಪ್ಪು ಮೃದುಮಯವಾದಂಥಾದ್ದು; ಈ ಗುಣಗಳು ಮೃದುಸ್ವರೂಪವಾದಂಥವು. ಅದು ಕಾರಣಮಾಗಿ ಈ ಅಪ್ಪುವಿನಿಂದ ಹುಟ್ಟಿದ ಗುಣಂಗಳೆಂದೇ ತಿಳಿದುಕೊಂಬುವುದು ತತ್ವಜ್ಞಾನಿಗಳು.

ಶ್ಲೋಕಾರ್ಥ : ಕ್ಷುಧಾ = ಹಸಿವು, ತೃಷೆ = ನೀರಡಿಕೆ, ತಥಾ = ಹಾಗೆ, ನಿದ್ರಾ = ದೇಹದ ಅತಿಜಾಡ್ಯೆಯು, ಆಲಸ್ಯ = ದೇಹದ ತಂದ್ರತ್ವವು, ಸಂಗ = ಸ್ತ್ರೀಗೋಷ್ಠಿಯು, ಏವಂ = ಈ ಪ್ರಕಾರದಿಂದೆ, ಆಗ್ನೇಃ = ತೇಜಸ್ತತ್ವದ, ಪಂಚಗುಣಾಃ = ಐದು ಗುಣಂಗಳು, ಪ್ರೋಕ್ತಾಃ = ಹೇಳಲ್ಪಟ್ಟವು, ಆ ಗುಣಗಳು

ಅಂಶಾಃ = ಅಗ್ನ್ಯಂಶ ಗುಣಗಳೆಂದು, ಪ್ರ = ವಿಶೇಷವಾಗಿ, ಕೀರ್ತಿತಾಃ = ಹೇಳಲ್ಪಟ್ಟವು. ಅದು ಹೇಗೆಂದೊಡೆ : ಆ ಅಗ್ನಿಯು ಉಷ್ಣಮಯವಾದಂಥಾದ್ದು. ಈ ಗುಣಂಗಳು ಉಷ್ಣಸ್ವರೂಪಮಾದಂಥವು. ಅದು ಕಾರಣಮಾಗಿ ಈ ಐದು ಅಗ್ನಿ ತತ್ವದಿಂದ ಪುಟ್ಟಿದ ಗುಣಂಗಳೆಂದೇ ತಿಳಿದುಕೊಳ್ಳುವುದು ತತ್ವಜ್ಞಾನಿಗಳು.

ಶ್ಲೋಕಾರ್ಥ : ಧಾವನಂ = ಪರಿವ, ವಲ್ಗನಂ = ಪಾರುವ, ಏವಂ = ಈ ಪ್ರಕಾರದಿಂದ, ಕುಂಚನಂ = ಸುಳಿವ, ಪ್ರಸಾರಣಂ = ಕೂಡುವ, ವಿಯೋಗಃ = ಅಗಲುವ, ಇತಿ = ಈ ಪ್ರಕಾರದಿಂದೆ, ವಿ = ವಿಶೇಷವಾಗಿ, ಜ್ಞೇಯಂ = ತಿಳಿದುಕೊಳ್ಳುವುದು; ವಾಯೋಃ = ಮೃದುತನ, ಪಂಚಗುಣಾಃ = ಐದು ಗುಣಗಳು, ಸ್ಮೃತಾಃ = ಹೇಳಲ್ಪಟ್ಟವು. ವಾಯುವು ಚಾಂಚಲ್ಯಮಯವಾದಂಥಾದ್ದು. ಈ ಗುಣಂಗಳು ಚಂಚಲಸ್ವರೂಪವಾದಂಥವು. ಅದು ಕಾರಣವಾಗಿ ಈ ಐದು ವಾಯುವಿನಿಂದ ಹುಟ್ಟಿದ ಗುಣಂಗಳೆಂದು ತಿಳಿದುಕೊಂಬುವುದು ತತ್ವಜ್ಞಾನಿಗಳು.

ಶ್ಲೋಕಾರ್ಥ : ರಾಗಃ= ಬಯಕೆಯು, ದ್ವೇಷ = ಸಿಟ್ಟು, ಭಯ = ಭೀತಿಯು, ಲಜ್ಜೆ = ಅಭಿಮಾನವು, ಮೋಹ = ಮಮಕಾರವು, ಏವಂ = ಈ ಪ್ರಕಾರದಿಂದ ಯಥಾ = ಹಾಗೆ, ಮುಂದೆ ನಾಲ್ಕು ತತ್ವಂಗಳಿಗೆ ಐದೈದು ಗುಣಂಗಳುಂಟಾಗಿಪ್ಪವೋ ತಥಾ = ಹಾಗೆ, ನಭಸಃ = ಆಕಾಶಕ್ಕೆ, ಪಂಚಗುಣಾಃ = ಐದು ಗುಣಂಗಳುಂಟಾಗಿಪ್ಪವೆಂದು, ಪ್ರೋಕ್ತಾಃ = ಹೇಳಲ್ಪಟ್ಟವು. ತೇ = ಆ ಗುಣಗಳು, ಅಂಶಾಃ = ಆಕಾಶದಂಶ ಗುಣಂಗಳಾಗಿಪ್ಪವೆಂದು, ಪ್ರಕೀರ್ತಿತಾ = ಹೇಳಲ್ಪಟ್ಟವು. ಈ ಐದು, ಅಂಬರ ತತ್ವದಿಂದಲೇ ಹುಟ್ಟಿದ ಗುಣಂಗಳು. ಹೇಗೆಂದಡೆ : ಆಕಾಶದಲ್ಲಿ ತೋರಿದ ಮೇಘ ಮಂಜು ಮೊದಲಾದ ಗುಣಂಗಳು ಆಗ ತೋರಿ ಬೇಗ ಅಡಗುತ್ತಿಹವು. ಈ ಗುಣಂಗಳು ಆತ್ಮಾಕಾಶ ಮಧ್ಯದಲ್ಲಿ ಆಗ ತೋರಿ ಬೇಗ ಅಡಗುತಿಹವಾದ ಕಾರಣ ಈ ಐದು ತತ್ವ ಆತ್ಮಾಕಾಶದಿಂದ ಹುಟ್ಟಿದ ಗುಣಂಗಳೆಂದೇ ತಿಳಿದುಕೊಳ್ಳುವುದು ತತ್ವ ಜ್ಞಾನಿಗಳು.

ಈ ಪ್ರಕಾರದಿಂದೆ ಐದು ಪ್ರಕಾರವಾದ ಮಹತ್ತಾದ ಭೂತಂಗಳಿಂದೆ ಇಪ್ಪತ್ತೈದು ತತ್ವಂಗಳಾದವು. ಪಂಚಮಹಾಭೂತಂಗಳಿಗೆ ವಿಭೇದಗುಣಂಗಳುಂಟು. ಅವು ಯಾವುವೆಂದೊಡೆ :

ಸರ್ವಾಧಾರಮಯವಾದ ಧರಣೀತತ್ವಕ್ಕೆ ಇಪ್ಪತ್ತೈದು ಗುಣವು ಪ್ರಸಿದ್ಧವಾಗಿ ರುತಿಹವು. ಅವಾವೆಂತೆಲೆ ಸ್ವಾಮಿ ಎಂದು ಬೆಸಗೊಂಡಡೆ : ಪೃಥ್ವಿಗೆ ಅಯಸ ಶಕಟ ಮುಸಲಾದಿಗಳ ಸಂಘಟನೆಯಿಂದ ಹುಟ್ಟುವಂಥ ಶಬ್ದ ಗುಣವಿದ್ದಲ್ಲಿ ಆಕಾಶತತ್ವ ಉಂಟು. ಈ ಆಕಾಶತತ್ವವಿದ್ದಲ್ಲಿ ಆಕಾಶತತ್ವ ಸಂಬಂಧವಾದ ರಾಗಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಮುಟ್ಟಿದರೆ ತಟ್ಟುವಂಥ ಸ್ಪರ್ಶನ ಉಂಟು. ಸ್ಪರ್ಶನಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವವಿದ್ದಲ್ಲಿ ಆ ವಾಯುತತ್ವ ಸಂಬಂಧವಾದ ಧಾವನಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ

ಸಾಕಾರಮಾದ ರೂಪುಂಟು. ಆ ರೂಪು ಇದ್ದಲ್ಲಿ ಅಗ್ನಿತತ್ವ ಉಂಟು. ಅಗ್ನಿತತ್ವವಿದ್ದಲ್ಲಿ ಆ ಅಗ್ನಿತತ್ವ ಸಂಬಂಧವಾದ ಕ್ಷುಧಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಮಧುರ ರಸ ಉಂಟು. ರಸಗುಣವಿದಲ್ಲಿ ಅಪ್ಪುತತ್ವ ಉಂಟು. ಆ ಅಪ್ಪುತತ್ವವಿದ್ದಲ್ಲಿ ಅಪ್ಪುತತ್ವ ಸಂಬಂದವಾದ ಶ್ಲೇಷ್ಮಾದಿ ಐದು ಗುಣಂಗಳುಂಟು. ಮತ್ತಮಾ ಪೃಥ್ವಿಗೆ ಸದ್ಗಂಧ ಉಂಟು. ಗಂಧಗುಣವಿದ್ದಲ್ಲಿ ಮೂಲ ಪೃಥ್ವೀತತ್ವ ಉಂಟು. ಮೂಲ ಪೃಥ್ವೀತತ್ವವಿದ್ದಲ್ಲಿ ಆ ಮೂಲ ಪೃಥ್ವೀತತ್ವ ಸಂಬಂಧವಾದ ಶಬ್ದಾದಿ ಐದು ಗುಣಂಗ ೧[ಳುಂಟು]೧ ಧರಣೀತತ್ವಕ್ಕೆ [ಪಂಚವಿಂಶತಿ ಗುಣಂಗಳೇ] ಪ್ರಸಿದ್ಧವಾಗಿರುತಿಹವು.

ಸರ್ವ ಪಾನ್ಯ ಪ್ರಕ್ಷಾಳನ ರೂಪಮಾದುದಕತತ್ವಕ್ಕೆ ವಿಂಶತಿ ಗುಣಂಗಳೇ ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ: ಅಪ್ಪುವಿಂಗೆ ಚರಿಸುವಾಗ ಶಬ್ದ ಉಂಟು. ಶಬ್ದಗುಣವಿದ್ದಲ್ಲಿ ಆಕಾಶತತ್ವ ಉಂಟು. ಆಕಾಶತತ್ವವಿದ್ದಲ್ಲಿ ಆಕಾಶತತ್ವ ಸಂಬಂಧವಾದ ರಾಗಾದ್ಯೆದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ಸ್ಪರ್ಶನ ಉಂಟು. ಸ್ಪರ್ಶನಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವ ಇದ್ದಲ್ಲಿ ವಾಯುತತ್ವ ಸಂಬಂಧವಾದ ಧಾವನಾದ್ಯೆದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ನೀಲಾದಿ ವಿಚಿತ್ರ ಬಣ್ಣದ ರೂಪುಂಟು. ರೂಪುಗುಣವಿದ್ದಲ್ಲಿ ಅಗ್ನಿತತ್ವ ಉಂಟು. ಅಗ್ನಿತತ್ವ ವಿದ್ದಲ್ಲಿ ಅಗ್ನಿತತ್ವಸಂಬಂಧವಾದ ಕ್ಷುಧಾದಿ ಐದು ಗುಣಂಗಳುಂಟು. ಮತ್ತಮಾ ಅಪ್ಪುವಿಂಗೆ ಸ್ವಾದರಸ ಉಂಟು. ಸ್ವಾದರಸಗುಣವಿದ್ದಲ್ಲಿ ಮೂಲ ಅಪ್ಪುತತ್ವ ಉಂಟು. ಮೂಲ ಅಪ್ಪುತತ್ವ ಇದ್ದಲ್ಲಿ ಆ ಮೂಲ ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದಿ ಐದು ಗುಣಂಗಳುಂಟು. ಮತ್ತಾ ಅಪ್ಪುವಿಂಗೆ ಹೈಗಗುಗ್ಗುಳ ಮೊದಲಾದ ಧೂಪಂಗಳ ಭಾವನವ ಕೊಟ್ಟಲ್ಲಿ ಮೊಲ್ಲೆ ಮಲ್ಲಿಗೆ ಮೊದಲಾದ ಪುಷ್ಪಂಗಳನ್ನು ಲಾವಂಚ ಮುಡಿವಾಳದ ಬೇರುಗಳಂ ಹಾಕಿದಲ್ಲಿ ಸದ್ಗಂಧ ಹುಟ್ಟುವುದಲ್ಲದೆ ಅದಕ್ಕೆ ಸ್ವಯವಾದ ಗಂಧಗುಣವಿಲ್ಲ . ಗಂಧಗುಣವಿಲ್ಲದಲ್ಲಿ [ಪೃಥ್ವೀತತ್ವವಿಲ್ಲ]. ಪೃಥ್ವೀತತ್ವವಿಲ್ಲದಲ್ಲಿ ಪೃಥ್ವೀತತ್ವ ಸಂಬಂಧಮಾದ ಶಲ್ಯಾದ್ಯೆದು ಗುಣಂಗಳಿಲ್ಲ, ಅಂತೈದು ಗುಣ ಕಡಿಮೆಯಾದಲ್ಲಿ ಅಪ್ಪುತತ್ವಕ್ಕೆ ನಾಲ್ಕೈದು೨ ವಿಂಶತಿ ಗುಣಂಗಳೇ ಪ್ರಸಿದ್ಧವಾಗಿರುತಿಹವು.

ಸರ್ವ ದಾಹಕ ಪಾಚಕ ರೂಪಮಾದ ಧನಂಜಯತತ್ವಕ್ಕೆ ಹದಿನೈದು ಗುಣವು ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ : ಅಗ್ನಿಗೆ ತೃಣ ಪುಂಜಗಳನಾವರಿಸಿ ಸುಡುವಲ್ಲಿ ಪಟಲ್ ಪಟಪಟ ಧಳಧಳ ಎಂಬ ಶಬ್ದವುಂಟು. ಆ ಶಬ್ದಗುಣವಿದ್ದಲ್ಲಿ ಆಕಾಶತತ್ವ ಉಂಟು. ಆಕಾಶತತ್ವವಿದ್ದಲ್ಲಿ ಆಕಾಶತತ್ವ ಸಂಬಂಧಮಾದ ರಾಗಾದ್ಯೆದು ಗುಣಂಗಳುಂಟು. ಮತ್ತಮಾ ಅಗ್ನಿಗೆ ಉಷ್ಣ ಸ್ಪರ್ಶನವುಂಟು. ಸ್ಪರ್ಶನಗುಣವಿದ್ದಲ್ಲಿ ವಾಯುತತ್ವ ಉಂಟು. ವಾಯುತತ್ವವಿದ್ದಲ್ಲಿ ವಾಯುತತ್ವ ಸಂಬಂಧವಾದ ಧಾವನಾರೈದು ಗುಣಂಗಳುಂಟು. ಮತ್ತಮಾ ಅಗ್ನಿಗೆ ಪ್ರಭಾವರ್ಣದ ರೂಪುಂಟು. ರೂಪುಗುಣವಿದ್ದಲ್ಲಿ ಮೂಲ ಅಗ್ನಿತತ್ವ ಉಂಟು. ಮೂಲ ಅಗ್ನಿತತ್ವವಿದ್ದಲ್ಲಿ ಆ ಮೂಲ

೧–೧ ಳೆಂದೇ (ಮೂ) ೨+ ಗಳು (ಮೂ)

ಅಗ್ನಿತತ್ವ ಸಂಬಂಧವಾದ ಕ್ಷುಧಾದ್ಯೆದು ಗುಣಂಗಳುಂಟು. ಮತ್ತಮಾ ಅಗ್ನಿಗೆ ಸ್ವಯವಾದ ರಸಗುಣವಿಲ್ಲ. ರಸಗುಣವಿಲ್ಲದಲ್ಲಿ ಅಪ್ಪುತತ್ವವಿಲ್ಲ. ಅಪ್ಪುತತ್ವವಿಲ್ಲದಲ್ಲಿ ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದ್ಯೆದು ಗುಣಂಗಳಿಲ್ಲ. ಮತ್ತಮಾ ಅಗ್ನಿಗೆ ಧೂಪಂಗಳಂ ಹಾಕಿದಲ್ಲಿ ಸದ್ಗಂಧ ಹುಟ್ಟುವುದಲ್ಲದೆ ಸ್ವಯವಾದ ಗಂಧ[ಗುಣ]ವಿಲ್ಲ. ಗಂಧಗುಣವಿಲ್ಲದಲ್ಲಿ ಪೃಥ್ವೀತತ್ವವಿಲ್ಲ. ಪೃಥ್ವೀತತ್ವವಿಲ್ಲದಲ್ಲಿ ಪೃಥ್ವೀತತ್ವ ಸಂಬಂಧವಾದ ಶಲ್ಯಾದ್ಯೆದು ಗುಣಂಗಳಿಲ್ಲ. ದಶವಿಧ ಗುಣ ಕಡಿಮೆಯಾಗಿ ಹೋಗಲು ಮುಂದೆ ಮೂಱೈದು [ಗುಣಂ]ಗಳು ಅಗ್ನಿತತ್ವಕ್ಕೆ ಪ್ರಸಿದ್ಧವಾಗಿರುತಿಹವು.

ಸರ್ವ ಚಾಂಚಲ್ಯಮಯವಾದ ಸಮೀರತತ್ವಕ್ಕೆ. ಹತ್ತು ಗುಣ, ದಶವಿಧ ಗುಣಂಗಳೇ ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ : ವಾಯುವಿಂಗೆ ಬೀಸಿದಲ್ಲಿ ಬಿಸ್ಸೆಂಬ ಶಬ್ದ ಉಂಟು. ಶಬ್ದ ಗುಣವಿದ್ದಲ್ಲಿ ಆಕಾಶತತ್ವ ಸಂಬಂಧವಾದ ರಾಗಾದ್ಯೆದು ಗುಣಂಗಳುಂಟು. ಮತ್ತಮಾ ವಾಯುವಿಂಗೆ ಅನುಷ್ಣ ಶೀತ ಸ್ಪರ್ಶನ ಉಂಟು. ಸ್ಪರ್ಶನ ಗುಣವಿದ್ದಲ್ಲಿ ಮೂಲ ವಾಯುತತ್ವಮುಂಟು. ಮೂಲ ವಾಯುತತ್ವವಿದ್ದಲ್ಲಿ ಆ ಮೂಲ ವಾಯುತತ್ವಸಂಬಂಧವಾದ ಧಾವನಾದ್ಯೆದು ಗುಣಂಗಳುಂಟು. ಮತ್ತಮಾ ವಾಯುವಿಂಗೆ ರೂಪಿಲ್ಲ. ರೂಪುಗುಣವಿಲ್ಲದೆ ಇದ್ದಲ್ಲಿ ಅಗ್ನಿತತ್ವವಿಲ್ಲ. ಅಗ್ನಿತತ್ವವಿಲ್ಲದಲ್ಲಿ ಆ ಅಗ್ನಿತತ್ವಸಂಬಂಧವಾದ ಕ್ಷುಧಾದ್ಯೆದು ಗುಣಂಗಳಿಲ್ಲ. ಮತ್ತಮಾ ವಾಯುವಿಂಗೆ ದೊಡ್ಡ ದೊಡ್ಡ ತಟಾಕಾದಿಗಳ ಮೇಲೆ ಬೀಸಿ ಬಂದು ತಟ್ಟಿದಲ್ಲಿ ದ್ರವ ಹುಟ್ಟುವುದಲ್ಲದೆ ಸ್ವಯವಾದ ರಸವಿಲ್ಲ. ರಸಗುಣವಿಲ್ಲದಲ್ಲಿ ಅಪ್ಪುತತ್ವವಿಲ್ಲ. ಅಪ್ಪುತತ್ವವಿಲ್ಲದಲ್ಲಿ ಅಪ್ಪುತತ್ವಸಂಬಂಧವಾದ ಶ್ಲೇಷ್ಮಾದ್ಯೆದು ಗುಣಂಗಳಿಲ್ಲ. ಮತ್ತಮಾ ವಾಯುವಿಂಗೆ ವನಾಂತರಗಳ ಮೇಲೆ ಬೀಸಿ ಬಂದು ತಟ್ಟಿದಲ್ಲಿ ಸದ್ಗಂಧ ಹುಟ್ಟುವುದಲ್ಲದೆ ಅದಕ್ಕೆ ಸ್ವಯವಾದ ಗಂಧವಿಲ್ಲ. ಗಂಧ ಗುಣವಿಲ್ಲದಲ್ಲಿ ಪೃಥ್ವೀತತ್ವವಿಲ್ಲ. ಪೃಥ್ವೀತತ್ವವಿಲ್ಲದಲ್ಲಿ ಆ ಪೃಥ್ವೀತತ್ವಸಂಬಂಧವಾದ ೧[ಶಲ್ಯಾ]೧ದ್ಯೆದು ಗುಣಂಗಳಿಲ್ಲ ಪಂಚದಶಗುಣಂಗಳು ಕಡಿಮೆಯಾಗಿ ಹೋಗಲು ಮುಂದೆ ವಾಯುತತ್ವಕ್ಕೆ ದಶವಿಧ ಗುಣಂಗಳೇ ಪ್ರಸಿದ್ಧವಾಗಿರುತಿಹವು.

ಆಕಾಶಕ್ಕೆ ಸರ್ವಾಕಾಶಪ್ರದಮಾದ ಅಂಬರತತ್ವಕ್ಕೆ ಐದುಗುಣ, ಪಂಚವಿಧ ಗುಣಂಗಳೇ ಪ್ರಸಿದ್ಧವಾಗಿರುತಿಹವು. ಅವಾವೆಂದೊಡೆ : ಆಕಾಶಕ್ಕೆ ಶಬ್ದಮುಂಟು. ಶಬ್ದಗುಣವಿದ್ದಲ್ಲಿ ಆ ಮೂಲಾಕಾಶಸಂಬಂಧಮಾದ ರಾಗಾದ್ಯೆದು ಗುಣಂಗಳುಂಟು. ಮತ್ತಮಾ ಆಕಾಶಕ್ಕೆ ಸ್ಪರ್ಶವಿಲ್ಲ. ಸ್ಪರ್ಶಗುಣವಿಲ್ಲದಲ್ಲಿ ವಾಯುತತ್ವವಿಲ್ಲ. ಆ ವಾಯುತತ್ವವಿಲ್ಲದಲ್ಲಿ ಆ ವಾಯುತತ್ವಸಂಬಂಧವಾದ ಧಾವನಾದ್ಯೆದು ಗುಣಂಗಳಿಲ್ಲ. ಮತ್ತಮಾ ಆಕಾಶಕ್ಕೆ ಸಾಕಾರವಾದ ರೂಪಿಲ್ಲ. ರೂಪುಗುಣವಿಲ್ಲದಲ್ಲಿ ಅಗ್ನಿತತ್ವವಿಲ್ಲ. ಆ ಅಗ್ನಿತತ್ವವಿಲ್ಲದಲ್ಲಿ ಅಗ್ನಿತತ್ವ ಸಂಬಂಧವಾದ ಕ್ಷುಧಾದ್ಯೆದು ಗುಣಂಗಳಿಲ್ಲ. ಮತ್ತಮಾ ಆಕಾಶಕ್ಕೆ ರಸವಿಲ್ಲ. ರಸಗುಣವಿಲ್ಲದಿದ್ದಲ್ಲಿ ಅಪ್ಪುತತ್ವವಿಲ್ಲ. ಅಪ್ಪುತತ್ವ

೧–೧ ಕಠಿಣಾ (ಮೂ)

ವಿಲ್ಲದಿದ್ದಲ್ಲಿ ಆ ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದ್ಯೆದು ಗುಣಂಗಳಿಲ್ಲ. ಮತ್ತಮಾ ಆಕಾಶಕ್ಕೆ ಸದ್ಗಂಧವಿಲ್ಲ. ಗಂಧಗುಣವಿಲ್ಲದಿದ್ದಲ್ಲಿ ಪೃಥ್ವೀತತ್ವವಿಲ್ಲ. ಪೃಥ್ವೀತತ್ವ ವಿಲ್ಲದಿದ್ದಲ್ಲಿ ಆ ಪೃಥ್ವೀತತ್ವಸಂಬಂಧವಾದ ಶಲ್ಯಾದ್ಯೆದು ಗುಣಂಗಳಿಲ್ಲ ವಿಂಶತಿ ಗುಣಂಗಳು ಕಡಿಮೆಯಾಗಿ ಹೋಗಲು ಮುಂದಾಕಾಶತತ್ವಕ್ಕೆ ಪಂಚವಿಧ ಗುಣಂಗಳೇ ಪ್ರಸಿದ್ಧವಾಗಿರುತಿಹವು.

ಈ ಪ್ರಕಾರ ಹೇಳಲ್ಪಟ್ಟಂಥ ವಿಭೇದ ಗುಣಂಗಳು ಹೆಚ್ಚು ಕಡಿಮೆಯಾಗಿ ತಾರತಮ್ಯವಾಗಿರುವ ಗುಣಂಗಳು ತತ್ವಂಗಳು ಕೂಡಲಾಗಿ [೧][ಎ]ಪ್ಪತ್ತೈದು ಗುಣಂಗಳಾದವು. ಇದು ತಾನೇ ಪಿಂಡಸಂಗ್ರಹದ ಭೇದವು. ಚತುರ್ದಶ ಭುವನಂಗಳೊಡನೆ ಕೂಡಿದ ಬ್ರಹ್ಮಾಂಡದಲ್ಲಿ ಎಂಬತ್ತು ನಾಲ್ಕು ಲಕ್ಷ ಪ್ರಕಾರವಾದ ಪಿಂಡಗಳ ಸಮೂಹವು ಉಂಟಾದಂತಹ ವಿಚಾರವು. ಮತ್ತಂತುಮಲ್ಲದೆ ಸ್ಥೂಲ ಬ್ರಹ್ಮಾಂಡ ದೊಳಗುಳ್ಳ ಗುಣಂಗಳಾಶ್ರಯವೆಲ್ಲವೂ ಪಿಂಡದಲ್ಲಿ ಅತಿಸೂಕ್ಷ್ಮರೂಪಿ ನಿಂದ ಅಡಗಿರುವಂತಹ ಹಸಿಗೆಯ ವಿಚಾರವು ಎಂಬುದೀಗ ಪಿಂಡಸಂಗ್ರಹವೆಂಬ ಶಬ್ದಕ್ಕರ್ಥವು.

ದೇಹದೇಹಿಕಂಗಳ ಉತ್ಪತ್ತಿ

ಶರೀರಾತ್ಮರುಗಳ ಜನನವು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬ ಸ್ಥೂಲ ಭೌತಿಕಂಗಳ್ಕೆದು, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬ ಮಾರುತಂಗಳ್ಕೆದು. ಜ್ಞಾನ ಕರ್ಮೇಂದ್ರಿಯಂಗಳು ಹತ್ತು, ಕರಣಚತುಷ್ಟಯವೆಂದು ಹೇಳುವ ಚತುರ್ವಿಂಶತಿತತ್ವಂಗಳಿಂದ ವ್ಯಕ್ತೀಕರವಾದಂಥಾದ್ದು ತಾನೇ ದೇಹವು, ಅನಾತ್ಮ ಜಡಶರೀರವು. ಪಂಚವಿಂಶತಿತತ್ವವಾದಂತಹ ಜ್ಞಾನಕಾರಣಸ್ವರೂಪಾದಾತ್ಮನು ತಾನೇ ದೇಹಿ ; ಅಂತಹ ದೇಹಕ್ಕೆ ಚೈತನ್ಯಸ್ವರೂಪನಾಗಿರುತಿಹನು. ಈ ಚೇತನಾತ್ಮನಿಗೆ ಜ್ಞಾನೇಂದ್ರಿಯವೇ ಚಿತ್‌ಸ್ವರೂಪು ಆಗಿಪ್ಪುದೆಂಬಲ್ಲಿ ಇದು ಸುಖ, ಇದು ದುಃಖ, ಇದು ಪುಣ್ಯ ಇದು ಪಾಪ, ಇದು ಒಳ್ಳಿತು, ಇದು ಒಳ್ಳಿತಲ್ಲ ಎಂದು ತಿಳಿಯುವುದಕ್ಕೆ ತಿಳಿವಳಿಕೆ ಸ್ವರೂಪವಾಗಿರುತಿಹುದು. ಪರಶಿವನಧಿದೇವತೆ ಸಕಲ ಪ್ರಾಣಿಗಳಂತರಂಗದಲ್ಲಿಯೂ ಚೇತನಾತ್ಮಕನಾಗಿ ಬೆಳಗುತಿಹನು.

ಪಂಚವಿಂಶತಿ ತತ್ವಗಳು

೬೨

(೧) ಪರಶಿವನ ಚಿತ್‌ಕರಣಂಗಳು ಈ ಜಗತ್ತಿನ ಶಿರೋಮಧ್ಯಕ್ಕೆ ಬಿಂಬಿಸಿ, ಅದಕ್ಕೆ ಚೈತನ್ಯಂಗೊಳಿಸಿದಲ್ಲಿ ಅದೇ ಪರಮಾತ್ಮನಾಯಿತ್ತು. ಆ ಪರಮಾತ್ಮನು ಜಗತ್ತಿನ ಭ್ರೂಮಧ್ಯದಲ್ಲಿ ಬಿಂಬಿಸಿದಲ್ಲಿ ಅದೇ ಅಂತರಾತ್ಮನಾಯಿತ್ತು. ಅಂತರಾತ್ಮನು ಜಗತ್ತಿನ ಹೃನ್ಮಧ್ಯಕ್ಕೆ ಬಿಂಬಿಸಿದಲ್ಲಿ ಅದೇ ಜೀವಾತ್ಮವಾಯಿತ್ತು. ಆ ಜೀವಾತ್ಮನೇ ಘಟ,

೧–೧ ಇ (ಮೂ)

ಅಂತರಾತ್ಮನೆ ಪ್ರಾಣ, ಪರಮಾತ್ಮನೇ ಸರ್ವಸಾಕ್ಷಿಕ. ಆ ಸಾಕ್ಷಿಕನೆ ವಸ್ತು. ಆ ಪರವಸ್ತು ಜೀವಾಂತರಾದಿಗಳೆಂಬ ಅಂಗ ಪ್ರಾಣಕ್ಕೆ ಪಂಚವಿಂಶತಿತತ್ವಗಳೆಂಬ ತುಷಾ ಪಾಶಂ ತೊಡಿಸಿ ಅಂತದನೆ ಪಶುವೆನಿಸಿ ತಾನದಕೆ ಪತಿಯಾಗಿ ಅಲ್ಲಿ ನಾನಾ ವಿನೋದಂಗಳಂ ನೋಡಿ ವಿನೋದಿಸುತ್ತ ಬಸವಪ್ರಿಯ ಕೂಡಲ ಚನ್ನಸಂಗಯ್ಯನಿಂತೀ ಪರಿಯಲ್ಲಿ ಆಡಿಸುತ್ತಿದ್ದ ಜಗತ್ತು.

(೨) ಇನ್ನು ಭೂತಪಂಚಕ, ವಾಯುಪಂಚಕ, ಕರ್ಮೇಂದ್ರಿಯಪಂಚಕ, ಜ್ಞಾನೇಂದ್ರಿಯಪಂಚಕ, ಕರಣಚತುಷ್ಟಯಂಗಳೆನಿಪ ಚತುರ್ವಿಂಶತಿತತ್ವವಾಹಂತ ದೀಗ ದೇಹ. ಪಂಚವಿಂಶತಿತತ್ವವಾದಂತಹ ಆತ್ಮನೇ ದೇಹಿ. ಆ ಆತ್ಮಂಗೆ [೧][ಭಾವವೇ][೧] ಚಿತ್ಸ್ವರೂಪು, ಪರಶಿವನಧಿದೇವತೆ, ಸರ್ವಾತ್ಮಗಳಲ್ಲಿ ಚೈತನ್ಯ ಸ್ವರೂಪನಾಗಿ ತೊಳಗಿಬೆಳಗುತ್ತಿಹನು. ಇನ್ನು ಮಾನಸಾದಿ ಕರಣಂಗಳು ಪರಾಶಕ್ತಿಯ ಸ್ವರೂಪು, ಪ್ರಾಣಾದಿ ವಾಯುಗಳು ಆದಿಶಕ್ತಿಯ ಸ್ವರೂಪು. ಭೂತಾದಿ ಪಂಚಕಂಗಳು [೨][ಜ್ಞಾನ][೨]ಶಕ್ತಿಯ ಸ್ವರೂಪು. ಶ್ರೋತ್ರಾದಿ ಜ್ಞಾನೇಂದ್ರಿಯಂಗಳು [೩][ಇಚ್ಛಾ][೩] ಶಕ್ತಿಯ ಸ್ವರೂಪ, ವಾಗಾದಿ ಕರ್ಮೇಂದ್ರಿಯಂಗಳು ಕ್ರಿಯಾಶಕ್ತಿಯ ಸ್ವರೂಪು, ಇವು ಪಂಚಶಕ್ತಿಯ ಸ್ವರೂಪು, ಪಂಚವಿಂಶತಿತತ್ವಂಗಳು.

(೩) ನಿಃಕಲಪರಶಿವಗಂಗವಾದ ಪಂಚಶಕ್ತಿಯರಿಂದಲೇ ಹುಟ್ಟಿ, ಪಂಚಶಕ್ತಿಯ ರಿಂದಲೇ ಬೆಳೆದು ಪಂಚಶಕ್ತಿಯರ ಅಧೀನವಿಡಿದೇ ಚೇಷ್ಟಿಸಿ, ಪಂಚಶಕ್ತಿಯರ ತದ್ರೂಪು ತದಾಕಾರವಾಗಿಯೇ ಒಪ್ಪುತಿಹವು. ಮನಸಾದಿ ಕರಣಂಗಳ್ಕೆದು ಪರಾಶಕ್ತಿಯ ಸ್ವರೂಪು ನಿಃಕಲ ಪರಶಿವಗಂಗವಾದ ಪರಾಶಕ್ತಿಯಿಂದಲೇ ಹುಟ್ಟಿ ಪರಾಶಕ್ತಿಯಿಂದಲೇ ಬೆಳೆದು ಪರಾಶಕ್ತಿಯಾಧೀನವಿಡಿದು ವರ್ತಿಸಿ, ಪರಾಶಕ್ತಿಯಲ್ಲಿಯೇ ಅಡಗಿ ಪರಾಶಕ್ತಿ ತದ್ರೂಪು ತದಾಕಾರವಾಗಿ ಒಪ್ಪುತಿಹುದು.

[ಪ್ರಾಣಪಂಚಕಂಗಳ್ಕೆದು ಆದಿಶಕ್ತಿ ಸ್ವರೂಪು ನಿಃಕಲ ಪರಶಿವ ಅಂಗವಾದ ಆದಿಶಕ್ತಿಯಿಂದಲೇ ಹುಟ್ಟಿ, ಆದಿಶಕ್ತಿಯಿಂದಲೇ ಬೆಳೆದು ಆದಿಶಕ್ತಿಯಾಧೀನವಿಡಿದು ವರ್ತಿಸಿ, ಆದಿಶಕ್ತಿಯಲ್ಲಿ ಅಡಗಿ, ಆದಿಶಕ್ತಿಯ ತದ್ರೂಪು ತದಾಕಾರವಾಗಿರುತಿಹುದು] ಪ್ರಾಣಭೂತ ಪಂಚಕಗಳನ್ನೇ ಮೂಲ ಕಾರಣವಾದ ಐದು ವಿಷಯಂಗಳು [೪][ಜ್ಞಾನ][೪]ಶಕ್ತಿಯ ಸ್ವರೂಪು. ನಿಃಕಲ ಪರಶಿವಗಂಗವಾದ ಇಚ್ಛಾಶಕ್ತಿಯಿಂದಲೇ ಹುಟ್ಟಿ, ಇಚ್ಛಾಶಕ್ತಿಯಿಂದಲೇ ಬೆಳೆದು ಇಚ್ಛಾಶಕ್ತಿಯಾಧೀನವಿಡಿದು ವರ್ತಿಸಿ, ಇಚ್ಛಾಶಕ್ತಿಯಲ್ಲಿ ಅಡಗಿ, ಇಚ್ಛಾಶಕ್ತಿ ತದ್ರೂಪುತದಾಕಾರವಾಗಿರುತಿಹುದು.

ಶ್ರವಣೇಂದ್ರಿಯವೇ ಮೊದಲಾದ ಅರಿವು ರೂಪಮಾದ ಇಂದ್ರಿಯಂಗಳ್ಕೆದು [೫][ಇಚ್ಛಾ][೫]ಶಕ್ತಿಯ ಸ್ವರೂಪು. ನಿಃಕಲ ಪರಶಿವಗಂಗವಾದ ಜ್ಞಾನಶಕ್ತಿಯಿಂದಲೇ ಹುಟ್ಟಿ, ಜ್ಞಾನಶಕ್ತಿಯಿಂದಲೇ ಬೆಳೆದು, ಜ್ಞಾನಶಕ್ತಿಯಾಧೀನವಿಡಿದು ವರ್ತಿಸಿ,

೧–೧. ಜ್ಞಾನೇಂದ್ರಿಯವೇ (ಮೂ) ೨–೨ ಇಚ್ಛಾ (ಮೂ) ೩–೩. ಜ್ಞಾನ (ಮೂ)
೪–೪ ಇಚ್ಛಾ (ಮೂ) ೫–೫ ಜ್ಞಾನ (ಮೂ)

ಜ್ಞಾನಶಕ್ತಿಯಲ್ಲಿ ಅಡಗಿ, ಆ ಜ್ಞಾನಶಕ್ತಿಯ ತದ್ರೂಪು ತದಾಕಾರವಾಗಿ ಒಪ್ಪುತಿಹುದು.

ವಾಗೀಂದ್ರಿಯವೇ ಮೊದಲಾದ ಕರ್ಮ ಕ್ರಿಯಾರೂಪಮಾದ ಇಂದ್ರಿಯಂಗಳೈದು ಕ್ರಿಯಾಶಕ್ತಿಯ ಸ್ವರೂಪು. ನಿಃಕಲಪರಶಿವಗೆ ಅಂಗವಾದ ಕ್ರಿಯಾಶಕ್ತಿಯಿಂದಲೇ ಹುಟ್ಟಿ ಕ್ರಿಯಾಶಕ್ತಿಯಿಂದಲೇ ಬೆಳೆದು, ಕ್ರಿಯಾಶಕ್ತಿಯಾಧೀನವಿಡಿದು ವರ್ತಿಸಿ ಕ್ರಿಯಾಶಕ್ತಿಯಲ್ಲಡಗಿ ಕ್ರಿಯಾಶಕ್ತಿಯ ತದ್ರೂಪು ತದಾಕಾರವಾಗಿರುತಿಹವು.

ಈ ಪ್ರಕಾರ ಹೇಳಲ್ಪಟ್ಟಂಥ ಇವು ತಾವೇ ಪಂಚವಿಂಶತಿತತ್ವಂಗಳ ಭೇದ ವಿಚಾರವನ್ನು ತಿಳಿದುಕೊಂಬುವುದು ತತ್ವಜ್ಞಾನಿಗಳು.

೬೩

[ನಿ]ಶ್ಶಬ್ದವೆಂಬ ಪರಬ್ರಹ್ಮದ [೧][ಚಿಂತಾ][೧] ಶಕ್ತಿಯ ಸಹಸ್ರಾಂಶದಲ್ಲಿ ಚಿಚ್ಛಕ್ತಿ ಹುಟ್ಟಿದಳು. ಆ ಚಿಚ್ಛಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿಹುಟ್ಟಿದಳು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿ ಹುಟ್ಟಿದಳು. ಆ ಆದಿಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಹುಟ್ಟಿದಳು. ಆ ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿ ಹುಟ್ಟಿದಳು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಹುಟ್ಟಿದಳು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೬೪

ಚಿಚ್ಛಕ್ತಿ ಪರಾಶಕ್ತಿ ಆದಿಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಈ ಷಟ್‌ಶಕ್ತಿಗಳು ಸರ್ವತತ್ವಕ್ಕೂ ಕಾರಣವಾಗಿಹವು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೬೫

ಬ್ರಹ್ಮ ವಿಷ್ಣು ರುದ್ರ, ಈಶ್ವರ, [ಶಿವ] ಸದಾಶಿವ ಈ ಆರು ಶಿವಾಂಗವು, ಚಿತ್‌ಶಕ್ತಿಯೇ ಕಾರಣಮಾಗಿ ಪುಟ್ಟಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೬೬

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಕ್ಷೇತ್ರಜ್ಞ ಈ ಆರು ಭೂತಾಂಗವು, ಪರಾಶಕ್ತಿಯೇ ಕಾರಣಮಾಗಿ ಪುಟ್ಟಿದವು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೬೭

ಗಂಧ, ರಸ, ರೂಪ, ಸ್ಪರ್ಶ, ಶಬ್ದ ಕರ್ತಾರ ಈ ಆರು [೨][ವಿಷಯಾಂಗವು][೨] [೩][ಜ್ಞಾನ][೩] ಶಕ್ತಿಯೇ ಕಾರಣಮಾಗಿ ಪುಟ್ಟಿ[೪][ದವು][೪] ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧–೧ ಚಿತ್ (ಮೂ) ೨–೨ ಯೋಗಾಂಗವು (ಮೂ)
೩–೩ ಆದಿ (ಮೂ) ೪–೪ ತ್ತು(ಮೂ)

೬೮

ಚಿತ್ತ ಬುದ್ಧಿ ಅಹಂಕಾರ, ಮನ, ಜ್ಞಾನ, ಭಾವ ಈ ಆರು [೧][ಯೋಗಾಂಗವು][೧] [ಪರಾ]ಶಕ್ತಿಯೇ ಕಾರಣಮಾಗಿ ಪುಟ್ಟಿ[೨][ದವು][೨] ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೬೯

ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ ಚೈತನ್ಯ, ಈ ಆರು ವಿದ್ಯಾಂಗವು, ಜ್ಞಾನಶಕ್ತಿಯೇ ಕಾರಣಮಾಗಿ ಪುಟ್ಟಿದವು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೭೦

ಪಾಯು, ಗುಹ್ಯ, ಪಾದ, ಪಾಣಿ, ವಾಕ್ಕು, ಅಂತರ ಈ ಆರು ಕರ್ಮಾಂಗವು , ಕ್ರಿಯಾಶಕ್ತಿಯೇ ಕಾರಣಮಾಗಿ ಪುಟ್ಟಿದವು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಮಹಾಭೂತಂಗಳ ಪಂಚೀಕೃತಿಯು

ಇನ್ನು ಪಂಚಮಹಾಭೂತಂಗಳ ಪಂಚೀಕೃತಿಯು ಆವುವೆಂದೊಡೆ : ವಿಜಯಭೈರವಿಯಲ್ಲಿಯ ಗ್ರಂಥ :''ಚಿತ್ತಂಚ ಪ್ರಾಣವಾಯುಶ್ಚ ನಾಸಿಕಂ ಗಂಧ ಏವ ಚ [೪][ಪಾ][೪]ಯುಃ ಪಂಚವಿಧಂ ಪ್ರೋಕ್ತಮಿತ್ಯೇತದ್ಭೂಮಿ ಪಂಚಕಂ'' ಎಂದು ಪೃಥ್ವಿಯಲ್ಲಿಯ ಪೃಥ್ವಿ ವಾಯುವಿಂದ್ರಿಯ, ಪೃಥ್ವಿಯಲ್ಲಿಯ ಅಪ್ಪು ಗಂಧ, ಪೃಥ್ವಿಯಲ್ಲಿಯ ಅಗ್ನಿ ಘ್ರಾಣೇಂದ್ರಿಯ, ಪೃಥ್ವಿಯಲ್ಲಿಯ ವಾಯು ಪ್ರಾಣವಾಯು, ಪೃಥ್ವಿಯಲ್ಲಿಯ ಆಕಾಶ [೫][ಚಿತ್][೫] ಈ ಐದು ಪೃಥ್ವಿಯ ಪಂಚೀಕೃತಿ.

ಶ್ಲೋಕ: ''ಬುದ್ಧಿಶ್ಚಾಪಾನವಾಯುಶ್ಚ ಜಿಹ್ವಾ ಚ ರಸ ಏವ ಚ ಗುಹ್ಯಂ ಪಂಚವಿಧಂ ಪ್ರೋಕ್ತಂ ಏತತ್ [೬][ಜಲ][೬] ಪಂಚಕಂ'' ಎಂದು ಉದಕದಲ್ಲಿಯ ಪೃಥ್ವಿ ಗುಹ್ಯೇಂದ್ರಿಯ, ಉದಕದಲ್ಲಿಯ ಅಪ್ಪು ರಸ, ಉದಕದಲ್ಲಿಯ ಅಗ್ನಿ ಜಿಹ್ವೇಂದ್ರಿಯ, ಉದಕದಲ್ಲಿಯ ವಾಯು ಅಪಾನವಾಯು, ಉದಕದಲ್ಲಿಯ ಆಕಾಶ ಬುದ್ಧಿ ಈ ಐದು ಪಂಚೀಕೃತಿ.

ಶ್ಲೋಕ: ''ಅಹಂಕಾರೋ ವ್ಯಾನವಾಯುರ್ನೇತ್ರಂ ರೂಪಂ ತಥೈವ ಚ [೭][ಪಾದಂ][೭] ಪಂಚವಿಧಂ ಪ್ರೋಕ್ತಂ ಇತ್ಯೇತದಗ್ನಿ ಪಂಚಕಂ'' ಎಂದು ಅಗ್ನಿಯಲ್ಲಿಯ ಪೃಥ್ವಿ ಪಾದೇಂದ್ರಿಯ, ಅಗ್ನಿಯಲ್ಲಿಯ ಅಪ್ಪು ರೂಪು, ಅಗ್ನಿಯಲ್ಲಿಯ ಅಗ್ನಿ ನೇತ್ರೇಂದ್ರಿಯ, ಅಗ್ನಿಯಲ್ಲಿಯ ವಾಯು [೮][ವ್ಯಾನ][೮] ವಾಯು, ಅಗ್ನಿಯಲ್ಲಿಯ ಆಕಾಶ [೯][ಅಹಂಕಾರ][೯] ಈ ಐದು ಪಂಚೀಕೃತಿ.

೧–೧ ಕಾಮಾಂಗವು (ಮೂ) ೨–೨ ಇಚ್ಛಾ (ಮೂ) ೩–೩ ವಾ (ಮೂ)
೪–೪ ಅಂಹಕಾರ (ಮೂ) ೫–೫ ಸ್ಥಲ (ಮೂ) ೬–೬ ಪದಃ (ಮೂ)
೭–೭ ಉದಾನ (ಮೂ) ೮–೮ ಬುದ್ಧಿ(ಮೂ)

ಶ್ಲೋಕ: ''ಮನಸೋದಾನ ವಾಯುಶ್ಚ ಚರ್ಮಸ್ಪರ್ಶ ಸ್ತಥೈವ ಚ ಪಾಣಿಃ ಪಂಚವಿಧಂ ಪ್ರೋಕ್ತಂ ಇತ್ಯೇತದ್ವಾಯುಪಂಚಕಂ '' ಎಂದು ವಾಯುವಿನಲ್ಲಿಯ ಪೃಥ್ವೀ ಪಾಣೇಂದ್ರಿಯ , ವಾಯುವಿನಲ್ಲಿಯ ಅಪ್ಪು ಸ್ಪರ್ಶನ, ವಾಯುವಿನಲ್ಲಿಯ ಅಗ್ನಿ ತ್ವಗಿಂದ್ರಿಯ, ವಾಯುವಿನಲ್ಲಿಯ ವಾಯು [1]ಉದಾನ[1] ವಾಯು, ವಾಯುವಿನಲ್ಲಿಯ ಆಕಾಶ ಮನಸ್ಸು, ಈ ಐದು ವಾಯುವಿನ ಪಂಚೀಕೃತಿ.

ಶ್ಲೋಕ : ''ಜ್ಞಾನಂ ಸಮಾನವಾಯುಶ್ಚ ಶ್ರೋತ್ರಂ ಶಬ್ದಸ್ತಥೈವ ಚ । [2]ವಾಣಿಃ[2] ಪಂಚವಿಧಂ ಪ್ರೋಕ್ತಂ ಇತ್ಯೇತದ್ವ್ಯೋಮ ಪಂಚಕಂ'' ಎಂದು ಆಕಾಶದಲ್ಲಿಯ ಪೃಥ್ವಿ ವಾಗೀಂದ್ರಿಯ, ಆಕಾಶದಲ್ಲಿಯ ಅಪ್ಪು ಶಬ್ದ, ಆಕಾಶದಲ್ಲಿಯ ಅಗ್ನಿ ಶ್ರೋತ್ರೇಂದ್ರಿಯ, ಆಕಾಶದಲ್ಲಿಯ ವಾಯು ಸಮಾನವಾಯು, ಆಕಾಶ ದಲ್ಲಿಯ ಆಕಾಶ [3]ಜ್ಞಾನ[3]ತತ್ವ. ಈ ಐದು ಆಕಾಶದ ಪಂಚೀಕೃತಿ.

ಬುದ್ಧೀಂದ್ರಿಯಗಳು

(೧) ಇನ್ನು ಬುದ್ಧೀಂದ್ರಿಯಂಗಳ ವಿಷಯ : ಸದ್ಭೂತಾದಿ ದೇವತಾ ಸುಕರ್ಮ ವೆಂತೆಂದೊಡೆ : *ಶ್ಲೋಕ: ''ಶ್ರೋತ್ರಂ ತಜ್ಜೇತ್ರ ಜಿಹ್ವಾಂಚ ಘ್ರಾಣಂ ಪಂಚೇಂದ್ರಿ ಯಾಣಿ ಚ । ಆಕಾಶೋ ವಾಯುರಗ್ನಿಶ್ಚ ಪಯಃ ಪೃಥ್ವೀ[೦] ಕ್ರಮೇಣ ಚ'' ಎಂದು ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ಈ ಐದು ಜ್ಞಾನೇಂದ್ರಿಯಂಗಳು. ಇವಕ್ಕೆ ವಿವರ.

ಶ್ರೋತ್ರೇಂದ್ರಿಯಕ್ಕೆ ಆಕಾಶವೆಂಬ ಮಹಾಭೂತ, ದಶದಿಕ್ಕಧಿದೇವತೆ, ಅಲ್ಲಿ ಶಬ್ದವಿಷಯ; ಅಕ್ಷರಾತ್ಮಕ, ಅನಕ್ಷರಾತ್ಮಕ ಈ [4]ಎರಡು[4] ಶಬ್ದಭೇದ.

ತ್ವಗಿಂದ್ರಿಯಕ್ಕೆ ವಾಯುವೆಂಬ ಮಹಾಭೂತ, ಚಂದ್ರನಧಿದೇವತೆ, ಅಲ್ಲಿ ಸ್ಪರ್ಶನ ವಿಷಯ; ಶೀತ, ಉಷ್ಣ , ಮೃದು, ಕಠಿಣ ಈ ನಾಲ್ಕು ಸ್ಪರ್ಶನ ಭೇದ.

ನೇತ್ರೇಂದ್ರಿಯಕ್ಕೆ ಅಗ್ನಿ ಎಂಬ ಮಹಾಭೂತ, ಸೂರ್ಯನಧಿದೇವತೆ, ಅಲ್ಲಿ ರೂಪು ವಿಷಯ; ಪೀತ, [ಶ್ವೇತ], ಮಾಂಜಿಷ್ಟ, ಹರಿತ,ಕಪೋತ, ಕೃಷ್ಣ ಈ ಆರು ರೂಪಭೇದ.

ಜಿಹ್ವೇಂದ್ರಿಯಕ್ಕೆ ಅಪ್ಪುವೆಂಬ ಮಹಾಭೂತ, [5]ವ[5]ರುಣನಧಿದೇವತೆ. ಅಲ್ಲಿ ರಸ ವಿಷಯ; ಮಧುರ, ಕಟು, ತಿಕ್ತ, ಆಮ್ಲ , ಕಷಾಯ, ಲವಣ ಈ ಆರು ರಸಭೇದ.

ಘ್ರಾಣೇಂದ್ರಿಯಕ್ಕೆ ಪೃಥ್ವಿಯೆಂಬ ಮಹಾಭೂತ, ಅಶ್ವಿನ್ಯಧಿದೇವತೆ, ಅಲ್ಲಿ ಗಂಧ ವಿಷಯ; ಸುಗಂಧ, ದುರ್ಗಂಧ ಈ ಎರಡು ಗಂಧ ಭೇದ.

(೨) ಶ್ರವಣೇಂದ್ರಿಯಕ್ಕೆ ಅಂಬರತತ್ವವೇ ಮೂಲ ಚೈತನ್ಯವಾಗಿಪ್ಪುದು. ತ್ವಗೀಂದ್ರಿಯಕ್ಕೆ ವಾಯುತತ್ವವೇ ಮೂಲಚೈತನ್ಯವಾಗಿಪ್ಪುದು. ನಯನೇಂದ್ರಿಯಕ್ಕೆ

೧–೧ ವ್ಯಾನ (ಮೂ) ೨–೨ ವಾಕ್ಯಂ (ಮೂ) ೩–೩ ಜ್ಞಾತೃ (ಮೂ)
೪–೪ ಐದು (ಮೂ) ೫–೫ ಆ (ಮೂ)

ತೇಜಸ್ತತ್ವವೇ ಮೂಲಚೈತನ್ಯವಾಗಿಪ್ಪುದು. ಜಿಹ್ವೇಂದ್ರಿಯಕ್ಕೆ ಅಪ್ಪುತತ್ವವೇ ಮೂಲ ಚೈತನ್ಯವಾಗಿಪ್ಪುದು. ಘ್ರಾಣೇಂದ್ರಿಯಕ್ಕೆ ಧರಣೀತತ್ವವೇ ಚೈತನ್ಯವಾಗಿಪ್ಪುದು.

ಶಬ್ದ ವಿಷಯವನುಳ್ಳ ಶ್ರವಣೇಂದ್ರಿಯವು, ಸ್ಪರ್ಶನ ವಿಷಯವನುಳ್ಳ ತ್ವಗೀಂದ್ರಿಯವು, ರೂಪು ವಿಷಯವನುಳ್ಳ ನಯನೇಂದ್ರಿಯವು, ರಸ ವಿಷಯ ವನುಳ್ಳ ರಸನೇಂದ್ರಿಯವು, ಗಂಧ ವಿಷಯವನುಳ್ಳ ನಾಸಿಕೇಂದ್ರಿಯವು. ಈ ಐದು ಜ್ಞಾನೇಂದ್ರಿಯಗಳು ಅರಿವು ಸ್ವರೂಪಮಾದ ಹೃಷೀಕಂಗಳೆಂಬ ಅಭಿಧಾನಂಗಳು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಂಗಳನು ತಿಳುವಳಿಕೆ ಮಾತ್ರದಿಂದಲೇ ಗ್ರಹಿಸುವವಾದ ಕಾರಣ ಇವಕ್ಕೆ ಆ ನಾಮ ಪ್ರಸಿದ್ಧವಾಯಿತು.

ಆಕಾಶತತ್ವವು ಶ್ರವಣೇಂದ್ರಿಯದೊಳಗೆ ವಾಸವಾಗಿದ್ದ ಕಾಲದಲ್ಲಿ ಸುಶಬ್ದ ಕುಶಬ್ದಂಗಳ ಲಾಲಿಸುವದಕ್ಕೆ ಸುಸ್ಥಿರವಾಗಿ ಬರುವುದು. ಆತ್ಮನು ತಾನೆ ದಶದಿಕ್ಕೆಂಬ ಅಧಿದೇವತಾ ನಾಮದಿಂದ ಸದಾ ವಾಸವಾಗಿರುವನು. ತ್ವಗಿಂದ್ರಿಯಕ್ಕೆ ವಾಯುವೆಂಬ ಭೂತವೇ ಮೂಲ ಚೈತನ್ಯವಾಗಿಪ್ಪುದು. ಅದು ವಾಸವಾಗಿರ್ದ ಕಾಲದಲ್ಲಿ ಆವುದಾನೊಂದು ಸುಸ್ಪರ್ಶನ ದುಃಸ್ಪರ್ಶನಂಗಳನವಗ್ರಹಿಸುವುದಕ್ಕೆ ಸುಸ್ಥಿರವಾಗಿರುವದು. ಅದು ನಷ್ಟವಾಗಿ ಹೋಗಲು ಗಜಚರ್ಮವ ಹೊದ್ದುಕೊಂಡು ಸುಸ್ಪರ್ಶನ ದುಃಸ್ಪರ್ಶನಂಗಳ ಗ್ರಹಿಸುವುದಕ್ಕೆ ಸುಕರವಾಗಿ ಬರಲರಿಯದು. ಆತ್ಮನು ತಾನೆ ಚಂದ್ರನೆಂಬಧಿದೇವತಾ ನಾಮದಿಂದ ಸದಾ ವಾಸವಾಗಿರುತಿಹನು. ನಯನವೆನಿಸಿಕೊಂಬುವದೊಂದು ಜ್ಞಾನೇಂದ್ರಿಯಕ್ಕೆ ಅಗ್ನಿ ಎಂಬ ತೇಜಸ್ತತ್ವವೆಂದು ಹೇಳುವ ಭೂತವೇ ಮೂಲ ಚೈತನ್ಯವಾಗಿಪ್ಪುದು. ಅಗ್ನಿ ಎಂಬ ಮೂಲಭೂತವು ನಯನೇಂದ್ರಿಯದಲ್ಲಿ ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಸುರೂಪು ಕುರೂಪಂಗಳ ಗ್ರಹಿಸುವುದಕ್ಕೆ ಸುಸ್ಥಿರವಾಗಿರುವದು. ಆ ಮೂಲ ಭೂತವು ನಷ್ಟವಾಗಿ ಪೋಗಲು ಅದು ಸುರೂಪು ಕುರೂಪುಗಳ ಗ್ರಹಿಸುವುದಕ್ಕೆ ಸುಸ್ಥಿರವಾಗಲರಿಯದು. ಆತ್ಮನು ತಾನೇ ಸೂರ್ಯನೆಂಬ ಅಧಿದೇವತಾನಾಮದಿಂದ ವಾಸವಾಗಿರುತಿಹನು. ಜಿಹ್ವೇಂದ್ರಿಯವೆಂಬ ಜ್ಞಾನೇಂದ್ರಿಯಕ್ಕೆ ಅಪ್ಪೆಂಬ ಭೂತವೇ ಮೂಲ ಚೈತನ್ಯವಾಗಿಪ್ಪುದು. ಅಪ್ಪುವೆಂಬ ಭೂತವು ರಸನೇಂದ್ರಿಯದಲ್ಲಿ ವಾಸ ವಾಗಿರ್ದ ಕಾಲದಲ್ಲಿ ಆವುದಾನೊಂದು ಸುರುಚಿ ಕುರುಚಿಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿರುವುದು. ಆ ಇಂದ್ರಿಯದಲ್ಲಿರ್ದ ಮೂಲ ಭೂತವು ನಷ್ಟವಾಗಿ ಪೋಗಲು ಆವುದಾನೊಂದು ಸುರುಚಿ ಕುರುಚಿಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರಲರಿಯದು. ಆತ್ಮನು ತಾನೇ ವರುಣನೆಂಬ ಅಧಿದೇವತಾನಾಮದಿಂದ ವಾಸವಾಗಿರುವನು. ನಾಸಿಕವೆಂಬುದೊಂದು ಜ್ಞಾನೇಂದ್ರಿಯಕ್ಕೆ ಪೃಥ್ವಿ ಎಂಬ ಭೂತವೇ ಮೂಲ ಚೈತನ್ಯವಾಗಿಪ್ಪುದು. ಪೃಥ್ವಿ ಎಂಬ ಭೂತವು ನಾಸಿ ಕೇಂದ್ರಿಯದೊಳಗೆ ವಾಸವಾಗಿರ್ದ ಕಾಲದಲ್ಲಿ ಆವುದಾನೊಂದು ಸುಗಂಧ ದುರ್ಗಂಧಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿರುವದು. ಆವುದಾನೊಂದು ವೇಳೆ ಆ ಇಂದ್ರಿಯದಲ್ಲಿರ್ದ ಮೂಲ ಭೂತವು ನಷ್ಟವಾಗಿ ಪೋಗಲು ಆವುದಾನೊಂದು

ಸುಗಂಧ ದುರ್ಗಂಧಗಳ ಗ್ರಹಿಸುವದಕ್ಕೆ ಸುಸ್ಥಿರವಾಗಿ ಬರಲರಿಯದು. ಆತ್ಮನು ತಾನೇ ಅಶ್ವಿನೀ ಎಂಬ ಅಧಿದೇವತಾನಾಮದಿಂದ ಸದಾ ವಾಸವಾಗಿರುವನು. ಈ ಪ್ರಕಾರದಿಂದ ಪೇಳಲ್ಪಟ್ಟಂತಹ ಇವು ತಾವೇ ಅರಿವುಸ್ವರೂಪಮಾದ ಪಂಚ ಹೃಷೀಕಂಗಳ ಹಸಿಗೆಯ ವಿಚಾರವನ್ನು ತಿಳಿದುಕೊಂಬುವುದು ತತ್ವಜ್ಞಾನಿಗಳು.

ಕರ್ಮೇಂದ್ರಿಯಗಳು

(೧) ಇನ್ನು ವಾಕ್, ಪಾಣಿ, ಪಾದ, ಗುಹ್ಯ, ಪಾಯು, ಈ ಐದು ಕರ್ಮೇಂದ್ರಿಯಂಗಳು. ಇವಕ್ಕೆ ವಿವರ :

ವಾಗೀಂದ್ರಿಯಕ್ಕೆ ನಾಗವಾಯು, ಸರಸ್ವತಿ ಅಧಿದೇವತೆ ; ಅಲ್ಲಿ ಸುವಾಕ್ಯ ದುರ್ವಾಕ್ಯ ವಿಷಯ. ಪಾಣೇಂದ್ರಿಯಕ್ಕೆ ಕೂರ್ಮವಾಯು, ಇಂದ್ರನಧಿದೇವತೆ ; ಅಲ್ಲಿ ಆದಾನ ವಿದಾನ ವಿಷಯ. ಪಾದೇಂದ್ರಿಯಕ್ಕೆ ಕೃಕರವಾಯು, ವಿಷ್ಣುವಧಿ ದೇವತೆ ; ಅಲ್ಲಿ ಗಮನಾಗಮನ ವಿಷಯ. ಗುಹ್ಯೇಂದ್ರಿಯಕ್ಕೆ ದೇವದತ್ತವಾಯು, [೧]ಬ್ರಹ್ಮನಧಿ[೧]ದೇವತೆ [೨]ಆನಂದ ಅನಾನಂದ[೨] ವಿಷಯ. ಪಾಯ್ವೇಂದ್ರಿಯಕ್ಕೆ ಧನಂಜಯ ವಾಯು, [೩]ಮೃತ್ಯು[೩] ಅಧಿದೇವತೆ ; ಅಲ್ಲಿ [೪]ಸರ್ಜನ ವಿಸರ್ಜನ[೪].

(೨) ಕರ್ಮೇಂದ್ರಿಯಂಗಳು ಕ್ರಿಯಾರೂಪವಮಾದ ಪಂಚ ಹೃಷೀಕಂಗಳೆಂದುಂ ಟಾಗಿರುತಿಹವು. ಕಡಿವ, ಕೊಯ್ಯುವ, ಕುಟ್ಟುವ, ಬೀಸುವ ಮುಂತಾದ ವಸ್ತುಗಳು ಒಬ್ಬಾತ್ಮಾಧೀನದಿಂದಲ್ಲದೆ ಸ್ವಯಾಧೀನದಿಂದ ಚೇಷ್ಟಿಸಲರಿಯವು. ಇವುಗಳು ತಮ್ಮ ತಮ್ಮ ಸಂಬಂಧವಾದ ವಿಷಯಂಗಳನ್ನು ಮನಸಾಧೀನದೊಡನೆ ಕೂಡಿಕೊಂಡು ವಾಯುವಿನ ಚೈತನ್ಯ ಬಲದಿಂದಲೇ ಗ್ರಹಿಸುತಿಹುದಾದ ಕಾರಣ ಕ್ರಿಯಾರೂಪ ಮಾದ ಪಂಚಹೃಷೀಕಂಗಳೆಂಬ ನಾಮವು ಪ್ರಸಿದ್ಧವಾಯಿತು.

ವಾಗಿಂದ್ರಿಯಕ್ಕೆ ನಾಗವಾಯುವೇ ಮೂಲ ಚೈತನ್ಯವಾಗಿಪ್ಪುದು. ಈ ವಾಯು ವಾಸವಾಗಿದ್ದ ಕಾಲದಲ್ಲಿ ಮಾತು ಕಥೆ ಪ್ರಸಂಗವನಾಡುವದಕ್ಕೆ ಸುಸ್ಥಿರವಾಗಿ ಬರುತಿಹುದು. ಅದು ನಷ್ಟವಾಗಿ ಹೋಗಲು ನಾಲಿಗೆ ಎಂಬುದು ತೊದಲು ಬಿದ್ದು ಮಾತುಕಥೆ ಪ್ರಸಂಗವನಾಡುವದಕ್ಕೆ ಸುಸ್ಥಿರವಾಗಿ ಬರಲರಿಯದು. ಅಲ್ಲಿ ಆತ್ಮನು ತಾನೆ ಸರಸ್ವತಿ ಎಂಬ ಅಧಿದೇವತಾ ನಾಮದಿಂದ ಸದಾ ವಾಸವಾಗಿರುತಿಹನು.

ಹಸ್ತವೆನಿಸಿಕೊಂಬುವದೊಂದಿಂದ್ರಿಯಕ್ಕೆ ಕೂರ್ಮವಾಯುವೇ ಮೂಲ ಚೈತನ್ಯವಾಗಿಪ್ಪುದು. ಈ ಮೂಲ ಭೂತವು ವಾಸವಾಗಿದ್ದ ಕಾಲದಲ್ಲಿ ಆವುದಾ ನೊಂದು ಆದಾನ ವಿದಾನ ಕ್ರಿಯೆಗಳಿಗೆ ಸುಸ್ಥಿರವಾಗಿರುವದು. ಅದು ನಷ್ಟವಾಗಿ ಪೋಗಲು ತೋಳೆಂಬ ಬಂಧವು ಬೀಳುಬಿದ್ದುಕೊಂಡು ಆದಾನ ವಿದಾನ ಕ್ರಿಯೆಗಳಿಗೆ ಸುಸ್ಥಿರವಾಗಿ ಬರಲರಿಯದು. ಆತ್ಮನು ತಾನೇ ಇಂದ್ರನೆಂಬ ಅಧಿದೇವತಾ ನಾಮದಿಂದ ಸದಾ ವಾಸವಾಗಿರುತಿಹನು.

೧–೧ ಮೃತ್ಯುವಧಿ (ಮೂ) ೨–೨ ಸರ್ಜನ ವಿಸರ್ಜನ (ಮೂ)
೩–೩ ಬ್ರಹ್ಮ(ಮೂ) ೪–೪ ಆನಂದ ಅನಾನಂದ (ಮೂ).

ಪಾದೇಂದ್ರಿಯಕ್ಕೆ ಕೃಕರವಾಯುವೇ ಮೂಲ ಚೈತನ್ಯವಾಗಿಪ್ಪುದು. ಆ ಮೂಲಭೂತವು ಪಾದೇಂದ್ರಿಯದೊಳಗೆ ವಾಸವಾಗಿದ್ದ ಕಾಲದಲ್ಲಿ ಆವುದಾ ನೊಂದು ಹೋಹ ಬಾಹ ಎಡೆಯಾಟಕ್ಕೆ ಸುಸ್ಥಿರವಾಗಿರುವದು. ಮೂಲ ಭೂತವು ನಷ್ಟವಾಗಿ ಪೋಗಲು ಕಾಲುಗಳೆಂಬ ಬಂಧವು ಸರ[೧][ಸು][೧]ಗಾಲು ಬಿದ್ದುಕೊಂಡು ಆವುದಾನೊಂದು ಹೋಹ ಬಾಹ ಎಡೆಯಾಟಂಗಳಿಗೆ ಸುಸ್ಥಿರವಾಗಿ ಬರಲರಿಯದು. ಅಲ್ಲಿ ಆತ್ಮನು ತಾನೆ ನಾರಾಯಣನೆಂಬಧಿದೇವತಾನಾಮದಿಂದ ಸದಾ ವಾಸವಾಗಿರು ತಿಹನು.

ಗುಹ್ಯೇಂದ್ರಿಯಕ್ಕೆ [೨][ದೇವದತ್ತ][೨] ವಾಯುವೇ ಮೂಲ ಚೈತನ್ಯವಾಗಿಪ್ಪುದು. ಈ ಮೂಲ ಭೂತವು ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಸಂಸಾರ ಮಂಥನಕ್ಕೆ ಸುಸ್ಥಿರವಾಗಿ ಬರುವದು. ಅದು ನಷ್ಟವಾಗಿ ಪೋಗಲು ಆವುದಾನೊಂದು ಸಂಸಾರಮಥನಕ್ಕೆ ಸುಸ್ಥಿರವಾಗಿ ಬರಲರಿಯದು. ಆತ್ಮನು ತಾನೇ ಅಜನೆಂಬಧಿ ದೇವತಾ ನಾಮದಿಂದ ವಾಸವಾಗಿರುತಿಹನು.

ಗುದವೆಂಬುದೊಂದು ಕ್ರಿಯಾರೂಪಮಾದ ಹೃಷೀಕಕ್ಕೆ [೩][ಧನಂಜಯ][೩] ವಾಯುವೇ ಮೂಲ ಚೈತನ್ಯವಾಗಿಪ್ಪುದು. ಆ ಮೂಲ ಭೂತವು ಗುದೇಂದ್ರಿಯದಲ್ಲಿ ವಾಸವಾಗಿದ್ದ ಕಾಲದಲ್ಲಿ ಸರ್ಜನ ವಿಸರ್ಜನ ಕ್ರಿಯೆಗಳಿಗೆ ಸುಸ್ಥಿರವಾಗಿ ಬರುವದು. ಆ ಮೂಲ ಭೂತವು ನಷ್ಟವಾಗಿ ಪೋಗಲು ಆವುದಾನೊಂದು ಸರ್ಜನ ವಿಸರ್ಜನ ಕ್ರಿಯೆಗಳಿಗೆ ಸುಸ್ಥಿರವಾಗಿ ಬರಲರಿಯದು. ಅಲ್ಲಿ ಆತ್ಮನು ತಾನೇ ಮೃತ್ಯುವೆಂಬಧಿ ದೇವತಾ ನಾಮದಿಂದ ಸದಾ ವಾಸವಾಗಿರುತಿಹನು.

ಈ ಪ್ರಕಾರದಿಂದೆ ಕ್ರಿಯಾರೂಪಮಾದ ಪಂಚ ಹೃಷೀಕಂಗಳ ಹಸಿಗೆಯ ವಿಚಾರವನು ತಿಳಿದುಕೊಂಬುದು ತತ್ವಜ್ಞಾನಿಗಳು.

ಕರಣಚತುಷ್ಟಯಗಳು

ಇನ್ನು ಕರಣಚತುಷ್ಟಯಂಗಳುತ್ಪತ್ತಿಯು : ಆತ್ಮನು ಆಕಾಶವೆಂಬ ಮಹಾ ಭೂತಮಂ ಬೆರಸಿದಡೆ ಜ್ಞಾನ ಪುಟ್ಟಿತ್ತು, ಆತ್ಮನು ವಾಯುವೆಂಬ ಮಹಾಭೂತಮಂ ಬೆರಸಿದಡೆ ಮನಸ್ಸು ಪುಟ್ಟಿತ್ತು, ಆತ್ಮನು ಅಗ್ನಿ ಎಂಬ ಮಹಾಭೂತಮಂ ಬೆರಸಿದಡೆ ಅಹಂಕಾರ ಪುಟ್ಟಿತ್ತು, ಆತ್ಮನು ಅಪ್ಪುವೆಂಬ ಮಹಾಭೂತಮಂ ಬೆರಸಿದಡೆ ಬುದ್ಧಿ ಪುಟ್ಟಿತ್ತು, ಆತ್ಮನು ಪೃಥ್ವಿ ಎಂಬ ಮಹಾಭೂತಮಂ ಬೆರಸಿದಡೆ ಚಿತ್ತು ಪುಟ್ಟಿತ್ತು, ಇಂತಿವು ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಅಂತಃಕರಣಚತುಷ್ಟಯಂಗಳು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಂಗಳನ್ನು ಆತ್ಮನೊಳಗಿದ್ದುಕೊಂಡೇ ಗ್ರಹಿಸುತ್ತವಾದ ಕಾರಣ ಅವಕ್ಕೆ ಅಂತಃಕರಣಚತುಷ್ಟಯವೆಂಬ ನಾಮವು ಪ್ರಸಿದ್ಧವಾಯಿತು. ಇನ್ನು ಈ ಕರಣಚತುಷ್ಟಯಂಗಳ ವಿವರ.

೧–೧ ವೆ (ಮೂ) ೨–೨ ಧನಂಜಯ (ಮೂ) ೩–೩ ದೇವದತ್ತ(ಮೂ)

ಮನಸ್ಸಿಂಗೆ ವಾಯುವೆಂಬವು ಮೂಲಚೈತನ್ಯವು. ಚಂದ್ರನಧಿದೇವತೆ. ಅಲ್ಲಿ ಸಂಕಲ್ಪ ವಿಕಲ್ಪಮಂ ಮಾಡಿಸುತ್ತಿಹುದು. ಮತ್ತಂತುಮಲ್ಲದೆ ಜ್ಞಾನಾಜ್ಞಾನವು ಅರಿವುಮರವೆಗಳೆಂಬೆರಡನ್ನೇ ಅನುಗ್ರಹಿಸುತ್ತಿಹುದು. ಅಹಂಕಾರಕ್ಕೆ ಅಗ್ನಿ ಎಂಬ ಮಹಾಭೂತ, ರುದ್ರನಧಿದೇವತೆ. ಅಲ್ಲಿ ಅಹಂಭಾವದಿಂದ ಅಹಂಕರಿಸುತ್ತಿಹುದು. ಬುದ್ಧಿಗೆ ಅಪ್ಪುವೆಂಬ ಮಹಾಭೂತ, ವಿಷ್ಣುವಧಿದೇವತೆ, ಅಲ್ಲಿ ಬುದ್ಧಿ ನಿಶ್ಚೈಸುತ್ತಿಹುದು. ಚಿತ್ತಕ್ಕೆ ಪೃಥ್ವಿ ಎಂಬ ಮಹಾಭೂತ, ಬ್ರಹ್ಮನಧಿದೇವತೆ. ಅಲ್ಲಿ ಅಸತ್ಯವಾದ ಸಕಲ ಸಂಸಾರಾದಿ ಪ್ರಪಂಚವು ನಿತ್ಯವೆಂಬ ಭಾವನೆಯಿಂದವಧರಿಸಿ ಆನಂದಿಸುತಿಹುದು. ಇಂತಿವು ಕರಣಚತುಷ್ಟಯಂಗಳು.

ದಶನಾಡಿಗಳು

(೧) ಇನ್ನು ದಶನಾಡಿಗಳ ಭೇದಮಂ ಪೇಳ್ವೆ. ಗ್ರಂಥ : ''ಈಡಾ ಚ ಪಿಂಗಳಶ್ಚೈವ ಸುಷಮ್ನಾಚ ತೃತೀಯಕಂ। ಗಾಂಧಾರೀ ಹಸ್ತಿಜಿಹ್ವಾ ಚ ಪೂಷಶ್ಚೈವ ಪಯಸ್ವಿನೀ । ಅಲಂಬು ಲಕುಹಶ್ಚೈ ಶಂಕಿನೀ ದಶನಾಡಿಕಾಃ ॥'' ಎಂದು ಈಡಾ ಚಂದ್ರನಾಳ, ಪಿಂಗಳ ಸೂರ್ಯನಾಳ, ಸುಷುಮ್ನ ಮಧ್ಯನಾಳ, ಗಾಂಧಾರೀ ಬಲದ ನೇತ್ರ, ಹಸ್ತಿಜಿಹ್ವಾ ವಾಮನೇತ್ರ, ಪೂಷ ಬಲದಕರ್ಣ, ಪಯಸ್ವಿನೀ ಎಡದಕರ್ಣ, ಅಲಂಭು ಮೇಢ್ರನಾಳ, ಲಕುಹ ಗುದನಾಳ, ಶಂಕಿನೀ ನಾಭಿನಾಳ ಇಂತಿವು ದಶನಾಡಿಗಳು. ಇವಕ್ಕೆ ಅಧಿದೇವತೆಗಳಾವುವೆಂದಡೆ: ಈಡೆಗೆ ಹರಿಯಧಿದೇವತೆ, ಪಿಂಗಳಗೆ ಬ್ರಹ್ಮನಧಿದೇವತೆ, ಸುಷುಮ್ನೆಗೆ ರುದ್ರನಧಿದೇವತೆ, ಗಾಂಧಾರಿಗೆ ಇಂದ್ರನಧಿದೇವತೆ, ಹಸ್ತಿಜಿಹ್ವೆಗೆ ವರುಣನಧಿದೇವತೆ, ಪೂಷೆಗೆ ದಿಗ್ದೇವತಾಧಿದೇವತೆ, ಪಯಸ್ವಿನಿಗೆ ಪದ್ಮೋದ್ಭವನಧಿದೇವತೆ, ಲಕುಹಕ್ಕೆ ಭೂಮಿಯಧಿದೇವತೆ ಅಲಂಬುವಿಂಗೆ ಸೂರ್ಯನಧಿದೇವತೆ, ಶಂಕಿನಿಗೆ ಚಂದ್ರನಧಿದೇವತೆ. ಇಂತಿವು ದಶನಾಡಿಗಳ ಅಧಿದೇವತೆಗಳು.

(೨) ಆ ಪಂಚವಿಂಶತಿ ತತ್ವಾತ್ಮಕ ದೇಹದಲ್ಲಿ ಜೀರ್ಣವಾದ ಅರಳಿಯ ಪರ್ಣದೋಪಾದಿಯಲ್ಲಿ ನಾಡಿಗಳು ಪರಿಪೂರ್ಣವಾಗಿರುತಿಹವು. ಅದರೊಳಗೆ ೭೨ ಸಾವಿರ ನಾಡಿಗಳೇ ಪ್ರಧಾನ ನಾಡಿಗಳಾಗಿರುತಿಹವು. ಅದರೊಳಗೆ ೧೫೦೦ ನಾಡಿಗಳೇ ಕಾರಣನಾಡಿಗಳಾಗಿರುತಿಹವು. ಅದರೊಳಗೆ ೭೦೦ ನಾಡಿಗಳೇ ಮುಖ್ಯ ನಾಡಿಗಳಾಗಿರುತಿಹವು. ಅದರೊಳಗೆ ೧೦೦ ನಾಡಿಗಳೇ ಮುಖ್ಯ ನಾಡಿಗಳಾಗಿರುತಿಹವು. ಇದರೊಳಗೆ ೫೦ ನಾಡಿಗಳೇ ಪ್ರಧಾನ ನಾಡಿಗಳಾಗಿರುತಿಹವು. ಅದರೊಳಗಿಪ್ಪತ್ತೆಂಟು ನಾಡಿಗಳೇ ಪ್ರಯೋಜನ ನಾಡಿಗಳಾಗಿರುತಿಹವು. ಅದರೊಳಗೆ ದಶವಿಧ ಭೇದವಾದ ನಾಡಿಗಳೇ ಅತ್ಯಧಿಕ ನಾಡಿಗಳಾಗಿರುತಿಹವು. ಈಡಾ ಪಿಂಗಳ ಸುಷುಮ್ನವೆಂಬ ನಾಡಿಗಳು ಈ ದಶವಿಧ ಭೇದವಾದ ನಾಳಂಗಳೊಳಗೆ ಈ ತ್ರಿವಿಧ ನಾಡಿಗಳತ್ಯಂತ ಬೀಜನಾಡಿಗಳಾಗಿರುತಿಹವು.

ಈಡಾ ಎಂಬ ನಾಡಿ ಅವುದಯ್ಯ ಎಂದೊಡೆ ಶಶಿ ಸಂಬಂಧವಾದ ವಾಮಭಾಗದ ನಾಸಾಪುಟವು. ಪಿಂಗಳ ಎಂಬ ನಾಡಿ ಆದಿತ್ಯ ಸಂಬಂಧವಾದ ದಕ್ಷಿಣ ಭಾಗದ ನಾಸಾಪುಟವು. ಸುಷುಮ್ನವೆಂಬ ನಾಡಿ ಈಡಾ ಪಿಂಗಳೆಗೆ ಮಧ್ಯಪ್ರವಾಗಿ ಊರ್ಧ್ವಗಾಮಿಯಾಗೈದಿದ ಪುಶ್ಚಿಮನಾಸಾಪುಟವು. ಗಾಂಧಾರಿ ಎಂದೊಡೆ ಬಲದ ನೇತ್ರವು. ಹಸ್ತಿಜಿಹ್ವೆ ಎಂದೊಡೆ ಎಡದ ನೇತ್ರವು. ಪೂಷ ಎಂದೊಡೆ ಬಲದ ಕರ್ಣವು. ಪಯಸ್ವಿನಿ ಎಂದೊಡೆ ಎಡದ ಕರ್ಣವು. ಲಕುಹ ಎಂದೊಡೆ ಗುದನಾಳವು. ಅಲಂಬು ಎಂದೊಡೆ ಮೇಢ್ರನಾಳವು. ಶಂಕಿನ ಎಂದೊಡೆ ನಾಭಿನಾಳವು. ಇವು ತಾವೇ ನಾಳಂಗಳಭಿಧಾನಂಗಳು. ಈಡೆಗೆ ಹರಿಯು. ಅಲ್ಲಿ ಆತ್ಮನು ತಾನೇ ನಾರಾಯಣನೆಂಬಧಿದೇವತಾನಾಮದಿಂದ ೧೬ ಅಂಗುಲ ಪ್ರಮಾಣ ವಾಯುವನ್ನು ಹೊರಕ್ಕೆ ರೇಚಿಸುತಿಹನು. ಪಿಂಗಳೆಗೆ ಬ್ರಹ್ಮನಧಿದೇವತೆ. ಅಲ್ಲಿ ಆತ್ಮನು ಅಜನೆಂಬ ದೇವತಾನಾಮದಿಂದ ೧೨ ಅಂಗುಲ ಪ್ರಮಾಣ ವಾಯುವಿನೊಳಗೆ ನಾಲ್ಕು ಅಂಗುಲ ಪ್ರಮಾಣ ವಾಯುವ ಕತ್ತರಿಸಿ ೧೨ ಅಂಗುಲ ಪ್ರಮಾಣ ವಾಯು[ವ]ನೊಳಕ್ಕೆ ಪೂರಿಸುವಂಥ ಕೃತ್ಯವನುಂಟುಮಾಡುತಿಹನು. ಸುಷುಮ್ನೆಗೆ ರುದ್ರನಧಿದೇವತೆ, ಅಲ್ಲಿ ಆತ್ಮನು ೧೨ ಅಂಗುಲಪ್ರಮಾಣ ವಾಯುವಿನೊಳಗೆ ದ್ವ್ಯಂಗುಲವನುಳಿದು ದಶಾಂಗುಲಪ್ರಮಾಣ ವಾಯುವನ್ನು ಒಂದಾನೊಂದು ಪೂರ್ಣಕುಂಭದಂತೆ ತಡೆದು ನಿಲ್ಲಿಸುವಂಥ ಕೃತ್ಯವನ್ನು ನಡೆಸುತಿಹನು. ಗಾಂಧಾರಿಗೆ ಇಂದ್ರನಧಿದೇವತೆ, ಅಲ್ಲಿ ಆವುದಾನೊಂದು ಚಿತ್ರವಿಚಿತ್ರವಾದ ರೂಪಗಳ ನೋಡಬೇಕೆಂಬ ನಿರೀಕ್ಷಣಕೃತ್ಯವನ್ನು ನಡೆಸುತಿಹನು. ಹಸ್ತಿಜಿಹ್ವೆಗೆ ವರುಣನ ಧಿದೇವತೆ. ಅಲ್ಲಿ ಆತ್ಮನು ಎಡೆಗೆಡೆದು ಮಲಗುವಂತಹ ನಿದ್ರಾವ್ಯಸನದ ಕೃತ್ಯವ ನುಂಟುಮಾಡಿ ನಡೆಸುತಿಹನು. ಪೂಷಂಗೆ ದಿಗ್ದೇವತೆಗಳಧಿದೇವತೆ. ಅಲ್ಲಿ ಆತ್ಮನು ಆವುದಾನೊಂದು ನಾದಾದಿ ಶಬ್ದಂಗಳ ಲಾಲಿಸುವ ಕೃತ್ಯವನ್ನುಂಟುಮಾಡಿ ನಡೆಸುತಿಹನು. ಪಯಸ್ವಿನಿಗೆ ಪದ್ಮೋದ್ಭವನಧಿದೇವತೆ, ಅಲ್ಲಿ ಆತ್ಮನು ಆವುದಾನೊಂದು ಪಂಚಮಹಾವಾದ್ಯಂಗಳ ಲಾಲಿಸಬೇಕೆಂಬ ಇಚ್ಛಾಕೃತ್ಯವನ್ನುಂಟುಮಾಡಿ ನಡೆಸುತಿಹನು. ಲಕುಹಂಗೆ ಭೂಮಿಯಧಿದೇವತೆ, ಅಲ್ಲಿ ಆತ್ಮನು ದೇಹದ ಧಾರಣೆಯನೆಲ್ಲ ವಹಿಸಿಕೊಂಡಿರುವಂತಹ ಕೃತ್ಯವನುಂಟುಮಾಡಿ ನಡೆಸುತಿಹನು. ಅಲಂಬುವಿಂಗೆ ಸೂರ್ಯನಧಿದೇವತೆ. ಅಲ್ಲಿ ಆತ್ಮನು ಕ್ಷುಧಾದಿ ಧರ್ಮಂಗಳ ನೆಗಳಿಸುವಂಥ ಕೃತ್ಯವನ್ನುಂಟುಮಾಡಿ ನಡೆಸುತಿಹನು. ಶಂಕಿನಿಗೆ ಚಂದ್ರನಧಿದೇವತೆ. ಅಲ್ಲಿ ಆತ್ಮನು ತಾನೇ ನಾಡಿಗಳಿಗೆ ಮೂಲವಾಗಿಯೂ ಗಡ್ಡೆಯಾಗಿಯೂ ಕ್ಷುಧಾದಿ ಧರ್ಮಂಗಳ ಶಾಂತಿಯನೈದಿಸುವಂತಹ ಉಪಶಮವಾದ ಕೃತ್ಯವನ್ನುಂಟುಮಾಡಿ ನಡೆಸುತಿಹನು. ಹತ್ತುಪ್ರಕಾರವಾದ ನಾಳಂಗಳ ಅಧಿದೇವತೆಗಳ ಭೇದದ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.

ದಶವಾಯುಗಳು

ಇನ್ನು ದಶವಾಯುಗಳ ಸ್ಥಾನ ಧರ್ಮ ಕರ್ಮ ವರ್ಣಗಳೆಂತೆಂದೊಡೆ :

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ–ಇಂತಿವು ದಶವಾಯುಗಳು. ಇವಕ್ಕೆ ವಿವರ :

ಪ್ರಾಣವಾಯು ಇಂದ್ರನೀಲವರ್ಣ ; ಹೃದಯಸ್ಥಾನದಲ್ಲಿರ್ದು ಅಂಗುಷ್ಠ ತೊಡಗಿ ನಾಸಾಗ್ರಪರಿಯಂತರ ಸತ್ಪ್ರಾಣಿಸಿಕೊಂಡು ಉಶ್ವಾಸ ನಿಶ್ವಾಸವನಂಗೈಸಿ ಅನ್ನ [1]ಜೀರ್ಣ[1]ಮಂ ಮಾಡಿಸುತ್ತಿಹುದು.

ಅಪಾನವಾಯು ಹರಿತವರ್ಣ ; ಗುದಸ್ಥಾನದಲ್ಲಿರ್ದು ಮಲಮೂತ್ರಂಗಳಂ ವಿಸರ್ಜನೆಯಂ ಮಾಡಿಸಿ ಅಧೋದ್ವಾರಮಂ ಬಲಿದು ಅನ್ನರಸವಂ ವ್ಯಾಪ್ತಿಯಂ ಮಾಡಿಸುತ್ತಿಹುದು.

ವ್ಯಾನವಾಯು ಗೋಕ್ಷೀರವರ್ಣ ; ಸರ್ವಸಂಧಿಯಲ್ಲಿರ್ದು ನಿಜಸ್ಥಿತಿಗೊಂಡು [2]ಮುದುಡಿ[2]ಕೊಂಡು ಇಹುದನು [2]ನೀಡಿಕೊಂಡು[2] ಅನ್ನಪಾನಮಂ ತುಂಬಿಸುತ್ತಿಹುದು.

ಉದಾನವಾಯುವು ಎಳೆಮಿಂಚಿನವರ್ಣ ; ಕಂಠಸ್ಥಾನದಲ್ಲಿರ್ದು ಸೀನುವ, ಕೆಮ್ಮುವ, ಕನಸುಕಾಣುವ, ಏಳಿಸುವ, ಚರ್ದಿಸಿ ರೋಧನಂಗಳಂ ಮಾಡಿಸಿ ಅನ್ನರಸ ಆಹಾರಸ್ಥಾಪನಂಗೈಸುತ್ತಿಹುದು.

ಸಮಾನವಾಯು ನೀಲವರ್ಣ ; ನಾಭಿಸ್ಥಾನದಲ್ಲಿರ್ದು ಆಪಾದಮಸ್ತಕ ಪರಿಯಂತರ ಸತ್ಪ್ರಾಣಿಸಿಕೊಂಡು ಅನ್ನರಸಮಂ ಎಲ್ಲ ರೋಮನಾಳಂಗಳಿಗೆ ಹಂಚಿಕ್ಕುತಿಹುದು. ಈ ಐದು ಪ್ರಾಣಪಂಚಕಂ. ಆತ್ಮನು ಫಲವಿಡಿದು ಹುಟ್ಟುವಾಗ ಆತ್ಮನೊಡನೆ ಹುಟ್ಟಿ ಆತ್ಮನು ಘಟದಲ್ಲಿ ಜೀವಿಸಿಕೊಂಡಿರುವ ಪರ್ಯಂತವು ಆತ್ಮನ ಸಕಲ ವ್ಯವಹಾರಂಗಳಿಗೆ ತಾವೇ ಸಹಾಯಗಳಾಗಿ, ಆತ್ಮನು ಘಟವ ಬಿಟ್ಟು ಹೋಗುವಾಗ ಸೂರ್ಯನ ಕಿರಣಂಗಳು ಸೂರ್ಯನೊಡನೈದುವ ಹಾಗೆ ಆತ್ಮನೊಡನೆ ಐದುತ್ತಿಹವಾದ ಕಾರಣ ಇವಕ್ಕೆ ಪ್ರಾಣಪಂಚಕವೆಂಬಭಿಧಾನವು ಪ್ರಸಿದ್ಧವಾಯಿತ್ತು.

ಇನ್ನು ನಾಗವಾಯು ಪೀತವರ್ಣ ; ರೋಮನಾಳಂಗಳಲ್ಲಿರ್ದು ಚಲನೆ ಇಲ್ಲದೆ ಆಡಿಸುತ್ತಿಹುದು. ಕೂರ್ಮವಾಯು ಶ್ವೇತವರ್ಣ ; ಉದರ ಲಲಾಟದಲ್ಲಿರ್ದು ಶರೀರ ಮುಂತಾಗಿ ದೇಹಮಂ ಪುಷ್ಟಿಯಂ ಮಾಡಿಕೊಂಡು ಬಾಯಿ ಮುಚ್ಚುತ್ತ ತೆರಹುತ್ತ ನಯನದಲ್ಲಿ ಉನ್ಮೀಲನವಂ ಮಾಡಿಸುತ್ತಿಹುದು. ಕೃಕರ ವಾಯು ಅಂಜನವರ್ಣ ; ನಾಸಿಕಾಗ್ರದಲ್ಲಿರ್ದು ಕ್ಷುಧಾದಿ ಧರ್ಮಂಗಳಂ ನೆಗಳಿಸಿ

೧+ ಕರಣ (ಮೂ) ೨–೨ ನೀಡಿ (ಮೂ)
೩–೩ ಮುದುಡಿಕೊಂಡಿಹುದು (ಮೂ)

ಗಮನಾಗಮನಂಗಳಂ ಮಾಡಿಸುತ್ತಿಹುದು. ದೇವದತ್ತವಾಯು ಸ್ಫಟಿಕವರ್ಣ ; ಗುಹ್ಯ ಕಟಿಸ್ಥಾನದಲ್ಲಿರ್ದು ಕುಳ್ಳಿರ್ದಲ್ಲಿ ಮಲಗಿಸಿ, ಮಲಗಿರ್ದಲ್ಲಿ ಏಳಿಸಿ, ನಿಲ್ಲಿಸಿ, ಚೇತರಿಸಿ, ಒರಲಿಸಿ ಮಾತನಾಡಿಸುತ್ತಿಹುದು. ಧನಂಜಯವಾಯು ನೀಲವರ್ಣ ; ಬ್ರಹ್ಮರಂಧ್ರಸ್ಥಾನಲ್ಲಿರ್ದು ಸಮುದ್ರಘೋಷಮಂ ಘೋಷಿಸಿ ಮರಣಕಾಲಕ್ಕೆ ನಿರ್ಘೋಷಮಪ್ಪುದು. ಇಂತಿವು ಹತ್ತುಪ್ರಕಾರದ ವಾಯುಗಳು. ಪ್ರಥಮದಲ್ಲಿ ನಿರೂಪಣವ ಪಾಲಿಸಿದ ಪ್ರಾಣಾದಿ ಐದು ವಾಯುಗಳು ಹೋದರೂ ದ್ವಿತೀಯದಲ್ಲಿ ನಿರೂಪಣವ ಪಾಲಿಸಿದ ನಾಗಾದಿ ಐದು ವಾಯುಗಳು ಹೋಗದೆ, ನಾಗವಾಯು ಆತ್ಮನು ಘಟವ ಬಿಟ್ಟು ಹೋದ ಒಂದನೇ ಗಳಿಗೆಗೆ ಹೋಗುವದು. ಕೂರ್ಮ ವಾಯು ಎರಡನೇ ಗಳಿಗೆಗೆ ಹೋಗುವದು. ಕೃಕರವಾಯು ಮೂರನೇ ಗಳಿಗೆಗೆ ಹೋಗುವದು. ದೇವದತ್ತವಾಯು ನಾಲ್ಕನೇ ಗಳಿಗೆಗೆ ಹೋಗುವದು. ಈ ನಾಲ್ಕು ವಾಯುಗಳು ಹೋದರೂ ಧನಂಜಯವಾಯುವೆಂಬುದು ತಾನು ನಿಕ್ಷೇಪಿಸುವಂತಹ ದೇಹವಾದರೆ ಆ ದೇಹವನ್ನೆಲ್ಲ ಉಕ್ಕಿಸಿ, ಬಾಯಿಸಿ, ಊದಿಸಿ, ಒಡಿಸಿ ಭೌತಿಕಾಗ್ನಿಯ ಕೂಡಿ ಹೋಗುವದು. ದಹನವಾಗುವ ಶರೀರವಾದಡೆ ಸರ್ವಾಂಗವೆಲ್ಲ ಸುಟ್ಟ ಬಳಿಕ ತಲೆಯನ್ನು [1]ಫಟ್[1] ಎಂದು ಒಡಿಸಿ ಮಹಾವಾಯುವ ಕೂಡಿ ಹೋಗುವದು.

ಅಷ್ಟಾತ್ಮಗಳು

ಇನ್ನು ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಮಹಾತ್ಮ, ಭೂತಾತ್ಮ ಇಂತಿವು ಅಷ್ಟಾತ್ಮಂಗಳು.

ದೇಹಭಾವದ ವ್ಯವಹಾರದಿಂ ತನ್ನ ತಾ ಮರೆದಿರುವಾತ್ಮನೇ ಜೀವಾತ್ಮನು. ಆ ದೇಹದ ಜಡತ್ವಮಂ ಕಂಡು ತಾನಾರೋ ಎಂದು ಚಿಂತಿಸುವಾತ್ಮನೇ ಅಂತರಾತ್ಮನು. ತನ್ನ ತತ್ವವನರಿದು ಪರತತ್ವದಲ್ಲಿ ಪರಮಕಾಷ್ಠಿಯನೈದಿರುವಾತ್ಮನೇ ಪರಮಾತ್ಮನು. ಆಣವಾದಿ ಮಲತ್ರಯಂಗಳ ವ್ಯವಹಾರಂಗಳಿಗೆ ದೂರಸ್ಥನಾಗಿರುವಾತ್ಮನೇ ನಿರ್ಮಲಾತ್ಮನು. ಶುದ್ಧಾಂತಃಕರಣದೇಹಿ ಎಂದು ಅಂತಶ್ಶುಚಿ ಬಹಿಶ್ಶುಚಿಯಾಗಿರ್ಪಾತನೇ ಶುದ್ಧಾತ್ಮನು. ಸದಾ ನಿತ್ಯಾನಿತ್ಯ ವಿವೇಕ ವಿಚಾರ ಪರಾಂಬರಿಕೆಯೊಡನೆ ಕೂಡಿರುವಾತ್ಮನೇ ಜ್ಞಾನಾತ್ಮನು. ಮಹಿಮಾಸ್ಪದನಾಗಿ ಮೆರೆವಾತ್ಮನೇ ಮಹಾತ್ಮನು. ಸಕಲ ಪ್ರಾಣಿಗಳಿಗೆ ಚೈತನ್ಯಸ್ವರೂಪನಾಗಿರುವಾತ್ಮನೇ ಭೂತಾತ್ಮನು. ಈ ಎಂಟು ಪ್ರಕಾರವಾದ ಆತ್ಮರುಗಳ ಹಸಿಗೆಯ ವಿಚಾರದಲ್ಲಿ ಒಬ್ಬಾತ್ಮನೇ ಆಯಾಯ ವ್ಯವಹಾರದ ಭೇದದಿಂದೆಂಟು ಪ್ರಕಾರವಾದ ಆತ್ಮರುಗಳ ಹಸಿಗೆಯ ವಿಚಾರವನ್ನು ತಿಳಿ[2]ದುಕೊ[2]ಂಬುದು ತತ್ವಜ್ಞಾನಿಗಳು.

೧–೧ ಫಟ್ (ಮೂ) ೨–೨ ಯಬೇಕೆ (ಮೂ)

ಅಷ್ಟತನುಗಳು

ಇನ್ನು ಸ್ಥೂಲತನು, ಸೂಕ್ಷ್ಮತನು, ಕಾರಣತನು, ನಿರ್ಮಲತನು, ಆನಂದತನು. ಚಿನ್ಮಯತನು, ಚಿದ್ರೂಪತನು, ಶುದ್ಧತನು, ಇಂತಿವು ಅಂತರಂಗದ ಅಷ್ಟತನುಗಳು.

ಪೃಥ್ವಿ ಅಪ್ಪು ತತ್ವಂಗಳಿಂದ ವ್ಯಕ್ತೀಕರವಾದುದೇ ಸ್ಥೂಲಶರೀರವು. ಅಗ್ನಿ ವಾಯುತತ್ವಗಳಿಂದ ವ್ಯಕ್ತೀಕರವಾದುದೇ ಸೂಕ್ಷ್ಮತನುವು. ಆಕಾಶ ಹಮ್ಮು ತತ್ವಂಗಳಿಂದ ವ್ಯಕ್ತೀಕರವಾದುದೇ ಕಾರಣತನುವು. ಪಂಚಕರ್ಮೇಂದ್ರಿಯಂಗಳಿಂದಾದುದೇ ನಿರ್ಮಲತನುವು. *ಪಂಚವಿಷಯಂಗಳಿಂದಾದುದೇ ಆನಂದತನುವು. ಪಂಚಜ್ಞಾನೇಂದ್ರಿಯಂಗಳಿಂದಾದುದೇ ಚಿನ್ಮಯತನುವು. ಪಂಚಪ್ರಾಣವಾಯುಗಳಿಂದ ವ್ಯಕ್ತೀಕರವಾದುದೇ ಚಿದ್ರೂಪತನುವು. ಪಂಚಕರಣಂಗಳಿಂದ ವ್ಯಕ್ತೀಕರವಾದುದೇ ಶುದ್ಧತನುವು. ಅಂತಪ್ಪ ಎಂಟು ಪ್ರಕಾರವಾದ ಅಂಗಂಗಳ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.*

ಸಪ್ತಧಾತುಗಳುತ್ಪತ್ತಿ

ಇನ್ನು ಸಪ್ತಧಾತುಗಳುತ್ಪತ್ತಿ ವರ್ಣಾಂಶಿಕದ ಭೇದವೆಂತೆಂದೊಡೆ :

ಶ್ಲೋ : ''ರಸೋ ರುಧಿರ ಮಾಂಸಾ ಚ । ಮೇಧೋ ಮಜ್ಜಾಸ್ಥಿರೇತಸಃ ॥ ಧಾತವಃ ಸಪ್ತಧಾ ಪ್ರೋಕ್ತಾ । ಸರ್ವದೇಹ ಸಮಾಶ್ರಿತಾಃ ॥'' ಎಂದು ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ಲ ಇಂತಿವು ಸಪ್ತಧಾತುಗಳು. ವಿವರ : ಉಂಡನ್ನ ಏಳುದಿನಕ್ಕೆ ರಸವಹುದು. ಆ ರಸ ಏಳುದಿನಕ್ಕೆ ರುಧಿರವಹುದು. ಆ ರುಧಿರ ಏಳುದಿನಕ್ಕೆ ಮಾಂಸವಹುದು. ಆ ಮಾಂಸ ಏಳುದಿನಕ್ಕೆ ಮೇದಸ್ಸಹುದು. ಆ ಮೇದಸ್ಸು ಏಳುದಿನಕ್ಕೆ ಅಸ್ಥಿಯಹುದು. ಆ ಅಸ್ಥಿ ಏಳುದಿನಕ್ಕೆ ಮಜ್ಜೆಯಹುದು. ಆ ಮಜ್ಜೆ ಏಳುದಿನಕ್ಕೆ ಶುಕ್ಲವಹುದು. ಇಂತಿವರ ತನುಚೇಷ್ಟಂಗಳೆಂತೆಂದೊಡೆ : ರಸಕ್ಕೆ ಕಪಿಲವರ್ಣದ ಧಾತು, ಪೃಥ್ವ್ಯಂಶಿಕ ದೇಹವನಳುಕಿಸುತಿಹುದು. ರುಧಿರಕ್ಕೆ ನೀಲವರ್ಣಧಾತು, ಅಪ್ಪುವಿನಂಶಿಕ ಶರೀರವನ್ನು ನಡುಗಿಸುತಿಹುದು. ಮಾಂಸಕ್ಕೆ ರಕ್ತವರ್ಣದ ಧಾತು, ಅಗ್ನ್ಯಂಶಿಕ ಶರೀರವಂ ಕಳವಳಿಸುತಿಹುದು. ಮೇದಸ್ಸುವಿಂಗೆ ಮಾಂಜಿಷ್ಠವರ್ಣದ ಧಾತು, ಮಾರುತನಂಶಿಕ ಶರೀರವಂ ಬೆದರಿಸುತ್ತಿಹುದು. ಅಸ್ಥಿಗೆ ಕೃಷ್ಣವರ್ಣದ ಧಾತು, ಆಕಾಶದಂಶಿಕ ಶರೀರಮಂ ಎತ್ತರ ತತ್ತರವಂ ಮಾಡಿ ಮರುಳಾಗಿ ನುಡಿಸುತಿಹುದು. ಮಜ್ಜೆಗೆ ತಾಮ್ರವರ್ಣದ ಧಾತು, ಸೂರ್ಯನಂಶಿಕ ಶರೀರವಂ ಒತ್ತರಿಸಿ ಕಳವಳಿಸಿ ನುಡಿಸುತಿಹುದು. ಶುಕ್ಲಕ್ಕೆ ಶ್ವೇತವರ್ಣ[ದ ಧಾತು],ಚಂದ್ರನಂಶಿಕ ಶರೀರಮಂ ಕಂಪಿಸಿ ಕಳವಳಿಸುತಿಹುದು. ಇಂತಿವು ಸಪ್ತಧಾತುಗಳ ಭೇದ.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೩

ಪಂಚಕೋಶಗಳು

ಇನ್ನು ಪಂಚಕೋಶಂಗಳು– ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಇಂತಿವು ಪಂಚಕೋಶಂಗಳು. ಇವಕ್ಕೆ ವಿವರ :

ಅಲ್ಲಿ ಪೃಥ್ವೀತತ್ವ ಸಂಬಂಧವಾದಂಥ ಸ್ಥೂಲದೇಹವೇ ಅನ್ನಮಯಕೋಶ. ಅದರೊಳಗಣ ಜ್ಞಾನ ಕರ್ಮೇಂದ್ರಿಯಂಗಳ ವ್ಯಾಪಾರವೇ ಮುಟ್ಟಿದರರಿವುದು, ಕರೆದರೆ ಕೇಳುವುದು, ಕಣ್ದೆರೆದು ನೋಡುವುದು ಮುಂತಾದ ಗುಣಂಗಳುಂಟಾಗಿರ್ದಲ್ಲಿ ಘಟದೊಳಗಿನ್ನು ಪ್ರಾಣವಿದೆ ಎಂದು ತಿಳಿವುದು ಪ್ರಾಣಮಯ ಕೋಶ. ಅದರೊಳಗಣ ಚಿತ್ತ ಬುದ್ಧಿ ಅಹಂಕಾರವೆಂಬ ತ್ರಿಕರಣಂಗಳ ವ್ಯಾಪಾರಂಗಳೇ ಮನೋಮಯಕೋಶ. ನೆನಹುದು, ನಿರ್ಧರಿಸುವುದು, ಆಧರಿಸುವುದು, ಅಹಂಕರಿಸುಹುದು ಇವು ಮೊದಲಾದ ಗುಣಂಗಳುಂಟಾಗಿದ್ದಲ್ಲಿ ಆತ್ಮನೊಳಿನ್ನು ಮನಸ್ಸು ಇದೆ ಎಂದು ತಿಳಿವುದು. ಅದರೊಳಗಣ ಬುದ್ಧಿಶಕ್ತಿಯೇ ವಿಜ್ಞಾನಮಯಕೋಶ. ಆ ಬುದ್ಧಿಯ ವೃತ್ತಿಯನಳಿದು ಬಾಹ್ಯವೇನೂ ತೋರದೆ ಆತ್ಮಸುಖವೆಗ್ಗಳಿಸಲು ಆನಂದಮಯಕೋಶ. ಇಂತಿವು ಪಂಚಕೋಶಗಳು.

ಪಂಚಾಗ್ನಿಗಳುತ್ಪತ್ತಿ

ಇನ್ನು ಉದರಾಗ್ನಿ, ಮಂದಾಗ್ನಿ, ಕಾಮಾಗ್ನಿ, ಶೋಕಾಗ್ನಿ, ವಡಬಾಗ್ನಿ, ಇಂತಿವು ಪಂಚಾಗ್ನಿಗಳು.

ಆತ್ಮನು ಅನುಭವಿಸಿದಂಥ ಅನ್ನಪಾನಾದಿಗಳನ್ನು ಜೀರ್ಣೀಕರಿಸಿ ಒಡಲ ತಾಪಿಸುವಂತಹ ದೀಪನ ತಾಪವೇ ಉದರಾಗ್ನಿಯು. ಶರೀರಕ್ಕೆ ಶೈತ್ಯವಾವರಿಸಿ ಹಸಿವು ತೃಷೆಗಳು ನಿಂದ ನಿರ್ದೀಪನ ತಾಪವೇ ಮಂದಾಗ್ನಿಯು. ವಿಷಯ ವಿಕಾರದ ವಿರಹ ಸಂತಾಪವೇ ಕಾಮಾಗ್ನಿಯು. ನಾನಾ ದುಃಖಾಗ್ನಿಯಲ್ಲಿ ಜೀವನ ತಾಪವೇ ಶೋಕಾಗ್ನಿಯು. ಮಹೇಶ್ವರಜ್ವರತಾಪವೇ ವಡಬಾಗ್ನಿಯು. ಇವು ತಾವೇ ಪಂಚಾಗ್ನಿಗಳ ಭೇದವು. ಉದರಾಗ್ನಿ ವೆಗ್ಗಳಿಸಿದರೆ ಅನ್ನಪಾನಾದಿಗಳಂ ತೆಗೆದುಕೊಂಡಲ್ಲಿ ಪರಿಹಾರಮಪ್ಪುದು. ಮಂದಾಗ್ನಿ ವೆಗ್ಗಳಿಸಿದರೆ ಕಲುಕ ಕಷಾಯಂಗಳ ತೆಗೆದುಕೊಂಡಲ್ಲಿ ಪರಿಹಾರಮಪ್ಪುದು. ಶೋಕಾಗ್ನಿ ವೆಗ್ಗಳಿಸಿದಲ್ಲಿ ಹೋದಂತಹ ವಸ್ತುವು ಮರಳಿ ದೊರೆಕೊಂಬಲ್ಲಿ ಪರಿಹಾರಮಪ್ಪುದು. ವಡಬಾಗ್ನಿ ವೆಗ್ಗಳಿಸುವುದಿಲ್ಲ; ವೆಗ್ಗಳಿಸಿದ್ದಾದರೆ ಪ್ರಾಣವೇ ಪ್ರಾಯಶ್ಚಿತ್ತವಲ್ಲದೆ ಮರಳಿ ಅದಕ್ಕೆ ಪ್ರಾಯಶ್ಚಿತ್ತವಿಲ್ಲ. ಈ ಐದು ಪ್ರಕಾರವಾದ ಅಗ್ನಿಗಳ ಹಸುಗೆಯ ವಿಚಾರವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.

ಅಂಗಚತುಷ್ಟಯಂಗಳು

ಇನ್ನು ಅಂಗ, ಪ್ರತ್ಯಂಗ, ಸಾಂಗಾಂಗ, ಉಪಾಂಗ–ಇಂತಿವು ಅಂಗಚತುಷ್ಟಯಂಗಳು. ಇವಕ್ಕೆ ವಿವರ–ಆತ್ಮನು ಹುಟ್ಟುವಲ್ಲಿಯೂ ಬೆಳೆವಲ್ಲಿಯೂ

ಆಯವಾದಂಗಂಗಳಾಗಿರುತಿಹವು. ಅಲ್ಲಿ ಶಿರಸ್ಸು, ಉರದ್ವಯ, ಭುಜದ್ವಯ ಇಂತಿವು ಅಂಗಂಗಳು. ವದನ, ನಾಸಿಕ, ಕರ್ಣ ಅಧರ, ಕಂಗಳು, ಅಂಗುಲಿಗಳು ಇಂತಿವು ಪ್ರತ್ಯಂಗಗಳುಂ, ಇವುಗಳು ಊನವಾದಲ್ಲಿ ಆತ್ಮನು ಘಟವ ಬಿಟ್ಟು ಹೋಗದೆ ಮತ್ತೊಂದಭಿಧಾನವ ತಾಳಿಕೊಂಡು ಘಟದೊಳಗೆ ಜೀವಿಸಿಕೊಂಡಿರುವನು. ಕರಣಚತುಷ್ಟಯಂಗಳು ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಕರಣಂಗಳು ಸಾಂಗಾಂಗಗಳು. ಆತ್ಮನೊಡನೆ ಕೂಡಿದಂಗಂಗಳಾಗಿರುತಿಹವು. ಆತ್ಮನೊಡನೆ ಹುಟ್ಟಿ ಆತ್ಮನು ಘಟವ ಬಿಟ್ಟು ಹೋಗುವಾಗಲೂ ಆತ್ಮನೊಡನ್ಯೈದಿ ಹೋಗುತಿಹವು. ವಸ್ತ್ರ, ಆಭರಣ, ಅನುಲೇಪನಾದಿ ಶೃಂಗಾರವೇ ಉಪಾಂಗಗಳು, ಇಂತಿವು ಅಂಗಚತುಷ್ಟಯಂಗಳು.

ತನುತ್ರಯಗಳು

ಇನ್ನು ಸ್ಥೂಲತನು, ಸೂಕ್ಷ್ಮತನು, ಕಾರಣತನು. ಇಂತಿವು ತನುತ್ರಯಂಗಳು. ಇವಕ್ಕೆ ವಿವರ :

(೧) ಪೃಥ್ವಿಯಾದಿ ಐದು ತತ್ವಗಳಿಂದಾದುದೇ ಸ್ಥೂಲತನು. ವಾಯು ಪಂಚಕ, ಜ್ಞಾನಕರ್ಮೇಂದ್ರಿಯಂಗಳು ಹತ್ತು, ಮನ ಬುದ್ಧಿ ಈ ಎರಡು ಅಂತಃಕರಣಂಗಳು. ಇಂತಿವು ಹದಿನೇಳು ಕೂಡಿ ಸಪ್ತದಶಕ, ಲಿಂಗಭೌತಿಕವೆಂದು ಹೇಳಲ್ಪಡುವಂತಹದ್ದು ಸೂಕ್ಷ್ಮತನು. ಅಹಂಕಾರ, ಚಿತ್ತ ಮೂಲಾತ್ಮ ಈ ತ್ರಿಕರಣಂಗಳ ಕೂಟದಿಂದಾದುದೇ ಕಾರಣತನು.

(೨) ಇನ್ನೊಂದು ಪ್ರಕಾರದಿಂದ ಪೇಳಲ್ಪಡುಗುಂ, ಪೃಥ್ವಿ ಅಪ್ಪುಗಳೆರಡು ತತ್ವಂಗಳಿಂದ ವ್ಯಕ್ತೀಕರವಾದುದೇ ಸ್ಥೂಲತನು. ಅಗ್ನಿ ವಾಯುಗಳೆರಡುತತ್ವಂಗಳಿಂದ ವ್ಯಕ್ತೀಕರವಾದುದೇ ಸೂಕ್ಷ್ಮತನು. ಆಕಾಶ ಹಮ್ಮುಗಳೆರಡುತತ್ವಂಗಳಿಂದ ವ್ಯಕ್ತೀಕರವಾದುದೇ ಕಾರಣತನು.

(೩) ಸರ್ವಾಧಾರಮಯವಾದ ಧರಣೀತತ್ವವು ಸರ್ವಪಾನ್ಯಪ್ರಕ್ಷಾಳನ ರೂಪಮಾದುದಕತತ್ವಂಗಳೆರಡೂ ಕೂಡಿ ಸ್ಥೂಲವಾದ ದೇಹವು ಕಾಯ ಸ್ವರೂಪವಾಗಿರುತಿಹುದು. ದಾಹಕ ಪಾಚಕ ರೂಪಮಾದ ಧನಂಜಯತತ್ವವು ಸರ್ವಚಾಂಚಲ್ಯಮಯವಾದ ಸಮೀರತತ್ವವು ಸರ್ವಾಕಾಶಪ್ರದಮಾದಂಬರ ತತ್ವವು ಈ ಮೂರು ಕೂಡಿ ಜೀವನು ಜೀವಸ್ವರೂಪನಾಗಿಪ್ಪನು. ಆತ್ಮನು ಘಟದೊಳಗೆ ಜೀವಿಸಿರುವಪರ್ಯಂತವೂ ಪಂಚಭೂತಂಗಳು ಕೂಡಿ ಒಂದು ದೇಹವೆಂಬಂತೆ ಕಾಣಬರುತಿಹವು. ಆತ್ಮನು ಘಟವ ಬಿಟ್ಟು ಹೋದಬಳಿಕ ಪೃಥ್ವೀತತ್ವಸಂಬಂಧವಾದ ಶಲ್ಯಾದಿಗಳು, ಅಪ್ಪುತತ್ವ ಸಂಬಂಧವಾದ ಶ್ಲೇಷ್ಮಾದಿ ಗಳು ಪೃಥ್ವಿಯಲ್ಲಿಯೇ ಉಳಿಯುವವು. ಅಗ್ನಿತತ್ವ ಸಂಬಂಧವಾದ ಕ್ಷುಧಾದಿಗಳು ವಾಯುತತ್ವಸಂಬಂಧವಾದ ಚಲನಾದಿಗಳು ಆಕಾಶತತ್ವಸಂಬಂಧವಾದ ರಾಗಾದಿಗಳು ಆತ್ಮನೊಡನ್ಯೈದುತಿಹವು. ಅದು ಕಾರಣಮಾಗಿ ಎರಡೇ ಕಾಯ ಸ್ವರೂಪು, ಮೂರೇ ಜೀವ ಸ್ವರೂಪೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

೭೧

(೪) ಪೃಥ್ವಿಯಪ್ಪುಗಳಿಂದ ಸ್ಥೂಲಶರೀರವು, ಅಗ್ನಿ ವಾಯುಗಳಿಂದ ಸೂಕ್ಷ್ಮಶರೀರವು, ಆಕಾಶಾತ್ಮಗಳಿಂದ ಕಾರಣಶರೀರವು. ಸ್ಥೂಲಶರೀರದಲ್ಲಿ ಜೀವನು ವಾಯುರೂಪಿಯಾಗಿಹನು. ಸೂಕ್ಷ್ಮಶರೀರದಲ್ಲಾಕಾಶರೂಪಾಗಿಹನು. ಕಾರಣಶರೀರದಲ್ಲಿ ಸ್ವಯಂ ಪ್ರಕಾಶಮಾಗಿಹನು. ಸ್ಥೂಲಶರೀರವು ಪೂರ್ವಮುಖವಾಗಿ, ಸ್ವಲ್ಪ ಕಾಲ ಸ್ವಲ್ಪ ಸುಖ ಸ್ವಲ್ಪ ದುಃಖಂಗಳನನುಭವಿಸುತ್ತಿಹುದು. ಕಾರಣಶರೀರವು ಪಶ್ಚಿಮಮುಖವಾಗಿ ಸುಖ ದುಃಖ ಕಾಲಂಗಳಿಲ್ಲದೆ, ನಿಜಸುಖವನನುಭವಿಸುತ್ತಿಹುದು. ಸ್ಥೂಲಶರೀರವು ಕ್ರಿಯಾಜನ್ಯಮಾದುದು. ಸೂಕ್ಷ್ಮಶರೀರವು ಕರ್ಮಜನ್ಯಮಾದುದು. ಕಾರಣಶರೀರವು ಜ್ಞಾನಜನ್ಯಮಾದುದು. ಅಂತಪ್ಪ ಕ್ರಿಯಾಜನ್ಯವೇ ಕರ್ಮ, ಕರ್ಮಜನ್ಯವೇ ಜ್ಞಾನ. ಇಂತು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಬಗೆಯಾಗಿರ್ಪ ಎನ್ನ ಸ್ಥೂಲ ಸೂಕ್ಷ್ಮ ಕಾರಣಂಗಳ ನಡುವೆ ಪ್ರಕಾಶಿಸುತ್ತಿರ್ಪ ಮಹಾಲಿಂಗವೇ, ನೀನು ನಾನು ಸುತ್ತಿ ಬಪ್ಪ ಠಾವೆಲ್ಲವಂ ನೀನು ಒತ್ತಿಲೆ ತೋರುತಿರ್ಪೆ. ಒತ್ತಿಲಿರ್ಪ ನಿನ್ನಂ ಕಾಣದೆ, ಸುತ್ತಿ ಬಳಲುತ್ತಿರ್ಪ ಕೋಟಲೆಗಲಿಸಿ, ಗುರುವೇ ! ನಿನ್ನ ಕರುಣದಿಂ ಪಶ್ಚಿಮಭಾಗವಂ ಸೇರಿ ನೋಡಿದಲ್ಲಿ ಕರತಲಾಮಲಕದಂತೆ ನೀನು ಎನಗೆ ಪ್ರಸನ್ನನಾದೆಯಯ್ಯಾ ! ನಿನ್ನ ದಿವ್ಯ ಮಂಗಲ ಮೂರ್ತಿಯನು ಕರ್ಮರಹಿತ ಜ್ಞಾನದೃಷ್ಟಿಯಿಂ ನೋಡಿ ನೋಡಿ, ನಿಜಸುಖದೊಳೋಲಾಡಿಯಾಡಿ, ನಿನ್ನ ಸಮರಸ ಸುಖಾನಂದದೊಳು ಬೆರೆದು, ಮರೆದಿರ್ಪುದೇ ನಿರ್ವಾಣವು. ಅಂತಪ್ಪ ಕೈವಲ್ಯಸುಖವನೆನಗಿತ್ತು ಸಲಹಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

ಗುಣತ್ರಯಗಳು

ಇನ್ನು ಸತ್ವ ರಜ ತಮ ಇವು ಮೂರು ಗುಣತ್ರಯಂಗಳು. ಇವಕ್ಕೆ ವಿವರ :

(೧) ಸತ್ವಕ್ಕೆ ಶ್ವೇತವರ್ಣ, ರಜಕ್ಕೆ ರಕ್ತವರ್ಣ, ತಾಮಸಕ್ಕೆ ಕಪ್ಪುವರ್ಣ. ಗ್ರಂಥ : ''ಸತ್ಯಂ ಜ್ಞಾನಂ ತಪೋ ಮೌನಂ ತೋಷಃ ಶಾಂತಿರ್ವಿವೇಕತಾ। ಉತ್ಸಾಹೋ ನಿಶ್ಚಯೋ ಧೈರ್ಯಂ ಸಾತ್ವಿಕಸ್ಯ ಚ ಲಕ್ಷಣಂ ॥'' ಸತ್ಯ ಜ್ಞಾನ ತಪ ಮೌನ ಹರುಷ ಕ್ಷಮೆ ಸಾಹಸ ನಿಶ್ಚಯ ಧೈರ್ಯ ವಿವೇಕ ಈ ಹತ್ತು ಸಾತ್ವಿಕ ಗುಣಂಗಳು.

ಗ್ರಂಥ : ''ಗರ್ವಃ ಕ್ರೋಧೋತ್ಯಹಂಕಾರೋ ಸತೀಸಂಗ ಪ್ರಳಾಪನಂ । ಅಕ್ರಮ್ಯ ಡಂಭ ಮಾತ್ಸರ್ಯೋ ರಾಜಸಸ್ಯ ಚ ಲಕ್ಷಣಂ ॥'' ಗರ್ವ, ಕ್ರೋಧ, ಅಹಂಕಾರ, ವಿಷಯವಾದ, ಅಪ್ರಿಯವಾಚಕ, ಉದ್ಯೋಗ, ಮತ್ಸರ, ರೋಷ ಇವು ಎಂಟು ರಾಜಸಗುಣಂಗಳು.*

* ಗರ್ವ ಕ್ರೋಧ, ಅಹಂಕಾರ, ಸತಿಸಂಗ (ವಿಷಯವಾದ), ಪ್ರಲಾಪ (ಅಸಂಬದ್ಧಮಾತು), ಅಕ್ರಮ(ಕ್ರಮತಪ್ಪಿದ ನಡತೆ) ಆಡಂಬರ, ಮತ್ಸರ, ಇವು ಎಂಟು ರಾಜಸ ಗುಣಗಳು ಎಂದಾಗಬಹುದು (ಸಂ)

ಗ್ರಂಥ : ''ಅಜ್ಞಾನಂ ಮೋಹ ನಿದ್ರಾ ಚ ಚಾಪಲ್ಯಂ ಬುದ್ಧಿಹೀನಂ ಚ । ಪಾಪಿಷ್ಠ ಪರಭಾದತ್ವಂ ತಾಮಸಸ್ಯ ಚ ಲಕ್ಷಣಂ ॥'' ಎಂದು ಅಜ್ಞಾನ, ಮೋಹ, ನಿದ್ರಾ, ಚಾಪಲ್ಯ, ಹೀನವೃತ್ತಿ ಪರನಿಂದೆ, ಹಿಂಸೆ ಪಾಪಿಷ್ಠತ್ವ ಈ ಎಂಟು ತಾಮಸಗುಣಂಗಳು.

(೨) ಸಾತ್ವಿಕ ಗುಣಂಗಳು : ಸತ್ಯ – ನುಡಿದ ಮಾತಿಂಗೆ ತಪ್ಪದೆ, ಹಿಡಿದಾ ಚರಣೆಯ ಬಿಡದೆ, ಯಥಾಸ್ಥಿತವಾಗಿ ನಡೆವಳಿಯೊಡನೆ ಕೂಡಿ ಆಚರಿಸುವುದೇ ಸತ್ಯವು. ಜ್ಞಾನ – ಕಾಕುಗೋಷ್ಠಿಗಳಂ ಬಿಟ್ಟು ಸದಾ ನಿತ್ಯಾನಿತ್ಯ ವಿವೇಕದ ಪರಾಂಬರಿಕೆಯೊಡನೆ ಕೂಡಿರುವಂತಹದೇ ಜ್ಞಾನವು. ತಪ – ಇಂದ್ರಿಯಂಗಳಂ ನಿಗ್ರಹಿಸಿಕೊಂಡು ಜಿತೇಂದ್ರಿಯನಾಗಿ ಸದಾಶಿವಜ್ಞಾನವ ಮುಂದುಗೊಂಡು ಇರುವಂತಹದೇ ತಪವು. ಮೌನ – ಕಲಹ ನಾಸ್ತಿಯಾಗಿ ವಾಙ್ನೇಮವ ಮುಂದು ಗೊಂಡಿರುವುದೇ ಮೌನವು. ಹರ್ಷ – ಸುಖ ದುಃಖ ಬಂದು ತಟ್ಟಿದರೂ ಕಂದದೆ ಕುಂದದೆ ಅಂತರಂಗದಲ್ಲಿ ಲವಲವಿಕೆ ಮುಂದುಗೊಂಡಿರುವಂತಹ ಸಂತೋಷವೇ ಹರ್ಷವು. ಕ್ಷಮೆ – ಅಂದಲ್ಲಿಯೂ ಆಡಿದಲ್ಲಿಯೂ ಕೊಂದಲ್ಲಿಯೂ ಬಡಿದಲ್ಲಿಯೂ ಜರಿದಲ್ಲಿಯೂ ಹ್ಯೇಯವನಿಕ್ಕಿ ನುಡಿದಲ್ಲಿಯೂ ತಾಳಿಕೊಂಡು ಹೋಗುವಂತಹ ಸರ್ವಸಮ್ಮತಭಾವವೇ ಕ್ಷಮೆಯು. ಸಾಹಸ – ಸಾವಿರ ಮುಖದಲ್ಲಿ ಬಂದ ಕಂಟಕ ವನ್ಹಾದರೂ ಏಕಮುಖದಲ್ಲಿ ತೀರ್ಚಿ ಕಳೆವೆನೆಂಬಂತಹ ಸಾಮರ್ಥ್ಯವೇ ಸಾಹಸವು. ನಿಶ್ಚಯ – ಅಂತರಂಗದಲ್ಲಿ ದೃಢಭಾವ ಮುಂದುಗೊಂಡಿರುವಂತ ಹದೇ ನಿಶ್ಚಯವು. ಧೈರ್ಯ – ಹೆದರದೆ ಇರುವಂತಹ ಪರಮ ದಿಟ್ಟತನವೇ ಧೈರ್ಯವು. ವಿವೇಕ – ನಡೆವಲ್ಲಿಯೂ ನುಡಿವಲ್ಲಿಯೂ ಕೊಡು ವಲ್ಲಿಯೂ ಕೊಂಬಲ್ಲಿಯೂ ಸರ್ವಾವಸ್ಥೆಯಲ್ಲಿಯೂ ವಿಚಾರಪರಾಯಣನಾಗಿರು ವಂತಹದೇ ವಿವೇಕವು. ಈ ಹತ್ತು ಸಾತ್ವಿಕಗುಣಂಗಳು.

(೩) ರಜೋಗುಣಂಗಳು : ಗರ್ವ – ಅಯ್ಯ ಜೀಯ ಎಂದುದಕ್ಕೆ ಎತ್ತಿದ ಶಿರಸ್ಸುಳ್ಳಾತನಾಗಿ ನನಗಾರು ಸರಿ ಎಂದು ಇದಿರ ಲೆಕ್ಕಿಸದೆ ಇರುವಂತಹದೇ ಗರ್ವವು. ಕ್ರೋಧ – ಈ ಗರ್ವದಿಂದ ಏನು ಪ್ರಯೋಜನ ಎಂದು ಆರಾದರೂ ಸತ್ಪುರುಷರು ಪ್ರಸಂಗವ ಹೇಳಲು ಅವರ ಮೇಲೆ ಕಡುಗೋಪವ ಮುಂದು ಗೊಂಡಿರುವಂತಹದೇ ಕ್ರೋಧವು. ಅಹಂಕಾರ – ವಿದ್ಯೆ, ಬುದ್ಧಿ, ಕುಲ, ಛಲ, ಪಂಥ ಪರಾಕ್ರಮದಲ್ಲಿ ನಾನೇ ಶ್ರೇಷ್ಠನೆಂದು ಗರ್ವಿಸುವುದೇ ಅಹಂಕಾರವು. ವಿಷಯವಾದ – ಶಿವಶಾಸ್ತ್ರ, ಶಿವಗೋಷ್ಠಿಗಳಂ ಬಿಟ್ಟು ಸದಾ ಸ್ಮರಶಾಸ್ತ್ರಾನು ಗ್ರಾಹಕದೊಡನೆ ಕೂಡಿರುವುದೇ ವಿಷಯವಾದ. ಅಪ್ರಿಯವಾಚಕ – ನಿನ್ನ ಮಾತೆನಗೆ ಸೊಗಸದು ತೆಗೆ, ಎಂದು ಹಿತವಲ್ಲದ ಪ್ರಸಂಗವನಾಡುವಂತಹದೇ ಅಪ್ರಿಯವಾಚಕವು. ಉದ್ಯೋಗ– ಸದಾ ಒಂದು ವ್ಯವಸಾಯದೊಡನೆ ಕೂಡಿರು

ವಂತಹದೇ ಉದ್ಯೋಗವು.* ಮತ್ಸರ – ಓರೋರ್ವರುಗಳಿಗೆ ಒಂದೊಂದು ಪ್ರಸಂಗವು ಬಂದಲ್ಲಿ ದೇಹ ಧರ್ಮಗತಿಯಿಂದ ಬರುವ ದುಂಟಾದುದು ಎಂದು ನೀರಮೇಲಣ ಲಿಪಿಯಂತೆ ಹೋಗದೆ ಕಾಡುಕೋಣನ ಹಾಗೆ, ಕಾಳೋರಗನ ಹಾಗೆ ಅಂತರಂಗದಲ್ಲಿ ದೀರ್ಘದ್ವೇಷವ ತಾಳಿಕೊಂಡಿರು ವಂತಹದ್ದೇ ಮತ್ಸರವು. ರೋಷ – ತೂಪುರದ ಕೊಳ್ಳಿಯೋಪಾದಿಯಲ್ಲಿ ಚಿಟಿಚಿಟಿ ಗುಟ್ಟುವಂಥ ಕಟ್ಟುಗ್ರದ ಕಡುಗೋಪವೇ ರೋಷವು. ಈ ಎಂಟು ರಾಜಸ ಗುಣಂಗಳಿರ್ಪವು.

(೪) ತಾಮಸಗುಣಂಗಳು: ಅಜ್ಞಾನ – ತಾನಾರೆಂಬ ತನ್ನ ನಿಜವ ನರಿಯದಿಹ ತನವೇ ಅಜ್ಞಾನವು. ಮೋಹ – ಸದಾ ಸತಿಸುತಾದಿಗಳಮೇಲಣ ಮಮಕಾರವು ಮುಂದುಗೊಂಡಿರುವುದೇ ಮೋಹವು. ನಿದ್ರೆ – ಅನ್ನೋದ ಕಂಗಳಂ ಯಥೇಷ್ಟ ವಾಗಿ ತೆಗೆದುಕೊಂಡು ದಿವಾಕಾಲ ನಿಶಾಕಾಲಂಗಳಲ್ಲಿ ಹೊಡೆಗೆಡೆದು ಮಲಗಿರು ವುದೇ ನಿದ್ರೆ. ಚಾಪಲ್ಯ+ – ಸತ್ಪುರುಷರು ಪ್ರಸಂಗವನಾಡಿದರೆ ವಾಗ್ಬಂಧನವ ಮಾಡುವಂತಹ ವಾಕ್‌ಚಾತುರ್ಯವೇ ಚಾಪಲ್ಯವು. ಹೀನವೃತ್ತಿ – ವರ್ತನೆ ಇಲ್ಲದೆ ಹೀನವರ್ತನೆಯ ವರ್ತಿಸುವುದೇ ಹೀನವೃತ್ತಿಯು. ಪರನಿಂದೆ – ಪಾತಕ ವಾವುದೆಂಬುದನು, ಒಬ್ಬರಲ್ಲೊಂದು ಗುಣವನು ನೋಡದೆ ಅವರ ಗುಣಾವ ಗುಣಂಗಳನೆತ್ತಿ ದೂಷಣೆಯಮಾಡುವಂತಹದ್ದೇ ಪರ ನಿಂದೆಯು. ಹಿಂಸೆ – ನಿರಪರಾಧಿ ಪ್ರಾಣಿಗಳ ಕೊಲ್ಲುವಂತಹದ್ದೇ ಹಿಂಸೆ. ಪಾಪಿಷ್ಠತ್ವ – ನಿರಪರಾಧಿ ಪ್ರಾಣಿಗಳ ಕೊಂದರೆ ಪಾಪ ಬರುವುದೆಂದು ಹೇಳಿದರೆ, ಕೊಂದಲ್ಲದೆ ಬಿಡೆನೆಂಬ ಪಾಪದ ಮೇಲಣ ಬಯಕೆಯೇ ಪಾಪಿಷ್ಠತ್ವವು. ಈ ಎಂಟು ತಾಮಸಗುಣಂಗಳು.

ಆತ್ಮತ್ರಯಗಳು

ಇನ್ನು ಜೀವಾತ್ಮ, ಅಂತರಾತ್ಮ, ಪರಮಾತ್ಮ ಇಂತಿವು ಆತ್ಮತ್ರಯಂಗಳು. ಇವಕ್ಕೆ ವಿವರ :

(೧) ಅಲ್ಲಿ ಆತ್ಮನು ಸಂಸಾರವ್ಯಾಪ್ತಿಯಂತಹ ಜೀವನ ಬೆರಿಸಲಾಗಿ ಜೀವಾತ್ಮನು. ಆತ್ಮನು ಸಂಸಾರವ ಹೊದ್ದಿಯೂ ಹೊದ್ದದಿಹನಾಗಿ ಅಂತರಾತ್ಮನು. ನಿಃಕಲನಾಗಿರಲು ಪರಮಾತ್ಮನು. ಇಂತಿವು ಆತ್ಮತ್ರಯಂಗಳ ಭೇದ.

(೨) ಶಿವಾಂಶಿಕನಾದಾತ್ಮನು ಶಿವನಾಜ್ಞೆಯಿಂದ ಶರೀರಸಂಬಂಧಿಯಾದಾಗ ಆ ಆತ್ಮನು ಸಂಸಾರವ್ಯಾಪ್ತಿಯಾದಂಥ ಸ್ಥೂಲ ಸೂಕ್ಷ್ಮವಾದ ಸಕಲ ಸಂಸೃತಿಗಳಲ್ಲಿ ಇಚ್ಛೆಯುಳ್ಳವನಾದಂಥ ಜೀವನ ಬೆರೆಸಲಾಗಿ ಜೀವಾತ್ಮನ ವರ್ತನೆಯೊಡನೆ ಕೂಡಿ ತಾನು ಚರಿಸುವನಾಗಿ ಜೀವಾತ್ಮನೆಂದು ಹೇಳಿಸಿಕೊಂಡನು. ಅಲ್ಲಿ ಆತ್ಮಂಗೆ ಕಿಂಚಿನ್ಮಾತ್ರ ವಿವೇಕ ತಲೆದೋರಿದಾಗ ಆ ವಿವೇಕಿಯಾದಾತ್ಮನು ಸಂಸಾರವ

* ಶಿವಜ್ಞಾನ, ಶಿವಧ್ಯಾನ, ಶಿವಚಿಂತೆ, ಶಿವಕ್ರಿಯೆ ಇಲ್ಲದೆ ಕೇವಲ ಧನಕ್ಕಾಗಿ ಸದಾ ಮಾಡುವ ಒಂದು ವೃತ್ತಿ (ಸಂ)

\+ ಎಲ್ಲಾ ಇಂದ್ರಿಯಗಳು ಸಾರಾಸಾರ ವಿವೇಕವಿಲ್ಲದೆ ಇಂದ್ರಿಯಂಗಳಿಗೆ ಹರಿವುದು (ಸಂ).

ಹೊದ್ದಿಯೂ ಒಂದು ವೇಳೆ ಅರಿವು ಮಸಳಿಸಿ ಮರವೆ ಬಂದು ಮುಸುಕಿದಾಗ, ಸಕಲ ಸಂಸ್ಕೃತಿಗಳಲ್ಲಿ ಮನ ಬೆರೆದಾತನಾಗಿಯೂ ಹೊದ್ದನಾಗಿ ಅವ ತಾನೇ ಅಂತರಾತ್ಮನೆಂದು ಹೇಳಿಸಿಕೊಂಡನು. ಅಲ್ಲಿ ಆತ್ಮಂಗೆ ಜ್ಞಾನವು ನಿರ್ಧಾರವಾದಾಗ ಇಹಲೋಕದ ಪರಲೋಕದ ಸಕಲ ಸಂಸ್ಕೃತಿಗಳನ್ನು ವಿಸರ್ಜಿಸಿ ನಿಃಕಲನಾಗಿರಲು ನಿರಾತಂಕಬ್ರಹ್ಮವೇ ತಾನಾಗಿರಲು ಅವ ತಾನೇ ಪರಮಾತ್ಮನೆನಿಸಿಕೊಂಡನು.

೭೨

(೩) ಪೃಥ್ವಿಯೇ ಬಹಿರಂಗ, ಆಕಾಶವೇ ಅಂತರಂಗ. ಆ ಅಂತರಂಗಮಪ್ಪ ಆಕಾಶದಲ್ಲಿ ನೀನಿರ್ಪೆ. ಬಹಿರಂಗಮಪ್ಪ ಪೃಥ್ವಿಯಲ್ಲಿ ನಾನಿರ್ಪೆನು. ಅಂತರಂಗ ಜ್ಞಾನವು ನಿನಗೆ, ಬಹಿರ್ಜ್ಞಾನವೆನಗೆ. ನೀನು ಅಂತರಂಗದಲ್ಲಿ ಆನಂದಿಸುತ್ತಿರುವೆ. ನಾನು ಬಹಿರಂಗದಲ್ಲಿ ಆನಂದಿಸುತ್ತಿರ್ಪೆನು. ನಿನಗೆ ಅಂತರಂಗವೇ ನಿಜಮಾಗಿರ್ಪುದು. ಎನಗೆ ಬಹಿರಂಗವೇ ನಿಜಮಾಗಿರ್ಪುದು. ನೀನು ಅಂತರಂಗದಲ್ಲಿ ನಡೆವುತ್ತಿರ್ಪೆ, ನಾನು ಬಹಿರಂಗದಲ್ಲಿ ನಡೆವುತ್ತಿರ್ಪೆನು. ಅಂತರಂಗದಲ್ಲಿ ನೋಟವು ನಿನಗೆ, ಬಹಿರಂಗದಲ್ಲಿ ನೋಟವೆನಗೆ. ನಿನ್ನ ಸತ್ವವೆನ್ನ ಬಹಿರಂಗವನಾವರಿಸಿ, ಎನ್ನಂ ಮೋಹಿಸುತ್ತಿರ್ಪುದು. ಎನ್ನ ಮನವು ನಿನ್ನ ಅಂತರಂಗವನಾವರಿಸಿ ನಿನಗೆ ಆಗ್ರಹವಂ ಪುಟ್ಟಿಸುತ್ತಿಹುದು. ನಿನಗೆ ಅಂತಶ್ಯಕ್ತಿಯಾದ ಕಾರಣ ನನ್ನ ತಮಸ್ಸನ್ನು ನಿನ್ನ ಕೈವಶಮಾಡಿಕೊಂಡು, ಅದರಿಂದಲೇ ನನ್ನಂ ಸಂಹರಿಸುತ್ತಿರುವೆ. ನನಗೆ ಶಕ್ತಿಬಾಹ್ಯವಾದ ಕಾರಣ ನಿನ್ನ ಸತ್ವಗುಣವಂ ನಾನು ಪರಿಗ್ರಹಿಸಲಾರದೆ, ಲಯವನೈದುತ್ತಿರ್ಪ ಸಕೀಲವನ್ನು ನಿನ್ನಿಂದ ನಾನು ತಿಳಿದಲ್ಲಿ, ಬಹಿರಂಗದಲ್ಲಿರ್ಪ ಸತ್ವಗುಣವಂ ನಿನ್ನಿಂದ ನಾನು ಕಂಡಲ್ಲಿ ನಿನಗೆ ಅಂತರಂಗವಾಗಿರ್ಪವನು ನಾನೆಂದು ನೀನು ಕಂಡಿರಯ್ಯಾ. ಬಹಿರಂಗದಲ್ಲಿ ನೀನು ಎನಗೆ ಆಧಾರಮಾದಲ್ಲಿ ಅಂತರಂಗದಲ್ಲಿ ನಿನಗೆ ನಾನೇ ಆಧಾರವಾದೆನಯ್ಯಾ, ಬಹಿರಂಗದಲ್ಲಿ ನೀನೆನಗೆ ಶಕ್ತಿಯಾದಲ್ಲಿ, ಅಂತರಂಗದಲ್ಲಿ ನಿನಗೆ ನಾನೇ ಶಕ್ತಿಯಾದೆನಯ್ಯಾ. ತಮೋಗುಣವಂ ಪಿಡಿದು ನನ್ನಂ ನೀನಾಡಿಸಿದೊಡೆ, ಸತ್ವಗುಣವಂ ಪಿಡಿದು, ನಿನ್ನಂ ನಾನಾಡಿಸುತ್ತಿರ್ಪೆನಯ್ಯಾ. ಕರ್ಪುರವಪ್ಪಿದುರಿಯಾದೆ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೭೩

(೪) ಶಬ್ದ ಮಧ್ಯದಲ್ಲಿರ್ಪ ಅರ್ಥವೇ ಜೀವನು ತಮೋರೂಪಮಾಗಿಹನು. ಜ್ಞಾನ[ಮಧ್ಯ]ದಲ್ಲಿರ್ಪ ಅರ್ಥವೇ ಪರಮನು ಸತ್ವರೂಪಮಾಗಿಹನು. ಜ್ಞಾನ ಶರೀರದಲ್ಲಿರ್ಪ ಪರಮಾರ್ಥಭಾವವೆಂಬ ಹಸ್ತದಲ್ಲಿ ಬುದ್ಧಿಯೆಂಬ ತ್ರಿಗುಣಾತ್ಮಕಮಪ್ಪ ಮುಮ್ಮೊನೆಯಲಗಂ ಪಿಡಿದು, ಆ ಶಬ್ದಶರೀರಮಂ ಭೇದಿಸಿ, ತನ್ಮಧ್ಯದಲ್ಲಿರ್ಪ ಅರ್ಥವನ್ನು ಆ ಜ್ಞಾನವು ಗ್ರಹಿಸಿದಲ್ಲಿ, ಜ್ಞಾನಾರ್ಥದೊಳಗೆ ಬೆರೆದು, ಎರಡೂ ಒಂದಾಗಿ, ಆ ಅರ್ಥವೇ ಸತ್ಯವಾಗಿ, ಆನಂದಮಯಮಪ್ಪುದು. ಜ್ಞಾನವು

ಗ್ರಹಿಸದೆ ಬಿಟ್ಟರೆ ಶಬ್ದಾರ್ಥವೇ ದುರರ್ಥಮಾಗಿ, ಸೃಷ್ಟಿ ಸ್ಥಿತಿ ಸಂಹಾರಂಗಳಲ್ಲಿ ಕೋಟಲೆಗೊಳ್ಳುತ್ತಿರ್ಪುದೇ ಜೀವನು, ಅದೇ ಪರಮನು. ತತ್ಪರಿಗ್ರಹವೇ ಐಕ್ಯಮಾದಲ್ಲಿ ಎರಡೂ ಒಂದೇ ಆಗಿರ್ಪುದು ಕಾಣಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

ಜೀವತ್ರಯಗಳು

ವಿಶ್ವ ತೈಜಸ ಪ್ರಾಜ್ಞ ಇವು ತಾವೇ ಜೀವತ್ರಯಂಗಳು.

ಜೀವನು ಆಶಾಪಾಶ, ಕ್ಲೇಶಪಾಶ, ಮೋಹಪಾಶ, ಭವಪಾಶವೆಂಬ ಚತುಃಪಾಶಂಗಳಲ್ಲಿ ಬಿಗಿವೊಡೆದಿರುವಂತಹ ಬದ್ಧಜೀವನು. ಬಹಿರಂಗದ ಷಟ್ ಕೃಷಿ ವ್ಯಾಪಾರಂಗಳೊಡನೆ ಚರಿಸಲು ಅವ ತಾನೇ ಬದ್ಧಜೀವನೆಂದೆನಿಸಿಕೊಂಬನು. ಬದ್ಧಜೀವನು ತೈಜಸಸಂಬಂಧದಿಂ ಎಂದರೆ ಇಂದ್ರಿಯಸಂಬಂಧವಾದ ವಿಷಯಂಗಳೊಡನೆ ಕೂಡಿ ಚರಿಸಲು ತೈಜಸಜೀವನೆಂದೇ ಹೇಳಿಸಿಕೊಂಡನು. ತೈಜಸ ಜೀವನೆಂದೂ ಇಂದ್ರಿಯಜೀವನೆಂದೂ ಸ್ವಪ್ನಗ್ರಾಹಕನೆಂದೂ ಒಂದೇ ನಾಮ ಪರ್ಯಾಯಂಗಳಾಗಿಪ್ಪುವು. ಬದ್ಧಜೀವನು ಲೇಸಾಗಿ ಕತ್ತಲೆಯೊಳಗೆ ಕಾರಣ ತನುವಿನ ಮರವೆಯಲ್ಲಿರ್ದನಾಗಿ, ಮಗ್ನನಾಗಿರ್ದ ಕಾರಣ ಪ್ರಾಜ್ಞಜೀವನೆಂದೇ ಹೇಳಿಸಿಕೊಂಡನು. ಇವು ತಾವೇ ಜೀವತ್ರಯಂಗಳ ಭೇದದ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.

ಅವಸ್ಥಾತ್ರಯಗಳು

(೧) ಇನ್ನು ಜಾಗ್ರ ಸ್ವಪ್ನ ಸುಷುಪ್ತಿ ಇಂತಿವು ಅವಸ್ಥಾತ್ರಯಂಗಳು. ಇವಕ್ಕೆ ವಿವರ : ಎಚ್ಚತ್ತಿಹುದೇ ಜಾಗ್ರ, ಅಲ್ಲಿ ಕನಸು ಕಾಂಬುದೇ ಸ್ವಪ್ನ, ಅಲ್ಲಿ ಮೈಮರೆದಿಹುದೇ ಸುಷುಪ್ತಿ ಇಂತಿವು ಅವಸ್ಥಾತ್ರಯಂಗಳ ಭೇದ. ಶ್ಲೋಕ : ''ತ್ರಿಪಂಚದ್ವಿಶತ್ ಸತ್ವಂ ಚತುಃಷಷ್ಟಿರಜಸ್ತಥಾ ಏಕಾಶೀತಿತಮಶ್ಚೈವ ದೋಷತ್ರಯಮಿದಂ ಶೃಣು''.

(೨) ಆತ್ಮನು ಇಪ್ಪತ್ತೈದು ತತ್ವಸಮಷ್ಟಿಯಾಗಿ ನಿಂದು ಸ್ಥೂಲತನುವಿನ ಮರವೆಯೊಡನೆ ಕೂಡಿಕೊಂಡು ಎಚ್ಚರವುಳ್ಳಾತನಾಗಿ ಬಹಿರಂಗದ ದೃಶ್ಯಮಾದ ಸಕಲೇಂದ್ರಿಯಂಗಳ ವ್ಯಾಪಾರದೊಡನೆ ಕೂಡಿ ಚರಿಸುವುದೆಂಬುದೀಗ ಜಾಗ್ರಾವಸ್ಥೆ ಎನಿಸುವುದು. ಹದಿನೇಳು ತತ್ವಸಮಷ್ಟಿಯಾಗಿ ನಿಂದು ಸ್ಥೂಲತನುವಿನ ಮರವೆ ಸೂಕ್ಷ್ಮತನುವಿನೊಡನೆ ಕೂಡಿಕೊಂಡು ದೃಶ್ಯಾದೃಶ್ಯಮಾದ ಕಲ್ಪಿತ ರೂಪಿನ ಕಾಣಿಕೆಯಾಗಿಪ್ಪ ಸುಖ ದುಃಖ ಮೋಹ ರೂಪಮಾದ ಸ್ವಪ್ನಂಗಳ ಕಾಣುವುದೇ ಸ್ವಪ್ನಾವಸ್ಥೆ. ಪ್ರಾಣ, ವಾಯು, ಪ್ರಕೃತಿ ಎಂಬ ಮೂರು ತತ್ವ ಸಮಷ್ಟಿಯಾಗಿ ನಿಂದು, ಸ್ಥೂಲತನುವಿನ ಮರವೆ ಸೂಕ್ಷ್ಮತನುವಿನ ಅರಿವು ಏನೂ ಇಲ್ಲದೆ ಒಂದು ಚರಣಾಯುಧನು ಪರಿದು ಮೇವುತ್ತಿಪ್ಪ ಮರಿಗಳೆಲ್ಲವನು ತನ್ನ

ಪುಕ್ಕದ ಮರೆಯಲ್ಲಿ ಅಡಗಿಸಿಕೊಂಡು ತಾನೊಂದೆಡೆಯಲ್ಲಿ ನಿದ್ದೆಗೆಯ್ವಹಾಗೆ ಬಾಹ್ಯಾಭ್ಯಂತರದ ಸಂಬಂಧಮಾದ ಸಕಲ ತತ್ವಂಗಳನು ತನ್ನಲ್ಲಿಯೇ ಅಡಗಿಸಿ ಕೊಂಡು ತಾನು ಆ ಮಾಯಾನಂದ ಭೋಗದಲ್ಲಿ ಪರವಶವನೈದಿರುವಂತಹದ್ದೇ ಸುಷುಪ್ತಾವ್ಯಸ್ಥೆ ಎನಿಸಿಕೊಂಡಿತು.

೭೪

(೩) ಜಾಗ್ರದೊಳಗೆ ನಾಲ್ಕರಲ್ಲೊಂದು ಪಾಲು ಸುಷುಪ್ತಿಯು, ಸುಷುಪ್ತಿಯಲ್ಲಿ ನಾಲ್ಕರಲ್ಲೊಂದು ಪಾಲು ಸ್ವಪ್ನವು. ಅದೆಂತೆಂದೊಡೆ : ಚಂದ್ರಸೂರ್ಯರಿಲ್ಲದ ದಿನಂಗಳೇ ಸುಷುಪ್ತಿ ಕಾಲಪ್ರಮಾಣವೂ, ಆ ಕತ್ತಲೆಯೊಳಗಿರ್ಪ ನಕ್ಷತ್ರ ಪ್ರಕಾಶವೇ ಸ್ವಪ್ನಪ್ರಮಾಣವೂ ಆಗಿ, ನಾಲ್ಕರಲ್ಲೊಂದು ಪಾಲನ್ನು ಕತ್ತಲೆಯು ಜಯಿಸುತ್ತಿರ್ಪುದು. ಜಾಗ್ರತ್ಸ್ವರೂಪರಾದ ಚಂದ್ರಸೂರ್ಯರು ನಕ್ಷತ್ರಮಾರ್ಗವನ್ನನುಸರಿಸಿ ತಿರುಗುತ್ತಿರ್ಪಂತೆ, ಜೀವನು ಜಾಗ್ರದಲ್ಲಿ ಸ್ವಪ್ನಮಾರ್ಗವನ್ನನುಸರಿಸಿ ತಿರುಗುತ್ತಿರ್ಪುದರಿಂ ಜಾಗ್ರದೊಳಗಣ ಸ್ವಪ್ನವೇ ನಿರಾಕಾರವು, ಸುಷುಪ್ತಿಯೊಳಗಣ ಸ್ವಪ್ನವೇ ಸಾಕಾರವು. ನಿರಾಕಾರ ಸ್ವಪ್ನದಲ್ಲಿ ಮನಸ್ಸು ಸಾಕಾರವಾಗಿ ತಿರುಗುತ್ತಿರ್ಪುದು. ಸಾಕಾರ ಸ್ವಪ್ನದಲ್ಲಿ ಶರೀರಾಕಾರಮಾಗಿ ತಿರುಗುತ್ತಿರ್ಪುದು. ಸ್ವಪ್ನವಿಲ್ಲದ ಜಾಗ್ರ ಸುಷುಪ್ತಿಗಳೇ ಕಾಲಾತೀತಮಾಗಿ, ಪರಮಾನಂದ ರೂಪಮಾಗೊಂದಕ್ಕೊಂದು ಹೊಂದದೇ ಇಹವು. ಅವೇ ಶಿವಶಕ್ತಿ ಸ್ವರೂಪಗಳು. ತದ್ವಿಯೋಗದಲ್ಲಿ ಬೀಜವೊಡೆದುಮೂಡಿ ಪ್ರಕಾಶಿಸುವ ವೃಕ್ಷದಂತಿರ್ಪುದೇ ತೂರ್ಯಾವಸ್ಥೆಯು. ಅಂತಪ್ಪ ಜಾಗ್ರಸ್ವಪ್ನಸುಷುಪ್ತಿಗಳನಳಿದ ತೂರ್ಯವೇ ನಿಜವು. ನಿಜವೇ ತಾನು. ತನ್ನಂ ತಾನರಿವುದೇ ಮೋಕ್ಷವು ಕಾಣಾ [ಮಹಾ]ಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

ಸತ್–ಚಿತ್–ಆನಂದ

೭೫

(೧) ಸತ್ತೆಂದರೆ ಸತ್ತು ಚಿತ್ತೆಂದರೆ ಚೇತನ. ಆನಂದವೆಂದರೆ ಸಮ್ಯಕ್ ಪ್ರಕಾಶ. ಆ ಸದ್ಧರ್ಮವೇ ಸತ್ವ. ಆ ಸತ್ತೇ ರಕ್ಷಣ ಕಾರಣಮಾಗಿಹುದು. ಚಿತ್ತೇ ಸಂಹಾರಕಾರಣಮಾಗಿಹುದು, [ಆನಂದವೇ ಪ್ರಸನ್ನ ಪ್ರಸಾದ ಕಾರಣಮಾಗಿಹುದು] ರಜಸ್ಸೆಂದರೆ ರಾಗ, ರಾಗವೆಂದರೆ ಆನಂದ, ಆ ರಜಸ್ಸೇ ಕ್ರೀಡೆಯಲ್ಲಿ ಗಮಿಸುತ್ತಿರ್ಪುದರಿಂ ಸೃಷ್ಟಿಕಾರಣಮಾಯಿತ್ತು, ಸಚ್ಚಿತ್ಸಂಗವೇ ಆನಂದಮಾದುದರಿಂದ ಸ್ವತಂತ್ರಧರ್ಮವಿಲ್ಲದೆ ಭಾವಪರವಾಯಿತ್ತು, ಸತ್ತೇ ಶಕ್ತಿಯು, ಚಿತ್ತೇ ಶಿವನು, ಈ ಎರಡರ ಸಂಗವೇ ಆನಂದವು. ಸತ್ತೇ ಭಕ್ತಿಯು, ಚಿತ್ತೇ ಜ್ಞಾನವು, ಇವೆರಡರ ಸಂಗವೇ ಮುಕ್ತಿಯು, ಆ ಮುಕ್ತಿಯೇ ಆನಂದವು. ಸದ್ಭಕ್ತಿಕರಣವೇ ಕಾಯ, ಜ್ಞಾನಕರಣವೇ ತೇಜಸ್ಸು, ಮುಕ್ಯಾನಂದಕರಣವೇ ಭಾವವು. ಸತ್ತು ಸ್ಥೂಲವಾಗಿಹುದು, ಚಿತ್ತು ಸೂಕ್ಷ್ಮವಾಗಿಹುದು, ಆನಂದವು ಕಾರಣಮಾಗಿಹುದು.

ಈ ಆನಂದವು ಉತ್ತರಮಾರ್ಗದಲ್ಲಿ ಮುಕ್ತಿರೂಪವಾಗಿಹುದು. ದಕ್ಷಿಣ ಮಾರ್ಗದಲ್ಲಿ ಸೃಷ್ಟಿರೂಪಮಾಗಿಹುದು. ಆ ಸೃಷ್ಟಿಕಾರಣಮೆಂತೆಂದೊಡೆ : ಸತ್ತಿನಲ್ಲಿ ಕಾಮವೂ ಚಿತ್ತದಲ್ಲಿ ಕ್ರೋಧವೂ ಆನಂದದಲ್ಲಿ ಮೋಹವೂ ಸತ್ತಿನಲ್ಲಿ ಲೋಭವೂ ಚಿತ್ತಿನಲ್ಲಿ ಮದವೂ ಆನಂದದಲ್ಲಿ ಮತ್ಸರವೂ ಇರ್ಪುದು. ಸತ್ತೇ [೧][ನಾದ][೧] ರೂಪು, ಚಿತ್ತೇ [೨][ಬಿಂದು][೨] ರೂಪು. ಆನಂದವೇ ಕಳಾರೂಪು. ಕಾಮ ಮೋಹಂಗಳಿಂ ಸತ್ಕರ್ಮವೇ ದುಷ್ಕರ್ಮವಾಯಿತ್ತು, [೩][ಕ್ರೋಧ][೩] ಮದವೇ [೪][ಜ್ಞಾ][೪]ನವಾಯಿತ್ತು. ಲೋಭಮತ್ಸರಗಳಿಂ ನಿರುಪಾಧಿಕ ಮೋಕ್ಷಾನಂದವೇ ಸೋಪಾಧಿಕ ಪ್ರಪಂಚಾನಂದಮಾಗಿ ದುಃಖಹೇತುವಾಯಿತ್ತು, ಮದ ಬಿಂದುವರ್ತಿಯಲ್ಲಿ ಅಖಂಡ ನಿರುಪಾಧಿಕ ಚಿಚ್ಛ್ಯೋತಿಯೊಡನೆ ಸೋಪಾಧಿಕಮಾಗಿ ಕೂಡಿ ವಿಕಾರಮಾಗಿರ್ಪುದೇ ಜೀವನು. ನಿತ್ಯ ಭಾಸ್ಕರಮಯ ಮಾಗಿರ್ಪುದೇ ಶಿವನು. ಅದರ ಸುಖವೇ ತನ್ನ ಸುಖವಾಗಿ, ಅದರ ದುಃಖವೇ ತನ್ನ ದುಃಖವಾಗಿ, ಅದರ ಮೇಳನವೇ ತನ್ನ ಮೇಳನವಾಗಿ, ಅದರ ಪ್ರಕಾಶವೇ ತನ್ನ ಪ್ರಕಾಶವಾಗಿ ಸ್ಥೂಲ ಸೂಕ್ಷ್ಮ ಕಾರಣವೆಂಬುಪಾಧಿಯೊಳಗೆ ಕೂಡಿ, ಅದನು ಬಿಡದೆ, ಉಪಾಧಿಯು ಇದ್ದಂತಿರ್ಪುದೇ ಭವವು. ಇದಕ್ಕೆ ಪರಿಹಾರಮೆಂತೆಂದೊಡೆ : ಚಿತ್ತು ಜ್ಞಾನಮಧ್ಯದಲ್ಲಿರ್ಪ ಮನೋಮಲಿನವನ್ನು ಸತ್ವರೂಪವಾದ ಭಕ್ತಿಯಿಂ ಪರಿಹರಿಸಿದಲ್ಲಿ, ಆ ಚಿತ್ಪ್ರಭೆಯಿಂ ಜ್ಞಾನಪ್ರಕಾಶಮಾದಲ್ಲಿ, ಆ ಜ್ಞಾನದಿಂ ಸತ್ತಿನಲ್ಲಿರ್ಪ, [೫][ಕಾಮಮೋ][೫]ಹಂಗಳಳಿದು ಶರೀರವು ಪೂತಮಾದಲ್ಲಿ, ಸದ್ಭಕ್ತಿಯು ಪ್ರಕಾಶಮಾಗಿ, ಕ್ರೋಧ ಮದಂಗಳಳಿದು, ಲೋಭ ಮತ್ಸರಂಗಳಳಿದು, ಭಕ್ತಿ ಜ್ಞಾನಗಳಿಂ ಭಾವವು ಶುದ್ಧಮಾದಲ್ಲಿ [೬]ಈ ಭಕ್ತಿಯಿಂದ ಲೋಭವಳಿದುದು, ಆ ಜ್ಞಾನದಿಂದ ಮತ್ಸರವಳಿದು[೬] ಸ್ವಸ್ವರೂಪವು ಪ್ರಕಾಶಮಾಗಿ, ಶಿವಧ್ಯಾನಪರಾಯಣನಾಗಿರ್ಪಲ್ಲಿ ಸದ್ರೂಪಮಾದ ಗುರುವು ಚಿದ್ರೂಪಮಾದ ಲಿಂಗವಂ ಆನಂದರೂಪಮಾದ ಜಂಗಮಮುಖದಲ್ಲಿ ಸಾಕಾರಕ್ಕೆ ತಂದುಕೊಟ್ಟಲ್ಲಿ ಆ ಸತ್ [ಚಿತ್ ಪ್ರಾಣಮಾಗಿ] ಇಷ್ಟಮಾಗಿ, ತನ್ಮಹಿಮೆಯೇ ಆನಂದಭಾವಮಾಗಿ, ಸದ್ಭಕ್ತಿ ಕ್ರಿಯಾಮುಖದಿಂ ಶರೀರವು ಸವೆದು, ಚಿತ್ ಜ್ಞಾನೇಚ್ಛಾಮುಖದಿಂ ಮನಸ್ಸಳಿದು, ಸಚ್ಚಿತ್ಪ್ರಕಾಶಮಾದ ಇಷ್ಟ, ಪ್ರಾಣಂಗಳು ಭಕ್ತಿ ಜ್ಞಾನಂಗಳನೊಳಕೊಂಡು ಆನಂದಮಯವಾದ ಭಾವದಲ್ಲಿ ಒಂದೆಯಾಗಿ, ಆ ಮೋಕ್ಷಾನಂದದಲ್ಲಿ ಭಾವಂ ನಿರ್ಭಾವಮಾಗಿರ್ಪುದೇ ಲಿಂಗೈಕ್ಯವು. ಅಂತಪ್ಪ ಮೋಕ್ಷಾನಂದಸುಖ ವನೆನಗಿತ್ತು ಸಲಹಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೧–೧ ಬಿಂದು (ಮೂ) ೨–೨ ನಾದ ೩–೩ ಕ್ರೂರ (ಮೂ)
೪–೪ ಚಿ (ಮೂ) ೫–೫ ಕಾಮಾ (ಮೂ) ೬–೬ ಆ ಭಕ್ತಿಯಿಂದ ಕಾಮ ಮೋಹವಳಿದು, ಆಜ್ಞಾನದಿಂದ ಕ್ರೋಧ ಮದವಳಿದು, ಆ ಭಾವದಿಂದ ಲೋಭ ಮತ್ಸರಗಳಳಿದು (ಸಂ)

೭೬

(೨) ಸತ್ತೆ [೧][ನಾದ][೧]ರೂಪಮಾದ ಶರೀರವು. ಚಿತ್ತೇ [೨][ಬಿಂದು][೨] ರೂಪ ಮಾದ ಪ್ರಾಣವು. ಆನಂದವೇ ಕಳಾರೂಪಮಾದ ಮನಸ್ಸು. ನಾದರೂಪ ಮಾದ [೩][ಸತ್ತಿಗೆ][೩] [೪][ಚಿತ್ತೇ][೪] ಶಕ್ತಿಯು. ಬಿಂದುರೂಪಮಾದ [೫][ಚಿತ್ತಿಗೆ][೫] ಆನಂದವೇ ಶಕ್ತಿಯು. ಕಳಾರೂಪಮಾದ ಆನಂದಕ್ಕೆ ಜ್ಞಾನವೇ ಶಕ್ತಿಯು. ಆನಂದಮಿಲ್ಲದ ಶರೀರವು ವ್ಯರ್ಥವು. ಜ್ಞಾನಮಿಲ್ಲದ ಮನಸ್ಸು ವ್ಯರ್ಥವು. ಈ ಶರೀರಕ್ಕೆ ಬಿಂದು ಮೂಲ. ಆ ಜೀವನಿಗೆ ನಾದವೇ ಮೂಲ, ಮನಸ್ಸಿಗೆ ಕಳೆಯೇ ಮೂಲ. ಬಿಂದುರೂಪಮಾದುದೇ ಸ್ಥೂಲಶರೀರವು, ನಾದರೂಪಮಾದುದೇ ಸೂಕ್ಷ್ಮ ಶರೀರವು ಕಳಾರೂಪಮಾದುದೇ ಕಾರಣಶರೀರವು. ಆನಂದಶಕ್ತಿಸಂಗದಿಂ ಬಿಂದು ವರ್ತಿಸಿ ಕ್ರಿಯಾಶಕ್ತಿಸಂಗದಿಂ ಭಿನ್ನರೂಪಮಾದ ಸ್ವಸ್ತ್ರೀಗರ್ಭದಲ್ಲಿ ಬಿದ್ದಲ್ಲಿ ಆ ಬಿಂದುವನವಗ್ರಹಿಸಿ, ಆ ಸ್ತ್ರೀ ರೇತಸ್ಸೇ ಘನೀಭವಿಸಿ ಪಿಂಡರೂಪಮಾಗಿ, ಅನೇಕ ಯಾತನೆಬಟ್ಟು, ಪೃಥ್ವಿಯಲ್ಲಿ ಸ್ಥೂಲರೂಪಮಾಗಿ ಜನಿಸುತ್ತಿಹುದು. ಆನಂದವು ಕ್ರಿಯಾರೂಪಮಾದಂತೆ, ಸತ್ತೇ ಮಂತ್ರ ರೂಪಮಾಗಿಹುದು. ಆ ಸತ್ತೇ ತ್ವಕ್ಕಿನ [ತಾಲ, ನಾಲಿಗೆ, ತುಟಿ ಎಂಬ ತ್ವಕ್ಕಿನ] ಸಂಗದಿಂ ಚಿದ್ರೂಪಮಾದ ನಾದವನನುವರ್ತಿಸಿ ಸ್ವಶರೀರದಲ್ಲಿ ಜಿಹ್ವಾ ಮುಖದಲ್ಲಿ ಚಲಿಸಲು ಸ್ವಕೀಯ ಕರ್ಮಾನಂದವಂ ಗ್ರಹಿಸಿ ಘನೀಭವಿಸಿ ತನ್ನಲ್ಲಿಯೆ ಸೂಕ್ಷ್ಮ ಶರೀರವು ಬೆಳಗುವದು. ಸೂಕ್ಷ್ಮಶರೀರವು ಸ್ಥೂಲಶರೀರವಂ ಬಿಟ್ಟು, ವೇದನೆ ಬಟ್ಟು ಪೋಪುದು. ಇಹಲೋಕದ ಸುಖದುಃಖಂಗಳಿಗೆ ಸ್ಥೂಲಶರೀರವು ಕಾರಣ ಮಾಗಿರ್ಪಂತೆ, ಪರಲೋಕದ ಸುಖದುಃಖಗಳಿಗೆ ಸೂಕ್ಷ್ಮಶರೀರವು ಕಾರಣ ಮಾಗಿರ್ಪುದು. ಬ್ರಾಹ್ಮಣಾದಿಯಾಗಿ ಚಾಂಡಾಲ ಪರ್ಯಂತಮಾದ ಮನುಷ್ಯರು ಬಿಂದುರೂಪು, ಇಂದ್ರಾದಿಯಾಗಿ ಪಿಶಾಚ ಪರ್ಯಂತವಾದ ದೇವತೆಗಳು ನಾದರೂಪು. ಇವೆರಡಕ್ಕೂ ಜ್ಞಾನಯುಕ್ತವಾದ ಮನಸ್ಸು ಕಾರಣಮಾಗಿಹುದು. ಮನುಷ್ಯರು ನಾದ ಕರ್ಮದಿಂ ಬದ್ಧವಾಗಿಹರು. ದೇವತೆಗಳು ಬಿಂದುಕರ್ಮದಿಂ ಬದ್ಧವಾಗಿ ಹರು. ಕಾರಣ ಶರೀರದಲ್ಲಿ ನಿದ್ರೆಯೇ ಕಾರಣ ಮಾಗಿರ್ಪುದರಿಂ ಮನುಷ್ಯರಿಗೆ ಆಹಾರವೇ ಕಾರಣವೂ, ದೇವತೆಗಳಿಗೆ ಮೈಥುನವೇ ಕಾರಣವೂ ಆಗಿಹುದು. ದೇವತೆಗಳು ಮಂತ್ರಪ್ರಸನ್ನರು, ಮನುಷ್ಯರು ತಂತ್ರಪ್ರಸನ್ನರು. ದೇವತೆಗಳಿಗೆ ಶಬ್ದದಲ್ಲಿರ್ಪ ಅರ್ಥವೇ ಜೀವನವೂ ಭೂಷಣವೂ ಆಗಿಹುದು. ಮನುಷ್ಯರಿಗೆ ಬಿಂದುವಿನಲ್ಲಿರ್ಪ ಅರ್ಥವೇ ಭೂಷಣವೂ ಜೀವನವೂ ಆಗಿಹುದು. ಬಿಂದು ರೂಪಾದ ಅರ್ಥವು ಆನಂದ ಮಯಮಾಗಿರ್ಪುದು. ಶಬ್ದದಲ್ಲಿರ್ಪ ಅರ್ಥವು ಸತ್ಯರೂಪಮಾಗಿಹುದು. ಕಳೆಯಲ್ಲಿಪ್ಪ ಅರ್ಥವು ಜ್ಞಾನಸ್ವರೂಪಮಾಗಿಹುದು. ಸತ್ಯಮುಳ್ಳ ಪುರುಷನು ದೇವತಾಶ್ರೇಷ್ಠನು. ಜ್ಞಾನಮುಳ್ಳ ಪುರುಷನೇ

೧–೧ ಬಿಂದು (ಮೂ) ೨–೨ ನಾದ (ಮೂ) ೩–೩ ಚಿತ್ತಿಗೆ (ಮೂ)
೪–೪ ಸತ್ತೇ (ಮೂ) ೫–೫ ಶಕ್ತಿಗೆ (ಮೂ)

ಪ್ರಮಥಶ್ರೇಷ್ಠನು. [೧]ಜ್ಞಾನಾನಂದಸಂಗದಿಂ ಕಾರಣಕಳಾರೂಪಮಾದ ಮನಸ್ಸು ಲಯಮಾದಲ್ಲಿ, ಸ್ಥೂಲಸೂಕ್ಷ್ಮಸಂಬಂಧಗಳಳಿದು, ಸದಾ ನಂದವೇ ಸ್ಥೂಲಮಾಗಿ, ಸಚ್ಚಿತ್ಪ್ರಕಾಶವೇ ಸೂಕ್ಷ್ಮವಾಗಿ ಜ್ಞಾನಾನಂದವೇ ಕಾರಣಮಾಗಿ ಶರೀರ ಜೀವ ಮನಸ್ಸೆಂಬ ಮಿಥ್ಯಾ ಭ್ರಮೆಯು ನಷ್ಟಮಾಗಿ ಸತ್ಯಜ್ಞಾನಾನಂದರೂಪವೇ[೧] ಮಹಾಲಿಂಗವಾಗಿ ಇಂತಪ್ಪ ಮಹಾಲಿಂಗದಲ್ಲಿ ತಾನೆಂಬ ಮಿಥ್ಯಾಭ್ರಮೆಯಳಿ ದಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೭೭

(೩) ಚಿತ್ತಿಗೆ, ಸತ್ತೇ ತಮೋಗುಣವು, ಸತ್ತಿಗೆ ಚಿತ್ತೇ ಸತ್ವಗುಣವು. ಅದೆಂತೆಂದೊಡೆ : ಚಿತ್ತೆಂದರೆ ಪ್ರಕಾಶವು, ಸತ್ತೆಂದರೆ ಅಸ್ತಿತ್ವವು, ಅದರಿಂದುಂಟಾದ ವಸ್ತುವೇ ಪ್ರಕಾಶಕ್ಕೆ ಮರೆಯಾಗಿ ಛಾಯಾ ಮಾಯಾ ಹೇತುವಾಗಿರ್ಪುದರಿಂ ಆ ಚಿತ್ತಿಗೆ ಆ ಸತ್ತೇ ತಮೋಗುಣಮಾಯಿತ್ತು. ಅದರಿಂದುಂಟಾದ ವಸ್ತುವೇ ಚಿತ್ಪ್ರಭೆಯಾಗಿ ಪ್ರಕಾಶಿಸುತ್ತಿರ್ಪುದರಿಂದ ಆ ಸತ್ತಿಗೆ ಚಿತ್ತೇ ಸತ್ವಗುಣವಾಯಿತ್ತು. ಈ ಶಿವಶಕ್ತಿಗಳ ಕ್ರೀಡಾನಂದವೇ ರಜೋಗುಣಮಾಗಿ, ಅದೇ ಸೃಷ್ಟಿಕರ್ತೃವಾಗಿ, ಕರ್ಮಕಾರಣಮಾಗಿ, ಆ ಕರ್ಮಮುಖದಲ್ಲುತ್ಪನ್ನಮಾಗುವ ವಸ್ತುಗಳೂ ತಾನೆ ಯಾಗಿ, ಸಕಲ ಪ್ರಪಂಚವೂ ಆ ಶಿವಶಕ್ತಿಗಳ ನಟನೆಯಲ್ಲದೆ ಭಿನ್ನಮಿಲ್ಲಮಾಯಿತ್ತು. ವಿಚಾರಿಸಲು ವಸ್ತು ಒಂದೇ. ಆ ವಸ್ತುವಿನ ಗುಣವೇ ಶಕ್ತಿಯಾಯಿತ್ತು. ಪುರುಷನ ಗುಣಾನುವರ್ತಿಯೇ ಸ್ತ್ರೀಯಾಗಿ ತನ್ಮುಖದಲ್ಲಿ ಸಂಸಾರ ಪ್ರಪಂಚವೆಲ್ಲವೂ ಉತ್ಪನ್ನವಾಗುವಂತೆ, ಚಿತ್ತಿನ ಗುಣವಾದ ಸತ್ತಿನಿಂದ ಸಕಲ ಪ್ರಪಂಚವು ಉತ್ಪನ್ನಮಾಗುತ್ತಿರ್ಪುದು. ನಿನ್ನ ಗುಣಕ್ಕೆ ನೀನೇ ಗುಣವಾದುದರಿಂ ಸಕಲಕ್ಕೂ ಕಾರಣ ಪದಾರ್ಥವು ನೀನೆಯಾಗಿ ಮಹಾಸಂಸಾರಿಯಾಗಿ ಭವನೆನಿಸಿರ್ಪ ನೀನು– ''ಆತ್ಮಾವೈ ಪುತ್ರನಾಮಾಸಿ'' ಎಂಬ ಶ್ರುತಿಪ್ರಮಾಣದಿಂ ನೀನೇ ನೀನಾಗಿ ಜನಿಸಿರ್ಪುದನರಿತು, ವಿಚಾರಿಸಿ, ಪೊರೆಯದಿದ್ದರೆ, ಮತ್ತಾರೆನಗೆ ದಿಕ್ಕು? ಆದುದರಿಂ ನಿನಗೆ ಮೊರೆ ಇಡುತಿರ್ಪೆನು ನೀನೇ ನೋಡಿ ಕೂಡಿ ಸಲಹಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

ಸದ್ಭಾವತ್ರಯಗಳು

ಇನ್ನು ಪ್ರಕಾಶನ, ಪ್ರವರ್ತನ, ಮೋಹನ ಇಂತಿವು ಸದ್ಭಾವತ್ರಯಂಗಳು.

ಅರಿವು ಮರವೆಗಳಿಲ್ಲದೆ ಸದಾ ಬೆಳಗುವ ಸುಜ್ಞಾನಪ್ರಕಾಶವೇ ಪ್ರಕಾಶನ ವೆಂಬ ಭಾವವು. ಸತ್ಯ ಸದಾಚಾರ ಸನ್ಮಾರ್ಗ ಸದ್ವರ್ತನವಿಡಿದು ನಡೆವುದೇ ಪ್ರವರ್ತನವೆಂಬ ಭಾವವು. ನಿರಿಚ್ಛೆಯಿಂದ ಪರಮಾತ್ಮನಲ್ಲಿ ಮೋಹವಿಡಿವುದೇ ಮೋಹನವು. ಈ ಗುಣಂಗಳು ಸ್ತ್ರೀಯರುಗಳಲ್ಲಿರಲಿ, ಪುರುಷರುಗಳಲ್ಲಿರಲಿ ಒಳ್ಳಿತಾದ ಭಾವಂಗಳಾಗಿರುತಿಹವು.

೧–೧ ನೋಡಿ ಅನುಬಂಧ–೨೦, ಟಿಪ್ಪಣಿಗಳು–೪

ಮನತ್ರಯಗಳು

ಇನ್ನು ಮನ, ಮನನ, ಮನನೀಯ ಇಂತಿವು ಮನತ್ರಯಂಗಳು. ಇವಕ್ಕೆ ವಿವರ– ಮನವೆಂಬಲ್ಲಿ ತನ್ನ ಹೇಳುವುದು. ಜ್ಞಾತೃ ಸ್ವರೂಪವಾದ ಆತ್ಮ ಲಕ್ಷಣ ಒಂದನ್ನೇ ಕುರುಹಿಡುವುದು. ಮನನವೆಂಬಲ್ಲಿ ಆತ್ಮನಿಂದ ಅರಿವ ಜ್ಞಾನವನ್ನು ಹೇಳುವುದು. ಅರಿವು ಲಕ್ಷಣ ಒಂದನ್ನೇ ಕುರುಹಿಡುವುದು. ಮನನೀಯವೆಂಬಲ್ಲಿ ಅರಿವಿನಿಂದ ತಿಳಿಸಿಕೊಳ್ಳುವ ವಸ್ತು ಒಂದನ್ನೇ ಹೇಳುವುದು. ಘಟಪಟಾದಿ ಪದಾರ್ಥಗಳನ್ನೇ ಕುರುಹಿಡಿವುದು.*

ಮನ, ಮನನ, ಮನನೀಯವೆಂದರೂ, ತತ್‌ಪದ, ತ್ವಂಪದ, ಅಸಿಪದ ವೆಂದರೂ ತಾನು, ತನ್ನರಿವು, ಶಿವತತ್ವವೆಂದರೂ ಆತ್ಮತತ್ವ, ವಿದ್ಯಾತತ್ವ, ಶಿವತತ್ವವೆಂದರೂ ಜ್ಞಾತೃ, ಜ್ಞಾನ, ಜ್ಞೇಯವೆಂದರೂ ಒಂದೇ ನಾಮ ಪರ್ಯಾಯ ವಾಗಿಪ್ಪವು.+

ತ್ರಿಕರಣಗಳು

ಇನ್ನು ಮಾನಸ, ವಾಚಕ, ಕಾಯಿಕ ಇಂತಿವು ತ್ರಿಕರಣಂಗಳು.ಇವಕ್ಕೆ ವಿವರ-

ಮಾನಸವೆಂದಡೆ ಮನದಲ್ಲಿ ನೆನೆವುದು. ವಾಚಕವೆಂದಡೆ ನುಡಿವುದು, ಕಾಯಿಕವೆಂದಡೆ ಕೈಮುಟ್ಟಿ ಮಾಡುವುದು. ಇಂತಿವು ತ್ರಿಕರಣಂಗಳ ಭೇದ.

ಮಾನಸವೆಂದಡೆ ಮನದಲ್ಲಿ ನೆನಹುದು. ಆವುದಾನೊಂದು ಕಾರ್ಯವನ್ನು ತನ್ನಂತರಂಗದೊಳಗೆ ಯೋಚಿಸುವುದು. ವಾಚಕವೆಂದಡೆ ತನ್ನಂತರಂಗದೊಳಗೆ ಯೋಚಿಸುವಂಥ ಕಾರ್ಯವನ್ನು ಪರರ ಕೂಡ ಹೇಳುವುದು. ಕಾಯಿಕವೆಂದಡೆ ತನುಮುಟ್ಟಿಮಾಡುವುದು. ಅವರವರ ಕೂಡ ಹೇಳಿದಂತಹ ಕಾರ್ಯವನ್ನು ತನ್ನಂಗವ ಬಳಲಿಸಿ ಆಯಾಸಂಬಟ್ಟು ಅನುಗೆಯ್ವುದು.

ಈ ತ್ರಿಕರಣಂಗಳು ಪರಶಿವನಿಂದುಂಟಾದ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳೇ ಲೋಕದ ಸಕಲಾತ್ಮರುಗಳಲ್ಲಿ ಮಾನಸ,ವಾಚಕ,ಕಾಯಿಕವೆಂಬ ತ್ರಿಕರಣ ಗಳಾಗಿರುತಿಹವು.

ಷಟ್‌ಚಕ್ರಗಳು

೭೮

ಆಧಾರಾದಿ ಷಟ್‌ಚಕ್ರಂಗಳ ವಿವರಮೆಂತೆಂದೊಡೆ : ಆಚಾರಕ್ಕಾಶ್ರಮಂ ಗಳೇ ಆಧಾರವು. ಅದು ಬ್ರಹ್ಮಚರ್ಯಾದಿ ಚತುರ್ದಳಂಗಳಿಂದೊಪ್ಪುತ್ತಿಹುದು.

* ಮನ, ಮನನ, ಮನನೀಯ ಇವುಗಳನ್ನು ದಕ್ಷಿಣಮುಖದಲ್ಲಿ ಅಂದರೆ ಪ್ರವೃತ್ತಿಮುಖದಲ್ಲಿ ಹೇಳುತ್ತ ಮನವನ್ನು ಜೀವಾತ್ಮನಿಗೂ, ಮನನವನ್ನು ಲೌಕಿಕ ಜ್ಞಾನಕ್ಕೂ, ಮನನೀಯವನ್ನು ಲೌಕಿಕ ಪ್ರಪಂಚಕ್ಕೂ ಅನ್ವಯಿಸಿದ್ದಾನೆ (ಸಂ)

\+ ಮನವನ್ನು ಶುದ್ಧಾತ್ಮನಿಗೂ ಮನನವನ್ನು ಆತ್ಮಜ್ಞಾನಕ್ಕೂ ಮನನೀಯವನ್ನು ಶಿವತತ್ವ (ಪರತತ್ವ)ಕ್ಕೂ ಅನ್ವಯಿಸಿದ್ದಾನೆ (ಸಂ)

ತದಾಚಾರ ಸೇವಕನೇ ಭಕ್ತನು, ಶ್ರದ್ಧೆಯೇ ಚೈತನ್ಯವು, ಚಿತ್ತವೇ ಹಸ್ತ; ಚಿತ್ತವೆಂದರೆ ನಿಯಮ ಜ್ಞಪ್ತಿಜ್ಞಾನ. ಆಶ್ರಮಂಗಳಿಗೆ ಪೃಥ್ವಿಯೇ ಮೂಲ, ಇವಕ್ಕೆ ಪ್ರಾಣವೇ ಆಧಾರಮಾಗಿ ನಾಸಿಕವನನುಸರಿಸಿರ್ಪುದು. ಗುದವೇ ಸ್ಥಾನ, ಇದಕ್ಕೆ ವಾದಿ ಸಾಂತವೇ ಬೀಜವು. ಗುರುವಿಗೆ ಷಟ್ಕರ್ಮಂಗಳೇ ಸ್ವಾಧಿಷ್ಠಾನವು. ಯಜನಾದಿ ಷಡ್ದಳಂಗಳಿಂದೊಪ್ಪುತ್ತಿಹುದು. ಬಾದಿಲಾಂತವೇ ಬೀಜ, ತದ್ಗುರು ಸೇವಕನೇ ಮಾಹೇಶ್ವರನು, ನಿಷ್ಠೆಯೇ ಚೈತನ್ಯವು. ಬುದ್ಧಿಯೇ ಹಸ್ತವು. ಕರ್ಮಕ್ಕೆ ಜಲವೇ ಮೂಲವಾದುದರಿಂದ ಉಪದೇಶ ಕರ್ತೃವಾದುದರಿಂ ಜಿಹ್ವೆಯನನುಭವಿಸು ತಿರ್ಪುದು. ಪಾತ್ರಾಪಾತ್ರ ವಿವೇಕ ಪರಿಶುದ್ಧಿಯಿಂ ಗುಹ್ಯವೇ ಸ್ಥಾನವಾಯಿತ್ತು ಶಿವನಿಗೆ ದಶೇಂದ್ರಿಯಂಗಳೇ ಮಣಿಪೂರಕ. ಡಾದಿ ಫಾಂತವಾದ ಬೀಜದಿಂ ಶ್ರೋತ್ರಾದಿ ದಶದಳಂಗಳಿಂದೊಪ್ಪತ್ತಿರ್ದುದು. ತಚ್ಛಿವಪೂಜಕನೇ ಪ್ರಸಾದಿಯು. ವಿದ್ಯೆಯೇ ಚೈತನ್ಯವು, ಅಹಂಕಾರವೇ ಹಸ್ತವು, ಇಂದ್ರಿಯಂಗಳಿಗಗ್ನಿಯೇ ಮೂಲ, ದಿಙ್ಮುಖದಿಂ ಬಂದ ಸಕಲ ಪದಾರ್ಥಗಳನ್ನು ಇಂದ್ರಿಯಮುಖಂಗಳಲ್ಲಿ ಪೂಜಿಸು ತಿರ್ಪುದರಿಂ ನೇತ್ರವನನುಸರಿಸುತ್ತಿರ್ಪುದು. ಇದಕ್ಕೆ ಉದರವೇ ಸ್ಥಾನ. ತತ್ಪೂ ರಣವೇ ಮಣಿಪೂರಕ. ಮಣಿಪೂರಕವೆಂದರೆ ತೇಜೋಭರಿತ. ತೇಜಸ್ಸೆಂದರೆ ಕಳಾಪದಾರ್ಥ, ಕಳೆ ಎಂದರೆ ರುಚಿ, ಭರಿತವೆಂದರೆ ಅನುಭವ, ರುಚ್ಯನುಭವವೇ ಮಣಿಪೂರಕವು. ಜಂಗಮಕ್ಕೆ ದ್ವಾದಶ ಭಾವಂಗಳೇ ಅನಾಹತವು. ತನ್ಪಾದಿ ದ್ವಾದಶ ಭಾವಂಗಳೇ ದಳಂಗಳು. ಕಾದಿ ಠಾಂತವೇ ಬೀಜ. ತಜ್ಜಂಗಮ ಪೂಜಕನೇ ಪ್ರಾಣಲಿಂಗಿಯು, ಅನುಭಾವವೇ ಚೈತನ್ಯವು, ಮನವೇ ಹಸ್ತ, ಪ್ರಾಣವಾಯುವೇ ಮೂಲ, ದ್ವಾದಶ ಭಾವಂಗಳು ಅನುಭವಮಾದುದರಿಂದ ತ್ವಕ್ಕನ್ನನುಸರಿಸಿರ್ಪುದು. ಇದಕ್ಕೆ ಮನೋನಿಗ್ರಹದಿಂ ಹೃದಯವೇ ಸ್ಥಾನವು. ಉಪದೇಶತತ್ವವೇ ಪ್ರಸಾದವು. ಆ ಪ್ರಸಾದಕ್ಕೆ ಷೋಡಶಪದಾರ್ಥವೇ ವಿಶುದ್ಧಿ. ಪ್ರಮಾಣ ಪ್ರಮೇಯಾದಿ ಷೋಡಶ ಭೇದಂಗಳೇ ದಳಂಗಳು, ಅಕಾರಾದಿ ಷೋಡಶ ಸ್ವರಂಗಳೇ ಬೀಜ, ತತ್ಪ್ರಸಾದ ಸೇವಕನೇ ಶರಣನು, ಆನಂದವೇ ಚೈತನ್ಯವು, ಜ್ಞಾನವೆ ಹಸ್ತವು, ಆಕಾರವೇ ಮೂಲ ಶಬ್ದಮುಖದಿಂ ತತ್ವವಂ ಗ್ರಹಿಸುತ್ತಿರ್ಪುದರಿಂ ಶ್ರೋತ್ರವನನುಸರಿಸಿರ್ಪುದು. ತಚ್ಛಬ್ದಂಗಳಿಗೆ ಕಂಠವೇ ಸ್ಥಾನವು. ಆ ಪರತತ್ವದಿಂ ಪರಿಶುದ್ಧಮಾಗಿರ್ಪುದೇ ವಿಶುದ್ಧಿಯು. ಮಹಾ ಪ್ರಕಾಶಕ್ಕೆ ಇಷ್ಟ ಪ್ರಾಣಂಗಳೇ ಆಜ್ಞೇಯವು. ಬಹಿರಂತರ್ವ್ಯಾಪಕಂಗಳೇ ದಳಂಗಳು, ಅದಕ್ಕೆ ಹಂ ಕ್ಷಂ ವೇ ಬೀಜ, ತದನುಸಂಧಾನಿಯೇ ಐಕ್ಯನು, ಸಮರಸವೇ ಚೈತನ್ಯವು, ಭಾವವೇ ಹಸ್ತವು, ಆತ್ಮವೇ ಮೂಲ. ವಿವೇಕ ಮುಖದಿಂದಾಚರಿಸುತ್ತಿರ್ಪುದರಿಂ ಮನವನನುಸರಿಸಿರ್ಪುದು. ಇದಕ್ಕೆ ಲಲಾಟವೇ ಸ್ಥಾನ, ನಮಸ್ಕಾರ ಭಸ್ಮಧಾರಣ ಕ್ರಿಯೆಗಳಿಗೆ ಕಾರಣಮಾಗಿರ್ಪುದರಿಂದಲೂ, ಬೀಜಾಕ್ಷರಂಗಳಿಗೆ ಸ್ಥಾನಮಾಗಿರ್ಪುದರಿಂದಲೂ ಲಲಾಟವೇ ಕಾರಣವು. ಅಲ್ಲಿ ಮಹಾ ಪ್ರಕಾಶವಾಗಿರ್ಪ ಆತ್ಮನನ್ನು ಚನ್ನಾಗಿ ತಿಳಿಯತಕ್ಕದ್ದೇ ಆಜ್ಞೇಯವು. ಆ

ಮಹದಲ್ಲಿ ಚಿಚ್ಛಕ್ತಿ ಬೆರೆಯಲು ಆಜ್ಞೇಯದಲ್ಲಿ ಇಷ್ಟ ಪ್ರಾಣಂಗಳೆಂಬ ದ್ವಿದಳಂಗಳು ಪ್ರಕಾಶಮಾದವು. ಪ್ರಸಾದದೊಳ್ಪರಾಶಕ್ತಿ ಬೆರೆಯಲು ಷೋಡಶ ಪದಾರ್ಥಂಗಳೆಂಬ ಷೋಡಶ ದಳಂಗಳು ವಿಕಸನಮಾದವು. ಸ್ಥಾಣುವಾಗಿರ್ಪ ಶಿವನು ಆದಿಶಕ್ತಿಯೊಳಗೆ ಕೂಡಿ ಜಂಗಮರೂಪಾದಲ್ಲಿ ದ್ವಾದಶ ಭಾವಂಗಳೆಂಬ ದ್ವಾದಶ ದಳಂಗಳು ಪರಿಶುದ್ಧಮಾದವು, ಇಚ್ಛಾಶಕ್ತಿ ಶಿವನೊಳಗೆ ನೆರೆಯಲು, ದಶೇಂದ್ರಿಯಂಗಳೆಂಬ ದಶದಳಂಗಳು ಪೂರ್ಣಮಾದವು. ಮಂತ್ರಶಕ್ತಿ ಗುರುವಿನಲ್ಲಿ ನೆರೆಯಲು, ಷಟ್ಕರ್ಮಂಗಳು ಚೇತನಮಾದವು. ಕ್ರಿಯಾಶಕ್ತಿ ಆಚಾರದೊಳಗೆ ಬೆರೆಯಲು. ಆಶ್ರಮಧರ್ಮಂಗಳು ಸಾಂಗಮಾಯಿತ್ತು ಇಂತಪ್ಪ ಆಶ್ರಮ ಧರ್ಮಕ್ಕೆ ಕರ್ಮವೇ ಕಾರಣವು. ಆ ಕರ್ಮಕ್ಕೆ ಇಂದ್ರಿಯಂಗಳೇ ಕಾರಣವು.ಆ ಇಂದ್ರಿಯಂಗಳಿಗೆ ಭಾವವೇ ಕಾರಣವು. ಆ ಭಾವಕ್ಕೆ ತತ್ವವೇ ಕಾರಣವು. ಆ ತತ್ವಕ್ಕೆ ಮಹಾಪ್ರಕಾಶವೇ ಕಾರಣವು. ಆ ಮಹಾಪ್ರಕಾಶಕ್ಕೆ ತತ್ವವೇ ಮೂಲವು. ಆ ತತ್ವಕ್ಕೆ ಜಂಗಮವೇ ಮೂಲವು. ಆ ಜಂಗಮಕ್ಕೆ ಲಿಂಗವೇ ಮೂಲವು. ಲಿಂಗಕ್ಕೆ ಗುರುವೇ ಮೂಲವು, ಅಂತಪ್ಪ ಗುರುವಿಗೆ ಆಚಾರವೇ ಮೂಲವು, ಆಚಾರಕ್ಕೆ ನಿವೃತ್ತಿಯೇ ಕಳೆ, ಗುರುವಿಗೆ ಪ್ರತಿಷ್ಠೆಯೇ ಕಳೆ, ಲಿಂಗಕ್ಕೆ ವಿದ್ಯೆಯೇ ಕಳೆ, ಜಂಗಮಕ್ಕೆ ಶಾಂತಿಯೇ ಕಳೆ, ಪ್ರಸಾದಕ್ಕೆ ಶಾಂತ್ಯಾತೀತವೇ ಕಳೆ, ಮಹಕ್ಕೆ ಉತ್ತರವೇ ಕಳೆ. ಪೃಥ್ವಿ ಮೂಲವಾದ ಆಧಾರವೇ ಪಶ್ಚಿಮ, ಜಲ ಮೂಲವಾದ ಸ್ವಾಧಿಷ್ಠಾನವೇ ಉತ್ತರ, ತೇಜೋಮೂಲವಾದ ಮಣಿಪೂರಕವೇ ದಕ್ಷಿಣ, ವಾಯುಮೂಲವಾದ ಅನಾಹತವೇ ಪೂರ್ವ, ಸಕಲ ದಿಕ್ಕುಗಳಲ್ಲಿರ್ಪ ಸಕಲ ಚಕ್ರಂಗಳಂ ವ್ಯಾಪಿಸಿ, ಆಕಾಶ ಮೂಲವಾಗಿ ಆಕಾಶದಂತೆ ವಿಶುದ್ಧಮಾಗಿರ್ಪುದೇ ವಿಶುದ್ಧಿಚಕ್ರವು. ಪೃಥ್ವಿಜಲಗಳೆರಡು ಸೃಷ್ಟಿ, ಅಗ್ನಿ ವಾಯುಗಳೆರಡು ಸ್ಥಿತಿ, ಆಕಾಶವೇ ಸಂಹಾರ, ಇಂತಪ್ಪ ಸೃಷ್ಟಿ ಸ್ಥಿತಿ ಸಂಹಾರಂಗಳಂ ಮೀರಿರ್ಪ ಆತ್ಮನೇ ಹೃದಯಮಧ್ಯದೊಳಾಜ್ಞೇಯದಲ್ಲಿ ಮಹವಾಗಿ ಪ್ರಕಾಶಿಸುತ್ತಿರ್ಪನು. ಅದೇ ತೂರ್ಯ. ಮಿಕ್ಕವೆಲ್ಲ ಅವಸ್ಥಾತ್ರಯಂಗಳಾಗಿರ್ಪವು. ಪೂರ್ವ ಪಶ್ಚಿಮ ಚಕ್ರಂಗಳಲ್ಲಿ ಪೂರ್ವ ಪಶ್ಚಿಮ ರೂಪಮಾಗಿ ಆದ್ಯಂತಗಳನನುಸರಿಸಿರ್ಪ ಕಾದಿ ಠಾಂತ ವಶಾಂತಗಳೇ ಬೀಜಗಳಾದವು. ಮೊದಲನನುಸರಿಸಿರ್ಪುದೇ ದಕ್ಷಿಣವೂ, ಕಡೆಯನನುಸರಿಸಿರ್ಪುದೇ ಉತ್ತರವೂ ಆದುದರಿಂ ದಕ್ಷಿಣೋತ್ತರಂಗಳಲ್ಲಿರ್ಪ ಮಣಿಪೂರಕ, ಸ್ವಾಧಿಷ್ಠಾನಂಗಳಿಗೆ ಡಾದಿ ಫಾಂತ ಬಾದಿಲಾಂತವೇ ಬೀಜಂಗಳಾಗಿರ್ಪವು. ದಿಕ್ಕುಗಳಲ್ಲಿ ಕೋಣಗಳು ವ್ಯಾಪ್ತಮಾಗಿರ್ಪಂತೆ ವ್ಯಂಜನಗಳಲ್ಲಿ ಸ್ವರಂಗಳು ವ್ಯಾಪ್ತಮಾಗಿರ್ಪುದರಿಂ ವಿಶುದ್ಧಿಗೆ ಷೋಡಶ ಸ್ವರಂಗಳೇ ಬೀಜಂಗಳಾಗಿರ್ಪವು. ಅಂತ್ಯಕ್ಕೂ ಅಂತ್ಯಮಾಗಿ ಅಮೃತಾರ್ಥವಂ ಕೊಡುತ್ತ ಪ್ರಪಂಚಾಕ್ಷರ ಪ್ರವಾಹಂಗಳಲ್ಲಿ ತಾನಿದಿರೇರಿ ಅಂತರ್ಮುಖವಾಗಿ ಪವಿತ್ರಮಯವಾಗಿ ಸಕಲ ಮಂತ್ರ ಬೀಜಮಯವಾಗಿರ್ಪ ಹಂ ಕ್ಷಂ ಕಾರವೇ ಆಜ್ಞೇಯ ಬೀಜಮಾಯಿತ್ತು ಅಕ್ಷರಂಗಳು ಹೃದಯ ಮಧ್ಯದಲ್ಲಿ ಚಕ್ರಂಗಳನನುಸರಿಸಿ ಜಿಹ್ವಾಮುಖದಲ್ಲಿ

ಸೃಷ್ಟಿಗೆ ಬರುವ ಹಾಗೆ ಪಂಚಭೂತಂಗಳನನುಸರಿಸಿ ಪಂಚವರ್ಗಗಳಾಗಿ, ಸಪ್ತ ವರ್ಣಂಗಳು ಸಪ್ತಧಾತುಗಳಾಗಿ, ಷೋಡಶ ಸ್ವರಂಗಳು ಅವಯವಂಗಳಾಗಿ, ಆ ಹಂ ಕ್ಷಂ ವೇ ಜೀವ ಪರಮರಾಗಿ, ಸಕಾರವು ಚೈತನ್ಯರೂಪಮಾಗಿರ್ಪುದು. ಹೃದಯವೇ ಪಿಂಡಾಂಡ, ಜಿಹ್ವೆಯೇ ಬ್ರಹ್ಮಾಂಡ. ಪಿಂಡಾಂಡದೊಳ್ಪಂಚ ಭೂತಂಗಳು ಸಮಾನವಾಗಿರ್ಪಂತೆ, ಜಿಹ್ವೆಯಲ್ಲಿ ಪಂಚವರ್ಣಗಳು ಸಮಾನವಾಗಿರ್ಪವು. ಇಂತಪ್ಪ ಮೂರ್ತಿಯೇ ನಾದಪುರುಷನು. ಇವಂಗೆ ಪ್ರಣವವೇ ಶಿಖೆಯೂ ಶಿವಾಯಾಕ್ಷರತ್ರಯಂಗಳೇ ಉಪವೀತವೂ ನಮವೇ ದಂಡ ಕಮಂಡಲುಗಳೂ ಆಗಿರ್ಪವು. ಇಂತು ಪ್ರಣವ ಪಂಚಾಕ್ಷರಿಯುಕ್ತಮಾದ ನಾದ ಪುರುಷನೇ ಪರಿಶುದ್ಧಮಾಗಿ, ಬ್ರಹ್ಮಸ್ವರೂಪಮಾದ ವೇದಪುರುಷನಾಗಿ ತನು ಮನೋಭಾವಗಳಲ್ಲಿ ಸಂಚರಿಸುತ್ತಿಹನು. ಆಧಾರದಲ್ಲಾಚಾರರೂಪಮಾಗಿರ್ಪ ಆಶ್ರಮವೇ ಅನಾಹತದಲ್ಲಿ ಜಂಗಮಪ್ರಕಾಶವಂ ಮಾಡಿತ್ತು. ಸ್ವಾಧಿಷ್ಠಾನದಲ್ಲಿ ಗುರುರೂಪಮಾದ ಕರ್ಮವೇ ಮಣಿಪೂರಕದಲ್ಲಿ ಲಿಂಗಪ್ರಕಾಶವಂ ಮಾಡಿತ್ತು ವಿಶುದ್ಧಿಯಲ್ಲಿ ಪ್ರಸಾದರೂಪಮಾದ ತತ್ವವೇ ಆಜ್ಞೇಯದಲ್ಲಿ ಮಹಪ್ರಕಾಶವಂ ಮಾಡಿತ್ತು ಇಷ್ಟ ಪ್ರಾಣ ಮಧ್ಯದಲ್ಲಿರ್ಪ ಮಹವೇ ಸಹಸ್ರಮುಖವಾಗಿ ತೋರುತ್ತಿರ್ಪ ಭಾವಮಧ್ಯದಲ್ಲಿ ಪೂರ್ವಪ್ರಕಾಶಮಾಗಿ, ಎಲ್ಲವೂ ಒಂದೆಯಾಗಿ, ತಾನೂ ಹೊಂದಿರ್ಪುದರಿಂ ಸಹಸ್ರದಳಕಮಲಮಧ್ಯದಲ್ಲಿರ್ಪ ಭಾವಲಿಂಗಮಾಯಿತ್ತು ಉನ್ಮೀಲನಾಕ್ಷಿಗಳಿಂ ನಾಸಿಕಾಗ್ರವನೀಕ್ಷಿಸಿದಲ್ಲಿ ಬ್ರಹ್ಮಸ್ಥಾನ ಗೋಚರಮಾಗಿ, ಅಲ್ಲಿ ಭಾವ ಸಹಸ್ರಭೇದಮಾಗಿ ಬ್ರಹ್ಮವಂ ವಿಚಾರಿಸುವುದರಿಂ ಸಹಸ್ರದಳ ಕಮಲಕ್ಕೆ ಶಿರಸ್ಸೇ ಸ್ಥಾನಮಾಯಿತ್ತು ಹೃದಯ ಮಧ್ಯಕ್ಕೂ ಬ್ರಹ್ಮಸ್ಥಾನಕ್ಕೂ ಏಕಮಾಗಿ ಜ್ಯೋತಿರ್ಮಯವಾಗಿ ಪ್ರಕಾಶಿಸುತ್ತ ತತ್ವದಿಂ ತೋರುವ ಮಹಪ್ರಕಾಶವನ್ನು ಭಾವಹಸ್ತದಲ್ಲಿ ಗ್ರಹಿಸಿ ಭಾವಪೂಜೆಯಂ ಮಾಡುತ್ತಿರ್ಪುದೇ ಭಾವಲಿಂಗವು. ಶಿವನನ್ನು ಜ್ಞಾನಹಸ್ತದಲ್ಲಿ ಗ್ರಹಿಸಿ ಹೃತ್ಕಮಲ ಮಧ್ಯದಲ್ಲಿ ಜಂಗಮರೂಪದಲ್ಲಿ ಧ್ಯಾನ ಪೂಜೆಯಂ ಮಾಡುತ್ತಿರ್ಪುದೇ ಪ್ರಾಣಲಿಂಗವು. ಆಚಾರವಿಡಿದು ಗುರು ಮುಖದಲ್ಲಿ ಗ್ರಹಿಸಿ ಕರ್ಮಪೂಜೆಯಂ ಮಾಡುತ್ತಿರ್ಪುದೇ ಇಷ್ಟಲಿಂಗವು. ಇಂತಪ್ಪ ಇಷ್ಟಲಿಂಗವಂ ಪೂಜಿಸುವ ಸ್ಥೂಲವೇ ವಿಶ್ವ, ಪ್ರಾಣಲಿಂಗವಂ ಪೂಜಿಸುವ ಸೂಕ್ಷ್ಮಶರೀರವೇ ತೈಜಸ, ಭಾವಲಿಂಗವಂ ಪೂಜಿಸುವ ಕಾರಣಶರೀರವೇ ಪ್ರಾಜ್ಞ. ಪ್ರಾಜ್ಞಕ್ಕೆ ಯೋಗವೇ ಮುಖ, ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವದು. ತೈಜಸಕ್ಕೆ ಭೋಗವೇ ಮುಖ, ಈ ಮುಖದಲ್ಲಾ ಲಿಂಗಕ್ಕರ್ಪಣವಾಗುತ್ತಿಹುದು. ವಿಶ್ವಕ್ಕೆ ತ್ಯಾಗವೇ ಮುಖ, ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವದು. ಆಚಾರ ಗುರು ಶಿವ ಚರ ಶೇಷ ಮಹಸ್ವರೂಪಮಾದ ಇಷ್ಟಲಿಂಗವೇ ಪ್ರಾಣಲಿಂಗವಾಗಿ ಒಳಗೂ ಹೊರಗೂ ತಾನೇ ಪ್ರಕಾಶಿಸಿ ಭಾವದಲ್ಲೆಲ್ಲವೂ ಒಂದೆಯಾಗಿ ತೋರುತ್ತಿರ್ಪ ಪರಿಪೂರ್ಣಾನಂದ ಮಯನಿರ್ವಾಣ ಸುಖವನೆನಗಿತ್ತು ಸಲಹಾ ಮಹಾಘನದೊಡ್ಡ ದೇಶಿಕಾರ್ಯ ಗುರುಪ್ರಭುವೆ.

ಮನುಷ್ಯನ ದುರ್ವ್ಯಾಪಾರಗಳ ವಿವರಣೆ

ಅಷ್ಟಮೂರ್ತಿಮದಂಗಳು

ಇನ್ನು ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮರೆಂಬವು ಅಷ್ಟಮೂರ್ತಿಯ ಮದಂಗಳು. ಇದಕ್ಕೆ ವಿವರ–

ಪೃಥ್ವಿಮದವೆತ್ತಿದಲ್ಲಿ ತನುಗುಣಭರಿತನಾಗಿ, ವಸ್ತ್ರಾಭರಣ ಅನುಲೇಪನ ತಾಂಬೂಲಮಂ ಬಯಸುತ್ತಿಹನು.

ಸಲಿಲಮದವೆತ್ತಿದಲಿ, ಸಂಸಾರಭರಿತನಾಗಿ, ಎನಗೆಬೇಕು, ಮನೆಗೆಬೇಕು, ಮಕ್ಕಳಿಗೆಬೇಕೆನ್ನುತಿಹನು.

ಪಾವಕಮದವೆತ್ತಿದಲ್ಲಿ ಕಾಮ್ಯರಸಭರಿತನಾಗಿ ಕರೆಸಬೇಕು, ನೋಡಬೇಕು, ನುಡಿಸಬೇಕು, ಆಲಂಗಿಸಬೇಕು ಎನ್ನುತಿಹನು.

ಪವನಮದವೆತ್ತಿದಲ್ಲಿ ಪಯಣಭರಿತನಾಗಿ, ಹೋಹೆ, ಬಂದಿಹೆ, ಕೊಂಡಿಹೆ, ಕೊಟ್ಪಿಹೆನೆನುತ್ತಿಹನು.

ಅಂಬರಮದವೆತ್ತಿದಲ್ಲಿ ವಾಹನಭರಿತನಾಗಿ, ಆನೆಬೇಕು, ಕುದುರೆಬೇಕು, ಅಂದಣಬೇಕು, ಸೇನೆ–ದಳ–ತಂತ್ರ–ಛತ್ರ–ಚಾಮರಂಗಳಂ ಬಯಸುತ್ತಿಹನು.

ರವಿಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿ ಸಾಧಿಸಿಹೆ, ಭೇದಿಸಿಹೆ, ಕೊಂದಿಹೆ, ತಿಂದಿಹೆನೆನುತ್ತಿಹನು.

ಶಶಿಮದವೆತ್ತಿದಲ್ಲಿ ಚಿಂತಾಭರಿತನಾಗಿ, ಆದೀತೋ, ಆಗದೋ, ಇದ್ದೀತೋ, ಇಲ್ಲವೋ, ಏನೋ–ಎಂತೋ ಎಂದು ಚಿಂತಿಸುತ್ತಿಹನು.

ಆತ್ಮಮದವೆತ್ತಿದಲ್ಲಿ ಅಹಂಕಾರಭರಿತನಾಗಿ, ಎನ್ನಿಂದ ಬಲ್ಲಿದರಿಲ್ಲ ಎನಗಿನ್ನಾರು ಇದಿರಿಲ್ಲವೆಂದು ಅಹಂಭಾವದಿಂದ ಅಹಂಕರಿಸುತ್ತಿಹನು.

ಈ ಪ್ರಕಾರದಿಂದ ಹೇಳಲ್ಪಟ್ಟಂಥ ಭೂತಂಗಳನೇ ಆದಿಯಮಾಡಿಕೊಂಡು ತೋರುವೆಂಟುಪ್ರಕಾರಮಾದ ಮದಗುಣಂಗಳ ಹಸಿಗೆಯ ವಿಚಾರವನ್ನು ತಿಳಿದು ಕೊಂಬುವುದು ತತ್ವಜ್ಞಾನಿಗಳು.

ಅಂತರಂಗದಷ್ಟಮದಂಗಳು

ಇನ್ನು ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಎಂಬಿವು ಅಂತರಂಗದಷ್ಟಮದಂಗಳು.

ಅಂತರಂಗದಷ್ಟಮದಂಗಳು ಆತ್ಮರುಗಳ ಮಧ್ಯದಲ್ಲಿ ಮನದೊಳಗೆ ನೆನಹು ರೂಪಿನಿಂದಿರುವೆಂಟು ಪ್ರಕಾರವಾದ ಮದಗುಣಂಗಳು. ಶಿವಾಂಶಿಕನಾದಾತ್ಮನು ಶರೀರಸಂಬಂಧಿಯಾಗಿ ತನ್ನ ನಿಜವನ್ನು ಮರೆದು ಅನೇಕ ಜನ್ಮಾಂತರ ಗತಿಗಳಲ್ಲಿ

ಬರುತಿಹನು. ಆ ಆತ್ಮನಂತರಂಗದಲ್ಲಿ ದೇಹೋಹಮೆಂಬ ಮೂಲಾಹಂಕಾರವು ಲೇಸಾಗಿ ಇರುವಂತಹದ್ದೇ ಸಂಸ್ಥಿತವೆಂಬ ಮದವು.

ಅಂತಪ್ಪ ಮೂಲಾಹಂಕಾರದಿಂದ ಎಂತಪ್ಪರನ್ನಾದರೂ ಹುಲ್ಲುಕಡ್ಡಿಗೆ ಸಮಾನಮಾಡಿ ತಿರಸ್ಕರಿಸಿ ನುಡಿವಂತಹದ್ದೇ ತೃಣೀಕೃತವೆಂಬ ಮದವು.

ಪರಧನ ಪರಸತಿ ಪರದೈವ ಪರನಿಂದೆ ಪರಹಿಂಸೆ ಎಂಬ ಪಂಚ ಮಹಾಪಾತಕಂಗಳೊಡನೆ ಚರಿಸುವಂತಹದ್ದೇ ವರ್ತಿನಿ ಎಂಬ ಮದವು.

ಆರಾದರೂ ಸತ್ಪುರಷರು ನಡವಳಿಯ ಹೇಳಿದರೆ ನೀನು ಮೇಲುಬುದ್ಧಿಯ ಹೇಳುವಾತನೇ ಎಂದು ಅವರ ಮೇಲೆ ಕಟ್ಟುಗ್ರ ಕೋಪವ ಮುಂದುಗೊಂಡಿರುವಂತಹದ್ದೇ ಕ್ರೋಧಿನಿ ಎಂಬ ಮದವು.

ಸದಾ ಸತಿಸುತಾದಿಗಳ ಮೇಲಣ ಮಮಕಾರವೇ ಮುಂದುಗೊಂಡಿರುವಂತಹದ್ದೇ ಮೋಹಿನಿ ಎಂಬ ಮದವು

ಆತ್ಮನಂತರಂಗದಲ್ಲಿ ವಿಷಯೋದ್ರೇಕ ವೆಗ್ಗಳಿಸಿ ಸರ್ವದರಲ್ಲಿಯೂ ಮುಖದಪ್ಪಿ ವರ್ತಿಸುವಂತಹ ವರ್ತನಹೇಯತ್ವವೇ ಅತಿಚಾರಿಣಿ ಎಂಬ ಮದವು.

ಸದಾ ಆಣವಾದಿ ಮಲತ್ರಯಂಗಳ ದುರ್ವಾಸನೆಯ ಸ್ವೀಕಾರದೊಡನೆ ಕೂಡಿ ಚರಿಸುವಂತಹದ್ದೇ ಗಂಧಚಾರಿಣಿ ಎಂಬ ಮದವು.

ಆತ್ಮನಿದೊಂದು ವೇಳೆ ಸತ್ಪುರುಷರ ಸಂಗದಿಂದಲಾದರೂ ಶಿವಾನುಭವದ ಕೇಳಿಕೆಯಿಂದಲಾದರೂ ಮಲತ್ರಯಂಗಳ ಸುಖವನನುಭವಿಸಬೇಕೆಂಬ ನೆನಹು ಹೆರೆಹಿಂಗದಿರುವಂತಹದ್ದೇ ವಾಸಿನಿ ಎಂಬ ಮದವು.

ಇವು ತಾವೆಂಟುಪ್ರಕಾರಮಾದ ಮದಗುಣಂಗಳ ಹಸಿಗೆಯ ವಿಚಾರವನು ತಿಳಿದುಕೊಂಬುವುದು ತತ್ವಜ್ಞಾನಿಗಳು.

ಬಹಿರಂಗದಷ್ಟಮದಂಗಳು

ಗ್ರಂಥ : ''ಕುಲಂ ಛಲಂ ಧನಂ ಚೈವ ರೂಪು ಯೌವ್ವನಮೇವ ಚ । ವಿದ್ಯಾರಾಜ್ಯಂ ತಪಶ್ಚೈವ ಏತೇಚಾಷ್ಟಮದಾಃ ಸ್ಮೃತಾಃ''ಎಂದು ಕುಲ ಛಲ ಧನ ರೂಪು ಯೌವ್ವನ ವಿದ್ಯಾ ರಾಜ್ಯ ತಪ ಇಂತಿವು ಬಹಿರಂಗದ ಅಷ್ಟಮದಂಗಳು.

ಸಕಲಾತ್ಮರುಗಳು ತಮ್ಮ ಮನದೊಳಗೆ ನೆನಹು ರೂಪಿಂದ ತೋರುವ ಮದಗುಣಂಗಳನೇ ಬಹಿರಂಗದಲ್ಲಿ ವಾಗ್ರೂಪಿನಿಂದ ಹೇಳುವೆಂಟು ಪ್ರಕಾರಮಾದ ಮದಗುಣಂಗಳುಂಟಾಗಿರುತಿಹವು.

ಉತ್ತಮ ಜಾತಿಯಲ್ಲಿ ಹುಟ್ಟಿದ ೧[ಮನುಷ್ಯರು]೧ ಆಯಿತ್ತಾದೊಡೆ, ನಾವು ಮಹಾಕುಲೋತ್ತಮರು, ಮಿಕ್ಕಿನ ಮನುಜುರುಗಳೋರ್ವರೂ ನಮಗೆ ಸಮಾನ ಬರಲರಿಯರು ಎಂದು ಹೇಳಿಕೊಂಬುದೇ ಕುಲಮದವು.

೧–೧ ಸತ್ಪುರುಷರು (ಮೂ)

ಹೀಗೆ ಕಂಡು ಹೇಳಿಕೊಳುತಿರ್ದವನಲ್ಲಿ ನಿನ್ನ ಕುಲಾತಿಶಯವ ಏನು ಹೇಳಿಕೊಳ್ಳುತ್ತಿದ್ದೀಯೋ ಎಂದು ಮೂದಲಿಸಿದಲ್ಲಿ, ಆಗ ಛಲಮದವೆಂಬುದು ತೋರಿ ಮಿಕ್ಕಿನವರಾರೂ ನನಗೆ ಸಮಾನಂ ಬರಲರಿಯರು ಎಂದು ಹೇಳಿ ಕೊಂಬುದೇ ಛಲಮದವು.

ಧನಾಢ್ಯಪುರುಷರಾಯಿತ್ತಾದರೆ, ನಾವು ಮಹಾ ದ್ರವ್ಯಸ್ತರು, ನಮ್ಮ ದ್ರವ್ಯಾಧಿಪತಿತ್ವಕ್ಕೆ ಆರೂ ಸಮಾನಂ ಬರಲರಿಯರು ಎಂದು ಹೇಳಿಕೊಳ್ಳುವುದೇ ದ್ರವ್ಯಮದವು.

ಸರ್ವಲಕ್ಷಣ ಸಂಪೂರ್ಣಮಾದ ಸೌಂದರ್ಯವನುಳ್ಳ ಪುರುಷರಾಯಿತ್ತಾ ದೊಡೆ ನಮ್ಮ ಲಾವಣ್ಯಕ್ಕೆ ಆರೂ ಸಮಾನಂ ಬರಲರಿಯರು ಎಂದು ಹೇಳಿಕೊಂಬು ವುದೇ ರೂಪುಮದವು.

ಎಳೆಯ ಜವ್ವನ, ಮೊಳೆಯ ಜವ್ವನ, ತುಂಬು ಜವ್ವನ, ಸೊಕ್ಕು ಜವ್ವನ ವನುಳ್ಳ ಪ್ರಾಯ ಸಮರ್ಥರಾದ ಪುರುಷರು ನಮ್ಮ ಯೌವ್ವನಕ್ಕೆ ಮಿಕ್ಕಿನವ ರಾರೂ ಸಮಾನಂ ಬರಲರಿಯರು ಎಂದು ಹೇಳಿಕೊಂಬುವುದೇ ಯೌವ್ವನ ಮದವು.

ಚೌಷಷ್ಟಿವಿದ್ಯಂಗಳ ಬಲ್ಲಂತಹ ಮಹಾ ಪ್ರವೀಣ ಪುರುಷನಾಯಿತ್ತಾ ದೊಡೆ, ನಾವು ಮಹಾವಿದ್ವಾಂಸರು ನಮ್ಮ ವಿದ್ವತ್ತಿಗೆ ಆರೂ ಸಮಾನಂ ಬರಲರಿ ಯರು ಎಂದು ಹೇಳಿಕೊಂಬುವುದೇ ವಿದ್ಯಾಮದವು.

ಈ ಜಂಬೂದ್ವೀಪವನೆಲ್ಲ ಒಂದೊಂದೇ ಕೊಡೆಯಲ್ಲಿ ಆಳುವಂತಹ ಏಕ ಛತ್ರಾಧೀಶ್ವರರು ಮಹಾರಾಜ್ಯಾಧಿಪತಿಗಳಾಯಿತ್ತಾದೊಡೆ ನಾವು ಮಹಾ ರಾಜ್ಯಾಧಿಪತಿಗಳು ಎಂದು ರಾಜ್ಯಮದವೆಂಬುದು ತಲೆದೋರಿ ನಮ್ಮ ರಾಜ್ಯಾಧಿ ಪತಿತ್ವಕ್ಕೆ ಸಮಾನಂ ಬರಲರಿಯರು ಎಂದು ಹೇಳಿಕೊಂಬುವುದೇ ರಾಜ್ಯ ಮದವು .

ಉಗ್ರತಪವಂ ಮಾಡುವ ತಪಸ್ವಿಗಳು ನಮ್ಮ ಜಿತೇಂದ್ರಿಯಕ್ಕೆ ಆರೂ ಸಮಾನ ಬರುವುದಿಲ್ಲ ಎಂದು ಹೇಳಿಕೊಂಬುವುದೇ ತಪೋಮದವು.

ಇವು ತಾವೇ ಬಹಿರಂಗದ ಅಷ್ಟಮದಂಗಳು. ಸಕಲಾತ್ಮರುಗಳು ತಮ್ಮ ಮನದೊಳಗೆ ತೋರಿದ ಮದಗುಣಂಗಳನ್ನೇ ಬಹಿರಂಗದಲ್ಲಿ ರಚಿಸಿ ಹೇಳು ವಂತಹ ಮದಗುಣಂಗಳ ಹಸಿಗೆಯ ವಿಚಾರಮಂ ತಿಳಿವುದು ತತ್ವಜ್ಞಾನಿಗಳು.

ಸಪ್ತವ್ಯಸನಗಳು

ಇನ್ನು ಸಪ್ತವ್ಯಸನಂಗಳ ವಿವರ : ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ ಇಂತಿವು ಸಪ್ತವ್ಯಸ ನಂಗಳು. ಇವಕ್ಕೆ ವಿವರ– ತನುವ್ಯಸನವೆತ್ತಿದಲ್ಲಿ ದೇಹ ಬಡವಾಯಿತೆನುತಿಹನು.

ಮನವ್ಯಸನನೆವೆತ್ತಿದಲ್ಲಿ ಹುಸಿ ಕಳವು ಪರದಾರಮಂ ಬಯಸುತ್ತಿಹನು. ಧನ ವ್ಯಸನವೆತ್ತಿದಲ್ಲಿ ಅರ್ಥಮಂ ಬಯಸುತ್ತಿಹನು. ರಾಜ್ಯವ್ಯಸನವೆತ್ತಿದಲ್ಲಿ ವಾಹನ ವಸ್ತ್ರಾಭರಣ ಅನುಲೇಪನ ತಾಂಬೂಲಂಗಳಂ ಬಯಸುತ್ತಿಹನು. ವಿಶ್ವವ್ಯಸನ ವೆತ್ತಿದಲ್ಲಿ ಗೃಹ ಕ್ಷೇತ್ರ ಸೀಮೆಯಂ ಬಯಸುತ್ತಿಹನು. ಉತ್ಸಾಹವ್ಯಸನವೆತ್ತಿದಲ್ಲಿ ಪುತ್ರ ಮಿತ್ರ ಕಳತ್ರಾದಿಗಳಂ ಬಯಸುತ್ತಿಹನು. ಸೇವಕವ್ಯಸನವೆತ್ತಿದಲ್ಲಿ ಹೋದಿಹೆ, ಕೊಂದಿಹೆ, ಕೊಟ್ಟಿಹೆನೆನುತ್ತಿಹನು*.

ಷಡೂರ್ಮಿಗಳು

ಇನ್ನು ಷಡೂರ್ಮಿಗಳ ಭೇದ : ಗ್ರಂಥ : ''ಬುಭುಕ್ಷಾ ಚ ಪಿಪಾಸಾಚಾ ಪ್ರಾಣಸ್ಯ ತೌ ಸಾಃ ಮನಸಃ ಸ್ಮೃ । ಶೋಕ ಮೋಹೌ ಶರೀರಸ್ಯ ಜನ್ಮ ಮೃತ್ಯು ಷಡೂರ್ಮಯಃ ॥'' ಎಂದು ಕ್ಷುತ್ತು ಪಿಪಾಂಸೆ, ಶೋಕ ಮೋಹ, ಜನನ ಮರಣ, ಈ ಆರು ಷಡೂರ್ಮಿಗಳು. ಇವಕ್ಕೆ ವಿವರ– ಕ್ಷುತ್, ಪಿಪಾಂಸೆ ಈ ಎರಡು ಪ್ರಾಣ ಧರ್ಮ, ಶೋಕ, ಮೋಹ ಇವು ಮನಧರ್ಮ, ಜನನ ಮರಣ ಈ ಎರಡು ದೇಹಧರ್ಮ. ಇಂತಿವು ಷಡೂರ್ಮಿಗಳು.

ಕ್ಷುತ್, ಮೃಷ್ಟಾನ್ನಪಾನಂಗಳನನುಭವಿಸಬೇಕೆಂಬುದುದರಾಗ್ನಿ, ಪಿಪಾಂಸೆ, ಪಾನ್ಯದ್ರವ್ಯಂಗಳನೀಂಟಬೇಕೆಂಬುದು ನೀರಡಿಕೆಯು. ತನಗಿಷ್ಟವಾದ ವಸ್ತು ತನ್ನಿಂದಗಲಿಹೋದಲ್ಲಿ ನೆನೆನೆನೆದು ದುಃಖಿಸುವಂತಹ ದುಃಖವೇ ಶೋಕವು. ಹೋದ ವಸ್ತುವನ್ನು ಮರಳಿ ದೊರೆಕೊಂಡಲ್ಲಿ ನೋಡಿ ಮಮಕರಿಸುವಂತಹ ಮಮಕಾರವೇ ಮೋಹವು. ಸ್ಥೂಲ ಮಾನವರ ಪಿಂಡವು ನಾನಾ ಪ್ರಯಾಸ ದಿಂದ ಹುಟ್ಟಿ ಬರುವಂತಹದ್ದೇ ಜನನವು. ಕಡೆಯಲ್ಲಿ ನಾನಾ ರುಚಿಗಳಿಂದ ಸಣ್ಣಿಸಿ ಮೃತಿಯನೈದಿ ಹೋಗುವಂತಹದ್ದೇ ಮರಣವು.

ಅರಿಷಡ್ವರ್ಗಂಗಳು

ಇನ್ನು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇಂತಿವು ಅರಿಷಡ್ವರ್ಗಂಗಳು.

ಕಾಮ, ಗುರುದಾರ, ಪರದಾರಗಮನಂಗಳಿಗೆ ಎಳಸುವುದೇ ಕಾಮವು. ಒಡಲೊಡವೆಯ ನಾಶಮಾಡಿಬಿಡುವುದೇ ಕೋಪವು. ಇಹ ಪರ ಸಿದ್ಧಿಯ ಕೆಡಿಸಿ ಭವಕ್ಕೆ ತರುವುದೇ ಲೋಭವು, ನಿತ್ಯಾನಿತ್ಯ ವಿವೇಕವ ಕೆಡಿಸಿ ಅನಿತ್ಯದೇಹವ ಮಾಳ್ಪುದೇ ಮೋಹವು. ನೀತಿಯಂ ಬಿಟ್ಟು ಅನೀತಿತನವಮಾಡುವುದೇ ಮದವು. ಪರರ ಗುಣವ .ನಿರಾಕರಣೆಯಮಾಡುವುದೇ ಮತ್ಸರವು. ಇವು ತಾವೇ ಅರಿಷಡ್ವರ್ಗಂಗಳು.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೫

ಷಡ್ಭಮೆಗಳು

ಇನ್ನು ಷಡ್ಭಮೆಗಳು: ಜಾತಿ ವರ್ಣ ಆಶ್ರಮ ಕುಲ ಗೋತ್ರ ನಾಮಂಗಳು. ಇವಕ್ಕೆ ವಿವರ– ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ಜಾತಿಭ್ರಮೆ. ವರ್ಣ ಹದಿನೆಂಟರೊಳಗೆ ಶ್ರೇಷ್ಠರೆಂಬುದು ವರ್ಣಭ್ರಮೆ. ಗೃಹಸ್ಥ , ವಾನಪ್ರಸ್ಥ, ಕುಟೀಚ, ಅವಧೂತ ಈ ಚತುರ್ವಿಧವು ಆಶ್ರಮಭ್ರಮೆಯು ; ತಾವು ನಿಂದ ಸ್ಥಲಂಗಳೇ ವಿಶೇಷವೆಂದು ಭ್ರಮಿಸುವರು. ಕನ್ನಡಿಗ, ವಾಣಿಜ, ಕಮ್ಮೆ, ತಿಗಳ ಈ ನಾಲ್ಕು ಕುಲಭ್ರಮೆ. ತಮ್ಮ ಕುಲಾವಳಿಯೇ ವಿಶೇಷವೆಂದು ಭ್ರಮಿಸುತಿಹರು. ಕಶ್ಯಪ, ಭಾರದ್ವಾಜ ಮೊದಲಾದ ಋಷಿಸಮೂಹವೇ ಗೋತ್ರಭ್ರಮೆ. ನಾರಾಯಣ ಬ್ರಹ್ಮ ಮೊದಲಾದುವು ನಾಮಭ್ರಮೆ. ತಮ್ಮ ತಮ್ಮ ಅಭಿಧಾನವೇ ವಿಶೇಷವೆಂದು ಭ್ರಮಿಸುತಿಹರು. ಈ ಪ್ರಕಾರದಿಂದ ಹೇಳಲ್ಪಟ್ಟಂಥ ಭ್ರಾಂತಿ ಗುಣಂಗಳ ಹಸಿಗೆಯ ವಿಚಾರವನ್ನು ತಿಳಿದುಕೊಂಬುವುದು ತತ್ವಜ್ಞಾನಿಗಳು*

ಷಡ್ಭಾವ ವಿಕಾರಗಳು

ಇನ್ನು ಷಡ್ಭಾವ ವಿಕಾರಂಗಳು : ಅಸ್ತಿತೆ, ಜಾಯತೆ, ವಿಪರಿಣಮತೆ, ವಿವರ್ಧತೆ, ಅಪ[ಕ್ಷೀಯ]ತೆ, ವಿನಶ್ಯತೆ. ಇವಕ್ಕೆ ವಿವರ– ಅಸ್ತಿತೆ ಗರ್ಭ ಉಂಟೆನಿಸುವುದು. ಜಾಯತೆ ಜನನಿಯ ಜಠರದಿಂದೆ ಪೊರಮಡುವುದು, ವಿಪರಿಣಮತೆಯಲ್ಲಿ ತಂದೆ ತಾಯಿಗಳ ಮುದ್ದಿನ ಸುಖವನ್ನು ಕೈಕೊಂಡು ಸಂತೋಷಿಸುವುದು. ವಿವರ್ಧೆಯಲ್ಲಿ ಬೆಳೆವುದು. ಅಪ[ಕ್ಷೀಯ]ತೆಯಲ್ಲಿ ವೃದ್ಧತೆಯಿಂದ ಕುಸಿವುದು. ವಿನಶ್ಯತೆಯಲ್ಲಿ ಕೆಡುವುದು. ಇಂತಿವು ಷಡ್ಭಾವ ವಿಕಾರಂಗಳು.

ಪಂಚಕ್ಲೇಶಗಳು

ಇನ್ನು ಪಂಚಕ್ಲೇಶಗಳು : ಅನಾದಿ ಪ್ರಕೃತಿ ನೀರನಾದಿಯಮಾಡಿಕೊಂಡು ಪಾಂಸೆ ತೋರುವ ಹಾಗೆ ಆತ್ಮನಾದಿಯಮಾಡಿಕೊಂಡು ತೋರುವುದೇ ಅನಾದಿ ಮಾಯೆಯು.+ ಆ ಮಾಯಾ ಸಂಬಂಧವಾದ ಹೊನ್ನು ಹೆಣ್ಣು ಮಣ್ಣು ಪುತ್ರ ಮಿತ್ರ ಕಳತ್ರಾದಿ ಸಂಸೃತಿಗಳು ಹುಟ್ಟುವುದಕ್ಕೆ ಪಂಚಕ್ಲೇಶವೇ ಮೂಲ. ಅವಾವೆಂದಡೆ– ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ. ಇವಕ್ಕೆ ವಿವರ–ಪ್ರಥಮದಲ್ಲಿ ಅವಿದ್ಯೆ ಎಂತೆಂದೊಡೆ : ಚಿದ್ರೂಪನೆಂಬುದಂ ಕೆಡಿಸಿ, ಆನಂದವೆಂಬ ಸುಖಮಂ ಮರೆಯಿಸಿ ಎಡೆಬಿಡುವಿಲ್ಲದೆ ಅರುಹೇ ತಾನೆಂಬುದಂ ಬಿಡಿಸಿ ನಾನು ಜೀವನು,

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೬

೧–೧ ಕ್ಷ (ಮೂ)

\+ 'ಅನಾದಿ ಪ್ರಕೃತಿ' 'ಅನಾದಿಮಾಯೆ' ಎಂಬ ಶಬ್ದ ಪ್ರಯೋಗಗಳು ವೇದಾಂತಪರವಾಗಿ ಬಳಕೆಯಾಗಿವೆ. ವೀರಶೈವದ ಪರವಾಗಿ ಇವನ್ನು 'ಆದಿ ಪ್ರಕೃತಿ' 'ಆದಿಮಾಯೆ' ಎಂದು ಪರಿಭಾವಿಸಿದರೆ ಒಳಿತು (ಸಂ).

ನಾನು ಸಂಸಾರಿ, ನಾನು ಪಾಶಬದ್ಧನು, ನಾನು ಪಶುವು ಎನಿಸುವ ಅಜ್ಞಾನವೀಗ ಅವಿದ್ಯೆ. ಈ ಅಜ್ಞಾನದಿಂ ತೋರಿದ ಸಂಸಾರವಿಷಯ ಸುಖವ ನಾನೆಂದೂ ಬಿಡದೆ ಅಹಂಭಾವದ ತೊಡಕಿನ ಸುಖವೇ ಅಸ್ಮಿತೆ. ಇಂತೀ ವಿಷಯಸುಖಮಂ ಮೆಚ್ಚಿ ಬಿಡಲಾರದೆ ಚಿಂತಿಸುವ ಬುದ್ಧಿಯನುಳ್ಳುದೇ [ಅಸ್ಮಿತೆ] ಅದಕೊಂದು ಯತ್ನ ಉಂಟಾದುದೇ ರಾಗ. ಈ ಸಂಸಾರವ ಪ್ರಿಯದಿಂದೆ ಹಿಡಿದು ಬಿಡದೆ ನೋವ ದುಃಖವನುಳ್ಳುದೇ ದ್ವೇಷ. ಇಂತಿವು ಹಲವು ಪ್ರಕಾರದ ವಿಷಯಸುಖಮಂ ಮೆಚ್ಚಿ ಬಿಡಲಾರದ ಮನದ ದುಃಖವೇ ಅಭಿನಿವೇಶ. ಇಂತೀ ಪಂಚ ಕ್ಲೇಶವೇ ಸರ್ವ ಜೀವರುಗಳಲ್ಲಿಯೂ ಬೆಳೆದು ಪಲ್ಲವಿಸಿ ಹುದುಗಿಕೊಂಡಿಹವು. ಇಂತಿವು ಪಂಚಕ್ಲೇಶಗಳು.

ಅಹಂಕಾರತ್ರಯಗಳು

ರಾಜಸಾಹಂಕಾರ, ಸಾತ್ವಿಕಾಹಂಕಾರ, ತಾಮಸಾಹಂಕಾರ–ಇಂತಿವು ಅಹಂಕಾರತ್ರಯಗಳು. ಇವಕ್ಕೆ ವಿವರ–ರಾಜಸಾಹಂಕಾರದಿಂದ ಪಂಚವಿಷಯಂಗಳು ಪುಟ್ಟಿದವು. ಸಾತ್ವಿಕಾಹಂಕಾರದಿಂದ ಸೂರ್ಯಾದಿದೇವತೆಗಳು ಪುಟ್ಟಿದವು. ತಾಮಸಾಹಂಕಾರದಿಂದ ಪೃಥಿವ್ಯಾದಿ ಪಂಚಭೂತಂಗಳು ಪುಟ್ಟಿದವು.

ರಾಜಸಾಹಂಕಾರ ಮೊದಲು ನಿರಾಕಾರ ಪರವಸ್ತುವಿನಿಂದ ಶಾಂತಿಶಕ್ತಿ ಆ ಶಾಂತಿಶಕ್ತಿಯಿಂದ ಪರಬ್ರಹ್ಮವು, ಆ ಪರಬ್ರಹ್ಮದಿಂದ ಚಿತ್ತು ಆ ಚಿತ್ತಿನಿಂದ ಅವ್ಯಕ್ತಮಯಮಪ್ಪ ಕಲೆ, ಆ ಕಲೆಯಿಂದ ಪ್ರಕೃತಿ, ಆ ಪ್ರಕೃತಿಯಿಂದ ಮಹತ್ತು ಆ ಮಹತ್ತಿನಿಂದ ಮೂಲಾಹಂಕಾರವು ಪುಟ್ಟಿತ್ತು ಅಂತಪ್ಪ ಮೂಲಾಹಂಕಾರವೇ ರಜೋಗುಣವ ನೆಮ್ಮಿದಲ್ಲಿ ರಾಜಸಾಹಂಕಾರವೆಂದು, ತಮೋಗುಣವ ನೆಮ್ಮಿದಲ್ಲಿ ತಾಮಸಾಹಂಕಾರವೆಂದು, ಸತ್ವಗುಣವ ನೆಮ್ಮಿದಲ್ಲಿ ಸಾತ್ವಿಕಾಹಂಕಾರವೆಂದು ಇವು ತಾವೇ ಅಹಂಕಾರತ್ರಯಂಗಳು.

ರಾಜಸಾಹಂಕಾರ ತಲೆದೋರಿದಲ್ಲಿ ಶಬ್ದವಿಷಯವೇ ಮೊದಲಾದ ಪಂಚ ವಿಷಯಂಗಳು ಐದು ತನ್ಮಾತ್ರೆಗಳು ಹುಟ್ಟಿದವು. ಸಾತ್ವಿಕಾಹಂಕಾರ ತಲೆದೋರಿದಲ್ಲಿ ಅಹಂಕಾರವೇ ಭಕ್ತಿಭಾವವು. ಆ ಭಕ್ತಿಭಾವವು ಮುಂದುಗೊಂಡಲ್ಲಿ ದೇವರು ಪ್ರತ್ಯಕ್ಷವಾಗುತಿಹನು. ತಾಮಸಾಹಂಕಾರದಿಂದ ಪೃಥ್ವಿಯೇ ಮೊದಲಾದ ಪಂಚಭೂತಂಗಳು ಪುಟ್ಟಿದವು. ಪೃಥಿವ್ಯಾದಿ ಪಂಚಭೂತಂಗಳೇ ಜಡ. ಆ ಜಡ[ದಿಂದ]ವೇ ಅಜ್ಞಾನ ಅಹಂಕಾರವು ಪುಟ್ಟಿತು.

ರಾಜಸಾಹಂಕಾರದಿಂದ ಶಬ್ದವಿಷಯವೇ ಮೊದಲಾದ ಪಂಚವಿಷಯಗಳು ತನ್ಮಾತ್ರೆಗಳು ಪುಟ್ಟಿದವು. ಸಾತ್ವಿಕಾಹಂಕಾರದಿಂದ ಸೂರ್ಯನೇ ಮೊದಲಾದ ದೇವತೆಗಳು, ಇಪ್ಪತ್ತೈದು ಆತ್ಮಾಧಿಷ್ಠಾನಕರ್ತೃಗಳು ಪುಟ್ಟಿದರು. ತಾಮಸಾಹಂಕಾರದಿಂದ ಪಂಚಭೂತಗಳು ಪುಟ್ಟಿದವು ಎಂಬಲ್ಲಿ ಬ್ರಹ್ಮಾಂಡವಳಯ ಚತುರ್ದಶಭುವನ ಸಚರಾಚರಪ್ರಾಣಿಗಳ ಸಮೂಹಂಗಳೆಲ್ಲವೂ ಪುಟ್ಟಿದವು.

ಇಹಲೋಕದ ತಾಪತ್ರಯಗಳು

ಇನ್ನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಇಂತಿವು ಇಹಲೋಕದ ತಾಪತ್ರಯಂಗಳು. ಇವಕ್ಕೆ ವಿವರ–ಆಧ್ಯಾತ್ಮಿಕದಲ್ಲಿ ಶಾರೀರವೆಂದು ಮಾನಸ ವೆಂದು ಎರಡು ಪ್ರಕಾರ. ಅಲ್ಲಿ ಜ್ವರ, ಗುಲ್ಮ ಶೂಲಿ, ತ್ರಿದೋಷ, ನವಗ್ರಹ, ಗೋವು, ಪಕ್ಷಿ, ರಾಜ, ಇದರಿಂದಾದ ದುಃಖ. ಶಾರೀರವೆಂಬುದು ದೇಹ ಒಂದಕ್ಕೆ ತಟ್ಟುವಂತಹ ದುಃಖವು. ಅಸೂಯೆ ನಾಸೂಯೆ, ಮದ, ಮತ್ಸರ, ಚಿಂತೆ ಗಳಿಂದಾದ ದುಃಖವು ಮಾನಸವೆಂಬುದು. ಮನಸ್ಸಿಗೆ ಬಂದು ತಟ್ಟುವಂತಹದು. ಈ ಎರಡು ಆಧ್ಯಾತ್ಮಿಕವೆಂಬುದು.

ಸೀತ, ಉಷ್ಣ, ವಾಯು, ಸಿಡಿಲು, ಮಿಂಚುಗಳಿಂದಾದ ದುಃಖವು ಆಧಿಭೌತಿಕ ವೆಂಬುದು. ತನ್ನ ಅಂಗಸಂಬಂಧವಾದ ಪಂಚಭೂತಗಳಿಂದ ಬಂದು ತಟ್ಟುವಂತಹ ದುಃಖವೆಂದೇ ತಿಳಿದುಕೊಂಬುದು.

ಜನನ, ಮರಣ, ನೆರೆ, ತೆರೆ, ಹಸಿವು, ತೃಷೆ, ಇಂತವುಗಳಿಂದ ಹುಟ್ಟಿದ ನೋವನ್ನು ಆಧಿದೈವಿಕವೆಂಬುದು. ಅನಾದಿ ಪರಶಿವನಿಂದ ಬಂದು ತಟ್ಟುವಂತಹ ದುಃಖವು. ಇಂತಿವು ತಾಪತ್ರಯಂಗಳ ಭೇದ.

ಸ್ವರ್ಗಲೋಕದ ತಾಪತ್ರಯಗಳು

ಇನ್ನು ಕ್ಷಯ, ಅತಿಶಯ, ಸಾಹಸಪತನ ಇಂತಿವು ಸ್ವರ್ಗಲೋಕದ ತಾಪ ತ್ರಯಂಗಳು. ಇವಕ್ಕೆ ವಿವರ–ಕ್ಷಯವೆಂದೊಡೆ ಸುಕೃತ ತೀರುವುದು. ಆತ್ಮನಿಹ ದಲ್ಲಿಮಾಡಿದ ಸುಕೃತವು ತೀರಿದಲ್ಲಿ ಪರಲೋಕದ ಸುಖವನುಂಡು ತೀರ್ಗಡೆ ಯಾಗಿ ಹೋಗುತ್ತಿಹುದೆಂಬುದೀಗ ಕ್ಷಯವು. ಅತಿಶಯವೆಂದೊಡೆ ತನಗಿಂತಲೂ ಬಲ್ಲಿದರ್ಬಹಳವಾಗಿ ಸುಕೃತಾನುಸಾರ ಮಾಡುವಂತಹ ಪುಣ್ಯಾತ್ಮರುಗಳುಂಟೇ ಎಂಬುದು. ಸಾಹಸಪತನವೆಂದೊಡೆ ಸ್ವರ್ಗಲೋಕದಿಂದ ಕೆಳಕ್ಕೆ ತಳ್ಳಿಬಿಡು ವುದು. ಈ ಮೂರು ಪ್ರಕಾರವಾದ ದುಃಖಗಳ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.

ದುರ್ಭಾವತ್ರಯಗಳು

ಇನ್ನು ಜ್ಞಾನವಿಕೃತಿಭಾವ, ವರ್ತನವಿಕೃತಿಭಾವ, ಮೋಹನವಿಕೃತಿಭಾವ ಇಂತಿವು ದುರ್ಭಾವತ್ರಯಂಗಳು. ಇವಕ್ಕೆ ವಿವರ– ಅರುಹಿಂದ ಅಹಮೆಂಬ ಜಡಭಾವದಿಂ ಬ್ರಾಹ್ಮಣಾದ್ಯನೇಕ ಅಹಂಕಾರವನೆಯ್ದಿಹನಾಗಿ ಜ್ಞಾನವಿಕೃತಿ ಭಾವ. ಜಡಾಜಡ ಮಿಶ್ರದಿಂ ದೇಹದಿ ನಾನಾ ಪ್ರಕಾರದಿಂದಂಡಲೆದು ದುರ್ವ್ಯವ ಹರಿಸುತ್ತಿಹನಾಗಿ ವರ್ತನವಿಕೃತಿಭಾವ. ನಿಜವ ಮರೆದು ಜಡಭಾವ ದಿಂದ ಅಹಂಕಾರಭಾವವನ್ನೊಮ್ಮೆಯೂ ಬಿಡದಿಪ್ಪ ಕಥನದಿಂ ಮೋಹನ ವಿಕೃತಿಭಾವ. ಇಂತಿವು ದುರ್ಭಾವಂಗಳ ಭೇದ.

ಇನ್ನೊಂದು ಪ್ರಕಾರದಿಂದ ಪೇಳಲ್ಪಡುಗುಂ, ಸದ್ಭಾವತ್ರಯಂಗಳೆಲ್ಲವನು ವಿಕರಿಸಿ ಕೆಟ್ಟು ಅಜ್ಞಾನಕ್ಕೊಳಗಾದುದೇ ಜ್ಞಾನವಿಕೃತಿಭಾವ. ಸದಾಚಾರ ಸನ್ಮಾರ್ಗ ಸದ್ವರ್ತನೆಗಳೆಲ್ಲ ವಿಕರಿಸಿ ಕೆಟ್ಟು ದುರಾಚಾರ ದುರ್ಮಾರ್ಗ ದುರ್ವರ್ತನೆ ಗೊಳಗಾದುದೇ ವರ್ತನವಿಕೃತಿಭಾವ. ತಮ್ಮ ಕುಲಗುರು ಇಷ್ಟದೈವದ ಮೇಲಣ ಮನುಮಕಾರವೆಲ್ಲವಿಕರಿಸಿ ಕೆಟ್ಟು ದುರ್ಮಾರ್ಗದೊಳಗಾದುದೇ ಮೋಹನವಿಕೃತಿ ಭಾವ. ಇವು ತಾವೇ ದುರ್ಭಾವತ್ರಯಂಗಳು.*

ತ್ರಿದೋಷಗಳು

ಇನ್ನು ವಾತ, ಪಿತ್ತ ಶ್ಲೇಷ್ಮ ಇಂತಿವು ತ್ರಿದೋಷಂಗಳು. ೩೬೦ ವ್ಯಾಧಿ ರೂಪಮಾದ ತ್ರಿದೋಷಂಗಳು ಕೂಡಿ ಒಂದು ಶರೀರಾಕೃತಿಯಾಗಿಹುದು. ಈ ತ್ರಿದೋಷಂಗಳು ಕಾಲತ್ರಯಂಗಳಲ್ಲಿಯೂ ಪೀಡಿಸುತಿಹವು. ಇವು ಕ್ರೋಧ, ಮೂಢ, ಶಾಂತತ್ವದಿಂದಲೋಪ್ಪುವವು. ವಾತರೋಗಿಯಾದ ಪುರುಷನು ಮೂಢನಾಗಿರುತಿಹನು. ಪಿತ್ತರೋಗಿಯಾದ ಪುರುಷನು ಕೋಪಿಯಾಗಿರು ತಿಹನು. ಶ್ಲೇಷ್ಮ ರೋಗಿಯಾದ ಪುರುಷನು ಶಾಂತನಾಗಿರುತಿಹನು. ಬಾಲನಾಗಿದ್ದ ಕಾಲದಲ್ಲಿ ವಾತರೋಗ ಪೀಡಿಸುತಿಹುದು. ಯೌವನನಾಗಿದ್ದಾಗ ಪಿತ್ತರೋಗ ಪೀಡಿಸುತಿಹುದು. ವೃದ್ಧನಾಗಿದ್ದ ಕಾಲದಲ್ಲಿ ಶ್ಲೇಷ್ಮರೋಗ ಪೀಡಿಸುತಿಹುದು. ಇವು ತಾವೇ ತ್ರಿದೋಷಂಗಳ ಭೇದವನ್ನು ತಿಳಿದುಕೊಂಬುದು ತತ್ವಜ್ಞಾನಿಗಳು.

ಕರಣಹಸಿಗೆ ಮತ್ತು ಲಿಂಗಾಂಗಸಾಮರಸ್ಯ

ಈವರೆಗೆ ವರ್ಣಿಸಲ್ಪಟ್ಟ ದೇಹವೂ, ಜೀವವೂ, ಜಗತ್ತೂ ಹಾಗೆಯೇ ಜಗತ್ತಿನಲ್ಲಿಯ ಶಕ್ತಿಗಳೂ ಪರಮಾತ್ಮನಲ್ಲ. ಆದರೆ ತನ್ನನ್ನು ತಾನರಿದರೆ ತಾನೇ ಪರಮಾತ್ಮನು, ಅದೇ ಲಿಂಗೈಕ್ಯಸ್ಥಿತಿಯು ಎಂದೆನಿಸಿಕೊಳ್ಳಲ್ಪಡುತ್ತಿದೆ. (೧–೪) ಇದಕ್ಕೋಸ್ಕರ ಮನುಷ್ಯನು ವ್ಯಸನಾದಿಗಳನ್ನೂ, ಇಂದ್ರಿಯ ವಿಕಾರಗಳನ್ನೂ ಜೀವ ಭಾವವನ್ನೂ ತೊರೆಯಬೇಕು ಮತ್ತು ಪರಮಾತ್ಮನನ್ನು ಮೊರೆಹೊಗಬೇಕು. (೫–೯) ಷಟ್‌ಸ್ಥಲಮಾರ್ಗದಂತೆ ಆಚರಿಸಬೇಕು. ಅಂದರೆ ಲಿಂಗಾಂಗಸಾಮರಸ್ಯ ಸ್ಥಿತಿಯು ಪ್ರಾಪ್ತವಾಗುವುದು. ಇದರಲ್ಲಿ ಕರಣಹಸಿಗೆಯ ಜ್ಞಾನವು ಅತ್ಯಾವಶ್ಯಕ ವಾದುದೆಂದು ವಚನಕಾರರ ವಚನಗಳಿಂದ ತಿಳಿದುಬರುತ್ತದೆ.

೭೯

(೧) ಅಯ್ಯಾ ! ವರಕುಮಾರ ದೇಶಿಕೋತ್ತಮನೇ ಕೇಳಾ ನಂದೀಶಾ. ಕಲ್ಯಾಣ ಪಟ್ಟಣದ ಅನುಭವಮಂಟಪದಲ್ಲಿ ಗುರುಬಸವೇಶ್ವರಸ್ವಾಮಿಗಳು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮನ ಮುಖ ವಚನದಲ್ಲಿ, ಸಕಲ ಪ್ರಮಥ ಗಣಂಗಳೆಲ್ಲ ನಿಃಕಳ ಲಿಂಗಾನುಭಾವವ ಬೆಸಗೊಂಡ ಮಹಪ್ರಸಾದವ ನಿನಗೆ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೭

ಕರುಣಿಸಿಕೊಟ್ಟಿಹೆವು ನೋಡಾ. ಆ ನಿಲುಕಡೆ ಎಂತೆಂದೊಡೆ : ಅಯ್ಯಾ ಅನಾದಿ ಶಿವತತ್ವ, ಈಶ್ವರತತ್ವ, ಮಹೇಶ್ವರತತ್ವ, ಈ ಅನಾದಿ ತತ್ವತ್ರಯಂಗಳು ತಾನಲ್ಲ. ಅನಾದಿ [ಸದಾ] ಶಿವತತ್ವ, [ಅನಾದಿ] ಶಿವತತ್ವ, [ಅನಾದಿ]ಈಶ್ವರತತ್ವ [ಅನಾದಿ]ಮಹೇಶ್ವರತತ್ವ ಈ [ಅನಾದಿ] ತತ್ವತ್ರಯಂಗಳು ತಾನಲ್ಲ. [ಆದಿ ಸದಾಶಿವತತ್ವ, ಆದಿ ಈಶ್ವರತತ್ವ, ಆದಿಮಹೇಶ್ವರತತ್ವವೆಂಬ ಆದಿ ತ್ರಿ–ತತ್ವ ತಾನಲ್ಲ] ಶಂಕರ, ಶಶಿಧರ, ಗಂಗಾಧರ, ಗೌರೀಶ, ತ್ರಿಶೂಲಖಟ್ವಾಂಗಧರ, ವೃಷಭವಾಹನ, ಪಂಚಮುಖರುದ್ರ, ವಿಶ್ವಾಧಿಕ ಮಹಾರುದ್ರ, ಅಂಬಿಕಾಪತಿ, ಉಮಾಪತಿ, ಪಂಚಮುಖ, ಅನೇಕ ಮುಖವಾಗಿಹ ವಿಶ್ವರೂಪುಳ್ಳ ಗಣಾಧೀಶ್ವರ ನೆಂಬ ಮಹಾಗಣಂಗಳು ತಾನಲ್ಲ. ಸಹಸ್ರಶಿರ, ಸಹಸ್ರಚಕ್ಷು ಸಹಸ್ರಬಾಹು, ಸಹಸ್ರಪಾದವನುಳ್ಳ ವಿರಾಟ್‌ಪುರುಷ ತಾನಲ್ಲ. ಪಶು ಪತಿ ಪಾಶ ತಾನಲ್ಲ. ತತ್ಪದ, ತ್ವಂಪದ, ಅಸಿಪದ ತ್ರಯಂಗಳು ತಾನಲ್ಲ. ಜೀವಹಂಸ, ಪರಮಹಂಸ, ಪರಾಪರಹಂಸ ಹಂಸತ್ರಯಂಗಳು ತಾನಲ್ಲ. ಪಂಚಮೂರ್ತಿ ತಾನಲ್ಲ. ಆ ಸದಾಶಿವನಲ್ಲಿ ಉತ್ಪತ್ಯವ ಪೇಳ್ವೆ ಈ ಕರಣ ಹಸಿಗೆಯೊಳು, ಶಿವಶರಣಗಣಂಗಳಾಲಿಸುವುದಯ್ಯ. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮರೆಂಬ ಅಷ್ಟತನುಮೂರ್ತಿಗಳು ತಾನಲ್ಲ . ಅಸ್ಥಿ, ಮಾಂಸ, ಚರ್ಮ, ರೋಮ, ನರ ಈ ಐದು ಪೃಥ್ವಿಯಿಂದಾದವು. ಪಿತ್ತ, ಶ್ಲೇಷ್ಮ, ರಕ್ತ, ಶುಕ್ಲ, ಮೂತ್ರ ಈ ಐದು ಅಪ್ಪುವಿನಿಂದಾದವು. ಕ್ಷುತ್, ತೃಷೆ, ನಿದ್ರೆ, ಆಲಸ್ಯ, ಸಂಗ ಈ ಐದು ತೇಜದಿಂದಾದವು. ಪರಿವ, ಪಾರುವ, ಸುಳಿವ, ಕೂಡುವ, ಅಗಲುವ ಈ ಐದು ವಾಯುವಿನಿಂದಾದವು. ವಿರೋಧಿಸುವ, ಅಂಜುವ, ನಾಚುವ, ಮೋಹಿಸುವ ಅಹುದಾಗದೆಂಬುವ ಈ ಐದು ಆಕಾಶದಿಂದಾದವು. ಇಂತೀ ಪಂಚಭೂತದ ಕಾರ್ಯಂಗಳು ತಾನಲ್ಲ. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣವೆಂಬ ಜ್ಞಾನೇಂದ್ರಿಯಂಗಳು ತಾನಲ್ಲ. ವಾಕು, ಪಾಣಿ, ಪಾದ, ಗುದ, ಗುಹ್ಯವೆಂಬ ಕರ್ಮೇಂದ್ರಿಯಂಗಳು ತಾನಲ್ಲ. ಶಬ್ದ, ಸ್ಪರ್ಶ, ರೂಪು, ರಸ, ಗಂಧವೆಂಬ ಪಂಚವಿಷಯಂಗಳು ತಾನಲ್ಲ. ವಚನ, ಆದಾನ, ಗಮನ, ವಿಸರ್ಜನ, ಆನಂದವೆಂಬ [೧]ಕರ್ಮೇಂದ್ರಿಯ ವಿಷಯಂಗಳು[೧] ತಾನಲ್ಲ. ಮನ, ಬುದ್ಧಿ, ಚಿತ್ತ, ಅಹಂಕಾರ, ಜ್ಞಾನವೆಂಬ ಪಂಚಕರಣಂಗಳು ತಾನಲ್ಲ, ಈಡಾ, ಪಿಂಗಳ, ಸುಷುಮ್ನ, ಗಾಂಧಾರಿ, ಹಸ್ತಿಜಿಹ್ವಾ, ಪೂಷ, ಪಯಸ್ವಿನಿ, ಅಲಂಬು, ಲಕುಹ, ಶಂಕಿನಿ ಎಂಬ ದಶನಾಡಿಗಳು ತಾನಲ್ಲ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆಂಬ ದಶವಾಯುಗಳು ತಾನಲ್ಲ. ಸ್ಥೂಲ, ಸೂಕ್ಷ್ಮ, ಕಾರಣ, ಆನಂದ, ಚಿನ್ಮಯ, ಚಿದ್ರೂಪ, ಶುದ್ಧ, ನಿರ್ಮಲವೆಂಬ ಅಷ್ಟತನುಗಳು ತಾನಲ್ಲ. ಜೀವಾತ್ಮ

೧–೧ ಬುದ್ಧೀಂದ್ರಿಯಗಳು (ಮೂ)

ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಜ್ಞಾನಾತ್ಮ, ಭೂತಾತ್ಮ, ಶುದ್ಧಾತ್ಮ, ಮಹಾತ್ಮ, ಚಿದಾತ್ಮರೆಂಬ ನವ ಆತ್ಮರು ತಾನಲ್ಲ. ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಎಂಬಂತ ರಂಗದಷ್ಟಮದಂಗಳು ತಾನಲ್ಲ. ಕುಲ, ಛಲ, ಧನ, ರೂಪು, ಯೌವ್ವನ, ವಿದ್ಯೆ, ರಾಜ್ಯ, ತಪವೆಂಬ ಬಹಿರಂಗದಷ್ಟಮದಂಗಳು ತಾನಲ್ಲ. ರಸ, ರುಧಿರ, ಮಾಂಸ, ಮಜ್ಜೆ, ಮೇದಸ್ಸು, ಅಸ್ಥಿ, ಶುಕ್ಲವೆಂಬ [೧]ಸಪ್ತಧಾತುಗಳು[೧] ತಾನಲ್ಲ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಅರಿಷಡ್ವರ್ಗಂಗಳು ತಾನಲ್ಲ. ಜಾತಿ, ವರ್ಣಾಶ್ರಮ, ಕುಲಗೋತ್ರ, ನಾಮವೆಂಬ ಷಡ್ಭ್ರಮೆಗಳು ತಾನಲ್ಲ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಆನಂದಮಯವೆಂಬ ಪಂಚಕೋಶಗಳು ತಾನಲ್ಲ. ಸತ್ವ, ರಜ, ತಮವೆಂಬ ಗುಣತ್ರಯಂಗಳು, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ತಾಪತ್ರಯಂಗಳು, ವಿಶ್ವ ತೈಜಸ ಪ್ರಾಜ್ಞವೆಂಬ ಜೀವತ್ರಯಂಗಳು ತಾನಲ್ಲ. ವಾತ ಪಿತ್ತ ಶ್ಲೇಷ್ಮವೆಂಬ ದೋಷತ್ರಯಂಗಳು, ಆಣವಮಲ, ಮಾಯಾಮಲ, ಕಾರ್ಮಿಕ ಮಲತ್ರಯಂಗಳು, ಸೂರ್ಯ, ಚಂದ್ರ, ಅಗ್ನಿ ಎಂಬ ಮಂಡಲತ್ರಯಂಗಳು ತಾನಲ್ಲ. ಸುಖ–ದುಃಖ, ಪುಣ್ಯ– ಪಾಪ, ಮೋಹಗಳೆಂಬ ಪಂಚಪಾಶಗಳು ತಾನಲ್ಲ. ಸಂಚಿತ, ಪ್ರಾರಬ್ಧ ಆಗಾಮಿ ಎಂಬ ಕರ್ಮತ್ರಯಂಗಳು ತಾನಲ್ಲ. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬ ಷಟ್‌ಚಕ್ರಗಳು ತಾನಲ್ಲ. ಜಾಗ್ರತ್, ಸ್ವಪ್ನ, ಸುಷುಪ್ತಿ, ತೂರ್ಯ, ತೂರ್ಯಾತೀತವೆಂಬ ಪಂಚಾವಸ್ಥೆಗಳು ತಾನಲ್ಲ. ಜ್ಞಾತೃ, ಜ್ಞಾನ, ಜ್ಞೇಯವೆಂಬ ಜ್ಞಾನತ್ರಯಂಗಳು ತಾನಲ್ಲ. ಯಮ ನಿಯಮಾಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗಂಗಳು ತಾನಲ್ಲ. ಪ್ರಕೃತಿ ಪುರುಷ ನಾದ ಬಿಂದು ಕಳೆಗಳು ತಾನಲ್ಲ. ಊರ್ಧ್ವಶೂನ್ಯ, ಅಧೋಶೂನ್ಯ, ಮಧ್ಯಶೂನ್ಯ, ಸರ್ವಶೂನ್ಯವಾಗಿಹ ಸಹಜ ನಿರಾಲಂಬವೇ ತಾನೆಂದರಿದ ಮಹಾಶರಣಂಗೆ ನಾಮ ರೂಪು ಕ್ರಿಯಾತೀತವಾಗಿಹ ಚಿದ್ಘನವೇ ತನ್ನ ಶಿರಸ್ಸು, ವಾಙ್ಮನಕ್ಕೆ ಗೋಚರಾತೀತವೇ ತನ್ನ ಕಂಗಳು, ಅಚಲಪದವೇ ತನ್ನ ಹಣೆ, ಅಚಲಾತೀತವೇ ತನ್ನ ಹುಬ್ಬು, ನಿರಾಳಪದವೇ ತನ್ನ ನಾಸಿಕ, ನಿರಂಜನಾತೀತವೇ ತನ್ನ ಉನ್ಮನಿ, ನಿಗಮಾತೀತವೇ ತನ್ನ ಕರ್ಣದ್ವಯ, ಸಕಲಶಾಸ್ತ್ರಂಗಳೇ ಕುಚದ್ವಯ, ವೇಙಂಗಳೇ ತನ್ನ ಮುಖ, ಉಪನಿಷತ್ತುಗಳೇ ತನ್ನ ಗಡ್ಡಗಳು. ಪುರಾಣಂಗಳೇ ತನ್ನ ಮೀಸೆ, ಚಿನ್ನಾದ ಚಿದ್ಬಿಂದು ಚಿತ್ಕಳೆಗಳೇ ತನ್ನ ಚಿತ್ತಿನ ಕಳತ್ರಯಸಂಪುಟಂಗಳು, ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ದರ್ಪಣಾಕೃತಿ, ಜ್ಯೋತಿರಾಕೃತಿ, ಅಖಂಡಜ್ಯೋತಿರಾಕೃತಿ, ಅಖಂಡಮಹಾಜ್ಯೋತಿರಾಕೃತಿ, ಅಖಂಡಮಹಾಪರಿಪೂರ್ಣಜ್ಯೋತಿರಾಕೃತಿ, ನಿಃಕಳಾಕೃತಿ, ನಿಃಶೂನ್ಯಾಕೃತಿ, ನಿರಾಲಂಬಾಕೃತಿ, ನಿಃಪ್ರಪಂಚಾಕೃತಿ, ನಿಜಾನಂದಾ

೧–೧ ಷಡೂರ್ಮಿಗಳು (ಮೂ)

ಕೃತಿ, ನಿಃಕಾಮ್ಯಾಕೃತಿ, ನಿರಂಜನಾಕೃತಿ– ಇಂತೀ ಷೋಡಶಾಕೃತಿಗಳೇ ತನ್ನ ಷೋಡಶತತ್ವಂಗಳು ನೋಡಾ. ತನ್ನ ಅಂಡಗಳೇ ಅನಂತ ಸಿಡಿಲು ಮಿಂಚುಗಳು, ತನ್ನ ಕೊರಳೇ ನಿರಾಕುಳ, ತನ್ನ ಭುಜಂಗಳೇ ಅಪ್ರಮಾಣ ಅಗೋಚರ, ತನ್ನ ಹಸ್ತಾಂಗುಲಿಗಳೇ ಪರತತ್ವ, ಶಿವತತ್ವ, ಗುರುಲಿಂಗಚರತತ್ವ, ಕರಣತತ್ವ, ಕೃಪಾ ತತ್ವ, ಚಿತ್ಕಳಾತತ್ವ, ಚಿನ್ಮಣಿತತ್ವ, ಚಿನ್ಮಂತ್ರತತ್ವಂಗಳು ನೋಡಾ. ಚಿಚ್ಚಂದ್ರ ಚಿತ್ಸೂರ್ಯ ಚಿದಗ್ನಿ ತತ್ವಂಗಳೇ ತನ್ನ ಮಣಿಮಾಲಿಕೆ ನೋಡಾ. ಪರಬ್ರಹ್ಮ ತನ್ನ ಮುಂಭಾಗ. ಮಹಾಪರಿಪೂರ್ಣಬ್ರಹ್ಮವೇ ತನ್ನ ಅಪರಭಾಗ. ಮಹಾ ನಿಜ ಬ್ರಹ್ಮವೇ ಕರಸ್ಥಲದಮೂರ್ತಿ, ಮಹಾಪರಿಪೂರ್ಣ ನಿಜಬ್ರಹ್ಮವೇ ಮನಸ್ಥಲದ ಮೂರ್ತಿ. ನಿಃಕಲಪ್ರಣಮ, ನಿಃಶೂನ್ಯಪ್ರಣಮ, ನಿರಂಜನಪ್ರಣಮ, ಅವಾಚ್ಯ ಪ್ರಣಮ, ಚಿದ್ರೂಪಪ್ರಣಮ, ಚಿನ್ಮಯಪ್ರಣಮ, ಮಹಾಪ್ರಣಮ. ಮುಂತಾದ ವುಗಳೆಲ್ಲವು ತನ್ನ ಸಪ್ತಸ್ವರಂಗಳು ನೋಡಾ. ಆ ಸ್ವರಂಗಳೇ ಸಪ್ತಕೋಟಿ ಘನಮಹಾ ಮಂತ್ರವು. ಆಕಾಶವೇ ತನ್ನ ಧ್ವನಿ, ಚಿದಾಕಾಶವೇ ತನ್ನ ಅಕ್ಷಿಗಳು, ಬಿಂದ್ವಾ ಕಾಶವೇ ತನ್ನ ಶ್ರೋತ್ರಗಳು, ಮಹದಾಕಾಶವೇ ಮಂತ್ರಘೋಷ, ಪೂರ್ಣಾ ಕಾಶವೇ ತನ್ನ ಸಚ್ಚಿದಾನಂದ ಜ್ಞಾನ ನೋಡಾ. ಇಂತೀ ಪಂಚಾಕಾಶವೇ ತನ್ನ ಉನ್ಮನಿಯು. ಅಖಂಡಜ್ಯೋತಿರ್ಮಯ ಲಿಂಗವೇ ತನ್ನ ಗರ್ಭ. ಆ ಗರ್ಭದಲ್ಲಿ ಅನೇಕ ಕೋಟಿ ಸೋಮ ಸೂರ್ಯಾಗ್ನಿ ಪ್ರಕಾಶವಾಗಿಹುದು ನೋಡಾ. ಆ ಪ್ರಕಾಶದೊಳಗೆ ಅನೇಕ ಕೋಟಿ ಈಶ್ವರ ರುದ್ರರು, ಅನೇಕ ಕೋಟಿ ವಿಷ್ಣು ಬ್ರಹ್ಮರು, ಮುನಿಜನ ಚಂದ್ರಾದಿತ್ಯ ದೇವರ್ಕಳು, ಅನೇಕ ಕೋಟಿ ಪಿಂಡ ಬ್ರಹ್ಮಾಂಡಂಗಳಡಗಿರ್ಪವು ನೋಡಾ. ತನ್ನ ನಡುವೇ ಏಕಾಕ್ಷರ, ಕಟಿಯೇ ತ್ರ್ಯಕ್ಷರ, ಪಾದಂಗಳೇ ಪಂಚಾಕ್ಷರ, ಮೊಳಪಾದಂಗಳೇ ಷಡಕ್ಷರಂಗಳು ನೋಡಾ. ತನ್ನ ತೊಡೆಗಳೇ ಷಡ್ವಿಧಸಕೀಲು, ಬಾಹುಗಳೇ ಅಷ್ಟವಿಧಸಕೀಲು, ತನ್ನ ಕಂಠಾಭರಣವೇ ಮಹಾಶೇಷ, ತನ್ನ ನಡೆಯೇ ಶಕ್ತಿರೂಪು, ನುಡಿಯೇ ಶಿವ ರೂಪು, ತನ್ನಾತ್ಮಂಗಳೇ ಸಿಂಹಾಸನ, ತನ್ನ ಸ್ವರವೇ ಪರಾತ್ಪರ ಜ್ಯೋತಿರ್ಮಯ ಮಹಾಘನಲಿಂಗ ನೋಡಾ. ಚಿನ್ಮಯ, ಚಿದ್ರೂಪ, ಚಿತ್ಪ್ರಕಾಶವೇ ತನ್ನ ಹೊಡಕು. ಇಷ್ಟ ಪ್ರಾಣ ಭಾವಲಿಂಗ, ಕ್ರಿಯಾಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ಮೊದಲಾದ ಇನ್ನೂರು ಹದಿನಾರು ಲಿಂಗಷಟ್ ಸ್ಥಲವೇ ತನ್ನ ತತ್ವಸ್ಥಾನದಲ್ಲಿ ಧರಿಸುವಾಭರಣ ನೋಡಾ. ತನ್ನ ಸುಜ್ಞಾನ ಮಹಾ ಜ್ಞಾನವೇ ಜಡೆಮುಡಿಗಳು. ತನ್ನ ತಾನರಿದ ನಿಜ ಪರಶಿವಜ್ಞಾನವೇ ಪರಮ ಪ್ರಕಾಶ ಚಿದ್ವಿಭೂತಿ ರುದ್ರಾಕ್ಷಿ ಮಹಾಮಂತ್ರ ನೋಡಾ. ತನ್ನ ಚಿದಂಗ ಚಿದ್ಘನಲಿಂಗವರಿದ ನೈಷ್ಠೆ ಜ್ಞಾನಾನುಭಾವ. ಕರುಣಕೃಪೆಯೇ ಪರಮಸಚ್ಚಿದಾ ನಂದ ಗುರುಲಿಂಗ ಜಂಗಮ ಪಾದೋದಕ ಪ್ರಸಾದ ನೋಡಾ. ತನ್ನ ಸ್ವಾತ್ಮ ಜ್ಞಾನದಿಂದ ತನ್ನ ತಾನರಿದರೆ, ನಾದಬಿಂದುಗಳಿಗತೀತ ತತ್ವಮಸಿವಾಕ್ಯಂಗಳ ಮೀರಿ ತೋರುವ ಅನಾದಿ ಶರಣ ನೋಡಾ. ತಾನೇ ನಿಃಶಬ್ದ ನಿಃಕಳಂಕ ನಿಃಶೂನ್ಯ

ನಿರಂಜನ ನಿರಾಲಂಬ ನಿರವಯ ಬಯಲೊಳಗಣ ಮಹಾಬಯಲು ನೋಡಾ. ತನ್ನಿಂದನ್ಯವಾದ ಪರವಸ್ತು ಮತ್ತೊಂದಿಲ್ಲ. ತಾನೇ ಸ್ವಯಂಜ್ಯೋತಿರ್ಮಯ ಪರತತ್ವಮೂರ್ತಿ ಅನಾದಿಲಿಂಗ ಜಂಗಮಸ್ವರೂಪು ಅಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮದೇವಾ.

೮೦

(೨) ಅಯ್ಯಾ, ಸರ್ವಲೋಕ ತಾನಿರ್ದಲ್ಲಿ, ತನ್ನಿಂದಧಿಕವಸ್ತು ಮತ್ತೊಂದಿಲ್ಲವಾಗಿ, ಎಲ್ಲವು ತನ್ನಾಧೀನವಲ್ಲದೆ ಅದರಾಧೀನ ತಾನಲ್ಲ ನೋಡಾ! ಅಯ್ಯಾ ಪಂಚಬ್ರಹ್ಮ ಪರವಸ್ತು ತಾನಿರ್ದಲ್ಲಿ, ೪೮ ಸಾವಿರ ಮುನಿಗಳೂ, ೩೩ ಕೋಟಿ ದೇವರ್ಕಳೂ, ಅಷ್ಟಾತ್ಮ ಅಷ್ಟತನುಮೂರ್ತಿಗಳೂ, ಸಪ್ತದ್ವೀಪ ಸಾಗರಗಳೂ ತಾನಿರ್ದಲ್ಲಿ. ವೇದಾಗಮ ಪುರಾಣಶಾಸ್ತ್ರ ಉಪನಿಷತ್ತುಗಳೂ ಉತ್ಪತ್ತಿ ಸ್ಥಿತಿ ಲಯಗಳೂ ತಾನಿರ್ದಲ್ಲಿ. ಸಪ್ತಕೋಟಿ ಮಹಾಮಂತ್ರಗಳೂ, ಅಕಾರಾದಿ ಕ್ಷಕಾರಾಂತ್ಯಮಾದ ೫೦ ಅಕ್ಷರಗಳೂ, ೨೧೬ ಭುವನ ಸ್ಥಲಂಗಳೂ ತಾನಿರ್ದಲ್ಲಿ. ಅಂಗತತ್ವ ೨೫, ಲಿಂಗತತ್ವ ೧೧, ಇಂತೀ ೩೬ ತತ್ವಂಗಳೂ ತಾನಿರ್ದಲ್ಲಿ. ಷಟ್ಕಳೆ ದ್ವಾದಶಕಳೆ ಷೋಡಶಕಳೆ ಚೌಷಷ್ಟಿಕಳೆಗಳು ತಾನಿರ್ದಲ್ಲಿ . ತನ್ನಿಂದಧಿಕವಪ್ಪ ವಸ್ತು ಒಂದಿಲ್ಲವಾಗಿ, ತಾನೇ ನಿತ್ಯ ಪರಿಪೂರ್ಣ ಪರಶಿವತತ್ವ ನೋಡಾ ಅಗಮ್ಯ ಅಗೋಚರ, ಅಪ್ರಮಾಣ ಕೂಡಲಸಂಗಮದೇವ.

೮೧

(೩) ಅಯ್ಯಾ, ಅನಂತಕೋಟಿ ಬ್ರಹ್ಮ ವಿಷ್ಣು ರುದ್ರ ದೇವರ್ಕಗಳು ಮನು ಮುನಿಗಳೆಲ್ಲ ಭವಸಂಸಾರದೊಳಗಾದರು ನೋಡಾ. ಅದೆಂತೆಂದೊಡೆ: ಬ್ರಹ್ಮ ನುತ್ಪತ್ಯವೆಂಬ ಸಂಸಾರಕ್ಕೊಳಗಾದ. ವಿಷ್ಣು ಸ್ಥಿತಿ ಎಂಬ ಸಂಸಾರಕ್ಕೊಳಗಾದ. ರುದ್ರನು ಸಂಹಾರವೆಂಬ ಸಂಸಾರಕ್ಕೊಳಗಾದ. ಈಶ್ವರ ತಿರೋಧಾನವೆಂಬ ಸಂಸಾರಕ್ಕೊಳಗಾದ. ಸದಾಶಿವನು ಅನುಗ್ರಹವೆಂಬ ಸಂಸಾರಕ್ಕೊಳಗಾದ. ಮನುಮುನಿಗಳೆಲ್ಲ ಹಠಯೋಗವೆಂಬ ಸಂಸಾರಕ್ಕೊಳಗಾದರು. ದೇವದಾನವ ರೆಲ್ಲ ಅಷ್ಟಭೋಗೈಶ್ವರ್ಯವೆಂಬ ಸಂಸಾರಕ್ಕೊಳಗಾದರು ನೋಡಾ. ಇಂತೀ ಭವ ಸಂಸಾರಕ್ಕೊಳಗಾಗದೆ, ನಮ್ಮ ಶರಣ ಗಣಂಗಳೆಲ್ಲ ತಮ್ಮ ತಾವರಿದು, ತಮ್ಮ ನಿಜ ಚಿದ್ಬೆಳಗ ಬೆರಿಸಿ, ಗುಹ್ಯಾಲಂಪಟ ಜಿಹ್ವಾಲಂಪಟದಲ್ಲಿ ಬೀಳದೆ, ಅವಿರಳಾನಂದ ಬೆಳಗಿನೊಳಗೆ ಸಂತೃಪ್ತರಾಗಿ, ಭವರೋಗವೈದ್ಯ ಶರಣಾಗತರಕ್ಷಾಮಣಿಗಳೆಂದು, ಸಕಲ ಶಾಸ್ತ್ರಾಗಮ ಪುರಾಣಂಗಳಿಂದ ಹೊಗಳಿಸಿ, ಅಯೋನಿಸಂಭವರೆನಿಸಿ, ಪಾವನಾರ್ಥವಾಗಿ ತಮ್ಮ ನಿಜ ಚಿದ್ಬೆಳಗಿನೊಳಗೆ ಮತ್ತೆಂದಿನಂತೆ ಬಯಲೊಳಗೆ ಮಹಾ ಬಯಲಾದರು ನೋಡಾ. ಅಯ್ಯಾ, ಜ್ಞಾನೇಂದ್ರಿಯ ಕರ್ಮೇಂದ್ರಿಯ, ೧[ಭಾವೇಂದ್ರಿಯಂಗಳು]೧ ತಾನಿರ್ದಲ್ಲಿ, ಅವು ತನ್ನಾಧೀನದಲ್ಲಿ ಆಡುತ್ತಿಹವಲ್ಲದೆ ಸ್ವತಂತ್ರವಿಲ್ಲ. ತಾನೇ ಸ್ವತಂತ್ರ ಪರಬ್ರಹ್ಮ ಕಾಣಾ. ಕಲ್ಲು ಮಣ್ಣು ಮರ ಪಂಚ

೧–೧ ಬುದ್ಧೀಂದ್ರಿಯಂಗಳು(ಮೂ)

ಲೋಹದ ದೇವರು ದೇವರಲ್ಲ. ಕಾಶೀ, ರಾಮೇಶ್ವರ, ಗೋಕರ್ಣ, ಕೇದಾರ ಮೊದಲಾದ ತೀರ್ಥಕ್ಷೇತ್ರಂಗಳು ದೇವರಲ್ಲ. ತನ್ನ ತಾನರಿದು ತಾನಾರೆಂಬ ತಿಳಿವುಂಟಾದರೆ, ತಾನೇ ದೇವಾಧಿದೇವ ಸಕಲಾಧಿನಾಥ ಪರಶಿವಲಿಂಗ ನೋಡಾ ಅಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮದೇವಾ.

೮೨

(೪) ಅಯ್ಯಾ, ನಾಸಿಕದ ತುದಿಯಲ್ಲಾಡುವ ಪ್ರಾಣವಾಯು ದೇವರೆಂಬರು; ಅದು ದೇವರಲ್ಲ ನೋಡಾ. ಅದೆಂತೆಂದೊಡೆ : ಪ್ರಾಣವಾಯು ನಾಸಿಕದಿಂದ ಹನ್ನೆರಡಂಗುಲಪ್ರಮಾಣ ಹೊರಹೊರಟು, ಎಂಟಂಗುಲ ಪ್ರಮಾಣದಿಂದ ತಿರುಗಿ, ನಾಲ್ಕಂಗುಲಪ್ರಮಾಣದಿಂದ ಖಂಡಿಸಿ ಬಡಿದು ತಿರುಗುವುದು ನೋಡಾ. ಇಂತು ದಿನ ೧ ಕ್ಕೆ ೨೧೬೦೦ ಸ್ವರಗಳು ತಿರುಗಿ, ೬೦೦ ಸ್ವರಗಳು ಖಂಡಿಸಿ, ಮೃತವಾಗುವ ಪ್ರಾಣವಾಯುವ ದೇವರೆಂಬುವ ಗುರುದ್ರೋಹಿಗಳಂ ಎನಗೊಮ್ಮೆ ತೋರದಿರಯ್ಯ. ಈಡಾ ಪಿಂಗಳ ಸುಷುಮ್ನ ನಾಳದಲ್ಲಾಡುವ ಚಂದ್ರಸೂರ್ಯಾಗ್ನಿ ಸ್ವರ ಜೀವನೇ ದೇವರೆಂಬರು. ಅದು ದೇವರಲ್ಲ. ಜೀವಸ್ವರಂಗಳಿಗೆ ಸೂತ್ರವಾದ ಪರಬ್ರಹ್ಮವೇ ತಾನೆಂದರಿದೊಡೆ ತಾನೇ ದೇವ ನೋಡಾ. ಅಯ್ಯಾ, ಷಟ್‌ಚಕ್ರದೊಳಗಣ ಅಕ್ಷರ, ಅಧಿದೇವತೆ, ಶಕ್ತಿ ಭಕ್ತಿ ಸಾದಾಖ್ಯಂಗಳು ದೇವರೆಂಬರು ; ಅವು ದೇವರಲ್ಲ ನೋಡಾ. ಬ್ರಹ್ಮಚಕ್ರ ಸಹಸ್ರದಳ ಪದ್ಮದೊಳು ದೇವರಿಹುದು, ಆ ದೇವರ ಕಾಣಬೇಕೆಂದು ಸ್ವರ್ಗ ಮರ್ತ್ಯಗಳಿಗೆ ಹಿತವಾಗಿಹ ಅನ್ನಪಾನಂಗಳಂ ಬಿಟ್ಟು, ತನುವ ದಂಡಿಸಿ, ಸ್ವಸ್ಥಪದ್ಮಾಸನದಲ್ಲಿ ಕುಳ್ಳಿರ್ದು, ಮೂಲವಾಯುವಂ ಬಂಧಿಸಿ ಅಗ್ನಿಜ್ವಾಲೆಯನೆಬ್ಬಿಸಿ, ಸುಷುಮ್ನನಾಳತುದಿಯ ನಡರಿಸಿ, ಅಮೃಲೋಕ್ಯದ್ವಾರದಿ ಜಿಹ್ವೆಯ ತುದಿಯನೇರಿಸಿ ಅಮೃತವನುಂಡು, ಅಲ್ಲಿ ದೇವರ ಕಾಣದೆ, ವಾತ ಪಿತ್ತ ಶ್ಲೇಷ್ಮಂಗಳಂ ಕುಡಿವ ಸತ್ಕರ್ಮಯೋಗಿಗಳು ಕೋಟ್ಯಾನುಕೋಟಿ. ಅಲ್ಲಿಂದ ಮೇಲೆ ಶಿಖಾಚಕ್ರ ತ್ರಿದಳದೊಳು ದೇವರಿಹುದೆಂದು, ಈಡಾ ಪಿಂಗಳ ಸುಷುಮ್ನವಾಯು ಸೂಸಲೀಯದೆ, ಕುಲಾಲನ ಚಕ್ರದೋಪಾದಿಯಲ್ಲಿ ಒಂದು ಸುತ್ತು ಬಾಹನ್ನಬರ ಸಾವಿರ ಸುತ್ತಿನಿಂದ ಮನವ ನಿಲ್ಲಿಸಿ, ಆ ಮನ ಪವನ ಸಂಯೋಗದಿಂದ, ಏಕಾಗ್ರಚಿತ್ತರಾಗಿ, ದೇವರ ಕಂಡಿಹೆವೆಂದು ನೋಡಿದವರು ಆ ದೇವರ ಕಾಣದೆ ಹೋದ ಲಂಬಿಕಾಯೋಗಿಗಳು ಕೋಟ್ಯಾನುಕೋಟಿ. ಅದರಿಂ ಮೇಲೆ, ಪಶ್ಚಿಮಚಕ್ರ ಮೇಲುಗಿರಿ ಸಿಂಹಾಸನದ ಮೇಲೆ ದೇವರನ್ನು ಲಕ್ಷ್ಯವಿಟ್ಟು ನೋಡಿಹೆನೆಂಬರು. ಆ ದೇವರ ಕಾಣದೆ ಕೆಟ್ಟಳಿದ ಭಿನ್ನಯೋಗಿಗಳು ಕೋಟ್ಯಾನುಕೋಟಿ. ಇಂತೀ ಕರ್ಮಯೋಗಿ, ಲಂಬಿಕಾಯೋಗಿ, ಭಿನ್ನಯೋಗಿ, ಧ್ಯಾನಯೋಗಿಗಳು, ಯೋಗಂಗಳಂ ಸಾಧಿಸಿ, ದೇವರ ಕಂಡಿಹೆವೆಂದು ಹೋದವರು ಆ ದೇವರ ಕಾಣದೆ ಹೋದರು ನೋಡಾ. ಅಯ್ಯಾ, ಅಣು ಚಕ್ರ ದೇವರಲ್ಲ, ಕೋದಂಡಚಕ್ರ ದೇವರಲ್ಲ, ಹೃದಯಕಮಲದಲ್ಲಿ ಲಕ್ಷ್ಯವಿಟ್ಟು ನೋಡುವ, ಭ್ರೂಮಧ್ಯದಲ್ಲಿ ಲಕ್ಷವಿಟ್ಟು ನೋಡುವ,

ನಾಸಿಕಾಗ್ರದಲ್ಲಿ ಲಕ್ಷ್ಯವಿಟ್ಟು ನೋಡುವ ದೇವರು ದೇವರಲ್ಲ. ಮತ್ತಂ ದೇವರೆಂತೆಂದೊಡೆ : ಅಖಂಡ ಗೋಳಕಾಕಾರ ಜ್ಯೋತಿರ್ಮಯವಾಗಿ ನಿಃಕಳಂಕ ಪರಶಿವಲಿಂಗವ ತಾನೆಂದರಿದೊಡೆ, ತಾನೇ ಪರಾತ್ಪರದೇವ ನೋಡಾ ಅಗಮ್ಯ, ಅಗೋಚರ ಅಪ್ರಮಾಣ ಕೂಡಲಸಂಗಮದೇವಾ.

೮೩

(೫) ಮತ್ತೊಂದು ವೇಳೆ ಸಪ್ತಧಾತು, ಸಪ್ತವ್ಯಸನವ ಕೂಡಿವರ್ತಿಸುವುದಯ್ಯ. ಅದೆಂತೆಂದೊಡೆ : ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ ಮಜ್ಜೆ ಶುಕ್ಲವೆಂಬ ಧಾತುಗಳ ಅನ್ನ ನೀರಿನಿಂದ ಪೋಷಿಸಿಕೊಂಡು, ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ಉತ್ಸಾಹವ್ಯಸನ, ವಿಶ್ವವ್ಯಸನ, ಸೇವಕವ್ಯಸನವೆಂಬ ಸಪ್ತವ್ಯಸನಿಯಾಗಿ ಷಡೂರ್ಮಿ ಷಡ್ಭಾವವಿಕಾರದಿಂದ ಎನ್ನ ತೊಳಲಿಸಿ, ಬಳಲಿಸಿ, ಅಳಲಿಸಿತಯ್ಯ ಕುಲಗೇಡಿ ಜೀವಮನವು. ಈ ಜೀವಮನದ ಸಂಗವ ಪರಿಹರಿಸಿ ರಕ್ಷಿಸಯ್ಯ ದುರಿತಹರಮೂರ್ತಿ ಶ್ರೀ ಗುರುಲಿಂಗ ಜಂಗಮವೆ.

೮೪

(೬) ಪಾದೇಂದ್ರಿಯ ಪಾಯ್ವಿಂದ್ರಿಯ, ಗುಹ್ಯೇಂದ್ರಿಯ, ಪಾಣೇಂದ್ರಿಯ ವಾಗೇಂದ್ರಿಯ, ಘ್ರಾಣೇಂದ್ರಿಯ, ಜಿಹ್ವೇಂದ್ರಿಯ, ನೇತ್ರೇಂದ್ರಿಯ ಮೊದಲಾದ ಸಮಸ್ತ ಇಂದ್ರಿಯವಿಷಯ ವ್ಯಾಪಾರದಿಂದ ಹುಸಿ, ಕಳವು, ಪರದಾರ, ಪರನಿಂದೆ, ಪರಹಿಂಸೆ, ಪರದೈವ, ಪರಕಾಂಕ್ಷೆ, ಅನೃತ, ಅಪಶಬ್ದ ಮೊದಲಾದವಕ್ಕೆ ಪರಮ ಪಾತಕತನದಿಂದ ಹೊಡೆದಾಡಿ, ಅರ್ಥಪ್ರಾಣಾಭಿಮಾನವ ಕಳಕೊಂಡು ಭವ ಭಾರಿಯಾಗಿ ನಷ್ಟವಾಯಿತ್ತಯ್ಯಾ ಎನ್ನ ಹೃದಯೇಂದ್ರಿಯ. ಇಂತು ಇಂದ್ರಿಯಂಗಳ ದುಃಸಂಗದಿಂದ ಜಡಶರೀರಿಯಾಗಿ, ನಿಮ್ಮ ನಿಜಭಕ್ತಿಯ ಮರೆದೆನಯ್ಯ, ಪರಮಾರಾಧ್ಯರಿರವೇ ಇನ್ನೆನಗೆ ಗತಿಪಥವ ತೋರಿಸಯ್ಯ ಮಹಾಪ್ರಭು ಶ್ರೀಗುರು ಲಿಂಗಜಂಗಮವೆ.

೮೫

(೭) ಮತ್ತೊಂದು ವೇಳೆ ಕಾಮವಿಕಾರದಿಂದ ತೊಳಲಿಸಿತಯ್ಯ. ಕ್ರೋಧದ ಸಂದಿನಲ್ಲಿ ಕೆಡಹಿತಯ್ಯ. ಲೋಭದ ಪಾಶದಲ್ಲಿ ನೂಂಕಿಸಿತಯ್ಯ. ಮೋಹ ಮದ ಮತ್ಸರದ ಬಲೆಯಲ್ಲಿ ಶಿಲ್ಕಿಸಿತಯ್ಯ. ಸತ್ವ ರಜ ತಮಗಳೆಂಬ ತ್ರಿಗುಣಂಗಳ ಬಲೆಯಲ್ಲಿ ನುಗ್ಗುನುರಿಮಾಡಿತಯ್ಯ. ಗಂಧ, ರಸ, ರೂಪು, ಸ್ಪರ್ಶ, ಶಬ್ದ ಮೊದಲಾದ ಸಮಸ್ತ ವಿಷಯಂಗಳಲ್ಲಿ ಕಂದಿ ಕುಂದಿಸಿತಯ್ಯ. ಇಂತಹ ದುರಾಚಾರ ದುರ್ಜೀವ ಮನವ ಎಂದಿಂಗೆ ಪರಿಹರಿಸಿಹೆಯೋ ಶ್ರೀಗುರುಲಿಂಗ ಜಂಗಮವೆ.

೮೬

(೮) ಅಯ್ಯಾ, ಒಂದು ಜೀವಾತ್ಮನೇ ನಾಲ್ಕು ತೆರನಾಗಿರ್ಪನಯ್ಯ. ಅದೆಂತೆಂದೊಡೆ : ಒಂದು ಜೀವನೇ ಅಂಡಜಪ್ರಾಣಿಯಾಗಿರ್ಪುದಯ್ಯ. ಮತ್ತೊಂದು

ಜೀವನೇ ಪಿಂಡಜಪ್ರಾಣಿಯಾಗಿರ್ಪುದಯ್ಯ. ಬಳಿಕೊಂದು ಜೀವನೇ ಉದ್ಭಿಜ ಪ್ರಾಣಿಯಾಗಿರ್ಪುದಯ್ಯ. ಮಿಗಿಲೊಂದು ಜೀವನೇ ಜರಾಯುಜಪ್ರಾಣಿಯಾಗಿರ್ಪುದಯ್ಯ. ಈ ಚತುರ್ವಿಧಜೀವನೊಳಗೆ ಏಳುಲಕ್ಷ ಮಲಜೀವನಯ್ಯ. ಏಳುಲಕ್ಷ ಜಡಜೀವನಯ್ಯ. ಏಳುಲಕ್ಷ ಕುಜೀವನಯ್ಯ. ಏಳುಲಕ್ಷ ದುರ್ಜೀವನಯ್ಯ. ಏಳುಲಕ್ಷ ಕಪಟ ಜೀವನಯ್ಯ. ಏಳು ಲಕ್ಷ ಸಂಚಲ ಜೀವನಯ್ಯ. ಏಳು ಲಕ್ಷ ಅಜಡ ಜೀವನಯ್ಯ. ಏಳುಲಕ್ಷ ವಂಚಕ ಜೀವನಯ್ಯ, ಏಳುಲಕ್ಷ ನಿರ್ಮಲ ಜೀವನಯ್ಯ. ಏಳು ಲಕ್ಷ ಸುಜೀವನಯ್ಯ. ಏಳುಲಕ್ಷ ಸಜೀವನಯ್ಯ. ಏಳುಲಕ್ಷ ಪರಮ ಜೀವನಯ್ಯ. ಈ ತೆರದ ಎಂಬತ್ತು ನಾಲ್ಕು ಲಕ್ಷ ಜೀವಪ್ರಾಣಿಗಳೆಲ್ಲ ಶಿವನ ಪೂರ್ವಭಾಗಪ್ರವೃತ್ತಿಮಾರ್ಗದ ಕರ್ಮೇಂದ್ರಿಯ ಜ್ಞಾನೇಂದ್ರಿಯ ದ್ವಾದ ಶೇಂದ್ರಿಯಂಗಳಲ್ಲಿ ಜೀವಿಸುತ್ತಿಪ್ಪವಯ್ಯ. ಆ ದ್ವಾದಶ ಜೀವನ ವರ್ತನ ಭೇದ ದಿಂದ ಒಂದು ಜೀವನೇ ಹನ್ನೆರಡು ತೆರನಾಗಿರ್ಪನಯ್ಯ. ಅದರ ಗುಣಭೇದ ವೆಂತೆಂದೊಡೆ: ಉಚ್ಛಿಷ್ಟವ ತಿಂದು ಬದುಕುವ ಜೀವನೇ ಮಲಜೀವನಯ್ಯ .ಮಾಂಸಭಕ್ಷಣದಿಂದ ಬದುಕುವ ಜೀವನೇ ಜಡಜೀವನಯ್ಯ. ಚೋರತನದಿಂದ ಬದುಕುವ ಜೀವನೇ ಕುಜೀವನವಯ್ಯ. ಚಾಡಿಛಿದ್ರ ಚೋರತನದಿಂದ ಬದು ಕುವ ಜೀವನೇ ದುರ್ಜೀವನಯ್ಯ. ಕಡಿದು, ಹೊಡೆದು, ಬಡಿದು, ಬಂಧಿಸಿ ಬದುಕುವ ಜೀವನೇ ಕಪಟಜೀವನಯ್ಯ, ಗಾರುಡಿಗವಿದ್ಯೆಯಿಂದ ಬದುಕುವ ಜೀವನೇ ಸಂಚಲಜೀವನಯ್ಯ. ದೇಶಕ್ಕೊಂದು ಭಾಷೆ ವೇಷವ ಧರಿಸಿ ಅಜಾತ ತನದಿಂದ [ಡೊಂಬಜಾತಿಗಾರನಂತೆ] ಬದುಕುವ ಜೀವನೇ ವಂಚಕಜೀವನಯ್ಯ. ಷಟ್‌ಕೃಷಿ ವ್ಯಾಪಾರದೊಳಗೆ ವ್ಯವಹರಿಸಿ ಸತ್ಯದಿಂದ ಬದುಕುವ ಜೀವನೇ ನಿರ್ಮಲಜೀವನಯ್ಯ. ಆವ ಮತವಾದರೇನು ಆವ ಜಾತಿಯಾದರೇನು ಮಲ ಮಾಯ ಸಂಸಾರಬಂಧಮಂ ತ್ಯಜಿಸಿದ ಅಷ್ಟಾಂಗಯೋಗಾಭ್ಯಾಸಿಯೇ ಅಜಡ ಜೀವನೆನಿಸುವನಯ್ಯ, ಅಷ್ಟಾಂಗಯೋಗಮಂ ತ್ಯಜಿಸಿ ಶ್ರೀಗುರು ಪರಮಾ ರಾಧ್ಯನ ಉಪಾವಸ್ಥೆಯಂ ಮಾಡುವ ಜೀವನೇ ಸುಜೀವನಯ್ಯ. ಚಿದ್ಘನ ಶ್ರೀಗುರು ದೇವನ ಪ್ರತ್ಯಕ್ಷವಮಾಡಿಕೊಂಡು ಘನಗುರುಭಕ್ತಿಯಲ್ಲಿ ನೈಷ್ಠತ್ವವುಳ್ಳಾತನೇ ಸಜೀವನೆನಿಸುವನಯ್ಯ. ಶ್ರೀಮದ್ಘನಗುರುವಿನ ಮೆಚ್ಚಿಸಿ, ಇಷ್ಟ, ಪ್ರಾಣ ಭಾವ ಲಿಂಗವ ಪಡೆದಾತನೇ ಪರಮಜೀವನೆನಿಸುವನಯ್ಯ. ಇಂತೀ ಜೀವನ ಬುದ್ಧಿಯ ಗುರುಕಟಾಕ್ಷದಿಂ ನಿವೃತ್ತಿಯ ಮಾಡಿ, ತ್ರಿವಿಧಾಂಗವೆಲ್ಲ ದೀಕ್ಷಾತ್ರಯಂಗಳಿಂದ ಶುದ್ಧಪ್ರಸಾದವಾಗಿ, ತ್ರಿವಿಧಮನವೆಲ್ಲ ಶಿಕ್ಷಾತ್ರಯಂಗಳಿಂದ ಸಿದ್ಧಪ್ರಸಾದವಾಗಿ, ಭಾವತ್ರಯಂಗಳೆಲ್ಲ ಮೋಕ್ಷತ್ರಯಂಗಳಿಂದ ಪ್ರಸಿದ್ಧಪ್ರಸಾದವಾಗಿ, ಸತ್ಯವಾಣಿ, ಸತ್ಯಕ್ರಿಯೆ ಉಳಿದವಯವಂಗಳೆಲ್ಲ ಸತ್ಯವನ್ನೇ ಹಾಸಿ, ಸತ್ಯವನ್ನೇ ಹೊದ್ದು , ಸತ್ಯ ಕಾಯಕವನೇ ಮಾಡಿ, ಮರ್ತ್ಯದಲ್ಲಿ ಬಂದೂ ಬಾರದಂತೆ ಸತ್ಯ ಸದಾಚಾರದಿಂದ ನಡೆ ನುಡಿ ಸಂಪನ್ನರೇ ಕೇವಲ ಪರಶಿವ ಗಣಂಗಳು ನೋಡಾ ಸಂಗನ ಬಸವೇಶ್ವರಾ.

೮೭

(೯) ಅಯ್ಯಾ ನಿಃಕಲಪರಶಿವತತ್ವ ಮಹಾಘನ ಚಿದಾವರಣದ ಸ್ವರೂಪ ಪರಶಿವಲಿಂಗ ಸದ್ಗುರುಮುಖದಿಂ ತಮ್ಮ ಭಾವ, ಮನ, ಹೃದಯ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ಕರಕಂಜಮಧ್ಯದಲ್ಲಿರಿಸಿ ಪರಿಪರಿಯಿಂದರ್ಚಿಸಿ, ನಿರ್ವಂಚಕತ್ವದಿಂದ ಅರ್ಥ ಪ್ರಾಣಾಭಿಮಾನಂಗಳಂ ಸಮರ್ಪಿಸಿ, ಸರ್ವಾಚಾರ ಸಂಪತ್ತಿನಾಚರಣೆಯಲ್ಲಿ ದೃಢಚಿತ್ತದಿಂದ ನಿಂದ ಮಹಂತ ಸದ್ಭಕ್ತ ಶಿವಶರಣನಿರ್ದ ಲೋಕವೇ ರುದ್ರಲೋಕ, ಶಿವಲೋಕ, ನಾಗಲೋಕ, ಶಾಂಭವಲೋಕವಯ್ಯ, ಆತನ ಭಕ್ತಪ್ರಿಯರೇ ರುದ್ರಗಣಂಗಳು, ಶಿವಗಣಂಗಳು, ದೇವಗಣಂಗಳು ಶಾಂಭವಮಹಾಗಣಂಗಳಯ್ಯ. ಆತನಿರ್ದ ಊರೇ ಶಿವಮಂದಿರ ಶಿವಾಲಯ ಶಿವಕ್ಷೇತ್ರವಯ್ಯ. ಆತನ ನಡೆ ನುಡಿ ಕ್ರಿಯಾಚಾರದಲ್ಲಿ ಒಡೆವೆರೆದ ಸತ್ಕ್ರಿಯಾ ಶಕ್ತಿಯೇ ನಾಗಕನ್ಯೆ, ರುದ್ರಕನ್ನೆ. ಆತನ ಅರ್ಚನಾರ್ಪಣಸ್ಥಲವೇ ಮಹಾಘನ ಶೂನ್ಯಸಿಂಹಾಸನವಯ್ಯ. ಆತನಾಚರಣೆಯಿಂದಡಿಯಿಟ್ಟ ಜಲವೇ ದೇವಗಂಗೆ, ಶಿವಗಂಗೆ, ಪಾವನಗಂಗೆ, ಪರಿಪೂರ್ಣಗಂಗಾಸ್ವರೂಪವಾದ ಮಹಾಗಂಗಾ ತೀರ್ಥವಯ್ಯ ಆತನು ದಯವಿಟ್ಟು ಪರುಷದೃಷ್ಟಿಯಿಂದ ನೋಡಿದ್ದು ತಟ್ಟು ಮುಟ್ಟು ಸೋಂಕುಗಳೆಲ್ಲ ನಿಜಮೋಕ್ಷಸ್ವರೂಪ ನೋಡಾ ಸಂಗನಬಸವೇಶ್ವರಾ.

೮೮

(೧೦) ನಾವು ಶಿವಭಕ್ತರೆಂದು ಹೇಳುವ ಅಣ್ಣಗಳಿರಾ ಕೇಳಿರಣ್ಣಾ. ಶಿವಭಕ್ತರಾಗುವ ನೆಲೆಕಲೆಯ ಅರಿ ವೈರಿಗಳ ಹೆಡೆಮುಡಿಗಟ್ಟಿ, ಅಷ್ಟಮದವ ಜೊಳ್ಳುಮಾಡಿ, ತೂರಿ, ಸಪ್ತವ್ಯಸನಂಗಳ ಕಂಕಣವ ಮುರಿದು, ಸದ್ಭಕ್ತಿ ನೆಲೆಕಲೆ ತಿಳಿದು, ಅಷ್ಟಾವರಣದ ಗುಟ್ಟ ಮುಟ್ಟಿನೋಡಿ, ಪಂಚಾಚಾರದ ಭೇದವನರಿದು, ಷಡ್ವಿಧ ಲಿಂಗಾಂಗದ ಮೂಲವ ತಿಳಿದು, ಷಡ್ವಿಧ ಅರ್ಪಿತ ಅವಧಾನವನಾಚರಿಸಿ, ಷಟ್‌ಸ್ಥಲಮಾರ್ಗವ ಹಿಡಿದಾಚರಿಸುವ ಸದ್ಭಕ್ತರಿಗೆ ಅತಿ ಭೃತ್ಯನಾಗಿ ಹಮ್ಮುಬಿಮ್ಮು ಗಳಿಲ್ಲದೆ ನಡೆನುಡಿ ಸಂಪನ್ನರಾದವರೇ ಸದ್ಭಕ್ತರು ಕಾಣಾ ಕಲಿದೇವರದೇವಾ.

೮೯

(೧೧) ಪರಮಾತ್ಮನು ಸ್ವಲೀಲಾನಿಮಿತ್ತ ಸಾಕಾರಸ್ವರೂಪನಾಗಿ,ಪಂಚವಕ್ತ್ರ ದಶಭುಜಂಗಳನು ಧರಿಸಿ,ತನ್ನ ನಿಜಧರ್ಮವನೇ ತನಗಾಧಾರಮಪ್ಪ ವಾಹನಮಂ ಮಾಡಿಕೊಂಡು, ಪಶ್ಚಿಮಮುಖಂಗಳಲ್ಲಿ ಪಂಚಭೂತಂಗಳಿಂ ಸೃಷ್ಟಿಸಿ, ಅವನೇ ಒಂದು ಬ್ರಹ್ಮಾಂಡವಂ ಮಾಡಿಕೊಂಡು, ತನ್ನ ಲೀಲಾಶಕ್ತಿಯಸಂಗದಿಂದ ಅನಂತ ಕೋಟಿ ಜೀವಂಗಳಂ ಸೃಷ್ಟಿಸಿ, ತನ್ನ ಗೂಢಮಪ್ಪ ಮನೋಭಂಡಾರವಂ ತೆಗೆದು, ಆ ಜೀವಂಗಳಿಗದನೇ ಜೀವನವಂ ಮಾಡಿ, ಈ ಬ್ರಹ್ಮಾಂಡವೆಂಬ ತನ್ನ ಪಟ್ಟಣಕ್ಕೂ ಈ ಜೀವಜಾಲಕ್ಕೂ ನಿಜಮನೋಭಂಡಾರವನೆ ಆಧಾರಮಂ ಮಾಡಿ, ತಾನೇ ಸೇವ್ಯನಾಗಿ ಜೀವಂಗಳೇ ಸೇವಕರಾಗಿ ಕ್ರೀಡಿಸುತ್ತಿರಲಾ ಪರಮಾತ್ಮನಿಂದ ಸಲಿಗೆ

ವಡೆದ ಕೆಲವು ಜೀವಂಗಳು ಅಹಂಕರಿಸಿ, ಆ ಪರಶಿವನಲ್ಲಿರ್ಪ ಮನೋ ಭಂಡಾರದಲ್ಲಿ ತಮ್ಮ ಶಕ್ತಿಗೆ ತಕ್ಕಷ್ಟು ಸತ್ಕರಿಸಿಕೊಂಡು, ತದ್ಪಂಚನಾಮನದಿಂ ಪಂಚಭೂತಂಗಳನ್ನು ಸಾಧಿಸಿ, ಅದರಿಂದ ಒಂದು ಪಿಂಡಾಂಡವೆಂಬ ಪಟ್ಟಣಮಂ ಮಾಡಿಕೊಂಡು, ಇಂದ್ರಿಯಂಗಳೆಂಬ ಕೊತ್ತಲಗಳಂ ನಿರ್ಮಿಸಿ, ಆಶೆಯೆಂಬಾಳ್ವೇರಿಯಂ ಸೃಜಿಸಿ, ತನ್ಮಧ್ಯದಲ್ಲಿ ಅಂತರಂಗವೆಂಬುದೊಂದು ಅರಮನೆಯಂ ಕಟ್ಟಿ, ಅಲ್ಲಿರ್ದುಕೊಂಡು ಜೀವನು ತನ್ನ ಮನೋವಂಚನಾಭಂಡಾರವಂ ವೆಚ್ಚಿಸುತ್ತ ವಿಷಯಂಗಳೆಂಬ ಮನ್ನೆಯರಂ ಸಂಪಾದಿಸಿ, ನಿಜಪುರದ್ವಾರಂಗಳಲ್ಲಿ ಕಾಹನಿಟ್ಟು, ಅಂತಃಕರಣಚತುಷ್ಟಯಮೆಂಬ ಶಿರಃಪ್ರಧಾನರಂ ಸಂಪಾದಿಸಿ, ತನ್ಮಂತ್ರಾಲೋಚನೆಯಿಂ ಸಾಮ, ಭೇದ, ದಾನ, ದಂಡವೆಂಬ ಕರಿ ತುರಗ, ರಥ ಪದಾತಿಗಳಂ ಕೂಡಲಿಟ್ಟು, ಕರ್ಮವೆಂಬ ಸೇನಾನಿಗೆ ಪಟ್ಟಮಂ ಕಟ್ಟಿ, ತನ್ನಲ್ಲಿರ್ಪ ನಾನಾದಳಂಗಳಂ ಸೇನಾಪತಿಯ ವಶಮಂ ಮಾಡಿ ನಾದ ಬಿಂದು ಕಳೆಗಳೆಂಬ ಶಕ್ತಿಗಳಂ ಪರಿಣಯಮಾಗಿ, ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬರಮನೆಗಳೊಳಗೆ ಕಳೆಯನಾದದಲ್ಲಿ ಕೆಲವುತ್ತಂ ಬಿಂದುವಿನಲ್ಲಿ ಫಲಿಸಿ, ಫಲಸುಖಂಗಳನನುಭವಿಸುತ್ತಿರ್ಪ ಜೀವನೆಂಬರಸಿನನುಮತವಿಡಿದು, ಕರ್ಮಸೇನಾನಿಯು ಸಕಲ ದಳಂಗಳೊಳಗೆ ಕೂಡಿ ವಿಷಯಂಗಳೆಂಬ ಮನ್ನೆಯರಂ ಮುಂದುಮಾಡಿಕೊಂಡು, ಪ್ರಪಂಚವೆಂಬ ರಾಜ್ಯವಂ ಸಾಧಿಸಿ, ತದ್ರಾಜ್ಯದಲ್ಲಿ ಬಂದ ಪುತ್ರ, ಮಿತ್ರ, ಕಳತ್ರ, ಧನ ಧಾನ್ಯ ವಸ್ತು ವಾಹನಾಲಂಕಾರಾದಿಗಳನ್ನು ಕಾಯಪುರಕ್ಕೆ ತಂದು, ಜೀವನೆಂಬರಸಿಗೆ, ಒಪ್ಪಯಿಸುತಿರಲು, ಜೀವನು ಸಂತೋಷಿಸಿ, ತಾನು ಸಂಪಾದಿಸಿದ ಸಕಲ ದ್ರವ್ಯವನ್ನು ತನ್ನ ಮೂಲ ಮನೋಭಂಡಾರದಲ್ಲಿ ಬೆರಿಸಿ, ಬಚ್ಚಿಟ್ಟು ಅಹಂಕರಿಸಿ, ಸಕಲಕ್ಕೂ ತಾನೇ ಕರ್ತೃವೆಂದು ಬೆರೆತು, ಪರಮಾತ್ಮನಂ ಬೆರೆತು, ಸೇವ್ಯ ಸೇವಕರೆಂಬ ವಿವೇಕವನರಿತು, ಅಧರ್ಮ ವಾಹನಾರೂಢನಾಗಿ, ತನ್ನ ತಾನರಿಯದೆ, ಕಾಮವಶನಾಗಿ ಸಂಚರಿಸುತಿರ್ಪ ಈ ಜೀವನ ಅಹಂಕಾರಮಂ ಸಂಹರಿಸುವ ನಿಮಿತ್ತವಾಗಿ ಪರಮಾತ್ಮನು ಕಾಲನಂ ಸೃಷ್ಟಿಸಿ, ವ್ಯಾಧಿಪೀಡನಗಳೆಂಬ ಬಲಂಗಳಂ ಕೂಡಲಿಟ್ಟು, ದುಃಖವೆಂಬ ಸಾಮಗ್ರಿಯಂ ಒದಗಿಸಿಕೊಟ್ಟು, ಕ್ರೋಧವೆಂಬ ಮನೆಯಾಳಿಂಗೆ ತಮೋಗುಣಂಗಳೆಂಬ ಬಲುಹಗಾರರಂ ಕೂಡಿಕೊಟ್ಟು, ಈ ಕಾಯಪುರಮಂ ಸಾಧಿಸೆಂದು ಕಳುಹಲು, ಆ ಸದಾಶಿವನಾಜ್ಞಾಶಕ್ತಿಯಿಂದ ಕಾಲನು ಸಕಲ ಬಲ ಸಮೇತನಾಗಿ ಬಂದು, ಕಾಯಪುರಕ್ಕೆ ಸಲುವ ಪ್ರಪಂಚರಾಜ್ಯವಂ ನೆರೆ ಸೂರೆಮಾಡಲು, ಕರಣಂಗಳೆಂಬ ಪ್ರಜೆಗಳು ಕೆಟ್ಟೋಡಿ ಬಂದು, ಜೀವನೆಂಬ ಅರಸಿಗೆ ಮೊರೆಯಿಡಲು, ಅದಂ ಕೇಳಿ ಆಗ್ರಹಪಟ್ಟು, ಕರ್ಮಸೇನಾನಿಗೆ ನಿರೂಪಿಸಲು, ತತ್ಸೇನಾನಿಯು ಕಾಯಪುರದಲ್ಲಿರ್ಪ ಸಕಲದಳ ಸಮೇತನಾಗಿ ಬಂದು, ಕಾಲನೊಡನೆ ಯುದ್ಧಮಂ ಮಾಡಿ, ಜಯಿಸಲಾರದೆ ವಿಮುಖನಾಗಿ ಉಪಭೋಗಾದಿ ಸಕಲ ಸುಖಂಗಳಂ ಕೋಳುಕೊಟ್ಟು ಬಂದು ಕೋಟೆಯಂ ಹೊಗಲು, ಜೀವನು ಪಶ್ಚಾತ್ತಾಪದಿಂ ಸಂಶಯಾಯುಕ್ತನಾಗಿ ಕಳವಳಿಸುತ್ತಿರಲು, ಆ ಕಾಲ

ಕಾಯಪುರಮಂ ಒತ್ತರಿಸಿ ಮುತ್ತಿಗೆಯಂ ಹಾಕಿ, ವಿಷಯಮನ್ನೆಯರಂ ಹಸಗೆಡಿಸಿ, ಕೊಂದು, ಕರ್ಮವಂ ನಿರ್ಮೂಲವಂ ಮಾಡಿ, ಅಂತರಂಗಮನೆಯಂ ಕೊಳ್ಳೆಯಂ ಮಾಡಿ, ನಾದಬಿಂದುಕಳಾಶಕ್ತಿಯಂ ಸೆರೆವಿಡಿದು, ಕಾಯಪುರಮಂ ಕಟ್ಟಿಕೊಳ್ಳಲು, ಜೀವನು ಭಯಭ್ರಾಂತನಾಗಿ, ಆ ಮೂಲ ಮನೋಭಂಡಾರ ಮಾತ್ರಮಂ ಕೊಂಡು, ತತ್ಪುರಮಂ ಬಿಟ್ಟು ಅನೇಕ ಯಾತನೆಪಟ್ಟು ಓಡಿ, ಮರಳಿ ಮರಳಿ ಜೀವನು ಪುರಂಗಳಂ ಸಂಪಾದಿಸಲು, ತತ್ಸಂಪಾದಿತ ಪುರಂಗಳಂ ಕಾಲನು ಸಾಧಿಸುತ್ತಿರಲು, ಜೀವನು ಅಹಂಕಾರವಳಿದು, ಆಸ್ಪದವಿಲ್ಲದೆ ತನಗೆ ಕರ್ತೃವಾರೆಂಬುದಂ ಕಾಣದೆ, ವಿಚಾರಪಟ್ಟು ದುಃಖಿಸುತ್ತಿರ್ಪ ಜೀವನಿಗೆ ಕರುಣದಿಂ ಪರಮಾತ್ಮನು ಜ್ಞಾನದೃಷ್ಟಿಯಂ ಕೊಡಲು ತದ್ಬಲದಿಂ ಶಿವನೇ ಕರ್ತೃ ತಾನೇ ಭೃತ್ಯನೆಂಬುದಂ ತಿಳಿದು ಶಿವಧ್ಯಾನಪರಾಯಣನಾಗಿ, ಶಿವಧಾರಣ ಧರ್ಮ ಪದಮಂ ಪಿಡಿದು ಪಳಗುತ್ತಿರಲು, ತದ್ಧರ್ಮವೇ ಗುರುರೂಪಮಾಗಿ, ತನ್ನಲ್ಲಿರ್ಪ ಶಿವನಂ ಜೀವಂಗೆ ತೋರಿಸಲು, ಜೀವಂ ಹಿಗ್ಗಿ, ತಾನು ಸಂಪಾದಿಸಿದ ಪುರವನೇ ಶಿವಪುರವಂ ಮಾಡಿ, ಧರ್ಮಾದಿ ಸಕಲ ವಿಷಯ ಬಲಂಗಳಂ ಶಿವನ ವಶಂ ಮಾಡಿ, ಆ ಪಟ್ಟಣದೊಳಯಿಂಕೆ ಬಿಜಯಂಗೈಸಿಕೊಂಡು ಹೋಗಿ, ಅಂತರಂಗದ ಮನೆಯೊಳಗೆ ಜ್ಞಾನಸಿಂಹಾಸನದ ಮೇಲೆ ಕುಳ್ಳಿರಿಸಿ, ಪಟ್ಟಮಂ ಕಟ್ಟಿ, ತನ್ನ ಸರ್ವಸ್ವಮಂ ಶಿವನಿಗೆ ಸಮರ್ಪಿಸಿ, ತಾನು ಸತ್ಕರಿಸಿಕೊಂಡು ಬಂದ ಮನೋಭಂಡಾರಮಂ ಶಿವನಡಿಯಂ ಸೇರಿಸಲು, ಸದಾಶಿವನು ಪ್ರಸನ್ನಮುಖನಾಗಿ, ದಯೆಯಿಂ ಪರಿಗ್ರಹಿಸಿ ಜೀವನನು ಸಜ್ಜೀವನನು ಮಾಡಿ ಕೂಡಿಕೊಂಡುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೦

(೧೨) ಕರ್ಣದಲ್ಲಿ ಲಯವಂ ಹೊಂದಿ, ಜಿಹ್ವೆಯಲ್ಲಿ ಸೃಷ್ಟಿಯಪ್ಪ ನಾದವೇ ಸೂಕ್ಷ್ಮಮನೋರೂಪಮಾಗಿಹುದು. ಜಿಹ್ವೆಯಲ್ಲಿ ಲಯವನ್ನು ಹೊಂದಿ ಗುಹ್ಯೆಯಲ್ಲಿ ಸೃಷ್ಟಿಯಪ್ಪ ಬಿಂದುವೇ ಸ್ಥೂಲಶರೀರರೂಪಮಾಗಿಹುದು. ಬಿಂದುವಿನ ಲಯಕ್ಕೂ ನಾದದ ಸೃಷ್ಟಿಗೂ ಜಿಹ್ವೆಯೇ ಕಾರಣಕಳಾರೂಪಮಾಗಿಹುದು. ನಾದದಲ್ಲಿ ಕೂಡಿ ಭಾವಲಿಂಗದಲ್ಲಿ ಪ್ರಕಾಶಮಾಗಿ ಬ್ರಹ್ಮಯೋನಿಯಲ್ಲಿ ಬಿಟ್ಟ ದಿವ್ಯತೇಜಸ್ಸೇ ಶರೀರಮಾಗಿ ತೋರುತ್ತಿರ್ಪುದೇ ಪರಮನು ಬಿಂದುವಿನಲ್ಲಿ ಕೂಡಿ ಲಿಂಗ ಮುಖದಲ್ಲಿ ಪ್ರಕಾಶಮಾಗಿ ಕರ್ಮಯೋನಿಯಲ್ಲಿ ಬಿಟ್ಟ ತೇಜಸ್ಸೇ ಶರೀರಮಾಗಿ ತೋರುವನೇ ಜೀವಾತ್ಮನು. ಇಂತಪ್ಪ ಬಿಂದುವನ್ನು ಕರ್ಮಕಾರಣಮಾದ ಸ್ವಸ್ತ್ರೀಗರ್ಭದಲ್ಲಿ ಬಿಟ್ಟು, ಆ ಸತ್ಸಂತಾನದಿಂದ ಸ್ವರ್ಗಾದಿಭೋಗಂಗಳಂ ಪಡೆವಂದದಿ, ಜ್ಞಾನಕಾರಣಮಪ್ಪ ಪುರುಷನು ಗರ್ಭದಲ್ಲಿ ವಿವೇಕವೆಂಬ ಪುತ್ರನಂ ಪಡೆದು, ಅದರಿಂದ ಮೋಕ್ಷ ಸಾಧನೆಯ ಮಾಡಿಕೊಂಬನೇ ಪರಮನು. ಇಂತಪ್ಪ ಸೂಕ್ಷ್ಮಶರೀರಿಯಾದ ನಾದಮಧ್ಯದಲ್ಲಿರ್ಪ ನಿನಗೂ ಸ್ಥೂಲ ಶರೀರಿಯಾದ ಬಿಂದು

ಮಧ್ಯದಲ್ಲಿರ್ಪ ನನಗೂ, ಜಿಹ್ವಾರೂಪಮಪ್ಪ ಮಹಾಗುರುವಿನ ಕರುಣದಿಂ ಸಂಬಂಧಮಾಗಿ, ಪಾಣಿಗ್ರಹಣಮಂ ಮಾಡಿಕೊಟ್ಟ ಬಳಿಕ ನೀನೇ ಪತಿ ನಾನೇ ಸತಿಯಾಗಿ, ನಿನ್ನ ಪರಮಾನಂದ ರತಿಸುಖದಲ್ಲಿ ನಾನು ಲೀನನಾದಲ್ಲಿ ನನ್ನ ಸಂಬಂಧಮಪ್ಪ ಸ್ಥೂಲದೇಹದಲ್ಲಿ ನಿನ್ನ ಸಂಬಂಧಮಪ್ಪ ಸೂಕ್ಷ್ಮದಲ್ಲಿ ಲೀನ ಮಪ್ಪುದೇ ಕೈವಲ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೧

(೧೩) ಸತ್ಯವೇ ಪರಮನು. ಜ್ಞಾನವೇ ಜೀವನು, ಆನಂದವೇ ಶರೀರವು ಅದೆಂತೆಂ ದೊಡೆ–ಶರೀರಾದಿ ಸಕಲಪ್ರಪಂಚಕ್ಕೂ ಜ್ಞಾನವೇ ಮೂಲವಾಗಿರ್ಪುದು. ಆನಂದ ಮುಖದೊಳ್ ಬಿಂದು ಜನಿಸಿ, ಆ ಬಿಂದುವೇ ಪೃಥ್ವಿರೂಪದಲ್ಲಿ ಘನೀಭವಿಸಿ, ಪಿಂಡಾಕಾರಮಾಗಿ ಶರೀರಮಪ್ಪಂತೆ, ಜ್ಞಾನಮುಖದಲ್ಲಿ ವಾಯುವು ಜನಿಸಿ, ತೇಜೋರೂಪದಲ್ಲಿ ಘನೀಭವಿಸಿ, ಜೀವನಾಗಿರ್ಪುದು. ನಿಜದಲ್ಲಿ ಆತ್ಮನು ಜನಿಸಿ, ಆಕಾಶರೂಪದಲ್ಲಿ ಘನೀಭವಿಸಿ ಪರಮನಾಗಿರ್ಪನು. ಆನಂದ ಬಿಂದು ಮುಖದಿಂದ ಅಹಂಕಾರವು ಜನಿಸಿ, ಜ್ಞಾನವಾಯುಗಳಸಂಗದಿಂ ಮನವು ಪುಟ್ಟಿತು. ನಿಜಾತ್ಮಗಳ ಸಂಗದಿಂ ಭಾವವು ಪುಟ್ಟಿತು. ತತ್ಸಾದಾಖ್ಯವೇ ಸಾಧನಗಳಾಗಿರ್ಪುದರಿಂ ಇವೇ ಕರಣಂಗಳಾಗಿ, ಅವೇ ಕಾರಣಂಗಳಾಗಿರ್ಪವು. ಪೃಥಿವೀ ಬೀಜಗಳಸಂಗದಿಂದ ಬೀಜಮಧ್ಯದಲ್ಲಿ ವೃಕ್ಷವು ಜನಿಸಿತ್ತು. ವೃಕ್ಷವು ಬಲಿದಲ್ಲಿ ಬೀಜವು ನಷ್ಟಮಾಗಿ ತದಗ್ರದಲ್ಲಿರ್ಪ ಫಲಮಧ್ಯದಲ್ಲಿ ಅನೇಕ ಮುಖಮಾಗಿ ತೋರುತ್ತಿರ್ಪಂತೆ, ಜ್ಞಾನವಾಯುಗಳಸಂಗದಿಂ ಜ್ಞಾನಮಧ್ಯದಲ್ಲಿ ಮನಸ್ಸು ಹುಟ್ಟಿ ಅದು ಬಲಿದಲ್ಲಿ ಆ ಮೂಲಜ್ಞಾನವಳಿದು, ತತ್ಫಲರೂಪಮಾದ ಇಂದ್ರಿಯ ಮಧ್ಯದಲ್ಲಿ ತೋರುತ್ತಿರ್ಪುದು. ಜಲವು ಆ ಬೀಜವಂ ಭೇದಿಸಿ, ತನ್ಮಧ್ಯದಲ್ಲಿ ವೃಕ್ಷವಂ ನಿರ್ಮಿಸುವಂತೆ ಮನಸ್ಸೇ ಜಾಗ್ರತ್‌ಸ್ವರೂಪದಲ್ಲಿ ಜ್ಞಾನಭಿನ್ನವಂ ಮಾಡಿ, ತನ್ಮಧ್ಯದಲ್ಲಾನಂದವಂ ನಿರ್ಮಿಸುತ್ತಿರ್ಪುದು. ಆನಂದವು ನಿರಾಕಾರವೂ, ಬಿಂದುವು ಸಾಕಾರವೂ ಆದುದರಿಂದ ಆನಂದವಂ ಬಿಂದುವು ಬಂಧಿಸಿರ್ಪಂತೆ, ವಾಯುವು ಜ್ಞಾನವಂ ಬಂಧಿಸಿರ್ಪುದು. ಆನಂದವು ಜ್ಞಾನದೊಳ್ಪೆರೆದಲ್ಲಿ ಶರೀರವು ಜೀವನೊಳ್ಕೈಕ್ಯಮಾಯಿತ್ತು. ಆ ಜ್ಞಾನವು ನಿಜದೊಳ್ಪೆರದಲ್ಲಿ ಜೀವನು ಪರಮನೊಳ್ಕೈಕ್ಯಮಾಯಿತ್ತು. ನಿಜಾನಂದ ಶಿವಶಕ್ತಿಗಳೇಕಮಾದಲ್ಲಿ ಜ್ಞಾನವದರೊಳಗೆ ಬೆರೆದು, ಭೇದವಡಗಿ, ಅವೆರಡರ ಸಂಯೋಗವಿಯೋಗಕ್ಕೆ ತಾನೇ ಕಾರಣಮಾಗಿ, ನಿಜಾನಂದವೇ ತೋರುತ್ತ ತಾನೊಪ್ಪುತ್ತಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೨

(೧೪) ಎಲ್ಲಾ ಮಹಿಮೆಯೂ ತನ್ನಲ್ಲುಳ್ಳ ಮಹಾಸತ್ತೇ ನಿಜವು. ಅದು ಸಾಕಾರಕ್ಕೆ ಬಪ್ಪಲ್ಲಿ ಆ ನಿಜವೇ ಜ್ಞಾನರೂಪಮಾದಲ್ಲಿ ಆ ಮಹಿಮೆಯೇ ಸತ್ವರೂಪ

ಮಾಯಿತ್ತು. ಆ ಜ್ಞಾನರೂಪನಾದ ಶಿವನು ಸತ್ವರೂಪಮಾದ ಮಹಾಶಕ್ತಿಯೊಳಗೆ ಕೂಡಿದಲ್ಲಿ ಅಹಂಕಾರವೆಂಬ ರಜೋಮೂರ್ತಿಯುತ್ಪನ್ನಮಾಯಿತ್ತು. ಅಹಂಕಾರದಲ್ಲಿ ಕಾಮಾದ್ಯರಿಷಡ್ವರ್ಗಂಗಳುದಿಸಿ, ಬಹುವಿಧ ಕರ್ಮಂಗಳಂ ಸೃಷ್ಟಿಸಲು, [೧][ಸತ್ಕ]ರ್ಮಂಗಳಿಂ ಅಜ್ಞಾನ ಕೆಡುತ್ತಿರಲು, ಶಿಲಾಬದ್ಧ ಪುರುಷರತ್ನ ದೋಪಾದಿಯಲ್ಲಿ ಹೊದ್ದಿ ಹೊದ್ದದೆ ಭೇದಿಸಿ ತಿಳಿದಲ್ಲಿ ತನ್ನ ನಿಜಮಹಿಮೆಯೇ ಪ್ರಕಾಶಮಾಗಿ ಸಕಲಕ್ಕೂ ತಾನೇ ಲಯಕರ್ತೃವಾಗಿ ಚ್ಯುತಿ ಇಲ್ಲದಿರ್ಪ ಮಹಾಜ್ಞಾನವೇ ಶಿವನು. [೨][ಆ]ಸತ್ವ ಅಹಂಕಾರವೇ ಬ್ರಹ್ಮನು, ಸತ್ವರೂಪಿಯಾದ ವಿಷ್ಣುವು ಶರೀರ ಕರ್ತೃವೂ ಜ್ಞಾನಸ್ವರೂಪನಾದ ಶಿವನು ಜೀವಕರ್ತೃವೂ, ಅಹಂಕಾರರೂಪನಾದ ಬ್ರಹ್ಮನು ಕರ್ಮಕರ್ತೃವೂ ಆಗಿಹನು. ಅಹಂಕಾರವು ನಷ್ಟಮಾದಲ್ಲಿ ಕರ್ಮಲಯವೂ, ಸತ್ವವು ನಷ್ಟಮಾದಲ್ಲಿ ಶರೀರಲಯವೂ, ಜ್ಞಾನವಧಿಕವಾದಲ್ಲಿ ಜೀವನಿಗೆ ಲಯವೂ ಆಗುವದು. ಅಂತಪ್ಪ ಜೀವನ ಲಯವೇ ಮೋಕ್ಷವು. ಅಂತಪ್ಪ ಮೋಕ್ಷಸ್ಥಾನದಲ್ಲಿರ್ಪ ದಿವ್ಯಜ್ಞಾನವೇ ಮಹಾಗುರು ದಕ್ಷಿಣಾಮೂರ್ತಿ ಸ್ವರೂಪಮಾಗಿ, ಅಂತಪ್ಪ ಮೂರ್ತಿಯ ಹೃದಯಸ್ಥಾನದಲ್ಲಿ ಬೆಳೆದ ಚಿನ್ನಾದವೇ ಪ್ರಣಮವು. ಅಂತಪ್ಪ ಪ್ರಣಮವೇ ಮೂಲಮಾಗಿ, ಪಂಚಾಕ್ಷರಂಗಳೆಂಬ ಪಂಚಶಾಖೆಗಳಿಂದಲೂ, ಪರ್ಣಫಲಂಗಳಿಂದಲೂ ಕೂಡಿದ ವೇದವೆಂಬ ಮಹಾವಟವೃಕ್ಷದ ಮೂಲಮಪ್ಪ ಪ್ರಣವದಲ್ಲಿ ಪ್ರಕಾಶಿಸುತ್ತಿರ್ಪ ಹೃತ್ಕೋಟರದಲ್ಲಿ ದಿವ್ಯ ವಾಸನೆವಿಡಿದ ಅಷ್ಟದಳಕರ್ಣಿಕಾ ಮಂಗಳಪೀಠದಲ್ಲಿ ಯೋಗಾಸನಾಸೀನನಾಗೊಪ್ಪುವ ಮಹಾಗುರುವು ತನ್ನ ನಿಜಮಹಾತ್ಮ್ಯ ಪ್ರಕಟನ ನಿಮಿತ್ತಮಾಗಿ ಸಕಲ ಪ್ರಪಂಚಂಗಳಂ ಸೃಷ್ಟಿಸಿ, ತನ್ನ ಪಂಚಮುಖದಲ್ಲಿ ತಾನು ಈಶಾನರೂಪನಾಗಿ, ಉಳಿದ ನಾಲ್ಕು ಮುಖಂಗಳೇ ಚತುರಾಚಾರ್ಯಸ್ವರೂಪನಾಗಿ, ನಾಲ್ಕಾಶ್ರಮಂಗಳಲ್ಲಿ ನಾಲ್ಕು ರೂಪದಲ್ಲಿ ಜೀವರ ದುಃಖಂಗಳಂ ಕಳೆದು ಉಪದೇಶಿಸುತ್ತ, ಅದರಲ್ಲಿ ಪರಿಪಕ್ವವಾದ ಪದಾರ್ಥಂಗಳನ್ನು ತಾನು ಪರಿಗ್ರಹಿಸುತ್ತ, ತದ್ವಟಮೂಲವಾಸಿಯಾಗಿರ್ಪ ಮಹಾಗುರುವೇ ಶಿವನು, ಆ ವಟಪರ್ಣವಾಸಿಯಾಗಿರ್ಪವನೇ ವಿಷ್ಣುವು, ಆ ವಟಫಲಗಳಿತರಸವೆಂಬ ಜಲಪ್ರಳಯದಲ್ಲಿ ತೇಲುತ್ತ ಮುಳುಗುತ್ತ ಇರ್ಪವನೇ ಬ್ರಹ್ಮನು. ಮಹಾವಟವೃಕ್ಷ ಮೂಲದಲ್ಲಿ ಉಪದೇಶ ಕರ್ತೃವಾಗಿರ್ಪ ಮಹಾಗುರುವಿನ ವಾಕ್ಯವೇ ಮಂತ್ರವು. ಲೀಲಾಸಮಾಪ್ತಿ ಕಾಲದಲ್ಲಿ ಪ್ರಪಂಚ ಕಾಮಸಂಹಾರ ಭಸ್ಮವೇ ಭಸ್ಮವು. ಅಂತಪ್ಪ ಪ್ರಪಂಚವನ್ನು ತನ್ನ ಲಲಾಟದಲ್ಲಿರ್ಪ ದಿವ್ಯಜ್ಞಾನ ದೃಷ್ಟಿಯಿಂದ ನೋಡುತ್ತಿರಲು ತನ್ನೇತ್ರಾನಂದ ಕಣಗಳೇ ರುದ್ರಾಕ್ಷಮಣಿರೂಪಮಾಗಿ ಆ ಸದಾಶಿವನಿಗೆ ಆಭರಣಮಾಯಿತ್ತು. ಅಂತಪ್ಪ ಮಹಾ ಪ್ರಪಂಚವನ್ನು ಕೆಡಿಸುವ ನಟನೆಯಿಂದ ತಾನೇ ಜಂಗಮ

೧–೧ ಕ (ಮೂ)
೨–೨ ಆ (ಮೂ)

ಮೂರ್ತಿಯಾಗಿ ಮಹಾನಾಟ್ಯವನ್ನೆಸಗುತ್ತಿರಲಾಗ ದಕ್ಷಿಣ ಪಾದಾಂಗುಷ್ಠಾಗ್ರದಲ್ಲಿ ಶಿರದಲ್ಲಿರ್ಪ ಗಂಗೆ ತುಳುಕಿ ಬಿದ್ದು ಧಾರಾರೂಪಮಾಗಿ ಪ್ರವಹಿಸುತ್ತಿರಲದೇ ಪಾದೋದಕಮಾಯಿತ್ತು ಅಂತಪ್ಪ ಪಾದೋದಕದಿಂದ ಪೂತಮಾಗಿ ಲಲಾಟಾಗ್ನಿಯಿಂದ ತಪ್ತಮಾಗಿ ಪರಿಪಕ್ವಕ್ಕೆ ಬಂದು ದಿವ್ಯ ರುಚಿಯಿಂ ಕೂಡಿ, ನಿಜವಾಸನೆ ವಿಡಿದಿರ್ಪ ಈ ಪ್ರಪಂಚವೆಂಬ ಮಹಾಪ್ರಸಾದವನ್ನು ಕೃಪಾಕರದಲ್ಲಿ ಪರಿಗ್ರಹಿಸಿ ಕೊಂಬುದೇ ಮಹಾಪ್ರಸಾದವು. ಇಂತಪ್ಪ ಪ್ರಸಾದ ಭೋಗದಿಂ ತೃಪ್ತಿವಡೆದು, ಆ ತೃಪ್ತಿಸ್ಥಾನದಲ್ಲಿ ಪರಮಾನಂದ ಮಹಾಲಿಂಗಸ್ವರೂಪಮಾಗಿ, ಎಲ್ಲಕ್ಕೂ ತಾನೇ ಮೂಲಮಾಗಿರ್ಪ ಆ ಲಿಂಗವನ್ನು ಧರಿಸಿದ ಶಿವಭಕ್ತನಿಗೆ ಅಷ್ಟಮೂರ್ತಿಸ್ವರೂಪನಾದ ಶಿವನೇ ಆವರಣರೂಪನಾಗಿರುವ ಕಾರಣ ಅವನೇ ಪರಮಪವಿತ್ರನು ಆ ಭಕ್ತನಿಗೆ ಮಂತ್ರ, ಭಸ್ಮ ರುದ್ರಾಕ್ಷ, ಪಾದೋದಕ, ಪ್ರಸಾದಗಳೈದೂ ಐದು ಮುಖಂಗಳು. ಗುರು, ಲಿಂಗ, ಜಂಗಮ ಈ ಮೂರು ಮೂರಂಗಗಳು. ಇಂತಪ್ಪ ಭಕ್ತನು ಗುರುವಿನಲ್ಲಿ ಜಾಗ್ರವನು, ಜಂಗಮನಲ್ಲಿ ಸ್ವಪ್ನವನು, ಲಿಂಗದಲ್ಲಿ ಪರಮಾನಂದ ಸುಷುಪ್ತಿಯನು ಹೊಂದಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೩

(೧೫) ಕರಣಂಗಳೇ ಸ್ಥೂಲರೂಪದ ಶರೀರಮಾಗಿ, ತತ್ಸಂಬಂಧಮಾದ ವಿಷಯಂಗಳೇ ಕಾರಣಸ್ವರೂಪಮಾದ ಮನವಾಗಿ, ಇಂತಪ್ಪ ಶರೀರದಲ್ಲಿ ಧಾತುಗಳೂ, ಮನದಲ್ಲಿ ಗುಣಂಗಳೂ ಹುಟ್ಟಿ, ಧಾತುಗಳು ಗುಣಂಗಳನವಗ್ರಹಿಸಿ, ಗುಣಂಗಳು ಧಾತುಗಳನವಗ್ರಹಿಸಿ, ಧಾತುಗುಣಂಗಳು ಗುಣ ಧಾತುಗಳೆಂಬ ನಾಲ್ಕು ಭೇದವಡೆದು, ಅಂತಃಕರಣಚತುಷ್ಟಯವೆನಿಪ ಸೂಕ್ಷ್ಮಶರೀರದಲ್ಲಿ ಜೀವನು ನೆಲಿಸಿ, ಕರಣನಿಕರಂಗಳಿಗೆ ತಾನೇ ಕರ್ತೃವಾಗಿ, ಕರಣದಲ್ಲಿ ಕೂಡಿದ ಕಾರಣವೇ ಬಾಲ್ಯವಾಗಿ, ಕಾರಣದಲ್ಲಿ ಕೂಡಿದ ಕಾರಣವೇ ವಯಸ್ಸಾಗಿ, ಈ ಎರಡರ ನಷ್ಟವೇ ವಾರ್ಧಕ್ಯವಾಗಿ, ಅಂತಪ್ಪ ವಾರ್ಧಕ್ಯದಲ್ಲಿ ಧಾತುಗುಣಂಗಳಂ ಬಿಟ್ಟು ಗುಣಧಾತುಗಳನನುಸರಿಸಿ, ಕರಣಂಗಳಂ ಬಿಟ್ಟು, ಕಾರಣಂಗಳೊಳಗೆ ಕೂಡಿ, ಅಗ್ನಿಮುಖದಲ್ಲಿ ಲಯವನೈದಿ ಪೋದಲ್ಲಿ, ಮರಳಿ ಸೃಷ್ಟಿಯಪ್ಪ ಪರಿಯೆಂತೆಂದೊಡೆ– ಆ ಕಾರಣ ವಿಷಯಂಗಳೆಲ್ಲ ಜಲಮುಖದಲ್ಲಿ ದ್ರವಿಸಿ, ಆ ಗುಣಂಗಳಿರ್ಪ ಧಾತುಗಳು ಪ್ರಕಟಮಾಗಿ, ತದ್ವಾಸನೆವಿಡಿದು ಬಿಂದುಮುಖದಲ್ಲಿ ಶರೀರಿಯಾಗಿ ತೋರುತ್ತಿರ್ಪುದೇ ಸೃಷ್ಟಿಯು. ಇಂತಪ್ಪ ಸೃಷ್ಟಿ ಸಂಹಾರಂಗಳಿಗೆ ತಾನೇ ಕರ್ತೃವಾಗಿ, ವಿಷಯಂಗಳಿಂದ ಆ ಮನವನ್ನೂ, ಇಂದ್ರಿಯಂಗಳಿಂದ ತನುವನ್ನೂ, ರಕ್ಷಿಸುತ್ತ, ಅಂತಪ್ಪ ನಾದಬಿಂದುಗಳಿಗೆ ತಾನೇ ಕಳಾಸ್ವರೂಪಮಾಗಿರ್ಪ ಜೀವನು ಅಗ್ನಿಮುಖದಲ್ಲಿ ಲಯವನ್ನೂ ಜಲಮುಖದಲ್ಲಿ ಸೃಷ್ಟಿಯನ್ನೂ ಹೊಂದುತ್ತಿರ್ಪ ಕೋಟಲೆಯಂ ಕಳೆವುದಕ್ಕುಪಾಯಮಂ ಕಾಣದೆ, ಭವಭವಂಗಮಲ್ಲಿ ಕಳವಳಿಸಿ ಬಳಲುತ್ತಿರಲು ಜೀವನಿಗೆ ಪ್ರಸನ್ನನಾಗಿ, ನಾದರೂಪಮಾದ ಭಾವ

ಲಿಂಗಮಂ ಮನದೊಳಗೆ, ಬಿಂದುರೂಪಮಾದಿಷ್ಟಲಿಂಗಮಂ ಶರೀರದೊಳಗೆ, ಗುಣಧಾತುಗಳಂ ಭಾವಸೆಜ್ಜೆಗಳೊಳಿಟ್ಟು, ಧರಿಸಲು, ಜೀವನು ತಾನು ಇಚ್ಛಾಶಕ್ತಿಯೊಳಗೆ ಕೂಡಿ ಕರಣಂಗಳಲ್ಲಿಹ ಕ್ರಿಯಾಶಕ್ತಿಯನ್ನು ಇಷ್ಟಲಿಂಗಕ್ಕೆ ಕೊಟ್ಟು, ಕಾರಣದಲ್ಲಿರ್ಪ ಕ್ರಿಯಾಶಕ್ತಿಯನ್ನು ಭಾವಲಿಂಗದೊಳಗೆ ಬೆರಸಿ, ಆಯಾ ಶಕ್ತಿ ಮುಖಂಗಳಲ್ಲಿ ಆಯಾ ಲಿಂಗಂಗಳಂ ಪ್ರಸನ್ನವಂ ಮಾಡಿಕೊಳ್ಳಲು, ಇಷ್ಟಲಿಂಗಮುಖದಲ್ಲಿ ಪರಿಶುದ್ಧಮಾದ ಬಿಂದುಪ್ರಸಾದವನ್ನು ತನುಮುಖದಲ್ಲಿ ಸೇರಿಸಲು, ಧಾತುರೂಪಮಾಗಿ ಧಾತುವಿನೊಳಗಿರ್ಪ ತಮಸ್ಸನ್ನು ಕೆಡಿಸಲು, ಅಗ್ನಿಮುಖದಲ್ಲಿ ಬಂದು ಲಯವಡಗಿತ್ತು ಭಾವಲಿಂಗಮುಖದಲ್ಲಿ ಪರಿಶುದ್ಧಮಪ್ಪ ಶಬ್ದ ಪ್ರಸಾದವನ್ನು ಮನೋಮುಖದಲ್ಲಿ ಸೇವಿಸಲು, ಅವೇ ಗುಣಸ್ವರೂಪಮಾಗಿ ಗುಣದೊಳಗಿರ್ಪ ತಮಸ್ಸಂ ಕೆಡಿಸಲು, ಜೀವನಂ ಪರಿವೇಷ್ಟಿಸಿರ್ಪ ಸೂಕ್ಷ್ಮಶರೀರವೆ ತೇಜೋರೂಪಮಾಯಿತ್ತು ತದಾಧಾರಮಪ್ಪ ಸ್ಥೂಲಶರೀರವೇ ವಿಶ್ವವಾಯಿತ್ತು ತತ್ಕಾರಣಮಪ್ಪ ಕಾರಣಶರೀರವೇ ಪ್ರಾಜ್ಞವಾಯಿತ್ತು ಅಂತಪ್ಪ ಕಾರಣದಲ್ಲಿರ್ಪ ಭಾವಲಿಂಗವು ಶರೀರದಲ್ಲಿರ್ಪ ಇಷ್ಟಲಿಂಗವು ಎಂಬ ಸುವರ್ಣ ವಸ್ತುಗಳನ್ನು ಧ್ಯಾನಹಸ್ತದಲ್ಲಿ ಗ್ರಹಿಸಿ, ಹೃದಯಕುಂಡದಲ್ಲಿ ಅಷ್ಟದಳಕರ್ನಿಕೆ ಎಂಬ ಮೂಸೆಯೊಳಗಿಟ್ಟು, ಕರ್ಮಸಮಿದೆಯಲಿ ಜ್ಞಾನಾಗ್ನಿಯನ್ನು ಹೊತ್ತಿಸಿ, ತಾನೆಂಬ ಬೆಳುಗಾರದಿಂ ಕರಗಿಸಲು, ಎರಡೂ ಒಂದಾಗಿ, ಅಲ್ಲಿರ್ಪ ಕಳಂಕವೆಲ್ಲ ಜ್ಞಾನಾಗ್ನಿ ಮುಖದಲ್ಲಿ ಲಯವಂ ಪೊಂದಿ ಘಟ್ಟಿಗೊಂಡಲ್ಲಿ, ಆ ಬೆಳುಗಾರವದರೊಳಗೆ ಬೆರೆದು ಕಾಣಬಾರದಿರ್ಪಂತೆ, ಅಹಂಭಾವವು ಲಿಂಗದೊಳಡಗಿ, ಭೇದದೋರದಿರ್ಪುದೇ ಪ್ರಾಣಲಿಂಗಸ್ಥಲವು. ಇಂತಪ್ಪ ಸುಖವನ್ನು ನನಗೆ ಸಿದ್ಧಿಯಪ್ಪಂತೆ ಮಾಡಿ ಸಲಹಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೪

(೧೬) ಸ್ಥೂಲಶರೀರವೇ ಬಹಿರಂಗವು, ಸೂಕ್ಷ್ಮಶರೀರವೇ ಅಂತರಂಗವು. ಜೀವನು ಉದಯದಲ್ಲಿ ಬಹಿರಂಗಕರ್ಮವ್ಯಾಪಾರದಲ್ಲಿ ಸಂಚರಿಸುತ್ತಿರ್ಪನು. ಅಸ್ತಮಾನದಲ್ಲಿ ಅಂತರಂಗದ ಆರಮನೆಯಂ ಸೇರಿ ಅಂತಃಕರ್ಮವ್ಯಾಪಾರದಲ್ಲಿರ್ದು ಬಹಿಃಕರ್ಮವ್ಯಾಪಾರ ಸಮಾಪ್ತಿಗಾಗಿ ಅಂತರಂಗಮಂ ಬಿಟ್ಟು ಬಹಿರಂಗಮಪ್ಪ ಸ್ಥೂಲಶರೀರದಲ್ಲಿ ಪ್ರವೇಶಿಸುತ್ತಿರಲು, ಆಗತ ನಿರ್ಗತಂಗಳೇ ಭವವೆನಿಸುತ್ತಿರ್ಪುದು. ತದ್ವ್ಯಾಪಾರ ಕೋಟಲೆಗೆ ಸುಖದುಃಖಂಗಳೆನಿಸುತ್ತಿರ್ಪವು. ಇದಕೆ ಇಚ್ಛೆಯೇ ಕಾರಣಮಾಗಿಹುದು. ಅಂತಪ್ಪ ಇಚ್ಛೆಯೇ ಜ್ಞಾನಸ್ವರೂಪಮಾಗಿ, ಜೀವನು ನೇತ್ರಸ್ವರೂಪಮಾದಲ್ಲಿ ಅಂತರಂಗದ ಮನೆಯಲ್ಲಿ ಭಾವಪರ್ಯಂಕದಲ್ಲಿ ಸುಮನಶ್ಚಯಾಮೋದಭರಶುಚಿವಿರಚಿತಶಯನದಲ್ಲಿ ತಜ್ಞಾನಶಕ್ತಿಯೊಳಗೆ ನಿರ್ವಾಣರತಿಸುಖಾನಂದದೊಳಗೆ ಕ್ರೀಡಿಸುತ್ತಿರ್ಪುದೇ ಲಿಂಗೈಕಾಶ್ರಯ ಪದವೆನಿಸಿರ್ಪುದು ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೫

(೧೭) ಮನಸ್ಸೇ ಅಂತಃಕರಣವಾಗಿಯೂ, ಶರೀರವೇ ಕರಣವಾಗಿಯೂ, ಪ್ರಪಂಚವೇ ಉಪಕರಣವಾಗಿಯೂ ಇರ್ಪ ಜೀವನು ಉಪಕರಣದಲ್ಲಿರ್ಪ ಕಳೆಯನ್ನೂ ಕರಣದಲ್ಲಿರ್ಪ ಬಿಂದುವನ್ನೂ ಅಂತಃಕರಣದಲ್ಲಿರ್ಪ ನಾದವನ್ನೂ ಮಿಥ್ಯದಲ್ಲಿ ವೆಚ್ಚಿಸಿ, ತದ್ದುಃಖಾನುಭವಕ್ಕೆ ತಾಂ ಕಾರಣಮಾಗಿರಲಾ ಜೀವರಿಗೆ ಪಂಚವಿಂಶತಿತತ್ವರೂಪಮಾದ ಉಪಕರಣಂಗಳೇ ಸ್ಥೂಲವೂ, ಸಪ್ತಧಾತು ದಶೇಂದ್ರಿಯರೂಪವಾದ ಕರಣವೇ ಸೂಕ್ಷ್ಮವೂ, ಅಹಂಕಾರಜ್ಞಾನರೂಪವಾದ ಅಂತಃಕರಣವೇ ಕಾರಣವು ಆಗಿ, ಕರಣಕ್ಕುಪಹತಿ ಬಂದರೆ, ಉಪಕರಣಂಗಳಂ ಬಿಟ್ಟು, ಆಯಾ ಕರ್ಮವಾಸನೆಯಂ ಭಾವದಲ್ಲಿ ಗ್ರಹಿಸಿ, ಮರಳಿ ಸಂಪಾದಿಸಿದೆನು ಎಂಬ ಭ್ರಮೆಯಿಂ ಕುದಿದು ಕೋಟಲೆಗೊಂಡು, ತೊಳಲುತ್ತಿರ್ಪುದೇ ಭವವು. ಇಂತಪ್ಪ ಭವಕೋಟಲೆಗೆ ಹೇಸಿ, ಮಹಾಗುರುವಿನ ಮರೆಹೊಕ್ಕು, ಆ ಗುರುವಿತ್ತ ಮಹಾಲಿಂಗದಿಂ ಇಂತಪ್ಪ ಕರಣಂಗಳಂ ಶುದ್ಧಮಾಡಿ, ಅಲ್ಲಿರ್ಪ ನಾದ ಬಿಂದು ಕಳೆಗಳಂ ತಲ್ಲಿಂಗಮುಖಮಂ ಮಾಡಿ, ಅಲ್ಲಿ ಬಂದ ಸುಖವನ್ನು ಲಿಂಗಕ್ಕರ್ಪಿಸಿ, ತತ್ಪ್ರಸಾದಾನುಭವ ಪ್ರವರ್ಧನಮಾಗುತ್ತಿರಲು, ನಾಹಂ, ಕೋಹಂ, ಸೋಹಂ ಭ್ರಮೆಗಳಡಗಿ, ಸ್ಥೂಲ ಸೂಕ್ಷ್ಮ ಕಾರಣ ತನುತ್ರಯಂಗಳುಡುಗಿ, ಲಿಂಗವೇ ಅಂಗಮಾಗಿ, ಲಿಂಗೋಪಭೋಗಿಯಾಗಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೯೬

(೧೮) ಸೂಕ್ಷ್ಮದಿಂದಲೇ ಸ್ಥೂಲಮುದಿಸಿ, ಆ ಸೂಕ್ಷ್ಮವು ಕಾಣಿಸದೆ, ಸ್ಥೂಲವು ಕಾಣಿಸುತ್ತಿರ್ಪುದು. ಸ್ಥೂಲಶರೀರಯಾತನೆ ಬಿಡಿಸಿದಲ್ಲಿ , ಆ ಸ್ಥೂಲಮಂ ಬಿಟ್ಟು, ಸೂಕ್ಷ್ಮಕ್ಕೆ ಗೋಚರಮಾಗಿರ್ಪ ಲಯಂ ತಾನೇ ಗೋಚರಮಾಗಿ, ತಾನೇ ಪುನಃಸೃಷ್ಟಿ ಕಾರಣಮಾಗಿರ್ಪುದೆಂತೆಂದೊಡೆ– ಬೀಜದಿಂದಲೇ ಪೈರು ಪುಟ್ಟಿ, ಆ ಬೀಜಂ ಕಾಣಿಸದೆ, ಪೈರೇ ಕಾಣಿಸಿ, ಆ ಪೈರಂ ಕೊಯ್ದು ತುಳಿದು ಒಕ್ಕಿದಲ್ಲಿ ಆ ಪೈರಂ ಬಿಟ್ಟು, ಬೀಜವು ಪ್ರತ್ಯಕ್ಷಮಾಗಿ ಫಲಯಾತನೆಗೊಳಗಾಗಿ, ಪುನಃಸೃಷ್ಟಿ ಕಾರಣಮಾಗಿರ್ಪಂದದಿ ಸ್ಥೂಲದೊಳಗೆ ಸೂಕ್ಷ್ಮವೂ, ಸೂಕ್ಷ್ಮದೊಳಗೆ ಸ್ಥೂಲವೂ ಅಡಗಿ, ಒಂದು ಕಾಣಿಸಲೊಂದು ಕಾಣಿಸದಿರ್ಪ ಈ ದಂದುಗವಂ ಬಿಡಿಸಿ, ಸಲಹುವಿಯೋ ಎಂಬೀ ಸಂದೇಹದಿಂ ಹಿಂದುಮುಂದು ತಿಳಿಯದೆ ಮಂದಮತಿಯಾಗಿರ್ಪೆನ್ನ ಬಂದನವಂ ಬಿಡಿಸಿ, ನಿನ್ನಡಿಕೆಂದಾವರೆಯೊಳು ಸಂಬಂಧಿಸುವುದೆಂದಿಂಗೆ ಹೇಳಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೭

(೧೯) ಘ್ರಾಣ ಜಿಹ್ವಾ ತ್ವಕ್ ಶ್ರೋತ್ರಮಾನಸಾದಿ ವಿಷಯೇಂದ್ರಿಯಂಗಳಲ್ಲಿ ಪೃಥ್ವಿವ್ಯಪ್ತೇಜೋವಾಯ್ವಾಕಾಶಾತ್ಮಾದಿ ಷಡ್ಭೂತಂಗಳು ವಿಪರೀತ

ಸಂಬಂಧಂಗಳಾಗಿ ತೋರುತ್ತಿರ್ಪವೆಂತೆಂದೊಡೆ–ಮನಸ್ಸಿನ ವಿಷಯದಲ್ಲಿ ಪೃಥ್ವಿಯು ಸೃಷ್ಟಿ ಕಾರಣಮಾಗಿಹುದು. ಶ್ರೋತ್ರವಿಷಯದಲ್ಲಿ ಜಲವು ಸಂರಕ್ಷಣ ಕಾರಣಮಾಗಿ ಶುಚಿಯಾಗಿಹುದು. ತ್ವಗ್ವಿಷಯದಲ್ಲಗ್ನಿಯು ಸಂಹಾರಕಾರಣಮಾಗಿಹುದು. ನೇತ್ರವಿಷಯದಲ್ಲಿ ವಾಯುವು ಚಂಚಲಕಾರಣಮಾಗಿಹುದು. ಜಿಹ್ವಾವಿಷಯದಲಾಕಾಶವು ಶಬ್ದಕಾರಣಮಾಗಿಹುದು. ನಾಸಿಕವಿಷಯದಲ್ಲಾತ್ಮನು ಚೈತನ್ಯ ಕಾರಣಮಾಗಿಹನು. ವಾಯುವಿನೊಳಗೆ ಬೆರೆದ ಆತ್ಮನೇ ಜೀವನು. ಆತ್ಮನೊಳಗೆ ಬೆರೆದ ವಾಯುವೇ ಮನಸ್ಸು, ಪಂಚರೂಪಭೂತಮಾದ ಶರೀರಕ್ಕೆ ಜೀವನು ಕರ್ತನಾದಂದದಿ ಪಂಚಭೂತ ಗುಣಗ್ರಾಹಿಗಳಾದ ಇಂದ್ರಿಯಂಗಳಿಗೆ ಮನಸ್ಸೇ ಕರ್ತೃವಾಗಿ, ಆ ಇಂದ್ರಿಯಂಗಳು ಹೋದಲ್ಲಿಗೆ ಶರೀರವು ಹೋಗುವಂದದಿ, ಆ ಮನಸ್ಸೇ ಜೀವನಾಗಿ, ಆ ಮನಸ್ಸು ಹೋದಲ್ಲಿಗೆ ಜೀವನು ಹೋಗುತ್ತಿಹನು. ಅಂತಪ್ಪ ವಾಯುಸಂಗವಳಿದಲ್ಲಿ ಜೀವ ಮನಸ್ಸುಗಳೆಂಬ ವಿಧ್ಯಾಕಲ್ಪನೆಯಳಿದು. ಆತ್ಮನೇ ನಿಜಸ್ವರೂಪಮಾದ ಪರಮಾತ್ಮನಾಯಿತ್ತು ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೮

(೨೦) ಪೃಥ್ವಿಗೆ ಮೈಯೆಲ್ಲ ಯೋನಿ, ಜಲಕ್ಕೆ ಶರೀರವೆಲ್ಲ ಕಾಲು, ಅಗ್ನಿಗೆ ಶರೀರವೆಲ್ಲ ಬಾಯಿ, ವಾಯುವಿಗೆ ತನುವೆಲ್ಲ ಮೂಗು ಆಕಾಶಕ್ಕೆ ಕಾಯವೆಲ್ಲ ಹೊಟ್ಟೆ, ಆತ್ಮನಿಗೆ ಮೈಯೆಲ್ಲ ಕಣ್ಣು ,ಪೃಥ್ವಿಗೆ ಘ್ರಾಣವೇ ಇಂದ್ರಿಯ, ಗಂಧವೇ ವಿಷಯ, ಜಲಕ್ಕೆ ಜಿಹ್ವೆಯೇ ಇಂದ್ರಿಯ, ರುಚಿಯೇ ವಿಷಯ, ಅಗ್ನಿಗೆ ನೇತ್ರವೇ ಇಂದ್ರಿಯ, ರೂಪೇ ವಿಷಯ; ವಾಯುವಿಗೆ ತ್ವಕ್ಕೇ ಇಂದ್ರಿಯ, ಸ್ಪರ್ಶನ ವಿಷಯ; ಆಕಾಶಕ್ಕೆ ಶ್ರೋತ್ರವೇ ಇಂದ್ರಿಯ, ಶಬ್ದವೇ ವಿಷಯ ; ಆತ್ಮನಿಗೆ ಮನಸ್ಸೇ ಇಂದ್ರಿಯ, ಭಾವವೇ ವಿಷಯ ; ಪೃಥ್ವಿಯಲ್ಲಿರ್ಪ ಗಂಧಕ್ಕೆ ಘ್ರಾಣೇಂದ್ರಿಯವೇ ಕಾರಣವಾಯಿತ್ತು, ಜಲದೊಳಗಿರ್ಪ ರುಚಿಗೆ ಜಿಹ್ವೇಂದ್ರಿಯದಲ್ಲಿರ್ಪ ಅಗ್ನಿಯೇ ಕಾರಣವಾಯಿತ್ತು, ಅಗ್ನಿಯಲ್ಲಿರ್ಪ ರೂಪಿಗೆ ನೇತ್ರೇಂದ್ರಿಯದಲ್ಲಿರ್ಪ ಜಲಮೇ ಕಾರಣವಾಯಿತ್ತು, ವಾಯುವಿನೊಳಗಿರ್ಪ ಸ್ಪರುಶನಕ್ಕೆ ತ್ವಗೀಂದ್ರಿಯದಲ್ಲಿರ್ಪ ಪೃಥ್ವಿಯೇ ಕಾರಣವಾಯಿತ್ತು, ಆಕಾಶದಲ್ಲಿರ್ಪ ಶಬ್ದಕ್ಕೆ ಶ್ರೋತ್ರೇಂದ್ರಿಯದಲ್ಲಿರ್ಪ ಆಕಾಶವೇ ಕಾರಣವಾಯಿತ್ತು, ಇಂತಪ್ಪ ಭಾವದಲ್ಲಿ ಜ್ಞಾನಶಕ್ತಿ ಹುಟ್ಟಲು ಮನವೇ ಮಹಾಲಿಂಗವಾಯಿತ್ತು, ಶಬ್ದದಲ್ಲಿ ಪರಾಶಕ್ತಿ ಹುಟ್ಟಲು, ಶ್ರೋತ್ರವೇ ಪ್ರಸಾದಲಿಂಗವಾಯಿತ್ತು, ಸ್ಪರ್ಶನದಲ್ಲಿ ಆದಿಶಕ್ತಿ ಹುಟ್ಟಲು ಘ್ರಾಣವೇ ಆಚಾರಲಿಂಗಮಾಯಿತ್ತು,* ೧ಗ್ರಹಿಸುವು[ದೇ]೨ ಜ್ಞಾನೇಂದ್ರಿಯಮಾಯಿತ್ತು, ಬಿಡುವುದೇ ಕರ್ಮೇಂದ್ರಿಯಮಾಯಿತ್ತು, ಇಂತಪ್ಪ ಇಂದ್ರಿಯಂಗಳೆಲ್ಲ ಲಿಂಗಸ್ವರೂಪಗಳಾಗಿ, ವಿಷಯಂಗಳೇ ಶಕ್ತಿಸ್ವರೂಪಮಾದ ಮಹಾಪುರುಷನ ಸ್ವರೂಪಿನಲ್ಲಿ ಇಷ್ಟಲಿಂಗವು

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೮

೧+ ಈ ರೀತಿ (ಮೂ) ೨–೨ ದು (ಮೂ)

ನೆಲೆಗೊಂಡಲ್ಲಿ ಆ ಲಿಂಗದ ಮೋಹವೇ ಪ್ರಾಣಲಿಂಗಮಾಯಿತ್ತು. ಆ ಲಿಂಗದ ವಿಚಾರವೇ ಭಾವಲಿಂಗಮಾಯಿತ್ತು. ಭೂತಂಗಳೆ ಲಿಂಗಕ್ಕೆ ಅಂತರಂಗಳಾದವು. ಅಲ್ಲಲ್ಲಿರ್ಪ ಲಿಂಗಂಗಳೇ ಭೂತಂಗಳಿಗೆ ಚೈತನ್ಯಮಾದ ಪ್ರಾಣಂಗಳಾಗಿ, ಆ ಲಿಂಗಂಗಳೇ ಶರಣನಂಗಂಗಳಾಗಿ ಲಿಂಗಂಗಳೇ ಶಿವನಾಗಿ, ಶರಣನೇ ಸತಿ, ಲಿಂಗವೇ ಪತಿಯಾಗಿ, ಇಬ್ಬರ ಸಮರಸಭಾವವೇ ಪರಮಾನಂದರತಿಸುಖಮಾಗಿ, ಆ ಸುಖದಲ್ಲಿ ಎರಡು ವಿಕಮಾಗಿ ಭೇದದೋರದೆ ನಿಶ್ಯಬ್ದಬ್ರಹ್ಮವಾಗಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೯೯

(೨೧) ಇಂದ್ರಿಯಸ್ವರೂಪಮಾದ ತನುವೇ ಜಾಗ್ರವು. ವಿಷಯಸ್ವರೂಪ ಮಾದ ಮನವೇ ಸ್ವಪ್ನವು. ಅನುಭವಸ್ವರೂಪಮಾದ ಜೀವನಲ್ಲಿ ಸುಷುಪ್ತಿಯು ಪಾಪವೆಂಬ ಪಂಕದಲ್ಲಿ ಹುಟ್ಟಿ ಆಶೆಯೆಂಬ ಬಿಸದೊಳಗೆ ಕೂಡಿ ಅಷ್ಟಭೂತಂ ಗಳೆಂಬಷ್ಟದಳಂಗಳಿಂ ಚಿತ್ತವೆಂಬ ಮೇರುವಿನಿಂ ಯುಕುತಮಾಗಿರ್ಪ ಹೃತ್ಕಮಲ ದಲ್ಲಿ ಜೀವನು ಸುಷುಪ್ತಿಯಂ ಹೊಂದಿ, ತನುವಿನ ಜಾಗ್ರವು ಮನದ ಸ್ವಪ್ನವಲ್ಲದೆ, ತನ್ನ ನಿಜವೆಲ್ಲವೂ ಸುಷುಪ್ತಿಯಂ ಹೊಂದಿ ತನು ಸೋಂಕಿದಲ್ಲಿ ತಿಳಿವುತ್ತಂ ಮರಳಿ ನಿದ್ರಾರೂಪದಿಂ ಮರೆಯುತ್ತಲಿರ್ಪ ಜೀವನ ಪರಿಯ ನೋಡಾ. ಇಂತು ಭವ–ಭವಂಗಳಲ್ಲಿ ತೊಳಲುವ ಜೀವಂಗೆ ಗುರುಸಂಸ್ಕಾರದಿಂ ಲಿಂಗವೆಂಬ ಪೂರ್ವಾಚಲ ದಲ್ಲಿ ಜ್ಞಾನಾರ್ಕೋದಯಮಾಗಿ, ಭಾವವೆಂಬ ಮೋಹ ಬಯಲಲ್ಲಿ ಗಮಿಸುತ್ತಿ ರಲು, ಹೃತ್ಕಮಲಂ ವಿಕಸಿತಮಾಗಿ ಆನಂದ ಮಕರಂದದೊಡನೆ ಕೂಡಿ, ಗುರು ಮಂತ್ರಮಲಯಾನಿಲನು ನಿಜವಾಸನೆವಿಡಿದು ಬೀಸುತ್ತಿರಲು, ಜೀವನ ಸುಷುಪ್ತಿ ಭ್ರಾಂತಿಯಳಿದು, ಪರಮ ಜಾಗ್ರತ್‌ಸ್ವರೂಪನಪ್ಪ ಪರಮಾತ್ಮನಾಗಿ, ತನುವಿನ ಜಾಗ್ರ ಮನದ ಸ್ವಪ್ನಗಳಳಿದು, ಪರಮನ ಮಧ್ಯಾವಸ್ಥೆಯಲ್ಲಿ ಲೀನಮಾಗಲು, ಅಷ್ಟಭೂತಂಗಳುಂ ಅಷ್ಟಾವರಣಂಗಳಾದವದೆಂತೆಂದೊಡೆ : ಪೃಥ್ವಿಯೇ ೧[ಪ್ರಸಾದವು]೧, ಜಲವೇ ಪಾದೋದಕವು, ಅಗ್ನಿಯೇ ರುದ್ರಾಕ್ಷವು, ವಾಯುವೇ ೨[ಭಸ್ಮವು]೨, ಆಕಾಶವೇ ಮಂತ್ರವು. ಅಹಂಕಾರವೇ ೩[ಗುರುವು]೩ ಮಹವೇ ೪[ಲಿಂಗವು]೪, ಮೂಲ ಚಿತ್ತವೇ ಜಂಗಮವು. ನಿಜವು ಪ್ರಸನ್ನಮಾಗಿ *ಮನವೇ ವೃಷಭೇಶ್ವರನಾಗಿ ತನುವೇ ಕೈಲಾಸಪರ್ವತಮಾಗಿ, ಸಕಲ ಗಣಂಗಳೇ ಶಿವಗಣಂಗಳಾಗಿ* ಸಕಲ ಜನ್ಮ ಕರ್ಮ ಪ್ರಪಂಚ ಪರದೊಳಡಗಿತ್ತೆಂತೆಂದೊಡೆ : ಕಾಲದಲ್ಲಿ ಬ್ರಹ್ಮಾಂಡಂಗಳಡಗಿ ರೂಪದೋರದಿರ್ಪಂತೆ, ಚಿದಾಕಾಶದಲ್ಲಿ ಲೀನಮಾಗಿ, ತಾನೇ ಶಿವನಾಗಿ, ಅಭೇದಬ್ರಹ್ಮವಾಯಿತ್ತೆಂತೆಂದೊಡೆ : ವಸ್ತು

೧–೧ ಭಸ್ಮವು (ಮೂ) ೨–೨ ಪ್ರಸಾದವು (ಮೂ) ೩–೩ ಲಿಂಗವು (ಮೂ)
೪–೪ ಗುರುವು (ಮೂ)
– ಮನವೇ ಪ್ರಾಣಲಿಂಗವಾಗಿ, ತನುವೇ ಇಷ್ಟಲಿಂಗವಾಗಿ ಸಕಲ ಗುಣಂಗಳೇ ಲಿಂಗ ಕಿರಣಂಗಳಾಗಿ –ಹೀಗಿದ್ದರೆ ಸೂಕ್ತ (ಸಂ).

ಸ್ವರೂಪಮಾದ ಸುವರ್ಣವ ಕಾಸಿ, ಕರಗಿಸಿ, ಉಳಿದ ನಿಜಮಂ ತೆಗೆದು ಬೆಳುಗಾರಮಿಕ್ಕಿ ಮಹದೊಳಗೆ ಬೆರಿಸಿ ಎರಡನ್ನು ಒಂದು ಮಾಡಿ, ತಾನದರೊಳಗೆ ಬೆರೆದು ಭೇದದೋರದಿರ್ಪಂತೆ, ಮನಸ್ಸು ಜೀವ ಪರಮರನೊಂದುಮಾಡಿ, ತಾನದರೊಳಗೆ ಬೆರೆದು, ಭೇದದೋರದಿರ್ಪುದ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೧೦೦

(೨೨) ಗುರುವೇ, ಕರದಲ್ಲೆನ್ನಂ ಪುಟ್ಟಿಸಿ, ಮಂತ್ರವೆಂಬ ಜನನಿಯ ವಿವೇಕ ವೆಂಬ ಸ್ತನಗಳೊಳ್ ತುಂಬಿರ್ಪ ಅನುಭವಾಮೃತರಸವನೆರೆದು, ಆಚಾರಕ್ಷೇತ್ರ ದಲ್ಲಿ ಬೆಳೆಯಿಸುತ್ತಿರಲು, ಅನೇಕ ಕಳೆಗಳಿಂ ಕೂಡಿದ ದಿವ್ಯಜ್ಞಾನವೆಂಬ ಯೌವನಂ ಪ್ರಾದುರ್ಭವಿಸಿ, ಸತ್ಕರ್ಮವಾಸನೆಯಿಂ ಪೋಷಿತನಾಗಿರ್ಪೆನಗೆ ಮಹಾಲಿಂಗ ಒಲಿದು, ನಿನ್ನ ಭಾವದಲ್ಲಿ ಬಂದು, ಹೃದಯದಲ್ಲಿ ನಿಂದು ಕೇಳಲು, ನೀನು ಆ ಲಿಂಗಕ್ಕೆ ಮಂಗಳಸೂತ್ರಮಂ ಕಟ್ಟಿ, ಕಲಶ ಕನ್ನಡಿಗಳನಿಕ್ಕಿ, ಪಾಣಿಗ್ರಹಣಮಂ ಮಾಡಿಕೊಟ್ಟಬಳಿಕ, ರತಿಯನನುಭವಿಸಿ, ಲಿಂಗಸುಖಮಂ ತನಗೀವುತ್ತಿರ್ಪ ನಯ್ಯಾ. ಆಮೇಲೆ ತನ್ನ ಮನದ ಹೆದರಿಕೆಯ ಬಿಡಿಸಿ, ಅಂತರಂಗಕ್ಕೆ ಕರೆದು ಕೊಂಡು ಬಂದು, ನಿಜಪ್ರಸಾದರಸದಂಬುಲವನಿತ್ತು ತನ್ನೊಡನೆ ಕೂಡುವ ಚಾತುರ್ಯ ಮಾರ್ಗಂಗಳಂ ಕಲಿಸುತ್ತ ಆ ಲಿಂಗಂ ತಾನೇ ತನಗೆ ಗುರು ವಾದನಯ್ಯಾ. ಆಮೇಲೆ ಭಾವದಲ್ಲಿ ನನ್ನ ಕೂಡಣ ಚಲ್ಲಾಟದಿಂದ ಸಂಚರಿಸುತ್ತ ತಾನೇ ಜಂಗಮವಾದ ನಯ್ಯಾ. ತನ್ನ ಭಾವದಲ್ಲಿರ್ಪ ಇಂದ್ರಿಯ ವಿಷಯಂಗಳೆಲ್ಲ ಪುಣ್ಯಕ್ಷೇತ್ರಂಗಳಾದವಯ್ಯಾ. ಶರೀರವೇ ವಿಶ್ವವಾಯಿತ್ತಯ್ಯಾ. ತಾನೇ ವಿಶ್ವನಾಥ ನಯ್ಯಾ. ಪಂಚ ಭೂತಂಗಳೇ ಪಂಚಕೋಶವಾಯಿತ್ತಯ್ಯಾ. ಆ ಲಿಂಗಾನಂದವೇ ಭಾಗೀರಥಿ ಯಾಯಿತ್ತಯ್ಯಾ. ಆ ಲಿಂಗದೊಳಗಣ ವಿನಯವೇ ಸರಸ್ವತಿಯಾಗಿ ಆ ಲಿಂಗದ ಕರುಣವೇ ಯಮುನೆಯಾಗಿ, ತನ್ನ ಶರೀರವೆಂಬ ದಿವ್ಯ ಕಾಶೀಕ್ಷೇತ್ರದಲ್ಲಿ ಹೃದಯವೆಂಬ ತ್ರಿವೇಣಿ ಮಣಿಕರ್ಣಿಕಾಸ್ಥಾನಲ್ಲಿ ನೆಲೆಸಿ, ಸಕಲಗಣಂಗಳೆಂಬ ಪುರುಷಋಷಿಗಳಿಂದ ಅರ್ಚಿಸಿಕೊಳ್ಳುತ್ತ ನಮ್ಮೊಳಗೆ ನಲಿದಾಡುತ್ತಿರ್ದನಯ್ಯಾ. ತನ್ನ ನಿಜಮತದಿಂ ವಿಶ್ವಸ್ವರೂಪ ಕಾಶೀಕ್ಷೇತ್ರವನ್ನು ರಕ್ಷಿಸುತ್ತಿರ್ಪ ಅನ್ನಪೂರ್ಣಾ ಭವಾನಿಗೂ, ತನಗೂ ಮತ್ಸರಮಂ ಬಿಡಿಸಿ, ತನಗೆ ಅನ್ನಪೂರ್ಣಭವಾನಿಯೇ ಆಸ್ಪದಮಾಗಿ, ಆ ಅನ್ನಪೂರ್ಣೆಗೆ ತಾನೇ ಆಸ್ಪದಮಾಗಿರ್ಪಂತನುಕೂಲವಿಟ್ಟು ನಡೆಸಿದನಯ್ಯಾ. ಇಂತಪ್ಪ ದಿವ್ಯಕ್ಷೇತ್ರದಲ್ಲಿ ನಿಶ್ಚಂತಮಾಗಿ ಆ ಪರಮನೊಳಗೆ ಅಂತರಂಗದರಮನೆಯಲ್ಲಿ ನಿರ್ವಾಣರತಿಸುಖವನನುಭವಿಸುತ್ತ, ಆ ಲಿಂಗದಲ್ಲಿ ಲೀನಮಾಗಿ ಪುನರಾವೃತ್ತಿರಹಿತ ಶಾಶ್ವತ ಪರಮಾನಂದರತಿಸುಖದೊಳೋಲಾ ಡುತಿರ್ದನಯ್ಯಾ ಮಹಾಘನ ದೊಡದೇಶಿಕಾರ್ಯ ಗುರುಪ್ರಭುವೇ.

೧೦೧

(೨೩) ಸೃಷ್ಟಿ ಹೇತುವಾದ ಸಂಸಾರವೇ ಪೃಥ್ವಿಯು; ತದ್ರಕ್ಷಣ ಹೇತುವಾದುದೇ ಜಲವು. ಇವೆರಡನ್ನೂ ಸಂಬಂಧಿಸಿ ಏಕಮಾಗಿ ಘನೀಭವಿಸುವಂತೆ ಮಾಡಿ ತತ್ಸಂಹಾರಕ್ಕೆ ತಾನೇ ಕಾರಣಮಾಗಿರ್ಪ ಮನಸ್ಸೇ ಅಗ್ನಿಯು. ಆ ಮನಸ್ಸನ್ನು ಪ್ರಕಾಶಗೊಳಿಸಿ ಅದರೊಳಗೆ ಕೂಡಿ ಅಭೇದಮಾಗಿರ್ಪ ಜೀವನೇ ವಾಯುವು. ಅಗ್ನಿಯು ಪೃಥ್ವಿಯೊಳಗೆ ಬದ್ಧಮಾಗಿರ್ಪಂತೆ, ಮನವು ಸಂಸಾರ ಬದ್ಧಮಾಗಿರ್ಪುದು. ವಾಯುವು ಜಲದೊಳಗೆ ಬದ್ಧಮಾಗಿರ್ಪಂತೆ, ಜೀವನು ಶರೀರದಲ್ಲಿ ಬದ್ಧಮಾಗಿರ್ಪನು. ಜೀವನು ತಾನು ಸಂಸಾರದೊಳ್ಕೂಡಿ ಸ್ಥೂಲಮಾಗಿಯೂ, ಮನದೊಳ್ಕೂಡಿ ಸೂಕ್ಷ್ಮಮಾಗಿಯೂ ಇರ್ಪನು. ಸಂಸಾರ ಶರೀರ ಮನೋ ಜೀವಂಗಳಿಗಾಧಾರಮಾಗಿರ್ಪ ಕರ್ಮವೇ ಆಕಾಶವು. ಆ ಕರ್ಮವನಾವರಿಸಿರ್ಪ ಮಹಾ ಮೋಹವೆಂಬ ಸುಷುಪ್ತಿಯ ಒಳ ಹೊರಗೆ ಪ್ರಕಾಶಿಸುತ್ತಿರ್ಪ ಜಾಗ್ರತ್ಸ್ವಪ್ನ ಜ್ಞಾನಂಗಳೇ ಚಂದ್ರ–ಸೂರ್ಯರು. ಮನಸ್ಸೆಂಬ ಅಗ್ನಿಯು ಜೀವಾನಿಲನಿಂ, ಪಟುವಾಗಿ ಸಂಸಾರ ಶರೀರಂಗಳಂ ಕೆಡಿಸಿ, ಕರ್ಮವೆಂಬಾಕಾಶದೊಳಗೆ ಜೀವಾನಿಲನಿಂ ಕೂಡಿ ಧೂಮರೂಪಮಾಗಿ ಶರೀರ ಸಂಸಾರಗಳೆಂಬ ಮೇಘಜಲವರ್ಷವಂ ನಿರ್ಮಿಸಿ, ಜೀವನಿಗವಕಾಶವಂ ಮಾಡಿಕೊಟ್ಟು, ತಾನಲ್ಲಿಯೇ ಬದ್ಧನಾಗಿ ಜೀವನಿಂದ ಪ್ರಕಾಶಮಾಗುತಿರ್ಪುದು. ಇಂತಪ್ಪ ಕರ್ಮವೆಂಬಾಕಾಶಕ್ಕೆ ಜೀವನೆಂಬ ವಾಯುವೇ ಕಾರಣವು. ಇವು ಒಂದಕ್ಕೊಂದು ಕಾರಣಮಾಗಿ, ಒಂದಕ್ಕೊಂದು ಸೃಷ್ಟಿ, ಸ್ಥಿತಿ, ಸಂಹಾರಹೇತುಗಳಾಗಿ ತೋರುತ್ತ ಅಡಗುತ್ತ ಬಳಲುತ್ತ ತೊಳಲುತ್ತಿರ್ಪ ಭವರೋಗದಲ್ಲಿ ಜೂಗುತ್ತಿರ್ಪ ಬಂಧನದ ಈ ದಂದುಗವಿನ್ನೆಂದಿಂಗೆ ಪೋಪುದು ಎಂದು ಮುಂದುಗಾಣದೆ ಇರ್ಪೆನ್ನ ತಾಪವಂ ನೀಂ ದಯೆಯಿಂ ತಣ್ಣನೆ ಮಾಳ್ಪೊಡೆ, ಸತ್ಯಜ್ಞಾನಾನಂದಮೂರ್ತಿಯಾದ ಪರಮಾತ್ಮನೇ ಗುರು, ಲಿಂಗ, ಜಂಗಮಸ್ವರೂಪಿಯಾಗಿ, ಜ್ಞಾನದಿಂದ ನಿಜವೂ, ನಿಜದಿಂದಾನಂದವೂ ಪ್ರಕಾಶಮಾಗಿರ್ಪಂತೆ, ಗುರುವಿನಿಂದ ಲಿಂಗವಂ ಲಿಂಗದಿಂದ ಜಂಗಮವಂ ಕಂಡೆನು. ಅಂತಪ್ಪ ನಿಜಾತ್ಮಲಿಂಗವನು ಕರ್ಮವೆಂಬ ಆಕಾಶದಲ್ಲಿ ಬೆರಿಸಲು ಅದೇ ಕಾರಣಮಾಯಿತ್ತು. ಆ ಕರ್ಮವೆಂಬ ಶಕ್ತಿಯುಲಿಂಗ ವೆಂಬ ಶಿವನೊಳಗೆ ಕೂಡಲು, ಲಿಂಗ ತೇಜಸ್ಸಿನಿಂ ಕರ್ಮ ಗರ್ಭದಲ್ಲಿ ಜೀವನಿಗೆ ಪುನರ್ಭವಮಾದುದರಿಂದ ಪ್ರಾಣಲಿಂಗಮಾಯಿತ್ತು. ಅದೆಂತೆಂದೊಡೆ: ಲಿಂಗವೆಂಬ ಮಹಾಲಿಂಗದಿಂ ಜನಿಸಿದ ಕರ್ಮವೇ ಪ್ರಸಾದಲಿಂಗವು. ಆ ಕರ್ಮದಿಂದ ಜನಿಸಿದ ಜೀವನೇ ಜಂಗಮ ಲಿಂಗವು. ಅಂತಪ್ಪ ಲಿಂಗದಿಂದುದಿಸಿದ ಮನಸ್ಸೇ ಶಿವಲಿಂಗವು. ಅಂತಪ್ಪ ಮನಸ್ಸಿನಿಂದ ಪರಿಶುದ್ಧಮಾಗಿರ್ಪ ಶರೀರವೇ ಗುರುಲಿಂಗವು. ಅಂತಪ್ಪ ಗುರುಲಿಂಗಮಾಗಿರ್ಪ ಶರೀರದಿಂದನುಭವಿಸುತ್ತಿರ್ಪ ಸಂಸಾರವೇ ಆಚಾರಲಿಂಗವು. ಇಂತು ಸಂಸಾರ ಶರೀರಂಗಳಿಗೆ ಇಷ್ಟಲಿಂಗವೇ ಕಾರಣವೂ, ಮನೋಜೀವರಿಗೆ ಪ್ರಾಣಲಿಂಗವೇ ಕಾರಣವೂ ಆಗಿ, ಕರ್ಮಲಿಂಗಂಗಳಿಗೆ ಭಾವಲಿಂಗಂಗಳೇ ಕಾರಣ

ಮಾಗಿ, ಕಾರಣವೇ ಐಕ್ಯಸ್ಥಾನಮಾದುದರಿಂ ಸಂಸಾರ ಶರೀರಂಗಳು ಇಷ್ಟಲಿಂಗದೊಳಗೂ ಮನೋಜೀವಂಗಳು ಪ್ರಾಣಲಿಂಗದೊಳಗೂ ಐಕ್ಯವಂ ಹೊಂದಿದವು. ಕರ್ಮಲಿಂಗಂಗಳು ಭಾವಲಿಂಗದೊಳಗೈಕ್ಯಮಾಗಿ ಪ್ರಾಣವು ಭಾವದೊಳಗೆ ಬೆರೆದು, ಭೇದವಡಗಿ ತಾನು ತಾನಾಗಿಪ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

೧೦೨

(೨೪) ಭಕ್ತಿಯೆಂಬ ಪಾಲನ್ನು ಮನದಲ್ಲಿ ಹೆಪ್ಪುಗೊಟ್ಟು, ಅದರಿಂ ಗಟ್ಟಿಗೊಂಡ ದಧಿಯನ್ನು ಶರೀರವೆಂಬ ಭಾಂಡದಲ್ಲಿ ತುಂಬಿ, ತತ್ವವೆಂಬ ಮಂತುಗೋಲಿನಿಂ ಮಥಿಸಲು, ಲಿಂಗವೆಂಬ ನವನೀತವು ಕಾಣಿಸಲಾಗಿ ಅದಂ ಪರಿಗ್ರಹಿಸಿ, ಜ್ಞಾನಾಗ್ನಿಯಲ್ಲಿ ಪಕ್ವವಂ ಮಾಡಲು ನಿಜವಾಸನೆಯಿಂ ಪ್ರಕಾಶಿಸುತ್ತಿಹ ತದ್ಭೃತ ಸೇವನಾಬಲದಿಂದ ಆತ್ಮನೇ ಲಿಂಗಮಾಯಿತ್ತು ಕಾಣಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೆ.

೧೦೩

(೨೫) ಸತ್ಯಸ್ವರೂಪಮಾದ ಬಸವೇಶ್ವರನೇ ಭಕ್ತನು. ಜ್ಞಾನಸ್ವರೂಪಮಾದ ಚನ್ನಬಸವೇಶ್ವರನೇ ಗುರುವು. ಆನಂದಸ್ವರೂಪಮಾದ ಅಲ್ಲಮ ಪ್ರಭುವೇ ಜಂಗಮವು. ಇಂತಪ್ಪ ಗುರು ಜಂಗಮ ಭಕ್ತರೆಂಬ ಮಹಾನದಿಗಳು ತ್ರಿಪಥಗಾ ಮಿನಿಗಳಾಗಿ, ಮಚ್ಛರೀರವೆಂಬ ಕಾಶೀಕ್ಷೇತ್ರದಲ್ಲಿ ಪರಿದು ಪವಿತ್ರಮಂ ಮಾಡಿ, ಎನ್ನ ಹೃದಯವೆಂಬ ಮಣಿಕರ್ಣಿಕಾಸ್ಥಾನದೊಳ್ಮಾರೊಂದಾಗಿ ಕೂಡಲು. ಸತ್ಯವೇ ಕಂಠ, ಜ್ಞಾನವೇ ಗೋಮುಖ, ಆನಂದವೇ ಗೋಳಕಾಕಾರಮಾಗಿರ್ಪ ಮಹಾ ಲಿಂಗ ವೆಂಬ ತ್ರಿವೇಣಿ ಸಂಗಮದಲ್ಲಿ ನಾಂ ಮುಳುಗಿ, ನಿರ್ವಾಣದಲ್ಲಿ ಮುನ್ನಿ ನಂತಿರ್ದೆನು ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.

ಭಾಗ : ಮೂರು

ಕ್ರಿಯೆಗಳು ಮತ್ತು ಸಕೀಲಗಳು

ಕ್ರಿಯೆಗಳು

ಕ್ರಿಯೆಗಳಲ್ಲಿ ''ಮಾರ್ಗಕ್ರಿಯೆ''ಗಳು ''ಮೀರಿದಕ್ರಿಯೆ''ಗಳು ಎಂದು ಎರಡು ಭೇದಗಳಿರುತ್ತವೆ. ಮಾರ್ಗಕ್ರಿಯೆಗಳು ಸ್ಥೂಲವಾಗಿಯೂ ಮೀರಿದಕ್ರಿಯೆಗಳು ಸೂಕ್ಷ್ಮವಾಗಿಯೂ ಇರುವವೆಂದು ಹೇಳಬಹುದು. ಈ ವಿಷಯವಿವೇಚನೆಯಲ್ಲಿ ಕ್ರಿಯೆಗಳ ಉದ್ದೇಶ, ಸ್ವರೂಪು, ಕ್ರಮ, ರೀತಿ ಮತ್ತು ಅವುಗಳ ಉತ್ಕ್ರಾಂತಿ ಈ ಎಲ್ಲ ವಿಷಯಗಳು ಬರುತ್ತವೆ.

ಜಗತ್‌ಸೃಷ್ಟಿಯಲ್ಲಿ ೯ ತರಗತಿಗಳಿರುತ್ತವಷ್ಟೇ. ಅದೇ ಮೇರೆಗೆ ಮನುಷ್ಯನ ದೇಹದಲ್ಲಿಯೂ ೯ ತರಗತಿಗಳುಂಟಾಗಿರುತ್ತವೆ. ಅವುಗಳಿಗನುಸಾರವಾಗಿಯೇ ಅವನ ಕ್ರಿಯೆಗಳೆಲ್ಲವು ಅವನಲ್ಲಿ ಉತ್ಕ್ರಾಂತಿಯನ್ನುಂಟುಮಾಡುತ್ತ ಹೋಗುತ್ತವೆಂದು ವಚನಕಾರರ ಅಭಿಪ್ರಾಯಗಳಿವೆ. ಈ ವಿಷಯಗಳು ಈ ಭಾಗದಲ್ಲಿ ವಿವೇಚಿಸಲ್ಪಟ್ಟಿರುತ್ತವೆ.

ಸಕೀಲಗಳು : ಕ್ರಿಯೆಗಳ ಸ್ವರೂಪದೊಡನೆ ಅವುಗಳ ಪರಸ್ಪರ ಸಂಬಂಧದ ಜ್ಞಾನವನ್ನು ಮಾಡಿಕೊಳ್ಳುವದೂ ಆವಶ್ಯಕವು. ಇದಕ್ಕೆ ವಚನಶಾಸ್ತ್ರದಲ್ಲಿ ಸಕೀಲಗಳ ಜ್ಞಾನವೆಂಬ ಹೆಸರು ಇರುತ್ತದೆ. ಇದು ಈ ವಿಭಾಗದ ಅಂತ್ಯದಲ್ಲಿ ವಿವರಿಸಲ್ಪಟ್ಟಿದೆ.

ಈ ಪ್ರಕಾರ ಈ ಪ್ರಕರಣದಲ್ಲಿ (೧)''ಮಾರ್ಗಕ್ರಿಯೆ''ಗಳು (೨)''ಮೀರಿದ ಕ್ರಿಯೆ''ಗಳು (೩) ''ಸಕೀಲ''ಗಳು ಎಂಬ ಮೂರು ಭಾಗಗಳು ಮಾಡಲ್ಪಟ್ಟಿವೆ.

ಮಾರ್ಗಕ್ರಿಯೆಗಳು

ಪೂಜಾರಿಗಳು

ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ, ಮಹಾದೇವರೆಂದು ಒಂಬತ್ತು ಪೂಜಾರಿಗಳು.

ಬ್ರಹ್ಮನ ವಿವರ : ಅನಾದಿಬ್ರಹ್ಮನ ಪೂಜೆಗೆ ಅಧಿಕಾರಿಯಾಗಿ, ಇರುವೆ ಮೊದಲು, ಆನೆ ಕಡೆಯಾದ ಎಂಬತ್ತುನಾಲ್ಕುಲಕ್ಷ ಜೀವರ ಉತ್ಪತ್ತಿಗೆ ಕರ್ತೃವೆಂಬುದೀಗ, ಬ್ರಹ್ಮನೆಂಬ ಶಬ್ದಕ್ಕರ್ಥ.

ವಿಷ್ಣುವಿನ ವಿವರ : ಅನಾದಿವಿಷ್ಣುವಿನ ಪೂಜೆಗೆ ಅಧಿಕಾರಿಯಾಗಿ, ಇರುವೆ ಮೊದಲು, ಆನೆ ಕಡೆಯಾದ ಎಂಬತ್ತುನಾಲ್ಕುಲಕ್ಷ ಜೀವಜಂತುಗಳಿಗೆ ಆಹಾರವನಿತ್ತು ರಕ್ಷಿಸುವುದಕ್ಕೆ ಕರ್ತನೆಂಬುದೀಗ, ವಿಷ್ಣುವೆಂಬ ಶಬ್ದಕ್ಕರ್ಥ.

ರುದ್ರನ ವಿವರ : ಅನಾದಿರುದ್ರನ ಪೂಜೆಗೆ ಅಧಿಕಾರಿಯಾಗಿ, ಇರುವೆ ಮೊದಲು, ಆನೆ ಕಡೆಯಾಗಿ ಎಂಬತ್ತುನಾಲ್ಕುಲಕ್ಷ ಜೀವಜಂತುಗಳ ಸಂಹಾರಕ್ಕೆ ಕರ್ತನೆಂಬುದೀಗ, ರುದ್ರನೆಂಬ ಶಬ್ದಕ್ಕರ್ಥ.

ಈಶ್ವರನ ವಿವರ : ಅನಾದಿಈಶ್ವರನ ಪೂಜೆಗೆ ಅಧಿಕಾರಿಯಾಗಿ ಇರುವೆ ಮೊದಲು, ಆನೆ ಕಡೆಯಾದ ಎಂಬತ್ತುನಾಲ್ಕುಲಕ್ಷ ಜೀವಿಗಳೆಲ್ಲಕ್ಕು ವಾಯು ಪ್ರಾಣಿಗಳಾಗಿ ಚರಿಸುವಲ್ಲಿ ಅವರ ಪುಣ್ಯ ಪಾಪಾದಿಗಳ ವಿಚಾರಮಾಡಿ, ಅವರವರ ಪುಣ್ಯ ಪಾಪಕ್ಕೆ ತಕ್ಕ ಸುಖ–ದುಃಖಗಳನ್ನಿತ್ತು ಮರಳಿಸುವಂತಹ, ತಿರೋಧಾನಕೃತ್ಯಕ್ಕೆ ಕರ್ತನೆಂಬುದೀಗ, ಈಶ್ವರನೆಂಬ ಶಬ್ದಕ್ಕರ್ಥ.

ಸದಾಶಿವನ ವಿವರ : ಅನಾದಿಸದಾಶಿವನ ಪೂಜೆಗೆ ಅಧಿಕಾರಿಯಾಗಿ ಇರುವೆ ಮೊದಲು, ಆನೆ ಕಡೆಯಾದ ಎಂಬತ್ತುನಾಲ್ಕುಲಕ್ಷಜೀವರಾಶಿಗಳ ಸಂಸಾರಕ್ಕೆ ಹೇವರಿಸಿ, ಶಿವಸ್ಮರಣೆಯ ಮಾಡುವಂತಹ ಕಥಾಪ್ರಸಂಗವ ಆಲಿಸುವಂತಹ, ಅನುಗ್ರಹಕೃತ್ಯಕ್ಕೆ ಕರ್ತನೆಂಬುದೀಗ, ಸದಾಶಿವನೆಂಬ ಶಬ್ದಕ್ಕರ್ಥ.

ಮಹೇಶ್ವರನ ವಿವರ : ಅನಾದಿಮಹೇಶ್ವರನ ಪೂಜೆಗೆ ಅಧಿಕಾರಿಯಾಗಿ, ಶಿವಧ್ಯಾನ, ಶಿವಪ್ರಸಂಗ, ಶಿವಕಥಾಲಾಪ, ಶಿವಶಾಸ್ತ್ರ, ಶಿವಾಗಮ, ಶಿವಗಣ ಸ್ಮರಣೆಯಿಂದ ಯೋಗಾಭ್ಯಾಸಕೃತ್ಯಕ್ಕೆ ಕರ್ತನೆಂಬುದೀಗ, ಮಹೇಶ್ವರನೆಂಬ ಶಬ್ದಕ್ಕರ್ಥ.

ಪರಮೇಶ್ವರನ ವಿವರ : ಅನಾದಿಪರಮೇಶ್ವರನ ಪೂಜೆಗೆ ಅಧಿಕಾರಿಯಾಗಿ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗಾಭ್ಯಾಸಂಗಳಲ್ಲಿ ನಿಷ್ಠಾಪರನುಳ್ಳ ಸಜೀವಂಗೆ ಪರಮಸ್ವರೂಪದಿಂದ, ಗುರುರೂಪವ ತಾಳಿ ಅಂಗದ ಮಾಲಿನ್ಯ ಭಾವ, ಲಿಂಗದ ಶಿಲಾಭಾವವ ಕಳೆದು, ಭವಿಮಾರ್ಗವನಳಿದು, ಶಿವಭಕ್ತಿ ಶಿವಾಚಾರಮಾರ್ಗವ ತೋರಿಸುವುದಕ್ಕೆ ಕರ್ತನೆಂಬುದೀಗ, ಪರಮೇಶ್ವರನೆಂಬ ಶಬ್ದಕ್ಕರ್ಥ.

ಸರ್ವೇಶ್ವರನ ವಿವರ : ಅನಾದಿಸರ್ವೇಶ್ವರನ ಪೂಜೆಗೆ ಅಧಿಕಾರಿಯಾಗಿ, ಶಿವಭಕ್ತಮಾರ್ಗದಲ್ಲಿ ನಿಷ್ಠಾಪರನುಳ್ಳ ಭಕ್ತಂಗೆ ಶಿಕ್ಷಾಮಾರ್ಗವ ತೋರಿಸುವಂತಹ, ಶಿಕ್ಷಾಕೃತ್ಯಕ್ಕೆ ಕರ್ತನೆಂಬುದೀಗ, ಸರ್ವೇಶ್ವರನೆಂಬ ಶಬ್ದಕ್ಕರ್ಥ.

ಮಹಾದೇವನ ವಿವರ : ಅನಾದಿಮಹಾದೇವನ ಪೂಜೆಗೆ ಅಧಿಕಾರಿಯಾಗಿ, ದೀಕ್ಷಾ ಶಿಕ್ಷಾಚಾರಮಾರ್ಗದಲ್ಲಿ ಸನ್ಮೋಹವನುಳ್ಳ ಸದ್ಭಕ್ತಂಗೆ ಪ್ರಮಥ ಗಣಮಾರ್ಗವ ತೋರಿಸುವಂತಹ ಮೋಕ್ಷಕೃತ್ಯಕ್ಕೆ ಕರ್ತನೆಂಬುದೀಗ, ಮಹಾದೇವನೆಂಬ ಶಬ್ದಕ್ಕರ್ಥ.

ಇಂತು ಅನಾದಿವಿಡಿದು ಸಾಕಾರಲೀಲೆಯಂ ಧರಿಸಿ ತಮ್ಮಂತರಂಗದಲ್ಲಿ ಬೆಳಗುವ ಅನಾದಿ ವಸ್ತುವ ತಂದು ಸ್ವಾತ್ಮಜ್ಞಾನದಿಂದರಿದು ಪೂಜಾ ನಮಸ್ಕಾರಕ್ಕೆ ಯೋಗ್ಯರಾಗಿ ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಪೂಜಾರಿಗಳಾಗಿರ್ಪರು.*

ಅಂಗಗಳು

ಪೃಥ್ವಿ ಎಂಬ ಅಂಗದ ವಿವರ : ಅಂಡಜ, ಪಿಂಡಜ, ಉದ್ಭಿಜ, ಜರಾಯುಜ ಮೊದಲಾದ ಎಂಬತ್ತುನಾಲ್ಕು ಲಕ್ಷ ಆತ್ಮ[ಜೀವ]ಂಗಳ ಆಚಾರ ಅನಾಚಾರಂಗಳ ನೋಡದೆ ತನ್ನೊಳಗೆ ಗರ್ಭೀಕರಿಸಿಕೊಂಡು ಅವರವರಂತೆ ಇಪ್ಪುದೀಗ, ಪೃಥ್ವಿ ಎಂಬ ಶಬ್ದಕ್ಕರ್ಥ.

ಅಪ್ಪುವೆಂಬಂಗದ ವಿವರ : ಸಕಲಾತ್ಮರ ಪುಣ್ಯ–ಪಾಪ, ಆಚಾರ–ಅನಾಚಾರಂಗಳ ನೋಡದೆ ಅವರವರಂತೆ ತಾನು ತನ್ನಂತೆ ಹೊದ್ದಿಯೂ ಹೊದ್ದದೆ ಪರೋಪಕಾರಿಯಾಗಿ, ತಾ ಬಂದ ಬಟ್ಟೆಯ ಹಿಡಿದು ಚರಿಸುವಂತಹದೇ ಅಪ್ಪುವೆಂಬಂಗದ ಶಬ್ದಕ್ಕರ್ಥ.

ಅಗ್ನಿ ಎಂಬಂಗದ ವಿವರ : ಸಪ್ತಧಾತುಯುಕ್ತವಾದ ಜೀವ ನಿರ್ಜೀವಂಗಳ ನೋಡದೆ ಅವರವರ ಗುಣಂಗಳ ವಿಚಾರಿಸದೆ, ಅವರ ಸ್ಥಲಂಗಳ ನೋಡದೆ ಸುಟ್ಟು ಬೂದಿಯಾಗಿ, ಕೆಲವು ೧[ಪಾಕ]೧ ಪಕ್ವಂಗಳಿಂದ ಕೆಲವು ರೂಪಕವ ಮಾಡಿ, ಸುಖವನೇ ಕೊಟ್ಟು, ತಾನೆಂದಿನಂತೆ ತನ್ನ ಪೂರ್ವವ ಕೊಡುವಂತಹದೇ ಅಗ್ನಿ ಎಂಬಂಗದ ಶಬ್ದಕ್ಕರ್ಥ.

ವಾಯುವೆಂಬಂಗದ ವಿವರ : ಪೃಥ್ವಿ ಅಪ್ಪು ತೇಜ ಮೊದಲಾದ ಆತ್ಮನಲ್ಲಿ ಹುಟ್ಟಿದ, ದುರ್ವಾಸನೆ–ಸದ್ವಾಸನೆ ಎಂಬ ಉಭಯ ಬಂಧ ಕರ್ಮಂಗಳಿಗೊಳಗಾಗದೆ ಧರೆಯಾಕಾಶ ಮಧ್ಯದಲ್ಲಿ ಶೀತೋಷ್ಣಂಗಳೇ ಆಹಾರಮಾಗಿ, ತನ್ನ ಜನಿತ ಸ್ಥಾನದಲ್ಲಿ ಎಚ್ಚರಗುಂದದಿರುವಂತಹದೇ ವಾಯುವೆಂಬಂಗದ ಶಬ್ದಕ್ಕರ್ಥ.

ಆಕಾಶವೆಂಬಂಗದ ವಿವರ : ಭೂಮಿ, ಜಲ, ಅಗ್ನಿ, ಮರುದಂಗಳಿಂದ ಮರದ ಹೊಗೆ ಧೂಮಂಗಳನೊಳಕೊಂಡು ಶಶಿ, ರವಿ, ನಕ್ಷತ್ರ, ಗುಡುಗು, ಮಿಂಚು, ಮೊದಲಾದವುಗಳಂ ತನ್ನೊಳಗಿಂಬಿಟ್ಟುಕೊಂಡು, ಪರೋಪಕಾರ ಶರೀರಿಯಾಗಿ

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೯.

೧–೧ ಪಾಪ (ಮೂ)

ತನ್ನ ಜನ್ಮಸ್ಥಾನದಲ್ಲಿ ಎಚ್ಚರಗೊಂಡಿರುವಂತಹದೇ ಆಕಾಶ ವೆಂಬಂಗದ ಶಬ್ದಕ್ಕರ್ಥ.

ಆತ್ಮಾಂಗದ ವಿವರ : ಪೃಥ್ವಿಯಲ್ಲಿ ಹುಟ್ಟಿದ ಗಂಧದ ಪರಿಣಾಮ, ಅಪ್ಪುವಿನಲ್ಲಿ ಹುಟ್ಟಿದ ರಸದ ರುಚಿ, ಅಗ್ನಿಯಲ್ಲಿ ಹುಟ್ಟಿದ ರೂಪಿನ ಪರಿಣಾಮ, ವಾಯುವಿನಲ್ಲಿ ಹುಟ್ಟಿದ ಸ್ಪರ್ಶನದ ಶೀತ ಉಷ್ಣ ; ಆಕಾಶದಲ್ಲಿ ಹುಟ್ಟಿದ ಶಬ್ದ ಸಂತೋಷಂಗಳ ಚಿದ್ರೂಪವಾಗಿರ್ದ ಶರೀರವುಳ್ಳಾತನೇ ಈ ಪಂಚವಿಧದ ಭೋಗಂಗಳನೊಡಗೂಡಿ ಸಾಕು ಬೇಕೆಂಬ ಬಂಧನಂಗಳಿಂದ ತೊಳಲಿ ಬಳಲಿ ತನಗೆ ಬೇಕಾಗಿದ್ದರೆ ಉಪಕಾರಿ, ಬೇಡವಾದರೆ ಅಪಕಾರಿಯಾಗಿ, ಚರಿಸು ವಂತಹದೇ ಆತ್ಮನೆಂಬಂಗದ ಶಬ್ದಕ್ಕರ್ಥ.

ತ್ಯಾಗಾಂಗದ ವಿವರ : ಮಲಮಾಯಾಕರ್ಮಗಳ ದುರಾಚಾರ ಚಾರಿತ್ರ್ಯ ವನು ಸರ್ವಾವಸ್ಥೆಗಳಲ್ಲಿ ತ್ರಿಕರಣ ಒಬ್ಬುಳಿಯಾಗಿ ತೊಲಗಿಸಿ, ನಿರಾಕಾರತ್ವದಿಂದ ಶ್ರೀಗುರೂಪಾವಸ್ಥೆಯಲ್ಲಿ ತದ್ಗತನಾಗಿ ಅಂಗ, ಮನ, ಪ್ರಾಣ, ಭಾವಂಗಳಲ್ಲಿ ಎರ ಕತ್ವವನುಳ್ಳಂತಹದೇ ತ್ಯಾಗಾಂಗವೆಂಬ ಶಬ್ದಕ್ಕರ್ಥ.

ಭೋಗಾಂಗದ ವಿವರ : ರೂಪು, ರುಚಿ, ತೃಪ್ತಿ, ಪರಿಮಳ, ಶಬ್ದ, ದ್ರವ್ಯವನು, ಆಭರಣ, ವಸ್ತ್ರ, ಅಲಂಕಾರ ಮೊದಲಾದ ಸಕಲ ಪದಾರ್ಥವನು, ಲಿಂಗಾರ್ಪಣಂಗೈದು, ನಿರ್ವಂಚಕತ್ವದಿಂದ ಷಡ್ವರ್ಗ, ಷಡೂರ್ಮಿ, ಷಡ್ಭಾವ, ವಿಕಾರಂಗಳ ತನ್ನ ಸ್ವಾತ್ಮಜ್ಞಾನದಿಂದ ತಿಳಿದು ನಿಷ್ಠಾಪರನುಳ್ಳಂತಹದೇ ಭೋಗಾಂಗವೆಂಬ ಶಬ್ದಕ್ಕರ್ಥ.

ಯೋಗಾಂಗದ ವಿವರ : ಶ್ರೀ ಗುರುದೇವನ ಕರುಣಕಟಾಕ್ಷದಿಂದ ಇಷ್ಟ, ಪ್ರಾಣ, ಭಾವಲಿಂಗಂಗಳ ತನ್ನಂಗ ಮನ ಪ್ರಾಣಂಗಳಲ್ಲಿ ಸಂಬಂಧವ ಮಾಡಿ ಕೊಂಡು ಆ ಅಂಗಂಗಳಿಗೆ ಹರಣ–ಕರಣ ಚೈತನ್ಯಸ್ವರೂಪವಾದಂತಹ ನಿರಂಜನ ಲಿಂಗ ಜಂಗಮದ ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರವೆಂಬ ನಿಜಸಂಪದಂಗಳಂ ಪಡೆದು, ಅಂತರಂಗ ಬಹಿರಂಗದಲ್ಲಿ ಪಂಚಮಹಾಪಾತಕ, ಸೂತಕ, ಹಮ್ಮು–ಬಿಮ್ಮುಗಳ ಜಯಿಸಿ, ಧ್ಯಾನ, ಮೌನ, ನೇಮ, ನಿತ್ಯ, ಸತ್ಯ, ಸದ್ಭಾವವೆಂಬ ಷಡುಗ್ಗೈಶ್ವರ್ಯ ಸಂಯೋಗಂಗಳಲ್ಲಿ ಮುಳುಗಿ ತಾ ತನ್ನನರಿಯದೆ ಮನೋರ್ಲಯವನೈದುವಂತಹದೇ ಯೋಗಾಂಗವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿಜಾಂಗಗಳಾಗಿ, ಆದಿವಿಡಿದು ಬಂದು ಸಾಕಾರಲೀಲೆಯಂ ಧರಿಸಿ, ಪರಶಿವಲಿಂಗವಿರಿಸಿದಂತೆ ಅನಂತ ರೂಪದಿಂದ ನಾಟ್ಯಕ್ಕೆ ನಿಂದು ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ [೧][ಅಂ][೧]ಗಗಳಾಗಿ ರ್ಪವು.

೧–೧ ಲಿಂ (ಮೂ)

ತನುಗಳು

ಸ್ಥೂಲತನುವಿನ ವಿವರ : ಪೃಥ್ವಿ ಸಂಬಂಧವಾದ ಇಪ್ಪತ್ತೈದು ತತ್ವಗಳಿಂದ ಪರ್ವತದಷ್ಟು ದುಃಖ, ಅಣುಮಾತ್ರ ಸುಖಂಗಳಿಂದ ಶೋಭಿಸುವಂತಹ ದೆಂಬುದೀಗ, ಸ್ಥೂಲತನುವೆಂಬ ಶಬ್ದಕ್ಕರ್ಥ.

ಸೂಕ್ಷ್ಮತನುವಿನ ವಿವರ : ಅಪ್ಪುಸಂಬಂಧವಾದ ಇಪ್ಪತ್ತುತತ್ವಗಳಿಂದ ನೂರುಪಾಲು ದುಃಖ, ಎಂಬತ್ತು ಪಾಲು ಸುಖಂಗಳಿಂದ ಶೋಭಿಸುವಂತಹ ದೆಂಬುದೀಗ, ಸೂಕ್ಷ್ಮತನುವೆಂಬ ಶಬ್ದಕ್ಕರ್ಥ.

ಕಾರಣತನುವಿನ ವಿವರ : ಅಗ್ನಿಸಂಬಂಧವಾದ ಹದಿನೈದುತತ್ವಗಳಿಂದ ನೂರುಪಾಲು ದುಃಖ, ನೂರುಪಾಲು ಸುಖ. ಸುಖ–ದುಃಖಂಗಳು ಸಮಾನಂ ಗಳಿಂದ ಶೋಭಿಸುವಂತಹದೆಂಬುದೀಗ, ಕಾರಣತನುವೆಂಬ ಶಬ್ದಕ್ಕರ್ಥ.

ನಿರ್ಮಲತನುವಿನ ವಿವರ : ವಾಯುತತ್ವಸಂಬಂಧವಾದ ಹತ್ತು ತತ್ವ ಗಳಿಂದ ಎಂಬತ್ತು ಪಾಲು ದುಃಖ ನೂರುಪಾಲು ಸುಖಂಗಳಿಂದ ಶೋಭಿಸು ವಂತಹದೆಂಬುದೀಗ, ನಿರ್ಮಲತನುವೆಂಬ ಶಬ್ದಕ್ಕರ್ಥ .

ಆನಂದತನುವಿನ ವಿವರ : ಆಕಾಶತತ್ವ ಸಂಬಂಧವಾದ ಐದು ತತ್ವಂ ಗಳಿಂದ ಅರವತ್ತು ಪಾಲು ದುಃಖ ನೂರುಪಾಲು ಸುಖಂಗಳಿಂದ ಶೋಭಿಸು ವಂತಹದೆಂಬುದೀಗ, ಆನಂದತನುವಿನ ವಿವರವು.

ಶುದ್ಧತನುವಿನ ವಿವರ : ಜಾಗ್ರತ್, ಸ್ವಪ್ನ, ಸುಷುಪ್ತಿ ತೂರ್ಯ ತೂರ್ಯಾ ತೀತ, [೧][ತೂರ್ಯಾತೀತೋತ್ತರವೆಂಬ][೧] ಷಡ್ವಿಧಾವಸ್ಥೆಗಳನೊಳಕೊಂಡು, ನಾಲ್ವತ್ತು ಪಾಲು ದುಃಖ, ನೂರು ಪಾಲು ಸುಖಂಗಳಿಂದ, ಸಕಲಾತ್ಮರ ಪುಣ್ಯಪಾಪಂಗಳೆ ಆಹಾರಮಾಗಿ, ಶೋಭಿಸುವಂತಹ ಸೂರ್ಯನೆಂಬುದೀಗ, ಶುದ್ಧತನುವೆಂಬ ಶಬ್ದ ಕ್ಕರ್ಥ.

ಚಿದ್ರೂಪತನುವಿನ ವಿವರ : ವಿಶ್ವ, ತೈಜಸ, ಪ್ರಾಜ್ಞ, ಅಂಡ, ಅಜಾಂಡ, ಅಕಳಂಕವೆಂಬ ಷಡ್ಭೂತಂಗಳನೊಳಕೊಂಡು ಇಪ್ಪತ್ತು ಪಾಲು ದುಃಖ, ನೂರು ಪಾಲು ಸುಖಂಗಳಿಂದ ಸರ್ವಾತ್ಮರ ವ್ಯವಹಾರಂಗಳೇ ಆಹಾರಮಾಗಿ, ಶೋಭಿಸು ವಂತಹ ಚಂದ್ರನೆಂಬುದೀಗ, ಚಿದ್ರೂಪತನುವೆಂಬ ಶಬ್ದಕ್ಕರ್ಥ.

ಚಿನ್ಮಯತನುವಿನ ವಿವರ : ಮಲತ್ರಯ, ಗುಣತ್ರಯ, ಮನತ್ರಯ, ಕರಣತ್ರಯ, ಭೋಗತ್ರಯ, ಯೋಗತ್ರಯ* ಮೊದಲಾದ ಪ್ರಪಂಚುಗಳಿಂದ ಹೊದ್ದಿಯೂ ಹೊದ್ದದೆ ಸುಖವೇ ಪರ್ವತದಷ್ಟಾಗಿ ದುಃಖವೇ ಅಣುಮಾತ್ರ ವಾಗಿ ಶೋಭಿಸುವಂತಹ ಆತ್ಮನೆಂಬುದೀಗ, ಚಿನ್ಮಯತನುವೆಂಬ ಶಬ್ದಕ್ಕರ್ಥ.

೧–೧ ನಿರವಯವೆಂಬ (ಮೂ)

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೦.

ನಿರ್ಮುಕ್ತತನುವಿನ ವಿವರ : ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮರ ಸುಖ–ದುಃಖ, ಪುಣ್ಯ–ಪಾಪಂಗಳಿಗೆ ಹೊರಗಾಗಿ ತನಗೊಂದು ಜಡವಾಗಿ ತೋರುವ, ತನಗೊಂದು ಆಶ್ರಯಂಗಳಿಲ್ಲದೆ ಕಪಟ ನಾಟಕ–ರೂಪಿನಿಂದ ಶೋಭಿಸುವಂತಹ ಕಾಳರಾತ್ರಿ [ಕಳೆದು ಬೆಳಗುವದು] ಎಂಬುದೀಗ, ನಿರ್ಮುಕ್ತತನುವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ತೆರದಿಂದ ತನುರೂಪಿಗಳಾಗಿ ಆದಿವಿಡಿದು ಬಂದು ಸಾಕಾರಲೀಲೆಯಧರಿಸಿ ಶಿವನಾಟ್ಯದ ಚಿತ್ತದ ಬೊಂಬೆಗಳಾಗಿ, ಶಿವಭಕ್ತಗಣಂಗಳ ನೋಟಕ್ಕೆ ಬಹು ನೂತನತರವಾದ ಚಿತ್ರವಿಚಿತ್ರಂಗಳಾಗಿ, ಅನಾದಿಶರಣ ಪರಿ ಪೂರ್ಣ ಪರಾತ್ಪರಮೂರ್ತಿಗೆ ನವವಿಧ ತನುಗಳಾಗಿರ್ಪರು.

ಗಣಂಗಳು

ಭಕ್ತನ ವಿವರ : ಪಂಚಮಹಾಪಾತಕ ಸೂತಕಾದಿಗಳ, ತನ್ನ ಸ್ವಾತ್ಮಜ್ಞಾನ ದಿಂದ ನಷ್ಟವ ಮಾಡಿ, ಚಿದ್ಘನಲಿಂಗವ ಪಡೆದು ಲಿಂಗಮುಂತಾಗಿ ನಿರ್ವಂಚ ಕತ್ವದಿಂದ ಸತ್ಯ ಕಾಯಕವ ಮಾಡಿ, ಲಿಂಗ ಜಂಗಮಕ್ಕೆ ಸಮಸ್ತ ಭೋಗಂಗಳ ಸಮರ್ಪಿಸಿ, ಭವಿಮಾರ್ಗವನುಳಿದು ಸತಿ–ಸುತ ಒಡಹುಟ್ಟಿದವರು ಬಾಂಧವರು ಮೊದಲಾಗಿ, ಸದಾಚಾರ, ಲಿಂಗಾಚಾರ, ಶಿವಾಚಾರ ಗಣಾಚಾರ, ಭೃತ್ಯಾ ಚಾರವೇ ಪ್ರಾಣವಾಗಿರ್ಪಾತನೆಂಬುದೀಗ, ಭಕ್ತನೆಂಬ ಶಬ್ದಕ್ಕರ್ಥ.

ಮಹೇಶ್ವರನ ವಿವರ : ಷಡೂರ್ಮಿ, ಷಡ್ವರ್ಗ, ಷಡ್ಭಾವ ವಿಕಾರಂಗಳು ಮುಂತಾದ ದುರ್ಮಾರ್ಗ ಅನಾಚಾರವಂ ತನ್ನ ಸ್ವಾತ್ಮಜ್ಞಾನದಿಂದ ನಷ್ಟವ ಮಾಡಿ, ಸಮಸ್ತ ಮದಂಗಳಲ್ಲಿ ಯೋಗ್ಯಾಯೋಗ್ಯವ ತಿಳಿದು ಪುತ್ರ, ಮಿತ್ರ, ಕಳತ್ರಾದಿಗಳೆಲ್ಲ ಪಂಚಾಚಾರಂಗಳ ಮುಂದುಗೊಂಡು, ಸಮಸ್ತ ಭೋಗಂಗಳ ನಿರ್ವಂಚಕತ್ವದಿಂದ ಸಮರ್ಪಿಸಿ, ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರವೇ ಪ್ರಾಣವಾಗಿರ್ಪಾತನೆಂಬುದೀಗ, ಮಹೇಶ್ವರನೆಂಬ ಶಬ್ದಕ್ಕರ್ಥ.

ಪ್ರಸಾದಿಯ ವಿವರ : ಸಪ್ತವ್ಯಸನ, ಅಷ್ಟಮದಂಗಳ ಸ್ವಾತ್ಮಜ್ಞಾನದಿಂದ ನಷ್ಟವ ಮಾಡಿ, ಲಿಂಗಾಂಗಸಂಬಂಧಿಯಾಗಿ ಭಕ್ತ ಮಹೇಶ್ವರರ ಸನ್ಮಾರ್ಗಾ ಚಾರಂಗಳೇ ತನಗಂಗವಾಗಿ, ರೂಪು–ರುಚಿ–ತೃಪ್ತಿಗಳೇ ಲಿಂಗ–ಜಂಗಮ, ಜಂಗಮ–ಲಿಂಗದ ಮುಖಂಗಳನು ಗುರುಮಾರ್ಗದಿಂದರಿತು, ಮಿಶ್ರಂಗಳ ತಾನೇ ಸಮರ್ಪಿಸಿ ನಿರ್ವಂಚಕ ನಿಷ್ಕಳಂಕನಾಗಿ ಸತ್ಯ, ನಿತ್ಯ, ಸದ್ಧರ್ಮ, ಸರ್ವಾ ಚಾರವೇ ಪ್ರಾಣವಾಗಿರ್ಪಾತನೆಂಬುದೀಗ, ಪ್ರಸಾದಿ ಎಂಬ ಶಬ್ದಕ್ಕರ್ಥ.

ಪ್ರಾಣಲಿಂಗಿಯ ವಿವರ : ದಶವಾಯುಗಳ ದುರ್ವರ್ತನ ಗುಣಂಗಳನೆಲ್ಲ ತ್ನ ಸ್ವಾತ್ಮಜ್ಞಾನದಿಂದ [೧]ಬಿಡುಗಡೆಮಾಡಿಕೊಂಡು[೧] ಶುಚಿತ್ವದಿಂದ

೧–೧ ಬಿಡುಗಡಿಸಿ (ಮೂ)

ಸಚ್ಚಿದಾನಂದ ಗುರುಕೃಪಾವಂತನಾಗಿ ಭಕ್ತ , ಮಹೇಶ್ವರ, ಪ್ರಸಾದಿಯ ಸ್ಥಲವು ಆಚರಣೆಯಾಗಿ, ಇಪ್ಪತ್ತೊಂದು ಸಾವಿರದ ಆರುನೂರು ಜಪದಲ್ಲಿ ಮನ ಮಗ್ನವುಳ್ಳಾತನೆಂಬುದೀಗ, ಪ್ರಾಣಲಿಂಗಿಯೆಂಬ ಶಬ್ದಕ್ಕರ್ಥ.

ಶರಣನ ವಿವರ : ಕರ್ಮೇಂದ್ರಿಯ, ಜ್ಞಾನೇಂದ್ರಿಯ ವಿಷಯಂಗಳ ದುರ್ವರ್ತನ ಗುಣಂಗಳ ತನ್ನ ಸ್ವಾನುಭಾವಜ್ಞಾನದಿಂದ ಹೇಯವಂತನಾಗಿ ; ಚಿನ್ಮಾದ, ಚಿದ್ಬಿಂದು, ಚಿತ್ಕಳಾ, ಸದ್ಗುರುಮೂರ್ತಿಯ ಕರುಣಕಟಾಕ್ಷೆಯಿಂದ ಇಪ್ಪತ್ತೊಂದುಯುಗದಲ್ಲಿ ಪಾವನ ಸತ್ಯ ಸದ್ಗುಣಾನಂದಲೀಲೆಯ ಬೆಸಗೊಂಡು ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿಸ್ಥಲವ ಮುಂದುಗೊಂಡು ಪಂಚವಿಧ ಪದಾರ್ಥಂಗಳ ಶರಣಗಣ, ಲಿಂಗ, ಜಂಗಮ, ಜಂಗಮಲಿಂಗಕ್ಕೆ ನಿವೇದಿಸಿ ನಿರ್ಮಾಯಸ್ವರೂಪನಾಗಿಪ್ಪಾತನೆಂಬುದೀಗ, ಶರಣನೆಂಬ ಶಬ್ದಕ್ಕರ್ಥ.

ಐಕ್ಯನ ವಿವರ : ಕುಚಿತ್ತ , ಕುಬುದ್ಧಿ , ಅಹಂಕಾರ, ಕುಮನ, ಅಜ್ಞಾನ, ದುರ್ಭಾವ ಮೊದಲಾದ ದುಷ್ಕರಣಂಗಳ ದುರ್ಮಾರ್ಗ, ದುರಾಚಾರ ನಡೆನುಡಿ ಗಳಂ ತ್ಯಜಿಸಿ, ಅಂಗಕ್ಕೆ ಆಚಾರ, ಮನಕ್ಕೆ ಮಂತ್ರ, ಭಾವಕ್ಕೆ [೧][ಅನುಭಾವ][೧] ಪ್ರಾಣಕ್ಕೆ ಸಂಬಂಧವನರಿತು ಭಕ್ತ , ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣಸ್ಥಲಂಗಳಲ್ಲಿ ಮೋಹವುಳ್ಳಾತನಾಗಿ ಅವರಾಚಾರ ನಡೆನುಡಿಗಳೇ ತನ್ನವಾಗಿ, ಸದ್ಭಕ್ತಿ , ಜ್ಞಾನ, ವೈರಾಗ್ಯದಲ್ಲಿ ನಿಜನಿಷ್ಠನೆಂಬುದೀಗ, ಐಕ್ಯನೆಂಬ ಶಬ್ದಕ್ಕರ್ಥ.

ನಿಷ್ಕಳಂಕನ ವಿವರ : ವಾಚಕ, ಮಾನಸ, ಕಾಯಕಂಗಳಲ್ಲಿ ಮಲ ಮಾಯಾ ಭೋಗಂಗಳ ಬಿಡುಗಡೆಯುಳ್ಳಾತನಾಗಿ ಸರ್ವಸಂಗ ಪರಿತ್ಯಾಗಮೂರ್ತಿಯಾಗಿ, ಅಂಗ, ಮನ, ಭಾವಂಗಳೆಲ್ಲ ಪ್ರಸಾದವಾಗಿ, ಗುರುವೇ ತಾನಾಗಿ ನೆಲಸಿರ್ಪಾತ ನೆಂಬುದೀಗ, ನಿಷ್ಕಳಂಕನೆಂಬ ಶಬ್ದಕ್ಕರ್ಥ.

ನಿಶ್ಶೂನ್ಯನ ವಿವರ : ಬ್ರಹ್ಮನ ಉತ್ಪತ್ತಿ , ವಿಷ್ಣುವಿನ ಸ್ಥಿತಿ, ರುದ್ರನ ಲಯ, ಈಶ್ವರನ ತಿರೋಭಾವ, ಸದಾಶಿವನ ಅನುಗ್ರಹ, ಮೊದಲಾದ ಪಂಚ ಕೃತ್ಯಂಗಳಿಗೆ ಒಳಗಾದ ಮನು, ಮುನಿ, ದೇವ, ದಾನವ, ಮಾನವರಿಗೆ ಮೀರಿ ತೋರುವ ಷಟ್‌ಸ್ಥಲ ಭಕ್ತ ಗಣಾರಾಧ್ಯರ ಕರ, ಮನ, ಭಾವದಲ್ಲಿ ಲಿಂಗವೇ ನೆಲಸಿರ್ಪ ಚಿದ್ಘನವಸ್ತುವೆಂಬುದೀಗ, ನಿಶ್ಶೂನ್ಯನೆಂಬ ಶಬ್ದಕ್ಕರ್ಥ.

ನಿರಂಜನನ ವಿವರ : ಸಕಲಾಗಮ, ಶಾಸ್ತ್ರ, ಪುರಾಣ, ತರ್ಕ, ವ್ಯಾಕರಣ, ಉಪನಿಷತ್ ಮೊದಲಾದ ಸ್ತೋತ್ರಕ್ಕೆ ಮೀರಿ ತೋರುವ, ಪ್ರಮಥಗಣಾರಾಧ್ಯರ ರೂಪು, ರುಚಿ, ತೃಪ್ತಿಗಳಲ್ಲಿ ಜಂಗಮವೇ ನೆಲೆಸಿರ್ಪಾತನೆಂಬುದೀಗ, ನಿರಂಜನ ನೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪಾವನಾರ್ಥವಾಗಿ ಸಾಕಾರಲೀಲೆಯ

೧–೧ ಆಚರಣೆ (ಮೂ)

ಧರಿಸಿ, ಪರಶಿವ ಗಣಾರಾಧ್ಯರೆನಿಸಿ, ಪೂಜ್ಯ ಪೂಜಕನೆಂಬುಭಯ ವರ್ತನೆಗಳ ತಮ್ಮ ತಾವೇ ರಚಿಸಿ, ಪರಿಪೂರ್ಣ ಬೆಳಗಿಂಗೆ ಬೆಳಗಾಗಿ ಅನಾದಿಶರಣ ಪರಾತ್ಪರ ಮೂರ್ತಿಗೆ ನವವಿಧ ಗಣಂಗಳಾಗಿರ್ಪರು.

ಹಸ್ತಗಳು

ಸುಚಿತ್ತಹಸ್ತದ ವಿವರ : ಅಧೋಸೃಷ್ಟಿಗೆ ಕಾರಣವಾದ ಮಾಯಾಂಗನೆಯ ಆರು ಸಣ್ಣ , ಆರು ದೊಡ್ಡ ಆರು ತಿಳುಪುಳ್ಳಂಗನೆಯ ಹಾವ ಭಾವ ವಿಲಾಸಂಗಳಿಗೆ, ರತಿ ಕಾಮದಿಂದ ಇಚ್ಛೈಸದೆ ಕ್ರಿಯೆಗಳಲ್ಲಿ ನಿಷ್ಕಾಮವುಳ್ಳಾತನೆಂಬುದೀಗ, ಸುಚಿತ್ತಹಸ್ತವೆಂಬ ಶಬ್ದಕ್ಕರ್ಥ.

ಸುಬುದ್ಧಿಹಸ್ತದ ವಿವರ: ಆದಿಗಣಂಗಳು, ಅನಾದಿಗಣಂಗಳು, ನೂರೊಂದು ವಿರಕ್ತರು, ಮರ್ತ್ಯಲೋಕದ ಮಹಾಗಣಂಗಳು, ಮಹಾಕೋಪೋದ್ರೇಕದಿಂದ ಹೊಡೆದು, ಬಡಿದು, ಬಂಧನಂಗಳಿಂದ ಬಾಧಿಸಿದರೂ ಪ್ರತಿ ಉತ್ತರ ಕೊಡದೆ, ಮರ್ತ್ಯದ ಜಡಾತ್ಮರಿಂದ ಕುಂದು ನಿಂದೆಗಳು ಬಂದು ಸೋಂಕಿದಲ್ಲಿ, ಅವರಿಗೆ ಕೋಪವ ಮಾಡದೆ ಮಹಾಲಿಂಗ ಧ್ಯಾನ ಮೌನದಲ್ಲಿ ನಿಃಕ್ರೋಧನಾಗಿ ಇರುವಂತಹದೆಂಬುದೀಗ, ಸುಬುದ್ಧಿಹಸ್ತವೆಂಬ ಶಬ್ದಕ್ಕರ್ಥ.

ನಿರಂಹಕಾರಹಸ್ತದ ವಿವರ : ಶಿವಾಜ್ಞೆಯಿಂದ ಅಷ್ಟಭೋಗ ಮಹ ದೈಶ್ವರ್ಯಂಗಳು ಬಂದು ಒದಗಿದಲ್ಲಿ ಮೂಲಾಹಂಕಾರದಿಂದ ಸಕಲಾತ್ಮರಲ್ಲಿ ದುರ್ಗುಣಿಯಾಗದೆ, ಸದಾಚಾರ ಸದ್ಭಕ್ತ , ಶರಣಗಣಂಗಳಲ್ಲಿ ಪ್ರೀತಿ–ಪ್ರೇಮ ಜಂಗಮ ದಾಸೋಹದಲ್ಲಿ ಮಹಾ ನಿರ್ಲೋಭವುಳ್ಳಂತಹದೆಂಬುದೀಗ, ನಿರಹಂಕಾರಹಸ್ತವೆಂಬ ಶಬ್ದಕ್ಕರ್ಥ.

ಸುಮನಹಸ್ತದ ವಿವರ : ಪ್ರವೃತ್ತಿ ಲೋಕದ ಜಡಾತ್ಮರಂತೆ ವಾರ, ತಿಥಿ, ನಕ್ಷತ್ರ, ಹುಣ್ಣಿಮೆ, ಅಮಾವಾಸ್ಯೆ, ಪಾಂಚರಾತ್ರ, ಶುಭಾಶುಭ, ಹೋಮ, ನೇಮ, ಯಾತ್ರೆ, ಹಠಯೋಗ, ಶೈವಕರ್ಮ, ಮೊದಲಾದ ನಡತೆಗಳ ಮೋಹಿಸದೆ, ಸದ್ಭಕ್ತ ಶರಣಗಣ, ಶ್ರೀಗುರು ಲಿಂಗ ಜಂಗಮದ ತೀರ್ಥ ಪ್ರಸಾದದಲ್ಲಿ ಮೋಹವುಳ್ಳಾತನೆಂಬುದೀಗ, ಸುಮನಹಸ್ತವೆಂಬ ಶಬ್ದಕ್ಕರ್ಥ.

ಸುಜ್ಞಾನಹಸ್ತದ ವಿವರ : ಅಂಗವಿಷಯಂಗಳ ಇಷ್ಟಲಿಂಗಕ್ಕೆ ಭೃತ್ಯರೆನಿಸಿ, ಪ್ರಾಣಾದಿ ವಾಯುಗಳ ಪ್ರಾಣಲಿಂಗಕ್ಕೆ, ಕರಣಾದಿಗಳ ಭಾವಲಿಂಗಕ್ಕೆ ದಾಸರೆನಿಸಿ ಸರ್ವಾವಸ್ಥೆಗಳನ್ನೆಲ್ಲ ಮಹಾಲಿಂಗದ ಕಿರಣಗಳಾಗಿ, ಭದ್ರಗಜದಂತೆ ವೀರಶೈವ ಮತದಲ್ಲಿ ವ್ಯವಹರಿಸಿ, ಬಳಲಿಸುವ ಪರವಾದಿಗಳಿಗೆ ಅಂಕುಶನಾಗಿ ನಿರೋಧಕನಾಗಿರುವಂತಹದ್ದೆಂಬುದೀಗ, ಸುಜ್ಞಾನಹಸ್ತವೆಂಬ ಶಬ್ದಕ್ಕರ್ಥ.

ಸದ್ಭಾವಹಸ್ತದ ವಿವರ : ವೇಧಾ, ಮಂತ್ರ, ಕ್ರಿಯಾ ದೀಕ್ಷೆಗೆ ಹೊರಗಾದ, ಭೂಪ್ರತಿಷ್ಠೆಯೇ ದೈವವೆಂದು ಆರಾಧಿಸುವ ಜೀವಾತ್ಮರಿಗೆ ವಂದಿಸದೆ ಅವರುಗಳ

ಕ್ರಿಮಿ ಕೀಟ ಪ್ರಾಣಿಯಂತೆ ಕಂಡು ಚಿದ್ಘನಲಿಂಗಜಂಗಮದ ಶೇಷಾನಂದದಲಿ ಲೋಲುಪ್ತಿಯಾಗಿರುವಂತಹದೇ ಸದ್ಭಾವಹಸ್ತವೆಂಬ ಶಬ್ದಕ್ಕರ್ಥ.

ನಿರ್ಮಾಮಹಸ್ತದ ವಿವರ : ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಅರ್ಚನಾರ್ಪಣಾವಧಾನಂಗಳೇ ಭಾವವಾಗಿ, ಸದ್ಭಕ್ತಿಕ್ಷೇತ್ರದಿ ನೆಲೆಸಿರ್ಪ ಶ್ರೀಗುರು ಲಿಂಗ ಜಂಗಮವನಾರಾಧಿಸಿ, ಅವರ ಕೃಪಾ ಪಾತ್ರರಾದ ಬೆಳಗಿನೊಳಗೆ ಬೆಳಗಾಗಿ ಪ್ರಮಥಗಣ ಮಾರ್ಗವನರಿಯದ ಪಾಶಬದ್ಧ ಮೂಢಾತ್ಮರ ಬಿಡುಗಡೆಯಿಂದ, ಸಗುಣಾನಂದಲೀಲೆಯಲ್ಲಿ ಲೋಲುಪ್ತಿಯಾಗಿರುವಂತಹದೆಂಬುದೀಗ, ನಿರ್ಮಾಮಹಸ್ತವೆಂಬ ಶಬ್ದಕ್ಕರ್ಥ.

ನಿಷ್ಕಳಂಕಹಸ್ತದ ವಿವರ : ಶ್ರೀಗುರುಲಿಂಗಜಂಗಮದ ಕರುಣಕಟಾಕ್ಷ ದಿಂದ, ದಶವಿಧಪಾದೋದಕ, ಏಕಾದಶಪ್ರಸಾದ, ಪಂಚವಿಧ ಚಿದ್‌ಭಸಿತ, ತ್ರಿವಿಧವರ್ಣ, ರುದ್ರಾಕ್ಷಿ, ತ್ರ್ಯಕ್ಷರ, ಪಂಚಾಕ್ಷರ ಮೊದಲಾದ ಸಪ್ತಕೋಟಿ ಮಹಾಮಂತ್ರಂಗಳು, ನೂರೊಂದು ಸ್ಥಲದಾಚರಣೆ ಇನ್ನೂರು ಹದಿನಾರು ಸ್ಥಲದ ಸಂಬಂಧವ ಶಿವಾನುಭವಸೂತ್ರದಿಂದರಿದು ಆಚಾರಮೂರ್ತಿಗಳಾಗಿ ಬೆಳಗುವ, ಶರಣಗಣಂಗಳ ಚರಣಕಮಲಕ್ಕೆ ಅರ್ಪಿತವಾದ ಹಸ್ತಕಮಲಂಗಳೇ ಮಹಾ ಪ್ರಸಾದವೆಂದರಿದು, ಪ್ರಸಾದಕ್ಕೆ ಪ್ರಸಾದವನರ್ಪಿಸಿ, ಗುರುಮಾರ್ಗಾಚಾರದಲ್ಲಿ ಸಗುಣಾನಂದ ಕಮಲವಾಗಿರ್ಪುದೆಂಬುದೀಗ, ನಿಃಕಳಂಕಹಸ್ತವೆಂಬ ಶಬ್ದಕ್ಕರ್ಥ.

ನಿರಾಳಹಸ್ತದ ವಿವರ : ಆ ಚಿದ್ಘನಲಿಂಗವ ಚಿನ್ಮಯಲಿಂಗಕ್ಕೆ ಸಮರ್ಪಿಸಿ, ಆ ಸದ್ರೂಪ, ಚಿದ್ರೂಪ, ಚಿನ್ಮಯರೂಪದ ಮಧ್ಯದಲ್ಲಿ ಚಿದಾನಂದ ಪಾದೋದಕ ಪ್ರಸಾದವಾಗಿ ತನ್ನ ತಾನೇ ಸದ್ರೂಪ, ಚಿದ್ರೂಪ, ಚಿನ್ಮಯರೂಪ, ಚಿದಾನಂದದಿಂದ ನೆಲೆಸಿ, ತನ್ನ ತಾನರ್ಪಿಸಿ, ತನ್ನ ತಾನರಿದಾನಂದಿಸಿ, ಮಹಾಘನ, ಅನಾದಿ ಶರಣ ನಿರಂಜನನ ಬೆಳಗಿಂಗೆ ಬೆಳಗಾಗಿ ನವವರ್ಣದ [ಓಂ ನಮಃಶಿವಾಯ ಬಸವ] ಆರತಿಯ ಪಿಡಿದು ಶುಭಮಂಗಲ ಜಯಮಂಗಲವೆಂದು ಪಾಡುತ್ತಿರ್ಪುದೆಂಬುದೀಗ, ನಿರಾಳಹಸ್ತವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪಾವನಾರ್ಥವಾಗಿ ಅನಾದಿ ಶರಣ ಕಿರಣಕ್ಕೆ, ಮರಳಿ ಸಾಕಾರಲೀಲೆಯ ಧರಿಸಿ, ಮಹಾಪ್ರಮಥಗಣ ಚರಣಕ್ಕೆ ಯೋಗ್ಯವಾಗಿ, ಪರಮಾನಂದ ಚಿದಬ್ಧಿಯಲ್ಲಿ ಮಂಗಲ ಶುಭಮಂಗಲ, ಜಯ ಮಂಗಲವೆಂದು ಶೋಭಿಸಿ, ಅನಾದಿ ಶರಣ ಪರಾತ್ಪರಮೂರ್ತಿ ಶ್ರೀಗುರುಲಿಂಗ ಜಂಗಮಕ್ಕೆ ನವವಿಧ ಹಸ್ತಂಗಳಾಗಿರ್ಪವು.

ಭಕ್ತಿಗಳು

ಶ್ರದ್ಧಾಭಕ್ತಿಯ ವಿವರ : ಸತ್ಯಸನ್ಮಾರ್ಗದ ನಡವಳಿಕೆಯ ತನ್ನ ಸ್ವಾತ್ಮ ಜ್ಞಾನದಿಂದರಿದು, ಪಾಪವನುಳಿದು ಪುಣ್ಯವನೆ ಮಾಡುವಂತಹ ಸದ್ಗುಣಿಗಳ,

ಅಂತರಂಗದಿ, ಪುಷ್ಪದೊಳಗೆ ಪರಿಮಳವೆರಸಿದಂತೆ ಸರ್ವಾಂಗವನೆಲ್ಲವಂ ಪಾವನವೆನಿಸಿ, ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಾಗುರುವಿನ ಚರಣಕಮಲಕ್ಕೆ ಯೋಗ್ಯವೆಂದೆನಿಸುವ ಅರಿವು ಎಂಬುದೀಗ, ಶ್ರದ್ಧಾಭಕ್ತಿ ಎಂಬ ಶಬ್ದಕ್ಕರ್ಥ.

ನೈಷ್ಠಿಕಾಭಕ್ತಿಯ ವಿವರ : ದೀಕ್ಷಾಗುರುವಿಗೆ ತನುವ ಕೊಟ್ಟು, ಶಿಕ್ಷಾಗುರು ವಿಗೆ ಮನವ ಕೊಟ್ಟು, ಮೋಕ್ಷಾಗುರುವಿಗೆ ಧನವ ಕೊಟ್ಟು, ಅವರ ಅಂತಃಕರಣ ದಿಂದ ತ್ರಿವಿಧಲಿಂಗವ ಪ್ರತ್ಯಕ್ಷಿಸಿ, ಆ ಲಿಂಗದೊಳಗೆ ತನುವ ನಿಲ್ಲಿಸುವಂತಹ ಅರುಹೆಂಬುದೀಗ, ನೈಷ್ಠಿಕಾಭಕ್ತಿ ಎಂಬ ಶಬ್ದಕ್ಕರ್ಥ.

ಸಾವಧಾನಭಕ್ತಿಯ ವಿವರ : ಸರ್ವಾಂಗವೆಲ್ಲವ ಲಿಂಗಮಯವೆನಿಸಿ, ಲಿಂಗಕ್ಕೆ ಹರಣ ಕಿರಣ ಚೈತನ್ಯಸ್ವರೂಪವಾದ ಕ್ರಿಯಾಜಂಗಮ, ಜ್ಞಾನಜಂಗಮ, ಮಹಾ ಜ್ಞಾನಜಂಗಮ ಪ್ರತ್ಯಕ್ಷಿಸಿದಂತಹ ಅರುಹೆಂಬುದೀಗ, ಸಾವಧಾನಭಕ್ತಿ ಎಂಬ ಶಬ್ದಕ್ಕರ್ಥ.

ಅನುಭಾವಭಕ್ತಿಯ ವಿವರ : ಇಂತು ತ್ರಿವಿಧ ರೂಪಕದಿಂದ ಗುರುಲಿಂಗ ಜಂಗಮವ ಪ್ರತ್ಯಕ್ಷಿಸಿ, ಅವರಿಂದ ವೇಧಾ ಮಂತ್ರ ಕ್ರಿಯೆಯಿಂದ ದೀಕ್ಷಾತ್ರಯಂಗಳ ಪ್ರತ್ಯಕ್ಷಿಸಿ, ಅವರಿಂದ ಇಡಕಲಿಸಿದ ವಿಭೂತಿ, ತೊಡಕಲಿಸಿದ ರುದ್ರಾಕ್ಷಿ, ಅಡಿಗಡಿಗೆ ಶಿವಮಂತ್ರ ನುಡಿಗಲಿಸಿದಂತಹ ಮಹದರುಹೆಂಬುದೀಗ, ಅನುಭಾವ ಭಕ್ತಿ ಎಂಬ ಶಬ್ದಕ್ಕರ್ಥ.

ಆನಂದಭಕ್ತಿಯ ವಿವರ : ಅಂಗದ ಮಧ್ಯದಲ್ಲಿ ಗುರುವ ನಿಲ್ಲಿಸಿ, ೧[ಪ್ರಾಣನಲ್ಲಿ]೧ ಲಿಂಗವ ನಿಲ್ಲಿಸಿ, ೨[ಆತ್ಮನಲ್ಲಿ]೨ ಜಂಗಮವ ನಿಲ್ಲಿಸಿ, ಇಂದ್ರಿಯಂಗಳಿಗೆ ಚಿದ್ವಿಭೂತಿಯ ಧರಿಸಿ, ವಿಷಯಂಗಳಿಗೆ ಚಿದ್ರುದ್ರಾಕ್ಷಿಯ ಧಾರಣವ ಮಾಡಿ, ಕರಣಂಗಳನೆಲ್ಲವ ಮಂತ್ರಮಯವೆನಿಸಿ, ಚಿತ್ಪಾದೋದಕ ಪ್ರಸಾದವೆಂದೆನಿಸಿದಂತಹ ಪೂರ್ಣದರುಹೆಂಬುದೀಗ, ಆನಂದಭಕ್ತಿ ಎಂಬ ಶಬ್ದಕ್ಕರ್ಥ.

ಸಮರಸಭಕ್ತಿಯ ವಿವರ : ಸರ್ವಾಚಾರ ಸಂಪತ್ತಿನಾಚರಣೆಯ ಚಿದಂಗವೆಂದೆನಿಸಿ, ದಶವಿಧ ಪಾದೋದಕ, ಏಕಾದಶ ಪ್ರಸಾದ, ಸಪ್ತಕೋಟಿ ಮಹಾಮಂತ್ರಂಗಳ ಚಿತ್ಪ್ರಾಣವೆಂದೆನಿಸಿ, ಸಾಕಾರವಾದ ಚಿದ್ಘನಲಿಂಗ ನಿರಾಕಾರವಾದ ಚಿನ್ಮಂತ್ರದ ಮಧ್ಯದಲ್ಲಿ ತನ್ನ ತಾನರ್ಚಿಸಿ ಶರಣಸತಿ ಲಿಂಗಪತಿ ಭಾವವನಿತ್ತು, ನಿಜ ಚಿನ್ಮಯವೆಂಬ ಶಿಶುವ ಜೋಗುಳವ ಪಾಡಿ, ಶೋಭನಂಗಳ ಜಯಮಂಗಲವ ಪಾಡುವಂತೆ ನಿಜಸಂಯೋಗ ತೋರಿದ ಘನಮಹದರಿವು ಎಂಬುದೀಗ, ಸಮರಸಭಕ್ತಿ ಎಂಬ ಶಬ್ದಕ್ಕರ್ಥ.

ಪರಿಪೂರ್ಣಭಕ್ತಿಯ ವಿವರ : ಲಿಂಗಸ್ಥಲವನೊಳಕೊಂಡು, ಅನಾದಿಲಿಂಗ ಜಂಗಮದ ಲಿಂಗಸ್ಥಲವನೊಳಕೊಂಡು, ಅನಾದಿ ಜಂಗಮದ ಲಿಂಗವ ಬಂಗಾರ

೧–೧ ಅಂಗದಲ್ಲಿ (ಮೂ) ೨–೨ ಪ್ರಾಣದಲ್ಲಿ (ಮೂ)

ದಲ್ಲಿ ರತ್ನವ ಹುದುಗಿಸಿದಂತೆ ಒಂದರೊಳಗೊಂದು ಹುದುಗಿಸಿ, ತಾನೇ ತಾನಾಗಿ ರಂಜಿಸುವಂತಹ ನಿಜಮಹಾಘನಲಿಂಗದರುಹೆಂಬುದೀಗ, ಪರಿಪೂರ್ಣಭಕ್ತಿ ಎಂಬ ಶಬ್ದಕ್ಕರ್ಥ.

ಅಪ್ರಮಾಣಭಕ್ತಿಯ ವಿವರ : ಸದಾಚಾರವನ್ನು ಸದ್ಭಕ್ತಿಯ ಸ್ಥಲದಲ್ಲಿ ನಿಲ್ಲಿಸಿ ಗುರುವಿಗೆ ಯೋಗ್ಯವೆಂದೆನಿಸಿತ್ತು ; ಮಹೇಶ್ವರಸ್ಥಲದಲ್ಲಿ ನಿಲ್ಲಿಸಿ ಲಿಂಗಕ್ಕೆ ಯೋಗ್ಯವೆನಿಸಿತ್ತು ; ಪ್ರಸಾದಿಸ್ಥಲದಲ್ಲಿ ನಿಲ್ಲಿಸಿ ಜಂಗಮಕ್ಕೆ ಯೋಗ್ಯವೆಂದೆನಿಸಿತ್ತು ; ಪ್ರಾಣಲಿಂಗಿಯ ಸ್ಥಲದಲ್ಲಿ ನಿಲ್ಲಿಸಿ ಚಿದ್ವಿಭೂತಿ ರುದ್ರಾಕ್ಷಿ ಮಂತ್ರಂಗಳಿಗೆ ಯೋಗ್ಯವೆಂದೆನಿಸಿತ್ತು ; ಶರಣಸ್ಥಲದಲ್ಲಿ ನಿಲ್ಲಿಸಿ ಪಾದೋದಕ ಪ್ರಸಾದಕ್ಕೆ ಯೋಗ್ಯವೆಂದೆನಿಸಿತ್ತು ; ಐಕ್ಯಸ್ಥಲದಲ್ಲಿ ನಿಲ್ಲಿಸಿ ಸರ್ವಾಚಾರಸಂಪತ್ತಿಗೆ ಯೋಗ್ಯವೆಂದೆನಿಸಿತ್ತು ; ನಿರವಯಸ್ಥಲದಲ್ಲಿ ನಿಲ್ಲಿಸಿ ಶರಣ ಲಿಂಗ ಜಂಗಮಕ್ಕೆ ಯೋಗ್ಯವೆಂದೆನಿಸಿತ್ತು ; ತಾನೆಲ್ಲ ನೋಡಿದಲ್ಲಿ ಕ್ಷೀರದೊಳು ಘೃತವಡಗಿ, ನೀರು ಮುತ್ತಿನೊಳಗಡಗಿ, ಬೀಜದೊಳು ವೃಕ್ಷವಡಗಿ, ವೃಕ್ಷದೊಳು ಬೀಜವಡಗಿದಂತೆ, ತಾನೇ ತಾನಾಗಿ ಬೆಳಗುತ್ತಿರ್ಪ ಮಹಾಚಿದ್ಘನದರುಹೆಂಬುದೀಗ, ಅಪ್ರಮಾಣಭಕ್ತಿ ಎಂಬ ಶಬ್ದಕ್ಕರ್ಥ.

ನಿರವಯಭಕ್ತಿಯ ವಿವರ : ಕಂಗಳಮಧ್ಯದಲ್ಲಿ ಬೆಳಗುವ ಆ ವರ್ಣ, ಆಚಾರದ ಸ್ಥಲಕುಳಂಗಳ ಮನಕ್ಕೆ ತೋರಿ, ಮನದ ಮಧ್ಯದಲ್ಲಿ ನಿಜಸಂಗ ೧[ಸಮರಸದಿಂದ]೧ ತಾನೇ ತಾನಾಗಿ ಬೆಳಗುತ್ತಿರ್ಪ ಮಹಾಚಿದ್ಘನಪರವಸ್ತು[ವಿನ] ಅರುಹೆಂಬುದೀಗ, ನಿರವಯಭಕ್ತಿ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಃಕಲ, ನಿಶ್ಶೂನ್ಯ, ನಿರಂಜನ ಮೊದಲಾದ ಶರಣಗಣ ಮಧ್ಯದ, ಅಂತರಾಳದಲ್ಲಿ ; ಸಾಕಾರ ಲೀಲೆಯಿಂದ ತನ್ನ ತಾನೇ ರಾಜಿಸಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಭಕ್ತಿಯಾಗಿರ್ಪವು.

ಶಕ್ತಿಗಳು

ಕ್ರಿಯಾಶಕ್ತಿಯ ವಿವರ : ಸದ್ಭಕ್ತಗಣಂಗಳ ಚಿತ್‌ಪೃಥ್ವಿಸಂಬಂಧವಾದ ಕರ್ಮೇಂದ್ರಿಯಂಗಳ ಕ್ರಿಯಾಚಾರವಿಡಿದು, ಗುರುಲಿಂಗಜಂಗಮದ ದೀಕ್ಷಾ ಪಾದೋದಕದಿಂದ, ಕಟಿಸ್ನಾನ, ಮಂಡೆಸ್ನಾನಂಗಳಿಗೆ ಕರ್ತೃವಾಗಿರ್ಪಳು ಎಂಬುದೀಗ, ಕ್ರಿಯಾಶಕ್ತಿ ಎಂಬ ಶಬ್ದಕ್ಕರ್ಥ.

ಜ್ಞಾನಶಕ್ತಿಯ ವಿವರ : ಸದಾ ಸದ್ಭಕ್ತಿ ಸನ್ಮಾರ್ಗ ಗಣಂಗಳ, ಚಿದಪ್ಪು ಸಂಬಂಧವಾದ ೨[ವಿಷಯಂಗಳ]೨ ಜ್ಞಾನಾಚಾರವಿಡಿದು ಗುರುಲಿಂಗ ಜಂಗಮದ,

೧–೧ ಸರಸದಿಂದ (ಮೂ)
೨–೨ ಜ್ಞಾನೇಂದ್ರಿಯಂಗಳ (ಮೂ)

ದೀಕ್ಷಾ ಪಾದೋದಕ ಮಿಶ್ರವಾದ ಚಿದ್ಭಸಿತದಿಂದ ಸ್ನಾನ, ಧೂಳ, ಧಾರಣಂಗಳಿಗೆ ಕರ್ತಳಾಗಿರ್ಪಳು ಎಂಬುದೀಗ, ಜ್ಞಾನಶಕ್ತಿ ಎಂಬ ಶಬ್ದಕ್ಕರ್ಥ.

ಇಚ್ಛಾಶಕ್ತಿಯ ವಿವರ : ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿಗಳ ಚಿದಗ್ನಿ ಸಂಬಂಧವಾದ ಜ್ಞಾನೇಂದ್ರಿಯಂಗಳ ಭಾವಾಚಾರವಿಡಿದು ; ಗುರುಲಿಂಗ ಜಂಗಮಕ್ಕೆ ಸತಿಪತಿಯೊಡಗೂಡಿ, ಸತ್ಕಾಯಕದಿಂದ ಸಕಲಪದಾರ್ಥವ ಗಳಿಸಿ, ಶುಚಿರುಚಿ ಪಾಕವಮಾಡಿ, ಸತ್ಕ್ರಿಯೆ, ಸಮ್ಯಜ್ಞಾನ, ಸದ್ಭಕ್ತಿ, ನಿರ್ವಂಚಕತ್ವದಿಂದ ನಡೆ–ನುಡಿ ಹಸ್ತ–ನೋಟ ಭಾವಪರುಷಂಗಳಿಂದ ರಮಣನೊಡಗೂಡಿ, ಪತಿವ್ರತತ್ವದಿಂದ ರೂಪು, ರುಚಿ, ತೃಪ್ತಿಗಳ ಸಮಭಾಜನದಿಂದ ಕೊಟ್ಟು ಕೊಂಬುವುದಕ್ಕೆ ಕರ್ತೃತ್ವವುಳ್ಳುದೆಂಬುದೀಗ, ಇಚ್ಛಾಶಕ್ತಿ ಎಂಬ ಶಬ್ದಕ್ಕರ್ಥ.

ಆದಿಶಕ್ತಿಯ ವಿವರ : ಚಿದ್ಘನ ಗಂಭೀರ ಮಹೇಶ್ವರರುಗಳ, ಚಿದ್ವಾಯು ಸಂಬಂಧವಾದ ದಶವಾಯುಗಳ ಅಂಗಲಿಂಗಾಚಾರವಿಡಿದು, ಗುರು ಲಿಂಗ ಜಂಗಮ ಸಾಕ್ಷಿಯಾಗಿ ಕೂಡಿದಂತಹ ರಮಣ, ನಡೆದಂತೆ ನಡೆದು, ನುಡಿದಂತೆ ನುಡಿದು, ಕೊಂಡಂತೆ ಕೊಟ್ಟು, ನಿಜಶಿವಯೋಗಾನಂದ ರತಿಕೂಟಕ್ಕೆ ಅನುಕೂಲವುಳ್ಳಂತಹಳು ಎಂಬುದೀಗ, ಆದಿಶಕ್ತಿ ಎಂಬ ಶಬ್ದಕ್ಕರ್ಥ.

ಪರಾಶಕ್ತಿಯ ವಿವರ : ನಿಜ ಪ[ರ]ಮಾರಾಧ್ಯ ಗಣಂಗಳ ಚಿದಾಕಾಶ ಸಂಬಂಧವಾದ ಕರಣಂಗಳ ಸದಾಚಾರವಿಡಿದು, ಗುರು ಲಿಂಗ ಜಂಗಮದಿಂದ ವೇಧಾ, ಮಂತ್ರ, ಕ್ರಿಯಾ ದೀಕ್ಷಾತ್ರಯ ಷಟ್‌ಸ್ಥಲ ಸರ್ವಾಚಾರ ಸಂಪತ್ತಿನಾಚರಣೆಯು ; ಸತಿಪತಿಗಳೀರ್ವರು ಪಡೆದು ಅವನನುಭವಿಸುವ ಸಮಯದಲ್ಲಿ ಶಿವಾಜ್ಞೆಯಿಂದ ಸುಖ, ದುಃಖ, ನಿಂದೆ, ಸಿರಿ, ದಾರಿದ್ರ್ಯ, ಆಧಿ, ವ್ಯಾಧಿಗಳು, ಹರುಷ, ಚಿಂತೆಗಳು, ಶತ್ರು, ಮಿತ್ರ, ಉಪವಾಸ, ತೃಪ್ತಿಗಳು ಮೊದಲಾಗಿ ಬಂದು ಸೋಂಕಿದಲ್ಲಿ ಕ್ಷೀರ ಕ್ಷಿರ ಬೆರೆದಂತೆ ಭಿನ್ನವಿಲ್ಲದೆ ಅಭಿನ್ನಳಾಗಿರ್ಪಳು ಎಂಬುದೀಗ, ಪರಾಶಕ್ತಿ ಎಂಬ ಶಬ್ದಕ್ಕರ್ಥ.

ಚಿತ್‌ಶಕ್ತಿಯ ವಿವರ : ಸದ್ಭಕ್ತ ಮಹೇಶ್ವರಾಚಾರದ ಗಣಂಗಳ, ಚಿದಾತ್ಮ ಸಂಬಂಧವಾದ ಪಂಚಾವಸ್ಥೆಗಳ ಶಿವಾಚಾರವಿಡಿದು, ಗುರುಲಿಂಗಜಂಗಮಕ್ಕೆ ತನ್ನ ರಮಣನ ಮಾನ ಅಭಿಮಾನ ಅವಮಾನಂಗಳೆಲ್ಲ ತನ್ನವಾಗಿ ನಿರ್ವಂಚಕತ್ವದಿಂದ ಅರ್ಥ, ಪ್ರಾಣ, ಅಭಿಮಾನಂಗಳ ವಿಕರೂಪದಿಂದ ಸಮರ್ಪಿಸಿ, ಅವರೊಕ್ಕು ಮಿಕ್ಕುದ ಹಾರೈಸಿ, ಪ್ರಮಾದವಶದಿಂದ ರಮಣನು ಆಶೆ ಅಜ್ಞಾನವೆಂಬ ಮಲ ಮೂತ್ರವ ತುಳಿದರೆ ಎಚ್ಚರ ಜಲದಿಂ ತೊಳೆದು ಪಾವನವೆನಿಸಿ, ಶರಣ ಗಣಮಾರ್ಗವ ಅರುಹಿಕೊಡುವಂತಹಳೇ ಚಿತ್‌ಶಕ್ತಿ ಎಂಬ ಶಬ್ದಕ್ಕರ್ಥ.

[೧]ಚಿನ್ನಾದ[೧]ಶಕ್ತಿಯ ವಿವರ: ಸಚ್ಚಿದಾನಂದ ಭಕ್ತ ಮಹೇಶ ಶರಣ ಗಣಂಗಳ, ಚಿತ್‌ಸೂರ್ಯಸಂಬಂಧವಾದ ಜೀವತ್ರಯಂಗಳ ಗಣಾಚಾರವಿಡಿದು, ಜ್ಞಾನ

೧–೧ ರಾಕ್ರ (ಮೂ) ೨–೨ ನಿರಾಲಂಬ (ಮೂ)

ಗುರುಲಿಂಗಜಂಗಮಕ್ಕೆ, ಸತಿಪತಿಭಾವವಳಿದು ಏಕರೂಪದಿಂದ ರೂಪು ರುಚಿ ತೃಪ್ತಿಗಳಿಂದೆಲ್ಲವನು ಸಮರ್ಪಿಸಿ, ಅವರ ಸ್ವಾನುಭಾವ ಸೂತ್ರಕ್ಕೆ ಎರಕತ್ವವನುಳ್ಳ ಹಳೇ [೧]ಚಿನ್ನಾದ[೧] ಶಕ್ತಿ ಎಂಬ ಶಬ್ದಕ್ಕರ್ಥ.

[೨]ಚಿದ್ಬಿಂದು[೨]ಶಕ್ತಿಯ ವಿವರ : ಚಿನ್ನಾದ, ಚಿದ್ಬಿಂದು, ಚಿತ್ಕಳಾಸ್ವರೂಪ ಭಕ್ತ ಮಹೇಶ್ವರ ಶರಣ ಗಣಂಗಳ ಚಿಚ್ಚಂದ್ರಸಂಬಂಧವಾದ ಮನತ್ರಯಂಗಳ, ಭೃತ್ಯಾಚಾರವಿಡಿದು ಮಹಾಜ್ಞಾನ ಗುರುಲಿಂಗಜಗಮಕ್ಕೆ, ಸ್ತ್ರೀಪುರುಷರೆಂಬ ಉಭಯ ನಾಮ ರೂಪು ಕ್ರಿಯೆ ಕಾಯವಳಿದು, ಪರಮಾನಂದಪದಾರ್ಥವ ಸಮರ್ಪಿಸಿ, ನಿಜಾನಂದಪ್ರಸಾದವ ಪಡೆದು ಮಹಪ್ರಸಾದವೇ ತಾನಾಗಿ ಇರ್ಪುದೆಂಬುದೀಗ [೨]ಚಿದ್ಬಿಂದು[೨]ಶಕ್ತಿ ಎಂಬ ಶಬ್ದಕ್ಕರ್ಥ.

[೩]ಚಿನ್ಮಯ[೩]ಶಕ್ತಿಯ ವಿವರ : ಅಗಣಿತಪ್ರಮಾಣ, ಅನುಪಮ, ಆನಂದ, ಭಕ್ತ ಮಹೇಶ್ವರ ಶರಣಗಣಂಗಳ [೩]ಚಿನ್ಮಯ[೩] ಮಂಡಲ ಸಂಬಂಧವಾದ, ಭಾವತ್ರಯಂಗಳ ಸತ್ಯ, ನಿತ್ಯ, ಸದ್ಧರ್ಮ, ಸರ್ವಾಚಾರವಿಡಿದು; ಪರಿಪೂರ್ಣ ಜ್ಞಾನ ಗುರುಲಿಂಗ ಜಂಗಮಕ್ಕೆ, ಶಿವಶಕ್ತಿ–ಶರಣಸತಿ–ಲಿಂಗಪತಿ ಎಂಬ ಉಭಯ ಭಿನ್ನಭಾವವನಳಿದು; ನಿಜ ಚಿತ್ಕಳಾ ಪದಾರ್ಥವ ಸಮರ್ಪಿಸಿ, ಚಿದ್ಘನ ಗಂಭೀರ ಪ್ರಸಾದವ ಪಡೆದು, ಚಿದ್ಘನ ಮಹಾಬೆಳಗಿನೊಳಗೆ ಮಹಾಬೆಳಗಾಗಿರ್ಪಳು ಎಂಬುದೀಗ [೩]ಚಿನ್ಮಯ[೩] ಶಕ್ತಿ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಸದ್ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, [೪]ನಿಃಕಲ, ನಿಃಶೂನ್ಯ, ನಿರಂಜನ[೪] ಘನ ಶರಣಗಣಂಗಳ ಭಕ್ತಿ, ಜ್ಞಾನ, ವೈರಾಗ್ಯ, ಆಚಾರ, ನಡೆ, ನುಡಿ, ಅರ್ಪಿತ, ಅವಧಾನಕ್ಕೆ ಅರ್ಧಾಂಗಿಯಾಗಿ, ಪರಶಿವಲಿಂಗ ನಾಟ್ಯಕ್ಕೆ ನಿಂದು, ಅನಾದಿ ಶರಣ ಪರಾತ್ಪರ ಮೂರ್ತಿಗೆ ನವವಿಧ ಶಕ್ತಿಗಳಾಗಿರ್ಪರು.

ಚಕ್ರಗಳು

ಆಧಾರಚಕ್ರದ ವಿವರ : ಪಂಚಕೃತ್ಯದ ಪತಿಯ ನಿರೂಪಣದಿಂ ಚತುರ್ಮುಖ ಬ್ರಹ್ಮನಿಂ ಜನಿತರಾದ, ಪ್ರವೃತ್ತಿಮಾರ್ಗದ ಸಕಲಾತ್ಮರಲ್ಲಿ ಹಸಿವು, ತೃಷೆಯು, ವಿಷಯ, ವ್ಯಸನಂಗಳೆಂಬ, ದುರ್ವಾಸನೆ ಯುಕ್ತಮಾಗಿರ್ಪುದು. ಇಂತು ಜ್ಞಾನೋದಯದಿಂದ ಕ್ರೂರಮಾರ್ಗವನಳಿದು, ಶ್ರೀಗುರುಕರಜಾತನಾಗಿ ಲಿಂಗಾಂಗಸಂಬಂಧದಿಂದ, ನಿವೃತ್ತಿಮಾರ್ಗದ ಸದ್ಭಕ್ತಗಣಂಗಳಲ್ಲಿ ಚತುರ್ವಿಧ ಸಾರಾಯಂಗಳಿಗೆ ಅಂಗ, ಆಪ್ತ ಸ್ಥಾನ, ಸದ್ಭಾವಂಗಳೆಂಬ ಸದ್ವಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ, ಊರ್ಧ್ವಮುಖ ಸೂರ್ಯ

೧–೧ ನಿರಾಲಂಬ (ಮೂ) ೨–೨ ನಿಭ್ರಾಂತ (ಮೂ) ೩–೩ ನಿರವಯ (ಮೂ)
೪–೪ ನಿರುಪಮ ನಿರಾನಂದ ನಿಷ್ಕಳ (ಮೂ)

ಸಖ ಚಿತ್ಸೂರ್ಯಸಖಂಗಳಿಂದರಳಿ ಶೈವ–ವೀರಶೈವ ದೈವಂಗಳಿಗರ್ಪಿತವಾಗಿರ್ಪುದೀಗ, ಆಧಾರಚಕ್ರವೆಂಬ ಶಬ್ದಕ್ಕರ್ಥ.

ಸ್ವಾಧಿಷ್ಠಾನಚಕ್ರದ ವಿವರ : ಹಿಂದೆ ಹೇಳಿದ ಚತುರ್ಮುಖಬ್ರಹ್ಮನಿಂ ಜನಿತರಾದ ಪ್ರವೃತ್ತಿ ಭವಿಮಾರ್ಗದಿಂ ಚರಿಸುವ ಜಡಾತ್ಮರಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ದುರ್ವಾಸನೆಯುಕ್ತವಾಗಿರ್ಪುದು. ಹಿಂದೆ ಹೇಳಿದ ನಿವೃತ್ತಿ ಭಕ್ತಗಣಮಾರ್ಗದಲ್ಲಿ ಚಲಿಸುವ ಅಜಡ ಸ್ವರೂಪ ಲಿಂಗಾಂಗಸಂಬಂಧಿಗಳಲ್ಲಿ ಷಟ್‌ಸ್ಥಲಮೂರ್ತಿಗಳಿಗೆ, ಶ್ರದ್ಧೆ, ನೈಷ್ಠೆ, ಸಾವಧಾನ, ಅನುಭಾವ, ಆನಂದ, ಸಮರಸಗಳೆಂಬ ಸದ್ವಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ, ಊರ್ದ್ವಮುಖ, ಸೂರ್ಯಸಖ, ಚಿತ್ಸೂರ್ಯ ಸಖಂಗಳಿಂದರಳಿ ವೀರಶೈವಂಗಳಿಗರ್ಪಿತಮಾಗಿ ಇರ್ಪುದೆಂಬುದೀಗ, ಸ್ವಾಧಿಷ್ಠಾನ ಚಕ್ರವೆಂಬ ಶಬ್ದಕ್ಕರ್ಥ.

ಮಣಿಪೂರಕಚಕ್ರದ ವಿವರ: ಚತುರ್ಮುಖಬ್ರಹ್ಮನ ಸೃಷ್ಟಿಯಿಂದ ಹುಟ್ಟಿದ ಪ್ರವೃತ್ತಿ ಭವಿಮಾರ್ಗದಲ್ಲಿ ಚರಿಸುವ ಮೂಢಾತ್ಮರಲ್ಲಿ [೧][ಗುದ, ಗುಹ್ಯ, ಪಾದ, ಪಾಣಿ, ವಾಕ್, ಘ್ರಾಣ, ಜಿಹ್ವೆ, ನೇತ್ರ, ತ್ವಕ್ ಶ್ರೋತ್ರಗಳ][೧] ದುರ್ವರ್ತನ ವಾಸನೆಯುಕ್ತಮಾಗಿರ್ಪುದು. ನಿಜವೀರಶೈವೋದ್ಧಾರಕ ಶ್ರೀಗುರುಕರಜಾತ ನಿವೃತ್ತಿ ಭಕ್ತಿ ಮಾರ್ಗವಿಡಿದಾಚರಿಸುವ ಸ್ವಾತ್ಮಜ್ಞಾನಿಗಳಲ್ಲಿ ದಶವಿಧ [೨][ಇಂದ್ರಿಯಂಗಳಿಗೆ][೨] ಕ್ರಿಯಾಶಕ್ತಿ, ಜ್ಞಾನಶಕ್ತಿ, [೩][ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ ಚಿಚ್ಛಕ್ತಿ][೩] ಶ್ರದ್ಧಾಭಕ್ತಿ, ಆನಂದಭಕ್ತಿ, ಸಮರಸಭಕ್ತಿ ಪರಿಪೂರ್ಣಭಕ್ತಿಗಳೆಂಬ ಸದ್ವಾಸನೆಯುಕ್ತ ಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ ಊರ್ದ್ವಮುಖ ಸೂರ್ಯಸಖ ಚಿತ್ಸೂರ್ಯಸಖಂಗಳಿಂದರಳಿ ಶೈವ ವೀರಶೈವ ದೈವಂಗಳಿಗರ್ಪಿತ ಮಾಗಿರ್ಪುದೀಗ ಮಣಿಪೂರಕಚಕ್ರವೆಂಬ ಶಬ್ದಕ್ಕರ್ಥ.*

ಅನಾಹತಚಕ್ರದ ವಿವರ : ಚತುರ್ಮುಖ ಬ್ರಹ್ಮನಂಶಿಕರಾದ ಪ್ರವೃತ್ತಿ ಭವಿಮಾರ್ಗದಲ್ಲಿ ಚರಿಸುವ ಕ್ರೂರಪ್ರಾಣಿಗಳಲ್ಲಿ [೧][ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ ಧನಜಂಯ, ಮುಖ್ಯ ವಾಯು, ಅಂತರ್ ವಾಯುಗಳೆಂಬುವು][೧] ವಿಷಯ ವ್ಯಾಪಾರವೆಂಬ ದುರ್ವಾಸನೆಯುಕ್ತಮಾಗಿರ್ಪುದು. ಶ್ರೀಗುರುಕರಜಾತ ನಿವೃತ್ತಿ ಭಕ್ತಗಣಂಗಳಲ್ಲಿ , ದ್ವಾದಶ ಮೂಲ ಪ್ರಣವ ಪ್ರಸಾದಂಗಳಿಗೆ ಕ್ರಿಯಾ ಭಕ್ತಿಗಳೆಂಬ ಸದ್ವಾಸನೆಯುಕ್ತ

೧–೧ ನಾಗ, ಕೂರ್ಮ, ಕೃಕರ, ದೇವದತ್ತ ಧನಜಂಯ, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ. (ಮೂ)

೨–೨ ಪಾದೋದಕಂಗಳಿಗೆ (ಮೂ) ೩–೩ ಮಹಾಜ್ಞಾನಶಕ್ತಿ (ಮೂ)

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೧

೪–೪ ಮನಸಂಬಂಧವಾದ ಕರ್ಮೇಂದ್ರಿಯಗಳು, ಪವನಸಂಬಂಧವಾದ ಜ್ಞಾನೇಂದ್ರಿಯಗಳು (ಮೂ)

ಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ–ಊರ್ದ್ವಮುಖ ಸೂರ್ಯ ಸಖ ಚಿತ್ಸೂರ್ಯಸಖಂಗಳಿಂದರಳಿ ಶೈವ–ವೀರಶೈವ ದೈವಂಗಳಿಗರ್ಪಿತ ಮಾಗಿರ್ಪುದೀಗ, ಅನಾಹತಚಕ್ರವೆಂಬ ಶಬ್ದಕ್ಕರ್ಥ.*

ವಿಶುದ್ಧಿಚಕ್ರದ ವಿವರ : ಚತುರ್ಮುಖಬ್ರಹ್ಮನಿಂದಂಗವ ಧರಿಸಿದ ಪ್ರವೃತ್ತಿ ಭವಿಮಾರ್ಗದಲ್ಲಿ ಚರಿಸುವ ಜಡಜೀವಿಗಳಲ್ಲಿ [೧][ಬಹಿರಂಗದಷ್ಟಮದಂಗಳು, ಅಂತರಂಗದಷ್ಟಮದಂಗಳು][೧] ಇಂತೀ ಷೋಡಶಮದಾಂಧಕಾರವೆಂಬ ದುರ್ವಾಸನೆಯುಕ್ತಮಾಗಿರ್ಪುದು. ಶ್ರೀಗುರುದೇವನಿಂದ ಸಾಕಾರ ಲೀಲೆಯ ಧರಿಸಿರ್ದ ನಿವೃತ್ತಿ ಭಕ್ತಿಮಾರ್ಗಾಚಾರದಲ್ಲಿ ಚರಿಸುವ ನಿಜಾನಂದ ಗಣಂಗಳಲ್ಲಿ ಷೋಡಶ ವರ್ಣಂಗಳಿಗೆ ಕ್ರಿಯಾಭಕ್ತಿ ಮೊದಲಾಗಿ ನಿರಂಜನ ನಿರವಯ ಭಕ್ತಿಯಾದ ಷೋಡಶಭಕ್ತಿಗಳೆಂಬ ಸದ್ವಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದೆ ಅಧೋಮುಖ ಊರ್ದ್ವಮುಖ ಸೂರ್ಯಸಖ ಚಿತ್ಸೂರ್ಯ ಸಖಂಗಳಿಂದರಳಿ ಶೈವ–ವೀರಶೈವ ದೈವಂಗಳಿಗರ್ಪಿತಮಾಗಿರ್ಪುದೀಗ, ವಿಶುದ್ಧಿ ಚಕ್ರವೆಂಬ ಶಬ್ದಕ್ಕರ್ಥ.

ಆಜ್ಞಾಚಕ್ರದ ವಿವರ : ಬ್ರಹ್ಮನ ಉತ್ಪತ್ಯ, ವಿಷ್ಣುವಿನ ಸ್ಥಿತಿ, ರುದ್ರನ ಮರಣಂಗಳಿಂದ ತೊಳಲುವಂತಹ, ಪ್ರವೃತ್ತಿ ಪುರುಷಂಗೆ ಅಹಂಕಾರ–ಮಮಕಾರವೆಂಬ ದುರ್ವಾಸನೆಯುಕ್ತಮಾಗಿರ್ಪುದು. ಗುರುವಿನಲ್ಲಿ ಉತ್ಪತ್ತಿ ಲಿಂಗದಲ್ಲಿ ಸ್ಥಿತಿ, ಜಂಗಮದಲ್ಲಿ ನಿಜೈಕ್ಯವಾದಂತಹ ನಿವೃತ್ತಿ ಭಕ್ತಗಣಂಗಳಲ್ಲಿ ನಾಲ್ವತ್ತು ನಾಲ್ಕು ಅಂಗಸ್ಥಲವನೊಳಕೊಂಡು, ಚಿದ್ಘನ ಶರಣ ಐವತ್ತೇಳು ಲಿಂಗಸ್ಥಲವನೊಳಕೊಂಡು; ಚಿದ್ಘನ ಲಿಂಗದೇವಂಗೆ ಮಾರ್ಗಕ್ರಿಯಾ ಭಕ್ತಿ, ಮೀರಿದಕ್ರಿಯಾಭಕ್ತಿಗಳೆಂಬ ಸದ್ವಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ–ಊರ್ದ್ವಮುಖ ಸೂರ್ಯಸಖ ಚಿತ್ಸೂರ್ಯಸಖಂಗಳಿಂದರಳಿ ಶೈವ–ವೀರಶೈವ ದೈವಂಗಳಿಗರ್ಪಿತಮಾಗಿರ್ಪುದೀಗ ಆಜ್ಞಾಚಕ್ರವೆಂಬ ಶಬ್ದಕ್ಕರ್ಥ.

ಬ್ರಹ್ಮಚಕ್ರದ ವಿವರ : ಸಕಲಾತ್ಮರಿಗೆ ಜನ್ಮಸ್ಥಾನವಾದಂತಹ, ಪ್ರವೃತ್ತಿ ಮಾರ್ಗದ ಬ್ರಹ್ಮನ ಷಡಾಧಾರಚಕ್ರಂಗಳಲ್ಲಿ; ಲೋಮ ವಿಲೋಮಂಗಳಿಗೆ, ಶತ ಸಹಸ್ರದಳಯುಕ್ತಮಾದ ಕಮಲಮಧ್ಯದಲ್ಲಿ; ಕರಣಚತುಷ್ಟಯ, ಅರಿಷಡ್ವರ್ಗ, ದಶ[೨][ಇಂದ್ರಿಯಗಳು][೨], ದ್ವಾದಶ[೩][ವಾಯು][೩], ಷೋಡಶಮದ, ಅಹಂಕಾರ ಮಮಕಾರವೆಂಬ ಐವತ್ತು ದಳಂಗಳ ಲೋಮ ವಿಲೋಮವೆಂಬ, ಶತಸಹಸ್ರ ದುರ್ವಾಸನೆಯುಕ್ತಮಾಗಿರ್ಪುದು. ನಿಜ ವೀರಶೈವ ಸದ್ಭಕ್ತ ಗಣಂಗಳಿಗೆ, ಜನನ ಸ್ಥಾನವಾದಂತಹ ನಿವೃತ್ತಿಮಾರ್ಗದ ಪರಬ್ರಹ್ಮಸ್ವರೂಪ ಶ್ರೀಗುರುದೇವನ,

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೨

೧–೧ ಕುಲಾದಿಮದವೆಂಬ ವರ್ತನೆಯಾದಿ ಮದವೆಂದು (ಮೂ)

೨–೨ ವಾಯುಗಳು (ಮೂ) ೩–೩ ಇಂದ್ರಿಯ (ಮೂ)

ಷಡಾಧಾರಚಕ್ರಂಗಳಲ್ಲಿ ಲೋಮವಿಲೋಮಂಗಳಿಂದ, ಶತಸಹಸ್ರ ದಳಯುಕ್ತ ಮಾದ ಕಮಲಮಧ್ಯದಲ್ಲಿ; ಚತುರ್ವಿಧಸಾರಾಯ, ಷಟ್‌ಸ್ಥಲಗಳು, ದಶವಿಧ ಪಾದೋದಕ, ದ್ವಾದಶ ಪ್ರಣವ ಪ್ರಸಾದ, ಷೋಡಶವರ್ಣ, ಚಿದ್ಘನ ಶರಣಸತಿ, ಲಿಂಗಪತಿಗಳಿಗೆ; ಚತುರ್ವಿಧ ಭಕ್ತಿ, [ಷಡ್ವಿಧ]ಭಕ್ತಿ ದಶವಿಧಭಕ್ತಿ, ದ್ವಾದಶಭಕ್ತಿ, ಷೋಡಶಭಕ್ತಿ* ಉಭಯಭಕ್ತಿಗಳೆಂಬ ಐವತ್ತು ದಳಂಗಳೇ ಪಂಚಾಕ್ಷರ, ಷಡಕ್ಷರಂಗಳಿಂದೆ ಲೋಮ ವಿಲೋಮವೆಂಬ ಶತಸಹಸ್ರ ಸದ್ವರ್ತನ ಗುಣಂಗಳೇ ವೆಗ್ಗಳವಾದ ಸದ್ಭಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ –ಊರ್ಧ್ವಮುಖ, ಸೂರ್ಯಸಖ ಚಿತ್ಸೂರ್ಯಸಖಂಗಳಿಂದರಳಿ ಭೂಪ್ರತಿಷ್ಠೆ ಯಲ್ಲಿ ಸ್ಥಾಪ್ಯವಾದ ಶೈವ–ವೀರಶೈವ ದೈವ ಶಿವಾಚಾರಂಗಳ ಕರಸ್ಥಲಂಗಳಲ್ಲಿ ಪೂಜೆಗೊಂಬ ವೀರಶೈವ ಲಿಂಗಜಂಗಮಕ್ಕೆ ಕ್ರಮದಿಂ ಕುಹಸ್ತ–ಸುಹಸ್ತಂಗಳಿಂದ ಅರ್ಪಿತಮಾಗಿರ್ಪುದೀಗ ಬ್ರಹ್ಮಚಕ್ರವೆಂಬ ಶಬ್ದಕ್ಕರ್ಥ.

ಶಿಖಾಚಕ್ರದ ವಿವರ : ಬ್ರಹ್ಮನಿಂದ ಉತ್ಪತ್ಯವಾದ ಸಕಲಾತ್ಮರಿಗೆ ಸುಖ ಭೋಗವನಿತ್ತು ಸಲಹುವ ಪ್ರವೃತ್ತಿಮಾರ್ಗದ ವಿಷ್ಣುವಿನ ಕಾಯ, ವಾಚಾ, ಮನ ಕಮಲದಲ್ಲಿ ; ಸಪ್ತರಜ, ತಮವೆಂಬ ಗುಣ ದುರ್ವಾಸನೆಯುಕ್ತಮಾಗಿರ್ಪುದು. ಶ್ರೀಗುರುವಿನಿಂದ ಉತ್ಪತ್ಯಮಾದ ಶಿಷ್ಯೋತ್ತಮನಿಗೆ ಸುಖಭೋಗವನಿತ್ತು ಸಲಹುವಂತಹ ನಿವೃತ್ತಿಮಾರ್ಗಕ್ಕೆ ಕರ್ತೃವಾದಂತಹ, ಶ್ರೀಮದ್ಘನಮಹಾಲಿಂಗದ ಕಾಯಿಕ, ವಾಚಕ, ಮಾನಸಂಗಳಲ್ಲಿ ನಿಃಕಲ, ನಿಃಶೂನ್ಯ,ನಿರಂಜನಜಂಗಮದೊಳು ಅತಿಮೋಹದಿಂದ ಸಗುಣ ನಿರ್ಗುಣ ನಿಜಗುಣ ಶಿವಯೋಗಾನಂದ ಸುಖಾಬ್ಧಿ ಎಂಬ ಸದ್ಭಾಸನೆ ಹೊರಸೂಸುತ್ತಿರ್ಪುದು. ಈ ಪ್ರಕಾರವಾದ ಅಧೋಮುಖ–ಊರ್ಧ್ವಮುಖ, ಸೂರ್ಯಸಖ ಚಿತ್ಸೂರ್ಯಸಖಂಗಳಿಂದರಳಿ ಶೈವ–ವೀರಶೈವ ದೈವಂಗಳಿಗೆ ಅಪಾತ್ರ–ಸತ್ಪಾತ್ರಂಗಳಿಂದ ಅರ್ಪಿತವಾಗಿರ್ಪುದೀಗ, ಶಿಖಾಚಕ್ರ ವೆಂಬ ಶಬ್ದಕ್ಕರ್ಥ.

ಪಶ್ಚಿಮಚಕ್ರದ ವಿವರ : ಷಣ್ಮತಕ್ಕಧಿಪತಿಗಳಾದಂತಹ ಪ್ರವೃತ್ತಿಮಾರ್ಗದ ವೇದಾಂತಿ–ಭಿನ್ನಯೋಗಿಗಳ ಸರ್ವಾಂಗವೆಲ್ಲ, ಆತ್ಮನೇ ದೈವವೆಂಬ ಹಠ, ಕರ್ಮ, ಕ್ರಿಯಾಯೋಗದಿಂದ ದುರ್ವಾಸನೆಯುಕ್ತಮಾಗಿರ್ಪುದು. ಇತ್ತಲಾಗಿ ಗುರುಕಾರುಣ್ಯದಿಂದ, ಲಿಂಗಾಂಗಸಂಬಂಧಿಯಾಗಿ, ಷಟ್‌ಸ್ಥಲಮಾರ್ಗಕ್ಕಧಿಪತಿ ಗಳಾದಂತಹ ನಿವೃತ್ತಿಮಾರ್ಗದ, ಆದಿಪ್ರಸಾದಿ, ಸೇವ್ಯಪ್ರಸಾದಿ ಅಂತ್ಯಪ್ರಸಾದಿ ಗಳ ಅಪಾದ ಮಸ್ತಕ ಪರಿಯಂತರವು, ಜಂಗಮವೇ ಪರಿಪೂರ್ಣ ವಸ್ತುವೆಂದು ನಿಜಶಿವಯೋಗಾನಂದ ಕ್ರಿಯಾಜ್ಞಾನವೆಂಬ ಸದ್ಭಾಸನೆಯುಕ್ತಮಾಗಿರ್ಪುದು. ಈ ಪ್ರಕಾರದಿಂದ ಅಧೋಮುಖ–ಊರ್ಧ್ವಮುಖ, ಸೂರ್ಯಸಖ ಚಿತ್ಸೂರ್ಯ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೩

ಸಖಂಗಳಿಂದರಳಿ ಶೈವ–ವೀರಶೈವದೈವಕ್ಕೆ ಅಪಾತ್ರ– ಸತ್ಪಾತ್ರಂಗಳಿಂದ ಅರ್ಪಿತ ವಾಗಿರ್ಪುದೀಗ ಪಶ್ಚಿಮಚಕ್ರವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿವೃತ್ತಿ ಕಮಲಂಗಳು, ಕೆಲವು ಪ್ರಕಾರಂ ಗಳಾಗಿ ಆದಿವಿಡಿದು ಬಂದು, ಸಾಕಾರಲೀಲೆಯ ಧರಿಸಿ, ಪರಶಿವಲಿಂಗವಿರಿಸಿದಂತೆ ಅನಂತರೂಪದಿಂದ ನಾಟ್ಯಕ್ಕೆ ನಿಂದು, ಅನಾದಿ ಶರಣ ಪರಾತ್ಪರಮೂರ್ತಿಗೆ ಚಕ್ರಂಗಳಾಗಿರ್ಪುದು.*

ವರ್ಣಗಳು

ಪೀತವರ್ಣದ ವಿವರ : ಪ್ರವೃತ್ತಿಮಾರ್ಗದ ಶೈವನ ಆಧಾರಚಕ್ರವು, ಮಣ್ಣಿಂಗೆ ಮುಖವಾಗಿ ಅರಳಿರ್ಪುದು. ನಿವೃತ್ತಿಮಾರ್ಗದ ವೀರಶೈವನ ಆಧಾರ ಚಕ್ರ ಗುರುಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಬೆಟ್ಟ ದಾವರೆಯ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತ ಇರ್ಪುದೆಂಬುದೀಗ, ಪೀತ ವರ್ಣವೆಂಬ ಶಬ್ದಕ್ಕರ್ಥ.

ಶ್ವೇತವರ್ಣದ ವಿವರ : ಪ್ರವೃತ್ತಿಮಾರ್ಗದ ಶೈವನ ಸ್ವಾಧಿಷ್ಠಾನಚಕ್ರ ೧[ಹೆಣ್ಣಿಂಗೆ]೧ ಮುಖವಾಗಿ ಅರಳಿರ್ಪುದು. ನಿವೃತ್ತಿ ಶಿವಾಚಾರಮಾರ್ಗದ ವೀರಶೈವನ ಸ್ವಾಧಿಷ್ಠಾನಚಕ್ರ ಲಿಂಗಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ದುಂಡುಮಲ್ಲಿಗೆಯಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪು ದೆಂಬುದೀಗ, ಶ್ವೇತವರ್ಣವೆಂಬ ಶಬ್ದಕ್ಕರ್ಥ.

ಹರಿತವರ್ಣದ ವಿವರ : ಪ್ರವೃತ್ತಿ ಸಿದ್ಧಾಂತಿ ಶೈವಮನುಜನ ಮಣಿಪೂರಕ ಚಕ್ರ, ಹೊನ್ನಿಂಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ [ನಿಜ]ವೀರಶೈವ ನಿರುಪಾಧಿಕ ಭಕ್ತನ ಮಣಿಪೂರಕಚಕ್ರ ಜಂಗಮದ ಭಕ್ತಿಗೆ [ಮುಖವಾಗಿ] ಅರಳಿರ್ಪುದು. ಆ ಚಕ್ರಂಗಳ ರೂಪು ಎಳೆಯ ಮುಗುಳು ಬಿಲ್ವಪತ್ರೆಯ ದಳದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಹರಿತವರ್ಣವೆಂಬ ಶಬ್ದಕ್ಕರ್ಥ.

ಮಾಂಜಿಷ್ಠವರ್ಣದ ವಿವರ : ಪ್ರವೃತ್ತಿ ವೇದಾಂತಿ ಶೈವಾತ್ಮನ ಅನಾಹತ ಚಕ್ರ, ಪನ್ನೀರು, ಎಳನೀರು, ಸಿದ್ಧರಸಂಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ನಿಜವೀರಶೈವನ ಅನಾಹತಚಕ್ರ, ಶ್ರೀಗುರುಲಿಂಗಜಂಗಮದ ಪರಮ ಪಾದೋದ ಕರತಿ ಸದ್ಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಮೋಪಾದ ಬಿಳಿಯ ಸೇವಂತಿಗೆಯ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಮಾಂಜಿಷ್ಠವರ್ಣವೆಂಬ ಶಬ್ದಕ್ಕರ್ಥ.

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೪

೧–೧ ಮಣ್ಣಿಂಗೆ (ಮೂ)

ಕಪೋತವರ್ಣದ ವಿವರ : ಪ್ರವೃತ್ತಿಮಾರ್ಗದ ಶೈವ ಭಿನ್ನಯೋಗಿಯ ವಿಶುದ್ಧಿಚಕ್ರ, ಪರಮಾನ್ನ, ಪಂಚಕಜ್ಞಾಯ, ಫಲಹಾರಂಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ನಿಜವೀರಶೈವ ಸಹಜಸದ್ಭಕ್ತನ ವಿಶುದ್ಧಿಚಕ್ರ, ಶ್ರೀಗುರು ಲಿಂಗಜಂಗಮದ ಪರಿಪೂರ್ಣ ಚಿದ್ಘನಪ್ರಸಾದದ ಮೇಲೆ ನೈಷ್ಠಿಕಾಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಹಿರೇಮುತ್ತುಕದ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಕಪೋತವರ್ಣವೆಂಬ ಶಬ್ದಕ್ಕರ್ಥ.

ಮಾಣಿಕ್ಯವರ್ಣದ ವಿವರ : ಪ್ರವೃತ್ತಿಶೈವಭಿನ್ನಕ್ರಿಯಾವಂತನ ಆಜ್ಞಾಚಕ್ರ, ಗಂಧ, ಕಸ್ತೂರಿ, ಪುನುಗು, ಜವಾದಿಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ನಿಜವೀರಶೈವ ಪರಮ ಸದ್ಭಕ್ತನ ಆಜ್ಞಾಚಕ್ರ ಶ್ರೀಗುರುಲಿಂಗಜಂಗಮದ, ಚಿತ್ ಪ್ರಕಾಶ, ಚಿದ್‌ಭಸಿತದ ಮೇಲೆ ಸಾವಧಾನಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಕೆಂದಾವರೆಯ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಮಾಣಿಕ್ಯವರ್ಣವೆಂಬ ಶಬ್ದಕ್ಕರ್ಥ.

ಜ್ಯೋತಿರ್ವರ್ಣದ ವಿವರ : ಪ್ರವೃತ್ತಿಶೈವಭಿನ್ನಜ್ಞಾನವಂತನ ಬ್ರಹ್ಮಚಕ್ರ, ಪರರಾಜ್ಯ, ಪರಸ್ತ್ರೀ, ಪರದ್ರವ್ಯ, ಪರಧಾನ್ಯ, ವಸ್ತ್ರಾಭರಣಂಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ವೀರಶೈವನ ಸರ್ವಾಚಾರ ಸಮ್ಯಜ್ಞಾನಿಯ ಬ್ರಹ್ಮಚಕ್ರವು ಪರಮಾರಾಧ್ಯ ಗುರುಲಿಂಗಜಂಗಮದ ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳ ಮೇಲೆ ಅನುಭಾವ, ಆನಂದ, ಸಮರಸವೆಂಬ ಸುಧಾರಸಕ್ಕೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು, ಸ್ಫಟಿಕ ಘಟದೊಳಗಣ ದೀಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಜ್ಯೋತಿರ್ವರ್ಣವೆಂಬ ಶಬ್ದಕ್ಕರ್ಥ.

ಮಹಾಜ್ಯೋತಿರ್ವರ್ಣದ ವಿವರ : ಪ್ರವೃತ್ತಿಶೈವಮಾರ್ಗದ ಕ್ರಿಯಾಜ್ಞಾನ ಹೀನನ ಶಿಖಾಚಕ್ರ ಪಂಚಮಹಾಪಾತಕಂಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ವೀರಶೈವಮಾರ್ಗದ ಸತ್ಕ್ರಿಯಾ ಸಮ್ಯಜ್ಞಾನವಂತನ ಶಿಖಾಚಕ್ರ ಪಂಚಾಚಾರ, ಪಂಚಪರುಷಂಗಳಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಅಂಧಕಾರದೊಳಗಣ ಚಂದ್ರಜ್ಯೋತಿಯ ಪ್ರಕಾಶದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೆಂಬುದೀಗ, ಮಹಾಜ್ಯೋತಿರ್ವರ್ಣವೆಂಬ ಶಬ್ದಕ್ಕರ್ಥ.

ಅಗಣಿತಮಹಾಜ್ಯೋತಿರ್ವಣದ ವಿವರ : ಪ್ರವೃತ್ತಿ ಶೈವಮಾರ್ಗದ ನಡೆನುಡಿಹೀನನ ಪಶ್ಚಿಮಚಕ್ರ ಅಹಂಬ್ರಹ್ಮವೆಂಬ ಅಜ್ಞಾನಂಗಳಿಗೆ ಮುಖವಾಗಿ ಅರಳಿರ್ಪುದು. ನಿವೃತ್ತಿ ವೀರಶೈವ ಸನ್ಮಾರ್ಗ ಸತ್ಯನಡೆನುಡಿ ಸಂಪನ್ನನ ಪಶ್ಚಿಮ ಚಕ್ರ ಏಕಮೇವ ಪರಬ್ರಹ್ಮಮೂರ್ತಿ ಜಂಗಮವೆಂಬ ಮಹಾಜ್ಞಾನಂಗಳಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಸೂರ್ಯಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ ಪ್ರಕಾಶಿಸುತ್ತಿರ್ಪುದೆಂಬುದೀಗ,ಅಗಣಿತ ಮಹಾಜ್ಯೋತಿರ್ವಣವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿವೃತ್ತಿಪ್ರಕಾಶಂಗಳಿಂದ ಆದಿವಿಡಿದು ಬಂದು, ಸಾಕಾರಲೀಲೆಯ ಧರಿಸಿ, ಪರಶಿವಲಿಂಗವಿರಿಸಿದಂತೆ ಅನಂತ ವರ್ಣಂಗಳಿಂದ ನಾಟ್ಯಕ್ಕೆ ನಿಂದು, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ವರ್ಣಂಗಳಾಗಿರ್ಪವು.*

ಅಧಿದೇವತೆಗಳು

ಬ್ರಹ್ಮನಧಿದೇವತೆಯ ವಿವರ : ಶಿವಾಚಾರ ಸದ್ಭಕ್ತ ಶರಣಗಣಂಗಳ ಮನೆಯ ಭೃತ್ಯರಾಗಿ, ಅವರ ಆನಂದ ಕೃತ್ಯಗಳಿಗೆ ಸರಸ್ವತಿ ಎಂಬ ಶಕ್ತಿಯೊಡ ಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಬ್ರಹ್ಮನಧಿದೇವತೆ ಎಂಬ ಶಬ್ದಕ್ಕರ್ಥ.

ವಿಷ್ಣುವಧಿದೇವತೆಯ ವಿವರ : ವೀರಮಹೇಶ್ವರ ಗಣಂಗಳ ಮನೆಯ ಭೃತ್ಯರಾಗಿ, ಅವರ ಆನಂದಕೃತ್ಯಂಗಳಿಗೆ ಲಕ್ಷ್ಮೀ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ವಿಷ್ಣುವಧಿದೇವತೆ ಎಂಬ ಶಬ್ದಕ್ಕರ್ಥ.

ರುದ್ರನಧಿದೇವತೆಯ ವಿವರ : ಅಚ್ಚಪ್ರಸಾದಿಗಣಂಗಳ ಮನೆಯ ಭೃತ್ಯರಾಗಿ, ಅವರ ನಿಜಾನಂದ ಕೃತ್ಯಗಳಿಗೆ ಭದ್ರಿ ಎಂಬ ಶಕ್ತಿಯೊಡಗೂಡಿ ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ರುದ್ರನಧಿದೇವತೆ ಎಂಬ ಶಬ್ದಕ್ಕರ್ಥ.

ಈಶ್ವರನಧಿದೇವತೆಯ ವಿವರ : ನಿಜಪ್ರಾಣಲಿಂಗಿಗಳ ಮನೆಯ ಭೃತ್ಯ ರಾಗಿ, ಅವರ ಪರಮಾನಂದ ಕೃತ್ಯಗಳಿಗೆ ಕಾಳೀ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಈಶ್ವರನಧಿದೇವತೆ ಎಂಬ ಶಬ್ದಕ್ಕರ್ಥ.

ಸದಾಶಿವನಧಿದೇವತೆಯ ವಿವರ : ಶಿವಶರಣ ಗಣಂಗಳ ಮನೆಯ ಭೃತ್ಯರಾಗಿ, ಅವರ ಪರಿಪೂರ್ಣ ಆನಂದ ಕೃತ್ಯಗಳಿಗೆ ಕಂಕಾಳಿ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಸದಾಶಿವನಧಿದೇವತೆ ಎಂಬ ಶಬ್ದಕ್ಕರ್ಥ

ಮಹೇಶ್ವರನಧಿದೇವತೆಯ ವಿವರ: ಶಿವೈಕ್ಯಗಣಂಗಳ ಮನೆಯ ಭೃತ್ಯರಾಗಿ ಅವರ ನಿಃಕಲಾನಂದ ಕೃತ್ಯಗಳಿಗೆ ರುದ್ರಾಣಿ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಮಹೇಶ್ವರನಧಿದೇವತೆ ಎಂಬ ಶಬ್ದಕ್ಕರ್ಥ.

ಪರಮೇಶ್ವರನಧಿದೇವತೆಯ ವಿವರ : ಶಿವಯೋಗಾನಂದ ಗಣಂಗಳ ಮನೆಯ ಭೃತ್ಯರಾಗಿ, ಅವರ ನಿಃಶೂನ್ಯಾನಂದಕೃತ್ಯಗಳಿಗೆ ಶಂಕರಿ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಪರಮೇಶ್ವರನಧಿದೇವತೆ ಎಂಬ ಶಬ್ದಕ್ಕರ್ಥ.

ಸರ್ವೇಶ್ವರನಧಿದೇವತೆಯ ವಿವರ: ನಿಜಶಿವಾನುಭವ ಗಣಂಗಳ ಮನೆಯ

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೫

ಭೃತ್ಯರಾಗಿ, ಅವರ ಅವಿರಳಾನಂದ ಕೃತ್ಯಗಳಿಗೆ ಶರ್ವಾಣಿ ಎಂಬ ಶಕ್ತಿ ಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ, ಸರ್ವೇಶ್ವರನಧಿ ದೇವತೆ ಎಂಬ ಶಬ್ದಕ್ಕರ್ಥ.

ಮಹಾದೇವನಧಿದೇವತೆಯ ವಿವರ : ಪರಿಪೂರ್ಣಜ್ಞಾನ ಪರಮಾನು ಭವ ಗಣಂಗಳ ಮನೆಯ ಭೃತ್ಯರಾಗಿ, ಅವರ ಅನುಪಮಾನಂದ ಕೃತ್ಯಗಳಿಗೆ ಸರ್ವೇಶ್ವರೀ ಎಂಬ ಶಕ್ತಿಯೊಡಗೂಡಿ, ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ ಮಹಾದೇವನಧಿದೇವತೆ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ತರದ ಅಧಿದೇವತೆಗಳು ಆದಿವಿಡಿದು ಬಂದು, ಸಾಕಾರ ಲೀಲೆಯ ಧರಿಸಿ, ಶಿವಭಕ್ತ ಮೊದಲಾದ ಪ್ರಮಥಗಣಂಗಳ ಭೃತ್ಯಾಚಾರ ಸೇವೆಯ ತಮ್ಮ ಸ್ವಾತ್ಮಜ್ಞಾನದಿಂದರಿದ, ಸೇವಾನುಕೂಲಕ್ಕೆ ಯೋಗ್ಯರಾಗಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಅಧಿದೇವತೆಗಳಾಗಿರ್ಪರು.*

ಲಿಂಗಗಳು

ಆಚಾರಲಿಂಗದ ವಿವರ : ಪೂರ್ವವಳಿದು ಪುನರ್ಜಾತನಾಗಿ, ಲಿಂಗಾಂಗ ಸಂಬಂಧದಿಂದ ಸೂತಕ ಪಾತಕಾದಿಗಳ ನೀಗಿ, ಆಚಾರವೇ ಲಿಂಗ, ಮನ, ಪ್ರಾಣವಾಗಿ, ನಿಜವೀರಶೈವ ಸದ್ಭಕ್ತ ಗಣಂಗಳ ಆಧಾರ(ಚಕ್ರ) ಸಂಬಂಧವಾದ, ಚೌದಳಯುಕ್ತವಾದ, ಸುಚಿತ್ತ[೧][ಹಸ್ತ][೧]ದಲ್ಲಿ, ಮೂರ್ತಗೊಂಡಿರುವಾತನೆಂಬುದೀಗ, ಆಚಾರಲಿಂಗವೆಂಬ ಶಬ್ದಕ್ಕರ್ಥ.

ಗುರುಲಿಂಗದ ವಿವರ : ಮಾತೃ, ಪಿತೃ, ಪತಿದ್ರೋಹ ಮೊದಲಾದ ಪರಮ ಪಾತಕದೊಳು ಚರಿಸದೆ ಆವ ಜಾತಿಯಲ್ಲಿ ಜನಿತನಾದಡೇನು, ಹಸ್ತಮಸ್ತಕ ಸಂಯೋಗದಿಂದ ಗುರುಕರಜಾತರಾಗಿ, ಮಂತ್ರವೇ ಮನವಾದ ವೀರ ಮಾಹೇಶ್ವರ ಗಣಾರಾಧ್ಯರ ಸ್ವಾಧಿಷ್ಠಾನ(ಚಕ್ರ)ಸಂಬಂಧ, ಷಡ್‌ದಳಯುಕ್ತವಾದ ಸುಬುದ್ಧಿ[ಹಸ್ತ][೧]ದಲ್ಲಿ ಮೂರ್ತಗೊಂಡಿರುವಾತನೆಂಬುದೀಗ, ಗುರುಲಿಂಗವೆಂಬ ಶಬ್ದಕ್ಕರ್ಥ.

ಶಿವಲಿಂಗದ ವಿವರ : ಸದ್ಭಕ್ತ ಮಹೇಶ್ವರ ಸ್ಥಲವಿಡಿದು ನ್ಯೂನ ಊನಂಗಳಿಲ್ಲ ಪ್ರಮಥಗಣ ಸಾಕ್ಷಿಯಾಗಿ, ಕ್ರಿಯಾದೀಕ್ಷೆಯುಳ್ಳ ಶಿವಭಕ್ತಿಯೊಡಗೂಡಿ ಸತ್ಯಕಾಯಕದಿಂದ ಭವಿತನ ಕಳೆದು, ಭಕ್ತಿಪದಾರ್ಥವೆನಿಸಿ ದೀಕ್ಷಾಪಾದೋದಕದಿಂದ ಪಾಕವಮಾಡಿ, ರೂಪು, ರುಚಿ, ತೃಪ್ತಿಗಳ ಗುರುಲಿಂಗ ಜಂಗಮಕ್ಕೆ ಸಮರ್ಪಿಸಿ, ಅವರಿಂದ ಪ್ರಸಿದ್ಧ ಪಾದೋದಕ ಪ್ರಸಾದವ ಪಡೆದು, ಅನುಭವಿಸುವ ಶಿವಪ್ರಸಾದ ಗಣಂಗಳ ಮಣಿಪೂರಕ(ಚಕ್ರ) ಸಂಬಂಧ ದಶದಳಯುಕ್ತ

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೬

೧–೧ ಪದ್ಮ (ಮೂ)

ವಾದ, ನಿರಹಂಕಾರ[೧][ಹಸ್ತ][೧]ದಲ್ಲಿ ಮೂರ್ತಗೊಂಡಿರುವಾತನೆಂಬುದೀಗ ಶಿವಲಿಂಗವೆಂಬ ಶಬ್ದಕ್ಕರ್ಥ.

ಜಂಗಮಲಿಂಗದ ವಿವರ : ಸದಾಚಾರ, ಸದ್ಭಕ್ತ, ಮಹೇಶ್ವರ, ಪ್ರಸಾದಿ ಸ್ಥಲವ ಸದ್ಗುರುಕೃಪೆಯಿಂದ ತಿಳಿದು, ಮಾರ್ಗಕ್ರಿಯಾ ಪ್ರೇರಣೆಯಿಂದ, ಮಂತ್ರಂಗಳೊಡಗೂಡಿ, ಇಪ್ಪತ್ತೊಂದು ಸಾವಿರದ ಆರುನೂರು ಜಪದಾದಿ–ಅಂತ್ಯವನರಿದ, ಪ್ರಾಣಲಿಂಗದ ಗಣಾರಾಧ್ಯರ ಅನಾಹತಚಕ್ರಸಂಬಂಧವಾದ, ದ್ವಾದಶದಳಯುಕ್ತವಾದ, ಸುಮನ[೧][ಹಸ್ತ][೧]ದಲ್ಲಿ ಮೂರ್ತಗೊಂಡಿರುವಾತನೆಂಬುದೀಗ, ಜಂಗಮಲಿಂಗವೆಂಬ ಶಬ್ದಕ್ಕರ್ಥ.

ಪ್ರಸಾದಲಿಂಗದ ವಿವರ : ಅಖಂಡ ಪರಿಪೂರ್ಣ ಶ್ರೀಗುರುಲಿಂಗಜಂಗಮದ ಬಳಿವಿಡಿದ ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿಸ್ಥಲವ ಸದ್ಗುರುಕೃಪೆಯಿಂದರಿದು, ಆದ್ಯರ ವಚನ ಮೊದಲಾದ ಶಿವಶಾಸ್ತ್ರದನುಭಾವವ ಬೆಸಗೊಂಡು, ಮಿಶ್ರಾಮಿಶ್ರಂಗಳರ್ಪಿತಾವಧಾನ, ಮೂವತ್ತೆರಡು ಉದ್ಧರಣಗಳಿಂದ ಆಚರಿಸುವ, ಶಿವಶರಣಗಣಂಗಳ ವಿಶುದ್ಧಿ(ಚಕ್ರ)ಸಂಬಂಧವಾದ, ಷೊಡಶದಳಯುಕ್ತವಾದ ಸುಜ್ಞಾನ [೧][ಹಸ್ತ][೧]ದಲ್ಲಿ ಮೂರ್ತಗೊಂಡಿರುವಾತನೆಂಬದೀಗ ಪ್ರಸಾದಲಿಂಗವೆಂಬ ಶಬ್ದಕ್ಕರ್ಥ.

ಮಹಾಲಿಂಗದ ವಿವರ : ಅನಾದಿ ಪ್ರಮಥಗಣಾರಾಧ್ಯರ ಬಳಿವಿಡಿದು ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣಸ್ಥಲವ ಚಿದ್ಘನಗುರುಕೃಪೆಯಿಂದರಿದು, ಇಂತೀ ಮೊದಲಾದ ಚಿದ್ಘನಪ್ರಕಾಶಂಗಳ ಬೆಸಗೊಂಡು, ಆ ಪ್ರಕಾಶದಲ್ಲಿ ಪರಿಪೂರ್ಣಾನಂದ ನಿಜೈಕ್ಯ ಗಣಂಗಳ, ಆಜ್ಞಾಚಕ್ರಸಂಬಂಧವಾದ, ದ್ವಿದಳಯುಕ್ತವಾದ, ಸದ್ಭಾವ[೧][ಹಸ್ತ][೧]ದಲ್ಲಿ ಮೂರ್ತಗೊಂಡಿರುವಾತನೆಂಬುದೀಗ, ಮಹಾಲಿಂಗವೆಂಬ ಶಬ್ದಕ್ಕರ್ಥ.

ನಿಃಕಲಲಿಂಗದ ವಿವರ : ಇಂತು ಷಟ್‌ಸ್ಥಲ ಸರ್ವಸಂಗಪರಿತ್ಯಾಗತ್ವದಿಂ, ಚಿದ್ರೂಪ ಘನಗುರುವಿನಿಂದರಿದು ಚಿದ್ರೂಪ ಚಿದಾನಂದಪ್ರಭೆಗಳ ಮಹಾಪ್ರಕಾಶಂಗಳನೊಳಕೊಂಡು, ಮೂಲ ಚಿತ್ತುವಿನಲ್ಲಿ ನಿಂದ, ನಿಃಕಳಂಕ ಗಣಂಗಳ ಬ್ರಹ್ಮರಂಧ್ರ ಷಟ್‌ಚಕ್ರಸಂಬಂಧವಾದ ಐವತ್ತು ದಳಯುಕ್ತಮಾದ ಲೋಮವಿಲೋಮ ಶತಸಹಸ್ರದಳಯುಕ್ತಮಾದ, [೨][ನಿರ್ಮಾಯ ಹಸ್ತದಲ್ಲಿ][೨] ಮೂರ್ತಗೊಂಡಿರುವಾತನೆಂಬುದೀಗ, ನಿಃಕಲಲಿಂಗವೆಂಬ ಶಬ್ದಕ್ಕರ್ಥ.

ನಿಃಶೂನ್ಯಲಿಂಗದ ವಿವರ : ಇಂತು ಆದಿ ಅನಾದಿ ಪರಶಿವನ ಲೀಲೆವಿಡಿದು, ನಿರಂಜನಚರರೂಪು ಚಿದ್ಘನ ಗುರುವಿನಿಂದೆ ಭಕ್ತಿಸ್ಥಲವೆ ಮೊದಲು ನಿರವಯ ಸ್ಥಲವೇ ಕಡೆಯಾದ, ಸ್ಥಲಕುಳವ ಬೆಸಗೊಂಡು, ನಿರಂಜನಚರರೂಪು ಚಿದ್ಘನ

೧–೧ ಪದ್ಮ (ಮೂ) ೨–೨ ನಿರ್ನಾಮ ಪದ್ಮದಲ್ಲಿ (ಮೂ)

ಗುರುವೇ ತಾನಾಗಿ, ಇಹ ಪರಂಗಳಿಗೆ ಮೀರಿ ರಂಜಿಸುವ ನಿಃಶೂನ್ಯಗಣಂಗಳ, ಶಿಖಾಚಕ್ರಸಂಬಂಧ ತ್ರಿದಳಯುಕ್ತಮಾದ ನಿಃಕಲ[ಹಸ್ತ]ದಲ್ಲಿ ಮೂರ್ತ ಗೊಂಡಿರುವಾತನೆಂಬುದೀಗ, ನಿಃಶೂನ್ಯಲಿಂಗವೆಂಬ ಶಬ್ದಕ್ಕರ್ಥ.

ನಿರಂಜನಲಿಂಗದ ವಿವರ : ಇಂತು ದ್ವೈತಾದ್ವೈತವೆಂಬ ಉಭಯ ಬಂಧನಂ ಗಳ ಮೀರಿ ತೋರುವ ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಃಕಲ, ನಿಃಶೂನ್ಯ, ಗಣಾರಾಧ್ಯರ, ಚೌದಳ, ಷಡ್‌ದಳ, ದಶದಳ ದ್ವಾದಶ ದಳ, ಷೋಡಶದಳ, ದ್ವಿದಳ, ಸಹಸ್ರದಳ, ತ್ರಿದಳಯುಕ್ತವಾದ ಆ [ಹಸ್ತಂ] ಗಳಲ್ಲಿ ಮೂರ್ತಿಗೊಂಡು ರಾಜಿಸುವ, ಅಷ್ಟವಿಧಲಿಂಗಂಗಳ ನಾಳ ಗೋಳಕದ ಮಧ್ಯದಲ್ಲಿ; ಪಶ್ಚಿಮ ಸಂಬಂಧ ಏಕದಳಯುಕ್ತಮಾದ ನಿರಾಳ [ಹಸ್ತ]ದಲ್ಲಿ ರೂಪುಪ್ರಸಾದದೊಳಗಣ ರುಚಿಯಂತೆ, ಗೌಪ್ಯದಿಂದ ನೆಲೆಸಿರ್ಪರುಎಂಬುದೀಗ, ನಿರಂಜನಲಿಂಗವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪಾವನಾರ್ಥವಾಗಿ, ಅನಾದಿ ಶರಣ, ಚಿದ್ರೂಪ, ಚಿನ್ಮಯರೂಪ, ಚಿತ್‌ಕಲಾರೂಪಿಂಗೆ, ಅರಳಿರುವ ಪದ್ಮಂಗಳಲ್ಲಿ, ಸಾಕಾರಲೀಲೆಯ ಧರಿಸಿ, ಮಹಾಪ್ರಮಥಗಣಂಗಳ ಅಷ್ಟವಿಧಾರ್ಚನೆ, ಷೋಡ ಶೋಪಚಾರಂಗಳಿಗೆ ಕರ್ತೃಗಳಾಗಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧಲಿಂಗಂಗಳಾಗಿರ್ಪವು.

ಆತ್ಮರುಗಳು

ಜೀವಾತ್ಮನ ವಿವರ : ಅಷ್ಟಮಹದೈಶ್ವರ್ಯಂಗಳು ಹೆಚ್ಚಾಗಿ, ಅಷ್ಟಮದಂ ಗಳೆಂಬ ಅಜ್ಞಾನಪಾಶಬಂಧತ್ವದಿಂದ, ಜನ್ಮ ಜರೆ, ಮರಣಂಗಳಿಗೊಳಗಾಗಿರುವ ಜಡಪ್ರಾಣಿ ಎಂಬುದೀಗ, ಜೀವಾತ್ಮನೆಂಬ ಶಬ್ದಕ್ಕರ್ಥ.

ಅಂತರಾತ್ಮನ ವಿವರ : ಒಂದು ತಾಣದಲ್ಲಿ ಸ್ಥಾಪ್ಯವಾಗಿದ್ದು , ಅನಂತ ದಿಕ್ಕುಗಳಿಗಿರುವಂತಹ ಮಹಾ ಭೋಗಂಗಳ ಕಂಡು, ಕೈಮುಟ್ಟಿ ಭೋಗಿಸಿದಂತಹ ಮನದಲ್ಲಿ ಸಂತೋಷಗೊಂಡಿರುವಂತಹದೇ ಜೀವಹಂಸವೆಂಬುದೀಗ, ಅಂತ ರಾತ್ಮನೆಂಬ ಶಬ್ದಕ್ಕರ್ಥ.

ಪರಮಾತ್ಮನ ವಿವರ : ಕಣ್ಣಿನಲ್ಲಿ ಕಾಣದೆ, ಕಾಯದಲ್ಲಿ ಮುಟ್ಟದೆ, ಒಬ್ಬ ರಿಂದ ಕೇಳದೆ, ತನ್ನ ಕುಟಿಲ, ಕುಹಕ, ಗಾರುಡವಿದ್ಯಂಗಳಿಂದ ಬಹು ದೊಡ್ಡಾತ ನೆಂಬುವ ಜೀವಹಂಸನೆಂಬುದೀಗ, ಪರಮಾತ್ಮನೆಂಬ ಶಬ್ದಕ್ಕರ್ಥ.

ನಿರ್ಮಲಾತ್ಮನ ವಿವರ : ಅಷ್ಟಮಹದೈಶ್ವರ್ಯ ಫಲಪದ ಮೋಕ್ಷವೆಂಬ ಬಯಕೆಯ ಮುಂದುಗೊಂಡು, ಅನಂತ ದೈವಂಗಳ ಅಷ್ಟವಿಧಾರ್ಚನೆ ಷೋಡ ಶೋಪಚಾರಂಗಳಿಂದ ಅರ್ಚಿಸಿದ್ದೇ ಅಭಿಮಾನವುಳ್ಳುದು; ಶರೀರ ಶುಷ್ಕವಾಗಿ

೧–೧ ಪದ್ಮ (ಮೂ)

ರ್ಪುದೀಗ, ನಿರ್ಮಲಾತ್ಮನೆಂಬ ಶಬ್ದಕ್ಕರ್ಥ.

ಶುದ್ಧಾತ್ಮನ ವಿವರ : ಸರ್ವಾವಸ್ಥೆಗಳಲ್ಲಿ ಫಲಪದ ಮೋಕ್ಷಗಳಾಗಬೇಕೆಂಬ ಅನ್ಯ ಭಜನೆಯ ಹಿಂದುಮಾಡಿ, ಶ್ರೀ ಗುರುದೇವನ ಭಜನೆ, ಮಲ ಮಾಯಾ ಭೋಗವಿರಹಿತಂಗಳ ಪಡೆಯಬೇಕೆಂಬುದೀಗ, ಶುದ್ಧಾತ್ಮನೆಂಬ ಶಬ್ದಕ್ಕರ್ಥ.

ಜ್ಞಾನಾತ್ಮನ ವಿವರ: ತನ್ನಂತರಂಗದಲ್ಲಿ ಬೆಳಗುವ ಮಹದರಿವನೇ ಕುರುಹಿಟ್ಟು ಸಕಲ ಭೋಗಂಗಳನು, ಆ ಮಹದರುವಿನಲ್ಲಿ ಶಿವಸ್ಮರಣೆಯಿಂದಲೇ ಭೋಗಿಸುವಸಮಯದಲ್ಲಿ ಆ ಮಹದರುವೇ ಸಾಕಾರಲೀಲೆಯ ಧರಿಸಿ ಗುರು ರೂಪದಿಂದ ಪ್ರತ್ಯಕ್ಷಮಾಗಲು, ಆ ಗುರುದೇವಂಗೆ ಅರ್ಥ ಪ್ರಾಣಾಭಿಮಾನಂ ಗಳಂ ಸಮರ್ಪಿಸಿ, ಆ ಗುರುವಿನಲ್ಲಿ ಮೈಮರೆದಿಪ್ಪುದೇ ಜ್ಞಾನಾತ್ಮನೆಂಬ ಶಬ್ದಕ್ಕರ್ಥ.

ಮಹಾತ್ಮನ ವಿವರ : ಹಗಲಿರುಳು ಎನ್ನದೆ ಪುತ್ರ, ಮಿತ್ರ, ಕಳತ್ರಂಗಳಿಗೆ ಮೋಹಿಸದೆ, ಸರ್ವಸ್ಥಾನಂಗಳಲ್ಲಿ, ಶ್ರೀ ಮಹಾದೇವನ ಚರಣಾರವಿಂದಗಳಲ್ಲಿ ಸೂಜಿಗಲ್ಲಿನಂತೆ ಎರಕತ್ವವನುಳ್ಳಂತಹದೇ ಮಹಾತ್ಮನೆಂಬ ಶಬ್ದಕ್ಕರ್ಥ.

ದಿವ್ಯಾತ್ಮನ ವಿವರ : ಬಹುಜನ್ಮಾಂತರದ ತಪಸ್ಸಿನ ಬಲದಿಂದ ಪುಣ್ಯವೇ ಒಬ್ಬುಳಿಯಾಗಿ, ಚಿದ್ಘನಮಹಾ ಇಷ್ಟಲಿಂಗವು, ಕರಸ್ಥಲದಲ್ಲಿ ಕಂಗಳ ತುಂಬಿಕೊಂಡಿ ಪ್ಪುದೇ, ದಿವ್ಯಾತ್ಮನೆಂಬ ಶಬ್ದಕ್ಕರ್ಥ.

ಚಿನ್ಮಯಾತ್ಮನ ವಿವರ : ಷಟ್‌ಕೃತಿಯಾಂತು ಬೆಳಗುವ ಚಿದ್ಘನ ಮಹಾ ಇಷ್ಟಲಿಂಗದಲ್ಲಿ ನಿಜಶಿವಯೋಗದ ಬೆಳಗಂ ಕಂಡು, ಆ ಬೆಳಗಿನಲ್ಲಿ ಮಹಾ ಬೆಳಗಾಗಿ, ಸರ್ವಾಂಗವೆಲ್ಲ ಲಿಂಗಮಯವಾಗಿ, ಸರ್ವಸಂಗ ಪರಿತ್ಯಾಗವೆಂಬ ಪರುಷದ ಒಪ್ಪುಗಲ್ಲಿಂಗೆ ಭಾವನಂಕೊಂಡು, ಬಂಗಾರದ ಬಣ್ಣಕ್ಕೆ ಸಮ ನಾದಂತಹದ್ದೇ ಚಿನ್ಮಯಾತ್ಮನೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಆತ್ಮರೂಪವಾಗಿ, ಆದಿವಿಡಿದು ಬಂದು, ಸಾಕಾರಲೀಲೆಯಂ ಧರಿಸಿ, ಪರಶಿವಲಿಂಗವಿರಿಸಿದಂತೆ ಅನಂತರೂಪದಿಂದೆ ನಾಟ್ಯಕ್ಕೆ ನಿಂದು, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಆತ್ಮ ರಾಗಿರ್ಪರು.*

ಮೀರಿದ ಕ್ರಿಯೆಗಳು

ಸಾದಾಖ್ಯಿಗಳು

ಕರ್ಮಸಾದಾಖ್ಯದ ವಿವರ : ಗುರುಭಕ್ತಿಯಮಾಡಿ, ಗುರುಕರುಣವ ಪಡೆದು ಬಹುಜನ್ಮದ ಪಾತಕ–ಸೂತಕ ಕರ್ಮಾದಿಗಳ ಕಳೆಯಬೇಕೆಂಬವರಿ, ಕುಚಿತ್ತ ಮುಂದುಗೊಂಡು, ಅಜ್ಞಾನದೆಸೆಯಿಂದ ಅಸಾಧ್ಯವಾಗಿ, ಸರ್ವಸಂಗ ಪರಿತ್ಯಾಗ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೭

ದಿಂದ ನಿರ್ವಾಣಿಯಾಗಿ, ಸಂಚಿತ, ಪ್ರಾರಬ್ಧ ಆಗಾಮಿ ಎಂಬ ಕರ್ಮ ತ್ರಯಂ ಗಳನ್ನು ನಷ್ಟವ ಮಾಡಿದ, ಜ್ಞಾನಕಲಾತ್ಮರಿಗೆ ಕರ್ಮತ್ರಯವ ನೀಗಿರುವವು ಎಂಬುದೀಗ, ಕರ್ಮಸಾದಾಖ್ಯವೆಂಬ ಶಬ್ದಕ್ಕರ್ಥ.

ಕರ್ತೃಸಾದಾಖ್ಯದ ವಿವರ : ಲಿಂಗಪೂಜೆಯ ಮಾಡಿ, ಲಿಂಗದೊಲುಮೆಯ ಪಡೆದು ಷಣ್ಮತಂಗಳಿಗೆ ಉಪರಿಯಾಗಿರಬೇಕೆಂಬವರಿಗೆ ಕುಬುದ್ಧಿ, ಅತಿಆಸೆ, ಅಜ್ಞಾನ ಮುಂದುಗೊಂಡು ಅಸಾಧ್ಯವಾಗಿ, ಕಿಂಕುರ್ವಾಣ, ಸತ್ಯಾಯಕ, ಸದ್ಭಕ್ತಿ ಸದಾಚಾರ ಮುಂದುಗೊಂಡು ನಿಷ್ಪ್ರಪಂಚಿಯಾಗಿ, ಚಿದಂಗ ಚಿದ್ಘನಲಿಂಗದ ಮರ್ಮಾಮರ್ಮವನರಿದು ಅರ್ಚಿಸಿ ಲಿಂಗಾಂಗಸಂಬಂಧಿಯಾದ, ಲಿಂಗನಿಷ್ಠಾಪ ರತ್ವದಿಂದ ಇಹ ಪರಂಗಳಿಗೆ ಮೀರಿ ತೋರುವದೆಂಬುದೀಗ, ಕರ್ತೃಸಾದಾಖ್ಯ ವೆಂಬ ಶಬ್ದಕ್ಕರ್ಥ.

ಮೂರ್ತಿಸಾದಾಖ್ಯದ ವಿವರ : ದಾಸೋಹವಮಾಡಿ ಉಪರಿಯಾದ, ಸೋಹಂಭಾವಿಯಾದೆನೆಂಬವರಿಗೆ, ಅಹಂಬ್ರಹ್ಮವೆಂಬ ಅಹಂಕಾರದಿಂದ ಅಷ್ಟ ಭೋಗದ ಮದ ತಲೆಗೇರಿ, ಅಜ್ಞಾನ ಮುಂದುಗೊಂಡು, ಅಸಾಧ್ಯವಾಗಿ, ಇಂದು ನಾಳಿಂಗೆಂಬ ಸಂದೇಹದ ಕೀಲನು ಕಳೆದು, ನಿರಹಂಕಾರಿಯಾಗಿ ಈಷಣತ್ರಯದ ಲಾಸೆಯಮಾಡದೆ, ನಿರಾಶಿಕನಾಗಿ ತನುಮನವ ಸಮರ್ಪಿಸಿ ದಾಸೋಹಂ ಭಾವಿಯಾಗಿರುವದು ಎಂಬುದೀಗ, ಮೂರ್ತಿಸಾದಾಖ್ಯವೆಂಬ ಶಬ್ದಕ್ಕರ್ಥ.

ಅಮೂರ್ತಿಸಾದಾಖ್ಯದ ವಿವರ : ಅಂತರಂಗದ ಪ್ರಸನ್ನಮೂರ್ತಿ ಪ್ರಾಣ ಲಿಂಗವು, ಭೋರೆಂಬ ನಾದವೇ ಬ್ರಹ್ಮನೆಂಬ ಕುಮನದಿಂದ ತೊಳಲುವವರಿಗೆ ಅಸಾಧ್ಯವಾಗಿ, ನಿಜನೈಷ್ಠೆ, ಕರಿಗೊಂಡು ಸ್ವಯ, ಚರ, ಪರವೇ ತಾನಾಗಿ, ಆ ಅರಿದುದೇ ತಾನು, ತನ್ನರಿವು ಶಿವತತ್ವವೆಂದು ತಿಳಿದು, ಪರಮಾಮೃತಸ್ವರೂಪ ಮಾಗಿ ಜ್ಯೋತಿರ್ಮಯಲಿಂಗದಲ್ಲಿ ಬೆರೆದಿರುವದು ಎಂಬುದೀಗ, ಅಮೂರ್ತಿ ಸಾದಾಖ್ಯವೆಂಬ ಶಬ್ದಕ್ಕರ್ಥ.

ಶಿವಸಾದಾಖ್ಯದ ವಿವರ : ಕುಲ, ಛಲವೆಂಬ, ನಾಮ, ರೂಪು, ಕ್ರಿಯೆ ಗಳಿಂದ ಮತಿಗೆಟ್ಟು ಅಜ್ಞಾನ ಪಾಶಬದ್ಧತ್ವದಿಂದ ಶಿವಾಚಾರಮಾರ್ಗವನರಿ ಯದೆ, ವೀರಶೈವರ ಗೊತ್ತು ತಿಳಿಯದೆ, ಶಿವಭಕ್ತರೆಂದು ವಾಗ್‌ಜಾಲದಿಂದ ನುಡಿವ ಜಾಣರಿಗೆ, ಅಸಾಧ್ಯ ಅತ್ಯತಿಷ್ಠದ್ದಶಾಂಗುಲದಿಂದ ಶ್ರೀಗುರು ಕರುಣಿಸಿ ಕೊಟ್ಟ ಲಿಂಗಾಂಗ ವಿಚಾರವ, ನಿಜಜಂಗಮದಂತೆ ಬೆಸಗೊಂಡು, ಶರಣಸತಿ ಲಿಂಗಪತಿ ಭಾವದಿಂದ ನಡೆದಂತೆ ನುಡಿದು, ನುಡಿದಂತೆ ನಡೆದು, ಲಿಂಗಾಚಾರ ದಲ್ಲಿ ಎವೆ ಹಳಚದೆ ಪರತತ್ವ ಜ್ಯೋತಿರ್ಮಯ ಜಂಗಮದ ಕರುಣಾಜಲ ಕೃಪಾ ಪ್ರಸಾದದಲ್ಲಿ ಮುಳುಗಿರುವದು ಎಂಬುದೀಗ, ಶಿವಸಾದಾಖ್ಯವೆಂಬ ಶಬ್ದಕ್ಕರ್ಥ.

ಮಹಾಸಾದಾಖ್ಯದ ವಿವರ : ನಾವು ಸಮಸ್ತ ಮತಂಗಳಲ್ಲಿ ಬಲ್ಲಿದರು, ನಮ್ಮ ಶೈವಾಚಾರವೇ ಶ್ರೇಷ್ಠವೆಂದು ಮತಭ್ರಾಂತರಾಗಿ, ದುರ್ಭಾವದಿಂದ ನಾವು

ಧರಿಸಿದ ವಿಭೂತಿ, ರುದ್ರಾಕ್ಷಿ, ಮಂತ್ರವೇ ಘನವೆಂದು, ಬೀದಿಪ್ರಸಾರವಮಾಡಿ, ಬಳಸುವ ರಂಜನೆಯ ಅದ್ವೈತರಿಗೆ ಅಸಾಧ್ಯವಾಗಿ, ಪ್ರಮಥಗಣಮಾರ್ಗವಿಡಿದು, ಲಿಂಗಾಂಗವೆಂಬ ಉಭಯ ಭಿನ್ನಭಾವವಳಿದು, ಚಿದ್ವಿಭೂತಿ ರುದ್ರಾಕ್ಷಿ ಮಂತ್ರವೇ ಚಿದಂಗ ಮನ ಪ್ರಾಣವಾಗಿ, ಅತಿ ಗೌಪ್ಯದಿಂದ ಶಿಶುವು ಕಂಡ ಕನಸಿನಂತೆ ಮೌನಿಯಾಗಿ, ಉರಿ ಉಂಡ ಕರ್ಪುರದಂತೆ, ಜ್ಯೋತಿರ್ಮಯ ಮಹಾಲಿಂಗದಲಿ ಪರವನರಿಯದಿರುವುದು ಎಂಬುದೀಗ, ಮಹಾಸಾದಾಖ್ಯವೆಂಬ ಶಬ್ದಕ್ಕರ್ಥ.

ಅಗಮ್ಯಸಾದಾಖ್ಯದ ವಿವರ : ನಮ್ಮ ಶಾಸ್ತ್ರವೇ ಘನವೆಂದು, ತರ್ಕ೦ ಗಳಿಂದ ವಾದಿಗಳಾಗಿ, ಒಬ್ಬರೆಂಜಲಮಾತು ಕಲಿತು ನಿಜಗೆಟ್ಟು, ಶಿವಸನ್ಮಾನಿಗಳಲ್ಲಿ ಅಹಂಕರಿಸುವ ದುಷ್ಟರಿಗೆ, ನಿಷ್ಕಲಪರವಸ್ತು ಅಸಾಧ್ಯವಾಗಿ, ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ, ಅವಿರಳ ಗುರುಕೃಪೆಯಿಂದ, ಶಿವಾನುಭವ ಶಾಸ್ತ್ರವ ಬೆಸಗೊಂಡು ಬಯಲು ಭಾನುವ ನುಂಗಿ, ನಿಲವು ನೆಳಲ ನುಂಗಿದ ತೆರನೊಳು, ವಾಚಾತೀತನಾಗಿ, ಕಿಂಕರಭಾವ ಮುಂದುಗೊಂಡಿರುವಾತಂಗೆ, ನಿಃಕಲಪರವಸ್ತು ಮರೆಗಟ್ಟಿರ್ಪ ನಿಲುಕಡೆ ಎಂಬುದೀಗ, ಅಗಮ್ಯಸಾದಾಖ್ಯವೆಂಬ ಶಬ್ದಕ್ಕರ್ಥ.

ಅಗೋಚರಸಾದಾಖ್ಯದ ವಿವರ : ಕೈಲಾಸಕ್ಕೆ ಹೋಗಿ ಶಿವನ ಮಂದಿರವ ಪ್ರದಕ್ಷಿಸಿ ಶರಣುವೊಕ್ಕು ಹಸ್ತಂಗಳಿಂದರ್ಚಿಸಿ, ಜಿಹ್ವೆಯಿಂದ ಸ್ತುತಿಸಿ, ಕಂಗಳಿಂದ ನೋಡಿ, ಮನದಿಂದ ಧ್ಯಾನಿಸಿ, ಶಿವನನ್ನೊಳಗಾದ ತಾವು ಶಿವನೊಳಗಾದೆವು ಎಂಬ ನುಡಿಜಾಣರಿಗೆ ಅಸಾಧ್ಯವಾಗಿ ಸರ್ವಜ್ಞಂ, ಸುಗುಣಂ, ಭೃತ್ಯಂ, ಸರ್ವಸಂಗ ವಿವರ್ಜಿತಂ ಎಂಬ ಕೃತಿ ಪ್ರಮಾಣದಿಂದ ನೀ ಜನಿಸಿದಂತೆ ಜನಿಸಿದೆ, ನೀ ನುಡಿಸಿ ದಂತೆ ನುಡಿದೆ, ನೀ ನಡೆಸಿದಂತೆ ನಡೆದೆ, ನೀ ಕೊಟ್ಟ ಭೋಗವನುಂಡೆ, ನೀನಿರಿ ದಂತೆ ಇರ್ದೆ, ನಿಮ್ಮ ಶರಣ ಗಣಂಗಳ ಭೃತ್ಯಭಕ್ತಿಯ ನಿಮ್ಮಿಂದ ಕಂಡೆನೆಂದು ಅಂತರಂಗಭರಿತವುಳ್ಳ ಭಕ್ತರಲ್ಲಿ ಇಂಬಾಗಿರ್ಪ ಪರಶಿವನು ಎಂಬುದೀಗ, ಅಗೋಚರಸಾದಾಖ್ಯವೆಂಬ ಶಬ್ದಕ್ಕರ್ಥ.

ಅಪ್ರಮಾಣಸಾದಾಖ್ಯದ ವಿವರ : ಇನ್ನು ಕುಚಿತ್ತ ಕುಬುದ್ಧಿ ಅಹಂಕಾರ, ಕುಮನ, ಅಜ್ಞಾನ, ದುರ್ಭಾವ, ಆಸೆ, ಆಮಿಷವೆಂಬ ಅಷ್ಟಪಾಶಂಗಳಿಂದ, ಅಹಂಬ್ರಹ್ಮವೆಂದು, ಸಾಧನಂಗಳಿಂದ ಚಿದ್ಘನ ನಿರಂಜನ ವಸ್ತುವು, ಸಣ್ಣದು, ದೊಡ್ಡದು ಎಂದು ನುಡಿವವರಿಗೆ ಅಸಾಧ್ಯವಾಗಿ, ಕಿಂಕುರ್ವಾಣ ಸದಾಚಾರ, ಸದ್ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಃಕಲಂಕ, ನಿರಾಲಂಬ, ನಿರವಯಗಣಂಗಳಲ್ಲಿ ಪುಷ್ಪದೊಳಗಣ ಪರಿಮಳದಂತೆ, ಸಮುದ್ರ ದೊಳಗಣ ಕಿಚ್ಚಿನಂತೆ, ಪಾಷಾಣದೊಳಣ ಪ್ರಕಾಶದಂತೆ, ಕರ ಮನ ಭಾವದಲ್ಲಿ, ಚಿದ್ಘನ ನಿರಂಜನ ವಸ್ತು ನೆಲಿಸಿ, ಸರ್ವಾಂಗವೆಲ್ಲ ತಾವಾಗಿರ್ಪರು ಎಂಬುದೀಗ, ಅಪ್ರಮಾಣಸಾದಾಖ್ಯವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿಃಕಲ ಪರಶಿವನಪ್ಪಣೆವಿಡಿದು ವಿನೋದಾ

ರ್ಥವಾಗಿ, ಸಾಕಾರಲೀಲೆಯ ಧರಿಸಿ, ನವವಿಧಸಾದಾಖ್ಯಂಗಳಿಂದ ಅವರವರಂತೆ ಪರಿಶೋಭಿಸಿ ಆನಂದದಿಂದ ಸಮಾಪ್ತಿಯಾಗಿ, ಅನಾದಿ ಶರಣ ಪರಾತ್ಪರ ಮೂರ್ತಿಗೆ, ನವವಿಧ ಚಿದ್ಘನ ಸಾದಾಖ್ಯಂಗಳಾಗಿ ಸಂಬಂಧಮಾಗಿರ್ಪವು.*

ಪ್ರಣಮಗಳು

ನಕಾರಪ್ರಣಮದ ವಿವರ : ಭಕ್ತಸ್ಥಲಕ್ಕೆ ಜನನಿ ಜನಕರಾಗಿ, ಸಾವಿರದ ಏಳುನೂರು ಇಪ್ಪತ್ತೆಂಟು ಲಿಂಗಮಂತ್ರಂಗಳ ಗರ್ಭೀಕರಿಸಿಕೊಂಡು, ಅರುವತ್ತು ಕೋಟಿ ಚಂದ್ರ ಸೂರ್ಯ ಅಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾ ಜ್ಯೋತಿರ್ಲಿಂಗದ ವೃತ್ತಸ್ಥಾನದಲ್ಲಿ ನೆಲೆಸಿರ್ಪುದೆಂಬುದೀಗ, ನಕಾರಪ್ರಣಮ ಎಂಬ ಶಬ್ದಕ್ಕರ್ಥ.

ಮಕಾರಪ್ರಣಮದ ವಿವರ : ಮಹೇಶ್ವರಸ್ಥಲಕ್ಕೆ ಮಾತಾಪಿತರಾಗಿ, ಎರಡು ಸಾವಿರದ ಐದುನೂರಾ ತೊಂಬತ್ತೆರಡು ಲಿಂಗಮಂತ್ರಂಗಳ ಗರ್ಭೀಕರಿಸಿ ಕೊಂಡು, ಎಪ್ಪತ್ತುಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ [೧][ವರ್ತುಳ][೧] ಸ್ಥಾನದಲ್ಲಿ ನೆಲೆಸಿರ್ಪುದೆಂಬುದೀಗ ಮಕಾರಪ್ರಣಮವೆಂಬ ಶಬ್ದಕ್ಕರ್ಥ.

ಶಿಕಾರಪ್ರಣಮದ ವಿವರ : ಪ್ರಸಾದಿಸ್ಥಲಕ್ಕೆ ತಂದೆತಾಯಾಗಿ, ನಾಲ್ಕು ಸಾವಿರದ ಮೂರುನೂರಾ ಇಪ್ಪತ್ತು ಲಿಂಗಮಂತ್ರಂಗಳ ಗರ್ಭೀಕರಿಸಿಕೊಂಡು, ಎಂಬತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ [೧][ಕಟಿಯಲ್ಲಿ][೧] ನೆಲೆಸಿರ್ಪುದೆಂಬುದೀಗ, ಶಿಕಾರ ಪ್ರಣಮವೆಂಬ ಶಬ್ದಕ್ಕರ್ಥ.

ವಕಾರಪ್ರಣಮದ ವಿವರ: ಪ್ರಾಣಲಿಂಗಿಸ್ಥಲಕ್ಕೆ ಹೆತ್ತತಂದೆ ಹೆತ್ತವ್ವೆ ಯಾಗಿ, ಐದುಸಾವಿರದ ನೂರುಎಂಬತ್ತುನಾಲ್ಕು ಲಿಂಗಮಂತ್ರಂಗಳ ಗರ್ಭೀಕರಿಸಿಕೊಂಡು, ತೊಂಬತ್ತುಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ಗೋಮುಖದಲ್ಲಿ ನೆಲೆಸಿರ್ಪುದೆಂಬುದೀಗ, ವಕಾರ ಪ್ರಣವವೆಂಬ ಶಬ್ದಕ್ಕರ್ಥ.

ಯಕಾರಪ್ರಣಮದ ವಿವರ : ಶರಣಸ್ಥಲವೆಂಬ ವೃಕ್ಷಕ್ಕೆ ಚಿದ್ಭೂಮಿಯಾಗಿ, ಆರು ಸಾವಿರ ಒಂಬೈನೂರು ಹನ್ನೆರಡು ಲಿಂಗಪ್ರಣಮ ಮಂತ್ರಂಗಳ ಗರ್ಭೀಕರಿಸಿ ಕೊಂಡು, ನೂರುಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದನಾಳದಲ್ಲಿ ನೆಲೆಸಿರ್ಪುದೆಂಬುದೀಗ, ಯಕಾರ ಪ್ರಣಮವೆಂಬ ಶಬ್ದಕ್ಕರ್ಥ.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೪

೧–೧ ಕಟಿ (ಮೂ) ೨–೨ ವರ್ತುಳದಲ್ಲಿ (ಮೂ)

ಓಂಕಾರಪ್ರಣಮದ ವಿವರ : ಐಕ್ಯಸ್ಥಲವೆಂಬ ಭುಜಂಗನಿಗೆ ಬಾವನ್ನ ವೃಕ್ಷವಾಗಿ, ಎಂಟುನೂರು ಅರವತ್ತು ನಾಲ್ಕು ಲಿಂಗಮಂತ್ರಂಗಳ ಗರ್ಭೀಕರಿಸಿ ಕೊಂಡು, ಸಹಸ್ರಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟಮಹಾಜ್ಯೋತಿರ್ಲಿಂಗದ ಗೋಳಕದಲ್ಲಿ ನೆಲೆಸಿರ್ಪುದೆಂಬುದೀಗ, ಓಂಕಾರ ಪ್ರಣಮವೆಂಬ ಶಬ್ದಕ್ಕರ್ಥ.

ಬಕಾರಪ್ರಣಮದ ವಿವರ : [೧][ನಿಃಕಲ][೧]ಸ್ಥಲವೆಂಬ ಕಮಲಕ್ಕೆ ಚಿತ್ಸೂರ್ಯ ನಾಗಿ, ಇಪ್ಪತ್ತೊಂದು ಸಾವಿರದ ಆರುನೂರು ಲಿಂಗಮಂತ್ರಂಗಳ ಗರ್ಭೀಕರಿಸಿ ಕೊಂಡು, ಲಕ್ಷಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ಲಲಾಟದಲ್ಲಿ ನೆಲೆಸಿರ್ಪುದೆಂಬುದೀಗ, ಬಕಾರಪ್ರಣಮ ವೆಂಬ ಶಬ್ದಕ್ಕರ್ಥ.

ಕ್ಷಕಾರಪ್ರಣಮದ ವಿವರ : [೨][ನಿಃಶೂನ್ಯ][೨] ಸ್ಥಲವೆಂಬ ನೈದಿಲೆಗೆ ಚಿಚ್ಚಂದ್ರ ನಾಗಿ, ಇಪ್ಪತ್ತೊಂದು ಲಕ್ಷದ ಆರು ಸಾವಿರದ ಲಿಂಗಮಂತ್ರಂಗಳ ಗರ್ಭೀಕರಿಸಿ ಕೊಂಡು, ಕೋಟ್ಯಾನುಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ಶಿಖೆಯಲ್ಲಿ ನೆಲೆಸಿರ್ಪುದೆಂಬುದೀಗ, ಕ್ಷಕಾರಪ್ರಣಮವೆಂಬ ಶಬ್ದಕ್ಕರ್ಥ.

ಹಕಾರಪ್ರಣಮದ ವಿವರ : [೩][ನಿರಂಜನ][೩]ಸ್ಥಲವೆಂಬ ಧ್ಯಾನಂಗಳನ[ರ]ಳಿಸುವದಕ್ಕೆ ಚಿದಗ್ನಿಯಾಗಿ, ಇಪ್ಪತ್ತೊಂದು ಕೋಟಿ ಆರುಲಕ್ಷ ಲಿಂಗಮಂತ್ರಂಗಳ ಗರ್ಭೀಕರಿಸಿಕೊಂಡು, ಅಗಣಿತ ಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ಪಶ್ಚಿಮದಲ್ಲಿ ನೆಲೆಸಿರ್ಪು ದೆಂಬುದೀಗ, ವ್ಯಂಜನ ನಿರಂಜನಪ್ರಣಮವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿರಾಲಂಬ ಪರಶಿವನಪ್ಪಣೆವಿಡಿದು, ವಿನೋದಾರ್ಥವಾಗಿ, ಸಾಕಾರಲೀಲೆಯ ಧರಿಸಿ, ನವವಿಧಪ್ರಣಮಸ್ವರೂಪ ಮಾಗಿ, ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ನವಸ್ಥಾನಂಗಳಲ್ಲಿ, ಪರಿಪೂರ್ಣ ಪ್ರಕಾಶದಂತೆ ಪರಿಶೋಭಿಸಿ, ಅನಾದಿ ಶರಣ ಪರಾತ್ಪರಮೂರ್ತಿಗೆ, ನವವಿಧ ಪ್ರಣಮಂಗಳಾಗಿ ಸಂಬಂಧಮಾಗಿರ್ಪವು.

ಆಕೃತಿಗಳು

ತಾರಕಾಕೃತಿಯ ವಿವರ : ಆ ವಸ್ತುವಿನ ಆಧಾರಚಕ್ರವ ಬಳಸಿಕೊಂಡಿರ್ಪ ಚತುಃಕಮಲಂಗಳು, ದುಂಡಮಲ್ಲಿಗೆಯ ಪುಷ್ಪದೋಪಾದಿಯಲ್ಲಿ ಬಟುವಾ ಗಿರ್ಪವು. ಆ ಕಮಲದಲ್ಲಿರ್ಪ ಚತುರ್ವಿಧ ಲಿಂಗಗಳೆಲ್ಲ ಸ್ಪರ್ಶನೋದಕ, ಸುಗಂಧ

೧–೧ ನಿರಾಲಂಬ (ಮೂ) ೨–೨ ನಿಷ್ಕಳಂಕ (ಮೂ) ೩–೩ ನಿರವಯ (ಮೂ)

ಪ್ರಸಾದ, ಮಂತ್ರವಭೋಗಿಸಿ, ನಕ್ಷತ್ರದೋಪಾದಿಯಲ್ಲಿ ದುಂಡಾಗಿರ್ಪವು ಎಂಬುದೀಗ, ತಾರಕಾಕೃತಿ ಎಂಬ ಶಬ್ದಕ್ಕರ್ಥ.

ದಂಡಕಾಕೃತಿಯ ವಿವರ : ಆ ವಸ್ತುವಿನ ಸ್ವಾಧಿಷ್ಠಾನಚಕ್ರಪದ್ಮವ ಬಳಸಿ ಕೊಂಡಿರ್ಪ ಷಟ್‌ಕಮಲಂಗಳು, ಜಾಲದ ಪುಷ್ಪದ ಕೊಂಗುಲಿಯೋಪಾದಿಯಲ್ಲಿ ನೀಳವಾಗಿರ್ಪವು. ಆ ಕಮಲದಲ್ಲಿರ್ಪ ಷಡ್ವಿಧ ಲಿಂಗಗಳೆಲ್ಲ ಅವಧಾರೋದಕ, ಸುರಸಪ್ರಸಾದ, ಮಂತ್ರವ ಭೋಗಿಸಿ, ಇಕ್ಷುದಂಡದ ಗಣ್ಣಿನೋಪಾದಿಯಲ್ಲಿ ನೀಳವಾಗಿರ್ಪವು ಎಂಬುದೀಗ, ದಂಡಕಾಕೃತಿ ಎಂಬ ಶಬ್ದಕ್ಕರ್ಥ.

ಕುಂಡಲಾಕೃತಿಯ ವಿವರ : ಆ ವಸ್ತುವಿನ ಮಣಿಪೂರಕಚಕ್ರ ಪದ್ಮವ ಬಳಸಿ ಕೊಂಡಿರ್ಪ ದಶಕಮಲಂಗಳು, ಸರ್ಪನ ಹೆಡೆಯೋಪಾದಿಯಲ್ಲಿ ತಾವರೆ ಕಮಲದ ಹಾಗೆ ಇರ್ಪವು. ಆ ಕಮಲದಲ್ಲಿರ್ಪ ದಶವಿಧ ಲಿಂಗಂಗಳೆಲ್ಲ, ಆಪ್ಯಾಯನೋದಕ, ಸುರೂಪುಪ್ರಸಾದ, ಮಂತ್ರವ ಭೋಗಿಸಿ, ರಂಭಾಕುಸುಮ ದೋಪಾದಿಯಲ್ಲಿ ಎಸಳುಗಳೆಲ್ಲ ಸೂಜಿಮಲ್ಲಿಗೆ ಅರಳುಮಲ್ಲಿಗೆಯಂತಿರ್ಪವು ಎಂಬುದೀಗ, ಕುಂಡಲಾಕೃತಿ ಎಂಬ ಶಬ್ದಕ್ಕರ್ಥ.

ಅರ್ಧಚಂದ್ರಾಕೃತಿಯ ವಿವರ : ಆ ವಸ್ತುವಿನ ಅನಾಹತಚಕ್ರ ಪದ್ಮವ ಬಳಸಿಕೊಂಡಿರ್ಪ, ದ್ವಾದಶದಳ ಕಮಲಂಗಳು, ಹುಣ್ಣಿಮೆಯ ಚಂದ್ರಮ ನೋಪಾದಿಯಲ್ಲಿ ನೈದಿಲೆಯ ಕಮಲದ ಹಾಗೆ ಇರ್ಪವು. ಆ ಕಮಲದಲ್ಲಿರ್ಪ ದ್ವಾದಶಲಿಂಗಂಗಳೆಲ್ಲ ಹಸ್ತೋದಕ, ಸುಸ್ಪರ್ಶನಪ್ರಸಾದ, ಮಂತ್ರವ ಭೋಗಿಸಿ ಹೆದ್ದುಂಬೆಪುಷ್ಪದ ಹಾಗೆ ಎಸಳುಗಳೆಲ್ಲ ಕರವೀರಕುಸುಮದ ಅರಳುಗಳೋಪಾದಿಯಲ್ಲಿರ್ಪವೆಂಬುದೀಗ, ಅರ್ಧಚಂದ್ರಾಕೃತಿ–ಎಂಬ ಶಬ್ದಕ್ಕರ್ಥ.

ದರ್ಪಣಾಕೃತಿಯ ವಿವರ : ಆ ವಸ್ತುವಿನ ವಿಶುದ್ಧಿಚಕ್ರಪದ್ಮವ ಬಳಸಿ ಕೊಂಡಿರ್ಪ, ಷೋಡಶದಳ ಕಮಲಂಗಳು, ಕಂಚಿನ ಕನ್ನಡಿಯಂತೆ ಬೆಟ್ಟದಾವರೆ ಕಮಲದೋಪಾದಿಯಲ್ಲಿರ್ಪವು. ಆ ಕಮಲದಲ್ಲಿರ್ಪ ಷೋಡಶಲಿಂಗಗಳೆಲ್ಲ ಪರಿಣಾಮೋದಕ ಸುಶಬ್ದ ಪ್ರಸಾದ, ಮಂತ್ರವ ಭೋಗಿಸಿ, ಸಂಪಿಗೆಪುಷ್ಪದ ಹಾಗೆ ಎಸಳುಗಳೆಲ್ಲ ಹಿರಿಯ ಮಲ್ಲಿಗೆಯ ಪುಷ್ಪದೋಪಾದಿಯಲ್ಲಿರ್ಪವೆಂಬುದೀಗ, ದರ್ಪಣಾಕೃತಿ ಎಂಬ ಶಬ್ದಕ್ಕರ್ಥ.

ಜ್ಯೋತಿರಾಕೃತಿಯ ವಿವರ : ಆ ವಸ್ತುವಿನ ಆಜ್ಞಾಚಕ್ರಪದ್ಮವ ಬಳಸಿ ಕೊಂಡಿರ್ಪ, ದ್ವಿದಳಕಮಲಂಗಳು, ಸ್ಫಟಿಕದ ತಳಿಗೆಯಲುರಿವ ದೀಪದಂತೆ, ಸೇವಂತಿಗೆಯ ಪುಷ್ಪದೋಪಾದಿಯಲ್ಲಿರ್ಪವು. ಆ ಕಮಲದಲ್ಲಿರ್ಪ ದ್ವಿದಳ ಲಿಂಗಗಳೆಲ್ಲ, ನಿರ್ಮಾಮೋದಕ, ಪರಿಣಾಮ ಪ್ರಸಾದ, ಮಂತ್ರವ ಭೋಗಿಸಿ, ಕೆಂದಾವರೆಪುಷ್ಪದ ಹಾಗೆ ಎಸಳುಗಳೆಲ್ಲ ಜಾಜಿಮಲ್ಲಿಗೆಯ ಅರಳುಗಳಂತಿರ್ಪ ವೆಂಬುದೀಗ, ಜ್ಯೋತಿರಾಕೃತಿ ಎಂಬ ಶಬ್ದಕ್ಕರ್ಥ.

ನಿಷ್ಕಳಾಕೃತಿಯ ವಿವರ : ಆ ವಸ್ತುವಿನ ಬ್ರಹ್ಮರಂಧ್ರಚಕ್ರಪದ್ಮವ ಬಳಸಿ ಕೊಂಡಿರ್ಪ, ಶತಸಹಸ್ರದಳ ಕಮಲಂಗಳು, ಆಕಾಶದೊಳಗಣ ಸೂರ್ಯ, ಚಂದ್ರ, ನಕ್ಷತ್ರ, ಅಭ್ರಚ್ಛಾಯೆ ಮೊದಲಾದ ಸಮೂಹದಂತೆ ಅನಂತ ಪುಷ್ಪಂಗಳ ತುಂಬಿಟ್ಟ ತಳಿಗೆಯೋಪಾದಿಯಲ್ಲಿರ್ಪವು. ಆ ಶತಸಹಸ್ರ ಕಮಲಂಗಳಲ್ಲಿರ್ಪ ಸಹಸ್ರ ಲಿಂಗಂಗಳೆಲ್ಲ ಕರುಣಾಮೃತೋದಕ, ತೃಪ್ತಿಪ್ರಸಾದ, ಮಂತ್ರವ ಭೋಗಿಸಿ, ಅಷ್ಟವಾದ್ಯ, ಚಂದ್ರಜ್ಯೋತಿ, ಮೇಳ ಸಮ್ಮೇಳನಂಗಳಿಂದ ಶೋಭಿ ಸುವ ಜಂಗಮದ ಮೆರವಣಿಗೆಯಂತಿರ್ಪವು ಎಂಬುದೀಗ, ನಿಷ್ಕಳಾಕೃತಿ ಎಂಬ ಶಬ್ದಕ್ಕರ್ಥ.

ನಿಃಶೂನ್ಯಾಕೃತಿಯ ವಿವರ : ಆ ವಸ್ತುವಿನ ಶಿಖಾಚಕ್ರಪದ್ಮವ ಬಳಸಿ ಕೊಂಡಿರ್ಪ ತ್ರಿದಳಕಮಲಂಗಳು. ನವರತ್ನಪ್ರಕಾಶದಂತೆ ಮಂಡಲತ್ರಯಂ ಗಳೋಪಾದಿಯಲ್ಲಿರ್ಪವು. ಆ ಕಮಲಂಗಳಲ್ಲಿರ್ಪ ತ್ರಿವಿಧ ಲಿಂಗಂಗಳೆಲ್ಲ, ವಿನಯಾಮೃತೋದಕ, ಮಹಾತೃಪ್ತಿ ಪ್ರಸಾದ, ಮಂತ್ರವ ಭೋಗಿಸಿ ಕನ್ನಡಿ ಯೊಳಗಣ ಚಿತ್ರ ವಿಚಿತ್ರದಂತೆ ಪರಿಶೋಭಿಸುತ್ತಿರ್ಪವೆಂಬುದೀಗ, ನಿಃಶೂನ್ಯಾಕೃತಿ ಎಂಬ ಶಬ್ದಕ್ಕರ್ಥ.

ನಿರಂಜನಾಕೃತಿಯ ವಿವರ : ಆ ವಸ್ತುವಿನ ಪಶ್ಚಿಮಚಕ್ರಪದ್ಮ ಅಷ್ಟವಿಧ ಕಮಲಾಕೃತಿಗಳನೊಳಕೊಂಡು, ಅಣುವಿಂಗೆ ಅಣುವಾಗಿ, ಮಹತ್ತಿಗೆ ಮಹತ್ತಾಗಿ, ಒಂದರೊಳಗೊಂದು ಕೂಡಿ ಕೊಡದಂತೆ, ಬಹು ಚಿತ್ರ ವಿಚಿತ್ರ, ಚೋದ್ಯಕ್ಕೆ ಚೋದ್ಯ, ಪ್ರಮಾಣಕ್ಕೆ ಅಪ್ರಮಾಣ, ಗಣಿತಕ್ಕೆ ಅಗಣಿತ, ರೂಪಿಂಗೆ ಚಿದ್ರೂಪು, ಅನಂತ ಕಮಲಂಗಳಲ್ಲಿರ್ಪ ಅನಂತ ಚಿದ್ಘನ ಲಿಂಗಂಗಳೆಲ್ಲ, ಸಮತಾಮೃ ತೋದಕ, ನಿಜ ಮಹಾಚಿದ್ಘನ ಸಂತೃಪ್ತಿ ಪ್ರಸಾದದ, ಮಂತ್ರವ ಭೋಗಿಸಿ ಅರುಹಿಂಗೆ ಪ್ರತ್ಯಕ್ಷವಾಗಿ, ಮರಹಿಂಗೆ ಬಯಲಾಗಿರ್ಪುದೆಂಬುದೀಗ, ನಿರಂಜನಾ ಕೃತಿ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಸಾಕಾರ ಪರಬ್ರಹ್ಮ ಪರಶಿವನಪ್ಪಣೆ ವಿಡಿದು ವಿನೋದಾರ್ಥವಾಗಿ ಸಾಕಾರ ಲೀಲೆಯ ಧರಿಸಿ, ನವವಿಧ ಆಕೃತಿಗಳ ತಳೆದು, ಸಮಸ್ತ ಪ್ರಮಥಗಣಂಗಳ, ವರಚೌಕ ಮಧ್ಯದಲ್ಲಿ ಕನ್ನಡಿಯೊಳಗಣ ಬಿಂಬದೋಪ್ಪರಿಶೋಭಿಸಿ, ಅನಾದಿ ಶರಣ ಪರಾತ್ಪರ ಮೂರ್ತಿಗೆ ನವವಿಧಾಕೃತಿ ಗಳಾಗಿ ಸಂಬಂಧಮಾಗಿರ್ಪವು.*

ದಿಕ್ಕುಗಳು

ಪೂರ್ವದಿಕ್ಕಿನ ವಿವರ : ಇಂದ್ರಂಗೆ ಮಂದಿರವಾಗಿ, ಸೂರ್ಯಚಂದ್ರಾದಿ ಗಳಿಗೆ ಉದಯಸ್ಥಾನವಾಗಿರ್ಪುದೀಗ, ಪೂರ್ವದಿಕ್ಕು ಎಂಬ ಶಬ್ದಕ್ಕರ್ಥ.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೧೯

ಪಶ್ಚಿಮದಿಕ್ಕಿನ ವಿವರ : ವರುಣಂಗೆ ಮಂದಿರವಾಗಿ, ಸೂರ್ಯಚಂದ್ರಾದಿ ಗಳಿಗೆ ಅಸ್ತಮಾನವಾಗಿ ನೆಲೆಯಾಗಿರ್ಪುದೆಂಬುದೀಗ, ಪಶ್ಚಿಮದಿಕ್ಕು ಎಂಬ ಶಬ್ದಕ್ಕರ್ಥ.

ಉತ್ತರದಿಕ್ಕಿನ ವಿವರ : ಕುಬೇರಂಗೆ ಮಂದಿರವಾಗಿ, ಕೆಂಪಿನ ವರ್ಣದ ಮೌಕ್ತಿಕದ ಹರಳು ರುದ್ರಾಕ್ಷಿಗಳಿಗೆ ಜನನಸ್ಥಾನವಾಗಿರ್ಪುದೆಂಬುದೀಗ, ಉತ್ತರ ದಿಕ್ಕು ಎಂಬ ಶಬ್ದಕ್ಕರ್ಥ.

ದಕ್ಷಿಣದಿಕ್ಕಿನ ವಿವರ : ಯಮಂಗೆ ಮಂದಿರಮಾಗಿ, ಬಿಳಿಯವರ್ಣದ ಮೌಕ್ತಿಕದ ಹರಳು ರುದ್ರಾಕ್ಷಿಗಳಿಗೆ ಜನನಸ್ಥಾನಮಾಗಿರ್ಪುದೆಂಬುದೀಗ, ದಕ್ಷಿಣ ದಿಕ್ಕು ಎಂಬ ಶಬ್ದಕ್ಕರ್ಥ.

ಊರ್ಧ್ವದಿಕ್ಕಿನ ವಿವರ : ಮೂವತ್ತೆಂಟು ಕಳೆಯುಳ್ಳ ಸೂರ್ಯಚಂದ್ರಾಗ್ನಿ ಗಳ ವಸತಿಗಳಿಗೆ ಮಂದಿರಮಾಗಿ, ನಕ್ಷತ್ರಂಗಳಿಗೆ ಜನನಸ್ಥಾನಮಾಗಿರ್ಪುದೆಂಬು ದೀಗ, ಊರ್ಧ್ವದಿಕ್ಕು ಎಂಬ ಶಬ್ದಕ್ಕರ್ಥ.

ಪಾತಾಳದಿಕ್ಕಿನ ವಿವರ : ವಾಯುವಿಂಗೆ ಮಂದಿರಮಾಗಿ, ಹವಳ ನೀಲಂ ಗಳಿಗೆ ಜನನಸ್ಥಾನಮಾಗಿರ್ಪುದೆಂಬುದೀಗ, ಪಾತಾಳದಿಕ್ಕು ಎಂಬ ಶಬ್ದಕ್ಕರ್ಥ.

ವಾಯುದಿಕ್ಕಿನ ವಿವರ : ಈಶಾನ್ಯಂಗೆ ಮಂದಿರಮಾಗಿ, ಮನು, ಮುನಿ, ದೇವ, ದಾನವ ಮಾನವರಿಗೆ ಜನನಸ್ಥಾನಮಾಗಿರ್ಪುದೆಂಬುದೀಗ, ಶುದ್ಧ ವಾಯು ದಿಕ್ಕು ಎಂಬ ಶಬ್ದಕ್ಕರ್ಥ.

ದಿವ್ಯಾನಂದಘೋಷದಿಕ್ಕಿನ ವಿವರ : ನೈರುತ್ಯಂಗೆ ಮಂದಿರಮಾಗಿ, ಗುಡುಗು, ಮಿಂಚು, ಸಿಡಿಲು ಮೊದಲಾಗಿ ದೇವತೆಗಳೇ ಕಡೆಯಾದರ್ಗೆ, ಜನನ ಸ್ಥಾನಮಾಗಿರ್ಪುದೆಂಬುದೀಗ, ದಿವ್ಯಾನಂದಘೋಷದಿಕ್ಕು ಎಂಬ ಶಬ್ದಕ್ಕರ್ಥ.

ಹೃತ್ಕಮಲದಿಕ್ಕಿನ ವಿವರ : ಇರುವೆ ಮೊದಲು ಆನೆ ಕಡೆಯಾದ ಎಂಬತ್ತು ನಾಲ್ಕು ಲಕ್ಷ ಜೀವಾತ್ಮರುಗಳಿಗೆ, ಜನನಸ್ಥಾನಮಾಗಿ, ಶಿವಶರಣ, ಭಕ್ತ ಗಣಂಗಳ ಲೀಲಾವಿನೋದಕ್ಕೆ, ಧನ ಧಾನ್ಯಂಗಳನೊಳಕೊಂಡು ಪ್ರಕಾಶಿಸುತ್ತಿರ್ಪುದೆಂಬು ದೀಗ ಹೃತ್ಕಮಲದಿಕ್ಕು ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಊರ್ಧ್ವಸೃಷ್ಟಿ, ಅಧೋಸೃಷ್ಟಿಗಳಿಗೆ, ನಿವೃತ್ತಿ ಪ್ರವೃತ್ತಿ ಎಂಬ ಉಭಯ ಮಾರ್ಗದಿಂದ ಸಾಕಾರಲೀಲೆಯ ಧರಿಸಿ, ನವ ದಿಗಂತಮೂರ್ತಿಗಳಾಗಿ, ಪರಶಿವನಪ್ಪಣೆಯಿಂದ ನಾಟ್ಯಕ್ಕೆ ನಿಂದು, ಶಿವಗಣ ಸೇವೆಗೆ ಯೋಗ್ಯರಾಗಿ, ಅನಾದಿ ಶರಣ ಪರಾತ್ಪರಮೂರ್ತಿ ನವವಿಧ ದಿಕ್ಕುಗಳಾಗಿ ಸಂಬಂಧವಾಗಿರ್ಪುವು.*

ವೇದಗಳು

ಋಗ್ವೇದದ ವಿವರ : ಜಗತ್‌ಸೃಷ್ಟಿಗೆ ಕಾರಣನಾದ ಬ್ರಹ್ಮನ ಪೂರ್ವ ದಿಕ್ಕಿನ ಮುಖದಲ್ಲಿ ಸದ್ಯೋಜಾತಲಿಂಗವ ಸ್ಥಾಪ್ಯವಮಾಡಿ, ಆ ಲಿಂಗಮುಖಕ್ಕೆ ಉಪದೇಶವ ಮಾಡಿದಂತಹದ್ದು ಪರಶಿವನು ಎಂಬುದೀಗ, ಋಗ್ವೇದ ಎಂಬ ಶಬ್ದಕ್ಕರ್ಥ.

ಯಜುರ್ವೇದದ ವಿವರ : ಸಮಸ್ತ ಪ್ರಾಣಿಗಳ ಸೃಷ್ಟಿಸುವಂತಹ ಬ್ರಹ್ಮನ ಉತ್ತರ ದಿಕ್ಕಿನ ಮುಖದಲ್ಲಿ ವಾಮದೇವಲಿಂಗವ ಸ್ಥಾಪ್ಯವಮಾಡಿ, ಆ ಲಿಂಗ ಮುಖಕ್ಕೆ ಉಪದೇಶವಮಾಡಿದಂತಹದ್ದು ಪರಶಿವನು ಎಂಬುದೀಗ, ಯಜು ರ್ವೇದ ಎಂಬ ಶಬ್ದಕ್ಕರ್ಥ.

ಸಾಮವೇದದ ವಿವರ : ಸಕಲಪ್ರಾಣಿಗಳ ಜನಕನಾದ ಕಮಲೋದ್ಭವ ನಾದ ಬ್ರಹ್ಮನ ಪಶ್ಚಿಮದಿಕ್ಕಿನ ಮುಖದಲ್ಲಿ ಅಘೋರಲಿಂಗವ ಸ್ಥಾಪ್ಯವಮಾಡಿ, ಆ ಲಿಂಗಮುಖಕ್ಕೆ ಉಪದೇಶವಾದಂತಹದ್ದು ಪರಶಿವನು ಎಂಬುದೀಗ, ಸಾಮ ವೇದವೆಂಬ ಶಬ್ದಕ್ಕರ್ಥ.

ಅಥರ್ವವೇದದ ವಿವರ : ಶಾರದೆಗೆ ವಲ್ಲಭನಾದ ಬ್ರಹ್ಮನ ದಕ್ಷಿಣದಿಕ್ಕಿನ ಮುಖದಲ್ಲಿ ತತ್ಪುರುಷಲಿಂಗವ ಸ್ಥಾಪ್ಯವಮಾಡಿ, ಆ ಲಿಂಗಮುಖಕ್ಕೆ ಉಪದೇಶವ ಮಾಡಿದಂತಹದ್ದು ಪರಶಿವನು ಎಂಬುದೀಗ, ಅಥರ್ವಣವೇದ ಎಂಬ ಶಬ್ದಕ್ಕರ್ಥ.

ಅಜಪವೇದದ ವಿವರ : ಸರಸ್ವತೀರಮಣನಾದ ಬ್ರಹ್ಮನ ಸದ್ಘೋಷ ದಿಕ್ಕಿನಮುಖದಲ್ಲಿ ಸದಾಶಿವಲಿಂಗವ ಸ್ಥಾಪ್ಯವಮಾಡಿ, ಆ ಲಿಂಗಕ್ಕೆ ಆಚ್ಛೆಯ ಮಾಡಿದಂತಹದ್ದು ಪರಶಿವನು ಎಂಬುದೀಗ, ಅಜಪವೇದವೆಂಬ ಶಬ್ದಕ್ಕರ್ಥ.

ಗಾಯತ್ರೀವೇದದ ವಿವರ : ಇಂತಹ ಪಂಚಮುಖಬ್ರಹ್ಮಂಗೆ ಬಂಧು ಗಳಾದ ನವಕೋಟಿಬ್ರಹ್ಮರಿಗೆ ಹಿಮಗಿರೀಶ್ವರಲಿಂಗವ ಅವರಂಗದಲ್ಲಿ ಸ್ಥಾಪ್ಯವ ಮಾಡಿ, ಆ ಲಿಂಗಮುಖದಿಂದ ನವಕೋಟಿಬ್ರಹ್ಮರಿಗೆ ಉಪದೇಶ ಕ್ರಿಯೆಗಳ ಬೋಧಿಸಿ ದಂತಹದ್ದು ಪರಶಿವನು ಎಂಬುದೀಗ, ಗಾಯತ್ರೀವೇದವೆಂಬ ಶಬ್ದಕ್ಕರ್ಥ.

ಧನುರ್ವೇದದ ವಿವರ : ಇಂತು ಅನಂತಕೋಟಿಬ್ರಹ್ಮರಿಂದ ಉತ್ಪತ್ಯ ವಾದ ಅನಂತಕೋಟಿ ಪ್ರಾಣಿಗಳ ಸಕಲ ಸ್ಥಿತಿ ಭೋಗಂಗಳನಿತ್ತು ರಕ್ಷಕರಾದ ನವಕೋಟಿ ವಿಷ್ಣುಗಳಿಗೆ ವಿಶ್ವಾಧಿಕಲಿಂಗವ ಅವರಂಗಂಗಳಲ್ಲಿ ಸ್ಥಾಪ್ಯವಮಾಡಿ, ಆ ಲಿಂಗಮುಖ ದಿಂದ ನವಕೋಟಿ ವಿಷ್ಣುಗಳಿಗೆ ಉಪದೇಶಕ್ರಮವ ಅರುಹಿಸಿ ಕೊಟ್ಟಂತಹದ್ದು ಪರಶಿವನು ಎಂಬುದೀಗ, ಧನುರ್ವೇದವೆಂಬ ಶಬ್ದಕ್ಕರ್ಥ.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೦

ಗಂಧರ್ವವೇದದ ವಿವರ : ಅಷ್ಟಮಹದೈಶ್ವರ್ಯಂಗಳಿಂದ ಮಹಾ ಭೋಗಿಗಳಾಗಿ ಮನುಮುನಿ ದೇವದಾನವ ಯಕ್ಷ ರಕ್ಷ ಗುಹ್ಯಕರು ಮೊದಲಾದವರಿಗೆ ಆತ್ಮಾರಾಮಲಿಂಗವ ಅವರಂತರಂಗದಲ್ಲಿ ಸ್ಥಾಪ್ಯವ ಮಾಡಿ, ಆ ಲಿಂಗಮುಖದಿಂದ ಸಮಸ್ತರಿಗೆ ಉಪದೇಶವ ಕರುಣಿಸಿದಂತಹದು ಪರಶಿವನು ಎಂಬುದೀಗ, ಗಂಧರ್ವವೇದವೆಂಬ ಶಬ್ದಕ್ಕರ್ಥ.

ಸದ್ಯೋಷವೇದದ ವಿವರ : ಬ್ರಹ್ಮರಿಂದಜನಿತ ವಿಷ್ಣುಗಳಿಂದ ವರ್ಧನ ವಾದ ಸಕಲ ಜೀವಾತ್ಮರ ಸಂಹಾರಕ್ಕೆ ಕಾರಣಮಾದ ವಿಕಾದಶರುದ್ರರಿಗೆ ಕಾಲಾಂತಕ ಲಿಂಗವ ಅವರಂತರಂಗದಲ್ಲಿ ಸ್ಥಾಪ್ಯವಮಾಡಿ, ಆ ಲಿಂಗಮುಖದಿಂದ ವಿಕಾದಶ ರುದ್ರರಿಗೆ ಉಪದೇಶವ ಕರುಣಿಸಿದಂತಹದು ಪರಶಿವಲಿಂಗನು ಎಂಬುದೀಗ, ಸದ್ಯೋಷವೇದವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತುಪ್ರಕಾರದಿಂದ ಶೈವಮಾರ್ಗದ ಬ್ರಹ್ಮ, ವಿಷ್ಣು ರುದ್ರ, ಮನು, ಮುನಿ, ದೇವ, ದಾನವ, ಯಕ್ಷ, ರಕ್ಷ ಗುಹ್ಯಕರು ಮೊದಲಾದವರಿಗೆ ಸಪ್ತಾವರಣ ಉಪದೇಶದಿಂದ ಶ್ರೀ ಕೈಲಾಸದಲ್ಲಿ ಪ್ರಮಥಗಣ ನಿರೂಪದಿಂದ ಮೂಲಮಂತ್ರಶಕ್ತಿಯೊಡಗೂಡಿ ಪರಶಿವನು ಅವರವರ ಮನ ಭಾವದಂತೆ ದೀಕ್ಷೋಪದೇಶಾರ್ಥವಾಗಿ ಅಂಕುರಿಸಿ ಸಾಕಾರಲೀಲೆಯಿಂದ ಪಾವನಾರ್ಥವಾಗಿ ಆಚರಿಸಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ವೇದಂಗಳಾಗಿರ್ಪವು.*

ಕಲೆಗಳು

ನಿವೃತ್ತಿಕಲೆಯ ವಿವರ : ವಾಕ್ಕು, ಪಾಣಿ, ಪಾದ, ಗುಹ್ಯ, ಪಾಯಂಗಳ ಮೃತ್ತಿಕಾ ಶೌಚದಿಂದ ಸ್ಥೂಲವಾದ ಮಲಿನವ ಕಳೆದು ನಿರ್ಮಲ ರೂಪವ ಮಾಡುವಂತಹದು ಎಂಬುದೀಗ, ನಿವೃತ್ತಿಕಲೆ ಎಂಬ ಶಬ್ದಕ್ಕರ್ಥ.

ಪ್ರತಿಷ್ಠಾಕಲೆಯ ವಿವರ : ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರಂಗಳ ದೀಕ್ಷಾಪಾದೋದಕದಿಂದ ಸೂಕ್ಷ್ಮವಾದ ಮಲಿನವ ದಂತ ಧಾವನ ಕ್ರಿಯೆಗಳಿಂದ ತೊಳೆದು ನಿರ್ಮಲರೂಪವಮಾಡುವಂತಹದು ಎಂಬುದೀಗ, ಪ್ರತಿಷ್ಠಾಕಲೆ ಎಂಬ ಶಬ್ದಕ್ಕರ್ಥ.

ವಿದ್ಯಾಕಲೆಯ ವಿವರ: ಆಪಾದಮಸ್ತಕ ಪರಿಯಂತರವು ಗುರುಪಾದೋದಕ ಮಂತ್ರ, ಮಿಶ್ರಂಗಳಿಂದ, ಕಟಿಸ್ನಾನ, ಕಂಠಸ್ನಾನ, ಮಂಡೆ ಸ್ನಾನಂಗಳ ಮಾಡಿ, ನಿರ್ಮಲಾಂಗವೆನಿಸುವಂತಹದು ಎಂಬುದೀಗ, ವಿದ್ಯಾಕಲೆ ಎಂಬ ಶಬ್ದಕ್ಕರ್ಥ.

ಶಾಂತಿಕಲೆಯ ವಿವರ : ಅಷ್ಟದಿಕ್ಕುಗಳಲ್ಲಿ ತನಗೆ ಪರಿಣಾಮಕರವಾಗಿ ತೋರುವ ದಿಕ್ಕುಗಳಿಗೆ ರೋಮ, ಶಾಟೆ, ಕಪ್ಪಟ, ದರ್ಭೆಗಳಿಂದ ದೊರೆದಂತಹ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೧

ದಲ್ಲಿ , ಒಂದಾಸನವ ರಚಿಸಿ, ಕಟಿಸೂತ್ರ, ಕೌಪೀನ, ವಸ್ತ್ರ, ಪಾವುಡ, ಮಡಿ ಮೊದಲಾದವನ್ನು ಪಾವನವೆನಿಸಿ, ಲಿಂಗನಿರೀಕ್ಷಣೆಯಿಂ ಧರಿಸಿ, ಪುಷ್ಪ ಪತ್ರೆ ಮೊದಲಾದ ಉಪಚಾರಂಗಳಿಂದ ರಚಿಸಿ, ಪಾದಗೊರಡನು ಮೆಟ್ಟಿ, ಮಂತ್ರ ಧ್ಯಾನ, ಅಷ್ಟಾವರಣಸ್ತೋತ್ರದಿಂದ ಸರ್ವಸಂಗ ಪರಿತ್ಯಾಗಂಗಳಿಂದ, ಕ್ಷಮೆ ದಮೆಗಳಿಂದ, ಮೂರ್ತವ ಮಾಡುವುದು ಎಂಬುದೀಗ, ಶಾಂತಿಕಲೆ ಎಂಬ ಶಬ್ದಕ್ಕರ್ಥ.

ಶಾಂತ್ಯಾತೀತಕಲೆಯ ವಿವರ : ಇಂತು ಪರಿಪಕ್ವರಾದ ಶರಣಗಣಂಗಳು, ಸರ್ವಾಂಗದಲ್ಲಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಮಂತ್ರಸಂಬಂಧವಾದ ಚಿದ್ಭಸಿತದಿಂದ, ಲಿಂಗಮಂತ್ರಸ್ಮರಣೆ ಮುಂದುಗೊಂಡು, ಸ್ನಾನ ಧೂಳನ ಧಾರಣವ ಮಾಡಿ, ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣದಿಂ ಚಿದ್ರುದ್ರಾಕ್ಷಿಗಳ ಧರಿಸಿ, ಲಿಂಗಾರ್ಚನಾಮೂರ್ತಿಯಾಗಿರುವುದು ಎಂಬುದೀಗ, ಶಾಂತ್ಯಾತೀತಕಲೆ ಎಂಬ ಶಬ್ದಕ್ಕರ್ಥ.

ಶಾಂತ್ಯಾತೀತೋತ್ತರಕಲೆಯ ವಿವರ: ಲಿಂಗಾರ್ಚನೆಯ ವೀರಶೈವ ಮಾರ್ಗವನರಿದು, ತ್ರಿವಿಧಲಿಂಗಾರ್ಚನೆ ಮುಗಿದ ಬಳಿಕ, ಇದಿರಿಟ್ಟಾಚರಣೆ ಸಂಬಂಧದ ಲಿಂಗ ಜಂಗಮ, ಜಂಗಮಲಿಂಗದ ನಿಲುಕಡೆಯನರಿದು, ದಶವಿಧ ಪಾದೋದಕ, ವಿಕಾದಶಪ್ರಸಾದ ಮಂತ್ರಂಗಳಿಂದ ಲಿಂಗಾರ್ಪಣಾಮೂರ್ತಿಯಾಗಿರುವುದು ಎಂಬುದೀಗ, ಶಾಂತ್ಯಾತೀತೋತ್ತರಕಲೆ ಎಂಬ ಶಬ್ದಕ್ಕರ್ಥ.

ಅನಾದಿಕಲೆಯ ವಿವರ : ಇಂತು ತ್ರಿವಿಧದೀಕ್ಷೆಗಳಿಂದ, ಷಟ್ಕಲೆಗಳಾನಂದ ಸದ್ಭಕ್ತ ಶರಣಗಣಂಗಳ ಉದಯಾಸ್ತಮಾನವೆನ್ನದೆ, ಪರತತ್ವಲಿಂಗಾನುಭಾವ ಸಮರತಿಗಳಿಂದ ಯುಕ್ತರಾಗಿರುವುದೆಂಬುದೀಗ, ಅನಾದಿಕಲೆ ಎಂಬ ಶಬ್ದಕ್ಕರ್ಥ.

ನಿರ್ಮಾಯಕಲೆಯ ವಿವರ : ಅಂತರಂಗದ ಪಂಚಮಹಾಪಾತಕ, ಸೂತಕ, ಅರಿಷಡ್ವರ್ಗ, ಷಡೂರ್ಮಿ, ಷಡ್ಭಾವ ವಿಕಾರಂಗಳಿಂದ, ವಿಷಯ, ವಾಯು ಕರಣಂಗಳ, ಮಲ ಮಾಯಾ ಆಶಾಪಾಶಂಗಳ, ತನ್ನ ಸ್ವಾತ್ಮಪೂರ್ಣ ಜ್ಞಾನದಿಂದ, ದಗ್ಧಪಟ, ಉರಿಕರ್ಪುರದಂತೆ ಎನಿಸುವಂತಹದ್ದು ಎಂಬುದೀಗ, ನಿರ್ಮಾಯಕಲೆ ಎಂಬ ಶಬ್ದಕ್ಕರ್ಥ.

ಅನಿರ್ವಾಚ್ಯಕಲೆಯ ವಿವರ : ಉನ್ಮನಿ ಮಂಡಲಂಗಳ ಮೀರಿ ತೋರುವವರ, ಚೌಕ–ರಂಗಮಂಟಪ ಸಿಂಹಾಸನದ ಮಧ್ಯದಲ್ಲಿ, ತನ್ನ ತಾನೇ ಚಿದ್ವಿಲಾಸದೋರಿ, ಜೋಗುಳದಿಂದ ತೂಗಾಡುವ, ಜ್ಯೋತಿರ್ಮಯ ವಸ್ತುವಿನಲ್ಲಿ ಗುರು ಕೃಪೆಯಿಂದ ಕಂಡು, ಕಂಗಳು ತುಂಬಿ, ಮೈಮರೆದು ಮನೋರ್ಲಯವನೈದುವಂತಹದು ಎಂಬುದೀಗ, ಅನಿರ್ವಾಚ್ಯಕಲೆ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪರಮಾನಂದ ಪರಶಿವನಪ್ಪಣೆವಿಡಿದು ವಿನೋದಾರ್ಥವಾಗಿ ಸಾಕಾರಲೀಲೆಯ ಧರಿಸಿ ನವವಿಧ ಚಿತ್ಕಲೆಗಳಿಂದ ವೀರಶೈವ, ಸಾಮಾನ್ಯ ವೀರಶೈವ, ವಿಶೇಷ ವೀರಶೈವ, ನಿರಾಭಾರಿ ವೀರಶೈವ, ನಿರ್ವಾಣ ವೀರಶೈವ, ನಿರಾವರಣ, ನಿಜಾನಂದ, ನಿರಾತಂಕ, ನಿಃಕಲವೀರಶೈವನ ಮಾರ್ಗವನುಳ್ಳ ಆದಿಗಣ ಅನಾದಿಗಣ ಶರಣ ಪ್ರಮಥಗಣಾರಾಧ್ಯರಲ್ಲಿ, ಸಂಬಂಧದಾಚರಣೆಗಳಿಂದ ಶೋಭಿಸಿ ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಕಲೆಗಳಾಗಿ ಸಂಬಂಧಮಾಗಿರ್ಪವು.*

ಮುಖಗಳು

ಘ್ರಾಣಮುಖದ ವಿವರ : ಪ್ರವೃತ್ತಿಶೈವಾಚಾರಮಾರ್ಗವು, ಬ್ರಹ್ಮ ಮೊದಲಾದ ಸಕಲಾತ್ಮರಲ್ಲಿ, ಮಿಶ್ರಂಗಳೊಡನೆ ಗಂಧ ಮೊದಲಾದ ಭೌತಿಕ ಜಡ ಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರಮಾರ್ಗದ ಮೂರ್ತಿ ಆಚಾರಲಿಂಗವೇ ಪ್ರಾಣವಾಗಿ, ಭಕ್ತಿಸ್ಥಲಕ್ಕೆ ಕರ್ತೃ ಬಸವ ಮೊದಲಾದ ಸಕಲ ಭಕ್ತಗಣಂಗಳಲ್ಲಿ, ಲಿಂಗಮಂತ್ರ ಮಿಶ್ರಂಗಳೊಡನೆ ಸುಗಂಧ ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ, ಉಭಯ ವರ್ತನ ರೂಪದಿಂದಿರ್ಪುದೀಗ, ಘ್ರಾಣಮುಖವೆಂಬ ಶಬ್ದಕ್ಕರ್ಥ.

ಜಿಹ್ವೆಮುಖದ ವಿವರ : ಪ್ರವೃತ್ತಿಶೈವಾಚಾರಮಾರ್ಗವು ವಿಷ್ಣು ಮೊದಲಾದ ಕರ್ಮಕ್ರಿಯಾ ಪ್ರಾಣಿಗಳಲ್ಲಿ, ಮಿಶ್ರಂಗಳೊಡನೆ ರಸ ಮೊದಲಾದ ಭೌತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರಮಾರ್ಗದ ಮಂತ್ರ ಗುರುಲಿಂಗವೇ ಪ್ರಾಣವಾಗಿ, ಮಹೇಶ್ವರಸ್ಥಲಕ್ಕೆ ಕರ್ತೃ ಮಡಿವಳ ಮೊದಲಾದ ಸಕಲಗಣಂಗಳಲ್ಲಿ, ಲಿಂಗಮಂತ್ರ ಮಿಶ್ರಂಗಳೊಡನೆ ಸುರಸ ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ, ಯೋಗ್ಯವಾಗಿ ಉಭಯ ವರ್ತನ ರೂಪದಿಂದಿರ್ಪುದೆಂಬುದೀಗ, ಜಿಹ್ವೆಮುಖವೆಂಬ ಶಬ್ದಕ್ಕರ್ಥ.

ನೇತ್ರಮುಖದ ವಿವರ : ಪ್ರವೃತ್ತಿಶೈವಾಚಾರಮಾರ್ಗವು ದೇವದಾನವ ಮೊದಲಾದ ಸಿದ್ಧಾಂತಿಗಳಲ್ಲಿ, ಮಿಶ್ರಂಗಳೊಡನೆ ರೂಪು ಮೊದಲಾದ ಭೌತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರ ಮಾರ್ಗದ, ನಿರೀಕ್ಷಣಮೂರ್ತಿ ಶಿವಲಿಂಗವೇ ಪ್ರಾಣವಾಗಿ, ಪ್ರಸಾದಿಸ್ಥಲಕ್ಕೆ ಕರ್ತೃ ಮರುಳಶಂಕರ ಮೊದಲಾದ ಸಕಲ ಗಣಂಗಳಲ್ಲಿ, ಲಿಂಗ ಮಂತ್ರ ಮಿಶ್ರಂಗಳೊಡನೆ, ಸುರೂಪು ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ, ಉಭಯ ವರ್ತನರೂಪದಿಂದಿರ್ಪುದೀಗ, ನೇತ್ರಮುಖವೆಂಬ ಶಬ್ದಕ್ಕರ್ಥ.

ತ್ವಕ್ಕುಮುಖದ ವಿವರ : ಪ್ರವೃತ್ತಿಶೈವಾಚಾರಮಾರ್ಗವು, ಮನು, ಮುನಿ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೨

ಮೊದಲಾದ ವೇದಾಂತಿಗಳಲ್ಲಿ ಮಿಶ್ರಂಗಳೊಡನೆ ಸ್ಪರ್ಶನ ಮೊದಲಾದ ಭೌತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರಮಾರ್ಗದ, ಯಜನಮೂರ್ತಿ ಜಂಗಮಲಿಂಗವೇ ಪ್ರಾಣವಾಗಿ, ಪ್ರಾಣಲಿಂಗಿಸ್ಥಲಕ್ಕೆ ಕರ್ತೃ ಸಿದ್ಧರಾಮ ಮೊದಲಾದ ಸಮಸ್ತ ಗಣಾರಾಧ್ಯರಲ್ಲಿ, ಲಿಂಗ ಮಂತ್ರ ಮಿಶ್ರಂಗಳೊಡನೆ, ಸುಸ್ಪರ್ಶನ ಮೊದಲಾದ ಪವಿತ್ರ ಅಜಡಪ್ರಸಾದಕ್ಕೆ ಯೋಗ್ಯವಾಗಿ, ಉಭಯವರ್ತನದಿಂದಿರ್ಪುದೆಂಬುದೀಗ, ತ್ವಕ್ಕುಮುಖವೆಂಬ ಶಬ್ದಕ್ಕರ್ಥ.

ಶ್ರೋತ್ರಮುಖದ ವಿವರ : ಪ್ರವೃತ್ತಿ ಶೈವಾಚಾರಮಾರ್ಗವು ಯಕ್ಷ, ರಕ್ಷ ಮೊದಲಾದ ಭಿನ್ನಯೋಗಿಗಳಲ್ಲಿ, ಮಿಶ್ರಂಗಳೊಡನೆ ಶಬ್ದ ಮೊದಲಾದ, ಭೌತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರಮಾರ್ಗದ ಈಳನಮೂರ್ತಿ ಪ್ರಸಾದಲಿಂಗವೇ ಪ್ರಾಣವಾಗಿ, ಶರಣಸ್ಥಲಕ್ಕೆ ಕರ್ತೃ ಚನ್ನಬಸವ ಮೊದಲಾದ ಸಮಸ್ತ ಗಣಂಗಳಲ್ಲಿ ಲಿಂಗಮಂತ್ರ ಮಿಶ್ರಂಗಳೊಡನೆ, ಸುಶಬ್ದ ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ, ಉಭಯ ವರ್ತನ ರೂಪದಿಂದಿರ್ಪುದೀಗ, ಶ್ರೋತ್ರಮುಖವೆಂಬ ಶಬ್ದಕ್ಕರ್ಥ.

ಹೃದಯಮುಖದ ವಿವರ : ಪ್ರವೃತ್ತಿ ಶೈವಾಚಾರಮಾರ್ಗವು, ಗೌತಮ, ವಶಿಷ್ಠ ಮೊದಲಾದ ಹಠಯೋಗ ಋಷಿಗಳಲ್ಲಿ, ಮಿಶ್ರಂಗಳೊಡನೆ ಪಂಚ ಪದಾರ್ಥದೊಳಗಣ ಪರಿಣಾಮವು ಭೌತಿಕ ಜಡಪದಾರ್ಥಕ್ಕೆ ಯೋಗ್ಯವಾಗಿರ್ಪುದು. ನಿವೃತ್ತಿ ವೀರಶೈವಾಚಾರಮಾರ್ಗದ ವೇದ್ಯಮೂರ್ತಿ ಮಹಾಲಿಂಗವೇ ಪ್ರಾಣವಾಗಿ, ಐಕ್ಯಸ್ಥಲಕ್ಕೆ ಕರ್ತೃ ಅಜಗಣ್ಣ ಮೊದಲಾದ ಪ್ರಮಥಗಣಂಗಳಲ್ಲಿ, ಲಿಂಗ ಮಂತ್ರ ಮಿಶ್ರಂಗಳೊಡನೆ ಪಂಚ ಸುಪ್ರಸಾದ ಮೊದಲಾದ ಪರಮ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ, ಉಭಯವರ್ತನದಿಂದಿರ್ಪುದೆಂಬುದೀಗ, ಹೃದಯಮುಖವೆಂಬ ಶಬ್ದಕ್ಕರ್ಥ.

ಬ್ರಹ್ಮರಂಧ್ರಮುಖದ ವಿವರ : ಪ್ರವೃತ್ತಿ ಶೈವಾಚಾರಮಾರ್ಗವು ಸನಕಾದಿ ಸಮಸ್ತ ಮುನಿಗಳಲ್ಲಿ, ಮಿಶ್ರಂಗಳೊಡನೆ ಹಠಯೋಗದೊಳು ಶ್ಲೇಷಾಮೃತ ಮೊದಲಾದ ಭೌತಿಕ ಜಡಪದಾರ್ಥಕ್ಕೆ ಯೋಗ್ಯವಾಗಿರ್ಪುದು. ನಿವೃತ್ತಿ ವೀರಶೈವ ಮಾರ್ಗವ ವೇಧಾ, ಮಂತ್ರ, ಕ್ರಿಯಾದೀಕ್ಷೆ ಕಾರಣಮೂರ್ತಿ ನಿಷ್ಕಲಲಿಂಗವೇ ಪ್ರಾಣವಾಗಿ ನಿರಾಲಂಬಸ್ಥಲಕ್ಕೆ ಕಾರಣ ಕರ್ತೃ ನಿಜಗುಣ ಶಿವಯೋಗಿ ಮೊದಲಾದ, ಶಿವಯೋಗಾನಂದಮೂರ್ತಿಗಳಲ್ಲಿ, ಲಿಂಗ ಮಂತ್ರ ಮಿಶ್ರಂಗಳೊಡನೆ ಶಿವಾನುಭವ ಪ್ರಸಂಗದೊಡನೆ, ಉಕ್ಕೇರಿಸುವ ಸಮತೆ, ಸದ್ಭಾವ, ಸುಜ್ಞಾನ, ಪ್ರಸಾದ ಮೊದಲಾದ ಪರಮಾಮೃತ ಸುಧಾರಸ ಅಜಡ ಪ್ರಸಾದಕ್ಕೆ ಯೋಗ್ಯವಾಗಿ, ಉಭಯ ವರ್ತನದಿಂದರ್ಪುದೀಗ, ಬ್ರಹ್ಮರಂಧ್ರ ಮುಖವೆಂಬ ಶಬ್ದಕ್ಕರ್ಥ.

ಉನ್ಮನಿಮುಖದ ವಿವರ : ಪ್ರವೃತ್ತಿ ಶೈವಾಚಾರಮಾರ್ಗವು ಅಶ್ವಮುಖ, ಗಜಮುಖ, ಗರುಡಮುಖವುಳ್ಳ ಮಾಂಧಾತರುಗಳಲ್ಲಿ ಫಲಪದ ಮೋಕ್ಷಾ ಪೇಕ್ಷಿಗಳಿಂದ, ಮಿಶ್ರಂಗಳೊಡನೆ ತಲೆ ಅಡಿಯಾಗಿ, ಪಾದ ಮೇಲಾಗಿ, ಕಿರು ಬೆರಳಿನಲ್ಲಿ ಸರ್ವಾಂಗವ ನಿಲಿಸಿ, ಉಗ್ರತಪದಿಂದ ಮನಪವನವೆಂಬ ಭೌತಿಕ ಜಡಪದಾರ್ಥಕ್ಕೆ ಯೋಗ್ಯವಾಗಿರ್ಪುದು. ನಿವೃತ್ತಿ ವೀರಶೈವ ಮಾರ್ಗದ, ಪರ ಮಾನುಭವ ಕಾರಣಮೂರ್ತಿ ನಿಃಶೂನ್ಯಲಿಂಗವೇ ಪ್ರಾಣವಾಗಿ, ನಿಷ್ಕಲಂಕ ಸ್ಥಲಕ್ಕೆ ಕಾರಣ ಕರ್ತೃ ಘಟ್ಟಿವಾಳ ಶರಣ ಮೊದಲಾದ ಪರಮಾನಂದಮೂರ್ತಿ ಗಳಲ್ಲಿ, ಲಿಂಗಮಂತ್ರ ಮಿಶ್ರಂಗಳೊಡನೆ, ಪರಮಾನುಭವಪ್ರಸಂಗದೊಡನೆ, ಸಮರಸವಾಗಿರುವ ಚಿತ್ಕಲಾ, ಚಿತ್ಪ್ರಕಾಶ, ಚಿದಾನಂದ, ಸುಧಾಬ್ಧಿ ಅಜಡ ಪ್ರಸಾದಕ್ಕೆ ಯೋಗ್ಯವಾಗಿ ಉಭಯ ವರ್ತನದಿಂದಿರ್ಪುದೀಗ, ಉನ್ಮನಿಮುಖ ವೆಂಬ ಶಬ್ದಕ್ಕರ್ಥ.

ಪಶ್ಚಿಮಮುಖದ ವಿವರ : ಅನಂತ ಪ್ರವೃತ್ತಿ, ನಿವೃತ್ತಿ, ಶೈವ, ವೀರ ಶೈವಮಾರ್ಗದಿಂದ ರುದ್ರ, ಈಶ್ವರ, ಸದಾಶಿವ, ಪರಮೇಶ್ವರ ಮೊದಲಾದವ ರಲ್ಲಿ ಅರಿವು ಮರವೆಗಳಿಂದ ಜಡಾಜಡಪದಾರ್ಥ ಶುದ್ಧಪ್ರಸಾದಕ್ಕೆ ಯೋಗ್ಯ ವಾಗಿರ್ಪುದು. ನಿವೃತ್ತಿ ಪರಮ ನಿಜವೀರಶೈವಾಚಾರ ಸದ್ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಃಕಲಂಕ, ನಿಃಶೂನ್ಯ, ನಿರಾಲಂಬ ಮೊದ ಲಾದ ಪ್ರಮಥಗಣಂಗಳಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮ ಲಿಂಗ, ಪ್ರಸಾದಲಿಂಗ, ಮಹಾಲಿಂಗ, ನಿಃಕಲಲಿಂಗ; ತ್ರ್ಯಕ್ಷರ, ಪಂಚಾಕ್ಷರ, ಷಡಕ್ಷರ, ಪ್ರಸಾದ ಪ್ರಣವ ಮೊದಲಾದ ಸಪ್ತಕೋಟಿ ಮಹಾಮಂತ್ರ ಸ್ಮರಣೆಗಳಿಂದ ಅನಂತ ಯುಗಂಗಳಲ್ಲಿ, ಉದಯಾಸ್ತಮಾನವೆಂಬ ಭಿನ್ನವರ್ತನೆ ಯಳಿದು, ಅಷ್ಟವಿಧ ಶರಣಗಣ ಲಿಂಗಮಧ್ಯದಲ್ಲಿ ಪರಶಿವನು ಚಿನ್ಮಯ ಸ್ವರೂಪದಿಂದ, ತಾನೇ ಗುರು, ತಾನೇ ಶಿಷ್ಯನಾಗಿ, ಪರಮಾನಂದಪ್ರಸಾದವೇ ಚಿದ್ಘನ, ಗಂಭೀರ, ಅಜಡ, ಅಗಮ್ಯ, ಅಪ್ರಮಾಣ, ಅಖಂಡ ತೇಜೋಮಯ ಪ್ರಸಿದ್ಧಪ್ರಸಾದಕ್ಕೆ ಯೋಗ್ಯವಾಗಿ ಉಭಯವರ್ತನದಿಂದ ಇರ್ಪುದೆಂಬುದೀಗ, ಪಶ್ಚಿಮಮುಖವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ನಿಃಕಲ ಪರಶಿವನಪ್ಪಣೆವಿಡಿದು, ವಿನೋದಾರ್ಥವಾಗಿ ಸಾಕಾರಲೀಲೆಯ ಧರಿಸಿ, ನವವಿಧಮುಖಂಗಳಿಂದ ಪ್ರವೃತ್ತಿ, ನಿವೃತ್ತಿ, ಶೈವ, ವೀರಶೈವವೆಂಬ ಉಭಯಮಾರ್ಗವಿಡಿದಾಚರಿಸಿದ ಮೇಲೆ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಮುಖಂಗಳಾಗಿರ್ಪುವು.*

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೩

ಪದಾರ್ಥಗಳು

ಗಂಧಪದಾರ್ಥದ ವಿವರ : ಚಿತ್ಪೃಥ್ವಿಯ ಬೆವರು ಬಿಂದುಗಳಿಂದ ಜನಿತಮಾಗಿ, ಚತುರ್ವಿಧರುದ್ರರಿಗೆ ನೈವೇದ್ಯವಾಗಿರುವಂತಹದು ಎಂಬುದೀಗ, ಗಂಧಪದಾರ್ಥವೆಂಬ ಶಬ್ದಕ್ಕರ್ಥ.

ರಸಪದಾಥದ ವಿವರ : ಅಪ್ಪುವಿನ ಬೆವರು ಬಿಂದುಗಳಿಂದ ಜನಿತಮಾದ, ಷಡ್ವಿಧರುದ್ರರಿಗೆ ನೈವೇದ್ಯಮಾಗಿರುವಂತಹದು ಎಂಬುದೀಗ, ರಸಪದಾರ್ಥ ವೆಂಬ ಶಬ್ದಕ್ಕರ್ಥ.

ರೂಪುಪದಾರ್ಥದ ವಿವರ : ಅಗ್ನಿಯು ಬೆವರುಬಿಂದುಗಳಿಂದ ಜನಿತ ಮಾದ, ದಶವಿಧರುದ್ರರಿಗೆ ನೈವೇದ್ಯವಾಗಿರುವಂತಹದು ಎಂಬುದೀಗ, ರೂಪು ಪದಾರ್ಥವೆಂಬ ಶಬ್ದಕ್ಕರ್ಥ.

ಸ್ಪರ್ಶನಪದಾರ್ಥದ ವಿವರ : ವಾಯುವಿನ ಬೆವರುಬಿಂದುಗಳಿಂದ ಜನಿತಮಾಗಿ, ದ್ವಾದಶರುದ್ರರಿಗೆ ನೈವೇದ್ಯವಾಗಿರುವಂತಹದು ಎಂಬುದೀಗ, ಸ್ಪರ್ಶನ ಪದಾರ್ಥವೆಂಬ ಶಬ್ದಕ್ಕರ್ಥ.

ಶಬ್ದಪದಾರ್ಥದ ವಿವರ : ಆಕಾಶದ ಬೆವರುಬಿಂದುಗಳಿಂದ ಜನಿತಮಾಗಿ, ಷೋಡಶರುದ್ರರಿಗೆ ನೈವೇದ್ಯವಾಗಿರುವಂತಹದು ಎಂಬುದೀಗ, ಶಬ್ದ ಪದಾರ್ಥ ವೆಂಬ ಶಬ್ದಕ್ಕರ್ಥ.

ತೃಪ್ತಿಪದಾರ್ಥದ ವಿವರ : ಸೂರ್ಯನ ಬೆವರುಬಿಂದುಗಳಿಂದ ಜನಿತ ಮಾಗಿ, ಉಭಯ ರುದ್ರರಿಗೆ ನೈವೇದ್ಯಮಾಗಿರುವಂತಹದು ಎಂಬುದೀಗ, ತೃಪ್ತಿ ಪದಾರ್ಥವೆಂಬ ಶಬ್ದಕ್ಕರ್ಥ.

ಆನಂದಪದಾರ್ಥದ ವಿವರ : ಚಂದ್ರನ ಬೆವರುಬಿಂದುಗಳಿಂದ ಜನಿತ ಮಾಗಿ, ಶತಸಹಸ್ರರುದ್ರರಿಗೆ ನೈವೇದ್ಯವಾಗಿರುವಂತಹದು ಎಂಬುದೀಗ, ಆನಂದ ಪದಾರ್ಥವೆಂಬ ಶಬ್ದಕ್ಕರ್ಥ.

ಪರಿಪೂರ್ಣಪದಾರ್ಥದ ವಿವರ : ಆತ್ಮನ ಬೆವರುಬಿಂದುಗಳಿಂದ ಜನಿತ ಮಾಗಿ, ತ್ರಿವಿಧರುದ್ರರಿಗೆ ನೈವೇದ್ಯವಾಗಿರುವಂತಹದೆಂಬುದೀಗ, ಪರಿಪೂರ್ಣ ಪದಾರ್ಥವೆಂಬ ಶಬ್ದಕ್ಕರ್ಥ.

ಅವಿರಳಪದಾರ್ಥದ ವಿವರ : ಕಾಳರಾತ್ರಿ ಎಂಬ ಪರಮೇಶ್ವರಂಗೆ ವಲ್ಲಭನಾದ ಜಗದೀಶ್ವರನ ಬೆವರುಬಿಂದುಗಳಿಂದ ಜನಿತಮಾಗಿ, ಅನಂತ ರುದ್ರ, ರುದ್ರಶಕ್ತಿಯರಿಗೆ ಜನಕನಾದ, ಏಕಮಹಾರುದ್ರನಿಗೆ ನೈವೇದ್ಯಮಾಗಿರು ವಂತಹದು ಎಂಬುದೀಗ, ಅವಿರಳಪದಾರ್ಥವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪರಶಿವನ ಅಪ್ಪಣೆವಿಡಿದು, ವಿನೋದಾರ್ಥವಾಗಿ ಸಾಕಾರಲೀಲೆಯ ಧರಿಸಿ, ನವವಿಧಪದಾರ್ಥಂಗಳಿಂದ ಪ್ರವೃತ್ತಿ ಶೈವಮಾರ್ಗದಲ್ಲಿ ಚರಿಸುವಂತಹ ವೇದಾಂತಿ, ಸಿದ್ಧಾಂತಿ, ಭಿನ್ನಯೋಗಿ ಮೊದಲಾದ ಸಮಸ್ತ ಮುನಿಜನಕ್ಕೆಲ್ಲ ಗುರುಗಳಾದ ರುದ್ರರಿಗೆ ನೈವೇದ್ಯವ ಆಚರಿಸಿ ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧಪದಾರ್ಥಂಗಳಾಗಿ ಸಂಬಂಧಮಾಗಿರ್ಪವು.*

ಪ್ರಸಾದಗಳು

೧. ಸುಗಂಧಪ್ರಸಾದದ ವಿವರ : ಚಿತ್ಪೃಥ್ವಿಯ ಸುಚಿತ್ತ ಬೆವರುಬಿಂದುಗಳಿಂದ ಜನಿತಮಾಗಿ, ಆಚಾರಲಿಂಗಮಂತ್ರದಿಂದ ಪಾವನವೆನಿಸಿ, ಭಕ್ತನಾಧಾರ ಚಕ್ರದಲ್ಲಿ ನೆಲಸಿರ್ಪ, ಚತುರ್ವಿಧ ಬಿಂದುಲಿಂಗಗಳಿಗೆ ಅರ್ಪಿತವಾಗಿರುವಂತಹದು ಎಂಬುದೀಗ, ಸುಗಂಧಪ್ರಸಾದವೆಂಬ ಶಬ್ದಕ್ಕರ್ಥ.

೨. ಸುರಸಪ್ರಸಾದದ ವಿವರ : ಚಿದಪ್ಪುವಿನ ಸುಬುದ್ಧಿಯ ಬೆವರು ಬಿಂದುಗಳಿಂದ ಜನಿತಮಾಗಿ, ಗುರುಲಿಂಗಮಂತ್ರದಿಂದ ಪಾವನವೆನಿಸಿ, ಮಹೇಶ್ವರನ ಸ್ವಾಧಿಷ್ಠಾನಚಕ್ರದಲ್ಲಿ ನೆಲೆಸಿರ್ಪ, ಷಡ್ವಿಧ ಧಾತುಲಿಂಗಗಳಿಗೆ ಅರ್ಪಿತವಾಗಿರುವಂತಹದೆಂಬುದೀಗ, ಸುರಸಪ್ರಸಾದವೆಂಬ ಶಬ್ದಕ್ಕರ್ಥ.

೩. ಸುರೂಪುಪ್ರಸಾದದ ವಿವರ : ಚಿದಗ್ನಿಯ ನಿರಹಂಕಾರದ ಬೆವರುಗಳಿಂದ ಜನಿತಮಾಗಿ, ಶಿವಲಿಂಗಮಂತ್ರದಿಂದ ಪಾವನವೆನಿಸಿ, ಪ್ರಸಾದಿಯ ಮಣಿಪೂರಕಚಕ್ರದಲ್ಲಿ ನೆಲಸಿರ್ಪ, ದಶವಿಧ ಕ್ಷೇತ್ರ ಲಿಂಗಗಳಿಗೆ ಅರ್ಪಿತವಾಗಿರುವಂತಹದು ಎಂಬುದೀಗ, ಸುರೂಪುಪ್ರಸಾದವೆಂಬ ಶಬ್ದಕ್ಕರ್ಥ.

೪. ಸುಸ್ಪರ್ಶನಪ್ರಸಾದದ ವಿವರ : ಚಿದ್ವಾಯು ಸುಮನದ ಬೆವರು ಬಿಂದುಗಳಿಂದ ಜನಿತಮಾಗಿ, ಜಂಗಮಲಿಂಗಮಂತ್ರದಿಂದ ಪಾವನವೆನಿಸಿ, ಪ್ರಾಣಲಿಂಗಿಯ ಅನಾಹತಚಕ್ರದಲ್ಲಿ ನೆಲಸಿರ್ಪ, ದ್ವಾದಶ ವಿಕೃತಿ ಲಿಂಗಗಳಿಗೆ ಅರ್ಪಿತವಾಗಿರುವಂತಹದೆಂಬುದೀಗ, ಸುಸ್ಪರ್ಶನಪ್ರಸಾದವೆಂಬ ಶಬ್ದಕ್ಕರ್ಥ.

೫. ಸುಶಬ್ದಪ್ರಸಾದದ ವಿವರ : ಚಿದಾಕಾಶದ ಸುಜ್ಞಾನದ ಬೆವರು ಬಿಂದುಗಳಿಂದ ಜನಿತಮಾಗಿ, ಪ್ರಸಾದಲಿಂಗಮಂತ್ರದಿಂದ ಪಾವನವೆನಿಸಿ, ಶರಣನ ವಿಶುದ್ಧಿಚಕ್ರದಲ್ಲಿ ನೆಲಸಿರ್ಪ, ಷೋಡಶ ಕಲಾಲಿಂಗಗಳಿಗೆ ಅರ್ಪಿತವಾಗಿರಲು ವಂತಹದೆಂಬುದೀಗ, ಸುಶಬ್ದಪ್ರಸಾದವೆಂಬ ಶಬ್ದಕ್ಕರ್ಥ.

೬. ಸುತೃಪ್ತಿಪ್ರಸಾದದ ವಿವರ : ಚಿತ್ಸೂರ್ಯನ ಸದ್ಭಾವದ ಬಿಂದು ಬೆವರುಗಳಿಂದ ಜನಿತಮಾಗಿ ಮಹಾಲಿಂಗಮಂತ್ರದಿಂದ ಪಾವನವೆನಿಸಿ, ಐಕ್ಯನ

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೪

ಆಜ್ಞಾಚಕ್ರದಲ್ಲಿ ನೆಲಸಿರ್ಪ ಉಭಯ ವಿದ್ಯಾಲಿಂಗಗಳಿಗೆ ಅರ್ಪಿತವಾಗಿರುವಂತಹದು ಎಂಬುದೀಗ, ಸುತೃಪ್ತಿಪ್ರಸಾದವೆಂಬ ಶಬ್ದಕ್ಕರ್ಥ.

೭. ನಿಃಕಲಪರಾನಂದಪ್ರಸಾದದ ವಿವರ : ಚಿಚ್ಚಂದ್ರನ ನಿರ್ಮಾಯದ ಬೆವರುಬಿಂದುಗಳಿಂದ ಜನಿತಮಾಗಿ, ನಿಃಕಲಲಿಂಗಮಂತ್ರದಿಂದ ಪಾವನವೆನಿಸಿ, ನಿಃಕಲಬ್ರಹ್ಮರಂಧ್ರಚಕ್ರದಲ್ಲಿ ನೆಲಸಿರ್ಪ, ಶತಸಹಸ್ರ ಶಿವಕಳೆ ಲಿಂಗಗಳೆ ಅರ್ಪಿತವಾಗಿರುವಂತಹದು ಎಂಬುದೀಗ, ನಿಃಕಲಪ್[ರಾ]ನಂದ ಪ್ರಸಾದವೆಂಬ ಶಬ್ದಕ್ಕರ್ಥ.

೮. ನಿಜಾನಂದಪರಿಪೂರ್ಣಪ್ರಸಾದದ ವಿವರ : ಚಿದಾತ್ಮನ ನಿಷ್ಕಲದ ಬೆವರುಬಿಂದುಗಳಿಂದ ಜನಿತಮಾಗಿ, ನಿಃಶೂನ್ಯಲಿಂಗಮಂತ್ರದಿಂದ ಪಾವನವೆನಿಸಿ, ನಿಃಶೂನ್ಯಶಿಖಾಚಕ್ರದಲ್ಲಿ ನೆಲಸಿರ್ಪ, ತ್ರಿವಿಧ ವಿವೇಕ ಲಿಂಗಗಳಿಗೆ ಅರ್ಪಿತವಾಗಿರುವಂತಹದು ಎಂಬುದೀಗ, ನಿಜಾನಂದಪರಿಪೂರ್ಣಪ್ರಸಾದವೆಂಬ ಶಬ್ದಕ್ಕರ್ಥ.

೯. ಮಹಾಅವಿರಳಾನಂದಪ್ರಸಾದದ ವಿವರ : ಮಹದರುವಿನ ಬೆವರುಬಿಂದುಗಳಿಂದ ಜನಿತಮಾಗಿ, ನಿರಂಜನಲಿಂಗಮಂತ್ರದಿಂದ ಪಾವನವೆನಿಸಿ, ನಿರಂಜನ ಪಶ್ಚಿಮಚಕ್ರದಲ್ಲಿ ನೆಲೆಸಿರ್ಪ ವೀರಶೈವ ಸನ್ಮಾರ್ಗ ಸದ್ಭಕ್ತ ಗಣಂಗಳಲ್ಲಿ ವಿರಾಜಿಸುವ, ಅನಂತ ಲಿಂಗಂಗಳಿಗೆ ಜನಕನಾದ ನಿರಂಜನಲಿಂಗಕ್ಕೆ, ಅರ್ಪಿತವಾಗಿರುವಂತಹದು ಎಂಬುದೀಗ, ಮಹಾ ಅವಿರಳಾನಂದಪ್ರಸಾದವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪರಾತ್ಪರ ಶಿವನಪ್ಪಣೆವಿಡಿದು ವಿನೋದಾರ್ಥವಾಗಿ ಸಾಕಾರಲೀಲೆಯ ಧರಿಸಿ, ನವವಿಧಪ್ರಸಾದಂಗಳಿಂದ, ನಿವೃತ್ತಿ ವೀರಶೈವಮಾರ್ಗದಲ್ಲಿ ಚರಿಸುವಂತಹ ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಃಕಲ, ನಿಃಶೂನ್ಯ, ನಿರಂಜನ ಮೊದಲಾದ ಶರಣಗಣಂಗಳ ಮಧ್ಯದಲ್ಲಿ ನೆಲಸಿರ್ಪ, ಅನಂತ ಲಿಂಗಂಗಳಿಗೆ ಹರಣ, ಕಿರಣ, ಚೈತನ್ಯಸ್ವರೂಪಮಾದ ಕ್ರಿಯಾಜಂಗಮಕ್ಕೆ ಅನಾದಿ ಶರಣ ಪರಾತ್ಪರಮೂರ್ತಿಗೆ, ನವವಿಧ ಪ್ರಸಾದಂಗಳಾಗಿ ಸಂಬಂಧಮಾಗಿರ್ಪವು.*

ನಾದಗಳು

ಭ್ರಮರನಾದದ ವಿವರ : ಮೊಲ್ಲೆ ಮಲ್ಲಿಗೆ ಮೊದಲಾದ ಸಮಸ್ತ ಪುಷ್ಪಗಳಿಗೆ ಎರಗಿ, ಆ ಗಂಧವೇ ಆಹಾರವಾಗುಳ್ಳ ಭೃಂಗಧ್ವನಿಯೇ ಭೋರೆಂಬ ಶಬ್ದವ ಸದ್ಭಕ್ತಂಗೆ ಕೊಡುತಿರ್ಪುದೆಂಬುದೀಗ, ಭ್ರಮರನಾದವೆಂಬ ಶಬ್ದಕ್ಕರ್ಥ.

೧–೧ ರಮಾ (ಮೂ)

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೫

೧[ವೀಣಾ]೧ನಾದದ ವಿವರ : ಒಂದಾನೊಂದು ಕಾಷ್ಠಂಗಳಿಗೆ ಕುಂಬುಳಕಾಯ ಕಟ್ಟಿ, ಮೇಣದಿಂದ ಬಂಧಿಸಿ, ಮುಖಂಗಳ ಮಾಡಿ, ಅದರ ಮೇಲೆ ತಂತಿಗಳಿಂದ ಗೆಜ್ಜೆಗಳ ಕಟ್ಟಿ, ಸುಸ್ವರವಿಡಿದು ಬಾರಿಸುವಲ್ಲಿ ಬತ್ತೀಸಧ್ವನಿಗಳ ಸದ್ವೀರ ಮಹೇಶ್ವರಂಗೆ ಕೊಡುತಿರ್ಪುದೆಂಬುದೀಗ,೧[ವೀಣಾ]೧ ನಾದವೆಂಬ ಶಬ್ದಕ್ಕರ್ಥ.

ಘಂಟಾನಾದದ ವಿವರ : ಪಂಚಲೋಹದೊಳಗೆ ಮಿಶ್ರವಾದ ಕಂಚಿನಿಂದ ಮೇಣದಿಂದ ಕರಗಿಸಿ, ಮೃತ್ತಿಕೆಯ ಮಡಯಿಸಿ, ಮೇಲೆ ಕೆಳಗೆ ರಂಧ್ರವ ಹೊಡೆದು, ಅಗ್ನಿಯಿಂದ ಕರಗಿಸಿ, ರಸವಾದಲ್ಲಿ ಆ ನಾಭಿಯಲ್ಲೆರೆದು ಅನಂತರೂಪದಿಂದ ರಚಿಸಿ, ಸುಯಿಧಾನದಿಂದ ಜಂತ್ರಂಗಳಿಗೆ ಹಿಡಿದು, ಕಬ್ಬುನದ ನಾಲಿಗೆಯ ಹಾಕಿ, ಪರಿಪರಿಯಿಂದ ಬಾರಿಸಿದಲ್ಲಿ ಝಣ್ ಝಣ್ ಎಂಬ ಧ್ವನಿಯು, ಶಿವಪ್ರಸಾದಿಗೆ ಕೊಡುತಿರ್ಪುದೆಂಬುದೀಗ, ಘಂಟಾನಾದವೆಂಬ ಶಬ್ದಕ್ಕರ್ಥ.

ಭೇರೀನಾದದ ವಿವರ : ಒಂದಾನೊಂದು ಕಾಷ್ಠವಾದರೂ ಸರಿಯೇ, ಮೃತ್ತಿಕಾ ಭಾಂಡವಾದರೂ ಸರಿಯೇ, ಪಂಚಲೋಹ ಮೊದಲಾಗಿ ಕಬ್ಬುನವಾದರೂ ಸರಿಯೇ, ಪರಿಪರಿಯಿಂದ ಶೃಂಗರಿಸಿ, ಅದಕ್ಕೆ ಎರಳೆ, ಮಹಿಷ, ಪಶು ಮೊದಲಾದ ಚರ್ಮವ ಹದಹಚ್ಚಿ ಬಿಗಿದು, ತಾಡಣದಿಂದ ಶಾಕವ ಮಾಡಿ ಹಿಡಿದು ಬಾರಿಸಿದಲ್ಲಿ ಪರಿಪರಿಯಿಂದ ನಾಟ್ಯದ ಗತಿ ಧ್ವನಿಗಳ ಪರಮಾನಂದ ಪ್ರಾಣಲಿಂಗಿಗೆ ಕೊಡುತಿರ್ಪುದೆಂಬುದೀಗ, ಭೇರೀನಾದವೆಂಬ ಶಬ್ದಕ್ಕರ್ಥ.

ಮೇಘನಾದದ ವಿವರ : ಷಡೃತುಗಳೊಳಗೆ ಶರದೃತು ಕಾಲದಲ್ಲಿ ವಿಶೇಷ ತರದಿಂದ ಆಕಾಶದೊಳಗೆ ಗುಡುಗು ಸಿಡಿಲು ಮಾರುತಂಗಳಿಂದ ಭರದಿಂದ ಆರ್ಭಟದಿಂದ ಕೆಲವು, ಮಧ್ಯಸ್ತವಾಗಿ ಕೆಲವು, ಮೃದುತರವಾಗಿ ಕೆಲವು ಧ್ವನಿಗಳ ನಿಜಶರಣಂಗೆ ಕೊಡುತಿರ್ಪುದೆಂಬುದೀಗ, ಮೇಘನಾದವೆಂಬ ಶಬ್ದಕ್ಕರ್ಥ.

ಪ್ರಣಮನಾದದ ವಿವರ : ಸರಿಗಮಪದವೆಂಬಕ್ಷರಗಳ ಮೂವತ್ತೆರಡು ರಾಗರಚನೆಗಳಿಂದ, ಕೆಲವು ಸಂಗೀತ, ಸಾಹಿತ್ಯ, ಸ್ತೋತ್ರ, ಶುಭಶೋಭನ, ಮಂಗಳಾರತಿ, ಜೋಗುಳ, ಪುಷ್ಪಾಂಜಲಿ, ಪರಾಕುಗಳಿಂದ, ಪರಿಪರಿ ನಾದ ಧ್ವನಿಗಳ ನಿಜಲಿಂಗೈಕ್ಯಂಗೆ ಕೊಡುತಿರ್ಪುದೆಂಬುದೀಗ,ಪ್ರಣಮನಾದವೆಂಬ ಶಬ್ದಕ್ಕರ್ಥ.

ದಿವ್ಯನಾದದ ವಿವರ : ದಿವಾರಾತ್ರಿಗಳೆಂಬ ಅರವತ್ತು ಗಳಿಗೆಗಳೊಳಗೆ, ಐದು ಗಳಿಗೆ ಉದಯದ ಮುಂದೆ ಉಂಟೆಂಬ ಸಮಯದಲ್ಲಿ, ಸಂಸಾರ ಅವಲಂಬನವ ಹಿಂದುಳಿದು, ಪೂರ್ವಕ್ಕೆ ಮುಖವಾಗಿ ಒಂದಾಸನವ ರಚಿಸಿ, ಅದರ ಮೇಲೆ ಪದ್ಮಾಸನವ ಬಲಿದು, ಮುಹೂರ್ತವ ಮಾಡಿ ಸಪ್ತದ್ವಾರವ ಹಸ್ತಾಂಗುಲಿಗಳಿಂದ ಬಂಧಿಸಿ, ಮನ ಉನ್ಮನಿಯಾಗಿ ನಿಂದು ನೋಡಲು, ಆಪಾದ ಮಸ್ತಕ ಪರಿಯಂತರ ನಾಗಸ್ವರದೋಪಾದಿಯಲ್ಲಿ ಧ್ವನಿಯ ನಿರಾಂತಕ ನಿಃಕಲಂಗೆ ಕೊಡುತಿರ್ಪುದೆಂಬುದೀಗ, ದಿವ್ಯನಾದ ಎಂಬ ಶಬ್ದಕ್ಕರ್ಥ.

೧–೧ ವೇಣು (ಮೂ)

ಸಿಂಹನಾದದ ವಿವರ : ಸಪ್ತ ದ್ವೀಪಾಂತರದೊಳಗೆ, ಜಂಬೂದ್ವೀಪದೊಳಗೆ ಆನೆಗಳುಂಟು ಆ ಆನೆಗಳು ಕ್ರೌಂಚದ್ವೀಪದಲ್ಲಿರುವಂತಹ ಸಿಂಹನ ಸ್ವಪ್ನನಲ್ಲಿ ಕಂಡು ಮರಣವನ್ನೈದುವವು. ಆ ಕ್ರೌಂಚದ್ವೀಪದಲ್ಲಿ ಇರುವಂತಹ ಸಿಂಹನು, ಕಾಡಾರಣ್ಯ ದಲ್ಲಿ ಒಂದಾನೊಂದು ಕಡುತರವಾಗಿ, ಆನೆಯ ಸಿಂಗಾರದಂತೆ ಕಪ್ಪುಕಲ್ಲು ಇರುತ್ತಿರಲು, ಆ ಕಲ್ಲನು ನೋಡಿದಾಕ್ಷಣವೇ, ನನ್ನ ಆಹಾರ ದೊರಕಿತೆಂದು ಮಹಾಸಂತೋಷದಿಂದ ಆ ಸಿಂಹ ಗರ್ಜಿಸಲು, ಆ ಸಮಯದಲ್ಲಿ ಆ ಪಾಷಾಣ ಅನಂತಚೂರಾಗುವದು. ಅದರಿಂದಾಚೆಯಲ್ಲಿ ಶತಕೋಟಿ ಯೋಜನದಲ್ಲಿ ಪ್ರದಕ್ಷಿಣ ದಿಂದಿರುವ ಪ್ರಾಣಿಗಳು ಮೃತಿಯನ್ನೈದುವವು. ಆ ಧ್ವನಿಯು ಅರವತ್ತು ಗಳಿಗೆ ಪರಿಯಂತರವು, ಅನಂತಪ್ರಕಾರದಿಂದ ಪರಿಪರಿಯ ನಾದಗಳ ನಿರಾಲಂಬ ನಿಃಶೂನ್ಯಂಗೆ ಕೊಡುತಿರ್ಪುದೆಂಬುದೀಗ, ಸಿಂಹನಾದವೆಂಬ ಶಬ್ದಕ್ಕರ್ಥ.

ಮಹಾನಾದದ ವಿವರ : ಸಪ್ತದ್ವೀಪಂಗಳಲ್ಲಿ, ಪರ್ವತಾಶ್ರಯಗಳಲ್ಲಿ, ದೇವತಾ ಪ್ರತಿಷ್ಠಾಸ್ಥಲವಾಗಲಿ, ಅರಣ್ಯವಾಗಲಿ, ಆವಾತ್ಮರು ಹೇಗೆ ನುಡಿದರೂ ಹಾಗೆ ನುಡಿವ, ಧ್ವನಿಯ ನಿಶ್ಚಿಂತ ನಿರಂಜನಂಗೆ ಕೊಡುತಿರ್ಪುದೆಂಬುದೀಗ ಮಹಾನಾದ ವೆಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ, ಪರಶಿವನಪ್ಪಣೆವಿಡಿದು, ವಿನೋದಾರ್ಥ ವಾಗಿ, ಸಾಕಾರಲೀಲೆಯ ಧರಿಸಿ, ನವನಾದಂಗಳು, ಪ್ರವೃತ್ತಿ ನಿವೃತ್ತಿ ಉಭಯ ಮಾರ್ಗಂಗಳಿಂದಾಚರಿಸಿ, ಅನಾದಿಶರಣ ಪರಾತ್ಪರಮೂರ್ತಿಗೆ ನವವಿಧ ನಾದಂಗ ಳಾಗಿ ಸಂಬಂಧಮಾಗಿರ್ಪವು.

ಲಕ್ಷಣಗಳು

ಸತ್ತೆಂಬಲಕ್ಷಣದ ವಿವರ : ಹದಿನೆಂಟು ಕಲಾಯುಕ್ತವಾದ ಯೌವ್ವನದ ಸ್ತ್ರೀಯಳು, ರತಿಕ್ರೀಡಾ ವಿಲಾಸ ಹೆಚ್ಚಿ ಕಾಮಾತುರದಿಂದ ತಾನಿದ್ದಲ್ಲಿಗೆ ಬಂದು, ಕಲಾಭೇದದಿಂದ ಪರಮಾನ್ನ, ಪಾಯಸ, ಪಂಚಾಮೃತ, ತಾಂಬೂಲ, ವಸ್ತ್ರಾ ಭರಣವ ಭೋಗಿಸಿ, ನನ್ನೊಡನೆ ಸಂಗಸುಖಾನಂದಭೋಗವ ಕೊಡಬೇಕೈ ದೇವಾ ಎಂದು ಅಭಿವಂದಿಸಲು, ಆ ಮಾಯಾ ಕಾಮಾತುರಕ್ಕೆ ಒಳಗಾಗದೆ, ನಿಃಕಾಮದಿಂದೆ ಪಂಚಾಚಾರಮೂರ್ತಿ, ಆಚಾರಲಿಂಗಸಂಗಸಂಯೋಗ ಸಮರತಿಯಿಂದ, ನಿಃಕಾಮಿ ಯಾಗಿ, ಸತ್ತ ಶವದೋಪಾದಿಯಲ್ಲಿ ಸಕಲೇಂದ್ರಿಯಂಗಳ ಉಲುಹಿಲ್ಲದೆ ನಿಃಶಬ್ದ ವಾಗಿರ್ಪ ಸದ್ಭಕ್ತನೆಂಬುದೀಗ, ಸತ್ತೆಂಬ ಶಬ್ದಕ್ಕರ್ಥ.

ಚಿತ್ತೆಂಬಲಕ್ಷಣದ ವಿವರ : ಪ್ರಮಥಗಣಮಾರ್ಗದ ಸರ್ವಾಚಾರಸಂಪತ್ತಿನಾ ಚರಣೆಯಲ್ಲಿ, ಸಂತೃಪ್ತಿಯಲ್ಲಿರುವ ಸಮಯದೊಳು, ಉರಗ, ವೃಶ್ಚಿಕ, ಚೋರ, ವಿಪ್ರನಿಂದಕ ಮೊದಲಾದ ಜೀವಾತ್ಮರು ಬಂದು, ತನ್ನ ಮೇಲೆ ಪರಿಪರಿಯಿಂದ ನೋಯಿಸಿ, ಬಂಧಿಸಿ, ಬೊಗಳಲು, ಆ ಜೀವಾತ್ಮರ ತಾನು ಬಯ್ಯದೆ, ಪ್ರತಿ ಶಬ್ದವನು

ನುಡಿಯದೆ, ದೇಹಾಭಿಮಾನ, ಕುಲಾಭಿಮಾನ, ಛಲಾಭಿಮಾನ, ಅರ್ಥಾಭಿಮಾನ, ಭೋಗಾಭಿಮಾನಂಗಳಿಂದ ಪಾಶಬದ್ಧನಾಗದೆ, ನಿಃಕ್ರೋಧದಿಂದ ಮಂತ್ರ ಮೂರ್ತಿ ಗುರುಲಿಂಗದೇವನ ಸಂಗಸಂಯೋಗಸಮರತಿಯಿಂದ, ನಿಃಶಬ್ದ, ನಿಃಕಾಮಿಯಾಗಿ, ಬಾವನ್ನ (ಶ್ರೀಗಂಧದ) ವೃಕ್ಷದೋಪಾದಿಯಲ್ಲಿ, ಸಮಸ್ತ ತತ್ವಂಗಳ ಉಲುಹಿಲ್ಲದೆ, ನಿಶ್ಚಲನಾಗಿರ್ಪ ಸದ್ವೀರಮಹೇಶ್ವರನೆಂಬುದೀಗ, ಚಿತ್ತುಲಕ್ಷಣವೆಂಬ ಶಬ್ದಕ್ಕರ್ಥ.

ಆನಂದವೆಂಬಲಕ್ಷಣದ ವಿವರ : ಉದಯಾಸ್ತಮಾನ ಕಾಲತ್ರಯಂಗಳ ಬಂಧನಂಗಳಿಂದ ಹಠಯೋಗವಮಾಡಿ, ಅಷ್ಟಮಹದೈಶ್ವರ್ಯ ಫಲಪದ ಮೋಕ್ಷಂಗಳ ಹರನಿಂದ ಪಡೆದು, ರಾಜಾಧಿಪತಿಯಾಗಿರಬೇಕೆಂಬ ಅತಿಯಾಶೆ, ಜಡಲೋಭತ್ವವ ಬಳಸದೆ, ಪ್ರಮಥಗಣ ಮಾರ್ಗಾಚಾರ ಶಿವಯೋಗಭರಿತನಾಗಿ, ಪರದ್ರವ್ಯಂಗಳು ಬಂದು ಎಡಬಲ ಹಿಂದು ಮುಂದು ಅಡರಲು, ಆ ಕಂಟಕಂಗಳಿಗೆ ಒಳಗಾಗದೆ, ಸರ್ಪಕಚ್ಚಿದ ಮನುಜನೋಪಾದಿಯಲ್ಲಿ, ನಿರ್ಲೋಭದಿಂದ ನಿರೀಕ್ಷಣಾ ಮೂರ್ತಿ ಶಿವಲಿಂಗದೇವನ, ಪಾದೋದಕ, ಪ್ರಸಾದ, ಮಂತ್ರ, ವಿಭೂತಿ, ರುದ್ರಾಕ್ಷಿ, ಸದ್ಭಕ್ತಿ ಎಂಬ ಸಂಗಸಂಯೋಗ ಸಮರತಿಯಿಂದ ಎಲೆಗಳೆದ ವೃಕ್ಷದಂತೆ ಉಲುಹಡಗಿ, ಸರ್ವಾಂಗವೆಲ್ಲ ನಿರ್ಲೋಭ ನಿಃಪತಿಯಾಗಿರ್ಪ, ಶಿವಪ್ರಸಾದಿ ಎಂಬುದೀಗ, ಆನಂದಲಕ್ಷಣವೆಂಬ ಶಬ್ದಕ್ಕರ್ಥ.

ನಿತ್ಯವೆಂಬಲಕ್ಷಣದ ವಿವರ : ಹರಿ, ಸುರ, ಬ್ರಹ್ಮ, ಮನು, ಮುನಿ, ದೇವ, ದಾನವ, ಮಾನವಾದಿಗಳೆಲ್ಲ ಮುಳುಗಿ ಹೋದ ಮಲಮಾಯಾ ಕರ್ಮಂಗಳಿಗೆ ಮೋಹಿಸದೆ, ಜಡಸಂಸಾರಬದ್ಧಕರ ಭ್ರಾಂತಿಯ ನೀಗಿ, ನಿರ್ಮೋಹದಿಂದ ಯಜನ ಸ್ವರೂಪ ಚರಲಿಂಗದೇವನ ಘನಕರುಣಾರಸ, ಮೂಲಮಂತ್ರವ, ಸುಷುಪ್ತಿಯೊಡನೆ ಕೂಡಿದ ಶಿಶುವು ತನ್ನ ಮಾತೆಯ ಕುಚದ ಮೇಲೆ ರತಿ ಇಟ್ಟು ಕ್ಷೀರವ ಸವಿದಂತೆ ತೃಪ್ತಿಯಾಗಿ, ಜಾಗ್ರದಿಂದೆಚ್ಚರದಳೆದಲ್ಲಿ ಆ ಮಾತೆಯ ನೆನಹಿಂದ ಬಳಲುವಲ್ಲಿ, ಆ ಮಾತೆಯು ಬಂದು ಅಪ್ಪಲು ಸಮಸ್ತ ದುಃಖವನೆಲ್ಲ ನೀಗಿ, ನಿರ್ಮೋಹದಿಂದ ವಿನೋದಿಸುವ ಶಿಶುವಿನಂತೆ ಕೂಡಿ ಎರಡಳಿದ, ನಿಜಪ್ರಾಣಲಿಂಗಿಯೋಗಿ ಏಂಬುದೀಗ, ನಿತ್ಯಲಕ್ಷಣವೆಂಬ ಶಬ್ದಕ್ಕರ್ಥ.

ಪರಿಪೂರ್ಣವೆಂಬ ಲಕ್ಷಣದ ವಿವರ : ಮಾರ್ಗಾಚಾರ ಕ್ರಿಯೆಯಿಂದ, ವಾಣಿ ಮೊದಲಾದ ಇಂದ್ರಿಯಂಗಳೆಲ್ಲ ನಿರ್ವಾಣಿ ಲಿಂಗೇಂದ್ರಿಯಂಗಳಾಗಿ, ಲಿಂಗ ಜಂಗಮದ ಪಾದೋದಕ ಪ್ರಸಾದ ಮಂತ್ರದಲ್ಲಿ ತರಹರಮಾಗಿ ನಿಂದು, ಮೀರಿದಾಚಾರ ಜ್ಞಾನದಿಂದ, ಮನ ಮೊದಲಾದ ಕರಣಂಗಳೆಲ್ಲ ಉನ್ಮನಿ ಮಹಾಲಿಂಗ ಕಿರಣಂಗಳಾಗಿ, ಜಂಗಮಲಿಂಗ ಪಾದೋದಕ–ಪ್ರಸಾದ–ಮಂತ್ರದಲ್ಲಿ ತರಹರಮಾಗಿ ನಿಂದು, ಅಂತರಂಗದ ಜ್ಞಾನ, ಬಹಿರಂಗದ ಜ್ಞಾನ, ಉಭಯವು ಮಹದರುಹಿನಲ್ಲಿ ಸಮ್ಮಿಶ್ರವಾಗಿ, ಮೌಕ್ತಿಕದಂತೆ ನೀರಾಗದೆ, ಭೂತಸೋಂಕಿನ ಮನುಜ

ನೋಪಾದಿಯಲ್ಲಿ ನಿಜನಿರ್ವಾಣಪದ ವೀರಶೈವತ್ವ ತಲೆಗೇರಿ ನಿರ್ಮಲದಿಂದ ಈಳನಸ್ವರೂಪ ಪ್ರಸಾದಲಿಂಗದೇವನ ಸಂಗ ಸಂಯೋಗ ಸಮರತಿಯಿಂದ ನಿರ್ವಂಚಕನಾಗಿ, ಅಂಬುಧಿಯೊಳ್ಮುಳುಗಿದ ಮನುಜನೋಪಾದಿಯಲ್ಲಿ ಕೂಡಿ ಏಕವಾದ, ನಿಜಶರಣನೆಂಬುದೀಗ, ಪರಿಪೂರ್ಣಲಕ್ಷಣವೆಂಬ ಶಬ್ದಕ್ಕರ್ಥ.

ಅಖಂಡವೆಂಬ ಲಕ್ಷಣದ ವಿವರ : ಪಿಪೀಲಿಕನು ಬೇರಿನಲ್ಲಿ ರಸವ ನೋಡಿ, ಪಕ್ವ ಅಪಕ್ವವ ತಿಳಿದು, ಆ ವೃಕ್ಷವನೇರಿ ಫಲರಸವ ಸವಿದಂತೆ, ಶಿವಜ್ಞಾನೋದಯವಾದ ನಿಜಶಿವಯೋಗಿ, ಸದಾಚಾರ ಸತ್ಕ್ರಿಯಕವ ಭಕ್ತಸ್ಥಲದಲ್ಲಿ ಆಚರಿಸಿ, ಅಲ್ಲಿಂದ ಮುಂದಕ್ಕೆ ಹೋಗಿ, ಗುರುಕರುಣದಿಂದ ಉಭಯ ಸ್ಥಲವ ತಿಳಿದು, ಅಲ್ಲಿಂದ ತ್ರಿವಿಧ ಸಂಪತ್ತು ಚತುರ್ವಿಧ ಸಾರಾಯ ಮೊದಲಾದ ನೂರಾವೊಂದು ಸ್ಥಲವೆಂಬ ವೃಕ್ಷವನೇರಿ, ಆ ವೃಕ್ಷದ ಶಾಖೆಗಳಲ್ಲಿ ಭಕ್ತಿ ಜ್ಞಾನ, ವೈರಾಗ್ಯವೆಂಬ ಫಲರಸವಂ ಸವಿದು, ಮೂಗ ಕಂಡ ಕನಸಿನಂತೆ, ನಿರ್ಲಜ್ಜಾಭಿಮಾನಿಯಾಗಿ, ವೇಧಾಸ್ವರೂಪ ಮಹಾಲಿಂಗವನಪ್ಪಿ ಸಮಸ್ತ ಭೋಗಂಗಳ, ಕುಲಾಲನ ಪುಳುವಿನಂತೆ (ಕುಂಬಾರ ಹುಳದಂತೆ) ಇಹಪರಂಗಳ ಮೀರಿಪ್ಪ ಲಿಂಗೈಕ್ಯನೆಂಬುದೀಗ, ಅಖಂಡವೆಂಬ ಲಕ್ಷಣದ ಶಬ್ದಕ್ಕರ್ಥ.

ಅನಾಮಯವೆಂಬ ಲಕ್ಷಣದ ವಿವರ : ಮರ್ಕಟನು ಸಮಸ್ತ ವೃಕ್ಷಂಗಳಿಗೆ ಲಂಘಿಸಿ, ಪಕ್ವವಕೊಂಡು, ಆ ಪಕ್ವವ ಬಿಸುಟಿ, ಮತ್ತೊಂದು ಪಕ್ವಕ್ಕೆ ಲಂಘಿಸಿದಲ್ಲಿ, ಲಾಗು ತಪ್ಪಿದರೆ ತಪ್ಪಲಕೊಂಡು ಹಿಂದಕ್ಕೆ ಲಂಘಿಸುವಂತೆ, ಪರಮ ಜ್ಞಾನೋದಯವಾದ ನಿಜಶಿವಯೋಗಿಯು, ಗುರುಕರುಣದಿಂದ ಹಿಂದಣ ಭಕ್ತಸ್ಥಲ ಮೊದಲಾದ ನೂರೊಂದು ಸ್ಥಲವನರಿದು, ವೀರಮಾಹೇಶ್ವರಸ್ಥಲದೊಳಗಣ ಮಿಶ್ರವನರಿದು, ಕಿಂಕುರ್ವಾಣಭಿಕ್ಷವ ಬೇಡಿದಲ್ಲಿ, ಶ್ರದ್ಧೆಯಿಂದ ಶರಣುವೊಕ್ಕ ಭಕ್ತನ ವಿಚಾರವ ತಿಳಿದು, ಅವರಾಚಾರದಂತೆ, ಭಕ್ತಿಯಕೊಂಡು, ಅವರವರಂತೆ ಪಕ್ವವಾದರೆ, ಪಾದೋದಕ ಪ್ರಸಾದವ ಕೊಟ್ಟು ಕೊಳ್ಳಬಲ್ಲ. ಅಪಕ್ವವಾದರೆ ದ್ರವ್ಯರೂಪದಿಂದ ಭೋಗಿಯಾಗಿ, ಹಸ್ತಪಾಕದಿಂದ ತನ್ನ ತಾನೇ ಜಂಗಮವಾಗಿ, ತನ್ನಾಚಾರವ ಅನಾಚಾರಿಗಳಿಗೆ ಬೀರದೆ, ಯೌವ್ವನಸ್ತ್ರೀಯಳು ತನ್ನ ಪಾತಿವ್ರತ್ಯದ ರೂಪು ಲಾವಣ್ಯವ ಪರಪುರುಷರಿಗೆ ಕಾಣದಂತೆ ಗೌಪ್ಯದಲ್ಲಿರುವ ಹಾಗೆ, ದೀಕ್ಷಾ, ಶಿಕ್ಷಾ, ಮೋಕ್ಷ ಕಾರಣರಾದ ನಿಃಕಲಲಿಂಗವನಪ್ಪಿ, ನಾಮ, ರೂಪು, ಕ್ರಿಯಾ, ಕಾಯ ಶಿಖಿಯುಂಡ ಕರ್ಪುರದಂತೆ, ಬೆರೆದಿರ್ಪ ನಿಃಕಲಂಕಶಿವಯೋಗಿಯ ಎಂಬುದೀಗ, ಅನಾಮಯವೆಂಬ ಲಕ್ಷಣಕ್ಕರ್ಥ.

ಅಗಮ್ಯವೆಂಬ ಲಕ್ಷಣದ ವಿವರ : ಪರಮಹಂಸನು ತಾನಿರ್ದ ಸ್ಥಾನಕ್ಕೆ, ಹನ್ನೆರಡುಯೋಜನ ಪರಿಪ್ರಮಾಣವಾದ ಫಲಪಕ್ವವ ತಿಳಿದು, ಆ ರಸಭೋಗವ ಭೋಗಿಸುವಂತೆ, ಸ್ವಾನುಭವಜ್ಞಾನ ನಿಜಶಿವಯೋಗದಿಂದ, ಪರಮಾರಾಧ್ಯ, ಸದಾಚಾರ, ಸದ್ಗುರುರೂಪಮಂ ತಿಳಿದು, ಭಕ್ತಸ್ಥಲ ಮೊದಲಾದ ಷಟ್‌ಸ್ಥಲ

ವನರಿದು, ಮೇಲಾದ ತ್ರಿವಿಧಸ್ಥಲದಲ್ಲಿ ನಿಂದು, ಆ ಪರಮಹಂಸನೋಪಾದಿಯಲ್ಲಿ, ಇಹದಲ್ಲಿ ಅಜ್ಞಾನ ಅನಾಚಾರಂಗಳನುಳಿದು, ಶಿವಸಮ್ಯಜ್ಞಾನ ಪ್ರಮಥ ಗಣಾಚಾರವುಳ್ಳ, ಶಿವಕಲಾತ್ಮನ ವಿವರಿಸಿ, ಆತನ ಭಕ್ತಿರಸವ ತಾ ಸವಿದು, ತನ್ನ ಜ್ಞಾನರಸವ ನಾತಂಗೆ ಕೊಟ್ಟು, ಜ್ಞಾನಭಕ್ತಿ ತನ್ನದಾಗಿ, ಕ್ರಿಯಾಭಕ್ತಿ ಆತನದಾಗಿ, ಭೇರುಂಡ ಪಕ್ಷಿಯೋಪಾದಿಯಲ್ಲಿ ಮುಖವೆರಡು ದೇಹ ಒಂದು ಆ ರೀತಿಯಂತೆ, ಪರಶಿವ ತತ್ವಾನುಭಾವಮೂರ್ತಿ, ಶೂನ್ಯಲಿಂಗವನಪ್ಪಿ, ಸೂಜಿ ಸೂಜಿಗಲ್ಲನಪ್ಪಿದಂತೆ, ಭಕ್ತ ಜಂಗಮವನಪ್ಪಿ, ಜಂಗಮ ಭಕ್ತನನಪ್ಪುತ್ತೆ ಅಪ್ಪು ಅಗ್ನಿಯನುಂಗಿ, ಉಪ್ಪು ಉದಕವ ನುಂಗಿ, ಹೆಪ್ಪು ತುಪ್ಪವ ನುಂಗಿದ ತೆರದೊಳು, ಕಪ್ಪು ಕಣ್ಣನೆ ನುಂಗಿ, ಒಪ್ಪ ಚಿತ್ರವ ನುಂಗಿ, ಅಪ್ಪಿ ಅಗಲದೆ ಇಪ್ಪ ನಿಜವು ತಾನೆಂಬುದೀಗ, ಅಗಮ್ಯವೆಂಬ ಶಬ್ದಕ್ಕರ್ಥ.

ಅವಿರಳವೆಂಬ ಲಕ್ಷಣದ ವಿವರ : ಮತಿ ಮಂಜೀರ, ಅರಣ್ಯವಾಸವಾಗಿರುವಂತಹ ಭದ್ರಗಜವ ಪಾಶದಿಂದ ಬಲಿಯನೊಡ್ಡಿ ಬಂಧಿಸಿ, ತಂದು, ಆಜ್ಞೆಯಿಂದ ಕಟ್ಟಿ, ಆಹಾರವ ಕವಳವಮಾಡಿ ಕೊಡಲು, ಸೂರಿಯಾಡಿ ಭೋಗಿಸಿ ತನ್ನ ಪೂರ್ವ ಸ್ಥಾನದಲ್ಲಿ ಮನವಿಟ್ಟು, ನಲಿನಲಿದಾಡಿ ತೂಗುವಂತೆ, ಅನಾದಿಯಿಂದ ಜನಿತಮಾದ ಪರಿಪೂರ್ಣಜ್ಞಾನಿ ಶಿವಯೋಗಿಯು, ಆ ಭದ್ರಗಜದಂತೆ ಏಕಾಂತವಾಸದಲ್ಲಿ ಇರುತ್ತಿರಲು, ಅನಾದಿಬಳಿವಿಡಿದುಬಂದ ಶಿವಕಲಾತ್ಮನು, ತನ್ನ ನಿಜಕಿಂಕುರ್ವಾಣ ಪಾಶದಿಂದ ಬಂಧಿಸಿ, ಭಕ್ತಿರಸವೆಂಬ ಬಲಿಯಲ್ಲಿ ಕಟ್ಟಿ, ಸಕಲ ಪಡಿಪದಾರ್ಥವ ತಂದಿರಿಸಲು, ಪ್ರಮಥಗಣ ದಾಸೋಹಂಭಾವದಿಂದ, ಏಕ ಸಮರಸವಾಗಿ, ಏಕರಸ ಸಜೀವ, ಆಕಾರ ನಿರಾಕಾರ ಏಕವಡಗಿ, ಆಕಾರವಡಗಿ, ನದಿಯೊಳಗೆ ನದಿ ಬೆರೆದಂತೆ, ಸಾಕಾರವಡಗಿದ ಪರಮಯೋಗಿ ಎಂಬ ಗುರುಸೂತ್ರದಂತೆ, ಆವರಣ, ಆಚಾರ, ನಿರ್ವಾಣಪದಕ್ಕೆ ಸೂತ್ರಿಕನಾದ ನಿರಂಜನಲಿಂಗಮೂರ್ತಿಯ ಬೆಳಗಿನೊಳಗೆ ಬೆಳಗಾಗಿರ್ಪ ಎಂಬುದೀಗ, ಅವಿರಳವೆಂಬ ಲಕ್ಷಣಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ, ಪರಂಜ್ಯೋತಿಪ್ರಕಾಶ ಪರಶಿವನಪ್ಪಣೆ, ವಿನೋದಾರ್ಥವಾಗಿ ಸಾಕಾರ ಲೀಲೆಯಂ ಧರಿಸಿ, ನವವಿಧ ಚಿದ್ಘನ ಲಕ್ಷಣದಿಂದ, ಇಪ್ಪತ್ತೊಂದು ಯುಗ ಮೊದಲಾದ ಸಮಸ್ತ ಅವತಾರದೊಳು, ಪ್ರಮಥಗಣ ಮಧ್ಯದಲ್ಲಿ ಪರಿಶೋಭಿಸಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಲಕ್ಷಣಗಳಾಗಿ ಸಂಬಂಧಮಾಗಿರ್ಪವು.*

ಸಂಜ್ಞೆಗಳು

ಪರವೆಂಬ ಸಂಜ್ಞೆಯ ವಿವರ : ಇಹಪರವೆಂಬೆರಡಳಿದು ಅರ್ಥೈಷಣ, ದಾರೈಷಣ, ಪುತ್ರೈಷಣ ಎಂಬ ಈಷಣತ್ರಯಂಗಳಲಿ ಮೋಹವಿಲ್ಲದೆ, ದೀಕ್ಷಾ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೬

ಗುರು, ಶಿಕ್ಷಾಗುರು, ಮೋಕ್ಷಾಗುರುವಿನೊಳಗಣ ಗುರು [೧][ಜ್ಞಾನಗುರು ಮಹಾಜ್ಞಾನ ಗುರುವಿನಲ್ಲಿ][೧] ಅರ್ಪಿತಾವಧಾನದ ವಿಶ್ವಾಸದೆಚ್ಚರದಳಿದಿರ್ಪ ಸದ್ಭಕ್ತನೆಂಬುದೀಗ, ಪರವೆಂಬ ಸಂಜ್ಞೆಯ ಶಬ್ದಕ್ಕರ್ಥ.

ಗೂಢವೆಂಬ ಸಂಜ್ಞೆಯ ವಿವರ : ನಾನು ನೀನು ಎಂಬುಭಯವನಳಿದು ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳಲ್ಲಿ ಮೋಹಿಸದೆ, ಭಕ್ತಸ್ಥಲವ ತಿಳಿದು, ಕ್ರಿಯಾಲಿಂಗ, ಜ್ಞಾನಲಿಂಗ, ಮಹಾಜ್ಞಾನಲಿಂಗದೊಳಗಣ ಜಂಗಮಲಿಂಗದಲ್ಲಿ, ಅರ್ಪಿತಾವಧಾನದ ವಿಶ್ವಾಸ ಎಚ್ಚರದಳಿದು ಇರ್ಪ ಸದ್ವೀರ ಮಹೇಶ್ವರನು ಎಂಬುದೀಗ, ಗೂಢವೆಂಬ ಸಂಜ್ಞೆಗರ್ಥ.

ಶರೀರಸ್ಥವೆಂಬ ಸಂಜ್ಞೆಯ ವಿವರ : ಒಳಗು ಹೊರಗು ಎಂಬುಭಯವನಳಿದು, ಅನ್ನ, ವಸ್ತ್ರ, ಆಭರಣವೆಂಬ ಭೋಗತ್ರಯಂಗಳ ಮೋಹಿಸದೆ, ಭಕ್ತ ಮಹೇಶ್ವರ ಸ್ಥಲವ ತಿಳಿದು, ಕ್ರಿಯಾಜಂಗಮ, ಜ್ಞಾನಜಂಗಮ, ಮಹಾಜ್ಞಾನಜಂಗಮದೊಳಗಣ ಜಂಗಮಲಿಂಗ ಲಿಂಗಜಂಗಮದಲ್ಲಿ ಅರ್ಪಿತಾವಧಾನದ ವಿಶ್ವಾಸದೆಚ್ಚರದಳಿದಿರ್ಪ ಶಿವಪ್ರಸಾದಿ ಎಂಬುದೀಗ, ಶರೀರಸ್ಥವೆಂಬ ಸಂಜ್ಞೆ ಎಂಬ ಶಬ್ದಕ್ಕರ್ಥ.

ಲಿಂಗಕ್ಷೇತ್ರವೆಂಬ ಸಂಜ್ಞೆಯ ವಿವರ : ಇಂತು ತ್ರಿವಿಧಮಾರ್ಗಕ್ರಿಯಾಚರಣೆಯ ದಿವಾರಾತ್ರಿ ಎಂಬುಭಯವನಳಿದು, ಸತ್ವ, ರಜ, ತಮವೆಂಬ ಗುಣತ್ರಯಂಗಳಲ್ಲಿ ಮೋಹಿಸದೆ, ಭಕ್ತ ಮಹೇಶ್ವರ, ಪ್ರಸಾದಿಸ್ಥಲವ ತಿಳಿದು, ಕ್ರಿಯಾವರಣ, ಜ್ಞಾನಾವರಣ, ಮಹಾಜ್ಞಾನಾವರಣದೊಳಗಣ ಗುರು, ಲಿಂಗ, ಜಂಗಮ, ಜಂಗಮಲಿಂಗ ಗುರುವಿಂಗೆ ರೂಪು, ರುಚಿ, ತೃಪ್ತಿ ಮೊದಲಾದ ಅರ್ಪಿತಾವಧಾನದ ಮಾರ್ಗಾಚರಣೆಯ ವಿಶ್ವಾಸದೆಚ್ಚರದಳಿದಿರ್ಪ ಲಿಂಗಪ್ರಾಣಿ ಎಂಬುದೀಗ, ಲಿಂಗಕ್ಷೇತ್ರ ಸಂಜ್ಞೆ ಎಂಬ ಶಬ್ದಕ್ಕರ್ಥ.

ಅನಾದಿವಸ್ತುವೆಂಬ ಸಂಜ್ಞೆಯ ವಿವರ : ಗುರುಶಿಷ್ಯರೆಂಬುಭಯ ವರ್ತನೆಯಳಿದು ಏಕರೂಪಾಗಿ, ಅಂತರಂಗದಲ್ಲಿ ಕರಣಕರ್ಕಶವಿಲ್ಲದೆ, ಕರಣಂಗಳೆಲ್ಲ ಶ್ರೀಗುರುಲಿಂಗಜಂಗಮದ ಚಿತ್ಪ್ರಕಾಶ, ಚಿದ್ವಿಭೂತಿ, ರುದ್ರಾಕ್ಷಿ, ಮಂತ್ರಮಯವಾಗಿ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿಸ್ಥಲವ ತಿಳಿದು, ಮಾರ್ಗಾಚರಣೆ ಮೀರಿದಾಚರಣೆಯ, ಅರ್ಪಿತಾವಧಾನದ ನಿಲುಕಡೆಯಲ್ಲಿ ವಿಶ್ವಾಸದೆಚ್ಚರದಳಿದು ಇರ್ಪ ಶಿವಶರಣನೆಂಬುದೀಗ, ಅನಾದಿವಸ್ತುಸಂಜ್ಞೆ ಎಂಬ ಶಬ್ದಕ್ಕರ್ಥ.

ಮಹಾಸಂಜ್ಞೆಯ ವಿವರ : ಅಂಗಲಿಂಗವೆಂಬುಭಯವನಳಿದು, ಅಧೋಕುಂಡಲಿ, ಮಧ್ಯಕುಂಡಲಿ, ಊರ್ಧ್ವಕುಂಡಲಿ ಎಂಬ ಕುಂಡಲಿತ್ರಯಂಗಳನರಿದು, ಮಹಾಲಿಂಗದಲ್ಲಿ ಷಟ್‌ಸ್ಥಲವ ತಿಳಿದು ಪ್ರಮಥಗಣಮಾರ್ಗದೆಚ್ಚರದಳಿದಿರ್ಪ ನಿಜೈಕ್ಯನೆಂಬುದೀಗ, ಮಹಾಸಂಜ್ಞೆ ಎಂಬ ಶಬ್ದಕ್ಕರ್ಥ.

೧–೧ ಕ್ರಿಯಾಲಿಂಗಜಂಗಮದಲ್ಲಿ (ಮೂ)

ಅಪ್ರಮಾಣವೆಂಬ ಸಂಜ್ಞೆಯ ವಿವರ :ಭಕ್ತಸ್ಥಲಕ್ಕೆ ಅಂಗವ ನಿಲ್ಲಿಸಿ, ಮಹೇಶ್ವರ ಸ್ಥಲಕ್ಕೆ ಆತ್ಮವ ನಿಲ್ಲಿಸಿ, ಪ್ರಸಾದಿಸ್ಥಲಕ್ಕೆ ಪ್ರಾಣವ ನಿಲ್ಲಿಸಿ, ಪ್ರಾಣಲಿಂಗಿಯ ಸ್ಥಲಕ್ಕೆ ಇಂದ್ರಿಯಂಗಳ ನಿಲ್ಲಿಸಿ, ಶರಣಸ್ಥಲಕ್ಕೆ ವಿಷಯಂಗಳ ನಿಲ್ಲಿಸಿ, ಐಕ್ಯಸ್ಥಲಕ್ಕೆ ಕರಣಂಗಳ ನಿಲ್ಲಿಸಿ ಮೇಲಾದ ಪರಿಣಾಮ ತೃಪ್ತಿಸ್ಥಲಕ್ಕೆ ತಾನೆ ತಾನಾದ ಮಹದೆಚ್ಚರವೇ ಪ್ರಾಣವಾಗಿರ್ಪ ನಿಷ್ಕಲಂಕನೆಂಬುದೀಗ, ಅಪ್ರಮಾಣ ಸಂಜ್ಞೆ ಎಂಬ ಶಬ್ದಕ್ಕರ್ಥ.

ನಿರ್ನಾಮವೆಂಬ ಸಂಜ್ಞೆಯ ವಿವರ : ಶರಣಸತಿ ಲಿಂಗಪತಿ ಎಂಬುಭಯ ಮಾರ್ಗಕ್ರಿಯೆಯನಳಿದು, ತಾನು ತನ್ನರಿವು ಎಂಬುಭಯವ ಮೀರಿದ ಕ್ರಿಯಾ ಮಾರ್ಗವನುಳಿದು, ಉರಿ ಉಂಡ ಕರ್ಪುರದಂತೆ, ನಿಜಜಂಗಮವೇ ತಾನಾದ ನಿರಾಲಂಬ ಶರಣನೆಚ್ಚರದಳೆದಿರ್ಪ ಎಂಬುದೀಗ, ನಿರ್ನಾಮಸಂಜ್ಞೆ ಎಂಬ ಶಬ್ದಕ್ಕರ್ಥ.

ಅವಿರಳವೆಂಬ ಸಂಜ್ಞೆಯ ವಿವರ : ಗುರುಕರುಣದಿಂದ ಆಚಾರಲಿಂಗವ ಕೂಡಿ, ತನುವ ಮರೆದು ಗುರುಲಿಂಗಸಂಗವಮಾಡಿ, ಆತ್ಮನ ಮರೆದು ಶಿವಲಿಂಗ ಕೂಟದಿಂದ ಪ್ರಾಣವ ನೀಗಿ, ಚರಲಿಂಗಸಂಗದಿಂದ ಇಂದ್ರಿಯಂಗಳ ಮರೆದು, ಪ್ರಸಾದಲಿಂಗದ ಕೂಟದಿಂದ ವಿಷಯಂಗಳ ಮರೆದು, ಮಹಾಲಿಂಗಸಂಗದಿಂದ ಕರಣಂಗಳ ಮರೆದು, ಮೇಲಾಗಿರುವ ಚೌಕಮಧ್ಯದಲ್ಲಿ ಜ್ಯೋತಿ ಜ್ಯೋತಿ ಬೆರೆದಂತೆ ಮಹಾ ಜ್ಯೋತಿ ತಾನಾಗಿರ್ಪ ನಿರವಯ ಶರಣನೆಚ್ಚರವೀಗ, ಪರಿಪೂರ್ಣ ಅವಿರಳಸಂಜ್ಞೆ ಎಂಬ ಶಬ್ದಕ್ಕರ್ಥ.

ಇಂತು ಒಂಬತ್ತು ಪ್ರಕಾರದಿಂದ ಪರಮಾನಂದ ಪರಶಿವನಪ್ಪಣೆವಿಡಿದು, ವಿನೋದಾರ್ಥವಾಗಿ ಸಾಕಾರಲೀಲೆಯ ಧರಿಸಿ, ನವವಿಧ ಮಹದರಿವಿನ ಎಚ್ಚರ ದಳೆದು, ಸಮಸ್ತ ಪ್ರಮಥಗಣಲೀಲೆಯಲ್ಲಿ, ಕ್ಷೀರದೊಳು ಘೃತವಡಗಿದಂತೆ ಪರಿ ಶೋಭಿಸಿ, ಅನಾದಿ ಶರಣ ಪರಾತ್ಪರಮೂರ್ತಿಗೆ ನವವಿಧ ಸಂಜ್ಞೆಗಳಾಗಿ ಸಂಬಂಧ ಮಾಗಿರ್ಪವು ಎಂಬ ಶಬ್ದಕ್ಕರ್ಥ.*

ಇಂತು ದ್ವಾದಶಸ್ಥಲ ಸಕೀಲಂಗಳಿಂದ, ನೂರೆಂಟು ಸಕೀಲ, ಇನ್ನೂರು ಹದಿನಾರುಸ್ಥಲವಾಗಿ, ಮೀರಿದಕ್ರಿಯೆಯಿಂದ ಸಂಬಂಧಮಾಗಿರ್ಪವು. ಈ ಮಾರ್ಗಾ ಚರಣೆ, ಮೀರಿದಾಚರಣೆಯಿಂದ ಅನಾದಿಶರಣ ಪರಾತ್ಪರಮೂರ್ತಿ ಶ್ರೀ ಗುರು ಲಿಂಗ ಜಂಗಮದ ಚಿದಂಗಸ್ಥಲಂಗಳಲ್ಲಿ ಇನ್ನೂರು ಹದಿನಾರು ಸಕೀಲ ಸಂಬಂಧ ವಾಗಿಹವು.

ಇಂತು ಆಯಾ ಸ್ಥಾನಂಗಳಲ್ಲಿ ಕ್ರಿಯೆಗಳು ಅನಾದಿ ವಸ್ತುವಿನಲ್ಲಿ ಅಂಕುರಿಸಿ, ವಿನೋದಿಸಿ, ಸಮಾಪ್ತಿಯಾದ ವಿಸ್ತಾರವು ನಿನ್ನ ಕರ, ನಯನ, ಹೃದಯಾಂತರಾಳ ದಲ್ಲಿ ಅನಾದಿಶರಣ ಪರಾತ್ಪರಮೂರ್ತಿ ಶ್ರೀಗುರುಲಿಂಗಜಂಗಮರು ಅತಿ

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೭

ಗೌಪ್ಯದಿಂದ ನೆಲಸಿರ್ಪರು. ನಿನ್ನ ಪರಿಪೂರ್ಣ ಮಹಾಜ್ಞಾನದೃಷ್ಟಿಯಿಂದೆ ನೋಡೆ, ಎನ್ನ ಚಿನ್ಮಂತ್ರಶಕ್ತಿಯೇ ಎಂದು, ನಿರ್ವಾಣ ವೀರಶೈವ ಸಂಪನ್ನೆ ಅಕ್ಕಮಹಾದೇವಿ ಎಂಬ ಶಿವಶರಣೆಗೆ, ಪ್ರಭುವು ಇನ್ನೂರು ಹದಿನಾರು ಸಕೀಲವ ಬೋಧಿಸುವ ಸಮಯದಲ್ಲಿ, ಓಲೆಯ ಶಾಂತನು ಲಿಖಿತವ ಮಾಡಿದ ಟಿಪ್ಪಣಾರ್ಥ ಸಮಾಪ್ತ.

ಸಕೀಲಗಳು

ಸಕೀಲಗಳ ಉದ್ದೇಶವು ಕ್ರಿಯೆಗಳ ಸ್ವರೂಪವನ್ನೂ, ಅವುಗಳ ಪರಸ್ಪರ ಸಂಬಂಧವನ್ನೂ ತಿಳಿಯಪಡಿಸುವದು ಇರುತ್ತದೆ. ಈ ಸಕೀಲಗಳು ಅನೇಕ ವಿಧವಾಗಿರುತ್ತವೆ. ಅವು ೨೧೬ ಸಕೀಲ, ೧೦೮ ಸಕೀಲ, ೯೬ ಸಕೀಲ, ೬೬ ಸಕೀಲ, ೫೨ ಸಕೀಲ, ೪೮ ಸಕೀಲ, ೩೬ ಸಕೀಲ, ಅಷ್ಟವಿಧ ಸಕೀಲ, ಷಡ್ವಿಧ ಸಕೀಲ ಎಂದು ಇರುತ್ತವೆ. ಇವುಗಳಲ್ಲಿ ಅಷ್ಟವಿಧ ಸಕೀಲಗಳು, ನೂರೆಂಟು ಸಕೀಲಗಳು ಮತ್ತು ಇನ್ನೂರು ಹದಿನಾರು ಸಕೀಲಗಳೇ ಮುಖ್ಯವಾದವುಗಳು. ಇವುಗಳನ್ನು ಆರು ಅಂಗಸ್ಥಲಗಳಿಗೆ ಇಲ್ಲವೆ ಆರು ಅಥವಾ ಒಂಬತ್ತು ಚಕ್ರಗಳಿಗೆ, ಇಲ್ಲವೆ ಇಷ್ಟಲಿಂಗದ ಆರುಸ್ಥಲಗಳಿಗೆ ಸಂಬಂಧಿಸಿ ವಿಷಯವಿವೇಚನೆ ಮಾಡುವದುಂಟು. ಒಂದು ಸ್ಥಲಕ್ಕೆ ಸಂಬಂಧಿಸಿದ ಸಕೀಲಗಳ ಜ್ಞಾನವು ಮತ್ತು ಆಚರಣೆಯು ಮನುಷ್ಯನಲ್ಲಿ ಕೆಲವೊಂದು ತರದ ವಿಶೇಷ ಗುಣಗಳ ವಿಕಾಸಕ್ಕೆ ಕಾರಣವಾಗುತ್ತವೆ. ಈ ಬಗೆಯಾಗಿ ಮನುಷ್ಯನು ಎಲ್ಲ ಸ್ಥಲಗಳಲ್ಲಿ ಉತ್ಕ್ರಾಂತಿಯನ್ನು ಹೊಂದುತ್ತ ಲಿಂಗಾಂಗಸಾಮರಸ್ಯಸ್ಥಿತಿಯನ್ನು ಪಡೆಯತಕ್ಕದ್ದು.

ಮೇಲೆ ವಿವರಿಸಿದ ಸಕೀಲಗಳಲ್ಲಿ ಕೆಲವು ಕೆಳಗೆ ಕೊಡಲ್ಪಟ್ಟಿವೆ. ಅವುಗಳ ವ್ಯಾಖ್ಯೆಗಳು ಮತ್ತು ವರ್ಣನೆಗಳು ಬಹುತರವಾಗಿ ಹಿಂದಿನ ವಿವರಣೆಗಳಲ್ಲಿ ಬಂದಿರುತ್ತವೆ. ಆದರೆ ಅವುಗಳಲ್ಲಿ ಕೆಲವು ಆಚಾರಕ್ಕೆ ಸಂಬಂಧಪಟ್ಟವಿರುತ್ತವೆ. ಅವುಗಳ ಸ್ವರೂಪು ಮುಂದೆ ಆಚಾರ ವಿಷಯಕ ಭಾಗದಲ್ಲಿ ವಿವರಿಸಲ್ಪಡುವದು.

ಅಷ್ಟವಿಧ ಸಕೀಲಗಳು

೧) ಷಟ್‌ಸ್ಥಲಬ್ರಹ್ಮಿಗಳ [೧][ಷಟ್‌ಚಕ್ರಗಳ][೧] ಕಂಜದಲ್ಲಿ ಅಷ್ಟವಿಧ ಸಕೀಲ [೨][ವು][೨] ನೆಲೆಗೊಂಡಿಪ್ಪುದುಂಟು. ಅದು ಹೇಗೆಲೆ ಸ್ವಾಮಿ ಎಂದು ಬೆಸಗೊಂಡೊಡೆ.

ಆಧಾರಚಕ್ರ : ಭಕ್ತಸ್ಥಲವುಳ್ಳವರುಗಳ, ಆಧಾರಚಕ್ರದ ನಾಲ್ಕೆಸಳಕಂಜದ ಮಧ್ಯದಲ್ಲಿ ಭಕ್ತನೆಂಬ ಅಂಗ, ಆಚಾರವೆಂಬ ಲಿಂಗ, ಕ್ರಿಯೆಯೆಂಬ ಶಕ್ತಿ [ಶ್ರದ್ಧೆಯೆಂಬ ಭಕ್ತಿ] ಸುಚಿತ್ತವೆಂಬ ಹಸ್ತ, ಘ್ರಾಣವೆಂಬ ಮುಖ, ಸುಗಂಧವೆಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿನಿಂದ ನೆಲೆಗೊಂಡಿಪ್ಪುದು.

ಸ್ವಾಧಿಷ್ಠಾನಚಕ್ರ : ಮಹೇಶ್ವರಸ್ಥಲವುಳ್ಳವರುಗಳ, ಸ್ವಾಧಿಷ್ಠಾನಚಕ್ರದ ಆರೆಸಳಕಂಜದಮಧ್ಯದಲ್ಲಿ ಮಹೇಶ್ವರನೆಂಬ ಅಂಗ, ಗುರುವೆಂಬ ಲಿಂಗ, ಜ್ಞಾನ

೧–೧ ಷಡಾಧಾರಚಕ್ರದ (ಮೂ) ೨–೨ ಂಗಳಿಂದ (ಮೂ)

ವೆಂಬ ಶಕ್ತಿ ನೈಷ್ಠೆ ಎಂಬ ಭಕ್ತಿ ಸುಬುದ್ಧಿ ಎಂಬ ಹಸ್ತ ಜಿಹ್ವೆ ಎಂಬ ಮುಖ, ಸುರಸ ವೆಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿನಿಂದ ನೆಲೆಗೊಂಡಿಪ್ಪುದು.

ಮಣಿಪೂರಕಚಕ್ರ : ಪ್ರಸಾದಿಸ್ಥಲವುಳ್ಳವರುಗಳ, ಮಣಿಪೂರಕಚಕ್ರದ ಹತ್ತೆಸಳ ಕಂಜದಮಧ್ಯದಲ್ಲಿ ಪ್ರಸಾದಿ ಎಂಬ ಅಂಗ, ಶಿವನೆಂಬ ಲಿಂಗ, ಇಚ್ಛೆ ಎಂಬ ಶಕ್ತಿ ಸಾವಧಾನವೆಂಬ ಭಕ್ತಿ ನಿರಹಂಕಾರವೆಂಬ ಹಸ್ತ ನೇತ್ರವೆಂಬ ಮುಖ, ಸುರೂಪ ವೆಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿಸಿನಿಂದ ನೆಲೆಗೊಂಡಿಪ್ಪುದು.

ಅನಾಹತಚಕ್ರ : ಪ್ರಾಣಲಿಂಗಿಸ್ಥಲವುಳ್ಳವರುಗಳ, ಅನಾಹತಚಕ್ರದ ಹನ್ನೆರಡೆ ಸಳಕಂಜದಮಧ್ಯದಲ್ಲಿ ಪ್ರಾಣಲಿಂಗಿ ಎಂಬ ಅಂಗ, ಜಂಗಮವೆಂಬ ಲಿಂಗ, ಆದಿ ಎಂಬ ಶಕ್ತಿ ಅನುಭಾವವೆಂಬ ಭಕ್ತಿ ಸುಮನವೆಂಬ ಹಸ್ತ ತ್ವಕ್ಕೆಂಬ ಮುಖ, ಸ್ಪರ್ಶನವೆಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿನಿಂದ ನೆಲೆಗೊಂಡಿಪ್ಪುದು.

ವಿಶುದ್ಧಿಚಕ್ರ : ಶರಣಸ್ಥಲವುಳ್ಳವರುಗಳ, ವಿಶುದ್ಧಿಚಕ್ರದ ಹದಿನಾರೆಸಳ ಕಂಜದ ಮಧ್ಯದಲ್ಲಿ ಶರಣನೆಂಬ ಅಂಗ, ಪ್ರಸಾದವೆಂಬ ಲಿಂಗ, ಪರವೆಂಬ ಶಕ್ತಿ ಆನಂದವೆಂಬ ಭಕ್ತಿ , ಸುಜ್ಞಾನವೆಂಬ ಹಸ್ತ , ಶ್ರವಣೇಂದ್ರಿಯವೆಂಬ ಮುಖ, ಸುಶಬ್ದವೆಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿನಿಂದ ನೆಲೆಗೊಂಡಿಪ್ಪುದು.

ಆಜ್ಞಾಚಕ್ರ : ಐಕ್ಯಸ್ಥಲವುಳ್ಳವರುಗಳ, ಆಜ್ಞಾಚಕ್ರದ ಎರಡೆಸಳಕಂಜದ ಮಧ್ಯದಲ್ಲಿ ಐಕ್ಯನೆಂಬ ಅಂಗ, ಮಹವೆಂಬ ಲಿಂಗ, ಚಿತ್ತೆಂಬ ಶಕ್ತಿ ಸಮರಸವೆಂಬ ಭಕ್ತಿ ಸದ್ಭಾವವೆಂಬ ಹಸ್ತ , ಹೃದಯವೆಂಬ ಮುಖ, ಸುತೃಪ್ತಿ ಎಂಬ ಪದಾರ್ಥ, ಪ್ರಸನ್ನ ಪ್ರಸಾದಸ್ವರೂಪಿನಿಂದ ನೆಲೆಗೊಂಡಿಪ್ಪುದು.

ಇಂತು ಷಟ್‌ಸ್ಥಲಬ್ರಹ್ಮಿಗಳ [೧][ಷಟ್‌ಚಕ್ರಗಳ][೧] ಕಂಜದಲ್ಲಿರ್ಪ ಅಷ್ಟವಿಧ ಸಕೀಲಂಗಳಿಂದ ನೆಲೆಗೊಂಡಿಪ್ಪ ಚಿದ್ಘನಲಿಂಗಕ್ಕೋಸ್ಕರ ನಮಸ್ಕಾರವು.

೨) ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯವೆಂಬ ಷಡ್ವಿಧ ಅಂಗಗಳು ; ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗವೆಂಬ ಷಡ್ವಿಧಲಿಂಗಗಳು ; ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯವೆಂಬ ಷಡ್ವಿಧಮುಖಂಗಳು ; ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವವೆಂಬ ಷಡ್ವಿಧ ಹಸ್ತಂಗಳು ; ಕ್ರಿಯಾಶಕ್ತಿ ಜ್ಞಾನ ಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ ಚಿತ್‌ಶಕ್ತಿಯೆಂಬ ಷಡ್ವಿಧ ಶಕ್ತಿಗಳು ; ಶ್ರದ್ಧಾಭಕ್ತಿ ನೈಷ್ಠಿಕಾಭಕ್ತಿ ಸಾವಧಾನಭಕ್ತಿ ಅನುಭಾವಭಕ್ತಿ ಆನಂದಭಕ್ತಿ ಸಮರಸಭಕ್ತಿ ಎಂಬ ಷಡ್ವಿಧ ಭಕ್ತಿಗಳು ; ಗಂಧ, ರಸ, ರೂಪು, ಸ್ಪರ್ಶ, ಶಬ್ದ, ತೃಪ್ತಿ ಎಂಬ ಷಡ್ವಿಧ ಪದಾರ್ಥಂಗಳು ; ಇಷ್ಟ ಪ್ರಾಣ ಭಾವ ಲಿಂಗಗಳಲ್ಲಿ ಅರ್ಪಿಸುವುದಕ್ಕೆ ಅಷ್ಟವಿಧ ಸಕೀಲಂಗಳೇ ಕಾರಣವು.

೧–೧ ಷಡಾಧಾರಚಕ್ರದ (ಮೂ)

೧೦೮ ಸಕೀಲಗಳು

(೧) ತಾರಕಾಕೃತಿ, ನಕಾರ ಪ್ರಣವ, ಆಧಾರಚಕ್ರ, ಸದ್ಭಕ್ತನೇ ಅಂಗ, ಪೀತವರ್ಣ, ಪೃಥ್ವೀತತ್ವ, ಸುಚಿತ್ತಹಸ್ತ ಆಚಾರಲಿಂಗ, ಘ್ರಾಣವೆಂಬ ಮುಖ, ಕ್ರಿಯಾಶಕ್ತಿ, ಶ್ರದ್ಧಾಭಕ್ತಿ, ಗಂಧಪದಾರ್ಥ, ಸುಗಂಧಪ್ರಸಾದ, ನಿವೃತ್ತಿಕಲೆ, ಕರ್ಮ ಸಾದಾಖ್ಯ, ಸತ್ತು ಎಂಬ ಲಕ್ಷಣ, ಪರವೆಂಬ ಸಂಜ್ಞೆ, ಋಗ್ವೇದ ಇಂತೀ ಹದಿನೆಂಟು ಇಷ್ಟಲಿಂಗದ ವೃತ್ತದಲ್ಲಿ ಸಂಬಂಧ.

ದಂಡಕಾಕೃತಿ, ಮಕಾರ ಪ್ರಣಮ, ಸ್ವಾಧಿಷ್ಠಾನಚಕ್ರ, ಮಹೇಶ್ವರನೆಂಬ ಅಂಗ, ಶ್ವೇತವರ್ಣ, ಅಪ್ಪುತತ್ವ, ಸುಬುದ್ಧಿ ಹಸ್ತ ಗುರುಲಿಂಗ, ಜಿಹ್ವೆ ಎಂಬ ಮುಖ, ಜ್ಞಾನಶಕ್ತಿ ನೈಷ್ಠಿಕಾಭಕ್ತಿ ರಸಪದಾರ್ಥ, ಸುರಸಪ್ರಸಾದ, ಪ್ರತಿಷ್ಠಾಕಲೆ, ಕರ್ತೃ ಸಾದಾಖ್ಯ, ಚಿತ್ತೆಂಬ ಲಕ್ಷಣ, ಗೂಢವೆಂಬ ಸಂಜ್ಞೆ, ಯಜುರ್ವೇದ ಇಂತೀ ಹದಿನೆಂಟು ಇಷ್ಟಲಿಂಗದ [೧][ವರ್ತುಳದಲ್ಲಿ][೧] ಸಂಬಂಧವು.

ಕುಂಡಲಾಕೃತಿ, ಶಿಕಾರ ಪ್ರಣಮ, ಮಣಿಪೂರಕಚಕ್ರ, ಹರಿತವರ್ಣ, ಅಗ್ನಿ ತತ್ವ, ಪ್ರಸಾದಿ ಎಂಬ ಅಂಗ, ನಿರಹಂಕಾರ ಹಸ್ತ ಶಿವಲಿಂಗ, ನೇತ್ರವೆಂಬ ಮುಖ, ಇಚ್ಛಾಶಕ್ತಿ ಸಾವಧಾನಭಕ್ತಿ ರೂಪು ಪದಾರ್ಥ, ಸುರೂಪು ಪ್ರಸಾದ, ವಿದ್ಯಾಕಲೆ, ಮೂರ್ತಿಸಾದಾಖ್ಯ, ಆನಂದವೆಂಬ ಲಕ್ಷಣ, ಶರೀರಸ್ಥವೆಂಬ ಸಂಜ್ಞೆ, ಸಾಮವೇದ, ಇಂತೀ ಹದಿನೆಂಟು ಇಷ್ಟಲಿಂಗದ [೨][ಕಟಿಯಲ್ಲಿ][೨] ಸಂಬಂಧವು.

ಅರ್ಧಚಂದ್ರಾಕೃತಿ, ವಕಾರ ಪ್ರಣಮ, ಅನಾಹತಚಕ್ರ, ಮಾಂಜಿಷ್ಠವರ್ಣ, ವಾಯುತತ್ವ, ಪ್ರಾಣಲಿಂಗಿ ಎಂಬ ಅಂಗ, ಸುಮನಹಸ್ತ, ಜಂಗಮಲಿಂಗ, ತ್ವಗಿಂದ್ರಿಯವೆಂಬ ಮುಖ, ಆದಿಶಕ್ತಿ ಅನುಭಾವಭಕ್ತಿ ಸ್ಪರ್ಶನಪದಾರ್ಥ, ಸುಸ್ಪರ್ಶನಪ್ರಸಾದ, ಶಾಂತಿಕಲೆ, ಅಮೂರ್ತಿಸಾದಾಖ್ಯ, ನಿತ್ಯವೆಂಬ ಲಕ್ಷಣ, ಲಿಂಗ ಕ್ಷೇತ್ರವೆಂಬ ಸಂಜ್ಞೆ, ಅಥರ್ವಣವೇದ, ಇಂತೀ ಹದಿನೆಂಟು ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವು.

ದರ್ಪಣಾಕೃತಿ ಯಕಾರ ಪ್ರಣಮ, ವಿಶುದ್ಧಿಚಕ್ರ, ಕಪೋತವರ್ಣ, ಆಕಾಶ ತತ್ವ, ಶರಣನೇ ಅಂಗ, ಸುಜ್ಞಾನವೆಂಬ ಹಸ್ತ ಪ್ರಸಾದಲಿಂಗ, ಶ್ರೋತ್ರವೆಂಬ ಮುಖ, ಶಬ್ದಪದಾರ್ಥ, ಸುಶಬ್ದಪ್ರಸಾದ, ಪರಾಶಕ್ತಿ ಆನಂದವೆಂಬ ಭಕ್ತಿ ಶಾಂತ್ಯಾತೀತಕಲೆ, ಶಿವಸಾದಾಖ್ಯ, ಪರಿಪೂರ್ಣವೆಂಬ ಲಕ್ಷಣ, ಅನಾದಿ ಎಂಬ ಸಂಜ್ಞೆ, ಅಜಪವೇದ, ಇಂತೀ ಹದಿನೆಂಟು ಇಷ್ಟಲಿಂಗದ ನಾಳದಲ್ಲಿ ಸಂಬಂಧವು.

ಜ್ಯೋತಿರಾಕೃತಿ, ಓಂಕಾರ ಪ್ರಣಮ, ಆಜ್ಞಾಚಕ್ರ, ಮಾಣಿಕ್ಯವರ್ಣ, ಆತ್ಮ ತತ್ವ, ಐಕ್ಯನೇ ಅಂಗ, ಸದ್ಭಾವಹಸ್ತ ಮಹಾಲಿಂಗ, ಹೃದಯವೆಂಬ ಮುಖ, ತೃಪ್ತಿ ಪದಾರ್ಥ, ಸುತೃಪ್ತಿ ಪ್ರಸಾದ, ಚಿತ್‌ಶಕ್ತಿ ಸಮರಸಭಕ್ತಿ ಶಾಂತ್ಯಾತೀತೋತ್ತರ ಕಲೆ,

---

೧–೧ ಕಟಿಯಲ್ಲಿ(ಮೂ) ೨–೨ ವರ್ತುಳದಲ್ಲಿ (ಮೂ)

ಮಹಾಸಾದಾಖ್ಯ, ಅಖಂಡವೆಂಬ ಲಕ್ಷಣ. ಮಹಾಸಂಜ್ಞೆ, ಗಾಯತ್ರೀ ವೇದ, ಇಂತೀ ಹದಿನೆಂಟು ಇಷ್ಟಲಿಂಗದ ಗೋಳಕದಲ್ಲಿ ಸಂಬಂಧವು.

೧೦೪

(೨) ಇನ್ನು ಮೂರ್ತಿ ಬ್ರಹ್ಮದಿಂದ ಪೃಥ್ವೀತತ್ವ ಹುಟ್ಟಿತ್ತು. ಆ ಪೃಥ್ವೀತತ್ವಕ್ಕೆ ತಾರಕಾಕೃತಿಯಾಯಿತ್ತು. ಆ ತಾರಕಾಕೃತಿಗೆ ನಕಾರವೆಂಬ ಪ್ರಣಮವಾಯಿತ್ತು. ಆ ನಕಾರವೆಂಬ ಪ್ರಣಮಕ್ಕೆ ಆಧಾರಚಕ್ರವಾಯಿತ್ತು. ಆ ಆಧಾರ ಚಕ್ರಕ್ಕೆ ಭಕ್ತನೆಂಬ ಅಂಗವಾಯಿತ್ತು. ಆ ಭಕ್ತನೆಂಬ ಅಂಗಕ್ಕೆ ಸುಚಿತ್ತ ಹಸ್ತವಾಯಿತ್ತು. ಆ ಸುಚಿತ್ತಹಸ್ತಕ್ಕೆ ಆಚಾರಲಿಂಗವಾಯಿತ್ತು. ಆಚಾರಲಿಂಗಕ್ಕೆ ಘ್ರಾಣೇಂದ್ರಿಯವೆಂಬ ಮುಖವಾಯಿತ್ತು. ಆ ಘ್ರಾಣೇಂದ್ರಿಯಮುಖಕ್ಕೆ ಕ್ರಿಯಾಶಕ್ತಿಯಾದಳು. ಆ ಕ್ರಿಯಾಶಕ್ತಿಗೆ ಸದ್ಭಕ್ತಿಯಾಯಿತ್ತು. ಆ ಸದ್‌ಭಕ್ತಿಗೆ ಗಂಧಪದಾರ್ಥವಾಯಿತ್ತು. ಆ ಗಂಧಪದಾರ್ಥಕ್ಕೆ ಸುಗಂಧ ಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ ಅರಿವುದು ನಿವೃತ್ತಿಯಾಯಿತ್ತು. ವಿಚಾರಿಸಿದಲ್ಲಿಗೆ ಕರ್ಮಸಾದಾಖ್ಯವಾಯಿತ್ತು. ನಿಶ್ಚಯಿಸಿದಲ್ಲಿಗೆ ಸತ್ತುವೆಂಬ ಲಕ್ಷಣವಾಯಿತ್ತು. ದೃಢೀಕರಿಸಿದಲ್ಲಿಗೆ ಪರವೆಂಬ ಸಂಜ್ಞೆಯಾಯಿತ್ತು. ಶಬ್ದವಿಟ್ಟು ನುಡಿವುದೇ ಋಗ್ವೇದವಾಯಿತ್ತು. ಇಂತೀ ಹದಿನೆಂಟು ತೆರದ ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎನುತಿರ್ದೆನು ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರ ಪ್ರಭುವೆ.

೧೦೫

ಇನ್ನು ಪಿಂಡಬ್ರಹ್ಮದಿಂದ ಅಮೃತ [ಜಲ]ತತ್ವಹುಟ್ಟಿತ್ತು. ಆ ಅಮೃತ[ಜಲ] ತತ್ವಕ್ಕೆ ದಂಡಕಾಕೃತಿಯಾಯಿತ್ತು. ಆ ದಂಡಕಾಕೃತಿಗೆ ಮಕಾರಪ್ರಣಮವಾಯಿತ್ತು. ಆ ಮಕಾರಪ್ರಣಮಕ್ಕೆ ಸ್ವಾಧಿಷ್ಠಾನಚಕ್ರವಾಯಿತ್ತು. ಆ ಸ್ವಾಧಿಷ್ಠಾನಚಕ್ರಕ್ಕೆ ಮಹೇಶ್ವರನೆಂಬ ಅಂಗವಾಯಿತ್ತು. ಆ ಮಹೇಶ್ವರನೆಂಬ ಅಂಗಕ್ಕೆ ಸುಬುದ್ಧಿ ಹಸ್ತವಾಯಿತ್ತು. ಆ ಸುಬುದ್ಧಿಹಸ್ತಕ್ಕೆ ಗುರುಲಿಂಗವಾಯಿತ್ತು. ಗುರುಲಿಂಗಕ್ಕೆ ಜಿಹ್ವೆ ಎಂಬ ಮುಖವಾಯಿತ್ತು. ಆ ಜಿಹ್ವೆ ಎಂಬ ಮುಖಕ್ಕೆ ಜ್ಞಾನಶಕ್ತಿಯಾದಳು. ಆ ಜ್ಞಾನಶಕ್ತಿಗೆ ನೈಷ್ಠಿಕಾಭಕ್ತಿಯಾಯಿತ್ತು. ಆ ನೈಷ್ಠಿಕಾಭಕ್ತಿಗೆ ರುಚಿಪದಾರ್ಥವಾಯಿತ್ತು. ಆ ರುಚಿ ಪದಾರ್ಥಕ್ಕೆ ಸುರುಚಿಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ ಅರಿವುದೇ ಪ್ರತಿಷ್ಠಾಕಲೆಯಾಯಿತ್ತು. ವಿಚಾರಿಸಿದಲ್ಲಿಗೆ ಕರ್ತೃಸಾದಾಖ್ಯವಾಯಿತ್ತು. ನಿಶ್ಚಯಿಸಿದಲ್ಲಿಗೆ ಚಿತ್ತೆಂಬ ಲಕ್ಷಣವಾಯಿತ್ತು. ದೃಢೀಕರಿಸಿದಲ್ಲಿಗೆ ಗೂಢವೆಂಬ ಸಂಜ್ಞೆಯಾಯಿತ್ತು. ಶಬ್ದವಿಟ್ಟು ನುಡಿವುದೇ ಯಜುರ್ವೇದವಾಯಿತ್ತು. ಇಂತೀ ಹದಿನೆಂಟು ತೆರದ ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎಂಬೆ ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರಪ್ರಭುವೆ.

೧೦೬

ಇನ್ನು ಕಲಾಬ್ರಹ್ಮದಿಂದೆ ಅಗ್ನಿತತ್ವ ಹುಟ್ಟಿತ್ತು. ಆ ಅಗ್ನಿತತ್ವಕ್ಕೆ ಕುಂಡಲಾಕೃತಿಯಾಯಿತ್ತು. ಆ ಕುಂಡಲಾಕೃತಿಗೆ ಶಿಕಾರ ಪ್ರಣಮವಾಯಿತ್ತು. ಆ ಶಿಕಾರ ಪ್ರಣಮಕ್ಕೆ ಮಣಿಪೂರಕಚಕ್ರವಾಯಿತ್ತು. ಆ ಮಣಿಪೂರಕಚಕ್ರಕ್ಕೆ ಪ್ರಸಾದಿಯೆಂಬ ಅಂಗವಾಯಿತ್ತು. ಆ ಪ್ರಸಾದಿಯೆಂಬ ಅಂಗಕ್ಕೆ ನಿರಹಂಕಾರಹಸ್ತವಾಯಿತ್ತು. ಆ ನಿರಹಂಕಾರಹಸ್ತಕ್ಕೆ ಶಿವಲಿಂಗವಾಯಿತ್ತು. ಆ ಶಿವಲಿಂಗಕ್ಕೆ ನೇತ್ರವೆಂಬ ಮುಖವಾಯಿತ್ತು. ಆ ನೇತ್ರವೆಂಬ ಮುಖಕ್ಕೆ ಇಚ್ಛಾಶಕ್ತಿಯಾದಳು. ಆ ಇಚ್ಛಾಶಕ್ತಿಗೆ ಸಾವಧಾನವೆಂಬ ಭಕ್ತಿಯಾಯಿತ್ತು. ಆ ಸಾವಧಾನಭಕ್ತಿಗೆ ರೂಪುಪದಾರ್ಥವಾಯಿತ್ತು. ಆ ರೂಪುಪದಾರ್ಥಕ್ಕೆ ಸುರೂಪುಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ ಅರಿವುದೇ ವಿದ್ಯಾಕಲೆಯಾಯಿತ್ತು. ವಿಚಾರಿಸಿದಲ್ಲಿ ಮೂರ್ತಿಸಾದಾಖ್ಯವಾಯಿತ್ತು. ನಿಶ್ಚೈಸಿದಲ್ಲಿಗೆ ಆನಂದವೆಂಬ ಲಕ್ಷಣವಾಯಿತ್ತು. ದೃಢೀಕರಿಸಿದಲ್ಲಿಗೆ ಶರೀರಸ್ಥವೆಂಬ ಸಂಜ್ಞೆಯಾಯಿತ್ತು. ಶಬ್ದವಿಟ್ಟು ನುಡಿವುದೇ ಸಾಮವೇದವಾಯಿತ್ತು. ಇಂತೀ ಹದಿನೆಂಟು ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎಂಬೆನು ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನ ಬಸವೇಶ್ವರಪ್ರಭುವೆ.

೧೦೭

ಇನ್ನು ಆನಂದಬ್ರಹ್ಮಕ್ಕೆ ವಾಯುತತ್ವ ಹುಟ್ಟಿತ್ತು. ಆ ವಾಯುತತ್ವಕ್ಕೆ ಅರ್ಧಚಂದ್ರಾಕೃತಿಯಾಯಿತ್ತು. ಅರ್ಧಚಂದ್ರಾಕೃತಿಗೆ ವಕಾರಪ್ರಣಮವಾಯಿತ್ತು. ಆ ವಕಾರಪ್ರಣಮಕ್ಕೆ ಅನಾಹತಚಕ್ರವಾಯಿತ್ತು. ಆ ಅನಾಹತಚಕ್ರಕ್ಕೆ ಪ್ರಾಣಲಿಂಗಿ ಎಂಬ ಅಂಗವಾಯಿತ್ತು. ಆ ಪ್ರಾಣಲಿಂಗಿ ಎಂಬುವ ಅಂಗಕ್ಕೆ ಸುಮನ ಹಸ್ತವಾಯಿತ್ತು. ಆ ಸುಮನಹಸ್ತಕ್ಕೆ ಜಂಗಮಲಿಂಗವಾಯಿತ್ತು. ಆ ಜಂಗಮಲಿಂಗಕ್ಕೆ ತ್ವಗೀಂದ್ರಿಯ ಮುಖವಾಯಿತ್ತು. ಆ ತ್ವಗಿಂದ್ರಿಯಮುಖಕ್ಕೆ ಆದಿಶಕ್ತಿಯಾದಳು. ಆದಿಶಕ್ತಿಗೆ ಅನುಭಾವಭಕ್ತಿಯಾಯಿತ್ತು. ಆ ಅನುಭಾವಭಕ್ತಿಗೆ ಸ್ಪರ್ಶನಪದಾರ್ಥವಾಯಿತ್ತು. ಆ ಸ್ಪರ್ಶನಪದಾರ್ಥಕ್ಕೆ ಸುಸ್ಪರ್ಶನಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳ ಮನದಲ್ಲಿ ಸೋಂಕಿಸಿದರೆ ಅರಿವುದೇ ಶಾಂತಿಕಲೆಯಾಯಿತ್ತು. ವಿಚಾರಿಸಿದರೆ ನಿತ್ಯವೆಂಬ ಲಕ್ಷಣವಾಯಿತ್ತು. ದೃಢೀಕರಿಸಿದಲ್ಲಿ ಲಿಂಗಕ್ಷೇತ್ರವೆಂಬ ಸಂಜ್ಞೆಯಾಯಿತ್ತು. ಶಬ್ದವಿಟ್ಟು ನುಡಿವುದೇ ಅಥರ್ವಣವೇದವಾಯಿತ್ತು. ಇಂತೀ ಹದಿನೆಂಟು ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎಂಬೆ ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರಪ್ರಭುವೆ.

೧೦೮

ಇನ್ನು ಸುಜ್ಞಾನಬ್ರಹ್ಮಕ್ಕೆ ಆಕಾಶತತ್ವ ಹುಟ್ಟಿತ್ತು. ಆಕಾಶತತ್ವಕ್ಕೆ ದರ್ಪಣಾಕೃತಿಯಾಯಿತ್ತು. ಆ ದರ್ಪಣಾಕೃತಿಗೆ ಯಕಾರಪ್ರಣಮವಾಯಿತ್ತು. ಆ ಯಕಾರ

ಪ್ರಣಮಕ್ಕೆ ವಿಶುದ್ಧಿಚಕ್ರವಾಯಿತ್ತು. ಆ ವಿಶುದ್ಧಿಚಕ್ರಕ್ಕೆ ಶರಣನೆಂಬ ಅಂಗವಾಯಿತ್ತು. ಆ ಶರಣನೆಂಬ ಅಂಗಕ್ಕೆ ಸುಜ್ಞಾನಹಸ್ತವಾಯಿತ್ತು. ಆ ಸುಜ್ಞಾನ ಹಸ್ತಕ್ಕೆ ಪ್ರಸಾದ ಲಿಂಗವಾಯಿತ್ತು . ಆ ಪ್ರಸಾದಲಿಂಗಕ್ಕೆ ಶ್ರೋತ್ರವೆಂಬ ಮುಖವಾಯಿತ್ತು. ಆ ಶ್ರೋತ್ರವೆಂಬ ಮುಖಕ್ಕೆ ಪರಾಶಕ್ತಿಯಾದಳು. ಆ ಪರಾಶಕ್ತಿಗೆ ಆನಂದಭಕ್ತಿಯಾಯಿತ್ತು . ಆ ಆನಂದಭಕ್ತಿಗೆ ಶಬ್ದ ಪದಾರ್ಥವಾಯಿತ್ತು . ಆ ಶಬ್ದಪದಾರ್ಥಕ್ಕೆ ಸುಶಬ್ದಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ ಅರಿವುದೇ ಶಾಂತ್ಯಾತೀತವೆಂಬ ಕಲೆಯಾಯಿತ್ತು. ವಿಚಾರಿಸಿದಲ್ಲಿಗೆ ಶಿವ ಸಾದಾಖ್ಯವಾಯಿತ್ತು. ನಿಶ್ಚಯಿಸಿದಲ್ಲಿಗೆ ಪರಿಪೂರ್ಣವೆಂಬ ಲಕ್ಷಣವಾಯಿತ್ತು. ದೃಢೀಕರಿಸಿದಲ್ಲಿಗೆ ಅನಾದಿವತ್ ಎಂಬ ಸಂಜ್ಞೆಯಾಯಿತ್ತು. ಶಬ್ದವಿಟ್ಟು ನುಡಿವುದೇ ಅಜಪವೇದವಾಯಿತ್ತು. ಇಂತೀ ಹದಿನೆಂಟು ತೆರದ ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎನುತಿರ್ದೆ ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರ ಪ್ರಭುವೆ.

೧೦೯

ಇನ್ನು ಪರಬ್ರಹ್ಮಕ್ಕೆ ಆತ್ಮತತ್ವ ಹುಟ್ಟಿತ್ತು. ಆತ್ಮತತ್ವಕ್ಕೆ ಜ್ಯೋತಿರಾಕೃತಿಯಾಯಿತ್ತು. ಆ ಜ್ಯೋತಿರಾಕೃತಿಗೆ ಓಂಕಾರಪ್ರಣಮ ಹುಟ್ಟಿತ್ತು. ಆ ಪ್ರಣಮಕ್ಕೆ ಆಜ್ಞಾಚಕ್ರವಾಯಿತ್ತು. ಆಜ್ಞಾಚಕ್ರಕ್ಕೆ ಐಕ್ಯವೆಂಬ ಅಂಗವಾಯಿತ್ತು. ಐಕ್ಯವೆಂಬ ಅಂಗಕ್ಕೆ ಸದ್ಭಾವಹಸ್ತವಾಯಿತ್ತು . ಆ ಸದ್ಭಾವಹಸ್ತಕ್ಕೆ ಮಹಾಲಿಂಗವಾಯಿತ್ತು . ಆ ಮಹಾಲಿಂಗಕ್ಕೆ [೧][ಹೃದಯ][೧] ಎಂಬ ಮುಖವಾಯಿತ್ತು. ಆ ಹೃದಯ ಎಂಬ ಮುಖಕ್ಕೆ ಚಿತ್ ಶಕ್ತಿಯಾದಳು. ಆ ಚಿತ್‌ಶಕ್ತಿಗೆ ಸಮರಸಭಕ್ತಿಯಾಯಿತ್ತು. ಆ ಸಮರಸ ಭಕ್ತಿಗೆ ಸುತೃಪ್ತಿ ಪದಾರ್ಥವಾಯಿತ್ತು. ಸುತೃಪ್ತಿ ಪದಾರ್ಥಕ್ಕೆ ಸಂತೃಪ್ತಿಪ್ರಸಾದವಾಯಿತ್ತು. ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ ಅರಿವುದೇ ಶಾಂತ್ಯಾತೀತೋತ್ತರ ಎಂಬ ಕಲೆಯಾಯಿತ್ತು. ವಿಚಾರಿಸುವಲ್ಲಿಗೆ ಮಹಾಸಾದಾಖ್ಯವಾಯಿತ್ತು. ನಿಶ್ಚಯಿಸಿದಲ್ಲಿಗೆ ಅಖಂಡವೆಂಬ ಲಕ್ಷಣವಾಯಿತ್ತು. ದೃಢೀಕರಿಸುವಲ್ಲಿಗೆ ಮಹಾಸಂಜ್ಞೆಯಾಯಿತ್ತು . ಶಬ್ದವಿಟ್ಟು ನುಡಿವುದೇ ಗಾಯತ್ರೀವೇದವಾಯಿತ್ತು. ಇಂತೀ ಹದಿನೆಂಟು ಸಕೀಲಂಗಳ ಬಲ್ಲ ಮಹಾತ್ಮಂಗೆ ನಮೋ ನಮೋ ಎಂಬೆ ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರಪ್ರಭುವೆ.

೧೧೦

ಇನ್ನು ಪ್ರಥಮದಲ್ಲಿ ಹದಿನೆಂಟು ತೆರದ ಸಕೀಲಂಗಳು ಇಷ್ಟಲಿಂಗದ ಪೀಠದಲ್ಲಿ ಅಡಕವಾಯಿತ್ತು. ದ್ವಿತೀಯದಲ್ಲಿ ಹದಿನೆಂಟು ತೆರದ ಸಕೀಲಂಗಳು ಇಷ್ಟಲಿಂಗದ [೨][ವರ್ತುಳದಲ್ಲಿ][೨] ಅಡಕವಾಯಿತ್ತು. ತೃತೀಯದಲ್ಲಿ ಹದಿನೆಂಟು ತೆರದ ಸಕೀಲಂಗಳು ಇಷ್ಟಲಿಂಗದ [೩][ಕಟಿಯಲ್ಲಿ][೩] ಅಡಕವಾಯಿತ್ತು. ಚತುರ್ಥದಲ್ಲಿ ಹದಿನೆಂಟು ತೆರದ

೧–೧ ಪೃಥ್ವಿ (ಮೂ) ೨–೨ ಕಟಿಯಲ್ಲಿ(ಮೂ) ೩–೩ ವೃತ್ತದಲ್ಲಿ(ಮೂ)

ಸಕೀಲಂಗಳು ಇಷ್ಟಲಿಂಗದ ಗೋಮುಖದಲ್ಲಿ ಅಡಕವಾಯಿತ್ತು. ಪಂಚಮದಲ್ಲಿ ೧೮ ತೆರದ ಸಕೀಲಂಗಳು ಇಷ್ಟಲಿಂಗದ ನಾಳದಲ್ಲಿ ಅಡಕವಾಯಿತ್ತು. ಷಷ್ಠಮದಲ್ಲಿ ಹದಿನೆಂಟು ತೆರದ ಸಕೀಲಂಗಳು ಇಷ್ಟಲಿಂಗದ ಗೋಳಕದಲ್ಲಿ ಅಡಕವಾಯಿತ್ತು. ಆ ಗೋಳಕವೇ [೧][ಚಿತ್ಕಲೆಯಲ್ಲಿ][೧] ಅಡಕವಾಯಿತ್ತು. ಆ [೨][ಚಿತ್ಕಲೆಯೇ][೨] ಚಿದ್ಬಿಂದುವಿನಲ್ಲಿ ಅಡಕವಾಯಿತ್ತು. ಆ [೩][ಚಿದ್ಬಿಂದುವೇ ಚಿನ್ನಾದದಲ್ಲಿ][೩] ಅಡಕವಾಯಿತ್ತು. ಆ [೪][ಚಿನ್ನಾದವೇ][೪] ಬಸವಾಕ್ಷರತ್ರಯದಲ್ಲಿ ಅಡಕವಾಯಿತ್ತು ಕಾಣಾ ಮಹಾಸತ್ಯ ಜಗತ್ಪ್ರಿಯ ಸಂಗನಬಸವೇಶ್ವರಪ್ರಭುವೆ.

ಇಂತೀ ಹದಿನೆಂಟು ತೆರದ ಸಕೀಲಂಗಳನ್ನು ಕರ ಮನ ಭಾವದಲ್ಲಿ ಕುಳ್ಳಿರಿಸಿ, ಅರ್ಚಿಸಿ, ಧ್ಯಾನಿಸಿ, ಸುಖಿಯಾಗು ಮಗನೇ ಎಂದು ಬೋಧಿಸಿದನು ಸದ್ಗುರುವೆನಗೆ.*

೨೧೬ ಸಕೀಲಗಳು

ಪೃಥ್ವಿ ಎಂಬ ಭೂತ, ಕ್ರಿಯಾಶಕ್ತಿ, ಪ್ರಾಣವಾಯು, ಜಾಗ್ರಾವಸ್ಥೆ, ಬ್ರಹ್ಮ ನಧೀದೇವತೆ, ವೃತ್ತಸ್ಥಾನ, ಭಕ್ತನೇ ಅಂಗ, ಆಧಾರಚಕ್ರ, ನಾಲ್ಕುದಳ, ಹಳದೀ ವರ್ಣ, ವಶಷಸ ಎಂಬ ನಾಲ್ಕು ಅಕ್ಷರ, ತಾರಕಾಕೃತಿ, ನಕಾರ ಪ್ರಣಮದ ಪೀಠ, ಆಚಾರಲಿಂಗ, [೫][ಕಪ್ಪು][೫] ವರ್ಣದ ಪ್ರಭೆ, [೬][ಅ][೬]ಕಾರ ಮಂತ್ರ, ಘ್ರಾಣವೆಂಬ ಮುಖ, ಸುಚಿತ್ತ ಹಸ್ತ, ಶ್ರದ್ಧಾಭಕ್ತಿ, ಗಂಧಪದಾರ್ಥ, ಹ್ರಾಂಕಾರವೆಂಬ ಪ್ರಸಾದ ಮಂತ್ರ, ಭೋಜ್ಯ ಅರ್ಪಣ, ಶುದ್ಧಪ್ರಸಾದ, [೭][ಲಿಂಗಾಚಾರ][೭], ಸತ್ತುವೆಂಬ ಲಕ್ಷಣ ಕರ್ಮಸಾದಾಖ್ಯ, ನಿವೃತ್ತಿಕಲೆ, ಪರವೆಂಬ ಸಂಜ್ಞೆ, [೮][ಅಧೋ ದಿಕ್ಕು][೮], ಸದ್ಯೋಜಾತ ಮುಖ, ಋಗ್ವೇದ, ಮೂರ್ತಿಬ್ರಹ್ಮ, ದೇಹದ ಕೂಟ, ಇಷ್ಟವೇ [೯][ಆಟ][೯], ಭಕ್ತಿಯೇ [೧೦][ಗುರಿ][೧೦] ಅರ್ಥವೇ ದ್ರವ್ಯ ಇಂತೀ ೩೬ ಸಕೀಲಂಗಳು ಇಷ್ಟಲಿಂಗದ ವೃತ್ತ ಸಂಬಂಧವು.

ಅಪ್ಪುವೆಂಬ ಭೂತ, ಜ್ಞಾನಶಕ್ತಿ, ಅಪಾನವಾಯು, ಸ್ವಪ್ನಾವಸ್ಥೆ, ವಿಷ್ಣು ವಧಿದೇವತೆ, [೧೧][ವರ್ತುಳ][೧೧] ಸ್ಥಾನ, ಮಹೇಶ್ವರನೇ ಅಂಗ, ಸ್ವಾಧಿಷ್ಠಾನಚಕ್ರ, ಆರುದಳ, ಶ್ವೇತವರ್ಣ, ಬಭಮಯರಲ ಎಂಬ [ಆರು] ಅಕ್ಷರ, ದಂಡಕಾಕೃತಿ, ಮಕಾರ ಪ್ರಣಮದ ಪೀಠ, ಗುರುಲಿಂಗ, [೧೨][ನೀಲ][೧೨] ವರ್ಣದ ಪ್ರಭೆ, [೧೩][ಉ][೧೩]ಕಾರ ಮಂತ್ರ, ಜಿಹ್ವೆಯೆಂಬ ಮುಖ, ಸುಬುದ್ಧಿ ಎಂಬ ಹಸ್ತ, ನೈಷ್ಠೆ ಎಂಬ ಭಕ್ತಿ ರಸವೆಂಬ ಪದಾರ್ಥ, ಹ್ರೀಂಕಾರ ಪ್ರಸಾದಮಂತ್ರ, ಪಾನ್ಯವೇ ಅರ್ಪಣ, ಶುದ್ಧ ಗುರುಪ್ರಸಾದ, [೧೪][ಸದಾ][೧೪]ಚಾರ ಚಿತ್ತೆಂಬ ಲಕ್ಷಣ, ಕರ್ತೃಸಾದಾಖ್ಯ ಪ್ರತಿಷ್ಠಾಕಲೆ,

೧–೧ ಚಿನ್ನಾದದಲ್ಲಿ(ಮೂ) ೨–೨ ಚಿನ್ನಾದವೇ (ಮೂ) ೩–೩ ಚಿನ್ನಾದವೇ ಚಿದ್ಬಿಂದುವಿನಲ್ಲಿ (ಮೂ) ೪–೪ ಚಿದ್ಬಿಂದುವೇ (ಮೂ) * **ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೮.** ೫–೫ ಪೀತ (ಮೂ) ೬–೬ ಬ (ಮೂ) ೭–೭ ಸದಾಚಾರ (ಮು) ೮–೮ ಪಶ್ಚಿಮದಿಕ್ಕು (ಮು) ೯–೯ ಮಾಟ (ಮೂ) ೧೦–೧೦ ಗೊತ್ತು(ಮೂ) ೧೧–೧೧ ಕಟಿ (ಮೂ) ೧೨–೧೨ ಕಪೋತ (ಮೂ) ೧೩–೧೩ ನ (ಮೂ) ೧೪–೧೪ ಲಿಂಗಾ (ಮೂ)

ಗೂಢವೆಂಬ ಸಂಜ್ಞೆ, ಉತ್ತರದಿಕ್ಕು, ವಾಮದೇವಮುಖ ಯಜುರ್ವೇದ, ಪಿಂಡಬ್ರಹ್ಮ ಜೀವದ ಕೂಟ, ಪ್ರಾಣ[೧][ದ ಮಾಟ][೧] ಜ್ಞಾನದ [ಗುರಿ][೨] ಪ್ರಾಣವೇ ದ್ರವ್ಯ, ಇಂತೀ ೩೬ ಸಕೀಲಂಗಳು ಇಷ್ಟಲಿಂಗದ [೩][ವರ್ತುಳದಲ್ಲಿ][೩] ಸಂಬಂಧವು.

ತೇಜವೆಂಬ ಭೂತ, ಇಚ್ಛಾಶಕ್ತಿ ವ್ಯಾನವಾಯು, ಸುಷುಪ್ತಿ ಅವಸ್ಥೆ, ರುದ್ರನಧಿದೇವತೆ, [೪][ಕಟಿ][೪] ಸ್ಥಳ ; ಪ್ರಸಾದಿಯೇ ಅಂಗ, ಮಣಿಪೂರಕಚಕ್ರ, ಹತ್ತು ದಳ, ಕುಂಕುಮವರ್ಣ, ಡಢಣತಥದಧನ ಪಫ ಎಂಬ ಹತ್ತಕ್ಷರ, ಕುಂಡಲಾಕೃತಿ, ಶಿಕಾರಪ್ರಣಮದ ಪೀಠ, ಶಿವಲಿಂಗ, ಹರಿತವರ್ಣದ ಪ್ರಭೆ, [೫][ಮ][೫]ಕಾರವೇ ಮಂತ್ರ, ನೇತ್ರವೆಂಬ ಮುಖ, ನಿರಹಂಕಾರಹಸ್ತ, ಸಾವಧಾನಭಕ್ತಿ, ರೂಪು ಪದಾರ್ಥ, ಹ್ರೂಂಕಾರ ಪ್ರಸಾದಮಂತ್ರ, ಭಕ್ಷ್ಯವೇ ಅರ್ಪಣ, ಸಿದ್ಧಪ್ರಸಾದ, [೬][ಶಿವಾ][೬]ಚಾರ ಆನಂದವೆಂಬ ಲಕ್ಷಣ, ಮೂರ್ತಿಸಾದಾಖ್ಯ, ವಿದ್ಯಾಕಲೆ, ಶರೀರವೆಂಬ ಸಂಜ್ಞೆ, ದಕ್ಷಿಣ ದಿಕ್ಕು, ಅಘೋರಮುಖ, ಸಾಮವೇದ, ಕಲಾಬ್ರಹ್ಮ ಅಂಗಕೂಟ, ಸ್ಥೂಲ [೭][ಮಾಟ][೭] ವೈರಾಗ್ಯವೇ [ಗುರಿ][೮], ಅಭಿಮಾನವೇ ದ್ರವ್ಯ, ಇಂತೀ ೩೬ ಸಕೀಲಂಗಳು ಇಷ್ಟಲಿಂಗದ [೮][ಕಟಿಯಲ್ಲಿ][೮] ಸಂಬಂಧವು.

ವಾಯುವೆಂಬ ಭೂತ, ಆದಿಶಕ್ತಿ ಉದಾನವಾಯು, ತೂರ್ಯಾವಸ್ಥೆ, ಈಶ್ವರ ನಧಿದೇವತೆ, ಗೋಮುಖಸ್ಥಾನ, ಪ್ರಾಣಲಿಂಗವೇ ಅಂಗ, ಅನಾಹತಚಕ್ರ, ಹನ್ನೆರಡು ದಳ, ಹಸಿರು ವರ್ಣ, ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ಹನ್ನೆರಡಕ್ಷರ, ಅರ್ಧಚಂದ್ರಾಕೃತಿ, ವಕಾರಪ್ರಣಮದಪೀಠ, ಜಂಗಮಲಿಂಗ, [೯][ಕೇಸರಿ][೯] ವರ್ಣದ ಪ್ರಭೆ, [೯][ಬ][೯]ಕಾರ ಮಂತ್ರ, ತ್ವಕ್ಕೆಂಬ ಮುಖ, ಸುಮನವೆಂಬ ಹಸ್ತ ಆನಂದ ಭಕ್ತಿ , ಸ್ಪರ್ಶನ ಪದಾರ್ಥ, ಹ್ಯೆಂಕಾರ ಪ್ರಸಾದ ಮಂತ್ರ, ಚೋಹ್ಯವೇ ಅರ್ಪಣ, ಸಿದ್ಧಲಿಂಗ ಪ್ರಸಾದ, [೯][ಗಣಾ][೯]ಚಾರ, ನಿತ್ಯವೆಂಬ ಲಕ್ಷಣ, ಅಮೂರ್ತಿ ಸಾದಾಖ್ಯ, ಶಾಂತಿಕಲೆ, ಲಿಂಗಕ್ಷೇತ್ರವೆಂಬ ಸಂಜ್ಞೆ, [೯][ಉತ್ತರ[೯] ದಿಕ್ಕು, ತತ್ಪುರುಷ ಮುಖ, ಅಥರ್ವಣವೇದ, ಆನಂದಬ್ರಹ್ಮ ಲಿಂಗದ ಕೂಟ, ಸೂಕ್ಷ್ಮ[೯][ಮಾ][೯]ಟ, ವಿರಕ್ತಿಯೇ [೯][ಗುರಿ][೯] ಒಡೆಯ [೯][ಗುರುವೇ][೯] ದ್ರವ್ಯ, ಇಂತೀ ೩೬ ಸಕೀಲಂಗಳು ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವು.

ಆಕಾಶವೆಂಬ ಭೂತ, ಪರಾಶಕ್ತಿ ಸಮಾನವಾಯು, ತೂರ್ಯಾತೀತಾವಸ್ಥೆ, ಸದಾಶಿವನೇ ಅಧಿದೇವತೆ, ನಾಳಸ್ಥಾನ, ಶರಣನೇ ಅಂಗ, ವಿಶುದ್ಧಿಚಕ್ರ, ಹದಿನಾರು

೧–೧ ದಾಟ (ಮೂ) ೨–೨ ಗೊತ್ತು(ಮೂ) ೩–೩ ಕಟಿಯಲ್ಲಿ(ಮೂ)
೪–೪ ವರ್ತುಳ (ಮೂ) ೫–೫ ವ (ಮೂ) ೬–೬ ಭೃತ್ಯಾ (ಮೂ)
೭–೭ ದಾಟ (ಮೂ) ೮–೮ ಗೊತ್ತು(ಮೂ) ೯–೯ ವರ್ತುಳದಲ್ಲಿ(ಮೂ)
೧೦–೧೦ ಮಾಂಜಿಷ್ಠ (ಮೂ) ೧೧–೧೧ ಅ (ಮೂ) ೧೨–೧೨ ಶಿವಾ (ಮೂ)
೧೩–೧೩ ಪೂರ್ವ (ಮೂ) ೧೪–೧೪ ದಾ (ಮೂ) ೧೫–೧೫ ಗೊತ್ತು (ಮೂ)
೧೬–೧೬ ಜಂಗಮನೇ (ಮೂ)

ದಳ, [೧][ಕಪೋತ][೧] ವರ್ಣ, ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ಹದಿನಾರು ಅಕ್ಷರಂಗಳು, ದರ್ಪಣಾಕೃತಿ, ಯಕಾರ ಪ್ರಣಮದ ಪೀಠ, ಪ್ರಸಾದಲಿಂಗ, ಶುಕ್ತಿವರ್ಣದ ಪ್ರಭೆ, [೨][ಸ][೨]ಕಾರ ಮಂತ್ರ, ಶ್ರೋತ್ರವೆಂಬ ಮುಖ, ಸುಜ್ಞಾನವೆಂಬ ಹಸ್ತ ಅನುಭಾವಭಕ್ತಿ ಶಬ್ದಪದಾರ್ಥ, ಹ್ರೌಂಕಾರ ಪ್ರಸಾದ ಮಂತ್ರ, ಲೇಹ್ಯವೇ ಅರ್ಪಣ, ಪ್ರಸಿದ್ಧ ಪ್ರಸಾದ, [೩][ಭೃತ್ಯಾ][೩]ಚಾರ ಪರಿಪೂರ್ಣವೆಂಬ ಲಕ್ಷಣ, ಶಿವಸಾದಾಖ್ಯ, ಶಾಂತ್ಯಾತೀತ ಕಲೆ, ಅನಾದಿ ಎಂಬ ಸಂಜ್ಞೆ, [೪][ಪಶ್ಚಿಮ][೪] ದಿಕ್ಕು, ~~ಈಶಾನ~~ಮುಖ, [೫][ಅಜಪ][೫] ವೇದ, ವಿಜ್ಞಾನ ಬ್ರಹ್ಮ ಸಂಗದ ಕೂಟ, ಕಾರಣ[೫][ಮಾ][೫]ಟ, ಮುಕ್ತಿಯೇ [೫][ಗುರಿ][೫], ಕರ್ತೃಲಿಂಗವೇ ದ್ರವ್ಯ, ಇಂತೀ ೩೬ ಸಕೀಲವು ಇಷ್ಟಲಿಂಗದ ನಾಳದಲ್ಲಿ ಸಂಬಂಧವು.

ಆತ್ಮನೆಂಬಭೂತ, ಚಿತ್‌ಶಕ್ತಿ ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ವೆಂಬ ವಾಯು, ನಿರವಯಾವಸ್ಥೆ, ಗುರುವೇ ಅಧಿದೇವತೆ, [೬][ಗೋಲ][೬] ಸ್ಥಾನ, ಐಕ್ಯನೇ ಅಂಗ, ಆಜ್ಞಾಚಕ್ರ, ಎರಡು ದಳ, [೭][ಮಾಣಿಕ್ಯ][೭]ವರ್ಣ ಹಂ ಕ್ಷಂ ಎಂಬ ಎರಡು ಅಕ್ಷರಂಗಳು, ಜ್ಯೋತಿರಾಕೃತಿ, ಓಂಕಾರ ಪ್ರಣಮ ಪೀಠ, ಮಹಾಲಿಂಗ [೮][ಶ್ವೇತ][೮]ಪ್ರಭೆ [೮][ವ][೮]ಕಾರ ಮಂತ್ರ, ಹೃದಯಮುಖ, ಸದ್ಭಾವಹಸ್ತ ಸಮರಸ ಭಕ್ತಿ ಪರಿಣಾಮ ಪದಾರ್ಥ, ಹಃಕಾರ ಪ್ರಸಾದ ಮಂತ್ರ, ತೃಪ್ತಿ ಅರ್ಪಣ, ಪ್ರಸಿದ್ಧ ಜಂಗಮಪ್ರಸಾದ, ಅಖಂಡವೆಂಬ ಲಕ್ಷಣ, ಮಹಾಸಾದಾಖ್ಯ, ಶಾಂತ್ಯಾತೀತೋತ್ತರ ವೆಂಬ ಕಲೆ [೮][ಮಹಾಯೆಂಬ][೮] ಸಂಜ್ಞೆ, [೮][ಊರ್ಧ್ವ][೮] ದಿಕ್ಕು [೮][ಹೃದಯ][೮] ಮುಖ [೮][ನಿರ್ಘೋಷ][೮] ವೇದ, ಪರಬ್ರಹ್ಮ ಸಮರಸಕೂಟ, ಭಾವ [೮][ದಮಾಟ][೮], ದೃಢದ [೮][ಗುರಿ][೮] [೮][ಜಂಗಮನೇ][೮] ದ್ರವ್ಯ, ಇಂತೀ ೩೬ ಸಕೀಲಂಗಳು ಇಷ್ಟಲಿಂಗದ [೯][ಗೋಲ][೯]ಸಂಬಂಧವು.

ಇಂತೀ ಇನ್ನೂರು ಹದಿನಾರು ಸಕೀಲಂಗಳನೊಳಕೊಂಡು ಪರಮಗುರು ಜೀವ ಷಣ್ಮುಖಲಿಂಗವ ಕರ ಮನ ಭಾವದೊಳಗೆ ಕುಳ್ಳಿರಿಸಿ,ಪೂಜಿಸಿ ಅರ್ಚಿಸಿ ಧ್ಯಾನಿಸಿ, ಕೂಡಿ, ಎರಡಳಿದ ಪರಮ ಶರಣರ ಶ್ರೀಪಾದ ಕಮಲದಲ್ಲಿ ಸದಮಲ ತುಂಬಿಯಾಗಿ ಇರಿಸು ಎನ್ನ ಗುರುವಿನ ಗುರು ಷಣ್ಮುಖೇಶ್ವರಾ.*

೧–೧ ಕಪ್ಪು (ಮೂ) ೨–೨ ಉ (ಮೂ) ೩–೩ ಗಣಾ (ಮೂ)
೪–೪ ಊರ್ಧ್ವ (ಮೂ) ೫–೫ ಗಾಯತ್ರಿ (ಮೂ) ೬–೬ ದಾ (ಮೂ)
೭–೭ ಗೊತ್ತು(ಮೂ) ೮–೮ ಪೀಠ (ಮೂ) ೯–೯ ಕೆಂಪು (ಮೂ)
೧೦–೧೦ ರತ್ನ (ಮೂ) ೧೧–೧೧ ಮ (ಮೂ) ೧೨–೧೨ ದೇವಯೆಂಬ (ಮೂ)
೧೩–೧೩ ಪಾತಾಳ (ಮೂ) ೧೪–೧೪ ಗೋಪ್ಯ (ಮೂ) ೧೫–೧೫ ಅಜಪ (ಮೂ)
೧೬–೧೬ ದಾಟ (ಮೂ) ೧೭–೧೭ ಗೊತ್ತು(ಮೂ) ೧೮–೧೮ ಗುರುವರ್ಯನೇ (ಮೂ)
೧೯–೧೯ ಪೀಠ (ಮೂ)

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೨೯

ಭಾಗ : ನಾಲ್ಕು

ಷಟ್‌ಸ್ಥಲ

ಷಟ್‌ಸ್ಥಲ

ಜಗತ್ತಿನ ಸೃಷ್ಟಿಯ ಕಾಲದಲ್ಲಿ ಯಾವ ಯಾವ ಶಕ್ತಿಗಳು ಉದ್ಭವಿಸುತ್ತವೆ ಮತ್ತು ಅವುಗಳ ಮೂಲಕ ಅವಕ್ಕೆ ಯಾವ ಯಾವ ಸ್ವರೂಪುಗಳು ಪ್ರಾಪ್ತವಾಗುತ್ತಹೋಗುತ್ತವೆ ಎಂಬುದು ಆರಂಭದ ಪ್ರಕರಣದಲ್ಲಿ ಹೇಳಲ್ಪಟ್ಟಿತು. ಮುಂದೆ ಕರಣಹಸಿಗೆಯ ಪ್ರಕರಣದಲ್ಲಿ ಆ ಶಕ್ತಿಗಳು, ಮನುಷ್ಯನ ದೇಹದಲ್ಲಿ ಹೇಗೆ ವ್ಯವಹರಿಸುತ್ತವೆ ಎಂಬುದು ಹೇಳಲ್ಪಟ್ಟಿತು. ಈ ಎಲ್ಲ ವಿವರಣೆಗಳ ಮೇಲಿಂದ ಜಗತ್ತಿನಲ್ಲಿ [೧][ವ್ಯವಹಾರಗಳು][೧] ಹೇಗೆ ನಡೆಯುತ್ತವೆ ಮತ್ತು ಮನುಷ್ಯನಲ್ಲಿ ಅವು ಹೇಗೆ ವ್ಯವಹರಿಸುತ್ತವೆ ಎಂಬುದರ ತಿಳಿವಳಿಕೆಯಾಗುವದು.

ಮುಂದೆ ಈ ಕ್ರಿಯೆಗಳು ಅವುಗಳ ಉದ್ದೇಶ ಮತ್ತು ಪರಸ್ಪರ ಸಂಬಂಧಕ್ಕನುಸಾರವಾಗಿ ಅನೇಕ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಇವುಗಳಲ್ಲಿ ಮಾರ್ಗಕ್ರಿಯೆ ಮತ್ತು ಮೀರಿದಕ್ರಿಯೆ ಎಂಬ ಮುಖ್ಯ ವಿಭಾಗಗಳು ಕಲ್ಪಿಸಲ್ಪಟ್ಟಿವೆ. ಈ ಕ್ರಿಯೆಗಳು ಮುಂದೆ ಉತ್ಕ್ರಾಂತಿಯನ್ನು ಹೊಂದುತ್ತ ಹೋದ ಹಾಗೆ ಅವುಗಳಲ್ಲಿ ಬದಲಾವಣೆಗಳೂ ಆಗುತ್ತವೆ. ಈ ಬದಲಾವಣೆಗಳನ್ನು ಈ ಭಾಗದಲ್ಲಿಯೇ ವಿವರಿಸಲ್ಪಟ್ಟಿದೆ. ಈ ಕ್ರಿಯೆಗಳು ಒಟ್ಟು ೨೧೬ ಇದ್ದು ಅವುಗಳಿಗೆ ಸಕೀಲಗಳೆಂಬ ಇನ್ನೊಂದು ಹೆಸರೂ ಇರುತ್ತದೆ.

ಈ ಎಲ್ಲ ವಿಷಯಗಳ ಜ್ಞಾನದಿಂದ ಷಟ್‌ಸ್ಥಲಗಳ ಮರ್ಮವನ್ನು ಅರಿಯಬೇಕು. ಈ ಷಟ್‌ಸ್ಥಲ ವಿಷಯಕ್ಕೆ ವೀರಶೈವ ಮತಗ್ರಂಥಗಳಲ್ಲಿ ಬಹು ಮಹತ್ವದ ಸ್ಥಾನವು ಕೊಡಲ್ಪಟ್ಟಿರುತ್ತದೆ. ಇದರ ನಿರೂಪಣೆಯಲ್ಲಿ ಕೆಳಗೆ ಕಾಣಿಸಿದಂತೆ ವಿಭಾಗಗಳು ಮಾಡಲ್ಪಡುತ್ತವೆ.

೧–೧ ವ್ಯಾಪಾರಗಳು (ಮೂ)

ಶಿವಪರತತ್ವವು ಮೊದಲಿಗೆ ಒಂದೆಯಾಗಿರುತ್ತದೆ. ಅದರಲ್ಲಿ ಮುಂದೆ ಅಂಗ ಲಿಂಗಗಳೆಂಬ ಎರಡು ವಿಭಾಗಗಳಾಗುವವು. ಜಗತ್ತಿನಲ್ಲಿರುವ ಪ್ರತಿಯೊಂದು ಪದಾರ್ಥದಲ್ಲಿ ಅಂಗ ಮತ್ತು ಚೈತನ್ಯ ಎಂಬ ಎರಡು ಯಾವಾಗಲೂ ಇದ್ದೇ ಇರುತ್ತವೆ. ಈ ಚೈತನ್ಯಕ್ಕೆ ಶಕ್ತಿ ಎಂಬ ಹೆಸರೂ ಇರುತ್ತದೆ. ಈ ಶಕ್ತಿಯು ಸರಿಯಾದ ಮಾರ್ಗದಿಂದ ಹೋದದ್ದಾದರೆ ಅದು ಲಿಂಗವೆಂದು ಹೇಳಿಸಿಕೊಳ್ಳಲ್ಪಡುವದು. ಅಂಗ ಲಿಂಗಗಳ ವಿವರಣೆಯು ಮೊದಲಿಗೆ ಬರುತ್ತದೆ.

ಮನುಷ್ಯನ ಶರೀರದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿರುತ್ತವೆ. ಅವುಗಳ ಮೂಲಕವಾಗಿಯೇ ಮನುಷ್ಯನು ಕಾರ್ಯಗಳನ್ನು ಮಾಡಲು ಶಕ್ತನಾಗುವನು. ಈ ಮೂರು ಶರೀರಗಳ ನಿರೂಪಣೆಯು ಹಿಂದಿನ ಪ್ರಕರಣಗಳಲ್ಲಿ ಅನೇಕ ಕಡೆಗೆ ಬಂದಿರುತ್ತದೆ. ಈ ಶರೀರಗಳಿಗೆ ಅನುಸರಿಸಿಯೇ ಅಂಗದಲ್ಲಿ ತ್ಯಾಗಾಂಗ, ಭೋಗಾಂಗ, ಯೋಗಾಂಗವೆಂತಲೂ, ಲಿಂಗದಲ್ಲಿ ಇಷ್ಟ, ಪ್ರಾಣ, ಭಾವಗಳೆಂತಲೂ ಮೂರು ವಿಭಾಗಗಳಾಗುತ್ತವೆ. ಇವುಗಳ ವರ್ಣನೆಯು ಈ ಷಟ್‌ಸ್ಥಲ ವಿವೇಚನೆಯಲ್ಲಿ ಬರುತ್ತದೆ.

ಮುಂದೆ ಈ ಮೂರು ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಪುನಃ ಎರಡೆರಡು ವಿಭಾಗಗಳಾಗಿ ಒಟ್ಟಿಗೆ ಆರು ವಿಭಾಗಗಳಾಗುತ್ತವೆ. ಇವುಗಳಿಗೆ ಷಟ್‌ಸ್ಥಲವೆಂಬ ಹೆಸರು ಇರುತ್ತದೆ. ಮನುಷ್ಯನ ಎಲ್ಲ [೧][ವ್ಯವಹಾರಗಳು][೧] ಈ ಷಟ್‌ಸ್ಥಲಕ್ಕೆ ಸಂಬಂಧಪಡುತ್ತವೆ. ಈ [೨][ವ್ಯವಹಾರ][೨]ಗಳ ಉತ್ಕೃಷ್ಟತೆಯ ಮೇಲೆಯೇ ಮನುಷ್ಯನ ಉತ್ಕ್ರಾಂತಿಯು ಅವಲಂಬಿಸಿರುತ್ತದೆ. ಇವು ಅತ್ಯಂತ ಮಹತ್ವದವಿರುವುದರಿಂದ ಈ ಶಾಸ್ತ್ರಕ್ಕೆ 'ಷಟ್‌ಸ್ಥಲಸಿದ್ಧಾಂತ' ಅಥವಾ 'ಷಟ್‌ಸ್ಥಲಶಾಸ್ತ್ರ'ವೆಂಬ ಹೆಸರು ಪ್ರಾಪ್ತವಾಗಿರುತ್ತದೆ.

ಆದರೆ ನಾವು ಮೇಲೆ ವಿವರಿಸಿದ ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳು ಪೂರ್ಣ ಸ್ವತಂತ್ರವಾಗಿ ವ್ಯವಹರಿಸುವದಿಲ್ಲ. ಅವುಗಳ ಕಾರ್ಯಗಳು ಪರಸ್ಪರಾವಲಂಬಿಗಳಾಗಿವೆ. ಉದಾ: ಸ್ಥೂಲ ಶರೀರದಲ್ಲಿ ಸೂಕ್ಷ್ಮ ಕಾರಣ ಶರೀರಗಳೂ, ಸೂಕ್ಷ್ಮ ಶರೀರದಲ್ಲಿ ಸ್ಥೂಲ, ಕಾರಣ ಶರೀರಗಳೂ, ಕಾರಣ ಶರೀರದಲ್ಲಿ ಸ್ಥೂಲ, ಸೂಕ್ಷ್ಮ ಶರೀರಗಳೂ ಅಡಗಿಕೊಂಡಿರುತ್ತವೆ.

ಈ ಕಾರಣಕ್ಕೋಸ್ಕರ ಆರು ಸ್ಥಲಗಳಲ್ಲಿಯ ಆಚರಣೆಗಳು ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳ ದೃಷ್ಟಿಯಿಂದ ೧೮ ಸ್ಥಲಗಳಾಗಿ ವರ್ಣಿಸಲ್ಪಡುತ್ತವೆ. ಇವುಗಳ ಆಚರಣೆಯಿಂದ ಷಟ್‌ಸ್ಥಲಗಳು ದೃಢಪಡುತ್ತವೆ.

ಮುಂದೆ ಈ ಷಟ್‌ಸ್ಥಲಗಳ ಪ್ರತಿಯೊಂದು ಸ್ಥಲದಲ್ಲಿ ಪುನಃ ಆರು ವಿಧಗಳಾಗಿ ಒಟ್ಟು ೩೬ ಸ್ಥಲಗಳಾಗುತ್ತವೆ. ಇವುಗಳ ತಿಳಿವಳಿಕೆಯು ಮನುಷ್ಯನ ಪೂರ್ಣಾವಸ್ಥೆಗೆ ಕಾರಣವಾಗುತ್ತದೆ.

೧-೧ ವ್ಯಾಪಾರಗಳು (ಮೂ) ೨-೨ ವ್ಯಾಪಾರ (ಮೂ)

ಈ ಎಲ್ಲ ಸ್ಥಲಗಳ ಜ್ಞಾನವನ್ನು ಮಾಡಿಕೊಂಡು, ಆಯಾಸ್ಥಲಗಳಿಗನುಸಾರವಾಗಿ ಆಚರಿಸಿದಲ್ಲಿ, ಮನುಷ್ಯನಲ್ಲಿ ಪೂರ್ಣ ವಿಕಾಸವು ಪ್ರಾಪ್ತವಾಗುತ್ತದೆ.

ಈ ಪ್ರಕಾರ ಮನುಷ್ಯನು ೧ ರಿಂದ ೩೬ ಸ್ಥಲಗಳವರೆಗೆ, ತನ್ನ ಕ್ರಿಯೆಗಳಲ್ಲಿ ಹೆಚ್ಚಿನ ತರಗತಿಗಳನ್ನು ಹೊಂದುತ್ತ ಹೋಗುವನು. ಇದು ಪ್ರವೃತ್ತಿ ಎಂದು ವಚನಕಾರರು ಹೇಳುವದುಂಟು.

ಈ ಪ್ರಕಾರ ಪೂರ್ಣಸ್ಥಿತಿಯನ್ನು ಮನುಷ್ಯನು ಹೊಂದಿದ ಬಳಿಕ ಅವನು ನಿವೃತ್ತಿಯನ್ನು ಹೊಂದಲು ಅರ್ಹನಾಗುತ್ತಾನೆ.

ಆಗ ಅವನ ೩೬ ಸ್ಥಲಗಳು ೬ ಸ್ಥಲಗಳಲ್ಲಿ ಅಡಗುತ್ತವೆ. ಈ ೬ ಸ್ಥಲಗಳು ೩ ಸ್ಥಲಗಳಲ್ಲಿ, ೩ ಸ್ಥಲಗಳು ೨ ಸ್ಥಲಗಳಲ್ಲಿ ಮತ್ತು ಈ ಎರಡು ಸ್ಥಲಗಳು ೧ ಸ್ಥಲದಲ್ಲಿ, ಪೂರ್ಣವಾಗಿ ಅಡಗಿಹೋಗುತ್ತವೆ. ಈ ಕಡೆಯ ಸ್ಥಿತಿಯೇ ಲಿಂಗಾಂಗಸಾಮರಸ್ಯವು. ಈ ಪ್ರಕಾರ ಈ ಷಟ್‌ಸ್ಥಲ ಪ್ರಕರಣದಲ್ಲಿ ಪ್ರವೃತ್ತಿ ಮತ್ತು ನಿವೃತ್ತಿ ಎಂದು ಮುಖ್ಯ ವಿಭಾಗಗಳು ಮಾಡಲ್ಪಟ್ಟಿವೆ. ಪ್ರವೃತ್ತಿ ಎಂಬ ಭಾಗದಲ್ಲಿ ೧ ರಿಂದ ೩೬ ವರೆಗೆ ಇರುವ ಸ್ಥಲಗಳು ಕ್ರಮವಾಗಿ ವಿವೇಚಿಸಲ್ಪಡುವವು. ಮತ್ತು ನಿವೃತ್ತಿ ಭಾಗದಲ್ಲಿ ಸ್ಥಲಗಳ ಪರಸ್ಪರ ಅಡಗುವಿಕೆಯು ಹೇಳಲ್ಪಡುವದು.

ಪ್ರವೃತ್ತಿ

ಷಟ್‌ಸ್ಥಲ ಮಾರ್ಗದ ಸಾಮಾನ್ಯ ವಿವೇಚನೆ

೧೧೧

(೧) ಅಖಂಡ ಗೋ[ಳಾ][೧]ಕಾರ ಸಹಜ ನಿರಂಜನವಸ್ತು ಲಿಂಗವೆನಿಸಿ ನಿಂದಲ್ಲಿ ಒಂದಾಯಿತ್ತು, ಒಂದಾದಲ್ಲಿ ಉಭಯವಾಯಿತ್ತು, ಕ್ರಿಯೆಯಲ್ಲಿ ಮೂರಾಯಿತ್ತು. ಆಚಾರದಲ್ಲಿ ಆರಾಯಿತ್ತು, ಆನಂದದಲ್ಲಿ ೩೬ ಆಯಿತು. ಅಖಂಡಲಿಂಗದಿಂದ ಚಿದ್ರೂಪವಾದ ಪರಿಯನು, ಶಿಷ್ಯಂಗೆ ಗುರು ನಿರೂಪಿಸಿದ ಕಾರಣ ಜಂಗಮಲಿಂಗ ಪ್ರಭುವೆ.

೧೧೨

(೨) ''ಮಹಾಲಿಂಗ ಸ್ಯಯೋರ್ಲಿಂಗಂ । ತ್ರಿವಿಧಂ ಷಡ್ವಿಧಮುಖಂ । ತ್ರಿವಿಧೇಕ ಮುಖೋಲಿಂಗಂ ಮಹಾಲಿಂಗಂತು ದರ್ಶನಂ''. ಇಂತೆಂದುದಾಗಿ, ಒಂದನು ಎರಡು ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಎರಡನು ಮೂರು ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಮೂರ ಆರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಆರ ಮೂವತ್ತಾರ ಮಾಡಿಕೊಂಡ ನಯ್ಯಾ ನಮ್ಮ ಬಸವಣ್ಣನು. ಆ ಮೂವತ್ತಾರ ಆರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಆ ಆರ ಮೂರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಆ ಮೂರ ಎರಡ ಮಾಡಿಕೊಂಡನಯ್ಯಾ

೧-೧ ಳಕಾ (ಮೂ)

ನಮ್ಮ ಬಸವಣ್ಣನು. ಆ ಎರಡ ಒಂದ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಒಂದು ತಾನೇ ಆಗಿಪ್ಪನಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವಾವಧಾನಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವಸಂಗ ಪರಿತ್ಯಾಗಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವಾಂಗಲಿಂಗಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವ ನಿರ್ವಾಣಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಬಸವಣ್ಣನ ಮಹಿಮೆಯ ನೀವೇ ಬಲ್ಲಿರಿ. ಅಸಂಖ್ಯಾತ ಮಹಾಪುರುಷರು, ಪ್ರಭುದೇವರು ಮುಖ್ಯವಾದ ನಿಲವಿನ ಶ್ರೀಚರಣಕ್ಕೆ ನಾನು ಶರಣಾರ್ಥಿ ಶರಣಾರ್ಥಿ ಎಂದು ಶಬ್ದಮುಗ್ಧನಾಗಿ ಉರಿಯುಂಡ ಕರ್ಪುರದಂತೆ ನಿಮ್ಮ ಶ್ರೀ ಚರಣವ ಬೆರಸಿದೆನಯ್ಯಾ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ.

೧೧೩

(೩) ನಿಃಕಲಶಿವತತ್ವ ತಾನೊಂದೇ ತನ್ನ ಶಕ್ತಿಯ ಚಲನೆಮಾತ್ರದಿಂದ ಒಂದೆರಡಾಯಿತ್ತು ನೋಡಾ. ಅದರೊಳಗೊಂದು ಲಿಂಗಸ್ಥಲ ಮತ್ತೊಂದು ಅಂಗ ಸ್ಥಲ. ಹೀಗೆ ಅಂಗಲಿಂಗವೆಂದು ಉಪಾಸ್ಯ, ಉಪಾಸಕರೆಂದು ವರ್ತಿಸುತ್ತಿಹುದು ನೋಡಾ. ಆ ಪರಶಿವನ ಚಿತ್‌ಶಕ್ತಿಯು ತಾನೇ ಎರಡು ತೆರನಾಯಿತ್ತು, ಲಿಂಗಸ್ಥಲವನಾಶ್ರಯಿಸಿ ಶಕ್ತಿ ಎನಿಸಿತ್ತು, ಅಂಗಸ್ಥಲವನಾಶ್ರಯಿಸಿ ಭಕ್ತಿ ಎನಿಸಿತ್ತು, ಶಕ್ತಿಯೇ ಪ್ರವೃತ್ತಿ ಎನಿಸಿತ್ತು, ಭಕ್ತಿಯೇ ನಿವೃತ್ತಿ ಎನಿಸಿತ್ತು, ಶಕ್ತಿ-ಭಕ್ತಿ ಎಂದು ಎರಡು ತೆರನಾಯಿತ್ತು, ಲಿಂಗ ಆರು ತೆರನಾಯಿತ್ತು, ಅಂಗ ಆರು ತೆರನಾಯಿತ್ತು, ಅದು ಹೇಗೆಂದೊಡೆ : ಮೊದಲಲ್ಲಿ ಲಿಂಗ ಮೂರುತೆರನಾಯಿತ್ತು, ಅದು ಹೇಗೆಂದೊಡೆ : ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು ಮೂರು ತೆರ ನಾಯಿತ್ತು . ಆ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವು ಒಂದೊಂದು ಲಿಂಗ ಎರಡೆರಡಾಗಿ ಆರು ತೆರನಾಯಿತ್ತು, ಅದು ಹೇಗೆಂದೊಡೆ :

ಭಾವಲಿಂಗವು, ಮಹಾಲಿಂಗವೆಂದು ಪ್ರಸಾದಲಿಂಗವೆಂದು ಎರಡು ತೆರ ನಾಯಿತ್ತು . ಪ್ರಾಣಲಿಂಗವು, ಜಂಗಮಲಿಂಗವೆಂದು ಶಿವಲಿಂಗವೆಂದು ಎರಡು ತೆರನಾಯಿತ್ತು . ಇಷ್ಟಲಿಂಗವು, ಗುರುಲಿಂಗವೆಂದು ಆಚಾರಲಿಂಗವೆಂದು ಎರಡು ತೆರನಾಗಿತ್ತು ಹೀಗೆ ಒಬ್ಬ (ಪರ)ಶಿವನು ಆರು ತೆರನಾದನು. ಶಾಂತ್ಯಾತೀ ತೋತ್ತರವೆಂಬ ಕಲಾ ಪರಿಯಾಯವನುಳ್ಳ ಚಿತ್‌ಶಕ್ತಿ, ಶಾಂತ್ಯಾತೀತವೆಂಬ ಕಲಾ ಪರಿಯಾಯವನುಳ್ಳ [೧]ಪರಾಶಕ್ತಿ[೧], ಶಾಂತಿಯೆಂಬ ಕಲಾಪರಿ ಯಾಯವನುಳ್ಳ [೨]ಆದಿಶಕ್ತಿ[೨], ವಿದ್ಯಾಕಲಾಪರಿಯಾಯವನುಳ್ಳ [೪]ಇಚ್ಛಾಶಕ್ತಿ[೪], ಪ್ರತಿಷ್ಠಾ ಕಲಾಪರಿ ಯಾಯವನುಳ್ಳ [೩]ಜ್ಞಾನಶಕ್ತಿ[೩], ನಿವೃತ್ತಿ ಕಲಾಪರಿಯಾಯವನುಳ್ಳ ಕ್ರಿಯಾಶಕ್ತಿ ಈ

೧-೧ ಆದಿಶಕ್ತಿ(ಮೂ) ೨-೨ ಪರಾಶಕ್ತಿ (ಮೂ)
೩-೩ ಜ್ಞಾನಶಕ್ತಿ(ಮೂ) ೪-೪ ಇಚ್ಛಾಶಕ್ತಿ (ಮೂ)

ಒಂದೇ ಶಕ್ತಿ ಆರುತೆರನಾಗಿ ಷಟ್ ಪ್ರಕಾರವಾದಂತಹ ಲಿಂಗಕ್ಕೆ ಅಂಗರೂಪಾಯಿತ್ತು, ಇದು ಲಿಂಗಷಟ್‌ಸ್ಥಲ.

ಇನ್ನು ಒಂದಂಗ ಮೂರು ತೆರನಾಯಿತ್ತು ಅದು ಹೇಗೆಂದೊಡೆ : ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ಪ್ರಕಾರವಾಯಿತ್ತು, ಈ ತ್ರ್ಯಂಗವೇ ಒಂದೊಂದು ಎರಡೆರಡಾಗಿ ಆರು ತೆರನಾಯಿತ್ತು, ಅದು ಹೇಗೆಂದೊಡೆ : ಯೋಗಾಂಗವೇ-ಐಕ್ಯನೆಂದು ಶರಣನೆಂದು ಎರಡು ತೆರನಾಯಿತ್ತು, ಭೋಗಾಂಗವೇ-ಪ್ರಾಣಲಿಂಗಿ ಪ್ರಸಾದಿಯೆಂದು ಎರಡು ತೆರನಾಯಿತ್ತು, ತ್ಯಾಗಾಂಗವೇ-ಮಹೇಶ್ವರನೆಂದು ಭಕ್ತನೆಂದು ಎರಡು ತೆರನಾಯಿತ್ತು. ಹೀಗೆ ಒಬ್ಬ ಶರಣನು ಆರುತೆರನಾದನು. ಸಮರಸ ಭಕ್ತಿ ಆನಂದ ಭಕ್ತಿ , ಅನುಭಾವ ಭಕ್ತಿ ಅವಧಾನಭಕ್ತಿ ನೈಷ್ಠಿಕಾಭಕ್ತಿ ಸದ್ಭಕ್ತಿ ಎಂದು ಮಹಾಘನ ಅನುಪಮಭಕ್ತಿ ತಾನೇ ಆರುತೆರನಾಗಿ ಷಟ್‌ಪ್ರಕಾರವಾದ ಶರಣಂಗೆ ಅಂಗರೂಪಾಯಿತ್ತು, ಇದು ಅಂಗ ಷಟ್‌ಸ್ಥಲ.

ಇನ್ನು ಕ್ರಿಯಾಶಕ್ತಿಯಿಂದ ನಿವೃತ್ತಿಕಲೆಯ ಸಂಕಲ್ಪಮಾತ್ರದಿಂದ ಮಾಯಾಶಕ್ತಿ ಹುಟ್ಟಿತ್ತು, ಆ ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಉತ್ಪತ್ತಿ . ಅಂಗವೆಂದೊಡೆ ಶರಣ. ಲಿಂಗವೆಂದೊಡೆ ಶಿವಶರಣಂಗೆ ಆ ಲಿಂಗವು ಆವಾಗಲೂ ಪ್ರಾಣವು. ಆ ಲಿಂಗಕ್ಕೆ ಆ ಶರಣನಾವಾಗಲೂ ಅಂಗವು. ಈ ಶರಣ ಲಿಂಗವೆರಡಕ್ಕೂ ಬೀಜವೃಕ್ಷದ ನ್ಯಾಯದಂತೆ ಭಿನ್ನವಿಲ್ಲ, ಇದು ಶರಣ ಅನಾದಿಯಿಂದಾದವು. ಶರಣನೆಂದರೆ ಲಿಂಗ, ಲಿಂಗವೆಂದರೆ ಶರಣ. ಇವೆರಡಕ್ಕೂ ಭೇದವಿಲ್ಲವೆಂಬುದನ್ನು ಸ್ವಾನುಭಾವವಿವೇಕ ದಿಂದ ಅರಿದುದು ಅರುಹಲ್ಲದೇ ಆಗಮಯುಕ್ತಿಯಿಂದ ಅರಿದುದು ಅರುಹಲ್ಲ, ಅದೇನು ಕಾರಣವೆಂದಡೆ, ಶಾಸ್ತ್ರಜ್ಞಾನದಿಂದ ಸಂಕಲ್ಪ ಹಿಂಗದಾಗಿ, ಈ ಷಟ್‌ಸ್ಥಲ ಮಾರ್ಗವು ದ್ವೈತಾದ್ವೈತ ಪರಿವರ್ತನೆಯಲ್ಲ, ಅದೇನು ಕಾರಣವೆಂದಡೆ, ಇದು ಶಿವಾದ್ವೈತಮಾರ್ಗವಾದ ಕಾರಣ. ಈ ಲಿಂಗಾಂಗಸಂಬಂಧಸಮರಸೈಕ್ಯವ ತಿಳಿದ ಬಳಿಕ ಬೊಮ್ಮ ಪರಬೊಮ್ಮವೆಂದು ಬೇರುಂಟೇ ತಾನಲ್ಲದೆ, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ ?

ಆ ನಿರಾಕಾರ ಪರವಸ್ತುವೇ ನಿಃಕಲಲಿಂಗವಾದಲ್ಲಿ ಆ ನಿಃಕಲಲಿಂಗದಿಂದ ಜ್ಞಾನ ಚಿತ್ತು ಉದಯವಾಗಿ, ಆ ಜ್ಞಾನಚಿತ್ತುವೇ ಶರಣರೂಪಾಗಿ ನಿಃಕಲಲಿಂಗಕ್ಕಾಶ್ರಯ ವಾಗಿ, ಚಿದಂಗಸ್ವರೂಪವಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ?

ಆ ನಿಃಕಲಜ್ಞಾನಚಿತ್ತೇ, ಬಿಂದು ಚಿಚ್ಛಕ್ತಿಯಾದಲ್ಲಿ ಆ ಚಿತ್‌ಶಕ್ತಿಯ ಸಂಗದಿಂದ ನೀನು ಮಹಾಲಿಂಗವಾದಲ್ಲಿ, ಆ ಶಾಂತ್ಯಾತೀತೋತ್ತರ ಎಂಬ ಕಲೆಯಿಂದ ನಾನು ಉದಯವಾಗಿ, ಆ ಮಹಾಲಿಂಗಕ್ಕಾಶ್ರಯವಾಗಿ, ಐಕ್ಯವಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ?

ಆ ಚಿತ್‌ಶಕ್ತಿಯಿಂದ ಪರಾಶಕ್ತಿ ಉದಯವಾಗಿ, ಆ ಪರಾಶಕ್ತಿಯಸಂಗದಿಂದ ನೀನು ಪ್ರಸಾದಲಿಂಗವಾದಲ್ಲಿ, ಆ ಶಾಂತ್ಯಾತೀತ ಎಂಬ ಕಲೆಯಲ್ಲಿ ನಾನು ಉದಯವಾಗಿ, ಪ್ರಸಾದಲಿಂಗಕ್ಕಾಶ್ರಯವಾಗಿ ಶರಣನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ? ಆ ಪರಾಶಕ್ತಿಯಿಂದ ಆದಿಶಕ್ತಿ ಉದಯವಾಗಿ, ಆದಿಶಕ್ತಿಯ ಸಂಗದಿಂದ ನೀನು ಶುದ್ಧ ಸುಜ್ಞಾನವೆಂಬ ಜಂಗಮಲಿಂಗವಾದಲ್ಲಿ, ಆ ಶಾಂತಿ ಎಂಬ ಕಲೆಯಲ್ಲಿ ನಾನುದಯವಾಗಿ ಜಂಗಮಲಿಂಗಕ್ಕಾಶ್ರಯವಾಗಿ ಪ್ರಾಣಲಿಂಗಿಯಾಗಿಪ್ಪುದನು ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ? ಆದಿಶಕ್ತಿಯಿಂದ ಇಚ್ಛಾಶಕ್ತಿ ಉದಯವಾಗಿ, ಆ ಇಚ್ಛಾಶಕ್ತಿಯ ಸಂಗದಿಂದ ನೀನು ದಿವ್ಯ ಶಿವಲಿಂಗ ಆಕಾರವಾದಲ್ಲಿ ೧[ಆ]೧ವಿದ್ಯೆ ಎಂಬ ಕಲೆಯಲ್ಲಿ ನಾನುದಯವಾಗಿ, ಆ ಶಿವಲಿಂಗಕ್ಕಾಶ್ರಯವಾಗಿ, ಪರಮಪ್ರಸಾದಿಯಾಗಿರ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ?

ಆ ಇಚ್ಛಾಶಕ್ತಿಯಿಂದ ಸುಜ್ಞಾನಶಕ್ತಿ ಉದಯವಾಗಿ, ಸುಜ್ಞಾನಶಕ್ತಿಯ ಸಂಗದಿಂದ ನೀನು ಗುರುಲಿಂಗವಾದಲ್ಲಿ, ಆ ಪ್ರತಿಷ್ಠೆ ಎಂಬ ಕಲೆಯಲ್ಲಿ ನಾನುದಯವಾಗಿ, ಆ ಗುರುಲಿಂಗಕ್ಕಾಶ್ರಯವಾಗಿ ಮಹೇಶ್ವರನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ?

೧೧೪

ಆ ಸುಜ್ಞಾನಶಕ್ತಿಯಿಂದ ಕ್ರಿಯಾಶಕ್ತಿ ಉದಯವಾಗಿ, ಆ ಕ್ರಿಯಾಶಕ್ತಿಯ ಸಂಗದಿಂದ ನೀನು ಆಚಾರಲಿಂಗವಾದಲ್ಲಿ, ಅಲ್ಲಿ ನಿವೃತ್ತಿ ಎಂಬ ಕಲೆಯಲ್ಲಿ ನಾನುದಯವಾಗಿ, ಆಚಾರಲಿಂಗಕ್ಕಾಶ್ರಯನಾಗಿ, ಸದ್ಭಕ್ತನಾಗಿರ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ? ನಿನ್ನ ಸ್ವಲೀಲೆಯಿಂದ ನಾನು ರೂಪಾದಲ್ಲಿ, ನಿನ್ನ ಬೆಂಬಳಿವಿಡಿದು ನಾನು ನಾನಾ ರೂಪಾಗುತ್ತಿರ್ದೆನಯ್ಯಾ. ನೀನಾವ ರೂಪಾದೆ ನಾನು ಆ ರೂಪು ಆಗುತ್ತಿರ್ದೆನಯ್ಯಾ. ಇದು ಕಾರಣ ಅಂಗ ಶಿವಲಿಂಗವೆರಡಕ್ಕೂ ಭಿನ್ನವಿಲ್ಲೆಂಬುದನು ಸ್ವಾನುಭಾವವಿವೇಕದಿಂದರಿದುದು ಅರುಹಲ್ಲದೆ, ಆಗಮಯುಕ್ತಿಯಿಂದ ಅರಿದುದು ಅರುಹಲ್ಲ. ಅದೇನು ಕಾರಣವೆಂದಡೆ ಶ್ರುತಿಜ್ಞಾನದಿಂದ ಸಂಕಲ್ಪ ಭ್ರಾಂತು ತೊಲಗದಾಗಿ, ಷಟ್‌ಸ್ಥಲಮಾರ್ಗವನು ದ್ವೈತಾದ್ವೈತದೊಳಗೆ ಕೂಡಲಿಕ್ಕಿನುಡಿಯಲಾಗದು. ಈ ಲಿಂಗಾಂಗಸಂಬಂಧಸಮರಸೈಕ್ಯವ ತಿಳಿದ ಬಳಿಕ, ನಿತ್ಯ ನಿರಂಜನ ಪರತತ್ವವು ತಾನೇ ನೋಡಾಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.೫

(೪) ಸರ್ವಾಚಾರ ಸಂಪತ್ತಿನಾಚರಣೆಯ ಉದಯಾಧಾರ ವಿಶ್ರಾಂತಿಗೆ ಮೂಲ ಕಾರಣವಾದ ನಿಃಕಲಬ್ರಹ್ಮವು, ತಾನೊಂದೇ ತನ್ನ ಚಿಚ್ಛಕ್ತಿಯ ನೆನಹುಮಾತ್ರದಿಂದ ಅಂಗಲಿಂಗವೆಂಬುಭಯ ಸ್ವರೂಪವನು ತಳೆಯಿತು. ಆ ಅಂಗದಲ್ಲಿ ಅಖಂಡಭಕ್ತಿ ಎಂಬುದು ಪುಟ್ಟಿತು. ಆ ಅಂಗಲಿಂಗ ಭಕ್ತಿವಿಡಿದು ಆಚರಿಸುತ್ತಿದ್ದ ಹಾಗೆ ಒಂದು ಲಿಂಗವೇ ಮುಂದಕ್ಕಾಚರಣೆಯನು ಕುರಿತು ಇಷ್ಟ, ಪ್ರಾಣ, ಭಾವವೆಂದು ತ್ರಿವಿಧ

೧–೧ ಆ (ಮೂ)

ಲಿಂಗಂಗಳಾಯಿತು. ಆ ಲಿಂಗಂಗಳ ಬಳಿವಿಡದು ಒಂದಂಗವೇ ತ್ಯಾಗ, ಭೋಗ, ಯೋಗಾಂಗವೆಂಬ ತ್ರಿವಿಧಾಂಗಂಗಳಾಯಿತು. ಆ ಅಂಗಂಗಳ ಬಳಿವಿಡಿದು ಅಖಂಡ ಭಕ್ತಿ ಎಂಬುದು ತಾನೊಂದೇ ಕ್ರಿಯಾಭಕ್ತಿ ಜ್ಞಾನಭಕ್ತಿ, ಮಹಾಜ್ಞಾನಭಕ್ತಿಯೆಂದು ಮೂರು ತೆರನಾಯಿತು. ಹೀಗೆ ಒಂದಂಗಲಿಂಗಭಕ್ತಿಗಳೇ ತ್ರಿವಿಧಾಂಗಲಿಂಗ ಭಕ್ತಿಗಳಾದವು. ಅದು ಕಾರಣವಾಗಿ ಆ ತ್ರಿವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧ ಭಕ್ತಿವಿಡಿದು ಆಚರಿಸುತ್ತಿರ್ದ ಹಾಗೆ, ಆ ತ್ರಿವಿಧ ಲಿಂಗಾಂಗಗಳೇ ಮುಂದಕ್ಕಾಚರಣೆಯನು ಕುರಿತು ಷಡ್ವಿಧ ಲಿಂಗಂಗಳಾದವು. ಅದು ಹೇಗೆಂದೊಡೆ : ಭಾವಲಿಂಗವೆಂಬುದು, ತಾನೊಂದೇ ಮಹಾಲಿಂಗ, ಪ್ರಸಾದಲಿಂಗವೆಂದೆರಡು ತೆರನಾಯಿತು. ಪ್ರಾಣಲಿಂಗವೆಂಬುದು, ತಾನೊಂದೇ ಜಂಗಮಲಿಂಗ, ಶಿವಲಿಂಗವೆಂದುಭಯ ಭೇದವಾಯಿತು. ಇಷ್ಟಲಿಂಗವೆಂಬುದು, ತಾನೊಂದೇ ಗುರುಲಿಂಗ, ಆಚಾರಲಿಂಗವೆಂದು ದ್ವಿವಿಧ ಪ್ರಕಾರವಾಯಿತು. ಆ ಲಿಂಗಂಗಳ ಬಳಿವಿಡಿದು ತ್ರಿವಿಧ ಅಂಗಂಗಳೇ ಷಡ್ವಿಧ ಅಂಗಗಳಾದವು. ಅದು ಹೇಗೆಂದೊಡೆ : ಯೋಗಾಂಗವೆಂಬುದು ತಾನೊಂದೇ ಐಕ್ಯ, ಶರಣನೆಂದೆರಡು ತೆರನಾಯಿತು. ಭೋಗಾಂಗವೆಂಬುದು ತಾನೊಂದೇ ಪ್ರಾಣಲಿಂಗಿ, ಪ್ರಸಾದವೆಂದುಭಯ ಭೇದವಾಯಿತು. ತ್ಯಾಗಾಂಗವೆಂಬುದು ತಾನೊಂದೇ, ಮಹೇಶ್ವರ ಭಕ್ತನೆಂದು ದ್ವಿವಿಧ ಭೇದವಾಯಿತು. ಆ ಅಂಗಂಗಳ ಬಳಿವಿಡಿದು ತ್ರಿವಿಧ ಭಕ್ತಿಗಳೇ ಷಡ್ವಿಧಭಕ್ತಿಗಳಾದವು. ಅದು ಹೇಗೆಂದೊಡೆ : ಮಹಾಜ್ಞಾನಭಕ್ತಿ ಎಂಬುದು ತಾನೊಂದೇ, ಸಮರಸಭಕ್ತಿ ಆನಂದಭಕ್ತಿ ಎಂದೆರಡು ತೆರನಾಯಿತು. ಜ್ಞಾನಭಕ್ತಿ ಎಂಬುದು ತಾನೊಂದೇ, ಅನುಭಾವಭಕ್ತಿ ಸಾವಧಾನಭಕ್ತಿ ಎಂದು ಉಭಯ ಭೇದವಾಯಿತು. ಕ್ರಿಯಾಭಕ್ತಿ ಎಂಬುದು ತಾನೊಂದೇ, ನೈಷ್ಠಿಕಾಭಕ್ತಿ ಶ್ರದ್ಧಾ ಭಕ್ತಿ ಎಂಬ ದ್ವಿವಿಧ ಭೇದವಾಯಿತು. ಹೀಗೆ ತ್ರಿವಿಧಭಕ್ತಿಗಳೇ ಷಡ್ವಿಧಭಕ್ತಿಗಳಾದವು. ಈ ರೀತಿಯಲ್ಲಿ ಷಡ್ವಿಧಾಂಗ ಲಿಂಗಭಕ್ತಿಗಳುತ್ಪತ್ತಿಯಾದವು. ಅದು ಕಾರಣಮಾಗಿ ಷಟ್‌ಸ್ಥಳವೆಂದಡೆ ಷಡ್ವಿಧಾಂಗ, ಪರಬ್ರಹ್ಮವೆಂದಡೆ ಷಡ್ವಿಧಲಿಂಗ, ಒಡಗೂಡಿಹೆನೆಂದಡೆ ಈ ಷಡಂಗದಲ್ಲಿ ಷಡ್ವಿಧ ಲಿಂಗವ ಸಂಬಂಧ ಮಾಡಿಕೊಂಡು, ಷಡ್ವಿಧ ಭಕ್ತಿವಿಡಿದಾಚರಿಸಿ, ಆ ಷಡ್ವಿದಾಂಗ ಲಿಂಗ ಭಕ್ತಿಗಳಿಗೆ ಮಾತೃಸ್ಥಾನವಾದ ನಿಃಕಲಬ್ರಹ್ಮವನ್ನು ಒಂದಾಗಿ ಬೆರೆದಿಹೆನೆಂದು ಉದ್ಯೋಗಿಸಿದಡೆ, ಅದು ಅಂತಪ್ಪ ಆಚರಣೆಯು ಆರಿಗೆ ನಿಲುಕುವದಯ್ಯಾ, ಆವಂಗೆ ಎಟುಕೀತೆಲೆ ಸ್ವಾಮಿ ಎಂದು ಬೆಸಗೊಂಡಲ್ಲಿ, ಕ್ರಿಯಾಬಾಹ್ಯನಾದ ವೇದಾಂತಿಗೆ, ಜ್ಞಾನಬಾಹ್ಯರಾದ ಸಿದ್ಧಾಂತಿಗಳಿಗೆ, ಜ್ಞಾನಕ್ರಿಯಾಬಾಹ್ಯರಾದ ಯೋಗಾಭ್ಯಾಸಿಗಳಿಗೆ ಎಟುಕೀತೇ ? ಎಟುಕದು. ಅರ್ಪಣದ ಅಂಗ ಸಂಬಂಧವಾದ ರೂಪು ಷಡ್ವಿಧ ಪದಾರ್ಥಂಗಳನ್ನು, ಇಷ್ಟಲಿಂಗದೊಡನೆ ಕೂಡಿದ ಆಚಾರಾದಿ ಷಡ್ವಿಧಲಿಂಗಂಗಳಿಗೆ, ಷಡ್ವಿಧಸಕೀಲಂಗಳಿಂದ ಸಮರ್ಪಿಸಿಕೊಂಬ ಕಾಯಾರ್ಪಣದೊಳಗರ್ಪಣದ ಮನೋಸಂಬಂಧವಾದ ಮೂವತ್ತಾರು ರುಚಿ ಪದಾರ್ಥಂಗಳನ್ನು ಪ್ರಾಣಲಿಂಗದೊಡನೆ ಕೂಡಿದ ಮೂವತ್ತಾರು ಲಿಂಗಗಳಿಗೆ,

ಮೂವತ್ತಾರು ತೆರದ ಭಕ್ತಿ ಸಕೀಲಂಗಳಿಂದ ಸಮರ್ಪಿಸಿಕೊಂಬ ಕರಣಾರ್ಪಣದ, ಭೇದಾರ್ಪಣದ, ಆತ್ಮ ಸಂಬಂಧವಾದ, ಇನ್ನೂರು ಹದಿನಾರು ತೃಪ್ತಿ ಪದಾರ್ಥಂಗಳನ್ನು, ಭಾವಲಿಂಗದೊಡನೆ ಕೂಡಿದ ಇನ್ನೂರು ಹದಿನಾರು ಲಿಂಗಂಗಳಿಗೆ, ಇನ್ನೂರು ಹದಿನಾರು ತೆರದ ಭಕ್ತಿ ಸಕೀಲಂಗಳಿಂದ ಸಮರ್ಪಿಸಿಕೊಂಬ, ಭಾವಾರ್ಪಣದ ಭೇದವಂ, ಕಾಯಾರ್ಪಣವರ್ಪಿತವಾಗಿ ಉಳಿದುದೇ ಶುದ್ಧ ಪ್ರಸಾದ, ಕರಣಾರ್ಪಣವರ್ಪಿತವಾಗಿ ಉಳಿದುದೇ ಸಿದ್ಧಪ್ರಸಾದ, ಭಾವಾರ್ಪಣವಾಗಿ ಉಳಿದುದೇ ಪ್ರಸಿದ್ಧ ಪ್ರಸಾದವೆಂಬ ನಿಲುಕಡೆಯನರಿದು, ಸೊಪ್ಪಡಗಿದ ಒಂದಾನೊಂದೆಲೆಗಳಿದ ವೃಕ್ಷದಲ್ಲಿ ಹುಳವಿಲ್ಲವೆಂಬ ಹಾಗೆ, ಈ ತ್ರಿವಿಧಪ್ರಸಾದವ ಪಡೆದನುಭವಿಸಿದ ಶಿವಶರಣನ, ತನು ಕರಣೇಂದ್ರಿಯ ಶಬ್ದಜಾಲಂಗಳು ಪಟಲ ವಳಿದ ನಿಃಪತಿ, ತನ್ನಲ್ಲಿ ತಾನೇ ಪರಮ ಕಾಂತಿಯನೈದಿದ ಸ್ವಕೀಯವಾದ ಮಹಾಲಿಂಗದಲ್ಲಿ ಐಕ್ಯದಿರವು.

೧೧೫

(೫) ಆದಿ, ಅನಾದಿ, ನಿತ್ಯ, ಅನಿತ್ಯವ ತಿಳಿಯಲರಿಯದೆ ವಾಯಕ್ಕೆ ಪರಬ್ರಹ್ಮವನುಡಿವ ವಾಯುಪ್ರಾಣಿಗಳವರೆತ್ತ ಬಲ್ಲರೋ ಆ ಪರಬ್ರಹ್ಮದ ನಿಜದ ನಿಲವನು ? ಅದೆಂತೆಂದೊಡೆ : ಆದಿಯೇ ದೇಹ, ಅನಾದಿಯೇ ನಿರ್ದೇಹ. ಆದಿಯೇ ಸಕಲ, ಅನಾದಿಯೇ ನಿಃಕಲ. ಆದಿಯೇ ಜಡ, ಅನಾದಿಯೇ ಅಜಡ. ಆದಿಯೇ ಕಾಯ, ಅನಾದಿಯೇ ನಿಃಕಾಯ. ಈ ಎರಡರ ಯೋಗವ ಭೇದಿಸಿ ತನ್ನಿಂದ ತಾನೇ ತಿಳಿದು ನೋಡಲು, ಆದಿಸಂಬಂಧವಪ್ಪ ಭೂತಂಗಳು ನಾನಲ್ಲ, ದಶ ವಿಧೇಂದ್ರಿಯಂಗಳು ನಾನಲ್ಲ . ದಶವಾಯುಗಳು ನಾನಲ್ಲ, ಅಷ್ಟಮದಂಗಳು, ಅರಿಷಡ್ವರ್ಗಂಗಳು, ಷಡೂರ್ಮಿಗಳು, ಷಡ್ಭಾವವಿಕಾರಂಗಳು, ಷಟ್‌ಕರ್ಮಂಗಳು, ಷಡ್ಧಾತುಗಳು, ಮಲತ್ರಯಂಗಳು, ಗುಣತ್ರಯಂಗಳು, ಜೀವತ್ರಯಂಗಳು, ಭಾವತ್ರಯಂಗಳು, ತಾಪತ್ರಂಯಗಳು, ಅಂತಃಕರಣಂಗಳು ಇಂತು ಇವಾದಿಯಾಗಿ ತೋರುವ ತೋರಿಕೆ ಏನೂ ನಾನಲ್ಲ, ನನ್ನವಲ್ಲ ; ಇವೆಲ್ಲವೂ ನನ್ನಾಧೀನವಾಗಿಪ್ಪವು. ನಾನಿವರುಗಳಾಧೀನವಲ್ಲ, ನಾನು ತೂರ್ಯ–ತೂರ್ಯಾತೀತವಪ್ಪ, ಸತ್ತು ಚಿತ್ತಾನಂದ, ನಿತ್ಯಪರಿಪೂರ್ಣ, ತನ್ನಿರವೆಂದು ತಿಳಿಯೆ, ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆಯಂ ಬಿಟ್ಟು ನಿರಾಳದಲ್ಲಿ ನಿರವಯವನೆಯ್ದಲರಿಯದೆ, ಮತ್ತೆಯೂ ಭೌತಿಕತತ್ವ ಸಂಬಂಧವಾಗಿರುತ್ತಿರಲು, ಈ ತತ್ವದಾದಿ ತಾನೆಂದೆನಲು, ಆ ಪರಬ್ರಹ್ಮವಪ್ಪ ನಿತ್ಯ, ನಿರಾಳ, ನಿಶ್ಶೂನ್ಯ ಲಿಂಗವೇ ತನ್ನ ಲೀಲಾವಿಲಾಸದಿಂದ ತಾನೇ ಸುನಾದ ಬಿಂದು ಪ್ರಕಾಶ ತೇಜೋಮೂರ್ತಿಯಾಗಿ ಮಹಾಲಿಂಗವೆಂದೆನಿಸಿತ್ತು. ಆ ಮಹಾಲಿಂಗವೇ ಪಂಚಸಾದಾಖ್ಯವೆಂದೆನಿಸಿತ್ತು. ಆ ಪಂಚಸಾದಾಖ್ಯವೇ ಪಂಚಲಿಂಗ ಪ್ರಕಾಶವೆಂದೆನಿಸಿತ್ತು. ಆ ಪಂಚಲಿಂಗಪ್ರಕಾಶವೇ ಪಂಚಮುಖವೆಂದೆನಿಸಿತ್ತು. ಆ ಪಂಚಮುಖದಿಂದವೇ ಪಂಚಾಕ್ಷರಿಯುತ್ಪತ್ತಿ. ಆ ಪಂಚಾಕ್ಷರಿಯಿಂದಲೇ ಪಂಚಕಲೆ

ಗಳುತ್ಪತ್ತಿ. ಆ ಪಂಚಕಲೆಗಳಿಂದಲೇ ಮನ ಬುದ್ಧಿ ಚಿತ್ತ ಅಹಂಕಾರಗಳು ಜನನ. ಆ ಮನ ಬುದ್ಧಿ ಚಿತ್ತ ಅಹಂಕಾರಗಳಿಂದಲೇ ತನ್ಮಾತ್ರಂಗಳುತ್ಪತ್ತಿ. ಆ ತನ್ಮಾತಂಗಳಿಂದಲೇ ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳೇ ಪಂಚೀಕರಣವನೈದಿ ಆತ್ಮಂಗೆ ಅಂಗವಾಯಿತ್ತು. ಆ ಅಂಗಕ್ಕೆ ಜ್ಞಾನೇಂದ್ರಿಯಂಗಳು ಕರ್ಮೇಂದ್ರಿಯಂಗಳು ಪ್ರತ್ಯಂಗವೆನಿಸಿತ್ತು. ಇಂತು ದೇಹಸಂಬಂಧವಂ ಶಿವ ತನ್ನ ಚಿದಂಶಿಕನಪ್ಪ ಆತ್ಮಂಗೆ ಸಂಬಂಧಿಸಿದನಾಗಿ, ಆ ಸಂಬಂಧಿಸಿದ ಕಾಯದ ಪೂರ್ವಾಶ್ರಯವು ಎಲ್ಲಿಯಾಯಿತ್ತು ಅಲ್ಲಿಯೇ ಅಡಗಿಸಿ, ಆ ಕಾಯಾಶ್ರಯವಳಿದು ಮಹಾಘನಲಿಂಗವ ವೇಧಿಸಿಕೊಟ್ಟು, ಶಿವನು ತಾನೇ ಗುರುವಾಗಿ ಬಂದು ಮಹಾಘನ ಲಿಂಗವ ವೇಧಿಸಿಕೊಟ್ಟ ಪರಿ ಎಂತೆಂದೊಡೆ, ಆತ್ಮಗೂಡಿ ಪಂಚಭೂತಂಗಳ ಷಡಂಗವೆಂದೆನಿಸಿ, ಆ ಅಂಗಕ್ಕೆ ಕಲೆಗಳನೆ ಷಟ್‌ಶಕ್ತಿಗಳೆನಿಸಿ, ಆ ಶಕ್ತಿಗಳಿಗೆ ಷಡ್ವಿಧಭಕ್ತಿಯನಳವಡಿಸಿ, ಆ ಭಕ್ತಿಗಳಿಗೆ ಭಾವ, ಜ್ಞಾನ, ಮನ, ಬುದ್ಧಿ, ಚಿತ್ತಾಹಂಕಾರಗಳನೇ ಹಸ್ತಂಗಳೆಂದೆನಿಸಿ, ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ ಪಂಚಲಿಂಗಗಳನೆ ಷಡ್ವಿಧಲಿಂಗಂಗಳೆನಿಸಿ, ಆ ಲಿಂಗಂಗಳಿಗೆ ಷಡಕ್ಷರಿಯ ಮಂತ್ರವೆಂದೆನಿಸಿ, ಆ ಮಂತ್ರ ಲಿಂಗಂಗಳಿಗೆ ಹೃದಯಗೂಡಿ ಪಂಚೇಂದ್ರಿಯಂಗಳನೆ ಮುಖಂಗಳೆಂದೆನಿಸಿ, ಆ ಮುಖಂಗಳಿಗೆ ತನ್ಮಾತ್ರಂಗಳನೆ ದ್ರವ್ಯಪದಾರ್ಥಂಗಳೆಂದೆನಿಸಿ, ಆ ದ್ರವ್ಯಪದಾರ್ಥಂಗಳ ಆಯಾಯ ಮುಖದ ಲಿಂಗಂಗಳಲ್ಲಿ ನಿರಂತರ ಸಾವಧಾನದಿಂದ ಅರ್ಪಿತವಾಗಲೊಡನೆ, ಅಂಗಸ್ಥಲಂಗಳಡಗಿ ತ್ರಿವಿಧ ಲಿಂಗಸ್ಥಲಂಗಳುಳಿದು ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ, ಗುರುವಿನಲ್ಲಿ ಶುದ್ಧಪ್ರಸಾದ, ಲಿಂಗದಲ್ಲಿ ಸಿದ್ಧಪ್ರಸಾದ, ಜಂಗಮದಲ್ಲಿ ಪ್ರಸಿದ್ಧ ಪ್ರಸಾದ, ಇಂತೀ ತ್ರಿವಿಧ ಪ್ರಸಾದ ಏಕಾರ್ಥವಾಗಿ ಮಹಾಘನ ಪರಿಪೂರ್ಣ ಪ್ರಸಾದವಳವಟ್ಟ ಶರಣ ಜ್ಞಾನಿಯಲ್ಲ, ಅಜ್ಞಾನಿ ಮುನ್ನವೇ ಅಲ್ಲ, ಶೂನ್ಯನಲ್ಲ, ನಿಶ್ಶೂನ್ಯನಲ್ಲ, ದ್ವೈತಿಯಲ್ಲ, ಅದ್ವೈತಿಯಲ್ಲ, ಇಂತೀ ಉಭಯಾತ್ಮಕ ತಾನೆಯಾಗಿ, ಇದು ಕಾರಣ ಇದರ ಆಗು ಹೋಗು ಸಕೀಲ ಸಂಬಂಧವ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರೇ ಬಲ್ಲರು.

ಅಂಗಲಿಂಗಸ್ಥಲಗಳು

೧೧೬

(೧) ಚಿತ್ತವೆಂಬ ಬಿತ್ತು ಬಲಿದು ಎರಡಾದಲ್ಲಿ, ಲಿಂಗವೆಂಬ ಕಳೆ ಅಂಕುರಿಸಿ ಮೂರ್ತಿಯಾಯಿತ್ತು. ಆ ಮೂರ್ತಿಯ ಘನತೆಯನೇನೆಂದುಪಮಿಸಬಾರದು. ನೋಡಿದಡೆ ಮೂರ್ತಿ, ಹಿಡಿದಡೆ ಬಯಲು. ಈ ಮೂರ್ತಿಯೊಳಗಡೆ ಈರೇಳು ಲೋಕದ ಪ್ರಾಣ ಕಳೆ. ಆ ಕಳೆಯ ಬೆಳಗು ತಾನೇ ನಮ್ಮ ಗುಹೇಶ್ವರಲಿಂಗದ ಲೀಲಾ ಮೂಲದ ಪ್ರಥಮ ಬಿತ್ತು.

೧೧೭

(೨) ಅಖಂಡ ಪರಿಪೂರ್ಣ ಗೋಳಕಾಕಾರ ಮಹಾಲಿಂಗವು ತನ್ನ ಸ್ವಲೀಲೆ

ಯಿಂದ ಲಿಂಗಸ್ಥಲ ಅಂಗಸ್ಥಲವೆಂದು ಎರಡು ಪ್ರಕಾರಮಾಗಿತ್ತಾಗಿ, ಅಂಗ ಲಿಂಗೋದ್ಭವಸ್ಥಲಮಾದುದು. ಪ್ರಥಮದಲ್ಲಿ ನಿರಾಕಾರವಾದ ಪರವಸ್ತು ತಾನೊಂದೇ, ಆ ನಿರಾಕಾರ ಪರವಸ್ತುವಿನಲ್ಲಿ ಮಹಾಜ್ಞಾನ ಉದಯವಾಗಿ, ಆ ಮಹಾ ಜ್ಞಾನವೇ ಅನಾದಿ ಶರಣರೂಪಾಗಿ, ಆ ನಿರಾಕಾರ ಪರವಸ್ತುವಿಗೆ ಆಧಾರ ತಾನಾಗಿ, ಚಿನ್ನ ಬಣ್ಣದ ಹಾಗೆ ಭಿನ್ನವಿಲ್ಲದಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ! ಆ ನಿರಾಕಾರಪರವಸ್ತುವೇ ನಿಃಕಲಲಿಂಗವಾದಲ್ಲಿ, ಆ ನಿಃಕಲಲಿಂಗದಿಂದ ಜ್ಞಾನಚಿತ್ತು ಉದಯವಾಗಿ, ಆ ಜ್ಞಾನಚಿತ್ತುವೇ ಶರಣರೂಪಾಗಿ, ಆ ನಿಃಕಲ ಲಿಂಗಕ್ಕಾಶ್ರಯವಾಗಿ ಚಿದಂಗಸ್ವರೂಪಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ ? ನಿಃಕಲ ಶಿವತತ್ವ ತಾನೊಂದೇ ತನ್ನ ಶಕ್ತಿಯ ಚಲನೆಮಾತ್ರದಿಂದ ಒಂದೆರಡಾಯಿತ್ತು ನೋಡಾ. ಅದರೊಳಗೆ ಒಂದು ಲಿಂಗಸ್ಥಲ ಮತ್ತೊಂದು ಅಂಗಸ್ಥಲ. ಹೀಗೆ ಅಂಗಲಿಂಗವೆಂದು ಉಪಾಸ್ಯ ಉಪಾಸಕರೆಂದು ವರ್ತಿಸುತ್ತಿಹುದು ನೋಡಾ. ಆ ಪರಶಿವನ ಚಿತ್‌ಶಕ್ತಿ ತಾನೆರಡಾಯಿತ್ತು, ಲಿಂಗಸ್ಥಲವನಾಶ್ರಯಿಸಿ ಶಕ್ತಿ ಎನಿಸಿತ್ತು, ಅಂಗಸ್ಥಲವನಾಶ್ರಯಿಸಿ ಭಕ್ತಿ ಎನಿಸಿತ್ತು, ಆ ಶಕ್ತಿಯೇ ಪ್ರವೃತ್ತಿ ಎನಿಸಿತ್ತು, ಭಕ್ತಿಯೇ ನಿವೃತ್ತಿ ಎನಿಸಿತ್ತು, ಶಕ್ತಿ–ಭಕ್ತಿ ಎಂದು ಎರಡು ಪ್ರಕಾರವಾಯಿತ್ತು, ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೧೮

(೩) ಅಂಗಲಿಂಗ ಸಂಬಂಧದ ಇರವು ಬೀಜ ಒಡೆದು ಮೊಳೆದೋರುವಂತೆ, ಕುಸುಮ ಬಲಿದು ದೆಸೆದೆಸೆಗೆ ಪಸರಿಸುವಂತೆ, ಭೂಜಲ ಉಣ್ಮೆ ಪರಿವ ತೆರನಂತೆ, ಘಟಮಧ್ಯದಲ್ಲಿ ಘನಲಿಂಗ ನಿಂದು ಕುರುಹುದೋರುತ್ತಿದೆ. ಐಘಟದೂರ ರಾಮೇಶ್ವರ ಲಿಂಗವು ಮೂರ್ತಿ ಅಮೂರ್ತಿಯಾಗುತ್ತಿದೆ.

೧೧೯

(೪) ಅಂಗಗುಣವರತು ಲಿಂಗವನರಿಯಬೇಕೆಂಬರು. ಅಂಗವರತ ಮೇಲೆ ಲಿಂಗಕ್ಕೆ ಕುರುಹುಂಟೆ ? ಅಂಗವೇ ಲಿಂಗ, ನಿರಂಗವೇ ಸಂಗ. ಈ ಭಾವದಂಗವ ನರಿಯಬೇಕೆಂದನಂಬಿಗರ ಚೌಡಯ್ಯ.

೧೨೦

(೫) ಕಲ್ಪಿತಾಂತರವನುಂಬುದು ಕಾಯವೋ? ಜೀವವೋ ? ಜೀವವೆಂದೊಡೆ (ಆತ್ಮ) ನಿರ್ನಾಮ ಭೇದ. ಕಾಯವೆಂದೊಡೆ ಮೃತ ಅಚೇತನ ಘಟವು ಉಭಯಸಂಗ ಸಂಬಂಧವಾದಲ್ಲಿ ಎನ್ನಯ್ಯ ಚನ್ನರಾಮನ ಭೇದ.

ಅರ್ಥ : ಕರ್ಮದಿಂದ ಕಲ್ಪಿಸಲ್ಪಟ್ಟ ಪ್ರಾರಬ್ಧ ಭೋಗವನನುಭವಿಸುವುದು ದೇಹವೋ ಆತ್ಮನೋ ? ಆತ್ಮನನುಭವಿಸುವನೆಂದಡೆ, ನಿರಾಕಾರಸ್ವರೂಪನಾದ ಕಾರಣ ಸಾಕಾರವಾದ ವಸ್ತುವ ಭೋಗಿಸಲರಿಯನು. ದೇಹವು ಅನುಭವಿಸುವ

ದೆಂದೊಡೆ ಅನಿತ್ಯವಾದ ಜಡದೇಹವಾದ ಕಾರಣ, ಅದು ಭೋಗಿಸಲರಿಯದು. ದೇಹಾತ್ಮರುಗಳ ಕೂಟದಿಂದ ಪ್ರಾರಬ್ಧ ಭೋಗದ ಅನುಭಾವ ಉಂಟಾಗಿಪ್ಪುದು ಎಂಬ ಹಾಗೆ ಶರಣಲಿಂಗದ ಕೂಟದಿಂದಲೇ ಸಕಲ ಪದಾರ್ಥವರ್ಪಿತವಾಗುತ್ತಿಹುದು. ಇದು ಲಿಂಗಸಂಬಂಧವನುಳ್ಳ ಶರಣರುಗಳ ವಿಚಾರವೆಂಬುದರ್ಥ.

೧೨೧

(೬) ಷಡಧ್ವಾಶ್ರಯವಾದ ಪರಬಿಂದುಸ್ಥಾನದ ಮೇಲಿಂದ, ಷಟ್‌ಸ್ಥಲ ಮೂಲವಾದ ಪರಶಿವತತ್ವದೊಳು ಷಟ್‌ಸ್ಥಲಲಿಂಗಾಂಗ ಜನಿಸಿ ತೋರಿತ್ತೆಂದಡೆ, ಅಂಗಲಿಂಗಕ್ಕೆ ಭೇದಮುಂಟೇ ? ಇಲ್ಲವಾಗಿ, ಬೀಜಾಂಕುರದಂತೆ ಒಂದ ಬಿಟ್ಟು ಒಂದು ತೋರದು. ಇಂತಪ್ಪ ಲಿಂಗಾಂಗಸಂಬಂಧ ಸಕೀಲವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣ ಬಲ್ಲನು.

೧೨೨

(೭) ಅವನಿಯಂಬರ ಉದಯಿಸದಂದು, ಒಂದು ತುಂಬಿದ ಕೊಡನ ಕಂಡೆ. ಆ ಕೊಡವನೆತ್ತಿದವರಿಲ್ಲ, ಇಳುಹಿದವರಿಲ್ಲ, ಆ ಕೊಡ ತುಳುಕಿದಲ್ಲಿ ಒಂದು ಬಿಂದು ಕಡೆಗೆ ಸಿಡಿಯಿತ್ತ ಕಂಡೆ. ಆ ಬಿಂದುವಿನಲ್ಲಿ ಅನಂತ ದೇವತಾಮೂರ್ತಿಗಳು ಹುಟ್ಟಿತ್ತ ಕಂಡೆ. ಇದು ಕಾರಣ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಲೀಲಾ ಮೂಲವ ಕಂಡು ಇಲ್ಲ ಇಲ್ಲ ಎನುತಿರ್ದೆನು.

ಅರ್ಥ : ಸರ್ವ ತತ್ವಂಗಳೇನೂ ಇಲ್ಲದಿದ್ದಂದು, ಅಖಂಡ ಚಿತ್‌ಪ್ರಕಾಶಾಂಗವೆಂಬ ಭಾಜನದಲ್ಲಿ ಅಖಂಡ ಚಿದಾನಂದರಸ ಪರಿಪೂರ್ಣವಾದ ಪರಬ್ರಹ್ಮ ಒಂದೇ ಇದ್ದಿತ್ತೆಂಬುದೀಗ, ಅವನಿಯಂಬರ ಉದಯಿಸದಂದು ಒಂದು ತುಂಬಿದ ಕೊಡನ ಕಂಡೆನೆಂಬ ಶಬ್ದಕ್ಕರ್ಥ. ಅಂತಿಪ್ಪಲ್ಲಿ ಆ ಪರಬ್ರಹ್ಮವನಂದು ಅಂಗದಲ್ಲಿ ಧರಿಸಿ ಹಿಂಗದೆ ಪೂಜಿಸುವ ಷಟ್‌ಸ್ಥಲಜ್ಞಾನಿಗಲ್ಲ, ಆ ಪರಬ್ರಹ್ಮವನರಿವ ಅರಿವಿಲ್ಲದೆ ಆಹ್ವಾನ ವಿಸರ್ಜನೆಯ ಮಾಡುವ ಭಿನ್ನ ಪೂಜಕರಪ್ಪ ಶೈವರೂ ಇಲ್ಲ . ಇಂತು ಭಜಿಸುವರಾರೂ ಇಲ್ಲದಂದು ಒಂದೇ ಪರಬ್ರಹ್ಮವಿದ್ದಿತ್ತೆಂಬುದೀಗ, ಆ ಕೊಡನನೆತ್ತಿದವರಿಲ್ಲ, ಇಳುಹಿದವರಿಲ್ಲ ಎಂಬ ಶಬ್ದಕ್ಕರ್ಥ. ಅಂತು ಅಖಂಡ ಪರಿಪೂರ್ಣ ಚೈತನ್ಯವಸ್ತು ಒಂದೇ ಇರ್ದು, ತನ್ನ ಭಜಿಸುವರಿಲ್ಲದಿರಬಾರದೆಂದು ತನ್ನ ಚಿದ್ವಿವೇಕದಿಂದ ಚಿಂತಿಸಿದ ಚಿತ್‌ಚೈತನ್ಯವೇ ಪ್ರಭಾವಿಸಿ ನೆಗಳ್ದು ಚಿತ್‌ಪ್ರಭಾಂಗಮೂರ್ತಿಯಾದ ಚಿಲ್ಲಿಂಗವಾಯಿತ್ತೆಂಬುದೀಗ, ಆ ಕೊಡ ತುಳುಕಿದಲ್ಲಿ ಒಂದು ಬಿಂದು ಕಡೆಗೆ ಸಿಡಿಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತು ಚಿತ್‌ಪ್ರಭಾಂಗಮೂರ್ತಿಯಾದ ಲಿಂಗವು ತನ್ನ ಭಜಿಸುವರಾಗಬೇಕೆಂಬ ಲೀಲಾವಿಲಾಸದಿಂದ ತನ್ನ ಚಿತ್‌ಪ್ರಭಾಂಗದ ಚಿತ್‌ಪ್ರಭಾ ಕಲಾಂಶಂಗಳ ಬೇರ್ಪಡಿಸಿ, ಅನಂತ ದೇವತಾ ಮೂರ್ತಿಗಳು ಮುಖ್ಯವಾದ ಆತ್ಮರುಗಳು ಅನಂತರಾದರೆಂಬುದೀಗ, ಆ ಬಿಂದುವಿನಲ್ಲಿ ಅನಂತ ದೇವತಾ ಮೂರ್ತಿಗಳು ಹುಟ್ಟಿದರೆಂಬ ಶಬ್ದಕ್ಕರ್ಥ. ಅಂತು ಲಿಂಗಲೀಲಾವಿಲಾಸದಿಂದಾದ

ಜಗತ್‌ಸೃಷ್ಟಿ ಮುನ್ನಿಲ್ಲ. ಲಿಂಗದ ಲೀಲೆ ಸಾಕಾದಡೆಯೂ ಇಲ್ಲವೆಂಬುದೀಗ, ಇದು ಕಾರಣ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗದ ಲೀಲಾಮೂಲವ ಕಂಡು ಇಲ್ಲ ಇಲ್ಲ ಎನುತಿರ್ದೆನೆಂಬ ಶಬ್ದಕ್ಕರ್ಥ.

೧೨೩

(೮) ಪೃಥ್ವಿಯನತಿಗಳೆದು ಅಪ್ಪುವಿಲ್ಲ. ಅಪ್ಪುವನತಿಗಳೆದು ಅಗ್ನಿ ಇಲ್ಲ. ಅಗ್ನಿಯನತಿಗಳೆದು ವಾಯುವಿಲ್ಲ. ವಾಯುವನತಿಗಳೆದು ಆಕಾಶವಿಲ್ಲ. ಆಕಾಶವನತಿಗಳೆದು ನಾದವಿಲ್ಲ. ನಾದವನತಿಗಳೆದು ಬಿಂದುವಿಲ್ಲ. ಬಿಂದುವನತಿಗಳೆದು ಕಳೆಯಿಲ್ಲ. ಕಳೆಯನತಿಗಳೆದು ಆತ್ಮನಿಲ್ಲ. ಆತ್ಮನತಿಗಳೆದು ಗುಹೇಶ್ವರಲಿಂಗವಿಲ್ಲ.

ಅರ್ಥ : ಆತ್ಮ ಮೊದಲಾಗಿ ಪೃಥ್ವಿ ಕಡೆಯಾಗಿ ತತ್ವಂಗಳೆಲ್ಲವೂ ಕೂಡಿ ಅಂಗಸ್ವರೂಪು. ಆ ಅಂಗದ ಚೈತನ್ಯವೇ ಲಿಂಗಸ್ವರೂಪು. ಆ ಲಿಂಗವಿರಹಿತನಾಗಿ ಅಂಗತತ್ವಂಗಳ ತೋರಿಕೆ ತೋರಲಿಲ್ಲವಾಗಿ ಅಂತು ಆತ್ಮ ಮೊದಲಾದ ಅಂಗ ತತ್ವಂಗಳ ತೋರಿಕೆ ಎಲ್ಲವು ಲಿಂಗದಲ್ಲಿಯೇ ತೋರಿ, ಲಿಂಗದಲ್ಲಿಯೇ ಸ್ಥಿತಿಯಾಗಿ, ಲಿಂಗದಲ್ಲಿಯೇ ಅಡಗುತ್ತಿಹ ಭೇದವನರಿದು, ಅಂಗದೊಳಗಿರ್ದ ಲಿಂಗದ ಕ್ರೀಯಿಂದ ಬಹಿರಂಗದಲ್ಲಿ ಮೂರ್ತಿಗೊಳಿಸಿ, ಆ ಮೂರ್ತಿಯಾದ ಇಷ್ಟಲಿಂಗವೇ ಪ್ರಾಣಸ್ವರೂಪವಾಗಿ ಕಾಂಬ ನೈಷ್ಠಿಕಾಭಕ್ತಿ ಘಟಿಸಿ, ಭಕ್ತಿಯ ಮಾಡಬಲ್ಲರೆ ಅಂಗವೆಲ್ಲಲಿಂಗ ಸ್ವರೂಪಿಯಾಗಿಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

ಮೂರು ಲಿಂಗಸ್ಥಲಗಳು
(ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ)

೧೨೪

(೧) ಇಷ್ಟಲಿಂಗ ಮುಖವಾವುದು, ಪ್ರಾಣಲಿಂಗಮುಖವಾವುದು, ಭಾವ ಲಿಂಗಮುಖವಾವುದು ಎಂದರೆ ಹೇಳಿಹೆ ಕೇಳಿರಣ್ಣ :

ಇಷ್ಟಲಿಂಗವು [ಕ್ರಿಯಾ]ಮುಖವನೈದಿ [ಇಷ್ಟಲಿಂಗವೆನಿಸಿತ್ತು;] ಪ್ರಾಣ ವಾಯುಗಳಮುಖವನೈದಿ, ಪ್ರಾಣಲಿಂಗವೆನಿಸಿತ್ತು ಭಾವವನೆಯ್ದಿ ಭಾವಲಿಂಗ ವೆನಿಸಿತ್ತು ಒಂದೇ ಲಿಂಗವು ತನುತ್ರಯಂಗಳಲ್ಲಿ ಇಷ್ಟ, ಪ್ರಾಣ, ಭಾವರೂಪಕ ಮಾಗಿರ್ಪುದು. ಜೀವತ್ರಯಂಗಳಲ್ಲಿ ಮಂತ್ರ, ಧ್ಯಾನ, ಜ್ಞಾನರೂಪಕಮಾಗಿರ್ಪುದು. ಅವಸ್ಥಾತ್ರಯಂಗಳಲ್ಲಿ ಸತ್ಕ್ರಿಯಾಚರಣೆ, ಸದ್ಭಾವನೆ, [ಸದ್‌ಭಾವ] ತಲ್ಲೀಯ ವಾಗಿರ್ಪುದು. [೧][ಭಾವ]ತ್ರಯಂಗಳಲ್ಲಿ ಸ್ವಯ, ಚರ, ಪರ ರೂಪಕಮಾಗಿ ರ್ಪುದು. ಈಕ್ಷಷತ್ರಯಂಗಳಲ್ಲಿ ತ್ರೈಲಿಂಗಪ್ರೇಮರತಿಗೆ, ಸಕಲಸಾಧನಂಗಳಾಗಿ, ಮಾಯಾ ಭ್ರಾಂತಿಯನು ನಿಭ್ರಾಂತಿ ಎನಿಸಿ, ಶುದ್ಧಪ್ರಭಾವ ಪರಿಪೂರ್ಣಲಿಂಗವು, ತಾನೇ ಪ್ರಸನ್ನಪ್ರಸಾದರೂಪಕನಾಗಿರ್ದೆನಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

೧–೧ ಮಲ (ಮೂ)

೧೨೫

(೨) ಅಂಗದ ಮೇಲೆ ಸಾಕಾರವಿಡಿದು ಮಂತ್ರಾಹ್ವಾನಂಗಳಿಂದ ಅಷ್ಟ ವಿಧಾರ್ಚನೆ, ಷೋಡಶೋಪಚಾರಂಗಳಲ್ಲಿ ವ್ಯಾಪಿಸಿಕೊಂಡಿಪ್ಪುದೀಗ, ಇಷ್ಟಲಿಂಗ. ಆ ಇಷ್ಟಲಿಂಗಕ್ಕೆ ಆಶ್ರಯವಾಗಿ ಚತುರ್ದಶ ಇಂದ್ರಿಯಂಗಳಲ್ಲಿ ತನ್ಮುಖವಾಗಿ ಸರ್ವೇಂದ್ರಿಯಂಗಳಿಗೆ ಚೈತನ್ಯವಾಗಿ ಪ್ರಾಣದಲ್ಲಿ ಪರಿಪೂರ್ಣವಾಗಿಪ್ಪುದೀಗ, ಪ್ರಾಣಲಿಂಗ. ಆ ಪ್ರಾಣ ಲಿಂಗಕ್ಕೆ ಆದಿಯಾಗಿ ಭಾವ ಭ್ರಮೆಗಳು ನಷ್ಟವಾಗಿ, ಅನು ಭಾವದಲ್ಲಿ ಅನುವಾಗಿ ಭಾವ, ಸದ್ಭಾವ, ನಿರ್ಭಾವಂಗಳಲ್ಲಿ ಭರಿತವಾಗಿ, ಭಾವಬ್ರಹ್ಮ ವೆಂಬ ಭೇದವಿಲ್ಲದೆ ಸನ್ನಿಹಿತಭಾವದಿಂದ ಇಪ್ಪುದೀಗ, ಭಾವಲಿಂಗ. ಇಂತೀ ಮೂರು ಲಿಂಗದ ಮೂಲ, ಆರುಲಿಂಗದ ಅಂತ್ಯವನೊಳಕೊಂಡು, ಮಾರ್ಗಕ್ರಿ[ಯೆ] ನಿಃಕ್ರಿಯ ವಾಗಿ, ಧ್ಯಾನ ನಷ್ಟವಾಗಿ, ಮಂತ್ರ ಗೋಪ್ಯವಾಗಿ, ಜ್ಞಾನ ಶೂನ್ಯವಾಗಿ ಭಾವ ದಿಗಂಬರವಾಗಿ ಘನಕ್ಕೆ ಘನವಾದ ಪರಬ್ರಹ್ಮವು ತಾನೇ ಸೌರಾಷ್ಟ್ರ ಸೋಮೇಶ್ವರಾ.

೧೨೬

(೩) ನಾದಬಿಂದುಕಳೆಯಂ ತಿಳಿದು, ಚಿನ್ನಾದಸ್ವರೂಪವಾದ ಗುರುದೇವನು, ಚಿದ್ಬಿಂದುಸ್ವರೂಪವಾದ ಲಿಂಗದೇವನು, ಚಿತ್ಕಳಾಸ್ವರೂಪವಾದ ಜಂಗಮದೇವ ನೆಂದರಿದು, ಸ್ಥೂಲಶರೀರಾಭಿಮಾನಿಯಾದ ಜೀವಾತ್ಮನು, ಸೂಕ್ಷ್ಮಶರೀರಾಭಿ ಮಾನಿಯಾದ ಅಂತರಾತ್ಮನು, ಕಾರಣಶರೀರಾಭಿಮಾನಿಯಾದ ಪರಮಾತ್ಮನು ಎಂದೆನಿಸಿಕೊಂಬ ಆತ್ಮತ್ರಯದಲ್ಲಿ ಸತ್ಕ್ರಿಯಾಸ್ವರೂಪಮಾದ ಇಷ್ಟಲಿಂಗವು, ಸುಜ್ಞಾನ ಸ್ವರೂಪಮಾದ ಪ್ರಾಣಲಿಂಗವು, [೧][ಸದ್ಭಾವ]ಸ್ವರೂಪಮಾದ ಭಾವಲಿಂಗವು ಎನಿಸಿಕೊಂಬ ಲಿಂಗತ್ರಯಂಗಳಲ್ಲಿ ಸಂಬಂಧಿಸಿ, ಸ್ವಾಯತವ ಮಾಡಿಕೊಂಡು, ಜೀವಾತ್ಮನಲ್ಲಿ ಇಷ್ಟಲಿಂಗ, ಅಂತರಾತ್ಮನಲ್ಲಿ ಪ್ರಾಣಲಿಂಗ, ಪರಮಾತ್ಮನಲ್ಲಿ ಭಾವಲಿಂಗವನು ಸಂಬಂಧಿಸಿ ಸ್ವಾಯತವ ಮಾಡಿಕೊಂಬುವುದು.

೧೨೭

(೪) ಮಹಾನಾದಕಳೆಯೇ ಲಿಂಗಕ್ಕಾಶ್ರಯಮಾಗಿ, ಲಿಂಗದಕಳೆಯೇ ಹೃದಯ ಕ್ಕಾಶ್ರಯಮಾಗಿ, ಹೃದಯದಕಳೆಯೇ ಜ್ಞಾನಕ್ಕಾಶ್ರಯಮಾಗಿ, ಜ್ಞಾನದ ಕಳೆಯೇ ನಿತ್ಯಕ್ಕಾಶ್ರಯಮಾಗಿ ನಿತ್ಯ ನಿರವಯ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

ಅರ್ಥ : ಮಹಾನಾದವುಳ್ಳ ಪರಬ್ರಹ್ಮದ ಚಿತ್ಕಳೆಯೇ ಇಷ್ಟಲಿಂಗಕ್ಕೆ ಚೈತನ್ಯ ವಾಗಿ ಇಷ್ಟಲಿಂಗದ ಚೈತನ್ಯ ಕಳೆಯೇ ಮನದಲ್ಲಿ ಪ್ರಾಣಲಿಂಗವಾಗುವುದಕ್ಕೆ ಆಸರವಾಗಿ, ಮನದಲ್ಲಿ ಬೆಳಗಲ್ಪಟ್ಟ ಪ್ರಾಣಲಿಂಗವೇ ಚಿತ್ಪ್ರಾಣವನು ಒಳಕೊಂಬುವು ದಕ್ಕೆ ಆಶ್ರಯವಾದ ಭಾವಲಿಂಗವಾಗಿ, ಆ ಪ್ರಾಣವನೊಳಕೊಂಡಿಪ್ಪ ಭಾವಲಿಂಗವೇ ಆತ್ಮವನೊಳಕೊಂಬುವುದಕ್ಕೆ ಆಶ್ರಯವಾದ ಮಹಾಲಿಂಗವಾಗಿ ಶಾಶ್ವತವಾದ ನಿರಾಕಾರವಾದ ಪರಶಿವಲಿಂಗವು ಅಂತರಂಗ ಬಹಿರಂಗದಲ್ಲಿ ಭಿನ್ನವಿಲ್ಲವೆಂದರ್ಥ.

೧–೧ ಪರಿಪೂರ್ಣ (ಮೂ)

೧೨೮

(೫) ಪರಪುಟ್ಟ ನಾದವು ಎಂಬ ಲಿಂಗ ತರಗೆಲೆಗಳಿಗೊಂದೇ ಗಾಳಿ ಹಾರುತ್ತಿರ್ಪವು. ಒಂದೇ ಅನಿಲನಿಂದ ದೇಹ ಸರಪಟಿಗಳೊಳಗೆಲ್ಲ ಕರೆದಡೆ ಓ ಎಂಬಾತನೇ ಬಿಡಾಡಿ.

ಅರ್ಥ : ಚಿದಾಕಾರಕ್ಕೆ ವಿಕಾರ್ಥವಾದ ಚಿದ್ಭನ ಲಿಂಗವೇ ೧[ಅ]೧ಕಾರ ಪ್ರಣಮ ಸ್ವರೂಪವಾದ ಇಷ್ಟಲಿಂಗವಾಗಿಪ್ಪುದು. ಅಂಗದಲ್ಲಿ ಸಂಸಾರವಿಷಯರಸವರತ ಇಂದ್ರಿಯಂಗಳಿಗೆ ಇಷ್ಟಲಿಂಗ ಚೈತನ್ಯಸ್ವರೂಪವಾದ ಪ್ರಾಣಲಿಂಗಸಂಬಂಧ ವಾಗಿಪ್ಪುದು. ಚೈತನ್ಯಸ್ವರೂಪವಾದ ಪ್ರಾಣಲಿಂಗಸಂಬಂಧದಿಂದ ವಿಷಯಂಗಳು ಅತ್ತ ಚರಿಸುತ್ತಿದ್ದವು. ದೇಹ ಪ್ರಾಣ ಆತ್ಮಾಂಗದೊಳಗೆಲ್ಲ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗವಾಗಿ ನೆಲೆಗೊಂಡಿಪ್ಪುದು ಒಂದೇ ಬ್ರಹ್ಮವು. ಸಗುಣ ನಿರ್ಗುಣ ಮನೋರ್ಲಯ ನಿರಂಜನ ಪೂಜೆಗಳಿಂದಾರಾಧಿಸಿ, ಶಿವೋಹಂ, ಪ್ರಾಣೋಹಂ, ಬ್ರಹ್ಮೋಹಂ, ಎಂದುಚ್ಚರಿಸಿದಡೆ, ತನ್ನ ನಿಜವನರಿವ ಜ್ಞಾನವನು ಎಚ್ಚರಿಸಿಕೊಡು ವಾತನೇ ಚಿತ್ತಿಗೆ ಚೈತನ್ಯವಾದ ನಿಃಕಲ ಬ್ರಹ್ಮವು ಎಂಬುದರ್ಥ.

೧೨೯

(೬) ಅಂಗದ ಬೊಕ್ಕಸದ ಮಂದಿರಕ್ಕೆ ಚಿದ್ಭನಲಿಂಗವೆಂಬುದೊಂದು ಬೀಗ. ತ್ರಿಗುಣವೆಂಬ ಮೂರೆಸಳಿನ ಸಿಕ್ಕು ಒಂದು, ಪೂರ್ವಗತಿ ಒಂದು, ಮಧ್ಯಗತಿ ಒಂದು, ಒಂದು ಉತ್ತರಗತಿಯಾಗಿ ಸಿಕ್ಕಿದವು. ಮೂರೆಸಳು, ಆ ಎಸಳಿಗೆ ಘಟ ಒಂದೇ ಒಡಲು. ಎಸಳು ತೆಗೆವುದಕ್ಕೆ ಕಯ್ಯ ಕಾಣೆ. ಪ್ರೀತಿಗೈಗೆ ಎಸಳು ಅಸಾಧ್ಯ ನೋಡಾ. ಇಂತೀ ಬೀಗದ ಗುಣವ ಬಸವಣ್ಣ ಪ್ರಿಯನಾಗರೇಶ್ವರಲಿಂಗವೇ ನೀವೇ ಬಲ್ಲಿರಿ.

ಅರ್ಥ : ಜ್ಞಾನಕಾಯವನೊಳಕೊಂಡುತೋರುವ ಸರ್ವಾಚಾರಸಂಪತ್ತಿನ ಆಚರಣೆಯನುಳ್ಳ ಆಚಾರಾಂಗವೆಂಬ ಮಂದಿರಕ್ಕೆ ಸತ್ತುವಿನ ಗಟ್ಟಿಯಪ್ಪ ಮಹಾ ಲಿಂಗವೆಂಬುದೊಂದು ಬೀಗವಾಗಿಪ್ಪುದು. ತ್ರಿಗುಣವೆನಿಸಿಕೊಂಬ ಕ್ರಿಯಾಜ್ಞಾನ ಭಾವಂಗಳೇ ಸಿಕ್ಕುಗಳಾಗಿ ಬಂಧಿಸಿಕೊಂಡಿರುವವು. ಸ್ಥೂಲತನುವಿನಲ್ಲಿ ಸತ್ಕ್ರಿಯಾಚಾರ ಸಂಬಂಧವಾಗಲಲ್ಲಿ ಇಷ್ಟಲಿಂಗಸಂಬಂಧವಾಗಿಪ್ಪುದು. ಸೂಕ್ಷ್ಮತನುವಿನಲ್ಲಿ ಸುಜ್ಞಾನ ಸಂಬಂಧವಾಗಲಲ್ಲಿ ಪ್ರಾಣಲಿಂಗಸಂಬಂಧವಾಗಿಪ್ಪುದು. ಕಾರಣತನುವಿನಲ್ಲಿ ಸದ್ಭಾವಸಂಬಂಧವಾಗಲಲ್ಲಿ ಭಾವಲಿಂಗಸಂಬಂಧವಾಗಿಪ್ಪುದು. ತನುತ್ರಯಂ ಗಳಲ್ಲಿ ಸಂಬಂಧವಾಗಿಪ್ಪುದು ಕ್ರಿಯಾಜ್ಞಾನಭಾವಂಗಳು. ಈ ಕ್ರಿಯಾಜ್ಞಾನ ಭಾವಂಗಳನೊಳಕೊಂಬುವುದಕ್ಕೆ ತನುತ್ರಯಂಗಳೇ ಆಶ್ರಯವಾಗಿಪ್ಪುದು. ಆ ತನುತ್ರಯಂಗಳನೊಳಕೊಂಬುವುದಕ್ಕೆ ಮಹಾಲಿಂಗ ಒಂದೇ ಆಶ್ರಯಮಾಗಿಪ್ಪುದು. ಕ್ರಿಯಾಜ್ಞಾನಭಾವವಿಡಿದು ಆಚರಿಸಿ ಲಿಂಗದಲ್ಲಿ ಕೂಡಿದ ಬಳಿಕ ಕ್ರಿಯಾಜ್ಞಾನ ಭಾವವಿಡಿದು ಆಚರಿಸುವದಕ್ಕೆ ಸದ್ಭಾವಹಸ್ತವು. ಭಿನ್ನವಿಟ್ಟಲ್ಲಿ ಶ್ರುತ ಜ್ಞಾನದಿಂದ

೧–೧ ಉ (ಮೂ)

ಅಹಂ ಬ್ರಹ್ಮವೆಂಬ ಭಿನ್ನಭಾವದ ಹಸ್ತಕ್ಕೆ ಕ್ರಿಯಾಜ್ಞಾನಭಾವಂಗಳು ಸಾಧ್ಯವಿಲ್ಲ ಕಂಡ್ಯಾ. ಇಂತೀ ಮಹಾಲಿಂಗದ ಆಚರಣೆಯನು ಬಸವೇಶ್ವರನಲ್ಲಿ ಪ್ರೀತಿಯನುಳ್ಳ ಆತ್ಮಕರ್ತುವಾದ ಪರಶಿವಲಿಂಗವೇ ನಿಮಗೆ ತಿಳಿಯಬರುವುದೆಂದರ್ಥ.

೧೩೦

(೭) ಉದಕದ ಬಾವಿಯಲ್ಲಿ ಒಂದು ರಸದ ಗರಿ ಹುಟ್ಟಿ, ಹೊಸ ಮಾಣಿಕ್ಯವ ನುಂಗಿತ್ತ ಕಂಡೆ, ನುಂಗುವಾಗ ಒಂದು, ಗುಟುಕಿಸುವಾಗ ಎರಡು, ಸ್ವಸ್ಥಾನದಲ್ಲಿ ನಿಂದಾಗ ಮೂರು, ಅಂತರಂಗವ ತಿಳಿದು ಕಳೆಯಬಲ್ಲಡೆ ನಿಷ್ಕಳಂಕ ಮಲ್ಲಿಕಾರ್ಜುನ ಲಿಂಗವ ಬಲ್ಲವ.

ಅರ್ಥ : ಚಿತ್ತದ ಭಾವದಲ್ಲಿ ಒಂದು ಶಿವಾಪೇಕ್ಷೆ ಎಂಬ ಅದ್ರಿ ಉಂಟಾಗಿ ನೂತನವಾದ ಮಹಾಪ್ರಕಾಶವನುಳ್ಳ ಮಹಾಲಿಂಗವನೇ ತ್ರಿವಿಧಾಂಗದಲ್ಲಿ ತ್ರಿವಿಧ ಲಿಂಗವಾಗಿ ಗ್ರಹಿಸಿಕೊಂಡಿಪ್ಪನು. ದೀಕ್ಷಾತ್ರಯಂಗಳಿಂದ ಗ್ರಹಿಸುವಾಗ ಒಂದನೆಯ ದಾದ ಇಷ್ಟಲಿಂಗವು ಅಂಗದಲ್ಲಿ ಸಂಬಂಧವಾಗಿಪ್ಪುದು. ಅಷ್ಟವಿಧಾರ್ಚನೆ ಷೋಡ ಶೋಪಚಾರಂಗಳ ಮಾಡಿ ಜ್ಞಾನದಿಂದ ಗ್ರಹಿಸುವಾಗ ಎರಡನೆಯದಾದ ಪ್ರಾಣ ಲಿಂಗವು ಮನದಲ್ಲಿ ಸಂಬಂಧವಾಗಿಪ್ಪುದು. ನಿರ್ಗುಣಪೂಜಾ ಕ್ರಿಯೆಗಳನ್ನು ಕೈಕೊಂಡು ಆತ್ಮನಲ್ಲಿ ನೆಲೆಗೊಂಬಾಗ ಮೂರನೆಯದಾದ ಭಾವಲಿಂಗವಾಗಿ ಸಂಬಂಧ ವಾಗಿಪ್ಪುದು. ತ್ರಿವಿಧಲಿಂಗ ಸಂಬಂಧದ ಒಪ್ಪವನರಿದು ತನುತ್ರಯಂಗಳ ವರ್ತನೆಯ ನಷ್ಟವ ಮಾಡಬಲ್ಲಡೆ ತ್ರಿವಿಧ ಲಿಂಗವನೊಳಕೊಂಡು ತೋರುವ ಮಹಾಲಿಂಗವೇ ತಾನೆಂದು ತಿಳಿಯಬಲ್ಲನೆಂಬರ್ಥ.

(೮) ಗುರುಕರುಣದಿಂದೊದಗಿದ ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದಲ್ಲಿ ಆಯತ ಲಿಂಗ. ಆ ಇಷ್ಟಲಿಂಗದ ಭಾವ ಮನೋವೇದ್ಯವಾದಲ್ಲಿ ಸ್ವಾಯತಲಿಂಗ, ಆ ಇಷ್ಟಲಿಂಗದ ಭಾವ ಮನೋವೇದ್ಯ ಸುಖವು ಭಿನ್ನವಾಗಿ ತೋರದೆ ಅನುಪಮ ಪರಿಣಾಮ ಪರಿಪೂರಿತವಾದಲ್ಲಿ ಸನ್ನಿಹಿತಲಿಂಗ. ಇಂತು ಇಷ್ಟ, ಪ್ರಾಣ, ಭಾವಲಿಂಗಂಗಳು ತನುತ್ರಯಂಗಳಲ್ಲಿ ಆಯತ, ಸ್ವಾಯತ, ಸನ್ನಿಹಿತಂಗಳಾಗಲು, ಆ ಶರಣನ ಷಡಂಗದಲ್ಲಿ ಷಡ್ವಿಧಲಿಂಗಸಂಬಂಧವಾದುದೇ ಷಟ್‌ಸ್ಥಲಂಗಳೆಂದು ಪ್ರಭುದೇವರು ನಿರೂಪಿಸಿದರು.

೧೩೧

(೯) ಆಯತ ಲಿಂಗಸಂಬಂಧವಿಲ್ಲದಾತ ಅಂಗಭವಿ. ಸ್ವಾಯತಲಿಂಗಸಂಬಂಧ ವಿಲ್ಲದಾತ ಮನಭವಿ. ಇದು ಕಾರಣ ಆಯತಲಿಂಗವ ಅಂಗದಲ್ಲಿ ಅಳವಡಿಸಿ, ಸ್ವಾಯತಲಿಂಗವ ಮನದಲ್ಲಿ ಅಳವಡಿಸಿ, ಸನ್ನಿಹಿತಲಿಂಗವ ಆತ್ಮನಲ್ಲಿ ಅಳವಡಿಸಿ, ಅಂಗ, ಪ್ರಾಣ, ಭಾವದಲ್ಲಿ ಲಿಂಗವ ಧರಿಸಿ, ಹೆರೆಹಿಂಗದಿರ್ದಿನಯ್ಯಾ, ಮಹಾಲಿಂಗ ಗುರು ಶಿವಶಿದ್ಧೇಶ್ವರಪ್ರಭುವೆ.

೧೩೨

(೧೦) ಎನ್ನ ಸ್ಥೂಲ ತನುವಿಂಗೆ ಶಿಲೆಯ ಮರೆಯಲ್ಲಿ ನಿಂದು ಎನ್ನ ಘಟದಲ್ಲಿ ಮೂರ್ತಿಗೊಂಡು, ಬಾಹ್ಯಕ್ರಿಯಾರ್ಚನೆ ಪೂಜನೆಗಳಿಂದ ಆ ಸ್ಥೂಲತನುವ ಶುದ್ಧ ಮಾಡಿದೆ. ಎನ್ನ ಸೂಕ್ಷ್ಮತನುವಿಂಗೆ [೧][ಮನದ][೧] ಕೊನೆಯಲ್ಲಿ ಅರಿವಾಗಿ ಬಂದು, ಆತನ ಪ್ರಕೃತಿ ಎಂಬ ತೆರನ ತೀರ್ಚಿ, ಸರ್ವೇಂದ್ರಿಯಂಗಳಲ್ಲಿ ನಿಂದು, ಆ ಸೂಕ್ಷ್ಮತನುವ ಶುದ್ಧಮಾಡಿದೆ. ಎನ್ನ ಕಾರಣತನುವಿಂಗೆ ಇಂದ್ರ ಮಹೇಂದ್ರಜಾಲದಂತೆ, ಮರೀಚಿಕಾ ಜಲದಂತೆ, ವಿದ್ಯುಲ್ಲತೆಯ ಸಂಚದ ಶಂಕೆಯ ಬೆಳಗಿನಂತೆ, ಸುಷುಪ್ತಿಯಲ್ಲಿ ನಿಂದು ಮರವೆಯಿಂದ ಮಗ್ನನಾಗಲೀಸದೆ ಚಿತ್ತುವಿಂಗೆ [ಮಹಾ] ಚಿತ್ತಾಗಿ, ನೀನೇ ಮೂರ್ತಿಗೊಂಡೆಯಲಾ. ಇಂತೀ ತ್ರಿವಿಧ ಸ್ವರೂಪಿನಿಂದ ತ್ರಿವಿಧಾಂಗಭರಿತನಾಗಿ ತ್ರಿವಿಧಸ್ವರೂಪು ನೀನೆಲಾ. ಭಕ್ತಿ ಕಾರಣವಾಗಿ ಶಂಭುಗಿಂದಿತ್ತ ಸ್ವಯಂಭುವಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನು.

೧೩೩

(೧೧) ಸ್ಥೂಲದಿಂದ ದೃಷ್ಟ, ಸೂಕ್ಷ್ಮದಿಂದ ಅದರ ಸಂಗ, ಕಾರಣದಿಂದ ವಾಯಭ್ರಮೆ. ಇಂತೀ ತನುತ್ರಯಂಗಳ ಕಳೆದು ನಿಜದ ಉಳಿಮೆಯಲ್ಲಿ ಒಡಗೂಡಬೇಕು ವೀರಶೂರ ರಾಮನಾಥಾ.

ಅರ್ಥ : ಸಾಕಾರವಾದ ಇಷ್ಟಲಿಂಗಸಂಬಂಧದಿಂದ ಸ್ಥೂಲತನುವಿನ ಪ್ರಪಂಚು, ನಿರಾಕಾರವಾದ ಪ್ರಾಣಲಿಂಗಸಂಬಂಧದಿಂದ ಸ್ಥೂಲತನುವಿನೊಡನೆ ಕೂಡಿದ ಸೂಕ್ಷ್ಮತನುವಿನ ಪ್ರಪಂಚು, ಇಷ್ಟಲಿಂಗ ಪ್ರಾಣಲಿಂಗಕ್ಕೆ ಕಾರಣವಾದ ಭಾವಲಿಂಗಸಂಬಂಧದಿಂದ ಕಾರಣತನುವಿನ ಪ್ರಪಂಚು, ಈ ತ್ರಿವಿಧಲಿಂಗ ಸಂಬಂಧದಿಂದ ತನುತ್ರಯಂಗಳ ಪ್ರಪಂಚನು ಬೇರ್ಪಡಿಸಿ ತ್ಯಾಗಾಂಗ, ಭೋಗಾಂಗ, ಯೋಗಾಂಗಸ್ವರೂಪವನೆಯ್ದಿಸಿ ತಾನು ತ್ರಿವಿಧಾಂಗದಲ್ಲಿ ಉಳಿಮೆಯಾದ ತ್ರಿವಿಧಲಿಂಗಪೂಜೆಯಲ್ಲಿಂದ ಮಹಾಘನಲಿಂಗದಲ್ಲಿ ಸಮರಸವಾಗ ಬೇಕೆಂಬುದರ್ಥ.

೧೩೪

(೧೨) ಕೈಯಲ್ಲಿ ಕುರಿತು ಹಿಡಿದು, ಕಣ್ಣಿನಲ್ಲಿ ನೋಡಿ, ಆತ್ಮನಲ್ಲಿ ಅರಿದು, ತನ್ನ ತಾನೇ ತಿಳಿದು ಕೈಯಲ್ಲಿದ್ದುದೇನು, ಕಣ್ಣಿನಲ್ಲಿ ನೋಡಿದುದೇನು, ಆತ್ಮನಲ್ಲಿ ಅರಿದುದೇನು? ಇಂತೀ ತ್ರಿವಿಧ ಗುಣವ ತಿಳಿಯಬೇಕಣ್ಣಾ. ಕೈಯಲ್ಲಿದ್ದುದು ಕಡದ ಲಿಂಗವೋ ? ಕಣ್ಣಿನಲ್ಲಿ ನೋಡಿದುದು ಬಣ್ಣದ ಲಿಂಗವೋ ? ಆತ್ಮನಿಂದರಿದುದು ಬಯಲ ಲಿಂಗವೋ ? ಕೈಗೂ, ಕಣ್ಣಿಗೂ, ಮನಕ್ಕೂ ಭಿನ್ನವಾಯಿತ್ತು ಲಿಂಗಪ್ರಾಣಿ, ಪ್ರಾಣಲಿಂಗಿಗಳ ಇನ್ನಾರನೂ ಕಾಣೆ. ಭಾವಿಸಲಿಲ್ಲ. ಭ್ರಮೆಗೊಳಗಾಯಿತ್ತು ಆದಿಯ

೧–೧ ಭಾವದ (ಮೂ) ೨ + ಸು

ಶರಣರೆಲ್ಲಾ ಹೋದರಲ್ಲಾ ಹೊಲಬುಗೆಟ್ಟು. ನಾದಕ್ಕೊಳಗಾಯಿತ್ತು ಆತ್ಮನ ಕಳೆಯನೆಯ್ದಿದರಿನ್ನಾರನೂ ಕಾಣೆ. ಕಳಾತೀತ ಪರಂಜ್ಯೋತಿಪ್ರಕಾಶ ನೀನೆ ನಿಷ್ಕಳಂಕ ಮಲ್ಲಿಕಾರ್ಜುನಾ.

ಅರ್ಥ : ಹಸ್ತದಲ್ಲಿ ಇಷ್ಟಲಿಂಗವನು ಕುರುಹಿಟ್ಟು ಪಿಡಿದು, ಸುಜ್ಞಾನದೃಷ್ಟಿಯಲ್ಲಿ ಪ್ರಾಣಲಿಂಗವ ನಿರೀಕ್ಷಿಸಿ, ಆತ್ಮನಲ್ಲಿ ಭಾವಲಿಂಗದ ಸಂಬಂಧವ ತಿಳಿದು, ತಮ್ಮ ಜ್ಞಾನದಿಂದ ತಾವೇ ಅರಿದು, ನಾವು ತ್ರಿವಿಧಲಿಂಗಸಂಬಂಧಿಗಳೆಂದು ಹೇಳುತ್ತಿಹರು. ಕೈಯಲ್ಲಿರುವುದು ಇಷ್ಟಲಿಂಗವೆಂದು, ಜ್ಞಾನದೃಷ್ಟಿಯಲ್ಲಿ ನೋಡಿದುದು ಪ್ರಾಣಲಿಂಗವೆಂದು, ಆತ್ಮನಲ್ಲಿ ತಿಳಿದುದು ಭಾವಲಿಂಗವೆಂದು, ಈ ತ್ರಿವಿಧಲಿಂಗ ಒಂದೇ ಎಂಬ ಸಮರಸಭಾವವನರಿಯಬೇಕು. ಎಲೇ ಹಿರಿಯರುಗಳಿರಾ, ಕೈಯಲ್ಲಿರುವುದು ಪಂಚಸೂತ್ರಪ್ರಮಾಣದಿಂದ ಕಟೆದು, ತಿದ್ದಿ ತೀರ್ಚಿ, ಒಪ್ಪವಿಟ್ಟುದು ಲಿಂಗವೆಂದಲ್ಲಿ ಅಹುದು ಎಂಬರು. ಸುಜ್ಞಾನದೃಷ್ಟಿಯಲ್ಲಿ ನಿರೀಕ್ಷಿಸಿದುದು ಸಾಕಾರ ನಿರಾಕಾರದೊಡನೆ ಕೂಡಿದ ಮಂತ್ರಮೂರ್ತಿಯಾದ ಪ್ರಾಣಲಿಂಗವು ಎಂದಲ್ಲಿ ಅಹುದು ಎಂಬರು. ಆತ್ಮನಿಂದ ತಿಳಿದು ನಿರಾಕಾರವಾದುದು ಭಾವಲಿಂಗವು ಎಂಬಲ್ಲಿ ಅಹುದು ಎಂಬರು. ಕೈಯಲ್ಲಿಪ್ಪ ಇಷ್ಟಲಿಂಗಕ್ಕೂ, ಸುಜ್ಞಾನದಲ್ಲಿ ನೋಡಿದ ಪ್ರಾಣಲಿಂಗಕ್ಕೂ, ಆತ್ಮನಲ್ಲಿ ತಿಳಿದ ಭಾವಲಿಂಗಕ್ಕೂ ಬೇರಾಯಿತ್ತು. ಪ್ರಾಣಲಿಂಗದಲ್ಲಿ ಪ್ರಾಣವು ಕೂಡಿ, ಪ್ರಾಣದಲ್ಲಿ ಪ್ರಾಣಲಿಂಗವು ಕೂಡಿ, ಪ್ರಾಣ ಪ್ರಾಣಲಿಂಗ ಸಮರಸ ಉಳ್ಳವರ ಒಬ್ಬರನೂ ಕಾಣೆನು. ತ್ರಿವಿಧಲಿಂಗವು ಒಂದೇ ಎಂಬ ಸಮರಸಭಾವದಿಂದೆ ಭಾವಿಸಲಿಲ್ಲ. ಭಿನ್ನಭಾವಿಗಳು ಭಿನ್ನಭಾವಭ್ರಾಂತಿಗೆ ಈಡಾದರು. ಜ್ಞಾನಿಗಳೆನಿಸಿಕೊಂಬ ಶರಣರುಗಳೆಲ್ಲರು ಸತ್ಪಥಮಾರ್ಗಕ್ಕೆ ವಿಲಕ್ಷಣರಾಗಿ ಭಿನ್ನಭಾವಿಗಳಾಗಿ ಹೋದರಲ್ಲಾ. ಇವರೆಲ್ಲರು ಪ್ರಾಣನ ಪ್ರಪಂಚಿಗೆ ಒಳಗಾದರು. ಆತ್ಮನಲ್ಲಿ ಬೆಳಗುವ ಮಹಾಲಿಂಗವೇ ಇಷ್ಟ, ಪ್ರಾಣ, ಭಾವಲಿಂಗವಾಗಿಪ್ಪುದೆಂದರಿದು, ತ್ರಿವಿಧಭಕ್ತಿ ವಿಡಿದು, ಆಚರಿಸಿ, ಮಹಾಲಿಂಗದಲ್ಲಿ ಕೂಡುವರೊಬ್ಬರನೂ ಕಾಣೆ. ಪರಂಜ್ಯೋತಿ ಪ್ರಕಾಶವನುಳ್ಳ ಮಹಾಲಿಂಗವೇ, ನೀನು ಪ್ರಾಣನ ವರ್ತನೆ ಇಲ್ಲದ ಚಿತ್ಪ್ರಾಣನಲ್ಲಿ ಪ್ರಾಣಲಿಂಗವಾಗಿಪ್ಪೆ. ದೇಹದ ವರ್ತನೆ ಇಲ್ಲದ ಆಚಾರಲಿಂಗದಲ್ಲಿ ಇಷ್ಟಲಿಂಗವಾಗಿಪ್ಪೆ. ಆತ್ಮನ ವರ್ತನೆ ಇಲ್ಲದ ಚಿದಾತ್ಮನಲ್ಲಿ ಭಾವಲಿಂಗವಾಗಿಪ್ಪೆ, ಎಂದರಿದು ಸಮರಸದಿಂದ ಆಚರಿಸುತ್ತಿರುವನೆಂಬುದರ್ಥ.

೧೩೫

(೧೩) ಹೊರಸವಿ, ಒಳಸವಿ, ತೀರಾಸವಿ. ಹೊರಸವಿಯಿಂದ ಬ್ರಹ್ಮ ಸತ್ತ ಒಳಸವಿಯಿಂದ ವಿಷ್ಣು ಸತ್ತ ತೀರಾಸವಿಯಿಂದ ರುದ್ರ ಸತ್ತ ಷಡ್ರುಚಿಯಿಂದ ಬ್ರಹ್ಮಾಂಡ ಜನರು ಸತ್ತರು. ಇಂತೀ ಸವಿಯ ಸೇವಿಸಿದಾತನೇ ನಿಜಲಿಂಗೈಕ್ಯ ನಿಃಕಳಂಕ ನಿರ್ಮಾಯಪ್ರಭುವೆ.

ಅರ್ಥ : ಉತ್ಪತ್ತಿಯ ಮೇಲೆ ಕಡಿದರೆ ಸವಿ ತಟ್ಟುತ್ತಿರ್ಪುದಲ್ಲದೆ, ಒಳಗೆ ಕಡಿದರೆ ಮಹಾಕಠಿಣವಾಗಿ ತೋರುವ ಹಾಗೆ, ಇಷ್ಟಲಿಂಗವನು ಇದಿರಿಟ್ಟು ಅಷ್ಟ ವಿಧಾರ್ಚನೆ ಷೋಡಶೋಪಚಾರವನು ಮಾಡಿದಡೆ ಭಿನ್ನಭಾವದ ಜೀವಾತ್ಮರಿಗೆ ಮಹಾರಮ್ಯವಾಗಿ ತೋರುವದು. ಆ ಇಷ್ಟಲಿಂಗದ ಚಿತ್ಕಳೆಯನು ಅಂತರಂಗಕ್ಕೆ ವೇಧಿಸು ಎಂದಡೆ ಕರ್ಮಕಾಂಡಿಗೆ ಅಸಾಧ್ಯವಾಗಿ ತೋರುತ್ತಿಹುದೆಂಬುದೀಗ, ಹೊರಸವಿ ಎಂಬ ಶಬ್ದಕ್ಕರ್ಥ. ತೆಂಗಿನಕಾಯಿಯ ಮೇಲೆ ಕಡಿದಡೆ ಕಠಿಣವಾಗಿ ತೋರುವದು. ಒಡೆದು ಒಳಗೆ ನೋಡಿದಡೆ ರುಚಿಯಾಗಿ ತೋರುವುದು. ಹಾಗೆ ದೇಹ ಭಾವವನಳಿಯದೆ, ಪ್ರಾಣಲಿಂಗದಲ್ಲಿ ಸಮರಸಭಕ್ತಿ ಎಂಬುದು ಕರ್ಮಕಾಂಡದ ವೇದಾಂತಿ, ಯೋಗಮಾರ್ಗಿ ಸಿದ್ಧಾಂತಗಳಿಗೆ ಅಸಾಧ್ಯ. ಆ ದೇಹಭಾವ ಸತ್ಕ್ರೀಲಿಂಗದಲ್ಲಿ ಅಳಿದು ಸುಜ್ಞಾನಸ್ವರೂಪವಾದ ಪ್ರಾಣಲಿಂಗದಲ್ಲಿ ಅವಿರಳ ಸಂಬಂಧಿಯಾದ ಜ್ಞಾನಕಲಾತ್ಮಂಗೆ ಶಿವಸುಖ ಮಹಾನಂದವಾಗಿ ತೋರುವದೆಂಬುದೀಗ, ಒಳಸವಿ ಎಂಬ ಶಬ್ದಕ್ಕರ್ಥ. ಬೆಲ್ಲದ ಪೆಂಟೆಯ ಯಾವ ಕಡೆಗೆ ಕಡಿದಡೆಯೂ ರುಚಿಯಾಗಿ ತೋರುವುದಲ್ಲದೆ, ಕಹಿಯಾಗಿ ತೋರದು. ಹಾಗೆ ಇಷ್ಟ ಪ್ರಾಣವನೊಳಕೊಂಡ ಭಾವಲಿಂಗದಲ್ಲಿ ಸಮರಸವಾದ ಶಿವಜ್ಞಾನಿಗಳು ಇಂದ್ರಿಯಂಗಳ ಶ್ರೀಗುರು ಆವ ಕಡೆಗೆ ಮುಟ್ಟಿ ನೋಡಿದಡೆಯೂ ಅಮೃತಮಯವಾಗಿ ತೋರುವುದಲ್ಲದೆ ಸಂಸಾರಸಾರವಾಗಿ ತೋರಲಿಲ್ಲವೆಂಬುದೀಗ ತೀರಾಸವಿ ಎಂಬ ಶಬ್ದಕ್ಕರ್ಥ. ಚಿದಂಶಿಕನಾದ ಜ್ಞಾನಕಲಾತ್ಮನು ಇಷ್ಟಲಿಂಗವನು ಬ್ರಹ್ಮತತ್ವಾಂಶಿಕವಾದ ಸ್ಥೂಲ ತನುವಿನಲ್ಲಿ ಸ್ವಾಯತವ ಮಾಡಿ, ಆ ಸ್ಥೂಲತನುವಿನ ಪ್ರಕೃತಿಯನು ನಷ್ಟವ ಮಾಡಿದನೆಂಬುದೀಗ, ಹೊರಸವಿಯಿಂದ ಬ್ರಹ್ಮಸತ್ತನೆಂಬ ಶಬ್ದಕ್ಕರ್ಥ. ಆ ಇಷ್ಟಲಿಂಗದ ಪ್ರಾಣಕಳಾ ಚೈತನ್ಯಸ್ವರೂಪವಾದ ಪ್ರಾಣಲಿಂಗವನು ವಿಷ್ಣು ತತ್ವಾಂಶಿಕ ಸೂಕ್ಷ್ಮತನುವಿನಲ್ಲಿ ಸ್ವಾಯತವ ಮಾಡಿ ಆ ಸೂಕ್ಷ್ಮತನು ಪ್ರಕೃತಿಯ ನಷ್ಟವ ಮಾಡಿದನೆಂಬುದೀಗ, ಒಳಸವಿಯಿಂದ ವಿಷ್ಣು ಸತ್ತನೆಂಬ ಶಬ್ದಕ್ಕರ್ಥ. ಪ್ರಾಣಲಿಂಗದ ಪರಮಾನಂದಸ್ವರೂಪವಾದ ಭಾವಲಿಂಗವನು ರುದ್ರತತ್ವಾಂಶಿಕವಾದ ಕಾರಣ ತನುವಿನಲ್ಲಿ ಸ್ವಾಯತವ ಮಾಡಿ, ಆ ತನುವಿನ ಪ್ರಕೃತಿಯ ನಷ್ಟವ ಮಾಡಿದ ನೆಂಬುದೀಗ, ತೀರಾಸವಿಯಿಂದ ರುದ್ರ ಸತ್ತ ಎಂಬ ಶಬ್ದಕ್ಕರ್ಥ. ಆ ಇಷ್ಟ, ಪ್ರಾಣ, ಭಾವಲಿಂಗದ ವಿಕಸ್ವರೂಪವಾದ ಘನಮಹಾಲಿಂಗವನು ಷಡ್ವಿಧಾಂಗದಲ್ಲಿ ಷಡ್ವಿಧ ಲಿಂಗವನು ಮಾಡಿ ಸಂಬಂಧಿಸಿ, ಆ ಷಡ್ವಿಧಾಂಗದಲ್ಲಿರುವ ಮನ ಮೊದಲಾಗಿ ಅರುವತ್ತಾರುಕೋಟಿ ಕರಣಂಗಳ ಪ್ರಕೃತಿಯ ನಷ್ಟವಮಾಡಿದನೆಂಬುದೀಗ, ಷಡ್ರುಚಿಯಿಂದ ಬ್ರಹ್ಮಾಂಡದ ಜನರು ಸತ್ತರು ಎಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗವನು ಸರ್ವಾಂಗದಲ್ಲಿ ಸಂಬಂಧವ ಮಾಡಿಕೊಂಡ ಶಿವಶರಣನು ಪ್ರಳಯವಿರಹಿತವಾದ ಮಹಾಲಿಂಗೈಕ್ಯವೆಂಬುದೀಗ, ಇಂಥಾ ಸವಿಯ ಸೇವಿಸಿದಾತ ನಿಜಲಿಂಗೈಕ್ಯ ನಿಷ್ಕಳಂಕ ನಿರ್ಮಾಯ ಪ್ರಭುವೆ ಎಂಬ ಶಬ್ದಕ್ಕರ್ಥ.

೧೩೬

(೧೪) ಅಂಗಕ್ರಿಯೆ[ಯ]ನರಿದಲ್ಲಿ ಸ್ಥಾಣುವಿನ ಬಾಯ ತಿಲದಂತೆ, ಆತನ ಕಳೆಯ ತಿಳಿದಲ್ಲಿ ಆ ಶಿಲೆಯೊಳಗಿರ್ದ ಬಿಂದು ಒಲವರದಿಂದ ಜಾರುವಂತೆ, ಆ ಅರಿವು ಮಹದಲ್ಲಿ ಬೆರೆಸುವಾಗ ವಾರಿಶಿಲೆ ನೋಡ ನೋಡಲಿಕ್ಕೆ ನೀರಾದಂತೆ, ಇರಬೇಕು. ಕಾಯವಶದಿಂದ ಕರ್ಮವ ಮೀರಿ, ಕರ್ಮವಶದಿಂದ ಧರ್ಮವಶದಿಂದ ವರ್ಮ [ಮರ್ಮ]ಗತನಾದಲ್ಲಿ ಅದೇ ಕಾಯವೆರಸಿ ಎಯ್ದಿದ ಕೈಲಾಸ. ಆ ಭಾವವ ನಿಮ್ಮಲ್ಲಿ ನೀವೇ ತಿಳಿದುಕೊಳ್ಳಿ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ.

ಅರ್ಥ : ಎಳ್ಳನು ಗಾಣದಲಿಕ್ಕಿ ಕ್ರಿಯೆಯಿಂದ ಬಾಧಿಸಿದಡೆ ತಿಲದಲ್ಲಿರ್ದ ತೈಲ ಪ್ರತ್ಯಕ್ಷವಾಗಿ ಕೈಸಾರುವಂತೆ, ಆತ್ಮಾಂಗವ ಶಿವಕ್ರಿಯೆಯಿಂದ ಬಾಧಿಸಿದಡೆ ಆತ್ಮಾಂತರ್ಗತವಾಗಿರ್ದ ಚಿಲ್ಲಿಂಗವು ಪ್ರತ್ಯಕ್ಷವಾಗಿ ಕರಸ್ಥಲದಲ್ಲಿ ಕಾಣಬಹುದೆಂಬುದೀಗ, ಅಂಗಕ್ರಿಯೆಯನರಿದಲ್ಲಿ ಸ್ಥಾಣುವಿನ ಬಾಯ ತಿಲದಂತೆ ಎಂಬ ಶಬ್ದಕ್ಕರ್ಥ. ಚಂದ್ರಕಾಂತದ ಶಿಲೆಯಲ್ಲಿರ್ದ ಅಮೃತಬಿಂದು ಚಂದ್ರೋದಯಕ್ಕೊಸರುವಂತೆ, ಆ ಇಷ್ಟಲಿಂಗಕಳೆಯನು ತನ್ನಾತ್ಮಕಳೆಯೆಂದು ತಿಳಿವ ಶಿವಜ್ಞಾನೋದಯವಾಗಿ, ಆ ಇಷ್ಟಲಿಂಗದ ಕಳೆ ಬಲಿದು ಸರ್ವಾಂಗವ ತುಂಬಿ, ಲಿಂಗಾನಂದಜಲ ಉಕ್ಕುತ್ತಿಹುದೆಂಬುದೀಗ, ಆತ್ಮನ ಕಳೆಯ ತಿಳಿದಲ್ಲಿ ಶಿಲೆಯಲ್ಲಿರ್ದ ಬಿಂದು ಒಲವರದಿಂದ ಜಾರುವಂತೆ ಎಂಬ ಶಬ್ದಕ್ಕರ್ಥ. ಅಂತು ಕ್ರಿಯಾಜ್ಞಾನದಿಂದ ಲಿಂಗಾಂಗಸಂಬಂಧಿಯಾಗಿ ಜೀವತ್ವವಳಿದು ಶಿವೋಹಂಮೆಂಬ ಅಹಂಭಾವದರಿವ ತನ್ನ ಶಿವತತ್ವದಲ್ಲಿ ಭಕ್ತಿರತಿ ಕ್ರಿಯೆಯಲ್ಲಿ ಏಕರಸವ ಮಾಡಬೇಕೆಂಬುದೀಗ, ಅರಿವು ಮಹದಲ್ಲಿ ಬೆರೆಸುವಾಗ ವಾರಿಶಿಲೆ ನೋಡ ನೋಡ ನೀರಾದಂತಿರಬೇಕು ಎಂಬ ಶಬ್ದಕ್ಕರ್ಥ. ಅಂತು ಶಿವಕ್ರಿಯೆಯಿಂದ ದೇಹವಾಸನೆಯಳಿದು ಲಿಂಗದೇಹವಾಯಿತ್ತಾಗಿ ಸಂಚಿತ, ಪ್ರಾರಬ್ಧ , ಆಗಾಮಿ ಎಂಬ ಕರ್ಮಕ್ಕೆ ಹೊರಗಾದನೆಂಬುದೀಗ, ಕಾಯವಶದಿಂದ ಕರ್ಮವ ಮೀರಿ ಎಂಬ ಶಬ್ದಕ್ಕರ್ಥ. ಅಂತು ಭಕ್ತಿಕ್ರಿಯೆಯಿಂದ ಲಿಂಗದಲ್ಲಿ ಏಕರಸವಾಗಿ, ಲಿಂಗವೆಯಾಗಿರ್ದ ಶರಣನೆಂಬುದೀಗ, ಕರ್ಮವಶದಿಂದ ಧರ್ಮವಶದಿಂದ [ವರ್ಮ]ಗತನಾದಲ್ಲಿ ಎಂಬ ಶಬ್ದಕ್ಕರ್ಥ. ಅಂತು ಜೀವತತ್ವವಳಿದು ಲಿಂಗತತ್ವವಾದ ಶರಣಕಾಯವು ಲಿಂಗಕಾಯವಾಯಿತ್ತಾಗಿ ಶರಣಕಾಯವೇ ಕೈಲಾಸವೆಂದರಿಯ ಬೇಕು. ಬೇರೆ ಕೈಲಾಸಕ್ಕೆ ಹೋಗಬೇಕೆಂಬ ಸಂದೇಹವ ಬಿಟ್ಟಿರ ಬೇಕೆಂಬುದೀಗ, ವರ್ಮವಶಗತವಾದಲ್ಲಿ ಅದೇ ಕಾಯವೆರಸಿ ಎಯ್ದಿದ ಕೈಲಾಸ. ಆ ಭಾವವ ನಿಮ್ಮಲ್ಲಿ ನೀವು ತಿಳಿದುಕೊಳ್ಳಿ ಎಂಬ ಶಬ್ದಕ್ಕರ್ಥ.

೧೩೭

(೧೫) ಸ್ಥೂಲತನುವ ಬಿಟ್ಟು ಕಂಡೆಹನೆಂದಡೆ ನೀನೇ ಪ್ರಮಾಣು, ಕ್ರಿಯೆವಿಡಿದು ಅಂಗದಲ್ಲಿ ನಿಂದ ಕಾರಣ. ಸೂಕ್ಷ್ಮತನುವನೊಲ್ಲದೆ ನಿನ್ನ ನೋಡಿ ಕಂಡೆಹನೆಂದಡೆ ನೀವೇ ಪ್ರಮಾಣು, ಭಾವದ ಕೊನೆಯಲ್ಲಿ ಅರ್ಚಿಸಿಕೊಂಬೆಯಾಗಿ.

ಕಾರಣ ತನುವ ಮರೆದು ನಿನ್ನ ನೋಡಿ ಕಂಡೆಹೆನೆಂದಡೆ ನೀವೇ ಪ್ರಮಾಣು, ಚಿದಂತ್ಯ ಚಿತ್ಪ್ರಕಾಶದ ಬೆಳಗಿನಲ್ಲಿ ಕಟ್ಟುವಡೆದೆಯಾಗಿ. ಇಂತೀ ಜಾಗ್ರದಲ್ಲಿ ಕ್ರಿಯಾವಂತನಾಗಿ, ಸ್ವಪ್ನದಲ್ಲಿ ಆತ್ಮಸ್ವರೂಪನಾಗಿ, ಸುಷುಪ್ತಿಯಲ್ಲಿ ಮೂರ್ಛೆಯಿಂದ ಅಮೂರ್ತಿಯಾಗಿ, ವಿರಳಕ್ಕೆ ವಿರಳನಾಗಿ ಪರಿಪೂರ್ಣವಸ್ತು ನೀನಲಾ, ಭಕ್ತಿಕಾರಣನಾಗಿ, ಶಂಭುಗಿಂದತ್ತ ಸ್ವಯಂಭುಗಿಂದಿತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರಾ.

೧೩೮

(೧೬) ಸದ್ಗುರುಸ್ವಾಮಿ ಅನುಗ್ರಹಿಸಿ ಕೊಟ್ಟುದೇ ಇಷ್ಟಲಿಂಗ. ಆ ಲಿಂಗವೇ ಪ್ರಾಣವ ಭೇದಿಸಿ ಪ್ರಾಣಲಿಂಗವಾಯಿತ್ತು; ಭಾವವ ಭೇದಿಸಿ ಭಾವಲಿಂಗವಾಯಿತ್ತು; ಈ ತ್ರಿವಿಧವು ಒಂದೇ ಲಿಂಗ ಕಾಣಾ ಅಪ್ರಮಾಣ ಕೂಡಲಸಂಗಮದೇವಾ.

ಮೂರು ಅಂಗಸ್ಥಲಗಳು
(ತ್ಯಾಗಾಂಗ, ಭೋಗಾಂಗ, ಯೋಗಾಂಗ)

೧೩೯

(೧) ತನುಗುಣವಳಿದಲ್ಲಿ ತ್ಯಾಗಾಂಗ. ಲಿಂಗದೊಡನೆ ಸಕಲ ಸುಖಂಗಳ ಭೋಗಿಸುವಲ್ಲಿ ಭೋಗಾಂಗ. ನಿಜದಲ್ಲಿ ಬೆರೆಯಲು ಯೋಗಾಂಗ. ಇಂತೀ ತ್ರಿವಿಧದಲ್ಲಿಯೂ ಯೋಗಾಂಗ. ಇದಲ್ಲದನ್ಯಯೋಗಂಗಳೆಲ್ಲ ವಿಯೋಗವಯ್ಯ ಸೌರಾಷ್ಟ್ರ ಸೋಮೇಶ್ವರಾ.

೧೪೦

(೨) ಕತ್ತಲೆ ಸತ್ತು ಬೆಳಗು ಬೀದಿವರಿಯಿತ್ತು ನೋಡಾ ಎಲೆ ಅಮ್ಮ, ಪಂಚತತ್ವಂಗಳ ಮೇಲಿಪ್ಪ ಆಚಾರಲಿಂಗದ ನೈಷ್ಠೆಯ ಬಲದಿಂದ ಅಖಂಡಿತ ಕರಣಂಗಳ ನೊಳಕೊಂಡಿಪ್ಪ ಈಷಣತ್ರಯಂಗಳನಿಕ್ಕಿ ತ್ಯಾಗಾಂಗಿಯಾದೆ. ಹದಿನೇಳು ತತ್ವಂಗಳ ಮೇಲಿಪ್ಪ ಜಂಗಮಲಿಂಗದ ಎಚ್ಚರದ ಬಲದಿಂದ ಅನಂತ ಸವಿಯನೊಳಕೊಂಡಿಪ್ಪ ಷಡ್‌ರಸಂಗಳಲ್ಲಿ ಲಿಂಗಭೋಗೋಪಭೋಗಿಯಾಗಿ ಭೋಗಾಂಗಿಯಾದೆ. ಮೂರು ತತ್ವಂಗಳ ಮೇಲಿಪ್ಪ ನಿರಾಕಾರಲಿಂಗದ ಅರುಹಿನ ಬಲದಿಂದ ಪ್ರಣಮ ಪಂಚಾಕ್ಷರಿಯ ಸ್ಮರಿಸಿ, ಮನ ಮಹಾಲಿಂಗದಲ್ಲಿ ಯೋಗವಾಗಿ, ಯೋಗಾಂಗಿಯಾದೆ. ಚಿದ್ಬ್ರಹ್ಮಾಂಡದೊಳಗಣ ಏಳು ತಾವರೆಯ ಮೇಲಿಪ್ಪ ನಿಷ್ಕಳ ಚಿದ್ಬಿಂದುಲಿಂಗಕ್ಕೆ ಪ್ರಾಣಪೂಜೆಯ ಮಾಡಿದ ಮಹಾಜ್ಞಾನದ ಬಲದಿಂದ ಲಿಂಗಂಗಳ ಬೆಳಗು ಪಿಂಡಾಂಡದಲ್ಲಿ ಪ್ರಭವಿಸಿ ತೋರುತ್ತಿಪ್ಪುದಾಗಿ, ನಾನು ಸರ್ವಾಂಗಲಿಂಗಿಯಾದೆನಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೩) ತನುತ್ರಯಂಗಳಲ್ಲಿ, ತನುಮನಧನಂಗಳಲ್ಲಿ, ಗುರುಲಿಂಗಜಂಗಮಕ್ಕೆ ವಂಚನೆ ಇಲ್ಲದೆ, ನಿರ್ವಂಚನೆಯಿಂದ ಸಮರ್ಪಣೆಯ ಮಾಡುವಂತಹದ್ದೇ ತ್ಯಾಗಾಂಗವು. ಆ ಗುರು, ಲಿಂಗ, ಜಂಗಮದ ಮುಖದಿಂದುಳುಮೆಯಾಗಿ ಬಂದ

ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದತ್ರಯಂಗಳ ಪಡೆದನುಭವಿಸಿ ಹೋಗುವಂತಹದೇ ಭೋಗಾಂಗವು. ತನುವೇ ಗುರುವಿನಲ್ಲಿ, ಮನವೇ ಲಿಂಗದಲ್ಲಿ, ಧನವೇ ಜಂಗಮದಲ್ಲಿ ಏಕರಸವ ಮಾಡಿಕೊಂಡಿರುವಂತಹದೇ ಯೋಗಾಂಗವು ಎನಿಸಿಕೊಂಬ ಈ ಮೂರು ಅಂಗಸ್ಥಲವು ಸಂಬಂಧವಾಗಿ, ಸ್ವಾಯತವಾಗಿ ಎಂಬಲ್ಲಿ ಸ್ಥೂಲತನುವಿನಲ್ಲಿ ತ್ಯಾಗಾಂಗವು, ಸೂಕ್ಷ್ಮತನುವಿನಲ್ಲಿ ಭೋಗಾಂಗವು, ಕಾರಣತನುವಿನಲ್ಲಿ ಯೋಗಾಂಗವು ಎಂಬ ತ್ರಿವಿಧ ಅಂಗಸ್ಥಲಂಗಳು.

೧೪೧

(೪) ವಾಗ್ಬ್ರಹ್ಮಿಗಳೆಲ್ಲರು ಪಡುವ ಪಾಟ ನೋಡಿ, ನಮ್ಮ ಭಕ್ತರು ತ್ಯಾಗಾಂಗದಲ್ಲಿ, ಇಷ್ಟ, ಪ್ರಾಣ, ಭಾವಕ್ಕೆ ಬಾಹ್ಯ ಪದಾರ್ಥರೂಪವ, ಈ ಕ್ಷಣ [ದರ್ಶನ] ಜ್ಞಾನ, ಸ್ಪರ್ಶನದಿಂದ ಅರ್ಪಿಸಿ ದೇಹಪ್ರಸಾದಿಯಾಗಿ, ಚರಶೇಷದಲ್ಲಿ ಇಷ್ಟಲಿಂಗ ಪೂಜಕರಾಗಿ ಅನಿಷ್ಟವ ಪರಿಹರಿಸಿದರು. ಭೋಗಾಂಗದಲ್ಲಿ ಇಷ್ಟ, ಪ್ರಾಣ, ಭಾವಕ್ಕೆ ದೇಹ ಪದಾರ್ಥರೂಪವ ರೂಪು, ರುಚಿ, ತೃಪ್ತಿಯಿಂದ ಅರ್ಪಿಸಿ, ಪ್ರಾಣಪ್ರಸಾದಿಯಾಗಿ, ಲಿಂಗಶೇಷದಲ್ಲಿ ಪ್ರಾಣಲಿಂಗನೈಷ್ಠಿಕರಾಗಿ, ವಾಯುಗುಣವಿಕಾರವ ಕೆಡಿಸಿದರು. ಯೋಗಾಂಗದಲ್ಲಿ ಇಷ್ಟ, ಪ್ರಾಣ, ಭಾವಕ್ಕೆ ವಾಯುಪದಾರ್ಥರೂಪವ ಸ್ಥೂಲ, ಸೂಕ್ಷ್ಮ, ಕಾರಣದಿಂದ ಅರ್ಪಿಸಿ, ಮಹಾಪ್ರಸಾದಿಯಾಗಿ, ಗುರುಶೇಷದಲ್ಲಿ ಮನೋಗುಣ ವಿಕಾರವ ಪರಿಹರಿಸಿದರು ಗುಹೇಶ್ವರಲಿಂಗದಲ್ಲಿ.

ಆರು ಲಿಂಗಸ್ಥಲಗಳು
(ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ)

೧೪೨

(೧) ಭಕ್ತಂಗೆ ಲಿಂಗವಾವುದು, ಮಹೇಶ್ವರಂಗೆ ಲಿಂಗವಾವುದು, ಪ್ರಸಾದಿಗೆ ಲಿಂಗವಾವುದು, ಪ್ರಾಣಲಿಂಗಿಗೆ ಲಿಂಗವಾವುದು, ಶರಣಂಗೆ ಲಿಂಗವಾವುದು. ಐಕ್ಯಂಗೆ ಲಿಂಗವಾವುದು ಎಂದಡೆ, ಲಿಂಗಸ್ಥಲದ ಭೇದವ ಹೇಳಿಹೆನಯ್ಯ. ಭಕ್ತಂಗೆ ಆಚಾರಲಿಂಗ, ಮಹೇಶ್ವರಂಗೆ ಗುರುಲಿಂಗ, ಪ್ರಸಾದಿಗೆ ಶಿವಲಿಂಗ, ಪ್ರಾಣಲಿಂಗಿಗೆ ಜಂಗಮಲಿಂಗ, ಶರಣಂಗೆ ಪ್ರಸಾದಲಿಂಗ, ಐಕ್ಯಂಗೆ ಮಹಾಲಿಂಗ ಎಂದು ಹೇಳಲ್ಪಟ್ಟಿತ್ತಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೪೩

(೨) ಇಂತೀ ಷಡ್ವಿಧ ಲಿಂಗಂಗಳಿಗೆ, ಶಕ್ತಿಗಳಾವುವೆಂದಡೆ, ಆಚಾರಲಿಂಗಕ್ಕೆ ಕ್ರಿಯಾಶಕ್ತಿ ಗುರುಲಿಂಗಕ್ಕೆ ಜ್ಞಾನಶಕ್ತಿ ಶಿವಲಿಂಗಕ್ಕೆ ಇಚ್ಛಾಶಕ್ತಿ ಜಂಗಮಲಿಂಗಕ್ಕೆ ಆದಿಶಕ್ತಿ ಪ್ರಸಾದಲಿಂಗಕ್ಕೆ ಪರಾಶಕ್ತಿ ಮಹಾಲಿಂಗಕ್ಕೆ ಚಿತ್‌ಶಕ್ತಿ ಇಂತೀ ಶಕ್ತಿಗಳು. ಸೌರಾಷ್ಟ್ರಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯ.

(೩) ಕ್ರಿಯಾಶಕ್ತಿ : ಕ್ರಿಯಾಶಕ್ತಿಯ ಮಥನದಿಂದ, 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ'

ಎಂದು ಹೇಳುತ್ತಿಹುದಾದ ಕಾರಣ ಕ್ರಿಯಾಶಕ್ತಿ ಎರಡು ತೆರನಾಗಿರುತ್ತಿಹಳು. ಅದು ಹೇಗೆಂದಡೆ, ಲೋಕದಾತ್ಮರುಗಳಿಗೆ ಅಸಿ, ಮಸಿ, ಕೃಷಿ, ವಾಣಿಜ್ಯ, ಯಾಚನೆ, ಗೋಪಾಲತ್ವವೆಂಬ ಷಟ್‌ಕೃಷಿಗಳನ್ನೇ ಮಾಡಿಕೊಡುತ್ತಿಹಳು. ಇತ್ತ ಗುರು ಕಾರುಣ್ಯವ ಪಡೆದು, ಲಿಂಗಾಂಗಸಂಬಂಧಿಗಳಾಗಿ ಆಚರಿಸುವ ಶಿವಶರಣರುಗಳಿಗೆ ಗುರುಭಕ್ತಿ ಲಿಂಗಪೂಜೆ, ಜಂಗಮದಾಸೋಹ ಮುಂತಾದ ಸತ್ಕೃತ್ಯವನ್ನುಂಟು ಮಾಡಿಕೊಡುತ್ತಿಹಳು. ಈ ರೀತಿಯಲ್ಲಿ ಕ್ರಿಯಾಶಕ್ತಿ ಎರಡು ತೆರನಾಗಿರುತ್ತಿಹಳು. ವಾಗಾದಿ ಕರ್ಮೇಂದ್ರಿಯಂಗಳೈದು, ಕ್ರಿಯಾಶಕ್ತಿ ಸ್ವರೂಪದಿಂದ ಇದ್ದಿತಾದ ಕಾರಣ ಆ ಕ್ರಿಯಾಶಕ್ತಿಸ್ವರೂಪವಾದ ವಾಗಾದಿ ಕರ್ಮೇಂದ್ರಿಯಂಗಳೊಳಗೆ 'ಶಿವಾ' ಎಂಬುದೇ ವಾಕ್ಕು, ಶಿವಾಚಾರ ದೃಢಪಡಿಸುವುದೇ ಪಾಣಿ, ಗುರುಮಾರ್ಗಾಚಾರದಲ್ಲಿ ಆಚರಿಸುವುದೇ ಪಾದ, ಅಧೋಗತಿಗಳೆವ ಮಲತ್ರಯಂಗಳ ಬಿಡುವುದೇ ಪಾಯು, ಶಿವಾನುಭಾವಿಗಳ ಸತ್ಸಂಗದಲ್ಲಿ ಸದಾ ಆನಂದಿಸುವುದೇ ಗುಹ್ಯವಾಗಿ ಈ ರೀತಿಯಲ್ಲಿ ವಾಗಾದಿ ಕರ್ಮೇಂದ್ರಿಯಂಗಳೈದು ನಿವೃತ್ತಿಯಾದುದೇ ಕ್ರಿಯಾಶಕ್ತಿ.

ಜ್ಞಾನಶಕ್ತಿ : ಜ್ಞಾನಶಕ್ತಿಯ ಮಥನದಿಂದ 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಜ್ಞಾನಶಕ್ತಿ ಎರಡು ತೆರನಾಗಿರುತ್ತಿಹಳು. ಅದು ಹೇಗೆಂದೊಡೆ, ಲೋಕದಾತ್ಮರುಗಳಿಗೆ, ಗುರು=ನರ, ಲಿಂಗವು=ಶಿಲೆ, ಜಂಗಮವು=ಮನುಜ, ಪಾದೋದಕ=ನೀರು, ಪ್ರಸಾದ=ಎಂಜಲು ಎಂಬ ಅಜ್ಞಾನವನ್ನೇ ಪ್ರೇರಿಸಿಕೊಡುತ್ತಿಹಳು. ಇತ್ತ ಗುರು ಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸುವ ಶಿವಶರಣರುಗಳಿಗೆ ನಿಃಕಲಬ್ರಹ್ಮದ ಸದ್ರೂಪವೇ ಗುರು, ಚಿದ್ರೂಪವೇ ಲಿಂಗ, ಆನಂದವೇ ಜಂಗಮ, ನಿತ್ಯತ್ವವೇ [೧][ಪಾದೋದಕ][೧], ಪರಿಪೂರ್ಣತ್ವವೇ [೨][ಪ್ರಸಾದ][೨]ವೆಂದರಿದ ಸುಜ್ಞಾನವನ್ನೇ ಪ್ರೇರಿಸಿಕೊಡುತ್ತಿಹಳು. ಈ ರೀತಿಯಲ್ಲಿ ಜ್ಞಾನಶಕ್ತಿ ಎರಡು ತೆರನಾಗಿರುತ್ತಿಹಳು. ಮತ್ತಂತುಮಲ್ಲದೆ, ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು ಜ್ಞಾನಶಕ್ತಿಯ ಸ್ವರೂಪವೆಂದಿದ್ದ ಕಾರಣ ಆ ಜ್ಞಾನಶಕ್ತಿಯ ಸ್ವರೂಪವಾದ ಶ್ರೋತ್ರಾದಿ ಜ್ಞಾನೇಂದ್ರಿಯಂಗಳೊಳಗೆ ಶ್ರೋತ್ರದಲ್ಲಿ ಶಿವಕಥೆ, ಶಿವಪುರಾಣ, ಆದ್ಯರ ವಚನವಲ್ಲದೆ ಅನ್ಯವಪ್ಪ ಮಾಯಾ ಕುಶಾಸ್ತ್ರ, ಕುಭಾಷೆಗಳಂ ಕೇಳದಿಹುದು. ತ್ವಕ್ಕಿನಲ್ಲಿ ಶ್ರೀವಿಭೂತಿ, ರುದ್ರಾಕ್ಷಿ, ಶಿವಲಿಂಗಧಾರಣವಲ್ಲದೆ ಅನ್ಯವಪ್ಪ ಮಾಯಾ ಚೋಹಂಗಳಂ ಧರಿಸದಿ[ಹು]ದು. ನೇತ್ರದಲ್ಲಿ ಶಿವಲಿಂಗನಿರೀಕ್ಷಣೆಯಲ್ಲದೆ ಅನ್ಯವಪ್ಪ ಮಾಯಾ ಕುರೂಪಂಗಳಂ ನೋಡದಿಹುದು. ಜಿಹ್ವೆಯಲ್ಲಿ ಶಿವಸುಖ ಪ್ರಸನ್ನವಪ್ಪ ಪ್ರಸಾದವ ಸ್ವೀಕರಿಸುವುದಲ್ಲದೆ, ಅನ್ಯವಪ್ಪ ಮಾಯೋಚ್ಛಿಷ್ಟಂಗಳಂ ಭುಂಜಿಸದಿ ಹುದು. ಘ್ರಾಣದಲ್ಲಿ ಶಿವನಿರ್ಮಾಲ್ಯ ಗಂಧವಲ್ಲದೆ ಅನ್ಯವಪ್ಪ ಮಾಯಾ ದುರ್ವಾಸನೆಯ ಘ್ರಾಣಿಸದಿಹುದು. ಈ ರೀತಿಯಲ್ಲಿ ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು ನಿವೃತ್ತಿಯಾದುದೇ ಜ್ಞಾನಶಕ್ತಿ.

೧–೧ ಪ್ರಸಾದ (ಮೂ) ೨–೨ ಪಾದೋದಕ (ಮೂ) ೩–೩ ರುವು (ಮೂ).

ಇಚ್ಛಾಶಕ್ತಿ : ಇಚ್ಛಾಶಕ್ತಿಯ ಮಥನದಿಂದ, 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಹೇಳುತ್ತಿಹುದಾದ ಕಾರಣ, ಇಚ್ಛಾಶಕ್ತಿ ಎಂಬಾಕೆ ಎರಡು ತೆರನಾಗಿಹಳು. ಅದು ಹೇಗೆಂದಡೆ, ಲೋಕದಾತ್ಮರುಗಳಿಗೆ, ಹುಸಿ, ಕಳವು, ಪರದಾರ, ಪರಹಿಂಸೆ, ಅತಿ ಕಾಂಕ್ಷೆ ಎಂಬ ಪಂಚಮಹಾಪಾತಕಂಗಳ ಮೇಲಣಿಚ್ಛೆಯನ್ನುಂಟುಮಾಡಿಕೊಡುತ್ತಿಹಳು. ಇತ್ತ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸುವಂತಹ ಶಿವಶರಣರುಗಳಿಗೆ ಪಂಚಾಚಾರದ ಮೇಲಣಿಚ್ಛೆಯನ್ನುಂಟುಮಾಡಿಕೊಡುತ್ತಿಹಳು. ಮತ್ತಂತುಮಲ್ಲದೆ ಶಬ್ದಾದಿ ವಿಷಯಂಗಳೈದು ಇಚ್ಛಾಶಕ್ತಿಯ ಸ್ವರೂಪು ಎಂದಿದ್ದಿತಾದಕಾರಣ ಆ ಇಚ್ಛಾಶಕ್ತಿಯ ಸ್ವರೂಪವಾದ ಶಬ್ದವಿಷಯಂಗಳೊಳಗೆ ಶಬ್ದ ಗುರು, ಸ್ಪರ್ಶನ ಲಿಂಗ, ರೂಪು ಶಿವಲಾಂಛನ, ರಸ ಶಿವಪ್ರಸಾದ ಸೇವನೆ, ಶಿವ ನಿರ್ಮಾಲ್ಯ ಗಂಧವಾಗಿ, ಶಬ್ದಾದಿ ವಿಷಯಂಗಳೈದು ನಿವೃತ್ತಿಯಾದುದೇ ಇಚ್ಛಾಶಕ್ತಿ.

ಆದಿಶಕ್ತಿ : ಆದಿಶಕ್ತಿಯ ಮಥನದಿಂದ 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಆದಿಶಕ್ತಿ ಎಂಬಾಕೆಯು ಎರಡು ತೆರನಾಗಿಹಳು. ಅದು ಹೇಗೆಂದಡೆ, ಲೋಕದಾತ್ಮರುಗಳಿಗೆ ಜಾತಿ, ವರ್ಣಾಶ್ರಮ, ಕುಲ, ಗೋತ್ರ, ಸೂತ್ರ, ನಾಮಾಚಾರಗಳನ್ನೇ ಆದಿಯ ಮಾಡಿಕೊಡುತ್ತಿಹಳು. ಇತ್ತ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸುವಂತಹ ಶಿವಶರಣರುಗಳಿಗೆ, ಭಕ್ತಿ ಜ್ಞಾನ, ವೈರಾಗ್ಯವೆಂಬ ತ್ರಿವಿಧವನ್ನೇ ಆದಿಯ ಮಾಡಿಕೊಡುತ್ತಿಹಳು. ಕುಲವೇ ಶಿವಕುಲವಾಗಿಯೂ, ಗೋತ್ರವೇ ನಂದೀಶ್ವರನ (ಬಸವೇಶ್ವರನ) ಗೋತ್ರವಾಗಿಯೂ, ಸಕಲ ಸದ್ಭಕ್ತ ಶರಣ ಜನಂಗಳೇ ತಂದೆ, ತಾಯಿ, ಬಂಧು ಬಳಗಂಗಳಾಗಿಯೂ, ಅಳವಡಿಸಿಕೊಂಡು ಆಚರಿಸುವಂತಹ ಆಚರಣೆಯನ್ನೇ ಆದಿಯ ಮಾಡಿಕೊಡುತ್ತಿಹಳು. ಮತ್ತಂತುಮಲ್ಲದೆ, ಪ್ರಾಣಾದಿ ವಾಯುಗಳೈದು ಆದಿಶಕ್ತಿಯ ಸ್ವರೂಪಿನಿಂದ ಇದ್ದಿತಾದ ಕಾರಣ, ಆ ಆದಿಶಕ್ತಿಯ ಸ್ವರೂಪವಾದ ಪ್ರಾಣಾದಿ ವಾಯುಗಳೊಳಗೆ ಪ್ರಾಣವಾಯುವೇ ಸತ್ತು ಅಪಾನ ವಾಯುವೇ ಚಿತ್ತು ವ್ಯಾನವಾಯುವೇ ಆನಂದ, ಉದಾನವಾಯುವೇ ನಿತ್ಯ, ಸಮಾನವಾಯುವೇ ಪರಿಪೂರ್ಣವಾಗಿ, ಈ ರೀತಿಯಲ್ಲಿ ಪಂಚಪ್ರಾಣ ವಾಯುಗಳೇ ಪಂಚಲಕ್ಷಣ ಸ್ವರೂಪಿನಿಂದ ನಿವೃತ್ತಿಯಾದುದೇ ಆದಿಶಕ್ತಿಯು.

ಪರಾಶಕ್ತಿ : ಪರಾಶಕ್ತಿಯ ಮಥನದಿಂದ 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಪರಾಶಕ್ತಿ ಎರಡು ತೆರನಾಗಿಹಳು. ಅದು ಹೇಗೆಂದೊಡೆ, ಲೋಕದ ಆತ್ಮರುಗಳಿಗೆ ಇಂದ್ರಿಯ ವಿಷಯ ಪ್ರಪಂಚವನೇ ಪರವಶಮಾಡಿಕೊಡುತಿಹಳು. ಇತ್ತ ಗುರು ಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ, ಆಚರಿಸುವಂತಹ ಶಿವಶರಣರುಗಳಿಗೆ, ಶರಣನೇ ಸತಿಯಾಗಿ, ಲಿಂಗವೇ ಪತಿಯಾಗಿ, ಇಂದ್ರಿಯಂಗಳೇ ಲಿಂಗೇಂದ್ರಿಯಂಗಳಾಗಿ, ವಿಷಯಗಳೆಲ್ಲ ಲಿಂಗಪ್ರಸಾದವಾಗಿ ಅಳವಡಿಸಿಕೊಂಡು, ಆಚರಿಸುವಂತಹ ಆಚರಣೆಯೇ ಪರವಶಮಾಡಿಕೊಡುತಿಹಳು. ಮತ್ತಂತುಮಲ್ಲದೆ, ಮನ ಸಾದಿ ಕರಣಂಗಳೈದು ಪರಾಶಕ್ತಿ ಸ್ವರೂಪಿನಿಂದ ಇದ್ದಿತಾದ ಕಾರಣ ಆ ಪರಾಶಕ್ತಿಯ

ಸ್ವರೂಪವಾದ ಮನಸಾದಿ ಕರಣಂಗಳೊಳಗೆ ಮನದಲ್ಲಿ ಶಿವಧ್ಯಾನ, ಬುದ್ಧಿಯಲ್ಲಿ ನಿರ್ಮಂಚನೆ, ಚಿತ್ತದಲ್ಲಿ ಶಿವದಾಸೋಹ, ಅಹಂಕಾರದಲ್ಲಿ ನಿರಹಂಕಾರ, ಅಜ್ಞಾನ ವಳಿದು, ಸುಜ್ಞಾನವಾಗಿ, ಮನಸಾದಿ ಕರಣಂಗಳ್ಕೈದು ನಿವೃತ್ತಿಯಾದುದೇ ಪರಾಶಕ್ತಿ.

ಚಿತ್‌ಶಕ್ತಿ : ಚಿತ್‌ಶಕ್ತಿಯ ಮಥನದಿಂದ 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಹೇಳುತಿಹುದಾದ ಕಾರಣ, ಚಿತ್‌ಶಕ್ತಿ ಎರಡು ತೆರನಾಗಿಹಳು. ಅದು ಹೇಗೆಂದಡೆ, ಲೋಕಾತ್ಮರುಗಳಲ್ಲಿ ದಾಸೋಹಮೆಂದು ಉಲಿವ ಮೂಲಾಹಂಕಾರವನುಂಟು ಮಾಡಿಕೊಡುತಿಹಳು. ಇತ್ತ ಗುರುಕಾರುಣ್ಯಮಂ ಪಡೆದು, ಲಿಂಗಾಂಗಸಂಬಂಧಿ ಗಳಾಗಿ ಆಚರಿಸುವಂತಹ ಶಿವಶರಣರುಗಳಿಗೆ ತಮ್ಮ ನಿಜವನರಿವಂತಹ ಮೂಲ ಜ್ಞಾನವನುಂಟುಮಾಡಿಕೊಡುತಿಹಳು. ಮತ್ತಂತುಮಲ್ಲದೆ ಮೇಲಣ ಭಾವಾದಿ ಕರಣಂಗಳ್ಕೈದು ಚಿಚ್ಛಕ್ತಿಯಸ್ವರೂಪಿನಿಂದ ಇದ್ದಿತಾದ ಕಾರಣ, ಆ ಚಿಚ್ಛಕ್ತಿಯ ಸ್ವರೂಪವಾದ ಭಾವಾದಿ ಕರಣಂಗಳೊಳಗೆ ಭಾವವೇ ಭಕ್ತಿ ಚಿತ್ತವೇ ಹಸ್ತ ಮನವೇ ಲಿಂಗ, ಹೃದಯವೇ ಮುಖ, ಪರಿಣಾಮವೇ ಪದಾರ್ಥವಾಗಿ, ಮೇಲಣ ಭಾವಾದಿ ಕರಣಂಗಳ್ಕೈದು ನಿವೃತ್ತಿಯಾದುದೇ ಚಿತ್‌ಶಕ್ತಿಯು.*

೧೪೪

೪) ಇಂತೀ ಷಡ್ವಿಧಲಿಂಗಂಗಳಿಗೆ ಭಕ್ತಿ ಆವುವೆಂದೊಡೆ : ಆಚಾರ ಲಿಂಗಕ್ಕೆ ಶ್ರದ್ಧಾಭಕ್ತಿ ಗುರುಲಿಂಗಕ್ಕೆ ನಿಷ್ಠಾಭಕ್ತಿ ಶಿವಲಿಂಗಕ್ಕೆ ಅವಧಾನ ಭಕ್ತಿ ಜಂಗಮಲಿಂಗಕ್ಕೆ ಅನುಭಾವಭಕ್ತಿ ಪ್ರಸಾದಲಿಂಗಕ್ಕೆ ಆನಂದಭಕ್ತಿ ಮಹಾಲಿಂಗಕ್ಕೆ ಸಮರಸಭಕ್ತಿ ಇಂತೀ ಭಕ್ತಿಗಳು. ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯ.

೧೪೫

೫) ಇಂತೀ ಷಡ್ವಿಧ ಲಿಂಗಂಗಳಿಗೆ ಮುಖಂಗಳಾವಾವೆಂದೊಡೆ : ಆಚಾರ ಲಿಂಗಕ್ಕೆ ನಾಸಿಕಮುಖ, ಗುರುಲಿಂಗಕ್ಕೆ ಜಿಹ್ವೆಮುಖ, ಶಿವಲಿಂಗಕ್ಕೆ ನೇತ್ರವೇ ಮುಖ, ಜಂಗಮಲಿಂಗಕ್ಕೆ ತ್ವಙ್ಮುಖ, ಪ್ರಸಾದಲಿಂಗಕ್ಕೆ ಶ್ರೋತ್ರಮುಖ, ಮಹಾಲಿಂಗಕ್ಕೆ ಹೃದಯ ಮುಖ, ಇಂತೀ ಮುಖಂಗಳು. ಸೌರಾಷ್ಟ್ರ ಸೋಮೇಶ್ವರ ತಾನು ತಾನಾಗಿರ ಬೇಕಯ್ಯಾ.

೧೪೬

೬) ಆಚಾರಲಿಂಗವ ಅಂಗೈಯೊಳಳವಡಿಸಿ ಮಜ್ಜನಕ್ಕೆರೆದು, ತ್ರಿಪುಂಡ್ರಮಂ ಧರಿಸಿ, ಪುಷ್ಪಜಾತಿಗಳಿಂದರ್ಪಿಸಿ ಪೂಜೆಯ ಮಾಡುವನ್ನಕ್ಕರ, ಪೂಜೆಗೆ ಮೆಚ್ಚಿ, ಪಂಚಸ್ಪರ್ಶನಂಗಳ ಮರೆಯಲೊಡನೆ, ಆಚಾರದಲ್ಲಿ ಜಂಗಮಲಿಂಗ ನೆಲೆ ಗೊಂಡಿತ್ತು ಆ ಲಿಂಗದ ಪ್ರಕಾಶಮಂ ನೋಡುವ ನೇತ್ರಂಗಳು ಆ ಪ್ರಕಾಶಕ್ಕೆ ಮೆಚ್ಚಿ, ಪಂಚವರ್ಣಂಗಳ ಮರೆಯಲೊಡನೆ ಆ ನೇತ್ರಂಗಳಲ್ಲಿ ಶಿವಲಿಂಗ ನೆಲೆಗೊಂಡಿತ್ತು

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೩೦.

ಆ ಲಿಂಗದ ಸದ್ಭಾಸನೆಯಂ ವಾಸಿಸುವ ಘ್ರಾಣ ಆ ವಾಸನೆಗೆ ಮೆಚ್ಚಿ ಪಂಚ ಗಂಧಂಗಳಂ ಮರೆಯಲೊಡನೆ, ಆ ಘ್ರಾಣದಲ್ಲಿ ಆಚಾರಲಿಂಗ ನೆಲೆಗೊಂಡಿತ್ತು ಆ ಲಿಂಗಮಂ ಮಂತ್ರಸ್ವರೂಪವನೆತ್ತಿಕೊಂಡಾಡುವ ಜಿಹ್ವೆ ಆ ಮಂತ್ರಕ್ಕೆ ಮೆಚ್ಚಿ ಪಂಚ ರಸಂಗಳ ಮರೆಯಲೊಡನೆ ಆ ಜಿಹ್ವೆಯಲ್ಲಿ ಗುರುಲಿಂಗ ನೆಲೆಗೊಂಡಿತ್ತು ಆ ಲಿಂಗಮಂ ಮನ ಒಲಿದು ಹಾಡುವ ನಾದಮಂ ಕೇಳಿದ ಶ್ರೋತ್ರ ಆ ನಾದಕ್ಕೆ ಮೆಚ್ಚಿ ಪಂಚನಾದಂಗಳ ಮರೆಯಲೊಡನೆ, ಆ ಶ್ರೋತ್ರದಲ್ಲಿ ಪ್ರಸಾದಲಿಂಗ ನೆಲೆ ಗೊಂಡಿತ್ತು. ಆ ಲಿಂಗಮಂ ನೆನೆವ ಮನ, ಆ ನೆನಹಿಂಗೆ ಮೆಚ್ಚಿ ಪಂಚ ಪರಿ ಣಾಮಂಗಳ ಮರೆಯಲೊಡನೆ, ಆ ಮನದಲ್ಲಿ ಮಹಾಲಿಂಗ ನೆಲೆಗೊಂಡಿತ್ತು ಈ ಷಡಿಂದ್ರಿಯಂಗಳು ಆ ಲಿಂಗವನಪ್ಪಿ ಅಗಲದ ಕಾರಣ ಆ ಲಿಂಗ ಒಲಿದು ಷಡಿಂದ್ರಿ ಯಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಂಡಿತ್ತು ಇಂತಪ್ಪ ಲಿಂಗದಲ್ಲಿ ಶರಣ ನಿಷ್ಠೆ ನಿಬ್ಬೆರಗಾಗಿ ಧ್ಯಾನಯೋಗಮಂ ಕೈಕೊಂಡು ಷಡುವರ್ಮಮಂ ಮರೆಯಲೊಡನೆ, ಆ ಲಿಂಗ ಒಲಿದು, ವೇಧಿಸಿ, ಜ್ಞಾನಂಗಳಲ್ಲಿ ಷಡ್ವಿಧಲಿಂಗ ಪ್ರಾಣವಾಗಿ, ನೆಲೆ ಗೊಂಡಿತ್ತು. ಆ ಪ್ರಾಣಲಿಂಗಂಗಳಂ ಶರಣ ಮಂತ್ರಮಾಲೆಯಿಂ ಹೃದಯ ದೊಳಗಿಂಬಿಟ್ಟು, ಮನವರಲ್ದು ಜಾಗ್ರತ್ ಸ್ವಪ್ನದಲ್ಲಿ ಪೂಜಿಸುವ ಧಾರಣಯೋಗ ದೊಳಿರ್ದ ಕ್ರಿಯೆಯ ಮರೆಯಲೊಡನೆ, ಆ ಲಿಂಗವು ಒಲಿದು ಮನವ ವೇಧಿಸಿ, ಭಾವವಡಗಿದಲ್ಲಿ ತ್ರಿವಿಧಲಿಂಗವಾಗಿ ನೆಲೆಗೊಂಡಿತ್ತು ಆ ಭಾವಲಿಂಗಂಗಳ ಕಿರಣ ಒಡವೆರೆಯಲೊಡನೆ, ಕರ್ಪುರ ಹೋಗಿ, ಉರಿಯ ಪಿಡಿದಂತೊಡೆ ಆ ಶರಣಂಗೆ ಆ ಲಿಂಗವು ಒಲಿದು ಸರ್ವಾಂಗಲಿಂಗವಾಯಿತ್ತು ಆತನೇ ಪರಬ್ರಹ್ಮ ಇದನರಿದು ಜ್ಞಾನಕ್ರಿಯೆಗಳಿಂದಾಚರಿಸಿ, ಲಿಂಗಾಂಗಸಂಯೋಗವಾಗದೆ, ಕೆರಹಿನಟ್ಟೆಗೆ ನಾಯಿ ತಲೆದೂಗುವಂತೆ ತಮ್ಮ ಅರುಹಿಂಗೆ ತಾವೇ ತಲೆದೂಗಿ, ಅಹಂಬ್ರಹ್ಮವೆಂದಾಚರಿ ಸುವ ಹೊಲೆಯರನೆನಗೆ ತೋರದಿರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿ ಕಾರ್ಜುನಾ.

೧೪೭

(೭) ಇಂತೀ ಷಡ್ವಿಧ ಲಿಂಗಂಗಳಿಗೆ ತೃಪ್ತಿ ಆವುದೆಂದೊಡೆ, ಆಚಾರಲಿಂಗಕ್ಕೆ ಗಂಧ ತೃಪ್ತಿ ಗುರುಲಿಂಗಕ್ಕೆ ರಸ ತೃಪ್ತಿ ಶಿವಲಿಂಗಕ್ಕೆ ರೂಪು ತೃಪ್ತಿ ಜಂಗಮಲಿಂಗಕ್ಕೆ ಸ್ಪರ್ಶನ ತೃಪ್ತಿ ಪ್ರಸಾದಲಿಂಗಕ್ಕೆ ಶಬ್ದ ತೃಪ್ತಿ ಮಹಾಲಿಂಗಕ್ಕೆ ಪಂಚೇಂದ್ರಿಯ ತೃಪ್ತಿ ಇಂತೀ ಷಡ್ವಿಧ ತೃಪ್ತಿಗಳು. ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರ ಬೇಕಯ್ಯ.

೧೪೮

(೮) ಆದಿಯಲ್ಲಿ ಪ್ರಣವಸ್ವರೂಪಮಾದ ಪರಮಾತ್ಮನು ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ, ಬಿಂದುವೇ ಶರೀರಮಾಗಿ, ನಾದವೇ ಪ್ರಾಣಮಾಗಿ, ಕಳೆಯೇ ಮನಮಾಗಿ, ಬಿಂದುಮಯವಾದ ಶರೀರದಲ್ಲಿ ರೂಪು,

ನಾದಮಯವಾದ ಪ್ರಾಣದಲ್ಲಿ ನಾಮ, ಕಳಾಮಯವಾದ ಮನದಲ್ಲಿ ಕ್ರಿಯೆ, ಇಂತು ನಾಮ ರೂಪು ಕ್ರಿಯಾಯುಕ್ತವಾದ ಪುರುಷನ ಶರೀರದಲ್ಲಿ ಭಕ್ತಿ ಪ್ರಾಣದಲ್ಲಿ ಜ್ಞಾನ, ಮನದಲ್ಲಿ ವೈರಾಗ್ಯ ನೆಲೆಗೊಂಡಲ್ಲಿ ಬಿಂದುವಿನಲ್ಲಿ ಆಚಾರಲಿಂಗ ಸಂಬಂಧ ಮಾಯಿತ್ತು. ಕಳೆಯಲ್ಲಿ ಶಿವಲಿಂಗ ಸಂಬಂಧಮಾಯಿತ್ತು. ಆಚಾರದಿಂದ ಪೂತಮಾದ ಶರೀರವೇ ಜಂಗಮಲಿಂಗಮಾಯಿತ್ತು. ಗುರುಮಂತ್ರದಿಂದ ಪೂತಮಾದ ಪ್ರಾಣವೇ ಪ್ರಸಾದಲಿಂಗಮಾಯಿತ್ತು. ಶಿವಧ್ಯಾನದಿಂದ ಪೂತಮಾದ ಮನವೇ ಮಹಾಲಿಂಗ ಮಾಯಿತ್ತು. ಬಿಂದುವಿನಲ್ಲಿ ಕ್ರಿಯಾಶಕ್ತಿ ನೆಲೆಗೊಂಡಲ್ಲಿ ಆ ಬಿಂದುವೇ ಆದಿಶಕ್ತಿ ಮಯಮಾಯಿತ್ತು. ನಾದದಲ್ಲಿ ಮಂತ್ರಶಕ್ತಿ ನೆಲೆಗೊಂಡಲ್ಲಿ ಆ ನಾದವೇ ಪರಾಶಕ್ತಿ ಯಾಯಿತ್ತು. ಕಳೆಯಲ್ಲಿ ಇಚ್ಛಾಶಕ್ತಿ ನೆಲೆಗೊಂಡಲ್ಲಿ, ಆ ಕಳೆಯೇ ಜ್ಞಾನಶಕ್ತಿಯಾಯಿತ್ತು. ಇಂತು ಶರೀರಮೇ ಜಂಗಮದಿಂದ ಪವಿತ್ರಮಾಗಿ, ಪ್ರಾಣವು ಗುರುವಿನಿಂದ ಪವಿತ್ರ ಮಾಗಿ, ಮನವು ಲಿಂಗದಿಂದ ಪರಿಶುದ್ಧಮಾಗಿರ್ದ ಶಿವಶರಣನು ಇದ್ದುದೇ ಕೈಲಾಸ, ಅನುಭವಿಸಿದುದೆಲ್ಲ ಲಿಂಗಭೋಗ, ಐಕ್ಯವೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡ ವೇಶಿಕಾರ್ಯ ಗುರುಪ್ರಭುವೆ.*

೧೪೯

(೯) [ಪರವಸ್ತು] ಎನ್ನ ಚಿತ್ತಕ್ಕೆ ಆಚಾರಲಿಂಗವಾದ. ಎನ್ನ ಬುದ್ಧಿಗೆ ಗುರು ಲಿಂಗವಾದ. ಎನ್ನ ಅಹಂಕಾರಕ್ಕೆ ಶಿವಲಿಂಗವಾದ. ಎನ್ನ ಮನಕ್ಕೆ ಜಂಗಮಲಿಂಗ ವಾದ. ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾದ. ಎನ್ನ ಭಾವಕ್ಕೆ ಮಹಾಲಿಂಗವಾದ. ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದ. ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದ. ಎನ್ನ ಕಾರಣತನುವಿಂಗೆ ಭಾವಲಿಂಗವಾದ. ಇಂತೆಂದರಿದೆನಾಗಿ, ಗೌರೇಶ್ವರಲಿಂಗದಲ್ಲಿ ಸುಖಿಯಾದೆನು.

೧೫೦

(೧೦) ಶಿವಭಾವದಿಂದ ಆತ್ಮ ಹುಟ್ಟಿ, ಶಿವ ತಾನೆಂಬ ಉಭಯವನಲಂಕರಿಸಿದ ನಾಗಿ, ಆತ್ಮಂಗೆ ಭಾವನೆಂಬ ಹೆಸರಾಯಿತ್ತು. ಆತ್ಮ ಬಂದು ಆಕಾಶವ ಕೂಡಿದಲ್ಲಿ ಜ್ಞಾನವೆಂಬ ಹೆಸರಾಯಿತ್ತು. ಆತ್ಮ ಬಂದು ವಾಯುವ ಕೂಡಿದಲ್ಲಿ [ಮನವೆಂಬ ಹೆಸರಾಯಿತ್ತು] [ಆತ್ಮ ಬಂದು ಅಗ್ನಿಯ ಕೂಡಿದಲ್ಲಿ] ಅಹಂಕಾರವೆಂಬ ಹೆಸರಾಯಿತ್ತು. ಆತ್ಮ ಬಂದು ಅಪ್ಪುವ ಕೂಡಿದಲ್ಲಿ ಬುದ್ಧಿ ಎಂಬ ಹೆಸರಾಯಿತ್ತು. ಆತ್ಮ ಬಂದು ಪೃಥ್ವಿಯ ಕೂಡಿದಲ್ಲಿ ಚಿತ್ತೆಂಬ ಹೆಸರಾಯಿತ್ತು. ಚಿತ್ತು ಆಚಾರಲಿಂಗವ ಧರಿಸಿಪ್ಪುದು. ಬುದ್ಧಿ ಗುರುಲಿಂಗವ ಧರಿಸಿಪ್ಪುದು. ಅಹಂಕಾರ ಶಿವಲಿಂಗವ ಧರಿಸಿಪ್ಪುದು. ಮನಸ್ಸು ಜಂಗಮಲಿಂಗವ ಧರಿಸಿಪ್ಪುದು. ಜ್ಞಾನ ಪ್ರಸಾದಲಿಂಗವ ಧರಿಸಿಪ್ಪುದು [ಭಾವ ಮಹಾ ಲಿಂಗವ ಧರಿಸಿತ್ತು.] ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕು.

---

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೩೧.

೧೫೧

(೧೧) ಇಂತೀ ಷಡ್ವಿಧ ಲಿಂಗಗಳಿಗೆ ವಿಷಯಂಗಳಾವುವೆಂದೊಡೆ : ಎಳಸುವದು ಆಚಾರಲಿಂಗ ವಿಷಯ. ಎಳಸಿ ಮೋಹಿಸುವದು, ಗುರುಲಿಂಗ ವಿಷಯ ; ಮೋಹಿಸಿ ಕೂಡುವದು ಶಿವಲಿಂಗ ವಿಷಯ ; ಕೂಡಿ ಸುಖಂಬಡೆವುದು ಜಂಗಮಲಿಂಗ ವಿಷಯ; ಸುಖಂಬಡೆದು ಪರಿಣಾಮತೆಯನ್ಯೆದುವದು ಪ್ರಸಾದಲಿಂಗ ವಿಷಯ ; ಪರಿಣಾಮ ವನ್ಯೆದಿ [೧][ತೃಪ್ತಿಯಂಬಡೆವುದು][೧] ಮಹಾಲಿಂಗ ವಿಷಯ. ಇಂತೀ ವಿಷಯಂಗಳು ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕು.

೧೫೨

(೧೨) ಷಡುಲಿಂಗಂಗಳಿಗೆ ಕಳೆಗಳಾವಾವೆಂದೊಡೆ : ಆಚಾರಲಿಂಗಕ್ಕೆ ನಿವೃತ್ತಿ ಕಲೆ, ಗುರುಲಿಂಗಕ್ಕೆ ಪ್ರತಿಷ್ಠಾ ಕಲೆ, ಶಿವಲಿಂಗಕ್ಕೆ ವಿದ್ಯಾಕಲೆ, ಜಂಗಮಲಿಂಗಕ್ಕೆ ಶಾಂತಿ ಕಲೆ, ಪ್ರಸಾದಲಿಂಗಕ್ಕೆ ಶಾಂತ್ಯಾತೀತಕಲೆ, ಮಹಾಲಿಂಗಕ್ಕೆ ಶಾಂತ್ಯಾತೀತೋತ್ತರ ಕಲೆ, ಇಂತೀ ಕಲೆಗಳು. ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕು.

೧೫೩

(೧೩) ಆಧಾರದಲ್ಲಿ ಆಚಾರಲಿಂಗವ ಧರಿಸಿದನಾಗಿ ಆಚಾರಲಿಂಗ ಭಕ್ತನಾದ ನಯ್ಯ ನಿಮ್ಮ ಶರಣ. ಸ್ವಾಧಿಷ್ಠಾನದಲ್ಲಿ ಗುರುಲಿಂಗವ ಧರಿಸಿದನಾಗಿ ಗುರುಲಿಂಗ ಭಕ್ತನಾದನಯ್ಯ ನಿಮ್ಮ ಶರಣ. ಮಣಿಪೂರಕದಲ್ಲಿ ಶಿವಲಿಂಗವ ಧರಿಸಿದನಾಗಿ ಶಿವಲಿಂಗಭಕ್ತನಾದನಯ್ಯ ನಿಮ್ಮ ಶರಣ. ಅನಾಹತದಲ್ಲಿ ಜಂಗಮಲಿಂಗವ ಧರಿಸಿದ ನಾಗಿ ಜಂಗಮಲಿಂಗಭಕ್ತನಾದನಯ್ಯ ನಿಮ್ಮ ಶರಣ. ವಿಶುದ್ಧಿಯಲ್ಲಿ ಪ್ರಸಾದಲಿಂಗವ ಧರಿಸಿದನಾಗಿ ಪ್ರಸಾದಲಿಂಗಭಕ್ತನಾದನಯ್ಯ ನಿಮ್ಮ ಶರಣ. ಆಜ್ಞೆಯಲ್ಲಿ ಮಹಾ ಲಿಂಗವ ಧರಿಸಿದನಾಗಿ ಮಹಾಲಿಂಗಭಕ್ತನಾದನಯ್ಯ ನಿಮ್ಮ ಶರಣ. ಇಂತು ಷಡಾಧಾರದಲ್ಲಿ (ಷಡಂಗಗಳಲ್ಲಿ) ಷಡ್ವಿಧಲಿಂಗವ ಧರಿಸಿ ಷಟ್‌ಸ್ಥಲಭಕ್ತನಾದ ನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನಿಮ್ಮ ಶರಣನು.

೧೫೪

(೧೪) ಚರಿಸಿ ವರ್ತಿಸುವುದೇ ಆಚಾರವಾದ ಕಾರಣ, ಈಡಾ ಪಿಂಗಳ ನಾಡಿಯಂ ರೇಚಕ ಪೂರಕಂಗಳು ಚರಿಸಿ ವರ್ತಿಸುವ ದೆಸೆಯಿಂ ನಾಸಿಕಕ್ಕೆ ಆಚಾರ ಲಿಂಗವಾಗಬೇಕಾಯಿತ್ತು. ಮಂತ್ರಮೂರ್ತಿಯೇ ಗುರುವಾದ ಕಾರಣ ಷಡಕ್ಷರಿಯೇ ಷಟ್‌ರುಚಿಯಾಗಿ ತೋರಿಹುದಾಗಿ ಅಂತಪ್ಪ ಷಟ್‌ರುಚಿಯೇ ಚಿಪ್ಪೆಯ ಮುಖಕ್ಕೆ ಸಲುವ ದೆಸೆಯಿಂ ಚಿಪ್ಪೆಗೆ ಗುರುಲಿಂಗವಾಗಬೇಕಾಯಿತ್ತು. ಸ್ವಯಂಪ್ರಕಾಶವೇ ಶಿವನಾದ ಕಾರಣ ಆ ಮಹಾಪ್ರಕಾಶವೇ ನೇತ್ರಂಗಳೊಳಗೆ ನೆಲೆಗೊಂಡು ಸಕಲ ಪದಾರ್ಥಂಗಳ ಕಾಣಿಸಿ ತೋರ್ಪ ದೆಸೆಯಿಂ ನೇತ್ರಕ್ಕೆ ಶಿವಲಿಂಗವಾಗಬೇಕಾಯಿತು.

೧–೧ ನಿಶ್ಚಿಯಂಬಡೆವುದು (ಮೂ)

ಚರವೇ ಜಂಗಮವಾದ ಕಾರಣ ತ್ವಕ್ಕು ಸರ್ವಾಂಗದಲ್ಲಿ ನೆಲೆಗೊಂಡು ಅಲ್ಲಿಗಲ್ಲಿಗೆ ಸ್ಪರ್ಶನವನರಿವುತ್ತಿಹ ದೆಸೆಯಿಂ ತ್ವಕ್ಕಿಂಗೆ ಜಂಗಮಲಿಂಗವಾಗಬೇಕಾಯಿತ್ತು. ನಾದ ಸುನಾದ ಮಹಾನಾದವೇ ಪ್ರಸಾದವಾದ ಕಾರಣ ಪ್ರಸಾದವಪ್ಪ ಶಬ್ದ ಶ್ರೋತ್ರಮುಖಕ್ಕೆ ಸಲುವ ದೆಸೆಯಿಂ ಶೋತ್ರಕ್ಕೆ ಪ್ರಸಾದಲಿಂಗವಾಗಬೇಕಾಯಿತ್ತು. ಇಂತೀ ಪಂಚೇಂದ್ರಿಯಂಗಳಿಗೆ ಪಂಚಲಿಂಗವಾಗಬೇಕಾಯಿತ್ತು. ಆತ್ಮನು ನಿರವಯ ನಿರ್ಗುಣ ನಿರವಸ್ತು ನಿರ್ಭಿನ್ನ ನಿರುಪಮವಾದ ದೆಸೆಯಿಂ ಗೋಪ್ಯವಾದ ಆತ್ಮಂಗೆ ಘನಕ್ಕೆ ಘನತೆಯನುಳ್ಳ ಮಹಾಲಿಂಗವಾಗಬೇಕಾಯಿತ್ತು. ಇಂತೀ ಷಟ್‌ಸ್ಥಲಂಗಳಾದ ದೆಸೆಯಿಂ ಸೌರಾಷ್ಟ್ರ ಸೋಮೇಶ್ವರನೋರ್ವ ಷಡ್ಲಿಂಗವಾಗಬೇಕಾಯಿತ್ತಯ್ಯ.

ಷಡ್ಲಿಂಗಸಾಧನೆ

ವಿವರಣೆ : ಹಿಂದೆ ಆರುಲಿಂಗಗಳ ಸ್ವರೂಪು ವರ್ಣಿಸಲ್ಪಟ್ಟಿದ್ದು ಇವುಗಳನ್ನು ತನ್ನಲ್ಲಿ ಹೇಗೆ ಒಳಕೊಳ್ಳಬೇಕೆಂಬುದನ್ನು ಇಲ್ಲಿ ವಚನಕಾರರು ವಿವೇಚಿಸಿರುತ್ತಾರೆ. ಈವರು ಇದರಲ್ಲಿ ಆರು ಮೆಟ್ಟಿಲುಗಳನ್ನು ಕಲ್ಪಿಸಿರುತ್ತಾರೆ. ಅವು ಹೇಗೆಂದರೆ, ಸಾಧಕನು ಆರಂಭದಲ್ಲಿ ಲಿಂಗವನ್ನು ಮೋಹಿಸತಕ್ಕದ್ದು. ಇದು ಮೊದಲನೆಯ ಮೆಟ್ಟಿಲು. ಹೀಗೆ ಮೋಹಿಸಿದ ಬಳಿಕ ಅವನು ಲಿಂಗದಲ್ಲಿ ಭಕ್ತಿ ಭಾವಪೂರಿತನಾಗುವನು. ಇದು ಎರಡನೆಯ ಮೆಟ್ಟಿಲು. ಹೀಗೆ ಭಕ್ತಿಯುಕ್ತನಾದ ಬಳಿಕ ಲಿಂಗವು ಅವನ ಆಚರಣೆಯಲ್ಲಿ ತಲೆದೋರುವದು. ಇದು ಮೂರನೆಯ ಸ್ಥಿತಿಯು. ಇದಕ್ಕೆ ಪೂಜಕಸ್ಥಿತಿ ಎಂಬ ಹೆಸರು. ಆಮೇಲೆ ಅವನು ಲಿಂಗದಲ್ಲಿ ದೃಢ ವಿಶ್ವಾಸವುಳ್ಳವನಾಗಿ ತನ್ನ ಕ್ರಿಯೆಗಳಲ್ಲಿ ಎಂಥ ಎಡರುಗಳು ಬಂದರೂ ಅವುಗಳನ್ನು ಎದುರಿಸಲು ಸಿದ್ಧನಾಗುವನು. ಇದು ಇದರ ಮುಂದಿನದಾದ ವೀರಸ್ಥಿತಿಯು. ಆಗ ಅವನು ಆ ಲಿಂಗದ ಅನುಭವವನ್ನು ಹೊಂದಿ ಅದರ ಸುಪರಿಣಾಮಗಳಲ್ಲಿ ಆನಂದಿಸಹತ್ತುವನು. ಇದು ಪ್ರಸಾದಿಯ ಸ್ಥಿತಿಯು. ಆ ಮೇಲೆ ಅವನು ಆ ಲಿಂಗವೇ ತನ್ನ ಪ್ರಾಣವಾಗಿ ವ್ಯವಹರಿಸುತ್ತಾನೆ. ಆಗ ಅವನು ಲಿಂಗಪ್ರಾಣಿ ಎಂದೆನಿಸಿಕೊಳ್ಳುವನು. ಹೀಗೆ ಆಯಾ ಲಿಂಗಗಳನ್ನು ಭಕ್ತನು ಒಳಕೊಳ್ಳತಕ್ಕದ್ದು. ಲಿಂಗಗಳು ಆರು ಇದ್ದು ಪ್ರತಿಯೊಂದು ಲಿಂಗವನ್ನು ಒಳಕೊಳ್ಳುವಲ್ಲಿ ಭಕ್ತನು ಮೇಲೆ ಹೇಳಿದ ಆರು ತರಗತಿಗಳನ್ನು ಹೊಂದುತ್ತ ಕಡೆಗೆ ಅವುಗಳಲ್ಲಿ ಏಕಾಕಾರನಾಗಿ ಹೋಗುವನು. ಈ ತತ್ವಗಳನ್ನು ನಾವು ಕೆಳಗೆ ಕಾಣಿಸಿದ ಉಕ್ತಿಗಳಲ್ಲಿ ಕಂಡುಹಿಡಿಯಬಹುದಾಗಿದೆ. ಆದರೆ ಚನ್ನಬಸವೇಶ್ವರನು ಹೇಳಿದ ಈ ತರಗತಿಗಳು ಪುಲಿಗೆರೆಯ ಆದಯ್ಯನು ಹೇಳಿದ ತರಗತಿಗಳಿಂದ ಸ್ವಲ್ಪ ಭಿನ್ನವಾಗಿರುತ್ತವೆ. ಆದರೆ ಅವುಗಳಲ್ಲಿ ತತ್ವಶಃ ಭಿನ್ನತೆಗಳಿರುವದಿಲ್ಲ. ಆದಯ್ಯನು ಹೇಳಿದ ತರಗತಿಗಳಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಬಹುದು. ಅವನು ವಿವರಿಸುವ ಮೊದಲಿನ ಮೋಹೀ ಮತ್ತು ಭಕ್ತ ಸ್ಥಲಗಳು ಸ್ಥೂಲಶರೀರಕ್ಕೆ, ಅದರ ಮುಂದಿನ ವೀರ ಮತ್ತು ಪ್ರಾಣೀ ಸ್ಥಲಗಳು ಸೂಕ್ಷ್ಮ ಶರೀರಕ್ಕೆ ಮತ್ತು ಕಡೆಯ ಪ್ರಸಾದಿ ಮತ್ತು ತೃಪ್ತಿ ಈ ಎರಡು ಸ್ಥಲಗಳು ಕಾರಣ

ಶರೀರಕ್ಕೆ ಸಂಬಂಧಪಟ್ಟಿರುತ್ತವೆ. ಚನ್ನಬಸವೇಶ್ವರನು ಕೇವಲ ಕ್ರಿಯಾ ದೃಷ್ಟಿಯಿಂದ ತನ್ನ ಆರು ಭಾಗಗಳನ್ನು ಕಲ್ಪಿಸಿದ್ದಾನೆ. ಆದರೆ ಆದಯ್ಯನು ಷಟ್‌ಸ್ಥಲಕ್ಕೆ ಅನುಸರಿಸಿ ತನ್ನ ವಿಭಾಗಗಳನ್ನು ಕಲ್ಪಿಸಿರುವನು.

ಭಕ್ತನು ಲಿಂಗದಲ್ಲಿ ಮೊದಲು ಮೋಹಿಸಿ (ಮೋಹೀ) ಆಮೇಲೆ ಅದರಲ್ಲಿ ವಿಶ್ವಾಸವುಳ್ಳವನಾಗಿ (ಭಕ್ತ), ಆ ಮೇಲೆ ಈ ವಿಶ್ವಾಸದಿಂದ ದೃಢಭಕ್ತಿಯುಳ್ಳವನಾಗಿ (ವೀರ), ಈ ದೃಢಭಕ್ತಿಯಿಂದ ಲಿಂಗದ ಶಕ್ತಿಯೇ ತನ್ನ ಪ್ರಾಣವಾಗಿ (ಪ್ರಾಣೀ), ಆ ಮೇಲೆ ಈ ಸ್ಥಿತಿಯ ಮೂಲಕ ಲಿಂಗದ ಪ್ರಸಾದದಲ್ಲಿಯೇ ತಲ್ಲೀನನಾಗಿ (ಪ್ರಸಾದಿ) ಅದರಲ್ಲಿಯೇ ಆನಂದ ಬಡುವನು (ತೃಪ್ತಿ). ಈ ಪ್ರಕಾರ ತನ್ನಲ್ಲಿ ಷಡ್ಲಿಂಗಗಳ ಪ್ರಗತಿಯಾಗುವದೆಂದು ತನ್ನ ವಚನಗಳಲ್ಲಿ ಆದಯ್ಯನು ವಿವರಿಸಿರುವನು.

ಈ ಭಾಗಗಳು ಭಿನ್ನವಾಗಿ ತೋರಿದರೂ ಅವುಗಳ ಉದ್ದೇಶವು ಒಂದೇ ಆಗಿರುತ್ತದೆ. ಮತ್ತು ಈ ಉಭಯ ವಚನಕಾರರು ಲಿಂಗಸಾಧನೆಗೆ ಅವಶ್ಯವಿರುವ ನೈತಿಕ ಮತ್ತು ಧಾರ್ಮಿಕ ಆಚರಣೆಗಳನ್ನು ತಮ್ಮ ವಿಷಯವಿವೇಚನೆಯಲ್ಲಿ ಸೂಚನಾರೂಪವಾಗಿ ಬೋಧಿಸಿದ್ದಾರೆ.

೧ನೆಯ ವಿಧ

(ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಪ್ರಾಣೀ)

೧೫೫

(೧) ಆಚಾರಲಿಂಗಮೋಹಿತನಾದರೆ, ಸಖಿ ಸಹೋದರ ಮೋಹವ ಮರೆಯಬೇಕು. ಆಚಾರಲಿಂಗಭಕ್ತನಾದರೆ, ಪೂರ್ವಾಚಾರವ ನಡೆಯಲಾಗದು. ಆಚಾರಲಿಂಗಪೂಜಕನಾದರೆ, ಅನ್ಯಪೂಜೆಯ ಮಾಡಲಾಗದು. ಆಚಾರಲಿಂಗ ವೀರನಾದರೆ, ಹಿಡಿದ ವ್ರತ ನೇಮವ ಬಿಡಲಾಗದು. ಆಚಾರಲಿಂಗಪ್ರಸಾದಿಯಾದರೆ, ಅಶುಚಿಯಾಗಿರಲಾಗದು. ಆಚಾರಲಿಂಗಪ್ರಾಣಿಯಾದರೆ ಭಕ್ತನಿಂದೆಯ ಕೇಳಲಾಗದು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಈ ಆರುಸಹಿತ ಆಚಾರಲಿಂಗ ಭಕ್ತಿ.

೧೫೬

ಗುರುಲಿಂಗ ಮೋಹಿತನಾದಡೆ, ಮಾತಾಪಿತರ ಮೋಹವ ಮರೆಯಬೇಕು. ಗುರುಲಿಂಗಭಕ್ತನಾದಡೆ, ಪೂರ್ವಬಂಧುಪ್ರೇಮವ ಮಾಡಲಾಗದು. ಗುರುಲಿಂಗ ಪೂಜಕನಾದಡೆ, ಅನ್ಯಪೂಜೆಯ ಮಾಡಲಾಗದು. ಗುರುಲಿಂಗವೀರನಾದಡೆ, ಗುರುಮಾರ್ಗಾಚಾರದಲ್ಲಿ ನಡೆಯಬೇಕು. ಗುರುಲಿಂಗಪ್ರಸಾದಿಯಾದಡೆ, ಗುರುವಾಜ್ಞೆಯ ಮೀರಲಾಗದು. ಗುರುಲಿಂಗಪ್ರಾಣಿಯಾದಡೆ ಮಾನವರ (ದುರ್ಗುಣಿಗಳ) ಸೇವೆಮಾಡಲಾಗದು. ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಈ ಆರುಸಹಿತ ಗುರುಲಿಂಗಭಕ್ತಿ

೧೫೭

ಶಿವಲಿಂಗಮೋಹಿತನಾದಡೆ, ಅನ್ಯಮೋಹವ ಮರೆಯಬೇಕು. ಶಿವಲಿಂಗ ಭಕ್ತನಾದಡೆ, ಅನ್ಯದೈವದ [ಭಕ್ತಿ]ಮಾಡಲಾಗದು. ಶಿವಲಿಂಗಪೂಜಕನಾದಡೆ ಅನ್ಯ ದೈವದ ಪೂಜೆಯ ಮಾಡಲಾಗದು. ಶಿವಲಿಂಗವೀರನಾದಡೆ, ಪುಣ್ಯಕ್ಷೇತ್ರಂಗಳ ಕುರಿತು ಹೋಗಲಾಗದು. ಶಿವಲಿಂಗಪ್ರಸಾದಿಯಾದಡೆ, ಅಂಗಭೋಗವ ಮರೆಯ ಬೇಕು. ಶಿವಲಿಂಗಪ್ರಾಣಿಯಾದಡೆ, ಸತಿಸಂಗವ ಮಾಡಲಾಗದು. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ, ಈ ಆರುಸಹಿತ ಶಿವಲಿಂಗಭಕ್ತಿ.

೧೫೮

ಜಂಗಮಲಿಂಗಮೋಹಿತನಾದಡೆ, ತನ್ನ ಕುಲಗೋತ್ರಮೋಹವ ಮರೆಯ ಬೇಕು. ಜಂಗಮಲಿಂಗಭಕ್ತನಾದಡೆ, ಪೂರ್ವಕುಲವ ಬೆರಸಲಾಗದು. ಜಂಗಮ ಲಿಂಗ ಪೂಜಕನಾದಡೆ, ಮಾನವರನುಪಧಾವಿಸಲಾಗದು. ಜಂಗಮಲಿಂಗವೀರ ನಾದಡೆ, ಅರ್ಥವ ಕಟ್ಟಲಾಗದು. ಜಂಗಮಲಿಂಗಪ್ರಸಾದಿಯಾದಡೆ, ಬೇಡಿದಡೆ ಇಲ್ಲೆನ್ನಲಾಗದು. ಜಂಗಮಲಿಂಗಪ್ರಾಣಿಯಾದಡೆ, ಲಾಂಛನದನಿಂದೆಯ ಕೇಳ ಲಾಗದು. ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಈ ಆರುಸಹಿತ ಜಂಗಮ ಲಿಂಗಭಕ್ತಿ.

೧೫೯

ಪ್ರಸಾದಲಿಂಗಮೋಹಿತನಾದಡೆ, ಅಂಗರುಚಿಗೆ ಇಚ್ಛೈಸಲಾಗದು. ಪ್ರಸಾದ ಲಿಂಗಭಕ್ತನಾದಡೆ, ಪೂರ್ವಾಹಾರವ ಕೊಳ್ಳಲಾಗದು. ಪ್ರಸಾದಲಿಂಗಪೂಜಕ ನಾದಡೆ, ಅಪ್ರಸಾದಿಗಳಿಗೆ (ದುರಾಚಾರಿಗಳಿಗೆ) ಉಣಲಿಕ್ಕಲಾಗದು. ಪ್ರಸಾದಲಿಂಗ ವೀರನಾದಡೆ, ಅನ್ಯರಿಗೆ ಕೈಯಾನಲಾಗದು. ಪ್ರಸಾದಲಿಂಗಪ್ರಸಾದಿಯಾದಡೆ, ಜೀವಹಿಂಸೆಯ ಮಾಡಲಾಗದು. ಪ್ರಸಾದಲಿಂಗಪ್ರಾಣಿಯಾದಡೆ ಆತ್ಮನಿಗ್ರಹವ ಮಾಡಲಾಗದು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಈ ಆರುಸಹಿತ ಪ್ರಸಾದಲಿಂಗಭಕ್ತಿ.

೧೬೦

ಮಹಾಲಿಂಗಮೋಹಿತನಾದಡೆ, ಲೋಕದ ಮೋಹವ ಮರೆಯಬೇಕು. ಮಹಾಲಿಂಗಭಕ್ತನಾದಡೆ, ಪೂರ್ವಭಕ್ತಿಯ ಮಾಡಲಾಗದು. ಮಹಾಲಿಂಗಪೂಜಕ ನಾದಡೆ, ಅಜ್ಞಾನಿಗಳಕೂಡೆ ಸಂಗವ, ಸಂಭಾಷಣೆಯ ಮಾಡಲಾಗದು. ಮಹಾ ಲಿಂಗವೀರನಾದಡೆ, ಪ್ರಳಯಾದಿಗಳಿಗಂಜಲಾಗದು. ಮಹಾಲಿಂಗಪ್ರಸಾದಿ ಯಾದಡೆ, ಸಮತೆ ನೆಲೆಗೊಳ್ಳಬೇಕು. ಮಹಾಲಿಂಗಪ್ರಾಣಿಯಾದಡೆ ಮನದ ಕೊನೆಯಲ್ಲಿ ಲಿಂಗದ ನೆನಹು ಹಿಂಗಲಾಗದು. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಈ ಆರುಸಹಿತ ಮಹಾಲಿಂಗಭಕ್ತಿ.

ಇಂತೀ ಆರು ಸಹಿತ ಆಚಾರ, ಆಚಾರಸಹಿತ ಗುರು, ಗುರುಸಹಿತ ಲಿಂಗ, ಲಿಂಗಸಹಿತ ಜಂಗಮ, ಜಂಗಮಸಹಿತ ಪ್ರಸಾದ, ಪ್ರಸಾದಸಹಿತ ಮಹಾಲಿಂಗ. ಇಂತೀ ಎಲ್ಲ ಸ್ಥಲಂಗಳು ತಾನಾಗಬಲ್ಲಡೆ ಕೂಡಲಚನ್ನಸಂಗನಲ್ಲಿ ಲಿಂಗೈಕ್ಯವು.

೨ನೆಯ ವಿಧ

(ಮೋಹೀ, ಭಕ್ತ, ವೀರ, ಪ್ರಾಣಿ, ಪ್ರಸಾದೀ, ತೃಪ್ತಿ)

೧೬೧

ಇನ್ನು ಆಚಾರಲಿಂಗಮೋಹಿತನಾದಡೆ, ಸತಿ ಸುತ ಬಾಂಧವರಲ್ಲಿ ಮೋಹ ವಿಲ್ಲದಿರಬೇಕು. ಆಚಾರಲಿಂಗಭಕ್ತನಾದಡೆ, ಸ್ವಕಾಯಕದಲ್ಲಿರಬೇಕು. ಆಚಾರಲಿಂಗ ವೀರ ತಾನಾದಡೆ, ಪೂರ್ವವನಳಿದು, ಪುನರ್ಜಾತನಾಗಿರಬೇಕು. ಆಚಾರಲಿಂಗ ಪ್ರಾಣಿಯಾದಡೆ, ಭವಿಗಳಿಗೆ ತಲೆವಾಗದಿರಬೇಕು. ಆಚಾರಲಿಂಗಪ್ರಸಾದಿಯಾದಡೆ, ಜಿಹ್ವಾಲಂಪಟವಿಲ್ಲದಿರಬೇಕು. ಆಚಾರಲಿಂಗತೃಪ್ತನಾದಡೆ, ಭಕ್ತಕಾಯ, ಮಮ ಕಾಯ (ಲಿಂಗಕಾಯ)ನಾಗಿರಬೇಕು.

ಇನ್ನು ಗುರುಲಿಂಗಮೋಹಿತನಾದಡೆ, ತನುಗುಣನಾಸ್ತಿಯಾಗಿರಬೇಕು. ಗುರು ಲಿಂಗಭಕ್ತನಾದಡೆ, ತನ್ನ ಗುರುವಿನಲ್ಲಿ ಸವೆಯಬೇಕು. ಗುರುಲಿಂಗವೀರನಾದಡೆ, ಭವರೋಗಂಗಳಿಲ್ಲದಿರಬೇಕು. ಗುರುಲಿಂಗಪ್ರಾಣಿಯಾದಡೆ, ಪ್ರಕೃತಿಗುಣರಹಿತ ನಾಗಿರಬೇಕು. ಗುರುಲಿಂಗಪ್ರಸಾದಿಯಾದಡೆ, ಗುರುಪ್ರಸಾದವಲ್ಲದೆ ಸ್ವೀಕರಿಸದಿರ ಬೇಕು. ಗುರುಲಿಂಗತೃಪ್ತನಾದಡೆ, ಅರಸುವ ಅರಿಕೆ ಇಲ್ಲದಿರಬೇಕು.

ಇನ್ನು ಶಿವಲಿಂಗಮೋಹಿತನಾದಡೆ ಮನಗುಣನಾಸ್ತಿಯಾಗಿರಬೇಕು. ಶಿವಲಿಂಗ ಭಕ್ತನಾದಡೆ ಲಿಂಗದ ಏಕೋಗ್ರಾಹಕತ್ವ ಅಳವಟ್ಟಿರಬೇಕು. ಶಿವಲಿಂಗವೀರನಾದಡೆ ಕಾಲಕಾಮಾದಿಗಳಿಗೆ ಅಳುಕದಿರಬೇಕು. ಶಿವಲಿಂಗಪ್ರಾಣಿಯಾದಡೆ ಜನನ ಮರಣಂಗಳಿಗೊಳಗಾಗದಿರಬೇಕು. ಶಿವಲಿಂಗಪ್ರಸಾದಿಯಾದಡೆ ಶಿವಪ್ರಸಾದ ವಲ್ಲದೆ ಸ್ವೀಕರಿಸದಿರಬೇಕು. ಶಿವಲಿಂಗತೃಪ್ತನಾದಡೆ ದ್ವೈತಾದ್ವೈತವನಳಿದಿರಬೇಕು.

ಇನ್ನು ಜಂಗಮಲಿಂಗಮೋಹಿತನಾದಡೆ ಪ್ರಾಣಗುಣ ನಾಸ್ತಿಯಾಗಿರಬೇಕು. ಜಂಗಮಲಿಂಗಭಕ್ತನಾದಡೆ, ಜಂಗಮದಲ್ಲಿ ಧನಮನ ಸವೆಯಬೇಕು. ಜಂಗಮಲಿಂಗ ವೀರನಾದಡೆ ಭಯಭಂಗವಿಲ್ಲದಿರಬೇಕು. ಜಂಗಮಲಿಂಗಪ್ರಾಣಿಯಾದಡೆ ತಥ್ಯ ಮಿಥ್ಯ ರಾಗದ್ವೇಷಗಳಿಲ್ಲದಿರಬೇಕು. ಜಂಗಮಲಿಂಗಪ್ರಸಾದಿಯಾದಡೆ ಭೋಗ ಭೂಷಣಂಗಳಾಸೆ ಇಲ್ಲದಿರಬೇಕು. ಜಂಗಮಲಿಂಗತೃಪ್ತನಾದಡೆ ಹಮ್ಮಿಲ್ಲದಿರಬೇಕು.

ಇನ್ನು ಪ್ರಸಾದಲಿಂಗಮೋಹಿಯಾದಡೆ ಶಬ್ದಜಾಲಂಗಳಿಗೆ ಕಿವಿಯೊಡ್ಡದಿರ ಬೇಕು. ಪ್ರಸಾದಲಿಂಗಭಕ್ತನಾದಡೆ ದಾಸೋಹ[ದಲ್ಲಿ][೧]ರಬೇಕು. ಪ್ರಸಾದಲಿಂಗ ವೀರನಾದಡೆ ಚಿರ ಹಮ್ಮಿಲ್ಲದಿರಬೇಕು. ಪ್ರಸಾದಲಿಂಗಪ್ರಾಣಿಯಾದಡೆ ಪ್ರಾಣ

೧–೧ ವಿಲ್ಲದಿ (ಮೂ)

ಲಿಂಗದೊಳು ಅಭಿನ್ನನಾಗಿರಬೇಕು. ಪ್ರಸಾದಲಿಂಗಪ್ರಸಾದಿಯಾದಡೆ ಪ್ರಸಾದ ಪ್ರಸನ್ನನಾಗಿರಬೇಕು. ಪ್ರಸಾದಲಿಂಗತೃಪ್ತನಾದಡೆ ಇಂದ್ರಿಯಂಗಳಿಚ್ಛೆ ಇಲ್ಲದಿರ ಬೇಕು.

ಇನ್ನು ಮಹಾಲಿಂಗಮೋಹಿತನಾದಡೆ ಅಣಿಮಾದಿ ಅಷ್ಟೈಶ್ವರ್ಯಂಗಳ ಬಯಸದಿರಬೇಕು. ಮಹಾಲಿಂಗಭಕ್ತನಾದಡೆ ಅಷ್ಟಮಹಾಸಿದ್ಧಿಗಳ ಬಯಸದಿರ ಬೇಕು. ಮಹಾಲಿಂಗವೀರನಾದಡೆ ಚತುರ್ವಿಧ ಪದವಿಯ ಹಾರದಿರಬೇಕು. ಮಹಾ ಲಿಂಗಪ್ರಾಣಿಯಾದಡೆ ಇಹಪರಂಗಳಾಶೆ ಇಲ್ಲದಿರಬೇಕು. ಮಹಾಲಿಂಗಪ್ರಸಾದಿ ಯಾದಡೆ ಅರಿವು ಮರಹಳಿದ ಚಿಲ್ಲಿಂಗಸಂಗಿಯಾಗಿರಬೇಕು. ಮಹಾಲಿಂಗತೃಪ್ತ ನಾದಡೆ ಭಾವ, ಸದ್ಭಾವ, ದುರ್ಭಾವವಳಿದು, ಭಾವೈಕ್ಯವಾಗಿ ತಾನಿದಿರೆಂಬ ಭಿನ್ನ ಭಾವವ ತೋರದಿರಬೇಕು. ಇಂತು ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯ.

ಆರು ಅಂಗಸ್ಥಲಗಳು

(ಭಕ್ತ , ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ)

೧೬೨

(೧) ಭಕ್ತಂಗೆ ಹಸ್ತವಾವುದು, ಮಹೇಶ್ವರಂಗೆ ಹಸ್ತವಾವುದು, ಪ್ರಸಾದಿಗೆ ಹಸ್ತವಾವುದು, ಪ್ರಾಣಲಿಂಗಿಗೆ ಹಸ್ತವಾವುದು, ಶರಣಂಗೆ ಹಸ್ತವಾವುದು,ಐಕ್ಯಂಗೆ ಹಸ್ತವಾವುದು ಎಂದರೆ ಈ ಹಸ್ತಂಗಳ ಭೇದವ ಹೇಳಿಹೆನಯ್ಯ. ಭಕ್ತಂಗೆ ಸುಚಿತ್ತವೇ ಹಸ್ತ, ಮಹೇಶ್ವರಂಗೆ ಸುಬುದ್ಧಿಯೇ ಹಸ್ತ, ಪ್ರಸಾದಿಗೆ ನಿರಹಂಕಾರವೇ ಹಸ್ತ, ಪ್ರಾಣಲಿಂಗಿಗೆ ಸುಮನವೇ ಹಸ್ತ, ಶರಣಂಗೆ ಸುಜ್ಞಾನವೇ ಹಸ್ತ, ಐಕ್ಯಂಗೆ ಸದ್ಭಾವವೇ ಹಸ್ತ, ಇಂತೀ ಹಸ್ತಂಗಳ ಭೇದವ ತಿಳಿವುದಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

೧೬೩

(೨) ಕುಚಿತ್ತವಳಿದು ಸುಚಿತ್ತ ನೆಲೆಗೊಂಡು ಆಚಾರಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯಬಲ್ಲಡೆ ಭಕ್ತನೆಂಬೆನು. ಕುಬುದ್ಧಿಯನಳಿದು ಸುಬುದ್ಧಿ ನೆಲೆ ಗೊಂಡು ಗುರುಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯಬಲ್ಲಡೆ ಮಹೇಶ್ವರ ನೆಂಬೆನು. ಅಹಂಕಾರವನಳಿದು ನಿರಹಂಕಾರ ನೆಲೆಗೊಂಡು ಶಿವಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯಬಲ್ಲಡೆ [೧][ಪ್ರಸಾದಿ][೧] ಎಂಬೆನು. [೨][ಕುಮನವನಳಿದು ಸುಮನ ನೆಲೆಗೊಂಡು ಜಂಗಮಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯ ಬಲ್ಲಡೆ ಪ್ರಾಣಲಿಂಗಿ ಎಂಬೆನು][೨]. ಅಜ್ಞಾನವಳಿದು ಸುಜ್ಞಾನ ನೆಲೆಗೊಂಡು ಪ್ರಸಾದ

೧–೧ ಪ್ರಾಣಲಿಂಗಿ (ಮೂ) ೨–೨ ಅಜ್ಞಾನವಳಿದು ಸುಜ್ಞಾನ ನೆಲೆಗೊಂಡು ಪ್ರಸಾದಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯ ಬಲ್ಲಡೆ ಶರಣನೆಂಬೆನು (ಮೂ)

ಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯಬಲ್ಲಡೆ ಶರಣನೆಂಬೆನು. ದುರ್ಭಾವ ವಳಿದು ಸದ್ಭಾವ ನೆಲೆಗೊಂಡು ಮಹಾಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯ ಬಲ್ಲಡೆ ಐಕ್ಯನೆಂಬೆನು. ಇಂತೀ ಷಡ್ವಿಧಬ್ರಹ್ಮವನೊಡಗೂಡುವ ಮಹಾಶರಣರ ಪಾದಕ್ಕೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

(೩) ಸುಚಿತ್ತ : ಹೊನ್ನು ಹೆಣ್ಣು ಮಣ್ಣುಗಳ ಮೇಲಣ ವ್ಯಾಮೋಹದೊಡನೆ ಕೂಡಿ ಚರಿಸುವುದೇ ಕುಚಿತ್ತ, ಆ ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಪದಾರ್ಥಂ ಗಳನ್ನು ಗುರುಲಿಂಗಜಂಗಮಕ್ಕೆ ಸಮರ್ಪಿಸಿ, ಸಕಲಕರಣಂಗಳಳಿದು ಲಿಂಗಕರಣಂ ಗಳಾಗಿ, [೧][ಹೊನ್ನು ಹೆಣ್ಣು ಮಣ್ಣು][೧]ಗಳ ಮೇಲಣ ವ್ಯಾಮೋಹವಳಿದು ನಿರ್ಮೋಹಿ ಯಾಗಿರುವದೇ ಸುಚಿತ್ತ.

ಸುಬುದ್ಧಿ : ಪರಧನ, ಪರದೈವ, ಪರಸತಿ, ಪರನಿಂದೆ, ಪರಹಿಂಸೆ ಎಂಬ ಪಂಚ ಮಹಾಪಾತಕಂಗಳೊಡನೆ ಕೂಡಿ ಚರಿಸುವುದೇ ಕುಬುದ್ಧಿ. ಇಂತಪ್ಪ ಕುಬುದ್ಧಿ ಎಂಬ ಕರಕಮಲವು ಕೆಟ್ಟು, ಅಷ್ಟಾವರಣವ ಅಂಗವ ಮಾಡಿಕೊಂಡು ಪಂಚಾಚಾರವೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವದೇ ಸುಬುದ್ಧಿ.

ನಿರಹಂಕಾರ : ತನುತ್ರಯಸಂಬಂಧವಾದ ರೂಪು, ರುಚಿ, ತೃಪ್ತಿಗಳನ್ನು ಲಿಂಗಾರ್ಪಿತ ವಿಹೀನವಾಗಿ ಜೀವ ಭಾವದಿಂದ ಭುಂಜಿಸಿ ದೇಹೋಹಂ ಎಂದುಲಿವುದೇ ಅಹಂಕಾರ. ಅಂತಪ್ಪ ಅಹಂಕಾರವೆಂಬ ಕರಕಮಲವು ನಷ್ಟವಾಗಿ ಹೋಗಿ, ಆ ತನುತ್ರಯಸಂಬಂಧವಾದ ರೂಪು, ರುಚಿ, ತೃಪ್ತಿಗಳನ್ನು ಇಷ್ಟ ಪ್ರಾಣ ಭಾವಲಿಂಗಗಳಿಗೆ ಸಮರ್ಪಿಸಿ ಆ ಇಷ್ಟ ಪ್ರಾಣ ಭಾವಲಿಂಗಮುಖದಿಂದ ಉಳುಮೆಯಾಗಿ ಬಂದ ಶುದ್ಧ, ಸಿದ್ಧ , ಪ್ರಸಿದ್ಧ ಪ್ರಸಾದವನುಭವಿಸಿ ನಿರಹಂಕಾರ ಭಾವಿಯಾಗಿರುವದೇ ನಿರಹಂಕಾರ.

ಸುಮನ : ಹೃದಯಕಮಳದ ಅಷ್ಟದಳಾಗ್ರಗತಿಯೊಡನೆ ಕೂಡಿ, ಷಡಾಧಾರ ಚಕ್ರಸಂಬಂಧವಾದ ೫೦ ದಳಂಗಳಲ್ಲಿ ದಳಪ್ರಕೃತಿವಿಡಿದು ದೇಹಾರೋಹಂಗಳಿಂದ ಚರಿಸುತ್ತ ಸಂಚಲ ವ್ಯವಹಾರಿಯಾಗಿರುವುದೇ ಕುಮನ. ಅಂತಪ್ಪ ಕುಮನವೆಂಬ ಕರಕಮಲವು ಅಳಿದು ನಷ್ಟವಾಗಿ ಹೋಗಿ, ಸುಮನವು ಊರ್ಧ್ವಮುಖವಾಗಿರುವ ಧರ್ಮ, ಜ್ಞಾನ, ವೈರಾಗ್ಯ ಐಶ್ವರ್ಯವೆಂಬ ಚತುರ್ದಶ ಕಮಲ ಸಿಂಹಾಸನದಲ್ಲಿ ನೆಲೆಗೊಂಡು, ಅಚಲಾನಂದಪೂಜೆಯ ಕೈಕೊಂಡೊಪ್ಪುವ ಪರಮಾತ್ಮಲಿಂಗದಲ್ಲಿ ತನ್ನ ಮನಸ್ಸನ್ನು ಸ್ಥಿರಮಾಡಿಕೊಂಡಿರುವದೇ ಸುಮನ.

ಸುಜ್ಞಾನ : ದೇಹವೇ ಸತಿಯಾಗಿ, ಆತ್ಮನೇ ಪತಿಯಾಗಿ, ಸಕಲ ಕರಣಂಗಳೇ ತನ್ನಯ ತೊತ್ತಾದಿಗಳಾಗಿ ಘಟ ಸಂಸಾರಿಗಳಾಗಿ ಆಚರಿಸುವದೇ ಅಜ್ಞಾನವು. ಅಂತಪ್ಪ ಅಜ್ಞಾನವೆಂಬ ಕರಕಮಲವು ನಷ್ಟವಾಗಿ ಹೋಗಿ, ಶರಣನೇ ಸತಿಯಾಗಿ, ಲಿಂಗವೇ ಪತಿಯಾಗಿ ಇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾಗಿ, ವಿಷಯಂಗಳೆಲ್ಲ ಲಿಂಗ

೩–೩ ಸತಿಸುತಾದಿ (ಮೂ)

ಪ್ರಸಾದವಾಗಿ, ಅಳವಡಿಸಿಕೊಂಡು ಲಿಂಗಾಂಗಸಂಸಾರಿಯಾಗಿ ಆಚರಿಸುವದೇ ಸುಜ್ಞಾನವು.

ಸದ್ಭಾವ : [ಅರಿ]ಷಡ್ವರ್ಗಂಗಳೊಡನೆ ಕೂಡಿಕೊಂಡು, ಲಿಂಗಾಂಗವೆರಡಕ್ಕೆ ಭಿನ್ನವಿಟ್ಟುಕೊಂಡು, ಲಿಂಗವ ಪೂಜಿಸಿ ಫಲಪದಂಗಳ ಪಡೆದು, ಅನುಭವಿಸಿ ಭವವನ್ಯೆದಿ ಹೋಗುವಂಥಾದ್ದೇ ದುರ್ಭಾವವು. ಅಂತಪ್ಪ ದುರ್ಭಾವವೆಂಬ ಕರಕಮಲವು ಅಳಿದು ನಷ್ಟವಾಗಿ ಹೋಗಿ, ಸದ್ಭಾವವು ಶಿಖಿಕರ್ಪುರಸಂಯೋಗವಾದ ಹಾಗೆ ಲಿಂಗದಲ್ಲಿ ತಾ ಕೂಡಿ, ತನ್ನಲ್ಲಿ ಲಿಂಗವು ಕೂಡಿ, ತಾನು ಲಿಂಗವೆಂಬ ಉಭಯ ಭಾವವಳಿದು ತಾನು ತಾನಾಗಿರುವದೇ ಸದ್ಭಾವವು.*

೧೬೪

(೪) ಕಿಂಕುರ್ವಾಣತೆಯಿಂದ ಉಳ್ಳುದನರಿತು [ಬಂದ ಜಂಗಮನೆ ಲಿಂಗವೆಂದು ತನಗೆ ಮನಸಹಿತ] ಮಾಡುವಲ್ಲಿ ಭಕ್ತ ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು ಅಭಿಲಾಷೆ ಸಮನಿಸದೆ ಪರಿಚ್ಛೇದಬುದ್ಧಿಯುಳ್ಳಲ್ಲಿ ಮಹೇಶ್ವರ. ಅನರ್ಪಿತವ ಸಮನಿಸದೆ ಬಂದುದ ಕಾಯದ ಕರಣದ ಕೈಗಳಲ್ಲಿ ಕೊಟ್ಟು,, ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ. ಪ್ರಾಣಕ್ಕೆ ಪ್ರಾಣವಾಗಿ, ಕಾಲಸ್ಥಿತಿಯನರಿದು ಎಚ್ಚರಿಕೆಗುಂದದಿಪ್ಪಲ್ಲಿ ಪ್ರಾಣಲಿಂಗಿ, ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಬಿಚ್ಚುಬೇರಿಲ್ಲದಿರ್ದಡೆ ಶರಣ. ಸದಾಚಾರಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯ. ಇದು ಕಾರಣ [ಕೂಡಲ]ಚನ್ನಸಂಗಯ್ಯನಲ್ಲಿ ಬಸವಣ್ಣಂಗಲ್ಲದೆ ಷಟ್‌ಸ್ಥಲವಪೂರ್ವ.

೧೬೫

(೫) ಭಕ್ತೆ ಏನಪ್ಪೆನಯ್ಯಾ ಕರ್ತೃಭೃತ್ಯತ್ವವನರಿಯೆ. ಮಹೇಶ್ವರಿ ಏನಪ್ಪೆನಯ್ಯಾ ವ್ರತ ನೇಮ ಛಲವ ನಾನರಿಯೆ. ಪ್ರಸಾದಿ ಏನಪ್ಪೆನಯ್ಯಾ ಅರ್ಪಿತ ಅನರ್ಪಿತವೆಂಬ ಭೇದವ ನಾನರಿಯೆ. ಪ್ರಾಣಲಿಂಗಿ ಏನಪ್ಪೆನಯ್ಯಾ ಅನುಭಾವದ ಗಮನವ ನಾನರಿಯೆ. ಶರಣೆ ಏನಪ್ಪೆನಯ್ಯಾ ಶರಣಸತಿ ಲಿಂಗಪತಿ ಎಂಬ ಭಾವವನರಿಯೆ. ಐಕ್ಯ ಏನಪ್ಪೆನಯ್ಯಾ [ಬೆರಸಿ ಭೇದವ ನಾನರಿಯೆ. ಚನ್ನಮಲ್ಲಿಕಾರ್ಜುನಾ] ಷಟ್‌ಸ್ಥಲದಲ್ಲಿ ನಿಷ್ಠಲವಾಗದಿರ್ಪೆನು.

೧೬೬

(೬) ಭಕ್ತಸ್ಥಲಕೆ ಒಬ್ಬನು, ಮಹೇಶ್ವರಸ್ಥಲಕ್ಕೆ ಇಬ್ಬರು, ಪ್ರಸಾದಿ ಸ್ಥಲಕ್ಕೆ ಆತನಳಿಯನಲ್ಲದಿಲ್ಲ ; ಪ್ರಾಣಲಿಂಗಿಸ್ಥಲಕ್ಕೆ ಮೂವರು, ಶರಣಸ್ಥಲಕೆ ನಾಲ್ವರು, ಐಕ್ಯಸ್ಥಲಕ್ಕೆ ಅಕ್ಕನ ತಮ್ಮನಲ್ಲದಿಲ್ಲ. ಇಂತೀ ಕುರುಹಿನ ಬೆಂಬಳಿಯನರಿದು ಬಿಡುವದ ಬಿಟ್ಟು,, ತಡೆವರ ತಡೆವುತ್ತಿದ್ದೇನೆ ಕೂಡಲಸಂಗಮದೇವರಲ್ಲಿ ಬಸವಣ್ಣನರಿಕೆಯಾಗಿ.

* ನೋಡಿ ಅನುಬಂಧ–೨೦, ಟಿಪ್ಪಣಿಗಳು–೩೨.

ಅರ್ಥ : ತ್ರಿವಿಧ ಪದಾರ್ಥವ ಗುರುಲಿಂಗ ಜಂಗಮಕ್ಕೆ ನಿರ್ವಂಚಕತ್ವದಿಂದ ಸಮರ್ಪಿಸುವ ಭಕ್ತಸ್ಥಲವುಳ್ಳವನೆ ಬಸವೇಶ್ವರನು. ಪಂಚಮಹಾಪಾತಕಂಗಳ ಬಿಟ್ಟು ಪಂಚಾಚಾರವನೊಡಲುಮಾಡಿಕೊಂಡು ಏಕಲಿಂಗನಿಷ್ಠೆಯಿಂದಾಚರಿಸುವ ಮಹೇಶ್ವರ ಸ್ಥಲವುಳ್ಳವರೇ ಜಗದೇವ ಮಲ್ಲಿ ಬೊಮ್ಮಣ್ಣಗಳು. ತ್ರಿವಿಧ ಪದಾರ್ಥವ ತ್ರಿವಿಧಲಿಂಗಕ್ಕರ್ಪಿಸಿ ತ್ರಿವಿಧಪ್ರಸಾದವ ಸ್ವೀಕರಿಸುವ ಪ್ರಸಾದಿಸ್ಥಲವುಳ್ಳವನೇ ಬಸವೇಶ್ವರನ ಸೋದರಳಿಯನಾದ ಚನ್ನಬಸವಣ್ಣನು. ಅಂಗಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವಮಾಡಿಕೊಂಡು ಜ್ಞಾನಕ್ರಿಯಾಯುಕ್ತವಾಗಿ ಆಚರಿಸುವ ಪ್ರಾಣಲಿಂಗಿಸ್ಥಲವುಳ್ಳವರೇ ಸಿದ್ಧರಾಮಯ್ಯ, ನಿಜಗುಣದೇವರು, ಘಟ್ಟಿವಾಳಯ್ಯಗಳು. ಶರಣಸತಿ ಲಿಂಗಪತಿತ್ವವಿಡಿದಾಚರಿಸುವ ಶರಣಸ್ಥಲವುಳ್ಳವರೇ ಪ್ರಭುದೇವರು, ಅಕ್ಕಗಳು, ಗಜೇಶ ಮಸಣಯ್ಯಗಳು, ಉರಿಲಿಂಗಯ್ಯಗಳು. ಉರಿಕರ್ಪುರ ಸಂಯೋಗದ ಹಾಗೆ ಮಹಾಲಿಂಗದಲ್ಲಿ ಕೂಡುವ ಐಕ್ಯಸ್ಥಲವುಳ್ಳವರೇ ಅಜಗಣ್ಣಯ್ಯಗಳು. ಈ ಕುರುಹಿಟ್ಟು ಹೇಳುವ ಷಟ್‌ಸ್ಥಲಬ್ರಹ್ಮಿಗಳ ಆಚರಣೆಯ ತಿಳಿದು ಷಟ್‌ಸ್ಥಲದಾಚರಣೆಯುಳ್ಳವರ ತನ್ನಾಚಾರಕ್ಕೊಳಗುಮಾಡಿಕೊಂಡು ಷಟ್‌ಸ್ಥಲದಾಚರಣೆ ಇಲ್ಲದವರ ತನ್ನಾಚಾರದಿಂದ ಬೇರ್ಪಡಿಸುತ್ತಿಹೆನು ಬಸವಣ್ಣನಪ್ಪಣೆಯಿಂದ ಎಂಬುದರ್ಥ.

೧೬೭

(೭) ತ್ರಿವಿಧ ಕ್ರೀಯಿಂದ ಭೇದವನರಿತುಮಾಡುವುದುಭಕ್ತಸ್ಥಲ. ಚತುರ್ವಿಧ ಫಲಪ್ರಾಪ್ತಿಯನನುಭವಿಸದೆ ನಿಶ್ಚಯವಸ್ತುವ ಕಾಂಬುವುದು ಮಹೇಶ್ವರಸ್ಥಲ. ಪಂಚೇಂದ್ರಿಯಂಗಳಲ್ಲಿ ಸಂಚಿತದಲ್ಲಿ ಬಂದುದನರಿದು ಲಿಂಗಾರ್ಪಿತದಿಂದ ಕೊಂಬುದು ಪ್ರಸಾದಿಸ್ಥಲದಿರವು. ಷಡಾಧಾರಗಳಿಂದ ಸುಳಿವ ಸೂಕ್ಷ್ಮದ ನೆಲೆಯನರಿದು ಕೂಡುವ ಕೂಟ ಪ್ರಾಣಲಿಂಗಿಯಸ್ಥಲದಿರವು. ಸುಖದುಃಖವೆಂಬ ಉಭಯವನಳಿದು ಬೆರಗು ನಿಬ್ಬೆರಗಾದುದು ಶರಣಸ್ಥಲದಿರವು. ಸುಗಂಧ ಗಂಧವ ಅಗ್ನಿಯಲ್ಲಿ ಸಂಬಂಧಿಸಿ ಅಗ್ನಿ ಅಗ್ನಿಯೊಳಗೆ ಅಡಗಿ, ಗಂಧ ಧೂಮದಲ್ಲಿ ತಲೆದೋರಿ, ಗಂಧ ಹಿಂಗೆ, ಆ ಗಂಧದಲ್ಲಿಯೇ ಅಡಗಿದಂತೆ ನಿಂದುದು ಐಕ್ಯಸ್ಥಲ. ಇಂತೀ ಷಟ್‌ಸ್ಥಲ ತ್ರಿಕರಣ ಶುದ್ಧಾತ್ಮಂಗಲ್ಲದೆ ಸಾಧ್ಯವಲ್ಲ ನೋಡಾ, ಶಂಭುವಿಂದಿತ್ತ, ಸ್ವಯಂಭು ವಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನು.

೧೬೮

(೮) ಅಯ್ಯ, ಇದ್ದುದ ವಂಚನೆಯ ಮಾಡದೆ, ಇಲ್ಲದುದಕೆ ಕಡನ ಮಾಡದೆ, ಪರರ ಕಾಡಿ ಬೇಡಿ ತಂದು ದಾಸೋಹವ ಮಾಡದೆ, ತನ್ನ ಬೇಡಿದವರಿಗೆ ಇಲ್ಲೆನ್ನದಿಹುದು ಭಕ್ತಸ್ಥಲ. ಜಿಹ್ವೇಂದ್ರಿಯ ಘ್ರಾಣೇಂದ್ರಿಯ ಮೊದಲಾದ ಸಕಲ ಸಂಸಾರ ವಿಷಯದಲ್ಲಿ ಮನಮಗ್ನವಾಗದಿಹುದೇ ಮಹೇಶ್ವರಸ್ಥಲ. ಲಾಂಛನವ ಧರಿಸಿ ಕಾಂಚನಕ್ಕೆ ಕೈಯೊಡ್ಡಿ ಬೇಡುವ ಪಂಚಮಹಾಪಾತಕರಲ್ಲಿ ಪಾದೋದಕ ಪ್ರಸಾದ

ತೆಗೆದುಕೊಳ್ಳದಿಹುದೇ ಪ್ರಸಾದಿಸ್ಥಲ. ತನ್ನ ತಾನರಿಯದ ಭಿನ್ನಜ್ಞಾನಕ್ರೀಯಿಂದಾ ಚರಿಸುವ ನರಗುರಿಗಳಿಗೆ ನಮಸ್ಕರಿಸದೆ, ಪರಲೋಕದ ಪದವಿಗಿಚ್ಛೈಸದಿಹುದೇ ಪ್ರಾಣಲಿಂಗಿಸ್ಥಲ. ಇಹಲೋಕದ ಜಡಸಂಸಾರಿಗಳ ಸಂಗವ ಜರಿದು, ಗುರುಲಿಂಗ ಜಂಗಮ ಮೂಲವಾದ ಬಾಹ್ಯ ಕ್ರಿ[ಯ]ಗಳ ಮರೆದು, ಜನನ ಮರಣಂಗಳಿಲ್ಲ ದಿಹುದೇ ಶರಣಸ್ಥಲ. ಅರಿಷಡ್ವರ್ಗಂಗಳ ತೊರೆಯದ, ಷಡ್ವಿಧ ಲಿಂಗಾಂಗಸಮರ ಸವರಿಯದ, ಮಂಗ ಹೊಲೆ ಮಾದಿಗರ ಸಂಗವ ತೊರೆದು ತಾನಿದಿರೆಂಬುದ ನರಿಯದೆ ಇಹುದೇ ಐಕ್ಯಸ್ಥಲ. ತಾನಾಗಿ ಕೊಟ್ಟರೆ ಹಿಡಿವುದೇ ಮಧ್ಯಮ ಗುರುಸ್ಥಲ. ಕೊಟ್ಟರೂ ಹಿಡಿಯದಿಹುದೇ ಪರಮವಿರಕ್ತಿಸ್ಥಲ. ಕಾಡಿಬೇಡುವುದೇ ಕಿರಾತಸ್ಥಲ. ಇಂತೀ ನವವಿಧಸ್ಥಲವ ಹರಗುರುವಾಕ್ಯ ಪುರಾತರ ವಚನ ಪ್ರಮಾಣದಿಂದ ವಿಚಾರಿಸಿ, ಪುರಾತರ ಕವಳಿಕೆಗೆ ಯೋಗ್ಯವಾದ ಸ್ಥಲವನಂಗಂಗೊಂಡು, ಪರಿಣಾಮಿ, ನಿರುಪಾಧಿ, ಪರಿಪೂರ್ಣ ಎಂಬ ತ್ರಿವಿಧ ಗುರುಗಳಲ್ಲಿ ತೀರ್ಥಪ್ರಸಾದವನುಳಿದು ಆಚರಿಸುವುದು, ನಿರ್ವಯಲ ಪದವನೈದುವದು ಬಸವಾದಿ ಪ್ರಮಥರಿಗಲ್ಲದೆ, ಭಿನ್ನ ಜ್ಞಾನಿಗಳಿಗೆಲ್ಲಿಯದೋ ಸದಾಶಿವಮೂರ್ತಿಲಿಂಗವೆ ?

೧೬೯

(೯) ಭಕ್ತನಾದಡೆ, ತನುಮನಧನದಾಶೆಯಳಿದಿರಬೇಕು. ಮಹೇಶ್ವರ ನಾದಡೆ, ಪರಧನ, ಪರಚಿಂತೆ, ಪರಾಂಗನೆಯರ ಎಡೆಯಳಿದುಳಿರಬೇಕು. ಪ್ರಸಾದಿ ಯಾದಡೆ, ಸುಖರುಚಿಯವಗ್ರಹವಂ ಮರೆದು, ಪ್ರಸಾದಘಟವಳಿಯದೆ ಉಳಿದಿರ ಬೇಕು. ಪ್ರಾಣಲಿಂಗಿಯಾದಡೆ ಘಟದಾಸೆಯ ತೊರೆದು, ಪ್ರಾಣಲಿಂಗದೊಳಗೆ ಬೆರಸಿ ಬೇರಿಲ್ಲದಿರಬೇಕು. ಶರಣನಾದಡೆ ಸತಿರತಿಯ ಸಂಗವಳಿದು, ಲಿಂಗಕ್ಕೆ ತಾ ಸತಿಯಾಗಿರಬೇಕು. ಲಿಂಗೈಕ್ಯನಾದಡೆ ಆಪ್ಯಾಯನದೆಡೆಯಡಗಿ ಸುಖ ದುಃಖಮಂ ತಾಳದೆ ನಿಭ್ರಾಂತನಾಗಿರಬೇಕು. ಮಾತಿನ ಮಾಲೆಯಲ್ಲಿ ಸಿಲುಕುವುದೇ ಶಿವಾಚಾರ? ಇಂತೀ ಷಟ್‌ಸ್ಥಲವಾರಿಗೆಯೂ ಅಳವಡದು. ಸೊಡ್ಡಳದೇವನು ಷಟ್‌ಸ್ಥಲದ ಭಕ್ತಿಯನು ಬಸವಣ್ಣಂಗೆ ಮೂರ್ತಿಯ ಮಾಡಿದನು.

೧೭೦

(೧೦) ಭಕ್ತಂಗೆ ಕ್ರೀ, ಮಹೇಶ್ವರಂಗೆ ನಿಶ್ಚಯ, ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ, ಇಂತೀ ಷಟ್‌ಸ್ಥಲವನವಗ್ರಹಿಸಿ ನಿಂದ, ವಿರಕ್ತನ ವಿಕಸ್ಥಲದಾಟ, ನಿಜತತ್ವದ ಕೂಟ. ಶಂಭುವಿಂದಿತ್ತು ಸ್ವಯಂಭುವಿಂದತ್ತ ಅತಿಬಳನೋಡಾ ಮಾತುಳಂಗ ಮಧು ಕೇಶ್ವರನು.

೧೭೧

(೧೧) ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂದ ಮಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯಾಗಿ, ಆ

ಸಾವಧಾನದೊಳಗಣ ಸ್ವಾನುಭಾವದಿಂದ ಪ್ರಾಣಲಿಂಗಯಾಗಿ, ಆ ಸ್ವಾನುಭಾವ ದೊಳಗಣ ಅರುವಿನಿಂದ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವವನೈದಿದ ನಿರ್ಭಾವಪದದೊಳು ನಿಂದ ಭೇದವೆಂತಿದ್ದಿತೆಂದಡೆ, ಮುಂದೆ ಐಕ್ಯಸ್ಥಲವಾದುದು ಗುಹೇಶ್ವರಾ.

೧೭೨

(೧೨) ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನೈಷ್ಠೆ, ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ, ಐಕ್ಯಂಗೆ ಕುರುಹು ಗೊಂಬುದಕ್ಕೆ ಮುನ್ನವೇ ನಿರಾಳ, ಇಂತೀ ಷಟ್‌ಸ್ಥಲ ಭೇದ ಎನ್ನಯ್ಯ ಪ್ರಿಯ ನಿಷ್ಕಳಂಕ ಮಲ್ಲಿಕಾರ್ಜುನಾ.

೧೭೩

(೧೩) ಕಕ್ಷೆ ಭಕ್ತನ ಸೋಂಕು, ಮುಖಸೆಜ್ಜೆ ಮಹೇಶ್ವರನ ಸೋಂಕು, ಅಂಗಸಂಬಂಧ ಪ್ರಸಾದಿಯ ಸೋಂಕು, ಕರಸ್ಥಳ ಪ್ರಾಣಲಿಂಗಿಯ ಸೋಂಕು, ಉತ್ತಮಾಂಗ ಶರಣನ ಸೋಂಕು, ಅಮಳೋಕ್ಯ ಐಕ್ಯನ ಸೋಂಕು. ಭಕ್ತಂಗೆ ಆಚಾರಲಿಂಗ, ಮಹೇಶ್ವರಂಗೆ ಸದಾಚಾರಲಿಂಗ, ಪ್ರಸಾದಿಗೆ ವಿಚಾರಲಿಂಗ, ಪ್ರಾಣಲಿಂಗಿಗೆ ಸರ್ವಾವಧಾನ ಸನ್ನದ್ಧಲಿಂಗ, ಶರಣಂಗೆ ಅವಿರಳ ಸಂಪೂರ್ಣಲಿಂಗ, ಐಕ್ಯಂಗೆ ಪರಮ ಪರಿಪೂರ್ಣಲಿಂಗ, ಇಂತೀ ಆರುಸ್ಥಲ, ಷಟ್‌ಕರ್ಮ, ಆ ಷಡ್ವಿಧ ಲಿಂಗಭೇದಂಗಳಲ್ಲಿ ಮುಂದಣ ವಸ್ತು ಒಂದುಂಟೆಂದು, ಸಂಗವ ಮಾಡುವುದಕ್ಕೆ, ಆರಂಗದ ಪಥಗೂಡಿ ಕಾಂಬಲ್ಲಿ ವಸ್ತುವನೊಡಗೂಡುವದೊಂದೇ ಭೇದ. ಇಂತೀ ಸ್ಥಲ ವಿವರ, ಕೂಟಸಂಬಂಧ. ವಿಕಮೂರ್ತಿ ತ್ರಿವಿಧ ಸ್ಥಲವಾಗಿ, ತ್ರಿವಿಧಸ್ಥಲಮೂರ್ತಿ ಷಟ್‌ಸ್ಥಲವಾಗಿ, ಮಿಶ್ರಕ್ಕೆ ಮಿಶ್ರ, ತತ್ವಕ್ಕೆ ತತ್ವ, ಬೊಮ್ಮಕ್ಕೆ ಪರಬ್ರಹ್ಮ ಹಲವು ಹೊಲಬಿನ ಪಥದಲ್ಲಿ ಬಂದಡೂ, ಪಥ ಹಲವಲ್ಲದೆ ನಗರಕ್ಕೊಂದೇ ಹೊಲಬು. ಇಂತೀ ಸ್ಥಲವಸ್ತು ನಿರ್ವಾಹ. ಶಂಭುವಿಂದಿತ್ತ ಸ್ವಯಂಭುವಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನು.

೧೭೪

೧೪) ಕಾಯ ಇಂದ್ರಿಯಂಗಳಲ್ಲಿ ಮೆಚ್ಚಿಹನ್ನಕ್ಕರ ಭಕ್ತಸ್ಥಲವಿಲ್ಲ. ಆತ್ಮ ಹಲವು ವಿಷಯಂಗಳಲ್ಲಿ ಹರಿವನ್ನಕ್ಕರ ಮಹೇಶ್ವರಸ್ಥಲವಿಲ್ಲ. ಹಿರಿದು ಕಿರಿದನರಿದು, ರೋಚಕ ಆರೋಚಕವೆಂಬನ್ನಕ್ಕರ ಪ್ರಸಾದಿಸ್ಥಲವಿಲ್ಲ. ಜಾಗ್ರದಲ್ಲಿ ಕಂಡು, ಸ್ವಪ್ನದಲ್ಲಿ ತೋರಿ, ಸುಷುಪ್ತಿಯಲ್ಲಿ ತಿಳಿವನ್ನಕ್ಕರ ಪ್ರಾಣಲಿಂ[ಗಿಸ್ಥಲ]ಸಂಬಂಧಿಯಲ್ಲ. ಚತುರ್ವಿಧ ಫಲಪದಂ ಗಳಲ್ಲಿ ಕಾಂಬ ಕಾಣಿಕೆಯುಳ್ಳನ್ನಕ್ಕರ ಶರಣಸ್ಥಲವಿಲ್ಲ. ಅರಿದೆ, ಮರೆದೆ ಎಂಬ ಉಭಯದ ಸಂದೇಹವುಳ್ಳನ್ನಕ್ಕರ ಐಕ್ಯಸ್ಥಲವಿಲ್ಲ. ಇಂತೀ ಷಟ್‌ಸ್ಥಲಂಗಳಲ್ಲಿ

೧–೧ ಗ (ಮೂ)

ಸೋಪಾನದ ಮೆಟ್ಟಿಲಿನಂತೆ ಒಂದ ಬಿಟ್ಟು ಒಂದನೇರುವನ್ನಕ್ಕ ಸ್ಥಳಕುಳಭರಿತನಾಗ ಬೇಕು. ಮೇಲನೇರಿ ಕೆಳಗೆ ಇಳಿವೆನೆಂಬ ಭಾವ ನಿಂದಲ್ಲಿ ಆರನೆಣಿಸಲಿಲ್ಲ. ಮೂರೊಂದು ಬೇರೊಂದು ಮುಟ್ಟಲಿಲ್ಲ. ಕರಗಿದ ಬಂಗಾರಕ್ಕೆ ಕರಚರಣಾದಿಗಳಿಲ್ಲ ದಂತೆ ಆತ ಕುರುಹಡಗಿದ ಷಟ್‌ಸ್ಥಲಬ್ರಹ್ಮಿ ನಿಷ್ಕಳಂಕ ಮಲ್ಲಿಕಾರ್ಜುನಾ.

೧೭೫

(೧೫) ಭಕ್ತಂಗೆ ತ್ರಿವಿಧಮಲ ನಾಸ್ತಿಯಾಗಿರಬೇಕು. ಮಹೇಶ್ವರಂಗೆ ಬಂದ, ಜಪ, ನೇಮ, ಕರ್ಮಂಗಳು ಹಿಂಗಿರಬೇಕು. ಪ್ರಸಾದಿಗೆ ಬಂದು ಸೋಂಕುವ ಸುಗುಣ ದುರ್ಗುಣ ಉಭಯವು ಸೋಂಕುವದಕ್ಕೆ ಮುನ್ನವೇ ಹಿಡಿದುದ ಹಿಡಿದು, ಬಿಡುವುದ ಬಿಟ್ಟು ಅರ್ಪಿಸಬೇಕು. ಪ್ರಾಣಲಿಂಗಿಯಾದೊಡೆ ಆಯತ, ಸ್ವಾಯತ, ಸನ್ನಿಹಿತವೆಂಬ ಸಂದೇಹಕ್ಕಿಕ್ಕದೆ ಸ್ವಯ ಸನ್ನದ್ಧನಾಗಬೇಕು. ಶರಣನಾದಲ್ಲಿ ಆಗು ಚೇಗೆಂಬುದನರಿಯದೆ, ಸ್ತುತಿ ನಿಂದ್ಯಾದಿಗಳಿಗೆ ಮೈಗೊಡದೆ, ರಾಗ ವಿರಾಗವೆಂಬುದಕ್ಕೆ ಮನವಿಕ್ಕದೆ, ಜಿಹ್ವೆ ಗುಹ್ಯೇಂದ್ರಿಯಕ್ಕೆ ಸಿಲುಕದೆ, ಮದಗಜದಂತೆ ಇದಿರನರಿಯದಿಪ್ಪುದು. ಐಕ್ಯನಾದಲ್ಲಿ ಸುಗಂಧದ ಸುಳುಹಿನಂತೆ, ಪಳುಕಿನ ರಾಜತೇಜದಂತೆ, ಶುಕ್ತಿಯ ಅಪ್ಪುವಿನಂತೆ, ಅಣೋರಣೀಯದಲ್ಲಿ ಆವರಿಸಿ ತಿರುಗುವ ನಿಶ್ಚಯತ್ವದಂತೆ, ಬಿಂಬದೊಳಗಣ ತರಂಗದ ನಿಸ್ತರಂಗದಂತೆ, ಇಂತೀ ಷಟ್‌ಸ್ಥಲಕ್ಕೆ ನಿರ್ವಾಹಕನಾಗಿ ನಿಂದ ವಿಶ್ವಾಸದಿಂದ ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವನರಿದವರಿಗಲ್ಲದೆ ಸಾಧ್ಯನಲ್ಲ.

೧೭೬

(೧೬) ಭಕ್ತನಾದರೆ, ಕಿಂಕರ ಕಿಂಕರನಾಗಿರಬೇಕು. ಮಹೇಶ್ವರನಾದರೆ, ಆದಿ ಅನಾದಿಯನರಿದಿರಬೇಕು. ಪ್ರಸಾದಿಯಾದರೆ, ಒಡಲಗುಣ ವಿರಹಿತನಾಗಿರಬೇಕು. ಪ್ರಾಣಲಿಂಗಿಯಾದರೆ, ಬಾಹ್ಯವಿಚಾರವಿಲ್ಲದಿರಬೇಕು. ಶರಣನಾದರೆ, ನಿಸ್ಸಂಗಿಯಾಗಿರಬೇಕು. ಐಕ್ಯನಾದರೆ, ಬಯಲು ಬಯಲಾಗಿರಬೇಕು. ಇಂತಪ್ಪ ಸ್ಥಲವನರಿದಲ್ಲದೆ ಕೂಡಲ ಚನ್ನಸಂಗಯ್ಯನಲ್ಲಿ ಸುಸಂ[ಗಿ]ಗೆ ಎನಿಸಬಾರದು.

೧೭೭

(೧೭) ಲಾಂಛನದೆಡೆಯಲ್ಲಿ ಹುಸಿಯ ಸಂಪಾದಿಸುವನ್ನಕ್ಕರ ಭಕ್ತನಲ್ಲ; ಪುರುಡುವಿಡಿದಾತ ಮಹೇಶ್ವರನಲ್ಲ; ಪದಾರ್ಥವನರಿದಾತ ಪ್ರಸಾದಿಯಲ್ಲ; ಖ್ಯಾತಿಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ; ಸತಿಯುಳ್ಳನ್ನಕ್ಕರ ಶರಣನಲ್ಲ; ಪತಿಯುಳ್ಳನ್ನಕ್ಕರ ಐಕ್ಯನಲ್ಲ. ಇಂತೀ ಷಟ್‌ಸ್ಥಲದ ಸಕೀಲವನರಿಯಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಸಾಧಕರಿಗಳವಲ್ಲ ಸಹಜದೊಡೆಯರಿಗಲ್ಲದೆ.

(೧೮) ಭಕ್ತಸ್ಥಲ ಗುರುರೂಪು, ಮಹೇಶ್ವರಸ್ಥಲ ಲಿಂಗರೂಪು, ಪ್ರಸಾದಿಸ್ಥಲ ಜಂಗಮರೂಪು, ಪ್ರಾಣಲಿಂಗಿಸ್ಥಲ ಆತ್ಮರೂಪು, ಶರಣಸ್ಥಲ ಅರಿವು, ಐಕ್ಯಸ್ಥಲ

೧–೧ ಗತಿ (ಮೂ)

ಶಬ್ದಮುಗ್ಧ ನಿರ್ಣಾಮಭಾವ. ಇಂತೀ ಷಟ್‌ಸ್ಥಲಭಕ್ತಿಯ ನೆಮ್ಮಿ ವಿಶ್ವಾಸವ ಕಂಡು, ಸತ್ಯದಲ್ಲಿ ನಿಂದು, ಬುದ್ಧಿ ವಿದ್ಯೆ, ಕೇವಲವಿದ್ಯೆ ಇಂತೀ ತ್ರಿವಿಧದಲ್ಲಿ ಸಂಚಿತ, ಪ್ರಾರಬ್ಧ, ಆಗಾಮಿಗಳ ಸ್ವೀಕರಿಸಿ, ಸುಚಿತ್ತದಲ್ಲಿ ದಿವ್ಯತೇಜಪ್ರಕಾಶ, ಕೇವಲವಪ್ಪ ಪರಂಜ್ಯೋತಿಯಲ್ಲಿ ವಿಶ್ವಾಸದಿಂದ ಪರವಶನಾಗಬೇಕು. ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವ ಕೂಡಬೇಕು.

೧೭೮

(೧೯) ಭಕ್ತ ಬ್ರಹ್ಮತತ್ವ, ಮಹೇಶ್ವರ ವಿಷ್ಣುತತ್ವ, ಪ್ರಸಾದಿ ರುದ್ರತತ್ವ, ಪ್ರಾಣಲಿಂಗಿ ಈಶ್ವರತತ್ವ, ಶರಣ ಸದಾಶಿವತತ್ವ, ಐಕ್ಯ ಮಹಾ[ದೇವ]ತತ್ವ ಇಂತೀ ಷಡ್ಭಾವದಾದಿ ಅಂತ್ಯದಿಂದ ಭೇದವ ಹಂಚಿಹಾಕಿ, ನೀನು ಅಸಾಧ್ಯನಾದೆಯಲ್ಲ ಚನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ.

೧೭೯

(೨೦) ಭಕ್ತನ ಅಂಗವಾವುದು, ಮಹೇಶ್ವರನ ಅಂಗವಾವುದು, ಪ್ರಸಾದಿಯ ಅಂಗವಾವುದು, ಪ್ರಾಣಲಿಂಗಿಯ ಅಂಗವಾವುದು, ಶರಣನ ಅಂಗವಾವುದು, ಐಕ್ಯನ ಅಂಗವಾವುದು, ಎಂದರೆ, ಹೇಳಿಹೆನಯ್ಯ. ಭಕ್ತಂಗೆ ಪೃಥ್ವಿಯೇ ಅಂಗ, ಮಹೇಶ್ವರಂಗೆ ಅಪ್ಪುವೇ ಅಂಗ, ಪ್ರಸಾದಿಗೆ ಅಗ್ನಿಯೇ ಅಂಗ, ಪ್ರಾಣಲಿಂಗಿಗೆ ವಾಯುವೇ ಅಂಗ, ಶರಣಂಗೆ ಆಕಾಶವೇ ಅಂಗ, ಐಕ್ಯಂಗೆ ಆತ್ಮನೇ ಅಂಗ. ಇಂತೀ ಅಂಗಸ್ಥಲಂಗಳ ಭೇದವ ತಿಳಿವುದಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೧೮೦

(೨೧) ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ ಮೊದಲಾದ ಷಟ್‌ಸ್ಥಲಂ ಗಳ ವಿವರವೆಂತೆಂದೊಡೆ: ಪೃಥ್ವಿ ಭಕ್ತ ಅಪ್ಪು ಮಹೇಶ, ಅಗ್ನಿ ಪ್ರಸಾದಿ, ವಾಯು ಪ್ರಾಣಲಿಂಗಿ, ಆಕಾಶ ಶರಣ, ಆತ್ಮ ಐಕ್ಯ, ಇದಕ್ಕೆ ಶ್ರುತಿ : ''ಸದ್ಯೋಜಾತ ಯಥಾ ಭಕ್ತವಾಮದೇವ ಮಹೇಶ್ವರಃ। ಅಘೋರಂ ಚ ಪ್ರಸಾದೀನಾಂ ತತ್ಪುರುಷಂ ಪ್ರಾಣಲಿಂಗೀ। ಈಶಾನಂ ಶರಣಂ ದೃಷ್ಟ್ವಾ ॥ ಐಕ್ಯನಾಮಾತ್ಮ ಮಯಂ ಯಥಾ'' ಇಂತೆಂದುದಾಗಿ ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯಾ.

೧೮೧

೨೨) ಘ್ರಾಣಕ್ಕೂ ೨[ಗುದ]ಕ್ಕೂ೨ ಪೃಥ್ವಿಯೆಂಬ ಮಹಾಭೂತ. ಅಲ್ಲಿ ನಿವೃತ್ತಿ ಎಂಬ ಕಲೆ ಇಹುದು. ಆ ಕಲೆಯಲ್ಲಿ ಕ್ರಿಯಾಶಕ್ತಿಯುಕ್ತವಾದ ಆಚಾರಲಿಂಗವ ಧರಿಸಿದಾತ ಭಕ್ತನು. ಜಿಹ್ವೆಗೂ ಗುಹ್ಯಕ್ಕೂ ಅಪ್ಪುವೆಂಬ ಮಹಾಭೂತ. ಅಲ್ಲಿ ಪ್ರತಿಷ್ಠೆ ಎಂಬ ಕಲೆ ಇಹುದು. ಆ ಕಲೆಯಲ್ಲಿ ಜ್ಞಾನಶಕ್ತಿಯುಕ್ತವಾದ ಗುರುಲಿಂಗವ ಧರಿಸಿದಾತ ಮಹೇಶ್ವರನು. ನೇತ್ರಕ್ಕೂ ಪಾದಕ್ಕೂ ಅಗ್ನಿ ಎಂಬ ಮಹಾಭೂತ. ಅಲ್ಲಿ ವಿದ್ಯೆ ಎಂಬ

೧–೧ ಭೇದ(ಮಾ) ೨–೨ ಗಂಧ(ಮಾ)

ಕಲೆ ಇಹುದು. ಆ ಕಲೆಯಲ್ಲಿ ಇಚ್ಛಾಶಕ್ತಿ ಯುಕ್ತವಾದ ಶಿವಲಿಂಗ[ವ]ಧರಿಸಿಕೊಂಡಾತ ಪ್ರಸಾದಿ. ತ್ವಕ್ಕಿಗೂ ಪಾಣಿಗೂ ವಾಯುವೆಂಬ ಮಹಾಭೂತ. ಅಲ್ಲಿ ಶಾಂತಿ ಎಂಬ ಕಲೆ ಇಹುದು. ಆ ಕಲೆಯಲ್ಲಿ ಆದಿಶಕ್ತಿಯುಕ್ತವಾದ ಜಂಗಮಲಿಂಗವ ಧರಿಸಿಕೊಂಡಾತ ಪ್ರಾಣಲಿಂಗಿ. ಶ್ರೋತ್ರಕ್ಕೂ ವಾಕ್ಕಿಗೂ ಆಕಾಶವೆಂಬ ಮಹಾಭೂತ. ಅಲ್ಲಿ ಶಾಂತ್ಯಾತೀತ ಎಂಬ ಕಲೆ ಇಹುದು. ಆ ಕಲೆಯಲ್ಲಿ ಪರಾಶಕ್ತಿಯುಕ್ತವಾದ ಪ್ರಸಾದಲಿಂಗವ ಧರಿಸಿಕೊಂಡಾತ ಶರಣನು. ೧[ಹೃದಯಕ್ಕೂ ಜೀವಕ್ಕೂ ಆತ್ಮನೆಂಬ]೧ ಮಹಾಭೂತ. ಅಲ್ಲಿ ಶಾಂತ್ಯಾತೀತೋತ್ತರ ಎಂಬ ಕಲೆ ಇಹುದು. ಆ ಕಲೆಯಲ್ಲಿ ಚಿಚ್ಛಕ್ತಿಯುಕ್ತವಾದ ಮಹಾಲಿಂಗವ ಧರಿಸಿಕೊಂಡಾತ ಐಕ್ಯನು. ಇಂತೀ ಷಟ್‌ಸ್ಥಲಭಕ್ತರು ಷಡ್ವಿಧಲಿಂಗವ ಧರಿಸಿ ನಿರಾಳಲಿಂಗಾರ್ಚನೆಯ ಮಾಡುತ್ತಿಹರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣರು.

೧೮೨

(೨೩) ಕೂಟದ ಲಕ್ಷಣವುಳ್ಳನ್ನಕ್ಕ ಐಕ್ಯಸ್ಥಲ. ಭಾವದ ಕಲ್ಪಿತವುಳ್ಳನ್ನಕ್ಕ ಶರಣಸ್ಥಲ. ಕೊಂಡಿಹೆ ಕೊಟ್ಟಿಹೆನೆಂಬನ್ನಕ್ಕ ಪ್ರಾಣಲಿಂಗಿಯ ಸ್ಥಲ. ಊಡಿಹೆನುಟ್ಟಿಹೆನೆಂಬನ್ನಕ್ಕ ಪ್ರಸಾದಿಸ್ಥಲ. ಅರಿದಿಹೆನರಿದೆನೆಂಬನ್ನಕ್ಕ ಮಹೇಶ್ವರಸ್ಥಲ. ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವ ಕೊಟ್ಟೆನೆಂಬನ್ನಕ್ಕ ಭಕ್ತಸ್ಥಲ. ಇಂತು ಸ್ಥಲದಿಂದ ಸ್ಥಲ ಲೇಪವಾದ ಮತ್ತೆ ಮೀರಿದ ತೆರನ ನೀವೇ ಬಲ್ಲಿರಿ ನಿಃಕಳಂಕ ಮಲ್ಲಿಕಾರ್ಜುನಾ.

೧೮೩

(೨೪) ಸಮದೃಷ್ಟಿಯಾಗದವನ ಭಕ್ತನೆಂತೆಂಬೆ? ವಿಷಯಂಗಳಳಿಯದವನ ಮಹೇಶನೆಂತೆಂಬೆ ? ಶಿವಕರುಣ ಹಡೆಯದನ್ನಕ್ಕ ಪ್ರಸಾದಿ ಎಂತೆಂಬೆ ? ಅಂಗೇಂದ್ರಿಯಂಗಳಳಿಯದವನ ಪ್ರಾಣಲಿಂಗಿ ಎಂತೆಂಬೆ ? ಸಂಕಲ್ಪ ಹರಿಯದನ್ನಕ್ಕ ಶರಣನೆಂತೆಂಬೆ ? ನಮ್ಮ ಕಪಿಲಸಿದ್ಧಮಲ್ಲೇಶನ ಕೂಟವನರಿಯದವನ ಐಕ್ಯನೆಂತೆಂಬೆ ?

೧೮೪

(೨೫) ಭಕ್ತನಾದ ಬಳಿಕ ಜಂಗಮದ ಗುಣವನರಸಲದೇಕೋ? ಮಹೇಶನಾದ ಬಳಿಕ ವಿಷಯಕ್ಕೆ ಎಳಿಸುವದೇತಕೋ ? ಪ್ರಸಾದಿಯಾದ ಬಳಿಕ ಕಂಡುದಕ್ಕೆ ಕೈ ದುಡುಕಲದೇಕೋ ? ಪ್ರಾಣಲಿಂಗಿಯಾದ ಬಳಿಕ ಪ್ರಪಂಚದ ಹಂಗೇಕೋ ? ಶರಣನಾದ ಬಳಿಕ ಮೋಕ್ಷದ ಹಂಗೇಕೋ ? ಐಕ್ಯನಾದ ಬಳಿಕ ನಮ್ಮ ಕಪಿಲಸಿದ್ಧ ಮಲ್ಲಯ್ಯನ ನಾಮಸ್ಮರಣೆ[ಯ]ದೇತಕೋ ?

೧೮೫

(೨೬) ಭಕ್ತಂಗೆ ಭಕ್ತಿಯೇ ಲಿಂಗಾರ್ಚನೆ. ಮಹೇಶಂಗೆ ಜ್ಞಾನ ವೈರಾಗ್ಯವೇ

೧–೧ ಆತ್ಮಾಂಗಕ್ಕೆ ಮನವೆಂಬ (ಮೂ)

ಲಿಂಗಾರ್ಚನೆ. ಪ್ರಸಾದಿಗೆ ಸಮದೃಷ್ಟಿಯೇ ಲಿಂಗಾರ್ಚನೆ. ಪ್ರಾಣಲಿಂಗಿಗೆ 'ಪಂಚ ಪ್ರಾಣಾಃ ಪರಶಿವ' ಎಂಬುದೇ ಲಿಂಗಾರ್ಚನೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಆರು ಅಂಗ ಲಿಂಗಸ್ಥಲಗಳ ಸಾಮಾನ್ಯ ವಿವೇಚನೆ

೧೮೬

(೧) ಪರಬ್ರಹ್ಮ ಅನಾದಿ ವಸ್ತುವೇ ಅನಿರ್ವಾಚ್ಯವಪ್ಪ ಮಹಾಶೂನ್ಯವನೈದಿ, ಆನಂದದಿಂ ಸಹಜ ವಸ್ತುವಾಗಿರ್ದ ನಿಮ್ಮ ಮಹಾತ್ಮೆಯು ಅನಿರ್ವಾಚ್ಯದಿಂ ಸ್ವಯಂಭುಮೂರ್ತಿಯಾಗಿ ನಿಂದಿರಿ. ಇಂತೀ ಸ್ವಯಂಭೂಮೂರ್ತಿಯ ಪಂಚ ಮುಖಂಗಳಿಂ ಪಂಚಭೂತಂಗಳಾಗಿರ್ದುದು. ಆ ಪಂಚಭೂತಂಗಳಿಂದವೇ ಪಂಚ ಭೌತಿಕತತ್ವವಾಗಿ ಮಾಯಾಂಶ ಲೀಲಾವಿಲಾಸ ಶರೀರವಾಗಲು, ಈ ಲೀಲಾವತಾರ ವೆಂತಾಯಿತ್ತೆಂದಡೆ,

ಆ ಲೀಲಾವಿಲಾಸದ ನಾದಶಕ್ತಿಯೇ ಅಂಗವಾಗಿ, ಆ ಅಂಗದಲ್ಲಿ ಮೋಹನ ವಿಲಾಸ ಬಿಂದುವೇ ಜೀವಮಾಗಿ, ಆನಂದಕಳಾ ಪ್ರಕಾಶ ಮರವೆಯೇ ಆತ್ಮಹೇತು ವಾಗಿ, ನಿಂದ ಮಾಯೆ, ಚಿತ್‌ಶಕ್ತಿ ಕೂಡಿದಲ್ಲಿ ಆತ್ಮನಾಗಿ, ಭೌತಿಕತತ್ವದಲ್ಲಿ ಬೆರೆದು, ಮರಹು ತಲೆದೋರಿ ಪಾಶಬಂಧತ್ವದಿಂ ಜೀವನೆನಿಸಿ, ಅಜ್ಞಾನಸಂಬಂಧಮಾಗಿ ಮಾಯಾಶರೀರವಾದಲ್ಲಿ; ಉತ್ಪತ್ತಿ ಸ್ಥಿತಿ, ಲಯ, ವ್ಯಾಪ್ತ ಉಂಟಾದ ಆತ್ಮಂಗೆ ಆ ಪರಬ್ರಹ್ಮವು ತಾನೇ ಶ್ರೀಗುರುವಾಗಿ ಬಂದು ತನ್ನಂಶವಾದಾತ್ಮರಿಗೆ ನಿಜಾವಯವ ಸೃಜಿಸಲಾಗಿ, ಆತ್ಮನು ತನ್ನ ಮರೆದು ನಿಜಾವಯವ ಸೃಜಿಸಲಾಗಿ, ಆತ್ಮನು ತನ್ನ ಮರೆದು ನಿಜಾನಂದ ಸುಖದಲ್ಲಿ ತನ್ನ ಸಂಬಂಧವಪ್ಪ ಕಾಯ ಜೀವ ಆತ್ಮ ಪ್ರಾಣ ಮನಂಗಳಿಗೆ ಆಶ್ರಯವಾದ ಪಂಚತತ್ವಾಂಗಮಂ ಸಹಜದಲ್ಲಿ ಸಂಬಂಧವ ಮಾಡಿದ ಪರಿ ಎಂತೆಂದೊಡೆ,

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ ಎಂಬಿ ಷಡ್ಭೂತಂಗಳ ಗುಣ ಧರ್ಮಕರ್ಮಂಗಳು ತನ್ನ ಕಾಯ ಜೀವ ಆತ್ಮ ಪ್ರಾಣ ಮನ ಜ್ಞಾನೇಂದ್ರಿಯ, ವಿಷಯೇಂದ್ರಿಯ, ಪವನೇಂದ್ರಿಯ, ಕರಣೇಂದ್ರಿಯಂಗಳೇ ಸ್ಥಳಕುಳಂಗಳಾಗಿ, ಸ್ಥಳವಾರು, ಅಂಗವಾರು, ಲಿಂಗವಾರು, ಅಂಗಲಿಂಗದ್ವಯೋರ್ಕ್ಯತ್ವದಿಂ ಮಂತ್ರವಾಗಿ ಆ ಮಂತ್ರವೆ ಷಟ್‌ಸ್ಥಲಬ್ರಹ್ಮಮೂರ್ತಿಯ ಸಹಜಾನಂದ ವಸ್ತುವೇ ತಾನಾದ ಲೀಲೆ ಎಂತೆಂದೊಡೆ,

ಪೃಥ್ವಿಯಲ್ಲಿ ಕಠಿಣ ಗುಣ, ಅಪ್ಪುವಿನಲ್ಲಿ ಮೃದುಗುಣ, ಅಗ್ನಿಯಲ್ಲಿ ಉಷ್ಣಗುಣ, ವಾಯುವಿನಲ್ಲಿ ಸ್ಪರ್ಶನಗುಣ, ಆಕಾಶದಲ್ಲಿ ೧[ವ್ಯಾಪ್ತ]೧ ಗುಣ ಆತ್ಮನಲ್ಲಿ ಮರಹುಗುಣ, ಇಂತೀ ಷಡ್ಭೂತಂಗಳು ಅಂಗದಲ್ಲಿ ಸಂಬಂಧವೆಂತೆಂದೊಡೆ : ಪೃಥ್ವಿಯಲ್ಲಿ ಕಠಿಣ ಗುಣ, ಸ್ಥೂಲಕಾಯದ ಕರ್ಮೇಂದ್ರಿಯಂಗಳಲ್ಲಿ ತಿಳಿದು, ಅಪ್ಪುವಿನಲ್ಲಿ ಮೃದುಗುಣ,

೧–೧ ಸಂಚಲ (ಮೂ)

ಸೂಕ್ಷ್ಮ ಜೀವದ ಜ್ಞಾನೇಂದ್ರಿಯಂಗಳಲ್ಲಿ ತಿಳಿದು, ಅಗ್ನಿಯಲ್ಲಿ ಉಷ್ಣಗುಣ, ಕಾರಣಾತ್ಮದ ವಿಷಯೇಂದ್ರಿಯಂಗಳಲ್ಲಿ ತಿಳಿದು, ವಾಯುವಿನಲ್ಲಿ ಸ್ಪರ್ಶನ ಗುಣ, ಜಾಗ್ರದ ಪ್ರಾಣ ಪವನೇಂದ್ರಿಯಂಗಳಲ್ಲಿ ತಿಳಿದು, ಆಕಾಶದಲ್ಲಿ ಈ ೧[ವ್ಯಾಪ್ತ]೧ಗುಣ, ಸ್ವಪ್ನದ ಮನ ಕರಣೇಂದ್ರಿಯಂಗಳಲ್ಲಿ ತಿಳಿದು, ಆತ್ಮನಲ್ಲಿ ಮರಹುಗುಣ, ಸುಷುಪ್ತಿಯ ಜ್ಞಾನದ ವಿವೇಕದಲ್ಲಿ ತಿಳಿದು, ವಾಕ್ಕು, ಪಾಣಿ, ಪಾದ, ಗುಹ್ಯ, ಪಾಯುವೆಂದು ಸ್ಥೂಲ ಕಾಯಾವಸ್ಥೆಯ ಕರ್ಮೇಂದ್ರಿಯಂಗಳ ಕಠಿಣ ಗುಣವ ತಿಳಿದು, ಕಾಮ ಕರ್ಮ ನಾಸ್ತಿಯಾಗಿ, ಭೃತ್ಯಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಭಕ್ತಸ್ಥಲ. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ ಘ್ರಾಣವೆಂಬ ಸೂಕ್ಷ್ಮ ಜೀವನಾವಸ್ಥೆಯ ಜ್ಞಾನೇಂದ್ರಿಯಂಗಳ ಮೃದುಗುಣವಳಿದು ಕ್ರೋಧ ಕರ್ಮನಾಸ್ತಿಯಾಗಿ, ನಿಷ್ಠಾಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಮಾಹೇಶ್ವರಸ್ಥಲ. ಶಬ್ದ, ಸ್ಪರ್ಶ, ರೂಪ, ರುಚಿ, ಗಂಧವೆಂಬ ಕಾರಣಾವಸ್ಥೆಯ ವಿಷಯೇಂದ್ರಿಯಂಗಳ ದಹನಗುಣವಳಿದು, ಲೋಭ ಕರ್ಮನಾಸ್ತಿಯಾಗಿ, ವಿಶ್ವಾಸ ಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಪ್ರಸಾದಿಸ್ಥಲ. ಪ್ರಾಣಾಪಾನ, ವ್ಯಾನ, ಉದಾನ, [ಸಮಾನ]ವಾಯುವೆಂಬ ಜಾಗ್ರಾವಸ್ಥೆಯಂ ಪ್ರಾಣಾವಸ್ಥೆಯ ಪವನೇಂದ್ರಿಯಂಗಳ ಸ್ಪರ್ಶನಗುಣವಳಿದು, ಮೋಹಕರ್ಮ ನಾಸ್ತಿಯಾಗಿ, ನಿರ್ಮಲಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಪ್ರಾಣಲಿಂಗಿಸ್ಥಲ. ಜ್ಞಾನ, ಮನ, [ಅಹಂಕಾರ] ಬುದ್ಧಿ [ಚಿತ್ತ]ವೆಂಬ ಮನಾವಸ್ಥೆಯ ಕರಣೇಂದ್ರಿಯಂಗಳ ೧[ವ್ಯಾಪ್ತ]೧ಗುಣವಳಿದು; ಮದಕರ್ಮನಾಸ್ತಿಯಾಗಿ, ಆನಂದ ಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಶರಣಸ್ಥಲ. ಅಷ್ಟಾತ್ಮಂಗಳ ಮರಹುಗುಣವೆಂಬ ಸುಷುಪ್ತಾವಸ್ಥೆಯ ಅಜ್ಞಾನದ ಅಂಧಕಾರದ ಪ್ರಪಂಚುಗುಣವಳಿದು, ಮತ್ಸರಕರ್ಮನಾಸ್ತಿಯಾಗಿ, ಸಮರಸಭಕ್ತಿ ಎಂಬ ಧರ್ಮವ ನೆಲೆಗೊಳಿಸಿದಲ್ಲಿ ಐಕ್ಯಸ್ಥಲ. ಇಂತೀ ಷಡ್ಭೂತಂಗಳ ಗುಣ, ಕರ್ಮ, ಧರ್ಮಂಗಳ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ವಿಷಯೇಂದ್ರಿಯ, ಪವನೇಂದ್ರಿಯ, ಕರಣೇಂದ್ರಿಯಂಗಳಲ್ಲಿ ತಿಳಿದು ಅರುಹು ತಲೆದೋರಿ ಆರು ಸ್ಥಲವೇ ಅಂಗವಾಗಿ, ಮತ್ತಂ, ಅಮಂಗಲ, ಪರದಾರ, ದುರ್ಮಾರ್ಗ, ಸ್ತ್ರೀಯಾಲಿಂಗನ, ನಿಂದೆ, ಇಂತೀ ದುಃಕ್ರಿಯೆಯ ಕುಚಿತ್ತವಳಿದು ಶೌಚಶುದ್ಧಿ, ಸ್ವಸ್ತ್ರೀಗಮನ, ಗುರುಮಾರ್ಗ, ಲಿಂಗಧಾರಣ, ಪಂಚಾಕ್ಷರಪಠಣ, ಇಂತೀ ಸತ್ಕ್ರಿಯೆಯಲ್ಲಿ ಚಿತ್ತವ ನೆಲೆಗೊಳಿಸಿ ನಿಂದುದೇ ಆಚಾರಲಿಂಗ. ದುರ್ವಾಸನಾಪೇಕ್ಷೆ, ಪರಪಾಕಭಕ್ಷ, ಭವಿನಿರೀಕ್ಷಣ, ಸ್ಥಾವರಮೂರ್ತಿ ಪೂಜಾಸ್ಪರ್ಶನ, ಅನ್ಯದೈವಮತ ಪುರಾಣಶ್ರವಣ, ಇಂತೀ ಅಜ್ಞಾನದ ಕುಬುದ್ಧಿಯಳಿದು, ಇಷ್ಟಲಿಂಗ ನಿರ್ಮಾಲ್ಯಗಂಧ ಸುವಾಸನೆ, ಚರಪ್ರಸಾದಭಕ್ಷಣ, ಸಜ್ಜನಭಕ್ತಿ ನಿರೀಕ್ಷಣ, ಗುರುಪಾದಪೂಜಾಸ್ಪರ್ಶನ, ಶಿವಾಗಮಶ್ರವಣ, ಇಂತೀ ಸುಜ್ಞಾನದಲ್ಲಿ ಸುಬುದ್ಧಿಯ ನೆಲೆಗೊಳಿಸಿ ನಿಂದುದೇ ಗುರುಲಿಂಗ. ಚಂದ್ರನಾಗರ ಕರ್ಪೂರ ಮೃಗನಾಭಿ ಪತ್ರಪುಷ್ಪಾದಿ ಫಲಂಗಳ ನಾನಾ

೧–೧ ಸಂಚಲ (ಮೂ)

ದಿವ್ಯಗಂಧಪರಿಮಳ ನಾಸಿಕ ಲಂಪಟ, ಭಕ್ಷ ಭಕ್ಷ್ಯಾದಿ ಷಡ್ರುಚಿಗಳು, ಅಧರ ಪಾನಾದಿ ರುಚಿಗಳ ಜಿಹ್ವಾಲಂಪಟ, ನಾಟ್ಯ ಚಿತ್ರಾಭರಣ ವರ್ಣಾದಿರೂಪು, ನೇತ್ರಲಂಪಟ, ವೀಣಾಮೃದಂಗ ದೇಹ ಸ್ಪರ್ಶನಾದಿ ಸ್ಪರ್ಶನತ್ವ, ಗೀತ ಹಾಸ್ಯರಸಪ್ರಸಂಗ, ರಾಗಾದಿ ವಚನ ಶ್ರೋತ್ರ ಲಂಪಟ, ಇಂತೀ ಅಹಂಕಾರದಿಚ್ಛೆಯಂ ಬಿಟ್ಟು, ಗುರು ನಿರ್ಮಾಲ್ಯ ಗಂಧ ಸುವಾಸನಾ ವಿಷಯ, ತೀರ್ಥ ಪ್ರಸಾದವೇ ರುಚಿವಿಷಯ, ಪಂಚ ಪ್ರಣವ ಪಂಚ ಬೀಜ ರೂಪು ವಿಷಯ, ತ್ರಿವಿಧ ಪ್ರಸಾದವೇ ಸ್ಪರ್ಶನವಿಷಯ, ಪ್ರಣವ ನಾದವೇ ಶಬ್ದವಿಷಯ, ಇಂತೀ ನಿರಹಂಕಾರವ ಶಿವ ಇಚ್ಛೆಯಿಂ ನೆಲೆಗೊಳಿಸಿ ನಿಂದುದೇ ಶಿವಲಿಂಗ. ಸ್ವಗೃಹ, ಸ್ವದೇಶ, ಸ್ವಕ್ಷೇತ್ರಂಗಳಿಂದವೇ ಪ್ರಾಣವಾಯು ವಾಗಿ, ಸಂಚಿತವ ಮಾಳ್ಪ ಸಾಧನಾಭಿ ಮಾನಮಂ ದಾರೇಷಣ, ಪುತ್ರೇಷಣ, ಮಿತ್ರೇಷಣತ್ರಯಂಗಳನೆ ಅಪಾನವಾಯುವಾಗಿ, ಸಂಚಿತವ ಮಾಳ್ಪ ಸಾಧನಾಭಿ ಮಾನವಂ ಧನ ಕನಕ ವಸ್ತ್ರಾಭರಣಂಗಳ ವ್ಯಾನವಾಯುವಾಗಿ, ಸಂಚಿತವ ಮಾಳ್ಪ ಸಾಧನಾಭಿಮಾನವಂ ಆಹಾರ, ನಿದ್ರೆ, ಭಯ, ಮೈಥುನಂಗಳ ಉದಾನ ವಾಯುವಾಗಿ, ಸಂಚಿತವ ಮಾಳ್ಪ ಸಾಧನಾಭಿ ಮಾನವಂ ಜಾಗ್ರತ್, ಸ್ವಪ್ನ, ಸುಷುಪ್ತಿ ತುರೀಯಂಗಳ ಸಮಾನವಾಯುವಾಗಿ, ಸಂಚಿತವ ಮಾಳ್ಪ ಸಾಧನಾಭಿಮಾನವಂ ಇಂತೀ ವಾಯು ವ್ಯಾಕುಲ ಮನವ್ಯಾಧಿಗಳ ಬಿಟ್ಟು ಶ್ರೀಗುರುವಿನಲ್ಲಿ ಪ್ರಾಣಾಭಿ ಮಾನವಂ ನಿಲ್ಲಿಸಿ, ಷಡುಲಿಂಗಗಳಲ್ಲಿ ಅಪಾನ ವಾಯುವಭಿಮಾನವಂ ನಿಲ್ಲಿಸಿ, ಭಕ್ತ ಜಂಗಮದಲ್ಲಿ ವ್ಯಾನವಾಯುವಭಿಮಾನವಂ ನಿಲ್ಲಿಸಿ, ಇಷ್ಟ ಪ್ರಾಣ ಭಾವಂಗಳಲ್ಲಿ ಉದಾನ ವಾಯುವಭಿಮಾನವಂ ನಿಲ್ಲಿಸಿ, ಮಂತ್ರ, ಧ್ಯಾನ, ತೂರ್ಯಂಗಳಲ್ಲಿ ಸಮಾನವಾಯುವಭಿಮಾನವಂ ನಿಲ್ಲಿಸಿ, ಇಂತೀ ಆದಿ ಮೂಲಸ್ಥಾನದಿಂ ಸುಮನವ ನೆಲೆಗೊಳಿಸಿ ನಿಂದುದೇ ಜಂಗಮಲಿಂಗ. ಯಮ ನಿಯಮಾದಿ ಅಷ್ಟಾಂಗಯೋಗಂ ಗಳ ಅಂಗಸಾಧನ, ತನು ಸಂಚಲವಹ ಹಮ್ಮಿನ ಮತ್ತತ್ವವಂ ಬಿಟ್ಟು ಚತುರ್ಮು ದ್ರಾಂಗ ಲಕ್ಷಣ, ಜೀವ, ಮನ, ಸಂಚಲ ಹಮ್ಮಿನ ಮತ್ತತ್ವವಂ ಬಿಟ್ಟು ಅಣಿಮಾ ದ್ಯಷ್ಟಸಿದ್ಧಿಗಳಿಂದಾತ್ಮ ಬುದ್ಧಿಹೀನತ್ವದ ಸಂಚಲದ ಹಮ್ಮಿನ ಮತ್ತತ್ವವಂ ಬಿಟ್ಟು ವಾಯುಯೋಗ, ಮನಯೋಗ, ಲಯಯೋಗಂಗಳ ತಸ್ಕರಭ್ರಾಂತಿ ಸಂಚಲ ಹಮ್ಮಿನ ಮತ್ತತ್ವವಂ ಬಿಟ್ಟು; 'ಪಿಂಡಬ್ರಹ್ಮಾಂಡಯೋರ್ಯೈಕ್ಯಂ' ಎಂಬ ಬ್ರಹ್ಮೋಹಂವೆಂಬ ಅವಧೂತ ಸಂಚಲ ಹಮ್ಮಿನ ಮತ್ತತ್ವವಂ ಬಿಟ್ಟು; ಯತಿಯೋಗ ಸಿದ್ಧತ್ವ, ಮುದ್ರಾಲಕ್ಷಣ, ಭ್ರಾಂತ ವೇದಾಂತವೆಂಬ ಅಂಗಯೋಗ ಮಾರ್ಗಂಗಳ ಹಮ್ಮಿನ ಮತ್ತತ್ವವಂ ಬಿಟ್ಟು; ಭೃತ್ಯಾಚಾರ, ಲಿಂಗಾಚಾರ, ಶಿವಾಚಾರ, ಗಣಾಚಾರ, ಸದಾಚಾರಂಗಳೆಂಬ ಪಂಚ ಆಚಾರಂಗಳ ಪರಾಶಕ್ತಿತಂತ್ರದ ಸುಜ್ಞಾನವ ನೆಲೆಗೊಳಿಸಿ ನಿಂದುದು ಪ್ರಸಾದಲಿಂಗ. ಪ್ರಪಂಚ, ಸಂಕಲ್ಪ ಆಶೆ, ಅಜ್ಞಾನ, ಮರಹು ಇಂತಿವು ಮಾಯಾ ಮಿಥ್ಯವಂ ಬಿಟ್ಟು; ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಇಂತಿವರಲ್ಲಿ ಅರುಹು ಎಂಬ ಪರಂಜ್ಯೋತಿ ಚಿತ್‌ಶಕ್ತಿ ಸಾವಧಾನವ ನೆಲೆಗೊಳಿಸಿ ನಿಂದುದೇ ಮಹಾಲಿಂಗ. ಇಂತೀ ಭಾವ, ಜ್ಞಾನ, ಮನ, [ಅಹಂಕಾರ], ಬುದ್ಧಿ, ಚಿತ್ತಗಳಡಗಿ

ಅರುಹು ತಲೆದೋರಿದ ಕುಳಂಗಳೇ ಲಿಂಗವಾಗಿ, ಇಂತೀ ಸ್ಥಳ ಕುಳಂಗಳೇ ಅಂಗ ಲಿಂಗವಾಗಿ, ಆ ಅಂಗದಲ್ಲಿ ಆರು ಸ್ಥಳ ಸಂಬಂಧವಾದ ಪರಿ ಎಂತೆಂದೊಡೆ,

ಪಾದಾದಿ ಗುದಪರಿಯಂತರ ಪೃಥ್ವಿತತ್ವ, ಆ ತತ್ವದ ಕಠಿಣಗುಣವಳಿದು ಕರ್ಮಸಾದಾಖ್ಯದಿಂ ಭೃತ್ಯತ್ವವೇ ಭಕ್ತಸ್ಥಲ. ಗುದಾದಿ ಗುಹ್ಯ ಪರ್ಯಂತರ ಅಪ್ಪು ತತ್ವ, ಆ ತತ್ವದ ಮೃದುಗುಣವಳಿದು, ಕರ್ತೃಸಾದಾಖ್ಯದಿಂ ನಿಷ್ಠತ್ವವೇ ಮಹೇಶ್ವರ ಸ್ಥಲ. ಗುಹ್ಯಾದಿ ನಾಭಿ ಪರ್ಯಂತರ ಅಗ್ನಿತತ್ವ, ಆ ತತ್ವದ ದಹನಗುಣವಳಿದು ಮೂರ್ತಿ ಸಾದಾಖ್ಯದಿಂ ವಿಶ್ವಾಸವೇ ಪ್ರಸಾದಿಸ್ಥಲ. ನಾಭ್ಯಾದಿ ಹೃದಯ ಪರಿಯಂತರ ವಾಯುತತ್ವ, ಆ ತತ್ವಸ್ಪರ್ಶನ ಗುಣವಳಿದು, [೧][ಅ][೧] ಮೂರ್ತಿಸಾದಾಖ್ಯದಿಂ ನಿರ್ಮಲವೇ ಪ್ರಾಣಲಿಂಗಿಸ್ಥಲ. ಹೃದಯಾದಿ ಕಂಠ ಪರಿಯಂತರ ಆಕಾಶತತ್ವ, ಆ ತತ್ವದ ಸಂಚಲಗುಣವಳಿದು, ಶಿವಸಾದಾಖ್ಯದಿಂ ಆನಂದವೇ ಶರಣಸ್ಥಲ. ಕಂಠಾದಿ ಭ್ರೂಮಧ್ಯ ಪರ್ಯಂತರ ಆತ್ಮತತ್ವ, ಆ ತತ್ವದ ಮರಹುಗುಣವಳಿದು ಮಹಾ ಸಾದಾಖ್ಯದಿಂ ಸಮರಸತ್ವವೇ ಐಕ್ಯಸ್ಥಲ.

ಇಂತೀ ಪಾದಾದಿ ನಾಲ್ವತ್ತೆಂಟು ಅಂಗುಲ ಪ್ರಮಾಣದಿಂದೂರ್ಧ್ವ ಭಕ್ತಸ್ಥಲ. ಆ ಭಕ್ತಸ್ಥಲದಿಂದ ನಾಲ್ಕಂಗುಲ ಊರ್ಧ್ವ ಮಹೇಶ್ವರಸ್ಥಲ. ಆ ಮಹೇಶ್ವರ ಸ್ಥಲದಿಂದ ಆರಂಗುಲ ಊರ್ಧ್ವ ಪ್ರಸಾದಿಸ್ಥಲ. ಆ ಪ್ರಸಾದಿಸ್ಥಲದಿಂದ ಎಂಟಂಗುಲ ಊರ್ಧ್ವ ಶರಣಸ್ಥಲ. ಆ ಶರಣ ಸ್ಥಲದಿಂದ ಷೋಡಶಾಂಗುಲ ಊರ್ಧ್ವ ಐಕ್ಯಸ್ಥಲ. ಆ ಸ್ಥಲದಲ್ಲಿ ದ್ವಿ ಅಂಗುಲ ಪ್ರಮಾಣದಲ್ಲಿ ಪ್ರಣವ. ಇಂತೀ ತೊಂಬತ್ತಾರು ಅಂಗುಲವೇ ಅಂಗ ವಾಗಿ ಆ ಅಂಗಮುಖದಲ್ಲಿ ಲಿಂಗಕುಳವಾರು ಅಡಗಿದ ಪರಿ ಎಂತೆಂದೊಡೆ.

ಸುಚಿತ್ತದಿಂ ಘ್ರಾಣದಿಂದ ಗಂಧವನಂಗೀಕರಿಸುವದು ಆಚಾರಲಿಂಗ. ಸುಬುದ್ಧಿಯಿಂ ಜಿಹ್ವೆಯಿಂದ ರುಚಿಯನಂಗೀಕರಿಸುವದು ಗುರುಲಿಂಗ. ನಿರಹಂ ಕಾರದಿಂ ನೇತ್ರದಿಂದ ರೂಪನಂಗೀಕರಿಸುವದು ಶಿವಲಿಂಗ. ಸುಮನದಿಂ ಹಸ್ತದಿಂದ ಸ್ಪರ್ಶನ ಅಂಗೀಕರಿಸುವದು ಜಂಗಮಲಿಂಗ. ಸುಜ್ಞಾನದಿಂದ ಶ್ರೋತ್ರದಿಂದ ಶಬ್ದವನಂಗೀ ಕರಿಸುವದು ಪ್ರಸಾದಲಿಂಗ. ಸಾವಧಾನದಿಂ ಹೃದಯದಿಂದ ತೃಪ್ತಿಯನಂಗೀಕರಿಸು ವದು ಮಹಾಲಿಂಗ.

ಇಂತೀ ಹದಿನಾರು ಅಂಗುಲ ಪ್ರಮಾಣದಿಂದ ನಾಸಿಕದಿಂ ಇಷ್ಟಲಿಂಗದ ಪೀಠ ದಲ್ಲಿ ಆಚಾರಲಿಂಗವಡಗಿ, ದ್ವಾದಶಾಂಗುಲ ಪ್ರಮಾಣದಿಂ ಜಿಹ್ವೆಯಿಂದ ಇಷ್ಟ ಲಿಂಗದ ಕಲೆಯಲ್ಲಿ ಗುರುಲಿಂಗವಡಗಿ, ಅಷ್ಟಾಂಗುಲಪ್ರಮಾಣದಿಂ ನೇತ್ರದಿಂದ ಇಷ್ಟಲಿಂಗದ ಉದರದಲ್ಲಿ ಶಿವಲಿಂಗವಡಗಿ, ಷಡಂಗುಲ ಪ್ರಮಾಣದಿಂ ತ್ವಕ್ಕುವಿ ನಿಂದ ಇಷ್ಟಲಿಂಗದ ಗೋಮುಖದಲ್ಲಿ ಜಂಗಮಲಿಂಗವಡಗಿ, ಚತುರಂಗುಲ ಪ್ರಮಾಣದಿಂದ ತ್ವಕ್ಕುವಿನಿಂದ ಇಷ್ಟಲಿಂಗದ ಗೋಮುಖದಲ್ಲಿ ಜಂಗಮಲಿಂಗ ವಡಗಿ, ದ್ವಿಯಂಗುಲಪ್ರಮಾಣದಿಂದ ಇಷ್ಟಲಿಂಗದ ಮಸ್ತಕದಲ್ಲಿ ಮಹಾಲಿಂಗ

೧–೧ ಆ (ಮೂ)

ವಡಗಿ, ಇಂತೀ ನಾಲ್ವತ್ತೆಂಟಂಗುಲ ಪ್ರಮಾಣದಲ್ಲಿ ಆ ಇಷ್ಟಲಿಂಗದಲ್ಲಿ ಆರು ಕುಳವಡಗಿ, ಇಂತೀ ಸ್ಥಲಕುಳಂಗಳ ಗರ್ಭೀಕರಿಸಿಕೊಂಡಿಪ್ಪ ಅಂಗಲಿಂಗವೆರಡು ; ಆ ಅಂಗಲಿಂಗವೆರಡು ಮಂತ್ರವಾದ ಪಸರಿ ಎಂತೆಂದೊಡೆ.

ಇಂತೀ ಅಂಗ ತೊಂಬತ್ತಾರಂಗುಲ ಪ್ರಮಾಣವನಂಗೀಕರಿಸಿಕೊಂಡಿಪ್ಪುದೇ ಓಂಕಾರ ಪ್ರಣವ. ಆ ಪ್ರಣವವೇ ನಾದ, ಆ ನಾದದಲ್ಲಿ ಬಿಂದು ನಿಂದು, ಷಟ್‌ಕೃತಿ ಗಳೇ ಪ್ರಾಣವಾಗಿ ಗರ್ಭೀಕರಿಸಿಕೊಂಡಿಪ್ಪ ಪಂಚಾಕ್ಷರಂಗಳು. ಇಂತೀ ಪಂಚಾಕ್ಷರಂ ಗಳಿಗೆ ಅಂಗವಾಗಿ ಗರ್ಭೀಕರಿಸಿಕೊಂಡಿಪ್ಪ ಷಟ್‌ಕೃತಿಗಳೇ ಷಡುಲಿಂಗವಾಗಿ, ಆ ಷಡುಲಿಂಗಂಗಳಿಗೆ ಷಡಕ್ಷರಂಗಳೇ ಪ್ರಾಣವಾಗಿ, ಓಂಕಾರವೇ ನಾದಮಯಾಂಗ ವಾಗಿ, ಪಂಚಾಕ್ಷರಂಗಳೇ ಪಂಚಾಕೃತಿ ಬಿಂದುಮಯ ಪ್ರಾಣವಾಗಿ, ಮಂತ್ರಾಂಗ ವಾಗಿ ನಾದ ಬಿಂದು ಕಳಾಕ್ಷರದಲ್ಲಿ ಪ್ರಣವಮಂತ್ರವಡಗಲು, ಆ ಕಳೆಯೇ ಬಿಂದು ವಾಗಿ, ಆ ಬಿಂದುವೇ ನಾದವಾಗಿ, ನಾದವೇ ನಿಶ್ಯಬ್ದವಾಗಿ, ನಿಶ್ಯಬ್ದವೇ ಪರಬ್ರಹ್ಮವೇ ನಿಜವಾಗಿ, ಆ ನಿಜವೇ ಸಹಜಾನಂದ ವಸ್ತುವಾದ ಘನವೇದ್ಯ ಶರಣನ ಚರಣಕ್ಕೆ ನಮೋ ನಮೋ ಎಂಬೆ ಕಾಣಾ ಮದ್ದುರು ಬಸವಲಿಂಗಪ್ರಭುವೆ.

ಹದಿನೆಂಟು ಸ್ಥಲಗಳು

ವಿವರಣೆ : ಕಳಗೆ ಕಾಣಿಸಿದ ೧೮ ಸ್ಥಲಗಳು ಸ್ವತಂತ್ರವಾದ ಸ್ಥಲಗಳಲ್ಲ; ಹಿಂದಿನ ಆರು ಸ್ಥಲಗಳ ಆಚರಣೆಗಳನ್ನೇ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಗೆ ಸಂಬಂಧಿಸಿ ಈ ಸ್ಥಲಗಳಲ್ಲಿ ವಚನಕಾರರು ಹೇಳಿರುವರು. ಹೀಗೆ ಈ ೧೮ ಸ್ಥಲಗಳು ಹಿಂದಿನ ಆರು ಸ್ಥಲಗಳಲ್ಲಿಯೇ ಅಡಕವಾಗಿರುತ್ತವೆ. . ಪ್ರತಿಯೊಂದು ಶರೀರವು ಉಳಿದ ಎರಡು ಶರೀರಗಳಿಗೆ ಸಂಬಂಧಪಟ್ಟು ವ್ಯವಹರಿಸುವುದರಿಂದ ಪ್ರತಿಯೊಂದರಲ್ಲಿ ಮೂರು ಮೂರರಂತೆ ಒಟ್ಟು ೧೮ ಸ್ಥಲಗಳು ವಚನಕಾರರಿಂದ ಇದರಲ್ಲಿ ಕಲ್ಪಿಸಲ್ಪಟ್ಟಿರುತ್ತವೆ. ಹೀಗೆ ಅಂಗಸ್ಥಲದಲ್ಲಿ ೧೮, ಲಿಂಗಸ್ಥಲದಲ್ಲಿ ೧೮, ಹೀಗೆ ೩೬ ಸ್ಥಲಗಳು ಉಂಟಾಗಿರುತ್ತವೆ. ಮೊದಲಿನ ಮೂರು ಸ್ಥಲಗಳು ಸಾಕಾರವಾಗಿದ್ದು ಅವುಗಳನ್ನು ಅಂಗದಲ್ಲಿ ಆಚರಿಸುತ್ತಲೂ ಎರಡನೆಯ ಮೂರು ಸ್ಥಲಗಳು ನಿರಾಕಾರವಾಗಿದ್ದು ಅವುಗಳನ್ನು ಆತ್ಮನಲ್ಲಿ ಆಚರಿಸುತ್ತಲೂ ಹೋದಲ್ಲಿ ಈ ಉಭಯಸ್ಥಲಗಳು ಒಂದಾಗಿ ನಿಲ್ಲುವವು. ಮೊದಲಿನ ಮೂರು ಸ್ಥಲಗಳು ಭಕ್ತಸ್ಥಲಗಳೆಂದೆನಿಸಿಕೊಳ್ಳುವವು. ಎರಡನೆಯ ಮೂರು ಸ್ಥಲಗಳು ಜಂಗಮಸ್ಥಳಗಳೆಸಿಕೊಳ್ಳುವವು. ಜಂಗಮಸ್ಥಲಗಳು ಸ್ಥೂಲವಾದ ಭಕ್ತಸ್ಥಲಗಳಿಗೆ ಚೈತನ್ಯಸ್ವರೂಪವಾಗಿರುವವು. ಆದರೂ ಅವು ಪರಸ್ಪರಾವಲಂಬಿಗಳು. ಒಂದನ್ನು ಒಂದು ಬಿಟ್ಟು ಅವು ವ್ಯವಹರಿಸಲಾರವು. ಅವುಗಳ ಈ ಸಾಮರಸ್ಯ ಸ್ಥಿತಿಯು ಭಕ್ತನ ಪ್ರಗತಿಯ ದ್ಯೋತಕವಾಗಿದೆ.

(೧) ಲಿಂಗಸ್ಥಲಗಳು

ಇನ್ನು ಲಿಂಗಸ್ಥಲವಾವುದೆಂದಡೆ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಇಂತು ಲಿಂಗಸ್ಥಲ ಆರಕ್ಕಂ ವಿವರ :–

೧೪೭

(೧) ಆಚಾರಲಿಂಗ ತ್ರಿವಿಧ: ಸದಾಚಾರ ನಿಯತಾಚಾರ ಗಣಾಚಾರ. ಇವಕ್ಕೆ ವಿವರ: ಎಲ್ಲ ಜನವಹುದೆಂಬುದೇ ಸದಾಚಾರ. ಹಿಡಿದ ವ್ರತ ನಿಯಮವ ಬಿಡದಿಹುದೇ ನಿಯತಾಚಾರ. ಶಿವನಿಂದೆಯ ಕೇಳದಿಹುದೇ ಗಣಾಚಾರ.

ಗುರುಲಿಂಗ ತ್ರಿವಿಧ : ದೀಕ್ಷೆ, ಶಿಕ್ಷೆ, ಸ್ವಾನುಭಾವ. ಇವಕ್ಕೆ ವಿವರ : ದೀಕ್ಷೆ ಎಂದಡೆ ಗುರು; ಶಿಕ್ಷೆ ಎಂದಡೆ ಜಂಗಮ; ಸ್ವಾನುಭಾವವೆಂದಡೆ ತನ್ನಿಂದ ತಾನರಿವುದು.

ಶಿವಲಿಂಗ ತ್ರಿವಿಧ : ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ. ಇವಕ್ಕೆ ವಿವರ : ಶ್ರೀಗುರು ಕರಸ್ಥಲದಲ್ಲಿ ಅನುಗ್ರಹವ ಮಾಡಿ ಕೊಟ್ಟುದೀಗ ಇಷ್ಟಲಿಂಗ,ತನುಗುಣ ನಾಸ್ತಿಯಾದುದೀಗ ಪ್ರಾಣಲಿಂಗ. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಲಿಂಗ ವಲ್ಲದೆ, ಪೆರತೊಂದನರಿಯದಿಪ್ಪುದೇ ತೃಪ್ತಿಲಿಂಗ.

ಜಂಗಮಲಿಂಗ ತ್ರಿವಿಧ : ಸ್ವಯ, ಚರ, ಪರ, ಇವಕ್ಕೆ ವಿವರ : ಸ್ವಯವೆಂದಡೆ ತಾನು; ಚರವೆಂದಡೆ ಲಾಂಛನ ಮುಂತಾಗಿ ಚರಿಸುವದು; ಪರವೆಂದಡೆ, ಅರಿವು ಮುಂತಾಗಿ ಚರಿಸುವುದು.

ಪ್ರಸಾದಲಿಂಗ ತ್ರಿವಿಧ : ಶುದ್ಧ, ಸಿದ್ಧ, ಪ್ರಸಿದ್ಧ, ಇವಕ್ಕೆ ವಿವರ : ಶುದ್ಧವೆಂದಡೆ ಗುರುಮುಖದಿಂದ ಮಲತ್ರಯವ ಕಳೆದುಳಿದ ಶೇಷ. ಸಿದ್ಧವೆಂದಡೆ ಲಿಂಗಮುಖ ದಿಂದ ಕರಣಮಥನಂಗಳ ಕಳೆದುಳಿದ ಶೇಷ. ಪ್ರಸಿದ್ಧವೆಂದಡೆ, ಜಂಗಮಮುಖ ದಿಂದ ಸರ್ವಚೈತನ್ಯಾತ್ಮಕ ತಾನೆಯಾಗಿ ಖಂಡಿತವಳಿದುಳಿದ ಶೇಷ.

ಮಹಾಲಿಂಗ ತ್ರಿವಿಧ : ಪಿಂಡಜ, ಅಂಡಜ, ಬಿಂದುಜ. ಇವಕ್ಕೆ ವಿವರ : ಪಿಂಡಜವೆಂದಡೆ ಘಟಾಕಾಶ, ಅಂಡಜವೆಂದಡೆ ಬ್ರಹ್ಮಾಂಡ, ಬಿಂದುಜವೆಂದಡೆ ಮಹದಾಕಾಶ. ಇಂತು ಲಿಂಗಸ್ಥಲ ಆರಕ್ಕಂ ಹದಿನೆಂಟು ಸ್ಥಲವಾಯಿತ್ತು

(೨) ಅಂಗಸ್ಥಲಗಳು

ಇನ್ನು ಅಂಗಸ್ಥಲವಾವುದೆಂದಡೆ: ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಇಂತು ಅಂಗಸ್ಥಲ ಆರಕ್ಕಂ ವಿವರ :

(೨) ಭಕ್ತಸ್ಥಲ ತ್ರಿವಿಧ : ಗುರುಭಕ್ತ ಲಿಂಗಭಕ್ತ ಜಂಗಮಭಕ್ತ, ಇವಕ್ಕೆ ವಿವರ: ತನು ಕ್ರಿಯೆಯಿಂದ ತನುಮನಧನವನರ್ಪಿಸುವನಾಗಿ ಗುರುಭಕ್ತ, ಮನಕ್ರಿಯೆಯಿಂದ ಮನತನುಧನವನರ್ಪಿಸುವನಾಗಿ ಲಿಂಗಭಕ್ತ, ಧನಕ್ರಿಯೆಯಿಂದ ಧನಮನ ತನುವನ ರ್ಪಿಸುವನಾಗಿ ಜಂಗಮಭಕ್ತ

ಮಹೇಶ್ವರಸ್ಥಲ ತ್ರಿವಿಧ : ಇಹಲೋಕವೀರ, ಪರಲೋಕವೀರ, ಲಿಂಗವೀರ. ಇವಕ್ಕೆ ವಿವರ : ಮರ್ತ್ಯಲೋಕದ ಮಹಾಗಣಂಗಳು ಮೆಚ್ಚುವಂತೆ ಷಡ್ದರ್ಶನಂ ಗಳ ನಿರಸನವಂ ಮಾಡಿ, ತನ್ನ ಪ್ರಾಣವ ವೆಚ್ಚಿಸುವನಾಗಿ ಇಹಲೋಕವೀರ.

ದೇವಲೋಕದ ದೇವಗಣಂಗಳು, ಮೆಚ್ಚುವಂತೆ ಸರ್ವಸಂಗಪರಿತ್ಯಾಗವ ಮಾಡಿ, ಚತುರ್ವಿಧಪದಂಗಳು ಧರ್ಮಾರ್ಥ ಕಾಮ ಮೋಕ್ಷಂಗಳ ಬಿಟ್ಟಿಹನಾಗಿ ಪರಲೋಕ ವೀರ. ಅಂಗ ಲಿಂಗ ಸಂಗದಿಂದ ಸರ್ವ ಕರಣಂಗಳು ಸನ್ನಿಹಿತವಾಗಿಪ್ಪ ನಾಗಿ ಲಿಂಗವೀರ.

ಪ್ರಸಾದಿಸ್ಥಲ ತ್ರಿವಿಧ : ಅರ್ಪಿತ ಪ್ರಸಾದಿ. ಅವಧಾನ ಪ್ರಸಾದಿ. ಪರಿಣಾಮ ಪ್ರಸಾದಿ. ಇವಕ್ಕೆ ವಿವರ: ಕಾಯದ ಕೈಯಲ್ಲಿ ಸಕಲ ಪದಾರ್ಥಂಗಳ ಇಷ್ಟಲಿಂಗಕ್ಕೆ ಕೊಟ್ಟು ಕೊಂಬನಾಗಿ ಅರ್ಪಿತಪ್ರಸಾದಿ. ಪಂಚೇಂದ್ರಿಯಂಗಳಲ್ಲಿ ಪಂಚಲಿಂಗ ಪ್ರತಿಷ್ಠೆಯಂ ಮಾಡಿ, ಅಲ್ಲಲ್ಲಿ ಬಂದ ಸುಖವನಲ್ಲಲ್ಲಿ ಮನದಕೈಯಲ್ಲಿ ಕೊಟ್ಟು ಕೊಂಬನಾಗಿ ಅವಧಾನಪ್ರಸಾದಿ. ಅಂಗಾಶ್ರಯವಳಿದು, ಲಿಂಗಾಶ್ರಯ ಉಳಿದು ಭಾವಭರಿತವಾದುದು ಪರಿಣಾಮಪ್ರಸಾದಿ.

ಪ್ರಾಣಲಿಂಗಿಸ್ಥಲ ತ್ರಿವಿಧ : ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ, ಇವಕ್ಕೆ ವಿವರ: ಮನ ಕಾಯದಲ್ಲಿ ಆಚಾರವನು ಅವಗ್ರಹಿಸಿದವನಾಗಿ ಆಚಾರ ಪ್ರಾಣಿ. ಬಾಹ್ಯೋಪಚಾರಂಗಳ ಮರೆದು, ಲಿಂಗಕ್ಕೆ ತನ್ನ ಪ್ರಾಣವನೇ ಪೂಜೆಯ ಮಾಡುವನಾಗಿ ಲಿಂಗಪ್ರಾಣಿ, ಬಾಹ್ಯ ಭಕ್ತಿಯ ಮರೆದು, ಜಂಗಮಕ್ಕೆ ತನ್ನ ತನು, ಮನ, ಪ್ರಾಣಂಗಳ ನಿವೇದಿಸುವನಾಗಿ ಜಂಗಮಪ್ರಾಣಿ.

ಶರಣಸ್ಥಲ ತ್ರಿವಿಧ : ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿ ಲಿಂಗಾರ್ಚಕ. ಇವಕ್ಕೆ ವಿವರ : ಅನಿಷ್ಟ ನಷ್ಟವಾಯಿತ್ತಾಗಿ ಇಷ್ಟಲಿಂಗಾರ್ಚಕ. ಸ್ವಯ ಪರವನರಿಯನಾಗಿ ಪ್ರಾಣಲಿಂಗಾರ್ಚಕ. ಇಹಪರವನರಿಯನಾಗಿ ತೃಪ್ತಿಲಿಂಗಾರ್ಚಕ.

ಐಕ್ಯಸ್ಥಲ ತ್ರಿವಿಧ: ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ, ಇವಕ್ಕೆ ವಿವರ: ಕ್ರಿಯಾಕಾರವರತುದೇ ಕಾಯಲಿಂಗೈಕ್ಯ, ಅನುಭಾವವರತುದೇ ಜೀವಲಿಂಗೈಕ್ಯ. ಅರಿವು ಶೂನ್ಯವಾದುದೇ ಭಾವಲಿಂಗೈಕ್ಯ. ಇಂತೀ ಅಂಗಸ್ಥಲ ಆರಕ್ಕೆ ಹದಿನೆಂಟು ಸ್ಥಲವಾಯಿತ್ತು

ಉಭಯಸ್ಥಲ ಮೂವತ್ತಾರರೊಳಗಾದ ಸರ್ವಾಚಾರಸಂಪತ್ತನು ಕೂಡಲಚನ್ನ ಸಂಗಯ್ಯನಲ್ಲಿ ಬಸವಣ್ಣನೇ ಬಲ್ಲ.

(೩) ಹದಿನೆಂಟು ಅಂಗ ಹದಿನೆಂಟು ಲಿಂಗಸ್ಥಲಗಳು ಪರಸ್ಪರ ಕೂಡುವ ಪ್ರಕಾರ

೧೪೮

ಸಾಕಾರ ಹದಿನೆಂಟುಸ್ಥಲ ಅಂಗದಲ್ಲಿ ಆಚರಿಸುತ್ತ ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಹೇಶ್ವರ, ಅಲ್ಲಲ್ಲಿಗೆ ಪ್ರಸಾದಿಯಾಗಿಪ್ಪ ಆ ಸಾಕಾರವನೇನೆಂದು ಉಪಮಿಸು ವೆನಯ್ಯ ? ನಿರಾಕಾರ ಹದಿನೆಂಟು ಸ್ಥಲವ ಆತ್ಮನಲ್ಲಿ ಆಚರಿಸುತ್ತ ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿರ್ಪ ಆ ನಿರಾಕಾರವನೇನೆಂದು ಪಮಿಸುವೆನಯ್ಯ ? ಸಾಕಾರ ಹದಿನೆಂಟುಸ್ಥಲವ ಅಂಗದಲ್ಲಿ ಆಚರಿಸುವುದು ಭಕ್ತಸ್ಥಲ.

ಆ ನಿರಾಕಾರ ಹದಿನೆಂಟು ಸ್ಥಲವ ಆತ್ಮನಲ್ಲಿ ಆಚರಿಸುವುದು ಜಂಗಮಸ್ಥಲ. ಇಂತೀ ಉಭಯಸ್ಥಲ ಒಂದಾಗಿ ನಿಂದ ನಿಜದ ನಿಲವು ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ಮೂವತ್ತಾರು ಸ್ಥಲಗಳು

ವಿವರಣೆ : ಮೂವತ್ತಾರು ಸ್ಥಲಗಳ ನಿಶ್ಚಿತ ವ್ಯಾಖ್ಯೆಗಳು ದೊರೆತಿಲ್ಲ. ಆದರೆ ಈ ಸ್ಥಲಗಳನ್ನನುಸರಿಸಿಯೇ ಬಹುಜನ ವಚನಕಾರರು ತಮ್ಮ ವಚನಗಳನ್ನು ರಚಿಸಿರುವದು ಕಂಡುಬರುತ್ತದೆ. ಬಸವೇಶ್ವರ, ಚನ್ನಬಸವೇಶ್ವರ, ಸಿದ್ಧರಾಮ ಮೊದಲಾದ ವಚನಕಾರರ ವಚನಗಳು ೩೬ ಸ್ಥಲಗಳನ್ನನುಸರಿಸಿಯೇ ರಚಿಸಿದವುಗಳಿರುತ್ತವೆ. ಆದರೆ ಈ ಸ್ಥಲಗಳಲ್ಲಿ ನಿರೂಪಿಸಲ್ಪಟ್ಟ ವಚನಗಳು ಆಯಾ ಸ್ಥಲಗಳ ವ್ಯಾಖ್ಯೆಯನ್ನು ಸ್ಪಷ್ಟವಾಗಿ ವಿಶದಪಡಿಸುವಂಥವಿರುವದಿಲ್ಲ. ಯಾಕೆಂದರೆ ಒಂದು ಸ್ಥಲದಲ್ಲಿ ಹೇಳಿದ ವಚನಗಳ ಭಾವವು ಬೇರೊಂದು ಸ್ಥಲದಲ್ಲಿಯೂ ತೋರಿಬರುತ್ತದೆ. ಅಥವಾ ವಚನಕಾರರು ಅದೇ ವಚನವನ್ನು ಬೇರೆ ಸ್ಥಲಗಳಲ್ಲಿಯೂ ಸೇರಿಸಿರುವದು ತೋರಿ ಬರುತ್ತದೆ. ಇದರಿಂದ ಈ ೩೬ ಸ್ಥಲಗಳ ಭಾವವನ್ನು ಸ್ಪಷ್ಟವಾಗಿ ವಿಂಗಡಿಸುವದು ಕಠಿಣವಿರುತ್ತದೆ.

ಆದರೂ ಈ ೩೬ ಸ್ಥಲಗಳ ಮೂಲತತ್ವಗಳನ್ನು ನಾವು ಸಾಮಾನ್ಯವಾಗಿ ಕಂಡು ಹಿಡಿಯುವದು ಶಕ್ಯವಿರುತ್ತದೆ. ಪ್ರತಿಯೊಂದು ಸ್ಥಲದಲ್ಲಿ ಪುನಃ ಆರು ಸ್ಥಲಗಳು ಅಂತರ್ಗತವಾಗಿದ್ದು ಇವುಗಳ ಪರಸ್ಪರ ಭೇದಭಾವವನ್ನು ನಾವು ಸ್ಥೂಲವಾಗಿ ಕಂಡು ಹಿಡಿಯಬಹುದಾಗಿದೆ. ಈ ಬಗ್ಗೆ ಕೆಲವು ವಚನಗಳೂ ದೊರೆಯುತ್ತವೆ. ಇವುಗಳನ್ನು ನಾವು ಮುಂದೆ ಆರಂಭದಲ್ಲಿ ಕೊಟ್ಟಿರುತ್ತೇವೆ.

ನಾವು ಒಂದೇ ಒಂದು ಸ್ಥಲದಲ್ಲಿ ಅಂಟಿಕೊಂಡಿದ್ದರೆ ಅದು ಪ್ರಗತಿಗೆ ಕಾರಣವಲ್ಲವೆಂದು ವಚನಕಾರರ ಅಭಿಪ್ರಾಯಗಳಿವೆ. ಇದರಿಂದ ಒಂದು ಬಗೆಯ ಶಕ್ತಿ ಭಕ್ತಿ, ಲಿಂಗಗಳು ಉಷ್ಟೃಷ್ಟತೆಯನ್ನು ಹೊಂದುತ್ತವೆ. ಇದು ಪೂರ್ಣತೆಯಲ್ಲ. ಆದ್ದರಿಂದ ಒಂದು ಸ್ಥಲದಲ್ಲಿದ್ದವನು ಉಳಿದ ಸ್ಥಲಗಳಲ್ಲಿಯೂ ದೃಷ್ಟಿಯನ್ನಿಟ್ಟು ಆಚರಿಸಬೇಕು. ಇದರಿಂದ ಮನುಷ್ಯನಲ್ಲಿಯ ಎಲ್ಲ ಗುಣಗಳು ವಿಕಾಸವನ್ನು ಹೊಂದುತ್ತವೆ. ಉದಾ: ಆಚಾರವೇ ಮುಖ್ಯವಾಗಿದ್ದ ಭಕ್ತನು ಆ ಆಚಾರದ ಜ್ಞಾನವನ್ನು ಅರಿತು ಭಕ್ತನ ಶರಣನಾಗಬೇಕು. ಹಾಗೆಯೇ ಜ್ಞಾನಿಯಾದ ಶರಣನು ತನ್ನ ಜ್ಞಾನವನ್ನು ಆಚರಣೆಯಲ್ಲಿ ತಂದುಕೊಂಡು ಶರಣನ ಭಕ್ತನಾಗಲೂಬೇಕು. ಶ್ರದ್ಧೆಯುಳ್ಳವನು ಯಾವಾಗಲೂ ಶ್ರದ್ಧೆಯಲ್ಲಿಯೇ ಇರಬಾರದು. ಈ ಶ್ರದ್ಧಾ ಭಕ್ತಿಯೊಡನೆ ಬೇರೆ ಸ್ಥಲಗಳಿಗೆ ಸಂಬಂಧಿಸಿದ ಅವಧಾನಭಕ್ತಿ ಸುಜ್ಞಾನಭಕ್ತಿ ಮೊದಲಾದವುಗಳನ್ನೂ ಹೊಂದಬೇಕು. ಹೀಗೆ ಭಕ್ತನು ಆರು ಸ್ಥಲಗಳಲ್ಲೆಲ್ಲ ನಿಂತು ಅಲ್ಲಲ್ಲಿಯ ಆಚರಣೆಗಳನ್ನೆಲ್ಲ ಆಚರಿಸುತ್ತ ಹೋಗಬೇಕು.

ಈ ಪ್ರಕಾರ ಪ್ರತಿಯೊಂದು ಸ್ಥಲದಲ್ಲಿ ಆರು ಆರು ವಿಭಾಗಗಳಾಗಿ ಒಟ್ಟು ೩೬ ಸ್ಥಲಗಳಾಗುವವು. ಅವು ಯಾವುವೆಂದರೆ :

(೧) ಭಕ್ತ : ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ.

(೨) ಮಹೇಶ : ಮಹೇಶನ ಮಹೇಶ, ಮಹೇಶನ ಭಕ್ತ, ಮಹೇಶನ ಪ್ರಸಾದಿ, ಮಹೇಶನ ಪ್ರಾಣಲಿಂಗಿ, ಮಹೇಶನ ಶರಣ, ಮಹೇಶನ ಐಕ್ಯ.

(೩) ಪ್ರಸಾದಿ : ಪ್ರಸಾದಿಯ ಪ್ರಸಾದಿ, ಪ್ರಸಾದಿಯ ಭಕ್ತ ಪ್ರಸಾದಿಯ ಮಹೇಶ, ಪ್ರಸಾದಿಯ ಪ್ರಾಣಲಿಂಗಿ, ಪ್ರಸಾದಿಯ ಶರಣ, ಪ್ರಸಾದಿಯ ಐಕ್ಯ.

(೪) ಪ್ರಾಣಲಿಂಗಿ: ಪ್ರಾಣಲಿಂಗಿಯ ಪ್ರಾಣಲಿಂಗಿ, ಪ್ರಾಣಲಿಂಗಿಯ ಭಕ್ತ, ಪ್ರಾಣಲಿಂಗಿಯ ಮಹೇಶ, ಪ್ರಾಣಲಿಂಗಿಯ ಪ್ರಸಾದಿ, ಪ್ರಾಣಲಿಂಗಿಯ ಶರಣ, ಪ್ರಾಣಲಿಂಗಿಯ ಐಕ್ಯ.

(೫) ಶರಣ : ಶರಣ, ಶರಣನ ಭಕ, ಶರಣನ ಮಹೇಶ, ಶರಣನ ಪ್ರಸಾದಿ, ಶರಣನ, ಪ್ರಾಣಲಿಂಗಿ, ಶರಣನ ಐಕ್ಯ.

(೬) ಐಕ್ಯ : ಐಕ್ಯನ ಐಕ್ಯ, ಐಕ್ಯನ ಭಕ್ತ, ಐಕ್ಯನ ಮಹೇಶ, ಐಕ್ಯನ ಪ್ರಸಾದಿ, ಐಕ್ಯನ ಪ್ರಾಣಲಿಂಗಿ, ಐಕ್ಯನಶರಣ.

ಈ ಪ್ರಕಾರ ೩೬ ಸ್ಥಲಗಳಾಗಿದ್ದು, ಅವುಗಳಲ್ಲಿ ಕಟ್ಟಕಡೆಯ ಸ್ಥಲವು ಐಕ್ಯನ ಶರಣ ಇರುತ್ತದೆ.

ಮನುಷ್ಯನು ಈ ೩೬ ಸ್ಥಲಗಳಲ್ಲಿ ಕೆಳಗಿನಿಂದಲೇ ಮೇಲಕ್ಕೆ ಹೋಗಬೇಕೆಂಬ ನಿಯಮವಿಲ್ಲ. ಅವನು ಬೇಕಾದ ಸ್ಥಲದಿಂದ ಆರಂಭ ಮಾಡಬಹುದು. ಉದಾ:– ಒಬ್ಬನಲ್ಲಿ ಸ್ಥೂಲಸ್ಥಲವೆನಿಸಿಕೊಂಡು ಭಕ್ತಸ್ಥಲದ ಗುಣಗಳು ಹೆಚ್ಚಿಗೆ ಪ್ರಕಟವಾಗಿರಬಹುದು. ಇಂಥವನು ಸೂಕ್ಷ್ಮವಾದ ಉಳಿದ ಸ್ಥಲಗಳನ್ನು ತನ್ನಲ್ಲಿ ಪ್ರಕಾಶಪಡಿಸುತ್ತ ಹೋಗಬೇಕು. ಆದರೆ ಬೇರೊಬ್ಬನಲ್ಲಿ ಭಕ್ತನ ಗುಣಗಳಿಗಿಂತಲೂ ಹೆಚ್ಚಿಗೆ ಸೂಕ್ಷ್ಮ ಸ್ಥಲವಾದ ಪ್ರಾಣಲಿಂಗಿಯ ಗುಣಗಳು ಮಿಗಿಲಾಗಿ ಇರಬಹುದು. ಅವನು ಅದರ ಗುಣಗಳನ್ನು ಸ್ಥಿರಪಡಿಸಿಕೊಂಡು ಅಂದರೆ ಪ್ರಾಣಲಿಂಗಿಯ ಪ್ರಾಣಲಿಂಗಿಯಾಗಿ ಉಳಿದ ಸ್ಥಳಗಳ ಆಚರಣೆಗಳನ್ನು ಆಚರಿಸುತ್ತ ಅವುಗಳ ಗುಣಗಳನ್ನು ಆರಂಭಿಸದೆ, ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲದಿಂದ ಆರಂಭಿಸುವನು. ಇವನಾದರೂ ಕೂಡ ಭಕ್ತ ಮೊದಲಾದ ಎಲ್ಲ ಸ್ಥಲಗಳೊಳಗಿಂದ ಹಾಯ್ದು ಹೋಗಬೇಕು. ಹೀಗೆ ಅವನು ಕಡೆಗೆ ಐಕ್ಯನ ಶರಣನಾಗಬೇಕು.

ನಿಜವಾಗಿ ಸ್ಥಲಗಳಲ್ಲಿ ಮೇಲೆ ಕೆಳಗೆಂಬ ವಿಚಾರವಿಲ್ಲ. ಅವೆಲ್ಲವೂ ಅಷ್ಟೇ

ಮಹತ್ವವಾದವುಗಳು. ಮನುಷ್ಯನಲ್ಲಿಯ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳು ಪರಸ್ಪರಾವಲಂಬಿಗಳು. ಅವುಗಳಲ್ಲಿಯ ಎಲ್ಲ ತರದ ವ್ಯಾಪಾರಗಳೂ ಗುಣಗಳೂ, ಶಕ್ತಿಗಳೂ, ಲಿಂಗಗಳೂ, ಆಚಾರಗಳೂ, ಕ್ರಿಯೆಗಳೂ ಸರಿಯಾಗಿ ಉತ್ಕೃಷ್ಟತೆಯನ್ನು ಹೊಂದಬೇಕು. ಷಟ್‌ಸ್ಥಲಶಾಸ್ತ್ರದ ಧ್ಯೇಯವು ಇದನ್ನುಂಟುಮಾಡುವದೇ ಇದೆ. ಈ ಉದ್ದೇಶದಿಂದಲೇ ಮೂವತ್ತಾರು ಸ್ಥಲಗಳು ಕಲ್ಪಿಸಲ್ಪಟ್ಟಿರುತ್ತವೆ.

೧೮೯

(೧) ಪ್ರಥಮದಲ್ಲಿ ಭಕ್ತನಾದೆನೆಂಬರು, ದ್ವಿತೀಯದಲ್ಲಿ ಮಹೇಶ್ವರನಾದೆನೆಂಬರು, ತೃತೀಯದಲ್ಲಿ ಪ್ರಸಾದಿಯಾದೆನೆಂಬರು, ಚತುರ್ಥದಲ್ಲಿ ಪ್ರಾಣಲಿಂಗಿಯಾದೆನೆಂಬರು, ಐದನೆಯದರಲ್ಲಿ ಶರಣನಾದೆನೆಂಬರು, ಆರನೆಯದರಲ್ಲಿ ಐಕ್ಯನಾದೆನೆಂಬರು, ಆರು ಸ್ಥಲವ ಮೀರಿ ನಿರವಯ ಸ್ಥಲವನೈದಿಹೆನೆಂಬರು. ಇದು ಖಂಡಿತ ಷಟ್‌ಸ್ಥಳಜ್ಞಾನ ನಿರ್ಣಯವಲ್ಲ, ಆವಾವ ಸ್ಥಲವಂಗಂಗೊಂಡಡೂ, ಆ ಸ್ಥಲದಲ್ಲಿ ಷಡ್ವಿಧಲಿಂಗದಲ್ಲಿ ಬೆರೆಸಿ ಬೇರಿಲ್ಲದಿರಬಲ್ಲಡೆ, ಸದ್ಭಕ್ತನೆಂಬೆನಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೧೯೦

(೨) ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯರೆಂದು, ಬೇರೆ ಮಾಡಿ ನಡೆದು, ಬೇರೆ ಮಾಡಿ ನುಡಿವ ಭಿನ್ನವಿಲ್ಲ. ಅಂತರಂಗದಲ್ಲಿ ಅರಿವು ಪರಿಪೂರ್ಣ [ಬಸವಣ್ಣ] ಬಹಿರಂಗದಲ್ಲಿ ದಾಸೋಹಸಂಪನ್ನ [ಬಸವಣ್ಣ] ಮನೋ ವಾಕ್ಕಾಯ ಕರ್ಮಂಗಳಲ್ಲಿ ಸದ್ಭಕ್ತಿಸಂಪನ್ನ [ಬಸವಣ್ಣ] ಎಡತೆರಹಿಲ್ಲದೆ ಲಿಂಗಸಂಪನ್ನ [ಬಸವಣ್ಣ] ಸರ್ವಾಂಗದಲ್ಲಿ ಸರ್ವಾಚಾರ ಸಂಪನ್ನ [ಬಸವಣ್ಣ] ಕೂಡಲ [ಚೆನ್ನ]ಸಂಗ[ನಲ್ಲಿ][೧] ಬಸವಣ್ಣನ ಶ್ರೀಪಾದಕ್ಕೆ ನಮೋ, ನಮೋ ಎನುತಿರ್ದೆನು.

೧೯೧

(೩) ಆವ ವರ್ಣ ಕೂಡಿದಡೂ, ಅಪ್ಪುಮಯ ತಪ್ಪದಂತೆ, ಸರ್ವಗುಣ ಸಂಪನ್ನನಾದಲ್ಲಿ ಭಕ್ತನೆಂದಡೂ ತಾನಾಗಿ, ಮಹೇಶ್ವರನೆಂದಡೂ ತಾನಾಗಿ, ಪ್ರಾಣಲಿಂಗಿ ಎಂದಡೂ ತಾನಾಗಿ, ಶರಣನೆಂದಡೂ ತಾನಾಗಿ, ಐಕ್ಯನೆಂದಡೂ, ತಾನಾಗಿ, ಒಂದನಹುದು ಒಂದನಲ್ಲ ಎನ್ನದೆ, ಕತ್ತಲೆಯಲ್ಲಿ ಹಾಲಕೊಂಡಡೆ ಸಿಹಿ ತಪ್ಪುವದೇ ? ಸತ್ತು ಚಿತ್ತಾನಂದವೆಂಬ ಗೊತ್ತ ಹರಿದವಂಗೆ, ತಟ್ಟು ಮುಟ್ಟು ಹತ್ತುವ ಭಾವ ಒಂದೂ ಇಲ್ಲ. ಕಾಮ ಭೀಮ ಜೀವದನದೊಡೆಯ ತಾನು ತಾನೆ.

ಅರ್ಥ : ಷಡ್ವರ್ಣಂಗಳೊಳಗೆ ಆವ ವರ್ಣದಲ್ಲಿ ಉದಕವು ಕೂಡಿದಡೂ, ಉದಕವು ಆ ವರ್ಣವಾಗುವುದು ಹುಸಿಯದು. ಹಾಗೆ ಸರ್ವಾಚಾರಸಂಪತ್ತಿನ ಆಚರಣೆಯಲ್ಲಿ ಲೋಲುಪ್ತಿಯುಳ್ಳವನಾದಲ್ಲಿ ಶ್ರದ್ಧಾಭಕ್ತಿಯನುಳ್ಳ ಭಕ್ತನೆಂದರೂ ಶರಣ ತಾನೆಯಾಗಿಪ್ಪನು, ಸಾವಧಾನಭಕ್ತಿಯನುಳ್ಳ ಪ್ರಸಾದಿ ಎಂದಡೂ ತಾನೆ

೧–೧ ದೇವರಲ್ಲಿ.

ಯಾಗಿಪ್ಪನು. ಅನುಭಾವ ಭಕ್ತಿಯನುಳ್ಳ ಪ್ರಾಣಲಿಂಗಿ ಎಂದಡೂ ತಾನೆಯಾಗಿಪ್ಪನು. ಆನಂದಭಕ್ತಿಯನುಳ್ಳ ಶರಣನೆಂದಡೂ ತಾನೆಯಾಗಿಪ್ಪನು. ಸಮರಸಭಕ್ತಿಯನುಳ್ಳ ಐಕ್ಯನೆಂದಡೂ ತಾನೆಯಾಗಿಪ್ಪನು. ಶರಣನು ಷಟ್‌ಸ್ಥಲಂಗಳು; ತನಗಂಗವಾದ ಕಾರಣ, ಮಾಹೇಶ್ವರಸ್ಥಲವೇ ಮೋಕ್ಷಕ್ಕೆ ಕಾರಣವಹುದು; ಭಕ್ತಸ್ಥಲವಲ್ಲ, ಪ್ರಸಾದಿ ಸ್ಥಲವೇ ಮೋಕ್ಷಕ್ಕೆ ಕಾರಣವಹುದು; ಮಾಹೇಶ್ವರ ಸ್ಥಲವಲ್ಲ, ಪ್ರಾಣಲಿಂಗಿ ಸ್ಥಲವೇ ಮೋಕ್ಷಕ್ಕೆ ಕಾರಣವಹುದು; ಪ್ರಸಾದಿ ಸ್ಥಲವಲ್ಲ, ಶರಣಸ್ಥಲವೇ ಮೋಕ್ಷಕ್ಕೆ ಕಾರಣಹುದು; ಪ್ರಾಣಲಿಂಗಿಸ್ಥಲವಲ್ಲ, ಐಕ್ಯಸ್ಥಲವೇ ಮೋಕ್ಷಕ್ಕೆ ಕಾರಣವಹುದು; ಶರಣಸ್ಥಳ[ವಲ್ಲ][೧] ಎನ್ನದೆ ತಾ ಸರ್ವಾಚಾರ ಸಂಪನ್ನನಾದಲ್ಲಿ ಆವ ಸ್ಥಲದಲ್ಲಿ ನಿಂದು ಆಚರಿಸಿದಡೂ ಮೋಕ್ಷವಹುದು. ಅದು ಹೇಗೆಂದಡೆ, ಕಾವಳದಲ್ಲಿ ಕ್ಷೀರವ ಸ್ವೀಕರಿಸಿದಡೆ, ಸ್ವಾದ ಕೆಡದು ಎಂಬ ಹಾಗೆ, ತಾನು ಆವ ಸ್ಥಲವಿಡಿದು ಆಚರಿಸಿದಡೂ, ಆ ಸ್ಥಲದಲ್ಲಿ ಷಟ್‌ಸ್ಥಲಂಗಳು ಉಂಟಾದ ಕಾರಣ ಮೋಕ್ಷವುಂಟು. ಸದ್ರೂಪವಾದ ಅಂಗ, ಚಿದ್ರೂಪವಾದ ಲಿಂಗ ಆನಂದಸ್ವರೂಪವಾದ ಭಕ್ತಿ. ಈ ಅಂಗ ಭಕ್ತಿಗಳೆಂಬ ಭಿನ್ನವ ನಷ್ಟವ ಮಾಡಿ ಲಿಂಗದಲ್ಲಿ ಕೂಡಿದ ಶರಣಂಗೆ ಇದು ಅಂಗ, ಇದು ಲಿಂಗ, ಇದು ಭಕ್ತಿ ಎಂಬುದೊಂದೂ ಇಲ್ಲ, ಲಿಂಗವೇ ತಾನು, ತಾನೇ ಲಿಂಗವಾಗಿಪ್ಪನೆಂಬುದರ್ಥ.

೧೯೨

(೪) ಸ್ಥಳಕುಳವನರಿಯಬೇಕೆಂಬರು. ಭಕ್ತನಾಗಿ ಮಹೇಶ್ವರನಾಗಬೇಕೆಂಬರು. ಮಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು. ಪ್ರಸಾದಿಯಾಗಿ ಪ್ರಾಣಲಿಂಗಿಯಾಗಬೇಕೆಂಬರು. ಪ್ರಾಣಲಿಂಗಿಯಾಗಿ ಶರಣನಾಗಬೇಕೆಂಬರು. ಶರಣನಾಗಿ ಐಕ್ಯನಾಗಬೇಕೆಂಬರು. ಐಕ್ಯನಾಗಿ ಪರಿತರಿಂದ ಕೂಟ ನಾನರಿಯೆ. ಒಳಗಣ ಮಾತು ಹೊರಹೊಮ್ಮಿಯಲ್ಲದೆ ಎನಗರಿಯಬಾರದು. ಎನಗೈಕ್ಯನಾಗಿ ಶರಣನಾಗಬೇಕು. ಶರಣನಾಗಿ ಪ್ರಾಣಲಿಂಗಿಯಾಗಬೇಕು. ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು. ಪ್ರಸಾದಿಯಾಗಿ ಮಹೇಶ್ವರನಾಗಬೇಕು. ಮಹೇಶ್ವರನಾಗಿ ಭಕ್ತನಾಗಬೇಕು. ಭಕ್ತನಾಗಿ ಸಕಲ ಯುಕ್ತನಾಗಬೇಕು. ಯುಕ್ತಿ ನಿಶ್ಚಯವಾದಲ್ಲಿಯೇ ಐಕ್ಯಸ್ಥಲ ಒಳಹೊರಗಾಯಿತ್ತು ಅಲೇಖವೇ ಲೇಖವಾಯಿತ್ತು ಎನಗೆ ಕಾಣಬಂದಿತ್ತು ಅಲೇಖನಾದ ಶೂನ್ಯ ಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

೧೯೩

(೫) ಕುಂಭದಲ್ಲಿ ಅಪ್ಪುವಿನ ಸಂಗದಲ್ಲಿ ತಂಡುಲವ ಹಾಕಿ, ಅಗ್ನಿ ಪುಟದಿಂ ಬೇಯಿಸಲಿಕ್ಕಾಗಿ, ಒಂದೊಂದು ತಂಡುಲ ಹಿಂಗಿ ಬೆಂದಂತೆ, ಆ ಅಪ್ಪು ಬೆಂಕಿಯ ಸಂಗವ ಮಾಡಿತ್ತು, ಆ ಅಗ್ನಿ ತಂಡುಲಕ್ಕೊಂದೊಂದು ಬಾರಿ ಉರಿಯಿತ್ತು, ಇಂತೀ ವಿವರಂಗಳ ಭೇದವನರಿತು, ಅಂಗದಲ್ಲಾರುಸ್ಥಲವನಂಗೀಕರಿಸಿದಲ್ಲಿ, ಬೇರೆ

೧–೧ ಮೋಕ್ಷಕ್ಕೆ ಕಾರಣವಲ್ಲ (ಮೂ)

ಒಂದೊಂದರಲ್ಲಿ ಹಿಂಗಿ ನೋಡಿಹೆವೆಂದೊಡೆ, ಮೂರಕ್ಕಾರು, ಆರಕ್ಕೆ ಮೂವತ್ತಾರು, ?[ಮೂವತ್ತಾರು]? ರೊಳಗಾದ ಗುಣ ನಾಮ ಅತೀತಕ್ಕೆ ಅತೀತವಾಗಿಪ್ಪುದು. ಇಂತೀ ಸ್ಥಲಂಗಳ ಅಹುದೆಂದು ಒಪ್ಪದೆ, ಅಲ್ಲ ಎಂದು ಬಿಡದೆ, ಅಲ್ಲಿಯ ಸ್ಥಲದಲ್ಲಿ ವಿಕೀಕರಿಸಿ, ಅಲ್ಲಿಯ ಭಾವವ ತೋರಿದಲ್ಲಿಯೇ, ಲೇಪವ ಮಾಡಿ, ಹಿಡಿದಡೆ ಹಿಡಿಕಿಗೆ ಬಾರದೆ, ಬಿಟ್ಟಡೆ ಹರವರಿಯಲ್ಲಿ ಹರಿಯದೆ, ವಸ್ತುಕದಲ್ಲಿ ವರ್ಣಕ ತೋರಿ, ಆ ವರ್ಣಕಕ್ಕೆ ವಸ್ತುಕ ಆಧೀನವಾಗಿ ಇಪ್ಪ ಉಭಯಸ್ಥಲವದು ಅರಿತಲ್ಲಿ ವಿಶ್ವಸ್ಥಲ ನಾಶವಾಗಿ ಸದ್ಯೋಜಾತಲಿಂಗವು ವಿನಾಶವಾಗಬೇಕು.

೧೯೪

(೬) ಭಕ್ತಿವಿಡಿದು, ಭಕ್ತನಾದ ಪ್ರಸಾದಿ. ಧೈರ್ಯವಿಡಿದು ಆ ಭಕ್ತಂಗೆ ಮಹೇಶ್ವರನಾದ ಪ್ರಸಾದಿ. ಕರಣವಿಡಿದು ಅವಧಾನ ತಪ್ಪದೆ ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ. ಕರ್ಮರಹಿತನಾಗಿ ಕಾಲಕಲ್ಪಿತವಿಲ್ಲದೆ, ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ. ಪತಿಭಕ್ತಿವಿಡಿದು ಧರ್ಮಾರ್ಥ ಕಾಮ ಮೋಕ್ಷಂಗಳ ಆಶೆ ನಿವೃತ್ತಿಯಂ ಮಾಡಿ, ಆ ಭಕ್ತಂಗೆ ಶರಣನಾದ ಪ್ರಸಾದಿ. ಈ ಉಭಯ ಸಮರಸ ವಿಕವೆಂದು ತಿಳಿದು, ಉಭಯ ಭಾವ ಉರಿ ಕರ್ಪುರ ಸಂಯೋಗವಾದ ಆ ಭಕ್ತಂಗೆ ಐಕ್ಯನಾದ ಪ್ರಸಾದಿ. ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ ಸರ್ವಕ್ಕೆ ಚೈತನ್ಯವಾದ ನಿಮ್ಮ ಚನ್ನಬಸವಣ್ಣನೆಂಬ ಅಚ್ಚಪ್ರಸಾದಿ.

೧೯೫

(೭) ಭಕ್ತಾದ್ಯೈಕ್ಯಾಂತವಹ ಷಡಂಗಕ್ಕೆ ಭಕ್ತಿ ಅಂಗವೇ ಆದಿಯಾಗಿ, ಆ ಭಕ್ತಂಗೆ ಪೃಥ್ವಿಯೇ ಅಂಗವಾಗಿ, ಆ ಪೃಥ್ವಿ ಅಂಗವನುಳ್ಳ ಭಕ್ತನಲ್ಲಿಯೇ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನಪ್ಪ ಅಂಗಪಂಚಕವು ಗರ್ಭೀಕೃತವಾಗಿ, ಆಚಾರ ಲಿಂಗವೇ ಕಾರಣವಾಗಿ, ಇಂತೀ ಷಡ್ವಿಧಲಿಂಗದಲ್ಲಿಯೇ ಬೆರೆಸಿ ಬೇರಿಲ್ಲದಿರ ಬಲ್ಲಡೆ, ಭಕ್ತನೆಂಬೆನಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

(೮) ಲಿಂಗಸ್ಥಲ ೩೬, ಅಂಗಸ್ಥಲಂಗಳು ೩೬ ಪ್ರಕಾರವು. ಅವಾವಯ್ಯ ಎಂದು ಶಿವಯೋಗಿ ಸಿದ್ಧರಾಮೇಶ್ವರನು ಶಂಕಿಸಿ ಬೆಸಗೊಂಡಲ್ಲಿ, ಕೇಳೈ ಯೋಗಿ: ಭಕ್ತ ಶ್ರದ್ಧಾಭಕ್ತಿಯನುಳ್ಳ ಭಕ್ತ ; ಮಹೇಶ್ವರ, ನೈಷ್ಠಿಕಾಭಕ್ತಿಯುಕ್ತವಾದ ಮಹೇಶ್ವರ ; ಪ್ರಸಾದಿ, ಸಾವಧಾನಭಕ್ತಿಯುಕ್ತವಾದ ಪ್ರಸಾದಿ; ಪ್ರಾಣಲಿಂಗಿ, ಅನುಭಾವ ಭಕ್ತಿಯುಕ್ತವಾದ ಪ್ರಾಣಲಿಂಗಿ ; ಶರಣ, ಆನಂದಭಕ್ತಿಯುಕ್ತವಾದ ಶರಣ; ಐಕ್ಯ, ಸಮರಸಭಕ್ತಿಯುಕ್ತವಾದ ಐಕ್ಯನು. ಈ ಆರು, ಈ ಷಡ್ವಿಧವು ಅಂಗಸ್ಥಲಂಗಳು. ಅಲ್ಲಿ ಭಕ್ತನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧ ಲಿಂಗದಲ್ಲಿ ಷಡ್ವಿಧಭಕ್ತಿಯಿಂದೆ ಕೂಟಸ್ಥವಾದಂತಹ ಅಂಗಸ್ಥಲವಾರು. ಅವಾವೆಂದೊಡೆ, ಕೇಳಯ್ಯ ಯೋಗಿಸದ್ಭಕ್ತ:

೧–೧ ಮತ್ತವ (ಮೂ)

ಶ್ರದ್ಧಾ ಭಕ್ತಿಯುಕ್ತವಾದ ಭಕ್ತ [ಆ ಭಕ್ತನ ಯೋಗ ಮಾಹೇಶ್ವರ. ಆ ಶ್ರದ್ಧಾ ಭಕ್ತಿಯುಕ್ತವಾದ] ಆ ಭಕ್ತನ ಸ್ವಾಧಿಷ್ಠಾನಚಕ್ರದಾರೆಸಳಕಂಜದಲ್ಲಿರ್ದ ಆಚಾರ ಲಿಂಗದೊಳಗಣ ಗುರುಲಿಂಗದಲ್ಲಿ ಶ್ರದ್ಧಾಭಕ್ತಿಯೊಳಗಣ ನೈಷ್ಠಿಕಾಭಕ್ತಿಯಿಂದೆ ಕೂಟಸ್ಥವಾದಂಥಾತನೇ ಭಕ್ತನೊಳಗಣ ಮಹೇಶ್ವರ. ಆ ಭಕ್ತನ ಯೋಗ ಪ್ರಸಾದಿ. ಆ ಭಕ್ತನ ಮಣಿಪೂರಕದ ಹತ್ತೆಸಳ ಕಂಜದಲ್ಲಿರ್ದ ಆಚಾರಲಿಂಗದೊಳಗಣ ಶಿವ ಲಿಂಗದಲ್ಲಿ ಶ್ರದ್ಧಾಭಕ್ತಿಯೊಳಗಣ ಸಾವಧಾನಭಕ್ತಿಯಿಂದೆ ಕೂಟಸ್ಥವಾದಂಥಾತನೇ ಭಕ್ತನ ಪ್ರಸಾದಿ. ಆ ಭಕ್ತನ ಯೋಗ ಪ್ರಾಣಲಿಂಗಿ. ಆ ಭಕ್ತನ ಶ್ರದ್ಧಾಭಕ್ತಿಯುಕ್ತವಾದ ಭಕ್ತನ ಅನಾಹತಚಕ್ರದ ಹನ್ನೆರಡೆಸಳ ಕಂಜದಲ್ಲಿರ್ದ ಆಚಾರಲಿಂಗದೊಳಗಣ ಜಂಗಮಲಿಂಗದಲ್ಲಿ ಶ್ರದ್ಧಾಭಕ್ತಿಯೊಳಗಣ ಅನುಭಾವಭಕ್ತಿಯಿಂದೆ ಕೂಟಸ್ಥವಾ ದಂಥಾತನೇ ಭಕ್ತನೊಳಗಣ ಪ್ರಾಣಲಿಂಗಿಯು. ಆ ಭಕ್ತನ ಯೋಗ ಶರಣ. ಆ ಶ್ರದ್ಧಾಭಕ್ತಿಯುಕ್ತವಾದ ಭಕ್ತನ ವಿಶುದ್ಧಿಚಕ್ರದ ಹದಿನಾರೆಸಳಕಂಜದಲ್ಲಿರ್ದ ಆಚಾರ ಲಿಂಗದೊಳಗಣ ಪ್ರಸಾದಲಿಂಗದಲ್ಲಿ ಶ್ರದ್ಧಾಭಕ್ತಿಯೊಳಗಣ ಆನಂದಭಕ್ತಿಯಿಂದೆ ಕೂಟಸ್ಥವಾದಂಥಾತನೇ ಭಕ್ತನೊಳಗಣ ಶರಣನು. ಆ ಭಕ್ತನ ಯೋಗ ಐಕ್ಯನು. ಆ ಶ್ರದ್ಧಾ ಭಕ್ತಿಯುಕ್ತವಾದ ಭಕ್ತನ ?[ಆಜ್ಞಾ]? ಚಕ್ರದ ಎರಡೆಸಳ ಕಂಜದಲ್ಲಿರ್ದ ಆಚಾರ ಲಿಂಗದೊಳಗಣ ಮಹಾಲಿಂಗದಲ್ಲಿ ಶ್ರದ್ಧಾ ಭಕ್ತಿಯೊಳಗಣ ಸಮರಸಭಕ್ತಿಯಿಂದೆ ಕೂಟಸ್ಥವಾದಂಥಾತನೇ ಭಕ್ತನೊಳಗಣ ಐಕ್ಯನು. ಇಂತು ಭಕ್ತನ ಯೋಗಾಂಗ ಸ್ಥಲವಾರು. ಭಕ್ತನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧಲಿಂಗಗಳಲ್ಲಿ ಷಡ್ವಿಧ ಭಕ್ತಿಯಿಂದೆ ಕೂಡಿದಂಥ ಶರೀರಸ್ಥಲಂಗಳು ಷಟ್‌ಪ್ರಕಾರವು.

ಇನ್ನು ಇಷ್ಟರ ಮೇಲೆ ಷಡಂಗವೇದ್ಯನೇ ಮಹೇಶ್ವರ. ಆ ಮಹೇಶ್ವರನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧಭಕ್ತಿಯಿಂದೆ, ಷಡ್ವಿಧಾಂಗವನು ವ್ಯಾಪಿಸ ಲಕ್ಕಾತನೇ ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರನು. ಆ ಮಹೇಶ್ವರನ ಯೋಗಭಕ್ತ ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರನ ಆಧಾರಚಕ್ರದ ನಾಲ್ಕೆಸಳಕಂಜದಲ್ಲಿ ಗುರುಲಿಂಗ ದೊಳಗಣ ಆಚಾರಲಿಂಗದಲ್ಲಿ ನೈಷ್ಠಿಕಾಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಟಸ್ಥ ವಾದಾತನೇ ಮಹೇಶ್ವರನೊಳಗಣ ಭಕ್ತನು. ಆ ಮಹೇಶ್ವರನ ಯೋಗ ಪ್ರಸಾದಿ. ನೈಷ್ಠಿಕಾ ಭಕ್ತಿಯನುಳ್ಳ ಮಹೇಶ್ವರನ ಮಣಿಪೂರಕಚಕ್ರದ ಹತ್ತೆಸಳಕಂಜದಲ್ಲಿರ್ದ ಗುರುಲಿಂಗದೊಳಗಣ ಶಿವಲಿಂಗದಲ್ಲಿ ನೈಷ್ಠಿಕಾಭಕ್ತಿಯೊಳಗಣ ಸಾವಧಾನ ಭಕ್ತಿ ಯಿಂದೆ ಕೂಟಸ್ಥವಾದಂಥಾದ್ದೇ ಮಹೇಶ್ವರನೊಳಗಣ ಪ್ರಸಾದಿ. ಆ ಮಹೇಶ್ವರನ ಯೋಗ ಪ್ರಾಣಲಿಂಗಿ. ಆ ನೈಷ್ಠಿಕಾ ಭಕ್ತಿಯನುಳ್ಳ ಮಹೇಶ್ವರನ ಅನಾಹತಚಕ್ರದ ಹನ್ನೆರಡೆಸಳಕಂಜಲ್ಲಿರ್ದ ಗುರುಲಿಂಗದೊಳಗಣ ಜಂಗಮಲಿಂಗದಲ್ಲಿ ನೈಷ್ಠಿಕಾಭಕ್ತಿ ಯೊಳಗಣ ಪ್ರಾಣಲಿಂಗಿ. ಆ ಮಹೇಶ್ವರನ ಯೋಗ ಶರಣ. ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರನ ವಿಶುದ್ಧಿಚಕ್ರದ ಹದಿನಾರೆಸಳಕಂಜಲ್ಲಿರ್ದ ಗುರುಲಿಂಗದೊಳಗಣ

೧–೧ ಜ್ಞಾನ (ಮೂ)

ಪ್ರಸಾದಲಿಂಗದಲ್ಲಿ ನೈಷ್ಠಿಕಾಭಕ್ತಿಯೊಳಗಣ ಆನಂದಭಕ್ತಿಯಿಂದೆ ಕೂಟಸ್ಥಲವಾದಂಥಾದ್ದೇ ಮಹೇಶ್ವರನೊಳಗಣ ಶರಣನು. ಆ ಮಹೇಶ್ವರನ ಯೋಗ ಐಕ್ಯ. ಆ ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರನ ಆಜ್ಞಾನಚಕ್ರದ ಎರಡೆಸಳ ಕಂಜದಲ್ಲಿರ್ದ ಗುರುಲಿಂಗದೊಳಗಣ ಮಹಾಲಿಂಗದಲ್ಲಿ ನೈಷ್ಠಿಕಾಭಕ್ತಿಯೊಳಗಣ ಐಕ್ಯನು. ಇಂತು ಈ ಪ್ರಕಾರದ ದೆಸೆಯಿಂದ ಮಹೇಶ್ವರ ಯೋಗಾಂಗಸ್ಥಲವಾರು. ಆ ಮಹೇಶ್ವರನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧ ಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದೆ ಕೂಟಸ್ಥವಾದಂಥ ಶರೀರಸ್ಥಲ ಷಟ್‌ಪ್ರಕಾರವು. ದ್ವಿತೀಯಾಂಗಸ್ಥಲ ಹನ್ನೆರಡು.

ಇನ್ನು ಷಡಂಗವೇದ್ಯನೇ ಪ್ರಸಾದಿ. ಆ ಪ್ರಸಾದಿಯ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದೆ ವ್ಯಾಪಿಸಲ್ತಕ್ಕಾತನೇ ಸಾವಧಾನಭಕ್ತಿಯನುಳ್ಳ ಪ್ರಸಾದಿಯು. ಆ ಪ್ರಸಾದಿ ಯೋಗ ಭಕ್ತ, ಸಾವಧಾನಭಕ್ತಿಯನುಳ್ಳ ಪ್ರಸಾದಿಯ ಆಧಾರಚಕ್ರದ ನಾಲ್ಕೆಸಳಕಂಜದಲ್ಲಿರ್ದ ಶಿವಲಿಂಗದೊಳಗಣ ಆಚಾರಲಿಂಗದಲ್ಲಿ ಸಾವಧಾನಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಟಸ್ಥವಾದಂಥದ್ದೇ ಪ್ರಸಾದಿಯೊಳಗಣ ಭಕ್ತನು. ಆ ಪ್ರಸಾದಿ ಯೋಗ ಮಹೇಶ್ವರ. ಸಾವಧಾನಭಕ್ತಿಯನುಳ್ಳ ಪ್ರಸಾದಿಯ ಸ್ವಾಧಿಷ್ಠಾನಚಕ್ರದ ಆರೆಸಳಕಂಜದಲ್ಲಿರ್ದ ಶಿವಲಿಂಗದೊಳಗಣ ಗುರುಲಿಂಗದಲ್ಲಿ ಸಾವಧಾನ ಭಕ್ತಿಯೊಳಗಣ ನೈಷ್ಠಿಕಾಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಸಾದಿಯೊಳಗಣ ಮಹೇಶ್ವರ. ಪ್ರಸಾದಿ ಯೋಗ ಪ್ರಾಣಲಿಂಗಿ. ಸಾವಧಾನ ಭಕ್ತಿಯನುಳ್ಳ ಪ್ರಸಾದಿಯ ಅನಾಹತಚಕ್ರದ ಹನ್ನೆರಡೆಸಳಕಂಜದಲ್ಲಿರ್ದ ಶಿವಲಿಂಗದೊಳಗಣ ಜಂಗಮಲಿಂಗದಲ್ಲಿ ಸಾವಧಾನಭಕ್ತಿಯೊಳಗಣ ಅನುಭಾವಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಸಾದಿಯೊಳಗಣ ಪ್ರಾಣಲಿಂಗಿ. ಆ ಪ್ರಸಾದಿ ಯೋಗ ಶರಣ. ಆ ಸಾವಧಾನಭಕ್ತಿಯನುಳ್ಳ ಪ್ರಸಾದಿಯ ವಿಶುದ್ಧಿಚಕ್ರದ ಹದಿನಾರೆಸಳಕಂಜದಲ್ಲಿರ್ದ ಶಿವಲಿಂಗದೊಳಗಣ ಪ್ರಸಾದಲಿಂಗದಲ್ಲಿ ಸಾವಧಾನಭಕ್ತಿಯೊಳಗಣ ಆನಂದ ಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಸಾದಿಯೊಳಗಣ ಶರಣ. ಆ ಪ್ರಸಾದಿ ಯೋಗ ಐಕ್ಯ. ಆ ಸಾವಧಾನಭಕ್ತಿಯನುಳ್ಳ ಪ್ರಸಾದಿಯ ಆಜ್ಞಾಚಕ್ರದ ಎರಡೆಸಳಕಂಜದಲ್ಲಿರ್ದ ಶಿವಲಿಂಗದೊಳಗಣ ಮಹಾಲಿಂಗದಲ್ಲಿ ಸಾವಧಾನಭಕ್ತಿಯೊಳಗಣ ಸಮರಸ ಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಸಾದಿಯೊಳಗಣ ಐಕ್ಯನು. ಇನ್ನು ಈ ಪ್ರಕಾರದ ದೆಸೆಯಿಂದ ಪ್ರಸಾದಿಯೋಗಾಂಗಸ್ಥಲವಾರು. ಪ್ರಸಾದಿಯೊಡನೆ ಕೂಡಿದಂಥ ಸ್ಥಲಂಗಳು ಷಟ್‌ಪ್ರಕಾರವು. ತೃತೀಯಾಂಗ ಸ್ಥಲವು ಹದಿನೆಂಟು. ಮೂರು ಅಂಗಸ್ಥಲಂಗಳು ಅಷ್ಟಾದಶವು.

ಇನ್ನು ಇಷ್ಟರ ಮೇಲೆ ಮಾರ್ಗಕ್ರಿಯಾ ಸಂಪಾದನೆಯಲ್ಲಿ ಮಾರ್ಗಕ್ರಿಯಾ ೧೮ ಅಂಗಸ್ಥಲದಲ್ಲಿ, ಮಾರ್ಗಕ್ರಿಯಾ ೧೮ ಲಿಂಗಸಂಬಂಧವ ಮಾಡಿಕೊಂಡು, ಮಾರ್ಗಕ್ರಿಯಾ ೧೮ ಭಕ್ತಿವಿಡಿದಾಚರಿಸುವಂಥ ಆಚರಣೆಯ ಪ್ರತಿಪಾದನೆಯಲ್ಲಿ ೧೮

ಸ್ಥಲ ವೇಧಿಸಿ, ೧೮ ಅಂಗಸ್ಥಲವನ್ನು ೧೮ ಲಿಂಗಸ್ಥಲದಲ್ಲಿ ೧೮ ಭಕ್ತಿಯಿಂದೆ ವ್ಯಾಪಿಸಿ, ದ್ವೈತಾದ್ವೈತವೆಂಬ ಭೇದಾಭೇದವೆಂಬ, ದ್ವೈತಕ್ರಿಯೆ ಅದ್ವೈತಜ್ಞಾನವೆಂಬ ಉಭಯ ಕಲ್ಪನೆಯನತಿಗಳೆದು ಎರಡರ ಗುರುತನು ಅಲ್ಲಗಳೆದು ಮೀರಿದ ಕ್ರಿಯಾ ಸಂಪಾದನೆಯಲ್ಲಿ, ಮೀರಿದ ಕ್ರಿಯಾ ೧೮ ಭಕ್ತಿವಿಡಿದಾಚರಿಸುವಂಥ ಪ್ರತಿಪಾದನೆಯಲ್ಲಿ ಆಚರಿಸುವ ಆಚರಣೆ ಎಂತೆಂದೊಡೆ :

ಪ್ರಾಣಲಿಂಗಿ, ಅನುಭಾವಭಕ್ತಿಯನುಳ್ಳ ಪ್ರಾಣಲಿಂಗಿ, ಆ ಪ್ರಾಣಲಿಂಗಿ ಯೋಗ ಭಕ್ತನು, ಅನುಭಾವ ಭಕ್ತಿಯನುಳ್ಳ ಪ್ರಾಣಲಿಂಗದ ಆಧಾರಚಕ್ರದ ನಾಲ್ಕೆಸಳ ಕಂಜದಲ್ಲಿರ್ದ ಜಂಗಮಲಿಂಗದೊಳಗಣ ಆಚಾರಲಿಂಗದಲ್ಲಿ ಅನುಭಾವ ಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಡಿದಂಥಾದ್ದೇ ಪ್ರಾಣಲಿಂಗಿಯೊಳಗಭಕ್ತ, ಆ ಪ್ರಾಣಲಿಂಗಿ ಯೋಗ ಮಾಹೇಶ್ವರ, ಅನುಭಾವಭಕ್ತಿಯನುಳ್ಳ ಪ್ರಾಣಲಿಂಗಿಯ ಸ್ವಾಧಿಷ್ಠಾನಚಕ್ರದ ಆರೆಸಳಕಂಜದಲ್ಲಿರ್ದ ಜಂಗಮಲಿಂಗದೊಳಗಣ ಗುರುಲಿಂಗದಲ್ಲಿ ಅನುಭಾವಭಕ್ತಿಯೊಳಗಣ ನೈಷ್ಠಿಕಾಭಕ್ತಿಯಿಂದೆ ಕೂಟಸ್ಥವಾದಂಥಾತನೇ ಪ್ರಾಣಲಿಂಗಿಯೊಳಗಣ ಮಹೇಶ್ವರನು. ಆ ಪ್ರಾಣಲಿಂಗಿ ಯೋಗ ಪ್ರಸಾದಿ, ಅನುಭಾವ ಭಕ್ತಿಯನುಳ್ಳ ಪ್ರಾಣಲಿಂಗಿಯ ಮಣಿಪೂರಕಚಕ್ರದ ಹತ್ತೆಸಳ ಕಂಜದಲ್ಲಿರ್ದ ಜಂಗಮಲಿಂಗದೊಳಗಣ ಶಿವಲಿಂಗದಲ್ಲಿ ಅನುಭಾವ ಭಕ್ತಿಯೊಳಗಣ ಭಕ್ತಿ ಸಾವಧಾನದಿಂದೆ ಕೂಟಸ್ಥವಾದಂಥಾದ್ದೇ ಪ್ರಾಣಲಿಂಗಿಯೊಳಗಣ ಪ್ರಸಾದಿ. ಆ ಪ್ರಾಣಲಿಂಗಿ ಯೋಗ ಶರಣ, ಅನುಭಾವ ಭಕ್ತಿಯನುಳ್ಳ ಅಸುಲಿಂಗಿಯ ವಿಶುದ್ಧಿ ಚಕ್ರದ ಹದಿನಾರೆಸಳಕಂಜದಲ್ಲಿರ್ದ ಜಂಗಮಲಿಂಗದೊಳಗಣ ಪ್ರಸಾದದಲ್ಲಿ ಅನುಭಾವಭಕ್ತಿಯೊಳಗಣ ಆನಂದ ಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಾಣಲಿಂಗಿಯೊಳಗಣ ಶರಣನು. ಆ ಪ್ರಾಣಲಿಂಗಿ ಯೋಗ ಐಕ್ಯ, ಅನುಭಾವಭಕ್ತಿಯನುಳ್ಳ ಅಸುಲಿಂಗಿಯ ಆಜ್ಞಾಚಕ್ರದ ಎರಡೆಸಳಕಂಜದಲ್ಲಿರ್ದ ಜಂಗಮಲಿಂಗದೊಳಗಣ ಮಹಾಲಿಂಗದಲ್ಲಿ ಅನುಭಾವಭಕ್ತಿಯೊಳಗಣ ಸಮರಸಭಕ್ತಿಯಿಂದೆ ಕೂಟಸ್ಥವಾದಂಥಾದ್ದೇ ಪ್ರಾಣಲಿಂಗಿಯೊಳಗಣ ಐಕ್ಯನು. ಇಂತು ಈ ಪ್ರಕಾರದ ದೆಸೆಯಿಂದ ಪ್ರಾಣಲಿಂಗಿಯೋಗಾಂಗಸ್ಥಲವಾರು. ಪ್ರಾಣಲಿಂಗಿಯ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದೆ ಕೂಡುವಂಥ ಶರೀರಸ್ಥಲಂಗಳು ಷಟ್‌ಪ್ರಕಾರವು.

ಇನ್ನು ಇವುಗಳ ಮೇಲೆ ಷಡಂಗವೇದ್ಯನೇ ಶರಣ. ಆ ಶರಣನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿದಭಕ್ತಿಯಿಂದೆ ವ್ಯಾಪಿಸಲ್ತಕ್ಕಂಥಾತನೇ ಆನಂದ ಭಕ್ತಿಯನುಳ್ಳ ಶರಣ. ಆ ಶರಣನ ಯೋಗ ಭಕ್ತ ಆ ಶರಣನ ಆಧಾರಚಕ್ರದ ನಾಲ್ಕೆಸಳಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಆಚಾರಲಿಂಗದಲ್ಲಿ ಆನಂದಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಟಸ್ಥವಾದಂಥಾತನೇ ಶರಣನೊಳಗಣ ಭಕ್ತ ಆ ಶರಣ ಯೋಗ ಮಹೇಶ್ವರ,

ಆನಂದಭಕ್ತಿಯನುಳ್ಳ ಶರಣನ ಸ್ವಾಧಿಷ್ಠಾನಚಕ್ರದ ಆರೆಸಳಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಗುರುಲಿಂಗದಲ್ಲಿ ಆನಂದಭಕ್ತಿಯೊಳಗಣ ನೈಷ್ಠಿಕಾ ಭಕ್ತಿಯಿಂದೆ ಕೂಟಸ್ಥವಾದಂಥಾತನೇ ಶರಣನೊಳಗಣ ಮಹೇಶ್ವರ. ಆ ಶರಣನ ಯೋಗ ಪ್ರಸಾದಿ, ಆನಂದಭಕ್ತಿಯನುಳ್ಳ ಶರಣನ ಮಣಿಪೂರಕಚಕ್ರದ ಹತ್ತೆಸಳಕಂಜ ದಲ್ಲಿರ್ದ ಪ್ರಸಾದಲಿಂಗದೊಳಗಣ ಶಿವಲಿಂಗದಲ್ಲಿ ಆನಂದಭಕ್ತಿಯೊಳಗಣ ಸಾವಧಾನಭಕ್ತಿಯಿಂದೆ ಕೂಟಸ್ಥವಾದಂಥಾತನೇ ಶರಣನೊಳಗಣ ಪ್ರಸಾದಿ. ಆ ಶರಣನ ಯೋಗ ಪ್ರಾಣಲಿಂಗಿ, ಆನಂದಭಕ್ತಿಯನುಳ್ಳ ಶರಣನ ಅನಾಹತ ಚಕ್ರದ ಹನ್ನೆರಡೆಸಳಕಂಜದಲ್ಲಿರ್ದ ಪ್ರಸಾದ[ಲಿಂಗ]ದೊಳಗಣ ಜಂಗಮಲಿಂಗದಲ್ಲಿ ಆನಂದ ಭಕ್ತಿಯೊಳಗಣ ಅನುಭಾವಭಕ್ತಿಯಿಂದ ಕೂಟಸ್ಥವಾದಂಥಾದ್ದೇ ಶರಣನೊಳಗಣ ಪ್ರಾಣಲಿಂಗಿ. ಆ ಶರಣನ ಯೋಗ ಐಕ್ಯ, ಆನಂದ ಭಕ್ತಿಯನುಳ್ಳ ಶರಣನ ಆಜ್ಞಾಚಕ್ರದ ಎರಡೆಸಳಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಮಹಾಲಿಂಗದಲ್ಲಿ ಆನಂದಭಕ್ತಿಯೊಳಗಣ ಸಮರಸಭಕ್ತಿಯಿಂದೆ ಕೂಟಸ್ಥವಾದಂಥಾತನೇ ಶರಣನೊಳ ಗಣ ಐಕ್ಯನು. ಇನ್ನು ಈ ಪ್ರಕಾರದ ದೆಸೆಯಿಂದ ಶರಣನ ಯೋಗಾಂಗಸ್ಥಲವಾರು. ಶರಣನ ಷಡಾಧಾರಚಕ್ರಕಂಜಲ್ಲಿರ್ದ ಷಡ್ವಿಧಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದ ಕೂಟಸ್ಥವಾದಂಥ ಶರಣಸ್ಥಲಂಗಳು ಷಟ್‌ಪ್ರಕಾರವು. ದ್ವಿತೀಯಾಂಗಸ್ಥಲ ಹನ್ನೆರಡು. ಎರಡು ಅಂಗಸ್ಥಲವು ದ್ವಾದಶವು.

ಇನ್ನು ಇಷ್ಟರ ಮೇಲೆ ಷಡಂಗವೇದ್ಯನೇ ಐಕ್ಯ. ಐಕ್ಯನ ಷಡಾಧಾರ ಚಕ್ರಕಂಜದಲ್ಲಿರ್ದ ಷಡ್ವಿಧಲಿಂಗದಲ್ಲಿ ಷಡ್ವಿಧಭಕ್ತಿಯಿಂದೆ ಷಡ್ವಿಧಾಂಗವನು ವ್ಯಾಪಿಸಲ್ಕಕ್ಕುಂಥಾತನೇ ಸಮರಸಭಕ್ತಿಯನುಳ್ಳ ಐಕ್ಯನು. ಆ ಐಕ್ಯನ ಯೋಗ ಭಕ್ತ. ಆ ಐಕ್ಯನ ಆಧಾರಚಕ್ರದ ನಾಲ್ಕೆಸಳಕಂಜದಲ್ಲಿರ್ದ ಮಹಾಲಿಂಗದೊಳಗಣ ಆಚಾರ ಲಿಂಗದಲ್ಲಿ ಸಮರಸಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಟಸ್ಥವಾದಂಥಾತನೇ ಐಕ್ಯನೊಳಗಣ ಭಕ್ತ. ಆ ಐಕ್ಯನ[ಯೋಗ] ಮಹೇಶ್ವರ, ಆ ಐಕ್ಯನ ಸ್ವಾಧಿಷ್ಠಾನ ಚಕ್ರದ ಆರೆಸಳಕಂಜದಲ್ಲಿರ್ದ ಮಹಾಲಿಂಗದೊಳಗಣ ಗುರುಲಿಂಗದಲ್ಲಿ ಸಮರಸ ಭಕ್ತಿಯೊಳಗಣ ನೈಷ್ಠಿಕಾಭಕ್ತಿಯಿಂದೆ ಕೂಟಸ್ಥವಾದಂಥಾತನೇ ಐಕ್ಯನೊಳಗಣ ಮಹೇಶ್ವರ. ಆ ಐಕ್ಯನಯೋಗ ಪ್ರಸಾದಿ, ಆ ಐಕ್ಯನ ಮಣಿಪೂರಕಚಕ್ರದ ಹತ್ತೆಸಳಕಂಜದಲ್ಲಿರ್ದ ಮಹಾಲಿಂಗದೊಳಗಣ ಶಿವಲಿಂಗದಲ್ಲಿ ಸಮರಸಭಕ್ತಿಯೊಳಗೆ ಸಾವಧಾನ ಭಕ್ತಿಯಿಂದೆ ಕೂಟಸ್ಥವಾದಂಥಾತನೇ ಆ ಐಕ್ಯನೊಳಗಣ ಪ್ರಸಾದಿ. ಆ ಐಕ್ಯನ ಯೋಗ ಪ್ರಾಣಲಿಂಗಿ, ಆ ಐಕ್ಯನ ಅನಾಹತಚಕ್ರದ ಹನ್ನೆರಡೆಸಳಕಂಜ ದಲ್ಲಿರ್ದ ಮಹಾಲಿಂಗದೊಳಗಣ ಜಂಗಮಲಿಂಗದಲ್ಲಿ ಸಮರಸಭಕ್ತಿಯೊಳಗಣ ಅನುಭಾವ ಭಕ್ತಿಯಿಂದೆ ಕೂಟಸ್ಥವಾದಂಥಾತನೇ ಐಕ್ಯನೊಳಗಣ ಪ್ರಾಣಲಿಂಗಿ. ಆ ಐಕ್ಯನ ಯೋಗ ಶರಣ, ಆ ಐಕ್ಯನ ವಿಶುದ್ಧಿಚಕ್ರದ ಹದಿನಾರೆಸಳಕಂಜದಲ್ಲಿರ್ದ ಮಹಾಲಿಂಗದೊಳಗಣ ಪ್ರಸಾದಲಿಂಗದಲ್ಲಿ ಸಮರಸಭಕ್ತಿಯೊಳಗಣ ಆನಂದಭಕ್ತಿ

ಯಿಂದೆ ಕೂಟಸ್ಥವಾದಂಥಾತನೇ ಐಕ್ಯನೊಳಗಣ ಶರಣ. ಇಂತು ಈ ಪ್ರಕಾರದ ದೆಸೆಯಿಂದ ಐಕ್ಯನ ಯೋಗಾಂಗ ಸ್ಥಲವಾರು. ಐಕ್ಯನ ಷಡಾಧಾರಚಕ್ರಕಂಜದಲ್ಲಿರ್ದ ಷಡ್ವಿಧ ಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದೆ ಕೂಡುವಂಥ ಶರೀರ ಸ್ಥಲಂಗಳು ಷಟ್‌ಪ್ರಕಾರವು. ತೃತೀಯಾಂಗ ಸ್ಥಲ ಹದಿನೆಂಟು, ಮೂರು ಅಂಗಸ್ಥಲವು ಅಷ್ಟಾದಶವು.

ಇಂತೀ ಮೀರಿದ ಕ್ರಿಯೆಯ ಸಂಪಾದಿಸಿ, ಮೀರಿದ ಕ್ರಿಯೆಯ ೧೮ ಅಂಗದಲ್ಲಿ ಮೀರಿದ ಕ್ರಿಯೆಯ ೧೮ ಲಿಂಗವನು ಸಂಬಂಧವ ಮಾಡಿಕೊಂಡು, ಮೀರಿದ ಕ್ರಿಯೆಯ ೧೮ ಭಕ್ತಿವಿಡಿದಾಚರಿಸುವ ಆಚರಣೆಯ ಪ್ರತಿಪಾದಿಸಿ ಒಳಹೊರಗೆಂಬ ಅಂತರಂಗ ಬಹಿರಂಗವೆಂಬ ಕ್ರಿಯಾಜ್ಞಾನಸಂಪುಟವಾದ ಮಾರ್ಗಕ್ರಿಯಾ ಮೀರಿದಕ್ರಿಯಾ ಸಮಭಾಗವಾದ ಅಂಗಸ್ಥಲ ೩೬ ಶರೀರಸ್ಥಲಂಗಳು.

ಈ ತೆರದಲ್ಲಿ ಹೇಳಿದ ಸ್ಥಲಂಗಳಲ್ಲಿ ಚರಿಸುವ ಸದ್ಭಕ್ತಿ ನೈಷ್ಠೆ ಸಾವಧಾನವೆಂಬ ಮಾರ್ಗಕ್ರಿಯೆ ತ್ರಿವಿಧಭಕ್ತಿ[೧]. ಅನುಭಾವ, ಆನಂದ, ಸಮರಸಭಕ್ತಿ ಎಂಬ ಮೀರಿದ ಕ್ರಿಯೆ, [ತ್ರಿವಿಧಭಕ್ತಿ] ಸರಿನಿಂದ ಶ್ರದ್ಧೆ ಎಂಬ ಕ್ರಿಯೆ ಜ್ಞಾನಭಕ್ತಿಯಿಂದೆ ಮಾರ್ಗಕ್ರಿಯಾಭಕ್ತಿ ; ಅರಿವುವಿಡಿದ ಕ್ರಿಯಾಭಕ್ತಿ ಅರಿವಿನಿಂದ [೨][ಮೀರಿದ][೨]ಕ್ರಿಯಾ ಲಿಂಗವೆನಿಸುವ ಮಾರ್ಗಕ್ರಿಯಾ ತ್ರಿವಿಧಾಂಗದಲ್ಲಿ ಸಂಬಂಧವಾದ, ತ್ರಿವಿಧಲಿಂಗ ವೆಂದು ಹೇಳಿರುವ [೨][ಮೀರಿದ][೨] ಕ್ರಿಯೆ.

[ಮಾರ್ಗಕ್ರಿಯೆ] ೧೮ ಅಂಗದಲ್ಲಿ ಸಂಬಂಧವಾದ ೧೮ [೩][ಲಿಂ][೩]ಗವೆಂದು ಹೇಳಿರುವ ಆಚಾರಲಿಂಗ–ಪಂಚಾಚಾರ ಸ್ವರೂಪವಾದ ಆಚಾರಲಿಂಗ, ಗುರು ಲಿಂಗ– ಮಂತ್ರಾತ್ಮಕಸ್ವರೂಪವಾದ ಗುರುಲಿಂಗವು, ಶಿವಲಿಂಗ–ನಿರೀಕ್ಷಣಸ್ವರೂಪ ವಾದ ಶಿವಲಿಂಗವೆಂದು ಹೇಳಿರುವ ಲಿಂಗತ್ರಯವನು, ಮೀರಿದಕ್ರಿಯೆ ೧೮ ಲಿಂಗದಲ್ಲಿ ಸಂಬಂಧವಾದ, ಚರಲಿಂಗ-ಯಜನಸ್ವರೂಪವಾದ ಜಂಗಮಲಿಂಗ; ಪ್ರಸಾದಲಿಂಗ- ಸ್ತೋತ್ರಸ್ವರೂಪವಾದ ಪ್ರಸಾದಲಿಂಗ ; ಮಹಾಲಿಂಗ– ವೇಧಾ ಸ್ವರೂಪವಾದ ಮಹಾಲಿಂಗವೆಂದು ಹೇಳಿರುವ ಲಿಂಗತ್ರಯವನು, ಉಭಯಲಿಂಗ ಮಾರ್ಗಕ್ರಿಯೆ, ತ್ರಿವಿಧಲಿಂಗ, ಮೀರಿದಕ್ರಿಯೆ ತ್ರಿವಿಧಲಿಂಗಸಂಬಂಧದ ಪ್ರಕಾಶವು, ೩೬ ಲಿಂಗದ ಪ್ರಕಾಶವು, ೩೬ ಭಕ್ತಿ ಪ್ರಕಾಶವು, ಸರ್ವಾಂಗವನು ವೇಧಿಸಿ, ತನುತ್ರಯ, ಷಡಿಂದ್ರಿಯ, ೩೬ ತತ್ವಂಗಳನು ವ್ಯಾಪಿಸಿ, ಆ ಅಂಗಂಗಳೆಲ್ಲ ವಿಕಾಂಗ ವಾದ ಬಳಿಕ, ಆ ಪರಿಪೂರ್ಣಾಂಗವೇ ೨೧೬ ಅಂಗದಲ್ಲಿ, ಆ ಪರಿಪೂರ್ಣ ಲಿಂಗವೇ ೨೧೬ ಲಿಂಗದಲ್ಲಿ, ಆ ೨೧೬ ಅಂಗವೇ ೩೬ ಅಂಗದಲ್ಲಿ, ಆ ೨೧೬ ಲಿಂಗವೇ ೩೬ ಲಿಂಗದಲ್ಲಿ, ಆ ೩೬ ಅಂಗವೇ ಷಡ್ವಿಧಾಂಗದಲ್ಲಿ, ಆ ೩೬ ಲಿಂಗವೇ ಷಡ್ವಿಧಲಿಂಗ ದಲ್ಲಿ, ಆ ಷಡ್ವಿಧಾಂಗವೇ ತ್ರಿವಿಧಾಂಗದಲ್ಲಿ, ಆ ಷಡ್ವಿಧ ಲಿಂಗವೇ ತ್ರಿವಿಧಲಿಂಗದಲ್ಲಿ, ಆ ತ್ರಿವಿಧಾಂಗವೇ ಒಂದು ಅಂಗದಲ್ಲಿ, ಆ ತ್ರಿವಿಧ ಲಿಂಗವೇ ಒಂದು ಲಿಂಗದಲ್ಲಿ,

---

೧ + ಸಮರಸಭಕ್ತಿ(ಮೂ) ೨–೨ ಮಾರ್ಗ (ಮೂ) ೩–೩ ಅಂ. (ಮೂ).

ಕೂಡಿ, ಚಿತ್ತೇ ಅಂಗ, ಚಿದ್ಘನಲಿಂಗವೇ ಪ್ರಾಣಸ್ವರೂಪವಾದ ಮೇಲೆ, ಆ ಅಂಗ ಲಿಂಗೈಕ್ಯ. ಚಿದ್ಘನಲಿಂಗದಲ್ಲಿ ಏಕತ್ವನುಳ್ಕಂಥ ಶಿವೈಕ್ಯನು ನಿರ್ವಾಣವಾದ ಬಳಿಕ, ೩೬ ಲಿಂಗದ ಕಳೆಗೆ , ೩೬ ಭಕ್ತಿ ಪ್ರಕಾಶಕ್ಕೆ ನಿಲುಕಡೆಯಹ ಆ ಅಂಗ ಲಿಂಗೈಕ್ಯದಲ್ಲಿ, ಆ ನಿರ್ದೇಹ ಲಿಂಗದಲ್ಲಿ ಏಕತ್ವವನುಳ್ಕಂಥ, ಶಿವಶರಣನ ನಿಲವೆಂತೆಂದೊಡೆ, ಮುಂದೆ ಹೇಳಿಹೆನೆಂದು ಚನ್ನಬಸವೇಶ್ವರದೇವರು ನಿರೂಪಮಂ ಕೊಡುತ್ತ ಇದ್ದರು.

ಎರಡು ವಿಧದ ಭಕ್ತಿ ಜ್ಞಾನ ಮಾರ್ಗ ಕ್ರಿಯೆ ಮೀರಿದಕ್ರಿಯಾಸ್ಥಾನನಿಃಪತಿಯಾದ ನಿರ್ವಾಣಲಿಂಗ ಮೂಲವು. ನಿಜಮೋಕ್ಷಸ್ವರೂಪವಾದ ಮಹಾಲಿಂಗ ಮೊದಲು ಉನ್ಮನಿಸ್ಥಾನದಲ್ಲಿ ಉಲುಹುಮಂತ್ರ ಗೋಪ್ಯವಾಗಿ, ಮತ್ತಂ ಶಿವೋಹಂ ಬ್ರಹ್ಮೋಹಂ, ಪ್ರಣಮೋಹಂಮೆಂಬಂಥ ಮಂತ್ರಧ್ಯಾನವು ಗಂಭೀರವಾಗಿ, ಪ್ರಭಾಲಿಂಗದ ಬೆಳಗು ತೋರಿ, ಚಿದಂಗಲಿಂಗದಲ್ಲಿ ಏಕತ್ವವನುಳ್ಕಂಥ ಶಿವೈಕ್ಯನಲ್ಲಿ ಸಹಜಸಂಬಂಧಿಯಹ ಶಿವಶರಣನ ನಿಲವೆಂತೆಂದೊಡೆ :

ಆ ಮಾರ್ಗಕ್ರಿಯಾಂಗ ಭಕ್ತ, ಮಹೇಶ್ವರ, ಪ್ರಸಾದಿ, ಎಂಬ ಪದ್ಧತಿ ಕೃತ್ಯಾಂಗವು ; ಮೀರಿದ ಕ್ರಿಯಾಂಗವೆನಿಸುವ ಪ್ರಾಣಲಿಂಗಿ, ಶರಣ, ಐಕ್ಯರೆಂಬ ಅತಿಕ್ರಮಿಸಿದ ಪದ್ಧತಿ ಕೃತ್ಯಾಂಗವೆಂದು ಹೇಳಿಸುವ ; ಎರಡು ವಿಧದ ಭಕ್ತಿ–ಜ್ಞಾನಕ್ಕೆ ನಿಲುಕದಿಹ ನಿರ್ಭಾವಸ್ಥಾನದಲ್ಲಿ, ನಿರಾಶ್ರಯವಾದ, ಮಹಾಘನಲಿಂಗದ ಅಯನಂಗ ಲಿಂಗ ಮೂಲವು, ಚಿದಂಗಲಿಂಗದ ಮೊದಲು, ಪರಮಾನಂದ ಪ್ರಭೆಯ ಪರಾಶಕ್ತಿ ಪ್ರಣಮದಲ್ಲಿ ರಮಿಸುತ್ತಿರ್ದಂಥ, ಮಹಾಲಿಂಗಪ್ರಕಾಶದ ಅತೀಂದ್ರಿಯತ್ವವನ್ನೈದಿರುತ್ತ್[ಲಿ]ಹ ಘನಬ್ರಹ್ಮರಂಧ್ರವೆಂಬ, ಹೃಷೀಕತ್ವವನು ಆಶ್ರಯಿಸುತ್ತಿಹ ಹರ ಮಂತ್ರವು ; ಎಲ್ಲಕ್ಕೂ ತಾನಾಶ್ರಯವಾಗಿ ನಿರುಪಮಲಿಂಗದಲ್ಲಿ ಲೀಯವಾದ ಬಳಿಕ ಉಪಮಿಸಬಾರದ ಮಹಾಲಿಂಗದಲ್ಲಿ ಲೀಢವಾದ ಮೇಲೆ ಇಂದ್ರಿಯಂಗಳಿಗೆ ನಿಲುಕದ ಸ್ಥಾನದಲ್ಲಿರ್ದು ಚಿತ್ತೇ ಅಂಗ, ಚಿದ್ಘನಲಿಂಗವೇ ಪ್ರಾಣವಾಗಿರ್ದ ಪರಮಾನಂದಪ್ರಭೆಯು ಪ್ರಜ್ವಲಿಸುತ್ತಿರಲು ಆಚಾರಾದಿ ಮಹಾಲಿಂಗಾಂತ್ಯವಹ ಪಂಚಾಚಾರಸ್ವರೂಪವಾದ ಆಚಾರಲಿಂಗವೇ ಆದಿಯಾಗಿ, ವೇಧಾಸ್ವರೂಪವಾದ ಮಹಾಲಿಂಗವೇ ಕಡೆಯಾದಂಥ ಷಟ್‌ಸ್ಥಲಲಿಂಗ ಮೂಲವಹ ಪರಮಾನಂದವೆಂಬ ಕಿರಣಂಗಳನುಳ್ಳ, ಎಲ್ಲಕ್ಕೂ ತಾನಾಶ್ರಯವಾಗಿ, ನಿರಪಮಲಿಂಗದ ಪ್ರಭಾಕಿರಣವೇ ತಾನಾಗಿರ್ದನೆಂದು ಚನ್ನಬಸವೇಶ್ವರದೇವರು ನಿರೂಪಮಂ ಕೊಡುತ್ತಿಹರು.

ಮೂವತ್ತಾರು ಅಂಗಸ್ಥಲಗಳ ಮತ್ತು ಲಿಂಗಸ್ಥಲಗಳ ವಿಕಾಸವು

ಮೂವತ್ತಾರು ಸ್ಥಲಗಳಲ್ಲಿ ಹೇಗೆ ಪ್ರಗತಿಯು ಉಂಟಾಗುತ್ತ ಹೋಗುತ್ತ ದೆಂಬುದು ಈ ಸ್ಥಲಗಳಲ್ಲಿ ಹೇಳಲ್ಪಟ್ಟಿದೆ. ಮೊದಲು ಅಂಗ ಸ್ಥಲಗಳ ಪ್ರಗತಿಯೂ ಆ ಮೇಲೆ ಲಿಂಗಸ್ಥಲಗಳ ಪ್ರಗತಿಯೂ ಕೆಳಗಿನ ವಚನಗಳಲ್ಲಿ ಹೇಳಲ್ಪಟ್ಟಿವೆ. ಇವುಗಳಲ್ಲಿ ೩೬ ಅಂಗಸ್ಥಲಗಳ ಪ್ರಗತಿಯ ವ್ಯಾಖ್ಯೆಗಳು ನಮಗೆ ದೊರೆತಿರುವದಿಲ್ಲ, ಆದರೂ

ಅವುಗಳ ಹೆಸರುಗಳ ಮೇಲಿಂದ ಅವುಗಳ ಪ್ರಗತಿಯ ಸ್ವರೂಪವನ್ನು ನಾವು ಊಹಿಸ ಬಹುದಾಗಿದೆ. ಆದರೆ ೩೬ ಲಿಂಗಸ್ಥಲಗಳ ಪ್ರಗತಿಯ ವ್ಯಾಖ್ಯೆಗಳು ನಮಗೆ ದೊರೆತಿವೆ. ಅವುಗಳ ಮೇಲಿಂದ ಮನುಷ್ಯನಲ್ಲಿ ವಿಕಾಸವು ಹೇಗೆ ಉಂಟಾಗುತ್ತ ಹೋಗುತ್ತದೆಂಬುದನ್ನು ನಾವು ಅರಿಯಬಹುದಾಗಿದೆ.

ಅಂಗಸ್ಥಲಗಳ ವಿಕಾಸವು : ಅಂಗಸ್ಥಲಗಳಲ್ಲಿಯ ವಿಕಾಸವು ಆ ಅಂಗಸ್ಥಲಗಳಿಗೆ ಸಂಬಂಧಿಸಿದ ಲಿಂಗಗಳ ಹೆಸರುಗಳ ಮೂಲಕ ಹೇಳಲ್ಪಡುತ್ತದೆ. ಲಿಂಗಗಳಲ್ಲಿ ಆಚಾರ, ಗುರು, ಲಿಂಗ ಅಥವಾ ಶಿವ, ಚರ, ಪ್ರಸಾದ, ಮತ್ತು ಕಡೆಗೆ ಮಹತ್ ಎಂಬ ತರಗತಿಗಳು ಅನುಕ್ರಮವಾಗಿ ಇರುತ್ತವೆ. ಇವುಗಳ ವಿವರಣೆಗಳು ಹಿಂದೆಯೇ ಷಡ್ಲಿಂಗಗಳ ವಿವೇಚನೆಯಲ್ಲಿ ಬಂದಿವೆ.

ಮೊದಲನೆಯದಾದ ಭಕ್ತಸ್ಥಲದ ಪ್ರಗತಿಗಳು ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗವೆಂದು ವಿವರಿಸಲ್ಪಟ್ಟಿವೆ.

ಎರಡನೆಯದಾದ ಮಹೇಶ್ವರಸ್ಥಲದ ಮುಖ್ಯ ವೈಶಿಷ್ಟ್ಯವು ನಿಷ್ಠೆ ಇರುತ್ತದೆ. ಆದ್ದರಿಂದ ಈ ಸ್ಥಲದ ಪ್ರಗತಿಗಳು ಆಚಾರನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ , ಪ್ರಸಾದನಿಷ್ಠೆ , ಮತ್ತು ಮಹನ್ನಿಷ್ಠೆ ಎಂದು ಹೇಳಲ್ಪಟ್ಟಿವೆ.

ಮೂರನೆಯದಾದ ಪ್ರಸಾದಿಯ ಮುಖ್ಯ ವೈಶಿಷ್ಟ್ಯವು ಅವಧಾನಭಕ್ತಿ ಇರುತ್ತದೆ. ಆದ್ದರಿಂದ ಈ ಸ್ಥಲದ ಪ್ರಗತಿಗಳು ಆಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಚರಾವಧಾನಿ, ಪ್ರಸಾದಾವಧಾನಿ, ಮಹದಾವಧಾನಿ ಎಂದು ಹೇಳಲ್ಪಟ್ಟಿವೆ.

ನಾಲ್ಕನೆಯದಾದ ಪ್ರಾಣಲಿಂಗಿಸ್ಥಲದ ವೈಶಿಷ್ಟ್ಯವು ಅನುಭಾವಭಕ್ತಿ ಇರುತ್ತದೆ. ಈ ಸ್ಥಲದಲ್ಲಿ ಅಂತ್ಯಸ್ಥಿತಿಯನ್ನು ಹೊಂದಿದವನಿಗೆ ಮಹಾನುಭಾವಿ ಎಂಬ ಹೆಸರು ಇರುತ್ತದೆ. ಈ ಸ್ಥಿತಿಗೆ ಬರುವ ಪೂರ್ವದಲ್ಲಿ ಪ್ರಾಣಲಿಂಗಿಯು ಸಾಧ್ಯ, ವೇದ್ಯ ಭೇದ್ಯ, ಯೋಗ್ಯ, ಸನ್ನಿಹಿತ [ಮಹಾನುಭಾವಿಯೆಂಬ] ಆರು ಸ್ಥಲಗಳೊಳಗಿಂದ ಹಾಯ್ದು ಬರಬೇಕಾಗುವದು.

ಐದನೆಯದಾದ ಶರಣಸ್ಥಲದ ತರಗತಿಗಳಿಗೆ ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ, ಮನೋಮಗ್ನತೆ, [ಘನಸಾಮರಸ್ಯ] ಎಂಬ ಹೆಸರುಗಳಿವೆ. ಅವೆಲ್ಲವು ಶರಣನಲ್ಲಿಯ ಲಿಂಗವಿಕಾಸಸ್ಥಿತಿಯನ್ನು ಸೂಚಿಸುತ್ತವೆ.

ಕಡೆಯದಾದ ಐಕ್ಯಸ್ಥಲದ ವೈಶಿಷ್ಟ್ಯವು ತೃಪ್ತಿ ಇರುತ್ತದೆ. ಆದ್ದರಿಂದ ಇದರ ವಿಕಾಸ ಸ್ಥಿತಿಗಳಿಗೆ ಆಚಾರತೃಪ್ತಿ ಗೌರವತೃಪ್ತಿ ಲಿಂಗತೃಪ್ತಿ ಚರತೃಪ್ತಿ ಪ್ರಸಾದತೃಪ್ತಿ ಮತ್ತು ನಿರ್ಭಾವತೃಪ್ತಿ ಎಂಬ ಹೆಸರುಗಳಿರುತ್ತವೆ.

ಇವು ೩೬ ಅಂಗಸ್ಥಲಗಳ ಪ್ರಗತಿಯ ಹೆಸರುಗಳಿರುತ್ತವೆ.

ಲಿಂಗಸ್ಥಲಗಳ ವಿಕಾಸವು : ಆಚಾರಲಿಂಗದ ವಿಕಾಸದ ಸ್ವರೂಪು ಕ್ರಿಯೆ,

ಮಂತ್ರ, ನಿರೀಕ್ಷಣ, ಯಜನ, ಈಳನ, ವೇಧಾ ಎಂದು ಇರುತ್ತದೆ. ಆರಂಭದಲ್ಲಿ ಸತ್‌ಕ್ರಿಯೆಯಾಗಿಯೂ, ಆಮೇಲೆ ಮಂತ್ರರೂಪವಾಗಿಯೂ, ಆಮೇಲೆ ಅವಧಾನ ಕ್ಕೋಸ್ಕರ ನಿರೀಕ್ಷಣರೂಪವಾಗಿಯೂ, ಆಮೇಲೆ ಪೂಜಾಕ್ರಿಯಾರೂಪವಾಗಿಯೂ, ಆಮೇಲೆ ಪ್ರಾರ್ಥನಾರೂಪವಾಗಿಯೂ, ಕಡೆಗೆ ಜ್ಞಾನರೂಪವಾಗಿಯೂ ಪ್ರಕಟ ವಾಗುತ್ತ ಹೋಗುತ್ತವೆ.

ಗುರುಲಿಂಗವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆ, ಆಮೇಲೆ ಬೋಧಾ ದೀಕ್ಷೆ, ಪ್ರಸನ್ನದೀಕ್ಷೆ, ಆಮೇಲೆ ನಿರ್ವಾಣದೀಕ್ಷೆ ಎಂಬ ಹೆಸರುಗಳಿಂದ ವಿಕಾಸ ಹೊಂದುತ್ತ ಹೋಗುತ್ತದೆ.

ಶಿವಲಿಂಗವು ಮೊದಲು ಕರಸ್ಥಲ, ಆಮೇಲೆ ಕ್ರಮವಾಗಿ ನಯನಸ್ಥಲ, ಹೃದಯಸ್ಥಲ, ಮಂತ್ರಸ್ಥಲ, ತ್ರಿಕೂಟಸ್ಥಲ, ಲಯಸ್ಥಲ ಈ ಮೇರೆಗೆ ಅಲ್ಲಲ್ಲಿ ಪ್ರಕಟ ವಾಗುತ್ತ ಹೋಗುವದು.

ಚರಲಿಂಗವು ಸ್ವಯ, ಚರ, ಪರ, ಪರಿಣಾಮಿ, ನಿರುಪಾಧಿಕ, ಪರಿಪೂರ್ಣ ಎಂಬ ಆಯಾ ಸ್ಥಿತಿಗಳನ್ನು ಹೊಂದಿ ಕಡೆಗೆ ಪರಿಣಾಮಸ್ಥಿತಿಯನ್ನು ಹೊಂದುವದು.

ಪ್ರಸಾದಲಿಂಗವು ಇಂದ್ರಿಯಾನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾ ನಂದ, ತೂರ್ಯಾನಂದ ಎಂದು ಆನಂದದ ಸ್ಥಿತಿಗಳೊಳಗಿಂದ ಹಾಯ್ದು ಕಡೆಗೆ ಮಹದಾನಂದಸ್ಥಿತಿಗೆ ಬರುವದು.

ಮಹಾಲಿಂಗವು ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಭಾವಗಮ್ಯ, ಸರ್ವತತ್ವಾಶ್ರಯ ಎಂಬ ಸ್ಥಿತಿಗಳೊಳಗಿಂದ ಹಾಯ್ದು ಕಡೆಗೆ ಪರಿಪೂರ್ಣ ಪ್ರಕಾಶ ವನ್ನು ಹೊಂದುವದು. ಹೀಗೆ ೩೬ ಸ್ಥಲಗಳಲ್ಲಿ ಲಿಂಗವಿಕಾಸಸ್ಥಿತಿಯು ತನ್ನಲ್ಲಿ ತಲೆದೋರುತ್ತದೆ.

(೧) ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗವೆಂಬ ಭಕ್ತನಂಗವಾರು. ಆಚಾರನಿಷ್ಠೆ. ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ, ಮಹನ್ನಿಷ್ಠೆ ಎಂಬ ಮಹೇಶನಂಗವಾರು. ಆಚಾರಾವಧಾನಿ, ಗೌರವಾ ವಧಾನಿ, ಲಿಂಗಾವಧಾನಿ, ಚರಾವಧಾನಿ, ಪ್ರಸಾದಾವಧಾನಿ, ಮಹದಾವಧಾನಿ ಎಂಬ ಪ್ರಸಾದಿಯಂಗವಾರು. ಸಾಧ್ಯ ವೇದ್ಯ, ಭೇದ್ಯ ಭೋಗ್ಯ, ಯೋಗ್ಯ, ಸನ್ನಿಹಿತ, ಮಹಾನುಭಾವಿ ಎಂಬ ಪ್ರಾಣಲಿಂಗಿಯಂಗವಾರು. ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯವೆಂಬ ಶರಣನಂಗವಾರು. ಆಚಾರ ತೃಪ್ತಿ ಗೌರವತೃಪ್ತಿ ಲಿಂಗತೃಪ್ತಿ ಚರತೃಪ್ತಿ, ಪ್ರಸಾದತೃಪ್ತಿ ನಿರ್ಭಾವ ತೃಪ್ತಿ–ಎಂಬ ಐಕ್ಯನಂಗವಾರು.

ಇಂತಿದರಲ್ಲಿ ಅಂತರ್ಗತವಾದ ಲಿಂಗಸ್ಥಳ ಷಟ್‌ತ್ರಿಂಶವವಕ್ಕೆ ವಿವರ: ಕ್ರಿಯೆ, ಮಂತ್ರ, ನಿರೀಕ್ಷಣ, ಯಜನ, ಈಳನ, ವೇಧಾ ಎಂಬ ಆಚಾರಲಿಂಗಸ್ಥಳವಾರು.

ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆ ಬೋಧಾದೀಕ್ಷೆ, ಪ್ರಸನ್ನದೀಕ್ಷೆ, ನಿರ್ವಾಣ ದೀಕ್ಷೆ, ಎಂಬ ಗುರುಲಿಂಗಸ್ಥಳವಾರು. ಕರಸ್ಥಳ, ನಯನಸ್ಥಳ, ಹೃದಯಸ್ಥಳ, ಮಂತ್ರ ಸ್ಥಳ, ತ್ರಿಕೂಟಸ್ಥಳ, ಲಯಸ್ಥಳವೆಂಬ ಶಿವಲಿಂಗಸ್ಥಳವಾರು. ಸ್ವಯಂ, ಚರ, ಪರ, ಪರಿಣಾಮಿ, ನಿರುಪಾಧಿಕ, ಪರಿಪೂರ್ಣವೆಂಬ ಚರಲಿಂಗಸ್ಥಳವಾರು. ಇಂದ್ರಿಯಾ ನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾನಂದ, ತೂರ್ಯಾನಂದ, ಮಹದಾನಂದವೆಂಬ ಪ್ರಸಾದಲಿಂಗಸ್ಥಳವಾರು. ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಭಾವಗಮ್ಯ, ಸರ್ವತತ್ವಾಶ್ರಯ, ಪರಿಪೂರ್ಣಪ್ರಕಾಶವೆಂಬ ಮಹಾಲಿಂಗಸ್ಥಳವಾರು. ಇಂತಿವು ಸ್ಥಲ ತನು ಸಂಬಂಧವಾಗಿಹವೆಂದರಿವುದು. ಅಲೇಖನಾದ ಶೂನ್ಯಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

(೨) ಆಚಾರಲಿಂಗಸ್ಥಲ ಷಡ್ವಿಧ, ಗುರುಲಿಂಗಸ್ಥಲ ಷಡ್ವಿಧ, ಶಿವಲಿಂಗಸ್ಥಲ ಷಡ್ವಿಧ, ಜಂಗಮಲಿಂಗಸ್ಥಲ ಷಡ್ವಿಧ, ಪ್ರಸಾದಲಿಂಗಸ್ಥಲ ಷಡ್ವಿಧ, ಮಹಾಲಿಂಗಸ್ಥಲ ಷಡ್ವಿಧ, ಅಂತು ಲಿಂಗಸ್ಥಲವು ೩೬ ಪ್ರಕಾರವು.

ಆಚಾರಲಿಂಗ– ಪಂಚಾಚಾರಸ್ವರೂಪವಾದ ಆಚಾರಲಿಂಗ, ಗುರುಲಿಂಗ– ಮಂತ್ರಾತ್ಮಕಸ್ವರೂಪವಾದ ಗುರುಲಿಂಗ, ಶಿವಲಿಂಗ ನಿರೀಕ್ಷಣಸ್ವರೂಪವಾದ ಶಿವಲಿಂಗ, ಜಂಗಮಲಿಂಗ– ಯಜನಸ್ವರೂಪವಾದ ಜಂಗಮಲಿಂಗ, ಪ್ರಸಾದ ಲಿಂಗ, ಸೌತ್ಯಸ್ವರೂಪವಾದ ಪ್ರಸಾದಲಿಂಗ, ಮಹಾಲಿಂಗ–ವೇಧಾಸ್ವರೂಪವಾದ ಮಹಾಲಿಂಗವು. ಈ ಪ್ರಕಾರ ದೃಶ್ಯಾದೃಶ್ಯ ಭಾವಲಿಂಗಸ್ಥಲವಾರು, ಮಾರ್ಗಕ್ರಿಯಾ ತ್ರಿವಿಧಲಿಂಗಸ್ಥಲ, ಮೀರಿದಕ್ರಿಯಾತ್ರಿವಿಧಲಿಂಗಸ್ಥಲ, ಅಲ್ಲಿ ಆ ಮೀರಿದ ಕ್ರಿಯಾಸ್ಥಲ ದಲ್ಲಿ ಆಚಾರ ಲಿಂಗ ಷಡ್ವಿಧ.

ಮತ್ತಂ ಭಕ್ತನಿಗೆ ಆಚಾರಲಿಂಗವು. ಆಚಾರಲಿಂಗವೆಂದರೂ ಕ್ರಿಯಾಲಿಂಗ ವೆಂದರೂ ಒಂದೇ. ಆ ಕ್ರಿಯಾಲಿಂಗವೇ ಇಷ್ಟಲಿಂಗವು, ಆ ಇಷ್ಟಲಿಂಗವೇ ಪ್ರಾಣ ಲಿಂಗವು, ಆ ಪ್ರಾಣಲಿಂಗವೇ ಭಾವಲಿಂಗವು, ಆ ಭಾವಲಿಂಗವೇ ಮಹಾಲಿಂಗವು, ಆ ಮಹಾಲಿಂಗವೇ ನಿಃಕಲಲಿಂಗವು , ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟಲಿಂಗದ ಷಡ್ವಿಧಾಚರಣೆಯೇ ಆ ಲಿಂಗದ ಷಟ್‌ಸ್ಥಾನದಲ್ಲಿರ್ದ ಷಡ್ವಿಧಲಿಂಗ ಸ್ವರೂಪವು. ಅವಕ್ಕೆ ವಿವರ :

ಕ್ರಿಯೆ, ಲಿಂಗದ ಮೇಲೆ ಸಾಕಾರಸ್ವರೂಪಿನಿಂದ ತ್ರಿಕಾಲ ಪೂಜಾಕ್ರಿಯೆಗಳ ಕೈಕೊಂಡು ಒಪ್ಪುವಂತಹ ಇಷ್ಟಲಿಂಗವು. ಮಂತ್ರ, ಮನೋಮಧ್ಯದಲ್ಲಿ ನೆಲೆಗೊಂಡು ಮಂತ್ರಜ್ಞಾನ ಜಪಸೋತ್ರ ನಿರ್ಗುಣ ಪೂಜಾಕ್ರೀಗಳನು ಕೈಕೊಂಡು ಒಪ್ಪುವಂತಹ ಮಂತ್ರಸ್ವರೂಪವಾದ ಪ್ರಾಣಲಿಂಗವು. ನಿರೀಕ್ಷಣ, ಆತ್ಮಾಂಗದಲ್ಲಿ ನೆಲೆಗೊಂಡು ಮನೋರ್ಲಯ ನಿರಂಜನಭಕ್ತಿ ಪೂಜಾಕ್ರೀಗಳನ್ನು ಕೈಕೊಂಡು ಒಪ್ಪುವಂತಹ ಮಹಾಜ್ಞಾನ ನಿರೀಕ್ಷಣ ಸ್ವರೂಪವಾದ ಭಾವಲಿಂಗವು.

ಮತ್ತಂ , ಕ್ರಿಯೆ, ಸತ್ಕ್ರಿಯಾಸ್ವರೂಪವಾದಿಷ್ಟಲಿಂಗವೇ ಭಕ್ತಂಗಾಚಾರಲಿಂಗ, ಆ ಆಚಾರಲಿಂಗವೇ ಕ್ರಿಯಾಲಿಂಗ, ಆ ಕ್ರಿಯಾಲಿಂಗವೇ ಇಷ್ಟಲಿಂಗ. ಆ ಇಷ್ಟ ಲಿಂಗದ ಶಕ್ತಿಪೀಠದಲ್ಲಿರ್ದ ಆಚಾರಲಿಂಗದೊಳಗಣ ಆಚಾರಲಿಂಗವು. ಮಂತ್ರವು, ಮಂತ್ರಸ್ವರೂಪವಾದ ಪ್ರಾಣಲಿಂಗವೇ ಭಕ್ತನಿಗೆ ಗುರುಲಿಂಗವು. ಆ ಗುರುಲಿಂಗವೇ ಇಷ್ಟಲಿಂಗದ [1][ವರ್ತುಲ][1]ಲ್ಲಿರ್ದ ಆಚಾರಲಿಂಗದೊಳಗಣ ಗುರುಲಿಂಗವು. ನಿರೀಕ್ಷಣ, ಮಹಾಜ್ಞಾನ ನಿರೀಕ್ಷಣ ಸ್ವರೂಪವಾದ ಭಾವಲಿಂಗವೇ ಭಕ್ತನಿಗೆ ಶಿವಲಿಂಗವು. ಆ ಶಿವಲಿಂಗವೇ ಇಷ್ಟಲಿಂಗದ [2][ಕಟಿಯ][2]ಲ್ಲಿರ್ದ ಆಚಾರಲಿಂಗ ದೊಳಗಣ ಶಿವಲಿಂಗವು. ಯಜನ, ಜಂಗಮಲಿಂಗವೇ ಆ ಇಷ್ಟಲಿಂಗದ ಗೋಮುಖ ದಲ್ಲಿರ್ದ ಆಚಾರಲಿಂಗದೊಳಗಣ ಯಜನಸ್ವರೂಪವಾದ ಜಂಗಮಲಿಂಗವು. ಈಳನ, ಆ ಪ್ರಸಾದಲಿಂಗವೇ ಇಷ್ಟಲಿಂಗದ ನಾಳದಲ್ಲಿರ್ದ ಆಚಾರಲಿಂಗದೊಳಗಣ ಸೌತ್ಯಸ್ವರೂಪವಾದ ಪ್ರಸಾದಲಿಂಗವು. ವೇಧಾ, ಆ ಮಹಾಲಿಂಗವೇ ಆ ಇಷ್ಟ ಲಿಂಗದ [3][ಗೋಲಕದಲ್ಲಿರ್ದ][3] ಆಚಾರಲಿಂಗದೊಳಗಣ ವೇಧಾಸ್ವರೂಪವಾದ ಮಹಾಲಿಂಗವು.

ಮತ್ತಂ, ಕ್ರಿಯೆ, ಆ ಭಕ್ತನ ಆಧಾರಚಕ್ರದ ನಾಲ್ಕೆಸಳಕಂಜದಮಧ್ಯದಲ್ಲಿರ್ದ ಆಚಾರಲಿಂಗದೊಳಗಣ ಪಂಚಾಚಾರಸ್ವರೂಪವಾದ ಆಚಾರಲಿಂಗವು. ಮಂತ್ರ, ಆ ಭಕ್ತನ ಸ್ವಾಧಿಷ್ಠಾನಚಕ್ರದ ಆರೆಸಳಕಂಜದಲ್ಲಿರ್ದ ಆಚಾರಲಿಂಗದೊಳಗಣ ಮಂತ್ರ ಸ್ವರೂಪವಾದ ಗುರುಲಿಂಗವು. ನಿರೀಕ್ಷಣ, ಆ ಭಕ್ತನ ಮಣಿಪೂರಕಚಕ್ರದ ಹತ್ತೆಸಳ ಕಂಜದಲ್ಲಿರ್ದ ಆಚಾರಲಿಂಗದೊಳಗಣ ನಿರೀಕ್ಷಣಸ್ವರೂಪವಾದ ಶಿವಲಿಂಗವು. ಯಜನ, ಆ ಭಕ್ತನ ಅನಾಹತಚಕ್ರದ ಹನ್ನೆರಡೆಸಳಕಂಜದಲ್ಲಿರ್ದ ಆಚಾರಲಿಂಗ ದೊಳಗಣ ಯಜನಸ್ವರೂಪವಾದ ಜಂಗಮಲಿಂಗವು. ಈಳನ, ಆ ಭಕ್ತನ ವಿಶುದ್ಧಿ ಚಕ್ರದ ಹದಿನಾರೆಸಳಕಂಜದಲ್ಲಿರ್ದ ಆಚಾರಲಿಂಗದೊಳಗಣ ಸೌತ್ಯಸ್ವರೂಪವಾದ ಪ್ರಸಾದಲಿಂಗವು. ವೇಧಾ, ಆ ಭಕ್ತನ ಆಜ್ಞಾಚಕ್ರದ ಎರಡೆಸಳಕಂಜದಲ್ಲಿರ್ದ ಆಚಾರ ಲಿಂಗದೊಳಗಣ ವೇಧಾಸ್ವರೂಪವಾದ ಮಹಾಲಿಂಗವು.

ಮತ್ತಂ, ಕ್ರಿಯೆ, ಆ ಭಕ್ತನು ತನ್ನ ಇಷ್ಟಲಿಂಗಕ್ಕೆ ತ್ರಿಕಾಲ ಪೂಜಾಕ್ರಿಯೆಗಳ ತಪ್ಪದೇ ಮಾಡುವಂತಹದ್ದೇ ಅದೇ ಆಚಾರಲಿಂಗದೊಳಗಣ ಸತ್ಕ್ರಿಯಾಸ್ವರೂಪ ವಾದ ಆಚಾರಲಿಂಗವು. ಮಂತ್ರ, ಆ ಭಕ್ತನು ತನ್ನ ಇಷ್ಟಲಿಂಗದ ದ್ವ್ಯಾಭಿಧಾನ ವಾದ [5][ಷಡ][5] ಕ್ಷರಿ ಮಂತ್ರವನು ವಾಚಕ, ಉಪಾಸಿಕ, ಮಾನಸಿಕಂಗಳಲ್ಲಿ ಸ್ಮರಿಸು ವಂತಹದ್ದೇ ಆಚಾರಲಿಂಗದೊಳಗಣ ಗುರುಲಿಂಗವು. [6][ನಿರೀಕ್ಷಣ][6], ಆ ಭಕ್ತನು ತನ್ನ ಇಷ್ಟಲಿಂಗವನ್ನು [4][ಎವೆಹಳಚದೆ ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವಂತಹದ್ದೇ][4] ಆಚಾರಲಿಂಗದೊಳಗಣ ಶಿವಲಿಂಗವು. ಯಜನ, ಆ ಭಕ್ತನು ತನ್ನ ಇಷ್ಟಲಿಂಗಕ್ಕೆ

೧–೧ ಕಟಿಯ (ಮೂ) ೨–೨ ವರ್ತುಳದ (ಮೂ) ೩–೩ ಆಜ್ಯಪ್ರದಾಯಕದಲ್ಲಿರ್ದ (ಮೂ)
೪–೪ ಪಂಚಾ (ಮೂ) ೫–೫ ವೇಧಾ (ಮೂ) ೬–೬ ಧ್ಯಾನಿಸುವುದೇ (ಮೂ)

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು ಮಾಡುವಂತಹದ್ದೇ ಆಚಾರಲಿಂಗ ದೊಳಗಣ ಜಂಗಮಲಿಂಗವು. ಈಳನ, ಆ ಭಕ್ತನು ತನ್ನ ಇಷ್ಟಲಿಂಗಕ್ಕೆ ಬಾಣ ಮಯೂರ ಹಲಾಯುಧೋದ್ಭಟ್ಟ ಕಾಳಿದಾಸನ ಹಾಗೆ ಕಂದ, ವೃತ್ತ ಗದ್ಯ, ಪದ್ಯಾದಿ ಗಳಿಂದೆ ಸ್ತೋತ್ರ ಮಂತ್ರಾದಿಗಳನ್ನು ಮಾಡುವಂತಹದ್ದೇ ಆಚಾರಲಿಂಗ ದೊಳಗಣ ಪ್ರಸಾದಲಿಂಗವು. [1][ವೇಧಾ][1] ಆ ಭಕ್ತನು ತನ್ನ ಇಷ್ಟಲಿಂಗವನು [2][ಧ್ಯಾನಿಸುವಂತ ಹದ್ದೇ][2] ಆಚಾರಲಿಂಗದೊಳಗಣ ಮಹಾಲಿಂಗವು. ಇಂತು ಈ ಪ್ರಕಾರದ ದೆಸೆಯಿಂದೆ ಆಚಾರಲಿಂಗ ಷಡ್ವಿಧ.

ಇನ್ನು ಮುಂದೆ ಗುರುಲಿಂಗವಾರುಸ್ಥಲ, ಮಂತ್ರನಿಷ್ಠಾಸ್ವರೂಪವಾದ ಗುರು ಲಿಂಗವು ಷಟ್‌ಪ್ರಕಾರಲಿಂಗವು. ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟ ಲಿಂಗದ ಷಡ್ವಿಧಾಚಾರಣೆಯೇ ಆ ಲಿಂಗದ ಷಟ್‌ಸ್ಥಾನಲ್ಲಿರ್ದ ಷಡ್ವಿಧಲಿಂಗ ಸ್ವರೂಪವು. ಅದಕ್ಕೆ ವಿವರಃ ಕ್ರಿಯಾದೀಕ್ಷೆ, ನಾಲ್ಕು ದಿಕ್ಕಿನಲ್ಲಿ ನಾಲ್ಕಾಚಾರ್ಯರು ಸಹವಾಗಿ ಗಣಸಾಕ್ಷಿಯಾಗಿ ಪಂಚಕಲಶವ ಹೂಡಿ ಅಂಗದ ವರ್ತನೆಯ ನಷ್ಟಮಾಡಿ ಆಚಾರಾಂಗಸ್ವರೂಪವನೆಯ್ದಿಸಿ ಅಲ್ಲಿ ಇಷ್ಟಲಿಂಗದ ಕಳೆಯ ಪ್ರತಿಷ್ಠೆ ಮಾಡಿದಂತ ಹದ್ದೇ ಕ್ರಿಯಾದೀಕ್ಷೆ. ಆ ಸತ್ಕ್ರಿಯೋಪದೇಶಸ್ವರೂಪವಾದ ಇಷ್ಟಲಿಂಗವೇ ಗುರು ಲಿಂಗವು. ಆ ಗುರುಲಿಂಗವೇ ಆ ಮಹೇಶ್ವರಂಗೆ ಇಷ್ಟಲಿಂಗವಾಗಲು, ಆ ಇಷ್ಟದ ಶಕ್ತಿಪೀಠದಲ್ಲಿಹ ಗುರುಲಿಂಗದೊಳಗಣ ಆಚಾರಲಿಂಗವು. ಮಂತ್ರದೀಕ್ಷೆ: ಆ ಜ್ಞಾನ ಗುರುಸ್ವಾಮಿಯು ಅನಾಹತಕರ್ಣದ್ವಾರದಲ್ಲಿ ಪಂಚಾಕ್ಷರೀ ಮಂತ್ರವನ್ನುಪದೇಶಿಸಿ, ಪ್ರಾಣನ ಪ್ರಕೃತಿಯ ನಷ್ಟವಮಾಡಿ ಚಿತ್‌ಪ್ರಾಣಸ್ವರೂಪವನೆಯ್ದಿಸಿ ಪ್ರಾಣಲಿಂಗದ ಕಳೆಯ ಪ್ರತಿಷ್ಠೆಯಮಾಡಿಕೊಡುವಂತಹದ್ದೇ ಮಂತ್ರಾನುಗ್ರಹ. ಆ ಮಂತ್ರಾನು ಗ್ರಹಸ್ವರೂಪವಾದ ಪ್ರಾಣಲಿಂಗವು, ಆ ಪ್ರಾಣಲಿಂಗವೇ ಮಹೇಶ್ವರಂಗೆ ಗುರು ಲಿಂಗವಾಗಲು, ಆ ಗುರುಲಿಂಗವೇ ಇಷ್ಟಲಿಂಗದ [3][ವರ್ತುಳದ][3]ಲಿರ್ದ ಗುರುಲಿಂಗ ದೊಳಗಣ ಗುರುಲಿಂಗವು. ವೇಧಾದೀಕ್ಷೆ: ಶಿಷ್ಯಮಸ್ತಕ ಹಸ್ತವಿನ್ಯಸ್ತ ಸದ್ಗುರುವೇ ಎಂದು ಆ ಜ್ಞಾನಗುರುಮೂರ್ತಿಯು ಆ ಶಿಷ್ಯನ ಮಸ್ತಕದ ಮೇಲೆ ತನ್ನ ಹಸ್ತಕಮಲ ವನು ವಿನ್ಯಸ್ತವಮಾಡಿ ಆತ್ಮನ ವರ್ತನೆಯ ನಷ್ಟವಮಾಡಿ ಚಿದಾತ್ಮಸ್ವರೂಪವನೆಯ್ದಿಸಿ ಅಲ್ಲಿ ಭಾವಲಿಂಗದ ಕಳೆಯ ಪ್ರತಿಷ್ಠೆಮಾಡಲು ಅಂತಹದೇ ವೇಧಾದೀಕ್ಷೆ. ಆ ವೇಧಾ ಸ್ವರೂಪವಾದ ಭಾವಲಿಂಗವು. ಆ ಭಾವಲಿಂಗವೇ ಮಾಹೇಶ್ವರಂಗೆ ಶಿವಲಿಂಗವಾ ಗಲು, ಆ ಶಿವಲಿಂಗವೇ ಇಷ್ಟಲಿಂಗದ [4][ಕಟಿಯ][4] ಗುರುಲಿಂಗದೊಳಗಣ ಶಿವಲಿಂಗ ವು. ಬೋಧಾದೀಕ್ಷೆ: ತ್ರಿವಿಧ ಲಿಂಗಾನುಭಾವವನು ಓದಿಸುವಂತಹದ್ದೇ ಬೋಧಾನು ಗ್ರಹವು. ಅಂತಹದ್ದೇ ಇಷ್ಟಲಿಂಗ. ಆ ಇಷ್ಟಲಿಂಗದ ಗೋಮುಖದಲ್ಲಿರ್ದ ಗುರುಲಿಂ ಗದೊಳಗಣ ಜಂಗಮಲಿಂಗವು. ಪ್ರಸನ್ನದೀಕ್ಷೆ: ಪ್ರತ್ಯಕ್ಷ ನಿರ್ಮಲ ಸ್ವರೂಪವಾದ

೧–೧ ನಿರೀಕ್ಷಣ (ಮೂ) ೨–೨ ಎವೆ ಹಳಚದೆ ಅನಿಮಿಷ ದೃಷ್ಟಿಯಿಂದ ನಿರೀಕ್ಷಿಸುವಂತಹದ್ದೆ (ಮೂ)
೩–೩ ಕಟಿಯ (ಮೂ) ೪–೪ ವರ್ತುಳದ (ಮೂ)

ವಸ್ತುವೇ ನೀನೆಂದನುಗ್ರಹಿಸುವಂತಹದ್ದೇ ಪ್ರಸನ್ನದೀಕ್ಷೆ. ಅಂತಹದ್ದೇ ಇಷ್ಟಲಿಂಗ. ಆ ಇಷ್ಟಲಿಂಗದ ನಾಳದಲ್ಲಿರ್ದ ಗುರುಲಿಂಗದೊಳಗಣ ಪ್ರಸಾದಲಿಂಗವು. ನಿರ್ವಾಣ ದೀಕ್ಷೆ : ಮೋಕ್ಷಾಸ್ವರೂಪವಾದ ವಸ್ತುವೇ ತಾನೆಂದು ಅನುಗ್ರಹಿಸುವಂತಹದ್ದೇ ನಿರ್ವಾಣದೀಕ್ಷೆ. ಅಂತಹದ್ದೇ ಇಷ್ಟಲಿಂಗದ ೧[ಗೋಳಕ]೧ ಲಿರ್ದ ಗುರುಲಿಂಗ ದೊಳಗಣ ಮಹಾಲಿಂಗವು.

ಮತ್ತಂ, ಕ್ರಿಯಾದೀಕ್ಷೆ : ಆ ಮಹೇಶ್ವರನ ಆಧಾರಚಕ್ರದ ನಾಲ್ಕೆಸರಳಕಂಜ ಮಧ್ಯದಲ್ಲಿರ್ದ ಗುರುಲಿಂಗದೊಳಗಣ ಸತ್ಕ್ರಿಯಾನುಗ್ರಹಸ್ವರೂಪವಾದ ಆಚಾರ ಲಿಂಗವು. ಮಂತ್ರದೀಕ್ಷೆ : ಮಹೇಶ್ವರನ ಸ್ವಾಧಿಷ್ಠಾನಚಕ್ರದ ಆರೆಸಳಕಂಜ ಮಧ್ಯ ದಲ್ಲಿರ್ದ ಗುರುಲಿಂಗದೊಳಗಣ ಮಂತ್ರಾನುಗ್ರಹಸ್ವರೂಪವಾದ ಪ್ರಾಣಲಿಂಗವು. ವೇಧಾದೀಕ್ಷೆ : ಆ ಮಹೇಶ್ವರನ ಮಣಿಪೂರಕಚಕ್ರದ ಹತ್ತೆಸಳಕಂಜ ಮಧ್ಯದಲ್ಲಿರ್ದ ಗುರುಲಿಂಗಗೊಳಗಣ ವೇಧಾನುಗ್ರಹಸ್ವರೂಪಮಾದ ಶಿವಲಿಂಗವು. ಬೋಧಾ ದೀಕ್ಷೆ: ಆ ಮಹೇಶ್ವರನ ಅನಾಹತಚಕ್ರದ ಹನ್ನೆರಡೆಸಳಕಂಜದಲ್ಲಿರ್ದ ಗುರುಲಿಂಗ ದೊಳಗಣ ಬೋಧಾನುಗ್ರಹ ಸ್ವರೂಪಮಾದ ಜಂಗಮ ಲಿಂಗವು. ಪ್ರಸನ್ನದೀಕ್ಷೆ : ಆ ಮಾಹೇಶ್ವರನ ವಿಶುದ್ಧಿಚಕ್ರದ ಹದಿನಾರೆಸಳಕಂಜ ಮಧ್ಯದಲ್ಲಿರ್ದ ಗುರುಲಿಂಗ ದೊಳಗಣ ಪ್ರತ್ಯಕ್ಷಾನುಗ್ರಹಸ್ವರೂಪವಾದ ಪ್ರಸಾದ ಲಿಂಗವು. ನಿರ್ವಾಣದೀಕ್ಷೆ : ಆ ಮಾಹೇಶ್ವರನ ಆಜ್ಞಾಚಕ್ರದ ಎರಡೆಸಳಕಂಜಮಧ್ಯದಲ್ಲಿರ್ದ ಗುರುಲಿಂಗದೊಳಗಣ ಮೋಕ್ಷಾನುಗ್ರಹಸ್ವರೂಪವಾದ ಮಹಾಲಿಂಗವು.

ಮತ್ತಂ, ಕ್ರಿಯಾದೀಕ್ಷೆ : ಅಂಗಕ್ಕೆ ಲಿಂಗೋಪದೇಶವಿತ್ತಂತಹದ್ದೇ ಗುರುಲಿಂಗ ದೊಳಗಣ ಆಚಾರಲಿಂಗವು. ಮಂತ್ರದೀಕ್ಷೆ : ಮನಕ್ಕೆ ಮಂತ್ರೋಪದೇಶವಿತ್ತಂತ ಹದ್ದೇ ಗುರುಲಿಂಗದೊಳಗಣ ಗುರುಲಿಂಗವು. ವೇಧಾದೀಕ್ಷೆವ, ಮಸ್ತಕದ ಮೇಲೆ ಹಸ್ತವ ಮಡಗುವಂತಹದ್ದೇ ವೇಧಾದೀಕ್ಷೆ, ಅದೇ ಗುರುಲಿಂಗದೊಳಗಣ ಶಿವ ಲಿಂಗವು. ಬೋಧಾದೀಕ್ಷೆ : ಶಿವಾನುಭವವನು ಬೋಧಿಸುವಂತಹದ್ದೇ ಬೋಧಾ ದೀಕ್ಷೆ, ಅಂತಹದೇ ಗುರುಲಿಂಗದೊಳಗಣ ಜಂಗಮಲಿಂಗವು. ಪ್ರಸನ್ನದೀಕ್ಷೆ, ಪ್ರತ್ಯಕ್ಷಾನುಗ್ರಹಸ್ವರೂಪವಾದುದೇ ಪ್ರಸನ್ನದೀಕ್ಷೆ, ಅಂತಹದೇ ಗುರುಲಿಂಗದೊಳ ಗಣ ಪ್ರಸಾದಲಿಂಗವು. ನಿರ್ವಾಣದೀಕ್ಷೆ : ನಿಜಮೋಕ್ಷಾನುಗ್ರಹಸ್ವರೂಪವೇ ನೀವೆಂದನುಗ್ರಹಿಸುವಂತಹದ್ದೇ ನಿರ್ವಾಣದೀಕ್ಷೆ. ಅದೇ ಗುರುಲಿಂಗದೊಳಗಣ ಮಹಾಲಿಂಗವು. ಇಂತು ಈ ಪ್ರಕಾರದ ದೆಸೆಯಿಂದೆ ಗುರುಲಿಂಗಸ್ಥಲವಾರು, ದ್ವಿತೀಯ ಲಿಂಗಸ್ಥಲ ಹನ್ನೆರಡು.

ಇನ್ನು ಇಷ್ಟರ ಮೇಲೆ ಶಿವಲಿಂಗವಾರು, ಸ್ಥಲವಾರು ನಿರೀಕ್ಷಣಸ್ವರೂಪವಾದ ಶಿವಲಿಂಗಸ್ಥಲವು ಷಟ್‌ಪ್ರಕಾರವು. ಪ್ರಸಾದಿಗೆ ಶಿವಲಿಂಗವು. ಆ ಶಿವಲಿಂಗವೇ ಇಷ್ಟಲಿಂಗವು. ಆ ಇಷ್ಟಲಿಂಗವೇ ಪ್ರಾಣಲಿಂಗವು. ಆ ಪ್ರಾಣಲಿಂಗವೇ ಭಾವ

೧–೧ ಆಜ್ಯ ಪ್ರದಾಯಕದ (ಮೂ)

ಲಿಂಗವು. ಆ ಭಾವಲಿಂಗವೇ ಮಹಾಲಿಂಗವು. ಆ ಮಹಾಲಿಂಗವೇ ನಿಃಕಲಲಿಂಗವು. ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟಲಿಂಗದ ಷಡ್ವಿಧಾಚರಣೆಯೇ ಆ ಇಷ್ಟಲಿಂಗದ ಷಟ್‌ಸ್ಥಾನದಲ್ಲಿರ್ದ ಷಡ್ವಿಧಲಿಂಗಸ್ವರೂಪು. ಅವಕ್ಕೆ ವಿವರ :

ಕರಸ್ಥಲ : ಶ್ರೀಗುರುಸ್ವಾಮಿಯನುಗ್ರಹಿಸಿಕೊಟ್ಟ, ಪಾಣಿತಾಣದಲ್ಲಿರ್ದ ಇಷ್ಟ ಲಿಂಗವು. ೧ನಯನ ಸ್ಥಲ : ಮಹಾಜ್ಞಾನ ನಿರೀಕ್ಷಣ ನೇತ್ರತಾಣದಲ್ಲಿರ್ದ ಪ್ರಾಣ ಲಿಂಗವು. ಹೃದಯಸ್ಥಲ : ಹೃದಯ ತಾಣದಲ್ಲಿರ್ದ ಭಾವಲಿಂಗವು.೧ ಮಂತ್ರ ಸ್ಥಲ : ತ್ರಿವಿಧ ಲಿಂಗವನೊಳಕೊಂಡು ಮಂತ್ರತಾಣದಲ್ಲಿರ್ದ ಮಹಾಲಿಂಗವು. ತ್ರಿಕೂಟಸ್ಥಲ : ಅದೇ ತ್ರಿಕೂಟ ಸ್ಥಲದಲ್ಲಿರ್ಪುದು. ಲಯ ಸ್ಥಲ : ಅದೇ ವಿಶ್ರಾಂತಿ ಸ್ಥಲವು.

ಮತ್ತಂ, ಕರಸ್ಥಲ : ಆ ಇಷ್ಟಲಿಂಗವೇ ಪ್ರಸಾದಿಯೊಳಗಣಭಕ್ತ. ನಿರಹಂಕಾರ ಹಸ್ತದೊಳಗಣ ಸುಚಿತ್ತವೆಂಬ ಕರತಾಣದಲ್ಲಿರ್ದ ಶಿವಲಿಂಗದೊಳಗಣ ಆಚಾರ ಲಿಂಗವು. ೨[ನಯನಸ್ಥಲ]೨: ಮಂತ್ರಸ್ವರೂಪವಾದ ಪ್ರಾಣಲಿಂಗವೇ ಆ ಪ್ರಸಾದಿ ಯೊಳಗಣ ಮಹೇಶ್ವರನ ನಿರಹಂಕಾರ ಹಸ್ತದೊಳಗಣ ಸುಬುದ್ಧಿ ಎಂಬ ೩[ನೇತ್ರ]೩ ದಲ್ಲಿರ್ದ ಶಿವಲಿಂಗದೊಳಗಣ ಗುರುಲಿಂಗವು. ೪[ಹೃದಯಸ್ಥಲ]೪ : ಆ ಭಾವ ಲಿಂಗವೇ ಪ್ರಸಾದಿಯೊಳಗಣ ಪ್ರಸಾದಿಯ ನಿರಹಂಕಾರ ಹಸ್ತದೊಳಗಣ ನಿರಹಂಕಾರ ೫[ಹೃದಯದ]೫ ತಾಣದಲ್ಲಿರ್ದ ಶಿವಲಿಂಗದೊಳಗಣ ಶಿವಲಿಂಗವು. ೬[ಮಂತ್ರಸ್ಥಲ]೬. ತ್ರಿವಿಧಲಿಂಗವನೊಳಕೊಂಡು ತೋರುವ ಮಹಾಲಿಂಗವೇ ಪ್ರಸಾದಿಯೊಳಗಣ ಪ್ರಾಣಲಿಂಗಿಯ ನಿರಹಂಕಾರ ಹಸ್ತದೊಳಗಣ ಸುಮನವೆಂಬ ಕರತಾಣದಲ್ಲಿರ್ದ ಶಿವಲಿಂಗದೊಳಗಣ ಜಂಗಮಲಿಂಗವು. ತ್ರಿಕೂಟಸ್ಥಲ: ಆ ಮಹಾಲಿಂಗವೇ ಆ ಪ್ರಸಾದಿಯೊಳಗಣ ಶರಣನ ನಿರಹಂಕಾರ ಹಸ್ತದೊಳಗಣ ತಾನು, ತನ್ನರಿವು, ಶಿವತತ್ವವೆಂಬ ತ್ರಿಪುಟಿ, ಏಕವಾದ ಸುಜ್ಞಾನ ಕರತಾಣದಲ್ಲಿರ್ದ ಶಿವಲಿಂಗದೊಳಗಣ ಪ್ರಸಾದಲಿಂಗವು. ಲಯಸ್ಥಲ: ಆ ಮಹಾಲಿಂಗವೇ ಪ್ರಸಾದಿ ಯೊಳಗಣ ಐಕ್ಯನ ನಿರಹಂಕಾರ ಹಸ್ತದೊಳಗಣ ಸದ್ಭಾವವೆಂಬ ವಿಶ್ರಾಂತಿ ಕರತಾಣದಲ್ಲಿರ್ದ ಶಿವಲಿಂಗದೊಳಗಣ ಮೂಲಲಿಂಗವು.

ಮತ್ತಂ, ಕರಸ್ಥಲ : ಆ ಪ್ರಸಾದಿಯ ಕರಸ್ಥಲದಲ್ಲಿ ಸಂಬಂಧವಾದ ಇಷ್ಟಲಿಂಗವೇ ಶಿವಲಿಂಗದೊಳಗಣ ಆಚಾರಲಿಂಗವು. ನಯನಸ್ಥಲ: ಆ ಇಷ್ಟಲಿಂಗವನು ಎವೆ ಹಳಚದೆ ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವ ನೇತ್ರತಾಣವೇ ಆ ಪ್ರಸಾದಿಯ ಶಿವಲಿಂಗದೊಳಗಣ ಗುರುಲಿಂಗವು. ಹೃದಯಸ್ಥಲ: ಇಷ್ಟಲಿಂಗಕ್ಕಾಶ್ರಯವಾದ

೧–೧ ಹೃದಯಸ್ಥಲ : ಹೃದಯದಲ್ಲಿರ್ದ ಪ್ರಾಣಲಿಂಗವು. ನಯನಸ್ಥಲ : ಮಹಾಜ್ಞಾನ ನಿರೀಕ್ಷಣ ನೇತ್ರ ತಾಣದಲ್ಲಿರ್ದ ಭಾವಗಲಿಂಗವು (ಮೂ) ೨–೨ ಮಂತ್ರಸ್ಥಲ (ಮೂ)
೩–೩ ಮಂತ್ರ ಕರತಾಣ.(ಮೂ) ೪–೪ ನಯನಸ್ಥಲ (ಮೂ)
೫–೫ ನೇತ್ರದ (ಮೂ) ೬–೬ ಹೃದಯಸ್ಥಲ (ಮೂ)

ಹೃದಯತಾಣವೇ ಆ ಪ್ರಸಾದಿಯ ಶಿವಲಿಂಗದೊಳಗಣ ಶಿವಲಿಂಗವು. ಮಂತ್ರ ಸ್ಥಲ: ಆ ಇಷ್ಟಲಿಂಗದ ದ್ವಯಾಭಿಧಾನವಾದ ಪಂಚಾಕ್ಷರೀ ಮನತಾಣವೇ ಆ ಪ್ರಸಾದಿಯ ಶಿವಲಿಂಗದೊಳಗಣ ಜಂಗಮಲಿಂಗವು. ತ್ರಿಕೂಟಸ್ಥಲ : ಆ ಇಷ್ಟ ಲಿಂಗದ ತ್ರಿಪುಟಿ ಒಂದಾದ ಸಮ್ಯಜ್ಞಾನದ ತಾಣವೇ ಆ ಪ್ರಸಾದಿಯ ಶಿವಲಿಂಗ ದೊಳಗಣ ಪ್ರಸಾದಲಿಂಗವು. ಮತ್ತಂ, ಆ ಪ್ರಸಾದಿಯು ತನ್ನ ಇಷ್ಟಲಿಂಗಕ್ಕೆ ಮಾಡುವಾತ, ಕೈಕೊಳ್ಳುವಾತ, ನಡುವೆ ಸಲುವ ಪೂಜಾದ್ರವ್ಯವು ಒಂದೇ ಎಂದು ಆಚರಿಸುವಂತಹದ್ದೇ ಶಿವಲಿಂಗದೊಳಗಣ ಪ್ರಸಾದಲಿಂಗವು. ಲಯಸ್ಥಲ: ನೀಲ ಲೋಚನೆಯಮ್ಮನವರು ತಮ್ಮಂಗವನಡಗಿಸುವುದಕ್ಕೆ ಇಷ್ಟಲಿಂಗವೇ ಹೇಗೆ ಆಶ್ರಯ ವಾಗಿರ್ಪುದು ಹಾಗೆ ತಮ್ಮಂಗವನಡಗಿಸುವುದಕ್ಕೆ ಇಷ್ಟಲಿಂಗವೇ ವಿಶ್ರಾಂತಿಸ್ಥಳ ವೆಂದರಿವುದೇ ಪ್ರಸಾದಿಯ ಶಿವಲಿಂಗದೊಳಗಣ ಮಹಾಲಿಂಗವು. ಅದೇ ಇಷ್ಟ ಲಿಂಗ [ಆಜ್ಯ ಪ್ರದೋರಿಕೆಯಲ್ಲಿರ್ದ] ಶಿವಲಿಂಗದೊಳಗಣ ಮಹಾಲಿಂಗವು. ಇಂತು ಶಿವಲಿಂಗಸ್ಥಲವಾರು ಆಚಾರಲಿಂಗಸ್ಥಲ, ಗುರುಲಿಂಗಸ್ಥಲ, ಶಿವಲಿಂಗಸ್ಥಲ ಅಷ್ಟಾದಶವು.

ಇನ್ನು ಇಷ್ಟರ ಮೇಲೆ ಜ್ಞಾನಭಾವನಿರಾಶ್ರಯದತೊದಗಿದ ಮೀರಿದ ಕ್ರಿಯಾ ಅರಿವಿನಾಚರಣೆಯಲ್ಲಿ ಉಂಟಾದ ಚರಲಿಂಗಸ್ಥಲವಾರು. ಯಜನಸ್ವರೂಪವಾದ ಜಂಗಮಲಿಂಗಸ್ಥಲವು ಷಟ್‌ಪ್ರಕಾರವು. ಮತ್ತಂ ಪ್ರಾಣಲಿಂಗಿಗೆ ಜಂಗಮಲಿಂಗವು, ಆ ಜಂಗಮಲಿಂಗವೇ ಇಷ್ಟಲಿಂಗವು, ಆ ಇಷ್ಟಲಿಂಗವೇ ಪ್ರಾಣಲಿಂಗವು, ಆ ಪ್ರಾಣ ಲಿಂಗವೇ ಭಾವಲಿಂಗವು, ಆ ಭಾವಲಿಂಗವೇ ಮಹಾಲಿಂಗವು, ಆ ಮಹಾಲಿಂಗವೇ ನಿಃಕಲಲಿಂಗವು, ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟಲಿಂಗದ ಷಡ್ವಿಧಾಚರಣೆಯೇ ಆ ಲಿಂಗದ ಷಟ್‌ಸ್ಥಾನದಲ್ಲಿರ್ದ ಷಡ್ವಿಧಲಿಂಗಸ್ವರೂಪವು. ಅವಕ್ಕೆ ವಿವರ:

ಸ್ವಯ : ನದಿಯ ತೀರದಲ್ಲಿಯಾಗಲಿ, ಅರಣ್ಯಾಶ್ರಮದಲ್ಲಿಯಾಗಲಿ, ಪರ್ವತದ ತಪ್ಪಲಂಗಳಲ್ಲಿಯಾಗಲಿ, ಆಶ್ರಮವ ಮಾಡಿಕೊಂಡು, ಕಂದಮೂಲಾದಿ ಗಳ ಸೇವಿಸಿಕೊಂಡು, ಶಿವಾನುಭವವನು ಬೋಧಿಸುತ್ತ ಸ್ವಸ್ಥಾನದಲ್ಲಿರುವಾತನೇ ಸ್ವಯಜಂಗಮವು. ಚರ : ಅಂತರಂಗದ ಪಂಚಮುದ್ರೆ, ಬಹಿರಂಗದ ಪಂಚಮುದ್ರೆ, ಸಮೇತವಾಗಿ ಭಕ್ತರುಗಳ ಮನೆಗೆ ಹೋಗಿ, ಗುರುಧರ್ಮಭಿಕ್ಷಾ ಎಂದು ಅವರು ವಿಭೂತಿ ಮುಂತಾಗಿ ತಂದಂತಹ ಭಿಕ್ಷವನು ಜೋಳಿಗೆಯಲ್ಲಿ ನೀಡಿಸಿಕೊಂಡು, ನದೀಸ್ಥಾನಕ್ಕೆ ಹೋಗಿ, ಆ ಭಕ್ಷವನು ಆ ಜಂಗಮಕ್ಕೆ ನೀಡಿ, ಅವರ ವಾಕ್‌ಜ್ಞಾನಾನು ಭವ ಪ್ರಸಾದವನು ತೆಗೆದುಕೊಂಡು, ಅನುಭವಿಸುವಂತಹಾತನೇ ಚರಜಂಗಮವು. ಪರ: ಬೇಡದೆ ಬೋಳುಮಸ್ತಕ ತೋಳಿಗೆ ಕಟ್ಟಿದಾ ಧಾರಂಗಳಿಗೆ ಭಕ್ತಿಜ್ಞಾನ ವೈರಾಗ್ಯವಿಡಿದು ಆಚರಿಸುವಂತಹನೇ ಪರಜಂಗಮವು.

ಮತ್ತಂ, ಸ್ವಯ: ಅನ್ಯಾಧೀನವಿಲ್ಲದೆ ಸ್ವಯಾಧೀನವುಳ್ಳಾತನಾಗಿಹುದೇ ಸ್ವಯ

ಜಂಗಮವು. ಚರ: ಜಗತ್ಪಾವನ ಮೂರ್ತಿಯಾಗಿ ಆಚರಿಸುವಂತಹನೇ ಚರಜಂಗಮವು. ಪರ: ಪರಾಪರ ಮೋಕ್ಷಸ್ವರೂಪವಾಗಿಹುದೇ ಪರಜಂಗಮವು.

ಮತ್ತಂ, ಸ್ವಯ: ಶಿವತತ್ವಜ್ಞಾನಾನುಭವಿಯಾಗಿ, ವಿಕಾಂತಾಶ್ರಮಿಯಾಗೆಯೂ ನಿರ್ಗಮನಿಯಾಗಿಯೂ, ಶಿವಧ್ಯಾನಪರಾಯಣನಾಗಿಯೂ, ಇಹುದೇ ಸ್ವಯ ಜಂಗಮವು. ಅಂತಪ್ಪ ಸ್ವಯಜಂಗಮವೇ ಪ್ರಾಣಲಿಂಗಿಯೊಳಗಣ ಭಕ್ತನ ಸುಮನವೆಂಬ ಹಸ್ತದೊಳಗಣ ಸುಚಿತ್ತವೆಂಬ ಹಸ್ತದಲ್ಲಿ ಸಂಬಂಧವಾದ ಜಂಗಮಲಿಂಗದೊಳಗಣ ಆಚಾರಲಿಂಗವು. ಚರ: ಬಹಿರಂಗದ ಪಂಚಮುದ್ರೆ ಅಂತರಂಗದ ಪಂಚಮುದ್ರೆ ಸಂಪನ್ನನಾಗಿ ದೇಶಾಂತರಿಯಾಗಿ ಚರಿಸುವಂತಹನೀಗ ಚರಜಂಗಮವು. ಅಂತಪ್ಪ ಚರಜಂಗಮವೇ ಆ ಪ್ರಾಣಲಿಂಗಿಯೊಳಗಣ ಮಹೇಶ್ವರನ ಸುಮನವೆಂಬ ಹಸ್ತದೊಳಗಣ ಸುಬುದ್ಧಿ ಎಂಬ ಹಸ್ತದಲ್ಲಿ ಸಂಬಂಧವಾದ ಜಂಗಮಲಿಂಗದೊಳಗಣ ಗುರುಲಿಂಗವು. ಪರ: ಪರಾಪರ ನಿರ್ಗಮನಿ ಎನಿಸಿಯೂ ಸ್ಥಾವರಜಂಗಮಾತ್ಮಂಗಳಿಗೆ ಅಧಿಷ್ಠಾನಕರ್ತೃವೂ ಆಗಿ, ಸ[ದ]ಯಾದಿಯುಳ್ಳಾತನಾಗಿಹುದೇ ಪರಜಂಗಮವು. ಅಂತಪ್ಪ ಪರಜಂಗಮವೇ ಆ ಪ್ರಾಣಲಿಂಗಿಯೊಳಗಣ ಪ್ರಸಾದಿಯ ಸುಮನವೆಂಬ ಹಸ್ತದೊಳಗಣ ನಿರಹಂಕಾರ ಹಸ್ತದಲ್ಲಿ ಸಂಬಂಧವಾದ ಜಂಗಮಲಿಂಗದೊಳಗಣ ಶಿವಲಿಂಗವು. ಪರಿಣಾಮಿ: ಸುಖದುಃಖಗಳು ಶೂನ್ಯವಾಗಿ, ಮಹಾಜ್ಞಾನ ಪರಿಣಾಮ ಪರಿತೋಷ ವುಳ್ಳಾತನಾಗಿಹುದೇ ಪರಿಣಾಮಿಜಂಗಮವು. ಅಂತಪ್ಪ ಪರಿಣಾಮಿಜಂಗಮವೇ ಪ್ರಾಣಲಿಂಗಿಯೊಳಗಣ ಪ್ರಾಣಲಿಂಗಿಯ ಸುಮನವೆಂಬ ಹಸ್ತದೊಳಗಣ ಸಮಾನ ವೆಂಬಹಸ್ತದಲ್ಲಿ ಸಂಬಂಧವಾದ ಜಂಗಮಲಿಂಗದೊಳಗಣ ಜಂಗಮಲಿಂಗವು. ನಿರುಪಾಧಿಕ: ಅನ್ನಾಧೀನವಪ್ಪ ಯಾಚನಾ ವೃತ್ತಿಯನಳಿದು, ಯಥಾಲಾಭ ಸಂತುಷ್ಟ ನಾಗಿ, ತನ್ನಧೀನವಪ್ಪ ನಿರ್ಯಾಚನಾ ವೃತ್ತಿಯುಳ್ಳಾತನಾಗಿಹುದೇ ನಿರುಪಾಧಿಕ ಜಂಗಮವು. [ಅಂತಪ್ಪ ನಿರುಪಾಧಿಕ ಜಂಗಮವು ಶರಣನ ಪ್ರಸಾದಲಿಂಗದೊಳ ಗಣ ಸುಜ್ಞಾನವೆಂಬ ಹಸ್ತದಲ್ಲಿ ಸಂಬಂಧವಾದ ಜಂಗಮಲಿಂಗದೊಳಗಣ ಪ್ರಸಾದ ಲಿಂಗವು.] ಪರಿಪೂರ್ಣ ಸರ್ವಾಚಾರಸಂಪತ್ತಿನಾಚರಣೆಯಲ್ಲಿ, ವ್ಯಾಪಿಸಿದ ಅರಿವುಳ್ಳಾತನಾಗಿಹುದೇ ಐಕ್ಯನ ಪರಿಪೂರ್ಣಜಂಗಮವು. ಅಂತಪ್ಪ ಪರಿಪೂರ್ಣ ಜಂಗಮವೇ ೧[ಐಕ್ಯನೊಳಗಣ]೧ ಸದ್ಭಾವವೆಂಬ ಹಸ್ತದಲ್ಲಿ, ಸಂಬಂಧವಾದ ಜಂಗಮಲಿಂಗದೊಳಗಣ ಮಹಾಲಿಂಗವು.

ಮತ್ತಂ, ಸ್ವಯ: ವಸ್ತುವೇ ತಾನಾಗಿಹುದೇ ಜಂಗಮಲಿಂಗದೊಳಗಣ ಆಚಾರ ಲಿಂಗವು. ಚರ: ಸ್ವತಂತ್ರಪರಾಧೀನವಿಲ್ಲದೆ ಸ್ವಯಾಧೀನವುಳ್ಳಾತನಾಗಿಹುದೇ ಜಂಗಮಲಿಂಗದೊಳಗಣ ಗುರುಲಿಂಗವು. ಪರ: ಜಗತ್ಪಾವನಮೂರ್ತಿಯಾಗಿ ಆಚರಿಸುವಂತಹನೇ ಜಂಗಮಲಿಂಗದೊಳಗಣ ಶಿವಲಿಂಗವು. ಪರಿಣಾಮಿ: ವಿಷಯ,

---

೧–೧ ಪ್ರಾಣಲಿಂಗಿಯೊಳಗಣ ಐಕ್ಯನಪ್ಪ ಹಸ್ತದೊಳಗಣ (ಮೂ) ೨–೨ ಗುರು (ಮೂ)

ವಿಮುಖಮಾನಸ ಸಂತೋಷವುಳ್ಳಾತನಾಗಿಹುದೇ ಜಂಗಮಲಿಂಗದೊಳಗಣ ಜಂಗಮಲಿಂಗವು. ನಿರುಪಾಧಿಕ : ಜೀವಾಧೀನವಳಿದು, ಪರಮನಾಧೀನ ವುಳ್ಳಾತ ನಾಗಿಹುದೇ ಜಂಗಮಲಿಂಗದೊಳಗಣ ಪ್ರಸಾದಲಿಂಗವು. ಪರಿಪೂರ್ಣ : [ಮಹಾ] ಲಿಂಗದಲ್ಲಿ ನಿರುತಭರಿತನಾಗಿಹುದೇ ಜಂಗಮಲಿಂಗದೊಳಗಣ ಮಹಾಲಿಂಗವು. ಇಂತು ಚರಲಿಂಗಸ್ಥಲವಾರು.

ಇನ್ನು ಮುಂದೆ ಪ್ರಸಾದಲಿಂಗಸ್ಥಲವಾರು. ಈಳನ ಸ್ವರೂಪವಾದ ಪ್ರಸಾದ ಲಿಂಗಸ್ಥಲವು ಷಟ್‌ಪ್ರಕಾರವು. ಶರಣನಿಗೆ ಪ್ರಸಾದಲಿಂಗವು. ಆ ಪ್ರಸಾದ ಲಿಂಗವೇ ಇಷ್ಟಲಿಂಗವು. ಆ ಇಷ್ಟಲಿಂಗವೇ ಪ್ರಾಣಲಿಂಗವು. ಆ ಪ್ರಾಣಲಿಂಗವೇ ಭಾವಲಿಂಗವು. ಆ ಭಾವಲಿಂಗವೇ ಮಹಾಲಿಂಗವು.ಆ ಮಹಾಲಿಂಗವೇ ನಿಃಕಲ ಲಿಂಗವು. ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟಲಿಂಗದ ಷಡ್ವಿಧಾಚರ ಣೆಯೇ ಆ ಲಿಂಗದ ಷಟ್‌ಸ್ಥಾನದಲ್ಲಿರ್ದ ಷಡ್ವಿಧಲಿಂಗಸ್ವರೂಪವು. ಅವಕ್ಕೆ ವಿವರ:

ಇಂದ್ರಿಯಾನಂದ, ಹೃಷೀಕಾಹ್ಲಾದಸ್ವರೂಪವಾಗಿಹುದೇ ಪ್ರಸಾದಲಿಂಗ ದೊಳಗಣ [1][ಆಚಾರ]ಲಿಂಗವು. ಪ್ರಾಣಾನಂದ, ವೈಕೃತ ಹರಣಾನಂದ ಸ್ವರೂಪ ವಾಗಿಹುದೇ ಪ್ರಸಾದಲಿಂಗದೊಳಗಣ ಗುರುಲಿಂಗವು. ಜ್ಞಾನಾನಂದ, ಶಿವತತ್ವಾಗಮದಲ್ಲಿ ನಿಶ್ಚಿತವಾದ, ಆಸ್ತಿಕ್ಯಜ್ಞಾನದರಿವಿನಲ್ಲಿ ವಿನೋದಿಸುವಂತಹದೇ ಪ್ರಸಾದಲಿಂಗದೊಳಗಣ ಶಿವಲಿಂಗವು. ಭಾವಾನಂದ, ವಿಕಧ್ಯಾನ, ಸಮಚಿತ್ತದಲ್ಲಿ ಆನಂದಿಸುವುದೇ ಪ್ರಸಾದಲಿಂಗದೊಳಗಣ ಜಂಗಮಲಿಂಗವು. ತೂರ್ಯಾನಂದ, ಶರಣಸತಿ–ಲಿಂಗಪತಿತ್ವವನರಿದು, ಚರಿಸಬೇಕೆಂಬರ್ಥವನರಿದು, ವಿನೋದಿ ಸುವುದೇ ಪ್ರಸಾದಲಿಂಗದೊಳಗಣ ಪ್ರಸಾದಲಿಂಗವು. ಮಹದಾನಂದ, ಭಿನ್ನಕ್ರಿಯಾಗಮದಿಂ ಬಿಡುಗಡೆಯಾದ, ಮೋಕ್ಷಾಹ್ಲಾದಸ್ವರೂಪನಾಗಿಹುದೇ ಪ್ರಸಾದಲಿಂಗದೊಳಗಣ ಮಹಾಲಿಂಗವು.

ಮತ್ತಂ, ಇಂದ್ರಿಯಾನಂದ, ಶರಣನೊಳಗಣ ಭಕ್ತನ ಕ್ರಿಯಾಹೃಷೀಕಂಗಳಲ್ಲಿ ಆಹ್ಲಾದಿಸುವಂತಹದೇ ಪ್ರಸಾದಲಿಂಗದೊಳಗಣ ಆಚಾರಲಿಂಗವು. ಪ್ರಾಣಾನಂದ ಶರಣನೊಳಗಣ ಮಹೇಶ್ವರನ ಹರಣದಲ್ಲಿ ಆನಂದಿಸುವಂತಹದೇ ಪ್ರಸಾದ ಲಿಂಗದೊಳಗಣ ಗುರುಲಿಂಗವು. ಜ್ಞಾನಾನಂದ, ಶರಣನೊಳಗಣ ಪ್ರಸಾದಿಯ ಅರಿವಿನಲ್ಲಿ ಆಹ್ಲಾದಿಸುವಂತಹದೇ ಪ್ರಸಾದಲಿಂಗದೊಳಗಣ ಶಿವಲಿಂಗವು. ಭಾವಾ ನಂದ, ಶರಣನೊಳಗಣ ಪ್ರಾಣಲಿಂಗಿಯ ಶಿವಭಾವದಲ್ಲಿ ಆಹ್ಲಾದಿಸುವಂತಹದೇ ಪ್ರಸಾದಲಿಂಗದೊಳಗಣ ಜಂಗಮಲಿಂಗವು. ತೂರ್ಯಾನಂದ, ಶರಣನೊಳಗಣ ಶರಣನ ತ್ವರಿತಜ್ಞಾನದಲ್ಲಿ ಆಹ್ಲಾದಿಸುವಂತಹದೇ ಪ್ರಸಾದಲಿಂಗದೊಳಗಣ ಪ್ರಸಾದಲಿಂಗವು. ಮಹದಾನಂದ, ಶರಣನೊಳಗಣ ಐಕ್ಯನ ಮಹಾಜ್ಞಾನದಲ್ಲಿ

೨–೨ ಗುರು (ಮೂ)

ಆಹ್ಲಾದಿಸುವಂತಹದೇ ಪ್ರಸಾದಲಿಂಗದೊಳಗಣ ಮಹಾಲಿಂಗವು. ಇಂತು ಪ್ರಸಾದ ಲಿಂಗಸ್ಥಲ ಆರು, ದ್ವಿತೀಯ ಲಿಂಗಸ್ಥಲ ೧೨, ಎರಡು ಲಿಂಗಸ್ಥಲವು ದ್ವಾದಶವು.

ಇನ್ನು ಮಹಾಲಿಂಗಸ್ಥಲವಾರು. ವೇಧಾಸ್ವರೂಪವಾದ ಮಹಾಲಿಂಗಸ್ಥಲವು ಷಟ್‌ಪ್ರಕಾರವು. ಐಕ್ಯನಿಗೆ ಮಹಾಲಿಂಗವೇ ಇಷ್ಟಲಿಂಗವು. ಆ ಇಷ್ಟಲಿಂಗವೇ ಪ್ರಾಣಲಿಂಗವು. ಆ ಪ್ರಾಣಲಿಂಗವೇ ಮಹಾಲಿಂಗವು. ಮಹಾಲಿಂಗವೇ ನಿಃಕಲಲಿಂಗವು. ಆ ನಿಃಕಲಲಿಂಗವೇ ಇಷ್ಟಲಿಂಗವಾಗಲು, ಆ ಇಷ್ಟಲಿಂಗದ ಷಡ್ವಿದಾಚರಣೆಯೇ ಆ ಲಿಂಗದ ಷಟ್‌ಸ್ಥಾನದಲ್ಲಿರ್ದ ಷಡ್ವಿಧಲಿಂಗದ ಸ್ವರೂಪವು. ಅವಕ್ಕೆ ವಿವರ:

ಪಿಂಡಾಕಾಶ, ಪಿಂಡಕ್ಕೆ ಆಕಾಶ ಸ್ಥಾನವಾದಂತಹುದೇ ಮಹಾಲಿಂಗದೊಳಗಣ ಆಚಾರಲಿಂಗವು. ಬಿಂದ್ವಾಕಾಶ, ಮನಸ್ಸಿಗೆ ಅವಕಾಶಸ್ಥಾನವಾದಂತಹುದೇ ಮಹಾ ಲಿಂಗದೊಳಗಣ ಗುರುಲಿಂಗವು. ಮಹದಾಕಾಶ, ಆತ್ಮನಿಗೆ ಸ್ಥಾನವಾದತಂಹದೇ ಮಹಾಲಿಂಗದೊಳಗಣ ಶಿವಲಿಂಗವು. ಭಾವಗಮ್ಯ, ಶಿವಭಾವದಲ್ಲಿ ಗಮಿಸಿ ತೋರುವಂತಹದೇ ಮಹಾಲಿಂಗದೊಳಗಣ ಜಂಗಮಲಿಂಗವು. ಸರ್ವ ತತ್ವಾಶ್ರಯ, ಸಮಸ್ತಜ್ಞಾನತತ್ವಂಗಳಿಗೆ ಆಶ್ರಯವಾದಂತಹದೇ ಮಹಾಲಿಂಗದೊಳಗಣ ಪ್ರಸಾದ ಲಿಂಗವು. ಪರಿಪೂರ್ಣಪ್ರಕಾಶ, ವ್ಯಾಪಕ ಮಹಾಜ್ಞಾನಪ್ರಕಾಶ ಸ್ವರೂಪ ವಾದಂತಹುದೇ ಮಹಾಲಿಂಗದೊಳಗಣ ಮಹಾಲಿಂಗವು.

ಮತ್ತಂ, ಪಿಂಡಾಕಾಶ, ಐಕ್ಯನೊಳಗಣ ಭಕ್ತನ ಸಮರಸಭಕ್ತಿಯಲ್ಲಿ, ಶ್ರದ್ಧಾಭಕ್ತಿ, ಪಿಂಡಕ್ಕೆ ಅವಕಾಶ ಸ್ಥಾನವಾದಂತಹದೇ ಮಹಾಲಿಂಗದೊಳಗಣ ಆಚಾರಲಿಂಗವು. ಬಿಂದ್ವಾಕಾಶ, ಐಕ್ಯನೊಳಗಣ ಮಹೇಶ್ವರನ ಸಮರಸ ಭಕ್ತಿಯಲ್ಲಿಯ ಚಿದ್ಬಿಂದು, ನೈಷ್ಠಿಕಾಭಕ್ತಿಗೆ ಅವಕಾಶಸ್ಥಾನವಾದಂತಹದೇ ಮಹಾಲಿಂಗ ದೊಳಗಣ ಗುರುಲಿಂಗವು. ಮಹದಾಕಾಶ, ಐಕ್ಯನೊಳಗಣ ಪ್ರಸಾದಿಯ ಸಮರಸ ಭಕ್ತಿಯಲ್ಲಿಯ ನಿರಹಂಕಾರ ಪೂಜಾಭಕ್ತಿಗೆ, ಅವಕಾಶ ಸ್ಥಾನವಾದಂತಹದೇ ಮಹಾಲಿಂಗದೊಳಗಣ ಶಿವಲಿಂಗವು. ಭಾವಗಮ್ಯ, ಐಕ್ಯನೊಳಗಣ ಪ್ರಾಣಲಿಂಗಿಯ ಸಮರಸಭಕ್ತಿಯಲ್ಲಿಯ ಸಕಳಕಳಾನಂದಭಕ್ತಿಗೆ ಅವಕಾಶಸ್ಥಾನವಾದಂತಹದೇ ಮಹಾಲಿಂಗದೊಳಗಣ ಪ್ರಸಾದಲಿಂಗವು. ಪರಿಪೂರ್ಣ, ಐಕ್ಯನೊಳಗಣ ಐಕ್ಯನ ಸಮರಸಭಕ್ತಿಯಲ್ಲಿ ವ್ಯಾಪಕವಾಗಿ ಪ್ರಭಾವಿಸುವಂತಹದೇ ಮಹಾಲಿಂಗದೊಳಗಣ ಮಹಾಲಿಂಗವು. ಇಂತು ಮಹಾಲಿಂಗಸ್ಥಲವಾರು, ತೃತೀಯಲಿಂಗಸ್ಥಲ ೧೮, ಮೀರಿದಕ್ರಿಯಾ ತ್ರಿವಿಧಲಿಂಗಸ್ಥಲವು ಅಷ್ಟಾದಶವು.

ದೃಶ್ಯದಲೊದಗಿದ ಲಿಂಗ ಸ್ಥಲವು ೧೮, ಜ್ಞಾನಭಾವ ನಿರಾಶ್ರಯದಲೊದಗಿದ ಲಿಂಗಸ್ಥಲವು ೧೮, ದ್ವಿತೀಯ ಲಿಂಗಸ್ಥಲ ೩೬. ಇಂತು ಲಿಂಗಸ್ಥಲ ೩೬. ಇದರ ಮೇಲೆ ಪರಾತ್ಪರದಾಚೆಯಲ್ಲಿ ನಿಸ್ಸಂಗಲಿಂಗಸ್ಥಲ ೩೬. ೩೬ ಅಂಗದಲ್ಲಿ ೩೬, ಲಿಂಗ ಸಂಬಂಧವ

ಮಾಡಿಕೊಂಡು, ೩೬ ಭಕ್ತಿವಿಡಿದಾಚರಿಸಿ, ಆ ೩೬ ಲಿಂಗವನೊಳಕೊಂಡ ಬಚ್ಚಬರಿಯ ಲಿಂಗಸ್ಥಲ ೩೬.

ಸರ್ವಾಂಗಲಿಂಗಿಸ್ಥಲ

ಈ ಮೇರೆಗೆ ೩೬ ಅಂಗಸ್ಥಲಗಳಲ್ಲಿಯೂ ೩೬ ಲಿಂಗಸ್ಥಲಗಳಲ್ಲಿಯೂ ಮನುಷ್ಯನು ಪೂರ್ಣವಿಕಾಸವನ್ನು ಹೊಂದಿದ ಬಳಿಕ, ಸರ್ವಾಂಗಲಿಂಗಿಸ್ಥಲವು ಪ್ರಾಪ್ತವಾಗುವದು. ಆಮೇಲೆ ಅವನು ನಿರಾಮಯ ಷಟ್‌ಸ್ಥಲ, ಆಮೇಲೆ ನಿರಂಜನಾತೀತ ಷಟ್‌ಸ್ಥಲ ಎಂಬ ಷಟ್‌ಸ್ಥಲಸ್ಥಿತಿಗಳನ್ನು ಹೊಂದಿ ಮುಂದೆ ಸಂಪೂರ್ಣ ಪರಿಪೂರ್ಣತೆಯನ್ನು ಪಡೆಯುತ್ತಾನೆ.

ಸರ್ವಾಂಗಲಿಂಗಿಸ್ಥಲದ ಮಹತ್ವವು ವಚನಶಾಸ್ತ್ರದಲ್ಲಿ ಬಹಳವಿದೆ. ಇದು ಮೇಲಿಂದ ಮೇಲೆ ವಚನಕಾರರಿಂದ ವಿವರಿಸಲ್ಪಡುವದುಂಟು. ನಿರಾಮಯ ಷಟ್‌ಸ್ಥಲವು ಸೂಕ್ಷ್ಮಕ್ಕೆ ಸೂಕ್ಷ್ಮವಾಗಿರುತ್ತದೆ. ನಿರಂಜನಾತೀತ ಷಟ್‌ಸ್ಥಲವು ಅಖಂಡಿತವೂ ಅಗೋಚರವೂ ಅಪ್ರಮೇಯವೂ ಆಗಿ, ವಾಚಾಮಗೋಚರಕ್ಕತ್ತತ್ತವಾಗಿರುವದು. ಇವೆರಡೂ ಅತ್ಯಂತ ಸೂಕ್ಷ್ಮವಾದ ಷಟ್‌ಸ್ಥಲ ವಿಭೇದಗಳಾಗಿವೆ. ಇವು ಮನುಷ್ಯನಲ್ಲಿ ಆಗಬಹುದಾದ ಸಂಪೂರ್ಣ ವಿಕಾಸಭಾವವನ್ನು ತೋರಿಸುತ್ತವೆ. ಈ ಪ್ರಕಾರ ಮನುಷ್ಯನು ತನ್ನ ಪ್ರಗತಿಯನ್ನು ಹೊಂದಿದ ಬಳಿಕ ಅವನು [೧] [ಸಾಮರಸ್ಯ][೧]ಯನ್ನು ಹೊಂದಲು ಶಕ್ತನಾಗುವನು.

(೧) ಗುರುವಿಂದಾಯಿತ್ತೆನ್ನ ಗುರುಸಂಬಂಧ ಲಿಂಗದಿಂದಾಯಿತ್ತೆನ್ನ ಲಿಂಗಸಂಬಂಧ. ಜಂಗಮದಿಂದಾಯಿತ್ತೆನ್ನ ಜಂಗಮ ಸಂಬಂಧ. ಅದು ಹೇಗೆಂದೊಡೆ, ತನುವಿಕಾರವನಳಿದನಾಗಿ ಗುರುಸಂಬಂಧಿ. ಮನವಿಕಾರವನಳಿದನಾಗಿ ಲಿಂಗಸಂಬಂಧಿ. ಧನವಿಕಾರವನಳಿದನಾಗಿ ಜಂಗಮಸಂಬಂಧಿ. ಇಂತೀ ತ್ರಿವಿಧ ವಿಕಾರವನಳಿದನಾಗಿ, ಗುರುವಾಗಿ ಗುರುಭಕ್ತಿಸಂಪನ್ನ. ಲಿಂಗವಾಗಿ ಲಿಂಗಭಕ್ತಿಸಂಪನ್ನ. ಜಂಗಮವಾಗಿ ಜಂಗಮಭಕ್ತಿಸಂಪನ್ನ. ಅದು ಕಾರಣ, ಅರಿವೇ ಗುರು, ಅನುಭಾವವೇ ಲಿಂಗ, ಆನಂದವೇ ಜಂಗಮ.

ಅದು ಹೇಗೆಂದೊಡೆ: ಅರಿವೆಂಬ ಗುರುವಿನಿಂದ ಇಷ್ಟಲಿಂಗಸಾಹಿತ್ಯ, ಅನುಭಾವವೆಂಬ ಲಿಂಗದಿಂದ ಪ್ರಾಣಲಿಂಗಸಾಹಿತ್ಯ, ಆನಂದವೆಂಬ ಜಂಗಮದಿಂದ ತೃಪ್ತಿಲಿಂಗಸಾಹಿತ್ಯ.

ಅರಿವಿನಿಂದ ಅನುಭಾವ, ಅನುಭಾವದಿಂದ ಅರಿವು, ಅರಿವು ಅನುಭಾವ ಸಮರಸವಾದುದೇ ಆನಂದ. ಆನಂದಕ್ಕೆ ಅರಿ[ವು][೨] [ಅನುಭವವು] ಸಾಧನ.

ಇಷ್ಟದಿಂದ ಪ್ರಾಣ, ಪ್ರಾಣದಿಂದ ಇಷ್ಟ. ಇಷ್ಟ ಪ್ರಾಣಯೋಗಾದ್ವೈತವಾದುದೇ ತೃಪ್ತಿ. ತೃಪ್ತಿಗೆ ಇಷ್ಟಲಿಂಗದ ಅರಿವು ಸಾಧನ.

೧–೧ ನಿವೃತ್ತಿಯನ್ನು (ಮೂ) ೨–೨ ವೇ (ಮೂ)

ಅದು ಹೇಗೆಂದಡೆ: ಇಷ್ಟಲಿಂಗದ ವಿನಯ, ಮೋಹ, ಭಯ, ಭಕ್ತಿ ಕರುಣ, ಕಿಂಕುರ್ವಾಣ ಸುಮರಸವಾದುದೇ ಆಚಾರಲಿಂಗ. ಮತ್ತಾ ಇಷ್ಟಲಿಂಗದ ದೃಢ ಸ್ನೇಹ, ನಿಶ್ಚಯ, ನಿಶ್ಚಲ, ವಿಶ್ವಾಸ ಸಮರಸವಾದುದೇ ಗುರುಲಿಂಗ. ಮತ್ತಾ ಇಷ್ಟಲಿಂಗದ ಎಚ್ಚರಿಕೆ, ಸೌಜನ್ಯ, ಸುವಿವೇಕ, ಸಾವಧಾನ, ಸನ್ನಿಹಿತ, ಸಮರಸವಾದುದೇ [೧][ಶಿವ][೧]ಲಿಂಗ. ಮತ್ತಾ ಇಷ್ಟಲಿಂಗದ ಪರವಶತೆ ಗೂಢ, ಏಕಾಗ್ರಚಿತ್ತ ಉತ್ತರಯೋಗ ಸಮರಸವಾದುದೇ ಜಂಗಮಲಿಂಗ. ಮತ್ತಾ ಇಷ್ಟಲಿಂಗದ ಪರಿಪೂರ್ಣತ್ವ, ಸಚ್ಚಿದಾನಂದ ಸಮರಸವಾದುದೇ ಪ್ರಸಾದಲಿಂಗ. ಮತ್ತಾ ಇಷ್ಟಲಿಂಗದ ಮನೋರ್ಲಯ ಭಾವಾದ್ವೈತ, ಅನುಪಮಚಿತ್ತ ಆತ್ಮಿಕದೃಷ್ಟಿ, ಸುನಾದ ಭೋಜ್ಯ ಸಮರಸವಾದುದೇ ಮಹಾಲಿಂಗ.

ಇಂತಪ್ಪ ಮಹಾಲಿಂಗದಿಂದ ಪ್ರಸಾದಲಿಂಗ, ಪ್ರಸಾದಲಿಂಗದಿಂದ ಜಂಗಮಲಿಂಗ, ಜಂಗಮಲಿಂಗದಿಂದ ಶಿವಲಿಂಗ, ಶಿವಲಿಂಗದಿಂದ ಗುರುಲಿಂಗ, ಗುರುಲಿಂಗದಿಂದ ಆಚಾರಲಿಂಗ, ಆಚಾರಲಿಂಗದಲ್ಲಿ ಅನುಭಾವಿಯಾದೊಡೆ, ಇಪ್ಪತ್ತೈದು ಕರಣಂಗಳನರಿದು ಆಚರಿಸಬೇಕು. ಗುರುಲಿಂಗದಲ್ಲಿ ಅನುಭಾವಿಯಾದೊಡೆ, ಇಪ್ಪತ್ತು ಕರಣಂಗಳನರಿದು ಆಚರಿಸಬೇಕು. ಶಿವಲಿಂಗದಲ್ಲಿ ಅನುಭಾವಿಯಾದೊಡೆ ಹದಿನೈದು ಕರಣಂಗಳನರಿದು ಆಚರಿಸಬೇಕು. ಜಂಗಮಲಿಂಗದಲ್ಲಿ ಅನುಭಾವಿಯಾದೊಡೆ, ಹತ್ತು ಕರಣಂಗಳನರಿದು ಆಚರಿಸಬೇಕು. ಪ್ರಸಾದಲಿಂಗದಲ್ಲಿ ಅನುಭಾವಿಯಾಗದೊಡೆ, ಐದು ಕರಣಂಗಳನರಿದು ಆಚರಿಸಬೇಕು. ಮಹಾಲಿಂಗದಲ್ಲಿ ಅನುಭಾವಿಯಾದೊಡೆ, ಎಲ್ಲ ಕರಣಂಗಳನರಿದು ಆಚರಿಸಬೇಕು.

ಇಂತಪ್ಪ ಮಹಾಲಿಂಗವೇ ಇಷ್ಟಲಿಂಗವಾಗಿ, ಆ ಇಷ್ಟಲಿಂಗದ ಕಠಿಣತೆಗಳು ಆರು ಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನ ದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಆಚಾರಲಿಂಗಭೋಗಿ. ಮತ್ತಾ ಇಷ್ಟಲಿಂಗದ ರಸಗಳಾರು ಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಗುರುಲಿಂಗಭೋಗಿ. ಮತ್ತಾ ಇಷ್ಟಲಿಂಗದ ಉಷ್ಣಂಗಳಾರು ಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನದ ದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಶಿವಲಿಂಗಭೋಗಿ, ಮತ್ತಾ ಇಷ್ಟಲಿಂಗದ ಚಲನೆಗಳಾರುಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನ ದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಜಂಗಮಲಿಂಗಭೋಗಿ. ಮತ್ತಾ ಇಷ್ಟಲಿಂಗದ ಶಬ್ದಂಗಳಾರುಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನ ದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಪ್ರಸಾದಲಿಂಗಭೋಗಿ. ಮತ್ತಾ ಇಷ್ಟಲಿಂಗದ ನಿರ್ಭಾವಂಗಳಾರು ಮುಖಂಗಳಾಗಿ, ಆ ಮುಖಂಗಳ ತತ್‌ಸ್ಥಾನ ದ್ರವ್ಯಂಗಳನರಿದು ಅರ್ಪಿಸಿಕೊಳ್ಳಬಲ್ಲಡೆ ಮಹಾಲಿಂಗಭೋಗಿ.

ಇಂತಪ್ಪ ಇಷ್ಟಲಿಂಗವೇ ಮಹಾಲಿಂಗವಾಗಿ, ಮಹಾಲಿಂಗವೇ ಇಷ್ಟಲಿಂಗ

೧–೧ ಪ್ರಸಾದ (ಮೂ)

ವಾಗಿ, ಆ ಇಷ್ಟಲಿಂಗದ ಸದ್ಯೋಜಾತಮುಖವಪ್ಪ ಪ್ರಾಣಂಗಳಾರು ದ್ರವ್ಯಂಗಳಲ್ಲಿ ಷಟ್‌ತ್ರಿಂಶಲಿಂಗವದಾಗಿಯಾಗಿ, ಮತ್ತಾ ಇಷ್ಟಲಿಂಗದ ವಾಮದೇವಮುಖವಪ್ಪ ಜಿಹ್ವೆಗಳಾರು ದ್ರವ್ಯಂಗಳಲ್ಲಿ ಷಟ್‌ತ್ರಿಂಶಲಿಂಗವದಾಗಿಯಾಗಿ, ಮತ್ತಾ ಇಷ್ಟಲಿಂಗದ ಅಘೋರಮುಖವಪ್ಪ ನೇತ್ರಂಗಳಾರು ದ್ರವ್ಯಂಗಳಲ್ಲಿ ಷಟ್‌ತ್ರಿಂಶಲಿಂಗವದಾಗಿಯಾಗಿ, ಮತ್ತಾ ಇಷ್ಟಲಿಂಗದ ತತ್ಪುರುಷಮುಖವಪ್ಪ ಲಿಂಗಂಗಳಾರು ದ್ರವ್ಯಂಗಳಲ್ಲಿ ಷಟ್‌ತ್ರಿಂಶಲಿಂಗವದಾಗಿಯಾಗಿ, ಮತ್ತಾ ಇಷ್ಟಲಿಂಗದ ಗೋಪ್ಯಮುಖವಪ್ಪ ಹೃದಯಂಗಳಾರು ದ್ರವ್ಯಂಗಳಲ್ಲಿ ಷಟ್‌ತ್ರಿಂಶಲಿಂಗವದಾಗಿಯಾಗಿ, ಇಂತಪ್ಪ ತೃಪ್ತಿಪದಾರ್ಥಗಳಿಂದ ಶಬ್ದಪದಾರ್ಥಂಗಳು, ಶಬ್ದಪದಾರ್ಥಗಳಿಂದ ಸ್ಪರ್ಶ ಪದಾರ್ಥಂಗಳು, ಸ್ಪರ್ಶಪದಾರ್ಥಂಗಳಿಂದ ರೂಪುಪದಾರ್ಥಂಗಳು, ರೂಪು ಪದಾರ್ಥಂಗಳಿಂದ ರುಚಿಪದಾರ್ಥಂಗಳು, ರುಚಿಪದಾರ್ಥಂಗಳಿಂದ ಗಂಧ ಪದಾರ್ಥಂಗಳು. ಗಂಧಪದಾರ್ಥಂಗಳನಾರು ಸೋಂಕುವಲ್ಲಿ ಅಷ್ಟಾದಶಲಿಂಗ ಶೇಷ ಭುಕ್ತನಾಗಿ, ರುಚಿಪದಾರ್ಥಂಗಳನಾರು ರುಚಿಸುವಲ್ಲಿ ಅಷ್ಟಾದಶಲಿಂಗ ಶೇಷ ಭುಕ್ತನಾಗಿ, ರೂಪುಪದಾರ್ಥಂಗಳನಾರು ನಿರೀಕ್ಷಿಸುವಲ್ಲಿ ಅಷ್ಟಾದಶಲಿಂಗ ಶೇಷ ಭುಕ್ತನಾಗಿ, ಸ್ಪರ್ಶನಪದಾರ್ಥಂಗಳನಾರು ೧[ಸ್ಪರ್ಶಿಸು]೧ವಲ್ಲಿ ಅಷ್ಟಾದಶಲಿಂಗ ಶೇಷಭುಕ್ತನಾಗಿ, ಶಬ್ದ ಪದಾರ್ಥಂಗಳನಾರು ಲಾಲಿಸುವಲ್ಲಿ ಅಷ್ಟಾದಶಲಿಂಗ ಶೇಷ ಭುಕ್ತನಾಗಿ, ತೃಪ್ತಿ ಪದಾರ್ಥಂಗಳನಾರು ಪರಿಣಾಮಿಸುವಲ್ಲಿ ಅಷ್ಟಾದಶಲಿಂಗ ಶೇಷ ಭುಕ್ತನಾಗಿ ಇಂತೀ ಅರ್ಪಿತ, ಪ್ರಸಾದ, ಸಮಾಧಾನ, ಸ್ಥಲ, ಕುಳ, ಅನುಭಾವ, ಆಚರಣೆ ಎಲ್ಲವನು ಇಷ್ಟಲಿಂಗದಲ್ಲಿಯೇ ಕಂಡು ಸುಖಿಸುತಿರ್ಪ ಮಹಾಮಹಿಮ ನನೇನೆಂದುಪಮಿಸುವೆನಯ್ಯ ? ಇಂತಪ್ಪ ಮಹಾಘನವನೊಳಕೊಂಡಿರ್ಪ ಇಷ್ಟಬ್ರಹ್ಮವನೇನೆಂದುಪಮಿಸುವೆನಯ್ಯ ?

ಫಲ, ಪತ್ರ, ಕುಸುಮ, ರಸ, ಗಂಧ, ಖಾರ, ಒಗರು, ಹುಳಿ, ಮಧುರವೆಲ್ಲಕೆ ಜಲ ಒಂದೇ ಹಲವು ತೆರನಾದಂತೆ, ಮಸೆದಲಗು ಶಿರ ಮೋಹಿಸುವಂತೆ, ರಸ ಗುಟಿಕೆಯೊಂದೇ ಮೊನೆ ಮೊನೆಗೆ ಬಂದಾನುವಂತೆ, ಬಂಗಾರ ಒಂದೇ ಹಲವು ಆಭರಣವಾದಂತೆ, ಹತ್ತೆಂಟು ಬಾಯ ಹುತ್ತಿನೊಳಗೆ ಸರ್ಪನೊಂದೇ ತಲೆದೋರುವಂತೆ, ಹಲವು ಕರಣಂಗಳ ಕೊನೆಯಮೊನೆಯಮೇಲೆ ತೊಳಗಿ ಬೆಳಗುವ ಪರಂಜ್ಯೋತಿರ್ಲಿಂಗವು ಅನುಪಮ, ಅದ್ವಯ, ಅವಿರಳ, ಅಪ್ರಮೇಯ, ಚಿನ್ಮಯ, ನಿರಾವರಣ, ನಿರುಪಾಧಿ, ನಿರ್ಗುಣ, ವಾಙ್ಮನಾತೀತ, ನಿರ್ಭೇದ್ಯ ಕೂಡಲ ಚನ್ನ ಸಂಗಮದೇವಯ್ಯ ನಿಮ್ಮ ಶರಣ ಸರ್ವಾಂಗಲಿಂಗಿ.

೧೯೬

(೨) *ಶರಣನ ಸರ್ವಾಂಗವೆಲ್ಲವೂ ಲಿಂಗವಾದ ಕ್ರಮವೆಂತೆಂದೊಡೆ:

೧–೧ ನಿರೀಕ್ಷಿಸು (ಮೂ)

* ಈ ವಚನ 'ಎನ್ನ ಸರ್ವಾಂಗವೆಲ್ಲವೂ ಲಿಂಗವಾದ ಪರಿಕ್ರಮವೆಂತೆಂದಡೆ' ಎಂದು ಆರಂಭವಾಗುತ್ತದೆ. (ಸಂ)

ಶ್ರೀಗುರುನಾಥನುಪದೇಶಿಸಿದ ಇಷ್ಟಲಿಂಗವೇ ತನ್ನ ಸರ್ವಾಂಗದಲ್ಲಿ ಭಿನ್ನ ನಾಮಂಗಳಿಂದ ಪ್ರಕಾಶಿಸುತ್ತಿಹುದು. ಅದು ಹೇಗೆಂದೊಡೆ :

ಸ್ಥೂಲಾಂಗದಲ್ಲಿ ಇಷ್ಟಲಿಂಗವೆಂದು, ಸೂಕ್ಷಾಂಗದಲ್ಲಿ ಪ್ರಾಣಲಿಂಗವೆಂದು, ಕಾರಣಾಂಗದಲ್ಲಿ ಭಾವಲಿಂಗವೆಂದು, ತ್ರೈಭೇದವಾಗಿಹುದು. ಅಂತು ಅಂಗವ ಕುರಿತು ಮೂರು ತೆರನಾಗಿಹುದು.

ಇನ್ನು ಇಂದ್ರಿಯಂಗಳ ಕುರಿತು ಆರುತೆರನಾಗಿಹುದು. ಅದು ಹೇಗೆಂದೊಡೆ: ಹೃದಯದಲ್ಲಿ ಮಹಾಲಿಂಗವೆಂದು, ಶ್ರೋತ್ರದಲ್ಲಿ ಪ್ರಸಾದಲಿಂಗವೆಂದು, ತ್ವಕ್ಕಿನಲ್ಲಿ ಜಂಗಮಲಿಂಗವೆಂದು, ನೇತ್ರದಲ್ಲಿ ಶಿವಲಿಂಗವೆಂದು, ಜಿಹ್ವೆಯಲ್ಲಿ ಗುರುಲಿಂಗವೆಂದು, ಘ್ರಾಣದಲ್ಲಿ ಆಚಾರಲಿಂಗವೆಂದು ಷಡಿಂದ್ರಿಯಂಗಳಲ್ಲಿ ಷಡ್ಲಿಂಗವಾಗಿ ತೋರುತ್ತಿಹುದು.

ಈ ಮರ್ಯಾದೆಯಲ್ಲಿ [ಜ್ಞಾನ] ಕರ್ಮೇಂದ್ರಿಯಂಗಳಲ್ಲಿ ಲಿಂಗವೇ ಪ್ರಕಾಶಿಸುತ್ತಿಹುದು. ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳಲ್ಲಿ ಭೇದವಿಲ್ಲ. ಅದು ಹೇಗೆಂದೊಡೆ :

ಶ್ರೋತ್ರಕ್ಕೆ ವಾಕ್ಕಿಗೆ ಭೇದವಿಲ್ಲ. ಶಬ್ದಕ್ಕೆ ವಚನಕ್ಕೆ ಭೇದವಿಲ್ಲ. ತ್ವಕ್ಕಿಂಗೆ ಪಾಣಿಗೆ ಭೇದವಿಲ್ಲ. ಸ್ಪರ್ಶನ ಅವಧಾನಕ್ಕೆ ಭೇದವಿಲ್ಲ. ನೇತ್ರಕ್ಕೆ ಪಾದಕ್ಕೆ ಭೇದವಿಲ್ಲ. ರೂಪಿಂಗೆ ಗಮನಕ್ಕೆ ಭೇದವಿಲ್ಲ. ಜಿಹ್ವೆಗೆ ಗುಹ್ಯಕ್ಕೆ ಭೇದವಿಲ್ಲ. ರಸಕ್ಕೆ ಆನಂದಕ್ಕೆ ಭೇದವಿಲ್ಲ. ಘ್ರಾಣಕ್ಕೆ ಗುದಕ್ಕೆ ಭೇದವಿಲ್ಲ. ಗಂಧಕ್ಕೆ ವಿಸರ್ಜನಕ್ಕೆ ಭೇದವಿಲ್ಲ.

ಇನ್ನು ಶ್ರೋತ್ರವೆಂಬ ಜ್ಞಾನೇಂದ್ರಿಯಕ್ಕೂ ವಾಕ್ಕೆಂಬ ಕರ್ಮೇಂದ್ರಿಯಕ್ಕೂ ಶಬ್ದ ವಿಷಯ, ಮೂಲಭೂತವಾಕಾಶ, ಈಶಾನ್ಯಮೂರ್ತಿಯೇ ಅಧಿದೇವತೆ. ತ್ವಕ್ಕೆಂಬ ಜ್ಞಾನೇಂದ್ರಿಯಕ್ಕೂ ಪಾಣಿ ಎಂಬ ಕರ್ಮೇಂದ್ರಿಯಕ್ಕೂ,ಸ್ಪರ್ಶನ ವಿಷಯ, ಮೂಲಭೂತವಾಯು, ತತ್ಪುರುಷಮೂರ್ತಿಯೇ ಅಧಿದೇವತೆ, ನೇತ್ರವೆಂಬ ಜ್ಞಾನೇಂದ್ರಿಯಕ್ಕೂ, ಪಾದವೆಂಬ ಕರ್ಮೇಂದ್ರಿಯಕ್ಕೂ, ರೂಪು ವಿಷಯ, ಮೂಲಭೂತ ಅಗ್ನಿ, ಅಘೋರ ಮೂರ್ತಿಯೇ ಅಧಿದೇವತೆ. ಜಿಹ್ವೆ ಎಂಬ ಜ್ಞಾನೇಂದ್ರಿಯಕ್ಕೂ ಗುಹ್ಯವೆಂಬ ಕರ್ಮೇಂದ್ರಿಯಕ್ಕೂ, ರಸ ವಿಷಯ, ಮೂಲಭೂತ ಅಪ್ಪು, ವಾಮದೇವಮೂರ್ತಿಯೇ ಅಧಿದೇವತೆ. ಘ್ರಾಣವೆಂಬ ಜ್ಞಾನೇಂದ್ರಿಯಕ್ಕೂ, ಪಾಯುವೆಂಬ ಕರ್ಮೇಂದ್ರಿಯಕ್ಕೂ, ಗಂಧ ವಿಷಯ, ಪೃಥ್ವಿ ಮೂಲಭೂತ ಸದ್ಯೋಜಾತಮೂರ್ತಿಯೇ ಅಧಿದೇವತೆ. ಇಂತೀ ಜ್ಞಾನೇಂದ್ರಿಯ ಕರ್ಮೇಂದ್ರಿಯಂಗಳಿಗೆ, ಹೃದಯವೇ ಸ್ಥಾನವಾದ ಕಾರಣ ಹೃದಯಾಕಾಶವೆನಿಸಿತ್ತು ಅಲ್ಲಿ ಸ್ಥೂಲ, ಸೂಕ್ಷ್ಮ ಕಾರಣರೂಪಾದ ಎಲ್ಲ ಇಂದ್ರಿಯಂಗಳು ಇರುತ್ತಿಹವು.

ಗುರೂಪದೇಶದಿಂದ ಆ ಇಂದ್ರಿಯಂಗಳಲ್ಲಿಯೂ ಲಿಂಗವೇ ಪ್ರಕಾಶಿ

ಸುತ್ತಿಹುದು. ಅದು ಹೇಗೆಂದೊಡೆ: ಘ್ರಾಣದ ಘ್ರಾಣವೇ ಆಚಾರಲಿಂಗ. ಜಿಹ್ವೆಯ ಜಿಹ್ವೆಯೇ ಗುರುಲಿಂಗ. ನೇತ್ರದ ನೇತ್ರವೇ ಶಿವಲಿಂಗ. ತ್ವಕ್ಕಿನ ತ್ವಕ್ಕೇ ಚರಲಿಂಗ. ಶ್ರೋತ್ರದ ಶ್ರೋತ್ರವೇ ಪ್ರಸಾದಲಿಂಗ. ಹೃದಯದ ಹೃದಯವೇ ಮಹಾಲಿಂಗ.

ಇದಕ್ಕೆ ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಹೇಶ್ವರ, ಭಕ್ತನೆಂದು ಆರು ಸ್ಥಲ. ಇದಕ್ಕೆ ವಿವರ :

ಆತ್ಮಾಂಗದಲ್ಲಿ ಭಾವಹಸ್ತದಿಂದ ಎಲ್ಲ ಇಂದ್ರಿಯಂಗಳ ಪರಿಣಾಮವನು ಸಮರಸಭಕ್ತಿಯಿಂದ ಮಹಾಲಿಂಗಕ್ಕರ್ಪಿಸುವಾತನೈಕ್ಯ. ವ್ಯೋಮಾಂಗದಲ್ಲಿ ಸುಜ್ಞಾನ ಹಸ್ತದಿಂದ, ಸುಶಬ್ದವನು ಆನಂದಭಕ್ತಿಯಿಂದ ಪ್ರಸಾದಲಿಂಗಕ್ಕೆ ಅರ್ಪಿಸುವಾತ ಶರಣನು. ಅನಿಲಂಗದಲ್ಲಿ ಮನೋಹಸ್ತದಿಂದ, ಸುಸ್ಪರ್ಶನವನು ಅನುಭಾವ ಭಕ್ತಿಯಿಂದ ಚರಲಿಂಗಕ್ಕರ್ಪಿಸುವಾತ ಪ್ರಾಣಲಿಂಗಿ. ಅನಲಂಗದಲ್ಲಿ ನಿರಹಂಕಾರ ಹಸ್ತದಿಂದ, ಸ್ವರೂಪವನು ಅವಧಾನಭಕ್ತಿಯಿಂದ ಶಿವಲಿಂಗಕ್ಕರ್ಪಿಸುವಾತ ಪ್ರಸಾದಿ. ಜಲಾಂಗದಲ್ಲಿ ಸುಬುದ್ಧಿಹಸ್ತದಿಂದ, ಸುರುಚಿಯನು ನೈಷ್ಠಿಕಾಭಕ್ತಿಯಿಂದ ಗುರು ಲಿಂಗಕ್ಕರ್ಪಿಸುವಾತ ಮಹೇಶ್ವರ. ಭೂಮ್ಯಾಂಗದಲ್ಲಿ ಸುಚಿತ್ತಹಸ್ತದಿಂದ, ಸುಗಂಧವನು ಶುದ್ಧಭಕ್ತಿಯಿಂದ ಆಚಾರಲಿಂಗಕ್ಕೆ ಅರ್ಪಿಸುವಾತ ಭಕ್ತ.

ಇನ್ನು ಷಡಾಧಾರದಲ್ಲಿ ಆ ಷಡಕ್ಷರ ರೂಪಿಂದ ಷಡುಲಿಂಗವು ಸ್ಥಾಪ್ಯವಾಗಿಹುದು. ಅದು ಹೇಗೆಂದೊಡೆ: ನಕಾರವೇ ಆಚಾರಲಿಂಗ, ಮಕಾರವೇ ಗುರುಲಿಂಗ, ಶಿಕಾರವೇ ಶಿವಲಿಂಗ, ವಕಾರವೇ ಚರಲಿಂಗ, ಯಕಾರವೇ ಪ್ರಸಾದಲಿಂಗ, ಓಂಕಾರವೇ ಮಹಾಲಿಂಗವೆಂದು ಆರು ತೆರನಾಗಿಹುದು.

ಅದು ಹೇಗೆಂದೊಡೆ: ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ, ಮಣಿಪೂರಕದಲ್ಲಿ ಶಿಕಾರ, ಅನಾಹತದಲ್ಲಿ ವಕಾರ, ವಿಶುದ್ಧಿಯಲ್ಲಿ ಯಕಾರ, ಆಜ್ಞೆಯಲ್ಲಿ ಓಂಕಾರ, ಇಂತು ಷಡಾಧಾರದಲ್ಲಿ ಷಡಕ್ಷರ ರೂಪಿಂದ ಷಡುಲಿಂಗವು ಸ್ಥಾಪ್ಯವಾಗಿಹುದು.

ಇನ್ನು ಷಡುಧಾತುವಿನಲ್ಲಿ ಷಡಕ್ಷರ ರೂಪಿಂದ ಷಡುಲಿಂಗ ಸ್ಥಾಪ್ಯವಾಗಿಹುದು. ಅದು ಹೇಗೆಂದೊಡೆ: ತ್ವಕ್ಕುಮಯವಾಗಿಹುದು ಓಂಕಾರ, ರುಧಿರಮಯ ವಾಗಿಹುದು ನಕಾರ, ಮಾಂಸಮಯವಾಗಿಹುದು ಮಕಾರ, ಮೇದಸ್ಸುಮಯ ವಾಗಿಹುದು ಶಿಕಾರ, ಅಸ್ತಿಮಯವಾಗಿಹುದು ವಕಾರ, ಮಜ್ಜೆಮಯವಾಗಿಹುದು ಯಕಾರ, ಇಂತು ಷಡುಧಾತುವೇ ಷಡಕ್ಷರಮಯವಾಗಿ*, ಅದೇ ಲಿಂಗವಾಗಿ, ಒಳಹೊರಗೆ ತೆರಹಿಲ್ಲದೆ ಸರ್ವಾಂಗವೆಲ್ಲವು ಲಿಂಗವಾದ ಇವು, ಅದು ತಾನೇ ಶಿವನ ಇರವು, ಅದು ತಾನೇ ಶಿವನ ವಿಶ್ರಾಮಸ್ಥಾನ. ಇಂತು ಷಡುಸ್ಥಲ ಬ್ರಹ್ಮವನರಿದಾತನೇ

* ಷಡುಧಾತು ಕುರಿತ ನಮ್ಮ ಅಭಿಪ್ರಾಯ ಹೀಗಿದೆ : ''ಅಸ್ತಿಯಲ್ಲಿ ನಕಾರ, ಮಾಂಸದಲ್ಲಿ ಮಕಾರ, ರಕ್ತದಲ್ಲಿ ಶಿಕಾರ, ತ್ವಕ್ಕಿನಲ್ಲಿ ವಕಾರ, ಮೇದಸ್ಸಿನಲ್ಲಿ ಯಕಾರ, ವೀರ್ಯ ಅಥವಾ ಶುಕ್ತದಲ್ಲಿ ಓಂಕಾರವನ್ನು ಸಂಬಂಧಿಸಬೇಕು (ಸಂ)

ಶರಣ, ಆತನೇ ಲಿಂಗೈಕ್ಯ. ಇಂತೀ ಷಡುಸ್ಥಲಬ್ರಹ್ಮವೆಂದು ಅಪ್ರಮಾಣ, ಅಗೋಚರ, ಅನಿರ್ವಾಚ್ಯವಾದ ಕಾರಣ ವಚಿಸುವ ಚಿತ್ತು ವಚನ ಗೆಟ್ಟಿತು. ಉಪ್ಪು ನೀರೊಳಗೆ ಕೂಡಿದಂತೆ, ವಾರಿಕಲ್ಲು ಅಂಬುಧಿಯೊಳಗೆ ಬೆರೆದಂತೆ, ಶಿಖಿಕರ್ಪುರ ಯೋಗದಂತಾದೆನಯ್ಯಾ ಕೂಡಲಚೆನ್ನ ಸಂಗಮದೇವಯ್ಯ.

ನಿರಾಮಯ ಷಟ್‌ಸ್ಥಲ ಭೇದ

೧೯೭

(೧) ನಿರಾಮಯ ಭಕ್ತ ನಿರಾಮಯ ಮಹೇಶ್ವರ ನಿರಾಮಯ ಪ್ರಸಾದಿ, ನಿರಾಮಯ ಪ್ರಾಣಲಿಂಗಿ, ನಿರಾಮಯ ಶರಣ, ನಿರಾಮಯ ಐಕ್ಯ. ಈ ನಿರಾಮಯ ಷಟ್‌ಸ್ಥಲವು ಸೂಕ್ಷ್ಮಕ್ಕೂ ಅತ್ಯಂತ ಸೂಕ್ಷ್ಮ ರಹಸ್ಯಕ್ಕೂ ಅತ್ಯಂತ ರಹಸ್ಯವಾಗಿಹುದು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧೯೮

(೨) ನಿರಾಮಯ ಭಕ್ತಂಗೆ ನಿರಾಮಯವೇ ಲಿಂಗ, ನಿರಾಮಯವೇ ಹಸ್ತ, ನಿರಾಮಯವೇ ಆಚಾರಲಿಂಗ, ನಿರಾಮಯವೆಂಬಮುಖದಲ್ಲಿ ನೀರಾಮಯಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧೯೯

(೩) ನಿರಾಮಯವೆಂಬ ಮಹೇಶ್ವರಂಗೆ ನಿರಾಮಯವೇ ಅಂಗ, ನಿರಾಮಯವೇ ಹಸ್ತ, ನಿರಾಮಯವೇ ಗುರುಲಿಂಗ, ನಿರಾಮಯಮುಖದಲ್ಲಿ ನೀರಾಮಯಾನಂದವೆಂಬ ಸುಖವನೇ ಸಮರ್ಪಣವಂ ಮಾಡಿ ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೦

(೪) ನಿರಾಮಯ ಪ್ರಸಾದಿಗೆ ನಿರಾಮಯವೇ ಅಂಗ, ನಿರಾಮಯವೇ ಹಸ್ತ ನಿರಾಮಯವೇ ಶಿವಲಿಂಗ, ನಿರಾಮಯವೆಂಬಮುಖದಲ್ಲಿ ನಿರಾಮಯಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೆ, ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೧

(೫) ನಿರಾಮಯ ಪ್ರಾಮಲಿಂಗಿಗೆ ನಿರಾಮಯವೇ ಅಂಗ, ನಿರಾಮಯವೇ ಹಸ್ತ, ನಿರಾಮಯವೇ ಜಂಗಮಲಿಂಗ, ನಿರಾಮಯವೆಂಬಮುಖದಲ್ಲಿ, ನಿರಾಮಯಾನಂದವೆಂಬ ಸುಖವನೆ ಸಮರ್ಪಣವಂ ಮಾಡಿ ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೨೦೨

(೬) ನಿರಾಮಯ ಶರಣಂಗೆ ನಿರಾಮಯವೇ ಅಂಗ, ನಿರಾಮಯವೇ ಹಸ್ತ, ನೀರಾಮಯವೇ ಪ್ರಸಾದಲಿಂಗ, ನಿರಾಮಯವೆಂಬಮುಖದಲ್ಲಿ, ನಿರಾಮಯಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೨೦೩

(೭) ನಿರಾಮಯ ಐಕ್ಯಂಗೆ ನಿರಾಮಯವೇ ಅಂಗ, ನಿರಾಮಯವೇ ಹಸ್ತ ನಿರಾಮಯವೇ ಮಹಾಲಿಂಗ, ನಿರಾಮಯವೆಂಬಮುಖದಲ್ಲಿ, ನಿರಾಮಯಾನಂದವೆಂಬ ಸುಖವ ಸಮರ್ಪಣವಂ ಮಾಡಿ ತೃಪ್ತಿಯನೇ ಭೋಗಿಸಿ ನಿರಾಮಯಾತೀತವೆಂಬ ನಿರ್ವಯಲನೆಯ್ದಿದನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ನಿರಂಜನಾತೀತ ಷಟ್‌ಸ್ಥಲಬ್ರಹ್ಮ

೨೦೪

(೧) ನಿರಂಜನಾತೀತ ಭಕ್ತ, ನಿರಂಜನಾತೀತ ಮಹೇಶ್ವರ, ನಿರಂಜನಾತೀತ ಪ್ರಸಾದಿ, ನಿರಂಜನಾತೀತ ಪ್ರಾಣಲಿಂಗಿ, ನಿರಂಜನಾತೀತ ಶರಣ, ನಿರಂಜನಾತೀತ ಐಕ್ಯ. ಈ ನಿರಂಜನಾತೀತ ಷಟ್‌ಸ್ಥಲ ಅಖಂಡಿತ ಅಪ್ರಮಾಣ, ಅಗೋಚರ, ಅಪ್ರಮೇಯ, ವಾಚಾಮಗೋಚರಕ್ಕತ್ತತ್ತವಾಗಿಹುದು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೫

(೨) ನಿರಂಜನಾತೀತ ಭಕ್ತಂಗೆ ನಿರಂಜನಾತೀತವೇ ಅಂಗ, ನಿರಂಜನಾತೀತವೇ ಹಸ್ತ ನಿರಂಜನಾತೀತವೇ ಆಚಾರಲಿಂಗ, ನಿರಂಜನಾತೀತವೆಂಬಮುಖದಲ್ಲಿ, ನಿರಂಜನಾತೀತಾನಂದವೆಂಬ ಸುಖವನೆ ಸಮರ್ಪಣವಂ ಮಾಡಿ ತೃಪ್ತಿಯನೆ ಭೋಗಿಸುವನು ಅಪ್ರಮಾಣ ಕೂಡಲಸಂಗಮದೇವಾ.

೨೦೬

(೩) ನಿರಂಜನಾತೀತ ಮಹೇಶ್ವರಂಗೆ, ನಿರಂಜನಾತೀತವೇ ಲಿಂಗ, ನಿರಂಜನಾತೀತವೇ ಹಸ್ತ ನಿರಂಜನಾತೀತವೇ ಗುರುಲಿಂಗ, ನಿರಂಜನಾತೀತವೆಂಬಮುಖದಲ್ಲಿ, ನಿರಂಜನಾತೀತವೆಂಬ ಸುಖವ ಸಮರ್ಪಣವಂ ಮಾಡಿ ತೃಪ್ತಿಯನೇ, ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೭

(೪) ನಿರಂಜನಾತೀತ ಪ್ರಸಾದಿಗೆ ನಿರಂಜನಾತೀತವೇ ಅಂಗ, ನಿರಂಜನಾತೀತವೇ ಹಸ್ತ, ನಿರಂಜನಾತೀತವೇ ಶಿವಲಿಂಗ, ನಿರಂಜನಾತೀತವೆಂಬಮುಖದಲ್ಲಿ, ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೮

(೫) ನಿರಂಜನಾತೀತ ಪ್ರಾಣಲಿಂಗಿಗೆ, ನಿರಂಜನಾತೀತವೇ ಅಂಗ, ನಿರಂಜನಾತೀತವೇ ಹಸ್ತ ನಿರಂಜನಾತೀತವೇ ಜಂಗಮಲಿಂಗ, ನಿರಂಜನಾತೀತವೆಂಬ ಮುಖದಲ್ಲಿ, ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೦೯

(೬) ನಿರಂಜನಾತೀತ ಶರಣಂಗೆ, ನಿರಂಜನಾತೀತವೇ ಅಂಗ, ನಿರಂಜನಾತೀತವೇ ಹಸ್ತ ನಿರಂಜನಾತೀತವೇ ಪ್ರಸಾದಲಿಂಗ, ನಿರಂಜನಾತೀತವೆಂಬಮುಖದಲ್ಲಿ, ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೧೦

(೭) ನಿರಂಜನಾತೀತ ಐಕ್ಯಂಗೆ ನಿರಂಜನಾತೀತವೇ ಅಂಗ, ನಿರಂಜನಾತೀತವೇ ಹಸ್ತ, ನಿರಂಜನಾತೀತವೇ ಮಹಾಲಿಂಗ, ನಿರಂಜನಾತೀತವೆಂಬಮುಖದಲ್ಲಿ, ನಿರಂಜನಾತೀತಾನಂದವೆಂಬ ಸುಖವ ಸಮರ್ಪಣವಂ ಮಾಡಿ, ತೃಪ್ತಿಯನೇ ಭೋಗಿಸುವನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೧೧

(೮) ನಿರಂಜನಾತೀತ ಷಟ್‌ಸ್ಥಲವಂಗವಾಗಿ, ಆ ನಿರಂಜನಾತೀತ ಷಟ್‌ಸ್ಥಲ ಬ್ರಹ್ಮವನೊಡಗೂಡಿದ ಮಹಾಶರಣಂಗೆ, ನಮೋ ನಮೋ ಎಂದು ಬದುಕಿದೆನು ಕಾಣಾ ಅಪ್ರಮಾಣ ಕೂಡಲಸಂಗಮದೇವಾ.

ನಿವೃತ್ತಿ

ವಿವರಣೆ : ಹಿಂದೆ ಹೇಳಿದ ಪ್ರಕಾರ ವಚನಕಾರರು ಪ್ರವೃತ್ತಿಯ ಮಾರ್ಗಗಳನ್ನು ವಿವರಿಸಿ, ಅವುಗಳ ಮೂಲಕ ಮನುಷ್ಯನು ಪೂರ್ಣ ವಿಕಾಸವನ್ನು ಹೇಗೆ ಹೊಂದುತ್ತ ಹೋಗುತ್ತಾನೆಂಬುದನ್ನು ವರ್ಣಿಸಿರುತ್ತಾರೆ. ಹೀಗೆ ವಿಕಾಸವನ್ನು ಹೊಂದಿದ ಬಳಿಕ ಮನುಷ್ಯನು ನಿವೃತ್ತಿಯನ್ನು ಹೊಂದಲು ಅರ್ಹನಾಗುತ್ತಾನೆ. ಆಗ ಅವನಲ್ಲಿರುವ ಚಕ್ರಗಳು, ಪದ್ಮಗಳು, ಅಕ್ಕರಗಳು, ಪ್ರಣಮಗಳು, ಮಂತ್ರಗಳು, ದ್ರವ್ಯಗಳು, ಮುಖಗಳು, ತತ್ವಗಳು, ಹಸ್ತಗಳು, ಭಕ್ತಿಗಳು, ಲಿಂಗಗಳು, ಅಂಗಗಳು, ಶಕ್ತಿಗಳು, ಕಲೆಗಳು, ನಾದಗಳು, ಸಾದಾಖ್ಯಗಳು, ಭೂತಗಳು, ಆತ್ಮಗಳು ಮೊದಲಾದವೆಲ್ಲ ಯಾವ ಮಹಾಲಿಂಗದೊಳಗಿಂದ ಮೊದಲು ಹೊರಟಿದ್ದವೋ ಅಲ್ಲಿಯೇ ಅವು ಲಯವಾಗುವವು. ಲಯವಾಗುವ ಮುಂದೆ ಅವು, ಯಾವುದು ಸ್ಥೂಲವಾದುದೋ, ಅದು ಸೂಕ್ಷ್ಮವಾದುದರಲ್ಲಿ ಬೆರೆಯುತ್ತ ಬೆರೆಯುತ್ತ ಕೆಡೆಗೆ ಮಹಾಲಿಂಗದಲ್ಲಿ ಎಲ್ಲವೂ ಅಡಗಿ ಹೋಗುತ್ತವೆ.

ಚಕ್ರಗಳ ನಿವೃತ್ತಿ :

೨೧೨

ಆಧಾರಚಕ್ರ ಸ್ವಾಧಿಷ್ಠಾನಚಕ್ರದಲ್ಲಿ ಅಡಗಿತ್ತು, ಸ್ವಾಧಿಷ್ಠಾನಚಕ್ರ ಮಣಿಪೂರಕ ಚಕ್ರದಲ್ಲಿ ಅಡಗಿತ್ತು, ಮಣಿಪೂರಕಚಕ್ರ, ಅನಾಹತಚಕ್ರದಲ್ಲಿ ಅಡಗಿತ್ತು, ಅನಾಹತಚಕ್ರ, ವಿಶುದ್ಧಿಚಕ್ರದಲ್ಲಡಗಿತ್ತು, ವಿಶುದ್ಧಿಚಕ್ರ, ಅಜ್ಞಾಚಕ್ರದಲ್ಲಿ ಅಡಗಿತ್ತು, ಆಜ್ಞಾಚಕ್ರ ಬ್ರಹ್ಮಚಕ್ರದಲ್ಲಡಗಿತ್ತು, ಬ್ರಹ್ಮಚಕ್ರ, ಶಿಖಾಚಕ್ರದಲ್ಲಡಗಿತ್ತು, ಶಿಖಾ ಚಕ್ರ, ಪಶ್ಚಿಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಪದ್ಮಗಳ ನಿವೃತ್ತಿ

೨೧೩

ಚತುರ್ದಳ ಪದ್ಮ ಷಡುದಳ ಪದ್ಮದಲ್ಲಿ ಅಡಗಿತ್ತು, ಷಡುದಳ ಪದ್ಮ, ದಶದಳ ಪದ್ಮದಲ್ಲಿ ಅಡಗಿತ್ತು, ದಶದಳ ಪದ್ಮ, ದ್ವಾದಶದಳ ಪದ್ಮದಲ್ಲಿ ಅಡಗಿತ್ತು, ದ್ವಾದಶದಳ ಪದ್ಮ, ಷೋಡಶದಳ ಪದ್ಮದಲ್ಲಿ ಅಡಗಿತ್ತು, ಷೋಡಶದಳ ಪದ್ಮ, ದ್ವಿದಳ ಪದ್ಮದಲ್ಲಿ ಅಡಗಿತ್ತು, ದ್ವಿದಳ ಪದ್ಮ, ಸಹಸ್ರದಳ ಪದ್ಮದಲ್ಲಿ ಅಡಗಿತ್ತು, ತ್ರಿದಳಪದ್ಮ ಏಕದಳಪದ್ಮದಲ್ಲಿ ಅಡಗಿತ್ತು, ಆ ಏಕದಳ ಪದ್ಮ, ನಿರಂಜನಾತೀತವೆಂಬ ಪದ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಐವತ್ತೆರಡಕ್ಷರಗಳ ನಿವೃತ್ತಿ :

೨೧೪

ವ ಶ ಷ ಸ ಎಂಬ ಚತುರಕ್ಷರವು, ಆಧಾರಚಕ್ರದ ನಕಾರ ಬೀಜದಲ್ಲಿ ಅಡಗಿತ್ತು, ಬ ಭ ಮ ಯ ರ ಲ ಎಂಬ ಷಡಕ್ಷರಂಗಳು, ಸ್ವಾಧಿಷ್ಠಾನಚಕ್ರದ ಮಕಾರ ಬೀಜದಲ್ಲಿ ಅಡಗಿತ್ತು, ಡ ಢ ಣ ತ ಥ ದ ಧ ನ ಪ ಫ ಎಂಬ ದಶಾಕ್ಷರವು, ಮಣಿಪೂರಕಚಕ್ರದ ಶಿಕಾರ ಬೀಜದಲ್ಲಿ ಅಡಗಿತ್ತು, ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ದ್ವಾದಶಾಕ್ಷರವು, ಅನಾಹತಚಕ್ರದ ವಕಾರ ಬೀಜದಲ್ಲಿ ಅಡಗಿತ್ತು, ಆ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ಷೋಡಶಾಕ್ಷರವು ವಿಶುದ್ಧಿಚಕ್ರದ ಯಕಾರ ಬೀಜದಲ್ಲಿ ಅಡಗಿತ್ತು, ಹಂ ಳಂ ಹಂ ಕ್ಷಂ ಎಂಬ ಚತುರಕ್ಷರವು, ಆಜ್ಞಾಚಕ್ರದ ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ಬೀಜದ ಜ್ಯೋತಿಸ್ವರೂಪದಲ್ಲಿ, ಪರಮಾತ್ಮನಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಪಂಚಾಕ್ಷರಗಳ ನಿವೃತ್ತಿ :

೨೧೫

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕಾಕೃತಿ ಯಲ್ಲಿಹ ನಕಾರದಲ್ಲಿ, ನಕಾರವಡಗಿತ್ತು, ಆ ಪ್ರಣವದ ದಂಡಕಾಕೃತಿಯಲ್ಲಿಹ ಮಕಾರದಲ್ಲಿ, ಮಕಾರವಡಗಿತ್ತು, ಆ ಪ್ರಣವದ ಕುಂಡಲಾಕಾರದಲ್ಲಿಹ ಶಿಕಾರ

ಪ್ರಣವದಲ್ಲಿ ಶಿಕಾರವಡಗಿತ್ತು, ಆ ಪ್ರಣವದ ಅರ್ಧಚಂದ್ರಾಕೃತಿಯಲ್ಲಿಹ ವಕಾರ ಪ್ರಣವದಲ್ಲಿ ವಕಾರವಡಗಿತ್ತು, ಆ ಪ್ರಣವದ ದರ್ಪಣಾಕಾರದಲ್ಲಿಹ ಯಕಾರ ಪ್ರಣವದಲ್ಲಿ ಯಕಾರವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಪ್ರಣವದ ಮುಖದಲ್ಲಿಹ ಪಂಚಾಕ್ಷರಂಗಳ ನಿವೃತ್ತಿ :

೨೧೬

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕಾಕೃತಿ ಯಲ್ಲಿಹ ನಕಾರವು ಆ ಪ್ರಣವದ, ತಾರಕಾಕೃತಿಯಲ್ಲಿಯೇ ಐಕ್ಯವಾಗಿತ್ತು, ಆ ಪ್ರಣವದ ದಂಡಾಕೃತಿಯಲ್ಲಿಹ ಮಕಾರವು ಆ ಪ್ರಣವದ ದಂಡಾಕೃತಿಯಲ್ಲಿಯೇ ಐಕ್ಯವಾಗಿತ್ತು, ಆ ಪ್ರಣವದ [ಅರ್ಧ]ಕುಂಡಲಾಕೃತಿಯಲ್ಲಿಹ ಶಿಕಾರವು ಆ ಪ್ರಣವದ [ಅರ್ಧ]ಕುಂಡಲಾಕೃತಿಯಲ್ಲಿ[ಯೇ] ಐಕ್ಯವಾಯಿತ್ತು, ಆ ಪ್ರಣವದ, ಅರ್ಧಚಂದ್ರಾಕೃತಿಯಲ್ಲಿಹ ವಕಾರ ಪ್ರಣವವು ಆ ಪ್ರಣವದ ಅರ್ಧಚಂದ್ರಾ ಕೃತಿಯಲ್ಲಿಯೇ ಐಕ್ಯವಾಯಿತ್ತು, ಆ ಪ್ರಣವದ ದರ್ಪಣಾಕೃತಿಯಲ್ಲಿಹ ಯ ಕಾರವು ಆ ಪ್ರಣವದ ದರ್ಪಣಾಕೃತಿಯಲ್ಲಿಯೇ ಐಕ್ಯವಾಯಿತ್ತು, ಆ ಪ್ರಣವದ [ಜ್ಯೋತಿರಾಕೃತಿ ಯಲ್ಲಿಹ ಓಂ ಕಾರವು ಆ ಪ್ರಣವದಲ್ಲಿಹ] ಜ್ಯೋತಿಸ್ತಭಾಕೃತಿಯಲ್ಲಿಯೇ ಐಕ್ಯ ವಾಯಿತ್ತು, ಓಂ ಇತ್ಯೇಕಾಕ್ಷರಂ ಬ್ರಹ್ಮವೆಂದುದಾಗಿ, ಅಪ್ರಮಾಣ ಕೂಡಲಸಂಗಮ ದೇವಾ.

ಸಹಸ್ರಾಕ್ಷರ, ತ್ರ್ಯಕ್ಷರ ಏಕಾಕ್ಷರಗಳ ನಿವೃತ್ತಿ :

೨೧೭

ಸಹಸ್ರಾಕ್ಷರ ತ್ರ್ಯಕ್ಷರದಲ್ಲಿಯೇ ಅಡಗಿತ್ತು, ತ್ರ್ಯಕ್ಷರ ಏಕಾಕ್ಷರದಲ್ಲಿಯೇ ಅಡಗಿತ್ತು. ಈ ಏಕಾಕ್ಷರ, ನಿಶಬ್ದ ಬ್ರಹ್ಮಮುಚ್ಚತೇ ಎಂಬ ಪರಬ್ರಹ್ಮದಲ್ಲಿ ಅಡಗಿತ್ತು, ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ವೇದಗಳ ನಿವೃತ್ತಿ :

೨೧೮

ಅಖಂಡ ಜ್ಯೋತಿರ್ಮಯವಾಗಿಹ ಗೋಲಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಋಗ್ವೇದವಡಗಿತ್ತು, ಆ ಪ್ರಣವದ ದಂಡಸ್ವರೂಪದಲ್ಲಿ ಯಜು ರ್ವೇದವಡಗಿತ್ತು, ಆ ಪ್ರಣವದ [ಅರ್ಧ]ಕುಂಡಲಾಕಾರದಲ್ಲಿ ಸಾಮವೇದ ವಡಗಿತ್ತು, ಆ ಪ್ರಣವದ ಅರ್ಧಚಂದ್ರಕದಲ್ಲಿ ಅಥರ್ವಣವೇದವಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಗಾಯ[ತ್ರೀ ವೇದವ]ಡಗಿತ್ತು, ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಅಜಪೆ[ವೇದವ]ಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮ ದೇವಾ.

೧–೧ ತ್ತಿಯ (ಮೂ) ೨–೨ ಯ (ಮೂ)

ದ್ರವ್ಯಗಳ ನಿವೃತ್ತಿ :

೨೧೯

ಅಖಂಡ ಜ್ಯೋತಿರ್ಮಯವಾಗಿಹ ಗೋಲಕಾಕಾರ ಪ್ರಣವದ ತಾರಕ ಸ್ವರೂಪದಲ್ಲಿ ಗಂಧವಡಗಿತ್ತು. ಆ ಪ್ರಣವದ ದಂಡಸ್ವರೂಪದಲ್ಲಿ ರಸವಡಗಿತ್ತು. ಆ ಪ್ರಣವದ [ಅರ್ಧ]ಕುಂಡಲಾಕಾರದಲ್ಲಿ ರೂಪವಡಗಿತ್ತು. ಆ ಪ್ರಣವದ ಅರ್ಧ ಚಂದ್ರಕದಲ್ಲಿ ಸ್ಪರ್ಶನವಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಶಬ್ದವಡಗಿತ್ತು. ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ತೃಪ್ತಿಯಡಗಿತ್ತು, ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಮುಖಂಗಳ ನಿವೃತ್ತಿ :

೨೨೦

ಆ ಪ್ರಣವದ ತಾರಕಸ್ವರೂಪದಲ್ಲಿ ಘ್ರಾಣೇಂದ್ರಿಯವಡಗಿತ್ತು. ಆ ಪ್ರಣವದ ದಂಡಕಸ್ವರೂಪದಲ್ಲಿ ಜಿಹ್ವೇಂದ್ರಿಯವಡಗಿತ್ತು. ಆ ಪ್ರಣವದ [ಅರ್ಧ]ಕುಂಡ ಲಾಕಾರದಲ್ಲಿ ನೇತ್ರೇಂದ್ರಿಯವಡಗಿತ್ತು. ಆ ಪ್ರಣವದ ಅರ್ಧಚಂದ್ರಕದಲ್ಲಿ ತ್ವಗೀಂದ್ರಿಯವಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಶ್ರೋತ್ರೇಂದ್ರಿಯ ವಡಗಿತ್ತು. ಆ ಪ್ರಣವದ ಜ್ಯೋತಿಸ್ವರೂಪದಲ್ಲಿ [೧][ಭಾವೇ]೧ಂದ್ರಿಯವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ತತ್ವಗಳ ನಿವೃತ್ತಿ :

೨೨೧

ಭಾವ, ಅಂತರ, ಚೈತನ್ಯ, ಕರ್ತ, ಕ್ಷೇತ್ರಜ್ಞ, [ಪರ]ಶಿವ ಈ ಆರು ತತ್ವಂಗಳು ಅಖಂಡ ಮಹಾಜ್ಯೋತಿಪ್ರಣವದ ಜ್ಯೋತಿಸ್ವರೂಪವಾಗಿಹ ಪರಬ್ರಹ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೨೨

ವಾಕ್ಕು, ಶ್ರೋತ್ರ, ಜ್ಞಾನ, ಶಬ್ದ ಮಹಾಕಾಶ, ಸದಾಶಿವನು ಈ ಆರು ತತ್ವಂಗಳು ಅಖಂಡ ಮಹಾಜ್ಯೋತಿ ಪ್ರಣವದ ದರ್ಪಣಾಕಾರವಾಗಿಹ [೨][ಆನಂದ]೨ ಬ್ರಹ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೨೩

ಪಾಣಿ, ತ್ವಕ್ಕು, ಮನಸ್, ಸ್ಪರ್ಶ, ವಾಯು, ಈಶ್ವರ ಈ ಆರು ತತ್ವಂಗಳು ಅಖಂಡ ಮಹಾಜ್ಯೋತಿಪ್ರಣವದ ಅರ್ಧಚಂದ್ರಕದಲ್ಲಿ ಸ್ವರೂಪವಾಗಿಹ [೩][ವಿಜ್ಞಾನ]೩ ಬ್ರಹ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧–೧ ಮನೇ (ಮೂ) ೨–೨ ವಿಜ್ಞಾನ (ಮೂ) ೩–೩ ಬ್ರಹ್ಮಾನಂದ (ಮೂ)

೨೨೪

ಪಾದ, ನೇತ್ರ, ಅಹಂಕಾರ, ರೂಪು, ಅಗ್ನಿ, ರುದ್ರ ಈ ಆರು ತತ್ವಂಗಳು ಆ ಅಖಂಡ ಮಹಾಜ್ಯೋತಿಪ್ರಣವದ [೧][ಅರ್ಧಕುಂಡಲಿಯಾಕಾರವಾಗಿಹ ಕಲಾ]೧ ಬ್ರಹ್ಮದಲ್ಲಿ ಅಡಿಗತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೨೫

[ಗುಹ್ಯ, ಜಿಹ್ವೆ, ಬುದ್ಧಿ, ರಸ, ಜಲ, ವಿಷ್ಣು ಈ ಆರು ತತ್ವಂಗಳು ಆ ಅಖಂಡ ಮಹಾಜ್ಯೋತಿಪ್ರಣವದ ದಂಡಕಾಕಾರವಾಗಿಹ ಪಿಂಡಬ್ರಹ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.]

೨೨೬

ಗುದ, ಘ್ರಾಣ, ಚಿತ್ತ, ಗಂಧ, ಪೃಥ್ವಿ, ಬ್ರಹ್ಮ ಈ ಆರು ತತ್ವಂಗಳು ಆ ಅಖಂಡ ಮಹಾಜ್ಯೋತಿ ಪ್ರಣವದ ತಾರಕಸ್ವರೂಪವಾಗಿಹ ಮೂರ್ತಿಬ್ರಹ್ಮದಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಹಸ್ತಂಗಳ ನಿವೃತ್ತಿ :

೨೨೭

ಅಖಂಡ ಜ್ಯೋತಿರ್ಮಯವಾಗಿಹ ಗೋಲಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಸುಚಿತ್ತ ಹಸ್ತವಡಗಿತ್ತು. ಆ ಪ್ರಣವದ ದಂಡಸ್ವರೂಪದಲ್ಲಿ ಸುಬುದ್ಧಿ ಹಸ್ತವಡಗಿತ್ತು. ಆ ಪ್ರಣವದ [ಅರ್ಧ]ಕುಂಡಲಾಕಾರದಲ್ಲಿ ನಿರಹಂಕಾರಹಸ್ತವಡ ಗಿತ್ತು. ಆ ಪ್ರಣವದ ಅರ್ಧಚಂದ್ರಕದಲ್ಲಿ ಸುಮನವೆಂಬ ಹಸ್ತವಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಸುಜ್ಞಾನ ಹಸ್ತವಡಗಿತ್ತು. ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಭಾವಹಸ್ತವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಭಕ್ತಿಗಳ ನಿವೃತ್ತಿ :

೨೨೮

ಅಖಂಡ ಜ್ಯೋತಿರ್ಮಯವಾಗಿಹ ಗೋಲಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಸದ್ಭಕ್ತಿಯಡಗಿತ್ತು. ಆ ಪ್ರಣವದ ದಂಡಸ್ವರೂಪದಲ್ಲಿ ನೈಷ್ಠಿಕಾಭಕ್ತಿ ಅಡಗಿತ್ತು. ಆ ಪ್ರಣವದ [ಅರ್ಧ]ಕುಂಡಲಾಕಾರದಲ್ಲಿ ಅವಧಾನಭಕ್ತಿಯಡಗಿತ್ತು. ಆ ಪ್ರಣವದ ಅರ್ಧಚಂದ್ರಕದಲ್ಲಿ ಅನುಭಾವಭಕ್ತಿಯಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಆನಂದಭಕ್ತಿ ಅಡಗಿತ್ತು. ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಸಮರಸಭಕ್ತಿಯಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧–೧ ದಂಡಾಕಾರವಾಗಿಹ ಪಿಂಡ (ಮೂ)

ಲಿಂಗಗಳ ನಿವೃತ್ತಿ :

೨೨೯

ಅಖಂಡ ಜ್ಯೋತಿರ್ಮಯವಾಗಿಹ ಗೋಲಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಆಚಾರಲಿಂಗವಡಗಿತ್ತು. ಆ ಪ್ರಣವದ ದಂಡಕಸ್ವರೂಪದಲ್ಲಿ ಗುರುಲಿಂಗವಡಗಿತ್ತು. ಆ ಪ್ರಣವದ [ಅರ್ಧ]ಕುಂಡಲಾಕಾರದಲ್ಲಿ ಶಿವಲಿಂಗ ವಡಗಿತ್ತು. ಆ ಪ್ರಣವದ ಅರ್ಧಚಂದ್ರದಲ್ಲಿ ಜಂಗಮಲಿಂಗವಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಪ್ರಸಾದಲಿಂಗವಡಗಿತ್ತು. ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಮಹಾಲಿಂಗವಡಗಿತ್ತು. ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

ಅಂಗಗಳ ನಿವೃತ್ತಿ :

೨೩೦

ಆ ಪ್ರಣವದ ತಾರಕಸ್ವರೂಪದಲ್ಲಿ ಭಕ್ತನಡಗಿದನು. ಆ ಪ್ರಣವದ ದಂಡಸ್ವರೂಪದಲ್ಲಿ ಮಹೇಶ್ವರನಡಗಿದನು. ಆ ಪ್ರಣವದ [ಅರ್ಧ]ಕುಂಡಲಾಕಾರ ದಲ್ಲಿ ಪ್ರಸಾದಿಯಡಗಿದನು. ಆ ಪ್ರಣವದ ಅರ್ಧಚಂದ್ರದಲ್ಲಿ ಪ್ರಾಣಲಿಂಗಿಯಡಗಿ ದನು. ಆ ಪ್ರಣವದ ದರ್ಪಣಾಕಾರದಲ್ಲಿ ಶರಣನಡಗಿದನು. ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಐಕ್ಯವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಷಡಂಗ ನಿವೃತ್ತಿ

೨೩೧

[ಪರ]ಶಿವ, ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮ ಈ ಆರು ಶಿವಾಂಗವು ಚಿತ್‌ಶಕ್ತಿಯಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೩೨

[ಆತ್ಮ]ಕ್ಷೇತ್ರಜ್ಞ, ಆಕಾಶ, ವಾಯು, ತೇಜ, ಅಪ್ಪು, ಪೃಥ್ವಿ ಈ ಆರು ಭೂತಾಂಗವು [೧]ಆತ್ಮ[೧]ಶಕ್ತಿಯಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೨೩೩

ಭಾವ, ಜ್ಞಾನ, ಮನಸ್ಸು, ಅಹಂಕಾರ, ಬುದ್ಧಿ, ಚಿತ್ತ, ಈ ಆರು [೨]ಭಾವಾಂಗವು[೨] [೩]ಪರಾಶಕ್ತಿ[೩]ಯಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೩೪

[ಮಹಾಪ್ರಾಣ, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಈ ಆರು

೧–೧ ಪರ (ಮೂ) ೨–೨ ಕಾಮಾಂಗವು (ಮೂ) ೩–೩ ಇಚ್ಛಾಶಕ್ತಿ (ಮೂ)

ಪ್ರಾಣಾಂಗಗಳು ಆದಿಶಕ್ತಿಯಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.]

೨೩೫

ಚೈತನ್ಯ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಈ ಆರು [೧]ಜ್ಞಾನಾಂಗವು[೧] [೨]ಇಚ್ಛಾಶಕ್ತಿಯಲ್ಲಿ[೨] ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೩೬

ಕರ್ತನು, ಶಬ್ದ, ಸ್ಪರ್ಶ, ರೂಪು, ರಸ, ಗಂಧ ಈ ಆರು [೩]ವಿಷಯಾಂಗವು[೩] [೪]ಜ್ಞಾನಶಕ್ತಿಯಲ್ಲಿ[೪] ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೩೭

ಅಂತರ, ವಾಕ್, ಪಾದ, ಪಾಯು, ಪಾಣಿ, ಗುಹ್ಯ ಈ ಆರು [೫]ಕರ್ಮಾಂಗವು[೫] ಕ್ರಿಯಾಶಕ್ತಿಯಲ್ಲಿ ಅಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಶಕ್ತಿಗಳ ನಿವೃತ್ತಿ :

೨೩೮

ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಅಡಗಿದಳು. ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿಯಡಗಿದಳು. ಆದಿಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಯಡಗಿದಳು. ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿಯಡಗಿದಳು. ಚಿತ್‌ಶಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿಯಡಗಿದಳು. ನಿಃಶಬ್ದವೆಂಬ ಪರಬ್ರಹ್ಮದ ಚಿತ್‌ಶಕ್ತಿಯ ಸಹಸ್ರಾಂಶದಲ್ಲಿ ಚಿತ್‌ಶಕ್ತಿಯಡಗಿದಳು. ಆ ನಿಃಶಬ್ದವೆಂಬ ಬ್ರಹ್ಮದ ಚಿಂತೆಯು ಅಡಗಿ ಶೂನ್ಯ ನಿಃಶೂನ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಕಲೆಗಳ ನಿವೃತ್ತಿ :

೨೩೯

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರ ಪ್ರಣವದ ತಾರಕ ಸ್ವರೂಪದಲ್ಲಿ ನಿವೃತ್ತಿ ಕಲೆಯಡಗಿತ್ತು. ಆ ಪ್ರಣವದ ದಂಡ[ಕ]ಸ್ವರೂಪದಲ್ಲಿ ಪ್ರತಿಷ್ಠಾಕಲೆಯಡಗಿತ್ತು. ಆ ಪ್ರಣವದ ಕುಂಡಲಾಕಾರದಲ್ಲಿ ವಿದ್ಯಾಕಲೆಯಡಗಿತ್ತು. ಆ ಪ್ರಣವದ ಅರ್ಧ ಚಂದ್ರಕದಲ್ಲಿ ಶಾಂತಿಕಲೆಯಡಗಿತ್ತು. ಆ ಪ್ರಣವದ ದರ್ಪಣಾಕಾರದಲ್ಲಿ ಶಾಂತ್ಯಾತೀತಕಲೆಯಡಗಿತ್ತು. ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಶಾಂತ್ಯಾತೀತೋತ್ತರ ಕಲೆಯಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೧–೧ ಕರ್ಮಾಂಗವು (ಮೂ) ೨–೨ ಜ್ಞಾನಶಕ್ತಿಯಲ್ಲಿ (ಮೂ) ೩–೩ ಯೋಗಾಂಗವು (ಮೂ)
೪–೪ ಆದಿಶಕ್ತಿಯಲ್ಲಿ (ಮೂ) ೫–೫ ಕರ್ಮಂಗಳು (ಮೂ)

ನಾದಗಳ ನಿವೃತ್ತಿ :

೨೪೦

ಷೆಣ್ಡುಂಬಿನಾದ ವೀಣಾದದಲ್ಲಿ ಅಡಗಿತ್ತು, ಆ ವೀಣಾನಾದ ಘಂಟಾನಾದದಲ್ಲಿ ಅಡಗಿತ್ತು, ಆ ಘಂಟಾನಾದ ಭೇರೀನಾದದಲ್ಲಿ ಅಡಗಿತ್ತು, ಆ ಭೇರೀನಾದ ಮೇಘಧ್ವನಿಯಲ್ಲಿ ಅಡಗಿತ್ತು, ಆ ಮೇಘಧ್ವನಿ ಪ್ರಣವನಾದದಲ್ಲಿ ಅಡಗಿತ್ತು, ಆ ಪ್ರಣವನಾದ ದಿವ್ಯನಾದದಲ್ಲಿ ಅಡಗಿತ್ತು, ಆ ದಿವ್ಯನಾದ ಸಿಂಹನಾದದಲ್ಲಿ ಅಡಿಗತ್ತು, ಆ ಸಿಂಹನಾದ ನಿಃಶಬ್ದವೆಂಬ ಪರಬ್ರಹ್ಮದ ನೆನಹು ಮಾತ್ರದಲ್ಲಿ ಅಡಗಿತ್ತು, ಆ ನಿಶ್ಯಬ್ದ ಪರಬ್ರಹ್ಮದ ನೆನಹು ಅಡಗಿ ನಿಃಶೂನ್ಯವಾಯಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಸಾದಾಖ್ಯಗಳ ನಿವೃತ್ತಿ :

೨೪೧

ನಿವೃತ್ತಿ ಕಲೆಯಲ್ಲಿ ಕರ್ಮಸಾದಾಖ್ಯವಡಗಿತ್ತು, ಪ್ರತಿಷ್ಠಾಕಲೆಯಲ್ಲಿ ಕರ್ತೃ ಸಾದಾಖ್ಯವಡಗಿತ್ತು, ವಿದ್ಯಾಕಲೆಯಲ್ಲಿ ಮೂರ್ತಿ ಸಾದಾಖ್ಯವಾಯಿತ್ತು, ಶಾಂತಿ ಕಲೆಯಲ್ಲಿ ಅಮೂರ್ತಿ ಸಾದಾಖ್ಯವಡಗಿತ್ತು, ಶಾಂತ್ಯಾತೀತಕಲೆಯಲ್ಲಿ ಶಿವಸಾದಾಖ್ಯವಡಗಿತ್ತು, ಶಾಂತ್ಯಾತೀತೋತ್ತರ ಕಲೆಯಲ್ಲಿ ನಿರ್ಮುಕ್ತಿ ಎಂಬ ಮಹಾಸಾದಾಖ್ಯವಡಗಿತ್ತು, ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಮಹಾಭೂತಗಳ ನಿವೃತ್ತಿ :

೨೪೨

ಸದ್ಯೋಜಾತವೆಂಬ ಮುಖದಲ್ಲಿ ಪೃಥ್ವಿ ಎಂಬ ಮಹಾಭೂತವಡಗಿತ್ತು, ವಾಮದೇವಮುಖದಲ್ಲಿ ಅಪ್ಪು ಎಂಬ ಮಹಾಭೂತವಡಗಿತ್ತು, ಅಘೋರ ಮುಖದಲ್ಲಿ ಅಗ್ನಿ ಎಂಬ ಮಹಾಭೂತವಡಗಿತ್ತು, ತತ್ಪುರುಷಮುಖದಲ್ಲಿ ವಾಯುವೆಂಬ ಮಹಾಭೂತವಡಗಿತ್ತು, ಈಶಾನವೆಂಬ ಮುಖದಲ್ಲಿ ಆಕಾಶವೆಂಬ ಮಹಾಭೂತವಡಗಿತ್ತು, ಪ್ರಣವದ [೧]ಜ್ಯೋತಿರ್ಮುಖದಲ್ಲಿ ಆತ್ಮನೆಂಬ[೧] ಮಹಾಭೂತವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨೪೩

ಪರಬ್ರಹ್ಮ ಸ್ವರೂಪವಾಗಿಹ ಪರಮ ಪ್ರಣವದ ತಾರಕಸ್ವರೂಪದಲ್ಲಿ ಪೃಥ್ವಿ ಎಂಬ ಮಹಾಭೂತವಡಗಿತ್ತು, ಆ ಪ್ರಣವದ ದಂಡ[ಕ]ಸ್ವರೂಪದಲ್ಲಿ ಅಪ್ಪುವೆಂಬ ಮಹಾಭೂತವಡಗಿತ್ತು. ಆ ಪ್ರಣವದ ಕುಂಡಲಾಕಾರದಲ್ಲಿ ತೇಜವೆಂಬ ಮಹಾಭೂತವಡಗಿತ್ತು, ಆ ಪ್ರಣವದ ಅರ್ಧಚಂದ್ರಾಕಾರದಲ್ಲಿ ವಾಯುವೆಂಬ ಮಹಾಭೂತವಡಗಿತ್ತು, ಆ ಪ್ರಣವದ ದರ್ಪಣಾಕಾರದಲ್ಲಿ ಆಕಾಶವೆಂಬ

೧–೧ ಅರ್ಧಚಂದ್ರಕದಲ್ಲಿ ಮನವೆಂಬ (ಮೂ)

ಮಹಾಭೂತವಡಗಿತ್ತು, ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಆತ್ಮನೆಂಬ ಮಹಾಭೂತವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಆತ್ಮ ನಿವೃತ್ತಿ :

೨೪೪

ಅಂತರಾತ್ಮನೆಂಬ ಮಹಾಗುರು ಪರಮಾತ್ಮನೆಂಬ ಮಹಾಲಿಂಗದಲ್ಲಿ ಅಡಗಿತ್ತು, ಆ ಪರಮಾತ್ಮನೆಂಬ ಮಹಾಲಿಂಗವು ಸರ್ವಾ[೧][ತ್ಮ][೧]ವೆಂಬ ಮಹಾಜಂಗಮದಲ್ಲಿ ಅಡಗಿತ್ತು, ಆ ಸರ್ವಾತ್ಮವೆಂಬ ಮಹಾಜಂಗಮ ತಾನೆ ನಿತ್ಯನಿರಂಜನ ನಿರಾಮಯಾತೀತನಾಗಿರ್ದನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಮುಖಗಳ ನಿವೃತ್ತಿ :

೨೪೫

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಸದ್ಯೋಜಾತಮುಖವಡಗಿತ್ತು, ಆ ಪ್ರಣವದ ದಂಡ[ಕ]ಸ್ವರೂಪದಲ್ಲಿ ವಾಮದೇವಮುಖವಡಗಿತ್ತು, ಆ ಪ್ರಣವದ ಕುಂಡಲಾಕಾರದಲ್ಲಿ ಅಘೋರ ಮುಖವಡಗಿತ್ತು, ಆ ಪ್ರಣವದ ಅರ್ಧಚಂದ್ರಕದಲ್ಲಿ ತತ್ಪುರುಷ ಮುಖವಡಗಿತ್ತು, ಆ ಪ್ರಣವದ ದರ್ಪಣಾಕಾರದಲ್ಲಿ ಈಶಾನ್ಯಮುಖ ವಡಗಿತ್ತು, ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ನಿರ್ಭಾವ ಮುಖವಡಗಿತ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಪಂಚಬ್ರಹ್ಮಮೂರ್ತಿಗಳ ನಿವೃತ್ತಿ :

೨೪೬

ಅಖಂಡ ಜ್ಯೋತಿರ್ಮಯವಾಗಿಹ ಗೋಳಕಾಕಾರಪ್ರಣವದ ತಾರಕ ಸ್ವರೂಪದಲ್ಲಿ ಬ್ರಹ್ಮನಡಗಿದನು. ಆ ಪ್ರಣವದ ದಂಡ[ಕ]ಸ್ವರೂಪದಲ್ಲಿ ವಿಷ್ಣುವಡಗಿದನು. ಆ ಪ್ರಣವದ ಕುಂಡಲಾಕಾರದಲ್ಲಿ ರುದ್ರನಡಗಿದನು. ಆ ಪ್ರಣವದ ಅರ್ಧಚಂದ್ರಕದಲ್ಲಿ ಈಶ್ವರನಡಗಿದನು. ಆ ಪ್ರಣವದ ದರ್ಪಣಾಕಾರದಲ್ಲಿ ಸದಾಶಿವನಡಗಿದನು. ಆ ಪ್ರಣವದ ಜ್ಯೋತಿಸ್ವರೂಪದಲ್ಲಿ ಆತ್ಮನಡಗಿದನು ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಬಯಲು

ಈ ಮೇರೆಗೆ ಭಕ್ತನು ಸಂಪೂರ್ಣ ವಿಕಾಸವನ್ನು ಹೊಂದಿ ಕಟ್ಟಕಡೆಗೆ ನಿಃಶೂನ್ಯ ನಿರಾಲಂಬ ಸ್ಥಿತಿಯನ್ನು ಹೊಂದುವನು. ಇದೇ ಲಿಂಗಾಂಗಸಾಮರಸ್ಯವು, ನಿರವಯವು, ಬಯಲು.

೧–೧ ಶ್ರಯ (ಮೂ)

೨೪೭

(೧) ಏನೆಂಬೆನೇನೆಂಬೆ, ಏನೆಂಬೆನೇನೆಂಬೆ ಎರಡೊಂದಾದುದ ? ಏನೆಂಬೆ ನೇನೆಂಬೆನವಿರಳ ಘನವ ? ಮಹಾದಾನಿ ಕೂಡಲ ಸಂಗಮದೇವ ತಾನೇ ಬಲ್ಲ.

೨೪೮

(೨) ಆದಿ ಇಲ್ಲದ ಬಯಲು, ಅನಾದಿ ಇಲ್ಲದ ಬಯಲು, ಶೂನ್ಯವಿಲ್ಲದ ಬಯಲು, ನಿಶ್ಶೂನ್ಯವಿಲ್ಲದ ಬಯಲು, ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು, ಸಾವಯವಿಲ್ಲದ ಬಯಲು, ನಿರವಯವಿಲ್ಲದ ಬಯಲು, ಅಖಂಡೇಶ್ವರ ನೆಂಬ ಬಯಲಲ್ಲಿಯ ಬಯಲು ಮಹಾಘನ ಆಚ್ಚಬರಿಯ ಬಯಲೊಳಗೆ ಎಚ್ಚರವಡಗಿ ನಾನೆತ್ತ ಹೋದೆನೆಂದರಿಯೆ.

೨೪೯

(೩) ಅವನಿಯ ಪಿಂಡವ ನುಂಗಿ ಉದಕವ ಪಾನವಮಾಡಿ, ಅಗ್ನಿಯ ಮೆಟ್ಟಿ, ವಾಯುವ ಹಿಡಿದು, ಆಕಾಶವನಡರಿ, ಮಹದಾಕಾಶದ ಬಯಲೊಳಗೆ ನಿಂದು ನೋಡಲು ಸರ್ವಶೂನ್ಯ ನಿರಾಕಾರವೆಂಬ ಬಯಲು ಕಾಣಬಂದಿತ್ತು. ಆ ಬಯಲು ಬೆರಸಿಹೆನೆಂದು ಬಸವಪ್ರಭು ಮೊದಲಾದ ಗಣಂಗಳ ಮಹಾನುಭಾವ ಸಂಪಾದನೆ ಯರಿದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ಬಯಲ ಬೆರಸಿದೆನು.

೨೫೦

ಅಯ್ಯಾ ಒಳಗೆ ನೋಡಿದರೆ ಬಯಲು, ಹೊರಗೆ ನೋಡಿದರೆ ಬಯಲು, ನೆನೆದಿಹೆನೆಂದರೆ ಬಯಲು, ನೆನಹಿಸಿಕೊಂಡಿಹೆನೆಂದರೆ ನೀವಿಲ್ಲಾಗಿ ನಾನೂ ಬಯಲು, ನೀನೂ ಬಯಲು ನೋಡಾ. ಭಾವಿಸಿಕೊಂಬ ವಸ್ತುವಿಲ್ಲಾಗಿ ಭಾವ ಬಯಲೆಂಬೆನು ನೋಡಾ. ಮರಹು ನಷ್ಟವಾಯಿತ್ತಾಗಿ ಅರುಹು ಶೂನ್ಯವಾಯಿತ್ತು ನೋಡಾ. ತನುವುಳ್ಳನ್ನಕ್ಕರ ನಿನ್ನ ಸಾವಯವೆಂದೆ. ಮನವುಳ್ಳನ್ನಕ್ಕರ ನಿನ್ನ ಸಾವಯವ ನಿರವಯನೆಂದೆ. ಅನುಭಾವವುಳ್ಳನಕ್ಕರ ನಿನ್ನ ನಿರವಯನೆಂದೆ. ನಾನುಳ್ಳನ್ನಕ್ಕರ ನೀನೆಂದೆ. ನಾ ಸತ್ತ ಬಳಿಕ ನೀನೆಲ್ಲಿಯವನು ಹೇಳಾ ? ಇದು ಕಾರಣ ಸಾಯವವೆನ್ನೆ. ನಿರವಯ[ವ]ನ್ನೆ ನೋಡಾ. ನಿಶ್ಚಲವೆಂಬ ನಿರ್ದೇಹಿಯ ಮೇಲೆ ಸಚ್ಚಿದಾನಂದವೆಂಬ ಪದವು ಬಂದೆರಗಿ, ಐದಿ ನುಂಗಿತ್ತು ನೋಡಾ. ಐದಿ ನುಂಗಲಾಗಿ ಕಾರ್ಯವೆನಲಿಲ್ಲ, ಕಾರಣವೆನಲಿಲ್ಲ, ಪರಮ ಕಾರಣವೆನಲಿಲ್ಲ, ಜೀವನೆನಲಿಲ್ಲ, ಪರಮನೆನಲಿಲ್ಲ, ಜೀವಪರಮೈಕ್ಯವನೊಳಕೊಂಡು ತೀವಿ ಪರಿಪೂರ್ಣ ಪರಾಪರವೆನಲಿಲ್ಲ, ಲಕ್ಷ ನೆನಲಿಲ್ಲ, ನಿರ್ಲಕ್ಷನೆನಲಿಲ್ಲ, ಅಲಕ್ಷನದ್ವಯ ನಿಶ್ಶೂನ್ಯನೆನಲಿಲ್ಲ, ಮಹಾ ಶೂನ್ಯನೆನಲಿಲ್ಲ, ಏನೂ ಎನಲಿಲ್ಲದ, ನಿರಾಕಾರ ಬಯಲು, ನಿಶ್ಶಬ್ದಮಯ ಪರಬೊಮ್ಮನು, ಚಿದಾದಿತ್ಯ ಸಂಗನಬಸವಣ್ಣನ ಬಯಲ ಬೆಳಗಿನೊಳು ಬಯಲಾದ ಗುಹೇಶ್ವರಲಿಂಗಕ್ಕಾವ ತೊಡಕುಂಟು ಹೇಳಾ ?

■■

ಭಾಗ : ಐದು

ಏಕೋತ್ತರಶತಸ್ಥಲ

ಏಕೋತ್ತರಶತಸ್ಥಲ

ವಿವರಣೆ : ಏಕೋತ್ತರಶತಸ್ಥಲ ಅಥವಾ ನೂರೊಂದುಸ್ಥಲಗಳಿಗೆ ವಚನಶಾಸ್ತ್ರದಲ್ಲಿ ಬಹು ಮಹತ್ವದ ಸ್ಥಾನವಿದೆ. ಅವುಗಳಂತೆ ಆಚರಿಸುವವನೇ ಷಟ್‌ಸ್ಥಲಗಳ ಮರ್ಮವನ್ನರಿತವನೆಂದು ತಿಳಿಯಲ್ಪಟ್ಟಿರುತ್ತದೆ. ಷಟ್‌ಸ್ಥಲಗಳಲ್ಲಿ ಮುಖ್ಯವಾಗಿ ಸಾಮಾನ್ಯ ತಾತ್ವಿಕ ವಿಚಾರಗಳು ಬರುವದುಂಟು. ಆದರೆ ಅವುಗಳಿಗೆ ಸಂಬಂಧಿಸಿದ ಕ್ರಿಯೆಗಳ ವಿಸ್ತೃತ ವಿವೇಚನೆಯು ಏಕೋತ್ತರಶತಸ್ಥಲದಲ್ಲಿಯೇ ಬರುತ್ತದೆ. ವೀರಶೈವನ ಧಾರ್ಮಿಕ ಮತ್ತು ಆಚಾರ ವಿಷಯಕ ವಿಷಯಗಳೂ ಸಾಮಾಜಿಕ ವಿಚಾರಗಳೂ ಈ ಸ್ಥಲಗಳಲ್ಲಿ ವಿಶೇಷವಾಗಿ ನಿರೂಪಿಸಲ್ಪಡುವದುಂಟು.

ಏಕೋತ್ತರವು ಷಟ್‌ಸ್ಥಲಗಳ ತಾತ್ವಿಕ ಜ್ಞಾನಕ್ಕೂ ಆಚಾರ ವಿಷಯಕ್ಕೂ ಸಂಬಂಧಪಡಿಸುವ ಒಂದು ಸೇತುವೆಯಂತೆ ಇದೆ. ಇದರ ಸಹಾಯದಿಂದಲೇ ಮನುಷ್ಯನು ತನ್ನಲ್ಲಿ ಲಿಂಗವಿಷಯಕ ಜ್ಞಾನವನ್ನೂ ಪ್ರಗತಿಯನ್ನೂ ಉಂಟುಮಾಡಿ ಕೊಳ್ಳತಕ್ಕದ್ದು.

ಏಕೋತ್ತರಶತಸ್ಥಲದಲ್ಲಿ ಹೇಳಲ್ಪಟ್ಟ ಈ ಭಾಗದಲ್ಲಿಯ ವಚನಗಳು ಅವುಗಳಿಗೆ ಸಂಬಂಧಿಸಿದ ಒಂದೊಂದು ಸ್ಥಲದ ಪೂರ್ಣ ವ್ಯಾಖ್ಯೆಗಳಲ್ಲವೆಂಬುದನ್ನು ವಾಚಕರು ಲಕ್ಷಿಸಬೇಕು. ಅವುಗಳೆಲ್ಲವನ್ನೂ ಅವರು ಒಟ್ಟಾಗಿ ನಿರೀಕ್ಷಿಸಿ ಆ ಸ್ಥಲದ ಮರ್ಮವನ್ನು ಕಂಡುಹಿಡಿಯತಕ್ಕದ್ದು. ಪ್ರತಿಯೊಂದು ಸ್ಥಲದ ಕಡೆಯಲ್ಲಿ ವಚನಕಾರರು ಒಂದು ಸಂಕ್ಷಿಪ್ತ ವಿವರಣೆಯನ್ನು ಕೊಟ್ಟಿರುತ್ತಾರೆ. ಇದರಲ್ಲಿ ಮುಂದಿನ ಸ್ಥಲದ ಮರ್ಮವನ್ನು ಸೂಚಿಸತಕ್ಕ ಅಭಿಪ್ರಾಯಗಳಿರುತ್ತವೆ. ವಾಚಕರು ಅವುಗಳನ್ನು ಲಕ್ಷಿಸಿ ಆಯಾ ಸ್ಥಲಗಳ ವಿಷಯಗಳನ್ನು ಅರಿತುಕೊಳ್ಳಬೇಕು.

ಅಂಗಸ್ಥಲಗಳು ಮತ್ತು ಲಿಂಗಸ್ಥಲಗಳು

ಈ ನೂರೊಂದು ಸ್ಥಲಗಳಲ್ಲಿ ಅಂಗಸ್ಥಲಗಳು ಮತ್ತು ಲಿಂಗಸ್ಥಲಗಳು ಎಂಬ ಎರಡು ಮುಖ್ಯ ಭಾಗಗಳಿರುತ್ತವೆ. ಅಂಗಸ್ಥಲಗಳು ೪೪ ಮತ್ತು ಲಿಂಗಸ್ಥಲಗಳು ೫೭. ಹೀಗೆ ಒಟ್ಟು ೧೦೧ ಸ್ಥಲಗಳಿವೆ.

ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿಯಾಗಿ ಆಚರಿಸಬೇಕೆಂಬುದರ ವಿವರಣೆ ಇದೆ. ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಯಾವ ವಿಧದ ಪರಿಣಾಮಗಳು ಮನುಷ್ಯನ ಮೇಲೆ ಉಂಟಾಗುತ್ತವೆಂಬುದರ ವಿವರಣೆ ಇದೆ. ಅಂಗಸ್ಥಲಗಳು ಕ್ರಿಯೆಗಳನ್ನು ಹೇಳುತ್ತವೆ ಮತ್ತು ಆ ಕ್ರಿಯೆಗಳಿಂದ ಮನುಷ್ಯನಲ್ಲಿ ಪ್ರಗತಿಯು ಹೇಗೆ ಆಗುತ್ತದೆಂಬುದು ಲಿಂಗಸ್ಥಲಗಳಲ್ಲಿ ಹೇಳಲ್ಪಟ್ಟಿರುತ್ತದೆ.

ಅಂಗಸ್ಥಲಗಳಲ್ಲಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಮುಖ್ಯ ವಿಭಾಗಗಳಿರುತ್ತವೆ. ಈ ಪ್ರತಿಯೊಂದರಲ್ಲಿಯೂ ವಿಷಯಾನುಸಾರವಾಗಿ ಪುನಃ ಬೇರೆ ಬೇರೆ ವಿಭಾಗಗಳಾಗಿದ್ದು ಅವುಗಳ ಮೂಲಕ ಆಯಾ ಸ್ಥಲಗಳು ವಿವೇಚಿಸಲ್ಪಟ್ಟಿರುತ್ತವೆ. ಈ ಪ್ರಕಾರ ಭಕ್ತಸ್ಥಲದಲ್ಲಿ ೧೫, ಮಹೇಶ್ವರ ಸ್ಥಲದಲ್ಲಿ ೯, ಪ್ರಸಾದಿ ಸ್ಥಲದಲ್ಲಿ ೭, ಪ್ರಾಣಲಿಂಗಿಸ್ಥಲದಲ್ಲಿ ೫, ಶರಣಸ್ಥಲದಲ್ಲಿ ೪, ಐಕ್ಯಸ್ಥಲದಲ್ಲಿ ೪, ಹೀಗೆ ಒಟ್ಟು ೪೪ ಸ್ಥಲಗಳಾಗಿರುತ್ತವೆ.

ಭಕ್ತಸ್ಥಲ :

ಇದರಲ್ಲಿ ಪಿಂಡಸ್ಥಲವನ್ನು ಮೊದಲುಮಾಡಿಕೊಂಡು ಕಡೆಗೆ ಸಹಜ ಮಾಟಸ್ಥಲದವರೆಗೆ ೧೫ ಸ್ಥಲಗಳು ಇರುತ್ತವೆ. ಇವುಗಳಲ್ಲಿ ದೀಕ್ಷೆಯ ವಿಚಾರಗಳು ಮೊದಲು ಹೇಳಲ್ಪಡುವದುಂಟು. ಆ ಮೇಲೆ ಗುರು, ಲಿಂಗ, ಜಂಗಮ, ಪ್ರಸಾದ, ಈ ವಿಷಯಗಳು ತಾತ್ವಿಕ ರೀತಿಯಿಂದ ವಿವೇಚಿಸಲ್ಪಟ್ಟಿವೆ. ಆ ಮೇಲೆ ಮಾಟಗಳನ್ನು ಅಂದರೆ ಕ್ರಿಯೆಗಳನ್ನು ಹೇಗೆ ನಿರ್ವಹಿಸಬೇಕೆಂಬುದು ಹೇಳಲ್ಪಟ್ಟಿದೆ. ಈ ಮಾಟದಲ್ಲಿ ಉಪಾಧಿಮಾಟ, ನಿರುಪಾಧಿಮಾಟ ಮತ್ತು ಸಹಜಮಾಟ ಎಂದು ಮೂರು ವಿಭಾಗಗಳಿವೆ. ಇವುಗಳಲ್ಲಿ ಸಹಜಮಾಟವೇ ಕ್ರಿಯೆಗಳ ಅಂತಿಮ ಸ್ಥಿತಿಯನ್ನು ತೋರಿಸುತ್ತದೆ. ಹೀಗೆ ಈ ಸ್ಥಲದಲ್ಲಿ ಭಕ್ತನ ಆಚರಣೆಗಳು ಹೇಳಲ್ಪಟ್ಟಿವೆ.

ಮಹೇಶ್ವರಸ್ಥಲ :

ಇದರಲ್ಲಿ ಭಕ್ತನು ಒಬ್ಬನೇ ದೇವನಿದ್ದಾನೆಂದು ಭಾವಿಸಿ, ತನ್ನ ಕ್ರಿಯೆಗಳನ್ನು ಅತ್ಯಂತ ನಿಷ್ಠೆಯಿಂದ ಮಾಡಬೇಕು. ಈ ಸ್ಥಲದ ಕಡೆಯ ಮೆಟ್ಟಿಲು ಭಕ್ತದೇಹಿಕ ಲಿಂಗವಿರುತ್ತದೆ. ಎಂದರೆ ಪರಮಾತ್ಮನು ಭಕ್ತನ ದೇಹವೇ ತನ್ನ ದೇಹವನ್ನಾಗಿ ಮಾಡಿಕೊಂಡಿರುತ್ತಾನೆಂದು ಮಹೇಶ್ವರಸ್ಥಲದಲ್ಲಿಯ ಕಡೆಯ ಸ್ಥಿತಿಯ ವರ್ಣನೆ ಇರುತ್ತದೆ.

ಪ್ರಸಾದಿಸ್ಥಲ :

ಇದರಲ್ಲಿ ಭಕ್ತನು ತನ್ನದನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ಪ್ರಸಾದರೂಪಾಗಿ ಜಗತ್ತಿನಲ್ಲಿ ವ್ಯವಹರಿಸುತ್ತಾನೆ. ಈ ಸ್ಥಲದಲ್ಲಿ ಗುರು ಲಿಂಗ ಜಂಗಮದ ಮರ್ಮವನ್ನು ಅರಿಯಬೇಕು. ಇದನ್ನು ಅರಿತು ಅರ್ಪಣದ ರೀತಿಗಳನ್ನು ಅನುಸರಿಸಿದರೆ, ಅವನು ಪ್ರಸಾದಿಯಾಗುವನು.

ಮೇಲ್ಕಂಡ ಮೂರು ಸ್ಥಲಗಳ ಕ್ರಿಯೆಗಳಿಗೆ ಮಾರ್ಗಕ್ರಿಯೆಗಳೆಂಬ ಹೆಸರು. ಮುಂದಿನ ಮೂರು ಸ್ಥಲಗಳ ಕ್ರಿಯೆಗಳಿಗೆ ಮೀರಿದ ಕ್ರಿಯೆಗಳೆಂಬ ಹೆಸರು ಇದೆ.

ಪ್ರಾಣಲಿಂಗಿಸ್ಥಲ :

ಇದರ ಆರಂಭಸ್ಥಲವು ಪ್ರಾಣಲಿಂಗಾರ್ಚನೆ ಇದ್ದು ಅದರ ಮೂಲಕ ಶಿವಯೋಗವನ್ನು ಸಾಧಿಸಿ ಆ ಮೇಲೆ ಅಂಗಲಿಂಗಸ್ಥಲವನ್ನು ಹೊಂದಬೇಕು. ಈ ಕಡೆಯ ಸ್ಥಲದಲ್ಲಿ ಪ್ರಾಣವೇ ಲಿಂಗವಾಗಿ ಆಚರಿಸುವದನ್ನು ತಿಳಿಯಬೇಕು.

ಶರಣಸ್ಥಲ :

ಈ ಸ್ಥಲದ ವಿವೇಚನೆಯಲ್ಲಿ ವಚನಕಾರರು ವಾಡಿಕೆಯಾಗಿ ಜಂಗಮರಲ್ಲಿ ಕಂಡುಬರುವ ತಾಮಸವೃತ್ತಿಗಳನ್ನು ಟೀಕಿಸುವದುಂಟು. ಶರಣನು ಪ್ರಪಂಚದ ಕೀಳು ವ್ಯವಹಾರಗಳನ್ನು ತೊರೆಯಬೇಕು. ಇದರಲ್ಲಿ ಆರಂಭದ ಸ್ಥಲವು ತಾಮಸ ನಿರಸನವಿದ್ದು, ಕಡೆಯ ಸ್ಥಲವು ಶೀಲಸಂಪಾದನೆ ಇರುತ್ತದೆ. ಈ ಕಡೆಯದರಲ್ಲಿ ಶೀಲದ ಅತಿರೇಕಗಳು ಟೀಕಿಸಲ್ಪಡುತ್ತವೆ. ಇಂಥವುಗಳನ್ನು ಶರಣನು ತ್ಯಜಿಸಬೇಕು.

ಐಕ್ಯಸ್ಥಲ :

ಇದರಲ್ಲಿ ಸರ್ವಾಚಾರಸಂಪತ್ತು ಮೊದಲನೆಯ ಸ್ಥಲವಾಗಿದ್ದು ಕಡೆಗೆ ಏಕಭಾಜನ ಮತ್ತು ಸಹಭೋಜನಸ್ಥಲಗಳನ್ನು ಅಂದರೆ ಲಿಂಗಾಂಗಸಾಮರಸ್ಯತ್ವವನ್ನು ಹೊಂದಬೇಕೆಂದು ಹೇಳಿರುತ್ತದೆ.

ಈ ಎಲ್ಲ ವಿವರಣೆಗಳಲ್ಲಿ ಅಂಗಸ್ಥಲಗಳಲ್ಲಿ ಭಕ್ತನು ಆಚರಿಸಬೇಕಾದ ವರ್ತನೆಗಳೂ ಆಚಾರಗಳೂ ಕ್ರಿಯೆಗಳೂ ಹೇಳಲ್ಪಟ್ಟಿರುವದಾಗಿ ಕಂಡುಬರುತ್ತದೆ. ಈ ಆಚರಣೆಗಳಂತೆ ವರ್ತಿಸಿದ್ದಾದರೆ ಭಕ್ತನಲ್ಲಿಯ ಲಿಂಗದ ಪರಿಸ್ಥಿತಿಯು ಕ್ರಮೇಣ ಪ್ರಗತಿಯನ್ನು ಹೊಂದುತ್ತ ಹೋಗುತ್ತದೆ.

ಲಿಂಗದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಆರು ವಿಭಾಗಗಳಿವೆ. ಈ ಲಿಂಗಗಳು ಭಕ್ತನಲ್ಲಿ ಹೆಚ್ಚೆಚ್ಚು ಹೇಗೆ ಜಾಗ್ರತವಾಗುತ್ತ ಹೋಗುತ್ತವೆಂಬುದರ ತಿಳುವಳಿಕೆಯು ಲಿಂಗಸ್ಥಲದ ೫೭ ಸ್ಥಲಗಳಲ್ಲಿ ಹೇಳಲ್ಪಡುತ್ತದೆ.

ಆಚಾರಲಿಂಗದಲ್ಲಿ ೯, ಗುರುಲಿಂಗದಲ್ಲಿ ೯, ಶಿವಲಿಂಗದಲ್ಲಿ ೯, ಜಂಗಮಲಿಂಗದಲ್ಲಿ ೧೨, ಪ್ರಸಾದಲಿಂಗದಲ್ಲಿ ೯, ಮಹಾಲಿಂಗದಲ್ಲಿ ೯, ಹೀಗೆ ೫೭

ಲಿಂಗಸ್ಥಲಗಳಿರುತ್ತವೆ. ಈ ಲಿಂಗಗಳ ನಿಜಸ್ಥಿತಿಯನ್ನು ಭಕ್ತನು ಅರಿತು ಆಚರಿಸಬೇಕು.

ಮೇಲೆ ವಿವರಿಸಿದ ಮೇರೆಗೆ ಲಿಂಗಸ್ಥಲಗಳಲ್ಲಿ ೯ ಅಥವಾ ೧೨ ವಿಭಾಗಗಳು ಮಾಡಲ್ಪಟ್ಟಿದ್ದು ಇವುಗಳಲ್ಲಿ ಪುನಃ ಮೂರು ಅಥವಾ ನಾಲ್ಕು ವಿಭಾಗಗಳನ್ನು ಮಾಡಬಹುದು. ಜಂಗಮಲಿಂಗದಲ್ಲಿ ೪ ವಿಭಾಗಗಳು ಮತ್ತು ಉಳಿದವುಗಳಲ್ಲಿ ಮೂರು ಮೂರು ವಿಭಾಗಗಳು ಕಲ್ಪಿಸಲ್ಪಟ್ಟಿರುತ್ತವೆ.

ಆಚಾರಲಿಂಗ :

ಇದು ಗುರೂಪದೇಶಸ್ಥಾನವಾದ ದೀಕ್ಷೆಯಿಂದ ಆರಂಭವಾಗಿ ಗುರುಲಿಂಗ ಜಂಗಮಕ್ಕೆ ಸಂಬಂಧಿಸಿದ ಪ್ರಗತಿಯ ರೀತಿಗಳನ್ನು ಹೇಳಿ ಕಡೆಗೆ ಜಂಗಮದ ಅಂತ್ಯ ಸ್ಥಲವಾದ ಪರ ಎಂದರೆ ಭಕ್ತನು ಲಿಂಗದಲ್ಲಿ ಪರವಶ ಹೊಂದುವ ಸ್ಥಿತಿಯನ್ನು ನಿರೂಪಿಸುತ್ತದೆ. ಈ ಸ್ಥಲದಲ್ಲಿಯ ಗುರು, ಲಿಂಗ, ಜಂಗಮ ಈ ಪ್ರತಿಯೊಂದರಲ್ಲಿ ಪುನಃ ಮೂರು ಮೂರು ವಿಭಾಗಗಳಾಗಿದ್ದು ಅವೆಲ್ಲವೂ ಕೂಡಿ ಒಂಬತ್ತು ವಿಭಾಗಗಳು ಆಗಿರುತ್ತವೆ. ಇವೆಲ್ಲವು ಕ್ರಿಯಾರೂಪವಾದ ಆಚಾರಲಿಂಗಕ್ಕೆ ಸಂಬಂಧಿಸಿದ ಪ್ರಗತಿಯ ಮೆಟ್ಟಿಲುಗಳಾಗಿವೆ.

ಗುರುಲಿಂಗ :

ಗುರುಲಿಂಗವು ಆಚಾರಲಿಂಗದ ಕ್ರಿಯೆಗಳನ್ನು ಹೆಚ್ಚಿಗೆ ದೃಢಪಡಿಸುತ್ತದೆ. ಇದೇ ಅದರ ಮುಖ್ಯ ಕಾರ್ಯವು. ಇದರಲ್ಲಿ ಕ್ರಿಯೆಗಳನ್ನು ಹೇಳುವ 'ಆಗಮ ಲಿಂಗ'ದ ಮೂರು ವಿಭಾಗಗಳು, ಆ ಮೇಲೆ ಅವುಗಳಿಂದ ಕಾಯದ ಮೇಲೆ ಉಂಟಾಗುವ ಮೂರು ಪರಿಣಾಮಗಳು, ಆಮೇಲೆ ಮನುಷ್ಯನ ವರ್ತನೆಯಲ್ಲಿಯ ಮೂರು ವಿಭಾಗಗಳಾದ ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ ಈ ಎಲ್ಲವೂ ಕೂಡಿ ಒಂಬತ್ತು ವಿಭಾಗಗಳಾಗಿವೆ. ಇವುಗಳಲ್ಲಿ ಜ್ಞಾನಾಚಾರವೇ ಗುರುಲಿಂಗಕ್ಕೆ ಕಡೆಯದಾಗಿದೆ. ಗುರುಲಿಂಗವು ಪೂರ್ಣತೆಯನ್ನು ಹೊಂದಿದ ಸ್ಥಿತಿಯೇ ಇದು.

ಶಿವಲಿಂಗ :

ಶಿವಾರ್ಪಣದ ಮೂಲಕ ಕಾಯ, ಇಂದ್ರಿಯ ಮತ್ತು ಪ್ರಾಣ ಇವುಗಳ ಮೇಲೆ ಆಗುವ ಪರಿಣಾಮಗಳು ಮೂರು ಇವೆ. ಇವು ಇಲ್ಲಿ ಹೇಳಲ್ಪಟ್ಟಿವೆ. ಆ ಮೇಲೆ ಇವುಗಳಿಗನುಸಾರವಾಗಿ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳು ಮೂರು ಇವೆ. ಆಮೇಲೆ ಶಿಷ್ಯ ಮತ್ತು ಗುರು ಇವರಲ್ಲಿರುವ ಸಂಬಂಧದ ಮೂರು ವಿಷಯಗಳು ಹೀಗೆ ೯ ವಿಷಯಗಳು ಈ ಸ್ಥಲದಲ್ಲಿ ಹೇಳಲ್ಪಡುತ್ತವೆ. ಇದರಲ್ಲಿ ಕಡೆಗೆ ಶಿಷ್ಯ ಮತ್ತು ಗುರು ಇವರಲ್ಲಿ ಸಾಮರಸ್ಯ ಸ್ಥಿತಿಯು ಪ್ರಾಪ್ತವಾಗುವದು. ಇದೇ ಈ ಸ್ಥಲದ ಕಡೆಯ ಮೆಟ್ಟಲು.

ಜಂಗಮಲಿಂಗ :

ಈ ಸ್ಥಲದ ವಿಭಾಗಗಳಲ್ಲಿ ಜೀವಭಾವವನ್ನು ನಿವೃತ್ತಿಮಾಡಲು ಪ್ರವೃತ್ತವಾದ

ಜೀವಾತ್ಮಸ್ಥಲವೇ ಮೊದಲನೆಯದು. ಒಲವು ಲಿಂಗ ಎಂಬ ಹೆಸರುಳ್ಳ ಜೀವಾತ್ಮ, ಅಂತರಾತ್ಮ, ಪರಮಾತ್ಮಗಳೂ, ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ ವೆಂಬ ದೇಹದ ಮೂರು ಪರಿಸ್ಥಿತಿಗಳೂ, ಆ ಮೇಲೆ ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿಗಳೂ, ಆ ಮೇಲೆ ಸಾಮರಸ್ಯಬೋಧಕವಾದ ಪಾದೋದಕದ ಮೂರು ವಿಭಾಗಗಳು ಎಂದರೆ ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನ ಪಾದೋದಕ ಇವುಗಳೂ ವಿವರಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಕಡೆಯದು ಮಹಾಜ್ಞಾನ ಮುಖದಿಂದ ಪರಮಾನಂದೋದಕವನ್ನು ಪಡೆಯುವದೇ ಇರುತ್ತದೆ. ಇದು ಜ್ಞಾನ ಪಾದೋದಕವೆನಿಸುತ್ತದೆ. ಇದು ಜಂಗಮಲಿಂಗದ ಕಡೆಯ ಮೆಟ್ಟಲು.

ಪ್ರಸಾದಲಿಂಗ :

ಆರಂಭದಲ್ಲಿ ನಿಷ್ಪತ್ತಿಲಿಂಗದ ಮೂರು ವಿಭಾಗಗಳು, ಆ ಮೇಲೆ ಆಕಾಶಲಿಂಗದ ಮೂರು ವಿಭಾಗಗಳು, ಆ ಮೇಲೆ ಪ್ರಕಾಶಲಿಂಗದ ಮೂರು ವಿಭಾಗಗಳು, ಹೀಗೆ ೯ ಸ್ಥಲಗಳಿರುತ್ತವೆ. ಮೊದಲು ಭಕ್ತನು ಕ್ರಿಯೆಗಳ ನಿಷ್ಪತ್ತಿಯಿಂದ ಆರಂಭಿಸಿ ಕಡೆಗೆ ಜ್ಞಾನಪ್ರಕಾಶವನ್ನು ಹೊಂದಬೇಕು. ಇವು ಈ ಪ್ರಸಾದಲಿಂಗದಲ್ಲಿ ನಿರೂಪಿಸಲ್ಪಟ್ಟ ವಿಷಯಗಳಾಗಿವೆ. ಅವುಗಳಲ್ಲಿ ಶರಣನ ಜ್ಞಾನಪ್ರಕಾಶವೇ ಕಡೆಯ ಸ್ಥಿತಿಯಾಗಿದೆ.

ಮಹಾಲಿಂಗ :

ಇದರಲ್ಲಿ ಒಂಬತ್ತು ವಿಭಾಗಗಳಿರುತ್ತವೆ. ಈ ಒಂಬತ್ತು ವಿಭಾಗಗಳನ್ನು ಪುನಃ ಮೂರು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ.

ಮೊದಲನೆಯ ವಿಭಾಗದಲ್ಲಿ ಕೊಂಡುದುಪ್ರಸಾದಿಸ್ಥಲ, ನಿಂದು ದೋಗರಸ್ಥಲ, ಚರಾಚರನಾಸ್ತಿಸ್ಥಲ, ಇವುಗಳು ಬರುತ್ತವೆ. ಇವುಗಳಲ್ಲಿ ಅಂಗದ ಉತ್ಕೃಷ್ಟ ಸ್ಥಿತಿಗಳಾದ ತೃಪ್ತಿ ಸ್ಥಿರತೆ ಮತ್ತು ಲಿಂಗಲಯತ್ವ ಇವುಗಳು ಅನುಕ್ರಮವಾಗಿ ಹೇಳಲ್ಪಡುತ್ತವೆ. ಎರಡನೆಯ ವಿಭಾಗದಲ್ಲಿ ಬರುವ ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ ಇವುಗಳಲ್ಲಿ ಅಂಗ ಲಿಂಗ ಸಂಬಂಧಗಳು ಹೇಳಲ್ಪಡುತ್ತವೆ. ಮೂರನೆಯ ವಿಭಾಗದಲ್ಲಿ ಬರುವ ಸ್ವಯಪರವರಿಯದಸ್ಥಲ, ಭಾವಾಭಾವನಷ್ಟಸ್ಥಲ ಮತ್ತು ಜ್ಞಾನಶೂನ್ಯಸ್ಥಲ ಇವುಗಳಲ್ಲಿ ಶೂನ್ಯಸ್ಥಲಗಳ ವಿಚಾರಗಳು ಹೇಳಲ್ಪಡುತ್ತವೆ. ಇವುಗಳಲ್ಲಿ ಜ್ಞಾನಶೂನ್ಯವೇ ಕಡೆಯಸ್ಥಲವಾಗಿದೆ.

ಈ ಪ್ರಕಾರ ನೂರೊಂದು ಸ್ಥಲಗಳಲ್ಲಿ ಆರಂಭದಲ್ಲಿ ಪಿಂಡಸ್ಥಲವು ವಿವರಿಸಲ್ಪಟ್ಟು ಅಲ್ಲಿಂದ ಮುಂದೆ ಅದರ ಕ್ರಿಯೆಗಳಾವವು, ಆ ಕ್ರಿಯೆಗಳಿಂದ ಲಿಂಗದ ಪ್ರಗತಿಯು ಹೇಗೆ ಹೇಗೆ ಆಗುತ್ತ ಹೋಗುತ್ತದೆ, ಈ ಮೊದಲಾದ ಮಹತ್ವದ ವಿಷಯಗಳು ಕ್ರಮವಾಗಿ ಹೇಳಲ್ಪಡುತ್ತವೆ. ಈ ಪ್ರಕಾರ ಮನುಷ್ಯನು ವರ್ತಿಸುತ್ತ ಹೋದಲ್ಲಿ ಯಾವ ಶೂನ್ಯಸ್ಥಲದಿಂದ ಅವನು ಮೊದಲು ಹೊರಟಿದ್ದನೋ ಆದರಲ್ಲಿಯೇ ಕಡೆಗೆ ಲಯಹೊಂದುವನು. ಈ ಕಡೆಯದೇ ಲಿಂಗಾಂಗ ಸಾಮರಸ್ಯವು.

ಈ ವಿಷಯಗಳ ವಿಸ್ತಾರವಾದ ವಿವೇಚನೆಯು ಏಕೋತ್ತರಶತಸ್ಥಲ ಅಥವಾ ನೂರೊಂದು ಸ್ಥಲಗಳಲ್ಲಿ ಬಂದಿರುತ್ತದೆ.

ಈ ವಿಷಯದಲ್ಲಿ ಕೆಲವು ವಿಶೇಷ ಸಂಗತಿಗಳನ್ನು ನಾನು ಇಲ್ಲಿ ಉಲ್ಲೇಖಿಸುವದು ಅವಶ್ಯವಾಗಿರುತ್ತದೆ. ಅವು ಯಾವುವೆಂದರೆ:

ಷಟ್‌ಸ್ಥಲಗಳ ಮೂಲ ತಾತ್ವಿಕ ವಿವರಣೆಯಲ್ಲಿ ಅಂದರೆ ಆರಂಭದ ೧, ೨, ೩, ೬, ೧೮, ೩೬, ಈ ಸ್ಥಲಗಳ ನಿರೂಪಣೆಯಲ್ಲಿ ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳಿಗನುಸಾರವಾಗಿ ಹೆಸರುಗಳು ಇವೆ. ಇವು ಇಷ್ಟ, ಪ್ರಾಣ, ಭಾವವೆಂತಲೂ ಅಥವಾ ಕಾಯ, ಕರಣ, ಭಾವವೆಂತಲೂ ಬಹುತರವಾಗಿ ಇರುವದು ಕಂಡು ಬರುತ್ತದೆ. ಆದರೆ ಏಕೋತ್ತರಶತಸ್ಥಲದಲ್ಲಿ ಮಾಡಿದ ವಿಭಾಗಗಳ ಹೆಸರುಗಳು ಮಾತ್ರ ಬಹುಕಡೆಗೆ ಬೇರೆ ಇರುವದಾಗಿ ಕಂಡುಬರುತ್ತದೆ. ಅವು ಯಾವುವೆಂದರೆ :

೧. (ಅ) ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ
(ಬ) ಕ್ರಿಯಾಗಮ, ಭಾವಾಗಮ, ಜ್ಞಾನಗಮ
(ಕ) ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ
(ಡ) ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ
(ಇ) ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ
(ಫ) ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ

ಇಲ್ಲಿ 'ಭಾವ' ಈ ಶಬ್ದವು ಕಡೆಯಲ್ಲಿರದೆ ಮಧ್ಯದಲ್ಲಿ ಬಂದಿದೆ.

ಅಲ್ಲದೆ ಈ ಕೆಳಗೆ ಕಾಣಿಸಿದಂತೆ ಬೇರೆ ಹೆಸರಿನ ವಿಭಾಗಗಳೂ ಇರುತ್ತವೆ. ಅವು ಯಾವುವೆಂದರೆ:

೨. ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ.

೩. ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ.

ಇವುಗಳಲ್ಲಿ ೨ನೇ ೩ನೇ ವಿಭಾಗಗಳು ಮೂಲ ಷಟ್‌ಸ್ಥಲಗಳಲ್ಲಿಯಂತೆಯೇ ಇವೆ.

ಈ ಎಲ್ಲ ವಿಭಾಗಗಳು ಶಾಬ್ದಿಕ ಭೇದಗಳಾಗಿವೆಯೇ ಹೊರತು ಅವುಗಳ ವಿವೇಚನೆಯಲ್ಲಿ ಮಾತ್ರ ವಚನಕಾರರು ಯಾವ ಬಗೆಯ ಭೇದವನ್ನು ಮಾಡಿಲ್ಲ. ಅವುಗಳ ನಿರೂಪಣೆಯನ್ನು ಅವರು ಸ್ಥೂಲ, ಸೂಕ್ಷ್ಮ ಕಾರಣ ಈ ಶರೀರಗಳ ವ್ಯಾಪಾರಗಳಿಗನುಸಾರವಾಗಿಯೇ ಮಾಡುತ್ತಾರೆ.

ನೂರೊಂದುಸ್ಥಲಗಳಲ್ಲಿಯ ಮೇಲ್ಕಂಡ ವಿಭಾಗಗಳು ಕ್ರಿಯಾದೃಷ್ಟಿಯಿಂದ ಮಾಡಲ್ಪಟ್ಟಿದ್ದಾಗಿ ತೋರುತ್ತದೆ. ಇಲ್ಲಿ ಭಾವ ಎಂಬುದು ೩ ನೆಯ ಸ್ಥಲದಲ್ಲಿ ಬರದೆ ೨ ನೆಯದಾಗಿ ಹೇಳಲ್ಪಟ್ಟಿದೆ. ಇಲ್ಲಿ ಇದರ ಅರ್ಥವು ಮನ, ಚಿತ್ತ ಎಂದು ಮಾತ್ರ

ಇದೆ. ಇದು ಇಲ್ಲಿ ಕಾರಣಶರೀರಕ್ಕೆ ಸಂಬಂಧಪಟ್ಟಿರದೆ ಸೂಕ್ಷ್ಮಸ್ಥಲಕ್ಕೆ ಸಂಬಂಧಿಸಿದ ಕರಣಗಳು, ಇಂದ್ರಿಯಗಳು, ಇವುಗಳಿಗೆ ಸಂಬಂಧಪಟ್ಟಿದೆ.

ಆದರೆ ೩೬ ಸ್ಥಲಗಳುಳ್ಳ ಷಟ್‌ಸ್ಥಲದ ವಿವೇಚನೆಯಲ್ಲಿ ಬರುವ ಭಾವವು ೩ ನೆಯದಾದ ಕಾರಣಶರೀರಕ್ಕೆ ಸಂಬಂಧಪಟ್ಟು ಅದಕ್ಕೆ ಜ್ಞಾನ, ತೃಪ್ತಿ, ಪರಿಣಾಮ ಎಂದು ವಚನಕಾರರು ಅರ್ಥವನ್ನು ಕೊಟ್ಟಿರುತ್ತಾರೆ. ಹೀಗೆ ಭಾವ ಶಬ್ದಕ್ಕೆ ಎರಡು ಅರ್ಥಗಳಿದ್ದು ಅವುಗಳನ್ನು ನಾವು ಇಲ್ಲಿ ಏಕೋತ್ತರದ ವಿವೇಚನೆಯಲ್ಲಿ ವಿಂಗಡಿಸುವದು ಅವಶ್ಯವಿರುತ್ತದೆ.

ನೂರೊಂದುಸ್ಥಲಗಳ ವಿವೇಚನೆಯಲ್ಲಿ ಕೆಲವು ಕಡೆಗೆ ಸ್ಥಲಗಳ ಹೆಸರುಗಳು ಪೂರ್ಣ ಕನ್ನಡ ಶಬ್ದಗಳಿರುವದು ಕಂಡುಬರುತ್ತದೆ. ಬೇರೆ ಕೆಲವೆಡೆ ಕನ್ನಡ ಮಿಶ್ರಿತ ಶಬ್ದಗಳೂ ಇರುತ್ತವೆ. ಉದಾ: ಉಪಾಧಿಮಾಟಸ್ಥಲ, ನಿರುಪಾಧಿಮಾಟಸ್ಥಲ, ಸಹಜಮಾಟಸ್ಥಲ, ಕೊಂಡುದು ಪ್ರಸಾದಿಸ್ಥಲ, ನಿಂದುದೋಗರಸ್ಥಲ, ಒಲವು ಲಿಂಗ, ಇತ್ಯಾದಿ. ಆದರೆ ಸಂಸ್ಕೃತ ಗ್ರಂಥಗಳಲ್ಲಿ ಈ ಕನ್ನಡ ಶಬ್ದಗಳ ಬದಲು ಪೂರ್ಣ ಸಂಸ್ಕೃತ ಶಬ್ದಗಳೇ ಉಪಯೋಗಿಸಲ್ಪಟ್ಟಿರುತ್ತವೆ.

ನಾವು ಇಲ್ಲಿ ನೂರೊಂದು ಸ್ಥಲದ ವಿವೇಚನೆಯಲ್ಲಿ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ ಮೊದಲಾದ ಪ್ರತಿಯೊಂದು ಸ್ಥಲದ ಆರಂಭದಲ್ಲಿ ಆಯಾ ಸ್ಥಲಗಳ ರೀತಿ, ಮರ್ಮ, ವಿಚಾರಗಳನ್ನು ಸೂಚನಾತ್ಮಕವಾಗಿಮಾತ್ರ ಕೊಟ್ಟಿರುತ್ತೇವೆ. ಅವುಗಳನ್ನು ವಾಚಕರು ಲಕ್ಷಿಸಿ, ಆ ದೃಷ್ಟಿಯಿಂದ ಪ್ರತಿಯೊಂದು ಸ್ಥಲದಲ್ಲಿ ಹೇಳಿದ ವಚನಗಳನ್ನು ಅವರು ಅವಲೋಕಿಸಿ, ಅವುಗಳ ಮರ್ಮವನ್ನು ಅರಿತುಕೊಳ್ಳ ಬೇಕೆಂದು ನಾವು ಸೂಚಿಸುತ್ತೇವೆ.

ಅಂಗಸ್ಥಲಗಳು

ಈ ಸ್ಥಲಗಳು ಳಳ ಇದ್ದು ಇವುಗಳಲ್ಲಿ ಷಟ್‌ಸ್ಥಲಗಳ ಪ್ರಕಾರ ಆರು ವಿಭಾಗಗಳಿವೆ. ಇವುಗಳಲ್ಲಿ ಮೊದಲನೆಯದು ಭಕ್ತಸ್ಥಲವು.

ಭಕ್ತಸ್ಥಲ

ವಿವರಣೆ : ಭಕ್ತನ ಆಚರಣೆಯಲ್ಲಿ ೧೫ ಸ್ಥಲಗಳಿರುತ್ತವೆ. ಈ ಆಚರಣೆಗಳಲ್ಲಿಳ ವಿಭಾಗಗಳನ್ನು ನಾವು ಕಲ್ಪಿಸಬಹುದು. ಅವು ಯಾವುವೆಂದರೆ ಮೊದಲನೆಯ ವಿಭಾಗದಲ್ಲಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ ಮತ್ತು ಸಂಸಾರಹೇಯಸ್ಥಲ ಇವು ಬರುತ್ತವೆ. ಎರಡನೆಯ ವಿಭಾಗದಲ್ಲಿ ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಸ್ಥಲ ಈ ಆರು ಸ್ಥಲಗಳು ಬರುತ್ತವೆ. ಮೂರನೆಯ ವಿಭಾಗದಲ್ಲಿ ಉಭಯಸ್ಥಲ, ತ್ರಿವಿಧ ಸಂಪತ್ತುಸ್ಥಲ, ಚತುರ್ವಿಧ ಸಾರಾಯಸ್ಥಲ ಈ ಮೂರು ಬರುವವು. ಮತ್ತು ನಾಲ್ಕನೆಯ ವಿಭಾಗದಲ್ಲಿ

ಉಪಾಧಿಮಾಟಸ್ಥಲ, ನಿರುಪಾಧಿಮಾಟಸ್ಥಲ, ಸಹಜಮಾಟಸ್ಥಲ ಈ ಮೂರು ಬರುವವು.

ಹೇಗೆ ಜಗತ್ತಿನಲ್ಲೆಲ್ಲ ಮೊದಲು, ಸರ್ವಶೂನ್ಯನಿರಾಲಂಬ ಸ್ಥಿತಿಯಲ್ಲಿ ಪರಮಾತ್ಮನು ಇರುವನೋ, ಹಾಗೆಯೇ ಮನುಷ್ಯನಲ್ಲಿಯೂ ಅವನು ಪ್ರಕಟವಾಗದೆ ನಿರಾಕಾರಸ್ಥಿತಿಯಲ್ಲಿ ಇರುತ್ತಾನೆ. ಈ ಸ್ಥಿತಿಯು ಪಿಂಡಸ್ಥಲವು. ಆ ಮೇಲೆ ಮುಂದೆ ಈ ಜಗತ್ತಿನಲ್ಲಿ ಮೂಲ ಚಿತ್ತು ಹೇಗೆ ಉದಯವಾಯಿತೋ ಹಾಗೆಯೇ ಮನುಷ್ಯನಲ್ಲಿಯೂ ಚಿತ್ತು ಉದಯವಾಗಲು ಅದೇ ಜ್ಞಾನೋದಯವೆನಿಸಿಕೊಳ್ಳುವದು. ಮುಂದೆ ಈ ಜ್ಞಾನೋದಯದಿಂದ ಮನುಷ್ಯನು ತನ್ನ ಹೀನತರದ ಸ್ಥಿತಿಯನ್ನು ತಿಳಿದು ಶ್ರೇಷ್ಠ ಸ್ಥಿತಿಯನ್ನು ಹೊಂದಲು ಅಪೇಕ್ಷೆಯುಳ್ಳವನಾಗುವನು. ಇವುಗಳಿಗೆ ಅನುಕ್ರಮವಾಗಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ ಮತ್ತು ಸಂಸಾರಹೇಯಸ್ಥಲ ಎಂಬ ಹೆಸರುಗಳಿರುತ್ತವೆ. ಈ ಸ್ಥಲಗಳು ಭಕ್ತನಲ್ಲಿಯ ಪ್ರಗತಿಯ ಪ್ರಥಮ ಚಿಹ್ನೆಗಳಾಗಿವೆ. ಇದು ಮೊದಲನೆಯ ವಿಭಾಗವು.

ಆಮೇಲೆ ಮನುಷ್ಯನು ಹೆಚ್ಚಿನ ಸ್ಥಿತಿಯನ್ನು ಹೊಂದಲು ಅಪೇಕ್ಷಿಸಿ ಗುರುವಿನ ಮೂಲಕ ದೀಕ್ಷೆಯನ್ನು ಹೊಂದುವನು. ಇಲ್ಲಿ ಅವನು ಲಿಂಗ, ವಿಭೂತಿ, ರುದ್ರಾಕ್ಷಿ ಮಂತ್ರಗಳಿಂದ ಕೂಡಿದವನಾಗಿ ತನ್ನ ಪೂರ್ವ ಸ್ಥಿತಿಯನ್ನು ಬಿಟ್ಟು ಭಕ್ತಿಭಾವದಿಂದ ಆಚರಿಸುವನು. ಇದು ಭಕ್ತಸ್ಥಲದಲ್ಲಿಯ ಎರಡನೆಯ ವಿಭಾಗವು.

ತರುವಾಯ ಅವನು ತನ್ನ ದೇಹ ಮತ್ತು ತನ್ನ ಪ್ರಾಣಗಳಲ್ಲಿ ಕರ್ತೃ ಭೃತ್ಯಭಾವವನ್ನು ಹೊಂದಿ ಆಚರಿಸುತ್ತಾನೆ. ತನ್ನ ದೇಹವೇ ಭಕ್ತನೆಂತಲೂ, ಪ್ರಾಣವೇ ಜಂಗಮವೆಂತಲೂ ಭಾವಿಸಿ ವರ್ತಿಸುತ್ತಾನೆ. ಇದು ಭಕ್ತ ಜಂಗಮವನ್ನು ಒಳಕೊಂಡ ಉಭಯಸ್ಥಲವು. ಹೀಗೆ ಭಕ್ತ ಜಂಗಮವನ್ನು ತಿಳಿದು ತನ್ನ ತನುವಿನಲ್ಲಿ ಆಚಾರ, ತನ್ನ ಪ್ರಾಣದಲ್ಲಿ ಲಿಂಗ ಮತ್ತು ತನ್ನ ಅರಿವಿನಲ್ಲಿ ಜಂಗಮವನ್ನು ಸಂಬಂಧಿಸಿಕೊಂಡು ಆಚರಿಸಬೇಕು. ಇಲ್ಲಿ ಚಿತ್‌ಶಕ್ತಿಮಯವಾದ ಜ್ಞಾನವೇ ಜಂಗಮವೆಂದು ತಿಳಿಯಬೇಕು. ಇದು ತ್ರಿವಿಧಸಂಪತ್ತುಸ್ಥಲವಾಗಿದೆ. ಹೀಗೆ ಅಂಗದಲ್ಲಿ ಗುರು, ಮನದಲ್ಲಿ ಲಿಂಗ, ಅರಿವಿನಲ್ಲಿ ಜಂಗಮವನ್ನು ಸಂಬಂಧಿಸಿಕೊಂಡು ಆಚರಿಸಿದಲ್ಲಿ ಅವನಲ್ಲಿ ಪ್ರಸಾದವು ಹೊರಹೊಮ್ಮಿ ಅದರ ಪ್ರಭಾವದಲ್ಲಿಯೇ ಅವನು ಎಲ್ಲ ಬಗೆಯ ಕ್ರಿಯೆಗಳನ್ನು ಮಾಡುವನು. ಇದು ಚತುರ್ವಿಧ ಸಾರಾಯಸ್ಥಲವು. ಇದು ಭಕ್ತಸ್ಥಲದಲ್ಲಿಯ ಮೂರನೆಯ ವಿಭಾಗವಾಗಿದೆ.

ಇಂತಹ ಭಕ್ತನು ಆಚರಿಸುವ ಕ್ರಿಯೆಗಳಲ್ಲಿ ಮುಂದೆ ಮೂರು ವಿಧಗಳು ಕಲ್ಪಿಸಲ್ಪಟ್ಟಿವೆ. ಅವು ಉಪಾಧಿಮಾಟ, ನಿರುಪಾಧಿಮಾಟ ಮತ್ತು ಸಹಜಮಾಟ ಎಂದು ಹೇಳಲ್ಪಟ್ಟಿವೆ. ಸಕಲರ ಹಿತಕ್ಕಾಗಿ ಕಾರ್ಯಮಾಡುವದೇ ಮೊದಲನೆಯದಾದ ಉಪಾಧಿಮಾಟವೆನಿಸುತ್ತದೆ. ಕೇವಲ ದಾಸೋಹ ಭಾವದಿಂದ ಕಾರ್ಯ ಮಾಡುವದೇ ನಿರುಪಾಧಿಮಾಟವು, ಮತ್ತು ಸಮರಸಭಾವದಿಂದ ಅಂದರೆ, ತಾನು,

ತಾನು ಮಾಡುವ ಕ್ರಿಯೆ ಮತ್ತು ಮಾಡಿಸಿಕೊಂಬ ವಸ್ತು ಇವುಗಳಲ್ಲಿ ಅವಿನಾಭಾವದಿಂದ ಕಾರ್ಯಮಾಡುವದೇ ಸಹಜಮಾಟವಾಗಿದೆ. ಇದು ಅವನ ಕ್ರಿಯೆಗಳ ಅಂತಿಮ ಸ್ಥಿತಿಯು. ಇದು ನಾಲ್ಕನೆಯ ವಿಭಾಗವು.

ಹೀಗೆ ಭಕ್ತಸ್ಥಲದಲ್ಲಿ ೧೫ ಸ್ಥಲಗಳನ್ನು ವಚನಕಾರರು ಕಲ್ಪಿಸಿ ಭಕ್ತನಾರೆಂಬುದನ್ನು ಕುರಿತು ವಿವೇಚಿಸಿರುವರು.

೧. ಪಿಂಡಸ್ಥಲ

೨೫೧

(೧) ಶಿಲೆಯೊಳಗಣ ಪಾವಕನಂತೆ ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ, ಗುಹೇಶ್ವರಾ ನಿಮ್ಮ ಶರಣ ಸಂಬಂಧ.

ಟೀಕು : ಶಿಲೆಯೊಳಗಿದ್ದ ಅಗ್ನಿ ಮೈದೋರದ ಹಾಗೆ, ಪರಬ್ರಹ್ಮ ಪಿಂಡಸ್ಥಲವಾಗಿಯೂ ಕಾಣಿಸಬಾರದೆಂಬುದೀಗ, ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕ್ಕರ್ಥ. ಆವುದಾನೊಂದು ಪ್ರತಿಬಿಂಬವು ಉದಕದೊಳಗಿರ್ದು, ಉದಕದ ಗುಣಧರ್ಮ ಕರ್ಮವ ಹೊದ್ದದ ಹಾಗೆ, ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಪಿಂಡದ ಗುಣಧರ್ಮ ಕರ್ಮವ ಹೊದ್ದದಿಪ್ಪುದೀಗ, ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ. ಬೀಜದೊಳಗಿರ್ಪ ವೃಕ್ಷದ ಹಾಗೆ, ಆ ಪರಬ್ರಹ್ಮವು ಪಿಂಡದ ಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ. ಶಬ್ದದೊಳಗೆ ನಿಶ್ಶಬ್ದವಿದ್ದುದನು ಭೇದಿಸಬಾರದ ಹಾಗೆ ಆ ಪರಬ್ರಹ್ಮವು ಪಿಂಡಸ್ಥಲವಾಗಿರ್ದು ಅಭೇದವಾಗಿರ್ಪುದೀಗ, ಶಬ್ದದೊಳಗಣ ನಿಶ್ಶಬ್ದದಂತೆ ಎಂಬ ಶಬ್ದಕ್ಕರ್ಥ.

೨೫೨

(೨) ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದ್ದಿತ್ತು, ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು, ನನೆಯೊಳಗಣ ಪರಿಮಳದಂತೆ ಇದ್ದಿತ್ತು, ಕೂಡಲ ಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು.

೨೫೩

(೩) ಫಲದೊಳಗಣ ಮಧುರದ ಗೋಪ್ಯದಂತಿದ್ದಿತ್ತು, ಚಂದ್ರಕಾಂತದ ಉದಕದ ಪರಿಯಂತಿದ್ದಿತ್ತು, ಶಿಸುಕಂಡ ಕನಸಿನ ತೆರದಂತಿದ್ದಿತ್ತು, ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

೨೫೪

(೪) ಮರೀಚಿಯೊಳಗಡಗಿದ ಬಿಸಿಲಿನಂತೆ ಇದ್ದಿತ್ತು, ಕ್ಷೀರದೊಳಗಣ ತುಪ್ಪದಂತಿದ್ದಿತ್ತು, ಚಿತ್ರಕನೊಳಡಗಿದ ಚಿತ್ರದಂತಿದ್ದಿತ್ತು, ಆಲಿಯೊಳಗಡಗಿದ ತೇಜ

ದಂತಿದ್ದಿತ್ತು, ನುಡಿಯೊಳಡಗಿದ ಅರ್ಥದಂತಿದ್ದಿತ್ತು ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

ಇಂತಪ್ಪ ಮಹತ್ ಪಿಂಡಸ್ಥಲವು ತನ್ನ ಲೀಲೆಯಿಂ ತನ್ನೊಳಡಗಿದ ಸಕಲ ನಿಷ್ಕಲಾತ್ಮಕ ತತ್ವಂಗಳನುಂಟುಮಾಡಿ ತೋರಬೇಕೆಂದಿಚ್ಛಿಸಲು ಅಲ್ಲಿ ಜ್ಞಾನೋದಯವಾಗಿತ್ತಾಗಿ, ಮುಂದೆ ಪಿಂಡಜ್ಞಾನಸ್ಥಲವಾದುದು.

೨. ಪಿಂಡಜ್ಞಾನಸ್ಥಲ

೨೫೫

(೧) ಅಯ್ಯಾ ನೀನು ನಿರಾಕಾರವಾಗಿದ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ಸಾಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನೆನ್ನ ಭವವ ಕೊಂದಿಹೆನೆಂದು ಬಂದಲ್ಲಿ ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ ಕೂಡಲಸಂಗಮದೇವಾ.

೨೫೬

(೨) ಅಂಕುರ, ಫಲ, ತರು, ಕುಸುಮ, ಪರಿಮಳ, ಫಲರಸ ಸಾರಾಯ ಇನಿತಿನಿತೆಲ್ಲಿರ್ದುದೋ, ಬೀಜ ಮೊಳೆದೋರದಂದು ? ನಾಭಿಗಳೆಯದ ಪಶುವಿನ ಅಮೃತವೆಲ್ಲಿರ್ದುದೋ, ವೃಷಭಮುಟ್ಟದಂದು ? ಶರಧಿಯ ಸಿಂಪಿನ ರತ್ನವೆಲ್ಲಿರ್ದುದೋ, ಸ್ವಾತಿಯ ಸಲಿಲವಿಲ್ಲದಂದು ? ಸಪ್ತಸ್ವರ ಅಕ್ಷರ ವಸುಕ ವರ್ಣಕವೆಲ್ಲಿರ್ದುದೋ, ಜ್ಞಾನ ಉದಯಿಸದಂದು ? ತ್ರಿಜಗದುತ್ಪತ್ತಿ ಸ್ಥಿತಿ ಲಯ ಕಾರಣ ಸಚರಾಚರ ಗಂಭೀರವೆಲ್ಲಿರ್ದುದೋ, ಶಿವನ ಅಷ್ಟತನುಮೂರ್ತಿಗಳಿಲ್ಲದಂದು? ಶರಣಪಥ ಲಿಂಗೈಕ್ಯವೆಲ್ಲಿರ್ದುದೋ ಆರಾಧ್ಯಲಿಂಗ ಸಕಳೇಶ್ವರ ಮಹಾಘನ ಲಿಂಗವಿಹನೆಂದು ಅರಿಯದಂದು ?

೨೫೭

(೩) ಅಯ್ಯಾ, ನೀನು ನಿರಾಳ [೧][ನಿರಾಮ][೧]ಯನಾಗಿಪ್ಪೆಯಾಗಿ, ಆಕಾಶ ಪ್ರಕಾಶ ವಿಲ್ಲದಂದು, ಸಾಕ್ಷಿ ಸಭೆಗಳಿಲ್ಲದಂದು, ಸಚರಾಚರಂಗಳೆಲ್ಲ ರಚನೆಗೆ ಬಾರದಂದು, ಆಧಾರದೊಳಗಣ ವಿಭೂತಿಯನೆ ತೆಗೆದು ಭೂಮಿಯ ನೆಲೆಗೊಳಿಸಿ, ಪಂಚಾಶತ್ ಕೋಟಿ ವಿಸ್ತೀರ್ಣ ಭೂಮಂಡಲಕ್ಕೆ ಸುತ್ತಿ ಹರಿದವು ಸಪ್ತಸಾಗರಂಗಳು. ಎಂಬತ್ತಾರು ಕೋಟಿಯೂ ತೊಂಬತ್ತೇಳು ಲಕ್ಷ ಕಾಲ ಭುವನ ಮಂಡಲಕ್ಕೆ ಉದಯ ಬ್ರಹ್ಮಾಂಡ ಅರುವತ್ತಾರು ಕೋಟಿ ತಾರಾ ಮಂಡಲವೆಂದರೆ, ಬೆಳಗಿ ತೋರಿದ ಹನ್ನೆರಡು ಜ್ಯೋತಿಯ. ನಿಲಿಸಿ ತೋರಿಸಿದ ಹದಿನಾಲ್ಕು ಭುವನವ. ಈ ಜಗದ ಜಂಗುಳಿಯ ಕಾವ ಗೋವಳ ತಾನಾಗಿ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಿಗೆ

೧–೧ ನಿರ್ಮಯ (ಮೂ)

ರಾಶಿವಾಳ ತಾನಾಗಿ, ಸಕಲದ ಅಳಿವಿನ, ಉಳಿವಿನ ನಿಂದ ನಿಲವ ನೋಡಿ ಕಂಡೆ. ಗುಹೇಶ್ವರಾ ನಿಮ್ಮ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು.

ಇಂತು ಪಿಂಡ ಜ್ಞಾನ ಉದಯವಾದ ಮಹಾತ್ಮನು ನಿತ್ಯಾನಿತ್ಯ ವಿವೇಕವನರಿದು ಅನಿತ್ಯವಾದ ಸಂಸಾರ ಹೇಯೋಪಾಯವಂ ತಾನು ನಿರಸನವಂ ಮಾಡುತ್ತಿರಲು ಮುಂದೆ ಸಂಸಾರಹೇಯಸ್ಥಲವಾದುದು.

೩. ಸಂಸಾರಹೇಯಸ್ಥಲ

೨೫೮

(೧) ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವ ಗ್ರಾಸಿಯಾಗಿ ನುಂಗಿತ್ತಯ್ಯ. ಇಂ[ದೆ][೧]ನ್ನ ದೇಹಕ್ಕೆ ಗ್ರಹಣವಾಯಿತ್ತು ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ ?

೨೫೯

(೨) ಒಂದು ಯೋನಿಯಲ್ಲಿ ಬಂದ ದುಃಖವ ನಾನೆಂದೆಂದಿಗೂ ಕಳೆಯಲಾರೆ. ಎಂಬತ್ತು ನಾಲ್ಕು ಲಕ್ಷಯೋನಿ ಎಂದರೆ ಇನ್ನೇವೆನಯ್ಯಾ? ನೊಂದೆನಯ್ಯಾ, ನೊಂದೆನಯ್ಯಾ, ಮತ್ತೊಂದನರಿಯದ ಶಿಸು ಬೆಂದೆನಯ್ಯ ! ಶಿವಶಿವಾ, ಎನ್ನ ಕಂದ ನೀ ಬಾರೆಂದು ಕಂಬನಿಯ ತೊಡೆದು ಎತ್ತಿ ಎತ್ತಿ ಆನಂದದಿಂದ ಕಣ್ದೆರೆ ಉಳಿಯು ಮೇಶ್ವರಾ.

ಇಂತೀ ಸಂಸಾರಹೇಯವಂ ನಿರಸನವಂ ಮಾಡಿ ತನ್ನ ನಿಜವ ತಾನೇ ನೋಡಿಹೆನೆಂದರೆ ಇದಿರಿಟ್ಟಿಲ್ಲದೆ ತನ್ನ ಕಾಣಬಾರದು. ಅದೆಂತೆಂದೊಡೆ : ತನ್ನ ಮುಖವ ತಾ ನೋಡಿಹೆನೆಂದರೆ, ಇದಿರಿಟ್ಟಿಲ್ಲದೆ ತನ್ನ ತಾ ಕಾಣಬಾರದು. ಅದೆಂತೆಂದೊಡೆ : ತನ್ನ ಮುಖವ ತಾ ನೋಡಿಹೆನೆಂಬುವನು ಇದಿರಿಂಗೆ ಕನ್ನಡಿಯ ಪಿಡಿದಲ್ಲದೆ ತನ್ನ ಕಾಣೆನೆಂದು ಕನ್ನಡಿಯನುಂಟುಮಾಡಿಕೊಂಡು ನೋಡುವನಂತೆ ತನ್ನನಿದಿರಿಂಗೆ ಗುರುವನುಂಟುಮಾಡಿಕೊಂಡು ಉಪಾವಸ್ಥೆಯಂ ಮಾಡಲು ಮುಂದೆ ಗುರುಕರುಣಸ್ಥಲಮಾದುದು.

೪. ಗುರುಕರುಣಸ್ಥಲ

೨೬೦

(೧) ಶ್ರೀಮದ್ಭವನ ನೆನೆವ ಮನಕ್ಕೆ ತಕ್ಕ ಕವಿಯಾದವಾಗಿ ಗುರುವಚನ ರತಿಸುಖ ಸಾರಾಯ ಸಂಬಂಧದ ಅನುಭಾವಿಯಾಗಿ ಶರಣಸತಿ ಗರ್ಭವತಿಯಾದಳು. ಇರುಳಿಲ್ಲ ಹಗಲಿಲ್ಲ, ನವಮಾಸವರಿಯಳು. ರೇಕಣ್ಣಪ್ರಿಯ ನಾಗಿನಾಥನಯೋನಿ ಸಂಭವನಾಗಿ ಪ್ರಸೂತಿ ಕಾಯನಲ್ಲ.

೧–೧ ತೆ (ಮೂ)

೨೬೧

(೨) ಎಂಬತ್ತು ನಾಲ್ಕು ಲಕ್ಷ ಜೀವರಾಶಿಯೊಳು ಜನಿಸುವುದೇ ಜನಿತ ವೆಲ್ಲರಿಗೂ. ಆ ಜನ್ಮಾಂತರ ಯೋನಿಯೊಳು ಜನಿಸದಾತನೆ ಶಿವಯೋಗಿ. ಆ ಯೋನಿ ಜನ್ಮಾಂತರವ ಕಳೆದೆನದು ಹೇಗೆಂದರೆ, ಶ್ರೀಗುರು ಕಾರುಣ್ಯ ಕರಪಲ್ಲವದೊಳಗೆ ಬೆಸಲಾಯಿತ್ತಾಗಿ. ಅಂತಹ ಯೋನಿಮುಖ ಜನ್ಮಾಂತರವ ಕಳೆದ ಶರಣಂಗೆ ಭವಮಾಲೆಯುಂಟೇ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ ?

೨೬೨

(೩) ಪೂರ್ವಜನ್ಮವ ನಿವೃತ್ತಿಯ ಮಾಡಿ, ಶ್ರೀಗುರುವಿನ ಕರಕಮಲದಲ್ಲಿ ಜನಿಸಿದ ಭಕ್ತನ ಪಂಚಭೌತಿಕದ ತನುವಿನಂತೆ, ವರ್ಣಿಸಿ ನುಡಿಯಬಹುದೆ ? ಉತ್ತಮದ ತೃಣ ಮೊದಲಾದವೆಲ್ಲವು ಜ್ಯೋತಿಯ ಮುಟ್ಟಿ ಜ್ಯೋತಿಯಪ್ಪವು ಕೇಳಿರೆ. ಜ್ಯೋತಿರ್ಮಯಲಿಂಗವ ಮುಟ್ಟಿದಾತನು ಕೇವಲ ಜ್ಯೋತಿರ್ಮಯಲಿಂಗ. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೇಯ, ಬ್ರಹ್ಮರಂಧ್ರ, ದಳ, ವರ್ಣ, ಅಕ್ಷರ, ಅಧಿದೇವತೆ ಎಂದು, ಅಲ್ಲಿ ಶುಕ್ಲ ಶೋಣಿತಾತ್ಮಕನಂತೆ ವರ್ಣಿಸಿ ನುಡಿಯಬಹುದೆ, ಶಿವಲಿಂಗ ತನುವ ? ಷಡಾಧಾರಚಕ್ರವನು ಎನ್ನ ಸರ್ವಾಂಗದಲ್ಲಿ ಪ್ರತಿಷ್ಠೆಯಂ ಮಾಡಿ, ಅಂತರ್ಬಾಹ್ಯದಲ್ಲಿ ಭರಿತನಾಗಿ ಸರ್ವಾಂಗವ ಲಿಂಗವ ಮಾಡಿದ ಕೂಡಲಚನ್ನಸಂಗಾ ಶ್ರೀಗುರುಲಿಂಗವು.

೨೬೩

(೪) ಮಹಾ ಜ್ಯೋತಿಯ ಸೋಂಕಿದ [ಉತ್ತಮಾಧಮ] ತೃಣ ಮೊದಲಾದ ವೆಲ್ಲವು ಮಹಾ ಜ್ಯೋತಿಯಪ್ಪವು. ನೋಡಿರೇ ದೃಷ್ಟವ ! ಮತ್ತೆ ಅಂತಿಂತಹುದೆಂದು ಪಮಿಸಲುಂಟೆ ? ಪರಂಜ್ಯೋತಿ ಸದ್ಗುರುಲಿಂಗವ ಸೋಂಕಿದ ಸದ್ಭಕ್ತನ ಅಂತರಂಗ, ಬಹಿರಂಗ, ಸರ್ವಾಂಗ, ಪರಂಜ್ಯೋತಿಲಿಂಗ. ಮತ್ತೆ ದೇಹವೆಂದು ಪ್ರಾಣವೆಂದು, ಆಧಾರ, ಸ್ವಾಧಿಷ್ಠಾನ ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೇಯ, ಬ್ರಹ್ಮರಂಧ್ರ ವೆಂದು ವರ್ಣ ದಳ ಅಧಿದೇವತೆ ಎಂದು ವಿವರಿಸಿ ನುಡಿಯಲುಂಟೇ ಪಂಚಭೌತಿಕ ತನುವಿನಂತೆ ? ಪಂಚವಿಂಶತಿ ತತ್ವಂಗಳ ಸಂಬಂಧಿಸಿ ನುಡಿಯಲುಂಟೇ ಕೇವಲ ಜ್ಯೋತಿರ್ಮಯಲಿಂಗತನುವಿಂಗೆ ? ಸದ್ಭಕ್ತನಂಗ ಲಿಂಗ, ಮನ ಲಿಂಗ, ಪ್ರಾಣ ಲಿಂಗ, ಭಾವಲಿಂಗ, ಪಂಚವಿಂಶತಿ ತತ್ವಂಗಳೆಲ್ಲವೂ ಲಿಂಗತತ್ವ. ಇದು ಕಾರಣ ಲಿಂಗವಂತನ ತನು ಸರ್ವಾಂಗಲಿಂಗವೆಂಬುದಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಇಂತಪ್ಪ ಗುರುಕಾರುಣ್ಯವಂ ಪಡೆದ ಮಹಿಮನು ತನ್ನ ಸ್ಥೂಲತನುವಿನ ವ್ಯವಹಾರಮಂ ಕೆಡಿಸಿ ಸತ್‌ಕ್ರಿಯಾವರ್ತನೆಗೆ ಸಾಧನವೆನಿಸಿ ತನ್ನ ಅಂಗದ ಮೇಲೆ ನಿರಂತರ ಶ್ರೀಮದಿಷ್ಟಲಿಂಗಸ್ವಾಯತವಾದ ಭೇದವೆಂತಿರ್ದುದೆಂದೊಡೆ, ಮುಂದೆ ಲಿಂಗಧಾರಣಸ್ಥಲಮಾದುದು.

೫. ಲಿಂಗಧಾರಣಸ್ಥಲ

೨೬೪

(೧) ಕಂಗಳ ಮುಂದಿನ ಶ್ರೀಗುರುಲಿಂಗವು ಹಿಂಗಿದಡೆ ವ್ರತಕ್ಕೆ ಭಂಗವಾದು ದೆಂದು ತಂದು ಕೊಟ್ಟ ಶ್ರೀಗುರು ಕರಸ್ಥಲದಲ್ಲಿ ಪ್ರಾಣಲಿಂಗವ. ಅದು ಮುಟ್ಟಲೊಡನೆ ತನುಪ್ರಸಾದ, ಮನಪ್ರಸಾದ, ಧನಪ್ರಸಾದವಾಯಿತ್ತು ಇಂತು ಸರ್ವಾಂಗ ಪ್ರಸಾದವಾಯಿತ್ತು ಕೂಡಲಸಂಗಮದೇವಾ.

೨೬೫

(೨) ಶ್ರೀ ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವ ಕಟ್ಟಿದರು ಚನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು.

೨೬೬

(೩) ಶಿವಭಕ್ತರ ಶಿಶುವು ಧರಣಿಯ ಮೇಲೆ ಬಿದ್ದಾಗಲೆ, ವಿಭೂತಿ ಪಟ್ಟವ ಕಟ್ಟಿ, ಕೊರಳಲಿ ಲಿಂಗಸ್ವಾಯತವ ಮಾಡಿ, ಪಾದೋದಕದಿಂದ ಮಜ್ಜನವ ಮಾಡಿಸಿ, ಪ್ರಸಾದದೆಣ್ಣೆ ಬೆಣ್ಣೆಯ ಹಾಲನೆರೆದು, ಸಲುಹುವುದು ಸದಾಚಾರ. ಅದಕ್ಕೆ ಸೂತಕವ ಮಾಡಲಾಗದು. ಭೂತ, ಪ್ರೇತ, ಪಿಶಾಚ ಸೋಂಕಿತೆಂದು ಗಣಿಕ ಭೇಷಜರ ಮಾತ ಕೇಳಲಾಗದು. ಕೇಳಿ ಮಾಡುವ ಭಕ್ತಂಗೆ ಪಂಚಮಹಾಪಾತಕ ತಪ್ಪದು. ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ನಚ್ಚಿದ ಮಚ್ಚು ಅಚ್ಚೊತ್ತಿದಂತಿಲ್ಲದವರ ಕಂಡರೆ ನಾನೊಲ್ಲೆನಯ್ಯ.

೨೬೭

(೪) ಲಿಂಗಪ್ರಾಣಿಯ ಲಿಂಗವಂತನ ಉದರದಲ್ಲಿ ಒಂದು ಲಿಂಗಪಿಂಡ ಉದಯಿಸಿದಡೆ, ಆಕ್ಷಣವೆ ಲಿಂಗಸ್ವಾಯತವ ಮಾಡಿ ಆ ಶಿಶುವ ತನ್ನ ಶಿಶುವೆಂದು ಮುಖವ ನೋಡುವದು ಸದಾಚಾರವಲ್ಲದೆ, ಬರಿಯ ವಿಭೂತಿಯ ಪಟ್ಟವ ಕಟ್ಟಿ ಗುರುಕಾರುಣ್ಯವಾಯಿತ್ತೆಂದು ಅನುಸರಣೆಯಲ್ಲಿ ಆಡಿಕೊಂಬುದು ಕ್ರಮವಲ್ಲ. ಅದೇನು ಕಾರಣವೆಂದಡೆ, ತಾ ಲಿಂಗವೇದಿಯಾದುದಕ್ಕೆ ಕುರುಹು. ಲಿಂಗವುಳ್ಳವರು ತನ್ನವರೆಂದೆನಬೇಕಲ್ಲದೆ, ಲಿಂಗವಿಲ್ಲದವರ ತನ್ನವರೆಂದರೆ ತನ್ನ ಸದಾಚಾರಕ್ಕೆ ದ್ರೋಹ ಬಹುದು, ಸಮಯಾಚಾರಕ್ಕೆ ಸಲ್ಲದು. ಇದು ಕಾರಣ ಲಿಂಗಸ್ವಾಯತ ವಾಗಿಪ್ಪುದೇ ಪಥವಯ್ಯ ನಾಗಪ್ರಿಯ ಚನ್ನರಾಮೇಶ್ವರಾ.

೨೬೮

(೫) ಅಂಗದ ಮೇಲೆ ಲಿಂಗವಿದ್ದ ಬಳಿಕ, ಲಿಂಗಹೀನರ ಬೆರಿಸಲಾಗದು. ಅಂಗದ ಮೇಲೆ ಲಿಂಗವಿದ್ದಬಳಿಕ ಲಿಂಗಮುಂತಾಗಿ ಎಲ್ಲ ಕ್ರಿಯೆಗಳನು ಗಮಿಸ

ಬೇಕಲ್ಲದೆ, ಅಂಗ ಮುಂತಾಗಿ ಗಮಿಸಲಾಗದು ಲಿಂಗಸಂಬಂಧಿಯಾದನಾಗಿ. ಅಂಗ ಮುಂತಾಗಿಪ್ಪವರು ಲಿಂಗಕ್ಕೆ ದೂರವಯ್ಯ ನಾಗಪ್ರಿಯ ಚನ್ನರಾಮೇಶ್ವರಾ.

ಇಂತಪ್ಪ ಶ್ರೀ ಲಿಂಗಧಾರಣದಿಂ ಸದಾಚಾರ ಸತ್‌ಕ್ರಿಯೆ ಸಮ್ಯಜ್ಞಾನ, ಸದ್ಭಾವ ಸಂಪನ್ನನಾದ ಮಹಿಮಂಗೆ ಶ್ರೀ ಶಿವನ ಮಹದೈಶ್ವರ್ಯ ಸ್ವರೂಪಮಪ್ಪ ಶ್ರೀ ವಿಭೂತಿಯ ಧರಿಸಬೇಕಾದ ಕಾರಣ ಮುಂದೆ ವಿಭೂತಿಸ್ಥಲವಾದುದು.

೬. ವಿಭೂತಿಯ ಸ್ಥಲ

೨೬೯

(೧) ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾಪ್ರಕಾಶವೇ ಚಿತ್ ಎನಿಸಿತ್ತು. ಆ ಚಿತ್ತೇ ಚಿದಂಗ, ಆ ಚಿದಂಗದಲ್ಲಿ ತೋರಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣ ಜ್ಯೋತಿರ್ಲಿಂಗವಹುದು ತಪ್ಪದು ಕಾಣಾ ಉರಿಲಿಂಗಪೆದ್ದಿಪ್ರಿಯ ಗುರು ವಿಶ್ವೇಶ್ವರಾ.

೨೭೦

(೨) ಹಿತವಿದೆ ಸಕಲ ಲೋಕದ ಜನಕ್ಕೆ. ಮತಿಯಿದೆ ಶ್ರುತಿ ತತಿ ಪುರಾಣಾಗಮದ. ಗತಿಯಿದೆ ಶ್ರೀಭಕ್ತತತಿಯ. ಶ್ರೀ ಶರಣನ ಬೆಳಗಿನ ಉನ್ನತಿ ಇದೆ. ಇಂತಪ್ಪ ಶ್ರೀ ವಿಭೂತಿಯ ಧರಿಸಿ ಭವಮಾಲೆಯನು ಪರಿಹರಿಸುವುದು. ದುರಿತ ಸಂಕುಲವನು ಒರಿಸುವುದು. ಹರನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದಂಗಳಲ್ಲಿರಿಸುವುದು. ನಿರುತವಿದು ನಂಬು ಮನುಜಾ ಶ್ರೀ ವಿಭೂತಿಯನೆಲ್ಲಾಗಳು. ಜನನ ಮರಣಂಗಳ ಭಯದಿಂದ ಅಗಸ್ತ್ಯ ಕಶ್ಯಪ ಜಮದಗ್ನಿ ಮುಂತಾದ ಸಕಲ ಋಷಿ ಜನಂಗಳು ಧರಿಸಿದರು ನೋಡಾ ಶ್ರೀಶೈಲಮಲ್ಲಿಕಾರ್ಜುನಲಿಂಗವನೊಲಿಸುವ ಶ್ರೀವಿಭೂತಿಯನು.*

ಇಂತು ಮಹಾಜ್ಞಾನ ಭಸ್ಮವಂ ಸತ್‌ಕ್ರಿಯಾ ಮುಖದಿಂದ ಧರಿಸಿದ ಲಿಂಗ ಕ್ರಿಯಾ ಸಂಪನ್ನಂಗೆ ಶಿವಜ್ಞಾನಚಕ್ಷುವೆಂದೆನಿಸಿದ ರುದ್ರಾಕ್ಷಿಯಂ ಧರಿಸಬೇಕಾದ ಕಾರಣ ಮುಂದೆ ರುದ್ರಾಕ್ಷಿಯ ಸ್ಥಲವಾದುದು.

೭. ರುದ್ರಾಕ್ಷಿಯ ಸ್ಥಲ

೨೭೧

ಅಯ್ಯ ಎನಗೆ ರುದ್ರಾಕ್ಷಿಯೇ ಸರ್ವಪಾವನವಯ್ಯ. ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ. ಅಯ್ಯ ನಿಮ್ಮ ವಕ್ತ್ರಂಗಳೇ ಪಂಚಮುಖರುದ್ರಾಕ್ಷಿಗಳಾದವಾಗಿ, ಅಯ್ಯ ಕೂಡಲಸಂಗಮದೇವಾ, ಎನ್ನ ಮುಕ್ತಿಪಥಕ್ಕೆ ಶ್ರೀ ರುದ್ರಾಕ್ಷಿಯೇ ಸಾಧನವಯ್ಯ.

---

* ಇದು ಲಿಂಗವಂತ ತತ್ವಕ್ಕೆ ಸರಿಹೋಗುವುದಿಲ್ಲ. ಈ ವಚನ ಬಹುಶಃ ಪ್ರಕ್ಷಿಪ್ತವಾಗಿರಬೇಕು. (ಸಂ).

ಇಂತು ಅಂಗದ ಮೇಲೆ ಲಿಂಗ ಸಂಬಂಧವಾಗಿ ವಿಭೂತಿ ರುದ್ರಾಕ್ಷಿಯಂ ಧರಿಸಿ ನಿತ್ಯ ಲಿಂಗಾರ್ಚನೆಯ ಮಾಡುವ ಲಿಂಗಕ್ರಿಯಾಸಂಪನ್ನಂಗೆ ಪ್ರಣವ ಮೂಲವಾದ ಪಂಚಾಕ್ಷರಿಯ ಜಪಿಸಬೇಕಾದ ಕಾರಣ ಮುಂದೆ ಪಂಚಾಕ್ಷರಿಯ ಸ್ಥಲವಾದುದು.

೮. ಪಂಚಾಕ್ಷರಿಯ ಸ್ಥಲ

೨೭೨

(೧) ಅಂತ್ಯಜನಾಗಲಿ ಅಗ್ರಜನಾಗಲಿ ಮೂರ್ಖನಾಗಲಿ ಪಂಡಿತನಾಗಲಿ, ಜಪಿಸುವದು. ಪಂಚಾಕ್ಷರಿಯ ಜಪದಿಂದ ರುದ್ರನಪ್ಪುದು [ತಪ್ಪದು] ಗ್ರಂಥ : ''ಅಂತ್ಯಜೋ ಅಗ್ರಜೋವಾಪಿ । ಮೂರ್ಖೋವಾ ಪಂಡಿತೋಪಿ ವಾ । ಜಪೇತ್ ಪಂಚಾಕ್ಷರೀಂ ಜಪೇನ್ನಿತ್ಯಂ [ಸ] ರುದ್ರೋ ನಾತ್ರಸಂಶಯಃ ॥ ಇದಕೆ'' ಶಪಥವ ಮಾಡಿದೆನು ಉರಿಲಿಂಗಪೆದ್ದಿಪ್ರಿಯ ಗುರುವಿಶ್ವೇಶ್ವರಾ.

೨೭೩

(೨) ವಿಪುಲ ವೇದ ವೇದಾಂತಸಾರ, ಸಕಲ ಲೋಕದ ಜನಹಿತಾಧಾರ, ಸಪ್ತಕೋಟಿ ಮಹಾಮಂತ್ರಂಗಳ ತವರುಮನೆ, ಸದ್ಭಕ್ತಜನ ಜೀವಾನಂದ, ಅಖಿಳಾಗಮದ ಸಂತಾನದ ಹರಣ, ಮುಕ್ತಿ ಮೇಲುಪ್ಪರಿಗೆಯ ಸೋಪಾನ, ಪ್ರಣವಾಂಕುರ ಪಲ್ಲವ ಫಲರೂಪ, ಶ್ರುಣಯನನೊಲಿಸುವ ಕರ್ಣಾಭರಣ, ಶ್ರೀಹರ ನಾಮದ ಸಾಕಾರ ನಿಲವು, ಶ್ರೀಮತ್ಪರಮ ಪಂಚಬ್ರಹ್ಮಾನಂದ, ಶ್ರೀಮತ್ಪರತತ್ವದ ನಿತ್ಯ ನೆಲೆಯು ಶ್ರೀ ಹಂಪೆಯ ವಿರುಪನ ತೋರುವ ಶ್ರೀಗುರು ಪಂಚಾಕ್ಷರಿ.

೨೭೪

(೩) ಭಕ್ತಿ ನಂದನವನದಲ್ಲಿ ಓಂಕಾರವನೆ ಮೆಲಿದು, ಆನಂದವೆಂಬ ಜಲವನೀಂಟಿ, ಸಮತೆಯೆಂಬ ನೆಳಲಲ್ಲಿಪ್ಪುದನೆ ನೆನೆಯಾ ಮನವೆ. ಮಹಾಮಂತ್ರವನೆ ಶಿವಧ್ಯಾನದಲ್ಲಿ ಸವಿಯಾ ಮನವೆ. ಮೇಲಕೊತ್ತುತ್ತಿಪ್ಪುದು. ಧರ್ಮ, ಅರ್ಥ, ಕಾಮ, ಮೋಕ್ಷವೆಂಬ [ವ] ತೊರೆಯಲು, ಹಂಪೆಯ ವಿರುಪನ ಕರವ ಕಾಮಧೇನು ಪಂಚಾಕ್ಷರಿ ಎಂಬುದು.*

ಇಂತು ಶ್ರೀ ವಿಭೂತಿ ರುದ್ರಾಕ್ಷಿಯಂ ಧರಿಸಿ, ಶ್ರೀ ಪಂಚಾಕ್ಷರಿಯಂ ಜಪಿಸಿ ನಿತ್ಯ ಲಿಂಗಾರ್ಚನೆಯಂಗೈವ ಸತ್‌ಕ್ರಿಯಾಸಂಪನ್ನನ ಸಾಂಗಕ್ರಿಯಾ ವರ್ತನೆ ಎಂತಿರ್ದುದೆಂದೊಡೆ, ಮುಂದೆ ಭ್ರೂ[ಕ್ತ]ೀ ಸ್ಥಲವಾದುದು.

೯. ಭ್ರೂ[ಕ್ತ]ೀ ಸ್ಥಲ

೨೭೫

(೧) ಅಂದಂದಿಂಗೆ ನೂರು ತುಂಬಿತೆಂಬ ದಿಟವಿರಬೇಕು. ಸಂದ ಪುರಾತನರ

---

* ಈ ಸ್ಥಲದ ಮೂರೂ ವಚನಗಳು ಪ್ರಕ್ಷಿಪ್ತವೆಂದು ಕಂಡುಬರುತ್ತವೆ (ಸಂ).

೧–೧ ಕ್ತೆ(ಮೂ)

ನೆನೆಯುತ್ತಿರಬೇಕು. ಜಂಗಮ ಮನೆಗೆ ಬಂದರೆ ವಂಚನೆ ಇಲ್ಲದೆ ಮಾಡಬೇಕು. ಎನಗಿದೇ ವರವನೀವುದು ಕಂಡಯ್ಯ ಬಸವಪ್ರಿಯ ಕೂಡಲಚನ್ನಸಂಗಮದೇವಾ.

೨೭೬

(೨) ಮಾಘಮಾಸದ ನವಿಲೆಯಂತೆ ಆದೆ ನೋಡವ್ವಾ ! ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲಬುತಿರ್ದೆ ನೋಡವ್ವಾ! ಮಾಗಿಯ ಕೋಗಿಲೆಯಂತೆ ಮೂಗಿಯಾಗಿರ್ದೆ ನೋಡವ್ವಾ ! ಮಹಾಲಿಂಗ ಗಜೇಶ್ವರನ ಅನುಭಾವ ಸಂಬಂಧಿಗಳ ಬರವು ಎನ್ನ ಪ್ರಾಣದ ಬರವು ನೋಡವ್ವಾ !

೨೭೭

(೩) ಅಡಿಗಡಿಗೆ ನಿಮ್ಮ ಶರಣರಡಿಗೆರಗಿ ಶರಣೆಂಬೆ. ಅವರ ನುಡಿಯ ಬೋಧೆಯನು ಕೇಳಿ ಅನ್ಯ ನುಡಿ ಸಮನಿಸದು. ಒಡೆದೆಲು ಸಿರ ಬಿಗಿದು, ಮಡುಗಟ್ಟಿ ಕಂಬನಿಯ ಕಡಲೊಳಗೆ ಕೆಡೆಯುತೆಂದಿಪ್ಪೆನೋ ! ಮೃಡ ಶರಣು ಶರಣೆಂಬ ಶಬ್ದ ಒಡಲುಗೊಂಡು ಶಂಭುಜಕ್ಕೇಶ್ವರದೇವಂಗೆ ಶರಣೆನುತ ಮೈಮರೆದೆಂದಿಪ್ಪೆನೋ !

ಇಂತು ಸದ್ಭಕ್ತಿಸ್ಥಲದಲ್ಲಿ ನಿಂದ ಸದ್ಭಕ್ತನ ದೇಹ ಪ್ರಾಣ ಸ್ವರೂಪ ಮತ್ತು ಕರ್ತೃ ಭೃತ್ಯ ಸಂಬಂಧವೆಂತಿರ್ದುದೆಂದೊಡೆ ಮುಂದೆ ಉಭಯಸ್ಥಲವಾದುದು.

೧೦. ಉಭಯಸ್ಥಲ

೨೭೮

(೧) ಗತಿಪಥ ಮುಕ್ತಿ ಸೂತಕ ವಿರಹಿತ ಭಕ್ತ. ಹಮ್ಮು ಬಿಮ್ಮು ಗಮನ ನಾಸ್ತಿಯಾದಾತನೇ ಜಂಗಮ. ಪ್ರಾಣವಿಲ್ಲದಾತ ಭಕ್ತ. ರೂಹಿಲ್ಲದಾತ ಜಂಗಮ. ಈ ಉಭಯ ಕುಳಸ್ಥಳದ ಸಂದೊಂದಾಗಿ ನಿಂದ ನಿಲವ ಕೂಡಲಚನ್ನಸಂಗಮದೇವರಲ್ಲಿ ಭಕ್ತಜಂಗಮವೆಂಬೆ.

೨೭೯

(೨) ಉನ್ಮನಿಯ ಲೌಕಿಕದನುಸಂಧಾನದ ತನುವಿನ ಕೊರತೆಯ ಕಳೆಯಲ್ಕೆ ಸ್ಥಾವರವಾಯಿತ್ತು ಮನದ ಕೊರತೆಯ ಕಳೆಯಲ್ಕೆ ಜಂಗಮವಾಯಿತ್ತು ''ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೆ'', ಇಂತೆಂಬ ವಚನವ ಕೂಡಲಚನ್ನ ಸಂಗಯ್ಯನಲ್ಲಿ ಸಮಯಾಚಾರಿಗಳಿಗಲ್ಲದೆ ಎಲ್ಲರಿಗೆಲ್ಲಿಯದೋ ?

೨೮೦

(೩) ಶರಣ ಲಿಂಗದಲ್ಲಿ ಉದಯ, ಜಂಗಮದಲನುಭಾವ. ಮತ್ತೊಂದ ಮತ್ತೊಂದನರಿಯನಯ್ಯ. ಶರಣನು ಕೂಡಲಚನ್ನಸಂಗಯ್ಯನಲ್ಲಿ ದ್ವಿವಿಧ ಸಂಪನ್ನ ನಾಗಿ.

೨೮೧

(೪) ಆಚಾರವಿಡಿದು ಲಿಂಗ. ಅನುಭಾವವಿಡಿದು ಜಂಗಮ. ತನುವಿನ ಪ್ರಾಣ ಆಚಾರ. ಮನದ ಪ್ರಾಣ ಅನುಭಾವ. ಇದು ಕಾರಣ ಕೂಡಲಚನ್ನ ಸಂಗಮದೇವ ಲಿಂಗವನು ಜಂಗಮವನು ಬೇರಿರಿಸಲಿಲ್ಲ.

೨೮೨

(೫) ''ಆಕಾಯಂ ಭಕ್ತಕಾಯೋ । ಮಮ ಕಾಯಸ್ತು ಭಕ್ತ ಕಾಯೋ'' ಇಂತು ಭಕ್ತನ ನೋಡುವಡೆ. ''ಮಹಂತೋ ಲಿಂಗರೂಪೇಣ ಮಹಂತೋ ಜಂಗಮಸ್ತಥಾ'' ಇಂತು ಜಂಗಮವ ನೋಡುವಡೆ. ಇಂತೀ ಎರಡೊಂದಾದ ಕಾರಣ ತೆರಹಿಲ್ಲ ಕೂಡಲಚನ್ನಸಂಗಯ್ಯ ನಿಮ್ಮಲ್ಲಿ.

೨೮೩

(೬) ಭವವಿಲ್ಲದ ಭಕ್ತನ ಪರಿಯ ನೋಡಾ ! ಮನ ಪ್ರಾಣ ಭಾವವಿರಹಿತ ಒಡಲಿಲ್ಲದ ಜಂಗಮದ ಪರಿಯ ನೋಡಾ ! ಸಿಡಿಲು ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೇ ? ಈ ಉಭಯವು ಒಂದಾದವರ ಕಂಡರೆ ನೀನೆಂಬೆ ಕೂಡಲಚನ್ನಸಂಗಯ್ಯ.

ಇಂತು ಉಭಯಸ್ಥಲದಲ್ಲಿ ಶ್ರೀಲಿಂಗಜಂಗಮವೆರಡರ ಸಂಬಂಧವಾದ ಸದ್ಭಕ್ತನ ತನುವಿನಲ್ಲಿ ಗುರುಸಂಬಂಧ, ಮನದಲ್ಲಿ ಲಿಂಗಸಂಬಂಧ, ಅರಿವಿನಲ್ಲಿ ಜಂಗಮಸಂಬಂಧವಾದ ಭೇದವೆಂತಿರ್ದುದೆಂದಡೆ ಮುಂದೆ ತ್ರಿವಿಧಸಂಪತ್ತಿನ ಸ್ಥಲವಾದುದು.

೧೧. ತ್ರಿವಿಧಸಂಪತ್ತುಸ್ಥಲ

೨೮೪

(೧) ಒಂದಾಗಿ ತೋರಿದಡೆ ಮೂರಾಗಿ ವಿವರಿಸುವೆ. ಗುರುವೆಂಬೆ, ಲಿಂಗವೆಂಬೆ, ಜಂಗಮವೆಂಬೆ. ಎನ್ನ ಮನೋಮೂರ್ತಿಯಾಗಿ ತೋರಿದೆ ಕೂಡಲಚನ್ನಸಂಗಯ್ಯ.

೨೮೫

(೨) ಆಚಾರಲಿಂಗಸಂಬಂಧವಾದಲ್ಲಿ ಶ್ರೀಗುರುಸನ್ನಿಹಿತ. ಅರಿವು ಮನ ಸಂಬಂಧವಾದಲ್ಲಿ ಶಿವಲಿಂಗಸನ್ನಿಹಿತ. ಉಭಯ ಲಾಂಛನವು ಸಂಬಂಧವಾದಲ್ಲಿ ಜಂಗಮಲಿಂಗಸನ್ನಿಹಿತ. ಇದು ಕಾರಣ ಕೂಡಲಚನ್ನಸಂಗಯ್ಯ ತ್ರಿವಿಧಲಿಂಗ ಸಂಪನ್ನ ನಾದ ಶರಣ.

೨೮೬

(೩) ಗುರುವೆನ್ನ ತನುವ ಬೆರಸಿದ ಕಾರಣ, ಗುರುಶುದ್ಧನಾದನಯ್ಯ.

ಲಿಂಗವೆನ್ನ ಮನವ ಬೆರಸಿದ ಕಾರಣ, ಲಿಂಗದ ಮನವ ನಾ ಬೆರಸಿದ ಕಾರಣ, ಲಿಂಗ ಶುದ್ಧನಾದನಯ್ಯ. ಜಂಗಮವೆನ್ನ ಜಿಹ್ವೆಯ ಬೆರಸಿದ ಕಾರಣ, ಜಂಗಮದ ಜಿಹ್ವೆಯ ನಾ ಬೆರಸಿದ ಕಾರಣ ಜಂಗಮ ಶುದ್ಧನಾದನಯ್ಯ. ಈ ಮೂವರು ತಮ್ಮಿಂದ ತಾವು ಶುದ್ಧವಾಗಲರಿಯದೆ, ಎನ್ನ ಮುಟ್ಟಿ ಶುದ್ಧವಾದರು ಕಾಣಾ ಕೂಡಲ ಚನ್ನಸಂಗಮ ದೇವಾ.

೨೮೭

(೪) ಗುರುಸ್ವರೂಪನಾಗಿ ಮಹಾಸ್ಥಾನದಲ್ಲಿರುತಿರ್ದೆ. ಲಿಂಗಸ್ವರೂಪನಾಗಿ ಭ್ರೂಮಧ್ಯದಲ್ಲಿರುತಿರ್ದೆ. ಜಂಗಮಸ್ವರೂಪನಾಗಿ ಹೃದಯಕಮಲಮಧ್ಯದಲ್ಲಿರು ತ್ತಿರ್ದೆ. ಈಪರಿಯಂತರಂಗಭರಿತನಾಗಿರುತಿರ್ದೆನಯ್ಯ. ಬಹಿರಂಗದಲ್ಲಿ ಶ್ರೀಗುರು ಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ. ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ. ಜಂಗಮಲಿಂಗವಾಗಿ ಅವಗುಣಂಗಳೆಲ್ಲವನು ಕಳೆದು ಶಿಕ್ಷಿಸಿ ರಕ್ಷಿಸಿದೆ. ಇಂತೀ ತ್ರಿವಿಧವು ಒಂದೇ ರೂಪಾಗಿ, ಅಂತರಂಗ ಬಹಿರಂಗ ಭರಿತನಾಗಿ, ಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ತ್ರಿವಿಧ ಸಂಪನ್ನನಾದ ಭಕ್ತನ ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮಭಕ್ತಿ, ಪರಿಣಾಮದಲ್ಲಿ ಪ್ರಸಾದ ಭಕ್ತಿ ಸನ್ನಿಹಿತವಾದ ಭೇದವು ಎಂತಿರ್ದುದೆಂದೊಡೆ ಮುಂದೆ ಚತುರ್ವಿಧಸಾರಾಯಸ್ಥಲವಾದುದು.

೧೨. ಚತುರ್ವಿಧಸಾರಾಯಸ್ಥಲ

೨೮೮

(೧) ದಾಸೋಹಂ ಎಂಬ ಸಂಜ್ಞೆಗೊಂಡು ಹೋಗಿ ಗುರುವಕಂಡೆ, ಲಿಂಗವ ಕಂಡೆ, ಜಂಗಮವಕಂಡೆ, ಪ್ರಸಾದವಕಂಡೆ. ಇಂತೀ ಚತುರ್ವಿಧ ಸಾರಾಯದಲ್ಲಿ ಸಂಪನ್ನನಾದೆನು ಕಾಣಾ ಕೂಡಲಸಂಗಮದೇವಾ.

೨೮೯

(೨) ಗುರುಮುಟ್ಟಿ ಗುರುವಾಯಿತ್ತು, ಲಿಂಗಮುಟ್ಟಿ ಲಿಂಗವಾಯಿತ್ತು, ಜಂಗಮಮುಟ್ಟಿ ಜಂಗಮವಾಯಿತ್ತು, ಪ್ರಸಾದ[೧]ಮುಟ್ಟಿ ಪ್ರಸಾದವಾಯಿತ್ತು, ಪ್ರಸಾದ ಪರವಸ್ತು ಪರದಲ್ಲಿಪ್ಪುದಾಗಿ ಕೂಡಲಚನ್ನಸಂಗಮದೇವಾ.

ಟೀಕು : ಗುರು ಲಿಂಗ ಜಂಗಮ ಪ್ರಸಾದವೆಂಬ ಚತುರ್ವಿಧವು ಪರವಸ್ತು ಸ್ವರೂಪವು. ಅಂತಹ ಪರವಸ್ತುಸ್ವರೂಪಮಪ್ಪ ಗುರು ಲಿಂಗ ಜಂಗಮದ ಪ್ರಸಾದವ ಸೋಂಕಿದ ಭಕ್ತನು ಆ ಗುರುಲಿಂಗಜಂಗಮದ ಪ್ರಸಾದಸ್ವರೂಪಮಪ್ಪ ಪರವಸ್ತುವೇ ಯಾಗಿಪ್ಪನು. ಅಂತಪ್ಪ ಗುರುಲಿಂಗ ಜಂಗಮದ ಪ್ರಸಾದವ ಸೋಂಕಿ ಪರವಸ್ತು

೧+ ವ (ಮೂ)

ತಾನಾದೆನೆಂಬ ವಿಶ್ವಾಸವಿಲ್ಲದೆ ಬೇರೆ ಪರವಸ್ತುವ ಭಾವಿಸಿ ಕೂಡಿಹೆನೆಂಬ ಅಜ್ಞಾನಿಯ ಮುಖವ ನೋಡಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೨೯೦

(೩) ಹರ ತನ್ನ ರೂಪ ತೋರಬೇಕೆಂದು, ಗುರುರೂಪಾಗಿ ಬಂದು ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ, ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ. ಇಂತು ಚತುರ್ವಿಧ ಕೂಡಲ ಚನ್ನಸಂಗಯ್ಯ ಬಸವಣ್ಣನೊಬ್ಬನೆ.

೨೯೧

(೪) ಗುರುವಿನಲ್ಲಿ ಗುಣಸಂಪಾದನೆಯ ಮಾಡುವಲ್ಲಿ ಗುರುಸಂಬಂಧಿಯಲ್ಲ, ಲಿಂಗದಲ್ಲಿ ಸ್ಥಲಸಂಪಾದನೆಯ ಮಾಡುವನ್ನಕ್ಕ, ಲಿಂಗಸಂಬಂಧಿಯಲ್ಲ, ಜಂಗಮದಲ್ಲಿ ಜಾತಿಸಂಪಾದನೆಯ ಮಾಡುವನ್ನಕ್ಕ ಜಂಗಮಸಂಬಂಧಿಯಲ್ಲ, ಪ್ರಸಾದದಲ್ಲಿ ರುಚಿಯ ಸಂಪಾದನೆಯ ಮಾಡುವನ್ನಕ್ಕ, ಪ್ರಸಾದ ಸಂಬಂಧಿಯಲ್ಲ, ಇದು ಕಾರಣ ಕೂಡಲ ಚನ್ನಸಂಗಯ್ಯ ಮಜ್ಜನಕ್ಕೆರೆವ ಭವಿಗಳನೇನೆಂಬೆ ?

೨೯೨

(೫) ತನು ಶುದ್ಧವಾಯಿತ್ತು ಗುರುವಿನಿಂದೆ. ಮನ ಶುದ್ಧವಾಯಿತ್ತು ಲಿಂಗದಿಂದೆ. ಧನ ಶುದ್ಧವಾಯಿತ್ತು ಜಂಗಮದಿಂದೆ. ಪ್ರಾಣ ಶುದ್ಧವಾಯಿತ್ತು ಪ್ರಸಾದದಿಂದೆ. ಇಂತೀ ಚತುರ್ವಿಧದಿಂದೆನ್ನ ಸರ್ವಾಂಗ ಶುದ್ಧವಾಯಿತ್ತು ಕೂಡಲ ಚನ್ನಸಂಗಮದೇವಾ.

೨೯೩

(೬) ಗುರುವಿನಲ್ಲಿ ಸ್ವಾಯತ, ಲಿಂಗದಲ್ಲಿ ಸನ್ನಿಹಿತ, ಜಂಗಮದಲ್ಲಿ ಆಯತ, ಪ್ರಸಾದದಲ್ಲಿ ಪರಿಣಾಮಿ, ಇಂತೀ ಚತುರ್ವಿಧದಲ್ಲಿ ಸನ್ಮತನು ಕೂಡಲ ಚನ್ನಸಂಗಯ್ಯನಲ್ಲಿ[೧] ಬಸವಣ್ಣ.

೨೯೪

(೭) ಇದು ಗುರು, ಇದು ಲಿಂಗ, ಇದು ಜಂಗಮ, ಇದು ಪ್ರಸಾದ, ಇಂತೀ ಚತುರ್ವಿಧಸ್ಥಲವನೊಂದುಮಾಡಿ, ದೊರೆದ ಜಂಗಮವ ನಿರಾಕಾರಲಿಂಗವೆಂದು ತೋರಿ, ಆ ಜಂಗಮದ ಪ್ರಸಾದವ ತೋರಿದನು. ನಿರವಯದ ಹಾದಿಯ ಬಸವಣ್ಣನಿಂದ ಕಂಡೆ ಕಾಣಾ ಕಲಿ[ದೇವರ]ದೇವಯ್ಯ.

೨೯೫

(೮) ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಬುದು. ಲಿಂಗಕ್ಕೆ

೧ + ಚನ್ನ (ಮೂ)

ಲಿಂಗವಾಗಿ ಲಿಂಗಪ್ರಸಾದವ ಕೊಂಬುದು, ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದವ ಕೊಂಬುದು. ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಬುದು. ಇಂತೀ ಚತುರ್ವಿಧಸ್ಥಲಕ್ಕೆ ಚತುರ್ವಿಧವಾಗಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

೨೯೬

(೯) ಗುರು ಒಂದೇ ಬಸಿರು, ಲಿಂಗ ಒಂದೇ ಬಸಿರು, ಜಂಗಮ ಒಂದೇ ಬಸಿರು, ಪ್ರಸಾದ ಒಂದೇ ಬಸಿರು, ಇದನಾರಯ್ಯ ಅಮಳೋಕ್ಯವಮಾಡಿ ಬೇರೆ ತೋರಿದವರು ? ಇದನಾರಯ್ಯ ಪ್ರಜ್ವಲಿತವಮಾಡಿ ಬೇರೆ ತೋರಿದವರು ? ಪೂರ್ವಾಚಾರಿ ಭಕ್ತಿ ಭಂಡಾರಿ ಸಂಗನಬಸವಣ್ಣ ಎನಗೆ ನೀನು ಗುಹೇಶ್ವರಲಿಂಗವ ತೋರಿದೆಯಾಗಿ ಲೋಕಾದಿ ಲೋಕವೆನಗೆ ಕಿಂಚಿತ್.

ಇಂತು ಚತುರ್ವಿಧಸಾರಾಯದಲ್ಲಿ ಸಂಪನ್ನನಾದ ಶ್ರೀಮಹಂತನು ಸಕಲ ಹಿತೋಪದೇಶಕಾರಣಾರ್ಥವಾಗಿ ಮಾಟಕೂಟದ ಪ್ರಾರಂಭವಂ ನಿರೂಪಿಸುತ್ತಿರಲು ಮುಂದೆ ಉಪಾಧಿಮಾಟಸ್ಥಲವಾದುದು.

೧೩. ಉಪಾಧಿಮಾಟಸ್ಥಲ

೨೯೭

(೧) ದೇಹಾರವ ಮಾಡುವಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿದರೆ ದೇಹಾರಕ್ಕೆ ಆಹಾರವೇ ನಿಚ್ಚಣಿಕೆ. ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ, ಆಹಾರವಿಲ್ಲೆಂದನಂಬಿಗಚೌಡಯ್ಯ.

೨೯೮

(೨) ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ, ಎಂದೆಂದಿಗೂ ಕೇಡಿಲ್ಲ. ಮಾಡಿ ಭೋ, ಮಾಡಿ ಭೋ, ಎನಗೆ ಲೇಸಾಯಿತ್ತು, ಹೋಯಿತ್ತೆಂಬ ಚಿಂತೆ, ಇದ್ದಿತ್ತೆಂಬ ಸಂತೋಷ ಬೇಡಾ ! ಸಕಳೇಶ್ವರದೇವ ಅವರನರಿದು ಸಲಹು ಭೋ.

೨೯೯

(೩) ಹರಗಣಂಗಳ ನೆರಹಿ ಮಾಡುವ ಮಾಟ ಉರಿಯನಾಲಿಗೆಯು ಕೊರಳನಪ್ಪಿದಂತಾಯಿತಯ್ಯಾ ! ಒಡೆದ ಮಡಕೆಯಲಮೃತವ ತುಂಬಿ ಮುರಿಯ ಕುಟ್ಟಿ ಅಟ್ಟುಂಬತೆರನಂತಾಯಿತ್ತಯ್ಯ. ಭಕ್ತದೇಹಿಕದೇವ ಮನೆಗೆ ಬಂದಡೆ ಮತ್ತೆ ಮಾಡಿಹೆನೆಂಬುದಿಲ್ಲ. ಮೂಗಿಲ್ಲದ ಮುಖಕ್ಕೆ ಶೃಂಗಾರವ ಮಾಡಿದಂತಯ್ಯ ! ಶರಣ ಸನ್ನಿಹಿತ ಸಕಳೇಶ್ವರದೇವರನರಿತು ಅರಿಯದಂತಿರ್ದಡೆ ಮಳಲಗೌರಿಯ ನೋಂತು ನದಿಯಲ್ಲಿ ಅದ್ದಿದಂತಯ್ಯ.

೩೦೦

(೪) ಗಾಳಿ ಬೀಸಿದಲ್ಲಿ ತೂರಿಕೊಳ್ಳಿರಯ್ಯಾ. ಗಾಳಿ ನಿನ್ನಧೀನವಲ್ಲ ಕಂಡಯ್ಯ. ನಾಳೆ ತೂರಿಹೆನೆಂದರೆ ಇಲ್ಲ ಕಂಡಯ್ಯ. ಶಿವಶರಣೆಂಬುದೊಂದು ಗಾಳಿ ಹೊಡೆದಲ್ಲಿ

ಬೇಗ ತೂರೆಂದ ನಮ್ಮ ಅಂಬಿಗರ ಚೌಡಯ್ಯ.

ಟೀಕು : ಗಾಳಿ ಬಂದಾಗವೇ ಎತ್ತರ ಹೊಟ್ಟ ತೂರಿ ಪುಟ್ಟೆಯ ನಿಳುಹಿ ಕೊಂಬಂತೆ, ಹಲವು ದೇಹಂಗಳೊಳಗೆ ಅಪೂರ್ವವಾದ ಮನುಜ ದೇಹವ ಪಡೆದಲ್ಲಿ ಶಿವನಿಗೆ ಶರಣುವೊಕ್ಕು ಶಿವಭಕ್ತಿಯ ಮಾಡಿ, ಶಿವಕರ್ಮವ ಹುಟ್ಟ ಕಳೆದು ಪುಟ್ಟೆ ಎಂಬ ಮುಕ್ತಿಯ ಪಡೆ ಎಂಬುದೀಗ ಈ ವಚನದ ತಾತ್ಪರ್ಯಾರ್ಥ.

ಇಂತು ಭಕ್ತಜನಂಗಳಿಗೆ ಭಕ್ತಿ ಪ್ರಾರಂಭದುದ್ಯೋಗಮಂ ಉಪದೇಶಾರ್ಥವಾಗಿ ನಿರೂಪಿಸಿದ ಮಹಾತ್ಮನು ತಾನು ಉಪಾಧಿಯ ಹೊದ್ದದೆ ನಿರೂಪಾಧಿಕನಾಗಿ ದಾಸೋಹವಂ ಮಾಡುವ ಪರಿ ಎಂತಿರ್ದುದೆಂದೊಡೆ, ಮುಂದೆ ನಿರುಪಾಧಿಮಾಟ ಸ್ಥಲವಾದುದು.

೧೪. ನಿರುಪಾಧಿಮಾಟಸ್ಥಲ

೩೦೧

(೧) ಮಾಟ ಕೂಟ ಫಲಪ್ರಾಪ್ತಿ ಎಂಬ ಮಾತನ್ನು ಕೇಳಲಾಗದು. ಶಿವಶಿವಾ ನಿಮ್ಮ ಭಕ್ತರಿಗೆ ಮಾಡಿಹೆನೆನ್ನದಿರು ಎಂದು ಶ್ರೀಗುರು ಲಿಂಗವು ಕೃಪೆಯ ಮಾಡಿದ ಕಾರಣ, ಅಲ್ಲಿ ಮಾಡಿ ಮಾಡಿಸಿಕೊಂಬಾತ ನೀನೇ ಕೂಡಲಸಂಗಮದೇವಾ.

ಟೀಕು : ಪರಶಿವನು ತನ್ನ ಸ್ವಲೀಲೆಯಿಂದ ಲಿಂಗಾಂಗವೆಂಬಿರಡಾಗಿ ಭಕ್ತ ದೇವನೆಂದೆನಿಸಿ, ಮಾಡುವ ಮಾಡಿಸಿಕೊಳ್ಳುತ್ತಿಪ್ಪ ಶಿವನೊಬ್ಬನೇ ಎಂದು ಗುರು ಕರುಣದಿಂದರಿದು ಭಿನ್ನಭಾವವಳಿದ ಸದ್ಭಕ್ತರೇ ಮುಕ್ತರು. ಅಂತಲ್ಲದೆ ಅಜ್ಞಾನದಿಂದ ತನುಮನಧನಂಗಳು ತನ್ನವೆಂದು ತಾನು ಗುರುಲಿಂಗಜಂಗಮಕ್ಕೆ ಕೊಟ್ಟು ಫಲಪದವ ಪಡೆದೆನೆಂಬವರೆಲ್ಲರೂ ಪರಿಭವಕ್ಕೆ ಬರುತ್ತಿಹರೆಂಬುದೀ ವಚನದ ತಾತ್ಪರ್ಯಾರ್ಥ.

೩೦೨

(೨) ದಾಸ ವಸ್ತ್ರವನಿತ್ತ ಠಾವು ಲೇಸಾಯಿತ್ತು, ತವನಿಧಿಯ ಪಡೆದ ಠಾವು ಹೊಲ್ಲಹವಾಯಿತ್ತು, ಸಿರಿಯಾಳ ಮಗನನಿತ್ತ ಠಾವು ಲೇಸಾಯಿತ್ತು, ಮರಳಿ ಬೇಡಿದ ಠಾವು ಹೊಲ್ಲಹವಾಯಿತ್ತು, ಬಲ್ಲಾಳ ವಧುವನಿತ್ತ ಠಾವು ಲೇಸಾಯಿತ್ತು, ಸ್ವಯಲಿಂಗವಾದ ಠಾವು ಹೊಲ್ಲಹವಾಯಿತ್ತು, ಇವರೆಲ್ಲರೂ ಸಕಳೇಶ್ವರದೇವರಲ್ಲಿ ಅಪೇಕ್ಷಿತರಲ್ಲದೆ ನಿರಪೇಕ್ಷಿತರಾರೂ ಇಲ್ಲ.

೩೦೩

(೩) ಹೊನ್ನು, ಹೆಣ್ಣು ಮಣ್ಣು ಅನ್ನ, ಉದಕ, ವಸ್ತ್ರಂಗಳನು ಧರ್ಮದಾಸೆ ಕಾರಣ ಅರ್ಥದಾಸೆ ಕಾರಣ, ಕಾಮದಾಸೆ ಕಾರಣ, ಮೋಕ್ಷದಾಸೆ ಕಾರಣ, ಸಾಲೋಕ್ಯ ಸಾಮೀಪ್ಯ ಸಾರೂಪ್ಯ, ಸಾಯುಜ್ಯದಾಸೆ ಕಾರಣ, ಪಂಚಮಹಾ ಪಾತಕಂಗಳ ಮಾಡಿದ ದೋಷಂಗಳು ಕಾರಣ, ಆಧಿ ಕಾರಣ, ವ್ಯಾಧಿಕಾರಣ, ಕೀರ್ತಿ

ಕಾರಣ, ವಾರ್ತೆ ಕಾರಣ, ಸರ್ವವನು ನಿರಂತರ ಕೊಡುವರು. ನಿಷ್ಕಾರಣವಾಗಿ, ನಿರುಪಾಧಿಕರಾಗಿ, ನಿರಾಶ್ರಿತರಾಗಿ, ಶ್ರೀಗುರು ಕಾರಣವಾಗಿ, ಲಿಂಗಕಾರಣವಾಗಿ, ಜಂಗಮಕಾರಣವಾಗಿ, ಪ್ರಸಾದ ಕಾರಣವಾಗಿ ಈ ನಾಲ್ಕನೂ ಒಂದುಮಾಡಿ ಸದ್ಭಕ್ತಿಯಿಂದ ದ್ವಿವಿಧವು ಪರಿಣಾಮಿಸುವಂತೆ ಕ್ಷಣಮಾತ್ರದಲ್ಲಿ ಅಣುಮಾತ್ರ ದ್ರವ್ಯವ ಕೊಡುವವರನಾರನೂ ಕಾಣೆ ನಿರ್ವಂಚಕರಾಗಿ. ಆನು ವಂಚಕನು ಎನಗೆ ಭಕ್ತಿ ಇಲ್ಲದೆ. ಶಿವಶಿವಾ, ಸಂಗನಬಸವಣ್ಣನು ನಿರ್ವಂಚಕನು. ನಿರಾಶಾಭರಿತನು, ಸುಚರಿತ್ರನು, ಸದ್ಭಕ್ತಿಪುರುಷನು ಮಹಾಪುರುಷನು. ಎನಗೆಯೂ ಮಹಾ ಶ್ರೀಗುರು ಲಿಂಗ ಜಂಗಮ ಪ್ರಸಾದ. ಈ ಚತುರ್ವಿಧವು ಬಸವಣ್ಣನು. ಈ ಬಸವಣ್ಣನ ಭೃತ್ಯರ ತದ್ಭೃತ್ಯನಾಗಿ ಎನ್ನನಿರಿಸಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ಲಿಂಗ ಜಂಗಮದಲ್ಲಿ ನಿರುಪಾಧಿಕನಾಗಿ ಕರ್ತೃ ಭೃತ್ಯಭಾವದಿಂದ ದಾಸೋಹವ ಮಾಡಿದ ಮಹಾತ್ಮನು ತಾ ಮಾಡುವ ಮಾಟದೊಳಗೆ ಮಾಡಿಸಿಕೊಂಬ ವಸ್ತುವಿನೊಳಗೆ ಅವಿನಾಭಾವವೆಂಬ ಕೃತ ನಿಶ್ಚಯವಳವಡಲು ಮುಂದೆ ಸಹಜಮಾಟಸ್ಥಲವಾದುದು.

೧೫. ಸಹಜಮಾಟಸ್ಥಲ

೩೦೪

(೧) ಮಾಡುವಂತಿರಬೇಕು. ಮಾಡದಂತಿರಬೇಕು. ಮಾಡುವ ಕೂಟ ದೊಳಗೆ ತಾನಿಲ್ಲದಿರಬೇಕು. ನಮ್ಮ ಕೂಡಲಸಂಗಮದೇವನೊಳಗಿಂತೀ ತೆರನಾಗಿರ ಬೇಕು.

ಟೀಕು : ಗುರುವಿಂಗೆ ಜಂಗಮಕ್ಕೆ ತ್ರಿವಿಧ ಪದಾರ್ಥಂಗಳ ಕ್ರೀಯಿಂದ ಸಮರ್ಪಿಸುವಲ್ಲಿ ಕರ್ತೃಭೃತ್ಯನಾಗಿ ಮಾಡುತ್ತಿರಬೇಕು ಭಕ್ತ ಅಂತು ಮಾಡುವ ಭಕ್ತನು ತಾನೆಂಬ ಭಾವವಿಲ್ಲದೆ ಮಾಡುವ ಮಾಡಿಸಿಕೊಂಬವೆರಡು ಒಂದೇ ಲಿಂಗ ವೆಂದು ಕಾಣುತ್ತಿಪ್ಪ ಜ್ಞಾನವುಳ್ಳಾತ ಭಕ್ತನೆಂಬುದೀ ವಚನದ ತಾತ್ಪರ್ಯಾರ್ಥ.

೩೦೫

(೨) ಮಾಟವಿಲ್ಲದ ಕೂಟವದೇಕೋ ? ಮಾಟಕೂಟವೆಂಬೆರಡರ ಅನುವನ ರಿಯಲೇಬೇಕು. ಮಾಟಕೂಟವೆಂಬೆರಡರ ಅನುಮಾಟದಿಂದಲೇ ಭಕ್ತಿ ಇದೇ ಕೂಟವು ಕೂಡಲಚನ್ನಸಂಗಾ ನಿಮ್ಮಲ್ಲಿ.

ಇಂತು ಪಿಂಡಾದಿ ಸಹಜಮಾಟಾಂತ್ಯದ ಭಕ್ತಸ್ಥಲದಲ್ಲಿ ಆಚರಿಸುತ್ತ ಮಾಡಿ ಮಾಟವ ಮರೆದು, ಕೂಡಿ ಕೂಟವ ಮರೆದು, ಸಹಜದಲ್ಲೈಕ್ಯವಾದ ಮಹಂತನು ಮುಂದೆ ನೈಷ್ಠಿಕಾಮುಖದಿಂದಲಾಚರಿಸಿ ಬೆರೆಸುವ ಭೇದವೆಂತಿರ್ದುದೆಂದೊಡೆ, ಮುಂದೆ ಮಹೇಶ್ವರಸ್ಥಲವಾದುದು.

ಮಹೇಶ್ವರಸ್ಥಲ

ವಿವರಣೆ : ಭಕ್ತಸ್ಥಲದಲ್ಲಿಯ ಕ್ರಿಯೆಗಳನ್ನು ದೃಢಪಡಿಸುವುದೇ ಮಹೇಶ್ವರ ಸ್ಥಲದ ಉದ್ದೇಶವು. ನಿಷ್ಠೆಯು ಈ ಸ್ಥಲದ ಮುಖ್ಯ ಲಕ್ಷಣವಾಗಿದೆ. ದೃಢನಿಶ್ಚಯದಿಂದ ಕಾರ್ಯಗಳನ್ನು ಮಹೇಶ್ವರನು ಮುಂದುವರಿಸತಕ್ಕದ್ದು.

ಆದ್ದರಿಂದ ಮಹೇಶ್ವರನ ಸ್ಥಲದಲ್ಲಿ ಸಾಹಸ, ಧೈರ್ಯ, ನಿಶ್ಚಯ, ಈ ಬಗೆಯ ಗುಣಗಳು ಅಳವಡಬೇಕು. ಈ ಸ್ಥಲದಲ್ಲಿರುವವನು ಗಂಡಾಂತರಗಳಿಗೆ ಹೆದರು ವದಿಲ್ಲ. ಎಂಥ ಕಷ್ಟಗಳು ಬಂದರೂ ಅವನು ಅವುಗಳನ್ನು ಎದುರಿಸುವನು. ಎಡೆಬಿಡದೆ ಪ್ರಯತ್ನಿಸುತ್ತ ಕೈಕೊಂಡ ಕಾರ್ಯಗಳನ್ನು ಜರುಗಿಸುವನು. ಬಹು ಸಾಹಸಿಯಾಗಿರುವನು. ಜೀವದ ಮೇಲೆ ಬಂದರೂ ಧೈರ್ಯಗೆಡನು. ಅತ್ಯಂತ ಸ್ವಾಭಿಮಾನಿಯು. ಈ ಬಗೆಯ ವೃತ್ತಿಯುಳ್ಳವನಾಗಿ ಮಹೇಶ್ವರನು ಜಗತ್ತಿನಲ್ಲಿ ಆಚರಿಸತಕ್ಕದ್ದು.

ಈ ಸ್ಥಲದಲ್ಲಿ ೯ ಸ್ಥಲಗಳಿವೆ. ಅವುಗಳಲ್ಲಿ ಮಹೇಶ್ವರನ ಕ್ರಿಯೆಗಳು ಹೇಗಿರ ಬೇಕೆಂಬುದು ಹೇಳಲ್ಪಟ್ಟಿದೆ.

ಮಹೇಶ್ವರಸ್ಥಲ : ಇವುಗಳಲ್ಲಿ ಮೊದಲನೆಯದಾದ ಮಹೇಶ್ವರಸ್ಥಲದಲ್ಲಿ ನಾವು ಮೇಲೆ ಹೇಳಿದಂತೆ ಧೈರ್ಯ, ನಿಶ್ಚಯ, ಸಾಹಸಗಳಿರಬೇಕೆಂದು ವಚನಕಾರರು ಹೇಳುತ್ತಾರೆ.

ಲಿಂಗನಿಷ್ಠಾಸ್ಥಲ : ಎರಡನೆಯದಾದ ಈ ಸ್ಥಲದಲ್ಲಿ ಮಹೇಶ್ವರನು ದೃಢಭಕ್ತಿಯುಳ್ಳವನಾಗಿ, ಲಿಂಗಧ್ಯಾನದಲ್ಲಿಯೇ ಮಗ್ನನಾಗಿರಬೇಕು. ಪರಮಾತ್ಮನಲ್ಲಿಯ ಅವನ ಶ್ರದ್ಧೆಯು ಎಂದೂ ಮಸುಳಿಸಕೂಡದು.

ಪೂರ್ವಾಶ್ರಯ ನಿರಸನಸ್ಥಲ : ಮಹೇಶ್ವರನು ಸದಾಚಾರಕ್ಕೆ ಮಾತ್ರ ಮಹತ್ವ ಕೊಡುವವನಾದ್ದರಿಂದ ಸದಾಚಾರವುಳ್ಳವರಲ್ಲಿ ಯಾವ ಬಗೆಯ ಭೇದಭಾವವನ್ನು ಮಾಡಕೂಡದು. ಆದ್ದರಿಂದ ಅವನಲ್ಲಿ ಜಾತಿಭೇದವಿಲ್ಲ. ಇದನ್ನು ಎಣೆಸಿದ್ದಾದರೆ ಭಕ್ತನಲ್ಲಿಯ ಲಿಂಗದ ಅವಹೇಳನವನ್ನು ಮಾಡಿದಂತೆಯೇ ಸರಿ.

ವಾಗದ್ವೈತನಿರಸನಸ್ಥಲ : ಕೆಲವರು ವ್ಯವಹಾರದಲ್ಲಿ ಕೂಡ ಅದ್ವೈತಾಚರಣೆಯನ್ನು ಆಚರಿಸುವದುಂಟು. ಇದು ಅನಾಚಾರವು. ಕೇವಲ ಜ್ಞಾನಮಾರ್ಗಿಗಳಲ್ಲಿ ಕೇವಲಾದ್ವೈತಿಗಳಲ್ಲಿ ಈ ಬಗೆಯಾಗಿ ತಪ್ಪಿ ಆಚರಿಸುವವರು ದೊರೆಯುವದುಂಟು. ಇದು ಸರಿಯಾದ ಮಾರ್ಗವಲ್ಲವೆಂದು ವಚನಕಾರರು ಇವರನ್ನು ಹಳಿದಿದ್ದಾರೆ.

ಆಹ್ವಾನನಿರಸನಸ್ಥಲ : ಶೈವಮಾರ್ಗಿಗಳೂ ಕೇವಲ ಮೂರ್ತಿಪೂಜಕರೂ ಆಹ್ವಾನ ವಿಸರ್ಜನೆಗೂಡಿ ತಮ್ಮ ಪೂಜಾದಿ ಕಾರ್ಯಗಳನ್ನು ನಿರ್ವಹಿಸುವದುಂಟು. ಇದು ಲಿಂಗಾಂಗಿಗಳಿಗೆ ಸಲ್ಲದ್ದು. ಲಿಂಗಸಹಿತವಾಗಿ ಅವರು ಯಾವಾಗಲೂ ಆಚರಿಸುವವರಾದ್ದರಿಂದ ಅವರಲ್ಲಿ ಆಹ್ವಾನವೂ ಇಲ್ಲ, ವಿಸರ್ಜನೆಯೂ ಇಲ್ಲ.

ಅಷ್ಟತನುಮೂರ್ತಿನಿರಸನಸ್ಥಲ : ಮಹೇಶ್ವರನು ಪರಮಾತ್ಮನನ್ನು ಬಿಟ್ಟು ಇತರ ದೇವತೆಗಳನ್ನು ನಂಬಕೂಡದು. ಅವನು ಅನೇಕತರದ ಮೂರ್ತಿಗಳನ್ನೂ ಕಿರುಕುಳ ದೈವಗಳನ್ನೂ ಪೂಜಿಸಬಾರದು. ಪರಮಾತ್ಮನೊಬ್ಬನೇ ಇದ್ದಾನೆಂದು ಭಾವಿಸಿ ಅವನಲ್ಲಿ ದೃಢವಿಶ್ವಾಸವನ್ನಿಟ್ಟು ವರ್ತಿಸಬೇಕೆಂದು ಈ ಸ್ಥಲದಲ್ಲಿ ಹೇಳಲ್ಪಟ್ಟಿರುತ್ತದೆ.

ಮುಂದಿನ ಮೂರು ಸ್ಥಲಗಳಲ್ಲಿ ವಚನಕಾರರು ಪರಮಾತ್ಮನು ಎಂಥವನಿರುವನೆಂಬುದನ್ನು ಹೇಳಿ ಪರಮಾತ್ಮನು ತನ್ನ ದೇಹದಲ್ಲಿಯೇ ಹೇಗೆ ವಾಸಿಸುವನೆಂಬುದನ್ನು ಕಡೆಯ ಸ್ಥಲದಲ್ಲಿ ಹೇಳಿದ್ದಾರೆ.

ಸರ್ವಗತನಿರಸನಸ್ಥಲ : ಜಗತ್ತೇ ಶಿವನೆಂದು ಭಾವಿಸಿ ಸಲ್ಲದ ಕ್ರಿಯೆಗಳನ್ನು ಅನೇಕರು ಮಾಡುವದುಂಟು. ಇದು ನೀತಿಗೆ ಬಾಹಿರವಾದದ್ದು. ಇದು ತಪ್ಪು ಮಾರ್ಗವು. ಹೀಗಾದಲ್ಲಿ ಸದಾಚಾರ, ಸತ್‌ಕ್ರಿಯೆಗಳು ಉಳಿಯಲಾರವೆಂದು ವಚನಕಾರರು ಇಲ್ಲಿ ಹೇಳುತ್ತಾರೆ.

ಶಿವಜಗನ್ಮಯಸ್ಥಲ : ಜಗತ್ತು ಶಿವನಲ್ಲದಿದ್ದರೂ ಅವನು ಎಲ್ಲೆಲ್ಲಿಯೂ ಇರುತ್ತಾನೆಂದು ನಂಬಬೇಕು. ಅವನ ಮೂಲಕವಾಗಿಯೇ ಜಗತ್ತಿನ ಕಾರ್ಯಗಳು ನಡೆದಿರುತ್ತವೆ. ಇಂಥ ಪರಮಾತ್ಮನೊಡನೆ ಬೆರೆಯುವದೇ ಮನುಷ್ಯನ ಅಂತಿಮಧ್ಯೇಯವೆಂದು ಈ ಸ್ಥಲದಲ್ಲಿ ಹೇಳಲ್ಪಟ್ಟಿರುತ್ತದೆ.

ಭಕ್ತದೇಹಿಕಲಿಂಗಸ್ಥಲ : ಪರಮಾತ್ಮನು ಹೀಗೆ ಜಗನ್ಮಯನಾದರೂ ಅವನು ಪಾಪಯುಕ್ತರಾದವರಲ್ಲಿ, ಸದ್ಭಕ್ತಿ ಸದ್ವರ್ತನೆ ಇಲ್ಲದವರಲ್ಲಿ ಇರಲಾರನು. ಅವನು ಭಕ್ತರಲ್ಲಿಯೇ ಇರುತ್ತಾನೆ. ಭಕ್ತ ಕಾಯವೇ ಅವನ ಕಾಯವು. ಭಕ್ತನಲ್ಲಿ ಸದ್ಗುಣಗಳು ಹೆಚ್ಚಿದ ಹಾಗೆ ಪರಮಾತ್ಮನು ಅವನಲ್ಲಿಯೇ ಪ್ರಕಟವಾಗುತ್ತ ಹೋಗುವನೆಂದು ಈ ಸ್ಥಲದಲ್ಲಿ ವಚನಕಾರರು ಹೇಳುತ್ತಾರೆ.

ಹೀಗೆ ಮಹೇಶ್ವರಸ್ಥಲದಲ್ಲಿ ೯ ಸ್ಥಲಗಳಿವೆ. ಅವುಗಳಲ್ಲಿ ಹೇಳಿದಂತೆ ವರ್ತಿಸಿ ಪರಮಾತ್ಮನಲ್ಲಿ ದೃಢವಿಶ್ವಾಸವನ್ನು ಇಟ್ಟು ಪರಮಾತ್ಮನ ಸ್ವರೂಪು ಆವುದಿರುತ್ತದೆಂಬುದನ್ನು ಚನ್ನಾಗಿ ಅರಿತುಕೊಂಡು ಸದಾಚಾರ ಸದ್ವರ್ತನೆಯಿಂದ ಕೂಡಿಕೊಂಡು ತನ್ನ ಕ್ರಿಯೆಗಳನ್ನು ದೃಢಪಡಿಸುತ್ತ ಹೋಗಬೇಕು. ಇಂಥವನಲ್ಲಿ ಪರಮಾತ್ಮನು ಮನೆಮಾಡಿಕೊಳ್ಳುವನು. ಅವನ ದೇಹವೇ ಪರಮಾತ್ಮನ ದೇಹವಾಗುವದು. ಹೀಗೆ ವಚನಕಾರರು ಮಹೇಶ್ವರನಾರೆಂಬುದನ್ನು ಕುರಿತು ವಿವೇಚಿಸಿರುವರು.

೧. ಮಹೇಶ್ವರಸ್ಥಲ

೩೦೬

(೧) ಸಜ್ಜನ ಸದ್ಭಾವಿ ಅನ್ಯರಲ್ಲಿ ಕಯ್ಯಾಂತು ಬೇಡ. ಲಿಂಗವ ಮುಟ್ಟಿದ ಕೈ ಸವಿ. ಕಂಗಳಲ್ಲಿ ಒಸೆದು ನೋಡ ಪರವಧುವ. ಮನದಲ್ಲಿ ಅನ್ಯವ ನೆನೆಯ. ಮಾನವರ ಸೇವೆಯ ಮಾಡ. ಲಿಂಗವ ಪೂಜಿಸಿ ಲಿಂಗದ ಹಂಗನೊಲ್ಲ. ಧನದಲ್ಲಿ ವಂಚನೆ ಇಲ್ಲ ಕೂಡಲ ಚನ್ನಸಂಗ ನಿಮ್ಮ ಶರಣ.

೩೦೭

(೨) ನಾಳೆ ಬಾಹುದು ನಮಗಿಂದೇ ಬರಲಿ. ಇಂದು ಬಾಹುದು ನಮಗೀಗಲೇ ಬರಲಿ. ಇದಕಾರಂಜುವರು ? ಇದಕಾರಳುಕುವರು ? 'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ, ನಮ್ಮ ಕೂಡಲಸಂಗಮದೇವರು ಬರೆದ ಬರಹ ತಪ್ಪದು. ಹರಿ[೧] ಬ್ರಹ್ಮಾದಿಗಳಿಗೆ ತಪ್ಪಿಸಲು ವಶವಲ್ಲ.

೩೦೮

(೩) ಆದಂತೆ ಆಗಲಿ, ಮಾದಂತೆ ಮಾಣಲಿ, ಎನಲಾಗದು. ನೇಮದಾತಂಗೆ ಛಲಬೇಕು, ಛಲಬೇಕಯ್ಯ. ಹಿಡಿದುದ ಬಿಡಲಾಗದು. ಹುಲಿಗೆರೆಯ ವರದ ಸೋಮನಾಥನ ಮನಮುಟ್ಟಿದಧಿಕಂಗಲ್ಲದೆ ಸೋಲುವವನಲ್ಲ.

೩೦೯

(೪) ಲಂಚವಂಚನೆಗೆ [೨][ಕೈ]ಯ್ಯಾನದ ಭಾಷೆ. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ಕೈಮುಟ್ಟಿ ಎತ್ತಿದೆನಾದಡೆ ಅಯ್ಯಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ ಶಂಭುಜಕ್ಕೇಶ್ವರದೇವಯ್ಯ ನಿಮ್ಮಾಣೆ.

೩೧೦

(೫) ಅಡಿಗಡಿಗೆ ಬಂದಡರುತಿಪ್ಪ ಕಡುಛಲ ನಿನಗೆ ಬೇಡ ಕಂಡಾ ! ಮೃಡನೇ ಎನ್ನೊಡನೆ ನೀ ತೊಡರಿ ಸಸಿನೆ ಹೋಗಲರಿಯ ಎಂತೆಂದಡೆಯೂ ನಾನಂಜುವವನಲ್ಲ, ಸಂತತ ಗಾಸಿಮಾಡಿದಡೆಯೂ ಕಂತುಹರ ಅಭಯಕರನು ಎನ್ನ ನೇಮಕ್ಕೆ ಅಡ್ಡ ಬಂದಡೆಯೂ ಒಡವೆಯ ಸವೆದು ಒಡಲನೊಡ್ಡುವೆ. ಕಡಗುವಡೊಮ್ಮೆ ಹಳಚಿ ನೋಡುವೆ. ಬಡವನ ಕೈ ಕಡುಹ ನೋಡು ನೋಡಯ್ಯ ಸಂಗಪ್ರಿಯ ಚನ್ನ ಬಂಕೇಶ್ವರ.

ಇಂತು ಮಹೇಶ್ವರಸ್ಥಲದಲ್ಲಿ ಛಲ, ನಿಯಮ, ವ್ರತದಿಂದ ಕೃತ ನಿಶ್ಚಯನಾದ ವೀರಮಾಹೇಶ್ವರನು ತನ್ನಂಗದ ಮೇಲಣ ಲಿಂಗದ ನೈಷ್ಠೆ ಎಂತಿರ್ದುದೆಂದಡೆ ಮುಂದೆ ಲಿಂಗನಿಷ್ಠಾಸ್ಥಲವಾದುದು.

೨. ಲಿಂಗನಿಷ್ಠಾಸ್ಥಲ

೩೧೧

(೧) ಅಮೃತಸಾಗರದೊಳಗಿರ್ದು ಆಕಳ ಚಿಂತೆ ಏಕೆ ? ಮೇರುಮಂದಿರದೊಳಗಿರ್ದು ಜಲಗರದ ಚಿಂತೆ ಏಕೆ ? ಶ್ರೀಮತ್ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆ ಏಕೆ ? ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಾವ ಚಿಂತೆ ಏಕೆ ಗುಹೇಶ್ವರಾ ?

---

೧ + ಹರ (ಮೂ) ೨–೨ ಕೆ (ಮೂ)

೩೧೨

(೨) ನೆನಹಿನ ನಲ್ಲನು ಮನೆಗೆ ಬಂದಡೆ ನೆನವುದಿನ್ನಾರನು ಹೇಳವ್ವಾ ? ನೆರೆವ ಕ್ರೀಯಲ್ಲಿ ನೆರೆದು ಸುಖಿಯಹುದಲ್ಲದೆ ನೆನವುದಿನ್ನಾರನು ಹೇಳವ್ವಾ ? ನೆನಹಿನನಲ್ಲ ಉರಿಲಿಂಗದೇವನ ಕಂಡ ಬಳಿಕ ನೆನವುದಿನ್ನಾರನು ಹೇಳವ್ವಾ ?

(೩) ದೆಸೆದೆಸೆಯಲ್ಲಿ ನಿಮ್ಮನೇ ಕಾಂಬೆ. ಎದ್ದು ನೋಡಿ ನಿಮ್ಮನೇ ಕಾಂಬೆ. ನಿದ್ರೆಗೆಯ್ದು ನಿಮ್ಮನೇ ಕಾಂಬೆ. ಅಹೋರಾತ್ರಿ ನಿಮ್ಮ ಧ್ಯಾನದಲ್ಲಿರಿಸು ಮಹಾಲಿಂಗ ಕಲ್ಲೇಶ್ವರಾ.

೩೧೩

(೪) ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ ! ಎಚ್ಚರೆ ಗರಿದೋರದೆ ನೆಡಬೇಕು. ಅಪ್ಪಿದಡೆ ಅಸ್ತಿಗಳು ನುಗ್ಗುನುಸಿಯಾಗಿರಬೇಕು. ಬೆಚ್ಚರೆ ಬೆಸುಗೆಯರಿಯದಂತಿರಬೇಕು. ಮಚ್ಚು ಒಪ್ಪಿತ್ತು ಚನ್ನಮಲ್ಲಿಕಾರ್ಜುನನ ಸ್ನೇಹ.

೩೧೪

(೫) ಎಲು ಒಡೆದು ತನು ಕರಗಿ, ಮನವು ಜಜ್ಜರಂಬೋಗಿ ಲಿಂಗದಲ್ಲಿ ನೀರು ನೀರಾಗಿ ಬೆರೆಸಬೇಕು. ಜಂಗಮದಲ್ಲಿ ವಾರಿ ಕಲ್ಲಾಗಿ ಕರಗಬೇಕು. ಸರ್ವಾಂಗ ಪುಳಕಂಗಳೊಡೆದು ಕಡಲುಗಳಾಗಿ ನಿರ್ವಾಣ ನಿಜವೆಂದಪ್ಪುದೋ ಉಳಿಯು ಮೇಶ್ವರಾ ?

ಇಂತು ಲಿಂಗದಲ್ಲಿ ನೈಷ್ಠೆ ಕರಿಗೊಂಡು ನಿಬ್ಬೆರಗಾದ ಶ್ರೀವೀರ ಮಾಹೇಶ್ವರನು ಆ ಲಿಂಗದಲ್ಲಿ ಲೋಲುಪ್ತನಾಗಿ ತನ್ನ ಪೂರ್ವಜಾತ ಜೀವಭಾವ ಲೌಕಿಕವೆಂಬ ನಾನಾ ಪ್ರಪಂಚಿನ ಪೂರ್ವಾಶ್ರಯವಂ ಮಿಥ್ಯೆ ಎಂದರಿದು ನಿರಸನವಂ ಮಾಡುತ್ತಿರಲು ಮುಂದೆ ಪೂರ್ವಾಶ್ರಯನಿರಸನಸ್ಥಲವಾದುದು.

೩. ಪೂರ್ವಾಶ್ರಯ ನಿರಸನಸ್ಥಲ

೩೧೫

(೧) ಶ್ರೀಗುರು ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೇ ? ಲಿಂಗದೇವನ ಪೂಜಿಸಿ ಕುಲವನರಸುವರೇ, ಕೂಡಲ ಸಂಗಮದೇವ ಭಕ್ತಕಾಯ ಮಮಕಾಯನಾಗಿ?

೩೧೬

(೨) ಶ್ರೀಗುರುವು ಪೂರ್ವಾಶ್ರಯವ ಕಳೆದು, ಪುನರ್ಜಾತನ ಮಾಡಿದ ಬಳಿಕ ಪಂಚಭೂತಕಾಯವ ಕಳೆದು, ಪ್ರಸಾದಕಾಯವ ಮಾಡಿದ ಬಳಿಕ, ವಾಯು ಪ್ರಾಣಿಯ ಕಳೆದು, ಲಿಂಗಪ್ರಾಣಿಯ ಮಾಡಿದ ಬಳಿಕ, ಎಲ್ಲಿಯ ಕುಲಸೂತಕ, ಎಲ್ಲಿಯ ಛಲಸೂತಕ, ಎಲ್ಲಿಯ ತನುಸೂತಕ, ಎಲ್ಲಿಯ ಮನಸೂತಕ, ಎಲ್ಲಿಯ

ನೆನಹುಸೂತಕ, ಎಲ್ಲಿಯ ಭಾವಸೂತಕ ? ಇವನೆಂದೂ ಹಿಡಿಯಲಾಗದು. ಕುಲ ಸೂತಕವುಳ್ಳನ್ನಕ್ಕ ಭಕ್ತನಲ್ಲ. ಛಲಸೂತಕವುಳ್ಳನ್ನಕ್ಕ ಮಹೇಶ್ವರನಲ್ಲ. ತನು ಸೂತಕವುಳ್ಳನ್ನಕ್ಕ ಪ್ರಸಾದಿಯಲ್ಲ. ಮನಸೂತಕವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ. ನೆನಹು ಸೂತಕವುಳ್ಳನ್ನಕ್ಕ ಶರಣನಲ್ಲ. ಭಾವಸೂತಕವುಳ್ಳನ್ನಕ್ಕ ಲಿಂಗೈಕ್ಯನಲ್ಲ. ಇಂತೀ ಸೂತಕವುಮುಂದುಗೊಂಡಿಪ್ಪವರ ಮುಖವ ನೋಡಲಾಗದು ಗುಹೇಶ್ವರಾ.

೩೧೭

(೩) ಪೂರ್ವಾಶ್ರಯವ ಕಳೆದೆವೆಂಬಿರಿ. ಪೂರ್ವವಾವುದು ಆಶ್ರಯವಾವುದು ಬಲ್ಲರೆ, ನೀವು ಹೇಳಿರೆ– ಪೂರ್ವವೆಂಬುದೇ ಬಂದ ಬಟ್ಟೆ, ಆಶ್ರಯವೆಂಬುದೇ ಕರಣಾದಿ ಗುಣಂಗಳು. ಈ ಉಭಯವಳಿದು ಕೂಡಲ ಚನ್ನಸಂಗಯ್ಯನಲ್ಲಿಪ್ಪ ಶರಣಂಗೆ ನಾನು ಶರಣೆಂಬೆನು.

ಇಂತು ಪೂರ್ವಾಶ್ರಯವ ನಿವೃತ್ತಿಯಮಾಡಿದ ವೀರಮಾಹೇಶ್ವರನು ಲಿಂಗವನರಿದು ಅರಿತಿಹೆನೆಂಬ ಸುಖವನಿದಿರಿಟ್ಟು ನುಡಿದು ತೋರಿದೊಡೆ ಭಿನ್ನವಾದುದೆಂದು ವಾಗ್‌ವೃತ್ತಿಯ ನಿರಸನಮಂ ಮಾಡುತ್ತಿರಲು, ಮುಂದೆ ವಾಗದ್ವೈತ ನಿರಸನಸ್ಥಲಮಾದುದು.

೪. ವಾಗದ್ವೈತನಿರಸನಸ್ಥಲ

೩೧೮

(೧) ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ರಾಗ, ದ್ವೇಷವೆನಿಪ ಒಡಲಿದೆ. ರಾಗ ದ್ವೇಷ ಗಮನಾಗಮನಂಗಳಿರುತ್ತಿದೆ. ಬ್ರಹ್ಮವಾನೆಂಬ ಬರಿಯ ವಾಗದ್ವೈತದಲ್ಲಿ ಫಲವಿಲ್ಲ. ನಂಬು ಸುಖಸಾಗರವನರಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩೧೯

(೨) ಶೂನ್ಯವ ನುಡಿದು ದುರ್ಗತಿಗಿಳಿವರ, ಅದ್ವೈತವ ನುಡಿದು ಅಹಂಕಾರಿಗಳಾದವರ, ಬ್ರಹ್ಮವ ನುಡಿದು ಭ್ರಮಿತರಾದವರ, ತ್ರಿಕಾಲಲಿಂಗಪೂಜೆಯ ಮಾಡದವರ, ದುರಾಚಾರಿಗಳ ಮೆಚ್ಚ ಕೂಡಲಚನ್ನಸಂಗಮದೇವಾನಿಮ್ಮ ಶರಣ.

೩೨೦

(೩) ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ ? ಸನ್ನಿಹಿತರಾದೆವೆಂಬ ನುಡಿಗೆ ನಾಚರು ನೋಡಾ ! ಅರನಲ್ಲಿ ಸವೆದ ಕಬ್ಬುನದಂತೆ ಮುನ್ನ ಹೋದ ಹಿರಿಯರು ಲಿಂಗದ ಸುದ್ದಿಯನರಿಯರು. ಇನ್ನಾರು ಬಲ್ಲರು ಹೇಳಾ ಗುಹೇಶ್ವರಾ ?

೩೨೧

(೪) ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೇಯವ ನುಡಿದಡೇನು ? ಆದಿ ಅನಾದಿಯ ಸುದ್ದಿಯ ಕೇಳಿದಡೇನು, ಹೇಳಿದಡೇನು, ತನ್ನಲ್ಲಿರ್ದುದ ತಾನರಿಯದನ್ನಕ್ಕ ? ಉನ್ಮನಿಯ ರಭಸದ ಮನ ಪವನದ ಮೇಲೆ ಚನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯರು.

೩೨೨

(೫) ಗತಿ ಮತಿ ಶಬ್ದ ಚೈತನ್ಯವುಳ್ಳನ್ನಕ್ಕ ಕ್ರೀಯೆಂತಂತೆ ನಡೆವುದು. ಉರವಣೆ ಬೇಡ ಕಂಡಾ ಎಲೆ ಮನವೆ. ಕ್ರೀಯೆಂತಂತೆ ನುಡಿವುದು. ಹೂಮಿಡಿಯ ಹರಿದಡೆ, ಹಣ್ಣಾಗಬಲ್ಲುದೆ ? ಲಿಂಗದಲ್ಲಿ ಮನ ಲೀಯವಾಗದನ್ನಕ್ಕ ದೇವ ಸಕಳೇಶ್ವರ[ನ] ನೋಲಿಸಲು ಬೇಕಯ್ಯ.

೩೨೩

(೬) ಕೆರೆಯಲುಂಡು, ತೊರೆಯ ಪೊಗಳುವರು, ಅತಿ ಉತ್ಕಟದ ಪರಬ್ರಹ್ಮವ ನುಡಿವವರು ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕಿ, ಭವವ ಹರಿಯಲರಿಯರು. ವಿಷಯದಲಿರ್ದು ಇಲ್ಲವೆಯ ನುಡಿವ ಹಿರಿಯರಿಗೆ ಲಿಂಗದ ಮಾತೇಕೊ ಗುಹೇಶ್ವರಾ?

೩೨೪

(೭) ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ ನೆರೆ ಮೂರು ಲೋಕವೆಲ್ಲ ಹಲ್ಲಣವ ಹೊತ್ತುಕೊಂಡು ತೊಳಲುತ್ತೈದಾರೆ. ಗುಹೇಶ್ವರಲಿಂಗವನವರೆತ್ತ ಬಲ್ಲರೋ?

೩೨೫

(೮) ಹವಣಿಲ್ಲದ ಶಾಖೆಯ ಕಪಿ ಹಿಡಿಯಲೊಲ್ಲದು. ಗಮನವಿರದೆ ಪಿಕಶಿಶು ನುಡಿಯದು. ಪ್ರಭಾತದಲಿಲ್ಲದೆ ಉಲಿಯದು ಕುಕ್ಕುಟ. ಇಂತೀ ತ್ರಿವಿಧದ ಭೇದವ ನೋಡರೇ ಭಕ್ತರಪ್ಪಡೆ ? ಹೂಮಿಡಿಯ ಹರಿದಡೆ ಹಣ್ಣಪ್ಪುದೇ ? ಹಸಿವು ತೃಷೆ ವಿಷಯವುಳ್ಳನ್ನಕ್ಕ ಅದ್ವೈತ ಉಂಟೇ ? ಜಗದೊಳಗೆ ತನ್ನ ಮರೆದು ಲಿಂಗವ ಮರೆವುದು, ತನ್ನ ಮರೆಯದೆ ಲಿಂಗವ ಮರೆವಯೋಗವದೆಂತಾದುದೋ ? ಸುಡು ಸುಡು. ಅವಂದಿರು ಗುರುದ್ರೋಹಿಗಳು, ಆಚಾರಭ್ರಷ್ಟರು. ಈ ಉಭಯ ತನು ಗುಣ ನಾಸ್ತಿಯಾಗದನ್ನಕ್ಕ ಸಕ್ರಿಯೆಯಿಂದ ಮಾಡುವುದು ಲಿಂಗದಾಸೋಹವನು. ಭಯಭಕ್ತಿಯಿಂದ ಮಾಡುವದು ಜಂಗಮದಾಸೋಹವ. ತನುಕರಗಿ ಮನ ಬೆರಸಿ, ನಿಮಗೆ ಮಾಡದ ವ್ರತಗೇಡಿಗಳ ಎನಗೊಮ್ಮೆ ತೋರದಿರಾ ಗುಹೇಶ್ವರಾ.

೩೨೬

(೯) ವಿಷ್[ಮು]ದ ದಶ ಪವನವ ತನ್ನ ವಶಕ್ಕೆ ತಂದು ನಿಲಿಸಿ, ಸುಷುಮ್ನ ಸುಸರದ ಊರ್ಧ್ವಪ[ಥ]ವನರಿದೆವೆಂದು ನಾಲಿಗೆಯನ[ಲ]ನ ಕೊನೆಯ ಲಂಬಿಕಾಸ್ಥಾನವಾಗಿ ಸಸಿಯಮೃತವ ದಣಿಯುಂಡು ಸುಖಿಯಾದೆನೆಂ[ಬರು] ಇವರೆಲ್ಲರೂ ಉಪಾಧಿಯಾದಿ ಯನರಿಯದೆ ಹೋದರು. ಸಿಮ್ಮಲಿಗೆಯ ಚೆನ್ನರಾಮ ನೆಂಬ ಲಿಂಗದಲ್ಲಿ ಬಯಲ ದ್ವೈತದ ನುಡಿಯ ನುಡಿವರು.

೩೨೭

(೧೦) ಗುರುಸಾಧಕರ ಕಾಣೆನಯ್ಯ ! ಬಲ್ಲೆನೆಂಬವರು ಹೊಲಬುಗೆಟ್ಟರು. ಲಿಂಗಸಾಧಕರನಾರನೂ ಕಾಣೆನಯ್ಯ ! ಬಲ್ಲೆನೆಂಬವರು ಹೊಲಬುಗೆಟ್ಟರು. ಪಾದೋದಕ ಪ್ರಸಾದಸೇವಕರನಾರನೂ ಕಾಣೆನಯ್ಯ. ಬಲ್ಲೆನಂಬವರು ಹೊಲಬು ಗೆಟ್ಟರು. ಇದು ಕಾರಣ ಕೂಡಲ ಚನ್ನಸಂಗಯ್ಯ ವಚನಸಾಧಕರ ಕಂಡು ಮನ ನಾಚಿತ್ತು.

೩೨೮

(೧೧) ಜಗ[ದ್] ವಂದ್ಯರೆಂದು ನುಡಿದು ನಡೆವರು ನೋಡಾ ! ಭವಬಂಧನದ ಕುಣಿಕೆಯ ಕಳೆಯಲರಿಯರು ನೋಡಾ ! ಭವವು ತಮ್ಮ ತುಳಿತುಳಿದು ಕೊಂದಿತ್ತು ನೋಡಾ ! ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ ! ನಿಃಶಬ್ದ ವೇದಿಸ ದಿರ್ದಡೆ ಗುಹೇಶ್ವರ ನೋಡಿ ನಗುತಿರ್ಪ ನೋಡಿರೇ.

೩೨೯

(೧೨) ಪಂಚಭೂತ ಸೂತಕದ ಬಳಿವಿಡಿದು, ಪ್ರಜ್ವಲಿಸುವ ಆತ್ಮಜ್ಯೋತಿ ಎಂಬುದು ಮಾತಿನೊಳಗಲ್ಲ, ನಾದ ಬಿಂದು ಕಳಾತೀತವೆಂದು ನುಡಿವರು. ಹೆಸರಿಲ್ಲದ ಬಯಲ ತಮ್ಮ ತಮ್ಮ ಮುಖಕ್ಕೆ ಹೆಸರಿಟ್ಟು ತಮತಮಗೆ ಕರತಳಾಮಳಕವೆಂಬರು. ಅದರ ಆದಿ ಅಂತ್ಯನವರಿಯರು. ಎಂತು ಬಲ್ಲರು ಸಿಮ್ಮಲಿಗೆಯ ಚನ್ನರಾಮನನು ಶಬ್ದದ ಉದ್ದೇಶಿಗಳು ?

ಇಂತು ವಾಗದ್ವೈತವ ನಿವೃತ್ತಿಯಂ ಮಾಡಿ ಮನದ ಸಂಚಲವನಳಿದು ಸರ್ವಾಂಗದಲ್ಲಿ ಲಿಂಗವು ಭರಿತವೆಂಬುದನರಿದ ವೀರಮಾಹೇಶ್ವರನು ಒಮ್ಮೆ ಆಹ್ವಾನಿಸಿ ಹಿಡಿದು ಒಮ್ಮೆ ವಿಸರ್ಜಿಸಿ ಬಿಡುವುದಕ್ಕೆ ತೆರಹುಕಾಣದೆ ಆಹ್ವಾನ ವಿಸರ್ಜನವೆಂಬೆರಡನು ನಿರಸನವಂ ಮಾಡುತ್ತಿರಲು ಮುಂದೆ ಆಹ್ವಾನನಿರಸನಸ್ಥಲ ವಾದುದು.

೧–೧ ಯ (ಮೂ) ೨–೨ ದ (ಮೂ) ೩–೩ ಲಿ (ಮೂ)
೪–೪ ಬುದು (ಮೂ)

೫. ಆಹ್ವಾನನಿರಸನಸ್ಥಲ

೩೩೦

(೧) ಆಹ್ವಾನಿಸಿ ಕರೆವಲ್ಲಿ ಎಲ್ಲಿರ್ದನೋ ಈರೇಳು ಲೋಕ ಹದಿನಾಲ್ಕು ಭುವನಂಗಳನೊಳಕೊಂಡಿಪ್ಪ ದಿವ್ಯವಸ್ತು ? ಮತ್ತೆ ವಿಸರ್ಜಿಸಿ ಬಿಡುವಾಗ ಎಲ್ಲಿ ಅಡಗಿರ್ದನೋ ? ಮುಳ್ಳೂರ ತೆರಹಿಲ್ಲದಿಪ್ಪ ಅಖಂಡವಸ್ತು ಬರಿಯ ಮಾತಿನ ಬಳಕೆಯ ತೂತಜ್ಞಾನವ ಬಿಟ್ಟು, ನೆಟ್ಟನೆ ತನ್ನ ಕರಸ್ಥಲದೊಳಗೆ ಇರುತಿಪ್ಪ ಇಷ್ಟ ಲಿಂಗವ ದಿಟ್ಟಿಸಿ ನೋಡಲು, ಅಲ್ಲಿ ತನ್ನ ಮನಕ್ಕೆ ಮನ ಸಂಧಾನವಾದ ದಿವ್ಯ ನಿಶ್ಚಯ ಒದಗಿ ಆ ದಿವ್ಯ ನಿಶ್ಚಯದಿಂದ ಕುಳವಡಗಿ ಅದ್ವೈತವಪ್ಪುದು. ಇದು ಕಾರಣ, ನಮ್ಮ ಕೂಡಲಸಂಗನ ಶರಣರು ಆಹ್ವಾನ ವಿಸರ್ಜನವೆಂಬುಭಯ ಜಡತೆಯ ಬಿಟ್ಟು ತಮ್ಮ ತಮ್ಮ ಕರಸ್ಥಲದಲ್ಲಿ ನಿಶ್ಚಯಿಸಿದ[ವ]ರಿಗೆ ಸ್ವಯಲಿಂಗವಾದ ಕಾಣೆರೋ.

೩೩೧

(೨) ಆಹ್ವಾನವಿಲ್ಲ ಪ್ರಾಣಲಿಂಗವಾಗಿ. ವಿಸರ್ಜನವಿಲ್ಲ ಆ ಲಿಂಗ ನೆಲೆ ಗೊಂಡಿಪ್ಪುದಾಗಿ. ಇದು ಕಾರಣ ಆಹ್ವಾನ ವಿಸರ್ಜನವಿಲ್ಲದ ಪರಿಬೇರೆ. ಅಂಗ ಸಂಗವೇ ಲಿಂಗ, ಲಿಂಗ ಸಂಗವೇ ಮನ. ಕೂಡಲ ಚನ್ನಸಂಗನ ಶರಣ ಸುಯಿಧಾನಿ.

೩೩೨

(೩) ನಿತ್ಯ ಪರಿಪೂರ್ಣನೆಂದು, ಪ್ರತ್ಯಕ್ಷ ಶೃತಿ ಸಾರುತ್ತಿರಲು, ಮತ್ತೆ ಪರಿಭಾವಿಸ ಲೇನುಂಟು ಹೇಳಾ ? ಕರೆದರೆ ಬಂದಿತ್ತು ಕಳೆದಡೆ ಹೋಯಿತ್ತು ಎಂಬ ಕರ್ಮ ಕೌಟಿಲ್ಯದಲ್ಲಿ ಬಂದವನಲ್ಲ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಜಡರುಗಳಿಗೆಲ್ಲಿ ಯದೊ ?

೩೩೩

(೪) ಆಹ್ವಾನವಿಲ್ಲದ ಪ್ರಾಣಲಿಂಗವಾಗಿ, ವಿಸರ್ಜನವಿಲ್ಲದ ಲಿಂಗ ನೆಲೆ ಗೊಂಡಿಪ್ಪುದಾಗಿ, ಇದು ಕಾರಣ ಆಹ್ವಾನ ವಿಸರ್ಜನವಿಲ್ಲದ ಶರಣನ ಪರಿ ಬೇರೆ. ಅಂಗಸಂಗವೇ ಲಿಂಗ, ಲಿಂಗಸಂಗವೇ ಮನ. ಕೂಡಲ ಚನ್ನಸಂಗನ ಶರಣ ಸುಯಿ ಧಾನಿ.

೩೩೪

(೫) ಆಹ್ವಾನಿಸುವಲ್ಲಿ ಪ್ರಾಣಲಿಂಗವಿಲ್ಲ ವಿಸರ್ಜಿಸುವಲ್ಲಿ ಲಿಂಗವಂತ ನೆಂತೆಂಬೆ ? ಆಹ್ವಾನ ವಿಸರ್ಜನವಿಲ್ಲದ ಪರಿಬೇರೆ. ಲಿಂಗಭೋಗೋಪಭೋಗ ವಲ್ಲದೆ, ಅನರ್ಪಿತವ ಭೋಗಿಸುವನಲ್ಲ. ಆವಾಗಳೂ ಪ್ರಾಣಲಿಂಗದ ಸಂಗದಲ್ಲಿ ಪ್ಪನು. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ನಮ್ಮ ಶರಣಂಗೆ ನಮೋ ನಮೋ ಎಂಬೆನು.

೩೩೫

(೬) ಜ್ಞಾನವೇ ಪ್ರಸಾದಕಾಯ, ಜ್ಞೇಯವೆ ಚಿನ್ಮಯಲಿಂಗ, ಜ್ಞಾನ ಜ್ಞೇಯ ಸಂಪುಟದಿಂದ ಶರಣನೆನಿಸಿಕೊಂಡು ಆ ಜಂಗಮದ ಅಂತರಂಗದಲ್ಲಿ ನೀನೇ, ಬಹಿರಂಗದಲ್ಲಿ ನೀನೇ ಎಂದು ನೋಡುವರೆ ಶರಣನ ಕಣ್ಣ ಮೊದಲಲ್ಲಿ ನೀನೇ. ಶಿವಜ್ಞಾನಸಂಪನ್ನನಾದ ಶರಣಂಗೆ ಆಹ್ವಾನ ವಿಸರ್ಜನವೆಲ್ಲಿಯದೋ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ ?

ಇಂತು ಆಹ್ವಾನ ವಿಸರ್ಜನವೆಂಬುಭಯ ಕುಳವನು ನಿವೃತ್ತಿಯಂ ಮಾಡಿದ ವೀರಮಾಹೇಶ್ವರನು ಅಷ್ಟತನುವಿನಿಂದಾದ ಸಕಲ ಪ್ರಪಂಚ ಮಿಥ್ಯೆ ಎಂದರಿದು ಅಷ್ಟತನುಗಳ ಮೂಲವ ನಿರಸನವಂ ಮಾಡುತ್ತಿರಲು ಮುಂದೆ ಅಷ್ಟತನುಮೂರ್ತಿ ನಿರಸನಸ್ಥಲವಾದುದು.

೬. ಅಷ್ಟತನುಮೂರ್ತಿನಿರಸನಸ್ಥಲ

೩೩೬

(೧) ಅಷ್ಟತನುಮೂರ್ತಿಲಿಂಗವೆಂದು ಎಂಬರು ಕೇಳಿರಯ್ಯ, ಅನಾದಿಯ ಮಗನು ಆದಿ, ಆದಿಯ ಮಗನತೀತ, ಅತೀತನ ಮಗನು ಆಕಾಶನು, ಆಕಾಶನ ಮಗನು ವಾಯು, ವಾಯುವಿನ ಮಗನು ಅಗ್ನಿ, ಅಗ್ನಿಯ ಮಗನು ಅಪ್ಪು, ಅಪ್ಪುವಿನ ಮಗನು ಪೃಥ್ವಿ. ಪೃಥ್ವಿಯಿಂದ ಸಕಲ ಜೀವರೆಲ್ಲರು ಉದ್ಭವಿಸಿದರು ಗುಹೇಶ್ವರಾ.

ಟೀಕು : ಸುಚೈತನ್ಯಲಿಂಗವೆಂಬುದೀಗ, ಅನಾದಿ ಎಂಬ ಶಬ್ದಕ್ಕರ್ಥ. ಆ ಸುಚೈತನ್ಯಲಿಂಗದ ಚಿತ್ಪ್ರಭಾ ಬೆಳಗೇ ಮೂರ್ತಿಯಾಯಿತ್ತೆಂಬುದೀಗ, ಅನಾದಿಯ ಮಗ ಆದಿ ಎಂಬ ಶಬ್ದಕ್ಕರ್ಥ. ಅಂತು ಚಿತ್‌ಪ್ರಭಾಂಗಸ್ವರೂಪವಾದ ಲಿಂಗವು ಪಂಚಸಾದಾಖ್ಯಮುಖವನೈದಿ ಪಂಚಕಲಾಂಶ ಶಕ್ತಿಯುತವಾಗಿ ಅತಿ ಘನತರವನುಳ್ಳ ಸದಾಶಿವನಾದನೆಂಬುದೀಗ, ಆದಿಯಮಗನತೀತನೆಂಬ ಶಬ್ದಕ್ಕರ್ಥ. ಅಂತಪ್ಪ ಸದಾಶಿವನ ಪಂಚಮುಖಂಗಳಿಂದ ಪಂಚತತ್ವಂಗಳಾದವು. ಆ ಪಂಚತತ್ವಂಗಳಿಂದ ಇಪ್ಪತ್ತೈದು ತತ್ವಂಗಳಾದವು. ಆ ಇಪ್ಪತ್ತೈದನೆಯದು ಜೀವನಾದ ಕಾರಣ ಪಂಚ ತತ್ವಂಗಳಾದ ಸಕಲ ಜೀವಂಗಳು ಹುಟ್ಟಿದವೆಂಬುದು ಏಕಾರ್ಥ. ಅಂತಾದ ಶಿವ ಕಲಾಂಶಕವಾದ ಪಂಚಬ್ರಹ್ಮಮಯವೀ ಜಗತ್ತೆಂಬುದೀಗ ವಚನದ ತಾತ್ಪರ್ಯಾರ್ಥ.

೩೩೭

(೨) ಅಷ್ಟತನುಮೂರ್ತಿ ಲಿಂಗವೆಂಬ ಕಷ್ಟದ ಮಾತ ಕೇಳಲಾಗದು. ಪೃಥ್ವಿಯಂತೆ ಕಠಿಣವುಳ್ಳಾತನೇ ? ಅಪ್ಪುವಿನಂತೆ ಭರಿತವುಳ್ಳಾತನೆ ? ತೇಜದಂತೆ ತೃಣ ಕಾಷ್ಠವಿಲ್ಲದಿರ್ದಡೆ ನಂದುವಾತನೇ ? ವಾಯುವಿನಂತೆ ಚಲನೆಯುಳ್ಳಾತನೇ ? ಆಕಾಶದಂತೆ ಬಚ್ಚಬರಿಯ ಬಯಲಾದಾತನೇ ? ಸೋಮಸೂರ್ಯರಂತೆ ದಿವಾ

ರಾತ್ರೆಯ ನಡೆಸುವಾತನೇ ? ಆತ್ಮನಂತೆ ಜನನ ಮರಣವುಳ್ಳಾತನೇ? ಇದುಕಾರಣ ಕೂಡಲ ಚನ್ನಸಂಗಾ ನೀನು ನಿನ್ನಂತೆ, ಇವರೆಲ್ಲರೂ ನೀನಿರಿಸಿದಂತೆ.

೩೩೮

(೩) ಪೃಥ್ವಿ ಲಿಂಗವೆಂದು ಗತವಾದರು ಹಲಬರು. ಅಪ್ಪು ಲಿಂಗವೆಂದು ತಪ್ಪಿದರು ಶಿವಪಥಕ್ಕೆ ಹಲಬರು. ತೇಜ ಲಿಂಗವೆಂದು ವಾದಿಗಳಾದರು ಹಲಬರು. ವಾಯು ಲಿಂಗವೆಂದು ಪೂಜಿಸಿ ವಾಯುವಾದರು ಹಲಬರು. ಆಕಾಶ ಲಿಂಗವೆಂದು ಶೂನ್ಯವಾದಿಗಳಾದರು ಹಲಬರು. ಇಂತೀ ಹುಸಿ ಶಬ್ದವನೆ ತೊಡೆದು ನಿಜಜಂಗಮ ನಿಜಲಿಂಗ ನಿತ್ಯಪ್ರಸಾದದ ನಿಜವ ತೋರಿದಾತ ಬಸವಣ್ಣ ಕಾಣಾ ಕಲಿದೇವಯ್ಯ.

೩೩೯

(೪) ಪಂಚಾಶತ್‌ಕೋಟಿ ವಿಸ್ತೀರ್ಣ ಭೂಮಂಡಲ ದಶದಿಕ್ಕುಗಳೆಂಬವ ರೊಳಗಿಲ್ಲ. ಗಗನಮಂಡಲದೊಳಗೆ ಬೆಳಗುವ ರವಿಶಶಿಗಳುದಯದ ಬಳಿವಿಡಿದು ಸುಳಿವವರೊಳಗಲ್ಲ. ಅಂತಿಂತಾಗದ ಮುನ್ನ ಏನೂ ಇಲ್ಲ. ಬೆಸಗೊಂಬಡೆ ಹೇಳಿಹೆ. ನಿನ್ನ ವಶಕ್ಕೆ ಬಾರದು ಕೇಳಾ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವಿಲ್ಲ. ಬರಿಯ ಮಾತೇನು ?

೩೪೦

(೫) ಅಷ್ಟತನುಮೂರ್ತಿ ಶಿವನೆಂಬ ಕಷ್ಟಜೀವಿಗಳನೇನೆಂಬೆನಯ್ಯ ! ಯುಗ ಜುಗಂಗಳು ಪ್ರಳಯವಹಲ್ಲಿ ಧರೆ ಜಲದಲ್ಲಿ ಅಡಗಿತ್ತು, ಜಲ ಅಗ್ನಿಯಲ್ಲಿ ಅಡಗಿತ್ತು, ಅಗ್ನಿ ವಾಯುವಿನಲ್ಲಿ ಅಡಗಿತ್ತು, ವಾಯು ಆಕಾಶದಲ್ಲಿ ಅಡಗಿತ್ತು, ಆಕಾಶ ಅತೀತನಲ್ಲಿ ಅಡಗಿತ್ತು ಅತೀತ ಆದಿಯೊಳಗಡಗಿತ್ತು, ಆದಿ ಅನಾದಿಯೊಳಗಡಗಿತ್ತು, ಅನಾದಿ ನಿಜದೊಳಗಡಗಿತ್ತು, ಇಂತೀ ಅಷ್ಟತನು ಒಂದರೊಳಗೊಂದೊಂದು ಹುಟ್ಟುವಲ್ಲಿ ಎಂದಳಿದನೆಂದು ಹುಟ್ಟಿದನೆಂದು ಬಲ್ಲವರುಂಟೇ ? ಹುಟ್ಟಿದನಳಿದನೆಂಬ ಶಬ್ದವ ನುಡಿಯಲಾಗದು. ಇದು ಕಾರಣ ನಮ್ಮ ಮಹಾಘನ ಸೋಮೇಶ್ವರನು ಮಾಡಿದ ಡಾದವು, ಬೇಡೆಂದಡೆ ಮಾದವು.

೩೪೧

(೬) ಹೊರಗೆಂಟು ತನು, ಒಳಗೆ ನಿರಂಜನಜ್ಯೋತಿ.ತೆರಹಿಲ್ಲದಿಪ್ಪುದನೆಲ್ಲರೂ ಬಲ್ಲವರಿಲ್ಲ ಕೇಳಿರೋ. ಶಿವನಲ್ಲದೆ ಬೇರೆ ದೈವವಿಲ್ಲ. ಹುಲಿಗೆರೆಯ ವರದ ಸೋಮನಾಥನು ಏಕೋ ರುದ್ರನೆಂದುದು ಶ್ರುತಿ.

ಇಂತು ಅಷ್ಟತನುಮೂರ್ತಿಗಳ ನಿರಸನವಂ ಮಾಡಿದ ವೀರಮಾಹೇಶ್ವರನು ಶರಣಭರಿತ ಶಿವನೆಂದರಿದು ಪ್ರತಿಷ್ಠಿಸಿ ಜಗಭರಿತ ಶಿವನೆಂಬ ಸರ್ವಗತ ಶಬ್ದ ನಿರಸವನಂ ಮಾಡುತ್ತಿರಲು ಮುಂದೆ ಸರ್ವಗತನಿರಸ್ಥಲವಾದುದು.

೭. ಸರ್ವಗತನಿರಸನಸ್ಥಲ

೩೪೨

(೧) ಸರ್ವವೂ ಶಿವನಿಂದ ಉದ್ಭವಿಸಿದವೆಂದಡೆ, ಆ ಉದ್ಭವಿಸಿದವೆಲ್ಲ ಶಿವನೇ? ಸಕಲ ಬೀಜವನೊಕ್ಕಲಿಗ ಬಿತ್ತಿದನೆಂದಡೆ, ಆ ಬೆಳೆ ತಾನೊಕ್ಕಲಿಗನೇ? ಮಡಕೆಯ ಕುಂ[ಬಾ]ರ ಮಾಡಿದನೆಂದಡೆ ಆ ಮಡಕೆ ತಾ ಕುಂ[ಬಾ]ರನೇ ? ಕಬ್ಬುನವ ಕ[ಮ್ಮಾ]ರ ಮಾಡಿದನೆಂದಡೆ ಆ ಕಬ್ಬುನ ತಾ ಕ[ಮ್ಮಾ]ರನೇ ? ಈ ಪರಿಯಲ್ಲಿ ಸಮಸ್ತ ಜಗತ್ತು ಸಕಲ ಸಚರಾಚರವನು ಶಿವನು ಮಾಡಿದನೆಂದಡೆ ಆ ಸಚರಾಚರವೆಲ್ಲವು ಶಿವನೇ? ಹಾಗಾದಡೆ ಅಷ್ಟಾದಶವರ್ಣಂಗಳೇಕಾದವು? ಎಂಬತ್ತು ನಾಲ್ಕು ಲಕ್ಷ ಜೀವ ರಾಶಿಗಳೇಕಾದವು? ಸುಖದುಃಖ ಸ್ವರ್ಗ ನರಕಂಗಳೇ ಕಾದವು ? ಆಚಾರ ಅನಾಚಾರಂಗಳೇಕಾದವು ? ಪುಣ್ಯ ಪಾಪ ಭವಿ ಭಕ್ತರೆಂದೇ ಕಾದವು ? ಇದು ಕಾರಣ ಸದ್ಭಕ್ತಿ ಸದಾಚಾರದಲ್ಲಿಪ್ಪನು. ಅಂತಲ್ಲದೆ ಸರ್ವವೂ ಶಿವನೆಂದಡೆ ಅಘೋರ ನಾಯಕ ನರಕ ಕೂಡಲ ಚನ್ನಸಂಗಯ್ಯ.

೩೪೩

(೨) ಸರ್ವಗತ ಶಿವನೆಂಬುದೀ ಲೋಕವೆಲ್ಲ. ಶಿವ ಶಿವಾ ! ನಿರ್ಬುದ್ಧಿ ಜನಂಗಳೆಲ್ಲರನೇನೆಂಬೆ? ಸರ್ವವೂ ಶಿವನಾದಡೆ, ಹಿಂದಣ ಯುಗಪ್ರಳಯಂ ಗಳೇಕಾದವು? ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳೇಕಾದವು? ಸೂತ್ರಧಾರಿ ನರರೊಳಗಾಗಿ ಯಂತ್ರವನಾಡಿಸುವಲ್ಲಿ ಹೊರಗಿದ್ದಾಡಿಸುವನಲ್ಲದೆ ತಾನೊಳಗಿದ್ದಾಡಿ ಸುವನೇ? ಹಾಗೆ ಶಿವನು ತನ್ನಧೀನವಾಗಿಪ್ಪ ತ್ರಿಜಗದ ಸಚರಾಚರಂಗಳೆಂಬ ಯಂತ್ರವನು ಯಂತ್ರವಾಹಕನಾಗಿ, ಆಡಿಸುವನಲ್ಲದೆ ತಾನಾಡುವನೇ? ಸರ್ವ ಯಂತ್ರವೂ ತಾನಾದಡೆ ಸಕಲ ತೀರ್ಥ ಕ್ಷೇತ್ರಯಾತ್ರೆಗೆ ಹೋಗಲೇಕೆ ? ಇದು ಕಾರಣ ಸರ್ವವೂ ಶಿವನೆನಲಾಗದು. ಮತ್ತೆಲ್ಲಿಹನೆಂದಡೆ, ಸದಾಚಾರ ಸದ್ಭಕ್ತಿ ಸನ್ನಿಹಿತ ಲಿಂಗಜಂಗಮದೊಳಗಿಪ್ಪನು. ಮತ್ತೆಲ್ಲಿಯೂ ಇಲ್ಲ ಕೂಡಲ ಚನ್ನಸಂಗಯ್ಯ.

೩೪೪

(೩) 'ಯತ್ರ ಜಗಸ್ತತ್ರ ಶಿವ'ನೆಂಬ ಬಾಲಭಾಷೆಯ ಕೇಳಲಾಗದು. ಶಿವ ಶಿವಾ ಯತ್ರ ಜೀವಸ್ತತ್ರ ಶಿವನಾದಡೆ, ಜೀವಂಗೆ ಜನನ ಮರಣ, ರುಜೆ, ಸಂಸಾರ, ಬಂಧನವೇಕೋ ? ಯತ್ರ ಜೀವಸ್ತತ್ರ ಶಿವನಾದಡೆ, ಪುಣ್ಯ, ಪಾಪ, ಪ್ರಳಯ, ಕಾಲ, ಕಲ್ಪಿತನೇ ಶಿವನು ? ಇದು ಕಾರಣ ಯತ್ರ ಜೀವಸ್ತತ್ರ ಶಿವನಲ್ಲ. ಉತ್ಪತ್ತಿಸ್ಥಿತಿ ಲಯ ಪ್ರಳಯರಹಿತನು. ಸದ್ಭಕ್ತರಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಕೂಡಲ ಚನ್ನಸಂಗಯ್ಯ.

೩೪೫

(೪) ಪರುಷದ ಪುತ್ತಳಿಗೆ ಕಬ್ಬುನದ ಆಭರಣಂಗಳುಂಟೇ? ಲೋಕದೊಳಗೆ

೧-೧ ಬ (ಮೂ) ೨-೨ ಮ್ಮ (ಮೂ)

ಲಿಂಗ, ಲಿಂಗದೊಳಗೆ ಲೋಕಗಳಾದೊಡೆ, ಹಿಂದಣ ಪ್ರಳಯಂಗಳೇಕಾದವು ? ಇನ್ನು ಮುಂದಣ ಪ್ರಳಯಂಗಳಿಗಿನ್ನೆಂತೋ ? ಲೋಕವು ಲೋಕದಂತೆ, ಲಿಂಗವು ಲಿಂಗದಂತೆ. ಈ ಉಭಯದ ಭೇದವ ಗುಹೇಶ್ವರ ನಿಮ್ಮ ಶರಣನೇ ಬಲ್ಲ.

೩೪೬

(೫) ಮಾಂಸಪಿಂಡವೆನಲೊಲ್ಲದೆ ಮಂತ್ರಪಿಂಡವೆಂದನು ಬಸವಣ್ಣನು. ಪಂಚಭೂತ ಕಾಯವೆನಲೊಲ್ಲದೆ, ಪ್ರಸಾದಕಾಯವೆಂದನು ಬಸವಣ್ಣನು. ವಾಯು ಪ್ರಾಣಿ ಎನಲೊಲ್ಲದೆ ಲಿಂಗಪ್ರಾಣಿ ಎಂದನು ಬಸವಣ್ಣನು. ಜಗಭರಿತ ಶಿವನೆಂದೆನಲೊಲ್ಲದೆ ಶರಣಭರಿತ ಶಿವನೆಂದ ಕೂಡಲ ಚನ್ನಸಂಗಯ್ಯ.

ಇಂತು ಸರ್ವಗತ ನಿರಸನವಂ ಮಾಡಿದ ವೀರಮಾಹೇಶ್ವರನು ಸರ್ವ ಜಗದಲ್ಲಿ ಶಿವನಿಲ್ಲವೆಂದೊಡೆ ಆ ಜಗವು ಶಿವನಿಂದ ಬೇರೆ ತೋರಲರಿಯದೆಂದರಿದು ಆ ಜಗದಲ್ಲಿ ಶಿವನು ಹೊದ್ದಿಯೂ ಹೊದ್ದದೆ ಬೆರಸಿ ಬೆರಸದೆ ಇಹನೆಂಬ ಕೃತ ನಿಶ್ಚಯ ವನುಂಟುಮಾಡಿತೊರಲು ಮುಂದೆ ಶಿವಜಗನ್ಮಯಸ್ಥಲವಾದುದು.

೮. ಶಿವಜಗನ್ಮಯಸ್ಥಲ

೩೪೭

(೧) ಶಿವ ಜಗವಾಗಬಲ್ಲ, ಶಿವ ಜಗವಾಗದಿರಲೂ ಬಲ್ಲ, ಶಿವ ರೂಪಾಗ ಬಲ್ಲ ; ಶಿವರೂಪಾಗದಿರಲೂ ಬಲ್ಲ. ಶಿವನಜಾಂಡಕೋಟಿಗಳ ಮಾಡಬಲ್ಲ ; ಮಾಡದಿರಲೂ ಬಲ್ಲ. ಶಿವ ಕೆಡಿಸಬಲ್ಲ ; ಕೆಡಿಸದಿರಲೂ ಬಲ್ಲ. ಶಿವ ಜಂಗಮವಾಗಿ ಪೂಜಿಸ ಬಲ್ಲ ; ಶಿವ ಲಿಂಗವಾಗಿ ತಾನೇ ಪೂಜಿಸಿಕೊಳಲೂ ಬಲ್ಲ. ಶಿವ ಹೊರಗಾಗಿ ಅನ್ಯವು ಉಂಟೇ ? ಇಲ್ಲ. ಉರಿಲಿಂಗಪೆದ್ದಿಪ್ರಿಯ ಗುರು ವಿಶ್ವೇಶ್ವರನು ವಿಶ್ವಕ್ಕೆಲ್ಲ ಮಾತಾಪಿತನು.

೩೪೮

(೨) ಶಿವ ತನ್ನ ವಿನೋದಕ್ಕೆ ರಚಿಸಿದನನಂತವಿಶ್ವವನು. ರಚಿಸಿ ವಿನು ವಿಶ್ವಕ್ಕೆ ಹೊರಗಾಗಿದ್ದನೇ? ಇಲ್ಲ. ವಿಶ್ವಮಯ ತಾನಾಗಿದ್ದನು. ವಿಶ್ವವೆಲ್ಲವೂ ತಾನಾದ ನೆಂದಡೆ, ವಿಶ್ವದ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾದನೇ? ಇಲ್ಲ. ಅದೇನು ಕಾರಣ ವೆಂದಡೆ, ಅಜಾತನಾಗಿ ಉತ್ಪತ್ತಿ ಇಲ್ಲ. ಸ್ಥಿತಿ ಕರ್ಮರಹಿತನಾಗಿ ಸ್ಥಿತಿಗೆ ಒಳಗಲ್ಲ. ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳ ಹೊದ್ದಲರಿಯ. ತಾನಿಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವೂ ತೋರಲರಿಯದಾಗಿ, ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ. ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲ.

೩೪೯

(೩) ಘನಗಂಭೀರ ಮಹಾವಾ[ರಿ]ಧಿಯಲ್ಲಿ ಫೇನ ತರಂಗ ಬುದ್ಬುದ ಸೀಕರಂ ಗಳಾದವಲ್ಲದೆ, ಬೇರಾಗಬಲ್ಲವೇ? ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡ ಕೋಟಿಗಳಾದವಲ್ಲದೆ, ಬೇರಾಗಬಲ್ಲವೆ? ಇದು ಬೇರೆಂಬ ಅ[ರಿ]ಮರುಳಗಳನೇ ನೆಂಬೆ? ವಿಶ್ವವನರಿದು ನೋಡಲು ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಬೇರಿಲ್ಲ.

೩೫೦

(೪) ಜಲದೊಳಗಣ ಸೂರ್ಯನಂತೆ ಇಪ್ಪನಯ್ಯ ಶಿವನು. ಲೋಕಾದಿ ಲೋಕಂಗಳೊಳಗಿರ್ದಡೇನು? ಜಗದ ಪುಣ್ಯ ಪಾಪ ಸ್ವರ್ಗ ನರಕ ಬಂಧ ಮೋಕ್ಷಕ್ಕೊಳಗಾದಾತನೇ ? ಅಲ್ಲ. ಅದೆಂತೆಂದೊಡೆ, ಜಲದೊಳಗಣ ಪ್ರಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ, ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ ಶಿವಂಗಿಲ್ಲವಾಗಿ. ಅನಂತಕೋಟಿ ಬ್ರಹ್ಮಾಂಡಂಗಳು ತನ್ನ ಒಡಲೊಳಗೆ ಅಡಗಿದವೆಂದಡೆ, ತಾ ಹೊರಗಾಗಿ ಅಡಗಲೆಡೆ ವಿನುಂಟು ? ಇದು ಕಾರಣ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ, ವಿಶ್ವಾಧಿಪತಿಯಾಗಲು ಬಲ್ಲ.

ಇಂತು ಶಿವನು ಜಗವಾಗಬಲ್ಲ, ಜಗವಾಗದಿರಬಲ್ಲನೆಂದರಿತು, ಆ ಶಿವನ ತನ್ನೊಳಗಾಲಿಂಗಿಸಿ ಧರಿಸಿಕೊಂಡಿಪ್ಪ ವೀರಮಾಹೇಶ್ವರನಲ್ಲಿ ಆ ಶಿವನು ಭಕ್ತದೇಹಿಕ ದೇವನಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಭಕ್ತದೇಹಿಕಲಿಂಗಸ್ಥಲ ವಾದುದು.

೯. ಭಕ್ತದೇಹಿಕ ಲಿಂಗಸ್ಥಲ

೩೫೧

(೧) ಪ್ರಸಾದಕಾಯವಾದ ಬಳಿಕ, ಸರ್ವಾಂಗ ಉತ್ತಮಾಂಗ ಪ್ರಾಣಲಿಂಗ ವಾದ ಬಳಿಕ ಸದಾ ಸನ್ನಿಹಿತಲಿಂಗ ಶರಣನಲ್ಲಿ ಭಾವಭೇದವಿಲ್ಲ, ನಿರಂತರ ಲಿಂಗಸಂಗಿ ಏಕಾಯ ಭಕ್ತಕಾಯವೆಂದುದು ಕೂಡಲ ಚನ್ನಸಂಗಯ್ಯನ ವಚನ.

೩೫೨

(೨) ಲಿಂಗವೇ ಪ್ರಾಣವಾಯಿತ್ತಾಗಿ ಆಚಾರವಿಚಾರವಿಲ್ಲವಯ್ಯಾ. ಪ್ರಸಾದ ಕಾಯವಾಯಿತ್ತಾಗಿ ಸತ್ವ ರಜ ತಮ ಕ್ರೋಧವಿಲ್ಲವಯ್ಯಾ. ಜಂಗಮಮುಖ ಲಿಂಗ ವಾದ ಕಾರಣ ಲಿಂಗದಲ್ಲಿ ಅನುಭವಿಸಿ ನೋಡುತ್ತಿರ್ದೆನಯ್ಯಾ ಭಕ್ತಕಾಯ ಮಮ ಕಾಯವಾಗಿ ಕೂಡಲ ಚನ್ನಸಂಗ[ಯ್ಯನಲ್ಲಿ][೩] ಸುಖಿಯಾಗಿರ್ದೆನಯ್ಯಾ.

೧–೧ ರು (ಮೂ) ೨–೨ ರಿ (ಮೂ) ೩–೩ ನಬಸವನಲ್ಲಿ (ಮೂ)

೩೫೩

(೩) ಅಣುರೇಣು ಮಹಾತ್ಮನೆಂಬರು. ಅಣುರೇಣು ತೃಣಕಾಷ್ಠದೊಳಗೆ ಇಪ್ಪನೆಂಬರು. ಅಮ್ಮೆನಯ್ಯ, ನಾನೆನಲಮ್ಮೆನಯ್ಯ ! ಶರಣಸನ್ನಿಹಿತನು, ಭಕ್ತಕಾಯ ಮಮಕಾಯನು, ದಾಸೋಹ ಪರಿಪೂರ್ಣನು, ಸದುಹೃದಯದಲ್ಲಿ ಸಿಂಹಾಸನವಾಗಿ ಅಗಲದಿಪ್ಪನು ಕಲಿದೇವಯ್ಯನು.

೩೫೪

(೪) ವೇದದಲುಳ್ಕೊಡೆ, ಪ್ರಾಣಿವಧೆಯಪ್ಪುದೇ ? ಶಾಸ್ತ್ರದಲುಳ್ಕೊಡೆ ಸಮವಾಗದಿಪ್ಪುವೇ ? ಪರ್ವತದೊಳುಳ್ಕೊಡೆ ಹೋದವರು ಮರಳಿ ಬಪ್ಪರೇ ? ನಿರ್ಬುದ್ಧಿಮಾನವರನೇನೆಂಬೆ ? ಮನ ವಚನ ಕಾಯ ಶುದ್ಧವಾಗಿಪ್ಪಾತನ ಹೃದಯ ದಲ್ಲಿ ನಿಮ್ಮ ಕಂಡೆನೆಂದಾತ ಅಂಬಿಗರ ಚೌಡಯ್ಯನು.

೩೫೫

(೫) ಹುತ್ತ ಹೋರಿನೊಳಗೆ ಕಯ್ಯನಿಕ್ಕುವನೆನ್ನ ಶಿಶುವೆಂದು ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ ಬಪ್ಪೆ. ಅಯ್ಯ ಎಂದಡೆ 'ಓ' ಎಂಬೆ. ಅನ್ಯವಿಷಯಕ್ಕೆನ್ನ ಹತ್ತಲೀಯದೆ ಎತ್ತೆತ್ತ ನೋಡಿದಡತ್ತತ್ತ ಸೊಡ್ಡಳಾ.

೩೫೬

(೬) ಪರುಷದ ಪರ್ವತದೊಳಗೆ ಕಬ್ಬುನಂಗಳುಂಟೇ ಅಯ್ಯ ? ಅಷ್ಟವಿಧಾರ್ಚನೆ ಷೋಡಶೋಪಚಾರಸನ್ನಿಹಿತಂಗೆ ಅವಗುಣಗಳುಂಟೇ ಅಯ್ಯ ? ಭಕ್ತಕಾಯ ಮಮಕಾಯ ಕೂಡಲ ಚನ್ನಸಂಗಾ ನಿಮ್ಮ ಶರಣ.

೩೫೭

(೭) ನೆಲನನೊಳಕೊಂಡ ಸಲಿಲ, ಸಲಿಲವನೊಳಕೊಂಡ ಅನಲ, ಅನಲವನೊಳಕೊಂಡ ಅನಿಲ, ಅನಿಲವನೊಳಕೊಂಡ ಆಕಾಶ, ಆಕಾಶವನೊಳಕೊಂಡ ಮನ, ಮನವನೊಳಕೊಂಡ ಬುದ್ಧಿ, ಬುದ್ಧಿಯನೊಳಕೊಂಡ ಪ್ರಕೃತಿ, ಪ್ರಕೃತಿಯ ನೊಳಕೊಂಡ ಪುರುಷ, ಪ್ರಕೃತಿಪುರುಷ ರೂಪು ಜಗವೆಲ್ಲ ಇವೆಲ್ಲವನೊಳಕೊಂಡ ಜ್ಞಾನ, ಆ ಜ್ಞಾನಕಾಯವೇ ಶಿವಭಕ್ತ ಆ ಭಕ್ತದೇಹಿಕದೇವ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ.

೩೫೮

(೮) ಭಾವ ಮೂರ್ತಿಯಾಗಬೇಕು ಆ ಲಿಂಗಕ್ಕೆ. ಅರಿವು ಮೂರ್ತಿಯಾಗಬೇಕು ದಾಸೋಹಕ್ಕೆ. ಸತ್ಕ್ರಿಯೆ ಮೂರ್ತಿಯಾಗಬೇಕು ಜಂಗಮಲಿಂಗಕ್ಕೆ. ಭಕ್ತಿ ಮೂರ್ತಿಯಾಗಬೇಕು ಪ್ರಸಾದಕ್ಕೆ. ನಿರ್ಭಾವಮೂರ್ತಿಯಾಗಬೇಕು ಅನುಭಾವಕ್ಕೆ. ಜ್ಞಾನ ಮೂರ್ತಿಯಾಗಬೇಕು ಸ್ವಾನುಭವಕ್ಕೆ. ಇಂತೀ ಪ್ರಜ್ವಲಿತವಾದ ತನುವಿನ ಸಂಗದಲ್ಲಿಪ್ಪನು ಕಲಿದೇವನು.

ಇಂತು ಮಹೇಶಾದಿ ಭಕ್ತದೇಹಿಕಲಿಂಗಾಂತ್ಯಮಾದ ವೀರಮಾಹೇಶ್ವರಸ್ಥಲದಲ್ಲಿ ಆಚರಿಸಿ ಭಕ್ತಕಾಯವೇ ಲಿಂಗಕಾಯವಾಗಿ, ಲಿಂಗಕಾಯವೇ ಭಕ್ತಕಾಯವಾಗಿ ವಿರಳವಿಲ್ಲದೆ ಬೆರಸಿ ಮಹಂತನು ಮುಂದೆ ಸಾವಧಾನಮುಖದಿಂದಲಾಚರಿಸಿ ಬೆರಸುವ ಭೇದವೆಂತಿರ್ದುದೆಂದೊಡೆ, ಮುಂದೆ ಪ್ರಸಾದಿಸ್ಥಲವಾದುದು.

ಪ್ರಸಾದಿಸ್ಥಲ

ವಿವರಣೆ : ಪ್ರಸಾದವು ಪರಮಾತ್ಮನ ಸಮೀಪಕ್ಕೆ ಒಯ್ಯುವದು. ತನ್ನದೆಂಬುದನ್ನೆಲ್ಲ ಪರಮಾತ್ಮನಿಗೆ ಅರ್ಪಿಸಬೇಕು. ಇದರಿಂದ ಪರಮಾತ್ಮನ ಸಾನ್ನಿಧ್ಯವು ದೊರಕುವದು. ಪ್ರಸಾದಿಯು ಸ್ವಾರ್ಥವನ್ನು ಪೂರ್ಣವಾಗಿ ತ್ಯಜಿಸಬೇಕು. ಹೀಗೆ ಆಚರಿಸುವವನಿಗೆ ಪ್ರಸಾದವು ದೊರೆಯುವದು. ಇಂಥವನ ಉಪಭೋಗವೆಲ್ಲವು ಪ್ರಸಾದರೂಪಾಗಿರುವದು. ಅವನು ಸುಖಪಡುವದೆಲ್ಲ ಪರಮಾತ್ಮನಕೃಪೆ ಎಂದು ತಿಳಿಯಬೇಕು. ಇವನಿಗೆ ದುಃಖವಿಲ್ಲ. ಅವನು ಯಾವಾಗಲೂ ಸುಖಿಯು. ಎಲ್ಲ ಪ್ರಾಣಿಗಳಲ್ಲಿ ದಯಾಂತಃಕರಣವುಳ್ಳವನಾಗಿರುವನು. ತನ್ನದೆಂಬುದನ್ನು ಮರೆತಿರುವನು. ಅವನು ಲಿಂಗಭೋಗೋಪಭೋಗಿಯು. ಹೀಗೆ ನಡೆಯುವದೇ ಪ್ರಸಾದಿಸ್ಥಲವು.

ಪ್ರಸಾದಿಯ ಆಚರಣೆಯು ಹೇಗಿಬೇಕೆಂಬುದು ಇಲ್ಲಿ ಹೇಳಲ್ಪಟ್ಟಿದೆ. ಇದರಲ್ಲಿ ಆರು ಸ್ಥಲಗಳಿವೆ. ಅವುಗಳಲ್ಲಿ ಪುನಃ ಎರಡು ವಿಭಾಗಗಳನ್ನು ನಾವು ಮಾಡಬಹುದು. ೧ನೆಯ ವಿಭಾಗದಲ್ಲಿ ಗುರುಮಹಾತ್ಮೆ, ಲಿಂಗಮಹಾತ್ಮೆ, ಜಂಗಮಮಹಾತ್ಮೆ ಇವು ಬರುತ್ತವೆ. ೨ನೆಯ ವಿಭಾಗದಲ್ಲಿ ಭಕ್ತಮಹಾತ್ಮೆ, ಶರಣಮಹಾತ್ಮೆ ಮತ್ತು ಪ್ರಸಾದ ಮಹಾತ್ಮೆ ಇವುಗಳು ಬರುತ್ತವೆ.

೧ ನೆಯ ವಿಭಾಗ : ಇದರಲ್ಲಿ ಉಲ್ಲೇಖಿಸಿದ ಗುರುಲಿಂಗಜಂಗಮದ ವಿಚಾರಗಳು ತಾತ್ಪರ್ಯಾರ್ಥವುಳ್ಳವುಗಳಾಗಿವೆ. ಹೀಗೆ ಅರ್ಥವಿರುವದು ಪ್ರತಿಯೊಂದು ಸ್ಥಲದ ಅಂತ್ಯದಲ್ಲಿರುವ ಸೂಚನಾತ್ಮಕ ಉಕ್ತಿಗಳಿಂದ ಕಂಡುಬರುತ್ತದೆ.

ಗುರುಮಹಾತ್ಮೆಯ ಸ್ಥಲ : ಗುರುವು ಅಂಗವನ್ನೊಳಕೊಂಡಿರುತ್ತಾನೆ. ಸತ್ಕೃತ್ಯಗಳನ್ನು ಮಾಡುತ್ತ ಸದಾಚಾರಿಯಾಗಿರುವುದೇ ಗುರುವನ್ನೊಳಕೊಳ್ಳುವದಾಗಿದೆ. ಕ್ರಿಯೆಗಳನ್ನು ಶುದ್ಧಗೊಳಿಸುವ ಶಕ್ತಿಯು ಈ ಗುರುತತ್ವದಲ್ಲಿದೆ. ಹೀಗೆ ಗುರುವಿಗರ್ಪಿಸಿ ಆಚರಿಸಿದಲ್ಲಿ ಗುರುಪ್ರಸಾದವು ಉಂಟಾಗುವದು. ಕ್ರಿಯೆಗಳ ಉತ್ಕೃಷ್ಟತೆಯೇ ಗುರುತತ್ವವನ್ನು ಒಳಕೊಳ್ಳುವದಾಗಿರುತ್ತದೆ.

ಲಿಂಗಮಹಾತ್ಮೆಯಸ್ಥಲ : ಕ್ರಿಯೆಗಳ ಉತ್ಕೃಷ್ಟತೆಯಿಂದ ಲಿಂಗದ ಉತ್ಕೃಷ್ಟತೆಯುಂಟಾಗುತ್ತದೆ. ಕ್ರಿಯೆಗಳ ಶುದ್ಧತೆಯಿಂದ ಮನಸ್ಸಿನ ಶುದ್ಧತೆಯುಂಟಾಗುತ್ತದೆ. ಈ ಶುದ್ಧತೆಯೇ ಅವನಲ್ಲಿ ಲಿಂಗವು ಜಾಗ್ರತೆಯನ್ನು ಹೊಂದಿದ್ದರ ಕುರುಹು. ಆಗ ಶರೀರದ ಇಂದ್ರಿಯಗಳೆಲ್ಲ ಲಿಂಗೇಂದ್ರಿಯಗಳಾಗುವವು. ಈ ಲಿಂಗೇಂದ್ರಿಯಗಳ

ಮೂಲಕ ಪ್ರಸಾದಿಯು ತನ್ನ ಭೋಗಾದಿಗಳನ್ನು ಲಿಂಗಕ್ಕೆ ಅರ್ಪಿಸಿ ಲಿಂಗ ಪ್ರಸಾದವನ್ನು ಸ್ವೀಕರಿಸುವನು. ಲಿಂಗಮಹಾತ್ಮೆಯ ಸ್ಥಲವು ಇದಾಗಿರುತ್ತದೆ.

ಜಂಗಮಮಹಾತ್ಮೆಯಸ್ಥಲ : ಗುರುವಿನಿಂದ ಲಿಂಗ, ಲಿಂಗದಿಂದ ಜಂಗಮವು ಪ್ರಾಪ್ತವಾಗುವದು. ಜಂಗಮವು ಅರಿವುರೂಪಾಗಿರುತ್ತದೆ. ಸತ್‌ಕ್ರಿಯೆಗಳು ಮತ್ತು ಶುದ್ಧಮನಸ್ಸು ಅರಿವಿಗೆ ಕಾರಣವಾಗಿವೆ. ಜಂಗಮವು ಚೈತನ್ಯಾತ್ಮಕವು. ಅದರ ಶುದ್ಧತೆಯಿಂದಲೇ ಪ್ರಸಾದವು ಮನುಷ್ಯನಲ್ಲಿ ಸ್ಥಿರಪಡುವದು.

೨ ನೆಯ ವಿಭಾಗ : ಈ ವಿಭಾಗದಲ್ಲಿ ಗುರು ಲಿಂಗ ಜಂಗಮ ಪ್ರಸಾದಗಳ ಮೂಲಕ ಪ್ರಸಾದಿಯಲ್ಲಿ ಉಂಟಾಗುವ ಪರಿಣಾಮಗಳು ಹೇಳಲ್ಪಡುತ್ತವೆ.

ಭಕ್ತಮಹಾತ್ಮೆಯಸ್ಥಲ : ಹಿಂದೆ ಹೇಳಿದಂತೆ ಗುರು ಲಿಂಗ ಜಂಗಮದ ಪ್ರಸಾದವನ್ನು ಸ್ವೀಕರಿಸಿ ಸುಖಿಯಾಗಿ ಸದ್ವರ್ತನೆಯಲ್ಲಿರುವದೇ ಭಕ್ತಮಹಾತ್ಮೆಯ ಸ್ಥಲವಾಗಿದೆ.

ಶರಣಮಹಾತ್ಮೆಯಸ್ಥಲ : ಬಾಹ್ಯಾಭ್ಯಂತರದಲ್ಲಿ ಪರಿಣಾಮವು ಪ್ರವೇಶಗೊಂಡು ಪರಮಾನಂದದಲ್ಲಿರುವದೇ ಶರಣಮಹಾತ್ಮೆಯ ಸ್ಥಲವು.

ಪ್ರಸಾದಮಹಾತ್ಮೆಯಸ್ಥಲ : ಹಿಂದೆ ಹೇಳಿದಂತೆ ಪರಮಾನಂದದಲ್ಲಿದ್ದು ಕೊಂಡು ಯಾವಾಗಲೂ ಪರಿಣಾಮಪ್ರಸಾದವನ್ನು ಸ್ವೀಕರಿಸುತ್ತಿರುವದೇ ಪ್ರಸಾದ ಮಹಾತ್ಮೆಯ ಸ್ಥಲವು.

ಈ ಪ್ರಕಾರ ಭಕ್ತನು ಗುರುಲಿಂಗಜಂಗಮವನ್ನರಿತುಕೊಂಡು ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದಗಳನ್ನು ಅನುಭವಿಸುತ್ತ ಬಾಹ್ಯದಲ್ಲಿ ಭಕ್ತನಾಗಿ ಬಾಹ್ಯಾಭ್ಯಂತರದಲ್ಲಿ ಶರಣನಾಗಿ ಪ್ರಸಾದದಲ್ಲಿ ಪರಿಣಾಮಿಯಾಗಿರುವದೇ ಪ್ರಸಾದಿಸ್ಥಲವೆಂದು ಈ ಆರುಸ್ಥಲಗಳ ಮುಖ್ಯ ಭಾವವಿದೆ.

೧. ಪ್ರಸಾದಿಸ್ಥಲ

೩೫೯

(೧) ಕರ್ಣದ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ. ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ. ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ. ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವವ ಕೇಳಿದೆನಾಗಿ. ಕೂಡಲ ಸಂಗಮದೇವಯ್ಯ ಎನ್ನ ನಾನಾ ಸೂತಕ ಹೋಯಿತ್ತು ನೀವಲ್ಲದನ್ಯನಿಲ್ಲೆಂದರಿದೆನಾಗಿ.

೩೬೦

(೨) ಗುರು ಪ್ರಸಾದವ ಕೊಂಬರೆ ನಾಚುವುದು ಮನ. ಲಿಂಗ ಪ್ರಸಾದವ ಕೊಂಬರೆ ನಾಚುವುದು ಮನ. ಜಂಗಮ ಪ್ರಸಾದವ ಕೊಂಬರೆ ನಾಚುವುದು ಮನ.

ಸಮಯ ಪ್ರಸಾದವ ಕೊಂಬರೆ ನಾಚುವುದು ಮನ. ಸೂಳೆಯ ಭೋಜನ ಎಂಜಲ ತಿಂದರೆ ನಾಚದು ಮನ. ಮಹಂತ ಸಕಳೇಶ್ವರಯ್ಯ ಮೂಗ ಕೊಯ್ಯದೆ ಮಾಣನು.

೩೬೧

(೩) ಹಸಿಯ ಬಿಸಿಲನೆ ಕೊಯ್ದು ಪದಾರ್ಥವನೆ ಮಾಡಿ ಉಸಿರ ಎಸರಲ್ಲಿ ಬಾಗುತ್ತಿಪ್ಪರಯ್ಯ! ಇಕ್ಕಲಿಲ್ಲಾರಿಗೆಯೂ, ಎರೆಯಲಿಲ್ಲಾರಿಗೆಯೂ. ಭಿಕ್ಷಾವ್ರತಿಗಳು ಬಂದು ಬೇಡುತ್ತಿಪ್ಪರಯ್ಯ. ನಿಮ್ಮ ಒಕ್ಕುದ ಮಿಕ್ಕುದ ಉಡಿಯಲ್ಲಿ ಕಟ್ಟಿಕೊಂಡಿಪ್ಪರಯ್ಯ ಗುಹೇಶ್ವರ ನಿಮ್ಮ ಶರಣರು.

ಇಂತು ಗುರುಲಿಂಗಜಂಗಮದ ಪ್ರಸನ್ನಪ್ರಸಾದವ ಸ್ವೀಕರಿಸಿದ ನಿಯತ ಪ್ರಸಾದಿಯ ಅಂಗವನಾಲಿಂಗಿಸಿದ ಗುರುಮಹಾತ್ಮೆ ಎಂತಿರ್ದುದೆಂದಡೆ ಮುಂದೆ ಗುರು ಮಹಾತ್ಮೆಸ್ಥಲವಾದುದು.

೨. ಗುರುಮಹಾತ್ಮೆಯಸ್ಥಲ

೩೬೨

(೧) ಕಣ್ಗೆ ಸತ್ವ ರಜತಮವೆಂಬ ತಿಮಿರ ಕವಿದವರು ಗುರುವನೇ ಉಪಧಾವಿಸಿ ಕಣ್ಗೆ ಔಷಧಿಯ ಬೇಡುವರಯ್ಯ. ನೀನು ಶಿವಜ್ಞಾನವೆಂಬ ಅಂಜನವನಚ್ಚಿ ತೋರುವೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ.

೩೬೩

(೨) ಸಾಕಾರವಿಡಿದು ಗುರುಲಿಂಗವಾದ. ನಿರಾಕಾರವಿಡಿದು ಪ್ರಾಣಲಿಂಗವಾದ. ಉಭಯಸ್ಥಲ ಏಕವಾದಲ್ಲಿ ಭವವಿರಹಿತಭಕ್ತ ಜೀವನ್ಮುಕ್ತನಾದ. ಗುರುವಿನಿಂದ ಅತಿಶಯ ಘನವೇನೂ ಇಲ್ಲ. ಕೂಡಲಚನ್ನಸಂಗಯ್ಯ ಎನ್ನ ಪರಮಗುರು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೩೬೪

(೩) ಗುರು ತನ್ನ ವಿನೋದಕ್ಕೆ ಸ್ಥಾವರವಾದ. ಗುರು ತನ್ನ ವಿನೋದಕ್ಕೆ ಜಂಗಮವಾದ. ಗುರು ತನ್ನ ವಿನೋದಕ್ಕೆ ಪ್ರಸಾದವಾದ. ಗುರು ತನ್ನ ವಿನೋದಕ್ಕೆ ಗುರುವಾದ. ಕೂಡಲಚನ್ನಸಂಗಯ್ಯನಲ್ಲಿ ವಿಕಾರ್ಥವಾದ.

೩೬೫

(೪) ಸದ್ಗುರುವಿನಿಂದವೆ ಮಹತ್ತಪ್ಪ ಲಿಂಗೋತ್ಪತ್ತಿ, ಲಿಂಗದಿಂದವೆ ಮಹತ್ತಪ್ಪ ಜಂಗಮೋತ್ಪತ್ತಿ, ಜಂಗಮದಿಂದವೇ ಮಹತ್ತಪ್ಪ ಪ್ರಸಾದೋತ್ಪತ್ತಿ, ಪ್ರಸಾದದಿಂದವೇ ಮಹತ್ತಪ್ಪ ಭಕ್ತಿಯುತ್ಪತ್ತಿ, ಭಕ್ತಿ ಪ್ರಸಾದದಿಂದವೇ ಸಕಲೋತ್ಪತ್ತಿ, ಇದು ಕಾರಣ ಭಕ್ತಿಯುಳ್ಳವಂಗೆ ಪ್ರಸಾದಮುಂಟು. ಪ್ರಸಾದವುಳ್ಳವಂಗೆ ಜಂಗಮವುಂಟು. ಜಂಗಮವುಳ್ಳವಂಗೆ ಲಿಂಗ ಉಂಟು. ಲಿಂಗವುಳ್ಳವಂಗೆ ಗುರು ಉಂಟು. ಇದು ಕಾರಣ ಸದ್ಗುರುವೇ ಕಾರಣವಯ್ಯ [ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ]

ಇಂತು ಗುರುಮಹಾತ್ಮೆಯಂ ಸರ್ವಾಂಗದಲ್ಲೆಡೆಗೊಂಡ ಪ್ರಸಾದಿಯ ಮನದೊಳಗೆಡೆಗೊಂಡಿಪ್ಪ ಲಿಂಗಮಹಾತ್ಮ್ಯವೆಂತಿರ್ಪುದೆಂದೊಡೆ, ಮುಂದೆ ಲಿಂಗ ಮಹಾತ್ಮ್ಯ ಸ್ಥಲವಾದದು.

೩. ಲಿಂಗಮಹಾತ್ಮ್ಯಸ್ಥಲ

೩೬೬

(೧) ಶ್ರುತಿತತಿಯ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯ? ಘನಕ್ಕೆ ಘನ, ಮನಕ್ಕಗೋಚರ, ''ಅಣೋರಣೀಯಾನ್ ಮಹತೋ ಮಹೀಯಾನ್'' ಮಹಾದಾನಿ ಕೂಡಸಂಗಮದೇವಾ.

೩೬೭

(೨) ವಿಭೂತಿ ಆವ ಭೂಷಣದೊಳಗು ? ಪುಲಿಚರ್ಮ ಆವ ವಸ್ತ್ರದೊಳಗು? ಖಟ್ವಾಂಗ ಆವ ಆಯುಧದೊಳಗು ? ನೀನಿಡುವುದಿಂತುಟು, ನೀ ಹೊದೆವುದಿಂತುಟು, ನೀ ಹಿಡಿವುದಿಂತುಟು, ನೀ ಕೊಡುವುದಿಂದ್ರಪದವಿ ಗುಹೇಶ್ವರ.

೩೬೮

(೩) ಮರದೊಳಗಣ ಪತ್ರ ಫಲಂಗಳು ಮರಕಾಲ ವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಛೆಗೆ ತೋರುವಂತೆ, ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರ.

೩೬೯

(೪) ಅಜ ಹರಿ ಸುರರೆಲ್ಲರು ಅಳಿಯದೆ ಉಳಿವರಿಲ್ಲ, ಶಿವನೇ ನಿತ್ಯನೆಂದು ಹೊಡೆವಡುತ್ತಿದೆ ವೇದಶ್ರುತಿ ಬಸವಪ್ರಿಯ ಕೂಡಲಚನ್ನಸಂಗಯ್ಯನೊಬ್ಬನೇ ನಿತ್ಯನೆಂದು ಹೊಗಳುತ್ತಿದೆ ವೇದ.

೩೭೦

(೫) ವಟವೃಕ್ಷ ವಟಫಲಕೋಟಿಯ ನುಂಗಿಪ್ಪಂತೆ, ಸಟೆಯಿಂದಾದ ಅಜಾಂಡಕೋಟಿಯ ನುಂಗಿಪ್ಪ ದೇವಾ, ದಿಟಪುಟ ಎನ್ನ ಕಣ್ಮನ ಕರಸ್ಥಲಕ್ಕೆ ಬಂದು, ಪ್ರಕಟವಾದೆ. ಮರುಭಾಪು, ಮರುಭಾಪು ಲಿಂಗವೇ, 'ನ ಚ ರೇಣು ನ ಚ ಚಕ್ಷು'ವೆನಿಸಿದ ಲಿಂಗವೇ, ನಿಮ್ಮ ಮುಟ್ಟಿ ಸೃಷ್ಟಿ, ಸ್ಥಿತಿ, ಪ್ರಳಯಕ್ಕೆ ಹೊರಗಾದೆನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩೭೧

(೬) ಧರೆಯಾಕಾಶವಿಲ್ಲದಂದು. ತ್ರೈಮಂಡಲ ನೆಲೆಗೊಳ್ಳದಂದು ಹೋಮ ನೇಮ ಜಪ ತಪವಿಲ್ಲದಂದು ನಿಮ್ಮನಾರು ಬಲ್ಲರು ? ಹರಿ ಬ್ರಹ್ಮರಿಗೆ ಅಗೋಚರ, ನಿರ್ಲೇಪ ನಿರಂಜನನಾಗಿ ವೇದಂಗಳರಿಯವು, ಶಾಸ್ತ್ರ ಶ್ರುತಿ ಸ್ಮೃತಿಗಳು ನಿಮ್ಮನರಿಯವು. ಗಗನ ಕಮಲ ಕುಸುಮ ಪರಿಮಳದಿಂದತ್ತತ್ತ ಗುಹೇಶ್ವರಾ ನಿಮ್ಮ ನಿಲವನಾರು ಬಲ್ಲರು ?

೩೭೨

(೭) ಬ್ರಹ್ಮಾಬ್ರಹ್ಮರಿಲ್ಲದಂದು, ಸೃಷ್ಟಿಯಸೃಷ್ಟಿ ಇಲ್ಲದಂದು, ಕಾಳಿಂಗ ಕಳಕಂಠರಿಲ್ಲದಂದು. ಉಮೆಯ ಕಲ್ಯಾಣವಿಲ್ಲದಂದು. ದ್ವಾದಶಾದಿತ್ಯರಿಲ್ಲದಂದು. ನಂದಿಕೇಶ್ವರ ದಂಡನಾಥ ವಿಷವನಮೃತವ ಮಾಡದಂದು, ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲವಿಲ್ಲದಂದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ನಿಮ್ಮ ನಿಲವನಾರು ಬಲ್ಲರು ?

ಇಂತು ಲಿಂಗಮಹಾತ್ಮೆಯಂ ತನ್ನ ಮನದಲ್ಲಿ ಕಂಡ ಪ್ರಸಾದಿಯು ತನ್ನ ಅರಿವಿನಲ್ಲೆಡೆಗೊಂಡ ಜಂಗಮಮಹಾತ್ಮೆ ಎಂತಿರ್ದುದೆಂದೊಡೆ, ಮುಂದೆ ಜಂಗಮ ಮಹಾತ್ಮೆಯಸ್ಥಲವಾದುದು.

೪. ಜಂಗಮಮಹಾತ್ಮೆಯಸ್ಥಲ

೩೭೩

(೧) ಅಯ್ಯಾ, ನಿಮ್ಮ ದೇವರೆಂದು ಪೂಜಿಸಲಾಗದಯ್ಯ ನವಕೋಟಿ ಬ್ರಹ್ಮರಿಗೆ ಪ್ರಳಯವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗ ದಯ್ಯಾ, ದಶಕೋಟಿ ನಾರಾಯಣರಿಗೆ ಮರಣವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ ಅನಂತಕೋಟಿ ರುದ್ರರಿಗೆ ಲಯವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ಪೂಜಿಸಲಾಗದ ಯ್ಯಾ, ಮೀನಜ ರೋಮಜ ಮಹಾಮುನಿಗಳ ಸಂಹಾರ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ, ಎನ್ನನು ಏಳೇಳು ಜನ್ಮದಲಿ ತಂದಲ್ಲಿ ನಾನು ಉಭಯಲಿಂಗಜಂಗಮದ ಮರೆಹೊಕ್ಕು ಭವಂ ನಾಸ್ತಿಯಾಗಿ ಬದುಕಿದೆನು ಕಾಣಾ ಕೂಡಲಸಂಗಮದೇವಾ.

೩೭೪

(೨) ಕವಿತ್ವಸಾಧಕರೆಲ್ಲರೂ ಕಳವ[ಳಿಸಿ]ಹೋದರು. ವಿದ್ಯಾಸಾಧಕರೆಲ್ಲರೂ ಬುದ್ಧಿಗೆಟ್ಟರು. ತತ್ವಸಾಧಕರೆಲ್ಲರೂ ಭಕ್ತಿಹೀನರಾದರು. ಲಿಂಗಸಾಧಕರೆಲ್ಲರೂ ಭೂಭಾರಕರಾದರು. ಕೂಡಲಚನ್ನಸಂಗಮದೇವಯ್ಯ, ನಿಮ್ಮ ಬಸವಣ್ಣ ಜಂಗಮ ಸಾಧಕನಾಗಿ ಸ್ವಯಲಿಂಗವಾದನು.

೩೭೫

(೩) ಆದಿಯಲ್ಲಿ ನಿಮ್ಮ ಜಂಗಮವೇ ಲಿಂಗವೆಂಬುದನಾರುಬಲ್ಲರಯ್ಯ ಬಸವಣ್ಣನಲ್ಲದೆ? ಎಲ್ಲಿ ಸ್ಥಾವರವಿದ್ದಲ್ಲಿ ನೋಡಲಾಗದು, ಮನದಲ್ಲಿ ನೆನೆಯ

ಲಾಗದು. ಲಿಂಗಕ್ಕಾದಡೆಯೂ ಜಂಗಮವೇಬೇಕು. ಜಂಗಮವಿಲ್ಲದೆ ಗುರು ಉಂಟೇ? ಎಲ್ಲಿ ಜಂಗಮವಿದ್ದಲ್ಲಿ ಗುರುಲಿಂಗಜಂಗಮ ಪಾದೋದಕ ಪ್ರಸಾದ ಅನುಭಾವಸನ್ನಿಹಿತವಾಗಿಹುದು. ಇಂತೀ ಜಂಗಮವೆಂಬುದ ಬಸವಣ್ಣಬಲ್ಲ, ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿ ಶರಣೆಂದು ಶುದ್ಧನಾದೆನು ಕಾಣಾ ಕಲಿದೇವಯ್ಯ.

೩೭೬

(೫) ನಿರಾಕಾರ ನಿರ್ಜನಿತ ನಿರ್ಲೇಪ ನಿಃಕಪಟಿ ನಿರ್ವಂಚನಿಯನುಪಮಿಸಲಿಲ್ಲ ನಿಲ್ಲೋ. ನಿರಾಳ, ನಿರ್ಮಾಯ, ನಿಸ್ಸೀಮ, ನಿಸ್ಸಂಗಿ, ನಿರವಯನ ಅವಯವಕ್ಕೆ ತರಲಿಲ್ಲ ನಿಲ್ಲೋ. ಸಿಮ್ಮಲಿಗೆಯ ಚನ್ನರಾಮನೆಂಬ ಜಂಗಮಲಿಂಗವನುಪಮಿಸಲಿಲ್ಲ ನಿಲ್ಲೋ.

ಇಂತು ಜಂಗಮಮಹಾತ್ಮೆಯನರಿದು ಆ ಜಂಗಮ ಪ್ರಸಾದವ ಸ್ವೀಕರಿಸಿ ಸುಖಿಯಾಗಿಪ್ಪ ಪ್ರಸಾದಿಯ ಸದಾಚಾರ ಸದ್ವರ್ತನೆಯಲ್ಲಡಗಿ ತೋರುತ್ತಿರ್ಪ ಸಾವಧಾನ ಸನ್ನಿಹಿತ ಭಕ್ತ ಮಹಾತ್ಮೆ ಎಂತಿರ್ದುದೆಂದೊಡೆ, ಮುಂದೆ ಭಕ್ತ ಮಹಾತ್ಮೆಯ ಸ್ಥಲವಾದುದು.

೫. ಭಕ್ತಮಹಾತ್ಮೆಯಸ್ಥಲ

೩೭೭

(೧) ಭಕ್ತನಲ್ಲದವರನಾಸೆಗೈವರೆ ಕಕ್ಕುಲಿತೆಯಲ್ಲದೆ ಕಾರ್ಯವಲ್ಲ, ಆಸೆಗೈದರೆ ಭಕ್ತರನು ಆಸೆಗೈವುದು. [ಆಸೆಗೈದು] ಬಂದ ಶಿವಂಗೆ ಸುತನ ಕೊಟ್ಟರು, ಧನವ ಕೊಟ್ಟರು, ಮನವ ಕೊಟ್ಟರು, ಅಸುವ ಕೊಟ್ಟರು. ಶರಣರ ಪರಿ ಆವ ಲೋಕದೊಳಗೂ ಇಲ್ಲ, ಶರಣ ಭರಿತಲಿಂಗವಾಗಿ ಬೇಡಿದುದ ಕೊಡುವರಯ್ಯ ಉರಿಲಿಂಗಪೆದ್ದಿಪ್ರಿಯ ಗುರು ವಿಶ್ವೇಶ್ವರಾ.

೩೭೮

(೨) ತನುವಿಲ್ಲದ ಭಕ್ತ, ಮನವಿಲ್ಲದ ಭಕ್ತ, ಧನವಿಲ್ಲದ ಭಕ್ತ, ಪಂಚೇಂದ್ರಿಯ ಸುಖವಿಲ್ಲದ ಭಕ್ತ, ಕಾಯವಿಲ್ಲದ ಭಕ್ತ, ಕರ್ಮವಿಲ್ಲದ ಭಕ್ತ, ಕಲ್ಪಿತವಿಲ್ಲದ ಭಕ್ತ ಅಶನವನರಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ. ಹುಸಿಯ ನುಡಿಯನು ಭಕ್ತ ಅಹಂಕಾರರಹಿತನು ಭಕ್ತ, ಕೂಡಲಚನ್ನಸಂಗಯ್ಯನಲ್ಲಿ ಎನ್ನ ಮಾತಾಪಿತನು ಸದ್ಭಕ್ತನು.

೩೭೯

(೩) ಭಕ್ತರ ಮನೆಯ ಅಂಗಣ ವಾರಣಾಸಿಯೆಂಬುದು ಹುಸಿಯೇ. ಭಕ್ತರ ಮನೆಯ ಅಂಗಣದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿಪ್ಪವಾಗಿ? ಸುತ್ತಿದರೆ ಶ್ರೀಶೈಲ, ಕೆಲಬಲದಲ್ಲಿ ಕೇದಾರ. ಅಲ್ಲಿಂದ ಹೊರಗೆ ಶ್ರೀವಾರಣಾಸಿ. ವಿರಕ್ತಿ

ಬೀಡಾಗಿ, ಭಕ್ತಿಮೊಳೆಯಾಗಿ, ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಭಕ್ತರ ಮನೆಯ ಅಂಗಣ ವಾರಣಾಸಿಗಿಂದಲಧಿಕ.

೩೮೦

(೪) ಹುಸಿಯ ನುಡಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ ವಿಷಯಂಗಳಾತಂಗೆ ತೃಣವು ನೋಡಾ. ಬಯಸುವನಲ್ಲ ಭಕ್ತ, ದಯವೆಂಬುದು ತನ್ನ ಕೈಯಲ್ಲಿ; ಸೈರಣೆಯೆಂಬುದು ತನಗೆ ತೊತ್ತಾಗಿಪ್ಪುದು. ಕೋಪವೆಂತಹದೆಂದರಿಯ. ತಾಪತ್ರಯಂಗಳು ಮುಟ್ಟಲಮ್ಮವು. ವ್ಯಾಪ್ತಿಗಳಡಗಿದವು. ಲಿಂಗವನೊಳಕೊಂಡ ಪರಿಣಾಮಿ. ಆತನ ಪಥ ಲೋಕಕ್ಕೆ ಹೊಸತು. ಲೋಕದ ಪಥವಾತಂಗೆ ಹೊಸತು. ತನಗೊಮ್ಮೆಯೂ ಲಿಂಗಧ್ಯಾನ, ಲಿಂಗಕ್ಕೊಮ್ಮೆಯೂ ತನ್ನ ಧ್ಯಾನ. ಘನಮಹಿಮೆಯ ಹೊಗಳಲೆನ್ನಳವೆ ? ಪನ್ನಗಧರ ಕೇಳಯ್ಯ ಚನ್ನ ಹಂಪೆಯ ವಿರುಪಯ್ಯ ನಿಮ್ಮನಂಬಿದ ಸತ್ಯ ಶರಣ ಪರಿಣಾಮಿ.

೩೮೧

(೫) ಭಕ್ತರಿಗೆ ಹೋಗಿ ಸಮಯೋಚಿತವ ಮಾಡುವನ, ಸದ್ಭಕ್ತರಿಗೆ ಉಣಲಿಕ್ಕಿ ತನ್ನ ಹಸಿವ ಮರೆದಿಪ್ಪನ, ಸದ್ಭಕ್ತರಿಗೆ ಉಳ್ಳುದೆಲ್ಲವ ಕೊಟ್ಟು ಎಯ್ದರೆಂದು ಮನದಲ್ಲಿ ಮರುಗುವ ವಿಕೋಗ್ರಾಹಿ ನೆಟ್ಟನೆ ಶರಣ, ಮೂರು ತೆರದ ಮುಕ್ತಿಯ ಹಾದಿಯ ಆರು ತೆರದ ಭಕ್ತಿಯ ಭೇದವ ಇಂತಪ್ಪ ವರವ ಕೊಟ್ಟಡೆಯೂ ಒಲ್ಲೆನು. ಸಕಳೇಶ್ವರದೇವಾ ನಿಮ್ಮ ಶರಣರ ತೋರಾ ಎನಗೆ.

ಇಂತು ಭಕ್ತಮಹಾತ್ಮೆಯನಂಗದಲ್ಲಿ ತದ್ಗತವಾಗಿ ಮಾಡಿಕೊಂಡು ಭಿನ್ನ ಭಾವವ ತೋರದ ಪ್ರಸಾದಿಯ ಬಾಹ್ಯಾಭ್ಯಂತರದಲ್ಲಿ ಪರಿಣಾಮ ಪ್ರವೇಶವಾದ ಪರಮಾನಂದದೊಳಿಪ್ಪ ಶರಣಮಹಾತ್ಮೆಯ ಸ್ಥಲವಾದುದು

೬. ಶರಣಮಹಾತ್ಮೆಯಸ್ಥಲ

೩೮೨

(೧) ಪರುಷಕ್ಕೆ ಬೆಲೆ ಇಲ್ಲ, ಪ್ರಾಣಕ್ಕೆ ನಿರ್ಮಾಲ್ಯವಿಲ್ಲ, ರುಚಿಗೆ ಎಂಜಲವಿಲ್ಲ, ಸುಖಕ್ಕೆ ಅರೋಚಕವಿಲ್ಲ, ಗುಹೇಶ್ವರಾ ಶರಣಂಗೆ ಭವವಿಲ್ಲ ; ಬಂಧನವಿಲ್ಲ.

ಟೀಕು : ತನ್ನ ಪಾವನ ಮಾಡಿದ ಗುರು ಉಪದೇಶವೆಂಬ ಪರುಷಕ್ಕೆ ತಾನೊಂದ ಕೊಟ್ಟು ತೃಪ್ತಿಯ ಪಡಿಸಿಹೆನೆಂಬುದು ಇಲ್ಲವೆಂಬುದೀಗ, ಪರುಷಕ್ಕೆ ಬೆಲೆ ಇಲ್ಲ ಎಂಬ ಶಬ್ದಕ್ಕರ್ಥ. ಪ್ರಾಣವೇ ಲಿಂಗಕ್ಕೆ ಅರ್ಪಿತವಾದ ಬಳಿಕ ಆ ಪ್ರಾಣವೇ ಲಿಂಗವೇ, ಪ್ರಾಣವಾದ ಕಾರಣ ಆ ಪ್ರಾಣಲಿಂಗಕ್ಕೆ ಪೂಜಿಸಿಹೆನೆನಲಿಲ್ಲ; ನಿರ್ಮಾಲ್ಯವ ಕಳೆದಿಹೆನೆಂದರೆ ತೆರಹಿಲ್ಲವೆಂಬುದೀಗ, ಪ್ರಾಣಕ್ಕೆ ನಿರ್ಮಾಲ್ಯ ವಿಲ್ಲವೆಂಬ ಶಬ್ದಕ್ಕರ್ಥ. ಶಿವಸುಖಪ್ರಸನ್ನತೆ ಎಡೆಗೊಂಡು ಪರಿಣಾಮವೇ ತಾನಾ ಗಿರ್ದ ಬಳಿಕ ಅಲ್ಲಿ ಉಚ್ಛಿಷ್ಟವೆಂಬ ಭಾವಸೂತಕವಿಲ್ಲವೆಂಬುದೀಗ, ರುಚಿಗೆ ಎಂಜಲವಿಲ್ಲವೆಂಬ

ಶಬ್ದಕ್ಕರ್ಥ. ಪರಮಾನಂದವೆಡೆಗೊಂಡು ತಾನು ತಾನಾದ ಬಳಿಕ ಸಂಸಾರವನರಿಸಿ ಹೆನೆಂಬ ಭಿನ್ನ ಬುದ್ಧಿ ಇಲ್ಲವೆಂಬುದೀಗ, ಸುಖಕ್ಕೆ ಅರೋಚಿಕವಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯವನರಿದ ನಿಜಶರಣಂಗೆ ಭವಬಂಧನವಿಲ್ಲ ವೆಂಬುದೀಗ, ಗುಹೇಶ್ವರಾ ನಿಮ್ಮ ಶರಣಂಗೆ ಭವವಿಲ್ಲ ಎಂಬ ಶಬ್ದಕ್ಕರ್ಥ.

೩೮೩

(೨) ಶರಣ ಇಹಪರನಲ್ಲ, ಪರಾಪರನಲ್ಲ, ಕಾಮಿಸಿ ಕಾಮಿಯಲ್ಲ, ಭಾವಿಸಿ ಭಾವಿಯಲ್ಲ, ಅನಾಯತ ನಿರಂಜನನು. ಸಿದ್ಧಸೋಮನಾಥಲಿಂಗಾ ನಿಮ್ಮ ಶರಣ ಬಳಸಿಯೂ ಬಳಸುವವನಲ್ಲ.

೩೮೪

(೩) ಒಡಲಾಸೆಗೊಂಡು ಕಾಯದ ಬಳಿವಿಡಿದು ಸಂಸಾರದ ಕುರುಹಿನ ಹೆಸರಿನಲ್ಲಿ ಕರೆದಡೆ 'ಓ' ಎನುತಿಪ್ಪವರು ನರರೇ ? ಬರಿದೆ ಸಂಸಾರವ ಬಳಸುತ್ತಿಪ್ಪರು, ಸಕಳೇಶ್ವರದೇವಾ ನಿಮ್ಮ ಶರಣರು.

೩೮೫

(೪) ಅರಿವ ಬೈಚಿಟ್ಟುಕೊಂಡು, ಮರೆಯ ಮಾನವನಾಗಿ ಕುರುಹಿನ ಹೆಸರಲ್ಲಿ ಕರೆದಡೆ 'ಓ' ಎನುತಿಪ್ಪವರು ನರರೇ ? ನಿಮ್ಮ ಅರುಹಿನಲರತವರು ನರರೇ ಅಯ್ಯ? ನಿಮ್ಮಲ್ಲಿ ತೆರಹಿಲ್ಲದ ಶರಣಂಗೆ ಕುರುಹಿಲ್ಲವಾಗಿ ಬರಿಯ ಸಂಸಾರವ ಬಳಿಸಿಯೂ ಬಳಸದಂತಿಪ್ಪರು. ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರ ನಿಲವಿನ ಪರಿ ಇಂತುಂಟು.

೩೮೬

(೫) ಮನ ವಚನ ಕಾಯದಲ್ಲಿ ಆಸೆಯಿಲ್ಲದ ಶರಣನು, ಅರ್ಥ ಪ್ರಾಣಾಭಿಮಾನದಲ್ಲಿ ಲೋಭವಿಲ್ಲದ ಶರಣನು, ವಾಕ್ಕು ವಾಣಿ ಪಾದ ಪಾಯು ಗುಹ್ಯವೆಂಬ ಕರ್ಮೇಂದ್ರಿಯಂಗಳ ಹೊದ್ದಲೀಯದ ಶರಣನು, ಲಿಂಗಜಂಗಮ ಪ್ರಸಾದ ಸಾರಾಯ ಶರಣನು. ಕೂಡಲಚನ್ನಸಂಗಾ ಅನುಭಾವಸಾರಾಯ ಶರಣ.

೩೮೭

(೬) ಭವಕ್ಕೆ ಹುಟ್ಟುವನಲ್ಲ, ಸಂದೇಹ ಸೂತಕಿಯಲ್ಲ, ಆಕಾರ ನಿರಾಕಾರ ನೋಡಯ್ಯ. ಕಾಯ ವಂಚಕನಲ್ಲ, ಜೀವ ವಂಚಕನಲ್ಲ, ಶಂಕೆ ಇಲ್ಲದ ಮಹಾಮಹಿಮ ನೋಡಯ್ಯ. ಕೂಡಲಚನ್ನಸಂಗನ ಶರಣನುಪಮಾತೀತ ನೋಡಯ್ಯ.

ಇಂತು ಶರಣಮಹಾತ್ಮೆಯಲ್ಲಿ ಸರ್ವಾಂಗವು ಪರಮಾನಂದವನೈದಿದ ಪ್ರಸಾದಿ ಸ್ವೀಕರಿಸುವ ಪರಿಣಾಮ ಪ್ರಸಾದಮಹಾತ್ಮೆ ಎಂತಿರ್ದುದೆಂದೊಡೆ, ಮುಂದೆ ಪ್ರಸಾದ ಮಹಾತ್ಮೆಯ ಸ್ಥಲವಾದುದು.

೭. ಪ್ರಸಾದಮಹಾತ್ಮೆಯಸ್ಥಲ

೩೮೮

(೧) ಅಗ್ನಿಮುಟ್ಟಲು ತೃಣವಗ್ನಿಯಪ್ಪುದು ತಪ್ಪದಯ್ಯ. ಗುರುಪ್ರಸಾದ ಅಂಗಕ್ಕೆ ಸೋಂಕಿದಲ್ಲಿ ಸರ್ವಾಂಗವು ಗುರುವಪ್ಪುದು ತಪ್ಪದಯ್ಯ. ಲಿಂಗಪ್ರಸಾದ ಮನಕ್ಕೆ ಸೋಂಕಿದಲ್ಲಿ ಮನವೆಲ್ಲ ಲಿಂಗವಪ್ಪುದು ತಪ್ಪದಯ್ಯ. ಜಂಗಮಪ್ರಸಾದ ಅರಿವಿಂಗೆ ಸೋಂಕಿದಲ್ಲಿ ಅರಿವೆಲ್ಲ ಅಖಂಡ ಪ್ರಸನ್ನ ಪ್ರಸಾದರೂಪ ಜಂಗಮವಪ್ಪುದು ತಪ್ಪದಯ್ಯ. ಶ್ರೀ ಶಿವಶಿವಾ, ಶ್ರೀಮತ್ಪ್ರಸಾದದ ಮಹಿಮೆಯ ನೇನೆಂದುಪಮಿಸುವೆನಯ್ಯಾ ? ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಇಂತಪ್ಪ ಮಹಾಪರಿಣಾಮ ಪ್ರಸನ್ನ ಪ್ರಸಾದವ ಕೊಂಡು ನಾನು ಬದುಕಿದೆನಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೩೮೯

(೨) ಲಿಂಗಪ್ರಸಾದ ಸೋಂಕಿನಿಂದ ಬಿಬ್ಬಿಬಾಚಯ್ಯ ಸ್ವಯಲಿಂಗವಾದ. ಲಿಂಗಪ್ರಸಾದ ಸೋಂಕಿನಿಂದ ವಿಷವನಮೃತವ ಮಾಡಿ ಮೆರೆದ ಬಸವಣ್ಣ. ಇದು ಕಾರಣ ಕೂಡಲಚನ್ನಸಂಗಯ್ಯಾ, ನಿಮ್ಮ ಪ್ರಸಾದದ ಮಹಿಮೆ ದೇವಕ್ರಿಯೆಯ ಮೀರಿದುದ ನಾನೇನೆಂಬೆ ?

೩೯೦

(೩) ಲಿಂಗದಲ್ಲಿ ಕೊಡಲುಂಟು, ಕೊಳಲುಂಟು. ಅರ್ಪಿತ ಜಂಗಮದಲ್ಲಿ ಕೊಟ್ಟು ಕೊಳಲಿಲ್ಲವಾಗಿ ಅನರ್ಪಿತ. ಪ್ರಸಾದದಲ್ಲಿ ಕೊಡಲು ಕೊಳಲು ಇಲ್ಲವಾಗಿ ಉಭಯನಾಸ್ತಿ. ಇಂತೀ ತ್ರಿವಿಧ ಸಂಚಿತ ಸನ್ಮತವ ಕೂಡಲಚನ್ನಸಂಗಾ ನಿಮ್ಮ ಶರಣನೇ ಬಲ್ಲ.

ಇಂತು ಪ್ರಸಾದಿಯಸ್ಥಲದಲ್ಲಿ ಆಚರಿಸಿ ಮಹಾಪ್ರಸನ್ನಪ್ರಸಾದದೊಳು ಸಮರಸವಾಗಿ ಬೆರಸಿದ ಮಹಂತನು ಮುಂದೆ ಅನುಭಾವಮುಖದಿಂದ ಆಚರಿಸಿ ಬೆರಸುವ ಭೇದವೆಂತಿರ್ದುದೆಂದಡೆ, ಮುಂದೆ ಪ್ರಾಣಲಿಂಗಿಸ್ಥಲವಾದುದು.

ಪ್ರಾಣಲಿಂಗಿಸ್ಥಲ

ವಿವರಣೆ : ಪ್ರಾಣಲಿಂಗಿಸ್ಥಲದಲ್ಲಿ ಪ್ರಾಣವು ಲಿಂಗವನ್ನೊಳಕೊಳ್ಳುವದು. ಈ ಉಭಯವೂ ಸಾಮರಸ್ಯವನ್ನು ಹೊಂದಬೇಕು. ಆಗ ಮನುಷ್ಯನ ಕರಣಗಳೆಲ್ಲೆಲ್ಲ ಲಿಂಗಚೈತನ್ಯವು ಪಸರಿಸುವದು. ಲಿಂಗವು ಕೇವಲ ಪೂಜೆಗೆ ಪಾತ್ರವಾದ ಸ್ಥೂಲ ವಸ್ತುವಲ್ಲ. ಅದು ಅಂತರಂಗ ಬಹಿರಂಗವನ್ನೆಲ್ಲ ವ್ಯಾಪಿಸಿದ ವಸ್ತುವಾಗಿದೆ. ಹೀಗೆ ಅದು ವ್ಯಾಪಿಸಿದಲ್ಲಿ ಮನುಷ್ಯನ ದುರ್ವ್ಯಾಪಾರಗಳು ಅಡಗುವವು. ಅವನ ಒಲವುಗಳೆಲ್ಲ ಪರಿಶುದ್ಧವಾಗುವವು. ಅವನ ಮನಸ್ಸು ಚಂಚಲವಾಗುವದಿಲ್ಲ.

ಲಿಂಗದಲ್ಲಿ ಸ್ಥಿರಪಡುವದು. ಆಗ ಯಾವದು ಯೋಗ್ಯವೋ ಅತ್ತಕಡೆಗೆ ಅದು ಹೊರಳುವದು. ಈ ಸ್ಥಿತಿಯಲ್ಲಿ ಪ್ರಾಣಲಿಂಗಿಯಲ್ಲಿ ಒಂದು ಅಲೌಕಿಕ ಶಕ್ತಿಯು ಉದ್ಭವಿಸುತ್ತದೆ. ಆಗ ಅವನ ಅಂತಃಶಕ್ತಿಗಳು ವಿಕಾಸಹೊಂದುತ್ತವೆ. ಇವೆಲ್ಲ ಪ್ರಾಣಲಿಂಗಿಯ ಲಕ್ಷಣಗಳಾಗಿವೆ.

ಇದರಲ್ಲಿ ವಚನಕಾರರು ೪ ಸ್ಥಲಗಳನ್ನು ಕಲ್ಪಿಸಿರುವರು. ಅವುಗಳಲ್ಲಿ ನಾವು ಪುನಃ ಎರಡು ವಿಭಾಗಗಳನ್ನು ಮಾಡಬಹುದು. ೧ನೆಯ ವಿಭಾಗದಲ್ಲಿ ಪ್ರಾಣ ಲಿಂಗಿಸ್ಥಲ, ಪ್ರಾಣಲಿಂಗಾರ್ಚನೆಯ ಸ್ಥಲ ಮತ್ತು ಶಿವಯೋಗಸಮಾಧಿಸ್ಥಲ ಇವುಗಳು ಬರುತ್ತವೆ. ೨ನೆಯ ವಿಭಾಗದಲ್ಲಿ ಲಿಂಗನಿಜಸ್ಥಲ ಮತ್ತು ಅಂಗಲಿಂಗಸ್ಥಲಗಳು ಬರುತ್ತವೆ.

೧ನೆಯ ವಿಭಾಗದಲ್ಲಿಯ ಪ್ರಾಣಲಿಂಗಿಸ್ಥಲದಲ್ಲಿ ಪ್ರಾಣಲಿಂಗಿಯು ಮಾಡತಕ್ಕ ಕಾರ್ಯಗಳು ಸಾಮಾನ್ಯವಾಗಿ ಹೇಳಲ್ಪಡುತ್ತವೆ. ಆಮೇಲೆ ಪ್ರಾಣಲಿಂಗಾರ್ಚನೆಯು ಹೇಳಲ್ಪಡುತ್ತದೆ. ಈ ಅರ್ಚನೆಯಲ್ಲಿ ನೈತಿಕಾರಚರಣೆಗಳು ಮುಖ್ಯವಾಗಿ ಹೇಳಲ್ಪಡುತ್ತವೆ. ಈ ಮೇರೆಗೆ ಆಚರಣೆಯನ್ನು ಅನುಸರಿಸುತ್ತ ಹೋದಲ್ಲಿ ಶಿವಯೋಗವು ಘಟಿಸುವದು. ಇದಕ್ಕೆ ಹಠಯೋಗಿಯ ಕಷ್ಟ ಕರ್ಮಗಳು ಬೇಡ.

ಆದರೆ ಈ ಶಿವಯೋಗವು ಮನುಷ್ಯನ ಅಂತಿಮಸಾಧನೆಯಲ್ಲ; ಮನಸ್ಸಿನಲ್ಲಿ ಲಿಂಗವು ದೃಢಪಡಲು ಅದೊಂದು ಸಾಧನವಾಗಿದೆ. ಅದು ಘಟಿಸಿದ ಬಳಿಕ ಲಿಂಗವು ಮನೋಮೂರ್ತಿಯಾಗಿ ನಿಲ್ಲುವದು, ಇದು ಎರಡನೆಯ ವಿಭಾಗದಲ್ಲಿಯ ಲಿಂಗನಿಜಸ್ಥಲವು. ಹೀಗೆ ಅದು ಮನಸ್ಸಿನಲ್ಲಿ ದೃಢಪಟ್ಟ ಕೂಡಲೆ ಅವನ ಸರ್ವಾಂಗವೆಲ್ಲ ಲಿಂಗಮಯವಾಗುವದು. ಅವನ ಕರಣಗಳೆಲ್ಲವೂ ಲಿಂಗಕರಣ ಗಳಾಗುವವು. ಇದು ಅಂಗಲಿಂಗಸ್ಥಲವು. ಹೀಗೆ ಪ್ರಾಣಲಿಂಗಿಸ್ಥಲದ ವಿವರಣೆ ಇದೆ.

ಪ್ರಾಣಲಿಂಗಿಸ್ಥಲ : ಇದರಲ್ಲಿ ಪ್ರಾಣಲಿಂಗಿಯ ಆಚರಣೆಗಳು ಸಾಮಾನ್ಯ ರೀತಿಯಿಂದ ಹೇಳಲ್ಪಡುತ್ತವೆ.

ಪ್ರಾಣಲಿಂಗಾರ್ಚನೆಯಸ್ಥಲ : ಇದು ಆಂತರಂಗಿಕ ಲಿಂಗಾರ್ಚನೆಯಾಗಿದೆ. ಆಗ ದೇಹದ ಕರಣಗಳು ಲಿಂಗದಲ್ಲಿ ಲಯಹೊಂದುವವು. ನೈತಿಕಾಚಾರಗಳೆಲ್ಲವು ಲಿಂಗಪೂಜೆಯ ಸಾಮಗ್ರಿಗಳಾಗಿ ಇಲ್ಲಿ ಅಳವಡುವವು. ಆಗ ಲಿಂಗದ ಪ್ರಕಾಶವು ಹೊರಬೀಳಹತ್ತುವದು. ಇದು ಪ್ರಾಣಲಿಂಗಾರ್ಚನೆಯಸ್ಥಲ.

ಶಿವಯೋಗಸಮಾಧಿಸ್ಥಲ : ಈ ಬಗೆಯ ಪ್ರಾಣಲಿಂಗಾರ್ಚನೆಯಿಂದ ಅವನಲ್ಲಿ ಶಿವಯೋಗಸಮಾಧಿಯು ಉಂಟಾಗುವದು. ಭಕ್ತ, ಮಹೇಶ, ಪ್ರಸಾದಿ ಸ್ಥಲಗಳಲ್ಲಿ ದೃಢಹೊಂದಿದ ಆಚರಣೆಗಳ ಪರಿಣಾಮವೇ ಇದಾಗಿದೆ. ಅವನ ಅಂತರಂಗದ ಚಕ್ರಗಳಲ್ಲಿ ಲಿಂಗದ ಕಳೆಯು ವ್ಯಾಪಿಸಹತ್ತುವದು. ಇದು ಶಿವಯೋಗ ಸಮಾಧಿಸ್ಥಲವು.

ಲಿಂಗನಿಜಸ್ಥಲ : ಹೀಗೆ ಶಿವಯೋಗಸಮಾಧಿಯನ್ನು ಹೊಂದಿದ ಬಳಿಕ ಲಿಂಗವು ಮನೋಮೂರ್ತಿಯಾಗಿ ದೃಢವಾಗಿ ನಿಲ್ಲುವದು. ಇದು ಲಿಂಗದ ನಿಜದ ನಿಲವು ಎಂದೆನಿಸಿಕೊಳ್ಳುತ್ತದೆ.

ಅಂಗಲಿಂಗಸ್ಥಲ : ಲಿಂಗವು ಹೀಗೆ ಮನೋಮೂರ್ತಿಯಾಗಿ ದೃಢವಾಗಿ ನಿಲ್ಲಲು ಶಿವಯೋಗಿಯ ಸರ್ವಾಂಗವು ಲಿಂಗಮಯವಾಗುತ್ತದೆ. ಅವನ ಕರಣಗಳೆಲ್ಲವು ಲಿಂಗಕರಣಗಳಾಗುವವು. ಇಲ್ಲಿ ಅತ್ಯಂತವಾದ ಸುಖವು ಒದಗುತ್ತದೆ. ಈ ಸುಖವನ್ನು ಪ್ರಾಣಲಿಂಗಿಯು ಅನುಭವಿಸುವನು.

೧. ಪ್ರಾಣಲಿಂಗಿಸ್ಥಲ

೩೯೧

(೧) ಅರ್ಕನ ಅದ್ಭುತದಲ್ಲಿ ಕೆಟ್ಟರು ಹಲಬರು. ತಪ್ಪುಕರಾದರು ಹಲಬರು. ಬಿಂದು ಬಿಂದುವನೆ ಕೂಡಿ ಲಿಂಗಲೀಯವಾಯಿತ್ತು ನಿಂದನು ಗುಹೇಶ್ವರನೆನ್ನೊಳಗೆ ಭರಿತವಾಗಿ.

ಟೀಕ : ಅಖಂಡ ಚಿತ್‌ಪ್ರಕಾಶವನುಳ್ಳ ಚಿಲ್ಲಿಂಗವೀಗ ಚಿದಾದಿತ್ಯನಾದ ಕಾರಣ ಅರ್ಕನೆಂಬ ಶಬ್ದಕ್ಕರ್ಥ. ಅಂತಪ್ಪ ಚಿಲ್ಲಿಂಗವು ತನ್ನ ಸ್ವಲೀಲೆಯಿಂದ ಸಾಕಾರವಪ್ಪ ನೆನಹುದೋರೆ ಅಬ್ಬರಿಸಿ ನೆಗಳ್ದು ಅದ್ಭುತವಾದ ಚಿತ್‌ಪ್ರಭಾಲಿಂಗಮೂರ್ತಿಯಾಯಿತ್ತು ಅಂತು ಚಿಲ್ಲಿಂಗವು ಅಬ್ಬರಿಸಿ ಎದ್ದಲ್ಲಿ ಆ ಚಿಲ್ಲಿಂಗದ ಪ್ರಭೆಯು ಉತ್ಕೃಷ್ಟವಾಗಲು, ಆ ಉತ್ಕೃಷ್ಟವಾದ ಚಿತ್‌ಪ್ರಭೆಯು ಚಿತ್‌ಪ್ರಭಾಣುಕೋಟಿಗಳಾಗಿ ಒಗೆದು ತೋರುತ್ತಿರಲು, ಅಂತು ತೋರಿದ ಚಿತ್‌ಪ್ರಭಾಣುಗಳಿಗೆ ದೇಹಕರಣಂಗಳ ಭವನಂಗಳ ಕಲ್ಪಿಸಿದನಾಕ್ಷಣವೇ ಅದು ಲಿಂಗಮೂರ್ತಿ. ಅದು ಕಾರಣ ಅರ್ಕನ ಅದ್ಭುತದಲ್ಲಿ ಕೆಟ್ಟರು ಹಲಬರು ಎಂಬ ಶಬ್ದಕ್ಕರ್ಥ. ಅಂತು ಚಿದಾತ್ಮಾಣುಗಳು ದೇಹ, ಕರಣ, ಭವಬಾಧೆಗೊಳಗಾಗಿ ತಮ್ಮ ನಿಜವಪ್ಪ ಶಿವತತ್ವಕ್ಕೆ ದೂರವಾಗಿ ತಪ್ಪಿದರೆಂಬುದೀಗ, ತಪ್ಪುಕರಾದರು ಹಲಬರು ಎಂಬ ಶಬ್ದಕ್ಕರ್ಥ, ಅನಂತ ದೇಹಿಗಳಾಗಿರ್ದಲ್ಲಿ ಶಿವಕೃಪೆಯಾಗಲು ಶರಣನ ದೇಹದಲ್ಲಿ ಮರಸಿರ್ದ ಆತ್ಮನ ಸ್ವಯಂಪ್ರಕಾಶಮಪ್ಪ ಚಿದ್ಬಿಂದು ಪ್ರಕಾಶಿಸಿ ಆ ದೇಹವೆಂಬ ಬಿಂದುವ ಕೂಡಿ, ಕಾಯ ಜ್ಞಾನಕಾಯವಾಯಿತ್ತೆಂಬುದೀಗ, ಬಿಂದು ಬಿಂದುವನೆ ಕೂಡಿತ್ತೆಂಬ ಶಬ್ದಕ್ಕರ್ಥ. ಅಂತಾದ ಚಿದಂಗದಲ್ಲಿ ಚಿತ್ಕಲಾಲಿಂಗವು ಸಂಬಂಧವಾಗಿ ದೇಹಭಾವವಳಿದು ಲಿಂಗವಾದ ಶರಣನೆಂಬುದೀಗ, ಲಿಂಗಲೀಯವಾಯಿತ್ತು ಎಂಬ ಶಬ್ದಕ್ಕರ್ಥ. ಅಂತು ಶರಣನೆಲ್ಲ ಲಿಂಗವೆಯಾದಲ್ಲಿ ಲಿಂಗವು ಶರಣನಲ್ಲಿ ಭೇದವಿಲ್ಲದೆ ಪರಿಪೂರ್ಣವಾಗಿದ್ದಿತ್ತೆಂಬುದೀಗ , ನಿಂದನು ಗುಹೇಶ್ವರನೆನ್ನೊಳಗೆ ಭರಿತನಾಗಿ ಎಂಬ ಶಬ್ದಕ್ಕರ್ಥ.

೩೯೨

(೨) ಲಿಂಗಮಧ್ಯದಲ್ಲಿ ಜಗವಿದ್ದಡೇನೋ ? ಜಗವ ಹೊರಗಿಕ್ಕಿ ಲಿಂಗವನೊಳ

ಗಿಟ್ಟುಕೊಂಡ. ಆ ಘನಕ್ಕೆ ಶರಣೆಂಬೆ. ಆ ಮಹಾ ಘನವು ಆಯತಕ್ಕೊಳಗು, ಪ್ರಳಯಕ್ಕೆ ಹೊರಗು ನೋಡಾ ಕೂಡಲಚನ್ನಸಂಗಯ್ಯ.

೩೯೩

(೩) ಹೊರಗಿಹನೆಂದು ನಾನು ಮರೆದು ಮಾತನಾಡಿದಡೆ ಅರಿಯಲೀಯದೆ ಬಂದೆನ್ನ ಅಂತರಂಗದೊಳಗಿಪ್ಪ. ತೆರಹಿಲ್ಲದಭವನು ನುಡಿಗೆಡೆಗೊಡನು. ಆತನ ಬಯಲಿಂಗೆ ಬೇಟಗೊಂಡೆನೆ[ಲೆ][1]ಗವ್ವಾ. ನಾನೇನಮಾಡುವೆನೆಲೆ ತಾಯೇ? ಮರೆದಡೆಚ್ಚರಿಸುವ ಕುರುಹಿಲ್ಲದಭವನು ತನ್ನರಿದಡೊಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರ.

೩೯೪

(೪) ಪ್ರಾಣಲಿಂಗಸಂಬಂಧಿಯಾದಬಳಿಕ ತನುವಿನ ಗುಣವಿರಲಾಗದಯ್ಯಾ. [ಕೈ][2]ಸಿಂಹಾಸನವಾದ ಬಳಿಕ ಸಂದಾಗಿರಲಾಗದಯ್ಯ. ಕೂಡಲಚನ್ನಸಂಗಯ್ಯನಲ್ಲಿ ಈ ಮನವ ಅಲ್ಲಯ್ಯ ಬಲ್ಲ.

೩೯೫

(೫) ಕಾಲೇ ಕಂಭಗಳೆನ್ನ ದೇಹವೇ ದೇಗುಲವಾಯಿತ್ತಯ್ಯಾ. ನಾಲಿಗೆ ಗಂಟೆ, ಶಿರವೇ ಸುವರ್ಣದ ಕಳಶವಯ್ಯಾ. ಸ್ವರವೇ ಲಿಂಗಸಿಂಹಾಸನವಾಗಿದ್ದಿತಯ್ಯ. ಗುಹೇಶ್ವರಾ ನಿಮ್ಮ ಪ್ರಾಣಲಿಂಗಪ್ರತಿಷ್ಠೆ ಪಲ್ಲಟವಾಗದಂತಿರ್ದೆನಯ್ಯ.

೩೯೬

(೬) ಕಕ್ಷೆ, ಕರಸ್ಥಲ, ಕಂಠ, ಉತ್ತಮಾಂಗ, [ಉರ][3]ಸೆಜ್ಜೆ, ಅಂಗಸೋಂಕೆಂಬಿವು ಬಹಿರಂಗದ ಶೃಂಗಾರ. ಬ್ರಹ್ಮರಂಧ್ರ, ಭ್ರೂಮಧ್ಯ, ನಾಸಿಕಾಗ್ರ, ಚೌಕಮಧ್ಯವೆಂಬಿವು [ಅಂತರಂಗದ ಶೃಂಗಾರ][4] ಬ್ರಹ್ಮರಂಧ್ರದಲ್ಲಿ ಲಿಂಗಸ್ವಾಯತ, ಭ್ರೂಮಧ್ಯದಲ್ಲಿ ಜಂಗಮಸ್ವಾಯತ, ನಾಸಿಕಾಗ್ರದಲ್ಲಿ ಪ್ರಸಾದಸ್ವಾಯತ, ಚೌಕಮಧ್ಯದಲ್ಲಿ ಭಾವಸ್ವಾಯತ, ಇಂತೀ ಚತುರ್ವಿಧಸ್ಥಲವನರಿತುದಾಗಿ ನೋಡಿತ್ತೇ ಪಾವನ, ಮುಟ್ಟಿತ್ತೇ ಅರ್ಪಿತ ಕೂಡಲ ಚನ್ನಸಂಗಮದೇವಾ.*

೩೯೭

(೭) ತೆರೆಯ ಮರೆಯ ಕುರುಹೆಂಬುದೇನೊ ? ಒಳಗೆ ಲಿಂಗವ ನುಡಿದ ಬಳಿಕ ಪೂಜೆಗೊಂಬ ದೇವನಾರು, ಪೂಜಿಸುವ ಭಕ್ತನಾರು ? ಹಿಂದು ಮುಂದು, ಮುಂದು ಹಿಂದಾಯಿತ್ತು, ಗುಹೇಶ್ವರಾ ನಾನು ನೀನು, ನೀನು ನಾನಾದಡೆ.

೧–೧ ಲ (ಮೂ) ೨–೨ ಕೆಯಿ (ಮೂ) ೩–೩ ಮುಖ (ಮೂ)
೪–೪ ನಾಲ್ಕು ಸ್ಥಲವುಳ್ಳವು (ಮೂ) * ಈ ವಚನ ಪ್ರಕ್ಷಿಪ್ತವಾಗಿರಲು ಸಾಧ್ಯ (ಸಂ).

೩೯೮

(೮) ತುಂಬಿ ಪರಿಮಳವ ನುಂ[ಡಿ][1]ತ್ತೋ, ಪರಿಮಳ ತುಂಬಿ [ಯನು][2]ಂಡಿತ್ತೋ ? ಲಿಂಗ ಪ್ರಾಣವಾಯಿತೋ, ಪ್ರಾಣಲಿಂಗವಾಯಿತೋ? ಗುಹೇಶ್ವರಾ, ಈ ಉಭಯದ ಭೇದವ ನೀನೇ ಬಲ್ಲೆ.

೩೯೯

(೯) ಅಂತರಂಗದಲ್ಲಿ ಆವರಿಸಿ, ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳ[ಗು][3]ವೆ. ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ. ಉರಿಲಿಂಗದೇವನವ್ವಾ.

೪೦೦

(೧೦) ಪ್ರಾಣಲಿಂಗವೆಂದರಿದ ಬಳಿಕ ಪ್ರಾಣ ಪ್ರಸಾದವಾಯಿತ್ತು, ಲಿಂಗ ಪ್ರಾಣವೆಂದರಿದ ಬಳಿಕ ಅಂಗದಾಸೆ ಹಿಂಗಿತ್ತು. ಲಿಂಗಸೋಂಕುಸಂಗಿಗೆ ಕಂಗಳೇ ಕರುವಾಗಿರ್ದೆನಯ್ಯ. ಚನ್ನಮಲ್ಲಿಕಾರ್ಜುನಯ್ಯ ಹಿಂಗದೆ ಅ[ನಿ][4]ಮಿಷನಾದ ಶರಣಂಗೆ.

ಇಂತು ಪ್ರಾಣಲಿಂಗಸಂಬಂಧ ಅವಿರಳವಾದ ಲಿಂಗಪ್ರಾಣಿಯ ಲಿಂಗಾರ್ಚನೆಯು ಎಂತಿರ್ದುದೆಂದಡೆ, ಮುಂದೆ ಪ್ರಾಣಲಿಂಗಾರ್ಚನೆಯಸ್ಥಲವಾದುದು.

೨. ಪ್ರಾಣಲಿಂಗಾರ್ಚನೆಯಸ್ಥಲ

೪೦೧

(೧) ಆಯತವಾಯಿತ್ತು ಅನುಭಾವ, ಸ್ವಾಯತವಾಯಿತ್ತು ಶಿವಜ್ಞಾನ, ಸಮಾಧಾನವಾಯಿತ್ತು ಸದಾಚಾರ. ಇಂತೀ ತ್ರಿವಿಧವು ಏಕಾರ್ಥವಾಗಿ ಅರಿವಿನ ಹೃದಯ ಕಣ್ದೆರೆದು ಅನಂತ ಲೋಕಾಲೋಕವ ಅಸಂಖ್ಯಾತ ಮಹಾಗಣಂಗಳೆಲ್ಲರು ಲಿಂಗಭಾವದಲ್ಲಿ ಭರಿತರಾಗಿ ಗಗನಸಿದ್ಧಾಂತದಿಂದ ಉಪದೇಶಕ್ಕೆ ಬಂದು ಭಕ್ತಿರಾಜ್ಯವನೆ ಹೊಕ್ಕು ನಿಜಲಿಂಗ ಸುಕ್ಷೇತ್ರವನೆ ಕಂಡು, ಅಮೃತಸರೋವರದೊಳಗಣ ವಿವೇಕವೃಕ್ಷ ಪಲ್ಲವಿಸಲು, ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು, ಪರಮಾನಂದದ ಮಧದೊಳಗೆ ಪರಿಣಾಮ[ವಾಗಿ] ಪಶ್ಚಿಮಜ್ಯೋತಿಯ ಬೆಳಗಿನಲ್ಲಿ ಪರುಷದ ಸಿಂಹಾಸನವನಿಕ್ಕಿ, ಪ್ರಾಣಲಿಂಗ ಮೂರ್ತಿಗೊಂಡಿರಲು, ದಕ್ಷಿಣಾಬ್ಧಿಯ ದಾಂಟಿ, ಉತ್ತರಾಬ್ಧಿಯಲ್ಲಿ ನಿಂದು, ಶ್ರೀಮದಖಂಡ ಪರಿಪೂರ್ಣ ಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆ ಗುಹೇಶ್ವರಾ.

ಟೀಕು : ಅಂತರಂಗದಲ್ಲಿ ಅನುಭಾವ ಆಯತವಾಗಿ ಅಳವಡಲು ಅದೀಗ, ಆಯತವಾಯಿತ್ತು ಅನುಭಾವವೆಂಬ ಶಬ್ದಕ್ಕರ್ಥ. ಅಂತು ಅನುಭಾವವಳವಡಲು

೧–೧ ಗಿ (ಮೂ) ೨–೨ ಯು (ಮೂ) ೩–೩ ಲು (ಮೂ) ೪–೪ ನು (ಮೂ)

ಸುಜ್ಞಾನ ಸನ್ನಿಹಿತವಾಯಿತ್ತೆಂಬುದೀಗ, ಸ್ವಾಯತವಾಯಿತ್ತು ಸುಜ್ಞಾನವೆಂಬ ಶಬ್ದಕ್ಕರ್ಥ. ಅಂತು ಶಿವಜ್ಞಾನ ಸನ್ನಿಹಿತ ಸದಾಚಾರ ಕ್ರಿಯೆಗಳೆಲ್ಲವೂ ನಿಷ್ಪತ್ತಿಯನೈದಿದ ವೆಂಬುದೀಗ, ಸಮಾಧಾನವಾಯಿತ್ತು ಸದಾಚಾರವೆಂಬ ಶಬ್ದಕ್ಕರ್ಥ. ಇಂತು ಆಯತ ಸ್ವಾಯತ ಸನ್ನಿಹಿತ ಸದಾಚಾರ ತ್ರಿವಿಧವು ವಿಕರಸವಾಗಿ ಆ ಸುಜ್ಞಾನವೇ ಮಹಾ ಪ್ರಕಾಶವನೆಯಿತ್ತೆಂಬುದೀಗ, ತ್ರಿವಿಧವು ವಿಕಾರ್ಥವಾಗಿ ಅರುಹಿ ಹೃದಯ ಕಣ್ದೆರೆ ದಿತ್ತೆಂಬ ಶಬ್ದಕ್ಕರ್ಥ. ಇಂತು ಸುಜ್ಞಾನಪ್ರಕಾಶವಾದ ಶಿವಜ್ಞಾನಿಯ ಸಕಲ ಕರಣಂ ಗಳೆಲ್ಲವು ಅನಂತ ಲೋಕಾಲೋಕಂಗಳನು ಆಲೋಕನವಮಾಡಿ ಸಂಖ್ಯೆ ಇಲ್ಲದ ಶಿವಗಣತ್ವಮಂ ಧರಿಸಿ, ಲಿಂಗಭಾವದಲ್ಲಿ ಪರಿಪೂರ್ಣ ಕರಣಂಗಳಾದವೆಂಬುದೀಗ, ಅನಂತ ಲೋಕಾಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರೂ ಲಿಂಗಭಾಜನದಲ್ಲಿ ಭರಿತರಾಗಿ ಎಂಬ ಶಬ್ದಕ್ಕರ್ಥ. ಗಗನವೆಂದರೆ ಆತ್ಮತತ್ವ. ಆತ್ಮತತ್ವವಿದ್ದಲ್ಲಿ ಸನ್ನರ್ಧ ವಾಗಿ ಭಕ್ತಿಸಾಮ್ರಾಜ್ಯಸಂಪತ್ತನು ಪಡೆದು ಆ ಸದ್ಭಕ್ತಿಜ್ಞಾನದಿಂದ ಲಿಂಗ ಕ್ಷೇತ್ರವೆಂಬ ಪ್ರಾಣಲಿಂಗಿಸ್ಥಲವ ಕಂಡು ಲಿಂಗಸುಖಿಯಾದೆನೆಂಬುದೀಗ, ಭಕ್ತಿರಾಜ್ಯವ ಹೊಕ್ಕು ನಿಜಲಿಂಗ ಸುಕ್ಷೇತ್ರವನೆ ಕಂಡು ಎಂಬ ಶಬ್ದಕ್ಕರ್ಥ. ಆ ಸುಖಮಯವೆಂಬ ಅಮೃತ ಸರೋವರದೊಳಗೆ ಇಪ್ಪ ಸದುಹೃದಯ ಕಮಲವಿಕಸಿತವಾಗಿ ಮಹಾವಿಚಾರವೆಂಬ ವಿವೇವೃಕ್ಷ ಪಲ್ಲವಿಸಿ ವಿರಕ್ತಿವಾಸನೆ ಸಂಪೂರ್ಣವಾಗಿದ್ದಿತ್ತೆಂಬುದೀಗ, ಅಮೃತ ಸರೋವರದೊಳಗಣ ವಿವೇಕವೃಕ್ಷ ಪಲ್ಲವಿಸಲು ವಿರಕ್ತಿ ಎಂಬ ಪುಷ್ಪ ವಿಕಸಿತ ವಾಗಲು ಎಂಬ ಶಬ್ದಕ್ಕರ್ಥ. ಇಂತು ವಿರಕ್ತಿವಾಸನೆ ಸಂಪೂರ್ಣ ಭಾವವನೆಯ್ದಿ ಪರಮಾನಂದ ಪಿಂಡದೊಳಗೆ ಸುಷುಮ್ನನಾಳದೊಳಗೆ ಪರಮ ರಾಜಯೋಗದಲ್ಲಿ ಸಂಯೋಗಿಯಾಗಿ ಆ ಸುಖ ಪ್ರಕಾಶದೊಳು ಬ್ರಹ್ಮರಂಧ್ರವೆಂಬ ಪರುಷದ ಪೀಠದ ಮೇಲೆ ಸ್ವಯಂಜ್ಯೋತಿರ್ಲಿಂಗವನು ಮೂರ್ತಿಗೊಳಿಸುತ್ತಿರಲು ಅದೀಗ, ಪರಮಾ ನಂದದ ಮಠದೊಳಗೆ ಪರಿಣಾಮ[ವಾಗಿ] ಪಶ್ಚಿಮಜ್ಯೋತಿಯ ಬೆಳಗಿನಲ್ಲಿ ಪರುಷದ ಸಿಂಹಾಸನದ ಮೇಲೆ ಪ್ರಾಣಲಿಂಗ ಮೂರ್ತಿಗೊಂಡಿರಲು ಎಂಬ ಶಬ್ದಕ್ಕರ್ಥ. ಪೂರ್ವಪಕ್ಷಯೋಗವಳಿದು ಉತ್ತರ ಪಕ್ಷದಲ್ಲಿ ನಿಜವನೈದಿ ಅಖಂಡ ಪರಿಪೂರ್ಣ ಪೂಜೆಯ ಮಾಡುತ್ತಿಪ್ಪಾತನೇ ದಿವ್ಯಶಿವಯೋಗಿ ಎಂಬುದೀಗ, ದಕ್ಷಿ[ಣಾಬ್ಧಿಯ]ದಾಂಟಿ ಉತ್ತರಾಬ್ಧಿಯಲಿ ನಿಂದು ಅಖಂಡ ಪರಿಪೂರ್ಣ ಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆನು ಎಂಬ ಶಬ್ದಕ್ಕರ್ಥ.

೪೦೨

(೨) ಶರಣ ಲಿಂಗಾರ್ಚನೆಯ ಮಾಡಲೆಂದು ಪುಷ್ಪಕ್ಕೆ ಕರವ ನೀಡಿದಡೆ ಆ ಪುಷ್ಪ ನೋಡ ನೋಡ ಕರದೊಳಗಡಗಿತ್ತಲ್ಲಾ ! ಅದು ಓಗರದ ಗೊಬ್ಬರವ ನುಣ್ಣದು. ಅದು ಅರುಣ ಚಂದ್ರನ ತೆರೆಯಲ್ಲಿ ಬೆಳೆಯದು. ಲಿಂಗವೇದಿಯಾಗಿ ಬೆಳೆದ ಪುಷ್ಪವ ಗುಹೇಶ್ವರ ನಿಮ್ಮ ಶರಣ ಪ್ರಾಣಲಿಂಗಕ್ಕೆ ಪ್ರಾಣಪೂಜೆಯ ಮಾಡಿದನು.

೧-೧ ಣವ (ಮೂ)

೪೦೩

(೩) ಲಿಂಗವೇ ಪ್ರಾಣ, ಪ್ರಾಣವೇ ಲಿಂಗ. ಪಂಚಾಕ್ಷರಂಗಳೆಂಬ ಪಂಚಾ ಮೃತದಿಂ ಮಜ್ಜನಕ್ಕೆರೆದು ಆ ಲಿಂಗಕ್ಕೆ ಮನವೇ ಪುಷ್ಪ, ಬುದ್ಧಿಯೇ ಗಂಧ, ಚಿತ್ತವೇ ನೈವೇದ್ಯ, ಅಹಂಕಾರದಿಂದಾರೋಗಣೆಯ ಮಾಡಿಸಿ, ಪರಿಣಾಮದ ವೀಳೆಯವ ನಿತ್ತು ಸ್ನೇಹದಿಂದ ವಂದನೆಯ ಮಾಡಿ ಪ್ರಾಣಲಿಂಗಕ್ಕೆ ಬಹಿರಂಗದ ಪೂಜೆಯಲ್ಲಿ ಅಂತರಂಗದ ಪೂಜೆಯಮಾಡಿ ಅಂತರಂಗದ ವಸ್ತುವನೆಲ್ಲವ ಬಹಿರಂಗದ ವಸ್ತುವಿ ನಲ್ಲಿ ಕೂಡಿ ಲಿಂಗಾರ್ಚನೆಯ ಮಾಡಲು ಅಂತರಂಗ ಬಹಿರಂಗಭರಿತನಾಗಿಪ್ಪನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು.

೪೦೪

(೪) ಸಜ್ಜನವೇ ಮಜ್ಜನ, ಸದಾಚಾರವೇ ಧೂಪಾರತಿ, ಅಗವ್ಯವೇ ಪೂಜೆ ಯಾಗಿ, ಅಂಗವಿರಹಿತವಾದಲ್ಲಿ, ಉದಯಾಸ್ತಮಾನವೆ ಲಿಂಗಾರ್ಚನೆ ಮಹಾಘನ ಸೋಮೇಶ್ವರಾ ನಿಮ್ಮ ಶರಣಂಗೆ.

೪೦೫

(೫) ಎನ್ನ ಕಾಯವೇ ಅಗ್ಗವಣಿಯ ೧[ಬಿಂದುಗೆ]೧, ಮನವೇ ಸಿಂಹಾಸನ, ಹೃದಯವೇ ಕಮಲಪುಷ್ಪ, ನೆನೆವ ನಾಲಿಗೆಯೇ ಗಂಟೆ, ಶಿರವೇ ಸುವರ್ಣದ ಕಳಸ, ಎನ್ನ ನಯನವೇ ಸ್ವಯಂಜ್ಯೋತಿ, ಹೀಗೆನ್ನ ಚಂದ್ರಶೇಖರಲಿಂಗಕ್ಕೆ ಮಾಡಿದೆನೆನ್ನ ಪ್ರಾಣಪೂಜೆಯ. ಕೂಡಲಚನ್ನಸಂಗನ ಪೂಜಿಸಿದಲ್ಲದೆ ನಿಲ್ಲಲಾರೆ.

೪೦೬

(೬) ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ, ಆಕಾಶಗಂಗೆಯಲ್ಲಿ ಮಜ್ಜನಕ್ಕೆರೆದು, ಹೂವಿಲ್ಲದ ಪರಿಮಳದಲ್ಲಿ ಪೂಜೆಯಮಾಡಿ, ಹೃದಯದಲ್ಲಿ ಶಿವಶಿವಾ ಎಂಬ ಶಬ್ದ ಮುಗ್ಧವಾದ ಕಾರಣ, ಇದು ಅದ್ವೈತ ಕಾಣಾ ಗುಹೇಶ್ವರ.

೪೦೭

(೭) ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣಿ, ಚಂದ್ರಸೂರ್ಯರಿಬ್ಬರು ಪುಷ್ಪ ನೋಡಾ ! ಬ್ರಹ್ಮ ರೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ ! ಗುಹೇಶ್ವರಲಿಂಗಕ್ಕೆ ಪೂಜೆಯ ನೋಡಾ.

೪೦೮

(೮) ಭುವರ್ಲೋಕದ ಸ್ಥಾವರಕ್ಕೆ ಸತ್ಯಲೋಕದ ಅಗ್ಗವಣಿಯಲ್ಲಿ ಮಜ್ಜನಕ್ಕೆ ರೆದು, ದೇವಲೋಕದ ಪುಷ್ಪದಲ್ಲಿ ಪೂಜೆಯ ಮಾಡಿದಡೆ ಹತ್ತು ಲೋಕದಾಚಾರ ಕೆಟ್ಟಿತ್ತು ಮೂರು ಲೋಕದರಸುಗಳು ಮುಗ್ಧರಾದರು. ಗುಹೇಶ್ವರಲಿಂಗವು ಸ್ಥಾವರಕ್ಕೆ ಸ್ಥಾವರವಾದನು.

೧-೧ ಬಂದುಗೆ (ಮೂ)

೪೦೯

(೯) ಆಸೆಯಾಮಿಷ ತಾಮಸ, ಹುಸಿ, ವಿಷಯವನೆಲ್ಲವ ಸಟೆಮಾಡಿ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯವೆಲ್ಲವನು ಹುಡಿಗುಟ್ಟಿ ರಂಗವೋಲೆಯ ನಿಕ್ಕಿ, ಸಮತೆ ಎಂಬ ಹತ್ತಿಯ ಕೊಂಡು, ಪುಣ್ಯ ಪಾಪವೆಂಬ ಕಸಗೊಟ್ಟೆಯಂ ಕಳೆದು, ದೃಢವೆಂಬ ಬತ್ತಿಯಂ ತೀವಿ, ತನುವೆಂಬ ಪ್ರ[ಣ]ತೆಯಲ್ಲಿ ಕಿಂಕ[ರ]ವೆಂಬ ತೈಲವನೆರೆದು, ಜ್ಞಾನವೆಂಬ ಜ್ಯೋತಿಯಂ ಹೊತ್ತಿಸಿ, ಸಮತೆ ಸೈರಣೆ ಎಂಬ ಅಗ್ಗವಣೆಯಲ್ಲಿ ಮಜ್ಜನ ಕ್ಕೆರೆದು, ನಿಃಹೃದಯ ನಿಃಕಾಮ್ಯವೆಂಬ ಗಂಧಾಕ್ಷತೆಯಂ ಕೊಟ್ಟು, ಅಷ್ಟದಳ ಕಮಲದಲ್ಲಿ ಪೂಜೆಯಂ ಮಾಡಿ, ಪಂಚೇಂದ್ರಿಯ ವಿನಾಶವೆಂಬ ಪಂಚಾರತಿಯನಿಟ್ಟು ನಿರಂತರ ಸಾವಧಾನವೇ ನಿರಂಜನತನು ಮುಖಾದಿಗಳ ನೇಕಾರ್ಥವ ಮಾಡಿ, ಹಿಡಿವುದೇ ಏಕಾರತಿ, ಸರ್ವಜೀವ ದಯಾಪರವೆಂಬ ಧೂಪವ ಬೀಸಿ, ನಿರ್ಧರವೆಂಬ ನಿತ್ಯನೇಮವ ನಿಲಿಸಿ, ಪರಮಾರ್ಥವೆಂಬ ನೈವೇದ್ಯವನಿಟ್ಟು, ಶಿವಸುಖ ಸಂತಸದಿಂದರ್ಪಿತವ ಮಾಡಿ, ಪರಿಣಾಮವೆಂಬ ಪ್ರಸಾದವ ಸ್ವೀಕರಿಸಿ, ಸುಜ್ಞಾನಭರಿತನಾಗಿಹ. ಇಂತಪ್ಪ ಶಿವಲಿಂಗಾರ್ಚಕರ ತೋರಿ ಬದುಕಿಸಯ್ಯಾ ಕೂಡಲಚನ್ನಸಂಗಮದೇವಾ.

ಇಂತು ಪ್ರಾಣಲಿಂಗಕ್ಕೆ ಪ್ರಾಣಪೂಜೆಯಂ ಮಾಡಿ ಸಕಲ ಕರಣಂಗಳನು ಲಿಂಗದಲ್ಲಿ ಲೀಯವ ಮಾಡಿದ ಪ್ರಾಣಲಿಂಗಿಯ ಲಿಂಗಸಂಗಯೋಗಸಮಾಧಿಯ ಭೇದವೆಂತಿರ್ದುದೆಂದಡೆ, ಮುಂದೆ ಶಿವಯೋಗಸಮಾಧಿಸ್ಥಲವಾದುದು.

೩. ಶಿವಯೋಗಸಮಾಧಿಯಸ್ಥಲ

೪೧೦

(೧) ಹ[ರಿ]ಯ ಬಾಯ ಹಾಲು, ಉರಿಯ [೪][ಕೈಯ][೪] ಬೆಣ್ಣೆ, ಗಿರಿಯ ಮೇಲಣ ಶಿಶುವು ಹರಿದಾಡುತ್ತಿದೆ. ರರಯಿ[೦] ಭೋ. ಸುರಪತಿಯ ಗಜವ ನೆರೆ ಮರಳಿ ಹೋಹನ ಕಂಡು ಕರೆಯಿ[೦], ಭೋ. ಹರನ ಮಂ[ತ]ಣಿಯ ಶೂಲದಲ್ಲಿ ಶಿರದ ಉಂಗುಷ್ಮವ ಉರಿ ನೆರೆವುತ್ತಿದ್ದುದ ನಾನೇನೆಂಬೆ ಗುಹೇಶ್ವರಾ ?

ಟೀಕು : ಹ[ರಿ][೩] ಎಂದಡೆ ವಾಯು. ಅಂತಪ್ಪ ಪ್ರಾಣವಾಯು ಶಿವಯೋಗ ಸಾಧನದಿಂದ ಸುಷುಮ್ನನಾಳದಲ್ಲಿ ಬ್ರಹ್ಮರಂಧ್ರವನೆಯ್ದಿ ಅಲ್ಲಿಪ್ಪ ಅಮೃತವನು ಸುವಿವೇಕವೆಂಬ ಮುಖದ್ವಾರದೊಳು ತುಂಬಿಕೊಂಡು ಇರುತ್ತಿರಲು ಹರಿಯ ಬಾಯ ಹಾಲೆಂಬ ಶಬ್ದಕ್ಕರ್ಥ. ಆ ಲಿಂಗ ಸಂಬಂಧ ಪ್ರಾಣ ನಿಲವಿನ ಮುಖದ್ವಾರದೊಳಿಪ್ಪ ಶಿವಯೋಗಾಮೃತವನು ಉರಿ ಎಂದಡೆ ಶಿವಜ್ಞಾನಸ್ವರೂಪಮಪ್ಪ ಕುಂಡಲಾಗ್ನಿ ಪ್ರಭೆ, ಆ ಶಿವಜ್ಞಾನಾಗ್ನಿಪ್ರಭೆಯೊಳಗಿಪ್ಪ ಪರಿಪೂರ್ಣ ಶಿವತತ್ವವು ಸಕಲಕ್ರಿಯಾ ಸಾಧನಂಗಳಳಿದುಳಿದ ಘೃತದಂತೆ ಸಕಲ ಕ್ರಿಯೆಗಳೆಲ್ಲವು ಅಳಿದುಳಿದು 'ಘೃತ

೧–೧ ಣು (ಮೂ) ೨–೨ ಲ (ಮೂ) ೩–೩ ರೆ (ಮೂ)
೪–೪ ಕೆಯ್ಯ (ಮೂ) ೫–೫ ಥ (ಮೂ)

ಕಾಠಿಣ್ಯವನ್ಮೂರ್ತಿ ಸಚ್ಚಿದಾನಂದ ಲಕ್ಷಣಂ' ಎಂಬ ಶ್ರುತಿ ಪ್ರಮಾಣದಿಂದ ಶಿಕ್ಷಿತವಾಗಿರಲು ಅದೀಗ ಉರಿಯ ಕೈಯ ಬೆಣ್ಣೆ ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗ ಸಾಧನಾಮೃತವನು ತತ್ವವೆಂಬ ಘೃತವ ಹಸ್ತದೊಳು ಪಿಡಿದು, ಗಿರಿ ಎಂದರೆ ನಾಸಿಕಾಗ್ರವೆಂಬ ಶಿಖರಿಯ ಮೇಲೆ ಸೋಹಂವೆಂಬ ಮದಗಜವನೇರಿ ಈಡಾಪಿಂಗಳ ವೆಂಬ ದ್ವಾರದೊಳು ಹೋಗುತ್ತ ಬರುತ್ತಿಪ್ಪ ಜೀವವೆಂಬ ಶಿಶುವಿಗೆ ಸದ್ಯೋಧೆಯಿಂದುಣಿಸಲು ಎಂಬುದೀಗ, ಗಿರಿಯ ಮೇಲಣ ಶಿಶುವು ಹರಿದಾಡುತ್ತಿದೆ ಕರೆಯಿಶುಭೋ ಸುರಪತಿಯ ಗಜವೇರಿ ಮರಳಿ ಹೋಹನ ಕಂಡು ಕರೆಯಿಂಭೋ ಎಂಬ ಶಬ್ದಕ್ಕರ್ಥ. ಇಂತು ಆ ಜೀವಂಗೆ ಸದ್ಯೋಧೆಯಿಂದ ಹಾಲು ತುಪ್ಪನುಣಿಸ ಕಲಿಸಲು ಜೀವಧರ್ಮವಳಿದು ಶಿವತತ್ವವಿವೇಕಿಯಾಗಿ ಹರನ ಮಂತಣಿಯ ಶೂಲವೆಂಬ ತಲೆಗುಣದ ಮಸ್ತಕವ ಮೆಟ್ಟಿ ಆ ಪರಶಿವತತ್ವದಲ್ಲಿ ಅವಿರಳ ಸಂಬಂಧಯೋಗವನೈದುತ್ತಿದ್ದಿರ್ತ್ತೆಂಬುದೀಗ, ಹರನ ಮಂತಣಿಯ ಶೂಲದ ಶಿರದಲಂಗುಷ್ಮವನುರೆ ನೆರೆವುತ್ತಿದ್ದುದನೇನೆಂಬೆನು ಎಂಬ ಶಬ್ದಕ್ಕರ್ಥ.

೪೧೧

(೨) ಶಿವಯೋಗವಾದಲ್ಲಿ ಸಂಸಾರಯೋಗ ಮಾಬುದಯ್ಯ, ಸಂಸಾರಯೋಗ ಮಾದಲ್ಲಿ ಭಕ್ತಿಯನುಗ್ರಹಯೋಗವಯ್ಯ. ಭಕ್ತಿಯನುಗ್ರಹಯೋಗವಾದಲ್ಲಿ ಲಿಂಗಾನುಗ್ರಹಯೋಗವಯ್ಯ. ಲಿಂಗಾನುಗ್ರಹಯೋಗವಾದಲ್ಲಿ ಜಂಗಮಾನುಗ್ರಹಯೋಗವಯ್ಯ. ಜಂಗಮಾನುಗ್ರಹಯೋಗವಾದಲ್ಲಿ ಪ್ರಸಾದಾನುಗ್ರಹಯೋಗವಯ್ಯ. ಪ್ರಸಾದಾನುಗ್ರಹಯೋಗವಾದಲ್ಲಿ ತ್ರಿವಿಧಸನ್ನತಯೋಗವಯ್ಯ. ತ್ರಿವಿಧಸನ್ನತಯೋಗವಾದಲ್ಲಿ ಮನ ಮಗ್ನಯೋಗವಯ್ಯ. ಮನಮಗ್ನಯೋಗವಾದಲ್ಲಿ ಕೂಡಲಚನ್ನಸಂಗ ನಿಮ್ಮ ಸಂಯೋಗವಯ್ಯ.

೪೧೨

(೩) [೧][ಜಗ][೧]ದಗಲದ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟಿನಲ್ಲಿ ಚಿತ್ರ ವಿಚಿತ್ರವ ನೋಡುತ್ತ ನೋಡುತ್ತ ನೋಡುತ್ತ ಧ್ಯಾನ ವಿಶ್ರಾಮದಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ ನೋಡುತ್ತ ನೋಡುತ್ತ ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ ಗುಹೇಶ್ವರನೆಂಬ ಲಿಂಗವು ತಾನೆಯಾಗಿ.

೪೧೩

(೪) ಸ್ವಸ್ಥಾನ [೨][ಸ್ವಸ್ತಿರ][೨] ಸುಮನಮಂಟಪದೊಳಗೆ, ನಿತ್ಯ ನಿರಂಜನದ ಪ್ರಭೆ [೩][ಯೊಳಗೆ][೩] ಶಿವಯೋಗದನುಭಾವವೇಕಾರ್ಥವಾಗಿ, ಗುಹೇಶ್ವರಾ ನಿಮ್ಮ ಶರಣನನು ಪಮ ಸುಖಿಯಾಗಿರ್ದ.

೧–೧ ಜಂಗಮ (ಮೂ) ೨–೨ ಸ್ವಸ್ತಿಕ (ಮೂ) ೩–೩ ಯ ಬೆಳಗು (ಮೂ)

೪೧೪

(೫) ಪಂಚಬ್ರಹ್ಮದಮೇಲೆ ಪ್ರಣಮಮಂತ್ರವಪ್ಪ ಪಂಚಮುಖ ದಶ ಭುಜದ ಫಣಿಯ ಮಣಿಯ ಮೇಲೆ ನೋಡುತ್ತ ಇದ್ದಾನೆ ಈರೇಳು ಲೋಕವ. ಸಮತೆ ಸಮಾಧಿ ಎಂಬ ಸಮರಸ ಸಾರಾಯದೊಳಗೆ ಚಂದ್ರಕಾಂತದ ಕೊಡದಲ್ಲಿ [೧][ಅ][೧] ಮೃತವ ತುಂಬಿಕೊಂಡು [೨][ಕೊಡನೊಡೆ][೨] ಯದೇ ಬೆಳಗುತ್ತಿದೆ ಗುಹೇಶ್ವರಾ.

೪೧೫

(೬) ಷಟ್‌ಚಕ್ರವಳಯದೊಳಗೆ ನಾನಾಡುವೆ ಬಹುರೂಪ. ಕುಂಡಲಿಯ ಭ್ರೂಮಧ್ಯದಲ್ಲಿ ನಾನಾಡುವೆ ಬಹುರೂಪ. ಭ್ರೂಮಧ್ಯಮಂಡಲ ಹೃದಯಕಮಲ ಮಧ್ಯದ ಅಬ್ಜಸ್ವರದ ಮಣಿಪೂರಕದ ಮೇಲೆ ನಾನಾಡುವೆ ಬಹುರೂಪ. ಬಯಲ ಬೆರೆಸಿದ ಮರೀಚಿಯಂತೆ ನಾನಾಡುವೆ ಬಹುರೂಪ. ಉರಿಯುಂಡ ಕರ್ಪೂರದಂತೆ ನಾನಾಡುವೆ ಬಹುರೂಪ. ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿತ್ತು ಲೋಕವೆಲ್ಲ.

೪೧೬

(೭) ಬಂದೂ ಬಾರದು. ಹೊಂದಿಯೂ ಹೊಂದದು. ನಿಂದೂ ನಿಲ್ಲದ ಪರಿಯ ನೋಡಾ ! ಅಚುಂಬಿತ ಚರಿತ್ರನನೇನೆಂದುಪಮಿಸುವೆ? ನವಖಂಡ ಪೃಥ್ವಿಯನೊಳಕೊಂಡ ಬಯಲು ಅಗಮ್ಯ ಸಮಾಧಿ ಶಿವಯೋಗದಲ್ಲಿ ಗುಹೇಶ್ವರ ಲಿಂಗವೈದಾನೆ; ಏನೆಂದುಪಮಿಸುವೆ ?

೪೧೭

(೮) ಗುರುಲಿಂಗ ನಾಭಿಮಂಡಲದಿಂ ಮೇಲೆ ಷಡಂಗುಲವನೆತ್ತಿ ಅಧೋಮುಖ ಕಮಲವನೂರ್ಧ್ವಮುಖಕ್ಕೆ ತಂದು, ಅಂತರಿಕ್ಷದೊಳಗಿಪ್ಪ ಚಿದಾತ್ಮನಹಂತಹ ಆದಿತ್ಯನ ಕಿರಣಂಗಳು ಹೋಗಿ ತಾಗಲ್ಕೆ ಆ ಪದ್ಮವಿಕಸಿತವಾಗಿ ಅನೇಕ ರತ್ನ ಸಂಕೀರ್ಣ ವಹಂತಹ ಹೃದಯದೀಪ್ತಿಯ ಪ್ರಕಾಶಮಂ ಕಂಡು ಶಿವಜ್ಞಾನದೊಳ್ಪಿಡಿದು ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ ಎಂಬ ಅಷ್ಟಾಂಗಯೋಗದೊಳ್ಪಿಡಿದು ನಿಟಿಲತಟ ಭ್ರೂಮಧ್ಯದ ಮೇಲಣ ಉಭಯದಳ ಕಮಲದ ಮೇಲೆ ಇಪ್ಪ ಜೀವ ಪರಮನ ಭೇದವೆಂತಿರ್ದುದೆಂದೊಡೆ ಜೀವ ಪರಮರಿಬ್ಬರನೇಕಾರ್ಥವ ಮಾಡಲ್ಕೆ ಬ್ರಹ್ಮನಾಳದ ಮೇಲೆ ಪ್ರಯೋಗಿಸಿ ಕವಾಟ ದ್ವಾರಮಂ ತೆಗೆದು, ತೆರಹಿಲ್ಲದ ಬಯಲು ಕೂಡಲಚನ್ನಸಂಗಾ ನಿಮ್ಮ ಶರಣ.

ಇಂತು ಶಿವಯೋಗದಲ್ಲಿ ಸಮಾಧಿಯನೆಯ್ದಿದ ಪ್ರಾಣಲಿಂಗಿಯ ಮನಸ್ಥಲದಲ್ಲಿ ಮನೋಮೂರ್ತಿಯಾಗಿ ನಿಂದ ಲಿಂಗದ ಸಹಜ ನಿಲವು ಎಂತಿರ್ದುದೆಂದೊಡೆ ಮುಂದೆ ಲಿಂಗನಿಜಸ್ಥಲವಾದುದು.

೧–೧ ಬಿಂದುವಿನ (ಮೂ) ೨–೨ ನೋಡಿ (ಮೂ)

೪. ಲಿಂಗನಿಜಸ್ಥಲ

೪೧೮

(೧) ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖವು. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮ ಭೂಮಿ. ಲಿಂಗವೆಂಬುದು ಅಖಂಡಿತ ಅಭೇದ್ಯ ಪಂಚಸಂಜ್ಞೆ. ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ ಜ್ಯೋತಿರ್ಲಿಂಗವು. ಇಂತಿದು ಲಿಂಗದ ವರ್ಮವು. ಉರಿಲಿಂಗಪೆದ್ದಿಪ್ರಿಯ ಗುರುವಿಶ್ವೇಶ್ವರಲಿಂಗದೊಳಗಿಂತು ತಿಳಿಯಬಲ್ಲಾತನೇ ಬಲ್ಲವನು.

ಟೀಕು : ನಿಷ್ಕಲ ಪರಶಿವಲಿಂಗವು ತನ್ನ ಸ್ವಲೀಲೆಯಿಂದ ತನ್ನ ನಿಜಾಂಗವನು ತನ್ನ ಮಹಾಪ್ರಕಾಶವನು ತನ್ನ ಮಹಾಜ್ಞಾನವು ತನ್ನ ಸ್ವಯಾನಂದ ಸುಖ ಮೊದಲಾದ ತನ್ನ ಸ್ವಧರ್ಮವೆಲ್ಲ ಸಹವಾಗಿ ಅಖಂಡ ತೇಜೋಮೂರ್ತಿಯಾದ ಮಹಾ ಲಿಂಗಾಕಾರವಾಯಿತ್ತು. ಅಂತಾದ ಮಹಾಲಿಂಗವು ಪಂಚಮುಖವನೈದಿಸಿ ಪಂಚಕಲಾ ಶಕ್ತಿಯುಕ್ತವಾದ ಪಂಚಸಾದಾಖ್ಯ ಲಿಂಗಮೂರ್ತಿಯಾಯಿತ್ತು. ಅಂತಾದ ಮಹಾ ಲಿಂಗವೇ ಹರಿಬ್ರಹ್ಮರ ನಡುವೆ ನೆಗಳ್ದ ತೇಜೋಮೂರ್ತಿಯಾದ ಲಿಂಗವಾದುದು. ತಾನೇ ಅಂತು ಅಖಂಡಿತವಾಗಿಪ್ಪ ಸರ್ವತೋಮುಖವಾಗಿ ಸಕಲ ನಿಷ್ಕಲವಾಗಿ ಪಂಚ ಸಂಜ್ಞೆಯನುಳ್ಳುದಾಗಿ ತನ್ನ ಸ್ವಲೀಲಾ ಸ್ವತಂತ್ರತೆಯಿಂದಿಪ್ಪ ಆ ಮಹಾಲಿಂಗವೇ ಭುವನಾಧ್ವ, ತತ್ವಾಧ್ವ, ವರ್ಣಾಧ್ವ, ಮಂತ್ರಾಧ್ವ, ಪದಾಧ್ವ, ಕಲಾಧ್ವ ಮೊದಲಾದ ಚರಾಚರಾತ್ಮರುಗಳಿಗೆ ತಾನೇ ಜನ್ಮಸ್ಥಾನವಾದನಾಗಿ ಅಂತೂ ಸರ್ವತತ್ವಂಗಳು ಲಿಂಗ ಮಧ್ಯದಲ್ಲಿ ಹುಟ್ಟಿ ಅಡಗುತ್ತಿಹವೆಂದು ಅರಿದು ಲಿಂಗವಾಗಿಪ್ಪ ಶರಣನೇ ಬಲ್ಲಾತ ಎಂಬಲ್ಲಿ ಶರಣನಿಂದ ಆ ಮಹಾಘನಲಿಂಗದ ಘನವು ಕಾಣಲಾಯಿತ್ತು ಎಂಬುದೀ ವಚನದ ತಾತ್ಪರ್ಯಾರ್ಥ.

೪೧೯

(೨) ಮೂರರಲ್ಲಿ ಮುಟ್ಟಲಿಲ್ಲ, ಆರರಲ್ಲಿ ತೋರಲಿಲ್ಲ, ಎಂಟರಲ್ಲಿ ಕಂಡುದಿಲ್ಲ, ಒಂದರಲ್ಲಿ ನಿಂದುದಿಲ್ಲ, ಇದನೇನೆಂಬೆನೆಂತೆಂಬೆ ? ಕಾಯದಲ್ಲಿ ಅಳಿದುದಿಲ್ಲ, ಜೀವದಲ್ಲಿ ಉಳಿದುದಿಲ್ಲ, ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ.

೪೨೦

(೩) ಅಂಡಜ ಒಡೆಯದುದರಿಂದ ಮುನ್ನ, ದ್ವೀಪಾದ್ವೀಪವಿಲ್ಲದುದರಿಂದ ಮುನ್ನ, ಅನಲ ಪವನರಿಲ್ಲದುದರಿಂದ ಮುನ್ನ, ರವಿ ಶಶಿಗಳಿಲ್ಲದುದರಿಂದ ಮುನ್ನ, ಇಂತೀ ಚತುರ್ವಿಧ ಒಂದಾಗದ ಮುನ್ನ, ಗುಹೇಶ್ವರಲಿಂಗ ಎಲ್ಲದರಿಂದ ಮುನ್ನ.

೪೨೧

(೪) ದ್ವೀಪಾದ್ವೀಪವಿಲ್ಲದರಿಂದತ್ತತ್ತ, ಕಾಲಕರ್ಮವಿಲ್ಲದರಿಂದತ್ತತ್ತ, ಮಾಯಾಮೋಹವಿಲ್ಲದರಿಂದತ್ತತ್ತ, ಏನೂ ಏನೂ ಇಲ್ಲದರಿಂದತ್ತತ್ತ, ಆದಿ ಮೂವರಿಲ್ಲದರಿಂದತ್ತತ್ತ, ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವಿಲ್ಲದರಿಂದತ್ತತ್ತ.

೪೨೨

(೫) ಮಥನದ ಲೀಲೆಯಲ್ಲಿ ಹುಟ್ಟುವುದೇ ಬ್ರಹ್ಮವು ? ಶ್ರುತಿ ಸ್ಮೃತಿಗಳಿಗೆ ಅಳವಡದು ನೋಡಾ! ಪೃಥ್ವಿಯೊಳಗಿಲ್ಲದ ಅಚಲಮಪ್ಪ ಮಹಾಘನವನು ಚರಾಚರದಲ್ಲಿ ಭರಿತನೆಂತೆಂಬೆ ? ಇಲ್ಲದ ಲಿಂಗವನಲ್ಲಲ್ಲಿಗೆ ಉಂಟು ಮಾಡುವ ವಾರ್ತೆ ಎಲ್ಲಿಯದೋ ಗುಹೇಶ್ವರಾ ?

೪೨೩

(೬) ಶೂನ್ಯಹೃದಯ ನಿಶ್ಶೂನ್ಯವಿಲ್ಲದಂದು, ಬ್ರಹ್ಮ ವಿಷ್ಣು ಮಹೇಶ್ವರರಿಲ್ಲದಂದು, ಹದಿನಾಲ್ಕು ಭುವನವಿಲ್ಲದಂದು ಕೂಡಲಚನ್ನಸಂಗನೆಂಬ ಹೆಸರು ಮುನ್ನಿಲ್ಲದಂದು.

೪೨೪

(೭) ಅಕ್ಷರದಲಭ್ಯಾಸವಮಾಡಿ, ಬರಹವ ತೊಡೆವ ಪರಿ ಎಂತೋ ? ಸ್ವರೂಪೆಂಬುದಾವುದು, ನಿರೂಪೆಂಬುದಾವುದೆಂದರಿಯರಾಗಿ, ಆದಿನಿರಾಳ, ಮಧ್ಯ ನಿರಾಳ, ಉರ್ಧ್ವನಿರಾಳ ಗುಹೇಶ್ವರಾ.

೪೨೫

(೮) ತೋರಬಾರದ ಘನವ ಹೇಳಲೆಂದೇನೋ ? ಹೇಳಬಾರದ ಘನವ ತೋರಲೆಂದೇನೋ ? ಈ ಸಂಧಾನದ ಪರಿಯ ಬಲ್ಲರೆ ಹೇಳಿರೇ. ಗುಹೇಶ್ವರನೆಂಬುದು ಅಕಲ್ಪಿತ ನೋಡಾ.

೪೨೬

(೯) ಅಳಿಯ, ಬೆಳೆಯ, ಸುಳಿವನಲ್ಲ; ಪ್ರಳಯವಿಲ್ಲದ ವಿಜಯನು. ೧[ಕು]೧ಳಾಕು ಳದ ಆತ್ಮನು ಅಂಗಸಂಗಿಯಲ್ಲ, ಸುಳುಹಿನೊಳಗಣ ಸೂಕ್ಷ್ಮನ ತಿಳಿದು ನೋಡಿರೇ. ಅಣಿಮಾದಿ ಗುಣರಹಿತನ ಅಕಲ್ಪಿತನನೇನೆಂಬೆ ? ನೆಳಲ ಕಳವಳದ ಬಳಿಯ ಭಾವರೂಪನಲ್ಲ. ಬೆಳಗಿನೊಳಗಣ ಬೆಳಗು ೨[ಗು]೨ ಹೇಶ್ವರಲಿಂಗವು.

ಇಂತು ಮನೋಮೂರ್ತಿಯಾದ ಪ್ರಾಣಲಿಂಗಿಯ ಸರ್ವಾಂಗವು ಲಿಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಅಂಗಲಿಂಗಸ್ಥಲವಾದುದು.

೧–೧ ಕ (ಮೂ) ೨–೨ ಮ (ಮೂ)

೫. ಅಂಗಲಿಂಗಸ್ಥಲ

೪೨೭

(೧) ಅಂಗದ ಕಳೆಯಲ್ಲಿ ಒಂದು ಲಿಂಗವ ಕಂಡೆ. ಲಿಂಗದ ಕಳೆಯಲ್ಲಿ ಒಂದು ಅಂಗವ ಕಂಡೆ. ಅಂಗಲಿಂಗವೆಂಬ ಸಂದಳಿಯದೆ ಅರಸಿ ಕಂಡಿಹೆ ನೋಡಿರೇ. ಇಲ್ಲಿ ಐದಾನೆ ನೋಡಿರೇ ಶಿವದೇವನು. ಇಲ್ಲಿ ಐದಾನೆ ನೋಡಿರೇ ಮಹಾದೇವನು. ಬಲ್ಲರೆ ಇರಿಸಿಕೊಳ್ಳಿ. ಕಾಯವಳಿಯದ ಮುನ್ನ ನೋಡಬಲ್ಲರೆ ಗುಹೇಶ್ವರನೆಂಬ ಲಿಂಗಕ್ಕೆ ಬೇರೊಂದೆಡೆಯುಂಟೇ ಹೇಳಿರೇ ?

೪೨೮

(೨) ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ ಶ್ರೋತ್ರದಲ್ಲಿ ಅನ್ಯ ಶಬ್ದವ ಕೇಳನಾ ಶರಣನು. ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ ಅನ್ಯವ ಮುಟ್ಟನಾ ಶರಣನು. ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ ಅನ್ಯವ ನೋಡನಾ ಶರಣನು. ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ ಅನ್ಯವ ನುಡಿಯನಾ ಶರಣನು. ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ, ಆಹಾರ ವ್ಯವಹಾರವನರಿಯನಾ ಶರಣನು. ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ ಬರುನುಡಿಯನುಡಿಯನಾ ಶರಣನು. ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ ಕೂಡಲಚನ್ನಸಂಗಯ್ಯಾ ನಿನ್ನನಲ್ಲದೆ ಅನ್ಯವನರಿಯನಾ ಶರಣನು.

೪೨೯

(೩) ಅಂಗದಿಂದ ಲಿಂಗಸುಖ, ಲಿಂಗದಿಂದ ಅಂಗಸುಖ. ಅಂಗಲಿಂಗಸಂಗದಿಂದ ಪರಮಸುಖ ನೋಡಯ್ಯ ! ಅಂಗಲಿಂಗಸಂಗಸುಖವನು ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯನೇ ಬಲ್ಲ.

೪೩೦

(೪) ಅಂಗದುದಯ ಲಿಂಗಸುಖವು. ಲಿಂಗದುದಯ ಅಂಗಸುಖವು. ಅಂಗ ಲಿಂಗಸಂಗಸುಖದಿಂದ ಮಿಕ್ಕುಮೊರಿನಿಂದ ಪರಮಸುಖವನೇನೆಂಬೆನಯ್ಯ ? ಕೂಡಲಚನ್ನಸಂಗನ ಶರಣನನೇನೆಂಬೆನಯ್ಯ ?

೪೩೧

(೫) ಅಂಗಲಿಂಗಸಂಬಂಧವಾದವರ ಲಿಂಗವೆಂದೇ ಕಾಂಬುದು. 'ಕೀಟೋಪಿ ಭ್ರಮರಾಯತೆ' ಎಂಬ ನ್ಯಾಯದಂತೆ, ಅಂಗಲಿಂಗ ಸೋಂಕಿ ಲಿಂಗವಾಯಿತ್ತಾಗಿ, ಲಿಂಗವೆಂದೇ ಕಾಂಬುದು. ''೧[ಸ]೧ರ್ಪದಷ್ಟಸ್ಯ ಯದ್ದೇಹಂ । ತದ್ದೇಹ ವಿಷದೇಹಿನಾಂ । ಲಿಂಗದಷ್ಟಸ್ಯ ಯದ್ದೇಹಂ। ತದ್ದೇಹಂ ಲಿಂಗದೇಹವತ್'' ಎಂದುದಾಗಿ, ಸರ್ವಾಂಗ ಲಿಂಗ ಕೂಡಲಚನ್ನಸಂಗನ ಶರಣನು.

೧–೧ ದ (ಮ)

ಇಂತು ಪ್ರಾಣಲಿಂಗಿಸ್ಥಲಾದಿಯಾಗಿ ಅಂಗಲಿಂಗಸ್ಥಲಾಂತ್ಯವಾದೈದು ಸ್ಥಲಂಗಳಿಂ ಕೂಡಿದ ಪ್ರಾಣಲಿಂಗಿಸ್ಥಲದಲ್ಲಿ ಆಚರಿಸಿ ಸರ್ವಾಂಗವು ಅಂಗಲೀಯವಾಗಿ ಬೆರಸಿದ ಮಹಂತನು ಮಹಾಜ್ಞಾನಮುಖದಿಂದಲರಿದಾಚರಿಸಿ ಬೆರಸುವ ಭೇದವೆಂತಿರ್ದುದೆಂದೊಡೆ ಮುಂದೆ ಶರಣಸ್ಥಲವಾದುದು.

ಶರಣಸ್ಥಲ

ವಿವರಣೆ : ಶರಣನು ಜ್ಞಾನಿಯು. ಅವನು ಜ್ಞಾನಮುಖದಿಂದ ಆಚರಿಸುವವನು. ಜಗತ್ತಿನ ಪ್ರೇರಣೆಗೆ ಒಳಗಾಗಿ ಆಚರಿಸುವದಿಲ್ಲ. ಸ್ವತಂತ್ರ ಬುದ್ಧಿಯವನಿರುತ್ತಾನೆ. ಅವನು ಅನುಭವವುಳ್ಳವನು. ಆದ್ದರಿಂದ ತನ್ನ ಕ್ರಿಯೆಗಳನ್ನು ಮಾಡುವಲ್ಲಿ ಸಂಶಯ ರಹಿತನು. ಅವನಲ್ಲಿ ಭೀತಿ ಎಂಬುದಿಲ್ಲ. ಪೂರ್ಣ ಆತ್ಮವಿಶ್ವಾಸಿಯು. ಅವನ ಕ್ರಿಯೆಗಳು ಲಿಂಗಕ್ರಿಯೆಗಳು, ಲಿಂಗದಿಂದ ಬಂದವು. ಆದ್ದರಿಂದ ಅವನಿಗೆ ಕರ್ಮವಿಲ್ಲ. ಅವನು ಪ್ರಪಂಚವನ್ನು ಹೊದ್ದಿಯೂ ಹೊದ್ದನು. ಇವೆಲ್ಲವು ಶರಣನ ಲಕ್ಷಣಗಳು. ಶರಣನಿಗೆ ಜಂಗಮನೆಂತಲೂ ಬೇರೊಂದು ಹೆಸರಿದೆ.

ವಚನಕಾರರು ಈ ಸ್ಥಲದಲ್ಲಿ ಕೇವಲ ವೇಷಧಾರಿ ಜಂಗಮರು ಮಾಡುತ್ತಿರುವ ಹೊಲ್ಲದ ಆಚರಣೆಗಳನ್ನು ಬಹು ಕಠೋರವಾಗಿ ಟೀಕಿಸುವದುಂಟು. ಹೀಗೆ ಟೀಕಿಸಿ ಅವರು ಮಾಡಬೇಕಾದ ಆಚರಣೆಗಳನ್ನು ಇಲ್ಲಿ ಬೋಧಿಸುವದು ಅವರ ಪದ್ಧತಿಯಾಗಿದೆ.

ಶರಣಸ್ಥಲ : ಇದರಲ್ಲಿ ಶರಣನು ಆಚರಿಸತಕ್ಕ ನಡೆಗಳನ್ನು ಸಾಮಾನ್ಯವಾಗಿ ವಿವರಿಸುವದುಂಟು.

ತಾಮಸನಿರಸನಸ್ಥಲ : ''ತನ್ನ ತಾನರಿದೆನೆಂಬ ಅರಿವಿನ ಮುಂದೆ ಇದಿರಿಟ್ಟು ತೋರುವದೇ ತಾಮಸ'' ಎಂದು ತಾಮಸದ ವ್ಯಾಖ್ಯೆ ಇದೆ. ಆದ್ದರಿಂದ ಶರಣನು ಅಹಂಭಾವರಹಿತನಾಗಿ ವಿತರಲ್ಲಿಯೂ ಭಿನ್ನ ಭಾವವನ್ನು ಎಣಿಸದೇ ವರ್ತಿಸಬೇಕು. ಅವನು ಎಲ್ಲರಲ್ಲಿಯೂ ಸಮಭಾವವನ್ನು ಹೊಂದಿರಬೇಕು. ಅವನಲ್ಲಿ ಸಮರಸಾಚರಣೆಯು ಎಡೆಗೊಂಡಿರಬೇಕು. ಈ ರೀತಿಯಾಗಿ ವಿಶ್ವವ್ಯಾಪಕವೃತ್ತಿಯುಳ್ಳವನಾಗಿ ಶರಣನು ಆಚರಿಸುತ್ತಾನೆ.

ನಿರ್ದೇಶಸ್ಥಲ : ಈ ಸ್ಥಲದಲ್ಲಿ ಶರಣನು ನಿಜವನರಿದು ಸಂಶಯರಹಿತನಾಗಿ ವರ್ತಿಸುತ್ತಾನೆ. ಸುಜ್ಞಾನವಾವುದೆಂಬುದನ್ನು ಅವನು ತಿಳಿಯುತ್ತಾನೆ. ಆದರೆ ವೇಷಧಾರಿ ಜಂಗಮರು ಇದನ್ನು ತಿಳಿಯಲಾರರು. ಅವರು ಜ್ಞಾನಹೀನರಾಗಿ ಜನರನ್ನು ನಾನಾ ರೀತಿಯಿಂದ ವಂಚಿಸುತ್ತಾರೆ. ಇವರ ಈ ವೃತ್ತಿಯನ್ನು ವಚನಕಾರರು ಬಹುವಾಗಿ ಖಂಡಿಸುತ್ತ ಶರಣರು ಸರ್ವಾಂಗ ಜ್ಞಾನಮೂರ್ತಿಗಳಾಗಿ ಆಚರಿಸಬೇಕೆಂದು ಇಲ್ಲಿ ಹೇಳುತ್ತಾರೆ.

ಶೀಲಸಂಪಾದನೆ : ಶರಣರು ಮಹಾಜ್ಞಾನಿಗಳಾದ್ದರಿಂದ ಅವರು ಲಿಂಗಾಂಗಿಗಳಿಗೆ ಸಂಬಂಧಪಡದ ಶೀಲ ವ್ರತಾಚಾರಗಳನ್ನು ಆಚರಿಸುವದಿಲ್ಲ. ಹಾಗೆಯೇ ಲಿಂಗಾಂಗಿಗಳು ಮಾಡತಕ್ಕ ಆಚಾರಗಳಲ್ಲಿ ಅನೇಕ ಬಗೆಯ ಅತಿರೇಕಗಳಿದ್ದು ಅವುಗಳನ್ನೂ ಅವರು ಮಾಡುವದಿಲ್ಲ. ಇವುಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಬಹು ವಿಸ್ತಾರವಾಗಿ ನಿರೂಪಿಸುವದುಂಟು. ಈ ತರದ ಕಾರ್ಯಗಳನ್ನು ಶರಣನು ಅವಶ್ಯವಾಗಿ ತ್ಯಜಿಸಬೇಕು.

ಹೀಗೆ ಶರಣನು ನಿಜಜ್ಞಾನವನ್ನು ಹೊಂದಿ ಪರಮಾನಂದದೊಳಗೆ ಸುಖಪಡಬೇಕೆಂದು ಈ ಶರಣಸ್ಥಲದ ಸ್ಥಲಗಳಲ್ಲಿ ಹೇಳಿದೆ.

೧. ಶರಣಸ್ಥಲ

೪೩

(೧) ಕಿಚ್ಚಿನೊಳಗೆ[ನೊಡನೆ] ೧[ಹೋ]೧ರಿದ ಹುಳ್ಳಿಯಂತಾದೆನಯ್ಯ. ಬೆಂದನುಲಿಯ ಸಂದಿಕ್ಕಿ ಮತ್ತೊಂದ ಮಾಡಬಾರದಯ್ಯ. ಗುಹೇಶ್ವರಾ ನಿಮ್ಮ ನಿಲವಿನ ಪರಿ ಇಂತುಟಯ್ಯ.

ಟೀಕು : ಜ್ಞಾನಾಗ್ನಿಯಲ್ಲಿ ಸರ್ವಾಂಗವು ದಗ್ಧವಾದ ಶರಣನು ತನುಗುಣಾದಿಗಳೆಲ್ಲವು ಉರಿದ ದಗ್ಧಪಟನ್ಯಾಯದಂತೆ ಇದ್ದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೪

(೨) ತ್ರಿವಿಧಕ್ಕೆ ರತಿಯಾಗಿ, ತ್ರಿವಿಧದ ಜನಿತವ ತಿಳಿದು, ತ್ರಿವಿಧಕ್ಕೆ ಕಂದೆರೆದು, ತ್ರಿವಿಧ ತ್ರಿವಿಧವನನುಗ್ರಹಿಸಿ, ತ್ರಿವಿಧಪದವ ಮೀರಿ, ತ್ರಿವಿಧ ನಿರ್ಣಯದಲ್ಲಿ ತ್ರಿವಿಧ ನಿಷ್ಪತ್ತಿಯಾಗಿಪ್ಪ ಕೂಡಲಚನ್ನಸಂಗಾ ನಿಮ್ಮ ಶರಣ.

೪೫

(೩) ಶರಣ ದೃಷ್ಟಾದೃಷ್ಟವನರಿಯನು. ಸಾವಯವ ನಿರವಯವನೇನೆಂದು ವಿವರಿಸ. ಶರಣನು ಪ್ರಕೃತಿಗುಣವಿಡಿದು ಮೂರ್ತಿಯಾದ ಉಪಜೀವಿತನಲ್ಲ. ಕೂಡಲ ಚನ್ನಸಂಗನ ಶರಣ ಸಾರಾಯ ಸನ್ಮತನು.

೪೬

(೪) ಶಿವಯೋಗಿ ನಿಭ್ರಾಂತ[ನು]೨ ಶರಣ ಕರ್ಮಕಾಯನಲ್ಲ; ಕಾಲಕಲ್ಪಿತನಲ್ಲ; ಶರಣನು ಸಂಕಲ್ಪ ವಿಕಲ್ಪ ವಿರಹಿತನು. ಅವರವರ ಬೆರಸಿಪ್ಪ. ತನ್ನ ಪರಿ ಬೇರೆ. ಶರಣನು ನಿರಂತರ ಪರಮಸುಖಿ. ಕೂಡಲ ಚನ್ನಸಂಗನ ಶರಣ ಪ್ರಪಂಚಿನೊಳಗಿಪ್ಪ ತನ್ನ ಪರಿ ಬೇರೆ.

೧–೧ ಹು (ಮೂ) ೨–೨ ನೇ (ಮೂ)

೪೩೬

(೫) ಇಷ್ಟಲಿಂಗಕ್ಕೆ ಮಜ್ಜನ, ಪ್ರಾಣಲಿಂಗಕ್ಕೆ ಭೋಜನ, ತೃಪ್ತಿಲಿಂಗಮುಖದಲ್ಲಿ ಪರಿಣಾಮಿಯಯ್ಯಾ. ಕಾಮಿತ ಕಲ್ಪಿತ ಅರ್ಪಿತಭಾವಿಯಲ್ಲ. ಅಲ್ಲಲ್ಲಿಗೆ ಅವಧಾನದ ಆಯತ ನೋಡಯ್ಯ. ಅವಧಾನದ ಮನದ ಕೊನೆಯ ಮೊನೆಯ ಮೇಲಿಪ್ಪ ಸುಯಿಧಾನಿ ಲಿಂಗವನು, ನಿಮ್ಮ ಶರಣನ ಸರ್ವಾಂಗದಲಿ ಕಾಣಬಹುದು ಕೂಡಲ ಚನ್ನಸಂಗಯ್ಯ.

೪೩೭

(೬) ತನುವೇ ನಾಗವತ್ತಿಗೆಯಾದಡೆ ಅರ್ಪಿತವ ಮಾಡಬೇಕು. ತನು ಸಜ್ಜೆಯಾದಡೆ, ಅರ್ಪಿತವಿಲ್ಲ ಕಂಡಯ್ಯ. ತನು ಸಿಂಹಾಸನವಾದಡೆ ಸುಳಿವುದೇ ಭಂಗ. ಪ್ರಾಣಲಿಂಗಸಂಬಂಧಿಯಾದಡೆ ಅವನು ಎರಡು ಮಾಡಿಕೊಂಡು ಭೃತ್ಯಾಚಾರವೆಲ್ಲ ಒಂದೇ ಎಂದು ನುಡಿವ [ದಾ]ಸೋಹದವನಲ್ಲ, ಬಾಹ್ಯಪದಾರ್ಥದ ಲಾಭದವನಲ್ಲ, ಹೋಹ ಪದಾರ್ಥದ ಚೇಗೆಯವನಲ್ಲ, ಪ್ರಪಂಚುವ ಹೊತ್ತುಕೊಂಡು ಬಾರದವನಲ್ಲ, ಕೂಡಲ ಚನ್ನಸಂಗನ ಶರಣನುಪಮಾತೀತ ನೋಡಯ್ಯ.

೪೩೮

(೭) ಹರಿವ ನದಿಗೆ ಮೈಯೆಲ್ಲಾ ಕಾಲು, ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ. ಬೀಸುವ ಗಾಳಿಗೆ ಮೈಯೆಲ್ಲಾ ಮುಖ. ಗುಹೇಶ್ವರಾ ನಿಮ್ಮ ಶರಣಂಗೆ ಸರ್ವಾಂಗ ಲಿಂಗ.

೪೩೯

(೮) ಶಬ್ದವು ಅಶಬ್ದವೂ ಶಬ್ದದಲ್ಲಿಯೇ ಕಾಣಬಹುದು ಕಾಣಿರೇ. ಇದ್ದವರಿದ್ದ ಸ್ಥಲವನೇ ನುಡಿವರು. ಅದಕದು ಸಹಜ. ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ ಕೂಡಲ ಚನ್ನಸಂಗ ನಿಮ್ಮ ಶರಣಂಗೆ.

೪೪೦

(೯) ಕರ್ತೃತ್ವವಿಲ್ಲಾಗಿ ಕರ್ತೃವಿಲ್ಲ, ಕರ್ತೃವಿಲ್ಲಾಗಿ ಜನನವಿಲ್ಲ, ಜನನವಿಲ್ಲಾಗಿ ಮರಣವಿಲ್ಲ, ಮರಣವಿಲ್ಲಾಗಿ ಭೂತಾತ್ಮನ ಚರಿತ್ರದ ಕರಣಾದಿ ಗುಣಂಗಳು ಮುನ್ನವೇ ಇಲ್ಲ, ಹಿಂದಣ ಸ್ಥಿತಿ ಇಲ್ಲ, ಮುಂದಣ ಲಯವಿಲ್ಲ, ಆದಿಮಧ್ಯಾವಸಾನವಿಲ್ಲ, ಬಿಟ್ಟು ಬೇರಿಲ್ಲ, ಬೆರಸಿ ಒಂದಿಲ್ಲ, ಉಪಮಾತೀತ ಕೂಡಲಚನ್ನಸಂಗಾ ನಿಮ್ಮ ಶರಣನು.

ಇಂತು ಶರಣಸ್ಥಲದಲ್ಲಿ ಮಹಾಜ್ಞಾನ ವಿವೇಕದಿಂದ ತನ್ನ ತಾನರಿದ ಶರಣನು ತನ್ನ ತಾನರಿದೆನೆಂಬ ಅರಿವಿನ ಮುಂದೆ ಇದಿರಿಟ್ಟು ತೋರುವ ತಾಮಸಮಂ ನಿರಸನವಂ ಮಾಡಿ ನಿರೂಪಿಸುತ್ತಿರಲು ಮುಂದೆ ತಾಮಸನಿರಸನಸ್ಥಲವಾದುದು.

೨. ತಾಮಸನಿರಸನಸ್ಥಲ

೪೪೧

(೧) ಗುರುಶಿಷ್ಯ ಸಂಬಂಧಕ್ಕೆ ಲಿಂಗವ ಧರಿಸುವರಯ್ಯ. ನಿಮ್ಮ ಬಂಧನಕ್ಕಿಕ್ಕಿ ಅಳುವರಯ್ಯ. ಆನು ಕಂಡು ಮರುಗಿ, ಅಕಟಕಟಾ ಎಂದೆನಲ್ಲಾ. ಕೂಗಿಲ್ಲ, ಬೊಬ್ಬೆ ಇಲ್ಲ, ಹೋದ ಹೊಲಬನರಿಯರು. ದೇವಾ ಗುಹೇಶ್ವರಾ ಬಾಳುದಲೆಯ ಹಿಡಿದೆನು.

ಟೀಕು : ಗುರುಶಿಷ್ಯ ಸಂಬಂಧಕ್ಕೆ ಆವುದು ಕುರುಹು ? ಶಿಷ್ಯನಲ್ಲಿ ಸುಜ್ಞಾನೋದಯವಾಗಿ ಕೋಹಂ ಭಾವವಿಲ್ಲದೆ ಗುರುವಿನಲ್ಲಿ ಪರಿಪೂರ್ಣ ಜ್ಞಾನವೆಡೆಗೊಂಡು ಶಿಷ್ಯೋಹಂಭಾವವಿಲ್ಲದೆ ಅಜ್ಞಾನದಿಂದ ಲಿಂಗಸ್ವಾಯತಸಂಬಂಧವ ಮಾಡಿಸಿಕೊಂಡಿರಲು ಅದು ಲಿಂಗಬಂಧನಕ್ಕಿಕ್ಕಿದಂತೆ ಎಂಬುದೀಗ, ಗುರುಶಿಷ್ಯ ಸಂಬಂಧಕ್ಕೆ ಲಿಂಗವ ಧರಿಸುವರಯ್ಯ, ನಿಮ್ಮ ಬಂಧನಕ್ಕಿಕ್ಕಿ ಅಳುವರಯ್ಯ ಎಂಬ ಶಬ್ದಕ್ಕರ್ಥ. ಈ ನಿರ್ಣಯವ ನಿಜಶರಣನರಿದು ನಿವೃತ್ತಿಯ ಮಾಡಿ ಶಬ್ದಜಾಲಂಗಳ ಕೆಡಿಸಿ ನಿಶ್ಶಬ್ದ ವೇದಿಯಾಗಿ ಸುಜ್ಞಾನಲಿಂಗವನು ಸದ್ಭಾವಹಸ್ತದಲ್ಲಿ ಧರಿಸಿದನೆಂಬುದೀಗ, ನಾನು ಕಂಡು ಮರುಗಿ ಅಕಟಕಟಾ ಎಂದೆನಲ್ಲಾ, ಕೂಗಿಲ್ಲ, ಬೊಬ್ಬೆ ಇಲ್ಲ, ಹೋದ ಹೊಲಬನರಿಯರು. ದೇವಾ ಗುಹೇಶ್ವರಾ ಬಾಳುದಲೆಯ ಹಿಡಿದೆನು ಎಂಬ ಶಬ್ದಕರ್ಥ.

೪೪೨

(೨) ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ ಎಡೆಯಲಾದೊಂದುಡಿಗೆಯನುಟ್ಟು ಸಡಲಿದರೆ ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ ದಿಟವಾಯಿತ್ತು. ಲೌಕಿಕದಲ್ಲಿ ಹಡೆದ ಗುರುಕರುಣದೊಡನೆ ಹುಟ್ಟಿದ ನೇಮ ಬಿಡದಿರೆಲವೋ. ಬಿಟ್ಟರೆ ಕರಕಷ್ಟ. ಕೂಡಲ ಸಂಗಮದೇವ ನಡಸಿ ಕೆಡಹುವ ನಾಯಕನರಕದಲ್ಲಿ.

೪೪೩

(೩) ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಿದಡೇನಪ್ಪುದೆಲವೋ. ಅಂಧಕನ ಕೈಯ ಅಂಧಕ ಹಿಡಿದಂತೆ ಮುಂದೇನಪ್ಪುದು ಹೇಳೆಲೋ ಮರುಳೇ ಬಹುಮಾತಿನ ರಂಜನೆಯನಾಡದಿರು. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಹುಸಿಯ ಹಸರದವನಲ್ಲ.

೪೪೪

(೪) ತನ್ನ ಮನೆಯ ಹೊಗದ ಗುರುವನರಸುವಾತನು ಶಿಷ್ಯನಲ್ಲ, ತಾ ಹೊಗದ ಮನೆಯಲುಪದೇಶವ ಮಾಡುವಾತ ಗುರುವಲ್ಲ. ಲಿಂಗವ ಮಾರಿಕೊಂಡುಂಬ ಗುರು ಶಿವದ್ರೋಹಿ. ಅಂಗವ ಮಾರಿಕೊಂಡುಂಬ ಶಿಷ್ಯ ಗುರುದ್ರೋಹಿ. ಇವರಿಬ್ಬರು ಭಕ್ತರೆಂಬುವರ ಕೂಡಲಚನ್ನಸಂಗಯ್ಯ ನಾಯಕ ನರಕದಲ್ಲಿಕ್ಕುವ.

೪೪೫

(೫) ತನ್ನ ಶಿಷ್ಯ ತನ್ನ ಮಗನೆಂಬುದು ತಪ್ಪದಲಾ. ಏಕೆ ? ಆತನ ಧನಕ್ಕೆ ತಂದೆಯಾದನಲ್ಲದೆ ಆತನ ಮನಕ್ಕೆ ತಂದೆಯಾದನೆ ? ಏಕೆ ? ಆತನ ಮನವ ನರಿಯನಾಗಿ ಆತನ ಧನಕ್ಕೆ ತಂದೆಯಾದನು. ತನ್ನಲ್ಲಿದ್ದ ಭಕ್ತಿಯ ಮಾರಿಕೊಂಡುಂಬ ವರು ನಿಮ್ಮ ನಿಜಭಕ್ತರಲ್ಲಯ್ಯ ಚನ್ನಮಲ್ಲಿಕಾರ್ಜುನಾ.

೪೪೬

(೬) ಶಿಖಿಯನೇ ಕಟ್ಟಿ ಮಾಹೇಶ್ವರಿಕೆಯನೆ ಕೊಡುವರೆ ? ಆತನ ವೃತ್ತಿಗಳ ತಿಳಿಯಬೇಕಯ್ಯ. ಜಾತಿಸೂತಕವನತಿಗಳೆದಾತಂಗೆ ದೀಕ್ಷೆಯ ಕೊಟ್ಟಡೆ ಸುಸರ ನೋಡಾ. ಈಸುವನತಿಗಳೆಯದೆ ಉಪದೇಶವ ಮಾಡಿದ ಆಚಾರ್ಯಂಗೆ ಮಾರಿ ಎಂದಾತನಂಬಿಗಚೌಡಯ್ಯ.

೪೪೭

(೭) ಹಲವು ಕಾಲ ಹಂಸೆಯ ಸಂಗದಲ್ಲಿರ್ದಡೇನು ? ಬಕನು ಶುಚಿಯಾಗ ಬಲ್ಲುದೆ ? ಗಂಗಾನದಿಯೊಳಗಿರ್ದಡೇನು ? ಪಾಷಾಣ ಮೃದುವಾಗಬಲ್ಲುದೆ ? ಕಲ್ಪತರುವಿನ ಸನ್ನಿಧಿಯಲ್ಲಿರ್ದಡೇನು ? ಒಣ ಕೊರಡು ಕೊನರಿ ಫಲವಾಗಬಲ್ಲುದೆ ? ಕಾಶೀಕ್ಷೇತ್ರದಲ್ಲಿ ಒಂದು ಶುನಕನಿರ್ದಡೇನು ? ಪಂಚಾಮೃತಕೆ ಸಲುವುದೇ ಅದರ ಹಾಲು ? ತೀರ್ಥದೊಳಗೊಂದು ಗಾರ್ದಭನಿರ್ದಡೇನು ? ಅದು ಕಾರಣಿಕ ನಾಗಬಲ್ಲುದೆ ? ಕಂಡುಗ ಹಾಲಿನೊಳಗೊಂದು ಇದ್ದಲಿ ಇರ್ದಡೇನು? [1]ಬಿಳಿದಾಗ[1]ಬಲ್ಲುದೇ ? ಇದು ಕಾರಣ ನಮ್ಮ ಕೂಡಲಚನ್ನಸಂಗನ ಶರಣರ ಸನ್ನಿಧಿಯ ಲ್ಲಿರ್ದಡೇನು ? ಅಸಜ್ಜನನು ಸದ್ಭಕ್ತನಾಗಬಲ್ಲನೆ ?

ಇಂತು ಶರಣನು ತನಗಿದಿರಿಟ್ಟು ತೋರುವ ತಾಮಸನಿರಸನವಂ ಮಾಡಿ ಸುಜ್ಞಾನ ಭೇದಮಂ ನಿರ್ದೇಶಿಸಿ ನೆಲೆಗೊಳಿಸಿ ನಿರೂಪಿಸುತ್ತಿರಲು ಮುಂದೆ ನಿರ್ದೇಶಸ್ಥಲವಾದುದು.

೩. ನಿರ್ದೇಶಸ್ಥಲ

೪೪೮

(೧) ತನುಬತ್ತಲೆ ಇದ್ದರೇನು, ವಳುನ ಶುಚಿಯಾಗದನ್ನಕ್ಕರ ? ಮಂಡೆ ಬೋಳಾದಡೇನು ಭಾವ ಬಯಲಾಗದನ್ನಕ್ಕರ ? ಭಸ್ಮವ ಹೂಸಿದಡೇನು, ಕರಣಾದಿಗುಣಂಗಳನೊತ್ತಿ ಸುಡದನ್ನಕ್ಕರ ? ಇಂತೀ ಆಶೆಯ ವೇಷದ ಭಾಷೆಗೆ ಗುಹೇಶ್ವರಾ ನೀ ಸಾಕ್ಷಿಯಾಗಿ ಛೀ ಎಂದು ಕಳೆವೆನು.

ಟೀಕು : ಅಂಗವಿಕಾರ ಮನವಿಕಾರ ಕರಣವಿಕಾರಂಗಳೆಲ್ಲ[1][ವ][1] ಹಿಂಗಿಸಿ, ಅಂಗದಲ್ಲಿ ಅವಿರಳಜ್ಞಾನಿಯಾಗಿ ಇದ್ದಾತನೇ ಅಚ್ಚಶರಣ. ಇದನರಿಯದೆ ಆವ ವೇಷ

೧–೧ ವು (ಮೂ)

ಲಾಂಛನವ ಧರಿಸಿದಡೆಯೂ ಆತ ಅಜ್ಞಾನಿ ಎಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೪೯

(೮) ತಪವೆಂಬುದು ಬಂಧನ, ನೇಮವೆಂಬುದು ತಗಹು, ಶೀಲವೆಂಬುದು ಸೂತಕ. ಭಾಷೆ ಎಂಬುದು ಪ್ರಾಣಘಾತಕ. ಇಂತೀ ಚತುರ್ವಿಧದೊಳಗಿಲ್ಲ ಕೂಡಲ ಚನ್ನಸಂಗಯ್ಯನ ಲಿಂಗೈಕ್ಯವು.

೪೫೦

(೯) ಕಾಯಕಕಾರದೆ ಮೈಸೋಂಬತನದಿಂದ ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯ. ಉಡಲು ಸೀರೆಯ ಗಳಿಸಲಾರದೆ ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯ. ಮೀಯಲೆಣ್ಣೆಯ ಗಳಿಸಲಾರದೆ ಮಂಡೆ ಬೋಳಾಗಿಪ್ಪರಯ್ಯ ! ದಿಟದಿಂದ ಬಿಡಿಸಲರಿಯದೆ ನಿಸ್ಸಂಸಾರದ [1][ಸೆಟೆ][1]ಯನವಧರಿಸಿಕೊಂಡಿಪ್ಪನವರಿಗೆ ನಾಂಜುವೆನಯ್ಯ ಸಕಳೇಶ್ವರಾ.

೪೫೧

(೧೦) ಸಚರಾಚರ ಚತುರ್ವಳಯದೊಳಗೆ ತಿರುಗುವ ವೇಷಧಾರಿಯನೆನಗೆ ತೋರದಿರಯ್ಯ. ಆಸೆಯ ಧಿಕ್ಕರಿಸಿ ನಿರಾಸೆಯ ಪತಿಕರಿಸಿದ ವೇಷವ ಕಂಡಡೆ ನೀ ಸರಿ ಎಂಬೆ ಕೂಡಲಚನ್ನಸಂಗಯ್ಯ.

೪೫೨

(೧೧) ಘಟ ಸಂಸ್ಕಾರದಲ್ಲಿ ಪಟಲ ಹರಿವುದೆ, ಜೀವ ಸಂಸ್ಕಾರವಿಲ್ಲದನ್ನಕ್ಕ ? ವೇಷಧಾರಿ, ತನ್ನಲ್ಲಿ ಗ್ರಾಸವಹುದಲ್ಲದೆ, ಜ್ಞಾನ ಸಂಸ್ಕಾರವಿಲ್ಲದನ್ನಕ್ಕ ಭವವೆಂತು ಹರಿವುದು ? ಅಂಗಭವಿಯ ಲಿಂಗಭವಿಯ ಕಳೆದುಳಿದಲ್ಲದೆ ಕೂಡಲ ಚನ್ನಸಂಗಯ್ಯನ ಹೊದ್ದಬಾರದು.

೪೫೩

(೧೨) ಧಾತುಗೆಟ್ಟು ಬೋಳಾದಡೇನು, ನಿಜವನೈದಬಲ್ಲುದೇ ಆಯ್ಯ ? ವಿಕೃತ ವೇಷವ ತೋರಿ ಉದರವ ಹೊರೆವ ವೇಷಕ್ಕೆಂತಯ್ಯ ? ಉಪಾಧಿವಿಡಿದು ಮಾಡುವ ಷೋಡಶ ಕ್ರೀ ಸಕಳೇಶ್ವರಂಗೆ ದೂರವಯ್ಯ.

೪೫೪

(೧೩) ಅರ್ಥಸನ್ಯಾಸಿಯಾದಡೇನಯ್ಯ ? ಆವಂಗದಿಂ ಬಂದಡೆಯೂ ಕೊಳದಿರಬೇಕು. ರುಚಿಸನ್ಯಾಸಿಯಾದಡೇನಯ್ಯ ? ಚಿಪ್ಪೆಯ ಕೊನೆಯಲ್ಲಿ ಮಧುರವನರಿಯದಂತಿರಬೇಕು. ಸ್ತ್ರೀ ಸನ್ಯಾಸಿಯಾದಡೇನಯ್ಯ ? ಜಾಗ್ರತ್ ಸ್ವಪ್ನ ಸುಷುಪ್ತಿ

೧–೧ ಕಠೆ (ಮೂ)

ಯಲ್ಲಿ ತಟ್ಟಿಲ್ಲದಿರಬೇಕು. ದಿಗಂಬರಿಯಾದಡೇನಯ್ಯ ? ಮನಬತ್ತಲೆಇರಬೇಕು. ಇಂತೀ ಚತುರ್ವಿಧದ ಹೊಲಬನರಿಯದೆ ವೃಥಾ ಕೆಟ್ಟರು ಕಾಣಾ ಚನ್ನ ಮಲ್ಲಿಕಾರ್ಜುನಾ.

೪೫೫

(೮) ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆ ಎಂಬುದೇ ಯೋಗದಾಗು ನೋಡಯ್ಯ. ಈಸುವನರಿಯದೆ ಲೋಚು ಬೋಳಾದರೆ ಮಹಾಲಿಂಗ ಕಲ್ಲೇಶ್ವರದೇವರು ನಗುವರು.

೪೫೬

(೯) ಅಕ್ಷರಪಂಚಕದ ನಿಕ್ಷೇಪವನರಿದಡೆ ಬೋಳು. ಕುಕ್ಷೆಯೊಳಗೈವತ್ತೆರಡಕ್ಷರದ ಲಕ್ಷಣವನರಿದಡೆ ಬೋಳು. ಅಕ್ಷಯನಿಧಿ ಕೂಡಲ ಚನ್ನಸಂಗಯ್ಯ ಭವಕ್ಕೆ ಬಾರದುದೇ ಬೋಳು.

೪೫೭

(೧೦) ಆಚಾರಖರ್ಪರ ಸೊಮ್ಮ ತೋರಿ ಬೇಡುವುದು. ವಿಚಾರ ಖರ್ಪರ ಲಾಂಛನವ ತೋರಿ ಬೇಡುವುದು. ಅವಿಚಾರಖರ್ಪರ ಸೊಮ್ಮು ಸಂಬಂಧ ನೇಮ ಶೀಲವ ಮೀರಿ ಬೇಡುವುದಾಗಿ ನಿರುಪಾಧಿಕವಯ್ಯ ಕೂಡಲಚನ್ನಸಂಗಯ್ಯ.

೪೫೮

(೧೧) ತಾಳು ಬೋಳು ಕಟ್ಟಿಗೆ ಖರ್ಪರವೆಂದೆಂಬರು. ತಾಳು ಬೋಳು ಕಟ್ಟಿಗೆ ಖರ್ಪರವಾವುದೆಂದರಿಯರು. ತಾಳು, ತನುಗುಣಾದಿಗಳ ಪ್ರಾಣಗುಣಾದಿಗಳ ತಾಳಿಕೊಂಡಿರಬಲ್ಲಡೆ ತಾಳು. ಬೋಳು, ಭ್ರಮೆ ಇಲ್ಲದೆ ಬಂಧನವಿಲ್ಲದೆ ಸಂಸಾರ ವಿಷಯಂಗಳ ಬೋಳಿಸಿ, ತನ್ನಿಚ್ಛೆಯಲ್ಲಿ ಇರಿಸಿಕೊಂಡಿರಬಲ್ಲಡೆ ಬೋಳು. ಕಟ್ಟಿಗೆ, ಕರಣಾದಿ ಗುಣಂಗಳ ನಿಲಿಸಿಕೊಂಡಿರಬಲ್ಲಡೆ ಕಟ್ಟಿಗೆ. ಖರ್ಪರವನರಿದಿರಬಲ್ಲಡೆ ಖರ್ಪರ. ಇಂತೀ ಚತುರ್ವಿಧವನರಿದವರ ಪರಮಾರಾಧ್ಯರೆಂಬೆ ಕಾಣಾ ಗುಹೇಶ್ವರಾ.

ಇಂತು ಸುಜ್ಞಾನವಂ ನಿರ್ದೇಶಮಾಡಿ ನಿಜವನರಿದ ಸರ್ವಾಂಗ ಜ್ಞಾನ ಮೂರ್ತಿಯಾದ ಶರಣಂಗೆ ಮಹಾಜ್ಞಾನವೇ ತಂತ್ರವಲ್ಲದೆ ಉಳಿದ ದುಶ್ಶೀಲ ವ್ರತಂಗಳು ಇಲ್ಲವೆಂದು ಪ್ರತಿಷ್ಠಿಸಿ ತೋರುತ್ತಿರಲು ಮುಂದೆ ಶೀಲಸಂಪಾದನೆ ಸ್ಥಲವಾದುದು.

೪. ಶೀಲಸಂಪಾದನೆಯಸ್ಥಲ

೪೫೯

(೧) ನದಿಯ ಜಲ, ಕೂಪಜಲ, ತಟಾಕ ಜಲವೆಂದು ನುಡಿವರು. ಹಿರಿದು ಕಿರಿದಾವುದೆಂದು ಅರಿಯರು. ಬೇರೆ ಮತ್ತೊಂದು ಭಾಷೆಯ ವ್ರತ ನೇಮಂಗಳ ಹಿಡಿವ ಶೀಲಸಂಬಂಧಿಗಳು ಜಾತ್ಯಂಧಕರು ನಿಮ್ಮನೆತ್ತಬಲ್ಲರು ಗುಹೇಶ್ವರಾ ?

ಟೀಕು : ಲಿಂಗಸಂಬಂಧ ಸಕೀಲವನರಿದು ನಿಜತತ್ವವೇದಿಗಳಹ ಬುದ್ಧಿಯನರಿಯದೆ ಸೂತಕ ಶೀಲವನೆ ಪ್ರಾಣವ ಮಾಡಿಕೊಂಡು ಇಪ್ಪವರೆಲ್ಲರು ಅಜ್ಞಾನಿಗಳೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೬೦

(೨) ಆಶೆ ಎಂಬ ಕೂಸನೆತ್ತಿ ರೋಷವೆಂಬ ತಾಯ ಬಂದು ನಿಂದಿಪ್ಪಳು ನೋಡಾ. ಇಂತಿವೆರಡಿಲ್ಲದೆ, ಕೂಸನೆತ್ತಬಲ್ಲಡೆ, ಅವ ಅಚ್ಚಶೀಲವಂತನೆಂಬೆ ಕಾಣಾ ಗುಹೇಶ್ವರಾ.

೪೬೧

(೩) ಸುಖವನರಿಯದ ಕಾರಣ ಹೆಂಗಸು ಸೂಳೆಯಾದಳು. ಲಿಂಗವನರಿಯದ ಕಾರಣ ಭಕ್ತ ಶೀಲವಂತನಾದ. ಈ ಉಭಯ ಕುಳಸ್ಥಲದರಿವು ನಿಷ್ಪತ್ತಿಯಾದನ್ನಕ್ಕ ಕೂಡಲ ಚನ್ನಸಂಗಮದೇವನೆಂತೊಲಿವನು ?

೪೬೨

(೪) ಲಿಂಗವಂತನ ಲಿಂಗವೆಂಬುದೇ ಶೀಲ. ಲಿಂಗವಂತನ ರಾಣಿವಾಸವ ಲಿಂಗದ ರಾಣಿವಾಸವೆಂಬುದೇ ಶೀಲ. ಲಿಂಗವಂತನ ಅರ್ಥ ಪ್ರಾಣಕ್ಕೆ ತಪ್ಪದಿರ್ಪುದೇ ಶೀಲ. ಲಿಂಗವಂತರ ಪಾದೋದಕ ಪ್ರಸಾದ ಸೇವನೆಯ ಮಾಡುವದೇ ಶೀಲ. ಇಂತಪ್ಪ ಸುಶೀಲವೇ ಶೀಲ, ಉಳಿದ ದುಃಶೀಲಕ್ಕೆ ಮೆಚ್ಚುವನೇ ನಮ್ಮ ಕೂಡಲ ಚನ್ನಸಂಗಯ್ಯ ?

೪೬೩

(೫) ಅಗ್ಗವಣಿ ಮೀಸಲಾಗಿರಬೇಕೆಂಬುದು ಶೀಲವೆ ? ಪುಷ್ಪ ಮೀಸಲಾಗಿರಬೇಕೆಂಬುದು ಶೀಲವೆ ? ಓಗರ ಮೀಸಲಾಗಿರಬೇಕೆಂಬುದು ಶೀಲವೆ ? [೧]ಅವು ಶೀಲವಲ್ಲ ಕಾಣಿರಯ್ಯ. ಪಂಚೇಂದ್ರಿಯ ಅರಿಷಡ್ವರ್ಗ ಸಪ್ತಧಾತು ಅಷ್ಟಮದಂಗಳ ತಡೆಯಬಲ್ಲಡೆ ಕೂಡಲ ಚನ್ನಸಂಗಯ್ಯನಲ್ಲಿ ಅದೇ ಅಚ್ಚ ಶೀಲ.

೪೬೪

(೬) ಜಲನಿಧಿತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆರೆವರೆಲ್ಲ ಶೀಲವಂತರೆ ? [ಭವಿಪಾಕವನೊಲ್ಲೆನೆಂದು ಭುಂಜಿಸುವ ಉದರ ಪೋಷಕರೆಲ್ಲ ಶೀಲವಂತರೆ ?] ಅವರಲ್ಲ ನಿಲ್ಲು ಮಾಣು. ಅಶನವರತು ವ್ಯಸನ ಬೆಂದು ವ್ಯಾಪ್ತಿಗ[ಳು ಅಲ್ಲಿಯೇ']೨ ತಲ್ಲೀಯವಾಗಿ, ಅಷ್ಟಮದ ಬೆಂದು ನಷ್ಟವಾಗಿ, ತನುಗುಣ ಸಮಾಧಾನವಾದಡೆ ಕೂಡಲ ಚನ್ನಸಂಗಯ್ಯನಲ್ಲಿ ಅಚ್ಚ ಶೀಲವಂತರೆಂಬೆ.

---

೧ + ಭವಿಪಾಕವನೊಲ್ಲೆವೆಂದು ಭುಂಜಿಸುವ ಉದರ ಪೋಷಕರೆಲ್ಲ ಶೀಲವಂತರೆ ? ಅವರಲ್ಲ ನಿಲ್ಲುಮಾಣು. ಅಶನವರತು, ವ್ಯಸನಬೆಂದು ವ್ಯಾಪ್ತಿಗಳಲ್ಲಿ ತಲ್ಲೀಯವಾಗಿ ಅಷ್ಟ (ಮೂ)

೨–೨ ಳಲ್ಲಿ (ಮೂ)

೪೬೫

(೭) ಎಂಜಲ ಮಾತ ನುಡಿವ ಜಗದ ಜಂಗುಳಿಗಳೆಲ್ಲ ಶೀಲವಂತರೆ? ಭಿನ್ನ ರುಚಿಗಳಿಗೆರಗದೆ ಕಾಮನ ಬೆಂಬಳಿವಿಡಿಯದೆ ಮಕರ ಶೃಂಗಾರವ ಮಾಡದೆ ಅಂಗನೆಯರ ಸಂಗ ತೊರೆದಡೆ, ಶೀಲವಂತರೆಂಬೆನು. ಲೋಕದ ನಚ್ಚು ಮೆಚ್ಚು ಬಿಟ್ಟು ನಿಶ್ಚಿಂತನಾದರೆ ಮೆಚ್ಚುವನಯ್ಯ ನಮ್ಮ ಸಕಳೇಶ್ವರ.

೪೬೬

(೮) ಅರ್ಚನೆ ಪೂಜನೆ ನೇಮವಲ್ಲ, ಮಂತ್ರ ತಂತ್ರ ನೇಮವಲ್ಲ, ಧೂಪ ದೀಪಾರತಿ ನೇಮವಲ್ಲ, ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇನೇಮ. ಶಂಭುಜಕ್ಕೇಶ್ವರದೇವರಲ್ಲಿ ಇದು ಕಾರಣ ಇದು ನಿತ್ಯನೇಮ.

೪೬೭

(೯) ಶೀಲಶೀಲವೆಂದೇನೊ ? ಮಾಡಿದ ಮನೆ ಹೂಡಿದ ಒಲೆ, ಅಟ್ಟುಂಬ ಮಡಿಕೆ, ಕಟ್ಟಿದ ಕೆರೆ, ಬಿತ್ತಿ ಬೆಳೆದ ಹೊಲಕ್ಕೆ ಶೀಲವಲ್ಲದೆ, ತನ್ನ ಮನಕ್ಕೆ ಶೀಲವಿಲ್ಲ. ಶೀಲವಾವುದೆಂದಡೆ ಲಿಂಗ ಬಂದು ಮನವನಿಂಬುಗೊಂಬುದೇ ಶೀಲ. ಜಂಗಮ ಬಂದು ಧನವನಿಂಬುಗೊಂಬುದೇ ಶೀಲ. ಪ್ರಸಾದ ಬಂದು ತನುವನಿಂಬು ಗೊಂಬುದೇ ಶೀಲ. ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆ. ಉಳಿದ ದುಃಶೀಲರ ಕಂಡರೆ ಮೆಚ್ಚುವನೆ ನಮ್ಮ ಕೂಡಲಚನ್ನಸಂಗಯ್ಯ ?

೪೬೮

(೧೦) ಶೀಲವಂತನಾದರೆ ತಾ ಸವೆದು ಶೀಲವ ಮಾಡಬೇಕಲ್ಲದೆ, ತಾನಿದ್ದೆಡೆಯಲ್ಲಿ ಸುಳಿದು ಮಾಡುವ ಶೀಲ ಕೊಟ್ಟು ಪೂಜಿಸುವ ಕೈಕೂಲಿತನವಿಲ್ಲ. ಪೂಜೆಯ ಫಲ ಕೊಡವಾಲ ಕರೆವ ಸುರಭಿಯಂತೆ. ಅಟ್ಟಿದರಟ್ಟುವ, ಬೇಡಿ ಮರುಗುವ ದಾಸಿಯ ಪಥದಂತೆ ತನ್ನುದರನಿಮಿತ್ತವಿಡಿದು ಶೀಲಬೇಕೆಂಬ ದುಶ್ಶೀಲರ ಮೆಚ್ಚುವನೇ ಸಕಳೇಶ್ವರನು ?

೪೬೯

(೧೧) ಶೀಲವಂತರು [ಶೀಲವಂತರು] ಎಂದೆಂಬರು. ನಾವಿದನರಿಯೆವಯ್ಯ. ಅಂಗನೆಯರ ಅಧರಪಾನ ತಮ್ಮುದರವ ಹೊಗುವಾಗ ಶೀಲವೆಲ್ಲಿಯದೊ ? [೧]ಈಷಣ ತ್ರಯವೆಂಬ ಸೊಣಗ ಬೆಂಬತ್ತಿ ಬರುತ್ತಿರಲು ಶೀಲವೆಲ್ಲಿಯದೋ ? ಚಿತ್ತದ ಕಳವಳವು ಸಮನಿಸಿ ಮನವು ಮಹದಲ್ಲಿ ನೆಲೆಗೊಂಡಡೆ ಶೀಲ. [ಪರಮ]ಪರಿಣಾಮ ನೆಲೆ ಗೊಂಡಡೆ [೨][ಶೀಲ][೨]. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಶೀಲವಂತರ ಪೂರ್ವ.

೧+ ಇದು ಬಾಲರಾಳಿಯಲ್ಲದೆ (ಮೂ) ೨–೨ ಸೀಮೆ (ಮೂ)

೪೭೦

(೧೨) ಶೀಲ ಶೀಲವೆಂದು ಗರ್ವಿಸಿ ಕೃತಕದಲ್ಲಿ ನುಡಿವ ಉದ್ದೇಶಿಪ್ರಾಣಿಗಳೆಲ್ಲರು ಅನಂತ ಶೀಲರು. ಹೂಬಾವಿ ಮಠಕ್ಕೆ ಸೀಮೆಯ ಮಾಡುವುದು ಶೀಲವಲ್ಲ, ತನ್ನ ಮನಕ್ಕೆ ಸೀಮೆಯ ಮಾಡುವುದು ಶೀಲ. ಹುಸಿ ಕಳವು ದುಃಶೀಲವಲ್ಲದೆ ಭಕ್ತರ ಕಳವುದು ಶೀಲವೆ ? ಲಿಂಗಪ್ರಾಣವ ಮಾಡುವುದು ಶೀಲವಲ್ಲದೆ ಪ್ರಾಣಲಿಂಗವ ಮಾಡುವುದು ಶೀಲವೆ ? ಇಂತಿವೆಲ್ಲ ಶೀಲರು ದುಃಶೀಲರು. ಸಕಳೇಶ್ವರದೇವಾ ನಾನೇನೆಂದರಿಯೆ; ನೀನಿರಿಸಿದಂತಿಪ್ಪೆ.

೪೭೧

(೧೩) ಹೊನ್ನು ಭಕ್ತನೆಂಬೆನೆ ? ಹೊನ್ನಿನೊಳಗಣ ಮುದ್ರೆಭವಿ. ಹೆಣ್ಣು ಭಕ್ತನೆಂಬೆನೆ ? ಹೆಣ್ಣಿನೊಳಗಣ ವಿರಹವು ಭವಿ. ಮಣ್ಣು ಭಕ್ತನೆಂಬೆನೆ ? ಮಣ್ಣಿನೊಳಗಣ ಬೆಳಸು ತಾ ಭವಿ. ಇಂತೀ ತ್ರಿವಿಧದೊಳಗಣ ಭವಿಯ ಕಳೆದು ಪ್ರಸಾದವ ಮಾಡಿಕೊಳಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಇಂತಹ ಶೀಲವಂತರಪೂರ್ವವೆಂಬೆ.

೪೭೨

(೧೪) ಶೀಲವೆಂದೇನೋ ಪ್ರಪಂಚು ನಾಸ್ತಿಯಾಗದನ್ನಕ್ಕ ? ಸೀಮೆಯೆಂದೇನೋ ಪಂಚೇಂದ್ರಿಯ ವಿರಹಿತವಾಗದನ್ನಕ್ಕ ? ಶೀಲಕ್ಕೆ ಭವಂ ನಾಸ್ತಿ ಸೀಮೆಗೆ ಭವಂ ನಾಸ್ತಿ, ಇದು ಕಾರಣ ಕೂಡಲ ಚನ್ನಸಂಗಯ್ಯ ನಿಮ್ಮ ಶೀಲವಂತರಪೂರ್ವ.

೪೭೩

(೧೫) ಶೀಲವಂತರು ಶೀಲವಂತರೆಂದೆಂಬರಿ. ಶೀಲದ ಹೊಲಬನರಿಯದ ಭ್ರಮಿತ ಪ್ರಾಣಿಗಳು ನೀವು ಕೇಳಿ ಭೋ. ಕಾಮವೆಂಬುದೊಂದು ಪಾಪಿ. ಮರ ಹೆಂಬುದೊಂದು ದ್ರೋಹಿ. ಮತ್ಸರವೆಂಬುದೊಂದು ಹೊಲೆಯ. ಕ್ರೋಧವೆಂಬುದೊಂದು ಕೈಸೂನೆಗಾರ. ಇಂತಿವನರಿದು ಮರೆದು ಹರವಸಂಬೋಗಿ ಹೊಯಿ ಹೊಡೆದಂತಿರ್ದಡೆ ಕೂಡಲ ಚನ್ನಸಂಗಯ್ಯ ಅವರ ಶೀಲವಂತರೆಂಬೆ.*

ಇಂತು ಶರಣಾದಿ ಶೀಲಸಂಪಾದನಾಂತ್ಯಮಾದ ನಾಲ್ಕು ಸ್ಥಲಂಗಳಲ್ಲಿ ಮಹಾಜ್ಞಾನ ವಿವೇಕದಿಂ ಸರ್ವ ಸಂಶಯ ನಿವೃತ್ತಿಯಂ ಮಾಡಿ ನಿಜವನರಿದು ಪರಮಾನಂದ ಸುಖಿಯಾದ ಮಹಂತನು ಮುಂದೆ ತನ್ನರಿವರತು ಮರಹು ನಷ್ಟವಾಗಿ ಮಹಾಲಿಂಗದಲ್ಲೈಕ್ಯವಾದ ಭೇದವೆಂತಿರ್ದುದೆಂದಡೆ ಮುಂದೆ ಐಕ್ಯಸ್ಥಲವಾದುದು.

ಐಕ್ಯಸ್ಥಲ

ವಿವರಣೆ : ಹಿಂದಿನ ಸ್ಥಲಗಳಲ್ಲಿ ಹೇಳಿದ ಕ್ರಿಯೆಗಳ ಪರಿಣಾಮಗಳು ಈ ಸ್ಥಲದಲ್ಲಿ ಪರಸ್ಪರ ಸಾಮರಸ್ಯವನ್ನು ಹೊಂದುವವು. ಆಗ ಅವು ಅವ್ಯಕ್ತಸ್ವರೂಪವನ್ನು

---

* ಇದರ ಮುಂದಿನ ವಚನ ''ಆಸೆ ಎಂಬ ಕೂಸನೆತ್ತಲು'' ಎಂಬುದು ಇದೇ ಭಾಗದಲ್ಲಿ ಪುನರುಕ್ತವಾಗಿರುವುದರಿಂದ ಕೈಬಿಡಲಾಗಿದೆ (ಸಂ)

ಹೊಂದುವವು. ಆದರೂ ಇದು ಶೂನ್ಯಸ್ಥಿತಿಯಲ್ಲ. ಅವುಗಳ ಅವಶ್ಯಕತೆಯು ಉಂಟಾದಾಗ್ಗೆ ಅವು ಪ್ರಕಟವಾಗುವವು. ಇದು ಅರಿವು ಅರತಸ್ಥಿತಿಯು ಎಂದು ಹೇಳಲ್ಪಡುತ್ತದೆ. ಹಾಗೆಯೇ ಮರಹು ಎಂಬುದೂ ಇಲ್ಲಿ ನಷ್ಟವಾಗಿರುತ್ತದೆ. ಅದರ ಬದಲು ಪೂರ್ಣಜ್ಞಾನವು ಉಂಟಾಗಿರುತ್ತದೆ. ಈ ಜ್ಞಾನವು ಈ ಸ್ಥಲದಲ್ಲಿ ಮೈದೋರದ ಸ್ಥಿತಿಯಲ್ಲಿರುತ್ತಿದ್ದರೂ ಅದು ಬೇಕಾದಾಗ ಪ್ರಕಟಕ್ಕೆ ಬರಬಹುದಾಗಿದೆ.

ಐಕ್ಯಸ್ಥಲ : ಈ ಸ್ಥಲದಲ್ಲಿ ಐಕ್ಯನಲ್ಲಿರುವ ಗುಣಗಳ ಸಾಮಾನ್ಯ ವರ್ಣನೆ ಇರುತ್ತದೆ.

ಸರ್ವಾಚಾರಸಂಪತ್ತುಸ್ಥಲ : ಷಟ್‌ಸ್ಥಲಗಳೆಲ್ಲವೂ ಈ ಸರ್ವಾಚಾರದಲ್ಲಿ ಅಡಕವಾಗಿವೆ. ಈ ಸರ್ವಾಚಾರವು ಐಕ್ಯಸ್ಥಿತಿಯಲ್ಲಿರುವವನ ಮುಖ್ಯ ಲಕ್ಷಣವಾಗಿರುತ್ತದೆ. ಈ ಎಲ್ಲ ಸ್ಥಲಗಳಲ್ಲಿ ಪರಸ್ಪರತೆ ಇರಬೇಕು, ಸಹಕಾರವು ಬೇಕು. ಇದು ಸರ್ವಾಚಾರ ಸಂಪತ್ತುಸ್ಥಲದ ಮೂಲಕವಾಗಿಯೇ ಉಂಟಾಗುತ್ತದೆ.

ಏಕಭಾಜನಸ್ಥಲ : ಐಕ್ಯನಿಗೆ ಮಹಾಲಿಂಗವೇ ಆಶ್ರಯವು. ಮಹಾಲಿಂಗಕ್ಕೂ ಐಕ್ಯನೇ ಆಶ್ರಯ. ಹೀಗೆ ಇವುಗಳು ಪರಸ್ಪರ ಕೂಡಿಕೊಂಡಿರುತ್ತವೆ. ಈ ಕೂಡು ವಿಕೆಯೇ ಏಕಭಾಜನವೆನಿಸುತ್ತದೆ.

ಸಹಭೋಜನ[ಸ್ಥಲ] : ಮಹಾಲಿಂಗದಲ್ಲಿ ಹೀಗೆ ಸಮರಸ ಭಾವವನ್ನು ಉಂಟು ಮಾಡಿಕೊಂಡು ಅದರ ಪರಮಾನಂದ ಸುಖದಲ್ಲಿ ಲೋಲುಪನಾಗಿರಬೇಕು. ಇದೇ ಸಹಭೋಜನವು.

ಈ ಪ್ರಕಾರ ಐಕ್ಯ ಸ್ಥಲದಲ್ಲಿ ಹಿಂದಿನ ಸ್ಥಲಗಳ ಪರಿಣಾಮಗಳು ಅಡಗಿ ಸರ್ವಾಚಾರ ಸಂಪತ್ತಿನ ಅನುಭವವನ್ನು ಹೊಂದಿ ಮಹಾಲಿಂಗದೊಡನೆ ಸುಖಿಸಬೇಕು. ಇದು ಅಂಗಸ್ಥಲಗಳಲ್ಲಿ ಕಡೆಯದಾದ ಐಕ್ಯಸ್ಥಲವು.

೧. ಐಕ್ಯಸ್ಥಲ

೪೭೪

(೧) ತನ್ನನರಿದಂಗೆ ಇದಿರೆಂಬುದಿಲ್ಲ. ತನ್ನನರಿಯದವಂಗೆ ಇದಿರೆಂಬುದುಂಟು. ೧[ಅರುಹು ಮರುಹು]೧ ಕುರುಹಳಿಯಿತ್ತು, [ಬೆರಗಾಯಿತ್ತು]. ಬೆರಗು ಬೆಳಗಿನೊಳಗೆ ಕರಿಗೊಂಡಿತ್ತು ಇದೇನೋ ? ಭ್ರಾಂತು ಭ್ರಾಂತನೆ ನುಂಗಿ ಗುಹೇಶ್ವರ ಭವಿಯ ಬೆಂಬತ್ತಿ ಭವಿಯಾದ ಕಾರಣ !

೪೭೫

(೨) ಮನದ ಕಾಲತ್ತಲು, ತನುವಿನ ಕಾಲಿತ್ತಲು. ಅನುಭಾವದ ಅನುವನು ನೆನೆವುತ್ತ ಗಮನಗೆಟ್ಟುದೋ. ಲಿಂಗಮುಖದಲಾದ ಸೂಚನೆಯ ಸುಖವ ಕಂಡು

೧–೧ ಅರಿವಿನ ಕುರುಹು (ಮೂ)

ಗಮನಗೆಟ್ಟುದೋ. ಅನುವಾಯಿತ್ತು ಅನುವಾಯಿತ್ತು. ಅಲ್ಲಿಯೇ ತಲ್ಲೀಯವಾಯಿತ್ತು, ಶ್ರೀ ಗುಹೇಶ್ವರನೆಂಬ ಮಹಾಲಿಂಗೈಕ್ಯಂಗೆ.

೪೭೬

(೩) ಸ್ಥಲವಿಡಿದು ಸರ್ವದಲಾಯತವಾಗಿ ಸಂಬಂಧದುದಯವಿದೆಂದು, ಸಹಜವಳವಟ್ಟಲ್ಲಿ ಇದು ಅದು ಎಂದೆನಲುಂಟೆ ? ಭಾವವಳಿದು ನಿರ್ಭಾವ ಉಳಿದಲ್ಲಿ ಇದು ಅದು ಎಂದೆನಲುಂಟೆ ಕೂಡಲಚನ್ನಸಂಗ ಸರ್ವಾಂಗಮಯವಾದಲ್ಲಿ ?

೪೭೭

(೪) ತನು ಸೋಂಕಿ ತನು ನಷ್ಟವಾಯಿತ್ತು, ಮನ ಸೋಂಕಿ ಮನ ನಷ್ಟವಾಯಿತ್ತು, ಭಾವ ಸೋಂಕಿ ಭಾವ ನಷ್ಟವಾಯಿತ್ತು, ಇದು ಕಾರಣ ಕೂಡಲಚನ್ನಸಂಗಯ್ಯ ಲಿಂಗಸೋಂಕಿನ ಶರಣನ ಸಂದು ನಷ್ಟವಾಯಿತ್ತು. *

೪೭೮

(೫) ನೆಳಲು ಸತ್ತಿತ್ತು, ಭ್ರಾಂತು ಬೆಂದಿತ್ತು, ಅರಿವು ಮರೆಯಿತ್ತು, ಕುರುಹು ಗೆಟ್ಟಿತ್ತು, ಗತಿಯನರಸುವರೆ, ಅವರಲ್ಲಿ ಮತಿಯನರಸುವರೆ ? ಅಂಗವೆಲ್ಲ ನಷ್ಟವಾಗಿ ಲಿಂಗ ಲೀಯವಾದವರಲ್ಲಿ ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರಾ.

೪೭೯

(೬) ಮಾಡಿ ಮಾಟವ ಮರೆದು, ಕೂಡಿ ಕೂಟವ ಮರೆದು, ಬಯಲು ಸಮರಸಕ್ಕೆ ಮರುಳಾಯಿತ್ತಲ್ಲಾ ! ಜೀವ ಪ್ರಾಣದ ಭೇದವ ತಿಳಿಯದು. ನಿಜವದ ಕ್ಯಾಯಿತಲ್ಲಾ ! ಅನ್ಯ ಚಿನ್ನವಡಗಿ ತನ್ನ ತಾ ಮರೆಯಿತ್ತು ಕೂಡಲಚನ್ನಸಂಗಯ್ಯ.

೪೮೦

(೭) ಉಪಾಧಿಕ ಮನ, ಉಪಾಧಿಕರಹಿತ ಮನ, ನಿಂದಲ್ಲಿ ನಿವಾತವಾಯಿತ್ತು, ಲಿಂಗೋದಯ ಪ್ರಜ್ವಲಿಸುತ್ತಿದೆ ಗುಹೇಶ್ವರಲಿಂಗವು ತಾನೆಯಾಗಿ.

೪೮೧

(೮) ಶಿವಶಿವಾ ! ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ. ಸತ್ಯಶುದ್ಧವುಳ್ಳವಂಗೆ ಗುರುವಿಲ್ಲ, ಸತ್ಯಶುದ್ಧವುಳ್ಳವಂಗೆ ಲಿಂಗವಿಲ್ಲ, ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ, ಸತ್ಯಶುದ್ಧ೧[ವುಳ್ಳ]೧ವಂಗೆ ಪ್ರಸಾದವಿಲ್ಲ ; ಸತ್ಯಶುದ್ಧವುಳ್ಳವಂಗೆ ಗುಣತ್ವವಿಲ್ಲ, ಕೇಳಿರೆ. ಸತ್ಯಶುದ್ಧಲಿಂಗಕ್ಕೆ ಉಪಚಾರ ಉಂಟು. ಸತ್ಯಶುದ್ಧ ಗುರುವಿಂಗೆ ಧ್ಯಾನ ಮೌನ ಅನುಷ್ಠಾನ ಉಂಟು. ಸತ್ಯಶುದ್ಧ ಉಪದೇಶಕ್ಕೆ ಜಪ ತಪ, ಪೂಜೆ, ಸಮಾಧಿ,

* ಇದರ ಮುಂದಿನ ''ತನ್ನನರಿದಂಗೆ ಇದಿರೆಂಬುದುಂಟು'' ಎಂಬ ವಚನ ಇದೇ ಭಾಗದಲ್ಲಿ ಪುನರುಕ್ತವಾಗಿರುವುದರಿಂದ ಕೈಬಿಡಲಾಗಿದೆ. (ಸಂ)

೧–೧ ವಿಲ್ಲದ (ಮೂ)

ಹೋಮ, ನಿಯಮ, ನಿತ್ಯ, ಅಷ್ಟವಿಧಾರ್ಚನೆ, ಷೋಡಶೋಪಚಾರ ಉಂಟು. ಇಂತಪ್ಪ ಸತ್ಯಶುದ್ಧವುಳ್ಳ ಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧವುಳ್ಳ ಲಿಂಗಕ್ಕೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಜಂಗಮಕ್ಕೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯಾನೆ. ಇವರೆಲ್ಲರು ಬ್ರಹ್ಮನ ಮಕ್ಕಳು. ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಆವ ಸಹಜವೂ ಇಲ್ಲದ ಲಿಂಗೈಕ್ಯನು ಕಾಣಾ ಕೂಡಲ ಚನ್ನಸಂಗಮದೇವ.

೪೮೨

(೧೦) ವಾರಿಕಲ್ಲ ಕಡಿದು ಪುತ್ಥಳಿಯ ಖಂಡಿಸುವಂತೆ, ಉಪ್ಪಿನ ಪೊಟ್ಟಣವ ಉದಕದಲ್ಲಿರಿಸಿದಂತೆ, ಕರ್ಪುರದ ಪ್ರಣತೆಯಲ್ಲಿ ಜ್ಯೋತಿಯ ಬೆಳಗುವಂತೆ ಸಿದ್ಧ ಸೋಮನಾಥಲಿಂಗವವಗ್ರಾಹಕ.

೪೮೩

(೧೧) ಅರಿಯಲಿಲ್ಲದ ಅರಿವು, ಮರೆಯಲಿಲ್ಲದ ಮರಹು, ನೋಡಲಿಲ್ಲದ ನೋಟ, ಬೆರಸಲಿಲ್ಲದ ಬೆರಗು ಕೂಡಲಚನ್ನಸಂಗಾ ನಿಮ್ಮ ಲಿಂಗೈಕ್ಯಂಗೆ

ಇಂತು ಮಹಾಲಿಂಗದಲ್ಲಿ ಐಕ್ಯನಾದ ಲಿಂಗೈಕ್ಯನಲ್ಲಿ ಷಟ್‌ಸ್ಥಲ ಸಂಪನ್ನಮಾದ ಸರ್ವಾಚಾರವು ಅಡಗಿದ ಭೇದವೆಂತಿರ್ದುದೆಂದಡೆ ಮುಂದೆ ಸರ್ವಾಚಾರಸಂಪತ್ತು ಸ್ಥಲವಾದುದು.

೨. ಸರ್ವಾಚಾರಸಂಪತ್ತುಸ್ಥಲ

೪೮೪

(೧) ಆದಿಯಾಧಾರವಾಗಿಹುದೇ ಘನ. ಆ ಘನವ ವೇಧಿಸಿಹುದೇ ಮನ. ಆ ಮನವು ಮಹವನಿಂಬುಗೊಂಡುದೇ ಭಕ್ತಿ. ಭಿನ್ನಭಾವದಿಚ್ಛೆದೋರದಿಹುದೇ ಆಚಾರ. ತಟ್ಟು ಮುಟ್ಟು ತಾಗು ನಿರೋಧವಿಲ್ಲದಿಹುದೇ [೧][ಪೂಜೆ][೧]. ಆಶೆ ರೋಷ ಹರುಷವಿಲ್ಲದಿಹುದೇ ಪ್ರಸಾದ. ಕರಣಮಥನ ಇಚ್ಛೆದೋರದಿಹುದೇ ಅನುಭಾವ. ಇಂತೀ ಸರ್ವಾಂಗದಲ್ಲಿ ಸರ್ವವಾದಾತನಾಗಿ ನಿರಂತರ ಸುಖಿ ಕೂಡಲಚನ್ನಸಂಗಾ [ನಿಮ್ಮ ಶರಣನು].

೪೮೫

(೨) ಹೊಸ ಮದುವೆಯ ಹಸೆಯುಡುಗದ ಮುನ್ನ, ಹೂಸಿದ ಅರಿಶಿನ ಬಿಸಿಲಿಂಗೆ ಹರಿಯದ ಮುನ್ನ, ತನು ಸಂಚಲವಾಗದೆ ಮುನ್ನ, ಗುರುಕಾರುಣ್ಯವ ಹಡೆದು ಹುಸಿ ಇಲ್ಲದಿರ್ದಡೆ ಭಕ್ತನೆಂಬೆ. ಹಿಡಿಯಲಿಲ್ಲದಿರ್ದಡೆ ಮಹೇಶ್ವರನೆಂಬೆ. ತನುವಿಲ್ಲದಿರ್ದಡೆ ಪ್ರಸಾದಿ ಎಂಬೆ. ಜೀವವಿಲ್ಲದಿರ್ದಡೆ ಪ್ರಾಣಲಿಂಗಿ ಎಂಬೆ. ಆಶೆ ಇಲ್ಲದಿರ್ದಡೆ ಶರಣನೆಂಬೆ. ಈ ಐದರ ಸಂಪರ್ಕ ನಿರ್ಭೋಗವಾದಡೆ ಐಕ್ಯನೆಂಬೆ. ಆ ಐಕ್ಯನ ಸಂತೋಷ ಹಿಂಗಿದಡೆ ಜ್ಯೋತಿರ್ಮಯನೆಂಬೆ. ಈಹೀಂಗಾದಡೆ ದೇಹ

೧–೧ ಶುಚಿ (ಮೂ)

ಇರಿದಡರಿಯದು, ತರಿದಡರಿಯದು, ಬೈದಡರಿಯದು, ಹೊಯ್ದಡರಿಯದು, ನಿಂದಿಸಿದಡರಿಯದು, ಸ್ತುತಿಸಿದಡರಿಯದು, ಸುಖವನರಿಯದು, ದುಃಖವನರಿಯದು, ಇಂತಿದರ ತಾಗು ನಿರೋಧವನರಿಯದಿರ್ದಡೆ, ಅಂತಹವರ ಮಹಾಲಿಂಗ [೧]ಗಜೇಶ್ವರನೆಂಬೆ*

೪೮೬

(೩) ಆಚಾರ ಗುರುಸ್ಥಲ, ಅನುಭಾವ ಲಿಂಗಸ್ಥಲ, ಅವಧಾನ ಅರ್ಪಿತಸ್ಥಲ, ಪರಿಣಾಮ ಪ್ರಸಾದಿಸ್ಥಲ, ಸಮಾನ ಶರಣಸ್ಥಲ, ಅರಿವು ಐಕ್ಯಸ್ಥಲ, ಇಂತೀ ಷಡ್ವರ್ಗ ಸರ್ವಾಂಗನಿರತ ಕೂಡಲಚೆನ್ನಸಂಗಾ ನಿಮ್ಮ ಶರಣ.

೪೮೭

(೪) ಗುರುಲಿಂಗ ಸಂಯೋಗವಾದಲ್ಲಿ ಶಿವಲಿಂಗದುದಯ, ಶಿವಲಿಂಗ ಸಂಯೋಗವಾದಲ್ಲಿ ಜಂಗಮಲಿಂಗದುದಯ, ಜಂಗಮಲಿಂಗಸಂಯೋಗವಾದಲ್ಲಿ ಪ್ರಸಾದದುದಯ. ಪ್ರಸಾದ ಪ್ರಾಣಸಂಯೋಗವಾದಲ್ಲಿ ಜ್ಞಾನೋದಯ, ಜ್ಞಾನಾನುಭಾವ ಸಂಯೋಗವಾದಲ್ಲಿ ಸುಜ್ಞಾನೋದಯ. ಇಂತೀ ಗುರುವಿನ ಘನವ, ಲಿಂಗದ ನಿಜವ ಜಂಗಮದ ಮಹಿಮೆಯ, ಪ್ರಸಾದದ ರುಚಿಯ, ಪ್ರಾಣನ ನೆಲೆಯ, ಸುಜ್ಞಾನದ ನಿಲವ, ಆ ಮಹಾನುಭಾವದ ಸುಖವನರಿದು ಮರೆದಲ್ಲಿ ಮಹಾಘನ ಸದ್ಗುರು ಸಿದ್ಧ ಸೋಮನಾಥನೆಂಬಲಿಂಗದಲ್ಲಿ ಭರಿತವಾದುದು ಸುಜ್ಞಾನ.

೪೮೮

(೫) ಆಯತದಲ್ಲಿ ಆಗಾಗಿ ಭಕ್ತನೆನಿಸುವುದಯ್ಯ. ಸ್ವಾಯತದಲ್ಲಿ ಆಗಾಗಿ ಯುಕ್ತನೆನಿಸುವುದಯ್ಯ. ಸಂಯೋಗದಲ್ಲಿ ಆಗಾಗಿ ಶರಣನೆನಿಸುವುದಯ್ಯ. ಪ್ರಸಾದಕ್ಕೆ ಪ್ರಾಣವಾಗಿ ಉಭಯಪ್ರಾಣವೆನಿಸುವುದಯ್ಯ. ಘನಕ್ಕೆ ಘನ ಮನವಾದಲ್ಲಿ ಮನವೇದ್ಯವೆನಿಸುವುದಯ್ಯ ಕೂಡಲಚನ್ನಸಂಗಾ ಲಿಂಗಸರ್ವಾಂಗವಾದಲ್ಲಿ ಅನುಭಾವವಧಿಕವೆಂದೆನಿಸುವುದಯ್ಯಾ.

೪೮೯

(೬) ಕಿಂಕುರ್ವಾಣತೆಯಿಂದ ಬಂದ ಜಂಗಮವೇ ಲಿಂಗವೆಂದು ತನಗುಳ್ಳುದನರಿದು ಮನಸಹಿತ ಮಾಡುವಲ್ಲಿ ಭಕ್ತ. ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು ಅಭಿಲಾಷೆ ಸಮನಿಸದೆ ಪರಿಚ್ಛೇದಬುದ್ಧಿಯುಳ್ಳಲ್ಲಿ ಮಹೇಶ್ವರ. ಅನರ್ಪಿತ ಸಮನಿಸದೆ ಬಂದುದ ಕಾಯದ ಕೈಯಲ್ಲಿ ಕೊಟ್ಟು ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ. ಪ್ರಾಣಕ್ಕೆ ಪ್ರಾಣವಾಗಿದ್ದುದನು ಕಾಯಸ್ಥಿತಿಯನರಿದು ಎಚ್ಚರಗುಂದದಿಪ್ಪಲ್ಲಿ ಪ್ರಾಣಲಿಂಗ ಸಂಬಂಧಿ. ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಬಿಚ್ಚಿಬೇರಿಲ್ಲದಿಹ ಬೆಡಗಿನ ಒಲುಮೆ

೧–೧ ಆ (ಮೂ)

* ಇದರ ಮುಂದಿನ ವಚನ ''ಆದಿಯಾಧಾರವಾಗಿಹುದೆ'' ಎಂಬುದು ಇದೇ ಭಾಗದಲ್ಲಿ ಪುನರುಕ್ತವಾಗಿರುವುದರಿಂದ ಕೈಬಿಡಲಾಗಿದೆ (ಸಂ).

ಯಲ್ಲಿ ಶರಣ. ಸದಾಚಾರಸಂಪತ್ತಿನಲ್ಲಿ ಬಂದನುಭಾವವ ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯವು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಬಸವಣ್ಣನಲ್ಲದೆ ಷಟ್‌ಸ್ಥಲವಪೂರ್ವ.

೪೯೦

(೭) ತನುವಿಡಿದು ನಡೆವ ತ್ರಿವಿಧ ಸಂಪತ್ತುಗಳು ಭಕ್ತ, ಮಹೇಶ್ವರ, ಪ್ರಸಾದಿ. ಮನವಿಡಿದು ನಡೆವ ತ್ರಿವಿಧ ಸಂಪತ್ತುಗಳು ಪ್ರಾಣಲಿಂಗಿ, ಶರಣ, ಐಕ್ಯ. ಈ ಉಭಯಾನುಭಾವವಿಡಿದು 'ಸ್ಥಾವರಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಚತೆ' ಎಂಬ ಈ ಭೇದವ ಭೇದಿಸಬಲ್ಲಡೆ, ಹಿಂದಿಲ್ಲ ಮುಂದಿಲ್ಲ ಇಹಪರ ಒಂದೇ, ಕರ್ಮನಾಸ್ತಿ ಭವಂ ನಾಸ್ತಿ ಕೂಡಲಚನ್ನಸಂಗಾ ಸ್ವಾಯತವಾದಂಗದು ಸಹಜ.

೪೯೧

(೮) ಕರಸ್ಥಲ, ಕರ್ಣಸ್ಥಲ, ಕಂಠಸ್ಥಲ, ಲಲಾಟಸ್ಥಲ, ಮಧ್ಯಸ್ಥಲ, ಇಂತೀ ಎಲ್ಲ ಸ್ಥಲಂಗಳನು ಮಹಾಸ್ಥಲಕ್ಕೆ ತಂದು ಬಸವಣ್ಣ ಸಂಪೂರ್ಣನಾದಪರಿಯ ನೋಡಾ ಕಲಿದೇವಯ್ಯ.

ಇಂತು ಸರ್ವಾಚಾರ ಸಂಪತ್ತು ಸರ್ವಾಂಗದಲ್ಲಿ ಲೀಯವಾದ ಲಿಂಗೈಕ್ಯಂಗೆ, ಆ ಮಹಾಲಿಂಗವೇ ಭಾಜನವಾಗಿ, ಅಂತಪ್ಪ ಮಹಾಲಿಂಗಕ್ಕೆ ಲಿಂಗೈಕ್ಯವೇ ಭಾಜನವಾಗಿ, ಉಭಯನಾಮವಡಗಿ ವಿಕಭಾಜನವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ವಿಕಭಾಜನಸ್ಥಲವಾದುದು.

೩. ವಿಕಭಾಜನಸ್ಥಲ

೪೯೨

(೧) ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ ದರ್ಪಣ ಬೇರೆ ಕಂಚಲ್ಲ. ಭಾಂಡ ಒಂದೇ ಭಾಜನ ಒಂದೇ. [೧][ಬೆಳಗೆ ಕನ್ನಡಿ][೧] ಎನಿಸಿತ್ತಯ್ಯ. ಅರಿದಡೆ ಶರಣನು, ಮರೆದಡೆ ಮಾನವನು. ಮರೆಯದೆ ಪೂಜಿಸು ನಮ್ಮ ಕೂಡಲ ಸಂಗಮದೇವನ.

೪೯೩

(೨) ಅಂದಂದಿಗೆ ಬಂದ ಪದಾರ್ಥವ ಒಂದೆಂದು ತಾನುಂಬಂತೆಯಯ್ಯ ಅಲ್ಲಲ್ಲಿಯೆ ತಾ ಲಿಂಗಕ್ಕೆ ಕೊಡುವರೆಂತೋ ಲಿಂಗಕ್ಕೆ ಸಲುವದೆಂತೋ ? ಮಂಚ ಒಂದೇ, ಕಂಚು ಬೇರೆಂಬ ಪ್ರಪಂಚಿಯನೊಲ್ಲ ಕೂಡಲ ಚನ್ನಸಂಗಮದೇವಾ.

೪೯೪

(೩) ವಿಕಭಾಜನ ವಿಕಭಾಜನವೆಂದೆಂಬರು. ನಾವಿದನರಿಯೆವಯ್ಯ. ಅಂಗದ ಮೇಲೆ ಪ್ರಾಣಲಿಂಗ ಪ್ರತಿಷ್ಠೆಯಾದ ಬಳಿಕ ಲಿಂಗಕ್ಕೆಯೂ ತನಗೆಯೂ ವಿಕ

೧–೧ ಬೆಳಗುಕನ್ನಡಿ (ಮೂ)

ಭಾಜನವಲ್ಲದೆ ಬೇರೆ ಭಿನ್ನಭಾಜನ ಉಂಟೆ ? ಲಿಂಗಕ್ಕೆಯೂ ತನಗೆಯೂ ವಿಕ ಭಾಜನವಾಗದನ್ನಕ್ಕರ ಅಂಗದ ಕಳೆಯಲ್ಲಿ ಲಿಂಗವ ಧರಿಸಿಕೊಳಬಹುದೆ ? ಇದನರಿದು ವಿಕಭಾಜನವಿಲ್ಲದಿರೆ, ದೋಷ. ಅರಿಯದೆ ವಿಕಭಾಜನವೆಂತು ? ಈ ಕುಳಸ್ಥಳದ ಭೇದವ ಭೇದಿಸಬಲ್ಲ ಕೂಡಲಚನ್ನಸಂಗಾ ನಿಮ್ಮ ಶರಣ.

೪೯೫

(೪) ಲಿಂಗಕ್ಕೆಯೂ ತನಗೆಯೂ ಭಿನ್ನಭಾವವಿಲ್ಲವೆಂಬರು. ಲಿಂಗಕ್ಕೆಯೂ ಪ್ರಾಣಕ್ಕೆಯೂ ಭಿನ್ನವಿಲ್ಲವೆಂಬರು. ಲಿಂಗಕ್ಕೆಯೂ ತನಗೆಯೂ ಭಾಜನವೆರಡೆಂಬರು. ಬಂದಿತ್ತು ನೋಡಾ ತೊಡಕು. ಇಂತು ಅಂಗವೆರಡಾದವಂಗೆ ಲಿಂಗವಿಲ್ಲೆಂದೆನಿಸಿತ್ತು ಲಿಂಗವಿಲ್ಲದವನು ಭವಿ ಎಂದೆನಿಸುವುದು. ಇದು ಕಾರಣ ಲಿಂಗದಲ್ಲಿ ಅವಿರಳವಾಗಿ ಅಂಗಗುಣ ಭಂಗವ ಕಳೆದು ನಿರ್ಭಿನ್ನನಾದವಂಗೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನಲ್ಲಿ ವಿಕಭಾಜನ ಸಮನಿಪುದಯ್ಯ.

ಇಂತು ಮಹಾಲಿಂಗದಲ್ಲಿ ವಿಕಭಾಜನವಳವಟ್ಟು ಲಿಂಗೈಕ್ಯನು ಆ ಮಹಾ ಲಿಂಗದ ಸಮರಸ ಭಾವದಿಂದ ಪರಮಾನಂದ ಸುಖದಲ್ಲಿ ಸಮಭೋಗಿಯಾಗಿರ್ದ ಭೇದವೆಂತಿರ್ದುದೆಂದಡೆ , ಮುಂದೆ ಸಹಭೋಜನಸ್ಥಲವಾದುದು.

೪. ಸಹಭೋಜನಸ್ಥಲ

೪೯೬

(೧) ಅರ್ಪಿತ ರೌರವ ನರಕವೆಂದಿತ್ತು ಗುರುವಚನ. ಅನರ್ಪಿತ ರೌರವ ನರಕವೆಂದಿತ್ತು ಶ್ರುತಿ ವಚನ. ಭುಂಜನೆಯ ಮಾಡಿದ ರುಚಿ ಲಿಂಗಕ್ಕೆಂಬ ಕರ್ಮಿಯ, ತಾಗಿದ ಸುಖವು ಲಿಂಗಕ್ಕೆಂಬ ಗುರುದ್ರೋಹಿಯ ಲಿಂಗಭಾಜನದಲ್ಲಿ ಶರಣ ಸಹ ಭೋಜನವ ಮಾಡಿದರೆ ಇಹಪರವಿಲ್ಲೆಂದ ಕೂಡಲಚನ್ನಸಂಗಮದೇವ.

ಟೀಕು : ಭಿನ್ನಜ್ಞಾನದಿಂದ ಲಿಂಗವ ಭಿನ್ನವಿಟ್ಟು ಪದಾರ್ಥವ ಸಮರ್ಪಿಸಿದರೆ ಫಲಪದಭೋಗ ಉಂಟು. ಆ ಫಲಪದಭೋಗವ ನೆರೆದಡೆ ಮರಳಿ ಭವಹೇತುವಪ್ಪ ನರಕ ಉಂಟೆಂಬುದು ಗುರುವಚನ ಪ್ರಮಾಣವೆಂಬುದೀಗ, ಅರ್ಪಿತ ರೌರವ ನರಕವೆಂದಿತ್ತು ಗುರುವಚನವೆಂಬ, ಶಬ್ದಕ್ಕರ್ಥ. ಅಂತು ಲಿಂಗಕ್ಕರ್ಪಿಸದೆ ಇದ್ದ ಜೀವನು ಎಂದೆಂದೂ ನರಕಿ ಎಂಬುದು ಗುರುವಚನ ಪ್ರಮಾಣವೆಂಬುದೀಗ, ಅನರ್ಪಿತ ರೌರವ ನರಕವೆಂದಿತ್ತು ಗುರುವಚನವೆಂಬ ಶಬ್ದಕ್ಕರ್ಥ. ಅಂತು ಜೀವಭಾವದಿಂ ದೇಹೇಂದ್ರಿಯ ವಿಷಯ ಸುಖಂಗಳನರಿದು ಭುಂಜಿಸಿದ ಬಳಿಕ ಆ ಎಂಜಲಾದ ಸುಖವ ಲಿಂಗಕ್ಕರ್ಪಿತವೆಂಬಾತನಿಗೆ ಭವದುಷ್ಕರ್ಮ ಬಿಡದು. ಆತ ಗುರು ಮತಕ್ಕೆ ದೂರವೆಂಬುದೀಗ, ಭುಂಜನ ಮಾಡಿದ ರುಚಿಯ ಲಿಂಗಕ್ಕೆಂಬ ಕರ್ಮಿಯತಾಗಿದ [೧]ಸುಖವ ಲಿಂಗಕ್ಕೆಂಬ ಗುರುದ್ರೋಹಿಯ ಎಂಬ ಶಬ್ದಕ್ಕರ್ಥ.

೧ + ಸೋಂಕಿದ (ಮೂ)

ಅಂತಪ್ಪ ಭಿನ್ನ ಕ್ರೀಯಳಿದು ಗುರುಲಿಂಗಾಂಗ ಸಂಬಂಧವ ಮಾಡಿದ ಭೇದವನರಿದು ಲಿಂಗದಲ್ಲಿ ಭಿನ್ನವಳಿದಿಪ್ಪ ಶರಣನ ಸರ್ವಾಂಗವೆಲ್ಲ ಲಿಂಗಕಾಯವಾಗಿ ಆ ಕಾಯದ ಸುಖಭೋಗಂಗಳನೆಲ್ಲ ಲಿಂಗಮುಂತಾಗಿ ಭೋಗಿಸುತ್ತಿಪ್ಪನಾಗಿ ಭೋಗೋಪಭೋಗಿ ಎಂಬುದೀಗ ಲಿಂಗಭಾಜನದಲ್ಲಿ ಶರಣ ಸಹಭೋಜನಮಾಡಿದನೆಂಬ ಶಬ್ದಕ್ಕರ್ಥ. ಅಂತು ಲಿಂಗದಲ್ಲಿ ಭೇದವನಳಿದು ಲಿಂಗಭೋಗೋಪಭೋಗಿಯಾಗಿಪ್ಪ ಶರಣಂಗೆ ಇಹಬಂಧನವಿಲ್ಲ, ಪರದಲ್ಲಿ ಮೋಕ್ಷವಿಲ್ಲ, ಆ ಶರಣ ಬ್ರಹ್ಮವೆಯಪ್ಪನೆಂಬುದೀಗ, ಸಹಭೋಜನವಮಾಡಿದರೆ ಇಹಪರವಿಲ್ಲೆಂಬ ಶಬ್ದಕ್ಕರ್ಥ.

೪೯೭

(೨) ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಅಜ್ಞಾನಿಗಳು ತಾವೇ ಲಿಂಗವೆಂದೆಂಬರು. ತಾವೇ ಲಿಂಗವಾದಡೆ ಜನನ ಸ್ಥಿತಿ ಮರಣ ರುಜೆ ಸಂಸಾರ ಬಂಧನವಿಲ್ಲದಿರಬೇಕು. ಮಹಾಜ್ಞಾನವ ಬಲ್ಲೆವೆಂದು ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಪಾತಕರ ಎನಗೊಮ್ಮೆ ತೋರದಿರಾ ಕೂಡಲಚನ್ನಸಂಗಯ್ಯ.

೪೯೮

(೩) ಲಿಂಗಭಾಜನದಲ್ಲಿ ಸಹಭೋಜನವ ಮಾಡುವೆವೆಂಬರು. ಲಿಂಗಭಾಜನದಲ್ಲಿ ಸಹಭೋಜನ ಮಾಡುವವರ ನೋಡಿರೇ ! ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಆಸೆಯುಳ್ಳನ್ನಕ್ಕರ ಲಿಂಗಭಾಜನದಲ್ಲಿ ಸಹಭೋಜನ ಮಾಡುವವರ ನೋಡಿರೇ ! ಹಸಿವು, ತೃಷೆ, ನಿದ್ರೆ, ಜಡ, ಆಲಸ್ಯವುಳ್ಳನ್ನಕ್ಕರ ಲಿಂಗ ಭಾಜನದಲ್ಲಿ ಸಹಭೋಜನವ ಮಾಡುವ ಪರಿ ಎಂತೋ ? ಇಂತಿವೆಲ್ಲವ ಜರಿದು ಗುರುಲಿಂಗಜಂಗಮವನೇಕವಮಾಡಿದಂಗಲ್ಲದೆ ಸಹಭೋಜನವೆಲ್ಲಿಯದೋ ಕೂಡಲಚೆನ್ನಸಂಗಯ್ಯ ?

೪೯೯

(೪) ಗುರು ಶಿಷ್ಯರಿಬ್ಬರು ಸಹಪಙ್ತಿಯಲ್ಲಿ ಲಿಂಗಾರ್ಚನೆಯ ಮಾಡಿಹೆವೆಂಬರಯ್ಯ ! ಹೋ, ಹೋ, ಬಾಲಭಾಷೆಯ ಕೇಳಲಾಗದು. ಅಲ್ಲಲ್ಲ, ಮಾಡಬಹುದು. ಅದೇನು ಕಾರಣ ? ಗುರುವಿನ ಅರಿವಿನ ಅರಿವನರಿಯಬಲ್ಲಡೆ ಮಾಡಬಹುದು, ಮಾಡಬಹುದು. ಶಿಷ್ಯಪ್ರಸಾದ ಎಂಬುಭಯ ಸಂದೇಹ ಹಿಂದುಳಿಯಬಲ್ಲಡೆ, ಮಾಡಬಹುದು. ಇದು ಕಾರಣ ಮಹಾಘನ ಸೋಮೇಶ್ವರಾ ನಿಮ್ಮಲ್ಲಿ ಇವರಿಬ್ಬರ ಗುರುಶಿಷ್ಯರೆಂದೆನಾದೆಡೆ ಎನ್ನನದ್ದಿ ನೀನೆದ್ದು ಹೋಗಯ್ಯ.

ಇಂತು ಅಂಗಸ್ಥಲದಲ್ಲಿ ನಾಲ್ವತ್ತು ನಾಲ್ಕರ ಭೇದವು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯವೆಂಬ ಷಟ್‌ಸ್ಥಲದೊಳಗಡಗಿ ಆ ಷಟ್‌ಸ್ಥಲವೇ ಅಂಗವಾದ ಶರಣನ ಮನಸ್ಥಲದಲ್ಲಿ ಮನೋಲೀಯವಾದ ಲಿಂಗಸ್ಥಲದ ವಿವರವೆಂತಿರ್ದುತೆಂದೊಡೆ ಮುಂದೆ ದೀಕ್ಷಾಗುರುಸ್ಥಲವಾದುದು.

ಲಿಂಗಸ್ಥಲಗಳು

ಲಿಂಗಸ್ಥಲಗಳು ೫೭ ಇದ್ದು, ಇವುಗಳಲ್ಲಿ ಷಡ್ಲಿಂಗಗಳ ಪ್ರಕಾರ ಆರು ವಿಭಾಗಗಳಿವೆ. ಇವುಗಳನ್ನು ವಿವರಿಸತಕ್ಕ ವಚನವಿದ್ದು, ಅದು ಕೆಳಗೆ ಕೊಡಲ್ಪಟ್ಟಿದೆ.

ಲಿಂಗಸ್ಥಲಗಳಲ್ಲಿಯ ವಿಭೇದಗಳು

೫೦೦

ಗುರುಲಿಂಗತ್ರಿವಿಧಃ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು. ಶಿವಲಿಂಗ ತ್ರಿವಿಧಃ ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ. ಜಂಗಮಲಿಂಗತ್ರಿವಿಧ, ಸ್ವಯ, ಚರ, ಪರ. ಇಂತು ಆಚಾರಲಿಂಗಸ್ಥಲ ೯.

ಆಗಮಲಿಂಗತ್ರಿವಿಧಃ ಕ್ರಿಯಾಗಮ ಭಾವಾಗಮ, ಜ್ಞಾನಾಗಮ. ಕಾಯಲಿಂಗ ತ್ರಿವಿಧಃ ಸಕಾಯ, ಅಕಾಯ, ಪರಕಾಯ. ಆಚಾರಲಿಂಗತ್ರಿವಿಧಃ ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ, ಇಂತು ಗುರುಲಿಂಗಸ್ಥಲ ಒಂಬತ್ತು, ಅಂತು ಉಭಯಸ್ಥಲ ೧೮.

ಅನುಗ್ರಹಲಿಂಗ ತ್ರಿವಿಧಃ ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನು ಗ್ರಹ. ಅರ್ಪಿತಲಿಂಗತ್ರಿವಿಧಃ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ. ತನುಗುಣಲಿಂಗತ್ರಿವಿಧಃ ಶಿಷ್ಯ, ಶಿಶ್ರೂಷ, ಸೇವ್ಯ. ಇಂತು ಶಿವಲಿಂಗಸ್ಥಲ ಒಂಬತ್ತು, ಅಂತು ತೃತೀಯಸ್ಥಲ ೨೭.

ಒಲವುಲಿಂಗತ್ರಿವಿಧಃ ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರೂಪಲಿಂಗ ತ್ರಿವಿಧಃ ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ. ಪ್ರಸಾದಲಿಂಗತ್ರಿವಿಧ, ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ. ಪಾದೋದಕಲಿಂಗತ್ರಿವಿಧಃ ದೀಕ್ಷಾ ಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ. ಇಂತು ಜಂಗಮಲಿಂಗಸ್ಥಲ ಹನ್ನೆರಡು. ಅಂತು ಚತುರ್ಥಸ್ಥಲ ೩೯.

ನಿಷ್ಪತ್ತಿಲಿಂಗತ್ರಿವಿಧಃ ಕ್ರಿಯಾನಿಷ್ಪತ್ತಿ ಭಾವನಿಷ್ಪತ್ತಿ ಜ್ಞಾನನಿಷ್ಪತ್ತಿ ಆಕಾಶಲಿಂಗತ್ರಿವಿಧಃ ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ. ಪ್ರಕಾಶಲಿಂಗ ತ್ರಿವಿಧಃ ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ. ಇಂತು [೧][ಪ್ರಸಾದ][೧] ಲಿಂಗಸ್ಥಲ ಒಂಬತ್ತು, ಅಂತು ಪಂಚಮಸ್ಥಲ ೪೫.

ಆ ಲಿಂಗೈಕ್ಯನು ಕೊಂಡುದುಪ್ರಸಾದ, ನಿಂದುದೋಗರ, ಚರಾಚರನಾಸ್ತಿ ಇಂತೀ ತ್ರಿವಿಧ. ಭಾಂಡ, ಭಾಜನ, ಅಂಗಲೇಪನ ಇಂತೀ ತ್ರಿವಿಧ. ಸ್ವಯಪರ ವರಿಯದಸ್ಥಲ, ಭಾವಾಭಾವ ನಷ್ಟಸ್ಥಲ, ಜ್ಞಾನಶೂನ್ಯಸ್ಥಲ. ಇಂತು ಮಹಾಲಿಂಗಸ್ಥಲ ಒಂಬತ್ತು, ಅಂತು ಷಟ್‌ಸ್ಥಲ ೫೭.

೧–೧ ಪ್ರಕಾಶ (ಮೂ)

ಇಂತಿವೆಲ್ಲ ಸ್ಥಲಂಗಳನೊಳಗೊಂಡ ಮಹಾಮಹಿಮನು ಜ್ಞಾನಿಯಲ್ಲ, ಅಜ್ಞಾನಿಯಲ್ಲ, ಶೂನ್ಯನಲ್ಲ, ನಿಃಶೂನ್ಯನಲ್ಲ, ಉಭಯಾಚಾರ ತಾನೆಂದರಿದ ಪರಮಜ್ಞಾನಿಗೆ ಕೊಳುಕೊಡೆ ಇಲ್ಲ, ಸಾಕಾರ ಸಂಬಂಧವನರಿಯ, ನಿತ್ಯಮುಕ್ತ, ನಿರವಯ, ಉಭಯಾತ್ಮಕ ತಾನು, ಕೂಡಲ ಚನ್ನಸಂಗನೆಂದೂ ಎನ್ನದ ಸುಯಿಧಾನಿ.*

ಆಚಾರಲಿಂಗಸ್ಥಲ

ವಿವರಣೆ : ಆಚಾರಲಿಂಗದಲ್ಲಿ ಗುರು, ಲಿಂಗ, ಜಂಗಮ ಎಂಬ ಮೂರು ವಿಭಾಗಗಳಿವೆ.

ಗುರು : ಗುರುವಿನಲ್ಲಿ ಉಪದೇಶಕಾರಣಮಾದ ದೀಕ್ಷಾಗುರುವೂ ಬೋಧಾ ಸ್ವರೂಪವನ್ನೈದಿದ ಶಿಕ್ಷಾಗುರುವೂ ಸುಜ್ಞಾನಸ್ವರೂಪವನ್ನೈದಿದ ಜ್ಞಾನಗುರುವೂ ಹೀಗೆ ಭೇದಗಳಿವೆ. ಎಂದರೆ ಮನುಷ್ಯನು ತಾನು ಮೊದಲು ದೀಕ್ಷಾಮುಖದಿಂದ ಬಲ್ಲವರಿಂದ ತಿಳಿದುಕೊಳ್ಳಬೇಕು. ಆಮೇಲೆ ಹೀಗೆ ಆಚರಿಸಿ ಮನನಮಾಡಿಕೊಳ್ಳ ಬೇಕು. ಮನನಮಾಡಿಕೊಂಡಲ್ಲಿ ಜ್ಞಾನವು ಅವನಿಗೆ ಆಗುವದು. ಹೀಗೆ ಈ ಕ್ರಿಯೆಗಳಿಗೆ ಅನುಕ್ರಮವಾಗಿ ದೀಕ್ಷೆ, ಶಿಕ್ಷೆ, ಅನುಭಾವ ಎಂಬ ಹೆಸರುಗಳಿರುತ್ತವೆ.

ಲಿಂಗ : ಲಿಂಗದಲ್ಲಿ ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು ಮೂರು ವಿಭಾಗಗಳಿವೆ. ಬಾಹ್ಯದಲ್ಲಿ ಮಾಡುವ ಸತ್‌ಕೃತ್ಯಗಳೇ ಕ್ರಿಯಾಲಿಂಗವೆನಿಸಿಕೊಳ್ಳು ತ್ತವೆ. ಅವು ಮುಂದೆ ಸದ್ಭಕ್ತನ ಭಾವದಲ್ಲಿ ಭರಿತವಾಗಲು ಅವು ಭಾವಲಿಂಗವೆನಿಸಿ ಕೊಳ್ಳುತ್ತವೆ. ಭಾವದಲ್ಲಿ ಭರಿತವಾಗಿ ಮಹಾಜ್ಞಾನಸ್ವರೂಪವಳವಡಲು ಜ್ಞಾನಲಿಂಗವು.

ಜಂಗಮ : ಜಂಗಮದಲ್ಲಿ ಸ್ವಯ, ಚರ, ಪರ ಎಂಬ ಮೂರು ವಿಭೇದಗಳಿವೆ. ಮಾಡುವ ಕ್ರಿಯೆಗಳು ಭಕ್ತನ ಸ್ವಯಂಭಾವ ಗುಣದಲ್ಲಿ ನಿಶ್ಚಲವಾಗಿ ಉಳಿದರೆ ಸ್ವಯವೆಂಬ ಹೆಸರು. ಹೀಗೆ ನಿಶ್ಚಲವಾದ ಲಿಂಗವು ಭಕ್ತಿಕಾರಣಮಾಗಿ ಜಗತ್ತಿನಲ್ಲಿ ವ್ಯವಹರಿಸಿದರೆ ಅದಕ್ಕೆ ಚರವೆಂಬ ಹೆಸರು. ಅದು ಭಕ್ತನ ಚಿದಾತ್ಮನಲ್ಲಿ ಬೆರೆದದ್ದಾದರೆ ಪರವೆಂಬ ಹೆಸರು. ಇದು ಕಡೆಯದು. ಇದು ಜಂಗಮತ್ವದ ಉತ್ಕೃಷ್ಟ ಸ್ಥಿತಿಯಾಗಿದೆ.

ಹೀಗೆ ಈ ಒಂಬತ್ತು ಸ್ಥಲಗಳನ್ನು ಅಳವಡಿಸಿಕೊಂಡಿದ್ದಾದರೆ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಇವುಗಳು ಗುರುಲಿಂಗದಲ್ಲಿ ಅಡಗುವವು. ಕ್ರಿಯಾಲಿಂಗ ಭಾವಲಿಂಗ, ಜ್ಞಾನಲಿಂಗಗಳು ಶಿವಲಿಂಗದಲ್ಲಿ ಅಡಗುವವು. ಸ್ವಯ ಚರ ಪರಗಳು ಜಂಗಮಲಿಂಗದಲ್ಲಿ ಅಡಗುವವು. ಹೀಗೆ ಪೂರ್ಣವಾದ ಗುರುಲಿಂಗ, ಶಿವಲಿಂಗ, ಜಂಗಮಲಿಂಗಗಳು ಆಚಾರಲಿಂಗದಲ್ಲಿ ಅಡಗುವವು. ಆಗ ಆಚಾರಲಿಂಗದ ಪೂರ್ಣತೆಯು. ಇದು ಪ್ರಥಮಲಿಂಗಸ್ಥಲದ ಪ್ರಗತಿಯ ವಿವೇಚನೆಯಾಗಿದೆ.

* ಆಚಾರಲಿಂಗಸ್ಥಲದಲ್ಲಿ ಜ್ಞಾನಗುರು, ಜ್ಞಾನಲಿಂಗ ; ಗುರುಲಿಂಗಸ್ಥಲದಲ್ಲಿ ಜ್ಞಾನಾಗಮ, ಜ್ಞಾನಾಚಾರವೆಂಬ ಪದಗಳಲ್ಲಿ ಬರುವ 'ಜ್ಞಾನ' ಶಬ್ದಕ್ಕೆ 'ಮಹಾಜ್ಞಾನ' ಅಥವಾ 'ಚಿದ್‌ಜ್ಞಾನ'ವೆಂಬ ಅರ್ಥವನ್ನು ಅನ್ವಯಿಸಿಕೊಂಡು ಆಲೋಚಿಸಬೇಕು (ಸಂ).

೧. ದೀಕ್ಷಾಗುರುಸ್ಥಲ

ಈ೦೧

(೧) ಹಸ್ತಾಬ್ಜಮಥನದಿಂದೊತ್ತಿ ಭಸ್ಮವಮಾಡಿ ಮತ್ತೆ ಪಂಚಾಕ್ಷರಿಯ ಜಪಮಣಿಯ ಚಿತ್ತ ಶ್ರೋತ್ರದೊಳು [೧]ಧಾರೆಯನೆರೆಯೆ ಸತ್ಯವಿದು ನಿಮ್ಮಂತೆ ರಾಮನಾಥಾ.

ಟೀಕು : ಶ್ರೀಗುರು ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ ಚಿತ್ಕಲೆಯ ಪ್ರಭಾವಿಸಿ ತೆಗೆದು ಆ ಕಲೆಯ ಪ್ರಣಮ ಮಂತ್ರಸ್ವರೂಪವ ಮಾಡಿ ಶ್ರೋತ್ರಮುಖದಿಂದ ಆತ್ಮನ ನಿಜವಶದೊಳು ಕೂಡಿಸಲು ಆಕ್ಷಣವೇ ಶಿಷ್ಯ ಲಿಂಗವಾದನು ಸತ್ಯವೆಂಬುದೀಗ ವಚನದ ತಾತ್ಪರ್ಯಾರ್ಥ.

ಈ೦೨

(೨) ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕ್ತಾರೋಹಣ, ಕಲಶಾಭಿಷೇಕ, ವಿಭೂತಿಯ ಪಟ್ಟ, ಲಿಂಗಾಯತ, ಲಿಂಗಸ್ವಾಯತ ಈ ವಿಳನು ಕಾಯಕ್ಕುಪದೇಶವ ಮಾಡುವುದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ, ಅಧ್ಯಾತ್ಮ ಅನುಗ್ರಹ, ಸತ್ಯಶುದ್ಧ, ಈ ವಿಳನು ಪ್ರಾಣಕ್ಕುಪದೇಶವಮಾಡುವುದು. ವಿಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನಿಜ, ಮನೋರ್ಲಯ, ಸದ್ಯೋನ್ಮುಕ್ತ ಈ ವಿಳನು ಮನಕ್ಕುಪದೇಶವಮಾಡುವುದು. ಈ ಕ್ರಮವನರಿದು ಮಾಡುವುದು ಕೂಡಲಚನ್ನಸಂಗಯ್ಯನಲ್ಲಿ ಸಹಜ ದೀಕ್ಷೆಯಯ್ಯ.

ಈ೦೩

(೩) ಭವಿತನಕ್ಕೆ ಹೇಸಿ ಭಕ್ತನಾದೆನೆಂಬಾತನ ಪೂರ್ವಾಶ್ರಯವಂ ಕಳೆದು ಭಕ್ತನ ಮಾಡುವ ಪರಿ ಎಂತೆಂದೊಡೆ, ಕಾಯಶುದ್ಧಿ ಜೀವಶುದ್ಧಿ ಭೂತಶುದ್ಧಿ ಆತ್ಮಶುದ್ಧಿ ಮಂತ್ರಶುದ್ಧಿ ಎಂಬ ಪಂಚಶುದ್ಧಿಯಂ ಮಾಡುವುದು. ಅದು ಹೇಗೆಂದಡೆ, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ದುಃಕ್ರೀಗಳಂ ಬಿಡಿಸಿ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಎಂಬ ಬುದ್ಧೇಂದ್ರಿಯಂಗಳ ಉತ್ಪಾತಮಂ ಮಾಣಿಸಿ, ದಶವಾಯುಗಳ ದುರ್ಗಮನಂಗಳಂ ನಿಲಿಸಿ, ಮನ, ಬುದ್ಧಿ ಚಿತ್ತ ಅಹಂಕಾರಂಗಳ ನಿವೃತ್ತಿಯಂ ಮಾಡಿ, ಕಾಯಶುದ್ಧಿಯಂ ಮಾಡುವುದು. ಸುತ್ತಿರ್ದ ಮಾಯಾಪ್ರಪಂಚಮಂ ಬಿಡಿಸಿ ಜೀವನೇ ಶಿವನೆಂಬ ಪರಿಯಾಯಮಂ ಕೆಡಿಸಿ, ಆ ಜೀವಂಗೆ ಶಿವನಿಷ್ಪತ್ತಿ ನೆಲೆಯಂ ತೋರಿಸಿ, ಜೀವ ಶುದ್ಧಿಯಂ ಮಾಡುವುದು. ಪಂಚಭೂತಗಳಧಿದೇವತೆಗಳಪ್ಪ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಎಂಬ ದೇವತೆಗಳನು ಗರ್ಭೀಕರಿಸಿಕೊಂಡಿಪ್ಪುದನು ಮಹಾ ಶ್ರೀಗುರುವು ತೋರಿಸಿ ಪಂಚಭೂತಂಗಳ ಸ್ಥಾನಮಂ ತಿಳುಪಿ ಭೂತಶುದ್ಧಿಯಂ ಮಾಡುವುದು.

೧+ ಮತ್ತೆ(ಮೂ)

ಜೀವಾತ್ಮನನು ಪರಮಾತ್ಮನನು ಏಕಾತ್ಮನ ಮಾಡಿ ಆತ್ಮಶುದ್ಧಿಯಂ ಮಾಡುವುದು. ಜೀವಾತ್ಮನ ಶರೀರಾರ್ಥ ಪ್ರಾಣಂಗಳನು ಅರ್ಪಿಸಿಕೊಂಡು, ಭವದ ಬೇರನು ಕೊಯ್ದು ಶಿವಗಣತಿಂಥಿಣಿಯ ಮುಂದೆ ಆ ಶಿಷ್ಯನ ಕೈವಿಡಿದು ತಂದು, ಚೌಕಮಧ್ಯದಲ್ಲಿ ಕುಳ್ಳಿರಿಸಿ, ಆತನ ಮೇಲಣ ದೋಷ ಹೋಹ ಹಾಗೆ ಮಂತ್ರದಿಂದ ಅರ್ಘ್ಯೋದಕಮಂ ತಳಿದು, ವಿಭೂತಿಯ ಪಟ್ಟವಂ ಕಟ್ಟಿ, ಮಸ್ತಕ ಕಲಶದ ಮೇಲೆ ಹಸ್ತಮಂ ಇಳುಹಿ, ಶತಪತ್ರ ಕಮಲದೊಳಗಿಪ್ಪ ಮಹಾಲಿಂಗದ ಸತ್ಕಳೆಯಂ ತೆಗೆದು, ಕ್ರಿಯಾಲಿಂಗದಲ್ಲಿ ಕುಳ್ಳಿರಿಸಿ, ಶಿಷ್ಯನ ಕರಸ್ಥಲದಲ್ಲಿ ಕೊಟ್ಟು, ಕರ್ಣದಲ್ಲಿ ಪಂಚಾಕ್ಷರಿಯನುಪದೇಶಿಸಿ ಸರ್ವಭವಿಕುಲಮಂ ತೊಳೆದು, ಮಾಂಸಪಿಂಡಮಂ ಕಳೆದು, ಮಂತ್ರಪಿಂಡಮಂ ಮಾಡುವುದು ಮಂತ್ರಶುದ್ಧಿ, ಇಂತೀ ಪರಿಯಲ್ಲಿ ಕಾಯಶುದ್ಧಿ, ಜೀವಶುದ್ಧಿ, ಭೂತಶುದ್ಧಿ, ಆತ್ಮಶುದ್ಧಿ, ಮಂತ್ರಶುದ್ಧಿ ಎಂಬ ಪಂಚಶುದ್ಧಿಯಂ ಸರ್ವಶುದ್ಧಿಯಿಂ ಮಾಡಿ ಪುನರ್ಜಾತನಂ ಮಾಡುವುದು ಇದು ಸಹಜದೀಕ್ಷೆಯಯ್ಯ ಕೂಡಲಚನ್ನಸಂಗಯ್ಯ.

೫೦೪

(೪) ಸದ್ಗುರುಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ ತತ್‌ಶಿಷ್ಯನ ಮಸ್ತಕದ ಮೇಲೆ ತನ್ನ ಶ್ರೀಹಸ್ತವನಿರಿಸಿದಡೆ, ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯ ! ಒಪ್ಪುವ ಶ್ರೀ ವಿಭೂತಿಯ ನೊಸಲಿಂಗೆ ಪಟ್ಟವ ಕಟ್ಟಿದಡೆ ಮುಕ್ತಿ ಸಾಮ್ರಾಜ್ಯದೊಡೆತನಕ್ಕೆ ಪಟ್ಟವ ಕಟ್ಟಿದಂತಾಯಿತ್ತಯ್ಯ! ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯವೆಂಬ ಪಂಚಕಲಶದ ಅಭಿಷೇಕವ ಮಾಡಿಸಲು ಶಿವನ ಕಾರುಣ್ಯಾಮೃತದ ಸೋನೆ ಸುರಿದಂತಾಯಿತ್ತಯ್ಯಾ! ನೆರೆದ ಶಿವಗಣಂಗಳ ಮಧ್ಯದಲ್ಲಿ ಮಹಾಲಿಂಗವನು ಕರಸ್ಥಲಾಮಳಕವಾಗಿ ಶಿಷ್ಯನ ಕರಸ್ಥಲಕ್ಕೆ ಇಟ್ಟು, ಅಂಗದಲ್ಲಿ ಪ್ರತಿಷ್ಠಿಸಿ ಪ್ರಣವ ಪಂಚಾಕ್ಷರಿ[ಯು]ಪದೇಶವ ಕರ್ಣದಲ್ಲಿ ಹೇಳಿ, ಕಂಕಣವ ಕಟ್ಟಿದಲ್ಲಿ ಕಾಯವೇ ಕೈಲಾಸವಾಯಿತ್ತು, ಪ್ರಾಣವೇ ಪಂಚಬ್ರಹ್ಮಮಯಲಿಂಗವಾಯಿತ್ತು, ಇಂತು ಮುಂದೆ ತೋರಿ ಹಿಂದೆ ಬಿಡಿಸಿದ ಶ್ರೀಗುರುವಿನ ಸಾನ್ನಿಧ್ಯದಿಂದಾನು ಬದುಕಿದೆನಯ್ಯ ಚನ್ನಮಲ್ಲಿಕಾರ್ಜುನಯ್ಯ.

೫೦೫

(೫) ಭವಬಂಧನದ ಕುಣಿಕೆಯನರಿಯದ ಮಲಿನ ಜೀವಿಗಳ ಮಾಲಿನ್ಯವ ತೊಳೆವ ಶ್ರೀಗುರುವಿನುಪದೇಶದ ಪರಿ ಎಂತೆಂದೊಡೆ: ಸ್ಥೂಲಪಂಚಭೂತಕಾಯದ ಪಂಚತತ್ವಂಗಳ ವಿವರಿಸಿ, ಬೋಧಿಸಿ, ಕಳೆದು, ಸೂಕ್ಷ್ಮಪಂಚಭೂತಕಾಯದ ತನುಮಾತ್ರ ಗುಣಂಗಳ ವಿವರದ ಭೇದವ ಭೇದಿಸಿತೋರಿ ಕಳೆದು, ಕಾರಣಪಂಚಭೂತಕಾಯದ ಕರಣವೃತ್ತಿಗಳ ಮಹಾ ವಿಚಾರದಿಂ ತಿಳುಪಿ ವಿವರಿಸಿ ಕಳೆದು, ಸ್ಥೂಲ ಪಂಚಭೂತಕಾಯದಲ್ಲಿ ಇಷ್ಟಲಿಂಗವ ಪ್ರತಿಷ್ಠೆಯಮಾಡಿ ಸದಾಚಾರ ಕುಳಸ್ಥಳವ

೧–೧ ಯನು (ಮೂ)

ನೆಲೆಗೊಳಿಸಿ, ಸೂಕ್ಷ್ಮ ಪಂಚಭೂತಕಾಯದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯ ಮಾಡಿ ಮಹಾ ವಿಚಾರದನುಭಾವವ ನೆಲೆಗೊಳಿಸಿ, ಕಾರಣಪಂಚಭೂತಕಾಯದಲ್ಲಿ ತೃಪ್ತಿಲಿಂಗವ ಪ್ರತಿಷ್ಠೆಯಮಾಡಿ, ಪರಮಾನಂದಸುಜ್ಞಾನವನು ನೆಲೆಗೊಳಿಸಿ, ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯಂಗಳ ನೆರೆ ಭವಿಸಿ ತೋರಿ, ಪೂರ್ವಜನ್ಮದ ನಿವೃತ್ತಿಯಂ ಮಾಡಿ ಲಿಂಗಜನ್ಮದ ಪ್ರತಿಷ್ಠೆಯಂ ಮಾಡಿ, ಎನ್ನ ಕೃತಾರ್ಥನ ಮಾಡಿದ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ ಕೂಡಲ ಚನ್ನಸಂಗಯ್ಯ.

೫೦೬

(೬) ಬ್ರಹ್ಮಸೃಷ್ಟಿಯಿಂದಾದ ಪಂಚಭೂತ ಸಮ್ಮಿಶ್ರದಿಂದಾದ ಕಾಯವು ಭೂತಕಾಯವು, ವಾಯು ಪ್ರಾಣಿ ಉತ್ಪತ್ತಿ ಸ್ಥಿತಿ ಲಯ ಕಾರಣ ಕಾಯವು. ಈ ಪರಿಯಿಂದ ಇದು ಉತ್ಪತ್ತಿ ದೇವ ದಾನವ ಮಾನವರಿಗೆಯೂ ಒಂದೇ ಪರಿ. ಶ್ರೀಗುರು ಸೃಷ್ಟಿಯಿಂದಾದ ಮಹಾಪ್ರಸಾದ ಮಹಾಮಂತ್ರ ಸಮ್ಮಿಶ್ರದಿಂದಾದ ಕಾಯವು ಪ್ರಸಾದಕಾಯವು, ಮಹಾ ಮಂತ್ರಪಿಂಡವು, ಲಿಂಗಪ್ರಾಣಿ. ಉತ್ಪತ್ತಿ ಸ್ಥಿತಿ ಲಯವಿಲ್ಲ ಸತ್ಯನು ಸದ್ಯೋನ್ಮುಕ್ತನು. ಈ ಪರಿ ಇದು ಉತ್ಪತ್ತಿ ಶ್ರೀಗುರು ಕಾರುಣ್ಯವ ಹಡೆದ ಮಹಾತ್ಮರಿಗೆಯೂ ಒಂದೇ ಪರಿ, ಶ್ರೀಗುರು ಕಾರುಣ್ಯದ ಪರಿ. ಶಿವಭಕ್ತನ ಇರವಿನ ಪರಿ ಇಂತುಟಯ್ಯ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ನಿಮ್ಮ ಶರಣಂಗೆ ಲೋಕದ ಮಾನವರ ಪರಿ ಎಂದರೆ ನರಕ ತಪ್ಪದು.

ಇಂತು ಉಪದೇಶ ಕಾರಣಮಾಗಿ ದೀಕ್ಷಾಗುರು ಸ್ವರೂಪವನೈದಿದ ಲಿಂಗವು ಭಕ್ತನಂಗದಲ್ಲಿ ಶಿಕ್ಷಾಮುಖದಿಂದ ಬೋಧಾಸ್ವರೂಪವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಶಿಕ್ಷಾಗುರುಸ್ಥಲವಾದುದು.

೨. ಶಿಕ್ಷಾಗುರು ಸ್ಥಲ

೫೦೭

(೧) ಅಂತರಂಗ ಬಹಿರಂಗವೆಂದೆಂಬರು. ಆವುದು ಮುಂದು ಆವುದು ಹಿಂದೆಂದರಿಯರು. ಎಳ್ಳೊಳಗಣ ಎಣ್ಣೆ ಕಲ್ಲೊಳಗಣ ಹೇಮ, ಹಾಲೊಳಗಣ ತುಪ್ಪ, ಕಾಷ್ಠದೊಳಗೆ ಅನಿಲನಿಪ್ಪಂತೆ ಇಪ್ಪ ಚಿನ್ಮೂರ್ತಿಯನು ಮನ್ಮಸ್ತಕದಲ್ಲಿ ಶ್ರೀಗುರು ತನ್ನ ಹಸ್ತಾಬ್ಜಮಥನದಿಂದ ಆಕರ್ಷಣೆಯ ಮಾಡಿ ತೆಗೆದು, ಲಿಂಗದ ತನುವಿನೊಳಗಿರಿಸಿ ತಲ್ಲಿಂಗವನಂಗದಲ್ಲಿ ಸ್ಥಾಪ್ಯವ ಮಾಡಿ, ಸುಜ್ಞಾನಕ್ರಿಯನುಪದೇಶವ ಮಾಡಿರಲು ಸತ್ಕ್ರಿಯಾ ಮಥನದಿಂದ ಜೀವ ಶಿವ ಸಂಗವಹ ಬಟ್ಟೆಯನರಿಯದೆ ಹಲವು ಬಟ್ಟೆಯಲ್ಲಿ ಹರಿವುತಿಪ್ಪ ಅವಿದ್ಯಾ ಸಂಬಂಧಿಗಳು ಕರ್ಮನಿರ್ಮಳವಾಗದ ಜಡರುಗಳು, ಗುರುವಚನಪರಾಙ್ಮುಖರು, ಲಿಂಗನಿಷ್ಠಾವಿರಹಿತರು ನಿಮ್ಮ ನೆತ್ತಬಲ್ಲರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ?

೫೦೮

(೨) ಅಜ್ಞಾನವೆಂಬ ಕಾಳಿಕೆವಿಡಿದು ಮನದ ಮೋಹವ ಪರಿಹರಿಸಿದ ಪರಿಯ ನೋಡಿರೇ.ಒಮ್ಮೆ ಕಾಸಿ, ಒಮ್ಮೆ ಕರಗಿಸಿ, ಒಮ್ಮೆ ಬಣ್ಣವಿಟ್ಟು, ಎನ್ನ ಮನದ ಮೋಹವ ಕಳೆದನಯ್ಯ, ಕೂಡಲಚನ್ನಸಂಗಯ್ಯ ನಿಮ್ಮ ಶರಣ ಬಸವಣ್ಣನು.

೫೦೯

(೩) ಲಿಂಗನಿಷ್ಠೆ ಇಲ್ಲದವರಂಗಣವ ಮೆಟ್ಟಲಾಗದು. ಜಂಗಮನಿಷ್ಠೆ ಇಲ್ಲದವರ ಸಂಗವ ಮಾಡಲಾಗದು. ಪ್ರಸಾದನಿಷ್ಠೆ ಇಲ್ಲದವರ ಸ್ನೇಹಸಂಪತ್ತಿಯಲುಣಲಾಗದು. ಲಿಂಗಮುಖಕ್ಕೆ ಬಾರದ ರುಚಿ ಕಿಲ್ಬಿಷ ನೋಡಾ. ಮುಟ್ಟಲಾಗದು ಮಹಾಲಿಂಗ ಕಲ್ಲೇಶ್ವರನೊಲಿಸುವ ಶರಣಂಗೆ.

೫೧೦

(೪) ಆತ್ಮಶುದ್ಧಿಗೆ ಗುರುಹಸ್ತ ಮಸ್ತಕದಲ್ಲಿ ನ್ಯಸ್ತವಾದಂತೆ. ಸ್ಥಾನಶುದ್ಧಿ ಶಿವಲಿಂಗವಿದ್ದುದೇ ಅವಿಮುಕ್ತಿ ಕ್ಷೇತ್ರವಾಗಿ. ದ್ರವ್ಯಶುದ್ಧಿ ಶಿವಲಿಂಗ ಸನ್ನಿಧಿಮಾತ್ರ ಪವಿತ್ರೀಕೃತವಾಗಿ. ಮಂತ್ರಶುದ್ಧಿ ಹರಮಂತ್ರಮಯವಾಗಿ. ಲಿಂಗಶುದ್ಧಿ ಲಿಂಗ ನಿರ್ಮಳ ನಿರುಪಮ ನಿತ್ಯ ಸತ್ಯವಾಗಿ. ಇಂತು ಪಂಚಶುದ್ಧಿ ಎಂದರಿದು ಪ್ರಾಣಲಿಂಗ ಸಂಬಂಧಿಯಾಗಿಪ್ಪುದೇ ಆಗಮ. ಬೇರೆ ಆಗಮವಿಲ್ಲ ಉರಿಲಿಂಗ ಪೆದ್ದಿಪ್ರಿಯ ಗುರುವಿಶ್ವೇಶ್ವರಾ.

ಟೀಕು : ಶ್ರೀಗುರು ಹಸ್ತಮಸ್ತಕದಲ್ಲಿ ಇರಿಸಿದಾಗವೇ ಆತ್ಮಶುದ್ಧಿ. ಲಿಂಗವಿದ್ದುದೇ ಅವಿಮುಕ್ತಿಕ್ಷೇತ್ರ ಸ್ಥಾನಶುದ್ಧಿ, ಲಿಂಗನಿರೀಕ್ಷಣೆಯಿಂದವೇ ದ್ರವ್ಯ ಶುದ್ಧಿ, ಗುರು ಪೇಳಿದ ಕರ್ಣಮಂತ್ರದಿಂದವೇ ಮಂತ್ರಕಾಯವಾಯಿತ್ತು ಗುರು ಮುಟ್ಟಿದಾಗವೇ ಶಿಲಾಭಾವವಳಿದು ಶಿವಕಳೆಯ ಭಾವಿಸಿ ಕರಸ್ಥಲದಲ್ಲಿ ಕೊಟ್ಟುದು ಪ್ರಾಣಲಿಂಗ. ಇಂತಪ್ಪ ಗುರುಮಂತ್ರ ಕ್ರೀಯಿಂದಾದ ಪ್ರಾಣಲಿಂಗ ಸಂಬಂಧವಪ್ಪ ಪಂಚಶುದ್ಧಿ ಇಲ್ಲದೆ ಬೇರೆ ಬೇರೆ ಆಗಮ ಶ್ರುತಿ ಮತವಿಡಿದು ಬೇರೆ ಪಂಚಶುದ್ಧಿಯ ಮಾಡಲಿಲ್ಲ ಎಂದು ಈ ವಚನದ ತಾತ್ಪರ್ಯಾರ್ಥ.

ಇಂತು ಶಿಕ್ಷಾಗುರುಸ್ವರೂಪವನೈದಿದ ಲಿಂಗವ ಸದ್ಭಕ್ತನಂಗದಲ್ಲಿ ಸುಜ್ಞಾನ ಕಟಾಕ್ಷೆಯ ಕಣ್ದೆರವೆಯ ನಿಮಿತ್ಯ ಸುಜ್ಞಾನಸ್ವರೂಪವನೆಯ್ದಿದ ಭೇದವೆಂತಿರ್ದುದೆಂದೊಡೆ, ಮುಂದೆ ಜ್ಞಾನಗುರುಸ್ಥಲವಾದುದು.

೩. ಜ್ಞಾನಗುರುಸ್ಥಲ

೫೧೧

(೧) ಎಸವಿನ ಗುರು ಹೋಗಿ ಶಿಶುವಧೆಯ ಮಾಡಿದಡೆ, ಶಿಶುಹೋಗಿ ಮರಳಿ ಗುರುವ ಕೊಂದಡೆ ಹೆಸರುಗೊಂಬಣ್ಣಗಳು ನೀವು ಕೇಳಿರೇ. ಇವರಿಬ್ಬರು ಸತ್ತ ಠಾವ ಒಬ್ಬರು ಅರಿಯರು. ನಿರ್ವಯಲೆಂದಾತ ನಮ್ಮ ಅಂಬಿಗರ ಚೌಡಯ್ಯ.

ಟೀಕು : ದಿಗ್ದೆಸೆಗಳನೊಳಕೊಂಡಿಪ್ಪ ಅಖಂಡ ಚಿತ್‌ಪ್ರಕಾಶವೇ ಗುರುಮೂರ್ತಿಯಾಗಿ ಬಂದ ಶಿಷ್ಯ ಕಾರಣವೆಂಬುದೀಗ, ಎಸವಿನಗುರು ಹೋಗಿ ಎಂಬ ಶಬ್ದಕ್ಕರ್ಥ. ಅಂತು ಗುರು ಕರುಣಿಸಿ ಶಿಷ್ಯನ ಜೀವತ್ವವನಳಿದು ಶಿವತತ್ವವ ಮಾಡಿದೆನೆಂಬುದೀಗ, ಎಸವಿನ ಗುರುಹೋಗಿ ಶಿಶುವಧೆಯ ಮಾಡಿದಡೆ ಎಂಬ ಶಬ್ದಕ್ಕರ್ಥ. ಅಂತು ಜೀವನ ಧರ್ಮವಳಿದು ಶಿವ ತಾನೆಂದರಿದು ಶಿಷ್ಯನು ಗುರುವೆಂಬ ಲಕ್ಷದ ಭಿನ್ನವಳಿದು, ಅಭಿನ್ನಜ್ಞಾನಿಯಾಗಿರ್ದನೆಂಬುದೀಗ, ಶಿಶು ಹೋಗಿ ಮರಳಿ ಗುರುವ ಕೊಂದಡೆ ಎಂಬ ಶಬ್ದಕ್ಕರ್ಥ. ಅಂತಪ್ಪ ಗುರುಶಿಷ್ಯರಿಬ್ಬರು ಸತ್ತುವಪ್ಪ ಪರಬ್ರಹ್ಮವೆಯಪ್ಪರು. ಇಂತಪ್ಪ ಪರಬ್ರಹ್ಮದ ನಿಲವ ಗುರುಶಿಷ್ಯರೆಂಬ ನಾಮರೂಪವಿಡಿದು ಭಿನ್ನಜ್ಞಾನಿಗಳರಿಯರೆಂಬುದೀಗ, ಹೆಸರುಗೊಂಬ ಅಣ್ಣಗಳು ನೀವು ಕೇಳಿರೇ, ಇವರಿಬ್ಬರು ಸತ್ತ ಠಾವ ಒಬ್ಬರೂ ಅರಿಯರು ನಿರ್ವಯಲೆಂದಾತ ನಮ್ಮ ಅಂಬಿಗರ ಚೌಡಯ್ಯ ಎಂಬ ಶಬ್ದಕ್ಕರ್ಥ.

೫೧೨

(೨) ತಡೆ ನೆಲೆ ಇಲ್ಲದ ಮಹಾನದಿಯಲ್ಲಿ ಒಡಲಿಲ್ಲದ ಅಂಬಿಗ ಬಂದಿದ್ದಾನೆ. ಹಿಡಿವ ಬಿಡುವ ಮನವ ಬೆಲೆಗೊಟ್ಟರೆ ಗಡಣವಿಲ್ಲದೆ ಹಾಯಿಸುವೆ ಹೊಳೆಯಾನು. ನುಡಿಯಿಲ್ಲದ ನಿಸ್ಸೀಮ ಗ್ರಾ[ಮ]ದಲ್ಲಿರಿಸುವೆನೆಂದಾತ ಅಂಬಿಗರ ಚೌಡಯ್ಯ.

೫೧೩

(೩) ಹಸ್ತಮಸ್ತಕ ಸಂಯೋಗವಾಗದ ಮುನ್ನ ಯೌವನ ಮಥನವಾಯಿತ್ತು ಆವುದು ಅಂತರಂಗವೆಂಬೆ ? ಆವುದು ಬಹಿರಂಗವೆಂಬೆ ? ಆವುದು ಆತ್ಮಸಂಗವೆಂಬೆ? ಹಸ್ತಮಸ್ತಕಸಂಯೋಗವೇ ಬಹಿರಂಗ, ಮನಸಂಯೋಗವೇ ಅಂತರಂಗ. ಕೂಡಲಚನ್ನಸಂಗಯ್ಯನಲ್ಲಿ ಆತ್ಮಸಂಯೋಗವಾಯಿತ್ತು.

೫೧೪

(೪) ಗುರುವನರಿವನ್ನಕ್ಕ ಅಷ್ಟಾದಶ ವಿದ್ಯೆಯನರಿಯಲುಂಟು, ಓದಲುಂಟು, ಕೇಳಲುಂಟು, ಹೇಳಲುಂಟು. ಗುರುಕರುಣದಿಂದ ಗುರುವನರಿದ ಬಳಿಕ, ಗುರುವಲ್ಲದೆ ತಾನಿಲ್ಲ, ತಾನಿಲ್ಲವಾಗಿ ಓದಲಿಲ್ಲ, ಓದಲಿಲ್ಲಾಗಿ ಕೇಳಲಿಲ್ಲ, ಕೇಳಲಿಲ್ಲಾಗಿ ಹೇಳಲಿಲ್ಲ, ಹೇಳಲಿಲ್ಲಾಗಿ ಅರಿಯಲಿಲ್ಲ. ಅರಿಯಲಿಲ್ಲಾಗಿ ಅರಿವನರಿಯದ ಗುರುವನರಿಯಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ?

೫೧೫

(೫) ಶಿವಭಕ್ತಿಯಲ್ಲಿ ತೃಪ್ತರಾದವರು ನೀವು ಕೇಳಿರೇ. ನಿಮ್ಮ ಗುರು ಭಕ್ತಿಯ ಮೇಲೆ ಸ್ವಾಯತವ ಮಾಡಿದನು, ಶಿವನ ಮೇಲೆ ಸ್ವಾಯತವ ಮಾಡುವ ಗುರುವಿಲ್ಲ. ಇಲ್ಲೆಲ್ಲ ಶಿವಭಕ್ತಿ ಎಂಬ ಶಬ್ದದೊಳಗಳಿಯಿತ್ತಲ್ಲಾ ಲೋಕವೆಲ್ಲಾ ! ಆಚಾರ್ಯನು ಕುಟಿಲವ ಕೊಟ್ಟು ಹೋದನಲ್ಲಾ ! ಲೋಕದ ಕೈಯಲ್ಲಿ ರೂಪಿಗಳು ಮಾಡಿದ

ಶಬ್ದದೊಳಗಳಿಯಿತ್ತಲ್ಲಾ ಲೋಕವೆಲ್ಲಾ ! ಪಾಷಾಣ ದಂದುಗದ ಹೇಸಿಕೆಯೊಳಗೆ ಸತ್ತಿತ್ತಲ್ಲಾ ಲೋಕವೆಲ್ಲಾ ! ಕೇಳಲಾಗದೀ ಶಬ್ದವ. ಶಿವನ ಕರೆದು ಸ್ವಾಯತವ ಮಾಡಿದೆನು. ಶಕ್ತಿಯ ಕರೆದೆನ್ನ ಮಠಕ್ಕೆ ಕಾಯಕವ ಮಾಡಿಸಿದೆನು. ಇವರಿಬ್ಬರ ಕೈಯಲ್ಲಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನಿಸಿದೆನು.

೫೧೬

(೬) ಭಾವಕ್ಕೆ ಇಂಬಿಲ್ಲ, ಶಬ್ದ ಮೊಸಲು ನೋಡಾ ! ನುಡಿಗೆಡೆಯಿಲ್ಲ, ಎಡೆಗೆಡೆಯಿಲ್ಲ ಗುಹೇಶ್ವರನೆಂಬ ಲಿಂಗವೆರೆಸಲೊಡನೆ.

೫೧೭

(೭) ಉಣದೆ ದಣಿವ ಗುರುವಿನ ಹೆಸರುಗೊಳ್ಳದ ಮುನ್ನಾದ ಶಿಷ್ಯನು ಅನ್ಯರಿಗೆ ತೋರದ ಭಕ್ತಿಯದು. ನಿಮ್ಮೊಳಡಗಿದ ಲಿಂಗೈಕ್ಯವ ಪಸಾರಕ್ಕಿಕ್ಕುವ ಅಜ್ಞಾನಿಗಳೆತ್ತಬಲ್ಲರಯ್ಯ ಕಲಿದೇವಯ್ಯ ?

೫೧೮

(೮) ಗುರು ಶಿಷ್ಯ ಸಂಬಂಧವನರಸಲೆಂದು ಹೋದರೆ ತಾನೇ ಗುರುವಾದ. ತಾನೇ ಶಿಷ್ಯನಾದ. ತಾನೇ ಲಿಂಗವಾದ. ಗುಹೇಶ್ವರ ನಿಮ್ಮ ಶರಣ ಕಾಯದ ಕೈಯಲ್ಲಿ ಲಿಂಗವ ಕೊಟ್ಟಡೆ ಭಾವ ಬತ್ತಲೆಯಾಯಿತ್ತು.

ಇಂತು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುವೆಂಬ ತ್ರಿವಿಧ ಸ್ಥಲವೇಕವಾದ ಲಿಂಗವು ಶರಣನ ಅಂಗದ ಮೇಲೆ ಕರತಳಾಮಳಕವಾಗಿ ಇಷ್ಟಲಿಂಗದ ಸ್ವರೂಪವನೆಯ್ದಿದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾಲಿಂಗಸ್ಥಲವಾದುದು.

೪. ಕ್ರಿಯಾಲಿಂಗಸ್ಥಲ

೫೧೯

(೧) ಕಾಣದುದನರಸುವರಲ್ಲದೆ, ಕಂಡುದನರಸುವರೇ ಅಯ್ಯ ? ಘನಕ್ಕೆ ಘನವಾದ ವಸ್ತು ತಾನೇ ಗುರುವಾದ, ತಾನೇ ಲಿಂಗವಾದ, ತಾನೇ ಜಂಗಮವಾದ, ತಾನೇ ಪ್ರಸಾದವಾದ, ತಾನೇ ಮಂತ್ರವಾದ, ತಾನೇ ತಂತ್ರವಾದ, ಸಕಲವಿದ್ಯಾ ಸ್ವರೂಪವಾದ. ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಗುಹೇಶ್ವರಾ.

ಟೀಕು : ಕಾಣಬಾರದ ಪರಬ್ರಹ್ಮವನರಸಿ ಕಾಣೆನೆಂದು ಬಳಲಬೇಡ. ಕಾಣಬಂದ ಶ್ರೀಗುರು ಮುಂದೆ ಪ್ರತ್ಯಕ್ಷವಾಗಿರಲು ಅಲ್ಲಿಯೂ ಕಾಣದುದ ಕಂಡುಕೊಂಬುದು ಎಂಬುದೀಗ, ಕಾಣದುದನರಸುವರಲ್ಲದೆ ಕಂಡುದನರಸುವರೇ ಹೇಳಾ ಎಂಬ ಶಬ್ದಕ್ಕರ್ಥ. ಅದು ಕಾರಣ ಘನಕ್ಕೆ ಘನವಾದ ಮಹಾ ಶ್ರೀಗುರು ಶಿಷ್ಯನ ಮೇಲಣ ಕರುಣದಿಂದ[೧+] ದೀಕ್ಷಾಗುರುವಾಗಿ, ದೀಕ್ಷೆಯ ಕೊಟ್ಟು, ಲಿಂಗವಾಗಿ

೧+ ಗುರುವಾಗಿ (ಮೂ)

ಪೂಜೆಗೊಂಡು, ಜಂಗಮವಾಗಿ ಬೋಧಿಸಿ, ಪ್ರಸಾದವಾಗಿ ಬಂದು ಪರಿಣಾಮವ ತೋರಿ, ಮಂತ್ರವಾಗಿ ಷಡಕ್ಷರಿಯ ರೂಪಾಗಿ ಬಂದು ಅಂತರಂಗದಲ್ಲಿ ನೆಲೆಗೊಂಡು ಯಂತ್ರವಾಗಿ ಸಕಲ ಕ್ರೀಗಳನೆ ನಿಲಿಸಿ, ಸಕಲ ವಿದ್ಯಾ[ಸ್ವ]ರೂಪಾಗಿ ಬಂದು ಮಹಾನುಭಾವದೊಳಗೆ ನೆಲೆಗೊಂಡು ನಿಂದು ಇಂತು ಸರ್ವಾಂಗದಲ್ಲಿ ಲಿಂಗಸ್ವಾಯತವಾಗಿ ಸರ್ವಾಂಗವಿಕಾರ ನಿರ್ವಿಕಾರವಾಯಿತ್ತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೫೨೦

(೨) ಪ್ರಣವ ಮಂತ್ರವ ಕರ್ಣದಲ್ಲಿ ಹೇಳಿ ಗುರು ಅಂಗದ ಮೇಲೆ ಲಿಂಗವ ಪ್ರತಿಷ್ಠೆಯ ಮಾಡಿದ ಬಳಿಕ, ಒಳಗೆ ಲಿಂಗವಿಪ್ಪುದೆಂಬ ಪಂಚಮಹಾಪಾತಕರ ನುಡಿಯ ಕೇಳಲಾಗದು. ಒಳಗಿಪ್ಪನೇ ಲಿಂಗದೇವನು ? ಮಲಮೂತ್ರ ಮಾಂಸದ ಹೇಸಿಕೆಯ ಪ್ರಾಣವಿಪ್ಪುದಲ್ಲದೆ ಲಿಂಗವಿಪ್ಪುದೇ ? ಆ ಪ್ರಾಣನ ತಂದು ತನ್ನ ಇಷ್ಟಲಿಂಗದಲ್ಲಿ ನೆರೆಯಬಲ್ಲಾತನೇ ಪ್ರಾಣಲಿಂಗಸಂಬಂಧಿ. ತನ್ನ ಇಷ್ಟಲಿಂಗದಲ್ಲಿ ದಾಸೋಹವ ಮಾಡಲರಿಯದೆ ಹಲವು ಬಳಕೆಯ ಬಳಸುವ ಮಟ್ಟಿಯ ಭಂಡರನೆನಗೊಮ್ಮೆ ತೋರದಿರಾ ಕೂಡಲಚೆನ್ನಸಂಗಮದೇವಾ.

೫೨೧

(೩) ಸಾಕಾರವಿಡಿದು ಅರ್ಚನೆ ಪೂಜೆಯ ಮಾಡುವುದಲ್ಲದೆ ನಿರಾಕಾರವನಂಬಲಾಗದು. ಶ್ರೀಗುರು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟ ಬಳಿಕ ವಜ್ರದಲ್ಲಿ ಬಯಲನರಸಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ?

೫೨೨

(೪) 'ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ' ಎಂದೆನಿಸುವ ಲಿಂಗವು, ಶ್ರುತಿ: 'ಚಕಿತಮಭಿಧತ್ತೆ' ಎಂದೆನಿಸುವ ಲಿಂಗವು, 'ಅಣೋರಣೀಯಾನ್ಮಹತೋ ಮಹೀಯಾನ್' ಎಂದೆನಿಸುವ ಲಿಂಗವು, 'ಅಯಂ ಮೇ ಹಸ್ತೋ ಭಗವಾನ್, ಅಯಂ ಮೇ ಭಗವತ್ತರಂ' ಎಂದೆನಿಸುವ ಲಿಂಗವು, 'ಏಕಮೂರ್ತಿ ಸ್ತ್ರಿವಿಧಾಭೇದಂ' ಎಂದೆನಿಸುವ ಲಿಂಗವು, ಶ್ರೀಗುರುಲಿಂಗ ಜಂಗಮ ರೂಪಾಗಿ 'ಇಷ್ಟ, ಪ್ರಾಣ ಸ್ಥಥಾಭಾವಂ ತ್ರಿವಿಧಾಮ್ಯೈಕ್ಯವರಾನನೆ' ಎಂದುದಾಗಿ ತ್ರಿವಿಧವು ಏಕೀಭವಿಸಿ ಲಿಂಗರೂಪಾಗಿ, ಎನ್ನ ಕರಸ್ಥಲಕ್ಕೆ ಬಂದು ಕರತಳಾಮಳಕವಾಗಿ ತೋರುತ್ತಿರ್ದನೇ ! ಆಹಾ ಎನ್ನ ಪುಣ್ಯವೇ ! ಆಹಾ ಎನ್ನ ಭಾಗ್ಯವೇ ! ಆಹಾ ಎನ್ನ ಸತ್ಯವೇ ! ಆಹಾ ಎನ್ನ ನಿತ್ಯವೇ ! ಶಿವಶಿವಾ ಮಹಾದೇವ ಮಹಾದೇವ ನೀನೆ ಬಲ್ಲೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೫೨೩

(೫) ನಿತ್ಯ ನಿರಂಜನ ಪರಂಜ್ಯೋತಿಲಿಂಗವು ಪ್ರತ್ಯಕ್ಷವಾಗಿ ಕರಸ್ಥಲಕ್ಕೆ ಬರದಿರಲು ಮತ್ತೆ ನೆನೆನೆನೆದು ಬದುಕಿಹೆನೆಂಬುದು ಅಜ್ಞಾನವಯ್ಯ. ಸತ್ಯವು

ಸರ್ವಾಂಗ ಲಿಂಗವೆಂಬುದನರಿಯದೆ ಮತ್ತೆ ಕಾಯವೆರಸಿ ಕೈಲಾಸಕ್ಕೆ ಹೋಗಬೇಕೆಂದು ಬಯಸುವದು ಕ್ರಮವಲ್ಲವಯ್ಯ. ಪಂಚಾಮೃತ ಮುಂದೆ ಬಂದಿರಲು ಹಸಿದೆನೆಂದು ಲೋಗರ ಮನೆಯಲನ್ನವ ಬೇಡುವರೇ ? ಕಣ್ಣ ಮುಂದೆ ನಿಧಾನವಿರಲು ಬಳಸಲರಿಯದೆ ಬಡತನದಲ್ಲಿಹರೇ? ಲಿಂಗವಿಲ್ಲದವರು ಮೊದಲಾಗಿ ಲಿಂಗವ ನೆನೆದು ಬದುಕಿಹನೆಂಬರು. ಇದ ಕಂಡು ನಂಬದಿಹುದುಚಿತವೇ ? ಇದು ಗುಣವಲ್ಲ ಮುಂಗಯ್ಯ ಕಂಕಣಕ್ಕೆ ಕನ್ನಡಿ ಬೇಡ. ಲಿಂಗವಂಗದೊಳಿರ್ದುದಕ್ಕೆ ಲಿಂಗದ ಪರಿ ಎಂತೆಂದು ಅನ್ಯರ ಕೈಯಲು ಕೇಳಬೇಡ. ತನ್ನಲ್ಲಿ ತಾನೇ ನೋಡಿಕೊಂಬುವುದು. ಇದನರಿತು ಚಿಂತಿಸಬೇಡ. ಕಾಣೆನೆಂದು ಮನದಲ್ಲಿ ಮರುಗಬೇಡ. ಮುಂದೆ ಜನ್ಮ ಉಂಟೆಂದು ಮನದಲ್ಲಿ ನೋಯಬೇಡ. ಇದು ಕಾರಣ ತನ್ನ ಕರಸ್ಥಲದೊಳಗಿರ್ದ ವಸ್ತುವನು ತಾನರಿದಡೆ, ತಾನೇ ಶಿವನು. ಇದು ಸತ್ಯ ಶಿವನಾಣೆ; ಶಿವಬಲ್ಲ. ಶಿವಶಿವಾ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಇಂತು ಅಂಗದೊಳಳವಟ್ಟ ಸತ್ಕ್ರಿಯಾಲಿಂಗವು ಸದ್ಭಕ್ತನ ಹೃದಯಾಂಗದಲ್ಲಿ ಭಾವಭರಿತವಾಗಲು ಮುಂದೆ ಭಾವಲಿಂಗಸ್ಥಲವಾದುದು.

೫. ಭಾವಲಿಂಗಸ್ಥಲ

೫೨೪

(೧) ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಡರು. ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು. ನಾನೆನ್ನ ಭಾವಕ್ಕೆ ಪೂಜಿಸಹೋದರೆ ಕೈತಪ್ಪಿ ಮನದಲ್ಲಿ ಸಿಲುಕಿತ್ತು. ಎನ್ನ ಲಿಂಗವು ಸಾಧಕನಲ್ಲ, ಭೇದಕನಲ್ಲ. ಗುಹೇಶ್ವರ ಅಲ್ಲಯ್ಯ ತಾನೇ ಬಲ್ಲ.

ಟೀಕು : ಎಲ್ಲರೂ ಲಿಂಗವನು ಧರಿಸಿಕೊಂಡರು. ಲಿಂಗಾರ್ಚನೆಯ ಮಾಡುವ ಪರಿಯಲ್ಲ. ಶಿವಯೋಗಿಯ ಪರಿಯು ಮತ್ತೆಂತೆಂದರೆ, ಮನಮುಟ್ಟಿ ಪೂಜಿಸ ಹೋದರೆ, ಆ ಮನವೇ ಲಿಂಗವೆಂದರಿದು, ಅಸಾಧ್ಯ ಸಾಧಕನಾಗಿಪ್ಪ ಕಾರಣ ನಾನೆನ್ನ ಭಾವಕ್ಕೆ ಪೂಜಿಸಹೋದರೆ ಕೈತಪ್ಪಿ ಮನದಲ್ಲಿ ಸಿಲುಕಿತ್ತು ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗಿ ಅಭ್ಯಾಸಿಯಲ್ಲದೆ ನಿಜವಾದ ಕಾರಣ ಸಾಧಕನಲ್ಲ, ಬೋಧಕನಲ್ಲ ಎಂಬ ಶಬ್ದಕ್ಕರ್ಥ.

೫೨೫

(೨) ಅರ್ಚನೆ ಆವರಿಸಿತ್ತಯ್ಯ, ಪೂಜೆ ಪೂರಿತವಾಯಿತ್ತಯ್ಯ, ಸಮತೆ ಪರಿಣಾಮಿಸಿತ್ತು, ನಿರ್ವಿಕಲ್ಪ ಸಂಧಾನವಾಯಿತ್ತು ಮಹಾಲಿಂಗ ಕಲ್ಲೇಶ್ವರನ ನೆನೆವ ಭಾವಕ್ಕೆ.

೫೨೬

(೩) ಕರಸ್ಥಲದ ಬೆಳಗಿನೊಳಗೊಂದು ಘನಲಿಂಗದ ಬೆಳಗ ಕಂಡೆ.

ಮಹಾಮಂಗಳ ನಿಳಯನಾಗಿ ತೋರುತ್ತಿದ್ದಾನೆ. ಮಹಾಮಂಗಳ ನಿಳಯನಾಗಿ ತೋರುತ್ತಿದ್ದಿತ್ತು; ಗುಹೇಶ್ವರಲಿಂಗದ ವಾರ್ತೆ ಸಂಗನಬಣ್ಣನಲ್ಲಿ ನಿವಾಳಿಸುತ್ತಿದ್ದಿತ್ತು.

೫೨೭

(೪) ಕಾಯವೇ ಕಳೆಯಾಗಿ ಪ್ರಾಣಲಿಂಗವಾಗಿ ಭಾವ ಭಾವಿಸುತ್ತಿದ್ದಿತ್ತು ನೋಡಾ ! ಅನುಭಾವ ಕರಸ್ಥಲವಾಗಿ ಭಾವ ಭಾವಿಸುತ್ತಿದ್ದಿತ್ತು ನೋಡಾ ! ಸಾಕ್ಷಿ : ''ದೇಹೋ ದೇವಾಲಯಂ ಪ್ರೋಕ್ತಂ । ಜೀವ ದೇವ ಸದಾಶಿವ । ತ್ಯಜೋತುಜ್ಞಾನ ನಿರ್ಮಾಲ್ಯಂ ಸೋಹಂ ಭಾವೇನ ಪೂಜಯೇತ್ ॥'' ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಯ್ಯ ಮಹವ ನುಂಗಿದ ಮಹಂತನ ಬೆರಗು.

೫೨೮

(೫) ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ಲಿಂಗವ ಕಂಡೆ. ಕಂಡು ಕಂಡು ಬೆರಗಾದೆ. ಆತನ ಕಂಡು ಬೆರಗಾದೆ. ಅಂತರಂಗ ಶುದ್ಧಾತ್ಮನಲ್ಲಿ ಅ್[ನ]್ಮಿಷ ನಿರ್ಜೈಕ್ಯ ಗುಹೇಶ್ವರನ.

೫೨೯

(೬) ಎನ್ನ ಮನವು ನಿಮ್ಮಲ್ಲಿ ನಟ್ಟು ತೆಗೆಯಬಾರದ ಬೆರಗು ನೋಡಯ್ಯ, ಇಹವೆಂಬುದನರಿಯೆ, ಪರವೆಂಬುವನರಿಯೆ, ಪರಮಾನಂದದಲ್ಲಿ ಇರ್ದೆ ನೋಡಯ್ಯ. ಪರಮ, ನಿನ್ನ ನೆನಹೇ ನೆನಹಾಗಿ ಪರಮಸುಖದಲ್ಲಿ ಸುಖಿಸುತಿರ್ದೆ ನೋಡಯ್ಯ. ಅಪ್ರತಿಮ ಕೂಡಲಚನ್ನಸಂಗಯ್ಯ, ಎನ್ನ ಬೆರಗಿನ ಭೇದವ ನೀನೇ ಬಲ್ಲೆಯಯ್ಯ.

ಇಂತು ಸದ್ಭಾವದಲ್ಲಿ ಭರಿತನಾಗಿ ಚಿದ್ಭಾವ ಸ್ವರೂಪವನೈದಿದ ಲಿಂಗವು ಸದ್ಭಕ್ತನಂಗದಲ್ಲಿ ನಿಂದು ಮಹಾಜ್ಞಾನಸ್ವರೂಪವಳವಡಲು ಮುಂದೆ ಜ್ಞಾನಲಿಂಗ ಸ್ಥಲವಾದುದು.

೬. ಜ್ಞಾನಲಿಂಗಸ್ಥಲ

೫೩೦

(೧) ಭಾವದಲ್ಲಿ ಸಿಲುಕಿದ ಲಿಂಗಕ್ಕೆ ಪ್ರಳಯ. ಪ್ರಳಯವದ್ಭುತ ಕಾಣಿರೇ. ಅದು ಪ್ರಾಣಲಿಂಗವೆಂತೆಂಬೆ ? ಲಿಂಗಪ್ರಾಣಿ ಎಂತೆಂಬೆ ? ಗುಹೇಶ್ವರನೆಂಬ ಲಿಂಗವು ನಿಂದಲ್ಲಿಯೇ ನಿಂದಿತ್ತು.

೫೩೧

(೨) ಜಾತಿಭೇದಂಗಳನರಿ[ಯ]ದಯ್ಯ, ಸಾಕ್ಷಾತ್ ಹಿಂದುಮುಂದು ಹರಿಯಿತ್ತಯ್ಯ. ಪ್ರೀತಿಯಿಂದ ಬೆಳಗು ಮತ್ತಪ್ಪದಯ್ಯ. ಆದದಾತ ಗುಹೇಶ್ವರ ನೆಂದರಿವುದಯ್ಯಾ.

೧–೧ ನು (ಮೂ) ೨–೨ ವು (ಮೂ)

೫೩೨

(೩) ಚಿತ್ತದ ಸ್ನೇಹವ ಸಜ್ಜನಕರ್ಪಿತವ ಮಾಡೆ; ನೆಟ್ಟಿರ್ದ ಬೆಟ್ಟಕ್ಕೆ ತಾಗು ತಡೆಯುಂಟೆ ಎಲೆ ಮರುಳೆ ? ಆತುರದಲ್ಲಿ ಕಳವಳಿಸಿ ವ್ಯಾಕುಲದಲ್ಲಿ ಡಾವರಿಸು ತಿಪ್ಪುದೀ ಮನವು. ಆ ಮನವು ೧[ಚಿಪ್ಪೆ]೧ದೋರದ ಘನಕ್ಕೆ ಬೆಂಬತ್ತಿ ಬಿಡದಿರಬಲ್ಲಡೆ ತನ್ಮೂರ್ತಿ ತನ್ನಲ್ಲಿ ಗುಹೇಶ್ವರಲಿಂಗವು.

೫೩೩

(೪) ನೋಡುವುದು, ನೋಡಲರಿಯದೆ ಕೆಟ್ಟಿತಾ ಲೋಕವೆಲ್ಲ. ನೋಡುವುದು; ನೋಡಬಲ್ಲಡೆ ಕೂಡಲಿಲ್ಲ, ಅಗಲಲಿಲ್ಲ. ನೋಟದ ಕೂಟದ ಅಗಲದ ಸುಖವ ಗುಹೇಶ್ವರ ನಿಮ್ಮ ಶರಣ ಬಲ್ಲ.

೫೩೪

(೫) ಬಲ್ಲನಿತ ಬಲ್ಲರಲ್ಲದೆ, ಅರಿಯದುದನೆಂತು ಬಲ್ಲರು ? ಅರಿವು ಸಾಮಾನ್ಯವೇ ? ಅರಿದುದನಾರಿಗೂ ಅರಿಯಬಾರದು. ಗುಹೇಶ್ವರನೆಂಬ ಲಿಂಗವ ನರಿಯದೊಡೆರಡು, ಅರಿದಡೊಂದೇ.

೫೩೫

(೬) ಎನ್ನ ಕಂಗಳೊಳಗಣ ರೂಹಿಂಗೆ ಆನು ಬೇಟವಕೊಂಡು ಬಳಲುವಂತೆ, ಹಿಡಿದು ನೆರೆಯಲಿಲ್ಲಯ್ಯ. ತುರೀಯದ ತವಕವನೇನೆಂಬೆ ? ಸಂಗಸಂಯೋಗ ವಿಲ್ಲದ ಗತಿ ಸುಖವನರಸಲುಂಟೆ ? ಗುಹೇಶ್ವರಲಿಂಗದ ಕೃತಕವ ಅಳಿಯೆ ಏನೆಂಬೆ ?

೫೩೬

(೭) ತನುವಿಲ್ಲದೆ ಕಂಡು, ಕಂಡು, ನಿಂ[ದೆ]೨. ಬೆರಗಿಲ್ಲದೆ ಕಂಡು [ಕಂಡು] ಬೆರಗಾದೆ. ರೂಹಿಲ್ಲದೆ ಕಂಡರಿತೆ ಗುಹೇಶ್ವರನೆಂಬ ಲಿಂಗವ.

೫೩೭

(೮) ಮನಕ್ಕೆ ತೋರದು, ನೆನೆವಡನುವಲ್ಲ. ಘನಕ್ಕೆ ಘನವು. ದದನೇನೆಂದು ಹೇಳುವೆನಯ್ಯ ? ಆರರಿಂದ ಮೀರಿದುದ, ಬೇರೆ ತೋರಲಿಲ್ಲದುದ, ದೇವದಾನ ಮಾನವರ ಬಲ್ಲತನದ ಬಗೆಯ ಮೀರಿದುದನೇನಹೇಳುವೆನಯ್ಯ ? ಸಾಕ್ಷಿ: "ಆದಿಮಧ್ಯಾಂತ ಶೂನ್ಯಂ ಚ ವ್ಯೋಮಾತೀತ ನಿರಂಜನ ಧ್ಯಾನ ಜ್ಞಾನ ಮನೋ ಹೀನಂ । ಶೂನ್ಯಲಿಂಗ ಮನಾಶ್ರಯಂ" ಎಂದುದಾಗಿ, ಅರಿಯಬಾರದು, ಕುರುಹು ದೋರದು, ತೆರಹಿಲ್ಲದಿಪ್ಪುದು ಮಹಾಲಿಂಗ ಕಲ್ಲೇಶ್ವರ.

ಇಂತು ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗವೆಂಬ ತ್ರಿವಿಧಸ್ಥಲವು ಏಕವಾದ ಲಿಂಗವು ಭಕ್ತನ ಸ್ವಯಂ ಭಾವ ಗುಣದಲ್ಲಿ ನಿಶ್ಚಲವಾಗಿರ್ದ ಭೇದವೆಂತಿರ್ದು ದೆಂದಡೆ, ಮುಂದೆ ಸ್ವಯಸ್ಥಲವಾದುದು.

೧–೧ ಚಿನ್ನ (ಮೂ) ೨–೨ ದು (ಮೂ).

೭. ಸ್ವಯಸ್ಥಲ

೫೩೮

(೧) ಲಿಂಗದೊಳಗಣ ಬೀಜ, ಜಂಗಮಲುತ್ಪತ್ತಿ. ಕಾಯಗುಣವಿಲ್ಲಾಗಿ ಸಂಸಾರ ಭಯವಿಲ್ಲ, ಅಂತರಂಗ ಶುದ್ಧಾತ್ಮ ನಿಸ್ಸಂಗಿಜಂಗಮ ಕೂಡಲಚನ್ನ ಸಂಗಮದೇವಾ.

ಟೀಕು : ಜ್ಞಾನಕಲಾಸ್ವರೂಪನಾಗಿಪ್ಪ ಶರಣನೇ ಜಂಗಮ. ಅಂತಪ್ಪ ಜಂಗಮವು ತನ್ನ ಚಿತ್‌ಪ್ರಣಮ ಚೈತನ್ಯ ಕಲೆಯನು ತನ್ನ ಭಾವದ ಮುಖದಲ್ಲಿ ಉದ್ಭವವ ಮಾಡಿ ಇಷ್ಟಲಿಂಗವಾಗಿ ಪಿಡಿದು ತನ್ನ ನಿಜವನು ನೋಡಿ ಸುಖಿಸುತ್ತಿಪ್ಪ ಕಾರಣ ಲಿಂಗದೊಳಗಣ ಬೀಜ ಜಂಗಮದಲುತ್ಪತ್ತಿ ಎಂಬ ಶಬ್ದಕ್ಕರ್ಥ. ಇಂತು ಅಂತರಂಗ ಬಹಿರಂಗವೆಲ್ಲ ಲಿಂಗವೆಯಾಗಿಪ್ಪ ಕಾರಣ ಜಂಗಮಕ್ಕೆ ದೇಹವಾಸನೆ ಗುಣ ಧರ್ಮ ಕರ್ಮ ಸಂಸಾರ ಭವ ಭಯಂಗಳೇನೂ ಇಲ್ಲದೆ, ದೇಹ ಸಂಸಾರ ಸಂಗವಿದ್ದು ನಿಸ್ಸಂಗಯಾಗಿಪ್ಪನು. ಜಂಗಮವೆಂಬುದೀಗ ಕಾಯ ಗುಣವಿಲ್ಲವಾಗಿ ಸಂಸಾರ ಭಯವಿಲ್ಲ, ಅಂತರಂಗ ಶುದ್ಧಾತ್ಮನಾಗಿ ನಿಸ್ಸಂಗಿ ಜಂಗಮವೆಂಬ ಶಬ್ದಕ್ಕರ್ಥ.

೫೩೯

(೨) ಅದುಬೇಕು, ಇದುಬೇಕು, ಎಂಬ ಎದೆಗುದಿಹತನಬೇಡ; ಸದೈವ ನಾಗಿರ್ದಡೆ ಸಾಕು. ಪಡಿಪದಾರ್ಥಂಗಳು ತಾನಿದ್ದೆಡೆಗೆ ೧[ಬ]೧ಹವಯ್ಯ. ನಿಧಿ ನಿಕ್ಷೇಪಂಗಳು ತಾನಿದ್ದೆಡೆಗೆ ೧[ಬ]೧ಹವಯ್ಯ, ಸದುಹೃದಯಶುದ್ಧನಾಗಿ ಸಕಳೇಶ್ವರ ದೇವಂಗೆ ಶರಣೆಂದಡೆ ನಿಜ ಪದವನೀವನು.

೫೪೦

(೩) ತನುವ ಪಡೆದು ಧನವ ಗಳಿಸಬೇಕೆಂದು ಮನುಜರ ಮನೆಯ ಬಾಗಿಲಿಗೆ ಹೋಗಿ ಮನಬಂದ ಪರಿಯಲ್ಲಿ ನುಡಿಸಿಕೊಂಡು ಮನನೊಂದು ಬೆಂದು ಮರುಗುತ್ತಿರಲಾರೆನಯ್ಯ. ನೀ ಕರುಣಿಸಿ ಇದ್ದ ಠಾವಿನಲ್ಲಿ ಇಹಂತಹ ಪರಮ ಸುಖವು ಎಂದು ದೊರೆಕೊಂಬುದೋ ಎನಗೆ ಸಕಳೇಶ್ವರಾ ?

೫೪೧

(೪) ಉದಾಸೀನದಿಂದ ಮಾಡಿದಡೆ ಮುಟ್ಟಲಾಗದು. ಅದು ಅನರ್ಪಿತವೆನಿ ಸುವುದು. ವಿನಯಾರ್ಥ ಮಾಡಿದಡೆ ಮುಟ್ಟಿ ಅರ್ಪಿತವ ಮಾಡುವುದು. ಕೂಡಲ ಚನ್ನಸಂಗಯ್ಯ, ಇಂತಪ್ಪ ಲಿಂಗಾಭಿಮಾನಿಯ ತೋರಾ ಎನಗೆ.

೫೪೨

(೫) ಕರ್ತನಿರ್ದೆಡೆಗೆ ಭೃತ್ಯಾಚಾರವ ಮಾಡಿಸಿಕೊಂಬ ಕರ್ತಂಗೆ

೧–೧ ಬಾ (ಮೂ)

ಕರ್ತೃತ್ವವಲ್ಲದೆ, ಭೃತ್ಯನಿರ್ದೆಡೆಗೆ ಕರ್ತನೆಂತೆಂದು ಭೃತ್ಯಾಚಾರವ ಮಾಡಿಸಿಕೊಂಬ ಕರ್ತಂಗೆ ಕರ್ತೃತ್ವವೆಲ್ಲಿಯದೋ ? ಜಗದ ಕರ್ತನ ವೇಷವ ಧರಿಸಿ ಕರ್ತನಾದ ಬಳಿಕ ಭಕ್ತನಿದ್ದೆಡೆಗೆ ಬಂದು ಭಕ್ತಿಯ ಮಾಡೆಂದಡೆ, ಎನ್ನ ಕರ್ತೃತನಕ್ಕೆ ಅದೇ ಹಾನಿ ನೋಡಾ ! ಲಿಂಗಾಣತಿಯಿಂದ ಬಂದ ಪದಾರ್ಥವ ಲಿಂಗಾರ್ಪಿತವ ಮಾಡುವುದಲ್ಲದೆ ಅಂಗದಿಚ್ಛೆಗೆ ಅಂಗವಿಸಿ ಬೇಡಿದೆನಾದಡೆ, ಎನ್ನ ಲಿಂಗಾಭಿಮಾನಕ್ಕೆ ಅದೇ ಹಾನಿ ನೋಡಾ ! ದೇಹ ಮನ ಪ್ರಾಣಂಗಳು ನಿಮ್ಮವಾಗಿ ನಾ ಹೊರೆಯಬೇಕೆಂಬ ಭ್ರಾಂತಿ ಎನಗಿಲ್ಲ, ಬಡಮನವ ಮಾಡಿ ಒಂದಡಿಯ ನಡೆದೆನಾದಡೆ ಮನದೊಡೆಯ ಸಕಳೇಶ್ವರದೇವ ನಿಮ್ಮಾಣೆ.

೫೪೩

(೬) ಸಕೃತ್ ಸಂಸಾರದಲ್ಲಿ ಜನಿಸಿ ಪ್ರಕೃತಿ ಗುಣವಳಿಯದೆ ಮನುಜರ ಬೇಡುವ ಯಾಚಕರನೊಲ್ಲ, ಅಭವನಮುಖದಲ್ಲಿ ಬಂದುದನಲ್ಲದೆ ಕೈಕೊಳ್ಳ, ಕೂರ್ಮನ ಶಿಶುವಿನ ಅಪ್ಯಾಯನದಂತೆ ಆರಾಧ್ಯ ಸಕಳೇಶ್ವರದೇವರಲ್ಲಿ ದಯಾಮೃತವನುಂಬ ಶರಣ.

೫೪೪

(೭) ದೊರೆಕೊಂಡಂತೆ ಮನ ದಣಿದಿಪ್ಪವರ ದುಃಖಕ್ಕೆ ದೂರಾಗಿಪ್ಪವರ ಒಳಗನರಿದು ಹೊರಗೆ ಮರೆದು ಸದಾನಂದದಲ್ಲಿಪ್ಪವರ ತೋರಾ ಎನಗೆ.ಸಕಳೇಶ್ವರದೇವಾ ಎನಗಿದೇ ವರವನೀವುದು ಕಂಡಾ ತಂದೆ.

ಇಂತು ಸ್ವಯಂಭಾವಗುಣದಲ್ಲಿ ನಿಶ್ಚಲವಾದ ಲಿಂಗವು ಭಕ್ತನಲ್ಲಿ ನಿಂದು ಭಕ್ತಿ ಕಾರಣವಾಗಿ ಚರಿಸುವ ಭೇದವೆಂತಿರ್ದುದೆಂದೊಡೆ, ಮುಂದೆ ಚರಜಂಗಮ ಸ್ಥಲವಾದುದು.

೮. ಚರಸ್ಥಲ

೫೪೫

(೧) ಕಣ್ಣೇ ಕಟ್ಟಿಗೆಯಾಗಿ, ಕಯ್ಯೇ ಕಪ್ಪರವಾಗಿ, ಕಿವಿಯೇ ಸಕಲ ಪುರಾತನರ ಕಾರುಣ್ಯವೆನುತ ಮನದ ಭಿಕ್ಷವನುಂಡು ತನುಪರಿಣಾಮನೈದಿಹ ಘನಮಹಿಮರ ತೋರಯ್ಯ ಗುಹೇಶ್ವರಾ.

ಟೀಕು : ಕಂಗಳೊಳಗೆ ಇಪ್ಪ ರೂಪಗ್ರಹಣವೆಂಬ ಹಸ್ತದೊಳಗೆ ಸುಜ್ಞಾನವೆಂಬ ಲಾಕುಳವ ಹಿಡಿದು, ಕರಸ್ಥಲದೊಳಗೆ ಸರ್ವಾಚಾರಸಂಪತ್ತಿನ ಪಾತ್ರಸ್ವರೂಪವಪ್ಪ ಲಿಂಗವ ಹಿಡಿದುಕೊಂಡು ಇರುತ್ತಿಪ್ಪುದೀಗ, ಕಣ್ಣೇ ಕಟ್ಟಿಗೆಯಾಗಿ ಕಯ್ಯೇ ಕಪ್ಪರವಾಗಿ ಎಂಬ ಶಬ್ದಕ್ಕರ್ಥ. ಇಂತು ಅಂಗ ಲಿಂಗವ ಧರಿಸಿಕೊಂಡು ಕರ್ಣದೊಳಗೆ ಮಹಾನುಭಾವಿಗಳ ಉಪದೇಶಾಮೃತವ ಹಡೆದು, ಮನದಲ್ಲಿ ಲಿಂಗರತಿ ಭಿಕ್ಷವನುಂಡು ಆತನು ಅಂಗಪ್ರಸಾದಪರಿಣಾಮದಲ್ಲಿ ಸುಖವನೈದಿಪ್ಪಾತನೇ ಅಚ್ಚಶರಣನೆಂಬುದೀಗ,

ಕಿವಿಯು ಸಕಲ ಪುರಾತನರ ಕಾರುಣ್ಯವೆನುತ ಮನದ ಭಿಕ್ಷವನುಂಡು ತನುಪರಿಣಾಮವನೈದಿಪ್ಪ ಘನಮಹಿಮರ ತೋರಾ ಎಂಬ ಶಬ್ದಕ್ಕರ್ಥ.

೫೪೬

(೨) ಹಸಿವಿಲ್ಲದೆ ಉಣಬಲ್ಲಡೆ, ಉಪಾಧಿ ಇಲ್ಲದೆ ಬೇಡಬಲ್ಲಡೆ, ಅದು ವರ್ಮ, ಅದು ಸಂಬಂಧ. ಗಮನವಿಲ್ಲದೆ ಸುಳಿಯಬಲ್ಲಡೆ, ನಿರ್ಗಮನಿಯಾಗಿರಬಲ್ಲಡೆ ಅದು ವರ್ಮ, ಅದು ಸಂಬಂಧ. ಅವರ ನಡೆ ಪಾವನ, ಅವರ ನುಡಿ ತತ್ವ, ಅವರು ಜಗದಾರಾಧ್ಯರೆಂಬೆ ಕಾಣಾ ಗುಹೇಶ್ವರಾ.

೫೪೭

(೩) ಸಮತೆ ಎಂಬ ಕಂಥೆಯ ತೊಟ್ಟು, ಸುಬುದ್ಧಿ ಎಂಬ ಟೊಪ್ಪರವನಿಕ್ಕಿ ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮದವೆಂಬ ಚೇಳ ಮೆಟ್ಟದೆ, ಗುಹೇಶ್ವರನ ಶರಣ ಬಂದೆನು ಭಕ್ತಿ ಭಿಕ್ಷವನಿಕ್ಕೈ ಸಂಗನಬಸವಣ್ಣ.

೫೪೮

(೪) ಹೊನ್ನಿಂಗೆ ಬಂದಾತನಲ್ಲ, ಹೆಣ್ಣಿಂಗೆ ಬಂದಾತನಲ್ಲ, ಮಣ್ಣಿಂಗೆ ಬಂದಾತನಲ್ಲ, ಅಶನಕ್ಕೆ ಬಂದಾತನಲ್ಲ, ವೇಷಕ್ಕೆ ಬಂದಾತನಲ್ಲ, ಕೂಡಲ ಚನ್ನಸಂಗಮದೇವಯ್ಯ ಭಕ್ತಿಯ ಪಥವ ತೋರಬಂದನಯ್ಯ.

೫೪೯

(೫) ಭಕುತಿಯಿಂದ ಮಾಡುವ ಭಕ್ತ ನಿರ್ಧನಿಕನಾದಡೆ ತನ್ನ ಕೈಧನವ ವೆಚ್ಚಿಸಿ ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ ಅವರ ದಾಸೋಹಕ್ಕೆ ನಿಲಿಸಿ ತಾ ಕರ್ತನಾಗಿ ಬಂದು ಪರಿಣಾಮಿಸಬಲ್ಲಡೆ, ಜಂಗಮ. ಅಂತವರಿಗೆ ನಮೋ ನಮೋ ಎಂಬೆ. ಅಂತಲ್ಲದೆ ಮುನ್ನ ಮಾಡಿ, ಭೋ ಎಂದು ದೂರಿ ಈಗ ಮಾಡಿರೇ, ಭೋ ಎಂದು ಜರಿದು ಝಂಕಿಸಿ ಹೋಹವರ ಜಂಗಮವೆಂಬಿನೆ ? ಎನ್ನೆನು. ಅದೇನು ಕಾರಣವೆಂದಡೆ, ಆತ ಸೂನೆಗಾರ, ಆತ ಘಾತುಕ, ಆತ ದೋಷಾರ್ಥಿ, ಆತ ಭವಭಾರಿ ಕಾಣಾ ಕೂಡಲ ಚನ್ನಸಂಗಮದೇವ.

೫೫೦

(೬) ಕಂಗಳ ಕರುಳ ಕೊಯ್ದವರ, ಮನದ ತಿರುಳ ಹುರಿದವರ, ಮಾತಿನ ಮೊದಲ ಬಲ್ಲವರನೆನಗೊಮ್ಮೆ ತೋರಾ ಗುಹೇಶ್ವರಾ.

೫೫೧

(೭) ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಾ ! ಬಂದುದೇ ಪರಿಣಾಮ, ನಿಂದುದೇ ನಿವಾಸ. ಅದು ಇದು ಎಂಬುದಿಲ್ಲ ಕೂಡಲ ಚನ್ನಸಂಗ ನಿಮ್ಮ ಶರಣಂಗೆ.

ಇಂತು ಭಕ್ತಿಕಾರಣವಾಗಿ ಚರಿಸಿದ ಚರಲಿಂಗವು ಭಕ್ತನ ಚಿದಾತ್ಮನಲ್ಲಿ ಶ್ರೀಮತ್ಪರಾಪರ ನಿರ್ಗಮನವೆಂತಿದುದೆಂದಡೆ, ಮುಂದೆ ಪರಜಂಗಮಸ್ಥಲವಾದುದು.

೯. ಪರಸ್ಥಲ

೫೫೨

(೧) ಪರತತ್ವ ಪರಮಜ್ಞಾನ ಪರಮಾರ್ಥ ಪರಾಪರ ವಾಙ್ಮನಾತೀತ ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವ ಜ್ಞಾನಜ್ಯೋತಿ ಸುಜ್ಞಾನದ ಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಪರಮಾನಂದ ಮಹಾಮಹಿಮೋನ್ನತ ಪರಶಿವಜ್ಞಾನ ಜ್ಯೋತಿ ಸುಜ್ಞಾನದ ಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಪರಮಾನಂದ ಮಹಾಮಹಿಮಂಗೆ ಶಿವಜ್ಞಾನವೇ ಶೃಂಗಾರ, ಮಹಾಬೆಳಗೇ ವಿಭೂತಿ, ಪಂಚಬ್ರಹ್ಮವೇ ದರ್ಶನ, ಗಗನಸ್ಥಾನವೇ ಕಂಥೆ, ಆಕಾಶವೇ ಚಪ್ಪರ, ಆಜಾಂಡ ಬ್ರಹ್ಮಾಂಡವೇ ಕರ್ಣಕುಂಡಲ, ಆದಿ ಆಧಾರವೇ ಕಕ್ಷಪಾಳ, ಅನಾಹತವೇ ಒಡಿಯಾಣ, ಅದ್ವೈತವೇ ಯೋಗವಟ್ಟಿಗೆ, ಅಗಮ್ಯವೇ ಯೋಗವಾವುಗೆ, ಅಚಲಿತವೇ ಖಪ್ಪರ, ಅಪ್ರಮಾಣವೇ ಲಾಕುಳ, ಅವಿಚಾರವೇ ಸುಳುಹು, ಅಕಲ್ಪಿತವೇ ಭಿಕ್ಷ, ಕೊಂಡುದೇ ಗಮನ, ನಿಂದುದೇ ನಿವಾಸ, ನಿಶ್ಚಿಂತವೆಂಬ ಮಠದಲ್ಲಿ ನಿರಾಕುಳವೆಂಬ ಸಿಂಹಾಸನ ವಿಕ್ಕಿ, ಗಗನ ಗಂಭೀರದ ಬಾವಿಯೊಳಗೆ ಅಗೋಚರದ ಅಗ್ಗವಣಿಯ ತುಂಬಿ, ಮಹಾಘನಪ್ರಾಣ ಲಿಂಗಕ್ಕೆ ಮಂಗಳ ಬೆಳಗೇ ಮಜ್ಜನ, ಬಿಂದ್ವಾಕಾಶವೇ ಗಂಧ, ಮಹದಾಕಾಶವೇ ಅಕ್ಷತೆ, ಪರಾಪರವೇ ಪತ್ರೆಪುಷ್ಪ, ನಿರ್ಮಳವೇ ಲಿಂಗಾರ್ಚನೆ, ಮಹಾಪ್ರಕಾಶವೇ ಪೂಜೆ, ನಿತ್ಯನಿರಂಜನವೇ ಧೂಪದೀಪಾರತಿ, ಸಕಲ ಭುವನಂಗಳೇ ಸುಯಿಧಾನ, ಆಚಾರವೇ ಅರ್ಪಿತ, ಮಹಾತತ್ವವೇ ಸಿತಾಳ, ಅಖಂಡಿತವೇ ಅಡಿಕೆ, ಏಕೋಭಾವವೇ ಎಲೆ, ಶುದ್ಧ ಶಿವಾಚಾರವೇ ಸುಣ್ಣ, ವಿವೇಕ ವಿಚಾರದಿಂದ ವೀಳೆಯವನವ ಧರಿಸುವುದು, ಮಹಾಲಿಂಗದ ಪರಿಣಾಮವೇ ಪ್ರಸಾದ, ಸಮ್ಯಜ್ಞಾನವೇ ಸಂತೋಷ, ಸಹಜ ನಿರಾಭಾರಿಗಳ ಗುಣಮೇಳದಿಂದ ನಿಸ್ಸೀಮದ ನಿರಾಭಾರವೇ ನಿಭ್ರಾಂತಿ, ನರುಗಂಧದಲ್ಲಿ ನಿರಾಳಪದವೇ ಅನುಮತವಾಗಿ, ನಿಶ್ಯಬ್ದವೇ ಅನುಭಾವ, ಅನುಪಮ ನಿಶ್ಶೂನ್ಯವೇ ವಿಶ್ರಾಮ, ನಿರಾಕಾರವೇ ಗಮನ, ನಿರಂತರವೇ ಪಾತಾಳ, ಊರ್ಧ್ವಪವನ ಸಂಯೋಗ, ತ್ರಿಭುವನಗಿರಿ ಎಂಬ ಪರ್ವತವನೇರಿ ಕಾಯವೆಂಬ ಕದಳಿಯ ಹೊಕ್ಕು ಸುಳಿದಾಡುವ ಪರಮಾನಂದ ಮಹಾಮಹಿಮಂಗೆ ಇಹಲೋಕವೇನು ? ಪರಲೋಕವೇನು ? ಅಲ್ಲಿಂದತ್ತತ್ತ ಅಗಮ್ಯ, ನಿರಾಳ, ಪರಮಜ್ಞಾನ ಸಿದ್ಧಿ, ಮಹಾಲಿಂಗದ ಬೆಳಗು, ಗುಹೇಶ್ವರಾ, ನಿಮ್ಮ ನಿಜವನರಿದ ಮಹಾಮಹಿಮಂಗೆ ನಮೋ ನಮೋ ಎನುತಿರ್ದೆನು.

೫೫೩

(೨) ಕುಲವಳಿದು, ಛಲವಳಿದು, ಮದವಳಿದು, ಮತ್ಸರವಳಿದು, ಆತ್ಮತೇಜವಳಿದು, ಸರ್ವಾಹಂಕಾರವಳಿದು, ನಿಜವುಳಿದು, ಲಿಂಗಜಂಗಮವೆಂಬ ಶಬ್ದವಿಡಿದು

ಸಾಧ್ಯವಾಯಿತ್ತು ನೋಡಾ. ತಾನಳಿದು, ತಾನುಳಿದು, ಸಹಜಪದವಿಯಲ್ಲಿ ಕೂಡಲ ಚನ್ನಸಂಗನಲ್ಲಿ ತಾನು ತಾನಾದ.

೫೫೪

(೩) ಅಂಗಸಂಬಂಧ, ಲಿಂಗಸಂಬಂಧವಾದ ಬಳಿಕ ಲಿಂಗೋಪಜೀವಿಯಾಗಿರಬೇಕು. ಪ್ರಾಣಸಂಬಂಧ ಲಿಂಗವಾದ ಬಳಿಕ ಲಿಂಗೋಪಜೀವಿಯಾಗಿರಬೇಕು. ಇದಾವ ಸಂಬಂಧವಿಲ್ಲದಾಶ್ರಯದ ಗುಣವಿಡಿದು ಲಾಂಛನ ಧಾರಿಯಾಗಿರ್ದೆನಯ್ಯ. ಗ್ರಂಥ: ''ಲಾಂಛನಂ ದುರ್ಲಭಂ ಚೈವ ಸ್ವಾನುಭಾವಮತಃ ಪರಂ । ದುರ್ಲಭಂ ಶಿವತತ್ವನಾಂ ಪ್ರಾಣಲಿಂಗಮತಃ ಪರಂ ॥'' ಎಂದುದಾಗಿ ಆಶ್ರಯದ ಗುಣವಿಲ್ಲ, ನಿರಾಶ್ರಯದ ಗುಣವಿಡಿದು ಲಿಂಗಸಾರಾಯ ಶರಣಲಿಂಗ. ಇದು ಕಾರಣ ಕೂಡಲ ಚನ್ನಸಂಗಯ್ಯ ಮಹದ್ಘನುಭಾವಿಯಾದ ಶರಣ.

೫೫೫

(೪) ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿಲ್ಲದ ರುಚಿ, ಭಾವವೇ ಕರ್ಪರವಾಗಿ ಪರಮದೇಹಿ ಎಂದು ಬೇಡುವ ಪರಮನ ತೋರಾ ಗುಹೇಶ್ವರಾ.

೫೫೬

(೫) ರೂಪವೆಂತೆಂಬೆನಯ್ಯ ರೂಹಿಸಲಿಲ್ಲಾಗಿ ? ಭಾವವೆಂತೆಂಬೆನಯ್ಯ ಭಾವಿಸಲಿಲ್ಲಾಗಿ ? ಜ್ಞಾನವೆಂತೆಂಬೆನಯ್ಯ ಉಪಮಿಸಲಿಲ್ಲಾಗಿ ? ಸಹಜಲಿಂಗದ ಬೆಳಗನಂಗವಿಸುವ ಕೂಡಲ ಚನ್ನಸಂಗನಲ್ಲಿ ಪ್ರಭುವಿನ ನಿಲವು ವಿಪರೀತ.

೫೫೭

(೬) ನಿಜವನರಿದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೇ, ಘನವ ಕಂಡ ಮಹಿಮನೇ, ಪರವನೊಳಕೊಂಡ ಪರಿಣಾಮಿಯೇ, ಬಯಲಲೊದಗಿದ ಭರಿತನೇ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜವೇ.

ಇಂತು ನವಸ್ಥಲಂಗಳೇ ತ್ರಿವಿಧ, ತ್ರಿವಿಧಸ್ಥಲಂಗಳೇಕಮಾದ ಆಚಾರಲಿಂಗವು ವೀರಮಹೇಶ್ವರನ ಗುರುಲಿಂಗವು ಸತ್‌ಕ್ರಿಯೆಯಲ್ಲಿ ಆಗಮ ಸ್ವರೂಪವನೈದಿದ ಭೇದವೆಂತಿರ್ದುದೆಂದಡೆ, ಮುಂದೆ ಕ್ರಿಯಾಗಮಸ್ಥಲವಾದುದು.

ಗುರುಲಿಂಗಸ್ಥಲ

ವಿವರಣೆ : ಳಳ ಅಂಗ ಸ್ಥಲಗಳಲ್ಲಿ ಮನುಷ್ಯನು ಮಾಡತಕ್ಕ ಮತ್ತು ಮಾಡಬಾರದ ಕ್ರಿಯೆಗಳು ಹೇಳಲ್ಪಟ್ಟಿರುತ್ತವೆ. ಅವುಗಳಲ್ಲಿ ಮಾಡತಕ್ಕ ಕ್ರಿಯೆಗಳಿಂದ ಮನುಷ್ಯನಲ್ಲಿ ಪ್ರಗತಿಯುತ್ಪನ್ನವಾಗುತ್ತಹೋಗುತ್ತದೆ. ಅವುಗಳ ಮೂಲಕ ಅವನಲ್ಲಿ

೧+ ದ (ಮೂ)

ಲಿಂಗಚೈತನ್ಯವು ಒಡಮೂಡಹತ್ತುವುದು. ಈ ಚೈತನ್ಯವು ಅವನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳನ್ನು ಕ್ರಮೇಣ ವ್ಯಾಪಿಸುವುದು. ಸ್ಥೂಲ ಶರೀರದಲ್ಲಿಯ ಈ ಲಿಂಗದ ವ್ಯಾಪಿಸುವಿಕೆಯು ಆಚಾರಲಿಂಗ ಮತ್ತು ಗುರುಲಿಂಗ ಇವುಗಳಿಗೆ ಸಂಬಂಧಿಸಿ ಉಂಟಾಗುತ್ತದೆ. ಇವುಗಳ ರೀತಿಯನ್ನು ಭಕ್ತನು ಅರಿತುಕೊಳ್ಳಬೇಕು.

ಮೊದಲನೆಯದಾದ ಆಚಾರಲಿಂಗಸ್ಥಲದಲ್ಲಿ ಹಿಂದೆ ಹೇಳಿದ ಮೇರೆಗೆ ಗುರುವಿನಿಂದ ದೀಕ್ಷೆಯನ್ನು ಹೊಂದಿ ಅದರ ಮೂಲಕ ಧಾರ್ಮಿಕ ಕ್ರಿಯೆಗಳನ್ನು ಮಾಡುತ್ತ ಹೋದಲ್ಲಿ ಸ್ಥೂಲ, ಸೂಕ್ಷ್ಮ ಕಾರಣಗಳಲ್ಲಿ [೧][ಇನ್ನು][೧] ಶಕ್ತಿಯು ವೃದ್ಧಿಯಾಗುತ್ತ ಹೋಗುವದು. ಇದು ಅನುಕ್ರಮವಾಗಿ ಗುರುಲಿಂಗಜಂಗಮವನ್ನು ಒಳಕೊಳ್ಳುವದೇ ಇರುತ್ತದೆ. ಗುರುವಿನಲ್ಲಿ ದೀಕ್ಷಾ, ಶಿಕ್ಷಾ, ಅನುಭಾವಗಳೂ, ಲಿಂಗದಲ್ಲಿ ಇಷ್ಟ, ಪ್ರಾಣ ,ಭಾವಗಳೂ ಜಂಗಮದಲ್ಲಿ ಸ್ವಯಚರಪರಗಳೂ ಇದ್ದು ಇವುಗಳನ್ನು ಆಯಾ ಶರೀರಗಳ ಕ್ರಿಯೆಗಳಿಗೆ ಸಂಬಂಧಪಡಿಸುತ್ತ ಅವುಗಳನ್ನು ಆಚರಿಸುತ್ತ ಹೋದಲ್ಲಿ ಆಚಾರಲಿಂಗದ ಉತ್ಕೃಷ್ಟತೆಯು ಸಂಭವಿಸುತ್ತದೆ.

ಇನ್ನು ಗುರುಲಿಂಗಸ್ಥಲದಲ್ಲಿ, ಆಚಾರಲಿಂಗಸ್ಥಲದಲ್ಲಿ ಆವಿರ್ಭವಿಸಿದ ಪರಿಣಾಮಗಳನ್ನು ನಿಷ್ಠೆಯ ಮೂಲಕ ಹೆಚ್ಚಿಗೆ ದೃಢಪಡಿಸುವದಿರುತ್ತದೆಂದು ವಚನಕಾರರಿಂದ ಹೇಳಲ್ಪಡುತ್ತದೆ. ಈ ಸ್ಥಲದಲ್ಲಿ ಆಗಮಲಿಂಗ, ಕಾಯಲಿಂಗ ಮತ್ತು ಆಚಾರಲಿಂಗ ಎಂಬ ಮುಖ್ಯ ವಿಭೇದಗಳಿವೆ. ಈ ಪ್ರತಿಯೊಂದರಲ್ಲಿ ಪುನಃ ಮೂರು ಮೂರು ಭಾಗಗಳಾಗಿ ಒಟ್ಟು ಒಂಬತ್ತು ವಿಭಾಗಗಳಾಗುವವು. ಇದೆಲ್ಲವೂ ಸ್ಥೂಲ ಶರೀರಕ್ಕೆ ಸಂಬಂಧಪಟ್ಟು ಅದನ್ನು ಉತ್ಕೃಷ್ಟ ಸ್ಥಿತಿಗೆ ತರುತ್ತವೆ. ಇವುಗಳ ವಿವೇಚನೆಯು ಮುಂದೆ ಹೇಳಲ್ಪಟ್ಟಿರುವದು. ಅದು ಹೇಗೆಂದರೆ:

ಆಗಮಲಿಂಗ : ಆಗಮಲಿಂಗದಲ್ಲಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಮೂರು ವಿಭಾಗಗಳಿರುತ್ತವೆ. ಸತ್ಕ್ರಿಯೆಯೇ ಕ್ರಿಯಾಗಮವೆಂತಲೂ, ಆ ಸತ್ ಕ್ರಿಯೆಯಲ್ಲಿ ನಿಷ್ಠೆ ನಿಬ್ಬೆರಿಸಿದರೆ ಭಾವಾಗಮವೆಂತಲೂ, ಮಹಾಜ್ಞಾನ ಚಾರಿತ್ರ್ಯದೊಡಗೂಡಿದರೆ ಜ್ಞಾನಾಗಮವೆಂತಲೂ ಇಲ್ಲಿ ಹೇಳಲ್ಪಟ್ಟಿದೆ. ಪೂರ್ಣ ಶಿವಾಚಾರವೇ ಕ್ರಿಯಾಗಮವು. ಇದರಲ್ಲಿ ಅಂಗದಿಚ್ಛೆ ಏನೂ ಇರಕೂಡದು. ಸತ್ಕ್ರಿಯೆಯಲ್ಲಿ ಪೂರ್ಣವಾಗಿ ಮಗ್ನನನಾಗಿರುವದೇ ಭಾವಾಗಮವು. ಇದು ಭಾವದಲ್ಲಿ ದೃಢಪಟ್ಟಿರುತ್ತದೆ. ಅದಕ್ಕೂ ಮುಂದೆ ಉಚ್ಚಸ್ಥಿತಿಗೆ ಹೋಗಲು ಕ್ರಿಯೆ, ಜ್ಞಾನವೆಂಬ ಭೇದವಡಗಿ ಸಾಮರಸ್ಯ ಸ್ವರೂಪು ಉಂಟಾಗುತ್ತದೆ. ಅದು ಜ್ಞಾನಾಗಮವೆನಿಸುತ್ತದೆ. ಈ ಮೂರೂ ಲಿಂಗಗಳು ಉನ್ನತಸ್ಥಿತಿಗೆ ಬಂದು ಏಕರೂಪವಾದಲ್ಲಿ ಅದು ಆಗಮಲಿಂಗವೆನಿಸುವದು.

ಕಾಯಲಿಂಗ : ಸ್ಥೂಲವು ಲಿಂಗದಲ್ಲಿ ಬೆರೆದರೆ ಸಕಾಯವೆನಿಸುವದು. ಕಾಯ ಭಾವವನ್ನು ಪೂರ್ಣವಾಗಿ ಅಳಿದು ಬಿಡುವದೇ ಅಕಾಯವೆನಿಸುವದು. ಹೀಗೆ ಕಾಯ

೧–೧ ಲೈಂಗಿಕ (ಮೂ)

ಭಾವವನ್ನು ಅಳಿದು ದೇಹವು ನಿರ್ದೇಹಸ್ಥಿತಿಯನ್ನು ಹೊಂದಿದರೆ ಅದು ಪರವೆನಿಸುವದು. ಈ ಪರದಲ್ಲಿ ಮಹೇಶ್ವರನು ಸಕಾಯನೂ ಅಲ್ಲ, ಅಕಾಯನೂ ಅಲ್ಲ; ಅವನು ಸ್ವತಂತ್ರನು. ಸಕಳ ನಿಷ್ಕಳಾತೀತನು.

ಆಚಾರಲಿಂಗ : ಇದು ಸದ್‌ವೃತ್ತಿಯ ದ್ಯೋತಕವಾಗಿದೆ. ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ ಇವು ಈ ಆಚಾರಲಿಂಗದ ಮೂರು ವಿಭಾಗಗಳಾಗಿವೆ. ಸದ್ಧರ್ಮದಿಂದ ನಡೆಯುವದೇ ಧರ್ಮಾಚಾರವು. ಈ ವರ್ತನೆಯು ಮನಸ್ಸಿನಲ್ಲಿ ಮೂಡಿಕೊಳ್ಳುವದೇ ಭಾವಾಚಾರವು. ಆಗ ಸದ್ಧರ್ಮದ ವಿಷಯವಾಗಿ ಮನಸ್ಸಿನಲ್ಲಿ ಏಕಾಗ್ರತೆಯೂ ದೃಢಚಿತ್ತವೂ ಇರಬೇಕು. ತನುಗುಣಗಳಳಿ[ದು][೧] ಮಹಾಜ್ಞಾನದಲ್ಲಿರುವದೇ ಜ್ಞಾನಾಚಾರವು. ಆಗ ಕ್ರಿಯೆ ಮತ್ತು ಜ್ಞಾನ ಇವುಗಳಲ್ಲಿಯ ಭಿನ್ನತೆಗಳು ಅಡಗಿಹೋಗಿ ಭಕ್ತನು ಸದಾ ಸುಖದಲ್ಲಿರುವನು. ಈ ಜ್ಞಾನಾಚಾರವು ಮಹೇಶ್ವರನ ಪೂರ್ಣಸ್ಥಿತಿಯ ದ್ಯೋತಕವಾಗಿದೆ.

ಈ ಪ್ರಕಾರ ಆಗಮಲಿಂಗದ ಕ್ರಿಯೆಗಳ ಮೂಲಕ ಕ್ರಿಯೆಗಳು ಉತ್ಕೃಷ್ಟ ಸ್ಥಿತಿಯನ್ನು ಹೊಂದುವವು. ಇದರಿಂದ ಕಾಯದಲ್ಲಿ ಲಿಂಗವು ಪ್ರಕಟವಾಗಿ ಕಾಯ ಗುಣಗಳು ನಷ್ಟವಾಗಿ, ಸಂಸಾರರಹಿತವಾಗುತ್ತದೆ. ಅದು ಕಾಯವೂ ಅಲ್ಲ, ಅಕಾಯವೂ ಅಲ್ಲ, ಇದು ಕಾಯಲಿಂಗವೆನಿಸಿಕೊಳ್ಳುತ್ತದೆ. ಆಗ ಅವನ ಕ್ರಿಯೆಗಳು ಪರಿಶುದ್ಧವಾಗುತ್ತವೆ. ಅವೇ ಧರ್ಮಾಚಾರಗಳು. ಅವು ಮನದಲ್ಲಿ ಎಡೆಗೊಂಡು ಭಾವದಲ್ಲಿ ಸೇರಿದ್ದಾದರೆ ಭಾವಾಚಾರಗಳು. ಅವು ಮುಂದೆ ಮಹಾಜ್ಞಾನದೊಡನೆ ವ್ಯವಹರಿಸಿದ್ದಾದರೆ, ಜ್ಞಾನಾಚಾರಗಳು. ಇವೆಲ್ಲವೂ ಗುರುಲಿಂಗದಲ್ಲಿ ಪ್ರಾಪ್ತವಾಗುವ ಲಿಂಗಸ್ಥಿತಿಯನ್ನು ಸೂಚಿಸುತ್ತವೆ. ಈ ಪ್ರಕಾರ ಸ್ಥೂಲಶರೀರಕ್ಕೆ ಸಂಬಂಧಿಸಿದ ಆಚಾರಲಿಂಗ ಮತ್ತು ಗುರುಲಿಂಗಗಳ ಪ್ರಗತಿಯನ್ನು ವಚನಕಾರರು ವರ್ಣಿಸುತ್ತಾರೆ.

೧. ಕ್ರಿಯಾಗಮಸ್ಥಲ

ಐಐಲ

(೧) ಸಂಜೆಯ ಮಂಜಿನ ಕಪ್ಪು ಅಂಜಿದಡೆ ಶಂಕೆ [೧]ದೃಶ್ಯವಾಗಿ ನಿಂದಿತ್ತು; ತನ್ನ ಭಾವದ ನಟನೆ ನಡೆವನ್ನಕ್ಕ ನಡೆಯಿತ್ತು; ಅದು ನಿಂದಲ್ಲಿಯೇ ನಿಂದಿತ್ತು; ಅದರಂತು ವನರಿದಡೆ, ಹಿಂದೆ ಮುಂದೆ ಕೂಡಲಸಂಗಮದೇವರ ನಿಲವು ತಾನೆ.

ಟೀಕು : ಹಗಲಿನ ಇರುಳಿನ ಸಂಧಿ ಸಂಜೆ ಎನಿಸಿದಂತೆ ಆತ್ಮನ ಅರಿವು ದೇಹದ ಮರವೆ ಎರಡರ ಸಂಗ ಸಂಧಿಯಲ್ಲಿ ಮನವೆಂಬ ಅಜ್ಞಾನ ಹುಟ್ಟಿತ್ತೆಂಬುದೀಗ, ಸಂಜೆಯ ಮಂಜಿನ ಕಪ್ಪು ಎಂಬ ಶಬ್ದಕ್ಕರ್ಥ. ಅಂತಪ್ಪ ಮನದಿಂದ ದೇಹೋಹ ಮೆಂದು ಭವಭೀತಿಯ ಶಂಕೆ ದೋರೆ ದೇಹ ಶಂಕಾರೂಪವಾಗಿ ಜೀವವೆನಿಸಿ ದೃಶ್ಯವಾದನೆಂಬುದೀಗ, ಅಂಜಿದಡೆ ಶಂಕೆ ತದ್ರೂಪವಾಗಿ ನಿಂದಿತ್ತೆಂಬ ಶಬ್ದಕ್ಕರ್ಥ.

೧–೧ ತು (ಮೂ) ೧ + ಅ (ಮೂ)

ಅಂತು ಆತ್ಮನ ಭಾವ ದೇಹ ಭ್ರಾಂತಿಯನ್ನೈದಿ ಚರಿಸುವನ್ನಕ್ಕ ದೇಹಿಯಾಗಿ ಭವದಲ್ಲಿ ಬರುತ್ತಿರ್ದನೆಂಬುದೀಗ, ತನ್ನ ಭಾವದ ನಟನೆ ನಡೆವನ್ನಕ್ಕ ನಡೆಯಿತ್ತು ಎಂಬ ಶಬ್ದಕ್ಕರ್ಥ. ಇಂತು ದೇಹಿಯಾಗಿರ್ದಾತ್ಮಂಗೆ ಜ್ಞಾನೋದಯವಾಗಲೊಡನೆ ಆ ದೇಹೋಹಮೆಂಬ ಭವದ ಭ್ರಾಂತಿಯಳಿಯಿತ್ತು ಆ ದೇಹದ ಭ್ರಾಂತಿಯಳಿದಲ್ಲಿ ಈ ದೇಹ ತೋರಿಕೆ ಹುಸಿ ನಿಂದು ಹೋಯಿತ್ತು ಅಂತು ತನ್ನಲ್ಲಿ ತೋರಿದ ಹುಸಿವಾಸನೆಯಡಗಿಸುವ ಕ್ರಿಯಾಭೇದ[ವ]ನರಿದಡೆ ಹಿಂದಣ ಜನನ ಮರಣವಿಲ್ಲ, ಮುಂದೆ ಶಿವ ತಾನೇ ಎಂಬುದೀಗ ಅದು ನಿಂದಲ್ಲಿಯೇ ನಿಂದಿತ್ತು, ಅದರಂತುವನರಿದಡೆ ಹಿಂದೆ ಹುಸಿ ಮುಂದೆ ಕೂಡಲ ಸಂಗಮದೇವರ ನಿಲವು ತಾನೇ ಎಂಬ ಶಬ್ದಕ್ಕರ್ಥ.

೫೫೯

(೨) ಶಿವಾಚಾರವೆಂಬುದೊಂದು ಬಾಳಬಾಯಧಾರೆ. ಲಿಂಗ ಮೆಚ್ಚಬೇಕು. ಜಂಗಮ ಮೆಚ್ಚಬೇಕು. ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು. ಬೇರಾದರೆ ಮೆಚ್ಚುವನೇ ನಮ್ಮ ಕೂಡಲ ಸಂಗಮದೇವ ?

೫೬೦

(೩) ಭಕ್ತಂಗಾಗಲಿ ಜಂಗಮಕ್ಕಾಗಲಿ, ಸದಾಚಾರವೇ ಬೇಕು. ಸದಾಚಾರವುಳ್ಳವರಿಗೆ ಅನಾಯತ ಹೊದ್ದಲಾಗದು. ಅನಾಯತವೆಂಬುದೇ ಅನುಸರಣೆ. ಅನುಸರಣೆ ಎಂಬುದೇ ಅಂಗದಿಚ್ಛೆ. ಅಂಗದಿಚ್ಛೆ ಎಂಬುದೇ ಅನಾಚಾರ. ಅನಾಚಾರವೆಂಬುದೇ ಪಂಚಮಹಾಪಾತಕ. ಆ ಪಂಚಮಹಾಪಾತಕವೆಂಬುದೇ ನರಕ. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಸದಾಚಾರವುಳ್ಳವರು ಅನುಸರಿಸಿ ನಡೆದರೆ ನಾಯಕನರಕ.

೫೬೧

(೪) ಪ್ರಾಣಲಿಂಗಸಂಬಂಧಿಯಾದ ಲಿಂಗವನು ಏಕಭುಕ್ತೋಪವಾಸವ ಮಾಡಲಾಗದು. ಅದೇನು ಕಾರಣವೆಂದಡೆ, ದೇವರಾರೋಗಣೆ ತಪ್ಪುದು. ಅಷ್ಟ ವಿಧಾರ್ಚನೆ ಷೋಡಶೋಪಚಾರ ಕ್ರೀ ತಪ್ಪುದು. ಆಗಮಮಾರ್ಗ ತಪ್ಪುದು. ಶ್ರೀಗುರುವಾಜ್ಞೆ ತಪ್ಪುದು. ತನಗೆ ಮುಂದೆ ಪ್ರಸಾದವಿಲ್ಲ. ಪ್ರಸಾದವಿಲ್ಲಾಗಿ ಮುಕ್ತಿ ಇಲ್ಲ. ಮುಕ್ತಿ ಇಲ್ಲವಾಗಿ ದೋಷಕಾರಿಯಪ್ಪನು ಕೇಳಿರಣ್ಣಾ ! ಇದು ಕಾರಣ ನಿತ್ಯ ನೇಮಕ್ಕೆ ಪಂಚಪರ್ವ ತಿಥಿಗಳಲ್ಲಿ ಆವಾವ ದಿನದಲ್ಲಿಯೂ ಎಂದೆಂದೂ ಅಷ್ಟ ವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ ! ದೇವರಾರೋಗಣೆಯ ಮಾಡಿಸಿ ಪ್ರಸನ್ನತ್ವವ ಪಡೆದು ಆ ಪ್ರಸಾದವ ಧರಿಸಿ ಮುಕ್ತರಪ್ಪುದಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೧–೧ ನ (ಮೂ)

೫೬೨

(೫) ಲಿಂಗವಂತನು ಲಿಂಗವಂತರೊಡನೆ ಸತ್ಯವ ನುಡಿವುದು. ಸಹಜದಲ್ಲಿ ನಡೆವುದು. ಪ್ರೇಮದಲ್ಲಿ ಸಂಗವ ಮಾಡುವುದು. ಈ ಕ್ರಿಯೆ ಇಹಪರ ಸಿದ್ಧಿ, ಲಿಂಗವನರಿದುದಕ್ಕೆ ದೃಷ್ಟ. ಲಿಂಗಾರ್ಚನೆಯ ಕ್ರಿ[ಯಾ]ಲಿಂಗ ಒಲಿದುದಕ್ಕೆ ಚಿಹ್ನ ! ಇದು ಸತ್ಯ. ಲಿಂಗವಂತನು ಲಿಂಗವಂತರೊಡನೆ ಹೇಮದಾಸೆಗೆ ಪ್ರೇಮಗುಂದಿ ನಡೆಯಲಾಗದು. ಅಸತ್ಯವ ನುಡಿಯಲಾಗದು. ಕ್ರೋಧಿಸಿ ನುಡಿಯಲಾಗದು. ವೇದ ಶಾಸ್ತ್ರಾಗಮ ಪುರಾಣ ಪುರಾತನರ ವಚನ, ಪುರಾತನರ ಚಾರಿತ್ರ್ಯವನರಿಯದೆ ಆದಿ ಮಧ್ಯ ಪರಿಪಕ್ವತೆಯನರಿಯದೆ ತರ್ಕಿಸಿ ನುಡಿಯಲಾಗದು. ದುಶ್ಚರಿತ್ರದಲ್ಲಿ ವರ್ತಿಸಲಾಗದು. ಅಜ್ಞಾನ ಕ್ರಿಯೆ ವರ್ತಿಸಲು, ಇಹ ಪರವಿಲ್ಲ. ಲಿಂಗವನರಿಯಬಾರದು. ಲಿಂಗವಂತರನೆಂತು ಅರಿಯಬಾರದು. ಅರಿ[ಯ]ದವಂಗೆ ಪೂಜಿಸಲೆಂತೂ ಬಾರದು. ಪೂಜೆ ಇಲ್ಲದವಂಗೆ ಭಕ್ತಿ ಎಂತಹುದು ? ಇಲ್ಲದವಂಗೆ ಪ್ರಸಾದವೆಂತಹುದು ? ಪ್ರಸಾದವಿಲ್ಲದವಂಗೆ ಮುಕ್ತಿ ಇಲ್ಲ, ಇದು ಸತ್ಯ. ಇದನರಿತು ಲಿಂಗವಂತರಲ್ಲಿ ಸತ್ಯಸಂಭಾಷಣೆ ಸದ್ಭಕ್ತಿಯೋಗವಾದಡೆ, ಕೇವಲ ಮುಕ್ತಿ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಇಂತು ಕ್ರಿಯಾಗಮ ಸ್ವರೂಪವನ್ನೈದಿದ ಲಿಂಗವು ವೀರಮಾಹೇಶ್ವರನ ಅಂಗದೊಳಗೆ ನಿಷ್ಠಾಸ್ವರೂಪವನ್ನೈದಿದ ಭೇದವೆಂತಿರ್ದುದೆಂದೊಡೆ, ಮುಂದೆ ಭಾವಾಗಮಸ್ಥಲವಾದುದು.

೨. ಭಾವಾಗಮಸ್ಥಲ

೫೬೩

(೧) ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ, ತುಟ್ಟಿ ತುದಿಯ ಮೇರು ಗಿರಿಯ ಮೆಟ್ಟಿ ಕೂಗಿದಡಿಲ್ಲ, ನಿತ್ಯ ನೇಮದಿಂದ ತನುವ ಮುಟ್ಟಿ ಕೊಂಡಡಿಲ್ಲ, ನಿಚ್ಚಕ್ಕೆ ನೆನೆವ ಮನವನಂದಂದಿಂಗೆ ಅತ್ತಲಿತ್ತ ಹರಿಯಲೀಯದೆ ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರಲಿಂಗವು.

೫೬೪

(೨) ಸಜ್ಜೆಯುಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ, ಪ್ರಜ್ವಲಿಸಿ ತೊಳಗಿ ಬೆಳಗುತಿಹ ಕಾಂತಿಯಲ್ಲಿ ಜಜ್ಜರಿಸಿ ತನು ಮನ ದೃಷ್ಟಿ ನಟ್ಟು ಲಿಂಗದಲ್ಲಿ ಜಜ್ಜರಿಸಿ ಶಿವಸುಖದೊಳಗೋಲಾಡುತ್ತ ಸಜ್ಜನ ಸದ್ಭಕ್ತಿರತಿಯಾತನ ಕೂಡಾಡಿ ಲಜ್ಜೆಗೆಟ್ಟು ನಾ ನಿಮ್ಮ ನೆರೆವೆ ಚನ್ನಮಲ್ಲಿಕಾರ್ಜುನ.

೫೬೫

(೩) ಕಂಗಳ ನೋಟವು, ಹೃದಯದ ಜ್ಞಾನ, ಮನದಲ್ಲಿ ತಾ ಮಾತನಾಡು

ತಿರ್ದೆನಯ್ಯ ! ಜೇನ ಮಳೆಗಳು ಕರೆದವು. ಅಮೃತದ ಕಳೆಗಳು ಸುರಿದವು. ಕೂಡಲ ಚನ್ನಸಂಗನೆಂಬ ರಸ ಸಾಗರದೊಳಗೋಲಾಡುತ್ತಿರ್ದೆನಯ್ಯ.

ಇಂತು ನಿಷ್ಠೆ ನಿಬ್ಬೆರಗೆನಿಸಿದ ವೀರಮಾಹೇಶ್ವರನ ಭಾವ ಸದ್ಭಾವ ಸನ್ನಿಹಿತವಾದ ಲಿಂಗದ ಮಹಾಜ್ಞಾನ ಚಾರಿತ್ರ್ಯವೆಂತಿರ್ದುದೆಂದಡೆ, ಮುಂದೆ ಜ್ಞಾನಾಗಮ ಸ್ಥಲವಾದುದು.

೩. ಜ್ಞಾನಾಗಮಸ್ಥಲ

೫೬೬

(೧) ದೇವಪ್ರಭೆಯೊಳಗಿಹರಲ್ಲದೆ ದೇವಗಹನವ ಮಾಡಬಾರದಾರಿಗೆಯೂ. ದೇವ ಸಕೀಲದೊಳಗೆ ಬೆಳೆಯಬಹುದಲ್ಲದೆ ದೇವನಷ್ಪದೊಳಗೆ ಉತ್ಪತ್ಯವಾಗಬಾರದಾರಿಗೆಯೂ. ಉತ್ಪತ್ತಿಯ ಗತಿಯನಾರೋಗಣೆಯ ಮಾಡಬಾರದಾರಿಗೆಯೂ. ಚರಾಚರವೆಲ್ಲವು ಈ ಪರಿಯಲ್ಲಿ ಸಂಭ್ರಮಿಸುತಿರ್ದುದಲ್ಲಾ ! ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಇದ್ದ ಭಾವವಳಿದಡೆ ಲಿಂಗೈಕ್ಯವು.

ಟೀಕು : ಅಖಂಡ ಚಿತ್ಪ್ರಭಾಲಿಂಗದೊಳಗೆ ಸಕಲ ಜೀವರು ಇಪ್ಪರು. ಅಂತಿರ್ದ ಚಿದ್ಘನಲಿಂಗವು ತಮ್ಮ ನಿಜವೆಂದರಿದು ತಮ್ಮನಾ ಚಿದ್ಘನಲಿಂಗವ ಮಾಡಬಾರದಾರಿಗೆಯೂ ಎಂಬುದೀಗ, ದೇವಪ್ರಭೆಯೊಳಗಿಹರಲ್ಲದೆ ದೇವಗಹನವ ಮಾಡಬಾರದಾರಿಗೆಯೂ ಎಂಬ ಶಬ್ದಕ್ಕರ್ಥ. ಅಂತಪ್ಪ ಮಹಾಘನದ ಸಕೀಲ ಮಾತ್ರವಾಗಿ ಶ್ರುತಜ್ಞಾನಂಗಳಿಂದ ಅರಿದು ಧ್ಯಾನಿಸಿ ಪೂಜಿಸಿ ಫಲಪದಂಗಳ ಸುಖದ ಬೆಳಸು ಬೆಳೆಯಬಹುದೆಂಬುದೀಗ, ದೇವ ಸಕೀಲದೊಳಗೆ ಬೆಳೆಯಬಹುದಲ್ಲದೆ ಎಂಬ ಶಬ್ದಕ್ಕರ್ಥ. ಅಂತಪ್ಪ ಚಿತ್‌ಪ್ರಭಾಲಿಂಗವು ತನ್ನಾತ್ಮಾಂತರ್ಗತವಾಗಿರ್ದುದನರಿದು ಗುರುಮುಖದಿಂದ ಉತ್ಪತ್ಯವ ಮಾಡಿ ಇಷ್ಟ, ಪ್ರಾಣ, ಭಾವಲಿಂಗವಾಗಿ ಮೂರ್ತಿಗೊಳಿಸಿ, ಸರ್ವಾಂಗವನರ್ಪಿಸಿ ಅಂಗವೆಲ್ಲ ಲಿಂಗವೆಯಾಗಿ ಲಿಂಗದುತ್ಪತ್ಯವಾರಿಗೆಯೂ ಆಗದೆಂಬುದೀಗ, ದೇವನಷ್ಪದೊಳಗೆ ಉತ್ಪತ್ಯವಾಗಬಾರದಾರಿಗೆಯೂ ಎಂಬ ಶಬ್ದಕ್ಕರ್ಥ. ಅಂತು ಲಿಂಗೋದ್ಭವವಾಗಿ ಸರ್ವಾಂಗವನೊಳಕೊಂಡು ಅಂಗವೆಲ್ಲ ಲಿಂಗವೆಯಾದುದೀಗ ಮುಕ್ತಿಗತಿ. ಅಂತು ಮುಕ್ತಿಗತಿ ಸ್ವರೂಪನಪ್ಪ ಲಿಂಗವೇ ತಾನಾಗಿಪ್ಪುದನರಿದು ತನ್ನ ಲಿಂಗ ಲಕ್ಷವನೇ ಗ್ರಹಿಸಿ ಶಿವಭಾವವಳವಟ್ಟು ಶಿವಸುಖವನನುಭವಿಸುತಿಪ್ಪುದಾರಿಗೆಯೂ ಬಾರದೆಂಬುದೀಗ, ಉತ್ಪತ್ತಿಯ ಗತಿಯನಾರೋಗಣೆಯ ಮಾಡಬಾರದಾರಿಗೆಯೂ ಎಂಬ ಶಬ್ದಕ್ಕರ್ಥ. ಅಂತು ಶಿವ ತಾನೆಂದು ಶಿಷ್ಯೋಹಂಭಾವ ಪುಟ್ಟಿಸಿಪ್ಪಲ್ಲಿ ಆ ಶಿಷ್ಯೋಹಮೆಂಬ ಭಾವವಡಗಿ ನಿಂದ ಲಿಂಗವೆಯಾಗಿರ್ದಲ್ಲದೆ ಲಿಂಗೈಕ್ಯವೆಂಬುದೀಗ, ಇದ್ದ ಭಾವವಳಿದಡೆ ಲಿಂಗೈಕ್ಯವು ಎಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗೈಕ್ಯವನರಿಯದೆ ದೇಹೇಂದ್ರಿಯ ವಿಷಯಸುಖಭೋಗದಲ್ಲಿ ಸಂಭ್ರಮಿಸುತ್ತಿರ್ದರು ಸಕಲಜೀವರೆಂಬುದೀಗ, ಸಚರಾಚರವೆಲ್ಲವು ಈ ಪರಿಯಲ್ಲಿ ಸಂಭ್ರಮಿಸುತ್ತಿರ್ದರೆಂಬ ಶಬ್ದಕ್ಕರ್ಥ.

೫೬೭

(೨) ಅರಿದೆನರಿದೆನು ಎಂದೊಡೆ ಅದೇಕೋ ಮುಂದಣ ಮರವೆ ? ಅರಿದೆನೆಂಬುದು ಎನ್ನಲ್ಲಿ ಲೇಸಾಗಿ ಉಳ್ಳೊಡೆ ನಿನ್ನರಿವೆಲ್ಲವ ಹುರಿಹಂಚು ಮಾಡಿ ನೀನರಿ ಮರುಳೇ. ಸ್ವತಂತ್ರ ಘನದೊಳಗಿರ್ದು ನಿಜವನರಿದಿಹೆನೆಂದಡೆ ಮೂರ್ತಿಕಿರಿದಲ್ಲ ನಿಲ್ಲು ಮಾಣು. ಗುಹೇಶ್ವರನೆಂಬಲಿಂಗದ ಘನಗಟ್ಟಿಯನರಿವಡೆ ನಿನ್ನರಿವೆಲ್ಲ ಹುರಿಹಂಚು ಮಾಡಿ ನೀನರಿ ಮರುಳೇ.

೫೬೮

(೩) ಮತಿಯೊಳಗೊಂದು ದುರ್ಮತಿ ಹುಟ್ಟಿ ಗಸಣೆಗೊಳಗಾದ ಪರಿಯ ನೋಡಾ ! ಜ್ಞಾನವನು ಅಜ್ಞಾನ ಬಂದು ನುಂಗಿದಡೆ ಭಾನು ಗ್ರಹಣಕೊಳಗಾದಂತಾದುದಲ್ಲಾ! ಕ್ಷೀರವುಳ್ಳ ಪಶು ಕರುವನಗಲಿ ಅರಿಯದ ಸ್ನೇಹದಂತಿರ್ದುದಲ್ಲಾ! ಹೇಳುವಲ್ಲಿ ಯುಕ್ತ ಕೇಳುವಲ್ಲಿ ಮುಕ್ತನೆಂಬುದೆಲ್ಲವು ಅಜ್ಞಾನಭಾವಕ್ಕೆ ಬಂದುದಲ್ಲಾ! ನೀರಮೇಲಣ ಲಿಪಿಯನಾರು ಓದಬಲ್ಲರು ? ಸಾರಾಯವೇದ್ಯರಪ್ಪರು. ಕನ್ನಡಿಯೊಳಗೆ ನೋಡಿ ಭಿನ್ನವಿದ್ದುದೇ ಅಯ್ಯ, ತನ್ನ ಕಣ್ಣಿಗೆ ಕಾಣದಂತಿರ್ದುದಲ್ಲದೆ ? ದರ್ಪಣದೊಳಗಣ ಬೆಳಗು ಬೆಳಗಿನೊಳಗಣ ಬೆಳಗು. ಗುಹೇಶ್ವರನಿಪ್ಪೆಡೆಯ ತಿಳಿದು ನೋಡಿರೇ.

೫೬೯

(೪) ನಾದದಿಂದಾದ ಸಂಗ ವಿನೋದ ಸಂಗ. ಬಿಂದುವಿನಿಂದಾದ ಸಂಗ ಬಿದ್ದ ಕ್ರೀ. ದ್ವಯ ಅದ್ವಯದಿಂದಾದ ಸಂಗ ಪರಿಭಾವ. ಸಮಿಸುವುದೇ ನಿರವಯವು. ಬಯಸದಿರಾ. ಬೇರೆ ಮತ್ತಿಲ್ಲ ಅನುಭಾವವೆಂಬ ಘನಮಹಿಮೆಯು ನಮ್ಮಿಂದವೇ ಆಯಿತ್ತು ಆ ನಾದದ ನಿಶ್ಚಿಂತ ನಿಲವನರಿಯಿತ್ತೇ ಆಯಿತ್ತು ಬಿಂದುವಿನ ಸಂಗ ಭಾವ ಸಂದಿರ್ದ ಭೇದದ ತಿಳಿಯಿತ್ತೇ ಆಯಿತ್ತು ಇದು ನಿಮ್ಮ ಕಲ್ಪನೆ. ಆದಿ ಅಂತ್ಯವ ಬಲ್ಲರೆ ಬಲ್ಲುದು, ಅವಚಿತ್ತದ ಅವಧಾನದ ಅಹುದೆಂಬ ಅಲ್ಲವೆಂಬ ಉಂಟೆಂಬ, ಇಲ್ಲೆಂಬ ಈ ಎರಡರ ಮಥನವಲ್ಲ ಕೇಳಿರಯ್ಯ. ಚಂದಗೆಡದ ಮುನ್ನ ಬೇಗಮಾಡಿ ತಿದ್ದಿದಿರಾದಡೆ ಬಸವನಂತೆ ಭಾವ, ಬಸವನಂತೆ ಮನ. ಬಸವನ ಪದವಿಡಿವರೆ ಇದೇ ಪಥ ಕಾಣಾ ಕೂಡಲ ಚನ್ನಸಂಗಮದೇವಾ.

೫೭೦

(೫) ಅನುನೇಹದ ಅನುರುಚಿಯ ತೋರಲಿಕ್ಕಾಗಿಯೂ ಅರಿಯಬಾರದು. ಅದು ಸಕ್ಕರೆಯಂತುಟಲ್ಲ, ಅದು ತವರಾಜದಂತುಟಲ್ಲ, ಭಾವದ ಸುಖವ ಕೆಡಿಸಿತ್ತು ಮಹಾಲಿಂಗ ಕಲ್ಲೇಶ್ವರ ನೀನೇ ಬಲ್ಲೆ.

೫೭೧

(೬) ಜ್ಞಾನ ಸದ್ಭಕ್ತಿ ಸನ್ನಿಹಿತವಾಗಿ ಲಿಂಗ ಮುಂತಾಗಿ ಮಾಡುವ ಕ್ರೀ ಲಿಂಗ

ಕ್ರೀ. ದ್ರವ್ಯಪೂಜೆ, ಭಕ್ತಿಯರ್ಪಿತ, ಪ್ರಸಾದಮುಕ್ತಿ ಮರವೆ ಮುಂತಾಗಿ ಮಾಡುವ ಕ್ರೀ ಅಂಗ ಕ್ರೀ. ಅದು ಹೊರಗು. ಇದು ಕಾರಣ ಜ್ಞಾನ ಸದ್ಭಕ್ತಿ ಸನ್ನಿಹಿತವಾದುದೇ ಮುಕ್ತಿ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೫೭೨

(೭) ತನುವಿಂಗೆ ತನುವಾಗಿ ಮನಕ್ಕೆ ಮನವಾಗಿ ಜೀವಕ್ಕೆ ಜೀವವಾಗಿರ್ದುದ ನಾರು ಬಲ್ಲರು ? ಅದು ದೂರವೆಂದು ಸಮೀಪವೆಂದು ಮಹಾಂತ ಗುಹೇಶ್ವರನೊಳಗೆಂದು ಹೊರಗೆಂದು ಬರುಸೂರೆವೋದರು.

೫೭೩

(೮) ಸಂಗವಿಡಿದಂತೆ ಸಂಗವಿಡಿದು ನೋಡದಿರಾ. ಶರಣ ಸಂಗಸೂತಕಿಯಲ್ಲ ಲಿಂಗಪರಿಚಿತನ ಸಂಗವಂತಿಂತೆನ್ನದಿರು. ಶರಣ ಮನಬಂದಂತೆ ಮಾಡುವ. ಅಹುದಾಗದೆಂಬ ಪರಿ ಬೇರೆ. ಅಲ್ಲಿ ನೋಡಾ. ಕೂಡಲಚನ್ನಸಂಗನ ಶರಣನು ಸಂಗಿಯಲ್ಲ ನಿಸ್ಸಂಗಿಯಲ್ಲ.

೫೭೪

(೯) ಮರಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು. ಆತ್ಮ ಮಥನಿಸಿ ಅನುಭಾವ ಹುಟ್ಟಿ ಹೊದ್ದಿದ ತನುಗುಣಾದಿಗಳ ಸುಡಲಾಯಿತ್ತಯ್ಯ ! ಇಂತಪ್ಪ ಮಹಾನುಭಾವರ ತೋರಿ ಅನುಭಾವವ ತೋರಿ ಎನ್ನ ಒಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ.

೫೭೫

(೧೦) ಸುಖದ ಸುಖಿಗಳ ಸಂಭಾಷಣೆಯಿಂದ ದುಃಖ ವಿಶ್ರಾಮವಾಯಿತ್ತು. ಭಾವಕ್ಕೆ ಭಾವ ತಾರ್ಕಣೆಯಾದಲ್ಲಿ ನೆನಹಕ್ಕೆ ವಿಶ್ರಾಮವಾಯಿತ್ತು. ಬೆಚ್ಚು ಬೆರಿಸಲೊಡನೆ ಮಚ್ಚು ಒಳಕೊಂಡಿತ್ತು, ಚನ್ನ ಬಂಕನಾಥನ ಮಹೇಶ್ವರಂಗೆ.

೫೭೬

(೧೧) ನಚ್ಚುಮಚ್ಚಿನ ಲಿಂಗವನು ಗ್ರಹಿಸುವಲ್ಲಿ ಮಚ್ಚು ಒಳಕೊಂಡಿತ್ತು. ಕರ್ಪುರದ ಕರಡಿಗೆ ಗಾಸಿ ಮಾಡಿದಂತಾಯಿತ್ತು. ಲಿಂಗಾನುಭಾವಿಗಳ ಸಂಗದಿಂದಾನು ಕಣ್ದೆರೆದನು ಕಾಣಾ ಗುಹೇಶ್ವರಾ.

ಇಂತು ಕ್ರಿಯಾಗಮ, ಭಾವಾಗಮ, ಜ್ಞಾನಾಗಮವೆಂಬ ತ್ರಿವಿಧಸ್ಥಲವು ಏಕವಾದ ಲಿಂಗವು ವೀರಮಾಹೇಶ್ವರನ ಸರ್ವಾಂಗಮಥನದಿಂದ ಲಿಂಗಕಾಯ ಸಂಬಂಧಸ್ವರೂಪವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಸಕಾಯ ಸ್ಥಲವಾದುದು.

೪. ಸಕಾಯಸ್ಥಲ

೫೭೭

(೧) ಧರೆಯಗಲ ಜಲಕ್ಕೆ ಕರಿಯ ನೂಲಿನ ಜಾಲ, ಕರಿಯ ಕಬ್ಬಿಲ ಹೊಕ್ಕು ಸೇದುತ್ತಿರಲು ಕರದ ಕೈಯಲಿ ಗಾಣ. ಸೂಕ್ಷ್ಮವಿಚಾರದಿಂದರಿದು ಕೊಂಡೊಡೆ ಗಾಣಕ್ಕೆ ಹೊರಗಾಯಿತ್ತು. ಹರಿವ ಜಲಂಗಳು ಬತ್ತಿ ಬೇಸಿಗೆಯ ಉಷ್ಣತೋರಿ ಬಿಳಿಯ ಮಳಲಲ್ಲಿಗೆ ಕಾಣಬರುತ್ತಿರಲು ಕರಿಯ ಕಬ್ಬಿಲ ಬಂದು ಏರಿಯ ಮೆಟ್ಟಿ ನೋಡಿ ಕಾಣದೆ ಮರಳಿ ಜಾಲವ ಹೊತ್ತುಕೊಂಡು ಹೋಗೆ ದಂಗಟನ ಪುಣಜೆ ಹೊಂಗಲೆಯ ಬಿಲ್ಲು ಕೋಲನೊಂದು ಕೈಯ್ಯಲ್ಲಿ ಪಿಡಿದು ಒಂದು ಕೈಯಲ್ಲಿ ಬಿದಿರಕ್ಕಿಯ ಹಿಡಿದು ಕಂಗಳ ಮುತ್ತು ಸಡಿಲಿ ಪಾದದ ಮೇಲೆ ಬೀಳಲಿ ಅಂಗಯ್ಯೊಳಗೊಂದು ಹರಿದ ತಲೆ ಮೂಡಲು ದಂಗಟನ ಹೊತ್ತುಕೊಂಡಾಡುತ್ತಿರಲು ಸಿಂಗಾರವಾಯಿತ್ತು ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಾಂಗನೆಯ ನಾನಿಂದು ಕಂಡೆನಯ್ಯ.

ಟೀಕು : ದೇಹವೆಂಬುದೀಗ ಧರೆ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹವೆಲ್ಲ ಸಂಸಾರವಿಷಯರಸವೆಯಾಗಿಪ್ಪುದೆಂಬುದೀಗ, ಧರೆಯಗಲ ಜಲವೆಂಬ ಶಬ್ದಕ್ಕರ್ಥ. ಅಂತಪ್ಪ ದೇಹೇಂದ್ರಿಯ ವಿಷಯರಸದಲ್ಲಿ ಅಜ್ಞಾನ ಮಾಯಾಸೂತ್ರದ ಬಲೆಯ ಬೀಸಿಹುದೆಂಬುದೀಗ, ಕರೆಯ ನೂಲಿನ ಜಾಲವೆಂಬ ಶಬ್ದಕ್ಕರ್ಥ. ಕಾಮವೆಂಬವನೀಗ ಕರಿಯ ಕಬ್ಬಿಲನೆಂಬ ಶಬ್ದಕ್ಕರ್ಥ. ಕಾಮ ನೆಲೆಗೊಂಡು ವಿಷಯಾತುರದ ಬಯಕೆಯ ಹೆಚ್ಚಿಸಿ ಅಜ್ಞಾನ ಸೂತ್ರದ ಮಾಯಾ ಬಲೆಯ ಬೀಸಿ ಜೀವನ ಸೆಳೆದು ಕೆಡಹುತ್ತಿಹೆ ಭವದತ್ತವೆಂಬುದೀಗ, ಕರಿಯ ಕಬ್ಬಿಲ ಹೊಕ್ಕು ಸೇದುತ್ತಿರಲು ಎಂಬ ಶಬ್ದಕ್ಕರ್ಥ. ಕರಣಂಗಳೆಂಬುದೀಗ, ಕರದ ಕೈಯೆಂಬ ಶಬ್ದಕ್ಕರ್ಥ. ಮಚ್ಚಿನ ಮೋಹವೆಂಬುದೀಗ ಗಾಣವೆಂಬ ಶಬ್ದಕ್ಕರ್ಥ. ಅಂತಪ್ಪ ಕರಣಂಗಳೆಂಬ ಕಾಮ ಕೈಗಳಿಂದ ಮಚ್ಚಿನ ಮೋಹಗಾಣದಲ್ಲಿ ಜೀವನ ಸಿಕ್ಕಿಸಿ ಜನನ ಮರಣಕ್ಕೆ ತರುತಿಹನು ಕಾಮವೆಂಬುದೀಗ ಕರದ ಕಯ್ಯಲ್ಲಿ ಗಾಣವೆಂಬ ಶಬ್ದಕ್ಕರ್ಥ. ಅಂತು ಕಾಮ ವಿಕಾರದಿಂದ ಭವಕ್ಕೆ ಬರುತಿಹ ಜೀವನು ಸಮ್ಯಜ್ಞಾನದಿಂದ ತನ್ನ ನಿಜವು ಪರಬ್ರಹ್ಮವೇ ಎಂದು ಅರಿದಡೆ ಆ ದೇಹಮೋಹವಳಿದು ಜನನ ಮರಣಕ್ಕೆ ಬಾರನೆಂಬುದೀಗ, ಸೂಕ್ಷ್ಮ ವಿಚಾರದಲ್ಲಿ ಅರಿತುಕೊಂಡೊಡೆ ಗಾಣಕ್ಕೆ ಹೊರಗಾಯಿತ್ತು ಎಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನದ ಪ್ರಕಾಶದ ಹೆಚ್ಚುಗೆಯ ಬಲದಿಂದ ಜಿಹ್ವೇಂದ್ರಿಯ ವಿಷಯರಸಂಗಳೆಲ್ಲ ನಿರಸವಾಗಿ ಹೋಗಿ ಆ ಶರಣ ಸಂಗದೊಳಿರ್ದು ಚಿತ್ಪರಮ ಪ್ರಕಾಶ ಲಿಂಗವು ಪ್ರತ್ಯಕ್ಷವಾಗಿ ತೋರುತ್ತಿದ್ದಿತ್ತೆಂಬುದೀಗ, ಹರಿವ ಜಲಗಳು ಬತ್ತಿ ಬೇಸಿಗೆಯ ಉಷ್ಣದೋರೆ ಬಿಳಿಯ ಮಳಲಲ್ಲಿಗೆ ಕಾಣಬರಲು ಎಂಬ ಶಬ್ದಕ್ಕರ್ಥ. ಅಂತು ಲಿಂಗ ಭಾವ ಪುಟ್ಟಿಸಿದ ಬಳಿಕ ಶರಣ ಅಂತರಂಗ ಅಜ್ಞಾನ ಮಾಯಾಬಲೆಯ ಸಹವಾಗಿ ಹೋದನೆಂಬುದೀಗ, ಉರಿಯ ಮೆಟ್ಟಿ ನೋಡಿ ಕಾಣದೆ ಜಾಲವ ಹೊತ್ತುಕೊಂಡು ಹೋಗೆ ಎಂಬ ಶಬ್ದಕ್ಕರ್ಥ. ತನ್ನ

ಶರೀರವೆಂಬುದೀಗ ಸಂಗಟವೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಸ್ವದೇಹದಲ್ಲಿ ಷಡ್ವಿಧ ಶಕ್ತಿಯರೆಂಬವರು ಪಣ್ಯಾಂಗನೆಯರೆಂಬುದೀಗ ದಂಗಟನ ಪುಣಜಿಯರೆಂಬ ಶಬ್ದಕ್ಕರ್ಥ. ಅಂತಪ್ಪ ಷಡ್ವಿಧ ಶಕ್ತಿಯರೆಲ್ಲರೂ ವಿಕಾಗ್ರ ಚಿತ್ತವೆಂಬುದೊಂದು ಹಸ್ತದಲ್ಲಿ ಸದ್ಭಾವವೆಂಬ ಬಿಲ್ಲಿಗೆ ಸುಜ್ಞಾನವೆಂಬ ಅಂಬ ತೊಡಚಿ ಹಿಡಿದು ಕೊಂಡಿರ್ದರೆಂಬುದೀಗ, ಹೊಂಗಲೆಯ ಬಿಲ್ಲು ಕೋಲನೊಂದು ಕೈಯಲಿ ಹಿಡಿದು ಎಂಬ ಶಬ್ದಕ್ಕರ್ಥ. ತನ್ನ ಭಕ್ತರಿಗೆ ತನ್ನ ಸೂರೆಯ ಕೊಂಡವ ನಿಜದ ನಿಧಿಯಪ್ಪ ನಿರ್ಮಲ ಶಿವತತ್ವವೆಂಬ ತಂಡುಲವ ಮಹದರುವಿನ ಹಸ್ತದಲಿ ಪಿಡಿದಿರ್ದ ರೆಂಬುದೀಗ, ಒಂದು ಕೈಯಲಿ ಬಿದಿರಕ್ಕಿಯ ಹಿಡಿದು ಎಂಬ ಶಬ್ದಕ್ಕರ್ಥ. ಕಂಗಳೆಂದರೆ ಜ್ಞಾನದೃಕ್ಕು, ಮುತ್ತೆಂದರೆ ಮುಕ್ತಿಸ್ವರೂಪನಪ್ಪ ಲಿಂಗ, ಪಾದವೆಂದರೆ ಕ್ರಿಯಾಚಾರ, ಅಂತು ಶರಣನ ಜ್ಞಾನದೃಕ್ಕುಗಳಲ್ಲಿ ಭಿನ್ನವಿಲ್ಲದಿರ್ದ ಮುಕ್ತಿಸ್ವರೂಪನಪ್ಪ ಚಿತ್ಕಲಾಲಿಂಗವ ಬಹಿಷ್ಕರಿಸಿ ಇಷ್ಟಲಿಂಗವಾಗಿ ಬಂದು ಕ್ರಿಯಾಚಾರದಲ್ಲಿ ನೆಲೆ ಗೊಂಡಿತ್ತೆಂಬುದೀಗ ಕಂಗಳ ಮುತ್ತು ಸಡಿಲಿ ಪಾದದ ಮೇಲೆ ಬೀಳಲಿ ಎಂಬ ಶಬ್ದಕ್ಕರ್ಥ. ಅಂತು ಭಕ್ತಿಗೊಲಿದು ಅಖಂಡ ಜ್ಞಾನಲಿಂಗವು ಖಂಡಿತವನೈದಿ ಸೂಕ್ಷ್ಮ ರೂಪಿಂದ ಇಷ್ಟಲಿಂಗವಾಗಿ ಕರಸ್ಥಲಕ್ಕೆ ಬಂದಿತ್ತೆಂಬುದೀಗ, ಅಂಗಯ್ಯೊಳಗೊಂದು ಹರಿದ ತಲೆ ಮೂಡಲು ಎಂಬ ಶಬ್ದಕ್ಕರ್ಥ. ಅಂತು ತನ್ನ ದೇಹವಪ್ಪ ತನ್ನ ಆತ್ಮ ಸ್ವರೂಪೇ ಇಷ್ಟಲಿಂಗವಾಗಿ ಕರಸ್ಥಲಕ್ಕೆ ಧರಿಸಿಕೊಂಡು ಕ್ರಿಯಾನುಭಾವದಿಂದ ಚರಿಸುತ್ತಿರ್ದ ಶರಣಂಗೆ ಒಳಹೊರಗೆನ್ನದೆ ಸರ್ವಾಂಗಲಿಂಗವಾಯಿತ್ತೆಂಬುದೀಗ, ದಂಗಟನ ಹೊತ್ತುಕೊಂಡು ಆಡುತ್ತಿರಲು ಸಿಂಗಾರವಾಯಿತ್ತು ಎಂಬ ಶಬ್ದಕ್ಕರ್ಥ. ಅಂತು ಜ್ಞಾನ ಕ್ರೀಯಿಂದ ಸರ್ವಾಂಗ ಲಿಂಗವಾಗಿ ಭಿನ್ನವಿಲ್ಲದೆ ಕೂಡಿಪ್ಪುದೇ ಭಕ್ತಿ ಅಂತಪ್ಪ ಭಕ್ತಿ ಎಂಬುದು ಎಂದೆಂದೂ ಶಿವನಲ್ಲಿ ಸಮೇತವಾಗಿಪ್ಪ ಶಕ್ತಿ ಅಂತಪ್ಪ ಶಕ್ತಿಯು ಭಕ್ತಿಯಾಯಿತ್ತೆಂಬುದ ಶಿವನ ಕೃಪೆಯಿಂದ ಶರಣನರಿದನೆಂಬುದೀಗ, ಕೂಡಲಚನ್ನಸಂಗಯ್ಯದಲ್ಲಿ ಭಕ್ತ್ಯಾಂಗನೆಯ ನಾನಿಂದು ಕಂಡೆನಯ್ಯ ಎಂಬ ಶಬ್ದಕ್ಕರ್ಥ.

೫೭೮

(೨) ಅಯ್ಯಾ ಸಜ್ಜನಸದ್ಭಾವಿಗಳ ಸಂಗದಿಂದ ಮಹಾನುಭಾವಿಗಳ ಕಾಣಬಹುದು. ಅಯ್ಯಾ ಮಹಾನುಭಾವಿಗಳ ಸಂಗದಿಂದ ಗುರುನಾಥನ ಕಾಣಬಹುದು. ಅಯ್ಯಾ, ಗುರುವಿನ ಸಂಗದಿಂದ ಲಿಂಗದೇವನ ಕಾಣಬಹುದು. ಅಯ್ಯಾ, ಲಿಂಗಯ್ಯನ ಸಂಗದಿಂದ ಜಂಗಮಸ್ವಾಮಿಯ ಕಾಣಬಹುದು. ಅಯ್ಯಾ, ಜಂಗಮಗಳ ಸಂಗದಿಂದ ಪ್ರಸಾದವ ಕಾಣಬಹುದು. ಇದು ಕಾರಣ ಕೂಡಲಚನ್ನಸಂಗಮ ದೇವಯ್ಯ, ನಿಮ್ಮ ಸಜ್ಜನ ಶುದ್ಧ ಶಿವಾಚಾರ ಮಹಾನುಭಾವಿಗಳ ಸಂಗವನೇ ಕರುಣಿಸಯ್ಯಾ.

೫೭೯

(೩) ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದಕೊಂಡು. ಎನ್ನ ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದು. ಎನ್ನ ಕಂಗಳು ಶುದ್ಧವಾಯಿತ್ತು ಸಕಲ ಗಣಂಗಳ ನೋಡಿ. ಎನ್ನ ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ. ಲಿಂಗ ತಂದೆ ನೆಟ್ಟನೆ ನಿಮ್ಮ ಮನ ಮುಟ್ಟಿ ಪೂಜಿಸಿ ಭವಗೆಟ್ಟೆ ನಾನು ಚನ್ನಮಲ್ಲಿಕಾರ್ಜುನಾ.

ಇಂತು ಲಿಂಗ ಕಾಯ ಮಥನದಿಂದ ವೀರ ಮಹೇಶ್ವರನ ದೇಹ ನಿರ್ದೇಹ ವಾದ ಭೇದವೆಂತಿರ್ದುದೆಂದಡೆ ಮುಂದೆ ಅಕಾಯಸ್ಥಲವಾದುದು.

೫. ಅಕಾಯಸ್ಥಲ

೫೮೦

(೧) ದೇಹ ನಿರ್ದೇಹವೆನುತಿಪ್ಪರಯ್ಯ. ದೇಹ ನಿರ್ದೇಹವೆಂಬ ಮರ್ಮ ವನರಿಯರು. ಅಹಂ ಎಂಬುದೇ ದೇಹ ನೋಡಾ. ದಾಸೋಹಂ ಎಂಬುದೇ ನಿರ್ದೇಹ ನೋಡಾ. 'ಅಕಾಯೋ ಭಕ್ತ ಕಾಯಸ್ತು' ಎಂದುದಾಗಿ ಅಹಂ ಭಾವವಳಿ ದುಳಿದು ದಾಸೋಹಿಗಳಾದವರ ಕೂಡಲಚನ್ನ ಸಂಗಯ್ಯನಲ್ಲಿ ನಿರ್ದೇಹಿಗಳೆಂಬೆನು.

ಟೀಕು : ವಾಗದ್ವೈತದಿಂದ ತಾನೇ ಬ್ರಹ್ಮವೆಂದು ನುಡಿವವರಿಗೆ ಎಂದೆಂದೂ ದೇಹವಾಸನೆ ಬಿಡದೆ ದೇಹಿಗಳಾಗಿಪ್ಪರು. ತಾನೆಂಬಹಂಕಾರವಳಿದು ದಾಸೋಹಂ ಭಾವದಿಂದ ಶಿವಂಗೆ ಭಕ್ತಿಯ ಮಾಡುವರೆಲ್ಲರು ಮುಕ್ತರೆಂಬುದೀ ವಚನದ ತಾತ್ಪರ್ಯಾರ್ಥ.

೫೮೧

(೨) ಕುಲಮದವೆಂಬುದಿಲ್ಲ, ಅಯೋನಿಸಂಭವನಾಗಿ. ಛಲಮದವೆಂಬು ದಿಲ್ಲ, ಪ್ರತಿದೋರದಾಗಿ. ಧನಮದವೆಂಬುದಿಲ್ಲ, ತ್ರಿಕರಣಶುದ್ಧನಾಗಿ. ವಿದ್ಯಾ ಮದವೆಂಬುದಿಲ್ಲ ಅಸಾಧ್ಯವ ಸಾಧಿಸಿದನಾಗಿ. ಮತ್ತಾವ ಮದವೆಂಬುದಿಲ್ಲ, ನೀನವಗ್ರಹಿಸಿದ ಕಾರಣ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಅಕಾಯ ಚರಿತ್ರನಾಗಿ.

೫೮೨

(೩) ಆದಿಯ ಸ್ಥಲವೆಂದು ನುಡಿವರು. ಅನಾದಿಯ ಸ್ಥಲವೆಂದು ನುಡಿವರು. ಆದಿಗೆ ಒಡಲುಂಟು. ಅನಾದಿಗೆ ಒಡಲಿಲ್ಲ. ''ನಚ ಭೂಮಿ ನಚ ಜಲ, ನಚ ತೇಜ, ನಚ ವಾಯು, ನಚ ಆಕಾಶ.'' ಇವೆಲ್ಲವು ಘಟಕ್ಕೆ ಸಂಬಂಧವಾಗಿ ಘಟ ಕೆಡುವುದು. ಗ್ರಂಥ : ''ಸ್ಥಲ ಸ್ಥಲಂ ಗತಂ ಸ್ಥಾಪ್ಯಂ ತಾಮಸಂ ಮನವರ್ಜಿತಂ। ಸಕಲ ನಿಃಕಲಂ ನಾಸ್ತಿ। ಘನಲಿಂಗ ಸ್ವಭಾವತಾ'' ಎಂದುದಾಗಿ, ಇಂತಹ ನಿರ್ದೇಹಿ ಶರಣನಂಗದಲ್ಲಿ ಅರಿಯಬಾರದು ಕೂಡಲಚನ್ನಸಂಗಯ್ಯ.

೫೮೩

(೪) ಪಿಂಡದಮೇಲೊಂದು ಪಿಂಡವನಿರಿಸಿ, ಆ ಪಿಂಡವ ನಿಕ್ಷೇಪಿಸಿ ಮತ್ತೊಂದು ಪಿಂಡದಮೇಲೊಂದು ಪಿಂಡವನಿರಿಸಿ, ಆ ಪಿಂಡವ ನಿಕ್ಷೇಪಿಸಿ, ಪಿಂಡ ಲಿಂಗವನರಿದು, ಲಿಂಗ ಪಿಂಡವನರಿಯದು. ಒಳಗಿರ್ದ ಲಿಂಗಕ್ಕೆ ಅದ್ಭುತ ಸಂಕಷ್ಟ ವಾಯಿತ್ತು. ಗ್ರಂಥ : ಪಿಂಡಸ್ಥಂ ಪಿಂಡಮಧ್ಯಸ್ಥಂ। ಪಿಂಡ ನ ತು ಘಟಕೃತಂ। ಪಿಂಡೇನ ಪಿಂಡಿತಂ। ಪಿಂಡಂ ''ಪಿಂಡರೂಪಮುದಾಹೃತಂ। ಯದ್ವಾ ಶಿವಮಯಂ ಪಿಂಡಂ। ಸರ್ವತತ್ವಲಯಂ ವಿದುಃ'' ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಯ್ಯ, ನಿಮ್ಮ ಶರಣನು ಅಕಾಯಚರಿತ್ರನು.

೫೮೪

(೫) ಭಿನ್ನಪ್ರಾಣವಳಿದು ನಿರ್ಮಳಚಿತ್ತವಮಾಡಿ ಕಣ್ಣಾಲಿ ಉರೆ ನಟ್ಟು, ಹೊರಸೂಸದೆ ಸುಣ್ಣ ಬಣ್ಣವ ಕಳೆದು ಉಣ್ಣ ಉಣ್ಣದೆ ಇರನು. ತನ್ನ ನಿಲವನರಿತು ತಾನೊಬ್ಬನೇ ಇರನು. ಜನ್ಮ ಕರ್ಮಂಗಳಲ್ಲಿ ಕಾಳಬೆಳದಿಂಗಳಲ್ಲಿ ತನ್ನ ಪ್ರಾಣ ತನಗೆ ಪ್ರಕಾಶವೋ ? ನಿನ್ನೊಳಗೆ ಹಣೆ ಹೊಕ್ಕು ಕುಂಬಳದ ಸೂಜಿಯ ಸುಮ್ಮಾನಿ ಶರಣನ ನಿಲವ ನೋಡಾ. ಅಳಲಲಿಲ್ಲ, ಬಳಲಲಿಲ್ಲ, ಅಳಿಯಲಿಲ್ಲ, ಉಳಿಯಲಿಲ್ಲ, ಎರಡಳಿದ ನಿಲವು. ಉಭಯ ಮಧ್ಯದ ಕೊರಡಿಂಗೆ ಕುಂಟಿಯನಿಕ್ಕಿ ಕೆಡಿಸುವನು ತಾನಲ್ಲ. ಹೊರಳಲರಿಯನು. ಕೊಳಚೆಯ ಉದಕದೊಳಗ ಕಳಾಕಳಭೇದದಿಂ ತೊಳತೊಳಗುವವಳ ಭ್ರೂಮಧ್ಯದಿಂದ ದೃಢಮಂಡಲವ ಕಳೆದು ದಾಂಟಿ ಕೂಡಲಚನ್ನಸಂಗಯ್ಯನೊಳಗೆ ಶರಣಕಾಂತಿಯ ನಿಲವಿಂಗೆ ಶರಣು ಶರಣು.

೫೮೫

(೬) ಅಕಾಯ ಸನ್ನಿಹಿತವಾಯಿತಲ್ಲಾ ! ಅಕಾಯ ಅಳವಟ್ಟಿತಲ್ಲಾ ! ಅಕಾಯ ನಿಂದು ನಿವಾಸವಾಯಿತಲ್ಲಾ ! ಕೂಡಲಚನ್ನಸಂಗನ ನಿಂದೆ ನಿಂದಿತ್ತಲ್ಲಾ !

೫೮೬

(೭) ಕಾಯದಿಂದ ಲಿಂಗದರುಶನ. ಕಾಯದಿಂದ ಜಂಗಮದರುಶನ. ಕಾಯದಿಂದ ಪ್ರಸಾದಸಂಪತ್ತು. ಕೂಡಲಚನ್ನಸಂಗಯ್ಯ, ಅಕಾಯದಿಂದ ನಿಮ್ಮುವ ಕಂಡೆನಯ್ಯ.

೫೮೭

(೮) ಕಾಯದೊಳಗೆ ಅಕಾಯವಾಯಿತ್ತು, ಜೀವದೊಳಗೆ ನಿರ್ಜೀವವಾಯಿತ್ತು, ಭಾವದೊಳಗೆ ನಿರ್ಭಾವವಾಯಿತ್ತು, ಎನ್ನ ಮನದೊಳಗೆ ಘನ ನೆನಹಾಯಿತ್ತು, ಎನ್ನ ತಲೆ ಮೊಲೆಗಳ ನೋಡಿ ಸಲಹಿದಿರಾಗಿ ಚನ್ನಮಲ್ಲಿಕಾರ್ಜುನಯ್ಯ, ಧರ್ಮದವಳಾನು.

೫೮೮

(೯) ಪ್ರಸಾದಕಾಯವಾದ ಬಳಿಕ ಸರ್ವಾಂಗ ಉತ್ತುಮಾಂಗ. ಪ್ರಾಣಲಿಂಗವಾದ ಬಳಿಕ ಸದಾ ಸನ್ನಿಹಿತ. ಲಿಂಗ ಶರಣನಲ್ಲಿ ಭಾವಭೇದವಿಲ್ಲ. ನಿರಂತರ ಲಿಂಗಸಂಗಿ. 'ಅಕಾಯಂ ಭಕ್ತಕಾಯಸ್ತು' ಎಂದುದಾಗಿ ಕೂಡಲಚನ್ನಸಂಗನ ವಚನ.

೫೮೯

(೧೦) ಲಿಂಗವೇ ಪ್ರಾಣವಾಯಿತ್ತಾಗಿ ಆಚಾರ ವಿಚಾರವಿಲ್ಲವಯ್ಯ. ಪ್ರಸಾದ ಕಾಯವಾಯಿತ್ತಾಗಿ, ಸತ್ವ ರಜ ತಮ ಕ್ರೋಧವಿಲ್ಲವಯ್ಯ. ಜಂಗಮಮುಖ ಲಿಂಗವಾದ ಕಾರಣ ಲಿಂಗದಲನುಭಾವಿಸಿ ನೋಡುತ್ತಿರ್ದೆನಯ್ಯ. ಭಕ್ತಕಾಯ ಮಮಕಾಯವಾಗಿ ಕೂಡಲಚನ್ನಸಂಗನ ಬಸವಣ್ಣನಲ್ಲಿ ಸುಖಿಯಾಗಿರ್ದೆನಯ್ಯ.

ಇಂತು ಅಕಾಯಸ್ವರೂಪವನ್ಯೆದಿದ ಲಿಂಗವು ವೀರಮಹೇಶ್ವರನಲ್ಲಿ ಸಕಳ ನಿಷ್ಕಳಾತೀತ ಕಾಯವೆಂತಿರ್ದುದೆಂಡಡೆ, ಮುಂದೆ ಪರಕಾಯಸ್ಥಲವಾದುದು.

೬. ಪರಕಾಯಸ್ಥಲ

೫೯೦

(೧) ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತನು ಬ್ರಹ್ಮ, ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತನು ವಿಷ್ಣು, ಉತ್ತುಮಾಂಗದಲ್ಲಿ ಲಿಂಗವ ಧರಿಸಿಕೊಂಡಾತನು ರುದ್ರನು. ಅಮಳೋಕ್ಯದಲ್ಲಿ ಲಿಂಗವ ಧರಿಸಿಕೊಂಡಾತನು ಈಶ್ವರನು. ಮುಖ ಸಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತನು ಸದಾಶಿವನು. ಅಂಗಸಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತನು ಉಪಮಾತೀತನು. ಇವರೆಲ್ಲರು ಬಯಲನೇ ಪೂಜಿಸಿ ಬಯಲಾಗಿ ಹೋದರು. ನಾನು ನಿತ್ಯವ ಪೂಜಿಸಿ ಮಿಥ್ಯವನರಿಯದ ಇರವಿನಲ್ಲಿ ಸುಖಿಯಾದೆನು ಗುಹೇಶ್ವರಾ.

ಟೀಕು : ಬ್ರಹ್ಮತತ್ವದ ಸುಚಿತ್ತವೆಂಬ ಕಕ್ಷೆಯಲ್ಲಿ ಆಚಾರ ಗ್ರಹಣವಾಯಿತ್ತೆಂಬುದೀಗ, ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತ ಬ್ರಹ್ಮನೆಂಬ ಶಬ್ದಕ್ಕರ್ಥ. ವಿಷ್ಣು ತತ್ವವ ಸುಬುದ್ಧಿ ಎಂಬ ಕೃತನಿಶ್ಚಯ ಹಸ್ತದಲ್ಲಿ ಗುರುಲಿಂಗಗ್ರಹಣವಾಯಿತ್ತೆಂಬುದೀಗ, ಕರಸ್ಥಲದಲ್ಲಿ ಲಿಂಗವ ಧರಿಸಿದಾತನು ವಿಷ್ಣು ಎಂಬ ಶಬ್ದಕ್ಕರ್ಥ. ರುದ್ರ ತತ್ವದ ಅಹಂಕಾರವೆಂಬುದರ ಮಸ್ತಕದ ಮೇಲೆ ಶಿವಲಿಂಗ ಗ್ರಹಣವಾಯಿತ್ತೆಂಬುದೀಗ, ಉತ್ತಮಾಂಗದ ಮೇಲೆ ಲಿಂಗವ ಧರಿಸಿಕೊಂಡಾತನು ರುದ್ರನೆಂಬ ಶಬ್ದಕ್ಕರ್ಥ. ಈಶ್ವರತತ್ವದ ಅಂತರಂಗವೆಂಬ ಸುಮನಹಸ್ತದಲ್ಲಿ ಜಂಗಮಲಿಂಗ ಗ್ರಹಣವಾಯಿತ್ತೆಂಬುದೀಗ, ಅಮಳೋಕ್ಯದಲ್ಲಿ ಲಿಂಗವ ಧರಿಸಿಕೊಂಡಾತನು ಈಶ್ವರನೆಂಬ ಶಬ್ದಕ್ಕರ್ಥ. ಸದಾಶಿವತತ್ವದ ಮುಖಸಜ್ಜೆ ಎಂಬ ಸುಜ್ಞಾನ ಹಸ್ತದೊಳಗೆ ಪ್ರಸಾದಲಿಂಗ ಗ್ರಹಣವಾಯಿತ್ತೆಂಬುದೀಗ, ಮುಖಸಜ್ಜೆಯೊಳಗೆ ಲಿಂಗವ ಧರಿಸಿಕೊಂಡಾತನು ಸದಾಶಿವನೆಂಬ ಶಬ್ದಕ್ಕರ್ಥ. ಉಪಮಾತೀತ ತತ್ವದ ಸದ್ಭಾವವೆಂಬ

ಹಸ್ತದ ಸರ್ವಾಂಗದಲ್ಲಿ ಮಹಾಲಿಂಗ ಗ್ರಹಣವಾಯಿತ್ತೆಂಬುದೀಗ, ಅಂಗಸಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತನು ಉಪಮಾತೀತನೆಂಬ ಶಬ್ದಕ್ಕರ್ಥ. ಈ ಆರು ತತ್ವಂಗಳೊಳಗೆ ಷಡ್‌ಲಿಂಗಸ್ಥಲಂಗಳು ಐಕ್ಯವಾಗಿ ನಿರ್ವಯಲಾಗಲು ಇಲ್ಲಿ ಆ ಶರಣನು ನಿತ್ಯ ಪರಿಪೂರ್ಣನಾಗಿ ಮಾಯಾ ಮಿಥ್ಯೆಯನಳಿದು ಇದ್ದನೆಂಬುದೀಗ, ಇವರೆಲ್ಲರು ಬಯಲನೇ ಪೂಜಿಸಿ ಬಯಲಾಗಿ ಹೋದರು, ನಾನು ನಿತ್ಯವ ಪೂಜಿಸಿ ಮಿಥ್ಯವ ನರಿಯದ ಇರವಿನಲ್ಲಿ ಸುಖಿಯಾದೆನೆಂಬ ಶಬ್ದಕ್ಕರ್ಥ.

೫೯೧

(೨) ಪ್ರಾಣ ಪ್ರಾರಂಭ ಪ್ರಾರಬ್ಧವಿಲ್ಲವಾಗಿ ಪರಚಿಂತೆ ಪರಬೋಧೆಯ ಪರಿಚಿತನಲ್ಲ. ಉಸಿರು ಬೀಜದ ಹಸಿಯ ಬಣ್ಣದ ದಶವಿಧವಾಗಿ ವಶಗತನಲ್ಲ. ನಿರಂತರ ಸ್ವತಂತ್ರ ಶರಣ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಶಬ್ದ ಮುಗ್ಧನಾಗಿ.

೫೯೨

(೩) ಕಾಲನ ಕಳೆದು ಕಪ್ಪೆಯ ಹೊಡೆದೆನು. ಕಲ್ಪಿತವೆಂಬವನ ನೊಸಲಾಕ್ಷರವ ತೊಡೆದೆನು. ಇನ್ನೇನೋ ? ಇನ್ನೇನೋ ? ಮುಂದೆ ಬಯಲಿಂಗೆ ಬಯಲು ಸನ್ನೆ ದೋರುತ್ತಿದೆ. ಹಿಂದಿಲ್ಲ. ಮುಂದಿಲ್ಲ. ಮತ್ತೇನೂ ಇಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ನಾನೂ ಇಲ್ಲ ನೀನೂ ಇಲ್ಲ.

೫೯೩

(೪) ನಾನೆಂಬ ಭೇದ ಅಂದೂ ಇಲ್ಲ ಇಂದೂ ಇಲ್ಲ. ಸಾಲೋಕ್ಯನಲ್ಲ ಸಾಮೀಪ್ಯನಲ್ಲ, ಶರಣ. ಸಾರೂಪ್ಯನಲ್ಲ ಸಾಯುಜ್ಯನಲ್ಲ, ಶರಣ. ಸಕಾಯನಲ್ಲ ಅಕಾಯನಲ್ಲ, ಗುಹೇಶ್ವರಲಿಂಗ ತಾನೆಯಾಗಿ.

೫೯೪

(೫) ತಪ್ಪಿ ನೋಡಿದಡೆ ಮನದಲ್ಲಿ ಅಚ್ಚೊತ್ತಿ[ದಂತಿ]ದ್ದಿತ್ತು. ಇಪ್ಪೆಡೆಯ[೧] ವಿಚಾರಿಸಿದಡೆ ಇಲ್ಲದಂತಾಯಿತ್ತು. ಲೆಪ್ಪದ ಜಲದ ಪಾದದ ಘಾತದಂತೆ. ಕರ್ತೃತ್ವ ವೆಲ್ಲಿಯದೋ ಗುಹೇಶ್ವರಾ?

೫೯೫

(೬) ಶೂಲದ ಮೇಲಣ ತಲೆಯ [ವೈ] ಭೋಗವನಾರು ಬಯಸಿದಡೆ ಎಲ್ಲಿಯದು? ಉಂಬರೆ ಒಡಲಿಲ್ಲ, ಲಿಂಗಾರ್ಚನೆ ಇಲ್ಲ. ಅಂಗಭೋಗಕ್ಕೆ ಕರಚರಣಂಗಳಿಲ್ಲ. ಅಂಗವಿಲ್ಲೆಂಬ ಮಾತು ನಿಮಗೇಕೆ ? ಸುಡು ಭಂಗ. ಲಿಂಗ ನಿರಾಳ ಗುಹೇಶ್ವರ.

೧+ ಲ್ಲಿ(ಮೂ)

೫೯೬

(೭) ಮೂರ್ತನಲ್ಲ ಅಮೂರ್ತನಲ್ಲ. ಲಿಂಗದಲ್ಲಿ ಪ್ರಾಣ ಸಂಬಂಧಿ. ಪ್ರಾಣದಲ್ಲಿ ಪ್ರಸಾದಸಂವರಣೆ. ಪ್ರಸಾದದಲ್ಲಿ ಕಾಯಾಶ್ರಿತ. ಲೋಕ ಲೌಕಿಕ ಪ್ರಕಾರ ದುದಯನಲ್ಲ ಕೂಡಲಚನ್ನಸಂಗಾ ನಿಮ್ಮ ಶರಣನು.

೫೯೭

(೮) ಹುಟ್ಟುಗೆಟ್ಟ ಹಾಳಮೇಲೆ ಬಟ್ಟಬಯಲಲೊಬ್ಬನ ಕಂಡೆ. ಅಂಗವಿಲ್ಲದ ಅವಯವಕ್ಕೆ ಸಂಗವಿನ್ನೆಲ್ಲಿಯದಯ್ಯ ? ಹಿಂಗುವ ಅವಯವಕ್ಕೆ ಹಿಂಗದ ತೊಡಿಗೆಯ ತೊಡಸಿಹೆನೆಂಬ ಭಂಗಿತರನೇನೆಂಬೆ ರೇಕಣ್ಣಪ್ರಿಯ ನಾಗಿನಾಥಾ ?

ಇಂತು ಅಕಾಯ, ಸಕಾಯ, ಪರಕಾಯವೆಂಬ ತ್ರಿವಿಧಸ್ಥಲವು ಏಕವಾದ ಲಿಂಗವು ವೀರಮಹೇಶ್ವರನ ಸದ್ಧರ್ಮಚರಿತ್ರ ನಿಮಿತ್ಯ ಏಕವಾದ ಭೇದವೆಂತಿರ್ದುದೆಂದಡೆ, ಮುಂದೆ ಧರ್ಮಾಚಾರಸ್ಥಲವಾದುದು.

೭. ಧರ್ಮಾಚಾರಸ್ಥಲ

೫೯೮

(೧) ಲೋಕ ಒಂದೆಂದರೆ ತಾನೊಂದನೆನಬೇಡ. ಮತ್ತಾ[ರೆ][೧] ನೆಂದಡೆಯೂ ತನ್ನನೆಂದರೆನಬೇಡ. ಭೃತ್ರಕ್ಕೆ [ಬೆಂ]ಗುಂಡನಿಕ್ಕಿದಂತಿರಬೇಕು ಹಿರಿಯರು, ಗುಹೇಶ್ವರಾ.

ಟೀಕು : ತಾನು ಶಿವಜ್ಞಾನ ಸಂಪನ್ನನಾದಡೆ, ಲೋಕವು ಲೋಕದಂತೆ ನುಡಿವುದಾಗಿ, ತಾನದನಹುದಲ್ಲವೆನಬೇಡ. ತನ್ನನೆಂದನೆಂದಡೆಯೂ ತಾನದನೇನೆಂದೂ ಅರಿಯದೆ ಮಹಾಗಂಭೀರನಾಗಿರಬೇಕೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೫೯೯

(೨) ಭಕ್ತ ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಲಿಂಗಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು. ತನುಮನಧನವ ಗುರುಲಿಂಗಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರದಾನವ ಗೈಯದಿರಬೇಕು. ಸಕಲ ಇಂದ್ರಿಯಂಗಳು ತನ್ನ ವಶಗತವಾಗಿರಬೇಕು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇ ಸಾಧಕವು ನೋಡಾ ಕೂಡಲಸಂಗಮದೇವಾ.

೬೦೦

(೩) ಭಕ್ತರಲ್ಲದವರೊಡನಾಡದಿರು, ಆಡದಿರು. ಅರ್ಥದಾಸೆಗೆ ದುರ್ಜನರ

೧–೧ ರ (ಮೂ) ೨–೨ ಬೈ (ಮೂ)

ಸಂಗವ ಮಾಡದಿರು, ಮಾಡದಿರು. ಉತ್ತಮರ ಕೆಡೆ ನುಡಿಯದಿರು, ನುಡಿಯದಿರು. ಮುಂದೆ ಹೊತ್ತ ಹೊರೆ ದಿಮ್ಮಿತ್ತಿಹುದು. ನಿತ್ಯವಲ್ಲದ ದೈವಕ್ಕೆರಗದಿರು, ಎರಗದಿರು. ಕರ್ತ್ಯಸೊಡ್ಡಳನ ನೆರೆ ನಂಬು. ಡಂಭಕ ಬೇಡ.

೬೦೧

(೪) ಪ್ರಾಣಲಿಂಗವೆಂಬುದೊಂದು ಮಾತಿನಂತುಟಲ್ಲ. ಲೋಗರ ಸುಖ ದುಃಖ ತನ್ನದೆನ್ನಕ್ಕರ ಚನ್ನಸಿದ್ಧನಾಥನೆಂಬ ಲಿಂಗವು ಸುಮ್ಮನೆ ಒಲಿವನೇ ?

೬೦೨

(೫) ಸ್ಥಾವರವೆಂತಂತೆ ಮನದಲ್ಲಿ ಭಾವಿಸಿ ಸಕಲ ಜೀವದಲ್ಲಿ ನಿಂದೆಯ ಮಾಬುದು. ಲಿಂಗ ಜಂಗಮ ಒಂದೇ ಎಂದು ಕಾಂಬುದು. ಬಂದುದು ಲಿಂಗಾಧೀನವೆಂದು ಕಾಂಬುದು. ಸತ್ಯವ ನುಡಿವುದು. ಶುಚಿಯಾಗಿಪ್ಪುದು. ಎರಡುವಿಡಿಯದೆ ಎರಡು ನಡೆಯದೆ ಮುನ್ನಾದಿಯ ಪುರಾತನರು ಕೂಡಿದ ಪಥವಿದು. ಸಕಳೇಶ್ವರ ದೇವರನೊಲಿಸಿಹೆನೆಂಬವಂಗೆ.

೬೦೩

(೬) ತನ್ನ ಗುಣವ ಹೊಗಳಬೇಡ. ಇದಿರ ಗುಣವ ಹಳಿಯಬೇಡ. ಕೆಮ್ಮನೊಬ್ಬರ ನುಡಿಯಬೇಡ. ನುಡಿದು ನುಂಪಿತನಾಗಬೇಡ. ತನ್ನ ಮನ ವಿಕಳನಾಗಿ ಇದಿರ ಮನವ ನೋಯಿಸಬೇಡ. ತಾನು ಬದುಕುವ್ಯೆಸುದಿನ ಸಮತೆ ಸಮಾಧಾನ ತುಂಬಿ ತುಳುಕಬೇಕು. ಮಹಾಲಿಂಗ ಕಲ್ಲೇಶ್ವರ ನಿಚ್ಚಳ ನಿಜವನರಿದ ಬಳಿಕ ಸಕಳದೊಳಗೆ ಬಚ್ಚಬರಿಯ ಮರುಳಾಗಿರಬೇಕು.

ಇಂತು ಧರ್ಮಾಚಾರಸ್ವರೂಪವನೈದಿದ ಲಿಂಗವು ವೀರಮಹೇಶ್ವರನ ಮನಸ್ಥಲದಲ್ಲೆಡೆಗೊಂಡ ಸದ್ಭಾವಚರಿತ್ರವೆಂತೆಂದೊಡೆ, ಮುಂದೆ ಭಾವಾಚಾರ ಸ್ಥಲವಾದುದು.

೮. ಭಾವಾಚಾರಸ್ಥಲ

೬೦೪

(೧) ರೂಪ[ನೇ] ಕಂಡರು, ನಿರೂಪ[ನೇ] ಕಾಣರು. ತನುವನೇ ಕಂಡರು, ಅನುವನೇ ಕಾಣರು. ಆಚಾರವನೇ ಕಂಡರು, ವಿಚಾರವನೇ ಕಾಣರು. ಗುಹೇಶ್ವರಾ, ನಿಮ್ಮ ಕುರುಹನೇ ಕಂಡರು, ಕೂಡಲರಿಯದೆ ಕೆಟ್ಟರು.

ಟೀಕು : ಅಂಗದ ಮೇಲಣ ಇಷ್ಟಲಿಂಗರೂಪ ಕಾಣಬಹುದಲ್ಲದೆ ಆ ಲಿಂಗದ ಪ್ರಾಣ ಚೈತನ್ಯಕಳೆ ತಾನೆಂದರಿಯರೆಂಬುದೀಗ, ರೂಪನೇ ಕಂಡರು, ನಿರೂಪನೇ, ಕಾಣರೆಂಬ ಶಬ್ದಕ್ಕರ್ಥ. ಆ ಚೈತನ್ಯ ಲಿಂಗದ ಅನುವನು ಇದಿರಿಟ್ಟು ಕಾಣಬಹುದಲ್ಲದೆ ಸರ್ವಾಂಗಲಿಂಗಿಯಾಗಬಾರದೆಂಬುದೀಗ, ೧[ತನು]೧ವನೇ ಕಂಡು ೨[ಅ]೨ನುವನೆ

೧–೧ ಅನು (ಮೂ) ೨–೨ ತ (ಮೂ)

ಮರೆದರೆಂಬ ಶಬ್ದಕ್ಕರ್ಥ. ಅಂಗದ ಮೇಲೆ ಇಪ್ಪ ಆಚಾರವ ಕಾಣಬಹುದಲ್ಲದೆ ಆ ಆಚಾರ ಪ್ರಾಣವಪ್ಪ ಮಹಾನುಭಾವ ವಿಚಾರವ ಕಾಣಬಾರದೆಂಬುದೀಗ, ಆಚಾರವನೆ ಕಂಡು ವಿಚಾರವ ಮರೆದರೆಂಬ ಶಬ್ದಕ್ಕರ್ಥ. ತಾನೇ ವಸ್ತುವೆಂಬ ಕುರುಹನು ತಮಗೆ ಅನ್ಯವಿಟ್ಟು ನೋಡಿ ಸುಖಿಸಬಹುದಲ್ಲದೆ ತಾನೆಂಬುದನರಿದು ಮರೆಯಬಾರದೆಂಬುದೀಗ, ಗುಹೇಶ್ವರಾ ನಿಮ್ಮ ಕುರುಹನೇ ಕಂಡು ಕೂಡಲರಿಯದೆ ಕೆಟ್ಟರೆಂಬ ಶಬ್ದಕ್ಕರ್ಥ.

೬೦೫

(೨) ಗುರು ಕೊಟ್ಟ ಲಿಂಗವ ತನ್ನ ನಚ್ಚಿನ ಲಿಂಗ ಆಯತವಾಯಿತ್ತಯ್ಯ. ಪ್ರಾಣ ನಚ್ಚಿನಿಂದ ಸ್ವಾಯತವಾಯಿತ್ತಯ್ಯ. ಉಭಯ ನಚ್ಚಿನಿಂದ ಸಂಗವಾಯಿತ್ತು ಕೂಡಲಚನ್ನಸಂಗಯ್ಯ ನಿಮ್ಮಲ್ಲಿ.

೬೦೬

(೩) ಸುಖಶೀಲ ಲಿಂಗಧ್ಯಾನ, ಸಮಶೀಲ ಜಂಗಮಪ್ರೇಮ, ಮಹಾಶೀಲ ಅವರೆಂದಂತೆ ಎಂಬುದು. ಇಂತೀ ತ್ರಿವಿಧವಳವಟ್ಟಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

೬೦೭

(೪) ನೆನೆನೆನೆದು ಮನ ಘನ[ವ] ವೇದಿಸಿತ್ತು ಕಂಡು ಕಂಡು ಮನ ಡಾವರಿಸಿತ್ತು ತತ್‌ತಲ್ಲೀಯವಾಯಿತ್ತು ತದುಗತ ಶಬ್ದಮುಗ್ಧವಾಯಿತ್ತು ಎತ್ತಣ ಗುಹೇಶ್ವರನೆಂದರಿ ಯದೇ ಉಭಯಲಿಂಗ ಒಳಕೊಂಡಿತ್ತಯ್ಯ.

೬೦೮

(೫) ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ, ನಿರಾಳ ಲಿಂಗಕ್ಕೆ ಬಯಲೇ ಸಜ್ಜೆ ವಾಯುವೇ ಶಿವದಾರ, ಬೆಳಗೇ ಸಿಂಹಾಸನ. ಅತ್ತಲಿತ್ತ ಚಿತ್ತ ಹರಿಯಲೀಯದೆ ಮಜ್ಜನಕ್ಕೆರೆದು ಸುಖಿಯಾದೆ ಗುಹೇಶ್ವರಾ.

ಇಂತು ಮನೋಮಧ್ಯದಲ್ಲಿ ಸದ್ಭಾವಚರಿತ್ರಸಂಬಂಧವಾದ ಲಿಂಗವು ವೀರಮಹೇಶ್ವರನ ಮಹಾಜ್ಞಾನಾಚರಣೆಯನ್ನೈದಿದ ಭೇದವೆಂತಿರ್ದುದೆಂದಡೆ, ಮುಂದೆ ಜ್ಞಾನಾಚಾರಸ್ಥಲವಾದುದು.

೯. ಜ್ಞಾನಾಚಾರಸ್ಥಲ

೬೦೯

(೧) ಅರೆಯ ಮೇಲಣ ಹುಲ್ಲಿಗೆ ಕೆಂಗರಿಯ ಬಾಣವ ತೊಟ್ಟರೆ ಅದು ತಪ್ಪದೆ ತಾಗಿತ್ತು ಅದು ಒಂದೇ ಬಾಣದಲ್ಲಳಿಯಿತ್ತಲ್ಲಾ, ನಾರಿ ಹರಿಯಿತ್ತು ಬಿಲ್ಲು ಮುರಿಯಿತ್ತು ಹುಲ್ಲೆ ಎತ್ತ ಹೋಯಿತ್ತೋ ಗುಹೇಶ್ವರಾ.

ಟೀಕು : ಅರೆ ಎಂದಡೆ ಜಡರೂಪಮಪ್ಪ ಕಾಯವೆಂಬರ್ಥ. ಆ ಜಡಪಿಂಡದ ಮೇಲೆ ಮಾಯೆ ಎಂಬ ಹರಿಣೆ ಇಪ್ಪಳೆಂಬುದೀಗ, ಅರೆಯ ಮೇಲಣ ಹುಲ್ಲೆ ಎಂಬ ಶಬ್ದಕ್ಕರ್ಥ. ಕೆಂಗರೆಯ ಜಾಣನೆಂದರೆ ಸುಜ್ಞಾನವೆಂಬ ಶಬ್ದಕ್ಕರ್ಥ. ಅಂತಪ್ಪ ಮಾಯೆ ಎಂಬ ಮೃಗಕ್ಕೆ ಶರಣನೆಂಬ ಬೇಂಟೆಕಾರನು ನಿಷ್ಠೆ ಎಂಬ ಬಿಲ್ಲ ಹಿಡಿದು ಭಾವವೆಂಬ ನಾರಿಯೊಳಗೆ ಸುಜ್ಞಾನವೆಂಬ ಬಾಣ ಹೂಡಿ ಪರಿಪೂರ್ಣವಾಗಿ ತೆಗೆದು ಎಸೆಯಲು ಆ ಮಾಯಾಮೃಗವು ಒಂದೇ ಶಸ್ತ್ರದಲ್ಲಿ ಅಳಿಯಿತ್ತೆಂಬುದೀಗ, ಅರೆಯ ಮೇಲಣ ಹುಲ್ಲೆಗೆ ಕೆಂಗರಿಯ ಬಾಣವ ತೊಟ್ಟ[೧][ರೆ ಅದು][೧] ತಪ್ಪದೆ ತಾಗಿ[೨][ತು][೨] ಅದು ಒಂದೇ ಬಾಣದಲ್ಲಿ ಅಳಿಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತಾಗಲು ಆ ಭಾವವೆಂಬ ನಾರಿಯೂ ಅಳಿದು, ನಿಷ್ಠೆಯೂ ವಿಶ್ರಮಿಸಿ ಆ ಮಾಯೆಯೂ ಅಳಿದು ಹೋಯಿತ್ತೆಂಬುದೀಗ, ನಾರಿ ಹರಿಯಿತ್ತು ಬಿಲ್ಲು ಮುರಿಯಿತ್ತು ಹುಲ್ಲೆ ಎತ್ತ ಹೋಯಿತ್ತು ಎಂಬ ಶಬ್ದಕ್ಕರ್ಥ.

೬೧೦

(೨) ಉರವಣಿಸುವ ಮನ ಮುಟ್ಟುವನ್ನಕ್ಕ ಕಾಡುವುದು. ಘನಾಘನದಲ್ಲಿ ಮನ ನಂಬುವನ್ನಕ್ಕ ಕಾ[೩][ಡು][೩]ವುದು. ಮಹಂತ ಗುಹೇಶ್ವರನೆಂಬ ಶಬ್ದವುಳ್ಳನ್ನಕ್ಕ ಕಾಡುವದು.

೬೧೧

(೩) ಉಭಯ ತನುಗುಣವಳಿದಲ್ಲದೆ, ಅರಿವಿನಾಚಾರವಳವಡದು. ಅರಿವಿನಾಚಾರವಳವಟ್ಟಲ್ಲದೆ ಲಿಂಗದ ಬೆಳಗು ದೊರೆಕೊಳ್ಳದು. ಲಿಂಗದ ಬೆಳಗು ದೊರೆಕೊಂಡಲ್ಲದೆ ಕೂಡಲಚನ್ನಸಂಗಯ್ಯನಲ್ಲಿ ಪರಿಣಾಮ ನೆಲೆಗೊಳ್ಳದು.

೬೧೨

(೪) ನೋಡುದುದ ನೋಡಲರಿಯದೆ ಕೆಟ್ಟಿತ್ತೀ ಲೋಕವೆಲ್ಲ, ನೋಡುದುದ ನೋಡಬಲ್ಲಡೆ ಕೂಡಲಿಲ್ಲ, ಅಗಲಲಿಲ್ಲ, ನೋಟದ ಕೂಟದ ಅಗಲದ ಸುಖವನು ಗುಹೇಶ್ವರಾ ನಿಮ್ಮ ಶರಣ ಬಲ್ಲ.

೬೧೩

(೫) ಅಂಗದಾಪ್ಯಾಯನವಳಿಯದ ಕಾರಣ 'ಲಿಂಗಾ' 'ಲಿಂಗಾ' ಎನುತಿರ್ದರು. ಸಂಗದಾಪ್ಯಾಯನವಳಿಯದ ಕಾರಣ 'ಜಂಗಮಾ' 'ಜಂಗಮಾ' ಎನುತಿರ್ದರು. ಪರಿಣಾಮ ನೆಲೆಗೊಳ್ಳದ ಕಾರಣ 'ಪ್ರಸಾದ' 'ಪ್ರಸಾದ' ಎನುತಿರ್ದರು. ಇಂತೊಂದು ಅಂಗವಿಡಿದು ನಾಮ ಭಂಗಿತರಾದರೆಲ್ಲರು. ಕೂಡಲಚನ್ನಸಂಗಯ್ಯ ನಿಮ್ಮ ಶರಣ ಆರಂಗ ವಿರಹಿತ.*

೧–೧ ವನೆ (ಮೂ) ೨–೨ ತ್ತಲ್ಲಾ (ಮೂ) ೩–೩ ಣು (ಮೂ)

* ಇದರ ಮುಂದಿನ ವಚನ ''ಉರವಣಿಸುವಮನ'' ಎಂಬುದು ಇದೇ ಅಧ್ಯಾಯದಲ್ಲಿ ಪುನರುಕ್ತವಾಗಿರುವುದರಿಂದ ತೆಗೆದು ಹಾಕಲಾಗಿದೆ. (ಸಂ)

೬೧೪

(೬) ಸಟೆ ದಿಟವಾದಲ್ಲಿ ಮುಟ್ಟಿಯೂ ಮುಟ್ಟದಂತಿರಬೇಕು. ಅತಿರತಿ ಗತಿ ಮತಿಗೆ ಮಂದವಾಯಿತ್ತು ಎಂಟು ಹಿಟ್ಟು ಪಂಚಮಠ ಉಂಟು. ಧರೆಯ ಮೇಲೆ ನರ ಸುರಾದಿಗಳೆಲ್ಲ ೧[ಸಭಾ]೧ರವ ಹೊತ್ತುಕೊಂಡು ಇದ್ದಾರೆ. ಹಿಟ್ಟು ನಷ್ಟ, ಮಠ ಹಾಳು, ಊರಿಗುಪಟಳ, ಪಂಚಮಠವ ಸುಟ್ಟು ಗುಹೇಶ್ವರ ಬೀದಿಗರುವಾದ.

೬೧೫

(೭) ಲಿಂಗವನರಿಯದೆ ಏನನರಿದಡೂ ಫಲವಿಲ್ಲ. ಲಿಂಗವನರಿದ ಬಳಿಕ ಮತ್ತೇನನರಿದಡೂ ಫಲವಿಲ್ಲ. ಸರ್ವಕಾರಣ ಲಿಂಗವಾಗಿ, ೨[ಲಿಂ]೨ಗವನರಿದರಿದು ಲಿಂಗಸಂಗವ ಮಾಡು[೩][ವೆ][೩]. ಆ ಸಂಗ[ಸುಖ]ದೊಳಗೋಲಾಡು[೩][ವೆ][೩] ಗುಹೇಶ್ವರ.

೬೧೬

(೮) ಉಂಡೆನುಟ್ಟಿಹೆನೆಂಬ ಸಂದೇಹ ನಿನಗೇಕಯ್ಯ ? ಉಂಬುದೇ ಅಗ್ನಿ ? ಉಡುವುದೇ ಪೃಥ್ವಿ ? ನೀನೆಂದು ಉಂಡೆ ? ನಾನೆಂದು ಕಂಡೆ ? ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತನೆಂಬ ಅಂಜಿಕೆ ೪ ನಿನಗೆ ಬೇಡ. ಅಂಜದಿರು ಗುಹೇಶ್ವರಾ ನಿನಗಾವ ನಾಚಿಕೆಯೂ ಇಲ್ಲ.

೬೧೭

(೯) ಏನೆಂಬೆನೇನೆಂಬೆ ? ಆಪ್ಯಾಯನ ವಿರಹಿತನ ಏನೆಂಬೆನೇನೆಂಬೆ ? ನಾಮ ನಿರ್ನಾಮವಲ್ಲದುದ ಏನೆಂಬೆನೇನೆಂಬೆ ? ಸಾರಾಯ ಸನ್ಮತವಲ್ಲದುದ ಏನೆಂಬೆನೇನೆಂಬೆ ? ದೇವ ಕ್ರಿಯೆ ಮೀರಿದ ಸಂಬಂಧವ ಕೂಡಲಚನ್ನಸಂಗಯ್ಯ ಆನೆಂಬುದಿಲ್ಲದುದನೇನೆಂದುಪಮಿಸುವೆ ?

೬೧೮

(೧೦) ಲಿಂಗಸ್ಥಲ ಲಿಂಗಸ್ಥಲದಲ್ಲಿಯೇ ನಿಂದುದು. ಜಂಗಮಸ್ಥಲ ಜಂಗಮ ಸ್ಥಲದಲ್ಲಿಯೇ ನಿಂದುದು, ಪ್ರಸಾದಿಸ್ಥಲ ಪ್ರಸಾದಿಸ್ಥಲದಲ್ಲಿಯೇ ನಿಂದುದು. ಇಂತೀ ತ್ರಿವಿಧ ಸ್ಥಲವು ತ್ರಿವಿಧದಲ್ಲಿಯೇ ನಿಂದುದು ಕೂಡಲಚನ್ನಸಂಗಾ ನಿಮ್ಮ ಶರಣಂಗೆ.

ಇಂತು ಧರ್ಮಾಚಾರ, ಭಾವಾಚಾರ, ಜ್ಞಾನಾಚಾರವೆಂಬ ತ್ರಿವಿಧ ಸ್ಥಲವು ಏಕವಾದ ಲಿಂಗವು ಅವಿರಳ ಲಿಂಗಸಂಗ ಸುಖಿಯಾದ ಲಿಂಗಪ್ರಸಾದಿಯ ಕಾಯದಲ್ಲಿ ಅವಗ್ರಾಹಕವಾದ ಭೇದವೆಂತಿರ್ದುದೆಂದಡೆ, ಮುಂದೆ ಕಾಯಾನುಗ್ರಹ ಸ್ಥಲವಾದುದು.

೧–೧ ಶಲಾ (ಮೂ) ೨–೨ ಆಂ (ಮೂ) ೩–೩ ವ (ಮೂ)
೪ + ಬೇಡ (ಮೂ)

ಶಿವಲಿಂಗಸ್ಥಲ

ವಿವರಣೆ : ೫೭ ಲಿಂಗಸ್ಥಲಗಳಲ್ಲಿ ಮೊದಲನೆಯ ಎರಡು ಸ್ಥಲಗಳಾದ ಆಚಾರ ಲಿಂಗ ಮತ್ತು ಗುರುಲಿಂಗ ಇವುಗಳಲ್ಲಿ ಪ್ರಗತಿಯು ಹೇಗೆ ಉಂಟಾಗುವದೆಂಬುದು ಹಿಂದೆ ವಿವರಿಸಲ್ಪಟ್ಟಿತು. ಇವುಗಳು ಕ್ರಿಯಾಪ್ರಧಾನವಾದ ಸ್ಥೂಲತನುವಿಗೆ ಸಂಬಂಧ ಪಟ್ಟವುಗಳಿರುತ್ತವೆ. ಈ ಕ್ರಿಯೆಗಳ ವೈಶಿಷ್ಟ್ಯಗಳು ಈ ಸ್ಥಲಗಳಲ್ಲಿ ಹೇಳಲ್ಪಟ್ಟಿರುತ್ತವೆ.

ಈ ಕ್ರಿಯೆಗಳನ್ನು ಮಾಡುತ್ತ ಹೋದ ಹಾಗೆ ಸೂಕ್ಷ್ಮತನುವಿನಲ್ಲಿಯೂ ಲಿಂಗದ ಹೆಚ್ಚುವಿಕೆಯು ಉಂಟಾಗುತ್ತ ಹೋಗುತ್ತದೆ. ಈ ತನುವಿಗೆ ಸಂಬಂಧಿಸಿದ ಲಿಂಗವು ಪ್ರಾಣಲಿಂಗವಿರುತ್ತದೆ. ಈ ಲಿಂಗದಲ್ಲಿ ಶಿವಲಿಂಗ ಮತ್ತು ಜಂಗಮಲಿಂಗ ಎಂಬ ಎರಡು ಮುಖ್ಯ ವಿಭೇದಗಳಿವೆ. ಇವುಗಳಲ್ಲಿ ಮೊದಲು ಶಿವಲಿಂಗದ ಜಾಗ್ರತೆಯುಂಟಾಗಿ ಆ ಮೇಲೆ ಜಂಗಮಲಿಂಗದಲ್ಲಿ ಅದು ಮತ್ತಿಷ್ಟು ಬಲಪಡುತ್ತದೆ. ಈ ಎರಡು ಲಿಂಗಸ್ಥಲಗಳ ಆಚರಣೆಗಳನ್ನು ವಚನಕಾರರು ಮುಂದೆ ಹೇಳಿದ್ದು ಅವುಗಳನ್ನು ಅನುಸರಿಸಿದಲ್ಲಿ ಸೂಕ್ಷ್ಮ ಶರೀರದ [೧][ಲಿಂಗದ][೧] ಗುಣಗಳು ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಈ ಸೂಕ್ಷ್ಮ ಶರೀರದೊಡನೆ ಸ್ಥೂಲ ಶರೀರವೂ ಕೂಡ ಹೆಚ್ಚೆಚ್ಚು ವೃದ್ಧಿಯನ್ನು ಹೊಂದುತ್ತ ಹೋಗುವದೆಂಬುದನ್ನೂ ನಾವು ಲಕ್ಷಿಸಬೇಕು.

ಸೂಕ್ಷ್ಮಶರೀರದ [೧][ಲಿಂಗದ][೧] ಬೆಳವಣಿಗೆಯು ಅರ್ಪಣದ ಮೇಲೆ ಅವಲಂಬಿಸಿರುತ್ತದೆ. ಅಂದರೆ ಮನುಷ್ಯನು ತನ್ನದನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ಪ್ರಸಾದಭೋಗಿಯಾಗಬೇಕು. ಈ ರೀತಿಯ ವರ್ತನೆಯಿಂದ ಪ್ರಾಣಲಿಂಗವು ಮನುಷ್ಯನ ಅಂತರಂಗ ಮತ್ತು ಬಹಿರಂಗವನ್ನು ವ್ಯಾಪಿಸುವದು. ಈ ಆಚರಣೆಗಳು ಶಿವಲಿಂಗಸ್ಥಲ ಮತ್ತು ಜಂಗಮಲಿಂಗಸ್ಥಲ ಇವುಗಳಲ್ಲಿ ಹೇಳಲ್ಪಡುತ್ತವೆ.

ಶಿವಲಿಂಗಸ್ಥಲ

ಶಿವಲಿಂಗ ಸ್ಥಲದಲ್ಲಿ ಅನುಗ್ರಹಲಿಂಗ, ಅರ್ಪಿತಲಿಂಗ ಮತ್ತು ತನುಗುಣಲಿಂಗ ಎಂಬ ಮೂರು ಮುಖ್ಯ ವಿಭಾಗಗಳಿರುತ್ತವೆ.

ಅನುಗ್ರಹಲಿಂಗ : ಇದರಲ್ಲಿ ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂಬ ಮೂರು ವಿಭಾಗಗಳಿವೆ. ಕಾಯವನ್ನು ಲಿಂಗಕ್ಕೆ ಅರ್ಪಿಸಿದಲ್ಲಿ ಕಾಯಾನುಗ್ರಹವೆನಿಸುತ್ತದೆ. ಇಂದ್ರಿಯಗಳನ್ನು ಅರ್ಪಿಸಿದಲ್ಲಿ ಇಂದ್ರಿಯಾನುಗ್ರಹವು. ಪ್ರಾಣಕ್ಕೆ ಸಂಬಂಧಿಸಿದರೆ ಪ್ರಾಣಾನುಗ್ರಹವು.

ಕಾಯದಲ್ಲಿ ಲಿಂಗವು ವೇಧಿಸಿದರೆ, ಅಂಗವಿಕಾರಗಳೂ ದೂರಾಗುವವು. ಇಂದ್ರಿಯಗಳಲ್ಲಿ ವೇಧಿಸಿದರೆ, ಅವೆಲ್ಲವು ಲಿಂಗಚೈತನ್ಯವನ್ನು ಹೊಂದಿ ಲಿಂಗಮಯ

೧–೧ ಲೈಂಗಿಕ (ಮೂ)

ವಾಗುವವು. ಪ್ರಾಣದಲ್ಲಿ ವೇಧಿಸಿದರೆ ಬಾಹ್ಯಾಭ್ಯಂತರವೆಲ್ಲ ಲಿಂಗದಲ್ಲಿ ಸಾಮರಸ್ಯವನ್ನು ಹೊಂದುವವು.

ಅರ್ಪಿತಲಿಂಗ : ಈ ಪ್ರಕಾರ ಲಿಂಗಾನುಗ್ರಹವನ್ನು ಹೊಂದಿದವರಿಗೆ ಕಾಯಾರ್ಪಿತ, ಕರಣಾರ್ಪಿತ ಮತ್ತು ಭಾವಾರ್ಪಿತಗಳಾಗುವವು. ಈ ಅರ್ಪಿತ ಲಿಂಗಗಳು ಹಿಂದೆ ಹೇಳಿದ ಅನುಗ್ರಹಲಿಂಗಗಳಿಗೆ ಅನುಸಾರವಾಗಿಯೇ ಪ್ರಕಟವಾಗುತ್ತವೆ. ಕಾಯದಲ್ಲಿ ಅರ್ಪಿತವಾದುದು ಕಾಯಾರ್ಪಿತವೆನಿಸುವದು. ಅಂತರ್ಮುಖದಲ್ಲಿ ಸಮರ್ಪಿತವಾದುದು ಕರಣಾರ್ಪಿತವು. ಭಾವದಲ್ಲಿ ಅರ್ಪಿತವಾದುದು ಭಾವಾರ್ಪಿತವೆನಿಸುವದು. ಮೊದಲನೆಯದರಲ್ಲಿ ಕಾಯದ ನೆವದಿಂದ ಅರ್ಪಣವು. ಎರಡನೆಯದರಲ್ಲಿ ಕರಣಗಳ ಮೂಲಕ ಅರ್ಪಿತವು. ಭಾ[ವ]ದಲ್ಲಿ ಅರ್ಪಿತವಾದ ಬಳಿಕ ಇದ್ದೂ ಇಲ್ಲದಂತೆ ಇರುವ ಸ್ಥಿತಿಯು ಉಂಟಾಗುವದು.

ತನುಗುಣಲಿಂಗ : ಹೀಗೆ ಅರ್ಪಿತದ ರೀತಿಯನ್ನರಿತವನಲ್ಲಿ ಶಿಷ್ಯ, ಶುಶ್ರೂಷಾ, ಸೇವ್ಯ ಎಂಬ ಭಾವಗಳುಂಟಾಗುವವು. ಲಿಂಗವನ್ನಿಚ್ಛಿಸಿ ಮೊದಲು ಗುರುವಿನಲ್ಲಿ ಶಿಷ್ಯತ್ವವನ್ನು ಅಂಗೀಕರಿಸಬೇಕು. ಮುಂದೆ ಅವನ ಶುಶ್ರೂಷೆಯಲ್ಲಿದ್ದು ಲಿಂಗತತ್ವವನ್ನು ತನ್ನಲ್ಲಿ ದೃಢಪಡಿಸಿಕೊಳ್ಳಬೇಕು. ಮುಂದೆ ಹೀಗೆ ಶುಶ್ರೂಷೆ ಮಾಡುವ ಶಿಷ್ಯನೂ ಶುಶ್ರೂಷೆ ಮಾಡಿಸಿಕೊಳ್ಳುವ ಗುರುವೂ ಏಕರೂಪವಾಗುವರು. ಆಗ ಶಿಷ್ಯನು ಗುರುವಿನಲ್ಲಿ, ಗುರುವು ಶಿಷ್ಯನಲ್ಲಿ ಸಮರಸವಾಗುವರು. ಇದೇ ಸೇವ್ಯವು. ಆಗ ಶಿಷ್ಯನ ತನುಗುಣಗಳು ಲಿಂಗರೂಪಾಗುವವು.

ಈ ಒಂಬತ್ತು ಸ್ಥಲಗಳ ಮೂಲಕ ಶಿವಲಿಂಗವು ಭಕ್ತನಲ್ಲಿ ಎಡೆಗೊಳ್ಳುವದು. ಇವು ಶಿವಲಿಂಗದಲ್ಲಿಯ ಪ್ರಗತಿಯ ಮೆಟ್ಟಿಲುಗಳಾಗಿವೆ.

೧. ಕಾಯಾನುಗ್ರಹಸ್ಥಲ

೬೧೯

(೧) ಅರತುದಯ್ಯ ಅಂಗಗುಣ. ಬರತುದಯ್ಯ ಭಕ್ತಿರಸ. ಅವರಿಸಿತಯ್ಯ ಅಂಗ ಲಿಂಗವನು. ಏನೆಂದರಿಯೆನಯ್ಯ. ಲೋಕಲೌಕಿಕವನರಿಯೆನಯ್ಯ. ಲಿಂಗ ಭ್ರಾಂತನಾದೆನಯ್ಯ, ಕೂಡಲ ಚನ್ನಸಂಗಮದೇವಾ ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ.

ಟೀಕು : ಸಮ್ಯಜ್ಞಾನೋದಯದಿಂದ ದೇಹದ ಅಜ್ಞಾನವಳಿದು ಶಿವನಲ್ಲಿ ಅತಿರತಿಯಾದ ಭಕ್ತಿ ಒದಗಲು ಆ ಭಕ್ತಕಾಯ ಮಮಕಾಯವೆಂದು ಲಿಂಗವು ಆ ಭಕ್ತನ ಸರ್ವಾಂಗವನವಗ್ರಹಿಸಿ ಜೀವಭಾವವಳಿದು ಲೌಕಿಕಾಚಾರಧರ್ಮವನು ಮರೆದು ತಾನೆಲ್ಲ ಲಿಂಗವಾಗಿ ತನ್ನ ಕಾಣುತ್ತಿಪ್ಪ ಭ್ರಾಂತಿ ನೆಲೆಗೊಂಡು ಲಿಂಗವಾಗಿಪ್ಪನು

೧–೧ ವಾರ್ಪಿತ (ಮೂ)

ಸದ್ಭಕ್ತನು. ಇಂತಪ್ಪ ಸದ್ಭಕ್ತನು ಶಿವನ ಕೃಪೆಯಿಂದ ಮಾಡಲಾಯಿತ್ತೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೬೦

(೨) ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣೆಂದೆತ್ತ[೧] ಸಂಬಂಧ ವಯ್ಯಾ? ಬೆಟ್ಟದ ನೆಲ್ಲಿಯ ಕಾಯಿಯು ಸಾಗರದೊಳಗಣ ಲವಣವು ಎತ್ತಣೆಂದೆತ್ತ ಸಂಬಂಧವಯ್ಯಾ ? ಗುಹೇಶ್ವರಲಿಂಗಕ್ಕೆಯೂ ಎನಗೆಯೂ ಎತ್ತಣೆಂದೆತ್ತ ಸಂಬಂಧವಯ್ಯಾ ?

೬೧

(೩) ಮರುಳ ಮದ್ದುಗುಣಿಕೆಯ ಕಾಯ ತಿಂದು, ಮರುಳೇನರಿತ ಹೇಳ ಲುಂಟೆ ? ಶಿವಶಿವಾ, ಲಿಂಗ ತನ್ನನವಗ್ರಹಿಸಿದ ಬಳಿಕ ಅಂಗವಿಕಾರವೆಂಬುದನರಿ ಯರು, ಸಿದ್ಧಸೋಮನಾಥನೆಂಬ ಭಂಗವನಳಿದು ಸಂಗ ಉಳಿದ ಬಳಿಕ.

೬೨

(೪) ಲೋಕದ ನಚ್ಚು ಮಚ್ಚು ನಿಶ್ಚಿಂತವಾಯಿತ್ತು. ಇದೇನು ಹತ್ತಿತೆಂದರಿ ಯೆನಯ್ಯ ! ನಾನಿದೇನು ಹೊದ್ದಿತೆಂದರಿಯೆನಯ್ಯ ! ಗುಹೇಶ್ವರನೆಂಬ ಗ್ರಹ ಒಳಕೊಂಡಿತ್ತಾಗಿ ನಾನೇನೆಂದರಿಯೆನಯ್ಯಾ !

ಇಂತು ಕಾಯದಲ್ಲಿ ಸಂಬಂಧವಾಗಿ ಅನುಗ್ರಹಸ್ವರೂಪವನೈದಿದ ಲಿಂಗವು ಪ್ರಸಾದಿಯ ಸರ್ವೇಂದ್ರಿಯ ಮುಖದಲ್ಲಿ ಸಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಇಂದ್ರಿಯಾನುಗ್ರಹ ಸ್ಥಲವಾದುದು.

೨. ಇಂದ್ರಿಯಾನುಗ್ರಹ

೬೩

(೧) ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು. ಸತ್ವ, ರಜ, ತಮಂಗಳು ನಿಮ್ಮ ಭೃತ್ಯರಯ್ಯ. ಅಂತಃಕರಣಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯ. ಪಂಚೇಂದ್ರಿ ಯಗಳು ನಿಮ್ಮ ಪಡಿಹಾರರಯ್ಯ. ಅರಿಷಡ್ವರ್ಗಂಗಳು ನಿಮ್ಮ ತೊತ್ತಂದಿರಯ್ಯ. ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯ. ಅಷ್ಟಮದಂಗಳು ನಿಮ್ಮ ದಳವಾಯಿ ಗಳಯ್ಯ. ನವರಸಂಗಳು ನಿಮ್ಮ ಭಾಂಡಾರಿಗಳಯ್ಯ. ದಶವಾಯುಗಳು ನಿಮ್ಮ ಛತ್ರಚಾಮರ ಸೀಗುರಿಗಳು. ಶಂಭುಸೋಮನಾಥಲಿಂಗ ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯ.

ಟೀಕು : ಲಿಂಗಾಂಗಸಂಬಂಧಿಯಾಗಿಪ್ಪ ಸದ್ಭಕ್ತನ ಅಂಗ ಪ್ರಾಣ ಮನ ಇಂದ್ರಿಯಂಗಳೆಲ್ಲ ಲಿಂಗದ ಸೇವೋಪಚಾರವೆಂಬುದೀ ವಚನದ ತಾತ್ಪರ್ಯಾರ್ಥ.

೧ + ಣ (ಮೂ)

೬೪

(೧) ಪ್ರಥಮ ಗುರು ಕಾಣಲಿಕ್ಕಾಗಿ ಕರ್ಮಂಗಳು ಬೆಚ್ಚಿ ಬೆದರಿದವು. ಸದ್ಗುರು ಕಾರುಣ್ಯ ಹಸ್ತಮಸ್ತಕಸಂಯೋಗವಾದಲ್ಲಿ ಪೂರ್ವ ಗುಣವಳಿದು ಪುನರ್ಜಾತನಾಗಿ, ಕರಣಾದಿ ಗುಣಂಗಳಳಿದು ಶಿವಲಿಂಗದಲ್ಲಿ ಉಳಿದು, ಅನುಪಮ ಸುಖ ಸಾರಾಯ ಶರಣನೆನಿಸಿ ಇದನರಿದು ಲಿಂಗದಲ್ಲಿರ್ದೆನು. ಅರಿದು ಜಗದಲ್ಲಿ ಕಾರುಣ್ಯವ ಪಡೆದು ಭವಿಯನೊಲ್ಲೆನೆಂದು ಬೇರೆ ನಿಂದ ಕಾರಣ ಕೂಡಲ ಚನ್ನಸಂಗಯ್ಯ, ನಿಮ್ಮ ಶರಣ ಭವಕಲ್ಪಿತವ ಕಳೆದ.

೬೫

(೩) ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚಭೂತಂಗಳಲ್ಲಿ ಪಂಚಮುಖಲಿಂಗ ಪ್ರತಿಷ್ಠೆಯ ಮಾಡಿದನಯ್ಯಾ. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ದಶೇಂದ್ರಿಯಂಗಳಲ್ಲಿ ದಶಮುಖಲಿಂಗಪ್ರತಿಷ್ಠೆಯ ಮಾಡಿದನಯ್ಯಾ? ಅಂತರ್ಬಾಹ್ಯಭರಿತನಾಗಿ ಸರ್ವಾಂಗವ ಲಿಂಗವ ಮಾಡಿದ ಕೂಡಲಚನ್ನಸಂಗಾ ನಿಮ್ಮ ಶರಣ ಬಸವಣ್ಣನು.

೬೬

೪) ಗುರುಸಾಹಿತ್ಯರ ಕಾಣಬಹುದು. ಲಿಂಗಸಾಹಿತ್ಯರ ಕಾಣಬಹುದು. ಜಂಗಮಸಾಹಿತ್ಯರ ಕಾಣಬಹುದು. ಪ್ರಸಾದಸಾಹಿತ್ಯರ ಕಾಣಬಹುದು. ಕೂಡಲ ಚನ್ನಸಂಗಯ್ಯನಲ್ಲಿ ಇಂದ್ರಿಯಸಾಹಿತ್ಯ ಭಕ್ತ ಬಸವಣ್ಣಂಗಲ್ಲದೆ ಮತ್ತಾರಿಗೂ ಇಲ್ಲ.

೬೭

೫) ಶಬ್ದ, ಸ್ಪರ್ಶ, ರೂಪು, ರಸ, ಗಂಧ, ಪಂಚೇಂದ್ರಿಯಂಗಳೆಲ್ಲ ವಿಕಾಕಿ ಗಳಾಗಿರ್ದವು. ತಮ್ಮೊಳಗೆ ತಾವು ಹರಿಯದೆ ವಿಕಾಕಿಗಳಾಗಿರ್ದವು. ಸಕಳೇಶ್ವರ ದೇವರಲ್ಲಿ ಪರಿಣಾಮಪ್ರಸಾದದ ಪದವಿಯ ಪಡೆದೆನಾಗಿ ಎನ್ನೊಡನೆ ಹುಟ್ಟಿ ನೀವೆಲ್ಲ ಸುಖಿಗಳಾದಿರಯ್ಯ.

ಇಂತು ಸರ್ವೇಂದ್ರಿಯದಲ್ಲಿ ಸಂಗವಾದ ಲಿಂಗವು ಪ್ರಸಾದಿಯ ಪ್ರಾಣಸ್ಥಲದಲ್ಲಿ ಸಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಪ್ರಾಣಾನುಗ್ರಹ ಸ್ಥಲವಾದುದು.

೩ ಪ್ರಾಣಾನುಗ್ರಹಸ್ಥಲ

೬೮

(೧) ೧[ಆಚಾರವುಲಿಂಗಾಚಾರವಾಯಿತ್ತು]೧ ಸೀಮೆ ನಿಸ್ಸೀಮೆಯಾಯಿತ್ತು ಪ್ರಾಣ ಸಂಚಲ ತಪ್ಪಿ, ಅಂಗಸಂಚಲವಾಯಿತ್ತು ಎಲ್ಲಿ ಶಬ್ದವಲ್ಲಿ ಲಿಂಗಸ್ವಾಯತ

೧–೧ ಆಚಾರವನಾಚಾರವಾಯಿತ್ತು (ಮೂ)

ವಾಯಿತ್ತು; ಎಲ್ಲಿ ಸೋಂಕಲ್ಲಿಯೇ ಲಿಂಗಸ್ವಾಯತವಾಯಿತು. ಎಲ್ಲಿ ರೂಪವಲ್ಲಿಯೇ ಲಿಂಗ ಸ್ವಾಯತವಾಯಿತ್ತು, ಎಲ್ಲಿ ರುಚಿ ಅಲ್ಲಿಯೇ ಲಿಂಗಸ್ವಾಯತ್ತವಾಯಿತ್ತು; ಎಲ್ಲಿ ಗಂಧದಲ್ಲಿಯೇ ಲಿಂಗ ಸ್ವಾಯತವಾಯಿತ್ತು. ಕೂಡಲ ಚನ್ನಸಂಗಮದೇವರ ಕರುಣ ಕಡೆಗೋಡಿವರಿಯಿತ್ತಯ್ಯಾ ಎನ್ನ ಮೇಲೆ.

ಟೀಕು : ಆಚಾರದ ಸೀಮೆ ಸಂಬಂಧವೆಲ್ಲವೂ ಅಳಿದು ಲಿಂಗಾಚಾರವಳವಟ್ಟು ಅಂಗ ಪ್ರಾಣ ಇಂದ್ರಿಯಂಗಳೆಲ್ಲ ಲಿಂಗವೆಯಾದ ಕಾರಣ, ಕೇಳಿದ ಶಬ್ದ ,ಮುಟ್ಟಿದ ಸ್ಪರ್ಶನ, ನೋಡಿದ ರೂಪು, ಸವಿದ ರುಚಿ, ವಾಸಿಸಿದ ಗಂಧ, ಮೊದಲೆಲ್ಲ ಲಿಂಗವೆಯಾದ ಕಾರಣ, ಗುರುಕೃಪೆಯಾದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೬೨೯

(೨) ಹೊರಗನೇ ಹಾರೈಸಿ, ಹೊರಗಣ ಸದಾಚಾರ ಕ್ರೀಗಳ ಮನ ಮುಟ್ಟಿ ಮಾಡುತ್ತಿರಲು, ಇದೆಲ್ಲಿಯ ಹೊರಗಣ ಸುಖವೆಂದು ವಿಚಾರ ಕಣ್ದೆರೆದು ನೋಡಲು, ಕನ್ನಡಿಯೊಳಗಣ ರೂಪು ತಾನೆಂದರಿವಂತೆ ಮೆಲ್ಲನೆ ಒಳಗಡಗಿತ್ತಯ್ಯ. ಲಿಂಗಸುಖದ ಸುಗ್ಗಿಯೊಳಗೆ ಎನ್ನ ಪ್ರಾಣ ಮನ ಕರಣಂಗಳು ಮೇರೆದಪ್ಪಿ ಸಮುದ್ರದೊಳಗೆ ಅದ್ದಿದಂತೆ ಆದೆನಯ್ಯ. ಮುಳುಗಿದೆನಯ್ಯ ಸ್ವಾನುಭಾವವೆಂಬ ಗುರುವಿನ ಕರುಣದಲ್ಲಿ. ಇಂತಾದ ಬಳಿಕ ಕೂಡಲಚನ್ನಸಂಗಯ್ಯನೇ ಪ್ರಾಣವಾಗಿರ್ದೆನಯ್ಯ.

ಇಂತು ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹವೆಂಬ ತ್ರಿವಿಧ ಸ್ಥಲವೇಕವಾದ ಲಿಂಗವು ಅವಿರಳ ಲಿಂಗಸಂಗ ಸುಖಿಯಾದ ಲಿಂಗ ಪ್ರಸಾದಿಯ ಕಾಯದಲ್ಲಿ ಅರ್ಪಿತ ಲಿಂಗಮುಖವಾದ ಭೇದವೆಂತಿರ್ದುದೆಂದೊಡೆ ಮುಂದೆ ಕಾಯಾರ್ಪಿತಸ್ಥಲವಾದುದು.

೪. ಕಾಯಾರ್ಪಿತಸ್ಥಲ

೬೩೦

(೧) ಕಾಯವೇ ಲಿಂಗಾರ್ಪಿತ. ಅರ್ಪಿತವೇ ಪ್ರಸಾದ. ಅದೇ ಮತ್ತೆ ಮತ್ತೆ ಅರ್ಪಿತ ದರ್ಶನದಿಂದಲಾಯಿತ್ತು ಸ್ಪರ್ಶನದಿಂದಲಾಯಿತ್ತು. ಅರ್ಪಿಸಿದ ಸೋಂಕಿನ ಸುಖವ ಅರ್ಪಿಸಲರಿಯದಿರ್ದಡೆ, ಅದು ಭ್ರಾಂತಿ, ಕೂಡಲಚನ್ನಸಂಗನ ಪ್ರಸಾದವನತಿಗಳೆದಡೆ ಮುಂದೆ ಅದಕಿನ್ನೆಂತೋ ?

ಟೀಕು : ಅಂಗಲಿಂಗಸಂಬಂಧವಾದ ಬಳಿಕ, ಅಂಗ ಮನೇಂದ್ರಿಯಂಗಳೆಲ್ಲ ಲಿಂಗಾರ್ಪಿತವಾದ ಕಾರಣ ಪ್ರಸಾದ ಕಾಯವಾಯಿತ್ತು. ಅಂತಪ್ಪ ಪ್ರಸಾದಕಾಯ ಸೋಂಕಿದ, ಮುಟ್ಟಿದ ಪದಾರ್ಥಂಗಳೆಲ್ಲ ಪ್ರಸಾದವಾಯಿತ್ತು. ಅಂತಾದ ಪ್ರಸಾದವನೆ ಇಷ್ಟಲಿಂಗಕ್ಕರ್ಪಿಸಬೇಕು. ಆ ಇಷ್ಟಲಿಂಗಪ್ರಸಾದವನೇ ಪ್ರಾಣ ಲಿಂಗಕ್ಕರ್ಪಿಸಬೇಕು. ಆ ಪ್ರಾಣಲಿಂಗಪ್ರಸಾದವನೆ ಭಾವಲಿಂಗಕ್ಕರ್ಪಿಸಬೇಕು.

೧+ ಯಲ್ಲಿ (ಮೂ)

ಇಂತು ಅರ್ಪಿಸಿದುದ ಅರ್ಪಿಸುವ ಮರ್ಮವನರಿಯದಿರ್ದೊಡೆ, ಜೀವಭಾವ ಹಿಂಗದು. ಅದು ಕಾರಣ ಶಿವಪ್ರಸಾದಿಗಳು ಪ್ರಸಾದಲಿಂಗಕ್ಕೆ ಸಲ್ಲರೆಂಬವರುಗಳ ಪಾತಕಕ್ಕೆ ಎಣೆ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೬೩೧

(೨) ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ ? ಪಾರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ ? ಕೂಡಲ ಸಂಗನ ಶರಣರು ಕಾಯದ ನೆವದಿಂದ ಅರ್ಪಿಸುವ ಬೆಡಗ ನಾನೇನೆಂಬೆನಯ್ಯಾ ?

೬೩೨

(೩) ಅಂಗ ಅನಂಗವೆಂಬೆರಡರ ಸಂದಳಿದ ಮಹಂತನ ಅಂಗ ಸೋಂಕಿತ್ತೆಲ್ಲ ಪವಿತ್ರ ಕಾಣಿರೇ. ಪವಿತ್ರವಿದ್ದಲ್ಲಿ ಪದಾರ್ಥವಿಹುದು. ಪದಾರ್ಥವಿದ್ದಲ್ಲಿ ಮನವಿಹುದು. ಮನವಿದ್ದಲ್ಲಿ ಹಸ್ತವಿಹುದು. ಹಸ್ತವಿದ್ದಲ್ಲಿ ಜಿಹ್ವೆ ಇಹುದು. ಜಿಹ್ವೆ ಇದ್ದಲ್ಲಿ ರುಚಿ ಇಹುದು. ರುಚಿ ಇದ್ದಲ್ಲಿ ಅವಧಾನವಿಹುದು. ಅವಧಾನವಿದ್ದಲ್ಲಿ ಭಾವವಿಹುದು. ಭಾವವಿದ್ದಲ್ಲಿ ಲಿಂಗವಿಹುದು. ಲಿಂಗವಿದ್ದಲ್ಲಿ ಅರ್ಪಿತವಿಹುದು. ಅರ್ಪಿತವಿದ್ದಲ್ಲಿ ಪ್ರಸಾದವಿಹುದು. ಪ್ರಸಾದವಿದ್ದಲ್ಲಿ ಪರಿಣಾಮವಿಹುದು. ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನಾಥ, ನಿಮ್ಮ ಶರಣರು ಪ್ರಾಣಲಿಂಗ ಪ್ರವೇಶಿಗಳಾಗಿ ಪರಿಣಾಮಪ್ರಸಾದಿಗಳಯ್ಯ.

೬೩೩

(೪) ಕಾಯವಿರೋಧಿ ಸ್ಪರುಶನ, ಭಾವವಿರೋಧಿ ದರುಶನ, ರುಚಿ ವಿರೋಧಿ ಪ್ರಸಾದಿ. ಕೂಡಲಚನ್ನಸಂಗಾ, ನಿಮ್ಮ ಶರಣನ ಕಾಯವೇ ಲಿಂಗಕ್ಕೋಗರವಾಯಿತ್ತು.*

ಇಂತು ಕಾಯದಲ್ಲಿ ಅರ್ಪಿತಮುಖವನೈದಿದ ಲಿಂಗವು ಪ್ರಸಾದಿಯ ಅಂತರ್ಮುಖದಲ್ಲಿ ಸಮರ್ಪಿತಮುಖವಾದ ಭೇದವೆಂತಿರ್ದುದೆಂದಡೆ, ಮುಂದೆ ಕರಣಾರ್ಪಿತ ಸ್ಥಲವಾದುದು.

೫. ಕರಣಾರ್ಪಿತಸ್ಥಲ

೬೩೪

(೧) ನೀರಿಲ್ಲದ ನೆಳಲಿಲ್ಲದ ಬೇರಿಲ್ಲದ ಗಿಡ ಹುಟ್ಟಿ, ತಲೆ ಇಲ್ಲದ ಮೃಗ ಬಂದು ಮೇಯಿತ್ತಾ ಗಿಡವನು. ಕಣ್ಣಿಲ್ಲದ ವ್ಯಾಧನು ಕಂಡನಾ ಮೃಗವ. ಕೈಯಿಲ್ಲದ ವ್ಯಾಧನು ಎಚ್ಚನಾ ಮೃಗವನು. ಕಿಚ್ಚಿಲ್ಲದ ನಾಡಿಗೊಯ್ದು ಸುಟ್ಟು ಬಾಣಸವ ಮಾಡೆ ಲಿಂಗಾರ್ಪಿತವಾಯಿತ್ತು ಗುಹೇಶ್ವರಾ.

* ಇದರ ಮುಂದಿನ ವಚನ 'ಲಿಂಗಗಂಭೀರ ನಿಸ್ಸಂಗಿಯ' ಎಂಬುದು ಇದೇ ಭಾಗದಲ್ಲಿ ಪುನರುಕ್ತವಾಗಿರುವುದರಿಂದ ತೆಗೆದುಹಾಕಲಾಗಿದೆ (ಸಂ).

ಟೀಕು : ನೀರೇ ಮನಸ್ಸು, ನೆಳಲೆಂದರೆ ಮಾಯೆ, ಬೇರೆಂದರೆ ಮೂಲಾಹಂಕಾರ, ಇಂತು ಮನಪ್ರಕೃತಿ ಮಾಯಾಪ್ರಕೃತಿ ಮೂಲಾಹಂಕಾರ ಪ್ರಕೃತಿಗಳೆಂಬ ಈ ತ್ರಯವು ಅಳಿದುಳಿದ ಶಿವಯೋಗಿಯಲ್ಲಿ ವಿವೇಕವೆಂಬ ವೃಕ್ಷ ಉದಯವಾಗಲು ಅದೀಗ, ನೀರಿಲ್ಲದ ನೆಳಲಿಲ್ಲದ ಬೇರಿಲ್ಲದ ಗಿಡ ಹುಟ್ಟಿ ಎಂಬ ಶಬ್ದಕ್ಕರ್ಥ. ಆ ವಿವೇಕವೆಂಬ ವೃಕ್ಷವನು ತಲೆ ಎಂಬ ಜ್ಞಾನವಿಲ್ಲದ ಮಾಯಾಮೃಗವು ಅವಿಚಾರ ರೂಪಿಂ ಬಂದು ತಾನಾ ಸುಖವನು ಸೇವಿಸುತ್ತಿದ್ದಿತ್ತು, ಅದೆಂತೆಂದೊಡೆ : ವಿಚಾರ ವಳವಡದ ಘನವ ವಿಚಾರಿಸುವದೇ ಮಾಯೆಯಾದ ಕಾರಣ ಅದೀಗ, ತಲೆ ಇಲ್ಲದ ಮೃಗ ಬಂದು ಮೇಯಿತ್ತು ಆ ಗಿಡವನು ಎಂಬ ಶಬ್ದಕ್ಕರ್ಥ. ಆ ಮಾಯೆಯನು ಶರಣನು ಭಿನ್ನದೃಷ್ಟಿ ಇಲ್ಲದೆ ನೋಡಿ ಕಂಡು ಭಿನ್ನಹಸ್ತವಳಿದು ಅಭಿನ್ನಹಸ್ತದಲ್ಲಿ ಭಾವವೆಂಬ ಬಿಲ್ಲ ತುಂಬಿ ತೆಗೆದು ಜ್ಞಾನವೆಂಬ ಬಾಣವ ಹೂಡಿ ಎಸೆದು ಕೆಡಹಲು ಆ ಮಾಯೆ ಅಳಿದು ವಿದ್ಯಾಶಕ್ತಿಯಾಯಿತ್ತೆಂಬುದೀಗ, ಕಣ್ಣಿಲ್ಲದ ಕುರುಡನು ಕಂಡನಾ ಮೃಗವನು ಕೈ ಇಲ್ಲದ ವ್ಯಾಧನು ಎಚ್ಚನಾ ಮೃಗವನೆಂಬ ಶಬ್ದಕರ್ಥ. ಅಸದ್ವಿದ್ಯಾ ;ಸುಖವನು ಅವಿದ್ಯಾಗ್ನಿ ಅರತ ಮಹಾಜ್ಞಾನಾಗ್ನಿಯಲ್ಲಿ ಸಮರಸ ಪಾಕವ ಮಾಡಿ ಮಹಾಲಿಂಗಮುಖಕ್ಕೆ ನಿವೇದಿಸುತ್ತಿರಲು ಅದೀಗ ಕಿಚ್ಚಿಲ್ಲದ ನಾಡಿಗೆ ಹೋಗಿ ಸುಟ್ಟು ಬಾಣಸವ ಮಾಡೆ ಲಿಂಗಾರ್ಪಿತವೆಂದ ನಮ್ಮ ಗುಹೇಶ್ವರನೆಂಬ ಶಬ್ದಕ್ಕರ್ಥ.

೬೩೫

(೨) ಶ್ರೀಮದ್ಭಾವದಿಂದಾದ ಶೇಷವ ಕ್ರಿಯಕ್ಕರ್ಪಿಸುವೆ. ಕ್ರಿಯದಿಂದಾದ ಶೇಷವ ನಿಷ್ಕ್ರಿಯಕ್ಕರ್ಪಿಸುವೆ. ಜಂಗಮದಿಂದಾದ ಶೇಷವ ಪ್ರಸಾದಕ್ಕರ್ಪಿಸುವೆ. ಪ್ರಸಾದದಿಂದಾದ ಶೇಷವ ಲಿಂಗಕ್ಕರ್ಪಿಸುವೆ. ಲಿಂಗದಿಂದಾದ ಜ್ಞಾನ, ಆ ಜ್ಞಾನದಿಂದ ತೃಪ್ತನಾದೆನು ಕಾಣಾ ಕಲಿದೇವರದೇವಯ್ಯಾ.

೬೩೬

(೩) ಶಿವಾಚಾರವೇ ಲಿಂಗ, ಶಿವಭಕ್ತಿಯೇ ಅಂಗ, ಶಿವಶರಣರ ನಿಷ್ಠೆಯೇ ಅಂಗ, ಲಿಂಗ ಸಂಗವೆಂದು ಹಿಂಗದಿಹುದೇ ಸತ್ಸಂಗ ? ಆವ ಪದಾರ್ಥವಾದಡೇನು ? ತನ್ನ ನೇಮಿಸಿ ಬಂದುದು ಸಕಲೇಂದ್ರಿಯಂಗಳ ಹೊದ್ದಲೀಯದೆ ಭಾವಮುಖದಲ್ಲಿ ಸಂದಿಸಿ ಕೂಡಲಚನ್ನಸಂಗಯ್ಯಂಗರ್ಪಿಸಿಕೊಳಬಲ್ಲಡೆ ಅದೇ ಅಂಗಲಿಂಗಸಂಯೋಗ.

೬೩೭

(೪) ಶಬ್ದ ಸ್ಪರ್ಶ, ರೂಪು, ರಸ, ಗಂಧ ಪಂಚೇಂದ್ರಿಯಂಗಳು ಮೊದಲಾಗಿ ನಡೆವವು ಲಿಂಗದತ್ತತ್ತಲೆ, ತಮತಮಗೆ ಬಂದ ಭೋಗಸುಖ ಲಿಂಗಾರ್ಪಿತವೆಂದು ನಡೆವವು ಲಿಂಗದತ್ತತ್ತಲೆ, ಕೂಡಲಚನ್ನಸಂಗಯ್ಯ ಲಿಂಗ ನೀವಾದ ಶರಣಂಗೆ.

೬೩೮

(೫) ಆಯತ, ಸ್ವಾಯತ, ಸನ್ನಿಹಿತ, ಅನಾಯತಂಗಳು ಮುಟ್ಟಲಮ್ಮವು

ನೋಡಾ ! ಕಂಗಳ ಕೈಗಳಲ್ಲಿ ಅರ್ಪಿಸುವ, ಶ್ರೋತ್ರದ ಕೈಗಳಲ್ಲಿ ಅರ್ಪಿಸುವ, ನಾಸಿಕದ ಕೈಗಳಲ್ಲಿ ಅರ್ಪಿಸುವ, ಜಿಹ್ವೆಯ ಕೈಗಳಲ್ಲಿ ಅರ್ಪಿಸುವ, ಮನದ ಕೈಗಳಲ್ಲಿ ಅರ್ಪಿಸುವ, ಕೈಗಳ ಕೈಗಳಲರ್ಪಿಸುವ. ಅಲ್ಲಲ್ಲಿಗೆ ತಾಗಿದ ಸುಖವಲ್ಲಲ್ಲಿಗೆ ಲಿಂಗಾರ್ಪಿತವ ಮಾಡಬಲ್ಲನಾಗಿ ಕೂಡಲಚನ್ನಸಂಗನಲ್ಲಿ ಆತ ಮಹಾಪ್ರಸಾದಿ.

೬೩೯

(೬) ಭಾವದಿಂದಾದ ಶೇಷವ ಕ್ರೀಗೆ ಅರ್ಪಿಸುವೆ. ಕ್ರೀಯಿಂದಾದ ಶೇಷವ ನಿಃಕ್ರೀಗರ್ಪಿಸುವೆ. ನಿಃಕ್ರೀಯಿಂದಾದ ಶೇಷವ ಜಂಗಮಕ್ಕರ್ಪಿಸುವೆ. ಜಂಗಮದಿಂದಾದ ಶೇಷವ ಲಿಂಗಕ್ಕರ್ಪಿಸುವೆ. ಲಿಂಗದಿಂದಾದ ಶೇಷವ ಪ್ರಸಾದಕ್ಕರ್ಪಿಸುವೆ. ಪ್ರಸಾದದಿಂದಾದ ಜ್ಞಾನ[ವಾದುದು ಆ]ಜ್ಞಾನದಿಂದಾ[ನು] ತೃಪ್ತಿಯಾದೆನು ಕಾಣಾ ಕಲಿದೇವಯ್ಯ.

ಇಂತು ಅಂತಃಕರಣದಲ್ಲಿ ಅರ್ಪಿತಮುಖವನೈದಿದ ಲಿಂಗವು ತಾನೇ ಪ್ರಸಾದಿಯ ಸರ್ವಾಂಗದಲ್ಲಿ ತಾನೇ ಸರ್ವಾರ್ಪಿತವಾಗಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಭಾವಾರ್ಪಿತಸ್ಥಲವಾದುದು.

೬. ಭಾವಾರ್ಪಿತಸ್ಥಲ

೬೪೦

(೧) ಘನವೆಂಬ ಮನದ ತಲೆಯಾಗಿ, ಅಲ್ಲಿ ಸದಾ ಸನ್ನಿಹಿತವಾಗಿ, ನೀನಿಪ್ಪೆ ಎಲೆ ಅಯ್ಯಾ. ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು ನೀನೇ ಅವಧರಿಸುತ್ತಿಪ್ಪೆಯಲ್ಲಾ ಎಲೆ ಅಯ್ಯ. ನಿಮ್ಮ ಮುಟ್ಟಬಹುದಲ್ಲದೆ ನಿಮ್ಮ ಮುಟ್ಟದೆ ಬಾರದೆಂಬುದಕ್ಕೆ ನೀವೇ ಸಾಕ್ಷಿಯಲ್ಲಾ ಕೂಡಲಚನ್ನಸಂಗಮದೇವಾ.

ಟೀಕು : ಅಖಂಡ ಪರಿಪೂರ್ಣ ಮಹಾಲಿಂಗವು ತನಗೆ ಅನ್ಯವೆಂದರಿಯದೆ ಭಿನ್ನ ಭಾವವಳಿದು ತನ್ನನೆಲ್ಲ ಮಹಾಘನಲಿಂಗವೆಯಾಗಿ ಕಾಣುತ್ತಿಪ್ಪ ಶರಣನ ಸರ್ವಾಂಗವೆಲ್ಲ ಲಿಂಗವು ತಾನೆಯಾಗಿಪ್ಪ ಕಾರಣ ಅಂಗ ಸುಖಭೋಗಂಗಳನೆಲ್ಲವ ಲಿಂಗವೇ ಅರಿದು ಅರ್ಪಿಸಿಕೊಂಬ ಭೇದವನರಿದು ಲಿಂಗಾರ್ಪಿತವಾಯಿತ್ತೆಂಬ ನಿಶ್ಚಯದಿಂದ ಸಂಶಯವನಳಿದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೬೪೧

(೨) ತನುವ ತಾಗದ ಮುನ್ನ, ಮನವ ತಾಗದ ಮುನ್ನ, ಆಪ್ಯಾಯನ ಬಂದು ಎಡೆಗೊಳ್ಳದ ಮುನ್ನ, ಅರ್ಪಿತವ ಮಾಡಬೇಕು. ಗುರುವಿನ ಕೈಯಲಿ ಎಳತಟವಾಗದ ಮುನ್ನ ಅರ್ಪಿತವ ಮಾಡಬೇಕು. ಎಡದ ಕೈಯಲ್ಲಿ ಕಿಚ್ಚು, ಬಲದ ಕೈಯಲ್ಲಿ ಹುಲ್ಲು, ಉರಿ ಹತ್ತಿತ್ತು ಗುಹೇಶ್ವರಾ ನಿಮ್ಮ ಪರಮ ಪ್ರಸಾದಿಯ.

೧–೧ ವ ಅ (ಮೂ) ೨–೨ ದ (ಮೂ)

೬೪೨

(೩) ಕಾಯದ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ, ಭಾವದ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ, ಶ್ರೋತ್ರದ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ, ಘ್ರಾಣದ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ. ಜಿಹ್ವೆಯ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ. ಸ್ಪರ್ಶನದ ಕೈಯಲು ಲಿಂಗಾರ್ಪಿತ. ಖಂಡಿತ ಭಾಷೆ. ಲಿಂಗ ಮಧ್ಯೆ ಶರಣ, ಶರಣ ಮಧ್ಯೆ ಲಿಂಗ. ಅಲ್ಲಲ್ಲಿ ತಾಗಿದ ಸುಖವನಲ್ಲಲ್ಲಿಯೇ ಲಿಂಗಾರ್ಪಿತ ಮಾಡಬಲ್ಲಡೆ ಕೂಡಲಚನ್ನಸಂಗನಲ್ಲಿ ಅವರು ಸಹಜರೆಂಬೆ.

೬೪೩

(೪) ಸ್ಥಲದಿಂದ ಸ್ಥಲವನರ್ಪಿಸುವುದು ಒಡಲಗುಣ. ನಿಃಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನಗುಣ. ನೋಡಿ ಆರೈವುದೇ ಅರ್ಪಿತ. ಗುಣಸ್ಥಲವೆನ್ನದೆ, ನಿಃಸ್ಥಲವೆನ್ನದೆ ನೋಡದೆ ಆರೈಯದೆ ಅರ್ಪಿಸುವುದು ನಿರ್ಗುಣ. ಇಂತಹ ಮಹಂತರ ಠಾವ ತೋರಿ ಬದುಕಿಸಯ್ಯ ಕೂಡಲಚನ್ನಸಂಗಮದೇವಾ.

೬೪೪

(೫) ಪಂಚೇಂದ್ರಿಯಂಗಳ ಮುಖಂಗಳಲ್ಲಿ ಅಲ್ಲಲ್ಲಿ ತಾಗಿದ ಸುಖವ ಸುಖಿಸಿ, ಲಿಂಗಾರ್ಪಿತವೆಂಬರು, ಇದು ಲಿಂಗಾರ್ಪಿತವೇ ? ಅಲ್ಲ. ಅರ್ಪಿತವ ಮಾಡದೆ, ಅನರ್ಪಿತವ ಹೊದ್ದದೆ, ಅರ್ಪಿಸಬೇಕು. ಅರ್ಪಿಸುವ ಭಾವವುಳ್ಳನ್ನಕ್ಕ ಶರಣನೆನಿಸ ಬಾರದು ಕೂಡಲಚನ್ನಸಂಗಯ್ಯ.

೬೪೫

(೬) ಲಿಂಗಾರ್ಪಿತವ ಮಾಡಿದ ಪ್ರಸಾದವನ್ನಲ್ಲದೆ ಭೋಗಿಸೆನೆಂಬ ಪ್ರಸಾದಿಗಳಿನ್ನೆಂತಯ್ಯ ? ಅನರ್ಪಿತ ಭೋಗವೇ ಸಂಭವಿಸಿ, ದೋಷವೇ ಪ್ರಾಪ್ತವಾದ ಪರಿಯ ನೋಡಾ ! ಅದೆಂತೆಂದೊಡೆ, ಅನರ್ಪಿತ[ವ] ನೇತ್ರದಲ್ಲಿ ನೋಡಬಹುದು. ಅದೆಂತೋ ? ಅನರ್ಪಿತವ ಮನದಲ್ಲಿ ನೆನೆಯಬಹುದು ಅಂದೆಂತೋ ? ಅನರ್ಪಿತವ ಶ್ರೋತ್ರದಲ್ಲಿ ಕೇಳಬಹುದು. ಅದೆಂತೋ ? ಅನರ್ಪಿತವ ಘ್ರಾಣದಲ್ಲಿ ವಾಸಿಸಬಹುದು. ಅದೆಂತೋ ? ಅನರ್ಪಿತವ ಹಸ್ತದಲ್ಲಿ ಸ್ಪರ್ಶಿಸಬಹುದು. ಅದೆಂತೋ ? ಅನರ್ಪಿತವ ಜಿಹ್ವೆಯಲ್ಲಿ ರುಚಿಸಬಹುದು. ಅದೆಂತೋ ? ಅಕಟಕಟಾ ಎಂತಯ್ಯ ! ಅರ್ಪಿತವಿಲ್ಲದೆ ಸರ್ವವಸ್ತುವನು ಅಂಗವಿಸಿ ಭೋಗಿಸುವ ಪರಿ ಅಂಗ ಲಿಂಗವಾಗಿ, ಲಿಂಗ ಪ್ರಾಣವಾಗಿ, ಪ್ರಾಣ ಮನವಾಗಿ, ಮನ ಲಿಂಗಸ್ವಾಯತವಾಗಿ, ಭಾವ ಶುದ್ಧವಾಗಿ, ಮನವೇ ಲಿಂಗ, ಲಿಂಗವೇ ಮನವಾಗಿ, ಲಿಂಗ ಮುಂತಾಗಿ, ಮನ ಹಿಂತಾಗಿ, ಸರ್ವ ಕ್ರೀ ವರ್ತಿಸುವುದು. ಈ ಕ್ರಿಯೆ ಸರ್ವಾರ್ಪಿತ, ಇದೇ ತಾತ್ಪರ್ಯ ಕಳೆ, ಇದೇ ಮರ್ಮ ಕಳೆ, ಇದೇ ಮಹಾಮಹಿಮಂಗೆ ಸರ್ವವೂ ಪ್ರಸಾದ. ಆ ಮಹಾಮಹಿಮನ ಪಂಚೇಂದ್ರಿಯವೆಲ್ಲವು ಲಿಂಗಾರ್ಪಿತ. ಆತನ ಭೋಗವೆಲ್ಲವು ಪ್ರಸಾದಭೋಗ. ಆತನು ಸದ್ಯೋನ್ಮುಕ್ತನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತವೆಂಬ ತ್ರಿವಿಧ ಸ್ಥಲವೇಕವಾದ ಲಿಂಗವು ಪ್ರಸಾದಿಯ ಅಂಗದಲ್ಲಿ ಉಪದೇಶಿತ ಸ್ವರೂಪದಿಂದ ಶಿಷ್ಯಭಾವವನೈದಿದ ಭೇದವೆಂತಿರ್ದುದೆಂದಡೆ, ಮುಂದೆ ಶಿಷ್ಯಸ್ಥಲವಾದುದು.

೭. ಶಿಷ್ಯಸ್ಥಲ

೬೪೬

(೧) ಜ್ಯೋತಿಯೊಳಗಣ ಕರ್ಪುರಕ್ಕೆ, ಅಪ್ಪುವಿನ ಕೈಯಲ್ಲಿಪ್ಪ ಉಪ್ಪಿಂಗೆ, ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ, ಈ ಮೂರಕ್ಕೆಯೂ ಬೇರೆ ಕ್ರಿಯಾವರ್ತನೆಯುಂಟೇ ಗುಹೇಶ್ವರಾ ?

ಟೀಕು : ಜ್ಯೋತಿಯೊಳಗಿದ್ದ ಕರ್ಪುರ ಜ್ಯೋತಿಯಾಗಿಪ್ಪುದಲ್ಲದೆ, ಬೇರೇನೂ ಇಲ್ಲದ. ಅಪ್ಪುವಿನ ಕೈಯಲ್ಲಿಪ್ಪ ಲವಣ ಉದಕವಾಗಿ ತೋರುವದಲ್ಲದೆ ಬೇರೇನೂ ಇಲ್ಲ. ಹೀಗೆ ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯನು ಶ್ರೀಗುರು ತತ್ವನಾಗಿಪ್ಪನ್ನದೆ ಬೇರೇನೂ ಇಲ್ಲ. ಅಲ್ಲಿ ಭಿನ್ನವಾಗಿ ತೋರನೆಂಬುದೀ ವಚನದರ್ಥ.

೬೪೭

(೨) ಕಂಡುದ ಹಿಡಿಯಲ್ಲೊಲ್ಲದೆ, ಕಾಣದುದನರಿಸಿ ಹಿಡಿದಿಹೆನೆಂದಡೆ ಸಿಕ್ಕದೆಂಬ ಬಳಲಿಕೆಯ ನೋಡಾ. ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ ಕಾಣದುದ ಕಂಡು, ಕಾಣಬಹುದಯ್ಯಾ ಗುಹೇಶ್ವರಾ.

೬೪೮

(೩) ''ಯಥಾ ಬೀಜಂ ತಥಾಂಕುರಂ ''ತಪ್ಪದು ತಪ್ಪದು. ಕಲ್ಪವೃಕ್ಷದಿಂದಾದ ಬೀಜ ಕಲ್ಪವೃಕ್ಷವಪ್ಪುದು ತಪ್ಪದು. ದಿಟದಿಟ ! ತಪ್ಪದು ನೋಡಾ ! ಕಾಮಧೇನುವಿನ ಶಿಶು ಕಾಮಧೇನುವಪ್ಪುದು. ತಪ್ಪದು ತಪ್ಪದು ನೋಡಾ ! ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ತಪ್ಪದು ನೋಡಾ ! ಯಥಾ ಬೀಜಂ ತಥಾಂಕುರಂ ಎಂಬ ವಾಕ್ಯ ತಪ್ಪದು ಶಿವಬಲ್ಲ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೪೯

(೪) ಜ್ಯೋತಿಯ ಸಂಗದಿಂದ ಕರ್ಪುರ ಜ್ಯೋತಿಯಪ್ಪಂತೆ ಅಪ್ಪುವಿನ ಸಂಗದಿಂದ ಉಪ್ಪು ಅಪ್ಪುವಪ್ಪಂತೆ ಶ್ರೀಗುರುವಪ್ಪದು ತಪ್ಪದು ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೬೫೦

(೫) ಗುರುಶಿಷ್ಯ ಸಂಬಂಧವನರಸುವ ಮಹಾಂತರು ನೀವು ಕೇಳಿರಯ್ಯ ! ಶಿಷ್ಯಂಗೆ ಗುರು ಶಿವ ಸಹೋದರ. ಇದು ಕಾರಣ ಗುರುವಿನಲ್ಲಿ ಗುಣ, ಲಿಂಗದಲ್ಲಿ ಲಕ್ಷಣ, ಜಂಗಮದಲ್ಲಿ ಕುಲ, ಪ್ರಸಾದದಲ್ಲಿ ರುಚಿ, ಪರಿಣಾಮದಲ್ಲಿ ಕುರುಹನರಸುವ ಪಾತಕರನೆನಗೊಮ್ಮೆ ತೋರದಿರು ಕೂಡಲಚನ್ನಸಂಗಯ್ಯ.

ಇಂತಪ್ಪ ಶಿಷ್ಯಭಾವವನ್ಯೆದಿದ ಲಿಂಗವು ಪ್ರಸಾದಿಯ ಅಂಗದಲ್ಲಿ ಶುಶ್ರೂಷಾ ಭಾವವನ್ಯೆದಿದ ಭೇದವೆಂತಿರ್ದುದೆಂದಡೆ, ಮುಂದೆ ಶುಶ್ರೂಷಾಸ್ಥಲವಾದುದು.

೮. ಶುಶ್ರೂಷಾಸ್ಥಲ

೬೫೧

(೧) ಪರಿಣಾಮದೊಳಗೆ ಮನದ ಪರಿಣಾಮವೇ ಚಲುವ. ಸಂಗದೊಳಗೆ ಶರಣರ ಸಂಗವೇ ಚಲುವ. ಕಾಯಗೊಂಡು ಹುಟ್ಟಿದ ಮೂಢರೆಲ್ಲ ಸಾಯದ ಸಂಚವನರಿವುದೇ ಚಲುವ ಗುಹೇಶ್ವರಾ.

ಟೀಕು : ಮನದ ಸಂಕಲ್ಪ ವಿಕಲ್ಪವ ಕೆಡಿಸಿ ಆ ಮನ ಲಿಂಗವೇದಿಯಾಗಲು ಅದೇ ಪರಮಸುಖ. ಮಹಾನುಭಾವಿಗಳ ಸಂಗದಲ್ಲಿರ್ದು ಕರ್ಕಶವಿಲ್ಲದ ಸಮರಸ ಗೋಷ್ಠಿಯ ಮಾಡಬಲ್ಲಡೆ ಅದೇ ಪರಮಸುಖ. ಶರೀರದ ನಿತ್ಯತ್ವವನರಿದು ನಿತ್ಯವಾದ ವಸ್ತುವ ಸಾಧ್ಯವ ಮಾಡಿಕೊಳಬಲ್ಲಡೆ ಅದೇ ಪರಮಸುಖವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೬೫೨

(೨) ಸ್ವಾಮಿಭೃತ್ಯ ಸಂಬಂಧಕ್ಕೆ ಆವುದು ಪಥವೆಂದಡೆ, ದಿಟವ ಪಿಡಿವುದು. ಸಟೆಯ ಬಿಡುವುದು. ನುಡಿದಂತೆ ನಡೆವುದು, ನಡೆದಂತೆ ನುಡಿವುದು. ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ನಮ್ಮ ಕೂಡಲಸಂಗಮದೇವ.

೬೫೩

(೩) ತರುಮರಾದಿಗಳಲ್ಲಿಗೆ ಹೋಗಿ ಅನಂತಕಾಲ ತಪಸ್ಸಿಹುದನು ಒಂದು ದಿನ ಗುರುಚರಣಸೇವೆ ಸಾಲದೇ ? ಅನಂತಕಾಲ ಗುರುಚರಣಸೇವೆಯ ಮಾಡುವದನು ಒಂದು ದಿನ ಲಿಂಗಪೂಜೆ ಸಾಲದೇ ? ಅನಂತಕಾಲ ಲಿಂಗಪೂಜೆಯ ಮಾಡುವುದನು ಒಂದು ದಿನ ಜಂಗಮತೃಪ್ತಿ ಸಾಲದೇ ? ಅನಂತ ಕಾಲ ಜಂಗಮ ತೃಪ್ತಿ ಮಾಡುವುದನು ಒಂದು ನಿಮಿಷದನುಭಾವ ಸಾಲದೇ ಕೂಡಲ ಚನ್ನಸಂಗಾ ನಿಮ್ಮ ಶರಣ ?

೬೫೪

(೪) ಗುರುಕರುಣ ಚರಣಸೇವೆ ಭವದ ಬಳ್ಳಿಯ ಬೀಜವನತಿಗಳೆಯಿತ್ತು ಘನ ಘನ ಪಥವ ತೋರಿತ್ತು ನೋಡಾ. ಉದಯಿಸಿತ್ತು ನಿರಾಕುಳ ನಿರುಹರಣ ಮಹಾಲಿಂಗ ಕಲ್ಲೇಶ್ವರ.

೬೫೫

(೫) ಸವಿಕರದಿಂದ ಪರಿಕರದಿಂದ ಪದಾರ್ಥಕರದಿಂದ ತನುಮನ ಧನದಲ್ಲಿ ವಂಚನೆ ಇಲ್ಲದೆ ನಿಮ್ಮ ಶರಣರಿಗೆ ಮಾಡುವಲ್ಲಿ, ನೀ ನೋಡುವಲ್ಲಿ ಕೂಡಲ ಚನ್ನಸಂಗಯ್ಯ ನಿಮಗೆಂದು ತನಗೆನ್ನದ ಕಾರಣ.

ಇಂತು ಶುಶ್ರೂಷಾ ಭಾವದಲ್ಲಿ ಭರಿತವಾದ ಲಿಂಗವು ಪ್ರಸಾದಿಯ ಅಂಗದಲ್ಲಿ ಇತರೇತರ ಭಾವವ ಮರೆದು, ಶಿಷ್ಯನೇ ಗುರು, ಗುರುವೇ ಶಿಷ್ಯನಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಸೇವ್ಯಸ್ಥಲವಾದುದು.

೯. ಸೇವ್ಯಸ್ಥಲ

೬೫೬

(೧) ಪಾದವಿಲ್ಲದ ಗುರುವಿಂಗೆ ತಲೆ ಇಲ್ಲದ ಶಿಷ್ಯನು. ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು. ಈ ಗುರು ಶಿಷ್ಯರಿಬ್ಬರು ಸತ್ತ ಸಾವ ನಿಮ್ಮಲ್ಲಿ ಅರಸುವೆ ಗುಹೇಶ್ವರಾ.

ಟೀಕು : ಪಾದವೆಂದರೆ ಆಚಾರದ ಚರ್ಯೆ. ಆ ಆಚಾರದ ಚರ್ಯೆವರತ ಸುಜ್ಞಾನ ಪರಿಪೂರ್ಣವಾದ ಚಿದ್ಗುರುವಿಂಗೆ ತಲೆ ಎಂಬ ನಿವೃತ್ತಿಜ್ಞಾನವಿಲ್ಲದ ಶಿಷ್ಯನೇ ಶಿಷ್ಯನೆಂಬುದೀಗ ಪಾದವಿಲ್ಲದ ಗುರುವಿಂಗೆ ತಲೆ ಇಲ್ಲದ ಶಿಷ್ಯನೆಂಬ ಶಬ್ದಕ್ಕರ್ಥ. ಇಂತು ಗುರುಶಿಷ್ಯರೆಂಬ ಆಚಾರವೆಂಬುದಳಿದು ನಿರ್ಗಮನಿಯಾದ ಗುರುವಿನಲ್ಲಿ ಭಿನ್ನವ್ರತನಿಯಮಂಗಳಳಿದು ಅಲ್ಲಿ ಲೀನವಾದ ಶಿಷ್ಯನು ನಿಸ್ತರಂಗಯುಕ್ತನೆಂಬುದೀಗ ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನೆಂಬ ಶಬ್ದಕರ್ಥ. ಈ ಗುರುಶಿಷ್ಯರೆಂಬಿರಡು ಭಾವ ಸಮರಸವಾಗಿ ಪರಬ್ರಹ್ಮದಲ್ಲಿ ಐಕ್ಯವಾದುದನು ನಿಜತತ್ವದಲ್ಲಿಯೇ ಕಾಣಬಹುದೆಂಬುದೀಗ, ಗುರುಶಿಷ್ಯರಿಬ್ಬರು ಸತ್ತ ಸಾವ ನಿಮ್ಮಲ್ಲಿಯೇ ಅರಸುವೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೬೫೭

(೨) ಮೊದಲೊಳು ಮನದಲ್ಲಿ ಅಚ್ಚೊತ್ತಿದ ಕಾರಣ ಎಚ್ಚರಿಕೆಯಾಯಿತ್ತು ಗುರುಲಿಂಗದ ಕಾರುಣ್ಯದಿಂದರಿವಾಯಿತ್ತು ಜಂಗಮ ಲಿಂಗದಿಂದಾಚಾರವಾಯಿತ್ತು ಲಿಂಗಜಂಗಮದಿಂದ ತಿಳಿದ ತಿಳಿವಿನಲ್ಲಿ ಪ್ರಸಾದ ಸಾಧ್ಯವಾಯಿತ್ತು ಕೂಡಲ ಚನ್ನಸಂಗಯ್ಯನಲ್ಲಿ ವಿಕಾರ್ಥವಾಯಿತ್ತು

೬೫೮

(೩) ಗುರುಲಿಂಗ ಉದಯವಾದವರ ಉದಯವ ನೋಡಿರಯ್ಯ. ಹಿಂದೆ ಕತ್ತಲೆ ಮುಂದೆ ಬೆಳಗಾಯಿತ್ತು ಬೆಳಗು ಬೆಳದಿಂಗಳಾಯಿತ್ತು ಕೂಡಲ ಚನ್ನಸಂಗನಲ್ಲಿ ವಿಕಾರ್ಥವಾಯಿತ್ತು

೬೫೯

(೪) ಶಿಷ್ಯನ ಪೂರ್ವಾಶ್ರಯವಾವುದು ಗುರುವಿಂಗೆ ? ಸಹಜ ಶಿಷ್ಯನು ತನ್ನ ಪೂರ್ವಾಶ್ರಯವ ಕಳೆದು ಶ್ರೀಗುರು ಲಿಂಗವ ಮುಟ್ಟುವ ಪರಿ ಎಂತೋ ? ಅರ್ಪಿತ ಹೋಗಿ ಪ್ರಸಾದವನರಸುವುದೋ ? ಪ್ರಸಾದ ಹೋಗಿ ಅರ್ಪಿತವನರಸುವದೋ ? ಕೂಡಲ ಚನ್ನಸಂಗಯ್ಯನಲ್ಲಿ ಮಹಾಪ್ರಸಾದಿಯೇ ಬಲ.

೬೬೦

(೫) ಗುರು ಶಿಷ್ಯ ಸಂಬಂಧದಿರವನಿನ್ನಾರು ಬಲ್ಲರಯ್ಯ ? ನೆರೆದ ನೆರವಿಂಗೆ ಹೇಳಲುಂಟೇ? ಈ ಮಾತು ಸ್ತ್ರೀಪುರುಷರು ಕೂಡಿದ ಕೂಟವ ಮತ್ತೊಬ್ಬರಿಗರುಹಬಾರದು. ಗುರು ಶಿಷ್ಯಸಂಬಂಧವ ಇನ್ನಾರು ಬಲ್ಲರಯ್ಯಾ ಕಲಿದೇವಯ್ಯಾ ?

೬೬೧

(೬) ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ ಆಗಲೇ ಮಹಾಪ್ರಸಾದವೆಂದೆನಯ್ಯಾ. ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಯಿದು ಬುದ್ಧಿಯ ಕಲಿಸಿದಡೆ ಆಗ[೧][ಲಿ][೧] ಮಹಾಪ್ರಸಾದವೆಂದೆನಯ್ಯ. ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದಡೆ ಆಗ[೧][ಲಿ][೧] ಮಹಾಪ್ರಸಾದವೆಂದೆನಯ್ಯಾ. ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ ಆಗ[೧][ಲಿ][೧] ಮಹಾಪ್ರಸಾದವೆಂದೆನಯ್ಯ. ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.

೬೬೨

(೭) ಗುರುಕಾರುಣ್ಯ ಲಿಂಗನಿಷ್ಠೆ ಪ್ರಸಾದವಿಶ್ವಾಸ ಭಾವದ ನಿಜವನಾರು ಬಲ್ಲರಯ್ಯ ? ಗುರುವಿನಲ್ಲಿ ಲಿಂಗಪ್ರವೇಶ, ಲಿಂಗದಲ್ಲಿ ಜಂಗಮಪ್ರವೇಶ, ಜಂಗಮದಲ್ಲಿ ಪ್ರಸಾದಪ್ರವೇಶ, ಪ್ರಸಾದದಲ್ಲಿ ಪರಿಣಾಮಪ್ರವೇಶ, ಪರಿಣಾಮದಲ್ಲಿ ಭಾವಪ್ರವೇಶ. ಗುರುವಿಂಗೆ ಲಿಂಗವಿಲ್ಲ ಲಿಂಗಕ್ಕೆ ಜಂಗಮವಿಲ್ಲ, ಜಂಗಮಕ್ಕೆ ಪ್ರಸಾದವಿಲ್ಲ, ಪ್ರಸಾದಕ್ಕೆ ಪರಿಣಾಮವಿಲ್ಲ, ಪರಿಣಾಮಕ್ಕೆ ಭಾವವಿಲ್ಲ, ಇದು ಆಗುಹೋಗಿನ ಸಕೀಲಸಂಬಂಧವನು ಕೂಡಲಚನ್ನಸಂಗಾ ನಿಮ್ಮ ಶರಣ ಬಲ್ಲ.

೬೬೩

(೮) ಗುರುವೇ ಹೆಂಡತಿಯಾಗಿ, ಹೆಂಡತಿಯೇ ತಾಯಾಗಿ, ತಾಯೇ ಹೆಂಡತಿಯಾಗಿ, ಶಿಷ್ಯನೇ ಗಂಡನಾಗಿ, ಏನೆಂದು ಹೇಳುವೆನೇನೆಂದುಪಮಿಸುವೆ ಕೂಡಲ ಚನ್ನಸಂಗಯ್ಯ ಇಹಪರವಿಲ್ಲಾಗಿ ?

೬೬೪

(೯) ಗುರುವೆಂಬ ಪ್ರತಿಭಾವವಿಲ್ಲದ ಶಿಷ್ಯ, ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು, ಏನೆಂಬೆನೇನೆಂಬೆ ? ಎರಡಿಲ್ಲದ ಘನವ ಏನೆಂಬೆನೇನೆಂಬೆ ? ಉಭಯವಳಿದೊಂದಾದುದನೇನೆಂಬೆನೇನೆಂಬೆ ? ಕೂಡಲ ಚನ್ನಸಂಗನಲ್ಲಿ ಗುರುಶಿಷ್ಯ ಸಂಬಂಧವಪೂರ್ವ.

೬೬೫

(೧೦) ಗುರು ಶಿಷ್ಯ ಸಂಬಂಧದನುಭಾವವ ಕೇಳಿರಯ್ಯ! ಗುರುವೆಂಬ

೧–೧ ಲೇ (ಮೂ)

ಪರಾಪರ, ಶಿಷ್ಯನೆಂಬ ಇಹಪರ, ಗುರುವೆಂಬ ಪರಮಾರ್ಥ, ಶಿಷ್ಯನೆಂಬ, ಏಕಾರ್ಥ ಗುರುವೆಂಬವನಲ್ಲಿ ಶಿಷ್ಯನೆಂಬವನೆಂತೋ ? ಶಿಷ್ಯವೆಂಬವನಲ್ಲಿ ಗುರುವೆಂಬವನೆಂತೋ ? ಸಿದ್ಧಸೋಮನಾಥನಲ್ಲಿ ಶಬ್ದಕ್ಕಿಂಬಿಲ್ಲ.

೬೬೬

(೧೧) ಅರಿದು ನೆನೆಯಲಿಲ್ಲ, ಮರೆದು ಪೂಜಿಸಲಿಲ್ಲ. ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ. ತನಗೆ ಗುರುವಿಲ್ಲ. ಗುರುವಿಗೆ ತಾನಿಲ್ಲ. ಗುರುವಿಗೆ ಶಿಷ್ಯನು ಹೊಡೆವಡದ ಕಾರಣ ಮುನ್ನಿಲ್ಲ. ಬಯಲ ಬತ್ತಲೆ ಇಲ್ಲ. ಒಕ್ಕಲಿಲ್ಲ ತೂರಲಿಲ್ಲ, ಗುಹೇಶ್ವರಲಿಂಗಕ್ಕೆ ಕುರುಹು ಮುನ್ನಿಲ್ಲ.

ಇಂತು ನವಸ್ಥಲಂಗಳೇ ತ್ರಿವಿಧ ತ್ರಿವಿಧಂಗಳಾಗೇಕಮಾದ ಶಿವಲಿಂಗವು ಮಹಾನುಭಾವಿಯಾದ ಪ್ರಾಣಲಿಂಗಿಯ ಜಂಗಮಲಿಂಗಸಂಬಂಧದಲ್ಲಿ ಜೀವ ಭಾವವಂ ನಿವೃತ್ತಿಮಾಡಿ, ಲಿಂಗ ಸಜ್ಜೀವ ಸಮ್ಯಕ್ತ್ವವುಳ್ಳ ಭೇದವೆಂತಿರ್ದಿತೆಂದಡೆ ಮುಂದೆ ಜೀವಾತ್ಮಸ್ಥಲವಾದುದು.

ಜಂಗಮಲಿಂಗ

ವಿವರಣೆ: ಜಂಗಮಲಿಂಗಸ್ಥಲದಲ್ಲಿ ಹಿಂದಿನ ಶಿವಲಿಂಗಸ್ಥಲದಲ್ಲಿ ಆವಿರ್ಭವಿಸಿದ ಗುಣಗಳು ಮತ್ತಿಷ್ಟು ಹೆಚ್ಚಿಗೆ ದೃಢಪಡುವವು. ಈ ಜಂಗಮಲಿಂಗದ ಅಂತ್ಯಸ್ಥಲದಲ್ಲಿ ಸೂಕ್ಷ್ಮಶರೀರವು ತನ್ನ [೧][ಲಿಂಗಮಯ][೧] ಉನ್ನತಿಯನ್ನು ಹೊಂದುವದು. ಶಿವಲಿಂಗ ಮತ್ತು ಜಂಗಮಲಿಂಗಗಳು ಹೀಗೆ ಉಚ್ಚ ಸ್ಥಿತಿಯನ್ನು ಹೊಂದಿದಲ್ಲಿ ಭಕ್ತನಿಗೆ ಉಂಟಾಗುವ ಮಾನಸಿಕ ವಿಕಾರಗಳು ದೂರಾಗುತ್ತವೆ. ಈ ಜಂಗಮಲಿಂಗಸ್ಥಲವನ್ನೊಡಗೊಂಡು ಮುಂದಿನ ಮೂರು ಸ್ಥಲಗಳಲ್ಲಿ ಸಿದ್ಧಿಗಳೂ ಸಹ ಅವನ ವಿಶೇಷ ಶಕ್ತಿಗಳಿಗೆ ಅನುಗುಣವಾಗಿ ಪ್ರಕಟವಾಗುತ್ತವೆಂತಲೂ ತಿಳಿಯಲ್ಪಟ್ಟಿರುತ್ತದೆ.

ಜಂಗಮಲಿಂಗದಲ್ಲಿ ಒಲವುಲಿಂಗ, ನಿರೂಪಲಿಂಗ, ಪ್ರಸಾದಲಿಂಗ ಮತ್ತು ಪಾದೋದಕಲಿಂಗ ಎಂದು ನಾಲ್ಕು ವಿಭಾಗಗಳಿವೆ. ಇವುಗಳ ಅನುಭವದಿಂದ ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿದ ಜಂಗಮಲಿಂಗವು ಪ್ರಕಟವಾಗುವದು.

ಈ ನಾಲ್ಕರಲ್ಲಿ ಒಲವುಲಿಂಗ ಮತ್ತು ನಿರೂಪಲಿಂಗವೆಂದು ಮತ್ತು ಪ್ರಸಾದಲಿಂಗ, ಪಾದೋದಕಲಿಂಗವೆಂದು ಹೀಗೆ ಪುನಃ ಎರಡು ಭಾಗಗಳನ್ನು ಮಾಡಬಹುದು. ಯಾಕೆಂದರೆ ಮೊದಲಿನ ಎರಡರಲ್ಲಿ ಮತ್ತು ಎರಡನೆಯ ಎರಡರಲ್ಲಿ ಹೆಚ್ಚಿಗೆ ಪರಸ್ಪರ ಸಂಬಂಧವಿರುತ್ತದೆ. ೧ನೆಯ ವಿಭಾಗಕ್ಕೆ ಸಂಬಂಧಿಸಿದ ಎರಡು ಸ್ಥಲಗಳ ಉದ್ದೇಶವು ಜೀವಭಾವವನ್ನು ಒಲವುಲಿಂಗಗಳ ಮೂಲಕ ಮೊದಲು ದೂರಮಾಡಿ, ಆಮೇಲೆ ನಿರೂಪಲಿಂಗಕ್ಕೆ ಸಂಬಂಧಿಸಿದ ಆಗಮ ಎಂದರೆ ಕ್ರಿಯೆಗಳನ್ನು ಬಲಪಡಿಸುವದೇ ಇರುತ್ತದೆ.

೧–೧ ಲೈಂಗಿಕ (ಮೂ)

ಬೇಕು. ಹೀಗೆ ಮಾಡುವವನು ಸೇವ್ಯಪ್ರಸಾದಿಯು. ಇಂಥವನಿಗೆ ಭ್ರಮೆ ಎಂಬುದು ಇಲ್ಲ. ಇವನು ಮಾಯಾಪ್ರಪಂಚವನ್ನು ಅತಿಗಳೆಯುವನು. ಹೀಗೆ ಭಕ್ತನು ಪ್ರಸಾದ ಲಿಂಗದಲ್ಲಿ ಪ್ರಸಾದರೂಪನಾಗಿ ವ್ಯವಹರಿಸುತ್ತಾನೆ.

ಪಾದೋದಕಲಿಂಗ : ಇದರಲ್ಲಿ ದೀಕ್ಷಾಪಾದೋದಕ ಶಿಕ್ಷಾಪಾದೋದಕ ಜ್ಞಾನಪಾದೋದಕ ಎಂದು ಮೂರು ವಿಭಾಗಗಳಿರುತ್ತವೆ. ದೀಕ್ಷಾಗುರು ಮುಖ ದಿಂದಾದುದು ದೀಕ್ಷಾಪಾದೋದಕವು.ಇದು ಕ್ರಿಯಾರೂಪಾದದ್ದು. ಇದರಲ್ಲಿ ಪುನಃ ಅನೇಕ ಉಪಭಾಗಗಳನ್ನು ವಚನಕಾರರು ಹೇಳುವದುಂಟು. ಇವೆಲ್ಲವು ಬಾಹ್ಯ ಕ್ರಿಯೆಗಳಾಗಿರುತ್ತವೆ. ಆದರೂ ಅವು ಶರಣನ ಮಲತ್ರಯಗಳನ್ನು ದೂರ ಮಾಡುವವು. ಶಿಕ್ಷಾಗುರುಮುಖದಿಂದುಂಟಾದುದು ಶಿಕ್ಷಾಪಾದೋದಕವು. ಅದರ ಪರಿಣಾಮಗಳು ಮನಸ್ಸಿನ ಮೇಲೆ ಸಂಭವಿಸುತ್ತವೆ. ಜ್ಞಾನಗುರುಮುಖ ದಿಂದಾದುದು ಜ್ಞಾನಪಾದೋದಕವು. ಅದು ಪರಮಾನಂದೋದಕವು. ಅದು ತೋರಿಕೆಗೆ ಬಾರದೆ ಅಂತರಂಗ ಬಹಿರಂಗವನ್ನು ಆವರಿಸುತ್ತದೆ.

ಈ ಮೇರೆಗೆ ಅಂಗವಿಕಾರಗಳನ್ನು ದೂರಮಾಡಿ ಜಂಗಮಲಿಂಗದ ಕ್ರಿಯೆಗಳನ್ನು ಆಚರಿಸುತ್ತ ಪ್ರಸಾದ ಲಿಂಗದಲ್ಲಿ ಪ್ರಸಾದರೂಪಾಗಿ ವರ್ತಿಸಬೇಕು. ಮಲತ್ರಯಗಳನ್ನು ದೂರ ಮಾಡಬೇಕು. ಹೀಗೆ ಪಾದೋದಕ ಲಿಂಗವನ್ನು ಹೊಂದಿ ಪರಮಾನಂದೋದಕವನ್ನು ಪಡೆದು ಸುಖಿಸಬೇಕು. ಇದರಿಂದ ಅಂಗವಿಕಾರಗಳು ಲಯವಾಗುವವು. ಕ್ರಿಯೆಗಳ ಸ್ಥೂಲಸಂಬಂಧವು ನಷ್ಟವಾಗಿ ಅವುಗಳಲ್ಲಿ ಇದ್ದೂ ಇಲ್ಲದಂತಿರುವನು.

ಇದರಿಂದ ಈ ಸ್ಥಲದಲ್ಲಿ ಭಕ್ತನು ಪ್ರಸಾದರೂಪಾಗಿ ವ್ಯವಹರಿಸುತ್ತಾನೆ. ಇವನ ಮೇಲೆ ಕ್ರಿಯೆಗಳ ಪರಿಣಾಮಗಳು ಏನೂ ಆಗುವುದಿಲ್ಲ. ಕರ್ಮವು ನಷ್ಟವಾಗುವದು, ಮಹಾಜ್ಞಾನವು ತುಂಬಿಕೊಳ್ಳುವದು. ಅದು ಪ್ರವಾಹರೂಪಾಗಿ ಅವನಲ್ಲಿ ಹರಿಯಹತ್ತುವದು. ಅದೇ ಜ್ಞಾನಪಾದೋದಕವೆನಿಸುವದು. ಪರಮಾನಂದ ರೂಪಾಗಿರುವದು.

ಇದೇ ಜಂಗಮಲಿಂಗದ ಪರಿಪೂರ್ಣಸ್ಥಿತಿಯು. ಇಲ್ಲಿ ಪ್ರಾಣಲಿಂಗವು ಪೂರ್ಣತೆಯನ್ನು ಹೊಂದುವದು. ಅದು ಅವನ ಸೂಕ್ಷ್ಮಶರೀರವನ್ನು ವ್ಯಾಪಿಸುವದು. ಅದರ ಮೂಲಕ ಅವನು ತನ್ನ ಸ್ಥೂಲಶರೀರದ ಕ್ರಿಯೆಗಳನ್ನು ಮಾಡತೊಡಗುತ್ತಾನೆ. ಹೀಗೆ ಮಾಡಿದ ಕ್ರಿಯೆಗಳು ಅತ್ಯುನ್ನತಸ್ಥಿತಿಯನ್ನು ಹೊಂದುತ್ತವೆ. ಇದು ಸೂಕ್ಷ್ಮ ಶರೀರದ [೧][ಲಿಂಗಸಂಬಂಧವಾದ][೧] ಶ್ರೇಷ್ಠ ಬೆಳವಣಿಗೆಯು.

೧. ಜೀವಾತ್ಮಸ್ಥಲ

೬೬೭

(೧) ಸರ್ವ ಸಂಸಾರಿಯೊಡನಾಡಿ ಕಟ್ಟುವಡೆಯಿತ್ತು ಮನದ ತಮಂಧ

೧–೧ ಲೈಂಗಿಕ (ಮೂ)

ಎರಡನೆಯ ವಿಭಾಗಕ್ಕೆ ಸಂಬಂಧಿಸಿದ ಪ್ರಸಾದಲಿಂಗ ಮತ್ತು ಪಾದೋದಕ ಲಿಂಗಗಳಲ್ಲಿ ಗುರುಲಿಂಗಜಂಗಮದ ಮೂಲಕ ಪ್ರಾಣಲಿಂಗಕ್ಕೆ ಶ್ರೇಷ್ಠ ಸ್ಥಿತಿಯನ್ನು ಉಂಟುಮಾಡುವದೇ ಮುಖ್ಯ ಕಾರ್ಯವಾಗಿರುತ್ತದೆ.

ಈ ಜಂಗಮಲಿಂಗಸ್ಥಲದಲ್ಲಿ ವೀರಶೈವರಲ್ಲಿ ಅತ್ಯಂತ ಮಹತ್ವವಾದ ಪ್ರಸಾದ, ಮತ್ತು ಪಾದೋದಕಗಳ ವಿಚಾರಗಳ ತತ್ವಗಳು ವಿಶೇಷವಾಗಿ ವಿವೇಚಿಸಲ್ಪಟ್ಟಿರುತ್ತವೆ. ಇದಕ್ಕೋಸ್ಕರ ಮೊದಲು ಜೀವಭಾವವನ್ನು ಬೀಡಬೇಕು. ಬಿಟ್ಟು ಕ್ರಿಯೆಗಳನ್ನು ಶುದ್ಧಗೊಳಿಸಬೇಕು. ಹೀಗೆ ಸತ್‌ಕ್ರಿಯೆಗಳನ್ನು ಮಾಡಿ ಪ್ರಸಾದವನ್ನು ಹೊಂದಬೇಕು. ಮುಂದೆ ಪಾದೋದಕವನ್ನೂ ಪಡೆಯಬೇಕು. ಪ್ರಸಾದವ ಅನುಭವವು ಗುರುಲಿಂಗಜಂಗಮಗಳ ಮೂಲಕ ಆಗುತ್ತದೆ. ಪಾದೋದಕದ ಅನುಭವವು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುವಿನಿಂದಲೇ ಆಗಬೇಕು. ಈ ಪಾದೋದಕವು ಕಡೆಗೆ ಪರಮಾನಂದರೂಪವಾಗಿ ಪ್ರವಹಿಸುತ್ತದೆ.

ಒಲವುಲಿಂಗ : ಜೀವಾತ್ಮ, ಅಂತರಾತ್ಮ ಪರಮಾತ್ಮವೆಂದು ಒಲವುಲಿಂಗದ ಮೂರು ವಿಭಾಗಗಳಿವೆ. ಜೀವಾತ್ಮನು ಭವದಲ್ಲಿ ಬಳಲುವನು. ಇಂಥ ಜೀವಾತ್ಮನು ತನ್ನ ಜೀವಭಾವವನ್ನು ನಿವೃತ್ತಿಮಾಡಿ ಆತ್ಮ ವಿವೇಕಿಯಾದಲ್ಲಿ ಅಂತರಾತ್ಮನು. ಮುಂದೆ ಆತ್ಮವಿವೇಕದಿಂದ ಪರಮಾತ್ಮನನ್ನು ಪರಾಮರ್ಶಿಸಿದ್ದಾದರೆ ಪರಮಾತ್ಮನು ತನ್ನನ್ನು ತಾನು ಅರಿವುದೇ ಪರಮಾತ್ಮ ಸ್ಥಿತಿಯಾಗಿರುತ್ತದೆ. ಇವೆಲ್ಲವುಗಳು ಒಲವು ಲಿಂಗದ ಭೇದಗಳಾಗಿರುವವು. ಇವುಗಳ ಉದ್ದೇಶವು ಆತ್ಮವನ್ನು ಬಲಪಡಿಸುವದೇ ಇರುತ್ತದೆ.

ನಿರೂಪಲಿಂಗ : ಇದರಲ್ಲಿ ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ ಎಂಬ ಮೂರು ವಿಭೇದಗಳಿವೆ. ದೇಹಭಾವವನ್ನು ಅಳಿದು ಸ್ವಾಭಾವಿಕವಾದ ಚಾರಿತ್ರ್ಯವುಳ್ಳವನಾಗಿ ವರ್ತಿಸುವುದೇ ನಿರ್ದೇಹಾಗಮವು. ನಿರ್ಭಾವ ಚಾರಿತ್ರ್ಯವುಳ್ಳವನಾಗಿ ವರ್ತಿಸುವದೇ ನಿರ್ಭಾವಾಗಮವು. ಇಲ್ಲಿ ಅವನು ಅತ್ಯಂತ ನಿಷ್ಠೆಯಿಂದ ವರ್ತಿಸಿ ಶುದ್ಧಭಾವದಿಂದ ಕ್ರಿಯೆಗಳನ್ನು ಮಾಡುತ್ತಾನೆ. ಇದಾದ ಮೇಲೆ ಆಚರಣೆಗಳಲ್ಲಿ ಇದ್ದೂ ಇಲ್ಲದ ಸ್ಥಿತಿಯು ಉತ್ಪನ್ನವಾಗುವದು. ಇದು ನಷ್ಟಾಗಮವು. ಹೀಗೆ ಜಂಗಮಲಿಂಗದ ಕ್ರಿಯೆಗಳು ನಿರೂಪಿಸಲ್ಪಟ್ಟಿರುತ್ತವೆ.

ಪ್ರಸಾದಲಿಂಗ : ಇದರಲ್ಲಿ ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂದು ಮೂರು ವಿಭಾಗಗಳಿವೆ. ಗುರುವಿನ ಮೂಲಕ ಸುಖಪ್ರಸಾದ ಸೇವನೆ ಮಾಡುವವನೇ ಆದಿ ಪ್ರಸಾದಿಯು. ಇಲ್ಲಿ ಗುರುಮಾರ್ಗದಲ್ಲಿ ಭೃತ್ಯಾಚಾರಿಯಾಗಿ ನಡೆಯಬೇಕು. ಇಲ್ಲಿ ಕ್ರಿಯಾಲಿಂಗಕ್ಕೆ ಅರ್ಪಿಸಿ ಪ್ರಸಾದವನ್ನು ಪಡೆಯಬೇಕು. ಈ ಅರ್ಪಣೆಯು ಕ್ರಿಯೆಯುಳ್ಳದು. ಲಿಂಗಮುಖ ಪ್ರಸಾದಸೇವನೆಯೇ ಎರಡನೆಯದಾದ ಅಂತ್ಯಪ್ರಸಾದಿಯು. ಅಂದರೆ ಲಿಂಗೇಂದ್ರಿಯ ಮುಖವುಳ್ಳವನಾಗಿ ಆಚರಿಸಬೇಕು. ಮುಂದೆ ಜಂಗಮಮುಖದಿಂದ ತೃಪ್ತಿಯನ್ನು ಅನುಭವಿಸ

ಬಿಡದು. ಮನದ ಕಪಟ ಬಿಡದು. ಸಟೆಯೊಳಗೆ ದಿಟವಾಡಿ ಬಯಲು ಬಡಿವಡೆಯಿತ್ತು. ಕಾಯದ ಸಂಗದ ಜೀವವುಳ್ಳನ್ನಕ್ಕರ ಎಂದೂ ಭವ ಹಿಂಗದು ಗುಹೇಶ್ವರಾ.

೬೬೮

(೨) ಇಂದ್ರದಳ ಅಗ್ನಿದಳ ಯಮದಳ ನೈಯತ್ಯದಳ ವರುಣದಳ ವಾಯವ್ಯದಳ ಕುಬೇರದಳ ಈಶಾನ್ಯದಳ. ಇವಕ್ಕೆ ವಿವರ. ಇಂದ್ರದಳವೇರಲು ಗುಣಿಯಾಗಿಹನು. ಅಗ್ನಿದಳವೇರಲು ಹಸಿವನು. ಯಮದಳವೇರಲು ದುರಿತ ಚೇಷ್ಟಿತನಾಗುವನು. ನೈಯತ್ಯದಳವೇರಲು ಕೋಪಿಸುತ್ತಿಹನು. ವರುಣದಳವೇರಲು ನಿದ್ರೆಗೈವನು. ವಾಯವ್ಯದಳವೇರಲು ಸಂಚಲನಾಗಿಹನು. ಕುಬೇರದಳವೇರಲು ಧರ್ಮಬುದ್ಧಿಯಾಗಿಹನು. ಈಶಾನ್ಯದಳವೇರಲು ವಿಷಯಾತುರನಾಗಿಹನು. ಮಧ್ಯಸ್ಥಾನಕ್ಕೆ ಬಂದಲ್ಲಿ ಸದ್ಭಾವಿಯಾಗಿ ಮೋಕ್ಷವ ಬಯಸುತ್ತಿಹನು. ಇಂತೀ ಅಷ್ಟದಳಂಗಳಲ್ಲಿ ತಿರುಗುವ ಹಂಸನ ನೆಲೆಯ ಕೆಡಿಸಿ ಸದ್ಭಾವಿಯಾಗಿಹ ಕೂಡಲ ಚನ್ನಸಂಗಾ ನಿಮ್ಮ ಶರಣ.

೬೬೯

(೩) ತನುವ್ಯಸನ ಮನವ್ಯಸನ ಧನವ್ಯಸನ ರಾಜ್ಯವ್ಯಸನ ವಿಶ್ವಾಸವ್ಯಸನ ಉತ್ಸಾಹವ್ಯಸನ ಸೇವಕವ್ಯಸನ ಇವಕ್ಕೆ ವಿವರ. ತನುವ್ಯಸನವೆತ್ತಿದಲ್ಲಿ ವಸ್ತ್ರಾಭರಣ ಅನುಲೇಪನ ತಾಂಬೂಲವ ಬಯಸುತ್ತಿಹನು. ಮನವ್ಯಸನವೆತ್ತಿದಲ್ಲಿ ಹಸಿವು ಕಳವು ಪರದಾರವನು ಬಯಸುತ್ತಿಹನು.ಧನವ್ಯಸನವೆತ್ತಿದಲ್ಲಿ ಧನ ಧಾನ್ಯವ ಬಯಸುತ್ತಿಹನು. ರಾಜ್ಯವ್ಯಸನವೆತ್ತಿದಲ್ಲಿ ಕುದುರೆ ಸೇನೆಯಂ ಬಯಸುತ್ತಿಹನು. ವಿಶ್ವಾಸವ್ಯಸನವೆತ್ತಿದಲ್ಲಿ ಚತುರ್ವಿಧ ಕರ್ತವ್ಯವ ಬಯಸುತ್ತಿಹನು. ಉತ್ಸಾಹವ್ಯಸನವೆತ್ತಿದಲ್ಲಿ ಪುತ್ರ ಮಿತ್ರ ಕಳತ್ರಾದಿಗಳ ಬಯಸುತ್ತಿಹನು. ಸೇವಕವ್ಯಸನವೆತ್ತಿದಲ್ಲಿ ಉಣ್ಣಲಾರೆ ಉಡಲಾರೆ ಕೊಳಲಾರೆ ಕೊಡಲಾರೆ ಎನ್ನುತ್ತಿಹನು. ಇಂತೀ ಸಪ್ತವ್ಯಸನಂಗಳ ಬಯಸಿ ಬಳಲುವ ಹಂಸನ ನೆಲೆಯ ಕೆಡಿಸಿ ಲಿಂಗವ್ಯಸನಿಯಾದ ಕೂಡಲ ಚನ್ನಸಂಗಾ ನಿಮ್ಮ ಶರಣ.

೬೭೦

(೪) ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮ ಇಂತಿವು ಅಷ್ಟಮದಂಗಳು. ಇವಕ್ಕೆ ವಿವರ: ಪೃಥ್ವಿ ಮದವೆತ್ತಿದಲ್ಲಿ ತನುಗುಣಭರಿತನಾಗಿಹನು. ಸಲಿಲ ಮದವೆತ್ತಿದಲ್ಲಿ ಸಂಸಾರ ಭರಿತನಾಗಿಹನು. ಪಾವಕಮದವೆತ್ತಿದಲ್ಲಿ ಕಾಮ್ಯರಸ ಭರಿತನಾಗಿಹನು. ಪವನಮದವೆತ್ತಿದಲ್ಲಿ ಇದ್ದ ಠಾವಿನಲ್ಲಿ ಇರ್ದು ಜಂಬೂದ್ವೀಪ ಭರಿತನಾಗಿಹನು. ಅಂಬರ ಮದವೆತ್ತಿದಲ್ಲಿ ವಾಹನ ಭರಿತನಾಗಿಹನು. ರವಿಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿಹನು. ಶಶಿಮದವೆತ್ತಿದಲ್ಲಿ ಚಿಂತಾಭರಿತನಾಗಿಹನು. ಆತ್ಮಮದವೆತ್ತಿದಲ್ಲಿ ಅಹಂಕಾರಭರಿತನಾಗಿಹನು. ಇಂತೀ ಅಷ್ಟಮದಂಗಳ ಗುಣವಳಿದು ಸದ್ಗುಣಭರಿತನಾಗಿಹ ಕೂಡಲ ಚನ್ನಸಂಗಾ ನಿಮ್ಮ ಶರಣ.

ಇಂತು ಜೀವಭಾವಮಂ ನಿವೃತ್ತಿಯಂ ಮಾಡಿದ ಲಿಂಗವು ಪ್ರಾಣಲಿಂಗಿಯೊಳಗೆ ಆತ್ಮ ವಿವೇಕಿಯಾಗಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಅಂತರಾತ್ಮಸ್ಥಲವಾದುದು.

೨. ಅಂತರಾತ್ಮಸ್ಥಲ

೬೭೧

(೧) ಒಳಗೊಂದು ಬೆಳಗುವ ಜ್ಯೋತಿಯಂತಪ್ಪ ವಿಚಾರವದೇನೋ ? ಅತ್ತ ಹೊದ್ದದು. ಇತ್ತ ಹೊದ್ದದು. ಬಾಹ್ಯವಿಚಾರವ ವಿಚಾರಿಸುವ ವಿಚಾರ ತಾನಾಗಿದ್ದುದನರಿಯದು. ಅರಿಯದೆ ಮತ್ತೆ ಮರೆದಿರದು. ಹೊದ್ದುವ ಕಾಳಿಕೆಯಲ್ಲಿ ಹೊದ್ದದು. ನಿಸ್ಸಂದೇಹವಿಲ್ಲ, ಹೊದ್ದಿಯೂ ಹೊದ್ದದೆ ಇದ್ದಿತ್ತು, ತುದಿ ಮೊದಲಿಲ್ಲ ತುದಿ ಇದ್ದಿತ್ತು, ಮೊದಲೆರಡನು ಕೂಡಿಕೊಂಡು ನಡುವೆ ಅಂತರಾತ್ಮನಾಗಿದ್ದಿತ್ತು, ಜೀವಗುಣವಳಿದಲ್ಲಿ ಪರಮಾತ್ಮನ ಮುಂದೆ ಪ್ರತಿಬಿಂಬವಾಗಿರ್ದಲ್ಲಿ ಸಂಧಾನವನರಸುತ್ತಿರ್ದೆನಯ್ಯ ಕೂಡಲ ಚನ್ನಸಂಗಮದೇವಾ.

೬೭೨

(೨) ದೇಹ ಪ್ರಸಾದವೆಂದೆನ್ನೆ. ಅಂತರ್ದೇಹ ಪ್ರಸಾದವೆಂದೆಂಬೆ. ಜಾಗ್ರತ್ ಪ್ರಸಾದವೆಂದೆನ್ನೆ. ಸ್ವಪ್ನ ಪ್ರಸಾದವೆಂದೆಂಬೆ. ಅಂತರ್ದೇಹಕ್ಕೆ ಆಕಾರವಿಲ್ಲ, ಸ್ವಪ್ನಕ್ಕೆ ಬೀಜವಿಲ್ಲ, ಇದು ಕಾರಣ ಕೂಡಲ ಚನ್ನಸಂಗಮನು ದೇಹದಲ್ಲಿ ತೋರಿದನಾಗಿ ಅಕಾಯದಲ್ಲಿ ನಿಮ್ಮುವ ಕಂಡೆ.

೬೭೩

(೩) ನವನಾಳ ಪದ್ಮದ ಅಷ್ಟದಳದೊಳಗೆ ಇಪ್ಪತ್ತುಮೂರು ನಾಳ ನೋಡಾ? ಸುಳಿದು ಬೀಸುವ ವಾಯು. ಒಳಗೆ ಆತ್ಮಜ್ಯೋತಿ. ಅಲ್ಲಿಂದೊಳಗಿಪ್ಪ ಹಂಸನ ಗೃಹವ ನೋಡಾ ! ಹಿರಿದೊಂದು ಭೂತವು ಹುದುಗಿಪ್ಪ ಭೇದವ ನಿಲುಕಿ ನೋಡಿಯೇ ಕಂಡೆನೆಂದಾತನಂಬಿಗ ಚೌಡಯ್ಯ.

೬೭೪

(೪) ಶುಕ್ಲ ಶೋಣಿತ ಪಿಂಡೈಕ್ಯ ಚಿತ್ತ ವಾಯು ಅದು ಪದ್ಮದಳದಲ್ಲಿ ಮೊಲೆ ಮುಡಿ ಬಂದಡೆ ಹೆಣ್ಣೆಂಬರು. ಗಡ್ಡ ಮಾಸೆಯಾದಡೆ ಗಂಡೆಂಬರು. ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ, ಅದರಂತುವ ತಿಳಿಯಲಿಕೆ ಶ್ರುತಿತತಿಗೆ ತಿಳಿಯದೆಂದಾತನಂಬಿಗರ ಚೌಡಯ್ಯ.

೬೭೫

(೫) ಜಗವೊಂದೆಸೆ, ತಾನೊಂದೆಸೆ. ಮತ್ತಾ ಜಗದೊಳಗೆ ತಾ, ತನ್ನೊಳಗೆ ಜಗ. ಆಗಮವೊಂದೆಸೆ, ತಾನೊಂದೆಸೆ. ಮತ್ತಾ ಆಗಮದೊಳಗೆ ತಾ, ತನ್ನೊಳಗೆ

ಆಗಮ. ವಿಧಿಯೊಂದೆಸೆ, ತಾನೊಂದೆಸೆ. ಮತ್ತಾ ವಿಧಿಯೊಳಗೆ ತಾ, ತನ್ನೊಳಗೆ ವಿಧಿ. ಕ್ರಿಯೊಂದೆಸೆ ತಾನೊಂದೆಸೆ, ಮತ್ತಾ ಕ್ರಿಯೊಳಗೆ ತಾ, ತನ್ನೊಳಗೆ ಕ್ರಿ. ಇಂತೀ ಜಗ ಆಗಮ ವಿಧಿ ಕ್ರಿ ನಿಷೇಧವಾಗಿ ಹೊದ್ದಿಯೂ ಹೊದ್ದದು ನೀರ ತಾವರೆಯಂತೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ಅಂತಾರಾತ್ಮ ವಿವೇಕಾನುಭಾವಿಯಾಗಿರ್ದ ಲಿಂಗವು ಪ್ರಾಣಲಿಂಗವು. ಆತ್ಮ ವಿವೇಕದಿಂ ಪರಮಾತ್ಮನ ಪರಾಮರ್ಶಿಸಿದ ಭೇದವೆಂತಿರ್ದುದೆಂದಡೆ ಮುಂದೆ ಪರಮಾತ್ಮಸ್ಥಲವಾದುದು.

೩. ಪರಮಾತ್ಮಸ್ಥಲ

೬೭೬

(೧) ಭೂತಳದ ಮತಿವಂತರು ಅಂತು ಮನಸ್ಥಲವಿಡಿಯಲು ಮಾಣಿಕವ ನುಂಗಿ ಜಾತಿ ಧರ್ಮವನುಡುಗಿ, ಭ್ರಾಂತಿ ಭ್ರಮೆಗಳನ್ನು ಸುಟ್ಟು, ಚಿತ್ತ ಭಸ್ಮವ ಧರಿಸಿ, ಅಣಿಮಾದಿ ಗುಣಂಗಳ ಗತಿಯ ಪದವನೇ ಮೀರಿ, ಭ್ರಾಂತಳಿದು ಜ್ಯೋತಿ ಬೆಳಗುತ್ತಿದೆ ಗುಹೇಶ್ವರಾ.

ಟೀಕು : ಪರಮಾತ್ಮ ಸ್ವರೂಪು ತಾನೆಂದರಿಯದೆ ಮತಿಯ ಬಲುಮೆವಿಡಿದು ಆತ್ಮನ ನಿಲವನರಿದೆವೆಂಬುದೆಲ್ಲವು ಮಾತಿನ ಮಥನವಲ್ಲದೆ ನಿಜವಲ್ಲ. ಅದೇನು ಕಾರಣವೆಂದೆಡೆ, ಆ ಮಾತು ಪರಮಾತ್ಮ ತತ್ವಜ್ಞಾನವೆಂಬ ರತ್ನವ ನುಂಗಿ ಉಗುಳದೆ ಇಪ್ಪುದಾಗಿ ಇದೀಗ, ಭೂತಳದ ಮತಿವಂತರು ಆತ್ಮನ ಸ್ಥಲವಿಡಿಯಲು ಮಾತು ಮಾಣಿಕವ ನುಂಗಿತೆಂಬ ಶಬ್ದಕ್ಕರ್ಥ. ಇದರ ಸಕೀಲ ಸಂಬಂಧವನರಿದು ಜಾತಿ ವರ್ಣ ಆಶ್ರಮ ನಾಮ ಗೋತ್ರಂಗಳ ತ್ಯಜಿಸಿ ವ್ರತ ನಿಯಮೋಪಾಸನೆಗಳ ತೊರೆದು ಇತ್ಯಾದಿ ಭ್ರಮೆಯನು ಜ್ಞಾನಾಗ್ನಿಯಲ್ಲಿ ದಹಿಸಿದನೆಂಬುದೀಗ, ಜಾತಿ ಧರ್ಮವ ನುಡುಗಿ ವ್ರತದ ಭ್ರಮೆಗಳ ಸುಟ್ಟು ಅವಶೇಷಿತವಾದ ಚಿದ್ವಿಭೂತಿಯ ಧರಿಸಿದನೆಂಬ ಶಬ್ದಕ್ಕರ್ಥ. ಇಂತು ಅವಶೇಷಿತವಾದ ಚಿದ್ವಿಭೂತಿಯನು ಧರಿಸಲು ಅಣಿಮಾದಿ ಗುಣಂಗಳ ಪರವನು ಮೀರಿ ಸಕಲ ಭ್ರಾಂತಿಯಳಿದು ಪರಂಜ್ಯೋತಿಯಾಗಿ ಆ ಶರಣ ತೊಳಗಿ ಬೆಳಗುತ್ತಿರ್ದನೆಂಬುದೀಗ, ಅಣಿಮಾದಿ ಗುಣಂಗಳ ಗತಿಯ ಪಥವನು ಮೀರಿ ಭ್ರಾಂತಳಿದು ಬೆಳಗುತ್ತದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೬೭೭

(೨) ಆತ್ಮೋಹಂ ಎಂಬರು ತಾವಾತ್ಮವಿತ್ತುಗಳೆಲ್ಲ. ಆತ್ಮನಂತಹನಿಂತಹನೆಂದು ಕಂಡವರುಂಟೇ ಅಯ್ಯಾ ? ಆತ್ಮ ಜ್ಞಾತೋಹಂ ಎಂಬುದಕ್ಕೆ ಶ್ರುತಿ ಪ್ರಮಾಣ ಉಂಟು. ಆತ್ಮನು ವಾಙ್ಮನಕ್ಕಗೋಚರನಯ್ಯಾ. ಆತ್ಮನು ತತ್ವಮಸಿ ವಾಕ್ಯದಿಂದತ್ತತ್ತ. ಆತ್ಮನನರಿದಿಹೆನೆಂಬವರೆಲ್ಲ ಅರೆಮರುಳುಗಳಲ್ಲವೇ ಅಯ್ಯಾ ? ಆತ್ಮ ತಾನಾದವಸ್ಥೆ ನೀರು ನೀರು ಕೂಡಿದಂತೆ. ಆತ್ಮನ ಕಾಂಬಡೆ ಕಾಯವಿಡಿದು ಕಾಣಬಹುದೇ ಅಯ್ಯಾ?

ಆತ್ಮ ಪ್ರಾಣೇಶ ಲಿಂಗ, ಪ್ರಸಾದ ಕಾಯ. ಆತ್ಮನೆಂಬಾತ ನಮ್ಮ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ.

೬೭೮

(೩) ಸತ್ವ ರಜ ತಮವೆಂಬವು ಪ್ರಪಂಚವೆಂದೆಂಬಿರಿ. ಆ ಸತ್ವವೇ ಪರತತ್ವ ಕಾಣಾ. ಉದಯಾಸ್ತಮಾನವೆಂಬ ಒಂದೆರಡೆಣಿಕೆಯ ಉದಯಾಸ್ತಮಾನ ಉಂಟೇ ? ಆತ್ಮವಿತ್ತುವಿಂಗೆ ಉದಕವನುಂಡ ಲೋಹದ ಪರಿಯಂತೆ ಇರಬೇಕು. ಮೂಗ ಕಂಡ ಕನಸ ನೀವು ಬಲ್ಲರೆ ಹೇಳಿರೇ, ಉಪಾಧಿ ಇಲ್ಲದುಪಮೆ, ಭಾವವಿಲ್ಲದ ಭರಿತನು, ಇಂದ್ರಿಯವರತ ಪ್ರಕಾಶ ನೋಡಿರೇ, ಕಾರಣವಿಲ್ಲದ ಕಾರ್ಯ, ಕೇಳಲಿಲ್ಲದ ಉಲುಹು, ಬೇಡಲಿಲ್ಲದ ಪದವಿದು. ತೋರಿ ಆದಿ ಅಂತ್ಯ ಇಲ್ಲದ ತೃಪ್ತಿಯಡಗಿದ ನಿಜಕ್ಕೆ ಪ್ರತಿಯುಂಟೆ ? ನಿಜಭಾವವಳಿದಾತ್ಮ ನಿತ್ಯವೆಂಬುದನು ಎಲ್ಲ ಶ್ರುತಿಗಳಲ್ಲಿ ಕೇಳಿಕೊಳ್ಳಿ. ಸುಖದ ಸೋಂಕಿನ ಪರಿಣಾಮದ ಪದವನು ಕೂಡಲ ಚನ್ನಸಂಗಮನಲ್ಲಿ ಪ್ರಭುವೇ ಬಲ್ಲ.

೬೭೯

(೪) ಪದ್ಮಾಸನದಲ್ಲಿ ಕುಳ್ಳಿರ್ದು ಕುಂಡಲಿಯ ಜ್ಞಾನವನರಿದು ಅಂಡಲೆದು ಅಧೋವಾಯುವನೂರ್ಧ್ವಮುಖವ ಮಾಡಿ ಷಡಂಗುಲವನೆತ್ತಿ ಊರ್ಧ್ವ ವಾಯುವಿನಧೋಮುಖಕ್ಕೆ ತಂದು ಉತ್ತರ ಪೂರ್ವ ದಕ್ಷಿಣಮಂ ನೇತಿಗಳೆದು ಪಶ್ಚಿಮ ಸುಷುಮ್ನೆಯಲ್ಲಿ ಮನ ಶಕ್ತಿಸಂಧಾನಸಂಯೋಗದಿಂದ ಸಹಸ್ರ ದಳ ಕಮಲದಲ್ಲಿ ನಾದ ಭ್ರಮರನೆರಗಿ ಮಹಾವಾಸನಾಮೃತವ ದಣಿಯುಂಡು, ತ್ರಿಸಂಧಾನ ಒಂದಾದ ಬಳಿಕ ಆತ್ಮ ಪರಮಾತ್ಮ ಇಂತಾಗಿ ಮರಳಿ ಅಂತರಾತ್ಮ ವಿಚಾರಕ್ಕೆ ಇಳಿದಲ್ಲಿ ಅಭ್ಯಾಸಕ್ಕೆ ಬರಲಾಗದು. ಅದೆಂತೆಂದೊಡೆ: ದೇವಲೋಕಕ್ಕೆ ಸಂದು ಮರಳಿ ಮಾನವನಪ್ಪಡೆ ಅದೇ ಪಾತಕ. ಹಸಿದವನಮೃತವ ದಣಿಯುಂಡು, ತ್ರಿಸಂಧಾನ ಒಂದಾದ ಬಳಿಕ ಮರಳಿ ಹಸಿದುಂಡಿಹೆನೆಂದಡೆ ಅದೇ ಪ್ರಕೃತಿಗುಣ. ಇದು ಕಾರಣ ಪರಮಾತ್ಮ ತಾನಾದಾತನು ಪರಮಾತ್ಮನಾಗಿ ತನ್ನಲ್ಲಿ ತಾನೇ ಭವಿಸಿರಬೇಕು ಗುಹೇಶ್ವರಾ.

೬೮೦

(೫) ಉದಕದೊಳಗಣ ವಿಕಾರ ಪವನನಿಂದಲ್ಲದೆ ಉದಕ ಸಹಜ ಬೀಜವೆಂದರಿಯಬಹುದೆ ? ದೇಹ ಪ್ರಪಂಚಿಗಳು ವಾಯುವಿನಿಂದಲ್ಲದೆ ದೇಹದಲ್ಲಿ ಬೇರೊಂದು ಗುಣವ ತೋರಿ ಮಂಜಿನ ಉರಿಯ ಬಿಸಿಲಂಬಿನಲ್ಲಿ ಎಚ್ಚಡೆ ಕರ ಹೊಸತಾಯಿತ್ತು, ಸಹಜದ ನಿಲವು ಜೀವ ಪರಮಾತ್ಮನೆಂಬೆರಡನು ನುಡಿಯಲು ಬೇಡ. ನೆನೆವ ಮನ ತಾನೆಯಾಗಿ ತೆರಹಿಲ್ಲದ ಘನ ನೋಡುವ ಮೂರುತಿಯಲ್ಲಿ ಕೇಳುವ ಕೀರ್ತಿಯಲ್ಲಿ ಪರಿಪೂರ್ಣ ಪರಂಜ್ಯೋತಿ ನಿರ್ಗುಣ ಮಹಿಮ ಭಾವವಿಲ್ಲದ ಶಬ್ದವನು ನಮ್ಮ ಕೂಡಲ ಚನ್ನಸಂಗನಲ್ಲಿ ಪ್ರಭುವೇ ಬಲ್ಲ.

೬೮೧

(೬) ಜ್ಞಾತೃ ಜ್ಞಾನವ ನುಂಗಿ, ಜ್ಞಾನವ ಜ್ಞೇಯ ನುಂಗಿ, ಜ್ಞೇಯವು ತನ್ನ ನುಂಗಿ, ತನ್ನ ತಾನರಿದು ಶ್ರವಣ ಮನ ನಿಧಿ ಧ್ಯಾಸಂಗಳಲ್ಲಿಯೇ ತಲ್ಲೀಯವಾಗಿ ಸ್ಥೂಲ ಸೂಕ್ಷ್ಮ ಕಾರಣಂಗಳನೇಕೀಭವಿಸಿ ಒಂದೇ ಸಂಧಾನವಾಗಿ, ಅನ್ಯ ಸಂಧಾನವರತು ಪರಮಾಮೃತವೇ ಆಲಿಂಗನವಾಗಿ, ಆಲಿಂಗನವೇ ಪರಮಾಮೃತವಾಗಿ, ಪ್ರತಿ ಬಿಂಬವು ಅಪ್ರತಿಯಾಗಿರ್ದುದೇ ಭಕ್ತ ಜಂಗಮರೈಕ್ಯ. ಇಂತಿರ್ದುದೇ ಪ್ರಸಾದಿ, ಪ್ರಾಣಲಿಂಗಿ, ಐಕ್ಯ. ಇಂತಿರ್ದುದೇ ಲಿಂಗ ಶರಣನೈಕ್ಯ. ಇಂತಿರ್ದಡೆ ಜೀವ ಪರಮರೈಕ್ಯವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೬೮೨

(೭) ತನ್ನ ತಾನರಿವುದೇ ಪರಮಾತ್ಮಯೋಗ. ತನ್ನ ತಾ ಮರೆವುದೇ ಮಾಯಾ ಸಂಬಂಧ. ಅಂತರಂಗ, ಬಹಿರಂಗ, ಪರಮಾಕಾಶ ಮಧ್ಯದಲ್ಲಿ ಪರಮಾತ್ಮನು ಪರಬ್ರಹ್ಮ ಸ್ವರೂಪನು ನಿತ್ಯ ನಿರಂಜನ ಉಪಮಾತೀತನು ನಿಷ್ಪತ್ತಿ ಕೇವಲ ನಿಃಕಲ ಸ್ವರೂಪನು. ಭ್ರೂಮಧ್ಯದಲ್ಲಿ ಪರಮಾತ್ಮನೇ ಅಂತರಾತ್ಮನೆನಿಸಿ ಸಕಲ ನಿಃಕಲನಾಗಿಪ್ಪನು. ಹೃದಯಸ್ಥಾನದಲ್ಲಿ ಪರಮಾತ್ಮನೇ ಜೀವಾತ್ಮನಾಗಿ ಕೇವಲ ಸಕಲನಾಗಿಪ್ಪನು. ಬ್ರಹ್ಮಸ್ಥಾನದಲ್ಲಿ ನಿಷ್ಕಲ ಗುರುಮೂರ್ತಿ. ಲಿಂಗ ಭ್ರೂಮಧ್ಯದಲ್ಲಿ ನಿಃಕಲ ಪರಂಜ್ಯೋತಿರ್ಲಿಂಗ. ಹೃದಯ ಸ್ಥಾನದಲ್ಲಿ ಕೇವಲ ಸಕಲ ಜಂಗಮಲಿಂಗ. ಇಂತೀ ಪರಮಾತ್ಮನೇ ಅಂತರಾತ್ಮ ಪರಮಾತ್ಮನೆ ಜೀವಾತ್ಮ. ಬಹಿರಂಗದಲ್ಲಿ ಪರಮಾತ್ಮನೇ ಗುರುಲಿಂಗ, ಪರಮಾತ್ಮನೇ ಶಿವಲಿಂಗ, ಪರಮಾತ್ಮನೇ ಜಂಗಮ ಲಿಂಗ. ಇಂತು ಪರಬ್ರಹ್ಮವೇ ಪರಮಾತ್ಮ ಪರಮಾತ್ಮನೇ ಸರ್ವಾತ್ಮ ಪರಮಾತ್ಮನೇ ಸರ್ವಗತ, ಪರಮಾತ್ಮನೇ ಆತ್ಮಗತ. ಇದು ಕಾರಣ ಪರಮಾತ್ಮನೇ ಅಂತರಂಗ ಬಹಿರಂಗಭರಿತ ಪ್ರಾಣಲಿಂಗ. ಇಂತರಿದುದೇ ಪರಮಾತ್ಮಯೋಗ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ಜೀವಾತ್ಮ ಅಂತರಾತ್ಮ ಪರಮಾತ್ಮವೆಂಬ ತ್ರಿವಿಧಸ್ಥಲಂಗಳೇಕಮಾದ ಲಿಂಗವು ಪ್ರಾಣಲಿಂಗಿಯ ನಿರ್ದೇಹದಲ್ಲಿ ಸ್ವಭಾವಚರಿತ್ರವನೈದಿದ ಭೇದವೆಂತಿರ್ದುದೆಂದಡೆ, ಮುಂದೆ ನಿರ್ದೇಹಾಗಮಸ್ಥಲವಾದುದು.

೪. ನಿರ್ದೇಹಾಗಮಸ್ಥಲ

೬೮೩

(೧) ಅಂತರಂಗ ಸನ್ನಿಹಿತ ಬಹಿರಂಗ ನಿಶ್ಚಿತವೋ ಅಯ್ಯ ? ತನು ತನ್ನ ಸುಖ, ಮನ ಪರಮಸುಖ. ಇದು ಕಾರಣ ಕಾಯ ವಾಯವೋ, ಗುಹೇಶ್ವರ ನಿರಾಳವೋ ಅಯ್ಯ ?

ಟೀಕು : ದೇಹ ಕರಣಂಗಳೊಳಗೆ ಇರಿಸಿಕೊಂಡು ಅಂತರಂಗವಾಗಿಪ್ಪ

ಚಿತ್ಪರಮಲಿಂಗವ ಸಮ್ಯಜ್ಞಾನತ್ವದಿಂದ ಕಂಡರಿದು ಶಿವಭಾವ ಘಟಿಸಿತ್ತೆಂಬುದೀಗ, ಅಂತರಂಗ ಸನ್ನಿಹಿತವೆಂಬ ಶಬ್ದಕರ್ಥ. ಅಂತು ಅಂತರಂಗದಲ್ಲಿ ಶಿವಭಾವ ಘಟಿಸಿತ್ತಾಗಿ ಬಹಿರಂಗದ ಕ್ರಿಯೆಯಳವಟ್ಟು ಸಕಲ ದೇಹೇಂದ್ರಿಯಂಗಳೆಲ್ಲವ ಲಿಂಗಕ್ಕರ್ಪಿಸಿ ದೇಹಸಂಸಾರ ನಿರ್ದೇಪಿಯಾದ ಶರಣನೆಂಬುದೀಗ, ಬಹಿರಂಗ ನಿಶ್ಚಿ ತವೋ ಅಯ್ಯ ಎಂಬ ಶಬ್ದಕರ್ಥ. ಅಂತಹ ಶರಣನ ತನುಸುಖವೆಲ್ಲ ಲಿಂಗಕ್ಕಾಗಿ, ಲಿಂಗದ ಪರಮಾನಂದಸುಖವೆಲ್ಲ ಶರಣನ ಮನಕ್ಕಾಗಿ ಹೋಯಿತ್ತೆಂಬುದೀಗ, ತನು ತನ್ನ ಸುಖ ಮನ ಪರಮ ಸುಖವೆಂಬ ಶಬ್ದಕ್ಕರ್ಥ. ಅಂತು ದೇಹೇಂದ್ರಿಯಂಗಳು ಶಿವಾರ್ಪಿತವಾಗಿ ದೇಹವಾಸನೆಯಳಿದು ದಗ್ಧಪಟದಂತಿಪ್ಪ ಹುಸಿದೇಹವಿಡಿದಿರ್ದ ಶರಣನೆಂಬುದೀಗ, ಇದು ಕಾರಣ ಕಾಯವಾಯವೋ ಎಂಬ ಶಬ್ದಕ್ಕರ್ಥ. ಅಂತು ವಾಸನೆ ನಷ್ಟವಾದ ದೇಹವಿಡಿದುಕೊಂಡು ನಿಃಕಲ ಬ್ರಹ್ಮವಾಗಿರ್ದ ಶರಣನೆಂಬು ದೀಗ, ಗುಹೇಶ್ವರ ನಿರಾಳವೋ ಎಂಬ ಶಬ್ದಕ್ಕರ್ಥ.

೬೮೪

(೨) ಮಲಿನ ದೇಹಿಗೆ ಮಜ್ಜನವಲ್ಲದೆ ನಿರ್ಮಲ ದೇಹಿಗೆ ಮಜ್ಜನವೇಕೋ ? ವಿಷಯ ಉಂಟೇ ಲಿಂಗ ನಿಷ್ಪತ್ತಿಯಾದ ಶರಣಂಗೆ ? ಅಗಮ್ಯ ಅಗೋಚರ ಅಪ್ರಮಾಣ ಗುಹೇಶ್ವರಾ.

೬೮೫

(೩) ಯತಿಗೆ ಲಾಂಛನವೇಕೆ ? ಶುಚಿಗೆ ಮೊದಲು ಏಕೆ ? ಕಲಿಗೆ ಕಜ್ಜ ಏಕೆ ? ದಿಟವುಳ್ಳ ಮನಕ್ಕೆ ಆಚಾರವೇಕೆ ? ಸಜ್ಜನಸ್ತ್ರೀಗೆ ಬೇರೆ ನೋಂಪಿ ಏಕೆ ? ಭೃತ್ಯಾಚಾರ ವಿಂಬುಗೊಂಡವರ ಮನವ ಮಹಾಂತ ಸಕಳೇಶ್ವರದೇವ ತಾನೇ ಬಲ್ಲ.

೬೮೬

(೪) ಅಂಗವು ಲಿಂಗದಲ್ಲಿ ಸಂಬಂಧವಾದವರ ಲಿಂಗವೆಂದೇ ಕಾಂಬುದು. ''ಕೀಟೋಪಿ ಭ್ರಮರಾಯತೆ'' ಎಂಬ ನ್ಯಾಯದಂತೆ, ಅಂಗಲಿಂಗ ಸೋಂಕಿ ಲಿಂಗವಾಯಿತ್ತಾಗಿ, ನೀವೆಂದೇ ಕಾಂಬುದು. ಲಿಂಗ ಮುಂತಾಗಿಯೇ ನಡೆ, ಲಿಂಗ ಮುಂತಾಗಿಯೇ ನುಡಿ, ಲಿಂಗ ಮುಂತಾಗಿಯೇ ನೋಡುವವರಾಗಿ ಅಂಗೇಂದ್ರಿಯಂ ಗಳೆಂಬುದಿಲ್ಲ. ಅವೆಲ್ಲವು ಲಿಂಗೇಂದ್ರಿಯಂಗಳಾದವಾಗಿ. ಕಾರಣ ಲಿಂಗವೆಂದೇ ಕಾಂಬುದು. ಸರ್ವಾಂಗಲಿಂಗ ಕೂಡಲ ಚನ್ನಸಂಗಾ ನಿಮ್ಮ ಶರಣ.

೬೮೭

(೫) ಪದಿಗಳ ಪದಂಗಳ ವಿಚಾರಿಸಲು, ಸಾಧಾರಣ ಪ್ರಾಣಿಗಳ ಪದವಿ ಯಿಂದ ಮಾನವರ ಪದವಿ ಶೇಷ. ಮಾನವರ ಪದವಿಯಿಂದ ಮಾನವ ರಾಜಪದ ವಿಶೇಷ. ಆ ರಾಜಪದವಿಯಿಂದ ದಾನವರ ಪದ ವಿಶೇಷ. ದಾನವರ ಪದವಿಯಿಂದ ದೇವಜಾತಿಗಳ ಪದ ವಿಶೇಷ. ದೇವಜಾತಿಗಳ ಪದವಿಯಿಂದ ಇಂದ್ರಪದ ವಿಶೇಷ.

ಇಂದ್ರಪದವಿಯಿಂದ ಬ್ರಹ್ಮಪದ ವಿಶೇಷ. ಬ್ರಹ್ಮಪದವಿಯಿಂದ ವಿಷ್ಣುಪದ ವಿಶೇಷ. ವಿಷ್ಣು ಪದವಿಯಿಂದ ರುದ್ರಪದ ವಿಶೇಷ. ರುದ್ರಪದವಿಯಿಂದ ಲಿಂಗಪದ ವಿಶೇಷ. ಲಿಂಗವಂತನು ಲಿಂಗಕ್ಕೆ ಕರ್ತನಹ ಪದವಿಯಲ್ಲಿರ್ದು ಮಹಾಲಿಂಗವಿಂತು ಅಂತರಂಗ ಬಹಿರಂಗ ಭರಿತವಾಗಿರ್ದ ಬಳಿಕ ಅಲ್ಪಪದವನಾಸೆಗೈದಡೆ ಜ್ಞಾನಿ ಅಲ್ಲ, ಭಕ್ತನಲ್ಲ, ಶರಣನಲ್ಲ, ಲಿಂಗವಂತನಲ್ಲ; ಅವಂಗೆ ಲಿಂಗವಿಲ್ಲವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಇಂತು ನಿರ್ದೇಹ ಚಾರಿತ್ರ್ಯಾತ್ಮಕವಾದ ಲಿಂಗವು ಪ್ರಾಣಲಿಂಗಿಯಲ್ಲಿ ನಿರ್ಭಾವವಾದ ಚರಿತ್ರೆ ಎಂತಿರ್ದುದೆಂದಡೆ ಮುಂದೆ ನಿರ್ಭಾವಸ್ಥಲವಾದುದು.

೫. ನಿರ್ಭಾವಾಗಮಸ್ಥಲ

೬೮೮

(೧) ಮಣ್ಣಿಲ್ಲದ ಹಾಳಮೇಲೆ ಕಣ್ಣಿಲ್ಲದಾತ ಒಂದು ಮಣಿಯ ಕಂಡ. ಕೈಯಿಲ್ಲದಾತ ಪವಣಿಸಿದ. ಕೊರಳಿಲ್ಲದಾತ ಕಟ್ಟಿಕೊಂಡ. ಅಂಗವಿಲ್ಲದ ಸಿಂಗಾರಕ್ಕೆ ಭಂಗ ಉಂಟೇ ಗುಹೇಶ್ವರಾ ?

ಅರ್ಥ : ಮಣ್ಣೆಂದರೆ ದೇಹಕ್ಕೆ ಹೆಸರು. ಅಂತಪ್ಪ ದೇಹ ಧರ್ಮಂಗಳಿಲ್ಲವನು ತನ್ನಿಂದನ್ಯವೆಂದು ಅದೇತರದು ಎಂದು ಅರಿದ ಅರಿವಿಗೆ ಮಣ್ಣಿಲ್ಲದ ಹಾಳ ಮೇಲೆ ಎಂಬ ಶಬ್ದಕ್ಕರ್ಥ.

ಅಂತು ಅರಿದರಿವಿನಲ್ಲಿ ಭಿನ್ನಜ್ಞಾನ ದೃಕ್ಕಿಲ್ಲದ ಅಭಿನ್ನಜ್ಞಾನದಿಂದ ಚಿತ್‌ಪ್ರಭಾ ಲಿಂಗವ ಕಂಡ ಶರಣನೆಂಬುದೀಗ– ಮಣ್ಣಿಲ್ಲದ ಹಾಳಮೇಲೆ ಕಣ್ಣಿಲ್ಲದಾತನೊಂದು ಮಣಿಯ ಕಂಡನೆಂಬ ಶಬ್ದಕ್ಕರ್ಥ. ಅಂತಪ್ಪ ಚಿತ್‌ಪ್ರಭಾವಸ್ತುವ ಭಿನ್ನಭಾವಹಸ್ತವಿಲ್ಲದ ಅಭಿನ್ನಭಾವಹಸ್ತದಿಂದ ಪಿಡಿದು, ಮಹಾನುಭವ ಸೂತ್ರದಿಂದ ಶಿವಲಿಂಗವನಳವಡಿಸಿಕೊಂಡ ಶರಣನೆಂಬುದೀಗ– ಕೈಯಿಲ್ಲದಾತ ಪವಣಿಸಿದನೆಂಬ ಶಬ್ದಕ್ಕರ್ಥ. ಅಂತು ಅವಿರಳಭಾವದಿಂದ ಅಂಗಲಿಂಗವೆಂಬ ಖಂಡಿತವನಳಿದು ಶಿವತತ್ವವಗಳವಡಿಸಿಕೊಂಡು ಲಿಂಗವೆಯಾಗಿರ್ದ ಶರಣನೆಂಬುದೀಗ– ಕೊರಳಿಲ್ಲದಾತ ಕಟ್ಟಿಕೊಂಡನೆಂಬ ಶಬ್ದಕ್ಕರ್ಥ. ಅಂತು ಅಂಗಭಾವವಳಿದು ತಾನೆಲ್ಲ ಲಿಂಗವೆಯಾಗಿರ್ದ ಶರಣಂಗೆ ಹುಟ್ಟುಹೊಂದಿನ ಭಂಗವಿಲ್ಲವೆಂಬುದೀಗ– ಅಂಗವಿಲ್ಲದ ಶೃಂಗಾರಕ್ಕೆ ಭಂಗವುಂಟೆ ಎಂಬ ಶಬ್ದಕ್ಕರ್ಥ.

೬೮೯

(೨) ಆರು ಬಣ್ಣದ ಮೃಗ ತೋ[ರಿ][೧] ಅಡಗಿತ್ತು, ಬಯ[ಲ][೨] ಮೂರು ಲೋಕದೊಳಗೆ ಸಾರಿ, ಹೆಜ್ಜೆಯ ನೋಡಿ, ತೊರೆಯ ಬೆಂಬಳಿವಿಡಿದು ತೋಹಿನಲ್ಲಿ [ಗೆ] ಬಂದಿತ್ತು, ಸೋಹಂ ಸೋಹಮೆನುತಿದ್ದ ಮೃಗವು ಇಹ ಪರವ ಮೀರಿ ನಿಂದಿತ್ತು

೧–೧ ರೇ (ಮೂ) ೨–೨ ಲು (ಮೂ)

ತೋರಲಿಲ್ಲದ ಬಿಲ್ಲು, ಬೇರೆನಿಸದ ಬಾಣ, ಅರುಹಿನ ಕೈಯಲ್ಲಿ ಕುರುಹ ಬಾಣಸವ ಮಾಡಿ ತೆರಹಿಲ್ಲದ ಪಾಕದಲ್ಲಿ ಅಡಿಗೆಯ ಮಾಡಿದನು. ಅಡಿಗೆಯ ಮಾಡಿದ ಬೋ[ನವ][೧] ಅರ್ಪಿತವ ಮಾಡಿದ ಪ್ರಸಾದದಿಂದ ಸುಖಿಯಾದೆ ಗುಹೇಶ್ವರಾ.

ಟೀಕು : ಷಡುವರ್ಣಾತ್ಮಕ ಸ್ವರೂಪವಾಗಿಪ್ಪುದು ಮಾಯೆ. ಆ ಮಾಯೆ ಎಂಬುದು ಅನಿತ್ಯತ್ವವಪ್ಪುದೇ ಕಾರಣವಾಗಿ ತೋರಿ ಅಡಗಿತ್ತು, ಅಡಗಿ ತೋರುತ್ತ ಇಪ್ಪುದೆಂಬುದೀಗ, ಆರು ಬಣ್ಣದ ಮೃಗ ತೋರಿ ಅಡಗಿತ್ತು ಎಂಬ ಶಬ್ದಕ್ಕರ್ಥ. ಆ ಮಾಯೆ ಎಂಬಾ ಮೃಗವನು ಸಂಹಾರ ಮಾಡಿಹೆನೆಂದು ವಿಚಾರಿಸಿ ನೋಡಲು ಆರು ವಿಶ್ವದೊಳಗೆಲ್ಲಿಯು ತಾನೆಯಾಗಿದ್ದಿತ್ತೆಂಬುದನರಿದು ಆ ಮಾಯೆಯು ನಿಂದ ನಿಲವನರಿಯಲು ತೊರೆ ಎಂದರೆ ಹರಿವ ಮನದ ಬಳಿಯಲು ಬಂದು ಆ ಮಾಯಾ ಮೃಗವು ಆ ಶರಣನ ಕಣ್ಣ ಮುಂದೆ ಗುರಿಯಾಗಿದ್ದಿತ್ತೆಂಬುದೀಗ, ಬಯಲ ಮೂರು ಲೋಕದೊಳಗೆ ಸಾರಿ ಹೆಜ್ಜೆಯ ನೋಡಿ, ತೊರೆಯ ಬೆಂಬಳಿವಿಡಿದು ತೋಹಿನಲ್ಲಿಗೆ ಬಂದಿತ್ತೆಂಬ ಶಬ್ದಕ್ಕರ್ಥ. ಅಂತು ಶರಣನ ಕಣ್ಣ ಮುಂದೆ ಸಿಕ್ಕಿದ ಮಾಯಾಭ್ರಾಂತು ಜೀವನನು ಸೋಹಂ ಸೋಹಂಮೆಂಬ ಪದದ ಅಹಂಕಾರದಂತರ್ಗತನಲ್ಲದೆ ಮತ್ತಾರೂ ಇಲ್ಲವೆಂದು ಅಹಂಕಾರವನೈದಿ, ಇಹ ಪರವೆಂಬ ಸುಖವನು ತೋರಲೀಸದೆ ತಾನೇ ಘನವನಾಡಿ ತೋರುತ್ತಿದ್ದನೆಂಬುದೀಗ ಸೋಹಂ ಸೋಹಂಮೆನುತ್ತಿದ್ದ ಮೃಗವು ಇಹಪರವ ಮೀರಿ ನಿಂದಿತ್ತೆಂಬ ಶಬ್ದಕ್ಕರ್ಥ. ಆ ಮಾಯಾಮೃಗವನು ಭಿನ್ನಭಾವವಿಲ್ಲದ ಸದ್ಭಾವವೆಂಬ ಬಿಲ್ಲಿನಲ್ಲಿ ಏಕೋನಿಷ್ಠೆ ಎಂಬ ಭಾವ ತೊಟ್ಟು, ಏಕಾಗ್ರದಿಂದ ಲಕ್ಷಿಸಿ, ಎಸೆದು ಕೆಡಹಲು, ಆ ಮಾಯೆ ಅಳಿದು ಶುದ್ಧವಿದ್ಯೆ ಉಳಿಯಲು ಆ ಸದ್ವಿದ್ಯೆಯ ಕುರುಹನು ಮಹಾಜ್ಞಾನಾಗ್ನಿಯಿಂದ ಸಮರಸ ಸಾರವ ಮಾಡಿದನೆಂಬುದೀಗ, ತೋರಲಿಲ್ಲದ ಬಿಲ್ಲು, ಬೇರೆನಿಸಿದ ಬಾಣ, ಅರುಹಿನ ಕೈಯಲ್ಲಿ, ಕುರುಹ ಬಾಣಸವ ಮಾಡಿ, ತೆರಹಿಲ್ಲದ ಪಾಕದಲ್ಲಿ ಅಡಿಗೆಯ ಮಾಡಿದನ[೨]ಂಬ ಶಬ್ದಕ್ಕರ್ಥ. ಇಂತು ಸಾಮರಸ್ಯವಾದ ಮಹಾಪದಾರ್ಥವನು ಮಹಾ ಲಿಂಗಕ್ಕೆ ಅರ್ಪಿಸಿ ಸೇವ್ಯಪ್ರಸಾದಿಯಾಗಿ ಸುಖಿಯಾದನೆಂಬುದೀಗ, ಅಡಿಗೆಯ ಮಾಡಿದ ಬೋನವ ಅರ್ಪಿತವ ಮಾಡಿದ ಪ್ರಸಾದದಿಂದ ಸುಖಿಯಾದೆ ಗುಹೇಶ್ವರನೆಂಬ ಶಬ್ದಕ್ಕರ್ಥ.

೬೯೦

(೩) ನಿಷ್ಠೆಯುಳ್ಳಾತಂಗೆ ನಿತ್ಯನೇಮವ ಹಂಗೇತಕ್ಕೆ ? ಸತ್ಯವುಳ್ಳಾತಂಗೆ ತತ್ವ ವಿಚಾರದ ಹಂಗೇತಕ್ಕೆ ? ಮನ ಶುದ್ಧವುಳ್ಳಾತಂಗೆ ಮಂತ್ರದ ಹಂಗೇತಕ್ಕೆ ? ಅರಿವುಳ್ಳಾತಂಗೆ ಅಗ್ಗ[ವ]ಣಿಯ ಹಂಗೇತಕ್ಕೆ ? ಕೂಡಲಚನ್ನಸಂಗಯ್ಯ, ನಿಮ್ಮನರಿದಾತಂಗೆ ನಿಮ್ಮ ಹಂಗೇತಕ್ಕೇ ?

೧–೧ ನು (ಮೂ)

೬೯೧

(೪) ಒಂದೇ ಹೂ, ಒಂದೇ ಅಗ್ಗವಣಿ, ಒಂದೇ ಓಗರ, ಒಂದೇ ಪ್ರಸಾದ, ಒಂದೇ ಮನ, ಒಂದೇ ಲಿಂಗ, [೧][ಒಂದೇ][೧] ನಂದಾದೀಪಿಗೆ, ಕುಂದದ ಬೆಳಗು, ಸ್ವತಂತ್ರ ಪೂಜೆ ಒಂದೇ ಅನಾಹತವೆರಡಾಗಿ ಬರುಮುಖರಾಗಿ ಕೆಟ್ಟುಹೋದರು ಗುಹೇಶ್ವರ.

೬೯೨

(೫) ಒಂದೇ ಅರಿವು, ಒಂದೇ ನಡೆ, ಒಂದೇ ಸ್ಥಾನದೊಳಗೆ, ಪ್ರಸಾದ ದಂತುವ ನರಿವಡೆ ನಿಶ್ಚಿಂತ ಪರಶಿವನು ರಾಮನಾಥ.

ಇಂತು ನಿರ್ಭಾವಚರಿತ್ರಾತ್ಮಕಮಾದ ಲಿಂಗವು, ಪ್ರಾಣಲಿಂಗಿಯಲ್ಲಿ ಆವ ಚರಿತ್ರವು ನಷ್ಟವಾಗಿ, ಆಗಮವಿರಹಿತವಾದ ಭೇದವೆಂತಿರ್ದುದೆಂದಡೆ, ಮುಂದೆ ನಷ್ಟಾಗಮಸ್ಥಲವಾದುದು.

೬. ನಷ್ಟಾಗಮಸ್ಥಲ

೬೯೩

(೧) ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ, ಬಯಲ ಜೀವನ, [೨][ಬಯಲ ಭಾವನೆ][೨], ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

ಟೀಕು : ಬಯಲೆಂದರೇನೂ ಅಲ್ಲ. ಪರಶಿವಲಿಂಗವು ತನ್ನ ಲೀಲೆಯಿಂದ ತಂದ ತನ್ನನಿರವಯದ ನಿಜವ, ತನ್ನ ತಾನುದ್ಭವಿಸಿ ಬೆಳೆದು ಅಖಂಡ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಅಂತಾದ ಮಹಾಲಿಂಗವು ತನ್ನ ನಿರವಯದ ನಿಜಭಾವದಲ್ಲಿ ಭರಿತನಾಗಿಪ್ಪನೆಂಬುದೀಗ, ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯಾ ಎಂಬ ಶಬ್ದಕ್ಕರ್ಥ. ಅಂತು ಮಹಾಲಿಂಗಾಕಾರವಾದಲ್ಲಿ ಆ ಲಿಂಗದ ತದಂಶಿಕವೇ ಜೀವಾತ್ಮನೆಂಬ ಅಂಗವಾಯಿತ್ತು ಎಂಬುದೀಗ, ಬಯಲ ಜೀವನವೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಾತ್ಮನಿಗೆ [೩][ಲಿಂ][೩]ಗಭಾವ ಘಟಿಸಿತ್ತೆಂಬುದೀಗ, ಬಯಲಭಾವನೆ ಎಂಬ ಶಬ್ದಕ್ಕರ್ಥ. ಅಂತು ಆತ್ಮನಿಗೆ ಲಿಂಗಭಾವ ಘಟಿಸಿದಲ್ಲಿ ಮಿಥ್ಯಾದೇಹವೆಂಬ ಬಯಲು ಬಯಲಾಗಿ ಹೋಗಿ, ಆತನಲ್ಲಿ ಲಿಂಗವೆಂಬ ಬಯಲಾಯಿತ್ತೆಂಬುದೀಗ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವಭಾವ ಪೂಜಾಕ್ರೀಯಿಂದ ಪ್ರಾಣ ಮನ ಭಾವಂಗಳೆಲ್ಲವು ಲಿಂಗವೆಯಾದಬಳಿಕ, ತಾನೇ ಲಿಂಗವೆಂಬ ಅಭಿನ್ನದರಿವಿನ ವಿಶ್ವಾಸ ಘಟಿಸಿ, ಲಿಂಗವ ಭಿನ್ನವಿಟ್ಟು ಅರಿಯಲಿಲ್ಲದೆ

೧–೧ ಎಂದು (ಮೂ) ೨–೨ ವೆಂಬ (ಮೂ) ೩–೩ ಅಂ (ಮೂ)

ಲಿಂಗವೆಯಾಗಿರ್ದ ಶರಣನೆಂಬುದೀಗ, ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆನೆಂಬ ಶಬ್ದಕ್ಕರ್ಥ.

೬೯೪

(೨) ಮಹಾಮೇರುವಿನ ಮರೆಯಲ್ಲಿರ್ದು ಭೂತದ ನೆಳಲನರಸುವ ಕರ್ಮಿ ನೀ ಕೇಳಾ ! ಆ ಮಹಾಲಿಂಗಕ್ಕೆ ಮಜ್ಜನವೆಂದೇನೋ ? ಪರಿಮಳ ಲಿಂಗಕ್ಕೆ ಪುಷ್ಪವೆಂದೇನೋ ? ಜಗಜ್ಯೋತಿಲಿಂಗಕ್ಕೆ ಧೂಪದೀಪಾರತಿ ಎಂದೇನೋ ? ಅಮೃತಲಿಂಗಕ್ಕೆ ಆರೋಗಣೆ ಎಂದೇನೋ ? ಗುಹೇಶ್ವರಲಿಂಗದಂತುವ ಬಲ್ಲವರಾರೋ ?

೬೯೫

(೩) ಮಜ್ಜನಕ್ಕೆರವಡೆ ನೀನು ಶುದ್ಧ ನಿರ್ಮಲದೇಹಿ. ಪೂಜೆಯ ಮಾಡುವಡೆ ನಿನಗೆ ಗಗನಕಮಳ ಕುಸುಮದ ಅಖಂಡಿತ ಪೂಜೆ. ಧೂಪ ದೀಪಾರತಿಗಳ ಬೆಳಗುವಡೆ ನೀನು ಸ್ವಯಂಜ್ಯೋತಿಪ್ರಕಾಶನು. ಅರ್ಪಿತವ ಮಾಡುವಡೆ ನೀನು ನಿತ್ಯ ತೃಪ್ತನು. ಅಷ್ಟವಿಧಾರ್ಚನೆಯ ಮಾಡುವಡೆ ನೀನು ಮುಟ್ಟಬಾರದ ಘನವೇದ್ಯನು. ನಿತ್ಯ ನೇಮಂಗಳ ಮಾಡುವಡೆ ನಿನಗನಂತನಾಮಂಗಳಾದವು ಗುಹೇಶ್ವರಾ.

೬೯೬

(೪) ಎರಡೆಂಬರಯ್ಯ ಕರಣದ ಕಂಗಳಲ್ಲಿ ನೋಡಿದವರು. ಎರಡುವನತಿಗಳೆದು ಒಂದೆಂಬರಯ್ಯ. ಕಾಮಿಸುವದಿಲ್ಲಾಗಿ ಕಲ್ಪಿಸುವದಿ[೧][ಲ್ಲ][೧] ಭಾವಿಸುವದಿಲ್ಲಾಗಿ ಬಯಸುವದಿ[೧][ಲ್ಲ][೧] ಗುಹೇಶ್ವರನೆಂಬುದಿಲ್ಲಾಗಿ, ಮುಂದೆ ಬಯಲೆಂಬುದೂ ಇಲ್ಲ.

೬೯೭

(೫) ಶ್ವೇತ, ಪೀತ, ಹರಿತ, ಕಪೋತ, ಮಾಂಜಿಷ್ಠ, ಕೃಷ್ಣವೆಂಬ ಷಡುವರ್ಣವೆಂದೆನ್ನ. ಉಂಡು ಉಪವಾಸಿ ಎಂದೆನ್ನ. ಬಳಸಿ ಬ್ರಹ್ಮಚಾರಿ ಎಂದೆನ್ನ. ಲಿಂಗವಿಂತುಂಟೆನ್ನ. ಲಿಂಗೈಕ್ಯವ ನುಡಿಯ. ಅಭಂಗನ ನಿಲವ ಭಂಗಿತ್ತರೆತ್ತ ಬಲ್ಲರು ಗುಹೇಶ್ವರ ?

೬೯೮

(೬) ಸಾರಾಯ ಪದಾರ್ಥವನಾರಯ್ಯ ಅರಿವವರು ? ಆರರಲ್ಲಿ ತೋರಲಿಲ್ಲೆನಿಸಿತ್ತು. ಹೆಸರೆನಿಸಿಕೊಂಬರೆ ಹೆಸರಾಗಿಯೂ ಕುರುಹಿಲ್ಲ. ಹೆಸರೆಲ್ಲವು ಪರಿಣಾಮಿಸಲಾಯಿತ್ತು. ಕಂಡೆನೆಂದಡೆ ಕಾಣಲಾಯಿತ್ತು. ಕಂಡು ನುಡಿಸುವಂತಹದಲ್ಲ. ಕಂಡಾತ ಕಲಿಕೆಯೊಳಗಿಲ್ಲದಂತಿಹ. ಕಾರ್ಯವಿಲ್ಲದ ಕಾರಣ ಕರ್ತ ಮೂರರಿಂದತ್ತತ್ತ. ತಾನಿಲ್ಲೆಂದೆನಿಸಿತ್ತು. ಕೂಡಲ ಚನ್ನಸಂಗಯ್ಯ ಅನು ಮಹಾನುಭಾವ ಶರಣ ಫಲಸಂಬಂಧವ ಮೀರಿತ್ತು.

೧–೧ ಲ್ಲಾಗಿ (ಮೂ)

೬೯೯

(೭) ನೆನೆ ನೆನೆ ಎಂದಡೆ ಏನ ನೆನೆವೆನಯ್ಯಾ ? ಎನ್ನ ಕಾಯವೇ ಕೈಲಾಸ ವಾಯಿತ್ತು, ಎನ್ನ ಮನವೇ ಲಿಂಗವಾಯಿತ್ತು, ಎನ್ನ ತನುವೇ ಸಜ್ಜೆಯಾಯಿತ್ತು, ನೆನೆವಡೆ ದೇವರುಂಟೇ ? ನೋಡುವಡೆ ಭಕ್ತರುಂಟೇ ? ಗುಹೇಶ್ವಲಿಂಗ ಲೀಯವಾಯಿತ್ತು.

೭೦೦

(೮) ಉಟ್ಟುದ ತೊರೆದವಂಗೆ ಊರೇನು, ಕಾಡೇನು ? ನಷ್ಟ ಸಂತಾನಕ್ಕೆ ಕುಲವೇನು ಛಲವೇನು ? ಹುಟ್ಟುಗೆಟ್ಟಾತಂಗೆ ಪುಣ್ಯವೇನು, ಪಾಪವೇನು ? ಅದು ಕೆಟ್ಟುದು ಕೆಟ್ಟುದು. ತನ್ನ ತಾನರಿಯದೆ ಬಟ್ಟಬಯಲಲ್ಲಿ ಬಿದ್ದ ನಮ್ಮ ಅಜಗಣ್ಣ ತಂದೆ.

೭೦೧

(೯) ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ, ಹಾಡಲಿಲ್ಲದ ಸ್ವರ, ಬೇಡಲಿಲ್ಲದ ವರ, [೧][ನೋಡಿರೆ ನಿರಾಳವ][೧] ಬಾಡಲಿಲ್ಲದ ಶಶಿಯ ಬೆಳಗು, ಕೂಡದೆ ಕೂಡಿತ್ತೊಂದು ಸೋಜಿಗವ ಕಂಡೆ ನಾನು. ಇಲ್ಲದುಪಕಾರ ಮೆಲ್ಲದ ಸವಿಯಿಂದ ಸುಖಿಯಾದೆ ಗುಹೇಶ್ವರಾ.

೭೦೨

(೧೦) ಭಾವ ಭಾವಿಸ ಬಲ್ಲುದೇ ? ಭಾವ ಭಾವಿಸಲರಿಯದು. ಅದೇನು ಕಾರಣ ? ಭಾವದಲ್ಲಿ ಭಾವಿಸುವ ಭಾವಿಕ ತಾನಾಗಿ. ನೇತ್ರ ನೋಡ ಬಲ್ಲುದೇ ? ನೇತ್ರ ನೋಡಲರಿಯದು. ಅದೇನು ಕಾರಣ ? ನೇತ್ರದ ಬಾಗಿಲಲ್ಲಿ ನಿಂದು ನೋಡುವಾತ ತಾನಾಗಿ. ಶ್ರೋತ್ರ ಕೇಳ ಬಲ್ಲುದೇ ? ಶ್ರೋತ್ರ ಕೇಳಲರಿಯದು. ಅದೇನು ಕಾರಣ ? ಶ್ರೋತ್ರದ ಬಾಗಿಲಲ್ಲಿ ನಿಂದು ಕೇಳುವಾತ ತಾನಾಗಿ. ನಾಸಿಕ ಪರಿಮಳವ ವಾಸಿಸ ಬಲ್ಲುದೇ ? ವಾಸಿಸಲರಿಯದು. ಅದೇನು ಕಾರಣ ? ನಾಸಿಕದ ಬಾಗಿಲಲ್ಲಿ ನಿಂದು ವಾಸಿಸುವಾತ ತಾನಾಗಿ. ಜಿಹ್ವೆ ರುಚಿಸಬಲ್ಲುದೇ ? ಜಿಹ್ವೆ ರುಚಿಸಲರಿಯದು. ಅದೇನು ಕಾರಣ ? ಜಿಹ್ವೆಯ ಬಾಗಿಲಲ್ಲಿ ನಿಂದು ರುಚಿಯ ನಿಶ್ಚೈಸುವಾತ ತಾನಾಗಿ. ಜಂತ್ರಗಳಾಡ ಬಲ್ಲವೇ ? ಜಂತ್ರಗಳಾಡಲರಿಯವು. ಅದೇನು ಕಾರಣ ? ಜಂತ್ರಗಳನಾಡಿಸುವ ಯಂತ್ರವಾಹಕನಾಗಿ. ಇದು ಕಾರಣ ಕೂಡಲ ಚನ್ನಸಂಗಯ್ಯ, ನಿಮ್ಮ ಶರಣ ಸರ್ವಾಂಗಲಿಂಗಿ.

೭೦೩

(೧೧) ಸಂಕಲ್ಪವೆಂಬ ಸಂಕೋಲೆಯು ಹರಿಯಿತ್ತಯ್ಯ. ಕಾಮವೆಂಬ ಕಂಭ ಕಿತ್ತೀಡಾಡಿತ್ತಯ್ಯ. ಮಾಯೆಯೆಂಬ ಮಾವತಿಗನ ಮೀರಿತ್ತು, ಆಶೆ ಎಂಬ ಅಂಕುಶಕ್ಕೆ ನಿಲ್ಲದು. ಮಾಯಾ ಪಾಶವೆಂಬ ಪಾಯದಳ ಅಂಜಿ ಓಡಿತ್ತು, ಮದಗಜವೆಂಬ ಆನೆ ಉಳಿದ ಬಳಿಕ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ 'ಆನೆ' 'ಆನೆ' ಎಂಬುದೇನೂ ಇಲ್ಲದೆ ಹೋಯಿತ್ತು.

೧–೧ ನೋಡಲಿಲ್ಲದ ನಿರಾಳ (ಮೂ)

೭೦೪

(೧೨) ತಾ ನಡೆದಡೆ ನಡೆಗೆಟ್ಟು ನಡೆಯಬೇಕು. ತಾ ನುಡಿದಡೆ ನುಡಿಗೆಟ್ಟು ನುಡಿಯಬೇಕು. ರೂಹಿಲ್ಲದ ಸಂಗವ ಮಾಡಬೇಕು. ಭಾವವಿಲ್ಲದ ಭಕ್ತಿಯ ಮಾಡಬೇಕು. ತಾನಾವನೆಂದರಿಯದಂತೆ ಗುಹೇಶ್ವರ.

೭೦೫

(೧೩) ಅಂಬರವಿಲ್ಲದ ಮೇರುವ ಅಂಬುಧಿಯಿಲ್ಲದ ಗುಣ್ಪುವ ತಂದವರಿಲ್ಲದೆ ಬಂದಿತ್ತು,[೧] ನಿಜ ಒಳಕೊಂಡಿತ್ತು, ಸಾಧನವಿಲ್ಲದ ಓಗರವ [ಭಾಜನವಿಲ್ಲದೆ ಗಡಣಿಸಿ] ಭೋಜನವಿಲ್ಲದೆ ತೃಪ್ತಿಯಾಯಿತ್ತು ನೋಡಯ್ಯ. ಕ್ರಿಯಾವಿರಹಿತಯೋಗ, ಫಲದಾಯಕಹೀನಭಕ್ತಿ, ಆಯತ ಸ್ವಾಯತವರಿಯದೆ ಹೋಯಿತ್ತು ಗುಹೇಶ್ವರಾ.

೭೦೬

(೧೪) ಮಣ್ಣಿಲ್ಲದ ಹಾಳ ಮೇಲೆ ಕಣ್ಣಿಲ್ಲದಾತನೊಂದು ವಿರಳವಿಲ್ಲದ ಮಣಿಯ ಕಂಡ. ಕೈಯಿಲ್ಲದಾತ ಪವಣಿಸಿದ. ಕೊರಳಿಲ್ಲದಾತ ಕಟ್ಟಿಕೊಂಡ. ಅಂಗವಿಲ್ಲದ ಸಿಂಗಾರಕ್ಕೆ ಭಂಗವುಂಟೆ ಗುಹೇಶ್ವರಾ ?

ಇಂತು ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮವೆಂಬ ತ್ರಿವಿಧ ಸ್ಥಲಂಗಳೇಕಮಾದ ಲಿಂಗವು, ಪ್ರಾಣಲಿಂಗಿಯಲ್ಲಿ ಸುಖಪ್ರಸಾದಸ್ವರೂಪವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಆದಿಪ್ರಸಾದಿಸ್ಥಲವಾದುದು.

೭. ಆದಿಪ್ರಸಾದಿಸ್ಥಲ

೭೦೭

(೧) ಮದ್ದ ನಂಬಿಕೊಂಡರೆ ರೋಗ ಹೋಗದಿಹುದೇ ? ಸಜ್ಜನಿಕೆಯುಳ್ಳರೆ ಪ್ರಸಾದಕಾಯ ಕೆಡುವುದೇ ? ಪ್ರಾಣಲಿಂಗವಾದರೆ ಪ್ರಾಣ ಬೇರಿಪ್ಪುದೇ? ಪ್ರಾಣಲಿಂಗ ಪ್ರಸಾದವ ತಿಳಿದು ನೋಡಿ, ನಾದ, ಬಿಂದು, ಕಳೆಯದ ಮುನ್ನ ಆದಿಯ ಪ್ರಸಾದವ ಭೇದಿಸಿಕೊಂಡರು ಗುಹೇಶ್ವರಾ ನಿಮ್ಮ ಶರಣರು.

ಟೀಕು : ಸಜ್ಜನ, ಸದ್ಭಾವ, ಸದಾಚಾರದಿಂದ ಕಾಯದ ಪೂರ್ವಾಶ್ರಯವ ಕಳೆದು ಲಿಂಗವೇದಿಯಾಗಿ, ಸರ್ವಾಂಗ ಪ್ರಸಾದ ಕಾಯವಾದ ಬಳಿಕ ಆ ಕಾಯಕ್ಕೆ ಕೇಡಿಲ್ಲವಾಗಿ ಮದ್ದ ನಂಬಿಕೊಂಡರೆ ರೋಗ ಹೋಗದಿಹುದೇ, ಸಜ್ಜನಿಕೆಯುಳ್ಳರೆ ಪ್ರಸಾದಕಾಯ ಕೆಡುವುದೇ ಎಂಬ ಶಬ್ದಕ್ಕರ್ಥ. ಆ ಕಾಯದಲ್ಲಿ ಪ್ರಾಣವೇ ಲಿಂಗವಾಗಿ ಇದ್ದ ಬಳಿಕ ಬೇರೆ ಮತ್ತೆ ವಾಯುಪ್ರಾಣವಿಲ್ಲವೆಂಬುದೀಗ ಪ್ರಾಣಲಿಂಗವಾದರೆ ಪ್ರಾಣ ಬೇರಿಪ್ಪುದೇ ಎಂಬ ಶಬ್ದಕ್ಕರ್ಥ. ಅದು ಕಾರಣ ಪ್ರಾಣಲಿಂಗ ಪ್ರಸಾದವನು ತಿಳಿದು ನೋಡಿ ಅರ್ಪಿತವಿಲ್ಲದ ಮುನ್ನವೇ ಅನರ್ಪಿತ ಪ್ರಸಾದವಾಗಿಪ್ಪ

೧+ ನಿಂದಂತೆ (ಮೂ)

ಆದಿಪ್ರಸಾದವನು ನಾದ ಬಿಂದು ಕಳೆ ಎಂಬ ಶಿವಶಕ್ತಿ ಕಳೆಯದ ಮುನ್ನವೇ ಲಿಂಗಕ್ಕೆ ಅರ್ಪಿತವ ಮಾಡಿ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿದ್ದನೆಂಬುದೀಗ, ಪ್ರಾಣಲಿಂಗ ಪ್ರಸಾದವ ತಿಳಿದು ನೋಡಿ ನಾದ ಬಿಂದು ಕಳೆಯದ ಮುನ್ನ ಆದಿಯ ಪ್ರಸಾದವ ಭೇದಿಸಿಕೊಂಡರು ಗುಹೇಶ್ವರಾ ನಿಮ್ಮ ಶರಣರು ಎಂಬ ಶಬ್ದಕ್ಕರ್ಥ.

೭೦೮

(೨) ಮಾರ್ಗಕ್ರಿಯೆ ಸಂಪಾದಿಸನಾಗಿ ದ್ವೈತಿಯಲ್ಲ. ಮೀರಿದ ಕ್ರಿಯೆ ಸಂಪಾದಿಸನಾಗಿ ಅದ್ವೈತಿಯಲ್ಲ. ಮೀರಿ ಜಾರ ಹದುಳಿಗನಾಗಿ ಸ್ವರ್ಗಿಯಲ್ಲ, ಅಪವರ್ಗಿಯಲ್ಲ. ಕೂಡಲಚನ್ನಸಂಗಯ್ಯನಲ್ಲಿ ಸ್ವಾಯತವಾದ ನಮ್ಮ ಗುರು ಬಸವಣ್ಣನು.

೭೦೯

(೩) ಶಿವ ಕ್ಷೇತ್ರದಲಾದ ಪದಾರ್ಥವ ಕಿಂಕಲದಿಂದ ಅತಿ ಪ್ರೇಮದಿಂದ ತನು ಮುಟ್ಟಲೀಯದೆ. ಮನಮುಟ್ಟಲೀಯದೆ, ನಾಸಿಕ ಮುಟ್ಟಲೀಯದೆ, ಲಿಂಗಾರ್ಪಿತವ ಮಾಡುವುದು. ಆ ಪ್ರಸಾದವ ಸತಿಸುತಾದಿಗಳಿಗೆನ್ನದೆ, ಭೃತ್ಯಾಚಾರದಲ್ಲಿ ಗ್ರಹಿಸುವುದು. ಪ್ರಸಾದ ಬೀಸರವಾದರೆ ಭಕ್ತಿ ಸಹಜವಾಗದು. ನಿಮಗೆಂದಿಗೂ ದೂರ ಕೂಡಲಚನ್ನಸಂಗಯ್ಯ.

೭೧೦

(೪) ಅರಸು ಮನೆಯೊಳಗಿರ್ದಲ್ಲಿ ಬಾಗಿಲಿಗೆ ಪದಾರ್ಥವ ತಂದು ಅರ್ಪಿತವೆಂದರೆ ಅರ್ಪಿತವಹುದೇ ? ಅವಸರಕ್ಕೆ ಬಂದ ಪದಾರ್ಥವ ಅರ್ಪಿತವ ಮಾಡಿ, ಅಶನಕ್ಕೆ ಬಂದ ಪದಾರ್ಥವ ಸಲ್ಲಿಸಿದಡೆ, ಆತ ಲಿಂಗಪ್ರಸಾದಿಯಲ್ಲ. ತನ್ನ ಲಿಂಗಕ್ಕೆ ಬಾರದ ರುಚಿಯು ಕೃತ ಕಿಲ್ಬಿಷವೆಂದುದು ಕೂಡಲಚನ್ನಸಂಗನ ವಚನ.

೭೧೧

(೫) ಪ್ರಸಾದವೆಂದು ಪ್ರಸಾದಿಗಳೆಂದು ಪ್ರಸಾದವ ಕೊಂಡೆವೆಂದು ನುಡಿವುತಿರ್ಪರು. ಇನ್ನೆಂತಯ್ಯ ? ಶಿವಾಶಿವಾ, ಅರ್ಪಿತವಿಲ್ಲದೆ ಪ್ರಸಾದವಾದ ಪರಿ ಎಂತಯ್ಯ ? ಆವಾವ ಪದಾರ್ಥಂಗಳನು ಆವಾವ ದ್ರವ್ಯಂಗಳನು ಹೇಗೆ ಹೇಗೆ ಅರ್ಪಿಸುವಿರಿ ಹೇಳಿರಣ್ಣಾ ! ಪ್ರಸಾದ ಹೇಗಾದುದು ಹೇಳಿರೇ, ಶಬ್ದ, ಸ್ಪರ್ಶ, ರೂಪು, ರಸ, ಗಂಧಂಗಳನು ಹೇಗೆ ಹೇಗೆ ಅರ್ಪಿಸುವಿರಿ ಹೇಳಿರೇ. ಅದು ಹೇಗೆ ಅರ್ಪಿಸಬಹುದು ? ಪ್ರಸಾದವಲ್ಲದೆ ಕೊಳ್ಳೆನೆಂಬವರು ಅರ್ಪಿಸುವುದಂತಿರಲಿ ಮುನ್ನ ಪ್ರಸಾದಿಗೆ ಅನರ್ಪಿತವ ನೆನೆವ ಪರಿ ಎಂತೋ ? ಅನರ್ಪಿತವ ನೋಡುವ ಪರಿ ಎಂತೋ ? ಅನರ್ಪಿತವ ಕೇಳುವ ಪರಿ ಎಂತೋ ? ರುಚಿಸುವ ಪರಿ ಎಂತೋ ? ಅನರ್ಪಿತವ ಸ್ಪರ್ಶಿಸುವ ಪರಿ ಎಂತೋ ? ನೆನೆಯಬಾರದು ನೋಡಬಾರದು, ಕೇಳಬಾರದು, ವಾಸಿಸಬಾರದು, ರುಚಿಸಬಾರದು, ಮುಟ್ಟಬಾರದು. ಶಿವಶಿವಾ,

ತೊಡಕು ಬಂದಿತ್ತಲ್ಲಾ ! ಅನರ್ಪಿತವ ಕೊಳ್ಳಬಾರದು. ಅರ್ಪಿಸಿದ ಪ್ರಸಾದವ ಕೊಳ್ಳಬೇಕು. ಇನ್ನೆಂತಯ್ಯ ? ಅವಾವನು ಪ್ರಸಾದಿಗೆ ಅನರ್ಪಿತವ ನೆನೆಯಬಾರದು. ಅರ್ಪಿಸುವ ಪರಿ ಇನ್ನೆಂತಯ್ಯ, ವರ್ಮ ಜ್ಞಾನಾಗದನ್ನಕ್ಕ, ಭಾವ ಶುದ್ಧವಾಗದನ್ನಕ್ಕ ಆ ಲಿಂಗವಂತನು ಲಿಂಗಪ್ರಾಣವಾಗದನ್ನಕ್ಕ, ಮಹಾನುಭಾವರ ಸಂಗವಿಲ್ಲದನ್ನಕ್ಕ ? ಇದು ಕಾರಣ ವರ್ಮಜ್ಞಾನವಾಗಿ ಭಾವ ಶುದ್ಧವಾಗಿ ಲಿಂಗ ಪ್ರಾಣವಾಗಿ ಮಹಾನುಭಾವರಸಂಗದಿಂದರಿದು ಅರ್ಪಿಸಿದ ಪ್ರಸಾದವಕೊಂಡು ಮುಕ್ತರಪ್ಪುದಯ್ಯ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

೭೧೨

(೬) ಲಿಂಗಕ್ಕೆ ಕೊಟ್ಟು ಕೊಂಡರೆ ಪ್ರಸಾದಿ. ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ. ಇದೇ ಪ್ರಸಾದದಾದಿ ಕಂಡಯ್ಯ. ಮುನ್ನಾದಿಯ ಪ್ರಸಾದವ ಭೇದಿಸಬಲ್ಲಡೆ ಇದೇ ಕಂಡಯ್ಯ. ಲಿಂಗಕ್ಕೆ ಕೊಡದೆ ಜಂಗಮಕ್ಕೆ ನೀಡದೆ ಕೊಂಡಡೆ ಹುಳುಗೊಂಡದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

೭೧೩

(೭) ಬಯಸಿ ಬಂದುದು ಅಂಗಭೋಗ. ಬಯಸದೆ ಬಂದುದು ಲಿಂಗಭೋಗ. ಅಂಗಭೋಗ ಅನರ್ಪಿತ. ಲಿಂಗಭೋಗ ಪ್ರಸಾದ. ಬೇಕೆಂಬುದು ಕಾಯಗುಣ. ಬೇಡೆಂಬುದು ವೈರಾಗ್ಯ. ಬೇಕೆಂಬುದು ಅಲ್ಲ, ಬೇಡೆಂಬುದು ಅಲ್ಲ. ಈ ಉಭಯ ವನತಿಗಳೆದು ಭೋಗಿಸಬಲ್ಲ ಕೂಡಲ ಚನ್ನಸಂಗಾ ನಿಮ್ಮ ಶರಣ.

೭೧೪

(೮) ಪ್ರಾಣಲಿಂಗದಲ್ಲಿ ಪ್ರವೇಶಿಯಾಗಿ, ಪ್ರಸಾದದಲ್ಲಿ ಸನ್ನಿಹಿತನಯ್ಯ, ಲಿಂಗಾರ್ಪಿತವಲ್ಲದೆ ಅನರ್ಪಿತವ ಮುಟ್ಟಲೀಯನಯ್ಯ. ಅಂಗಗುಣಂಗಳೆಲ್ಲವ ಕಳೆದು ಪ್ರಸಾದ ಬ್ರಹ್ಮಚಾರಿ ಕೂಡಲಚೆನ್ನಸಂಗಯ್ಯನಲ್ಲಿ [೧][ಬಸವಣ್ಣನು][೧].

೭೧೫

(೯) ಪ್ರಾತಃಕಾಲದಗ್ರೋದಕವ ತಂದು, ಅಂಗದನುವನರಿದು, ಪಾದೋದಕವ ತಪ್ಪದೆ ಕೊಂಬನು. ತನ್ನವಸರವೆಂದರಿಯದೆ ಲಿಂಗದವಸರವೆಂದರಿತು ಮಹಾಮಜ್ಜನಾದಿಗಳಂ ಮಾಡಿಸಿ, ಪ್ರಸಾದದರಿವನೊಮ್ಮೆ ಅರಿವನು. ಇದು ಕಾರಣ ಕೂಡಲಚನ್ನಸಂಗಯ್ಯಾ, ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆ.

೭೧೬

(೧೦) ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸಾದವೆಂತುಂಟೆಂದು ಬೆಸಗೊಂಡಡೆ ಹೇಳಿಹೆ ಕೇಳಿರಿ. ಶುದ್ಧಪ್ರಸಾದ [೨][ಗುರು][೨] ಮುಖದಿಂದ ಬಂದುದು. ಸಿದ್ಧಪ್ರಸಾದ [೩][ಲಿಂಗ][೩] ಮುಖದಿಂದ ಬಂದುದು. ಪ್ರಸಿದ್ಧಪ್ರಸಾದ [೪][ಜಂಗಮ][೪]ದಿಂದ ಬಂದುದು.

೧–೧ ಚೆನ್ನಬಸವಣ್ಣನು (ಮೂ) ೨–೨ ಲಿಂಗ (ಮೂ) ೩–೩ ಜಂಗಮ (ಮೂ) ೪–೪ ಗುರು (ಮೂ)

ಇದರೊಳಗಾವುದು ಘನವೆಂಬೆ, ಆವುದು ಕಿರಿದೆಂಬೆ ? ಘನಕ್ಕೆ ಘನವಾದ ಮಹಾಘನ ಪ್ರಸಾದವು. ಗುರುಪ್ರಸಾದದಿಂದ ತನುಶುದ್ಧವಾಯಿತ್ತು, ಲಿಂಗಪ್ರಸಾದದಿಂದ ಮನಶುದ್ಧವಾಯಿತ್ತು, ಜಂಗಮಪ್ರಸಾದದಿಂದ [೧][ಭಾವ][೧] ಶುದ್ಧವಾಯಿತ್ತು, ಶರಣ ಸಂಗದಿಂದ ಪ್ರಸಾದ ಸಾಧ್ಯವಾಯಿತ್ತು, ಇದು ಕಾರಣ ಕೂಡಲಚನ್ನಸಂಗಯ್ಯ ಇಂತೀ ತ್ರಿವಿಧ ಪ್ರಸಾದವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು.

ಇಂತು ಶುದ್ಧಮುಖದಿಂದ ಆದಿಪ್ರಸಾದವನೈದಿದ ಲಿಂಗವು, ಪ್ರಾಣಲಿಂಗಿಯಲ್ಲಿ ಸಿದ್ಧಮುಖದಿಂದ ಅಂತ್ಯಪ್ರಸಾದವನೈದಿದ ಭೇದವೆಂತಿರ್ದುದೆಂದಡೆ, ಮುಂದೆ ಅಂತ್ಯಪ್ರಸಾದಿಸ್ಥಲವಾದುದು.

೮. ಅಂತ್ಯಪ್ರಸಾದಿಸ್ಥಲ

೭೧೭

(೧) ಆತ್ಮ ಲಿಂಗ, ಪರಮಾತ್ಮ ಜಂಗಮ, ತನುಮಧ್ಯ ಪ್ರಸಾದವಾಯಿತ್ತು, ನಿಶ್ಚಿಂತ ನಿವಾಸವಾಯಿತ್ತು, ಕೂಡಲಚನ್ನಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು.

ಟೀಕು : ಗಣಸಮ್ಮೇಳದಿಂ ಶ್ರೀಗುರು ಇಷ್ಟಲಿಂಗ ಕಳಾಸಂಬಂಧವ ಜೀವಾತ್ಮರಿಗೆ ಸಂಬಂಧವ ಮಾಡಿ, ಜೀವಭಾವವಳಿದು ಶಿವಾತ್ಮನಂ ಮಾಡಿದರಾಗಿ ಆತ್ಮಲಿಂಗನೆಂಬ ಶಬ್ದಕ್ಕರ್ಥ. ಅಂತು ಜೀವಭಾವವಳಿದು ತನ್ನನೆಲ್ಲ ಲಿಂಗವೆಂದೇ ಕಂಡ, ಪರಮ ಚೈತನ್ಯ ಜ್ಞಾನಸ್ವರೂಪ ಜಂಗಮನೆಂಬುದೀಗ, ಪರಮಾತ್ಮ ಜಂಗಮನೆಂಬ ಶಬ್ದಕ್ಕರ್ಥ. ಅಂತು ಅರಿವ ಪರಮ ಚೈತನ್ಯಜ್ಞಾನವೇ ಜಂಗಮವಾಗಿ ಅರುಹಿಸಿಕೊಂಬ ಜೀವಾತ್ಮನೆಲ್ಲ ಲಿಂಗವಾಗಿರ್ದ ಶರಣನ ದೇಹ ಸುಖಂಗಳನರಿದು ಅರ್ಪಿಸುವ ಅರಿವೆಲ್ಲ ಜಂಗಮವ ಅರ್ಪಿಸಿಕೊಂಡು ಭೋಗಿಸುವದೆಲ್ಲ ಲಿಂಗವಾದ ಕಾರಣ, ಅರ್ಪಿತವಾದ ದೇಹಾದಿ ಸುಖಂಗಳೆಲ್ಲ ಲಿಂಗವಾದವೆಂಬುದೀಗ, ತನು ಮಧ್ಯ ಪ್ರಸಾದವಾಯಿತ್ತು ಎಂಬ ಶಬ್ದಕ್ಕರ್ಥ. ಅಂತು ಜೀವ–ಭಾವವಳಿದು ದೇಹ ಲಿಂಗವಾದ ಬಳಿಕ, ಭಾವಬಂಧನದ ಚಿಂತೆ ಹೋಗಿ, ನಿಶ್ಚಿಂತ ನಿವಾಸವಾಯಿತ್ತು ಶರಣಂಗೆ. ಅಂತಾದ ನಿಶ್ಚಿಂತ ಸುಖವು ನಿಮ್ಮ ಶರಣರ ಅನುಭಾವಸಂಗದಿಂದ ಲೆಂಬುದೀಗ, ನಿಶ್ಚಿಂತ ನಿವಾಸ ಲಿಂಗದಲಾಯಿತ್ತು, ಕೂಡಲ ಚನ್ನಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು ಎಂಬ ಶಬ್ದಕ್ಕರ್ಥ.

೭೧೮

(೨) ಭಕ್ತಿಯ ಪರಿಯನರಿಯಿರಿ. ಭಕ್ತರಾದ ಪರಿ ಎಂತಯ್ಯ ? ಭಾವಶುದ್ಧವಿಲ್ಲ; ಮಹೇಶ್ವರರೆಂತಪ್ಪರಯ್ಯಾ? ಅರ್ಪಿತದನುವನರಿದು ಅರ್ಪಿಸಲರಿಯಿರಿ. ಪ್ರಸಾದವ ಅವಗ್ರಹಿಸುವ ಪರಿ ಎಂತಯ್ಯ ? ಈ ಷಟ್‌ಸ್ಥಲದ ಮರ್ಮವನಾರಿಗೂ ಅರಿಯಬಾರದು. ಈ ಕ್ರಿಯಾ ಕರ್ಮವನರಿದಾತ ಪ್ರಸಾದಿ ಕೂಡಲ ಚನ್ನಸಂಗಯ್ಯ.

೧–೧ ಒಳ (ಮೂ)

೭೧೯

(೩) ತನು [೧][ಹೊರ][೧]ಗಿರಲು ಪ್ರಸಾದ [೨][ಒಳ][೨]ಗಿರಲು ಏನಯ್ಯ ? ನಿಮ್ಮ ಮನಕ್ಕೆ ಮನ ನಾಚದಯ್ಯಾ. ಪ್ರಾಣ[೩][ಕ್ಕೆ][೩] ಪ್ರಸಾದವ ಕೊಂಡೊಡೆ ವ್ರತಕ್ಕೆ ಭಂಗ ಗುಹೇಶ್ವರಾ.

೭೨೦

(೪) ಅಚ್ಚಪ್ರಸಾದಿಗಳೆಂದು ನಿಚ್ಚ ನಿಚ್ಚ ಹುಸಿದು, ವಾಯು ಬೀಸುವಲ್ಲಿ ಬಯಲು ಬೆರಸುವಲ್ಲಿ ಅಂಗಕ್ಕೆ ಬಂದ ಸುಖವು ಲಿಂಗ ವಿರಹಿತವಾದಡೆ, ಸ್ವಯ ವಚನ ವಿರೋಧ. ಸಕಳೇಶ್ವರದೇವನಾಳಿವಾಡಿ ಕಾಡುವ.

೭೨೧

(೫) ಅಚ್ಚಪ್ರಸಾದಿಗಳೆಂದು ನಿಚ್ಚ ಹುಸಿದು ತಮ್ಮ ಮನದ ಹವಣಿಕೆಗೆ ಗಡಣಿಸಿಕೊಂಡುಂಬರಯ್ಯ. ತನು ಮನ ಮುಟ್ಟಿದೋಗರ ಲಿಂಗಾರ್ಪಿತವಲ್ಲ ಅನರ್ಪಿತ. ಅಂತದನುಂಡು ಅಚ್ಚಪ್ರಸಾದಿಗಳೆಂಬರಯ್ಯ. ಲಿಂಗದಲ್ಲಿ ಸಮ್ಯಕ್ ಶರಣರು ಮೆಚ್ಚರು. ಬಂದ ಪದಾರ್ಥವ ಕೂಡಲಚನ್ನಸಂಗಯ್ಯಂಗರ್ಪಿಸಿ ಕೊಳಬಲ್ಲಾತನೇ ಅಚ್ಚಪ್ರಸಾದಿ.

೭೨೨

(೬) ಘನವೆಂಬ ಮನದ ತಲೆವಾಗಿಲಲ್ಲಿ ಸದಾ ಸನ್ನಿಹಿತವಾಗಿಪ್ಪೆಯಯ್ಯ. ಸಕಲ ಪದಾರ್ಥಗಳ ಪೂರ್ವಾಶ್ರಯವ ಕಳೆದು ಬಹ ಸುಖಂಗಳ ಅವಧರಿಸುತ್ತಿಪ್ಪೆಯಯ್ಯ. ನಿಮ್ಮ ಮುಟ್ಟಿ ಬಂದಲ್ಲದೆ, ಎನ್ನ ಮುಖಕ್ಕೆ ಬಾರದೆಂಬುದಕ್ಕೆ ಎನ್ನ ಮನಕ್ಕೆ ನೀವೇ ಸಾಕ್ಷಿ ಕೂಡಲಚನ್ನಸಂಗಮದೇವಾ. ಲಿಂಗಮುಟ್ಟದೆ ಮುಟ್ಟೆನಯ್ಯ, ಅನರ್ಪಿತವೆಂದು ಮುಟ್ಟಿ ಲಿಂಗಕ್ಕೆ ಮಾಡಲಿಲ್ಲಾಗಿ. ತಟ್ಟನೆ ಮುಟ್ಟದೆ ಮನ ಸೋಂಕದೆ, ಅನುವಿನ ಲಿಂಗಕ್ಕೆ ಮಾಡಬೇಕು. ಕೊಟ್ಟು ಕೊಂಬ ಭೇದವ ಕೂಡಲಚನ್ನಸಂಗಯ್ಯನಲ್ಲಿ ಮಹಾಪ್ರಸಾದಿಯೇ ಬಲ್ಲ.

೭೨೩

(೭) ರುಚಿ ಎಂದಡೆ ರೂಪಾಯಿತ್ತು, ಸವಿ ಎಂದಡೆ ಸಂದಾಯಿತ್ತು, ರುಚಿ ಎಂದಡೆ, ರೂಪೆಂದಡೆ, ಭವ ಹಿಂಗದು ನೋಡಾ. ರುಚಿ ಎನ್ನದೆ, ರೂಪೆನ್ನದೆ, ಸಂದೆನ್ನದೆ, ಪ್ರಸಾದಿಗೆ ನಮೋ ನಮೋ ಎಂಬೆನು. ಕೂಡಲಚನ್ನಸಂಗಯ್ಯನಲ್ಲಿ ಮಹಾಪ್ರಸಾದಿಯೇ ಬಲ್ಲ.

೭೨೪

(೮) ಅಂಗವಿಕಾರವಳಿದು ಸತಿಸಂಗವರಿಯ ನೋಡಾ. ದೇಹಗುಣಂಗಳಳಿದು

೧–೧ ಒಳ (ಮೂ) ೨–೨ ಹೊರ (ಮೂ) ೩–೩ ಲಿಂಗದಲ್ಲಿ (ಮೂ)

ನಿರ್ದೇಹಿ ಪ್ರಸಾದಿ ನೋಡಾ. ಅಶನ ವ್ಯಸನಾದಿಗಳೆಲ್ಲ ಇರಲಂಜಿಹೋದವು ನೋಡಾ. ಇವೆಲ್ಲ ಗುಣಂಗಳಳಿದು ಕೂಡಲಚನ್ನಸಂಗಯ್ಯನಲ್ಲಿ ಪ್ರಸಾದಿ ನೋಡಾ.

೨೫೫

(೯) ಭಾವದ ಕೊನೆಯ ಮೊನೆಯ ಮೇಲೆ ದೃಷ್ಟಿ ಸಂದಿಸಿ ಪದಾರ್ಥದ ಪೂರ್ವಾಶ್ರಯವ ಕಳೆದನು ಶರಣನು. ಮನ ಮುಟ್ಟಲೀಯದೆ ಸ್ವಾಮಿ ಭೃತ್ಯ ಸಂಬಂಧಕ್ಕೆ ದೂರವೆಂದು ಭಕ್ತರ ಕೈ ಮುಟ್ಟಿದಲ್ಲಿ ಪಾವನವೆಂಬ ಶಬ್ದ ಸಂದಣಿಯಲ್ಲಿ ಹೋಗದು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಆರೂಢ ಪ್ರಸಾದಿಯ ಪ್ರಸಾದಿಯಾದೆನು.

ಇಂತು ಸಿದ್ಧಮುಖದಿಂದ ಅಂತ್ಯಪ್ರಸಾದ ಸ್ವರೂಪವನೈದಿದ ಲಿಂಗವು ಪ್ರಾಣಲಿಂಗಿಯಲ್ಲಿಪ್ರಸಿದ್ಧ ಮುಖದಿಂದ ತೃಪ್ತಿಯನೈದಿದ ಭೇದವೆಂತಿರ್ದುದೆಂದಡೆ ಮುಂದೆ ಸೇವ್ಯಪ್ರಸಾದಿಸ್ಥಲವಾದುದು.

೯. ಸೇವ್ಯ ಪ್ರಸಾದಿಯಸ್ಥಲ

೨೫೬

(೧) ಆದಿಕುಳ ಸನ್ಮತವಾದ ಏಕಾದಶಪ್ರಸಾದದ ಭೇದವ ತಿಳವಡೆ, ಪ್ರಥಮದಲ್ಲಿ ಗುರುಪ್ರಸಾದ, ದ್ವಿತೀಯದಲ್ಲಿ ಲಿಂಗಪ್ರಸಾದ, ತೃತೀಯದಲ್ಲಿ ಜಂಗಮಪ್ರಸಾದ, ಚತುರ್ಥದಲ್ಲಿ ಪ್ರಸಾದಿಯ ಪ್ರಸಾದ, ಪಂಚಮದಲ್ಲಿ ಆಪ್ಯಾಯನ ಪ್ರಸಾದ, ಷಷ್ಠಮದಲ್ಲಿ ಸಮಯಪ್ರಸಾದ, ಸಪ್ತಮದಲ್ಲಿ ಪಂಚೇಂದ್ರಿಯವಿರಹಿತ ಪ್ರಸಾದ, ಅಷ್ಟಮದಲ್ಲಿ ಅಂತಃಕರಣಚತುಷ್ಟಯವಿರಹಿತಪ್ರಸಾದ, ನವಮದಲ್ಲಿ ಸದ್ಭಾವಪ್ರಸಾದ, ದಶಮದಲ್ಲಿ ಸಮತೆಪ್ರಸಾದ, ಏಕಾದಶದಲ್ಲಿ ಜ್ಞಾನಪ್ರಸಾದ, ಇಂತೀ ಏಕಾದಶಪ್ರಸಾದಸ್ಥಲವನತಿಗಳೆದ ಕೂಡಲಚನ್ನಸಂಗಯ್ಯನಲ್ಲಿ ಐಕ್ಯ ಪ್ರಸಾದಿಗೆ ನಮೋ ನಮೋ ಎಂಬೆನು.

ಟೀಕು : ಜ್ಞಾನೋದಯವಾಗಿ ಗುರುವನರಸುವಾತಂಗೆ ಗುರು ಕರುಣಿಸಿ ಪ್ರಸನ್ನವಾದುದೀಗ, ಪ್ರಥಮವಾದ ಕಾರಣ ಪ್ರಥಮದಲ್ಲಿ ಗುರುಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಗುರುಕಾರುಣ್ಯವಾದಲ್ಲಿ ಮಹಾಲಿಂಗವು ಕರಸ್ಥಲಕ್ಕೆ ಬಂದು ಪ್ರಸನ್ನವಾದುದು ಎರಡನೆಯದೆಂಬುದೀಗ, ದ್ವಿತೀಯದಲ್ಲಿ ಲಿಂಗಪ್ರಸಾದವೆಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗಕಳಾಚೈತನ್ಯವೇ ಜಂಗಮವಾದ ಕಾರಣ ಆ ಲಿಂಗಕಳಾ ಚೈತನ್ಯ ಅರಿವಿಂಗೆ ಪ್ರಸನ್ನವಾದುದೀಗ ಮೂರನೆಯದು, ತೃತೀಯದಲ್ಲಿ ಜಂಗಮ ಪ್ರಸಾದವೆಂಬ ಶಬ್ದಕ್ಕರ್ಥ. ಅಂತಪ್ಪ ಗುರುಲಿಂಗಜಂಗಮದ ಪ್ರಸನ್ನಪ್ರಸಾದವ ಪಡೆದಿಪ್ಪ, ತ್ರಿವಿಧಲಿಂಗಾನುಭಾವಿಗಳ ಅನುಭಾವ, ತನ್ನ ಅರುಹಿಂಗೆ ಪ್ರಸನ್ನ ವಾದುದು ನಾಲ್ಕನೆಯದೆಂಬುದೀಗ, ಚತುರ್ಥದಲ್ಲಿ ಪ್ರಸಾದಿಯ ಪ್ರಸಾದ ಎಂಬ ಶಬ್ದಕ್ಕರ್ಥ. ಇಂತು ಶಿವಶರಣರ ಅನುಭಾವ ಸಂಗದಿಂದ ಆರುಹಿಂಗೆ, ಶಿವಾಪೇಕ್ಷೆಯ

ಆಪ್ಯಾಯನವೇ ಘನವಾದುದು ಐದನೆಯದಾದ ಕಾರಣ ಪಂಚಮದಲ್ಲಿ ಆಪ್ಯಾಯನ ಪ್ರಸಾದವೆಂಬ ಶಬ್ದಕ್ಕರ್ಥ. ಇಂತು ಶಿವಶರಣರ ಅನುಭಾವಸಂಗದಿಂದ ಶಿವಾಪೇಕ್ಷೆ ಘನವಾಗಿ, ಶಿವಲಾಂಛನವೆಲ್ಲ ಶಿವನೆಂಬ ದೃಢ ಭಾವ ಘಟಿಸಿ, ಅವರ ಪ್ರಸಾದವ ಕೊಂಡುದು ಆರನೆಯದೆಂಬುದೀಗ, ಷಷ್ಠಮದಲ್ಲಿ ಸಮಯಪ್ರಸಾದವೆಂಬ ಶಬ್ದಕ್ಕರ್ಥ. ಶಿವಲಾಂಛನವೆಲ್ಲ ಶಿವನೆಂಬ ದೃಢಭಾವದಿಂದ ಶಿವಲಾಂಛನಕ್ಕೆ ರೂಪಾದಿ ಪದಾರ್ಥಂಗಳನರ್ಪಿಸಿ ಪಡೆದ ಸಮಯಪ್ರಸಾದ ರೂಪವ ಇಷ್ಟ ಲಿಂಗಕ್ಕರ್ಪಿತವ ಮಾಡಿ ಪ್ರಸಾದವ ಭುಂಜಿಸಿದಡೆ, ದೇಹೇಂದ್ರಿಯಂಗಳೆಲ್ಲ ೧[ಲಿಂ]೧ಗರೂಪಿಯಾದ ಕಾರಣ ಅದು ಏಳನೆಯದೆಂಬುದೀಗ, ಸಪ್ತಮದಲ್ಲಿ ಪಂಚೇಂದ್ರಿಯವಿರಹಿತ ಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಇಷ್ಟಲಿಂಗಕ್ಕರ್ಪಿಸಿ ರೂಪಿನೊಳಗಣ ರುಚಿಯಪ್ರಸಾದವ ಪ್ರಾಣಲಿಂಗಕ್ಕೆ ಅರ್ಪಿಸಲು, ಪ್ರಾಣ ಮೊದಲಾದ ಅಂತಃಕರಣಗಳೆಲ್ಲ ಲಿಂಗವಾಗಿಪ್ಪುದು ಎಂಟನೆಯದೆಂಬುದೀಗ, ಅಷ್ಟಮದಲ್ಲಿ ಅಂತಃಕರಣಚತುಷ್ಟಯವಿರಹಿತ ಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಸಗುಣಪ್ರಸಾದವ ರೂಪು, ರುಚಿಗಳ, ಆನಂದ ಪ್ರಸಾದವ ಭಾವಲಿಂಗಕ್ಕೆ ಅರ್ಪಿಸಿ ಭಾವಲಿಂಗವಾದುದು ಒಂಬತ್ತನೆಯದು ಎಂಬುದೀಗ, ನವಮದಲ್ಲಿ ಸದ್ಭಾವ ಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಒಳಹೊರಗೆನ್ನದೆ ಸರ್ವಾಂಗಲಿಂಗವಾಗಿ ಭಿನ್ನದೋರದೆ ಇರ್ದ ಶರಣಂಗೆ, ಲಿಂಗವು ದೂರಸ್ಥವೆಂದು ಭಾವಿಸಬೇಕು, ಬೆರಸಬೇಕು ಎಂಬ ಅವಸ್ಥೆಗಳೇನೂ ಇಲ್ಲದೆ, ನಿರಾತಂಕವಾಗಿ ಸಮಾಧಾನವನೆ ಯಿರ್ದುದು ಹತ್ತನೆಯದಾದ ಕಾರಣ, ದಶಮದಲ್ಲಿ ಸಮತೆಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಭಿನ್ನಾವಸ್ಥೆಗಳೇನೂ ಇಲ್ಲದೆ ಸಮಾಧಾನಿಸಿ ನಿಂತ ನಿಲುಕಡೆಯಲ್ಲಿ ನಿರ್ಧಾರವಾಗಿ, ಲಿಂಗ ತಾನಾಗಿ ಕಾಣುತ್ತಿಪ್ಪ ಅಭಿನ್ನ ಜ್ಞಾನಾನಂದ ಸುಖದಲ್ಲಿಪ್ಪುದು ಹನ್ನೊಂದನೆಯದಾದ ಕಾರಣ, ಏಕಾದಶದಲ್ಲಿ ಜ್ಞಾನಪ್ರಸಾದವೆಂಬ ಶಬ್ದಕ್ಕರ್ಥ. ಅಂತು ಪ್ರಸಾದ ಹನ್ನೊಂದನೆಯದೆಂಬ ಖಂಡಿತವಳಿದು ಅಖಂಡಿತ ಲಿಂಗದೊಳಗೆ ಬೆರೆದು ಬೇರಿಲ್ಲದಿರ್ಪ ಕಾರಣ ಭೋಗಿಸುವದೆಲ್ಲ ಲಿಂಗಾರ್ಪಿತವಾಗಿ ಪ್ರಸಾದ ವಪ್ಪುದು. ಅಂತಪ್ಪ ಅಖಂಡಿತ ಪ್ರಸಾದಿಗೆ ನಮಸ್ಕಾರವ ಮಾಡುತ್ತಿರ್ದನು ಶರಣನೆಂಬುದೀಗ, ಇಂತೀ ಏಕಾದಶಪ್ರಸಾದವನತಿಗಳೆದ ಐಕ್ಯಪ್ರಸಾದಿಗೆ ನಮೋ ನಮೋ ಎಂಬೆನೆಂಬ ಶಬ್ದಕ್ಕರ್ಥ.

೨೫೭

(೨) ನಿರಾಳ ಲಿಂಗಕ್ಕೆ ನಿರೋಧ ಬಂದಿತ್ತಲ್ಲಾ, ನಿರೂಪಿಂಗೆ ಭಂಗ ಬಂದಿತ್ತಲ್ಲಾ. ದೇಹಾರವ ಮಾಡುವರಳಿದರು. ದೇಹಾರ ದೇಹದೊಳಗಡಗಿದುದೆಂತು ? ದೇಹಾರ ಆಹಾರವಾಗಿ ಅರ್ಪಿಸಲಿಲ್ಲ, ಪ್ರಸಾದಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲದ ಹುಸಿಯೆಲ್ಲ.

೧-೧ ಅಂ (ಮೂ)

೭೮೮

(೩) ಶಬ್ದವೆಂಬೆನೆ ? ಶ್ರೋತ್ರದೆಂಜಲು. ಸ್ಪರ್ಶನವೆಂಬೆನೆ ? ತ್ವಕ್ಕಿನೆಂಜಲು. ರೂಪೆಂಬೆನೆ ? ನೇತ್ರದೆಂಜಲು. ರುಚಿಯೆಂಬೆನೆ ? ಜಿಹ್ವೆ[ಯ] ಎಂಜಲು. ಪರಿಮಳವೆಂಬೆನೆ ? ಘ್ರಾಣದೆಂಜಲು. ನಾನೆಂಬೆನೇ ? ಅರಿವಿನೆಂಜಲು. ಎಂಜಲೆಂಬ ಭಂಗವಳಿದು ಬೆಳಗಿನೊಳಗಣ ಬೆಳಗು ಗುಹೇಶ್ವರ ನಿಮ್ಮ ಶರಣ.

೭೮೯

(೪) ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳನೆಂಬ ಶರಣನು. ಬಿಸಿಲಲ್ಲಿದ್ದಲ್ಲಿ ಬಿಸಿಲ ಲಿಂಗಾರ್ಪಿತವ ಮಾಡಬೇಕು. ಧೂಪ ದೀಪ ಪರಿಮಳ ವಾಯು ರುಚಿ ರೂಪನು ಕಾಯದ ಕೈ ಮುಟ್ಟಿ ಅರ್ಪಿಸುವುದರಿದಲ್ಲದೆ, ನಿಲ್ಲು, ಮಾಣು, ಭಾವ, ಕೈ ಮುಟ್ಟಿ ಲಿಂಗಕ್ಕೆಂಬರು. ನಾವಿದನರಿಯೆವಯ್ಯ. ನಯನೇಂದ್ರಿಯ ಶಯನ ಅಶನ ಸ್ಪರ್ಶನ ನಿರವಯಲಿಂಗದಲ್ಲಿ. ಈ ತೆರನನರಿಯಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಆತ ಮಹಾಪ್ರಸಾದಿ.

೭೯೦

(೫) ಲಿಂಗದ ಬೆಂಬಳಿಯಲು ಭಂಗವೆಂದರಿಯರು. ಅಂಗದ ಬೆಂಬಳಿಯಲು ಭಂಗವೆಂದು ಪ್ರಸಾದಿಯು ಅರ್ಪಿತವನರಿಯ. ಪ್ರಸಾದದಲ್ಲಿ ಪರಿಣಾಮಿಯಾಗಿಹ. ಘನ ಸೋಮೇಶ್ವರನು ಮುಂತಾಗಿ ಅರಿವೇ ಆ ಭಾವವಾದ ಪ್ರಸಾದಿ.

೭೯೧

(೬) ಆಯತ ಪ್ರಸಾದಿ, ಸ್ವಾಯತಪ್ರಸಾದಿ, ಸನ್ನಿಹಿತಪ್ರಸಾದಿ, ಸಮಭೋಗ ಪ್ರಸಾದಿ. ಪ್ರಸಾದವೇ ಪ್ರಾಣವಾಗಿ, ಪ್ರಸಾದವು ಪ್ರಸಾದಿಯ ಅವಗ್ರಹಿಸಿ ಕೊಂಡಿಪ್ಪುದು. ಪ್ರಸಾದವು ಪ್ರಸಾದಿಯು ಏಕವಾಗಿದ್ದಡಾನು ನಮೋ ನಮೋ ಎಂಬೆ ಕೂಡಲಚನ್ನಸಂಗಮದೇವಾ.

೭೯೨

(೭) ಅವಿನಾಶಂಗೆ ವಿನಾಶವನರ್ಪಿತವಮಾಡಬಲ್ಲಡೆ ಪ್ರಸಾದಿ. ಅಪ್ರಸಾದ ವರ್ಣ ನಾಸ್ತಿಯಾಗಿ ಕೊಳಬಲ್ಲಡೆ ಪ್ರಸಾದಿ. ಅಪ್ರಸಾದಿ ಎಂಬ [ಅ]ವಿನಾಶಂಗೆ ನಮೋ ನಮೋ ಎಂಬೆ ಕೂಡಲಚನ್ನಸಂಗಯ್ಯ.

೭೯೩

(೮) ಕಾಯ ಲಿಂಗಾರ್ಪಿತವಾದಡೆ ಕರ್ಮವಿಲ್ಲ, ಜೀವ ಲಿಂಗಾರ್ಪಿತವಾದಡೆ ಜನಿತವಿಲ್ಲ, ಭಾವ ಲಿಂಗಾರ್ಪಿತವಾದಡೆ ಭ್ರಮೆ ಇಲ್ಲ, ಅರಿವು ಲಿಂಗಾರ್ಪಿತವಾದ ಬಳಿಕ ಪ್ರಸಾದವನ[ವ]ಗ್ರಹಿಸಿದನಾಗಿ ಕುರುಹು ಇಲ್ಲ, ಮಾಯಾಪ್ರಪಂಚುವನತಿಗಳಿದು ನಿಮಗರ್ಪಿಸಬಲ್ಲನಾಗಿ ಆತ ಶರಣನು. ಬೆಚ್ಚಂತೆ ಬೆರಸಿ ಅಚ್ಚೊತ್ತಿದ್ದಂತೆ ಅಪ್ಪು ಒಳಕೊಂಡ ವಾರಿ ಕಲ್ಲಂತೆ ಜ್ಯೋತಿಯುಂಡ ತೈಲದಂತೆ ಜಲ ಉಂಡ ಮುತ್ತಿನಂತೆ ಬಯಲುಂಡ ಬೆಳಗಿನಂತೆ ಇರ್ದನಾಗಿ ಮಹಾಘನ ಸದ್ಗುರು ಸಿದ್ಧಸೋಮನಾಥ ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂಬೆ.

೭೯೪

(೯) ಅಂಗಕ್ಕೆ ಆಚಾರವಳವಟ್ಟಲ್ಲಿ, ಲಿಂಗಕ್ಕೆ ಆ ಅಂಗವೇ ಅರ್ಪಿತ. ಪ್ರಾಣಕ್ಕೆ ಪ್ರಸಾದ ಸಾಧ್ಯವಾದಲ್ಲಿ ಲಿಂಗಕ್ಕೆ ಆ ಪ್ರಾಣವೇ ಅರ್ಪಿತ. ಮನವು ಮಹವನಿಂಬುಗೊಂಡಲ್ಲಿ ಲಿಂಗಕ್ಕೆ ಆ ಮನವೇ ಅರ್ಪಿತ. ಭಾವಕ್ಕೆ ಭ್ರಮೆಯಳಿದು ನಿಭ್ರಾಂತನಾದಲ್ಲಿ ಲಿಂಗಕ್ಕೆ ಆ ಭಾವವೇ ಅರ್ಪಿತ. ಜ್ಞಾತೃ, ಜ್ಞಾನ, ಜ್ಞೇಯ, ಸಂಪುಟವಾಗಿ ಅರಿವು ನಿರ್ಣಯಿಸಿ ನಿಷ್ಪತ್ತಿಯಾಗಿ ಕುರುಹುಗೆಟ್ಟಲ್ಲಿ ಲಿಂಗಕ್ಕೆ ಆ ಅರಿವೇ ಅರ್ಪಿತ. ಇಂತೀ ಸರ್ವಾಂಗವೆಲ್ಲ ಅರ್ಪಿತವಾಗಿ ಲಿಂಗಕೊಡೆತನವನಿತ್ತ ಕಾರಣ ಕೂಡಚನ್ನಸಂಗಯ್ಯನಲ್ಲಿ ತಾನೆನಲೊಲ್ಲದೇ ನಿಂದ ನಿಜಪ್ರಸಾದಿ.

ಇಂತು ಆದಿಪ್ರಸಾದಿ ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂಬ ತ್ರಿವಿಧ ಸ್ಥಲವು ಏಕವಾದ ಲಿಂಗವು ಪ್ರಾಣಲಿಂಗಿಯ ಮಲತ್ರಯ ನಿರಾಹರಣ ಕಾರಣಾರ್ಥವಾಗಿ ಪಾದೋದಕ ಪ್ರಸಾದವನೈದಿದ ಭೇದವೆಂತಿರ್ದುದೆಂದಡೆ ಮುಂದೆ ದೀಕ್ಷಾ ಪಾದೋದಕಸ್ಥಲವಾದುದು.

೧೦. ದೀಕ್ಷಾಪಾದೋದಕಸ್ಥಲ

೭೯೫

(೧) ಪಾದೋದಕವಿಡಿದು ಪಾದೋದಕವ ಧರಿಸುವ ಕ್ರಮವೆಂತಯ್ಯಾ ? ಲಿಂಗೋದಕವಿಡಿದು ಲಿಂಗೋದಕವ ಧರಿಸುವ ಕ್ರಮವೆಂತಯ್ಯಾ? ಪ್ರಸಾದೋದಕವಿಡಿದು ಪ್ರಸಾದೋದಕವ ಧರಿಸುವ ಕ್ರಮವೆಂತಯ್ಯಾ ? ಈ ತ್ರಿವಿಧೋದಕದ ಭೇದವ ಭೇದಿಸಿ ಗ್ರಹಿಸಬಲ್ಲ ಕೂಡಲಚನ್ನಸಂಗಾ ನಿಮ್ಮ ಶರಣ.

೭೯೬

(೨) ಸದ್ಗುರುಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ, ಹಸ್ತ ಮಸ್ತಕ ಸಂಯೋಗವ ಮಾಡುವ ಕಾಲದಲ್ಲಿ ಪಂಚಕಳಸದ ನಿರ್ಮಲ ಜಲವ ತನ್ನ ಕರುಣ ಜಲವ ಮಾಡಿ, ಆತ್ಮ ಜನ್ಮದ ಮೈಲಿಗೆಯ ಕಳೆಯಲು, ತಾ ನಿರ್ಮಲನಾಗಿ ಲಿಂಗವ ಗ್ರಹಿಸಿದಲ್ಲಿ, ಲಿಂಗಕ್ಕೆ ಮಜ್ಜನಕ್ಕೆರೆಯತೊಡಗಿ, ಮಜ್ಜನೋದಕವನರಿದೆ. ಲಿಂಗ ಸ್ಪರ್ಶನದಿಂದ ಪಾದೋದಕವನರಿದೆ. ಲಿಂಗಾರ್ಪಿತ ಭೋಗೋಪಭೋಗದಲ್ಲಿ ಅರ್ಪಿತ ಪ್ರಸಾದೋದಕವನರಿದೆ, ಅರಿದು ತ್ರಯೋದಕವ ಮರೆದು ನಿಮ್ಮಲ್ಲಿ ತದ್ಗತನಾಗಿರ್ದೆನಯ್ಯ ಮಹಾಲಿಂಗ ಕಲ್ಲೇಶ್ವರಾ.

೭೯೭

(೩) ಲಿಂಗಾರೋಪಿತ ಮುಖದಿಂದ ಬಂದುದು ಪ್ರಸಾದೋದಕ. ಮಜ್ಜನ

ಭೋಜನ ಆರೋಪಿತಮುಖದಿಂದ ಪಾದೋದಕವ ಕೂಡಲ ಚನ್ನಸಂಗಾ ನಿಮ್ಮ ಶರಣನೇ ಬಲ್ಲ.

೭೩೮

(೪) ಪಾದೋದಕವಿದು. ಪಾದೋದಕವ ಧರಿಸುವ ಕ್ರಮಭೇದವೆಂತಯ್ಯ ? ಲಿಂಗೋದಕವಿದು. ಲಿಂಗೋದಕವ ಧರಿಸುವ ಕ್ರಮಭೇದವೆಂತಯ್ಯ? ಪ್ರಸಾದೋಕವಿದು. ಪ್ರಸಾದೋದಕವ ಧರಿಸುವ ಕ್ರಮಭೇದವೆಂತಯ್ಯ ? ಇಂತೀ ತ್ರಿವಿಧೋದಕದ ಭೇದವ ಭೇದಿಸಿ ಗ್ರಹಿಸಬಲ್ಲ ಕೂಡಲಚನ್ನಸಂಗಾ ನಿಮ್ಮ ಶರಣ.

೭೩೯

(೫) ಪ್ರಥಮದಲ್ಲಿ ಪಾದೋದಕ, ದ್ವಿತೀಯದಲ್ಲಿ ಲಿಂಗೋದಕ, ತೃತೀಯದಲ್ಲಿ ಮಜ್ಜನೋದಕ, ಚತುರ್ಥದಲ್ಲಿ ಸ್ಪರ್ಶನೋದಕ, ಪಂಚಮದಲ್ಲಿ ಅವಧಾನೋದಕ, ಷಷ್ಠಮದಲ್ಲಿ ಆಪ್ಯಾಯನೋದಕ, ಸಪ್ತಮದಲ್ಲಿ ಹಸ್ತೋದಕ, ಲಷ್ಟಮದಲ್ಲಿ ಪರಿಣಾಮೋದಕ, ನವಮದಲ್ಲಿ ನಿರ್ಣಾಮೋದಕ, ದಶಮದಲ್ಲಿ ಸತ್ಯೋದಕ, ಇಂತೀ ದಶವಿಧ ಪಾದೋದಕವ ತಿಳಿದುಕೊಳ್ಳಬಲ್ಲ ಕೂಡಲ ಚನ್ನಸಂಗಾ ನಿಮ್ಮ ಶರಣ.

ಇಂತು ದೀಕ್ಷಾಗುರುತತ್ವದಲ್ಲಿ ಇಷ್ಟ ಪಾದೋದಕ ಸ್ವರೂಪವನೈದಿದ ಲಿಂಗವು ಶರಣನಂಗದಲ್ಲಿ ಶಿಕ್ಷಾಗುರು ಮುಖದಿಂದ ದೃಷ್ಟಪಾದೋದಕ ಸ್ವರೂಪವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಶಿಕ್ಷಾಪಾದೋದಕಸ್ಥಲವಾದುದು.

೧೧. ಶಿಕ್ಷಾಪಾದೋದಕಸ್ಥಲ

೭೪೦

(೧) ಕರುಣಜಲ ವಿನಯಜಲ ಸಮತೆಜಲ. ಕರುಣಜಲವೇ ಗುರು ಪಾದೋದಕ, ವಿನಯಜಲವೇ ಲಿಂಗಪಾದೋದಕ, ಸಮತೆಜಲವೇ ಜಂಗಮ ಪಾದೋದಕ. ಗುರುಪಾದೋದಕ ಸಂಚಿತಕರ್ಮನಾಸ್ತಿ, ಲಿಂಗಪಾದೋದಕ ಪ್ರಾರಬ್ಧಕರ್ಮನಾಸ್ತಿ, ಜಂಗಮಪಾದೋಕ ಆಗಾಮಿಕರ್ಮನಾಸ್ತಿ, ಇಂತೀ ತ್ರಿವಿಧೋಕದಲ್ಲಿ ತ್ರಿವಿಧ ಕರ್ಮನಾಸ್ತಿ, ಇದು ಕಾರಣ ಕೂಡಲ ಚನ್ನಸಂಗದೇವಾ ತ್ರಿವಿಧೋದಕವ ನಿಮ್ಮ ಶರಣಬಲ್ಲ.

ಟೀಕು : ಗುರುಭಕ್ತಿಯಿಂದ ಗುರುಪಾದೋದಕವ ಸೇವಿಸಿದಾತಂಗೆ ಸಂಚಿತ ಕರ್ಮವಪ್ಪ ಜನನದ ಅಜ್ಞಾನದ ಭವಿತ್ವವಳಿದು ಶಿವಭಕ್ತಿ ಜ್ಞಾನವ ಕೊಡುವುದೆಂಬುದೀಗ, ಕರುಣಜಲ ಗುರುಪಾದೋದಕ ಸಂಚಿತಕರ್ಮನಾಸ್ತಿ ಎಂಬ ಶಬ್ದಕ್ಕರ್ಥ. ಲಿಂಗಭಕ್ತಿಯಿಂದ ಲಿಂಗದ ಪಾದೋದಕವ ನಿತ್ಯ ಸೇವನೆಯ ಮಾಡಿದಾತಂಗೆ ಇಹಲೋಕದ ತನುಭೋಗವಪ್ಪ ಪ್ರಾರಬ್ಧ ಕರ್ಮವಳಿದು ಶಿವಲೋಕದಲ್ಲಿ ಶಿವಸನ್ನಿಧಿಯಾಗಿ ಇತ್ತ ಬಾ ಎನಿಸಿಕೊಂಬ ಪದವಹುದೆಂಬುದೀಗ

ವಿನಯಜಲ ಲಿಂಗಪಾದೋದಕ ಪ್ರಾರಬ್ಧಕರ್ಮನಾಸ್ತಿ ಎಂಬ ಶಬ್ದಕ್ಕರ್ಥ. ಜಂಗಮ ಪಾದೋಕವ ಜಂಗಮಭಕ್ತಿಯಿಂದ ನಿತ್ಯ ಸೇವನೆಯ ಮಾಡಿದಾತಂಗೆ ಲಯಧರ್ಮವಪ್ಪ ಆಗಾಮಿ ಕರ್ಮವಳಿದು ಇಹಪರಕ್ಕೆಡೆಮಾಡುವ ಅವಸ್ಥೆಗಳೇನೂ ಇಲ್ಲದೆ ಪರಬ್ರಹ್ಮಾನಂದ ಸ್ವರೂಪವಾಗಿ ಸ್ವಸ್ಥಲದಲ್ಲಿಪ್ಪ ಪದವಹುದೆಂಬುದೀಗ, ಸಮತೆಜಲ ಜಂಗಮಪಾದೋದಕ ಆಗಾಮಿಕರ್ಮನಾಸ್ತಿ ಎಂಬ ಶಬ್ದಕ್ಕರ್ಥ. ಅಂತು ತ್ರಿವಿಧೋದಕದಲ್ಲಿ ತ್ರಿವಿಧಕರ್ಮನಾಸ್ತಿ ಎಂಬ ತ್ರಿವಿಧಲಿಂಗಭಕ್ತಿಯ ಮಾಡಿ ಬಿಡದೆ ಮಾಡುತ್ತಿಪ್ಪ ತ್ರಿವಿಧ ಪಾದೋದಕವ ನಿತ್ಯ ಸೇವನೆಯ ಮಾಡಬಲ್ಲಾತನೇ ಶಿವಶರಣನೆಂಬುದೀಗ, ಇಂತೀ ತ್ರಿವಿಧೋದಕದಲ್ಲಿ ತ್ರಿವಿಧ ಕರ್ಮನಾಸ್ತಿ ಇದು ಕಾರಣ ತ್ರಿವಿಧೋದಕ ನಿಮ್ಮ ಶರಣ ಬಲ್ಲನೆಂಬ ಶಬ್ದಕ್ಕರ್ಥ.

೭೪೧

(೨) ಅಂಗವ ಮುಟ್ಟಿ ಆಚಮನವ ಮಾಡುವರು ಲಿಂಗಾಂಗಿಗಳಲ್ಲದವರು. ಕೂಡಿ ಮಾಡಿದಡೆಯೂ ಮಾಡಲಿ. ಲಿಂಗಪಾದೋದಕವ ಧರಿಸಿ ಮರಳಿ ಅಪವಿತ್ರ ಶಂಕೆಯಿಂದ ಆಚಮನವ ಮಾಡಿದಡೆ ಅಘೋರ ನರಕದಲ್ಲಿಕ್ಕುವದಯ್ಯ, ನಂಬುವದಯ್ಯ. ಪರಮ ಪಾವನವಪ್ಪ ಪಾದೋದಕವ ನಂಬದವರು ಬಸವಪ್ರಿಯ ಕೂಡಲಚನ್ನಸಂಗಯ್ಯಂಗೆ ದೂರ.

೭೪೨

(೩) ಆಸರಿನ ಭಕ್ತಿ ಜಡರುಗಳು ಬೇಸತ್ತು ಜಂಗಮಕ್ಕೆರಗಿ ಪಾದಪ್ರಕ್ಷಾಲನೆಯಂ ಮಾಡಿ ಪಾದೋದಕವ ಧರಿಸುತ್ತಿರ್ಪರು. ಆವುದು ಕ್ರಮವೆಂದರಿಯರು. ಅರಿದಡೆ ಪಾದೋದಕ, ಅರಿಯದಿರ್ದಡೆ ಬಳಿನೀರೆಂದರಿಯರು. ಅರಿದರಿದು ಬರುದೊರೆವೋದರು ಮಾನವರೆಲ್ಲ. ಅರಿವು ಸಾಮಾನ್ಯವೆ ? ನಂಬುವುದು. ನಂಬದಿರ್ದಡೆ ಮುಂದೆ ನರಕ ತಪ್ಪದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೭೪೩

(೪) ಲಿಂಗೋದಕ ಲಿಂಗಾರ್ಚನೆ, ಪಾದೋದಕ ಪಂಚೇಂದ್ರಿಯಾರ್ಚನೆ, ಪ್ರಸಾದೋದಕ ಪ್ರಾಣಾರ್ಚನೆ. ಲಿಂಗೋದಕ, ಪಾದೋದಕ, ಪ್ರಸಾದೋದಕ ಇಂತೀ ತ್ರಿವಿಧ ಉದಕವನಲ್ಲದೆ ಮುಟ್ಟಲಾಗದು ಕೂಡಲ ಚನ್ನಸಂಗಮದೇವಾ.

೭೪೪

(೫) ಸಮಯ ವಿರೋಧವಾದುದೆಂದು ಪಾದಾರ್ಚನೆಯ ಮಾಡುವರಯ್ಯ. ಲಿಂಗಜಂಗಮಕ್ಕೆ ಪಾದವಾವುದು, ಅರ್ಚನೆಯಾವುದು ಎಂಬ ತುದಿ ಮೊದಲನರಿಯರು. ಉದಾಸೀನದಿಂದ ಪಾದಾರ್ಚನೆಯ ಮಾಡಿ ಪಾದೋದಕವ ಧರಿಸಿದಡೆ ಅದೇ ಪ್ರಳಯ, ಕಾಲ ಜಲವರ್ಮವನರಿದುಕೊಂಡೊಡೆ, ತನ್ನ ಭವಕ್ಕೆ ಪ್ರಳಯಕಾಲ ಜಲ. ಈ ಉಭಯವ ಭೇದಿಸಿ ಸಂಸಾರ ಮಲಿನವ ತೊಳೆದಡೆ ಕೂಡಲಚನ್ನಸಂಗಾ ನಿಮ್ಮ ಶರಣ ಬಲ್ಲ.

ಇಂತು ಶಿಕ್ಷಾಗುರುತತ್ವದಲ್ಲಿ ದೃಷ್ಟಪಾದೋದಕಲಿಂಗವು ತ್ರಿಪುಟಿ ರಹಿತವಾಗಿ ಮಹಾಜ್ಞಾನಗುರುತತ್ವದಲ್ಲಿ ಪರಮಾನಂದ ಸ್ವರೂಪವನ್ನೈದಿದ ಭೇದವೆಂತಿರ್ದು ದೆಂದಡೆ ಮುಂದೆ ಜ್ಞಾನಪಾದೋದಕಸ್ಥಲವಾದುದು.

೧೨. ಜ್ಞಾನಪಾದೋದಕಸ್ಥಲ

೭೪೫

(೧) ನಿತ್ಯವೆಂಬ ಭಕ್ತನ ಮನೆಗೆ ಘನಚೈತನ್ಯವೆಂಬ ಜಂಗಮ ಬಂದರೆ ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ, ಆ ಪಾದೋದಕವೇ ಮಹಾ ಪಾದೋದಕವಯ್ಯ. ಆ ಪಾದೋದಕದಲ್ಲಿ ಪರಮ ಪರಿಣಾಮಿ ಕೂಡಲ ಚನ್ನಸಂಗಾ ನಿಮ್ಮ ಶರಣ.

೭೪೬

(೨) ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಬಂದ ಬಟ್ಟೆಯನಾಲಿಸದೆ, ವಾಯು ಬಂಧನವ ಮಾಡಿ ಪಶ್ಚಿಮದ್ವಾರದಲ್ಲಿ ನಿವಾಸಿಯಾಗಿರ್ದ ಶರಣನು ಅಘೋನಾಳ ದಲ್ಲಿ ನಿರುತ, ಮಧ್ಯನಾಳದಲ್ಲಿ ನಿರಾಳ, ಊರ್ಧ್ವನಾಳದಲ್ಲಿ ಸುರಾಳ. ವ್ಯೋಮ ಕುಸುಮ ಕೊನೆಯ ಶಶಿಕಲಾಮೃತವ ಧರಿಸಿದ ಘಟಕ್ಕೆ ಕೇಡಿಲ್ಲಾಗಿ ಲಿಂಗಕ್ಕೆ ಪ್ರಾಣಕ್ಕೆ ಒಂದೆಂಬ ಕಾರಣ ಅಚಳವೆನಿಸಿತ್ತು, ಇದು ಕಾರಣ ಕೂಡಲಚನ್ನ ಸಂಗಯ್ಯ ಎನ್ನ ಪ್ರಾಣಕ್ಕೆ ಭವವಿಲ್ಲ ಬಂಧನವಿಲ್ಲ.

೭೪೭

(೩) ತಾನು ಗುರು ಲಿಂಗ ಜಂಗಮದ ಪಾದಕ್ಕೆರಗಿ ಲೀಯವಾದ ಬಳಿಕ, ಇದು ಚಿಹ್ನ ನೋಡಯ್ಯ ! ಗುರುಲಿಂಗಜಂಗಮದ ಪಾದವೇ ತನ್ನ ಸರ್ವಾಂಗದಲ್ಲಿ ಅಚ್ಚೊತ್ತಿದಂತಾಯಿತ್ತಾಗಿ, ಅಲ್ಲಿಯೇ ಪಾದಾರ್ಚನೆ, ಅಲ್ಲಿಯೇ ಪಾದೋದಕ ಸೇವನೆ ಬೇರೆ ಇಲ್ಲವಯ್ಯ ! ಅದೆಂತೆಂದೊಡೆ ಪರಮ ಜ್ಞಾನಲಿಂಗಜಂಗಮಸಂಬಂಧ ಸಮರತಿಯ ಸೋಂಕಿನಲ್ಲಿ ಪರಮಾನಂದಜಲವೇ ಪ್ರವಾಹವಾಗಿ ಸರ್ವಾಂಗದಲ್ಲಿ ಪುಳುಕಿತವಾಗಿ ಹರಿಯುತ್ತಿರಲು ಆ ಪರಮ ಸುಖಸೇವನೆಯ ಮಾಡುವಲ್ಲಿ ಪಾದೋದಕಸೇವನೆಯೇ ಈ ಪರಮಾಮೃತತೃಪ್ತಿ ಬಸವಣ್ಣಂಗಾಯಿತ್ತು, ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ ಕಲಿದೇವಯ್ಯ.

೭೪೮

(೪) ಅಂಗವಿಕಾರ ಆಚಾರದೊಳಡಗಿ, ಆಚಾರ ಕ್ರಿಯೆಗಳು ಗುರುವಿನೊಳ ಡಗಿ, ಗುರುವೆನ್ನಂಗದೊಳಗಡಗಿ, ಅಂಗಲಿಂಗ ತೃಪ್ತಿಯೊಳಗಡಗಿ, ಲಿಂಗನಿಷ್ಠೆ ಅಂಗ ದಾಚರಣೆಯ ಆಚಾರವಾವರಿಸಿ, ಆಚಾರದ ನಿಲವ ಗುರುಮೂರ್ತಿಯಾವರಿಸಿ, ಗುರುಮೂರ್ತಿಯು ಸರ್ವಾಂಗವಾವರಿಸಿ, ಸರ್ವಾಂಗವ ಲಿಂಗನಿಷ್ಠೆಯಾವರಿಸಿ, ಲಿಂಗನಿಷ್ಠೆಯ ಸಾವಧಾನವಾವರಿಸಿ, ಸಾವಧಾನವ ಸುವಿಚಾರವಾವರಿಸಿ, ಸುವಿಚಾರವ

ಮಹಾಜ್ಞಾನವಾವರಿಸಿ ಮಹಾಜ್ಞಾನದೊಳಗೆ ಪರಮಾನಂದ ನಿಜನಿಂದು ಆ ನಿಜದೊಳಗೆ ಪರಮಾಮೃತ ತುಂಬಿ ಮೊದಲ ಕಟ್ಟೆಯನೊಡೆದು ನಡುವಣ ಕಟ್ಟೆಯನಾಂತು ನಿಂದು, ನಡುವಣ ಕಟ್ಟೆಯೂ ಮೊದಲ ಕಟ್ಟೆಯೂ ಎರಡು ಕೂಡಿ ಬಂದು ಕಡೆಯ ಕಟ್ಟೆಯನಾಂತುದು. ಈ ಮೂರು ಕಟ್ಟೆಯೊಡೆದ ಮಹಾಜಲವನು ಪರಮ ಪದವಾಂತುದು. ಆ ಪದದಲ್ಲಿ ನಾನೆರಗಿ ಪಾದೋದಕವ ಕೊಂಡು ಎನ್ನ ನಾನರಿಯದಾದೆ ಕಾಣಾ ಗುಹೇಶ್ವರ.

ಇಂತು ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕವೆಂಬ ತ್ರಿವಿಧಸ್ಥಲಂಗಳೇಕಮಾದ ಲಿಂಗವು ಶರಣನ ಸತ್ಕ್ರಿಯೆಯಲ್ಲಿ ನಿಷ್ಪತ್ತಿಯ ಸ್ವರೂಪ ವನ್ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾನಿಷ್ಪತ್ತಿಸ್ಥಲವಾದುದು.

ಪ್ರಸಾದಲಿಂಗ

ವಿವರಣೆ : ಹಿಂದಿನ ಎರಡು ಲಿಂಗಗಳಾದ ಶಿವಲಿಂಗ ಮತ್ತು ಜಂಗಮಲಿಂಗ ಇವುಗಳಲ್ಲಿ ಸೂಕ್ಷ್ಮ ಶರೀರವು ಉಚ್ಚತರ ಸ್ಥಿತಿಯನ್ನು ಹೊಂದುತ್ತದೆ. ಈ ಸ್ಥಿತಿ ಯುಂಟಾದ ಬಳಿಕ ಅದರ ಕೆಳಗಿನ ಶರೀರಗಳಾದ ಸ್ಥೂಲ ಮತ್ತು ಸೂಕ್ಷ್ಮ ಇವುಗಳಲ್ಲಿಯ ಪರಿಣಾಮಗಳು ಮುಂದಿನದಾದ ಕಾರಣ ಶರೀರದಲ್ಲಿ ತೋರ ಹತ್ತುವವು. ಇವು ತೋರಹತ್ತಿದ ಹಾಗೆ ಇದಕ್ಕೆ ಸಂಬಂಧಿಸಿದ ಪ್ರಸಾದಲಿಂಗ ಮತ್ತು ಮಹಾಲಿಂಗ ಇವುಗಳು ಉಜ್ವಲ ಸ್ಥಿತಿಯನ್ನು ಹೊಂದುವವು. ಪ್ರಸಾದಲಿಂಗದಲ್ಲಿ ಜ್ಞಾನದ ಪರಿಪೂರ್ಣತೆಯುಂಟಾಗುತ್ತದೆ. ಇದರ ರೀತಿಗಳು ಈ ಸ್ಥಲದಲ್ಲಿ ಹೇಳಲ್ಪಟ್ಟಿರುತ್ತವೆ. ಮನುಷ್ಯನ ಬಾಹ್ಯ ಕ್ರಿಯೆಗಳೂ ಮಾನಸಿಕ ವ್ಯಾಪಾರಗಳೂ ಇದರಲ್ಲಿ ಅತ್ಯುತ್ಕೃಷ್ಟತೆಯನ್ನು ಹೊಂದುವವು. ಮತ್ತು ಅವೆಲ್ಲ ಮಹಾಲಿಂಗ ಸ್ಥಲದಲ್ಲಿ ವಿಕಾಕಾರವನ್ನು ಹೊಂದಿ ಕಡೆಗೆ ಬಯಲಾಗುತ್ತವೆ. ಈ ವಿಷಯಗಳು ಪ್ರಸಾದಲಿಂಗ ಮತ್ತು ಮಹಾಲಿಂಗ ಇವುಗಳಲ್ಲಿ ಹೇಳಲ್ಪಟ್ಟಿವೆ. ಇವುಗಳಲ್ಲಿ ಪ್ರಸಾದಲಿಂಗದ ವಿಭಾಗಗಳು ಆವುವೆಂದರೆ:

ಪ್ರಸಾದಲಿಂಗದಲ್ಲಿ ಮೂರು ವಿಭಾಗಗಳಿವೆ. ಅವು ನಿಷ್ಪತ್ತಿಲಿಂಗ, ಆಕಾಶ ಲಿಂಗ, ಪ್ರಕಾಶಲಿಂಗ ಎಂದು ಇರುತ್ತವೆ. ಇವೆಲ್ಲವೂ ಜ್ಞಾನದ ಸ್ವರೂಪಗಳಾಗಿವೆ. ಆರಂಭದ ಸ್ಥಲವಾದ ನಿಷ್ಪತ್ತಿಲಿಂಗ ಇದರಿಂದ ಆರಂಭವಾಗಿ ಆಕಾಶಲಿಂಗದ ಅನುಭವಗಳನ್ನು ಹೊಂದಿ ಕ್ರಿಯೆ, ಭಾವ ಮತ್ತು ಜ್ಞಾನಗಳಲ್ಲಿ ಪ್ರಕಾಶವನ್ನು ಹೊರಪಡಿಸುವದೇ ಈ ಲಿಂಗದ ಅಂತಿಮ ಧ್ಯೇಯವಾಗಿದೆ. ಜ್ಞಾನಪ್ರಕಾಶವು ಈ ಸ್ಥಲದ ಕಡೆಯ ಮೆಟ್ಟಲಾಗಿದೆ. ಪ್ರಸಾದಲಿಂಗದ ಅಂಗಸ್ಥಲವು ಶರಣನಿದ್ದು ಶರಣನಲ್ಲಿ ಹೀಗೆ ಜ್ಞಾನಪ್ರಕಾಶವು ಬೆಳಗುತ್ತಿರುವದು.

ನಿಷ್ಪತ್ತಿಲಿಂಗ : ಇದರಲ್ಲಿ ಕ್ರಿಯಾನಿಷ್ಪತ್ತಿ ಭಾವನಿಷ್ಪತ್ತಿ ಮತ್ತು ಜ್ಞಾನನಿಷ್ಪತ್ತಿ ಎಂದು ಮೂರು ವಿಭಾಗಗಳಿರುತ್ತವೆ. ಲಿಂಗಾನುಭವವು ಕ್ರಿಯೆಯಲ್ಲುಂಟಾಗಲು

ಕ್ರಿಯಾನಿಷ್ಪತ್ತಿಯು. ಅದು ಭಾವದಲ್ಲಿ ಪ್ರಾಪ್ತವಾಗಲು ಭಾವನಿಷ್ಪತ್ತಿಯು. ಜ್ಞಾನದಲ್ಲಿ ಪ್ರಾಪ್ತವಾಗಲು ಜ್ಞಾನನಿಷ್ಪತ್ತಿಯು.

ಆಕಾಶಲಿಂಗ : ಇದರಲ್ಲಿ ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ ಎಂಬ ಮೂರು ಭೇದಗಳಿವೆ. ನಿಷ್ಪತ್ತಿಯ ಮೂಲಕ ಜ್ಞಾನವು ಎಲ್ಲದರಲ್ಲಿ ಸೂಕ್ಷ್ಮವಾಗಿ ಪ್ರವಹಿಸತೊಡಗುವದು. ಆಗ ಶರಣನ ಚಿತ್‌ಪಿಂಡವು ಮಹತ್‌ಪಿಂಡ ಸ್ವರೂಪವನ್ನು ಹೊಂದುವದು. ಇದು ಲಿಂಗವು ಪಿಂಡದಲ್ಲಿ ನಿರ್ವಯಲಾದ ಸ್ಥಿತಿಯಾಗಿರುತ್ತದೆ. ಲಿಂಗದಲ್ಲಿ ಹೀಗೆ ಪಿಂಡವು ನಿರ್ವಯಲಾದ ಬಳಿಕ ಅದು ಬಿಂದ್ವಾಕಾಶ ಸ್ವರೂಪವನ್ನೈದಿ ಕೇವಲ ಶರಣನ ಅರುಹನ್ನು ಆಶ್ರಯಿಸಿಕೊಳ್ಳುವದು. ಮುಂದೆ ಈ ಅರುಹಿನ ಕುರುಹೂ ಕೂಡ ಅಳಿದು ಮಹಾಘನ ಚೈತನ್ಯದಲ್ಲಿ ಅದು ಬೆರೆಯುವದು. ಇದೇ ಕಡೆಯದಾದ ಮಹದಾಕಾಶವು.

ಪ್ರಕಾಶಲಿಂಗ : ಮುಂದೆ ಕ್ರಿಯಾ, ಭಾವ, ಜ್ಞಾನ ಇವುಗಳಲ್ಲಿ ಮಹಾಘನ ಚೈತನ್ಯವು ಪ್ರಕಾಶರೂಪಾಗಿ ತಲೆದೋರುವದು. ಹೀಗೆ ಇದರಲ್ಲಿ ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ ಎಂದು ಮೂರು ವಿಭಾಗಗಳಾಗಿವೆ. ಪ್ರಕಾಶವು ಕ್ರಿಯೆಗಳಲ್ಲಿ ತೋರಿದರೆ ಅದು ಕ್ರಿಯಾಪ್ರಕಾಶವು. ಭಾವಮಧ್ಯದಲ್ಲಿ ತೋರಿದರೆ ಅದು ಭಾವಪ್ರಕಾಶವು. ಮುಂದೆ ಅದು ಎಲ್ಲ ತರದ ಭಿನ್ನತೆಗಳನ್ನಳಿದು ತನ್ನಲ್ಲಿ ತಾನೇ ಪ್ರಕಾಶಿಸುತ್ತ ಮಹಾಜ್ಞಾನವೇ ತಾನಾಗಿ ಬೆಳಗುತ್ತದೆ. ಇದು ಜ್ಞಾನಪ್ರಕಾಶವು. ಈ ಪ್ರಕಾರ ಪ್ರಕಾಶಲಿಂಗದ ಭೇದಗಳಿರುತ್ತವೆ.

ಈ ಪ್ರಕಾರ ಪ್ರಸಾದಲಿಂಗವು ಒಂಬತ್ತು ತೆರದ ಮೆಟ್ಟಿಲುಗಳೊಳಗಿಂದ ಹಾಯ್ದು ಪೂರ್ಣಸ್ಥಿತಿಗೆ ಬರುತ್ತದೆ. ಇದು ಪ್ರಸಾದಲಿಂಗದ ಪ್ರಗತಿಯು.

೧. ಕ್ರಿಯಾನಿಷ್ಪತ್ತಿಸ್ಥಲ

೭೪೯

(೧) ಲಿಂಗವಿಡಿದು ಲಿಂಗಮಹೇಶ್ವರನೆನಿಸಿಕೊಂಬೆ. ಲಿಂಗವಿಡಿದು ಲಿಂಗ ಪ್ರಾಣಿ ಎನಿಸಿಕೊಂಬೆ. ಅರಿವರತು ಕ್ರಿಯಾನುಭಾವವಿಡಿದಿಹರೆ ಕೂಡಲ ಚನ್ನಸಂಗಮನಾಥ.

ಟೀಕು : ಲಿಂಗಾಂಗಸಂಬಂಧಿಯಾದ ಶರಣನ ಅಂಗ ಪ್ರಾಣ ಭಾವಂಗಳೆಲ್ಲ ಲಿಂಗವೆಯಾಗಿ ಲಿಂಗ ತಾನೆಂಬ ಅಹಂಭಾವದರಿವು ಅಡಂಗಿರೆ ಅಭಿನ್ನವಾಗಿರ್ದುದೇ ಭಕ್ತಿ. ಅಂತಪ್ಪ ಭಕ್ತಿ ಈಗ ಮೀರಿದ ಕ್ರೀ ಎನಿಸುವದು. ಅಂತು ಮೀರಿದ ಅಭಿನ್ನ ಕ್ರೀ ಇಲ್ಲದೆ ಲಿಂಗವು ತಾನಾದ ಶರಣನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೭೫೦

(೨) ಗುರು ಕೊಟ್ಟ ಲಿಂಗ, ತನ್ನ ನಚ್ಚಿನ ಲಿಂಗ, ಆಯತವಾಯಿತ್ತಯ್ಯ. ಪ್ರಾಣ

ನಚ್ಚಿನಿಂದ ಸ್ವಾಯತವಾಯಿತ್ತಯ್ಯಾ. ಉಭಯ ನಚ್ಚಿನಿಂದ ಸಂಗವಾಯಿತ್ತು ಕೂಡಲ ಚನ್ನಸಂಗಾ ನಿಮ್ಮಲ್ಲಿ.

೭೫೧

(೩) ಅಂಗದ ಲಿಂಗ ಲಿಂಗವೆಂದು ಪೂಜಿಸುವೆನೇ ? ಅದು ಅಂಗದ ಲಿಂಗವಲ್ಲ. ಅದೇನು ಕಾರಣ ? ಅದು ಅಂಗದ ಮೇಲರತು ಮುಂದೆ ಜಂಗಮ ಲಿಂಗವೆಂದು ತೋರಿತ್ತಾಗಿ. ಜಂಗಮಲಿಂಗವೆಂದು ಅರ್ಚಿಸಿ ಪೂಜಿಸಿಕೊಂಡಿಹನೇ ? ಅದು ಜಂಗಮಲಿಂಗವಲ್ಲ. ಅದೇನು ಕಾರಣ ? ಮುಂದೇ ಪ್ರಸಾದಲಿಂಗವೆಂದು ತೋರಿತ್ತಾಗಿ. ಆ ಪ್ರಸಾದಲಿಂಗವೆಂದು ಅರ್ಚಿಸಿ ಪೂಜಿಸಿಕೊಂಡಿಹನೇ ? ಅದು ಪ್ರಸಾದ ಲಿಂಗವಲ್ಲ. ಅದೇನು ಕಾರಣ ? ಮುಂದೆ ಮಹಾಪ್ರಸಾದವೆಂದು ತೋರಿತ್ತಾಗಿ. ಆ ಮಹಾಪ್ರಸಾದವೇ ನೀನಾಗಿ ಸುಖಿಯಾದೆ ಕೂಡಲ ಚನ್ನಸಂಗಮದೇವ.

೭೫೨

(೪) ಮಾರ್ಗಕ್ರಿಯಾ ಸಮಯದಲ್ಲಿ ಶಿವಭಕ್ತಿಸಂಪುಟ; ಮೀರಿದಕ್ರಿಯಾ ಸಮಯದಲ್ಲಿ ಶಿವಲಿಂಗಸಂಪುಟ. ಕ್ರಿಯಾನುಭಾವ ನೆಲೆಗೊಂಡಲ್ಲಿ ಮನಲಿಂಗ ಸಂಪುಟ. ಮನಲಿಂಗಲೀಯವಾದ ಬಳಿಕ ತೆರಹಿಲ್ಲದ ಕುರುಹಳಿದ ಲಿಂಗೈಕ್ಯಂಗೆ, ಸುತ್ತಿರ್ದ ಪ್ರಪಂಚು ಮೆಲ್ಲ ಮೆಲ್ಲನೆ ಅಚ್ಚುಗವಿಲ್ಲದೆ ಹಿಂಗಿದವು ಕೂಡಲಚನ್ನಸಂಗ.

೭೫೩

(೫) ಇಹಪರವೆಂಬ ಇದ್ದೆಸೆಗಿದ್ದೆಸೆಯಾದವನ ಪರಿಹೊಸತು. ನೆಯಿ ಹತ್ತದ ನಾಲಿಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಯಂತೆ ಇರ್ದೆನಯ್ಯ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸುತ್ತ ಆಚರಿಸದಂತಿರ್ದೆನಯ್ಯ.

೭೫೪

(೬) ಅಂಗಲಿಂಗ ಸಂಗವು, ಲಿಂಗದಲ್ಲಿ ಆಯತವಾಯಿತ್ತಯ್ಯ, ನಿಮಿಷ ಕರಸ್ಥಲ ಹಿಂಗಿದಡೆ ಭಂಗವಯ್ಯ. ಕಂಗಳೇ ಕರುವಾಗಿ ಲಿಂಗವೇ ಗೂಡಾಗಿ ನಿಂದ ನಿಷ್ಪತ್ತಿಯಲ್ಲಿ ಕೂಡಲ ಚನ್ನಸಂಗಾ ನಿಮ್ಮ ಶರಣ.

೭೫೫

(೭) ಆಚಾರಲಿಂಗವಿಡಿದು ಅನುಭಾವ ಲಿಂಗಸಿದ್ಧಿ. ಅನುಭಾವಲಿಂಗವಿಡಿದು ಮಾರ್ಗಕ್ರಿಯಾ ಲಿಂಗಸಿದ್ಧಿ. ಮಾರ್ಗಕ್ರಿಯಾ ಲಿಂಗವಿಡಿದು ಮೀರಿದ ಕ್ರಿಯಾಲಿಂಗ ಸಿದ್ಧಿ. ಇದು ಕಾರಣ ಕೂಡಲ ಚನ್ನಸಂಗಯ್ಯ ಲಿಂಗವಿಡಿದು ಲಿಂಗಸಿದ್ಧಿ.

೭೫೬

(೮) ಆಯುತ, ಸ್ವಾಯತ, ಸಂಯೋಗ, ಸಂಬಂಧಿಯ ಆಚಾರವಡಗಿತ್ತು, ಅನುಭಾವ ತೊಡೆಯಿತ್ತು, ಕೂಡಲ ಚನ್ನಸಂಗಯ್ಯ ತ್ರಿವಿಧ ಸಂಬಂಧಿಗೆ.

೭೫೭

(೯) ಲಿಂಗವಾಚಾರದಲ್ಲಿ ಸಂಗವಾಯಿತ್ತು, ಆಚಾರ ಪ್ರಾಣದಲ್ಲಿ ಸಂಗವಾಯಿತ್ತು, ಪ್ರಾಣ ಲಿಂಗದಲ್ಲಿ ಸಂಗವಾಯಿತ್ತು, ಪ್ರಾಣಕ್ಕೆ ಪ್ರಾಣ ಉಭಯ ಪ್ರಾಣ ಕೂಡಲ ಚನ್ನಸಂಗಾ.

ಇಂತು ಕ್ರಿಯಾನಿಷ್ಪತ್ತಿಯಾದ ಲಿಂಗವು ಶರಣನ ಅಂಗದಲ್ಲರತು ಪ್ರಾಣದ ಕೊನೆಯ ಮೊನೆಯ ಮೇಲೆ ತೋರುವ ಭಾವದೊಳಗೆ ಭಾವವಾಗಿ ತೋರಿ ಆ ಭಾವ ನಿಷ್ಪತ್ತಿ ಸ್ವರೂಪವನೈದಿದ ಭೇದವೆಂತಿರ್ದುದೆಂದಡೆ, ಮುಂದೆ ಭಾವ ನಿಷ್ಪತ್ತಿಸ್ಥಲವಾದುದು.

೨. ಭಾವನಿಷ್ಪತ್ತಿಸ್ಥಲ

೭೫೮

(೧) ಅಂಗದ ಮೇಲೆ ಲಿಂಗವರತು, ಲಿಂಗದ ಮೇಲೆ ಅಂಗವರತು, ಭಾವ ತುಂಬಿ ಪರಿಣಾಮವರತು, ನಾಮವಿಲ್ಲದ ದೇವರಿಗೆ ನಾಮವೆಲ್ಲಿಯದೋ ಗುಹೇಶ್ವರಾ ?

ಟೀಕು : ಮಹಾಘನಲಿಂಗವೇ ಇಷ್ಟಲಿಂಗವಾಗಿ ಶರಣನಂಗವನೊಳಕೊಂಡು ಆ ಅಂಗದೊಳಗೆಲ್ಲ ಲಿಂಗವೇ ಪರಿಪೂರ್ಣವಾಗಿ ಅಂಗಲಿಂಗವೆಂಬ ಭೇದವಳಿದು ಅಂಗ ಮನ ಭಾವವೆಲ್ಲ ಅಖಂಡ ಪರಿಪೂರ್ಣ ಲಿಂಗವೆಯಾಗಿ ಲಿಂಗಾನಂದ ಶಬ್ದ ಪರಿಣಾಮ ನೆಲೆಗೊಂಡು ಶಿಷ್ಯೋಹಂ ಎನುತಿರ್ದವಾಗಿ, ಆ ಶರಣನ ಶಿಷ್ಯೋಹಂ ಮೆಂಬ ಮಹದ ಅಹಂಕಾರದ ಅರಿವಡಸಿ ನಿಂದಲ್ಲಿ ದೇವಭಕ್ತನೆಂಬ ನಾಮ ಸೀಮೆ ನೇಮಗಳೆಂಬ ಭಿನ್ನ ಕ್ರೀಗಳೇನೂ ಇಲ್ಲದೆ ಮಹಾಘನ ಲಿಂಗವೆಯಾಗಿರ್ದ ಶರಣನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೭೫೯

(೨) ಸುಳಿದು ಸುತ್ತುವ ಮನದ ವ್ಯವಹಾರವುಳ್ಳನ್ನಕ್ಕ ಶಿವಪಥವ ನಾನರಿಯೆ, ಅರಿಯೆನು, ಅರಿಯೆನು, ಅರಿಯೆನು, ಗುಹೇಶ್ವರಾ. ನಿಜವನರಿದ ಬಳಿಕ ಲೋಕದ ಗತಿಯನು ನಾನರಿಯೆ, ಅರಿಯೆನು, ಅರಿಯೆನು, ಅರಿಯೆನು.

೭೬೦

(೩) ಕರಣಾದಿ ಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನೋ ? ಇನ್ನೇನೋ ? ಸ್ವರ್ಗವಿಲ್ಲ ನರಕವಿಲ್ಲ, ಇನ್ನೇನೋ ? ಇನ್ನೇನೋ ?

ಪುಣ್ಯವಿಲ್ಲ, ಪಾಪವಿಲ್ಲ, ಇನ್ನೇನೋ ? ಇನ್ನೇನೋ ? ಗುಹೇಶ್ವರಲಿಂಗವೇದಿಸಿ ಸುಖಿಯಾದ ಬಳಿಕ ಇನ್ನೇನೋ ? ಇನ್ನೇನೋ ?

೭೬೧

(೪) ಎನ್ನ ಮನದಲ್ಲಿ ಇದೇ ಪಥವಯ್ಯ. ಬೆರಸುವಡೆ ಪ್ರಾಣದ ಮಥನ ಭಾವ ನಟ್ಟು ತನುಸ್ಥಿತಿಯ ಮರೆದು ಭ್ರಾಂತು ಸೂತಕವೆಲ್ಲ ವಿವರಿಸಿ ಹೋದವು, ಶೂನ್ಯ ಸಿಂಹಾಸನದ ಮೇಲೆ ಕೂಡಲಚನ್ನಸಂಗಾ ನಿಮ್ಮ ಶರಣನ ಪ್ರಭೆಯಿಂದ.

೭೬೨

(೫) ಅರಿವ ಅರಿವಿನ ಮುಂದಣ ಅರಿವುದಿದೇನೋ ? ಅರಿವಿನ ಎರಡರ ಅರಿವು ನಿಷ್ಪತ್ತಿ ಮಾಯೆಯ ಮುಂದಡಗಿತ್ತಲ್ಲಾ. ಅರಿದಡೆ ಹಿಂದಾಯಿತ್ತು ಮರೆದಡೆ ಮುಂದಾಯಿತ್ತು, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿತ್ಯಸಾರ.

೭೬೩

(೬) ಉಗುಳ ನುಂಗಿ ಹಸಿವ ಕಳೆದು, ನಿದ್ರೆಗೈದು ನೋಡಿ ನೋಡಿ ಸುಖಂಬಡೆದೆನಯ್ಯ. ಗುಹೇಶ್ವರಾ ನಿಮ್ಮ ವಿರಹದಲ್ಲಿ ಕಂಗಳೇ ಕರುವಾಗಿರ್ದೆನಯ್ಯ.

೭೬೪

(೭) ಕಂಗಳಲ್ಲಿ ನಟ್ಟ ಘಾಯವನಾರಿಗೆ ತೋರಬಹುದಯ್ಯ? ಮನಸೋಂಕಿದ ಸುಖವ ಮೊಟ್ಟೆಯಕಟ್ಟಬಹುದೇ ? ಆತ ನಿಂದ ಸುಖವಾತಂಗೆ ಸಾಧ್ಯವಾಯಿತ್ತು, ಆತ ನಿಂದ ನಿಲವನೇನೆಂಬೆ ಗುಹೇಶ್ವರಾ ?

೭೬೫

(೮) ದೃಷ್ಟಿ ಮುಟ್ಟಿತ್ತು ನೋಡಾ. ನಟ್ಟು ತೆಗೆಯಬಹುದು ನೋಡಾ. ಅಲ್ಲಿಯೇ ಅಚ್ಚೊತ್ತಿದಂತಿದ್ದಿತ್ತು ನೋಡಾ. ಆಶ್ರಯವ ಗೆಲಿದು ನಿರಾಶ್ರಯದ ನಿಃಷ್ಪತ್ತಿಯಲ್ಲಿ ನಿಂದನು ಕೂಡಲ ಚನ್ನಸಂಗಾ ನಿಮ್ಮ ಶರಣ.*

೭೬೬

(೯) ನೆನಹಿನ ಸುಖವ ನೋಟ ನುಂಗಿತ್ತು, ನೋಟದ ಸುಖವ ಕೂಟ ನುಂಗಿತ್ತು, ಕೂಟದ ಸುಖವನಾ ಲಿಂಗ ನುಂಗಿತ್ತು, ಆ ಲಿಂಗದ ಸುಖವ ಸಂಗ ನುಂಗಿತ್ತು, ಸಂಗದ ಸುಖವ ಸಮರತಿ ನುಂಗಿತ್ತು, ಸಮರತಿಯ ಸುಖವ ಪರವು ನುಂಗಿತ್ತು, ಪರದ ಸುಖ(ವ)ೋ ಕೂಡಲ ಚನ್ನಸಂಗಯ್ಯ ತಾನೇ ಬಲ್ಲ.

ಇಂತು ಭಾವದಲ್ಲಿ ನಿಷ್ಪತ್ತಿಯಾದ ಲಿಂಗವು ಶರಣನ ತ್ರಿಪುಟಿನಷ್ಟವಾಗಿ,

---

* ಇದರ ಮುಂದಿನ ''ಅಂಗದ ಮೇಲೆ ಲಿಂಗವರತು'' ಎಂಬ ವಚನ ಪುನರುಕ್ತವಾಗಿರುವುದ ರಿಂದ ತೆಗೆದುಹಾಕಲಾಗಿದೆ (ಸಂ).

೧–೧ ವು (ಮೂ)

ಅರಿವಿನೊಳಗೆ ತಾನೆಯಾಗಿ ನಿಂದು, ಆ ಅರಿವು ನಿಷ್ಪತ್ತಿಯಾದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನನಿಷ್ಪತ್ತಿಸ್ಥಲವಾದುದು.

೩. ಜ್ಞಾನನಿಷ್ಪತ್ತಿಸ್ಥಲ

೭೬೭

(೧) ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ. ಮೊತ್ತದ ಮಾಮರ ನುಲಿಯತ್ತ ಕಂಡೆ. ಕತ್ತಲೆ ಬೆಳಗಾಯಿತ್ತ ಕಂಡೆ. ಹೊತ್ತಾರೆ ಎದ್ದು ಹೊಲಬುದಪ್ಪುವುದ ಕಂಡೆ. ಇದೇನು ಹತ್ತಿತ್ತೆಂದರೆ ಏನಯ್ಯ ಗುಹೇಶ್ವರ ?

ಟೀಕು : ಸತ್ತ ಕೋಳಿ ಎಂದರೆ ಕುಕ್ಕಟನ ಗುಣಧರ್ಮವಪ್ಪ ಪ್ರಾತಃಜ್ಞಾನದ ಧ್ವನಿ, ಅಂತಪ್ಪ ಸತ್ರಾಣ ಉದಯವಾಯಿತ್ತೆಂಬುದೀಗ, ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತು ಸತ್ರಾಣ ಉದಯವಾದಲ್ಲಿ ಷಟ್‌ಚಕ್ರದ ಐವತ್ತೆರಡು ಅಕ್ಷರಂಗಳೆಲ್ಲವು ವಿವೇಕವೃಕ್ಷಸ್ವರೂಪವನೈದಿ, ಶಿವೋಹಮೆಂಬ ಧ್ವನಿ ಮಾಡುತ್ತಿದ್ದವು ಎಂಬುದೀಗ, ಮೊತ್ತದ ಮಾಮರನುಲಿಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತಾದ ಕಾರಣ ಅಜ್ಞಾನತಿಮಿರವಳಿದು, ಸುಜ್ಞಾನಪ್ರಕಾಶವಾಯಿತ್ತೆಂಬುದೀಗ, ಕತ್ತಲೆ ಬೆಳಗಾಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಸುಜ್ಞಾನೋದಯವೇ ಹೊತ್ತಾರೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸುಜ್ಞಾನಪ್ರಕಾಶದಿಂದ, ಸರ್ವತೋದಿಕ್ಕು ತಾನೆಯಾಗಿ ಖಂಡಿತ ಹೊಲಬುದಪ್ಪಿತ್ತೆಂಬುದೀಗ, ಹೊತ್ತಾರೆಯೆದ್ದು ಹೊಲಬುದಪ್ಪುವದ ಕಂಡೆನೆಂಬ ಶಬ್ದಕ್ಕರ್ಥ. ಅಂತು ಲಿಂಗಗ್ರಾಹಕನಾದ ಶರಣನೀ ತೆರವನರಿಯದೆ ಇದ್ದನೆಂಬುದೀಗ, ಏನು ಹತ್ತಿತ್ತೆಂದರೆ ಏನಯ್ಯಾ ಎಂಬ ಶಬ್ದಕ್ಕರ್ಥ.

೭೬೮

(೨) ಹಿಡಿದ ಕೈಯಮೇಲೆ ಕತ್ತಲೆಯಯ್ಯಾ. ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ. ನೆನೆವ ಮನೋಭಾವದ ಮೇಲೆ ಕತ್ತಲೆಯಯ್ಯಾ. ಕತ್ತಲೆ ಎಂಬುದು ಇತ್ತಲೆಯಯ್ಯಾ, ಗುಹೇಶ್ವರನೆಂಬುದು ಕತ್ತಲೆಯಯ್ಯಾ.

೭೬೯

(೩) ಪವನದ ಬಳಿಯಲ್ಲಿ ಹರಿಯಲಿ ಹರಿಯಲಿ, ನೆನಹಿನ ಬಳಿಯಲ್ಲಿ ಸುಳಿಯಲಿ ಸುಳಿಯಲಿ, ತಾಗಿದಲ್ಲದೆ ಬಾಗುವುದು ಉಂಟೆಂಬನ್ನಬರ ಬಳಸಲಿ ಬಳಸಲಿ, ಇಲ್ಲವೆಯಲ್ಲಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇನ್ನೇನ ಬಳಸಲುಂಟು ?

೭೭೦

(೪) ಕಾಯಗುಣಂಗಳಳಿದು ಜೀವನ್ಮುಕ್ತನಾದಬಳಿಕ ಸಮ್ಯಜ್ಞಾನವೆಂಬುದೊಂದು ಶಾಂತಿಯು ದೊರೆಕೊಂಡಿತ್ತು ನೋಡಿರೇ. ಅಂತರಂಗ ಬಹಿರಂಗವೆಂಬವನರಿಯನಾಗಿ, ದ್ವೈತಾದ್ವೈತವ ನಿಃಕರಸಿ, ನಿರ್ವಾಣ ನಿಷ್ಪತ್ತಿಯಾಗಿ, ಗುಹೇಶ್ವರಾ ನಿಮ್ಮ ಶರಣನನುಪಮಸುಖಿಯಾಗಿರ್ದ.

೭೭೧

(೫) ಭಿತ್ತಿ ಮೂರರ [ಮೇಲೆ ಚಿತ್ರ ಬರೆಯಿತ್ತು ಪ್ರಥಮ ಭಿತ್ತಿಯ ಚಿತ್ರ ಚಿತ್ರದಂತಿತ್ತು] ಎರಡನೆಯ ಭಿತ್ತಿಯ ಚಿತ್ರ ಹೋಗುತ್ತ ಬರುತ್ತ ಇದ್ದಿತ್ತು ಮೂರನೆಯ ಭಿತ್ತಿಯ ಚಿತ್ರ [ಮರಳಿ ಬಾರದೆ] ಹೋಯಿತ್ತು ಗುಹೇಶ್ವರಾ ನಿಮ್ಮ ಶರಣ ತ್ರಿವಿಧದಿಂದತ್ತತ್ತಲೆ.

೭೭೨

(೬) ಘನವ ಮನಕಂಡು, ಅದನೊಂದು ಮಾತಿಂಗೆ ತಂದು ನುಡಿದು ಹೇಳಿದಡೆ, ಅದೇ ಕಿರಿದು ನೋಡಾ. ಅದೇನು ಇಲ್ಲದ ನಿಸ್ಸಂಗದ ಸುಖವು ಗುಹೇಶ್ವರ.

೭೭೩

(೭) ಆ ಮಾತನೇ ಮನೆಯ ಮಾಡಿ, ಸತಿಯ ನೆಲೆಗೊಳಿಸಿ, ನಿಭ್ರಾಂತಿನ ಕದವನಿಕ್ಕಿ, ಸೂತಕವಳಿಯೆ ಸುಯಿಧಾನವು; ಇದನರಿದು ಮರೆದವರ ಕೂಡಲ ಚನ್ನಸಂಗಾ ನೀನೆಂದೆ.

೭೭೪

(೮) ವಸುಧೆ ಇಲ್ಲದ ಬೆಳಸು, ರಾಜಾನ್ನದ ಹೆಸರಿಲ್ಲದ ಓಗರ, ವೃಷಭ ಮುಟ್ಟದ ಹಯನು, ಬೆಣ್ಣೆಯ ಹೊಸೆದವರಿಲ್ಲದೆ ಕಂಡೆ. ಶಿಶುಕಂಡ ಕನಸಿನಂತೆ ಗುಹೇಶ್ವರನೆಂಬುದು ಹೆಸರಿಲ್ಲದ ಬಯಲು.

೭೭೫

(೯) ರವಿಯೊಳಡಗಿದ ಪ್ರತಿಬಿಂಬದಂತೆ ಹಿಡಿವರಿಗಳವ[ಲ್ಲ]೧ ದಿರಬೇಕು. ಅಣ್ಣಾ ಅಣ್ಣಾ ನಿನ್ನೊಳಡಗಿದ ಭೇದವ ಭಿನ್ನವ ಮಾಡುವರೇ ? ಎಲೆ ಅಣ್ಣಾ, ಅಣ್ಣಾ, ನಿನ್ನ ನುಡಿಯಲ್ಲಿ ಪ್ರತಿಬಿಂಬಗಳಾದವೇ ? ಎಲೆ ಅಣ್ಣಾ ಕೊಡನೊಳಗಣ ಜ್ಯೋತಿಯಡಗುವ ತೆರವನರಿಯದೆ ಮಿಗೆ ಮಿ[ಗೆವರಿ]೨ದಂತಾದೆಯೋ ಅಜಗಣ್ಣಾ

ಇಂತು ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ ಜ್ಞಾನನಿಷ್ಪತ್ತಿ ಎಂಬ ತ್ರಿವಿಧ ಸ್ಥಳಂಗಳೇಕವಾದ ಲಿಂಗವು, ಶರಣನ ಪಿಂಡದೊಳಗೆ, ಚಿತ್‌ಪಿಂಡದೊಳಗೆ, ಮಹತ್ಪಿಂಡಸ್ವರೂಪವನೈದಿದ ಪಿಂಡ ನಿರವಯವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಪಿಂಡಕಾಶಸ್ಥಲವಾದುದು.

೪. ಪಿಂಡಕಾಶಸ್ಥಲ

೭೭೬

(೧) ಮರದೊಳಗೆ ಮಂದ್ಯಾಗ್ನಿಯನುರಿಯದಂತಿರಿಸಿದೆ. ನೊರೆವಾಲೊಳಗೆ

೧–೧ ಲ್ಲೆ(ಮೂ) ೨–೨ ರಿ (ಮೂ)

ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನನಾರೂ ಕಾಣದಂತಿರಿಸಿದೆ. ನೀ ಮೆರೆಸಿದ ಭೇದಕ್ಕೆ ಬರಗಾದೆನಯ್ಯಾ ರಾಮನಾಥಾ.

೭೭೭

(೨) ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಬತ್ತು ಹತ್ತೆಂಬ ಮಾತು ನಿಮಗೇಕೆ ಹೇಳಿರೆ ? ನಾದ ಮುನ್ನ ಉತ್ಪತ್ಯವೋ ? ಬಿಂದು ಮುನ್ನ ಉತ್ಪತ್ಯವೋ ? ಈ ನಾದ ಬಿಂದುವಿನ ಕುಳಸ್ಥಲವ ಬಲ್ಲರೆ ನೀವು ಹೇಳಿರೇ ? ಈಡಾಪಿಂಗಳ ಸುಷುಮ್ನ ನಾಡಿಗಳ ಭೇದವ ಬಲ್ಲರೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.

೭೭೮

(೩) ಒಂದನೆಯ ಬಾಗಿಲಲ್ಲಿ ಮನವಿಪ್ಪುದು ಎರಡನೆಯ ಬಾಗಿಲಲ್ಲಿ ನೆನಹಿಪ್ಪುದು. ಮೂರನೆಯ ಬಾಗಿಲಲ್ಲಿ ಭಾವವಿಪ್ಪುದು. ನಾಲ್ಕನೆಯ ಬಾಗಿಲಲ್ಲಿ ಧ್ಯಾನವಿಪ್ಪುದು. ಐದನೆಯ ಬಾಗಿಲಲ್ಲಿ ಯೋಗವಿಪ್ಪುದು. ಆರನೆಯ ಬಾಗಿಲಲ್ಲಿ ಷಟ್‌ಸ್ಥಲಂಗಳಿಪ್ಪುವು. ಏಳನೆಯ ಬಾಗಿಲಲ್ಲಿ ಸಪ್ತಮಾತೃಕೆಯರಿಪ್ಪರು. ಎಂಟನೆಯ ಬಾಗಿಲಲ್ಲಿ ಅಷ್ಟಮೂರ್ತಿಗಳಿಪ್ಪರು. ಒಂಬತ್ತನೆಯ ಬಾಗಿಲಲ್ಲಿ, ನವ ಚಕ್ರಂಗಳಿಪ್ಪುವು ಹತ್ತನೆಯ ಬಾಗಿಲಲ್ಲಿ ಜ್ಞಾನವಿಪ್ಪುದು. ಒಂಬತ್ತು ಬಾಗಿಲ ಕದವನಿಕ್ಕಿ ಹೃದಯಾಕಾಶವೆಂಬ ಬಯಲೊಳಗೆ ಭರಿತನಾಗಿರ್ದ ನಮ್ಮ ಕೂಡಲ ಚನ್ನಸಂಗಮದೇವಾ.

೭೭೯

(೪) ಉದಕಮೂರ್ತಿಯಾಗಿ ಉದ್[ಯ]ವಾಯಿತ್ತು, ಪಿಂಡಿಗೆಯಲ್ಲಿಯೇ ಮೂಲಸ್ಥಾನ ಸ್ಥಾಪ್ಯವಾಯಿತ್ತು, ಸ್ವದೇಹ ಶಿವಪುರದಲ್ಲಿ ವಾಯು ಪರಿಮಳ ಪೂಜಾರಿಯಾಗಿ ದಿಂಡೆಯಕಟ್ಟಿ ಪೂಜಿಸುರ್ತಿದುವೊ ಶಿವಾಲಯದಾದಿ ಮಧ್ಯಸ್ಥಾನದಲ್ಲಿ ಗುಹೇಶ್ವರ ಗುಹೇಶ್ವರನೆಂಬುದಲ್ಲಿಯೇ ನಿಂದುದುವೋ.

೭೮೦

(೫) ಇಹಲೋಕ ಪರಲೋಕ ತಾನಿರ್ದಲ್ಲಿ, ಗಗನ ಮೇರುಮಂದಿರ ತಾನಿರ್ದಲ್ಲಿ, ಸಕಲ ಭುವನ ಸತ್ಯಲೋಕ ತಾನಿರ್ದಲ್ಲಿ, ನಿತ್ಯ ನಿರಂಜನ ಪರತತ್ವ ತಾನಿರ್ದಲ್ಲಿ, ಉತ್ತರೋತ್ತರ ಚತುರ್ವಳಯ ತಾನಿರ್ದಲ್ಲಿ, ಚಂದ್ರ, ಸೂರ್ಯ, ತಾರಾಮಂಡಲ ತಾನಿರ್ದಲ್ಲಿ, ಅಂತರ ಮಹದಂತರ ತಾನಿರ್ದಲ್ಲಿ, ಸ್ವತಂತ್ರ ಗುಹೇಶ್ವರ ತಾನಿರ್ದಲ್ಲಿ,

ಇಂತು ಪಿಂಡಾಕಾಶದಲ್ಲಿ ನಿರವಯನಾದ ಲಿಂಗವು; ಪಿಂಡ ಮಧ್ಯಸ್ಥನಾದ ಚಿತ್ತಿನಲ್ಲಿ ಬಿಂದ್ವಾಕಾಶ ಸ್ವರೂಪವನೈದಿ ಬಿಂದುನಾಮ ನಷ್ಟವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಬಿಂದ್ವಾಕಾಶಸ್ಥಲವಾದುದು.

೫. ಬಿಂದ್ವಾಕಾಶಸ್ಥಲ

೭೮೧

(೧) ಆಡಬಾರದ ಬಯಲು, ಸೂಡಬಾರದ ಬಯಲು, ಹಿಡಿಯಬಾರದ ಬಯಲು, ಒಡಲಿಲ್ಲದ ಬಯಲು, ಒಡಲೊಳಡಗಿದ ಭೇದವ ಲೋಕದ ಜಡಜೀವಿಗಳೆತ್ತ ಬಲ್ಲರಯ್ಯ ರಾಮನಾಥಾ ?

ಟೀಕು : ಪರಬ್ರಹ್ಮವೆಂಬುದೀಗ ಚಿದ್ಬೆಳಗಿನ ಬಯಲು, ಅಂತಪ್ಪ ಬಯಲನುಪಮಿಸಬಾರದೆಂಬುದೀಗ, ಆಡಬಾರದ ಬಯಲು ಎಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವ ಭಿನ್ನವಿಟ್ಟು ರೂಹಿಸಿ ಅಂಗದಲ್ಲಿ ಧರಿಸಿ ಪೂಜಿಸಬಾರದೆಂಬುದೀಗ, ಸೂಡಬಾರದ ಬಯಲು ಎಂಬ ಶಬ್ದಕ್ಕರ್ಥ. ಪರಬ್ರಹ್ಮವನು ಮನ ಭಾವ ಜ್ಞಾನ ಹಸ್ತಂಗಳಿಂದ ಲಕ್ಷವಿಟ್ಟು ಹಿಡಿಯಬಾರದೆಂಬುದೀಗ, ಹಿಡಿಯಬಾರದ ಬಯಲು ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮಕ್ಕೆ ದೇಹ ಕರಣಂಗಳಿಲ್ಲವೆಂಬುದೀಗ, ಒಡಲಿಲ್ಲದ ಬಯಲು ಎಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವ ತನ್ನ ಸ್ವಲೀಲೆಯಿಂದ ತನ್ನ ತದಂಶವನೆ ಜೀವಾತ್ಮನೆನಿಸಿ ದೇಹಕರಣ ಸಂಬಂಧವ ಮಾಡಿದಲ್ಲಿ ಆ ದೇಹ ಸಂಬಂಧಿಯಾದ ಆತ್ಮಾಂತರ್ಗವಾಗಿ ಶಿವನಿಪ್ಪನು. ಅದೆಂತೆಂದೊಡೆ, ನಷ್ಟ ಚಿನ್ನ ಬಣ್ಣದಂತೆ ಅಂತು ಶಿವನು ಆತ್ಮನ ಕೂಡೆ ತದಾಕಾರವಾಗಿ ಪಿಂಡಸ್ಥವಾಗಿರ್ದು ಆ ಜೀವಾತ್ಮನ ಕೂಡ ಧರ್ಮಕರ್ಮಂಗಳ ಹೊದ್ದದೆ ತನ್ನ ನಿಜವ ಪ್ರಕಾಶಿಸಿ ಜೀವಂಗೆ ಅರುಹದೆ ಅಡಗಿಪ್ಪುದು. ಅಂತು ತನ್ನ ನಿಜದ ನಿಲವಪ್ಪ ಪರವಸ್ತು ತಾನರಿಯದಿಪ್ಪುದು. ಜಡದೇಹ ಸಂಬಂಧಜೀವಿಗಳೆಂಬುದೀಗ, ಒಡಲಿಲ್ಲದ ಬಯಲು. ಒಡಲೊಳಡಗಿದ ಭೇದವ ಲೋಕದ ಜಡಜೀವಿಗಳು ಎತ್ತ ಬಲ್ಲರಯ್ಯ ರಾಮನಾಥಾ ಎಂಬ ಶಬ್ದಕ್ಕರ್ಥ.

೭೮೨

(೨) ಮನ ಶುದ್ಧವಾಯಿತ್ತು, ಮಜ್ಜನಕ್ಕೆರೆವಡೆ ಭಾವ ಮತ್ತೆಲ್ಲಿಯದೋ ? ಪತ್ರೆ ಪುಷ್ಪ ರಂಗವೋಲೆಯನಿಕ್ಕಲೇನು ? ಭಿತ್ತಿಯ ಚಿತ್ತಾರವೇ ? ಅವರು ಕಾಣಬೇಕು, ಇವರು ಕಾಣಬೇಕೆಂಬ ಭ್ರಮೆಯ ಭ್ರಮಿತರು ಅಂಗಹೀನರು. ಮನದಂಗವನಗಲದು ಕೇಳಿರೇ. ಅಂತಹವರಿಗೆ ಲಿಂಗ ಮತ್ತೆಲ್ಲಿಯದೋ ? ಸದಮದವಳಿದು ನಿಜವನರಿದಡೆ ಅದೇ ಲಿಂಗಪೂಜೆ ನೋಡಾ ? ಕೂಡಲ ಚನ್ನಸಂಗಯ್ಯ ಸರ್ವ ಸಾಹಿತ್ಯವಾಗಿಹನು.

೭೮೩

(೩) ಏಳು ತಾಳದ ಮೇಲೆ ಕೇಳುವ ಸುನಾಳದ, ಸ್ಥೂಲ, ಸೂಕ್ಷ್ಮ ಕೈಲಾಸದ ರಭಸ, ಗಂಗೆವಾಳುಕ ಸಮಾರುದ್ರರ ತಿಂಥಿಣಿ, ಗಗನ ಗಂಭೀರದ ಶಿವ ಸುತ್ತಿಯು ನೋಡಲು ಪಿಂಡಬ್ರಹ್ಮಾಂಡವಾಯಿತ್ತು ಅಖಂಡಿತ ನಿರಾಳ ಗುಹೇಶ್ವರಾ.

೭೮೪

(೪) ಪಂಚವರ್ಣ ಬಿಂದು ಪ್ರಪಂಚವನಳಿದುಳಿದಿರಲು, ಸಂಚರಿಸುವಡೆ, ಆ ಎಡೆಯು ಇಲ್ಲ. ನಿಂದ ಪ್ರಭೆಯಂಗವ ನೆರೆ ನುಂಗಿ, ಹಿಂದು, ಮುಂದು, ಎಡ, ಬಲ, ಎಂಬುದಿಲ್ಲ. ಕೆಳಗೆ ನಿಲ್ಲಲು, ಆಧಾರ ಮೊದಲಿಂಗಿಲ್ಲ, ಹೆಸರಿಲ್ಲದ ಕಡೆಗೆ ನಿಲುಹೆನೆಲು [೧][ಊರ್ಧ್ವವಿಲ್ಲ][೧]. ಎಲ್ಲ ನಡುವೆ ನಾನೇನಾಗಿರ್ದೆನೆಂದಡೆ, ತನ್ನೊಡಲೊಳಗೆ ಒಡೆದು ಮೂಡಿತ್ತು ತನ್ನಂತೆ ಬಯಲು ಈ ಬೆಡಗು ಬಿನ್ನಾಣವ ಜಡರರಿವರೇ ? ಇದನರಿದು ನುಡಿದು ತೋರಿದನು ಗುಹೇಶ್ವರನ ಶರಣ ಚನ್ನಬಸವಣ್ಣನು.

೭೮೫

(೫) ತೋರದೆ ತೋರಿದ ನೆಳಲಿನ ಬಿಂದುವ ನುಂಗಿ, ಬಾರದ ಬಯಲು ಕೂಡಿದ ಕಾರಣವೇನು? ಬಿಂದುವರಳಿದುದರಂದವ ತಾನರಿಯದು. ಅದು ಭೂತ ಪ್ರಭೆಯಲ್ಲಿ ನಿಷ್ಪತ್ತಿ ಎಂಬುದನರಿಯಬಂದುದು. ಆಶ್ರಯವಿಲ್ಲದೆ ನಿಂದುದು. ನಿರವಯವು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

ಇಂತು ಬಿಂದು ನಾಮ ನಷ್ಟವಾದ ನಿರ್ವಯ ಲಿಂಗವು, ಶರಣನ ಅರುಹಿನ ಕುರುಹಿಂದೆ ಆಶ್ರಯವಾಗಿರ್ದ ಮಹಾಘನ ಚೈತನ್ಯದಲ್ಲಿ ಅರುಹಿನ ಕುರುಹಳಿದು ನಿರವಯವಾಗಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಮಹದಾಕಾಶಸ್ಥಲವಾದುದು.

೬. ಮಹದಾಕಾಶಸ್ಥಲ

೭೮೬

(೧) ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ನಾಸ್ತಿಯಾಯಿತ್ತು, ತಾನಲ್ಲದನ್ಯ ವಾಸನೆ ಇಲ್ಲಾಗಿ ಅಲ್ಲಿಯ ಮಹತತ್ತ್ವ ಪೃಥ್ವಿಯಡಗಿತ್ತು, ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ಜಿಹ್ವೆಯಾಯಿತ್ತು, ತಾನಲ್ಲದನ್ಯರುಚಿ ಇಲ್ಲವಾಗಿ ಅಲ್ಲಿಯೇ ಮಹತತ್ತ್ವ ಅಪ್ಪುವಡಗಿತ್ತು, ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ನೇತ್ರವಾಯಿತ್ತು, ತಾನಲ್ಲದನ್ಯ ರೂಪಿಲ್ಲವಾಗಿ ಅಲ್ಲಿಯೇ ಮಹತತ್ತ್ವ ಅಗ್ನಿಯಡಗಿತ್ತು, ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ತ್ವಕ್ಕಾಗಿತ್ತು, ತಾನಲ್ಲದನ್ಯ ಸೋಂಕಿಲ್ಲವಾಗಿ ಅಲ್ಲಿಯೇ ಮಹತತ್ತ್ವ ವಾಯುವಡಗಿತ್ತು, ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ಶ್ರೋತ್ರವಾಯಿತ್ತು, ತಾನಲ್ಲದನ್ಯಶಬ್ದವಿಲ್ಲಾಗಿ ಅಲ್ಲಿಯೇ ಮಹತತ್ತ್ವ ಆಕಾಶವಡಗಿತ್ತು, ಇಂತು ಪಂಚ ಭೌತಿಕಂಗಳಡಗಿದರೆ ಪಂಚಬ್ರಹ್ಮಮಯವಾಯಿತ್ತು, ಅದರೊಳಗೆ ಜಗತ್ತಡಗಿದ ಭೇದವ ಅದೇ ಪಂಚವರ್ಣಾತೀತವಾಗಿ ಮಹತ್ತು ಮಹತ್ತನೊಳಕೊಂಡ ಶರಣನ ಭೇದವನೇನೆಂದುಪಮಿಸುವೆನಯ್ಯ ಗುಹೇಶ್ವರಾ ?

೧–೧ ವ್ಯರ್ಥ (ಮೂ)

ಟೀಕು : ಅಂಗಲಿಂಗಸಂಗವಾಗಿ ಭೇದವಳಿದು ಅಂಗವಿಲ್ಲ ಅಖಂಡಿತ ಲಿಂಗವಾದ ಶರಣನ ಪಂಚೇಂದ್ರಿಯಂಗಳೇ ಮೊದಲಾದ ಪಂಚವಿಷಯ ತತ್ವಂಗಳೆಲ್ಲ ಲಿಂಗವೆಯಾದಕಾರಣ ಶರಣನ ಸಾಕಾರವೇ ಪಂಚಬ್ರಹ್ಮಸ್ವರೂಪವಾಯಿತ್ತು, ಅಂತು ಪಂಚಬ್ರಹ್ಮಸ್ವರೂಪವನೊಳಕೊಂಡು, ಅನಕ್ಷರ ಸ್ವರೂಪಮಪ್ಪ ಪರಬ್ರಹ್ಮವೆಯಾಗಿಪ್ಪನು ಶರಣನು. ಅಂತು ಜಗದ್ಭಾವನೆಯಳಿದು, ಅಖಂಡಿತ ಲಿಂಗವೆಯಾಗಿಪ್ಪ, ಶರಣನ ಚಾರಿತ್ರವನುಪಮಿಸಿ ಹೇಳಬಾರದೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೭೮೭

(೭) ಕಾಮರಾಶಿಗೆ ಮಾಯದ ಕೊಳಗ ಆಳೆವುದು. ನೆಳಲು ಹೋಹುದು. ಬಯಲು ತುಂಬಿಹೆನೆಂದಡೆ ತುಂಬಲುಬಾರದು. ತುಂಬಿದರಾಶಿಯ ಕಾಣಲು ಬಾರದು. ಅಳತೆಗೆಬಾರದು. ಹೊಲೆಗೊಳಗಾಗದು ನೋಡಾ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ಮಿಗೆ ಬಯಲು.

೭೮೮

(೭) ಪ್ರಾ[೧][ಣಾ][೧]ಪಾನ ಮೊದಲಾದ ದಶವಾಯುಗಳ ಇಚ್ಛೆಯಲ್ಲಿ ಸುಳಿದಾಡದು. ಜ್ಞಾನದಿಚ್ಛೆಯಲ್ಲಿ ಬೆಳೆವುದು. ನಿರಾಲಂಬದಲ್ಲಿ ಆಡುವುದು. ಹೃದಯ ಕಮಲ ಪದ್ಮಪತ್ರದ ಸರವ ಲಾಲಿಸಿ ಸಂಪುಟ ಜಂಗಮದಾಟವನಾ[೨][ಡುವು][೨]ದು. ಪ್ರಸಾದದಲ್ಲಿ ಬೆಳೆವುದು ಕಲಿದೇವಾ ನಿಮ್ಮ ಬಸವಣ್ಣನ ನಿಲವದು.

೭೮೯

(೪) ಏನೆಂದು ಎನಲಿಲ್ಲ, ನುಡಿದು ಹೇಳಲಿಕ್ಕಿಲ್ಲ, ನಿಜದಲ್ಲಿ ನಿಂದ ಬೆರಗು ಕುರುಹರಿವುದೇ [೩][ಮರುಳೆ][೩]. ಹರಿದು ಹತ್ತುವದೇ ಬಯಲು ? ಅದು ತನ್ನಲ್ಲಿ ತಾನಾದ ಬಯಲು, ತಾನಾದ ಘನವು, ಇನ್ನೇನನರಸಲಿಲ್ಲ, ಅದು ಮುನ್ನವೇ ತಾನಿಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

೭೯೦

(೫) ಅನಾದಿ ಶರಣ ಹೃತ್ಕಮಲಮಧ್ಯದ ತೇಜೋಮಯವನೇನೆಂದು–ಪಮಿಸುವೆನಯ್ಯ ! ಜಲವೇ ಪಾದಶಿಲೆ [ಘನ ಬ್ರಹ್ಮಾಂಡವೇ ಶಿವಾಲಯ]. ಪೃಥ್ವಿಯೇ ಪಿಂಡಿಗೆ, ಆಕಾಶವೇ ಲಿಂಗ, ಸಪ್ತ ಸಮುದ್ರಂಗಳೇ ಪಂಚಾಮೃತ, ಮೇಘವೇ ಅಗ್ಗಣಿಯ [೪][ಬಿ][೪]ಬಂದುಗೆ, ಮಳೆಗಾಲವೇ ಮಜ್ಜನ, ಚಂದ್ರಮನೇ ನೊಸಲಗಂಧ, ನಕ್ಷತ್ರವೇ ಅಕ್ಷತೆ, ತರುಮರಾದಿಗಳೇ ಪತ್ರಪುಷ್ಪ, [೫][ಮೊಳಗೇ][೫] ಪಂಚಮಹಾವಾದ್ಯ, ಮಾಗಿ ಎಂಬ ಪರಿಯಾಣವ ಬೆಳಗಿ, ಬೇಸಗೆ ಎಂಬ ಓಗರವ

೧–೧ ಣೋ (ಮೂ) ೨–೨ ಡ (ಮೂ) ೩–೩ ಮರಣ (ಮೂ)
೪–೪ ಬ (ಮೂ) ೫–೫ ಒಳಗೆ (ಮೂ)

ಗಡಣಿಸಿ, ಸರ್ವ ಪರಿಮಳವೆಂಬ ತುಪ್ಪವನೆರೆದು, ಪರವೆಂಬ ಮೇಲೋಗರ ವನಿಕ್ಕಿ, ಬೆಳಗು ಕತ್ತಲೆ ಎಂಬ ಕನ್ನಡಕವ ಕಟ್ಟಿ, ಇಂತು ಲಿಂಗಾರೋಗಣೆಯ ಮಾಡಿಸಿ, ಸುಜ್ಞಾನದಲ್ಲಿ ಕೈಗರೆದು, ಭಾವವೆಂಬ ವೀಳೆಯವ ಕೊಟ್ಟು, ಆನು ನೀನೆಂಬ ಅನುಲೇಪನ ಗಂಧವ ಪೂಸಿ, ವಾಯುವೆಂಬ ವಸ್ತ್ರವನುಡಿಸಿ, ಎಲೆ ಗುಹೇಶ್ವರನೆಂಬ ಲಿಂಗವು ಪರಿಪೂರ್ಣವಾಗಿರ್ದ ಬಳಿಕ, ಮಜ್ಜನಕ್ಕೆರೆವ ಠಾವಾವುದೈ ಸಂಗನ ಬಸವಣ್ಣ.

ಇಂತು ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶವೆಂಬ ತ್ರಿವಿಧ ಸ್ಥಲವು ಏಕವಾದ ಲಿಂಗವು ಶರಣನ ಸರ್ವಕ್ರಿಯೆಯಲ್ಲಿಯೂ ತಾನೇ ಪ್ರಕಾಶವಾಗಿ, ತೋರುತ್ತಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಕ್ರಿಯಾಪ್ರಕಾಶಸ್ಥಲವಾದುದು.

೭ ಕ್ರಿಯಾಪ್ರಕಾಶಸ್ಥಲ

೭೯೧

(೧) ಕಾಲ ಸಡಗರ ಕೈಯಲಿದೆ. ಕೈಯ ಸಡಗರ ಕಂಗಳಲಿದೆ. ಅದೇನು ಕಾರಣವೆಂದಡೆ, ಕಂಗಳೇ ಕಾರಣವಾಗಿ. ಒಂದು ಮಾತಿನೊಳಗೆ ವಿಚಾರವಿದೆ. ಕನ್ನಡಿಯೊಳಗೆ ಕಾರ್ಯವಿದೆ. ಇದೇನು ಕಾರಣ ತಿಳಿಯದು ಹೇಳಾ ಗುಹೇಶ್ವರಾ ?

ಟೀಕು : ಗುರುಕಾರುಣ್ಯ ಸ್ವಾಯತವುಳ್ಳ ಶಿವಶರಣರಿಗೆ ಸದಾಚಾರದ ಚರ್ಯವೇ ಚರಣವಾಗಿ ಸತ್ಪಥದಲ್ಲಿ ಶಿವನ ಲೀಲೆಯಂ ನಡೆವುತ್ತಿಪ್ಪುದಾಗಿ, ಕಾಲ ಸಡಗರ ಎಂಬ ಶಬ್ದಕ್ಕರ್ಥ. ಇಂತಪ್ಪ ಸದಾಚಾರದ ಸಚ್ಚರ್ಯಕ್ಕೆ ಕರ್ತೃ ಸ್ಥಾನವಾವುದೆಂದಡೆ ಇಷ್ಟಲಿಂಗವೇ ಆಚಾರವಾದ ಕಾರಣ ಆ ಲಿಂಗ ಪ್ರವರ್ತನೆ ಕರಸ್ಥಲದಲ್ಲಿಪ್ಪುದು ಎಂಬುದೀಗ, ಕಾಲ ಸಡಗರ ಕೈಯಲಿದೆ ಎಂಬ ಶಬ್ದಕ್ಕರ್ಥ. ಆ ಕರಸ್ಥಲದ ಲಿಂಗಕ್ಕೆ ನೋಟವೇ ಆಶ್ರಯಸ್ಥಾನ. ಅದೆಂತೆಂದೊಡೆ, ಕೂಟಕ್ಕೆ ನೋಟವೇ ಕಾರಣವಾಗಿ ಎಂಬುದೀಗ, ಕೈಯ ಸಡಗರ ಕಂಗಳಲಿದೆ, ಕಂಗಳೇ ಕಾರಣವೆಂಬ ಶಬ್ದಕ್ಕರ್ಥ. ಈ ಪಥವನರಿದ ನಿಜದಲ್ಲಿ ನಿಂದು ಅರಿವ ಮಾತನಾಡಿದರೆ ತನ್ನ ಮಾತು ತನ್ನನಾಲಿಂಗಿಸಿಕೊಂಬ ಹಾಗೆ ಮಾತನಾಡಲು ಅದು ವಿಕವಾಕ್ಯಪ್ರತಿಷ್ಠೆ ಎನಿಸಿಕೊಂಡ ಕಾರಣದಿಂ ಒಂದು ಮಾತಿನೊಳಗೆ ವಿಚಾರವಿದೆ ಎಂಬ ಶಬ್ದಕ್ಕರ್ಥ. ಕನ್ನಡಿಯ ನೋಡಲು ತನ್ನಿಂದ ಭಿನ್ನವಿಲ್ಲವೆಂಬುದು ತನ್ನ ತಾನಿದಿರಿಟ್ಟು ನೋಡಿ ಕಂಡು ತನ್ನನರಿವುದೆ ಸದ್ವಿವೇಕವೆಂಬುದೀಗ, ಕನ್ನಡಿಯೊಳಗೆ ಕಾರ್ಯವಿದೆ ಎಂಬ ಶಬ್ದಕ್ಕರ್ಥ. ಇಂತಪ್ಪ ವಿವೇಕವ ತಿಳಿ[ಯ]ದವರು ಅಕ್ರಮಿಗಳೆಂಬುದೀಗ, ಇದೇನು ಕಾರಣ ತಿಳಿಯಲರಿಯದು ಎಂಬ ಶಬ್ದಕ್ಕರ್ಥ.

೭೯೨

(೨) ಅಯ್ಯ ನೀನು ತತ್ವಂಗಳ ಮರೆಗೊಂಡಿಪ್ಪನ್ನಕ್ಕರ ನಾನು ಕಾಯವ ಮರೆಗೊಂಡಿರ್ದೆನಯ್ಯ. ನಿನ್ನ ಬೆಡಗಿನ ಬಿನ್ನಾಣವ ನಾ ಬಲ್ಲೆ ಎನ್ನ ಬೆಡಗು

ಬಿನ್ನಾಣವ ನೀ ಬಲ್ಲೆ. ಮರೆಗೆ ಮರೆಯನೊಡ್ಡಿ ಜಾರಿ ಹೋದೆಯಲ್ಲಾ, ಈ ಬಿನ್ನಾಣದ ಮರೆಯನು ದರುಶನವ ಮಾಡಿ ನಿಮ್ಮೊಳಗೆನ್ನನಿರಿಸಿ ಎನ್ನೊಳಗೆ ನಿನ್ನನಿರಿಸಿ ಪ್ರಾಣ ಪ್ರಾಣವ ಸಂಯೋಗವ ಮಾಡಿದ ಶ್ರೀಗುರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

೭೯೩

(೩) ಜಲ ಮಲಿನವಪ್ಪವ ತೊಳೆವಂತೆ ಮನದ ತಮಂಧವ ತೊಳೆದು, ದರ್ಪಣದೊಳಗಣ ಪ್ರತಿಬಿಂದತಿಪ್ಪೆಯಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೭೯೪

(೪) ಲಿಂಗವನು ಪ್ರಾಣವನು ಒಂದು ಮಾಡಿ ತೋರಿದ ಗುರುವಿದ್ದಾನಲ್ಲಾ! ಲಿಂಗವಿದ್ದಾನಲ್ಲಾ ! ಇದಕ್ಕೆ ಸಾಕ್ಷಿಯಾಗಿ ಮುಂದೆ ಜಂಗಮವಿದ್ದಾನಲ್ಲಾ ! ಇಂತೀ ತ್ರಿವಿಧ ದೃಷ್ಟವ ಕಂಡು ಬೇರೆಂಬ ಅಜ್ಞಾನಕ್ಕೆ ಬೆರಗಾದೆ ಗುಹೇಶ್ವರಾ.

೭೯೫

(೫) ಮಾಡಿ ಮಾಡಿಸಿಕೊಂಬ ಉಭಯ ಒಂದೇ ಲಿಂಗ, ಒಂದೇ ಜಂಗಮ, ಒಂದೇ ಪ್ರಸಾದ, ಒಂದೇ ಒಂದಾದಲ್ಲಿ ಎರಡಾಗಿ ಮಾಡುವ ಭಕ್ತನು ನೀನೇ ಕೂಡಲಚನ್ನಸಂಗಮದೇವಾ.

೭೯೬

(೬) ಲಿಂಗ ಜಂಗಮದನುಮತವಾದ ಕ್ರಿಯೆ ಅಹುದಾಗದೆಂಬ ಸಂದೇಹ ಬೇಡ. ಕ್ರೀವಿಡಿದು ತನು[ಗೆ] ಗಮಿಸುವುದು. ಅರಿವುವಿಡಿದು ಮನ ಗಮಿಸುವುದು. ಕ್ರಿಯಾನುಭಾವದಿಂದ ಸಕಲೇಂದ್ರಿಯಂಗಳು ಕೂಡಲಚನ್ನಸಂಗಯ್ಯನಲ್ಲಿ ತಲ್ಲೀನ ತದ್ರೂಪ.

ಇಂತು ಕ್ರಿಯೆಯಲ್ಲಿ ತಾನೇ ಕ್ರಿಯಾ ಸ್ವರೂಪನಾಗಿ ಪ್ರಕಾಶಿಸುವ ಲಿಂಗವು ಮಹದೈಕ್ಯನ ಮಹಾನುಭಾವದ ಮಧ್ಯದಲ್ಲಿ ಭಾವಸ್ವರೂಪು ತಾನೆಯಾಗಿ ಪ್ರಕಾಶವಾಗಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಭಾವಪ್ರಕಾಶಸ್ಥಲವಾದುದು.

೮. ಭಾವಪ್ರಕಾಶಸ್ಥಲ

೭೯೭

(೧) ಆಚಾರ ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಆ ಇಷ್ಟಲಿಂಗವಿಡಿದಿಹುದೇ ಪ್ರಾಣಲಿಂಗ. ಸ್ವಾಯತ ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲಚೆನ್ನಸಂಗಯ್ಯನು ಲಿಂಗೈಕ್ಯ ಕಾಣಾ.

೧+ ವ (ಮೂ)

ಟೀಕು : ಅಂಗದ ಮೇಲೆ ಲಿಂಗಸ್ಥಾಯತವಾದ ಭಕ್ತನು ಕರ್ಮಕ್ರೀಗಳ ಬಿಟ್ಟು ಏಕಲಿಂಗನಿಷ್ಠಾವ್ರತಸ್ಥನಾಗಿ ಭಕ್ತಿಯಿಂದ ಆಚರಿಸುವದೇ ಆಚಾರ. ಅಂತಪ್ಪ ಆಚಾರವೆಡೆಗೊಂಡು ಭಕ್ತನ ಕರಸ್ಥಲವ ಇಷ್ಟಲಿಂಗದಲ್ಲಿ ಲಿಂಗ ಕಳೆ ಇಹುದೆಂಬುದೀಗ, ಆಚಾರವಂಗದ ಮೇಲೆ ಆಯತವಾದುದೇ ಇಷ್ಟಲಿಂಗವೆಂಬ ಶಬ್ದಕ್ಕರ್ಥ. ಆ ಇಷ್ಟಲಿಂಗದಲ್ಲಿ ನೈಷ್ಠಿಕಾಭಾವ ನೆಲೆಗೊಂಡ ಪ್ರಾಣನಲ್ಲಿ ಲಿಂಗಸಾಹಿತ್ಯವಾಗಿಹುದೆಂಬುದೀಗ, ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು ಎಂಬ ಶಬ್ದಕ್ಕರ್ಥ. ಇಂತು ಇಷ್ಟಲಿಂಗದ ಕಳೆಯ ಕಾಂಬ ಭಾವ ಪ್ರಾಣದಲ್ಲಿ ಹುಟ್ಟಿದಾತಂಗೆ ಪ್ರಾಣಲಿಂಗವಿಲ್ಲ. ಇಂತೆಂಬ ಮರ್ಮವ ತಿಳಿದು ಇಷ್ಟಲಿಂಗವೇ ಪ್ರಾಣಲಿಂಗವೆಂದರಿದು ಭಿನ್ನವಳಿದಿರ್ದ ಶರಣ ಲಿಂಗೈಕ್ಯನೆಂಬುದೀಗ ಈ ಭೇದವ ಭೇದಿಸಬಲ್ಲಂಗೆ ಲಿಂಗೈಕ್ಯವೆಂಬ ಶಬ್ದಕ್ಕರ್ಥ.

೭೯೮

(೨) ಲಿಂಗ ಪ್ರಾಣವೆಂಬೆನೆ ? ಪ್ರಾಣದ ಹಂಗಿನ ಲಿಂಗ. ಪ್ರಾಣ ಲಿಂಗವೆಂಬೆನೆ ? ಲಿಂಗದ ಹಂಗಿನ ಪ್ರಾಣ. ಲಿಂಗ ಪ್ರಾಣವಲ್ಲ, ಪ್ರಾಣ ಲಿಂಗವಲ್ಲ. ಉಭಯ ಸಂದಳಿದವರ ತೋರಿ ಬದುಕಿಸಯ್ಯಾ ಕೂಡಲಚನ್ನಸಂಗಮದೇವಾ.

೭೯೯

(೩) ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ ಮಾಡುವ ಕರ್ಮಿ ನೀ ಕೇಳಾ. ಉದಯವೆಂದೇನೋ ಶರಣಂಗೆ ? ಮಧ್ಯಾಹ್ನವೆಂದೇನೋ ಶರಣಂಗೆ ? ಅಸ್ತಮಾನವೆಂದೇನೋ ಶರಣಂಗೆ ? ಮಹಾ ಮೇರುವಿನ ಮರೆಯಲ್ಲಿರ್ದು ತನ್ನ ನೆಳಲನರಸುವ ಭಾವಭ್ರಮಿತರ ಮೆಚ್ಚ ನಮ್ಮ ಕೂಡಲಚನ್ನಸಂಗಮದೇವ.

೮೦೦

(೪) ಎಲೆ ಗುರುಕಾರುಣ್ಯವಾಯಿತ್ತೆಂಬ ಅಣ್ಣಗಳು ನೀವು ಕೇಳಿರೇ. ಶಿವನಾಮ ಆವ ಕಡೆ ? ಭಕ್ತಿ ಆವ ಕಡೆ ? ಉತ್ಪತ್ಯವ ಬಲ್ಲರೆ, ನೀವು ಹೇಳಿರೇ. ಭಕ್ತಿಯ ಮೇಲೆ ಸಾಹಿತ್ಯವ ಮಾಡಿ ಕೊಟ್ಟನಲ್ಲಾ ನಿಮ್ಮ ಶ್ರೀಗುರು. ಶಿವನ ಶಿವಂಗರ್ಪಿಸುವ ಪರಿ ಎಂತೋ ? ಶಿವ ನಷ್ಟ, ಶಕ್ತಿ ನಷ್ಟ. ಉಭಯ ನಾಸ್ತಿಯಾದಡೆ ಕೂಡಲಚೆನ್ನ ಸಂಗನೆಂಬೆ.

೮೦೧

(೫) ಉತ್ತುಮಾಂಗ, ಗಳ, ಕಕ್ಷೆ, ಕರಸ್ಥಲ, ಮುಖಸಜ್ಜೆ, ಅಮಳೋಕ್ಯವೆಂಬ ಅಕಟಕಟಾ ನಿನ್ನ ವಾರ್ತೆಯ ಕೇಳಲಾಗದು. ಕೂಡಲ ಚನ್ನಸಂಗಯ್ಯ ಲಿಂಗವು ಸರ್ವಾಂಗವಲ್ಲದೆ ಕೇಳಲಾಗದು.

೮೦೨

(೬) ಕಂಗಳ ಮುಂದೆ ತೋರಿದ ಮಚ್ಚು ಮನದ ಮೇಲೆ ತಿಳಿಯುತ್ತಿದೇನೋ!

ಕಳೆಯಬಾರದು, ಕೇಳಬಾರದು. ಕಂಗಳ ಕತ್ತಲೆಯ ವನದ ಮಿಂಚು ಇದ ಬಲ್ಲವರನಲ್ಲೆನ್ನಿಸಿತ್ತು. ಸಿಮ್ಮಲಿಗೆಯ ಚನ್ನರಾಮನೆಂಬ ನಾಮದೊಡಕು.

೮೦೩

(೭) ಆತನ ನೋಡಿದಡೆ ದೆಸೆಗಳ ಮರೆದೆ. ಇನ್ನೆಂತವ್ವಾ ! ಆತ ನುಡಿಸಿದಡೆ ಮೈ ಬೆಮರ್ದೆ. ಇನ್ನೆಂತವ್ವಾ ! ಅವ್ವಾ ಕೈಯ ಹಿಡಿದಡೆ ಎನ್ನ ನಿರಿಗಳು ಸಡಿಲಿದವು ಇನ್ನೆಂತವ್ವಾ ! ಅವ್ವಾ, ನಮ್ಮ ಮಹಾಲಿಂಗ ಗಜೇಶ್ವರನಪ್ಪಿದನೆಂದಡೆ ಆ ನಷ್ಟವ ಮರೆದೆನಿನ್ನೆಂತವ್ವಾ !

೮೦೪

(೮) ಸಾವಯವೆಂದಡೆ ನಿರವಯವಾಯಿತ್ತು, ನಿರವಯವೆಂದಡೆ ಸಾವಯವಾಯಿತ್ತು, ಸಾವಯ ನಿರವಯ ತನ್ನೊಳಗಡಗಿತ್ತು, ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ ಕೂಡಲಚನ್ನಸಂಗನ ಶರಣನ ನಿಲವು.

೮೦೫

(೯) ಸ್ಥಲ ಹೋಯಿತ್ತೆನಗೆ, ನಿಃಸ್ಥಲ ಹೋಯಿತ್ತೆನಗೆ, ಗೋರಿಕಲ್ಲ ಮಾಡ ಹೋಯಿತ್ತೆನಗೆ, ಹೂವಿನ ವಿಮಾನ ಹೋಯಿತ್ತೆನಗೆ, ಬಸವ ಹೋದನೆನಗೆ. ಬಸವನ ಮನೆಯ ಜಂಗಮ ಹೋದನೆನಗೆ. ಇನ್ನು ಬಸವಾ ಬಸವಾ ಎಂದೆನಾದಡೆ ಕೂಡಲ ಚನ್ನಸಂಗಮದೇವಾ ನಿಮ್ಮಾಣೆ.

ಇಂತು ಭಾವಪ್ರಕಾಶವನೈದಿದ ಅಂಗವು ಮಹದ್ಯೈಕ್ಯ ಭಾವ ಭಾವಿಕ ಭಾವಿತೃಗಳೆಂಬ ತ್ರಿವಿಧವು ನಷ್ಟವಾಗಿ ಮಹಾಜ್ಞಾನವೇ ತಾನಾಗಿ ತನ್ನಲ್ಲಿ ತಾನು ಪ್ರಕಾಶವಾದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನಪ್ರಕಾಶಸ್ಥಲವಾದುದು.

೯. ಜ್ಞಾನಪ್ರಕಾಶಸ್ಥಲ

೮೦೬

(೧) ಅರಸಲಿಲ್ಲದ ಘನವನರಸುವದದೇನೋ? ತಿಳಿವುದದೇನೋ? ತಿಳಿವಿನ ಮುಂದಣ ಸುಳುಹು ತಾನೇನೋ? ಸರದ ಸಮತೆಯ ಪರಿಣಾಮವ ನೋಡಾ. ಗುಹೇಶ್ವರನೆಂಬುದು ಅದೇ ಕಂಡ್ಯಾ.

ಟೀಕು : ಅರಸುವ ಅರಿಕೆಗಳಿಗೆ ಸಿ[1][ಕ್ಕ][1]ದ ವಸ್ತುವ ಅರಸಿ ನೋಡಿಹೆವೆಂದರೆ ಕಾಣಬಾರದು. ಅದೇನು ಕಾರಣವೆಂದಡೆ, ಅರಸುವಾತನು ತಾನೇ ಆ ವಸ್ತು ಆದ ಕಾರಣ [2][ನುಡಿದ ಕುರುಹಿಗೆ][2] ತಂದರೆ ಆ ವಸ್ತು ನಿಶ್ಶಬ್ದ ಬ್ರಹ್ಮವೆನಿಸಿಪ್ಪುದಾಗಿ, ನುಡಿಗೆ ಸಿಕ್ಕದೆಂಬುದೀಗ, ಸರದ ಸಮತೆಯ ಪರಿಣಾಮವ ನೋಡಾ ಎಂಬ ಶಬ್ದಕ್ಕರ್ಥ. ಇಂತು ನಿಜವನರಿದಡೆ ಬೇರೆ ಅರಸಲಿಲ್ಲ, ತಾನೇ ವಸ್ತುವೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೧–೧ ಕ್ಕಿ (ಮೂ) ೨–೨ ನುಡಿದು ಕುರುಹಿಂಗೆ (ಮೂ)

೮೦೭

(೨) ಸುಖವ ಬಲ್ಲಾತ ಸುಖಿಯಲ್ಲ. ದುಃಖವ ಬಲ್ಲಾತ ದುಃಖಿಯಲ್ಲ. ಸುಖ–ದುಃಖವೆರಡನು ಬಲ್ಲಾತನು ಜ್ಞಾನಿಯಲ್ಲ. ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ ಆತನೇ ಬಲ್ಲತನದ ಮಹಾಜ್ಞಾನಿ ಕಂಡಾ ಗುಹೇಶ್ವರಾ.

೮೦೮

(೩) ಅನ್ಯಲಿಂಗ ಅನ್ಯಲಿಂಗವೆಂದೆಂಬಿರಿ. ಅನ್ಯಲಿಂಗವಾವುದು ಬಲ್ಲರೆ ನೀವು ಹೇಳಿರೇ. ಅಂಗದ ಮೇಲೆ ಲಿಂಗವುಳ್ಳವರ ಮನೆಯ ಹೋಗಿ ಸಲಿಸಲಾಗದು. ಬರುಕಾಯರಿಗೆ ನೀಡಲಾಗದು. ಗುರು ಲಿಂಗ ಜಂಗಮ ಪ್ರಸಾದವಿಲ್ಲದವರ ಕಂಡಡೆ ಮಾಡುವಾತನೇ ಭಕ್ತ ಕೂಡಲ ಚನ್ನಸಂಗಮದೇವಾ ?

೮೦೯

(೪) ಕಾಯದ ಕೊನೆಯ ಮೊನೆಯ ಮೇಲೆ ಲಿಂಗವೋ ? ಜೀವದ ಕೊನೆಯ ಮೊನೆಯ ಮೇಲೆ ಲಿಂಗವೋ ? ಕಾಯವೇ ಲಿಂಗವೆಂದುಸುರುವ ಖಂಡಿತರನೇನೆಂಬೆ ? ಜೀವಲಿಂಗವೆಂದು ಪೂಜಿಸುವ ಉಪಜೀವಿಗಳನೇನೆಂಬೆ ? ಭಾವಲಿಂಗವೆಂದು ಪೂಜಿಸುವ ಭ್ರಮಿತರನೇನೆಂಬೆ ? ಕಾಯಲಿಂಗವೇ ? ಅಲ್ಲ. ಜೀವ ಲಿಂಗವೇ? ಅಲ್ಲ. ಭಾವ ಲಿಂಗವೇ ? ಅಲ್ಲ. ಲಿಂಗವಳಿದು, ಉಭಯಲಿಂಗ ೧[ವ]ಳಿದು ದೃಷ್ಟಲಿಂಗದಲ್ಲಿ ನೆರೆಯಬಲ್ಲಡೆ ಕೂಡಲ ಚನ್ನಸಂಗಯ್ಯನಲ್ಲಿ ಅವರು ಅಚ್ಚಲಿಂಗೈಕ್ಯ ರೆಂಬೆ.

೮೧೦

(೫) ಕಾಯಾನುಭಾವಿಗಳು ಕಾಯದಲ್ಲಿಯೇ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿಯೇ ಮುಕ್ತರು. ಪ್ರಾಣಾನುಭಾವಿಗಳು ಪ್ರಾಣದಲ್ಲಿಯೇ ಮುಕ್ತರು. ಪವನಾನುಭಾವಿಗಳು ಪವನದಲ್ಲಿಯೇ ಮುಕ್ತರು. ಇವರನೆಂತು ಸರಿಯೆಂಬೆ ಲಿಂಗಾನುಭಾವಿಗಳಿಗೆ ? ಸ್ವಯಂ ಪ್ರಕಾಶ ಲಿಂಗದಲ್ಲಿ ಸದಾ ಸನ್ನಿಹಿತರು ಕೂಡಲ ಚನ್ನಸಂಗಯ್ಯ ನಿಮ್ಮ ಶರಣರು.

೮೧೧

(೬) ಅಂತರಂಗದ ನಿರವಯವದು. ೧[ಲಿ]ಂಗವೇ ? ಬಹಿರಂಗದ ಸಾವಯವವದು. ಜಂಗಮವೇ? ಅಂತರಂಗದ ನಿರವಯವದು. [ಜ್ಞಾನ ಸೂಚನೆಯ ಭಾವವೆಂದು ನಾಚರು ನೋಡಾ]. ಬಹಿರಂಗದ ಸಾವಯವವದು. ೩[ವಿಷಯ]೩ ದೃಷ್ಟಿ ಎಂ೪[ದು]೪ ಹೇಸರು ನೋಡಾ. ಅಂತರಂಗ ಬಹಿರಂಗ ಉಭಯ ಒಂದಾದ ಭೇದ ಕೂಡಲ ಚನ್ನಸಂಗಾ ನಿಮ್ಮಲ್ಲಿ.

೧–೧ ವು (ಮೂ) ೨–೨ ಆ (ಮೂ) ೩–೩ ಮಾಂಸ (ಮೂ) ೪–೪ ಬ (ಮೂ)

೮೧೨

(೭) ಹೃದಯ ಕಮಲ ಕರ್ಣಿಕಾಕುಹರ ಮಧ್ಯದಲ್ಲಿ ನೋಡಿ ಕಾಂಬರೆ ಶರಣನು ? ಜಿಹ್ವೆಯ ಕೊನೆಯಲ್ಲಿ ನುಡಿವನೇ ಶರಣನು ? ಪ್ರಕನತಿ ತನು ಗುಣ ವಿರಹಿತ ಸುಕೃತಶೂನ್ಯ ಘನ ಮುಗ್ಧ ಕೂಡಲ ಚನ್ನಸಂಗನಲ್ಲಿ ಲಿಂಗೈಕ್ಯನು.

೮೧೩

(೮) ಅರಿವಿನಿಂದ ಅರಿದಿಹೆನೆಂದರೆ, ಅರಿವು ಮರವೆಗೊಳಗಾಯಿತ್ತಾಗಿ, ಆ ಅರಿವಿನಿಂದ ಅರಿದಿಹೆನೆಂದೆಂಬಜ್ಞಾನಿಯ ಮಾತ ಕೇಳಲಾಗದು. ಭಾವದಿಂದ ಭಾವಿಸಿಹೆನೆಂದರೆ ಭಾವ ಭ್ರಾಂತಿಗೊಳಗಾಯಿತ್ತಾಗಿ, ಭಾವದಿಂದ ಭಾವಿಸಿಹೆನೆಂಬ ಭ್ರಮಿತರ ಮಾತ ಕೇಳಲಾಗದು. ಜ್ಞಾನದಿಂದರಿದಿಹೆನೆಂದರೆ ಜ್ಞಾನವಜ್ಞಾನಕ್ಕೊಳಗಾಯಿತ್ತಾಗಿ ಜ್ಞಾನದಿಂದರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು. ಸುಜ್ಞಾನ ಭರಿತ ಕೂಡಲಚನ್ನಸಂಗಾ ನಿಮ್ಮ ಶರಣ.

೮೧೪

(೯) ಅರಿವೆಂಬ ಅಲಗಿಂಗೆ ಕುರುಹಿನ ಮೋಹ ನೋಡಾ. ಅರಿವರತು ಒಳಗ ನೆರೆಯಬಲ್ಲವರಿಲ್ಲ. ಶಂಕೆ ಸವ್ಯಕ್ಕಿಲ್ಲಾಗಿ ಅಂತಿಂತೆನಲಿಲ್ಲ. ಅಂಕವ ಕಾಣದೆ ಬಾಳುವೆಗೊಳಗಾದಿರಲ್ಲಾ ! ನಿರ್ದೇಪವಹ ಅಂಕಕ್ಕೆ ಹರಿವರಿವುದೇ ಗೆಲವು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೇನೋ ?

೮೧೫

(೧೦) ಭಕ್ತಸ್ಥಲ ಘನವೆಂದು ನುಡಿವಿರಿ, ಭಕ್ತಸ್ಥಲಕ್ಕೆ ಮಹೇಶ್ವರ ಸ್ಥಲವೇ ಪ್ರತಿ. ಮಹೇಶ್ವರಸ್ಥಲ ಘನವೆಂದು ನುಡಿವಿರಿ, ಮಹೇಶ್ವರಸ್ಥಲಕ್ಕೆ ಪ್ರಸಾದಿಸ್ಥಲವೇ ಪ್ರತಿ. ಪ್ರಸಾದಿಸ್ಥಲ ಘನವೆಂದು ನುಡಿವಿರಿ. ಪ್ರಸಾದಿ ಸ್ಥಲಕ್ಕೆ ಪ್ರಾಣಲಿಂಗಿಸ್ಥಲವೇ ಪ್ರತಿ. ಪ್ರಾಣ ಲಿಂಗಿಸ್ಥಲ ಘನವೆಂದು ನುಡಿವಿರಿ. ಪ್ರಾಣಲಿಂಗಿಸ್ಥಲಕ್ಕೆ ಶರಣಸ್ಥಲವೇ ಪ್ರತಿ ಶರಣಸ್ಥಲ ಘನವೆಂದು ನುಡಿವಿರಿ. ಶರಣಸ್ಥಲಕ್ಕೆ ಐಕ್ಯಸ್ಥಲವೇ ಪ್ರತಿ. ಪ್ರತಿಯುಳ್ಳುದರಿವೇ ? ಪ್ರತಿಯುಳ್ಳುದು ಜ್ಞಾನವೇ ? ಪ್ರತಿಯುಳ್ಳುದು ನಿರ್ಭಾವವೇ? ಪ್ರತಿಯುಳ್ಳುದು ಮೋಕ್ಷವೇ? ಇಂತೀ ಷಟ್‌ಸ್ಥಲ ಮಾರ್ಗವಲ್ಲ. ಸ್ಥಲದಲ್ಲಿ ನಿಃಸ್ಥಲದಲ್ಲಿ ಸಾವಯವದಲ್ಲಿ ಒಳಗಲ್ಲ, ಹೊರಗಲ್ಲ. ಸಂಗದಲ್ಲಿ ನಿಸ್ಸಂಗದಲ್ಲಿ ಸುಸಂಗ. ಬಯಲು ಕೂಡಲ ಚನ್ನಸಂಗಾ ನಿಮ್ಮ ಶರಣ.

೮೧೬

(೧೧) ಬ್ರಹ್ಮನ ಹೆಂಡತಿಯ ಹಿಡಿತಂದು ಅಡಿಗೆಯ ಮಾಡಿಸಿದಾತ ಬಸವಣ್ಣ. ಹರಿಯ ಸಾಸಿರದೇಳುನೂರು ಕುಮಾರಿತಿಯರ ಹಿಡಿತಂದಾತ ಬಸವಣ್ಣ. ಲಿಂಗಕ್ಕೆ ಮಾಡುತ್ತ ತನ್ನ ಸೋಂಕದೆಂದಾತ ಬಸವಣ್ಣ. ಜಂಗಮಕ್ಕೆ ಮಾಡುತ್ತ ಕೈಯಲ್ಲಿ ಹಿಡಿದುಕೊಂಡು ಹೋದಾತ ಬಸವಣ್ಣ. ಬೀಳನುಟ್ಟು ಬಯಲಾಗಿ ಹೋದಾತ ಬಸವಣ್ಣ. ಆ ಬಸವಣ್ಣನ ಹಿಂದನೆ ತೋರು ಕಂಡಾ ಕಲಿದೇವಯ್ಯ.

ಇಂತು ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶವೆಂಬ ತ್ರಿವಿಧ ಸ್ಥಲಂಗಳೇಕಮಾದ ಲಿಂಗವು ಮಹದ್ಯೈಕ್ಯನಲ್ಲಿ ಪರಿಣಾಮಗ್ರಾಹಕವನ್ಯೈದಿ ಲಿಂಗದಲ್ಲಿ ಭಿನ್ನಭಾವವಳಿದು ಪರಮಾನಂದದಲ್ಲಿ ಪರಿಣಾಮಿಯಾಗಿರ್ದುಕೊಂಡುದೇ ಪ್ರಸಾದವಾದುದರಭೇದವೆಂತಿರ್ದುದೆಂದಡೆ ಮುಂದೆ ಸ್ವೀಕೃತಪ್ರಸಾದಿ ಸ್ಥಲವಾದುದು.

ಮಹಾಲಿಂಗ

ವಿವರಣೆ: ಹಿಂದಿನ ಪ್ರಸಾದಲಿಂಗಸ್ಥಲದಲ್ಲಿ ಜ್ಞಾನವು ಪರಿಪೂರ್ಣ ಸ್ಥಿತಿಯನ್ನು ಹೊಂದುತ್ತದೆ. ಅದು ಶರಣಸ್ಥಲವಾಗಿದೆ. ಈ ಸ್ಥಲದಲ್ಲಿ ಮನುಷ್ಯನ ಬಹಿರಂಗ, ಅಂತರಂಗಗಳೆಲ್ಲ ಪೂರ್ಣತೆಯನ್ನು ಹೊಂದುತ್ತವೆ. ಇದರ ಮುಂದಿನ ಸ್ಥಲವಾದ ಮಹಾಲಿಂಗಸ್ಥಲದಲ್ಲಿ ಮನುಷ್ಯನ ಎಲ್ಲ ತೆರದ ಕ್ರಿಯೆಗಳು ನಿವೃತ್ತಿಯನ್ನು ಹೊಂದಿ ಕೆಡೆಗೆ ಅವನು ಶೂನ್ಯಸ್ಥಲವನ್ನು ಹೊಂದುವನು. ಇದೇ ಸಾಮರಸ್ಯವು ಅಥವಾ ಬಯಲು. ಇದರ ಸ್ಥಿತ್ಯಂತರಗಳು ಈ ಸ್ಥಲದಲ್ಲಿ ವಿವರಿಸಲ್ಪಟ್ಟಿರುತ್ತವೆ.

ಇದರಲ್ಲಿ ಒಂಬತ್ತು ವಿಭಾಗಗಳಿವೆ. ಅವುಗಳನ್ನು ನಾವು ಪುನಃ ಮೂರು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಈ ಒಂಬತ್ತು ಸ್ಥಲಗಳಲ್ಲಿ ಕಡೆಯದು ಜ್ಞಾನಶೂನ್ಯಸ್ಥಲವಾಗಿರುತ್ತದೆ.

೧ ನೆಯ ವಿಭಾಗ : ಕೊಂಡುದು ಪ್ರಸಾದಿಸ್ಥಲ, ನಿಂದುದೋಗರಸ್ಥಲ, ಚರಾಚರನಾಸ್ತಿಸ್ಥಲ ಇವುಗಳು ಈ ವಿಭಾಗದಲ್ಲಿ ಬರುತ್ತವೆ. ಲಿಂಗದಲ್ಲಿ ಭಿನ್ನ ಭಾವವಳಿದು ಪರಮಾನಂದದಲ್ಲಿ ಪರಿಣಾಮಿಯಾಗಿರುವದೇ ಕೊಂಡುದು ಪ್ರಸಾದಿಸ್ಥಲವು. ಇದರಲ್ಲಿ ಬಾಹ್ಯೇಂದ್ರಿಯಗಳ ವಿಷಯ ಲೋಲುಪತೆಯು ಉಳಿಯುವದಿಲ್ಲ. ಹೀಗೆ ತೃಪ್ತಿಗೊಂಡಲ್ಲಿ ಲಿಂಗವು ಮುಂದೆ ಮಹತ್‌ಸ್ಥಲದಲ್ಲಿ ನಿಲ್ಲುವದು. ಇದೇ ನಿಂದುದೋಗರಸ್ಥಲವು. ಆಗ ಮನುಷ್ಯನು ನಿಸ್ತರಂಗವಾದ ಅಂಬುಧಿಯೋಪಾದಿಯಲ್ಲಿರುವನು. ಇದೇ ಈ ಎರಡನೆಯ ಸ್ಥಿತಿಯು. ಆ ಬಳಿಕ ಏನೇನೂ ಚಲಿಸದೆ ಚರಾಚರವೆಂಬ ಉಭಯವೂ ನಾಸ್ತಿಯಾಗುವವು. ಇದು ಚರಾಚರನಾಸ್ತಿಸ್ಥಲ.

೨ ನೆಯ ವಿಭಾಗ: ಈ ವಿಭಾಗದಲ್ಲಿ ಭಾಂಡಸ್ಥಲ, ಭಾಜನಸ್ಥಲ, ಮತ್ತು ಅಂಗಲೇಪನ ಸ್ಥಲಗಳು ಬರುವವು. ಹಿಂದೆ ೧ನೆಯ ವಿಭಾಗದಲ್ಲಿ ಹೇಳಿದ ಮೂರು ಸ್ಥಲಗಳ ಅನುಭವವನ್ನು ಮಾಹಾಲಿಂಗವು ಏಕೀಕರಿಸಿಕೊಂಡು ಸರ್ವಾಂಗವೆಂಬ ಭಾಂಡದಲ್ಲಿ ಅಡಗುವದು. ಮತ್ತು ಸರ್ವಾಚಾರ ಸಂಪತ್ತೆಂಬ ಸಕಲ ಕರಣ ದ್ರವ್ಯಗಳಿಗೆ ಆಶ್ರಯಸ್ಥಾನವಾಗುವದು. ಹೀಗಾದಲ್ಲಿ ಅದು ಭಾಂಡಸ್ಥಲವೆಂದು ಎನಿಸಿಕೊಳ್ಳುವದು. ಮುಂದೆ ಈ ಲಿಂಗವು ಕರಣ ದ್ರವ್ಯಗಳಿಗೆ ಆಶ್ರಯ ಸ್ಥಾನವಾಗಲು ಐಕ್ಯನಿಗೂ ಕೂಡ ಭಾಜನವಾಗುವದು. ಇದೇ ಭಾಜನಸ್ಥಲವು.

ಮುಂದೆ ಆ ಮಹಾಲಿಂಗವು ಸರ್ವಾಂಗದಲ್ಲೆಲ್ಲ ಲೇಪಹೊಂದುವದು. ಇದು ಅಂಗಲೇಪನವು.

೩ ನೆಯ ವಿಭಾಗ : ಮೂರನೆಯ ವಿಭಾಗದಲ್ಲಿ ಸ್ವಪರವರಿಯದ ಸ್ಥಲ, ಭಾವಾಭಾವ ನಷ್ಟಸ್ಥಲ ಮತ್ತು ಜ್ಞಾನಶೂನ್ಯಸ್ಥಲಗಳು ಬರುತ್ತವೆ. ಇವು ಕಡೆಯ ಮೂರು ವಿಭೇದಗಳು. ಹಿಂದಿನ ಸ್ಥಲಗಳ ಅನುಭವವನ್ನು ಹೊಂದಿ, ಭಿನ್ನತೆಗಳು ಅಡಗಿ, ಸ್ವಯವೆಂಬುದು ನಿಜಸ್ಥಿತಿಯನ್ನು ಹೊಂದುವದು. ಇದು ಸ್ವಪರವರಿಯದ ಸ್ಥಲವು. ಮುಂದೆ ಭಾವಾಭಾವಗಳೆಂಬೆರಡೂ ನಷ್ಟವಾಗಿ ಲಿಂಗವು ಮೂಲ ಜ್ಞಾನವನು ಹೊಂದಿ, ಜ್ಞಾನವೇ ತಾನಾಗಿ, ಆ ಜ್ಞಾನವು ನಿಜದಲ್ಲಿ ನಿಲ್ಲುವದು. ಇದು ಜ್ಞಾನಶೂನ್ಯಸ್ಥಲವು. ನೂರೊಂದುಸ್ಥಲಗಳಲ್ಲಿ ಇದೇ ಕಡೆಯ ಸ್ಥಲವು. ಹಿಂದಿನ ಅಂಗಸ್ಥಲಗಳು ಮತ್ತು ಲಿಂಗಸ್ಥಲಗಳೆಲ್ಲವುಗಳ ಅನುಭವವನ್ನು ಹೊಂದಿ ಶೂನ್ಯದಲ್ಲಿ ನಿಲ್ಲುವದೇ ಜ್ಞಾನಶೂನ್ಯಸ್ಥಲವು.

ಈ ಎಲ್ಲ ಸ್ಥಲಗಳನ್ನರಿತವನಿಗೆ ಷಟ್‌ಸ್ಥಲಗಳ ಸಂಪೂರ್ಣ ಅನುಭವವಾಗುವದು. ಇವನೇ ಷಟ್‌ಸ್ಥಲ ಬ್ರಹ್ಮಿಯು, ಷಟ್‌ಸ್ಥಲಜ್ಞಾನಿಯು, ಅವನೇ ಲಿಂಗಾಂಗ ಸಾಮರಸ್ಯತ್ವವನ್ನು ಹೊಂದಲು ಅರ್ಹನು.

೧. ಸ್ವೀಕೃತ ಪ್ರಸಾದಿಸ್ಥಲ ಅಥವಾ ಕೊಂಡುದುಪ್ರಸಾದಿಸ್ಥಲ

೮೧೭

(೧) ಪುರುಷವಿರಹಿತ ಅರ್ಪಿತ, ರುಚಿವಿರಹಿತ ಪ್ರಸಾದ ಎಂದೆನ್ನದೆ ಮತ್ತಾರಿಗಾದಡೆಯೂ ಸಾಧ್ಯವಾಗಲಿ, ಕೂಡಲ ಚನ್ನಸಂಗಯ್ಯನ ಪ್ರಸಾದಿಯ ಪ್ರಸಾದದಿಂದ ಎಂದೆನೆಂದೆ. ಮತ್ತಾರಿಗೂ ಆದಡೆಯೂ ಸಾಧ್ಯವಾಗಲಿ.

೮೧೮

(೨) ಇಲ್ಲೆಂಬುದ ಇಲ್ಲೆನಬಲ್ಲಡೆ ಅರ್ಪಿತ. ಉಂಟೆಂಬುದನುಂಟೆನಬಲ್ಲಡೆ ಪ್ರಸಾದಿ. ಆ ಪ್ರಸಾದವ ತಾನಿಲ್ಲದೆ ಕೊಳಬಲ್ಲಡೆ ಪ್ರಸಾದಿ. ಆ ಪ್ರಸಾದಿಯ ಪರಮಪರಿಣಾಮವೇ ಪ್ರಸಾದವಾಗಿ, ಆ ಪ್ರಸಾದವು ತಾನಾಗಿ ಬೆಳಗುತಿರ್ಪನಯ್ಯ ಕೂಡಲ ಚನ್ನಸಂಗಾ ನಿಮ್ಮ ಶರಣ.

೮೧೯

(೩) ಆರು ಬಣ್ಣದ ಮೃಗವು ತೋರಿಯಡಗಿತ್ತು, ಬಯಲು ಮೂರು ಲೋಕದೊಳಗೆ ಸಾರಿ ಹೆಜ್ಜೆಯ ನೋಡಿ ತೊರೆಯ ಬೆಂಬಳಿವಿಡಿದು ತೋಹಿನಲ್ಲಿಗೆ ಬಂದಿತ್ತು, ಮೃಗವು ಸೋಹಂ ಸೋಹಂ ಎನುತಿದ್ದಿತ್ತು, ಇಹಪರವ ಮೀರಿ ನಿಂದಿತ್ತು, ತೋರಲಿಲ್ಲದ ಬಿಲ್ಲು ಬೇರೆ ೧[ಬೇರೆನಿಸಿದ]೧ ಬಾಣ ಅರಿವಿನ ಕೈಯಲ್ಲಿ ಕುರುಹ

೧–೧ ನಿರಿಸಿದ (ಮೂ)

ಬಾಣಸವ ಮಾಡಿ, ತೆರಹಿಲ್ಲದ ಪ್ರಸಾದವೇ ತಾನಾಗಿ ಅಗ್ನಿ ಇಲ್ಲದ ಪಾಕದಲ್ಲಿ ಅಡಿಗೆಯ ಮಾಡಿದ ಬೋನವ ಅರ್ಪಿತವ ಮಾಡಿದ ಪ್ರಸಾದದಿಂದ ಸುಖಿಯಾದೆ ಗುಹೇಶ್ವರಾ.

೬೨೦

(೪) ಅರ್ಪಿತವಿಲ್ಲ ಲಿಂಗಕ್ಕೆ, ಅನರ್ಪಿತವಿಲ್ಲದ ಪ್ರಸಾದಿ. ಶರಣಂಗೆ ರೂಹಿಲ್ಲ. ಲಿಂಗಕ್ಕೆ ರುಚಿ ಇಲ್ಲದ ಪ್ರಸಾದಿ, ಅರ್ಪಿಸಲರಿಯದ ಶರಣನು. ಅನರ್ಪಿತವನೊಲ್ಲದ ಪ್ರಸಾದಿ. ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನೆಂಬ ಲಿಂಗವಿದು ತಾನಿಲ್ಲದ ಸುಯಿಧಾನಿ.

೬೨೧

(೫) ನಿಜ ಉಂಡ ನಿರ್ಮಲದಲೊದಗಿರ್ದ ಜ್ಯೋತಿಯನು ಮರಳಿ ಪ್ರಸಾದರೂಪ ತಾನಾಗಿಯೇ ನಿಜಉಂಡ ಬ್ರಹ್ಮಾಂಡ ಬೆಳಗಿ ತೋರಿತ್ತಲ್ಲದೆ ಮಹಾಪ್ರಸಾದಿಯಲ್ಲಿ ರಾಘವನಾಥಾ.

ಇಂತು ಪರಮಾನಂದ ಪ್ರಸಾದದ ನಿಜ ಸುಖವನಾಲಿಂಗಿಸಿ ತೃಪ್ತಿಯಾದ ಲಿಂಗವು ಮಹದೈಕ್ಯನಲ್ಲಿ ತಾನು ತಾನಾಗಿ ನಿಂದುದೇ ಓಗರಸ್ಥಲವಾಗಿ ನಿಂದ ನಿಲವಿನ ಭೇದವೆಂತಿರ್ದುದೆಂದಡೆ ,ಮುಂದೆ ಶಿಷ್ಟೋದನಪ್ರಸಾದಿಸ್ಥಲವಾದುದು.

೨. ಶಿಷ್ಟೋದನ ಪ್ರಸಾದಿಸ್ಥಲ ಅಥವಾ ನಿಂದುದೋಗರಸ್ಥಲ

೬೨೨

(೧) ಮೇರುಮಂದಿರದಲ್ಲಿ ಈರೈದುತಲೆ ಧಾರುಣಿಯ ಮನುಜರು ಬಣ್ಣಿಸುತ್ತಿಪ್ಪರು. ಜ್ಞಾನಾಮೃತರಸದಲ್ಲಿ ಓಗರವ ಮಾಡಿ ಆರೋಗಣೆಯ ಮಾಡಿದೆ. ವಿಷಮಾಕ್ಷ ಹರ ಭಸ್ಮವಿಭೂಷಣ ಶಶಿಧರ ಶರಣು ಶರಣೆನುತ್ತಿದ್ದೆನು. ಇಂದ್ರಾಗ್ನಿ ಯಮಪುರ ಪಟ್ಟಣದಲ್ಲಿ ಚಂದ್ರಹಾರವ ಬೇಡಿದಡೆ. ಖಂಡಕಪಾಲವ ಕೊಯಿದುಂಡು ತೃಪ್ತಿ ಅಖಂಡಿತ ನಿರವಯ ಗುಹೇಶ್ವರಾ.

ಟೀಕು : ಮೇರುವೆಂದರೆ ತನುತ್ರಯಂಗಳಿಗೆ ಆಧಾರಕರ್ತುವಪ್ಪ ಅಹಂಕಾರ. ಆ ದೇಹದ ಅಹಂಕಾರದಲ್ಲಿ ದಶನಾಳ. ಆ ನಾಳಂಗಳೊಳಗೆ ದಶವಾಯುಗಳು ತಲೆದೋರುತ್ತಿಪ್ಪುವೆಂಬುದೀಗ–ಮೇರು ಮಂದಿರದಲ್ಲಿ ಈರೈದು ತಲೆ ಎಂಬ ಶಬ್ದಕ್ಕರ್ಥ. ಆ ದಶವಾಯುಗಳ ಸಂಚವ ಕೆಡಿಸಿ ಜ್ಞಾನಾಮೃತರಸದಲ್ಲಿ ಸರ್ವಾಂಗವನು ಸಮರಸಪಾಕವ ಮಾಡಿ ಸುಖಿಪೆವೆಂಬುದೀಗ ಜ್ಞಾನಾಮೃತ ರಸದಲ್ಲಿ ಓಗರವ ಮಾಡಿ ಆರೋಗಣೆಯ ಮಾಡಿದನೆಂಬ ಶಬ್ದಕ್ಕರ್ಥ. ಆ ಆರೋಗಣೆಯ ಮಾಡಿ ಪರಮಾನಂದಸುಖಿಯಾಗಿ ತನ್ನ ತಾನೇ ಶಿವನೆಂದರಿದು ತನ್ನ ತಾನೇ ಸ್ತುತಿಸುತ್ತಿರ್ದನೆಂಬುದೀಗ ವಿಷಮಾಕ್ಷ ಹರ ಭಸ್ಮ [ವಿ]ಭೂಷಣ ಶಶಿಧರ ಶರಣು

ಶರಣೆನುತಿದ್ದೆನೆಂಬ ಶಬ್ದಕ್ಕರ್ಥ. ಇಂತಪ್ಪ ರಾಜಯೋಗಿ ಸಗುಣಯೋಗ[ದ][೧] ಅಗ್ನಿಮಂಡಲದ ಮೇಲನೊತ್ತಿ ಕೋಣ ಮಂದಿರವೆಂಬ ಕುಂಡಲಿಯ ಮೇಲೆ ಕುಳ್ಳಿರ್ದು ಊರ್ಧ್ವಚಕ್ರವೆಂಬ ಇಂದ್ರ ಯಮಪುರದಲ್ಲಿ ಅನುಭಾವಸೂತ್ರವ ಸಂಬಂಧಿಸಿ ಅಲ್ಲಿಪ್ಪ ಅಮೃತಾಹಾರವನು ಆರೋಗಿಸಿ ಇಂತು ಸಗುಣ ನಿರ್ಗುಣ ಯೋಗಂಗಳೆರಡರಲ್ಲಿಯೂ ಸುಖಿಯಾಗಿ ಅಖಂಡ ಪರಿಪೂರ್ಣನಾಗಿದ್ದನೆಂಬುದೀಗ, ಇಂದ್ರಾಗ್ನಿ ಯಮಪುರ ಪಟ್ಟಣದಲ್ಲಿ ಚಂದ್ರಹಾರವ ಬೇಡಿದಡೆ ಖಂಡ ಕಪಾಲದಲ್ಲಿ ಉಂಡು ತೃಪ್ತಿ ಅಖಂಡಿತ ನಿರ್ವಯಲು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೬೨೩

(೨) ಸರ್ವಾಂಗವು ಲಿಂಗವಾದ ಆರೋಗಣೆಗೆ ಆಪ್ಯಾಯನವೇ ಕರಸ್ಥಲ. ನಿಂದುದೋಗರ ಬಂದಪರಿಣಾಮವೇ ಪ್ರಸಾದ. ಹೇಳಲಿಲ್ಲದ ಕೇಳಲಿಲ್ಲದ ನಿರ್ಣಯ, ಕೊಡಲಿಲ್ಲ ಕಳೆಯಲಿಲ್ಲ ನೋಡಾ. ಇದು ಕಾರಣ ಕೂಡಲ ಚನ್ನಸಂಗಮದೇವ ಬಸವನನುಗ್ರಹಿಸಿಕೊಟ್ಟ ನಿಂದ ನಿಲವಿನ ಸಹಜ ಉದಯಿಸಿದ ಲಿಂಗ ನಿರಂತರ ನಿಜದ ಪರಿಯಿಂತುಟು.

೬೨೪

(೩) ನಿಶ್ಚಲವೆಂಬ ಭಾಜನದಲ್ಲಿ ನಿಜಜ್ಞಾನವೆಂಬ ಅಕ್ಕಿಯ ತುಂಬಿ ಪರಮಾನಂದವೆಂಬ ಜಲವನೆರೆದು ಸ್ವಯಂಪ್ರಕಾಶವೆಂಬ ಅಗ್ನಿಯಿಂದ ಪಾಕವಾದ ಲಿಂಗದೋಗರವು ಮಹಾಘನದಲ್ಲಿ ನಿಂದು ಘನತೃಪ್ತಿಯನೀವುತ್ತಿದ್ದಿತ್ತು ಕಾಣಿರೇ. ಅದನು ಕಣ್ಣಿಲ್ಲದೆ ಕಂಡು, ಕೈಯಿಲ್ಲದೆ ಕೊಂಡು, ಬಾಯಿಲ್ಲದೆ ಉಂಡು, ತೃಪ್ತಿಯ ಅರಿವಿಲ್ಲದ ಅರಿವಿನಿಂದರಿದು ಸುಖಿಯಾದೆ ಗುಹೇಶ್ವರಾ.

೬೨೫

(೪) ಭಕ್ತ ಪ್ರಸಾದವ ಕೊಂಡು ಪ್ರಸಾದವಾದ. ಪ್ರಸಾದ ಭಕ್ತನ ನುಂಗಿ ಭಕ್ತನಾಯಿತ್ತು ಭಕ್ತನು ಪ್ರಸಾದವು ವಿಕಾರ್ಥವಾಗಿ ಲಿಂಗ[ಸಂಗಮವ ಮೆರೆದು][೨] ಭಕ್ತನೇ ಭವಿಯಾದ ಪ್ರಸಾದ ಪ್ರಸಾದವೇ ಓಗರವಾಯಿತ್ತು ಮತ್ತಾ ಓಗರವೇ [ಭವಿ ಭವಿಯೆ][೩] ಓಗರವಾಯಿತ್ತು ಓಗರ ಭವಿ ಎಂಬೆರೆಡಿಲ್ಲದೆ ಓಗರವಾಯಿತ್ತು ಗುಹೇಶ್ವರಾ.

ಇಂತು ನಿಜದ ನಿಲವು ನಿಂದು ನಿಸ್ತರಂಗವಾದ ಅಂಬುಧಿಯಂತಿಪ್ಪುದಾ ಲಿಂಗವು ಐಕ್ಯನಲ್ಲಿ ಚರಾಚರವೆಂಬುಭಯವು ಲಯವಾದ ಭೇದವೆಂತಿರ್ದುದೆಂದಡೆ ಮುಂದೆ ಚರಾಚರನಾಸ್ತಿಸ್ಥಲವಾದುದು.

೧–೧ ವ (ಮೂ) ೨–೨ ಸಂಗ ಎರಡು (ಮೂ) ೩–೩ ಭವಿಯ (ಮೂ)

೩. ಚರಾಚರನಾಸ್ತಿಸ್ಥಲ

೮೨೬

(೧) ಸೊಪ್ಪಡಗಿದ ಸುಮ್ಮಾನಿಗಳಲ್ಲಿ ಗತಿಯನರಸುವವರೇ ? ಅವಗತಿ ಮತಿಯನರಸುವರೇ ? ಅಂಗವಿಲ್ಲ, ಪಾವನಸ್ವರೂಪ ಲಿಂಗಲೀಯವಾದವರಲ್ಲಿಗೆ ಗತಿಯನರಸುವರೇ ? ಮತಿಯನರಸುವರೇ ಗುಹೇಶ್ವರನೆಂಬ ನಿಜವಿಡಿದವರಲ್ಲಿ ?

ಟೀಕು : ತನುವಿನ ಮರವೇ ಮನದ ವ್ಯಾಕುಳವಳಿದು ನಿಜ ತತ್ವಸ್ವರೂಪ ತಾನೇ ಎಂದು ಅದು ಮಹಾಲಿಂಗೈಕ್ಯನು ತನ್ನಲ್ಲಿ ತಾನೇ ವಿಶ್ರಾಂತಿಯನೈದಿಪ್ಪನಾಗಿ ಆ ಶರಣನಲ್ಲಿ ಅವಗುಣ, ಧರ್ಮ ಕರ್ಮಂಗಳನು ಅರುಪಿ ನೋಡಿಹನೆಂಬರೆ ಕಾಣಬಾರದೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೮೨೭

(೨) ಆಕಾರ ನಿರಾಕಾರವೆಂಬೆರಡು ಸ್ವರೂಪಂಗಳು. ಒಂದು ಆಹ್ವಾನ, ಒಂದು ವಿಸರ್ಜನ, ಒಂದು [೧][ವ್ಯಾಕುಳ][೧] ಒಂದು [೨][ನಿರಾಕುಳ][೨], ಉಭಯಕುಳ ರಹಿತ ಗುಹೇಶ್ವರಾ ನಿಮ್ಮ ಶರಣ ನಿಶ್ಚಿಂತ.

೮೨೮

(೩) ವ್ಯಾಪ್ತ ವಾಪ್ತಿ ಎಂಬುದು ಲಿಂಗದ ಭಾವ. ತನ್ನಲ್ಲಿ ತಾ ನಿಂದುದು. ದೃಷ್ಟವಾಗಿ ಮೋಹವಾಗಿ ತನ್ನಲಲ್ಲಿ ತಾ ನಿಂದುದು. ಅರಸುವ ಬೆರಿಸುವ ಭೇದವು ತಾನಾಗಿ ನಿಂದುದು. ಮಹಾಘನ ಸೋಮೇಶ್ವರನೆಂಬ ಶಬ್ದವನೊಳಕೊಂಡಿತ್ತು.*

೮೨೯

(೪) ಅರಿವಿನಹೃದಯ ಕಂದೆರೆಯಬೇಕೆಂದು ಗುರುವಿಂದು ಕಲ್ಪಿಸಿಕೊಂಬರಲ್ಲದೆ, ಗುರುವೆಂದೆನಲುಂಟೇ ? ಶಿಷ್ಯಂಗೆ ಶಿಷ್ಯನೆಂದೆನಲುಂಟೇ ? ಗುರುವಿಂಗೆ ಗಮನಾಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದು ಹೇಳಾ ಗುಹೇಶ್ವರಾ ?

೮೩೦

(೫) ಸ್ಥಲದಿಂದ ನಡೆನುಡಿಯಾಯಿತ್ತು ನಿಃಸ್ಥಲದಿಂದ ನಡೆನುಡಿಗಟ್ಟಿತ್ತು, ನೋಡಲೊಡನೆ ಸ್ಥಲಹೋಗಿ ತೋರಿತ್ತು, ಆರಯ್ಯಲೊಡನೆ ನಿಃಸ್ಥಲವಾಯಿತ್ತು, ಸ್ಥಲವಲ್ಲ ನಿಃಸ್ಥಲವಲ್ಲ, ನೋಟವೇ ಕೂಟ ಕೂಡಲ ಚನ್ನಸಂಗಯ್ಯ.

೮೩೧

(೬) ಎರಡು ಬೆಟ್ಟದ ನಡುವೆ ಕರಡಿಯ ಮಿಳಿಯ ಮಾಡಿ, [೩]ಹು[ಲಿ][೩]ಯನೆ [೪][ತ್ತನು][೪] ಹೂಡಿ ಹೊಡೆದವರಾರೋ ? ಎರಡರ ಎಂಟೆರಡರ ಆರರ ನಾಲ್ಕೆರಡರ

೧–೧ ಸುರಾಳ (ಮೂ) ೨–೨ ನಿರಾಳ (ಮೂ)

* ಇದರ ಮುಂದಿನ 'ಆಕಾರ ನಿರಾಕಾರ.....' ಎಂಬ ವಚನ ಇದೇ ಭಾಗದಲ್ಲಿ ಪುನರುಕ್ತವಾಗಿರುವದರಿಂದ ತೆಗೆದುಹಾಕಲಾಗಿದೆ (ಸಂ).

೩–೩ ಳಿ (ಮೂ) ೪–೪ ತ್ತುವ (ಮೂ)

[ಶರಧಿ] ಶರಧಿಯ ಕೂಡಿ ಮೊರೆವುತ್ತಿದೇನೋ ? ಕುರುಡ ಹೆಳವನ ಕೈವಿಡಿದು ನಡೆವಂತೆ ಗುಹೇಶ್ವರನೆಂಬುದು ನಿರಾಳದ ನಿಲವು.

೮೩೨

(೭) ನುಡಿಯಿಂದ ನಡೆಗೆಟ್ಟಿತ್ತು, ನಡೆಯಿಂದ ನುಡಿಗೆಟ್ಟಿತ್ತು, ಭಾವವದು ಸುಟ್ಟು ಅದು ತಾನೇ ನಾಚಿ ನಿಂದಿತ್ತಲ್ಲಾ, ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾಯಿತ್ತಲ್ಲಾ.*

ಇಂತು ಕೊಂಡುದು ಪ್ರಸಾದಿ, ನಿಂದುದೋಗರ, ಚರಾಚರನಾಸ್ತಿ ಎಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಮಹದ್ಯೈಕ್ಯನ ಸರ್ವಾಂಗವೆಂಬ ಭಾವದೊಳಡಗಿ ಸರ್ವಾಚಾರ ಸಂಪತ್ತೆಂಬ ಸಕಲ ಕರಣ ದ್ರವ್ಯಂಗಳಿಗೆ ಆಶ್ರಯ ಸ್ಥಾನವಾಗಿರ್ದ ಭೇದವೆಂತಿರ್ಪುದೆಂದಡೆ, ಮುಂದೆ ಭಾಂಡಸ್ಥಲವಾದುದು.

೪. ಭಾಂಡಸ್ಥಲ

೮೩೩

(೧) ನರರು ಸುರರು ಕಿನ್ನರರು ಮೊದಲಾದವರೆಲ್ಲರು ಪಿಂಡವೆಂಬ ಭಾಂಡದಲ್ಲಿ ಅಡಗಿಹರಾಗಿ ನಾನವ ರೂಹಿಸಬಲ್ಲೆನೇ ಅಯ್ಯ? ದೇವಗಣ ರುದ್ರಗಣ ಪ್ರಮಥಗಣ ಮೊದಲಾದ ವರೆಲ್ಲರೂ ಬ್ರಹ್ಮಾಂಡವೆಂಬ ಭಾಂಡದಲ್ಲಿ ಅಡಗಿಹರಾಗಿ ನಾನವರ ಭಾವಿಸಬಲ್ಲೆನೇ ಅಯ್ಯಾ ? ಸತ್ಯರು ಮುಕ್ತರು ನಿತ್ಯರೆಂಬ ಮಹಾಮಹಿಮರೆಲ್ಲರು ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅಡಗಿಹರಾಗಿ, ನಾನವರನರಿದು ಬಲ್ಲೆನೇ ಅಯ್ಯ ? ಇಂತೀ ತ್ರಿವಿಧ ಭಾಂಡವನೊಳಕೊಂಡ ಅಖಂಡಿತ ಪರಿಪೂರ್ಣ ಭಾಂಡವೇ ತನ್ನ ಇರವೆಂದರಿದ ನಿಜಲಿಂಗೈಕ್ಯನ ಉಪಮಿಸಲಿಲ್ಲ, ಉಪಮಿಸಲಿಲ್ಲಾಗಿ ರೂಹಿಸಲಿಲ್ಲ, ರೂಹಿಸಲಿಲ್ಲವಾಗಿ ಭಾವಿಸಲಿಲ್ಲ, ಭಾವಿಸಲಿಲ್ಲವಾಗಿ ಅರಿಯಲಿಲ್ಲ, ಅರಿಯಲಿಲ್ಲದ ಅರಿವೇ ತಾನಾಗಿ ಗುಹೇಶ್ವರನೆಂಬುದು ಬೇರಿಲ್ಲ.

೮೩೪

(೨) ಆಯತವಿಲ್ಲದ ಮಠದಲ್ಲಿ, ಅಗ್ನಿ ಇಲ್ಲದೆ ಬೋನವ ಮಾಡಿ ಭಾವವಿಲ್ಲದ ಶಿವಕಾರ್ಯಂಗಳು ಬೋನವಿಲ್ಲದೆ ಅರಸಿ ಕೊಟ್ಟಡೆ ಆಪ್ಯಾಯನ ಆರಿಗೂ ಅಡಸದಿದ್ದುದ ಕಂಡು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು.

೮೩೫

(೩) ತನುವೇ ಭಾಂಡವಾಗಿ, ಮನವೇ ಸುಯಿಧಾನವಾಗಿ, ಜ್ಞಾನಾಗ್ನಿಯಲ್ಲಿ ಪದಾರ್ಥವ ಮಾಡಿಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರ್ಶನಮೂರ್ತಿ ನೀನೇ.ನಿನ್ನ ಪ್ರಸಾದಕ್ಕೆ ನಮೋ ನಮೋ ಎಂಬೆ ಕೂಡಲ ಚನ್ನಸಂಗಮದೇವಾ.

* ಇದರ ನಂತರ 'ಸೊಪ್ಪಡಗಿನ.....' ಎಂಬ ವಚನ ಇದೇ ಭಾಗದಲ್ಲಿ ಪುನರುಕ್ತವಾಗಿರುವದರಿಂದ ತೆಗೆದುಹಾಕಲಾಗಿದೆ (ಸಂ).

ಇಂತು ಸಕಲ ಕರಣಂಗಳೆಂಬ ಸರ್ವಾಚಾರಸಾಧನಂಗಳನಿಂಬುಗೊಂಡು ಭಾಂಡ ಸ್ವರೂಪವನೈದಿದ ಲಿಂಗವು ಮಹದೈಕ್ಯಂಗೆ ತಾನೇ ಭಾಜನವಾದ ಭೇದವೆಂತಿರ್ದುದೆಂದಡೆ ,ಮುಂದೆ ಭಾಜನಸ್ಥಲವಾದುದು.

೫. ಭಾಜನಸ್ಥಲ

೮೩೬

(೧) ಘನವಪ್ಪ ಬೋನವ ಒಂದನುರಿವ ಪರಿವಾಣದಲ್ಲಿ ಹಿಡಿದು ಗುರುಲಿಂಗವಾರೋಗಣೆಮಾಡಿ ಮಿಕ್ಕುದು ಪ್ರಸಾದ. ಇಂತೀ ತೆರದ ಘನವಪ್ಪ ಲಿಂಗವನು ಒಂದನುವಿನಲ್ಲಿ ತಂದಿರಿಸಿ ಘನವಪ್ಪಬೋನವನುಲಿಂಗವಾರೋಗಣೆಯ ಮಾಡಿ ಮಿಕ್ಕುದ ಕೊಳಬಲ್ಲಡೆ ಪ್ರಸಾದಿ. ಇಂತೀ ತೆರನ ಬೆಸಗೊಳ್ಳಬಲ್ಲಡೆ ಎನ್ನ ಬೆಸಗೊಳ್ಳಯ್ಯ ಗುಹೇಶ್ವರಾ.

ಟೀಕು : ಪರಿಪೂರ್ಣ ಪ್ರಸಾದಿಯ ಪರಿಪೂರ್ಣವೆಂಬ ಅಂಗಭಾಜನದಲ್ಲಿ ಪರಿಪೂರ್ಣರುಚಿ ಅಳವಡಲು ಆ ಪ್ರಸಾದವ ಕೊಂಬುದೀಗ, ಅಲ್ಲಿ ಪರಿಪೂರ್ಣ ರೂಪು ಅರ್ಪಿತವಾದ ಸುಖವ ಕೊಂಬುದೀಗ ಗುರುಪ್ರಸಾದ. ಇಂತಪ್ಪ ಶರಣನ ಪರಿಪೂರ್ಣಪ್ರಾಣದ ಅಂಗಭಾಜನದಲ್ಲಿ ಲಿಂಗಪ್ರಸಾದ. ಈ ತೆರನ ಇಂತಪ್ಪ ಶರಣನೇ ಬಲ್ಲನೆಂಬ ಶಬ್ದಕ್ಕರ್ಥ.

೮೩೭

(೨) ಪರಿಯಾಣ ಭಾಜನವೆಂಬರು, ಪರಿಯಾಣ ಭಾಜನವಲ್ಲ ನೋಡಾ. ಮಹಾಲಿಂಗಕ್ಕೆ ತನ್ನ ಶ್ರೀಮನವೇ ಭಾಜನವು. ಬೀಸರವೋಗದೆ ಮೀಸಲ ವಾಗರ್ಪಿಸಬಲ್ಲಡೆ ಕೂಡಿಕೊಂಡಿಪ್ಪನು ಕೂಡಲಸಂಗಮದೇವನು.

೮೩೮

(೩) ಸಾರಾಯಪದಾರ್ಥವನಾರಯ್ಯಬೇಕೆಂದು ಶರಣ ಮರ್ತ್ಯಕ್ಕೆ ಬಿಜ ಯಂಗೈದು ಇಪ್ಪತ್ತೈದಿಂದ್ರಿಯಂಗಳ ಭಕ್ತರಮಾಡಿ ಮೆಲ್ಲಮೆಲ್ಲನೆ ಅವರ ಪೂರ್ವಾ ಶ್ರಯವ ಕಳೆದು ಕಲ್ಪಿತವಿಲ್ಲದೆ ಅರ್ಪಿತವ ಮಾಡಲು ಕೂಡಲ ಚನ್ನಸಂಗಯ್ಯಂಗೆ ಬೇಕೆಂದುಕೊಂಡಿರ್ದನಯ್ಯ.

೮೩೯

(೪) ಸಹಭಾಜನ ಸಹಭೋಜನವೆಂದೆಂಬರು. ಭಾಜನವಾವುದು ಭೋಜನ ವಾವುದೆಂದರಿಯರು. ಭಾಜನವೇ ಅಂಗ, ಭೋಜನವೇ ಲಿಂಗ. ಭಾಜನ ಸಹಿತ ಭೋಜನವ ಮಾಡುವ ಹಿರಿಯರು ಭಾಜನವನಿಕ್ಕಿಟ್ಟುಹೋದರೆ ವ್ರತಕ್ಕೆ ಭಂಗ ಗುಹೇಶ್ವರಾ.

೮೪೦

(೫) ತ್ರಿವಿಧ ಮಧ್ಯದ ಶೇಷ, ತ್ರಿಕೂಟದ ಬೆಳಸು. ದೇವಮಧ್ಯದ

ಪರಿಯಾಣ. ನಿರ್ಭಾವ ಮಧ್ಯದ ಧ್ಯಾನವನೇ ತಂದು, ರತ್ನಾರಂಭದ ಭಾಜನದಲ್ಲಿ ಇವೆಲ್ಲವನು ಸಂಹರಿಸುವೆ. ಹಿಂದೆ ನೋಡಿಯೂ ಆರುವ ಕಾಣೆ. ಮುಂದೆ ನೋಡಿಯೂ ಆರುವ ಕಾಣೆ. ಮಧ್ಯದಲ್ಲಿ ಮಾಡುವೈಸಕ್ಕರ ನಾ ಮಾಡಿದ ಭಕ್ತಿಯ ಬೇಡಿಹೆನೆಂದೊಬ್ಬ ಜಂಗಮ ಬಂದರೆ ಕೊಟ್ಟು ಆ ಭಕ್ತಿಶೇಷಪ್ರಸಾದದಿಂದ ಶುದ್ಧನಾದೆನು ಕಾಣಾ ಕಲಿದೇವಯ್ಯಾ.

೮೪೧

(೬) ಕಲ್ಪಿತನೆಂಬ ಭಕ್ತಮಾಡಿದ ಸುಯಿಧಾನವ ನೋಡಾ. ಅನಂತಕೋಟಿ ಅಜಾಂಡಂಗಳೇ ಈ ಸುಯಿಧಾನವಾಗಿ, ಸವಿಕಲ್ಪ ವಿಷಯಂಗಳೇ ಶಾಕವಾಗಿ, ಸರ್ವವಾಸನೆ ಎಂಬುದೇ ಓಗರವಾಗಿ, ಇವೆಲ್ಲವನು ಜ್ಞಾನವೆಂಬ ಭಾಜನದಲ್ಲಿ ಎಡೆ ಮಾಡುತ್ತಿರಲು ಉಣಬಂದ ಹಿರಿಯರು ಉಣುತಿರ್ದುದ ನೋಡಿರೇ. ನಿರ್ವಿಕಲ್ಪಿತ ನೆಂಬ ಮಹಂತ ಬರಲು ಸಾಧನವಡಗಿತ್ತು ಭಾಜನ ಉಳಿಯಿತ್ತು ಆ ಭಾಜನವನುತ್ತು ಮಾಂಗದಲ್ಲಿ ಅಳವಡಿಸಿಕೊಳ್ಳಲು ನಿಶ್ಚಿಂತವಾಯಿತ್ತು ಗುಹೇಶ್ವರಾ.

ಇಂತು ಐಕ್ಯಂಗೆ ಲಿಂಗವೇ ಭಾಜನವಾಗಿ, ಲಿಂಗಕ್ಕೆ ಐಕ್ಯನೇ ಭಾಜನವಾಗಿ, ಅವಿರಳವಾಗಿರ್ದ ಲಿಂಗವು ಮಹದೈಕ್ಯನ ಸರ್ವಾಂಗದಲ್ಲಿ ಲೇಪವಾಗಿರ್ದ ಭೇದವೆಂತಿರ್ದುದೆಂದಡೆ , ಮುಂದೆ ಅಂಗಲೇಪನಸ್ಥಲವಾದುದು.

೬. ಅಂಗಲೇಪನಸ್ಥಲ

೮೪೨

(೧) ಅರುಹಿಂದಲಾದ ಮರಹಿನ ಶಬ್ದವನರಿಯಲಾಗದು. ಅರಿದಡೆ ಅದಕ್ಕೆ ಅದೇ ಭಂಗ. ಅರಿವರತು ಮರಹು ನಷ್ಟವಾಗಿ ಜ್ಞಾನವೆಂಬ ನಿರ್ಣಯವೆಲ್ಲಿಯದು ? ಜ್ಞಾನದೊಳಗಣ ಬುದ್ಧಿಯ ಭಸ್ಮವ ಧರಿಸಿದಲ್ಲಿ ಕೂಡಲಚನ್ನಸಂಗಯ್ಯ ಸರ್ವನಿವಾಸಿ.

೮೪೩

(೨) ಅಪ್ಪುವನಪ್ಪಿದ ವಾಯುವಿನಂತೆ ವಾಯುವನಪ್ಪಿದ ಪರಿಮಳದಂತೆ ಬಯಲನೊಳಕೊಂಡ ಜ್ಯೋತಿಯಂತೆ ಲಿಂಗವನಪ್ಪಿದ ಶರಣ ದೇಹಿಎನಬಹುದೇ ? ಕೂಡಲಚನ್ನಸಂಗಾ ನಿಮ್ಮ ಶರಣನ ಪರಿ ಇಂತು.

೮೪೪

(೩) ಜ್ಯೋತಿ ಮುಟ್ಟಿದ ಜ್ಯೋತಿ ಜ್ಯೋತಿಯಪ್ಪವಯ್ಯ. ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯ. ಪ್ರಸಾದಮುಟ್ಟಿದ ಪದಾರ್ಥವೆಲ್ಲ ಪ್ರಸಾದ ವಪ್ಪವಯ್ಯ. ಲಿಂಗವಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯ. ಸಕಳೇಶ್ವರದೇವ ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯ.

೮೪೫

(೪) ಗುರುವೆಂದಲ್ಲಿಯೇ ತಪ್ಪಿತ್ತು ಲಿಂಗವೆಂದಲ್ಲಿಯೇ ತಪ್ಪಿತ್ತು

ಜಂಗಮವೆಂದಲ್ಲಿಯೇ ತಪ್ಪಿತ್ತು, ಪ್ರಸಾದವೆಂದಲ್ಲಿಯೇ ತಪ್ಪಿತ್ತು. ಈ ಚತುರ್ವಿಧ ಸಂಚವ ನಿಕ್ಷೇಪಿಸಬಲ್ಲಡೆ ಈ ಲೋಕದಲ್ಲಿರ್ದಡೇನು ? ಈ ಲೋಕದಿಂದ ಆ ಲೋಕಕ್ಕೆ ಹೋದರೇನು ? ಈ ಲೋಕದಿಂದ ಆ ಲೋಕಕ್ಕೆ ಬಂದರೇನು ? ಹದಿನಾಲ್ಕು ಲೋಕದೊಳಗಿರ್ದ ನಿಸ್ಸಾರಾಯಮಂ ಬಿಟ್ಟು ಲಿಂಗಸಾರಾಯ ಮೋಹಿಯಾಗಿ ಕೂಡಲಚನ್ನಸಂಗಾ ನಿಮ್ಮಲ್ಲಿ ಸರ್ವಾಂಗಲಿಂಗವಾದ ಶರಣ.

೪೪೬

(೫) ಅಂಗವಿಲ್ಲಾಗಿ ಅನ್ಯಸಂಗವಿಲ್ಲಯ್ಯ. ಅನ್ಯಸಂಗವಿಲ್ಲಾಗಿ ಮತ್ತೊಂದ ವಿವರಿಸಲಿಲ್ಲ. ಮತ್ತೊಂದ ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತು, ಗುಹೇಶ್ವರಾ ನಿಮ್ಮ ನಾಮ ನಿರ್ಲೇಪವಾಯಿತ್ತು.

೪೪೭

(೬) ತನು ನಿಮ್ಮನಪ್ಪಿ ಮಹಾಲಿಂಗವಾದ ಬಳಿಕ ತನುವೆಂಬುದು ಮತ್ತೆಲಿಯದು? ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮತ್ತೆಲ್ಲಿಯದು ? ಪ್ರಾಣ ನಿಮ್ಮನಪ್ಪಿ ಪ್ರಾಣಪದದಲ್ಲಿ ಸಿಲುಕಿದ ಬಳಿಕ ಪ್ರಾಣವೆಂಬುದು ಮತ್ತೆಲ್ಲಿಯದು? ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ಲೇಪವಾಗಿ ಮೈದೋರದಿರವ ಕೂಡಲ ಚನ್ನಸಂಗಯ್ಯನೇ ಬಲ್ಲ.

೪೪೮

(೭) ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ ! ಕೇಳಲುಬಾರದು. ಏನೆಂದು ಹೇಳುವೆನವ್ವಾ! ಶಿಖಿ ಕರ್ಪೂರವ ಬೆರಿಸಿದಂತೆ ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಲುಬಾರದು.

೪೪೯

(೮) ಅಪ್ಪುವನಪ್ಪಿದ ವಾರಿಕಲ್ಲಿನಂತೆ, ವಾಯುವನಪ್ಪಿದ ಪರಿಮಳದಂತೆ, ಲಿಂಗವನಪ್ಪಿದ ಶರಣನ ದೇಹಿ ಎನಬಹುದೇ? ಬಯಲನೊಳಕೊಂಡ ಜ್ಯೋತಿಯಂತೆ ಕೂಡಲಚನ್ನಸಂಗಯ್ಯ ನಿಮ್ಮ ಶರಣನ ಪರಿ.

ಇಂತು ಭಾಂಡ ಭಾಜನ ಆಂಗಲೇಪನವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗದ ಮಹದೈಕ್ಯನಲ್ಲಿ ನಾಹಂ ಎಂಬುಭಯವನರಿಯದೆ ಸ್ವಯನಿಜವಾಗಿರ್ದ ಭೇದವೆಂತಿರ್ಪುದೆಂದಡೆ, ಮುಂದೆ ಸ್ವಪರಾಜ್ಞಾಸ್ಥಲವಾದುದು.

೭. ಸ್ವಪರಾಜ್ಞಾಸ್ಥಲ ಅಥವಾ ಸ್ವಯಪರವರಿಯದಸ್ಥಲ

೪೫೦

(೧) ನಲ್ಲನ ಕೂಡುವ ಭರದಲ್ಲಿ ಎನ್ನವನಿದಿರುವನೇನೆಂದರಿಯೆ. ನಲ್ಲನ ಕೂಡುವಾಗ ಎನ್ನವ ನಲ್ಲನನೇನೆಂದರಿಯೆ. ಉರಿಲಿಂಗದೇವನ ಕೂಡಿದ ಬಳಿಕ ಆನೋ, ತಾನೋ ಏನೆಂದರಿಯೆ.

೪೫೧

(೨) ನಾಮ ಅನಾಮವೆಂದು ನೀನು ನಾಮಕ್ಕೆ ಬಳಲುವೆ. ನಾಮವಾವ ಸೀಮೆಯೋಳಗಿಪ್ಪುದು ಹೇಳೆಲೆ ಮರುಳೇ ? ನಾಮವೂ ಇಲ್ಲ, ಸೀಮೆಯೂ ಇಲ್ಲ ಒಡಲೂ ಇಲ್ಲ, ನೆಳಲೂ ಇಲ್ಲ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ನಾನೂ ಇಲ್ಲ, ನೀನೂ ಇಲ್ಲ.

೪೫೨

(೩) ಅರಿವು ಆರಡಿಗೊಂಡಿತ್ತು, ಮನವು ಮಹದಲ್ಲಿ ನಿಂದು ಘನವಡಗಿತ್ತು, ಆಶ್ರಯವಿಲ್ಲ, ಬಲ್ಲೆನೆಂಬಡೆ ನೆರೆಯರಿವು ಅರತು ಘನಾಘನದಲ್ಲಿ ಆಶ್ರಯ ನಿರಾಶ್ರಯ. ಎಲ್ಲಿಯ ಶರಣ ಕೂಡಲ ಚನ್ನಸಂಗಮದೇವ ?

೪೫೩

(೪) ತನು ತನ್ನ ಕಾಣದು. ಮನವು ತನ್ನ ಕಾಣದು. ಇದೇನಯ್ಯ ? ತನುವು ಕೆಟ್ಟು, ಮನವು ಕೆಟ್ಟು, ನಷ್ಟವಾಗಿ ಹೋಯಿತ್ತಿದೇನಯ್ಯ ? ತನು ಮುಖ ಮನಗತವಾಯಿತ್ತು, ಹಿಂದು ಮುಂದುಗಾಣದು ಮುಂದು ಹಿಂದುಗಾಣದು. ಜೀವವಿತ್ತುಗಳೆಲ್ಲ ನುಡಿಗೆಟ್ಟು ನಿಂದವು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದುದಾಗಿ.

೪೫೪

(೫) ತಾ ಜಗ, ಜಗವೆಲ್ಲ ತಾನೆಂದರಿತ ಘನವೇದ್ಯನು. ಭೇದರೂಪನಾಗಿ ಅನ್ಯವಿಲ್ಲದ ಅನ್ಯವನರಿಯದೆಲ್ಲಿಯದು ? ನಿರಂಜನ ನಿಜಚಿದ್ರೂಪ ತಾನಾಗಿ ಅರಿವು ತಾನೆಂಬ ಮಮತೆಗೆಡೆಯೆಲ್ಲಿಯದು ? ಅನ್ಯವೆನ್ನದ ತಾನೆನ್ನದಳಿದುಳಿಮೆಯನುಪಮಿಸಬಹುದೆ ? ಅನುಪಮಸುಖಿ ಸಾರಾಯ ಕೂಡಲ ಚನ್ನಸಂಗಾ ನಿಮ್ಮ ಶರಣ.

ಇಂತು ಸ್ವಪರಾಜ್ಞಾ ಸ್ಥಲದ ನಿಶ್ಚಿಂತ ಲಿಂಗವು ಮಹದ್ಯೈಕ್ಯನಲ್ಲಿ ಭಾವಾಭಾವವೆಂಬೆರಡು ನಷ್ಟವಾದ ಭೇದವೆಂತಿರ್ದುದೆಂದಡೆ, ಮುಂದೆ ಭಾವಾಭಾವ ನಷ್ಟಸ್ಥಲವಾದುದು.

೮. ಭಾವಾಭಾವ ನಷ್ಟಸ್ಥಲ

೪೫೫

(೧) ಸತ್ಯವನೊಳಕೊಂಡು ಮಿಥ್ಯಕ್ಕೆ ಭಂಗ. ಮಿಥ್ಯವನೊಳಕೊಂಡು ಸತ್ಯಕ್ಕೆ ಭಂಗ. ಸತ್ಯ ಮಿಥ್ಯವನೊಳಕೊಂಡು ಮನಭಂಗ, ಮನವನೊಳಕೊಂಡ ಜ್ಞಾನಕ್ಕೆ ಭಂಗ. ಜ್ಞಾನವನೊಳಕೊಂಡ ನಿಜಕ್ಕೆ ಭಂಗ ಉಂಟೇ ಗುಹೇಶ್ವರಾ ?

ಟೀಕು : ತನ್ನ ತಾನರಿದೆನೆಂಬುದು ಸತ್ಯವೆಂದು, ತಾನರಿವುತ್ತಿರಲು ಅದೇ ಮಿಥ್ಯವಾದ ಕಾರಣ ಅದೇ ಭಂಗವೆಂಬುದೀಗ, ಸತ್ಯವನೊಳಕೊಂಡು ಮಿಥ್ಯಕ್ಕೆ ಭಂಗವೆಂಬ ಶಬ್ದಕ್ಕರ್ಥ. ಅಂತಪ್ಪ ಮಿಥ್ಯವನೊಳಕೊಂಡಿಪ್ಪ ಅಸತ್ಯಭಾವಕ್ಕೆ ಭಂಗವೆಂಬುದೀಗ, ಮಿಥ್ಯವನೊಳಕೊಂಡಿಪ್ಪ ಸತ್ಯಕ್ಕೆ ಭಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಸತ್ಯ ಮಿಥ್ಯವ ಎರಡನು ಇದಿರಿಟ್ಟುಕೊಂಡಿಹುದು ಮನವಾದ ಕಾರಣ, ಆ

ಮನವುಳ್ಳನ್ನಕ್ಕರ ಭವ ಉಂಟೆಂಬುದೀಗ ಸತ್ಯಮಿಥ್ಯವನೊಳಕೊಡ ಮನಕ್ಕೆ ಭಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಮನವನೊಳಕೊಂಡಿಪ್ಪ ಸಂಕಲ್ಪ ಜ್ಞಾನವು ವಿಕಲ್ಪದಿಂದ ಅಳಿದುದಾಗಿ ಅದೀಗ ಮನವನೊಳಕೊಂಡ ಜ್ಞಾನಕ್ಕೆ ಭಂಗ ಉಂಟೇ ಎಂಬ ಶಬ್ದಕ್ಕರ್ಥ. ಇಂತಪ್ಪ ಜ್ಞಾನವು ನಿಜದಲ್ಲಿ ವಿಶ್ರಮಿಸಿ ತನ್ನಲ್ಲಿ ತಾನೆ ಪರಾಮರಿಸಿ ನಿರ್ವಯಲಾದ ಸಹಜಕ್ಕೆ ಭಂಗವಿಲ್ಲವೆಂಬುದೀಗ, ಜ್ಞಾನವನೊಳಕೊಂಡ ನಿಜಕ್ಕೆ ಭಂಗ ಉಂಟೇ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೮೫೬

(೨) ಭೂಮಿ ಘನವೆಂಬೆನೆ ? ಪಾದಕ್ಕೆಒಳಾಗಿಯಿತ್ತು. ಗಗನಘನವೆಂಬೆನೇ ? ಕಂಗಳಿಗೊಳಗಾಯಿತ್ತು. ಮಹವು ಘನವೆಂಬೆನೆ ? ಮಾತಿಂಗೊಳಗಾಯಿತ್ತು. ಘನ ಘನವೆಂಬುದು ಇನ್ನೆಲ್ಲಿಯದೆಲವೋ ? ಅರಿ. ಲಿಂಗಾಚಾರವಿಲ್ಲ , ಕುರುಹಿಂಗೆ ನೆಲೆ ಇಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಎಂದೆನು.

೮೫೭

(೩) ಒತ್ತಿಹಣ್ಣ ಮಾಡಿದಡೆ, ಅದೆತ್ತಣ ರುಚಿಯಪ್ಪುದೋ ? ಕಾಮಿಸಿ ಕಲ್ಪಿಸಿ ಭಾವಿಸಿದಡೆ ಭಂಗ. ಭಾವಿಸುವ ಭಾವನೆಯಿಂದ ಸಾವುದೇ ಲೇಸು ಗುಹೇಶ್ವರಾ.

೮೫೮

(೪) ನೋಟವುಳ್ಳನ್ನಕ್ಕ ಕೂಟ ಉಂಟು. ಭಾವವುಳ್ಳನ್ನಕ್ಕ ಭ್ರಮೆಯುಂಟು. ನೋಟಗೆಟ್ಟು ಭಾವ ನಷ್ಟವಾಗಿ ಮನಲೀಯವಾದ ಬಳಿಕ ಕೂಡಲಚನ್ನಸಂಗ ನಿಮ್ಮ ಶರಣ ಒಳಗೂ ನೋಡಾ ಹೊರಗೂ ನೋಡಾ.

೮೫೯

(೫) ಅಂತರಂಗದಲ್ಲಿ ಭಾವಿಸುವವನಲ್ಲ. ಬಹಿರಂಗದಲ್ಲಿ ಬಳಸುವವನಲ್ಲ. ಎರಡುವನತಿಗಳೆದು ತನ್ನಲ್ಲಿ ತಾನೇ ಸಹಜ ನೋಡಾ. ಅಂತರಂಗ ಬಹಿರಂಗವಿಲ್ಲ ಕೂಡಲಚನ್ನಸಂಗಾ ನಿಮ್ಮ ಶರಣಂಗೆ.

೮೬೦

(೬) ಆನು ನೀನೆಂಬ ಮೋಹವೆಲ್ಲಿಯದು ? ಭಾವನಿರ್ಭಾವವೆಂಬ ಪ್ರಸಂಗವೆಲ್ಲಿಯದು ಹೇಳಾ ? ಮನಲೀಯ, ಮನಲೀಯವು. ಭಯಭಾವರಹಿತ ಕೂಡಲಚನ್ನಸಂಗಾ ಲಿಂಗೈಕ್ಯವು.

೮೬೧

(೭) ಎಲ್ಲವ ಕಳೆದು ಶರಣನಿಂಬುಮಾಡಿದನಾಗಿ ಅಂತರಂಗ ಬಹಿರಂಗದಲ್ಲಿಯೇ ಬಳಿಕ ತನ್ನಹರೆ ತನ್ನ ಕೊಳಲು ಕೂಡಲಚನ್ನಸಂಗಾ ಲಿಂಗಸಂಗಿಯಾಗಿ.

೮೬೨

(೮) ತಲೆ ಇಲ್ಲದ ಟ್ಟೆ ಜಗವ ನುಂಗಿತ್ತು ಆಟ್ಟೆಯಿಲ್ಲದ ತಲೆ ಆಕಾಶವ

ನುಂಗಿತ್ತು ಆಟ್ಟೆ ಬೇರೆ ತಲೆ ಬೇರಾದರೆ ಮನ ಸಂಚಲಸಿತ್ತು ಆಟ್ಟೆಯನು ತಲೆಯನು ಬಯಲು ನುಂಗಿದರೆ ಆನು ನುಂಗಿದೆನು ಗುಹೇಶ್ವರನಿಲ್ಲದಂತೆ.

೮೬೩

(೯) ಸ್ಥಲವೆಂದೆನೇ? ನಿಃಸ್ಥಲವೆಂದೆನೇ? ನಿರ್ಣಯವೆನಗಾದ ಬಳಿಕ ಎತ್ತಲೆಂದರಿಯೆನಯ್ಯ. ಇದು ಕಾರಣ ಕೂಡಲಚನ್ನಸಂಗಯ್ಯ ಲಿಂಗೈಕ್ಯವೆಂದು ಎನಗಾಗಿ.

೮೬೪

(೧೦) ತನುವ ಮೀರಿತ್ತು ಮನವ ಮೀರಿತ್ತು ಮಹವ ಮೀರಿತ್ತು ಅಲ್ಲಿಂದತ್ತ ಭಾವಿಸುವ ಭಾವಕರಿಲ್ಲಾಗಿ ತಾರ್ಕಣೆ ಇಲ್ಲ ಚನ್ನಮಲ್ಲಿಕಾರ್ಜುನಯ್ಯನ ಬೆರಸಲಿಲ್ಲದ ನಿಜತತ್ವವು.

ಇಂತು ಭಾವನಿರ್ಭಾವವೆರಡು ನಷ್ಟವಾದ ಲಿಂಗವು ಮಹದ್ಯೆಕ್ಯನ ಮೂಲ ಜ್ಞಾನವನಾಲಿಂಗಿಸಿ ಜ್ಞಾನವೇ ತಾನಾಗಿ ಆ ಜ್ಞಾನವು ನಿಜದಲ್ಲಿ ನಿಂದು ಶೂನ್ಯವಾದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನಶೂನ್ಯಸ್ಥಲವಾದುದು.

೯. ಜ್ಞಾನಶೂನ್ಯಸ್ಥಲ

೮೬೫

(೧) ಅರಿವರತು ಬೆರಗು ಹತ್ತಿತ್ತೆಂಬ ಜ್ಞಾನವಿದೇನೋ ? ನಾಹಮೆಂಬಲ್ಲಿ ತಾನಾರೋ ? ಕೋಹಮೆಂಬಲ್ಲಿ ಮುನ್ನಾರೋ ? ಪರಬ್ರಹ್ಮ ಸೋಹಮೆಂಬಲ್ಲಿ ಮುನ್ನ ತಾನೇ ತಾನಾಗಿರ್ದನೋ ? ಚಿದಹಮ್ಮಿನ ಮಾಲೆ ಇದೇನೋ ಹೇಳಾ ? 'ನಿಶ್ಯಬ್ದ ಬ್ರಹ್ಮಮುಚ್ಯತೆ' ಎಂಬ ಶಬ್ದವಿಡಿದು ಬಳಲುವ ಕಾರಣವಿದೇನೋ ಗುಹೇಶ್ವರಾ ?

ಅರ್ಥ : ಲಿಂಗವೇ ತಾನಾಗಿ ತನ್ನ ನಿಜವೆಂದರಿದು ಅಟ್ಟುವಡಗಿ ಬೆರೆಸಿದ ಲಿಂಗೈಕ್ಯನು ತನ್ನ ಲಿಂಗಪದವ ವಿವರಿಸಿ ನುಡಿದರೆ ಅದೇ ಭಿನ್ನವೆಂದರಿದು ನಾಹಮೆನ್ನದೆ ಕೋಹಮೆನ್ನದೆ ಸೋಹಮೆನ್ನದೆ ಚಿದೋಹಮೆನ್ನದೆ ಇರಬೇಕು. ನಿಶ್ಯಬ್ದ ಬ್ರಹ್ಮ ಮುಚ್ಯತೆ ಎಂಬ ಶಬ್ದವನು ನುಡಿಯದೇ ಇರಬೇಕು, ಎಂಬುದೀ ವಚನದ ಕಾಣ ಬಂದ ತಾತ್ಪರ್ಯಾರ್ಥ.

೮೬೬

(೨) ೧[ಮನದ]೧ ಕೊನೆಯಿಂದ ನೆನೆದ ನೆನಹು ಜನನ ಮರಣವ ನಿಲಿಸಿತ್ತು. ಜ್ಞಾನಜ್ಯೋತಿಯು ಉದಯ ಭಾನುಕೋಟಿಯ ಮೀರಿ ಸ್ವಾನುಭಾವದುದಯ. ಜ್ಞಾನಶೂನ್ಯದೊಳಗಡಗಿದ ಭೇದವನು ಏನೆಂಬೆನೋ ನೋಡಾ ಗುಹೇಶ್ವರಾ ?

೧–೧ ಶ್ರೀಮನ್ಮನದ (ಮೂ)

೮೬೭

(೩) ನಮ್ಮವರು ಭಕ್ತರಲ್ಲ, ನಮ್ಮವರಿಗೆ ದೇವರಿಲ್ಲ, ನಮ್ಮವರು ಜಂಗಮಕ್ಕೆ ಮಾಡುವರಲ್ಲ, ನಮ್ಮವರು ಜಂಗಮ [ನ] ಕೈಯಲ್ಲಿ ಮಾಡಿಸಿಕೊಂಬರು. ನಮ್ಮವರು ನಮ್ಮವರೆಂಬ ಶಬ್ದ ಸತ್ತಿತ್ತು, ನಮ್ಮವರಾದ ಪರಿಯ ನಾನೇನ ಹೇಳುವೆ ? ಇದು ಕಾರಣ ನಮ್ಮವರಿಗೆಯು ಇಲ್ಲಿ ಎನಗಿಂತು ಇಲ್ಲ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

೮೬೮

(೪) ದೃಷ್ಟಕ್ಕೆ ದೃಷ್ಟ ಮುಂದಿಲ್ಲ, ಮಾಡಿತಡೇನಹುದೋ? ಮಾಡದಿರ್ದ ಡೇನಹುದೋ ? ಗುಹೇಶ್ವರನೆಂಬ ಅರಿವಿನ ಕುರುಹು ಮುಂದಿಲ್ಲವಾಗಿ ಮಾಡಿದ ಡೇನಹುದೋ ? ಮಾಡದಡೇನಹುದೋ ?*

೮೬೯

(೫) ಉಪಮೆ ಉಪಮಿಸಲರಿಯದೆ ಉಪಮಾತೀತವೆನುತಿರ್ದಿತ್ತು ಅರಿವು ಮರವಿನ ಮರೆಯಲಿರ್ದುದನರಿಯದೆ ಅರಿವು ಪರಾಪರವೆನುತಿರ್ದಿತ್ತು, ಧ್ಯಾನ ಧ್ಯಾನಿಸಲರಿಯದೆ ಧ್ಯಾನ ರೂಪಾತೀತವೆಂದು ಧ್ಯಾನತದ್ಧ್ಯಾನಗೊಂಡಿತ್ತು, ಜ್ಞಾತೃ, ಜ್ಞಾನ, ಜ್ಞೇಯಕ್ಕಿನ್ನಾವ ಜ್ಞಾನವೋ ? ವೇದ ವಿಜ್ಞಾನವೆಂದುದಾಗಿ, ತತ್ವಮಸಿ ವಾಕ್ಯಂಗಳೆಲ್ಲ ಹುಸಿಯಾಗಿ ಹೋದವು. ಸಚ್ಚಿದಾನಂದವೆಂದುದಾಗಿ ದ್ವೈತಾದ್ವೈತ ಬ್ರಹ್ಮವಾದಿಗಳೆಲ್ಲ ಸಂಹಾರವಾಗಿ ಹೋದರು. ಬಂದು ಬಾರದ ನಿಂದ ನಿರಾಳ ನಮ್ಮ ಗುಹೇಶ್ವರನು.

೮೭೦

(೬) ಆನು ನೀನು ಅರಿದೆ ಮರೆದೆ. ಅಳಿದೆನುಳಿದೆನೆಂಬ ಸಂಶಯ ಭ್ರಮೆ, ಅತತ್ವ ತತ್ವವಿವೇಕಭ್ರಮೆ, ಸ್ಥೂಲ ಸೂಕ್ಷ್ಮವಿಪರೀತ ಭ್ರಮೆ. ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ ಮೋಕ್ಷ ಪ್ರವರ್ತಕ ನಿವರ್ತಕ [ಆದಿಯಾದ ಸಪ್ತಕರ್ಮಬಂಧ ಭ್ರಮೆ. ಹುಸಿಜೀವ ಪರಮನೈಕ್ಯ ಸಂಧಾನ ಭ್ರಮೆ.] ಯೋಗದಾಸೆಯ ಸಿಲಕು ಭ್ರಮೆ, ಅಂತರ್ಮುಖ ಭ್ರಮೆ, [ಬಹಿರ್ಮುಖ ಭ್ರಮೆ, ಅನೃತ ಭ್ರಮೆ, ಸತ್ಯಭ್ರಮೆ, ನಿತ್ಯ ಭ್ರಮೆ, ವಾಗದ್ವೈತಭ್ರಮೆ] ಅದ್ವೈತ ಭ್ರಮೆ, ಮಂತ್ರಭ್ರಮೆ, ತಂತ್ರಭ್ರಮೆ, [ನಾಹಂಭ್ರಮೆ ಕೋಹಂಭ್ರಮೆ, ಸೋಹಂಭ್ರಮೆ ತತ್ಪಸಕರಣ ವೇಷ್ಟಿತ ಜಗತ್ರಯಕ್ಕೆಲ್ಲ ಮಾಯಾಮಯ ಕೂಡಲಚೆನ್ನಸಂಗಾ ನಿಮ್ಮ ಶರಣಂಗಾವ ಭ್ರಮೆಯೂ ಇಲ್ಲ.]

■■

* ಇದರ ಮುಂದಿನ ''ಮನದಕೊನೆಯಲ್ಲಿ.....' ಎಂಬ ವಚನ ಇದೇ ಭಾಗದಲ್ಲಿ ಪುನರುಕ್ತವಾಗಿರುವದರಿಂದ ತೆಗೆದುಹಾಕಲಾಗಿದೆ (ಸಂ).

ಅನುಬಂಧಗಳು

ಅನುಬಂಧ–೧

ಸೃಷ್ಟಿಯ ರಚನೆಯ ಬಗ್ಗೆ ಸಾಮಾನ್ಯ ವಿಚಾರಗಳು

ವೀರಶೈವರಲ್ಲಿ ಸೃಷ್ಟಿಯ ರಚನೆಯ ಬಗ್ಗೆ ವಿಶೇಷ ತರದ ವಿಚಾರಗಳುಂಟು. ಅವುಗಳು ಇತರ ವೇದಾಂತಮಾರ್ಗಿಗಳ ತತ್ವಗಳನ್ನು ಹೋಲುವದಿಲ್ಲ, ಆದರೆ ಅವು ಶಿವಾಗಮಗ್ರಂಥಗಳಿಗನುಸಾರವಾಗಿ ಇರುತ್ತವೆ. ಶೈವರಲ್ಲಿ ಈಗ ಶಿವಸಿದ್ಧಾಂತಿಗಳು, ಕಾಶ್ಮೀರೀಶೈವರು ಎಂದು ಮೊದಲಾದ ಭೇದಗಳಿರುತ್ತವೆ. ಆದರೂ ವೀರಶೈವರು ತಮ್ಮ ಒಂದು ವಿಶಿಷ್ಟವಾದ ಮಾರ್ಗವನ್ನು ಕೈಕೊಂಡು ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿರುವರು. ಇದರ ಸಂಬಂಧವಾಗಿ ಅವರಲ್ಲಿರುವ ವಿಚಾರಗಳು ಬೇರೆ ಬೇರೆ ಶಿವಾಗಮಗಳ ಮಾರ್ಗವನ್ನು ಹೋಲುತ್ತಿದ್ದರೂ ಇದರಲ್ಲಿ ಅವರು ಕೆಲವು ಮಾರ್ಪಾಡುಗಳನ್ನು ಮಾಡಿ ಈ ವಿಷಯವನ್ನು ವಿವರಿಸಿದ್ದಾರೆ.

ಅವರ ವಿಷಯವಿವರಣೆಯಲ್ಲಿ ನಾವು ಮೂರು ಮುಖ್ಯ ವಿಭಾಗಗಳನ್ನು ಕಲ್ಪಿಸಬಹುದು. ಮೊದಲನೆಯದರಲ್ಲಿ ನಾದ ಬಿಂದು ಕಲೆಗಳ ವಿಚಾರ, ಎರಡನೆಯದರಲ್ಲಿ ಸಾದಾಖ್ಯಗಳ ವಿಚಾರ, ಮೂರನೆಯದರಲ್ಲಿ ಷಡಧ್ವಗಳ ವಿಚಾರ ಹೀಗೆ ಭಾಗ ಮಾಡಬಹುದು.

ಜಗತ್ತು ಪ್ರಕಟವಾಗುವ ಕಾಲದಲ್ಲಿ ಅದು ಮೊದಲು ಸರ್ವ ಶೂನ್ಯಸ್ಥಿತಿಯಲ್ಲಿ ಇರುತ್ತದೆ. ಆಗ ಅದರಲ್ಲಿ ಚಿತ್‌ಶಕ್ತಿಯು ಉದ್ಭವಿಸುತ್ತದೆ. ಅದರ ಮೂಲಕವೇ ನಾದ, ಬಿಂದು, ಕಲೆಗಳು ತಲೆದೋರುತ್ತವೆ. ಈ ನಾಲ್ಕೂ ಬೆರೆದುಕೊಂಡು ಮೂಲಪ್ರಣವಕ್ಕೆ ಕಾರಣವಾಗುತ್ತವೆ. ಆ ಮೇಲೆ ಜಗತ್ತು ಕೆಲವು ಸಾದಾಖ್ಯಗಳೊಳಗಿಂದ ಹಾಯ್ದು ಪ್ರಕಟಕ್ಕೆ ಬರುತ್ತದೆ. ಈ ಸಾದಾಖ್ಯಗಳಲ್ಲಿ ಸೃಷ್ಟಿಗೆ ಕಾರಣವಾಗಿರುವ ಅನೇಕ ಬಗೆಯ ಶಕ್ತಿಗಳು ಉದ್ಭವಿಸುತ್ತವೆ. ಈ ಎರಡನೆಯ ಸ್ಥಿತಿಯೊದಗಿದಲ್ಲಿ ಈ ಶಕ್ತಿಗಳ

ಹರಿದಾಟಕ್ಕೆ ಅತ್ಯವಶ್ಯವಾಗಿರುವ ಷಡಧ್ವಗಳು ಉಂಟಾಗುತ್ತವೆ. ಹೀಗೆ ಶೂನ್ಯದೊಳಗಿಂದ ದೃಶ್ಯಜಗತ್ತು ಉತ್ಪನ್ನವಾಗಿರುತ್ತದೆಂದು ವೀರಶೈವರು ತಿಳಿದಿದ್ದಾರೆ. ಇಲ್ಲಿ ಶೂನ್ಯವೆಂದರೆ ಪರಶಿವ ಅಥವಾ ಪರಬ್ರಹ್ಮ ಎಂತಲೇ ತಿಳಿಯಬೇಕು. ಈ ಎಲ್ಲ ವಿಷಯಗಳ ಜ್ಞಾನವು ಷಟ್‌ಸ್ಥಲಶಾಸ್ತ್ರಕ್ಕೆ ಮೂಲ ವಾಗಿರುತ್ತದೆ. ವಚನಗ್ರಂಥಗಳಲ್ಲಿಯೂ ಆಗಮ ಗ್ರಂಥಗಳಲ್ಲಿಯೂ ಇವುಗಳ ವಿವರಣೆಗೆ ಮಹತ್ವದ ಸ್ಥಾನವಿರುತ್ತದೆ.

(ಅ) ನಾದ, ಬಿಂದು, ಕಲೆಗಳು

ವೀರಶೈವ ಧರ್ಮಗ್ರಂಥಗಳಲ್ಲಿ ನಾದ ಬಿಂದು ಕಲೆಗಳೆಂಬ ಶಬ್ದಗಳು ಆಗಿಂದಾಗ್ಗೆ ಬರುತ್ತವೆ. ಜಗತ್ತಿನ ಮತ್ತು ಮನುಷ್ಯನ ಎಲ್ಲ ಅವಸ್ಥೆಗಳಲ್ಲಿಯೂ ಇವು ಪರಿಣಾಮಮಾಡುತ್ತವೆಂದು ತಿಳಿಯಲ್ಪಟ್ಟಿದೆ. ಜಗತ್ತಿನ ಸೃಷ್ಟಿಯ ಕಾಲಕ್ಕೆ ಇವುಗಳು ಉತ್ಪನ್ನವಾಗುತ್ತವೆ. ಅವು ಉತ್ಪನ್ನವಾಗಿ ಪರಮಾತ್ಮನ ಮೂಲಚಿತ್ತುವಿನೊಡನೆ ಕೂಡಿದ ಕೂಡಲೆ ಓಂಕಾರ ಪ್ರಣಮವು ಪ್ರಾದುರ್ಭವಿಸುತ್ತದೆ. ಇದೇ ಮಹಾಲಿಂಗವೆಂದೆನಿಸಿಕೊಳ್ಳತ್ತದೆ ಮತ್ತು ಈ ಮಹಾಲಿಂಗದಿಂದ ಜಗತ್ತಿನಲ್ಲಿ ಪಂಚ ಸಾದಾಖ್ಯಗಳೂ ಉಂಟಾಗುತ್ತವೆ. (ಪುಟ ೫ರಿಂದ ೧೦ರ ವರೆಗೆ ನೋಡಿರಿ).

ಜಗತ್ತು ಆರಂಭದಲ್ಲಿ ಸರ್ವಶೂನ್ಯ ನಿರಾಲಂಬ ಸ್ಥಿತಿಯಲ್ಲಿರುತ್ತದೆ. ಆಗ ಪರಶಿವನಲ್ಲಿ ಜಗತ್ತನ್ನು ಉತ್ಪನ್ನ ಕೂಡಬೇಕೆಂಬ ಇಚ್ಛೆಯು ತಲೆದೋರಲು ಮಹಾಜ್ಞಾನ ಚಿತ್ತು ಉದಯವಾಗುವದು. ಆ ಚಿತ್ತಿನಿಂದ ಅಕಾರ ಉಕಾರ ಮಕಾರಗಳೆಂಬ ಅಕ್ಷರತ್ರಯಗಳು ಉತ್ಪನ್ನವಾಗುತ್ತವೆ. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಈ ಮೂರರೊಡನೆ ಮೂಲ ಚಿತ್ತು ಬೆರೆಯಲು ಓಂಕಾರವೆಂಬ ಪ್ರಣಮವು ಉತ್ಪನ್ನವಾಗುತ್ತದೆಂದು ವೀರಶೈವ ಸಿದ್ಧಾಂತವು ಹೇಳುತ್ತದೆ.

ನಾದವು ಒಂದು ಬಗೆಯ ಅಲುಗಾಡುವಿಕೆ ಅಥವಾ ಹೊಯಿಲು ಎಂದು ಹೇಳಬಹುದು. ಇದೇ ಜಗದುತ್ಪತ್ತಿಗೆ ಮೂಲಕಾರಣವು. ಈ ಹೊಯಿದಾಟಿನಿಂದ ಬಿಂದುವಿನ ಪ್ರಾದುರ್ಭಾವವು. ಬಿಂದುವು ಜಗತ್ತು ಘನೀಭೂತವಾಗುವ ಮೊದಲನೆಯ ಸ್ಥಿತಿಯೆಂದು ಹೇಳಬಹುದು. ಹೀಗೆ ನಾದ ಬಿಂದುಗಳು ಉದಯವಾಗಿ ಅವುಗಳ ಪರಸ್ಪರ ಸಂಯೋಗವಾಗುವದು. ಆಗ ಕಲೆಯು ಉತ್ಪನ್ನವಾಗುತ್ತದೆ. ಈ ಕಲೆಯು ಜಗತ್ತಿನಲ್ಲಿ ತೋರುವ ದೃಶ್ಯಶಕ್ತಿ ಎಂದು ಹೇಳಬಹುದು. ಇದರ ಮೂಲಕವೇ ಪದಾರ್ಥಗಳಲ್ಲಿ ಗುಣಗಳೂ ಕ್ರಿಯೆಗಳೂ ಸಂಭವಿಸುತ್ತವೆ. ಈ ನಾದ ಬಿಂದು ಕಲೆಗಳು ಜಗತ್ತಿನಲ್ಲಿ ಇಷ್ಟೇ ಅಲ್ಲ, ಜಗತ್ತಿನ ಪ್ರತಿಯೊಂದು ಪದಾರ್ಥದಲ್ಲಿಯೂ ಅಣುವಿನಲ್ಲಿಯೂ ತೋರಿಬರುತ್ತವೆ.

ನಾದವು ಮೊದಲು ಚಿತ್‌ಸ್ವರೂಪವಾಗಿರುತ್ತದೆ. ಅದು ಓಂ ಓಂ ಓಂ ಎಂದು ಸುನಾದ ಘೋಷವುಳ್ಳುದೆಂದು ಹೇಳಲ್ಪಡುತ್ತದೆ. ಬಿಂದುವಾದರೂ ಆರಂಭದಲ್ಲಿ

ಚಿತ್‌ಸ್ವರೂಪುಳ್ಳುದು. ಅದು ಪ್ರಜ್ವಲಿಸುವ ಕಂಭದಂತೆ ಝಗಝಗಿಸಿ ಬೆಳಗುತ್ತದೆ. ಹಾಗೆಯೇ ಚಿತ್‌ಸ್ವರೂಪುವುಳ್ಳ ಮಕಾರವು ಮಧ್ಯಾನ್ಹ ಕಾಲದ ಪ್ರಚಂಡ ಸೂರ್ಯ ಕೋಟಿಗಳ ಪ್ರಕಾರಕ್ಕಿಂತಲೂ ಮಿಗಿಲಾದ ಮಹಾಪ್ರಕಾಶವುಳ್ಳದೆಂದು ಹೇಳಲ್ಪ ಡುತ್ತದೆ. ಹೀಗೆ ಇವುಗಳ ಸ್ವರೂಪವನ್ನು ವಚನಕಾರರು ಹೇಳುವದುಂಟು.

ನಾದವು ಜಗತ್ತಿಗೆ ಬೀಜಸ್ವರೂಪವಾಗಿದೆ. ಬಿಂದುವು ಅದಕ್ಕೂ ಹೆಚ್ಚು ಸ್ಥೂಲ ಸ್ವರೂಪುಳ್ಳದ್ದಾಗಿದೆ. ಕಲೆಯು ಶಿವಶಕ್ತಿಯ ದ್ಯೋತಕವು. ಹೀಗೆ ನಾದ ಬಿಂದು ಕಲೆಗಳ ಕಾರ್ಯಗಳನ್ನು ವೀರಶೈವಧರ್ಮಗ್ರಂಥಕಾರರು ವಿವರಿಸುತ್ತಾರೆ. ಇವುಗಳೊಡನೆ ಪರಮಾತ್ಮನ ಮೂಲ ಚಿತ್ತುಕೂಡಿದಲ್ಲಿ ಓಂಕಾರದ ಉತ್ಪತ್ತಿಯು. ಈ ಓಂಕಾರವೇ ಅಖಂಡ ಪರಿಪೂರ್ಣಗೋಳಕಾಕಾರ ತೇಜೋಮೂರ್ತಿಯಾದ ಮಹಾಲಿಂಗವು.

ದೇಹದಲ್ಲಿ ನಾದವೇ ಪ್ರಾಣವು, ಬಿಂದುವೇ ದೃಶ್ಯ ಶರೀರವು, ಕಳೆಯೇ ಚೈತನ್ಯಾತ್ಮಕ ಮನವಾಗಿರುತ್ತದೆ. ಇವುಗಳು ಕೂಡಿದಾಗಲೇ ಮನುಷ್ಯನಲ್ಲಿ ಕಾರ್ಯ ಗಳು ಸಂಭವಿಸುತ್ತವೆ.

ಹೀಗೆ ಜಗತ್ತಿನಲ್ಲಿರುವ ಪದಾರ್ಥಗಳ ಪ್ರಾದುರ್ಭಾವ, ಅಸಿತ್ವ, ನಾಶ ಇವುಗಳು ಉಂಟಾಗುತ್ತವೆ. ಇವುಗಳೆಲ್ಲವೂ ನಾದ ಬಿಂದು ಕಲೆಗಳ ಮೂಲಕ ವಾಗಿಯೇ ಸಂಭವಿಸುತ್ತವೆಂದು ವಚನಕಾರರು ಹೇಳುತ್ತಾರೆ.

(ಬ) ಪಂಚಸಾದಾಖ್ಯಗಳು

ಜಗತ್ ಸೃಷ್ಟಿಯ ಕಾಲದಲ್ಲಿ ಅಖಂಡ ಪರಿಪೂರ್ಣ ಗೋಳಕಾರ ತೇಜೋ ಮೂರ್ತಿಯಾದ ಮಹಾಲಿಂಗವು ಹಿಂದೆ ಹೇಳಿದ ಪ್ರಕಾರ ಉದ್ಭವಿಸುತ್ತದೆ. ಈ ಮಹಾಲಿಂಗದಿಂದ ಪಂಚಸಾದಾಖ್ಯಗಳ ಪ್ರಕಟವಾಗುತ್ತವೆ. ಈ ಸಾದಾಖ್ಯಗಳು ಜಗತ್ತು ವ್ಯಕ್ತವಾಗುವಾಗ ಉಂಟಾಗುವ ಅದರ ಬೇರೆ ಬೇರೆ ಸ್ವರೂಪಗಳೆಂದು ಹೇಳಬಹುದು. ಇವು ಮಹಾಸಾದಾಖ್ಯ ಶಿವಸಾದಾಖ್ಯ ಅಮೂರ್ತಿಸಾದಾಖ್ಯ ಮೂರ್ತಿಸಾದಾಖ್ಯ ಕರ್ತೃಸಾದಾಖ್ಯ ಕರ್ಮಸಾದಾಖ್ಯ ಎಂಬವುಗಳಿದ್ದು ಮೊದಲಿನ ಸಾದಾಖ್ಯಕ್ಕಿಂತ ಅದರ ಮುಂದಿನ ಸಾದಾಖ್ಯವು ಹೆಚ್ಚು ಹೆಚ್ಚು ಸ್ಥೂಲಸ್ಥಿತಿಯನ್ನು ಹೊಂದುತ್ತ ಹೀಗೆ ಒಂದರ ಹಿಂದೊಂದು ಅವು ಉಗಮವಾಗುತ್ತ ಹೋಗುತ್ತವೆ. ಈ ಐದು ಸಾದಾಖ್ಯಗಳಲ್ಲಿ ಸೃಷ್ಟಿಯ ಕಾರ್ಯದಲ್ಲಿ ಅವಶ್ಯವಾಗಿರುವ ಶಕ್ತಿಗಳೂ ಕಲೆಗಳೂ ಅಂಗಗಳೂ ಪಂಚಾಕ್ಷರಗಳೂ, ಪಂಚಮುಖಗಳೂ ಕಳಾಮೂರ್ತಿಗಳೂ ಅಧಿದೇವತೆಗಳೂ ಉತ್ಪನ್ನವಾಗುತ್ತವೆ. (ಪುಟ ೧೦ ರಿಂದ ೨೫ರ ವರೆಗೆ ನೋಡಿರಿ.) ಸೃಷ್ಟಿಯ ಕ್ರಮದಲ್ಲಿ ಕಾರ್ಯಗಳು ಸರಿಯಾಗಿ ನಡಿಯಲು ಇವೆಲ್ಲವೂ ಅವಶ್ಯವಾದವುಗಳು. ಇವು ಕ್ರಮವಾಗಿ ಪ್ರಕಟವಾಗುತ್ತ ಮುಂದೆ ಕಟ್ಟಕಡೆಗೆ ಪದಾರ್ಥಗಳಿಗೆ ಪ್ರತ್ಯಕ್ಷ ಕಾರಣವಾಗಿರುವ ಪಂಚಮಹಾಭೂತಗಳೂ ಉತ್ಪನ್ನ ವಾಗುತ್ತವೆ. ಇವುಗಳೂ ಸೃಷ್ಟಿಗೆ ಕಾರಣವಾಗಿವೆ. ಸಾದಾಖ್ಯಗಳು ಜಗತ್ತಿನಲ್ಲಿ

ತಲೆದೋರುವಂತೆ ಮನುಷ್ಯನಲ್ಲಿಯೂ ಕೂಡ ಕಂಡುಬರುತ್ತವೆ. ಅವುಗಳ ಕ್ರಿಯೆಗಳು ಈ ಗ್ರಂಥದ ೧೪೫ನೆಯ ಪುಟದಲ್ಲಿ ಹೇಳಲ್ಪಟ್ಟಿವೆ. ಹೀಗೆ ಸಾದಾಖ್ಯಗಳು ಜಗತ್ತಿನ ಸೃಷ್ಟಿಯ ಕಾಲದಲ್ಲಿ ವಿಧವಿಧ ಸ್ವರೂಪಗಳನ್ನು ತಾಳುತ್ತ ಜಗತ್ತಿಗೆ ಕಾರಣವಾಗಿವೆ. ಪ್ರತಿಯೊಂದು ಸಾದಾಖ್ಯದಲ್ಲಿ ಸೃಷ್ಟಿಯ ಕಾರ್ಯಕ್ಕೆ ಅವಶ್ಯವಾಗಿ ಬೇಕಾಗುವ ಎಲ್ಲ ತರದ ವಸ್ತುಗಳೂ ಶಕ್ತಿಗಳೂ ಹುಟ್ಟುತ್ತವೆ. ಅವುಗಳ ಕಾರ್ಯಗಳನ್ನು ಸದಾ ನಡೆಸಲಿಕ್ಕೆ ಸದಾಶಿವ ಈಶ್ವರ ರುದ್ರ ವಿಷ್ಣು ಮತ್ತು ಬ್ರಹ್ಮ ಈ ಅಧಿದೇವತೆಗಳು ಇರುತ್ತಾರೆ. ಹಾಗೆಯೇ ಪರಾಶಕ್ತಿ ಆದಿಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಎಂಬ ಶಕ್ತಿಗಳೂ ಇಲ್ಲಿ ಉತ್ಪನ್ನವಾಗುತ್ತವೆ. ಜಗತ್ತಿನಲ್ಲಿಯ ಕ್ರಿಯೆಗಳಿಗೆ ಇವೂ ಕಾರಣಗಳು. ಮುಂದೆ ಆಕಾಶ ವಾಯು ಅಗ್ನಿ ಜಲ ಮತ್ತು ಪೃಥ್ವಿ ಎಂಬ ಪಂಚಮಹಾಭೂತಗಳೂ ಉದ್ಭವಿಸುತ್ತವೆ. ಅವುಗಳ ತತ್ವಗಳು ಪ್ರತಿಯೊಂದು ಪದಾರ್ಥದಲ್ಲಿ ಸೇರಿಕೊಂಡು ಪದಾರ್ಥಗಳ ಗುಣಧರ್ಮಗಳಿಗೆ ಕಾರಣವಾಗಿರುತ್ತವೆ. (ಪುಟ ೨೨ ನೋಡಿರಿ)

ಪಂಚಸಾದಾಖ್ಯಗಳು ಶಿವನ ಪಂಚಮುಖಗಳೆಂತಲೂ ಹೇಳಲ್ಪಡುತ್ತವೆ. ಈ ಪ್ರತಿಯೊಂದು ಮುಖದಲ್ಲಿ ಪಂಚಾಕ್ಷರಿಯ ಐದು ಅಕ್ಷರಗಳೂ ನೆಲೆಗೊಂಡಿವೆ. ಈ ಪಂಚಾಕ್ಷರಿಯು ಪಂಚಲಿಂಗಸ್ವರೂಪವನ್ನು ಹೊಂದಿ ಅವುಗಳಲ್ಲಿ ಪ್ರಕಾಶಿಸುತ್ತದೆ. ಈ ಸಾದಾಖ್ಯಗಳಲ್ಲಿ ಶಾಂತ್ಯಾತೀತೋತ್ತರಕಲೆ ಶಾಂತ್ಯಾತೀತಕಲೆ ಶಾಂತಿಕಲೆ ವಿದ್ಯಾಕಲೆ ಪ್ರತಿಷ್ಠಾಕಲೆ ಮತ್ತು ನಿವೃತ್ತಿಕಲೆ ಎಂಬ ಕಲೆಗಳು ಬೆಳಗುತ್ತವೆ. ಇವೆಲ್ಲವುಗಳು ಶಿವನ ನೆನಹುಮಾತ್ರದಿಂದ ಉಂಟಾಗಿ ಜಗತ್ತನ್ನು ವ್ಯವಸ್ಥೆಯಿಂದ ನಡೆಸಿಕೊಂಡು ಹೋಗುತ್ತವೆಂದು ವೀರಶೈವ ತತ್ವಜ್ಞರು ತಿಳಿದಿರುತ್ತಾರೆ.

(ಕ) ಷಡಧ್ವಗಳು

ಅಧ್ವಗಳು ಆರು ಇರುತ್ತವೆ. ಅವು ಮಂತ್ರಾಧ್ವ,ಪದಾಧ್ವ, ವರ್ಣಾಧ್ವ, ಭುವನಾಧ್ವ, ತತ್ವಾಧ್ವ, ಕಲಾಧ್ವಗಳಾಗಿವೆ. ಶಿವಾಗಮಗಳಲ್ಲಿ ಇವುಗಳಿಗೆ ಬಹು ಮಹತ್ವದ ಸ್ಥಾನವಿದೆ. ಶೈವಧರ್ಮ ಗ್ರಂಥಗಳಲ್ಲಿ ಇವುಗಳ ವಿವೇಚನೆಯು ಬಹು ವಿಸ್ತಾರವಾಗಿ ಮಾಡಲ್ಪಡುವದುಂಟು. ವೀರಶೈವ ಸಿದ್ಧಾಂತದಲ್ಲಿಯೂ ಇವುಗಳ ಉಲ್ಲೇಖವು ಅಲ್ಲಲ್ಲಿ ಬರುತ್ತದೆ. ಆದರೆ ದೀಕ್ಷೆಯ ಮೂಲಕ ಷಡಧ್ವ ಶುದ್ಧಿಯನ್ನು ಹೊಂದಿದ ಬಳಿಕ ಷಟ್‌ಸ್ಥಲ ಮಾರ್ಗದಂತೆ ವೀರಶೈವರು ನಡೆಯಬೇಕಾದುದರಿಂದ ಈ ಷಡಧ್ವಗಳ ಬದಲು ಷಟ್‌ಸ್ಥಲ ವಿಷಯಗಳು ವೀರಶೈವ ಗ್ರಂಥಗಳಲ್ಲಿ ಹೆಚ್ಚಾಗಿ ನಿರೂಪಿಸಲ್ಪಡುತ್ತವೆ.

ಪರಶಿವನ ಮೂಲಕ ಸಾದಾಖ್ಯಗಳು ಹೊರಹೊಮ್ಮುವವೆಂದು ಹಿಂದೆ ಹೇಳಲ್ಪಟ್ಟಿತಷ್ಟೇ. ಈ ಸಾದಾಖ್ಯಗಳು ಪ್ರಕಟವಾಗುವಾಗ ವಿಶ್ವದಲ್ಲಿ ಸಂಚಲನೆಯು ಉತ್ಪನ್ನವಾಗಿ ಅದು ಯಾವಮಾರ್ಗದಿಂದ ಮುಂದೆ ಪ್ರವಹಿಸುತ್ತದೆಯೋ ಅದೇ ಅಧ್ವವೆನಿಸಿಕೊಳ್ಳುವದು. ಶಕ್ತಿಯು ಪ್ರವಹಿಸಲು ಅದಕ್ಕೊಂದು ಮಾರ್ಗವು ಅಥವಾ ಆಧಾರವು ಬೇಕು. ಈ ಆಧಾರವು ಅದಕ್ಕೆ ದೊರೆತಾಗಲೇ ಅದು ಪ್ರಕಟವಾಗುತ್ತದೆ.

ಇಂಥ ಆಧಾರವೇ ಅಧ್ವವೆಂದು ಹೇಳಬಹುದು. ಈ ಅಧ್ವಗಳ ಮೂಲಕ ಶಿವಶಕ್ತಿಯು ಜಗತ್ತಿನಲಿ ಹರಿದಾಡುತ್ತದೆ.

ಅಧ್ವಗಳು ವಿದ್ಯುಲ್ಲತೆಯು ಹರಿದು ಹೋಗುವಂಥ ತಾರಾಯಂತ್ರದ ತಂತಿಗಳಂತಿರುತ್ತವೆ. ವಿಶ್ವವು ಪ್ರಕಟವಾಗಲು ಅವು ಸಾಧನಗಳಾಗಿವೆ. ಆದ್ದರಿಂದ ಅಧ್ವಗಳು ಜಗತ್ತಿನಲ್ಲೆಲ್ಲ ಪಸರಿಸಿರುತ್ತವೆ. ಸಾದಾಖ್ಯಗಳು ಮತ್ತು ಅಧ್ವಗಳು ಇವುಗಳ ಸಂಬಂಧವನ್ನು ಕೆಳಗಿನ ದೃಷ್ಟಾಂತದ ಮೂಲಕ ಹೇಳಬಹುದು. ಜೇಡಹುಳದ ಸುತ್ತಲೂ ಜಾಳಿಗೆಗಳು ಪಸರಿಸಿದಂತೆ ಸಾದಾಖ್ಯಗಳು ಜಗತ್ತಿನಲ್ಲಿ ಪಸರಿಸಿರುತ್ತವೆ. ಆದರೆ ಒಂದು ಜಾಳಿಗೆಯ ವಲಯದಿಂದ ಮತ್ತೊಂದು ವಲಯಕ್ಕೆ ಹೋಗಲು ಜೇಡಹುಳವು ಹೇಗೆ ತಾನಿರುವ ಸ್ಥಳದಿಂದ ಆಯಾ ಜಾಳಿಗೆಗಳೊಳಗಿಂದ ಹಾಯ್ದು ಕಡೆಯ ಜಾಳಿಗೆಯ ವರೆಗೆ ಸರಳವಾದ ತಂತಿಗಳನ್ನು ಹೆಣೆದುಕೊಂಡು ಆಯಾ ಜಾಳಿಗೆಗಳೊಳಗಿಂದ ಹೋಗಲು ಅನುವು ಮಾಡಿಕೊಂಡಿರುತ್ತದೆಯೋ ಹಾಗೆಯೇ ಷಡಧ್ವಗಳ ಮೂಲಕ ಪರಶಿವನಿಂದ ಶಕ್ತಿಯು ಹೊರಟು ವಿಶ್ವದ ತುಂಬೆಲ್ಲ ಅಂದರೆ ಸಾದಾಖ್ಯಗಳಲ್ಲೆಲ್ಲ ಹರಡುತ್ತದೆ. ಈ ಅಧ್ವಗಳ ಸಹಾಯದಿಂದಲೇ ಪ್ರಪಂಚದ ಅವಿರ್ಭಾವವು. ಅವ್ಯವಸ್ಥಿತವಾಗಿ ಇರುವ ಮೂಲ ಪ್ರಪಂಚ ಈ ಷಡಧ್ವಗಳ ಮೂಲಕವಾಗಿಯೇ ವ್ಯವಸ್ಥೆಯಿಂದ ಸಾಗುತ್ತದೆ. ಮತ್ತು ಈಗ ಕಾಣುವ ಸೌಂದರ್ಯಯುಕ್ತ ಜಗತ್ತು ಆಗಿರುತ್ತದೆ.

ಷಡಧ್ವಗಳಲ್ಲಿ ಕೆಲವು ಸೂಕ್ಷ್ಮವೂ ಕೆಲವು ಸ್ಥೂಲವೂ ಕೆಲವು ಅತ್ಯಂತ ಸೂಕ್ಷ್ಮವೂ ಇರುತ್ತವೆ. ಆದರೂ ಅವುಗಳಲ್ಲಿ ಪರಸ್ಪರ ಸಂಬಂಧವಿದೆ. ಇದರಿಂದ ವಿಶ್ವಕ್ಕೆ ವೈವಿಧ್ಯತೆಯು ಪ್ರಾಪ್ತವಾಗಿರುತ್ತದೆ.

ಅಧ್ವಗಳ ಸಂಖ್ಯೆಯು ಬಹಳವಿದೆ. ಆದರೆ ಅವುಗಳಲ್ಲೆಲ್ಲ ಆಗಮಕಾರರು ಮೇಲೆ ಹೇಳಿದಂತೆ ಆರು ಮುಖ್ಯ ವರ್ಗಗಳನ್ನು ಮಾಡಿರುವರು.

ಈ ಆರು ಅಧ್ವಗಳಲ್ಲಿ ಪುನಃ ಎರಡು ಮುಖ್ಯ ವಿಭಾಗಗಳು ಕಲ್ಪಿಸಲ್ಪಟಿರುತ್ತವೆ. ಒಂದನೇ ವಿಭಾಗದಲ್ಲಿ ಮಂತ್ರಾಧ್ವ, ಪದಾಧ್ವ, ವರ್ಣಾಧ್ವಗಳು ಬರುತ್ತವೆ. ಎರಡನೇ ವಿಭಾಗದಲ್ಲಿ ಭುವನಾಧ್ವ, ತತ್ವಾಧ್ವ, ಕಲಾಧ್ವಗಳು ಬರುತ್ತವೆ. ಮೊದಲನೆಯ ವಿಭಾಗದಲ್ಲಿಯ ಅಧ್ವಗಳು ಸೂಕ್ಷ್ಮವಾಗಿರುವದರಿಂದ ನಾದದಿಂದ ಉದ್ಭವಿಸಿರುತ್ತವೆಂದು ತಿಳಿಯಲ್ಪಟ್ಟಿರುತ್ತದೆ. ಎರಡನೆಯ ವರ್ಗದಲ್ಲಿಯ ಅಧ್ವಗಳು ಹೆಚ್ಚು ಸ್ಥೂಲವಾಗಿರುವದರಿಂದ ಅವು ಬಿಂದುವಿನಿಂದಾಗಿರುತ್ತವೆಂದು ತಿಳಿಯಲ್ಪಟ್ಟಿರುತ್ತವೆ. ಈ ಉಭಯ ನಾದಬಿಂದುಗಳು ಕೂಡಿದಾಗಲೇ ಕಲೆಯು. ಆದ್ದರಿಂದ ವರ್ಣಾಧ್ವದೊಡನೆ ಕಲಾಧ್ವವು, ಪದಾಧ್ವದೊಡನೆ ತತ್ವಾಧ್ವವು, ಮಂತ್ರಾಧ್ವದೊಡನೆ ಭುವನಾಧ್ವವು ಕೂಡಿಕೊಂಡು ಚಲಿಸುತ್ತವೆ. ಈ ಜೋಡಿಗಳಲ್ಲಿ ಪರಸ್ಪರ ಸಂಬಂಧವಿದೆ. ಈ ಸಂಬಂಧವನ್ನು ಮಂತ್ರ, ಪದ, ವರ್ಣಾಧ್ವಗಳು ಶಬ್ದಸ್ವರೂಪವೆಂತಲೂ ಭುವನ, ತತ್ವ, ಕಲಾಧ್ವಗಳು ಅರ್ಥಸ್ವರೂಪವೆಂತಲೂ ಆಗಮಜ್ಞರು ವಿವರಿಸಿ

ಹೇಳುವದುಂಟು. ಮೊದಲಿನವು ಶಬ್ದಾತ್ಮಕವೆಂತಲೂ ಎರಡನೆಯವು ವಸ್ತ್ವಾತ್ಮಕ ವೆಂತಲೂ ವರ್ಣಿಸಲ್ಪಟ್ಟಿರುತ್ತವೆ. ಮೊದಲನೆಯ ವರ್ಗವು ಶಕ್ತ್ಯಾತ್ಮಕವೂ ಎರಡನೆಯ ವರ್ಗವು ಸ್ವರೂಪಾತ್ಮಕವೂ ಎಂತಲೂ ಹೇಳಲ್ಪಟ್ಟಿರುತ್ತವೆ.

ಮಂತ್ರ, ಪದ, ವರ್ಣಾಧ್ವಗಳು ಶುದ್ಧಾಧ್ವಗಳಾಗಿವೆ. ಭುವನ, ತತ್ವ, ಕಲಾಧ್ವ ಗಳು ಅಶುದ್ಧಾಧ್ವಗಳಾಗಿವೆ.

ಈ ಅಧ್ವಗಳಲ್ಲಿ ಎಲ್ಲಕ್ಕೂ ಸ್ಥೂಲವಾದುದು ಕಲಾಧ್ವವು ಮತ್ತು ಎಲ್ಲಕ್ಕೂ ಸೂಕ್ಷ್ಮವಾದುದು ಮಂತ್ರಾಧ್ವವು. ಆದುದರಿಂದ ಕಲೆಯಲ್ಲಿ ತತ್ವ, ತತ್ವದಲ್ಲಿ ಭುವನ, ಭುವನದಲ್ಲಿ ವರ್ಣ, ವರ್ಣದಲ್ಲಿ ಪದ, ಪದದಲ್ಲಿ ಮಂತ್ರ ಹೀಗೆ ಈ ಅಧ್ವಗಳು ಪರಸ್ಪರ ಕೂಡಿಕೊಳ್ಳುತ್ತವೆ.

ಷಡಧ್ವಗಳ ಈ ಜ್ಞಾನಮಾಡಿಕೊಂಡಾಗಲೇ ಮನುಷ್ಯನಿಗೆ ಪ್ರಗತಿಯ ದ್ವಾರವು ತೋರಹತ್ತುತ್ತದೆ. ಮನುಷ್ಯನು ಮೊದಲಿನ ಮೂರು ಶಬ್ದಾಧ್ವಗಳ ಜ್ಞಾನ ಮಾಡಿಕೊಂಡು ಉಳಿದ ಮೂರು ಅರ್ಥಾಧ್ವಗಳ ಜ್ಞಾನಮಾಡಿಕೊಳ್ಳಬೇಕು. ಅಂದರೆ ಅವನು ಜ್ಞಾನಿಯೆನಿಸಿಕೊಳ್ಳುವನು ಮತ್ತು ಮಹಾಮಾಯೆಯಿಂದ ದೂರಾಗುವನು. ಆಗ ಅಶುದ್ಧಾಧ್ವಗಳು ಬಿಂದುವಿನಲ್ಲಿಯೂ ಶುದ್ಧಾಧ್ವಗಳು ನಾದದಲ್ಲಿಯೂ ಅಡಗು ವವು. ಮುಂದೆ ಈ ಬಿಂದುವೂ ಸಹ ನಾದದಲ್ಲಿ ಅಡಗುವದು. ಮತ್ತು ನಾದವು ಪರಾಶಕ್ತಿಯಲ್ಲಿ ಅಡಗುವದು. ಮತ್ತು ಪರಾಶಕ್ತಿಯು ಪರಮಾತ್ಮನಲ್ಲಿ ಅಡಗುವದು. ಆಗ ಮನುಷ್ಯನು ಷಡಧ್ವಗಳ ಜಾಳಿಗೆಯಿಂದ ಪಾರಾಗಿ ಮೋಕ್ಷವನ್ನು ಹೊಂದು ವನು. ಹೀಗೆ ಅಧ್ವಗಳು ಆಗಮ ಗ್ರಂಥಗಳಲ್ಲಿಯೂ ಶಿವಸಿದ್ಧಾಂತ ಗ್ರಂಥಗಳ ಲ್ಲಿಯೂ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತವೆ.

ಮಂತ್ರಾಧ್ವ : ಇದರಲ್ಲಿ ಹನ್ನೊಂದು ಮಂತ್ರಗಳಿವೆ. ಅವು ಸದ್ಯೋಜಾತಾದಿ ಪಂಚಬ್ರಹ್ಮ ಮಂತ್ರಗಳು. ಇವು ಐದು ಇವೆ. ಇವುಗಳೂಡನೆ ಹೃದಯ ಮಂತ್ರ, ಶಿರೋಮಂತ್ರ, ಮೊದಲಾದ ಷಡಂಗಮಂತ್ರಗಳು ಆರೂ ಕೂಡಿ ಹನ್ನೊಂದು ಮಂತ್ರಗಳಾಗುತ್ತವೆ. ಇವು ಮಂತ್ರಾಧ್ವಗಳು. (ಈ ಗ್ರಂಥದ ಪುಟ ೨೬ ನೋಡಿರಿ.)

ಪದಾಧ್ವ : ಇವು ೯೪ ಇವೆ. (ಗ್ರಂಥದ ಪುಟ ೨೬–೨೭ ನೋಡಿರಿ.) ಕೆಲವು ಆಗಮ ಗ್ರಂಥಗಳಲ್ಲಿ ಇವು ಎಂಭತ್ತೊಂದು ಇವೆ ಎಂದು ಹೇಳಲ್ಪಟ್ಟಿದೆ. ಮಂತ್ರಾಧ್ವಕ್ಕೆ ಈ ಪದಾಧ್ವವೇ ಅವಲಂಬನವು. ಪದಗಳಿಂದಲೇ ಮಂತ್ರಗಳು ಉದ್ಭವಿಸುತ್ತವೆ.

ವರ್ಣಾಧ್ವ : ಇವು ಐವತ್ತೆರಡು ಅಕ್ಷರಗಳು. ಪದಾಧ್ವಕ್ಕೆ ವರ್ಣಾಧ್ವವು ಮೂಲವಾಗಿದೆ. ಅಂದರೆ ವರ್ಣಗಳ ಸಹಾಯದಿಂದ ಪದಗಳು ರಚಿಸಲ್ಪಡುತ್ತವೆ. ಮತ್ತು ಪದಗಳಿಂದ ಮಂತ್ರಗಳು ಉತ್ಪನ್ನವಾಗುತ್ತವೆ. ಮಂತ್ರಗಳು ಎಲ್ಲೆಲ್ಲಿಯೂ ತುಂಬಿವೆ. (ಈ ಗ್ರಂಥದ ೨೭ನೆಯ ಪುಟ ನೋಡಿರಿ)

ಮೇಲೆ ಕಾಣಿಸಿದ ಅಧ್ವಗಳು ನಾದಾತ್ಮಕವಾಗಿವೆ ನಾದದಿಂದಲೇ ಇವು ಹುಟ್ಟುತ್ತವೆ. ಇವುಗಳಿಂದಲೇ ವೇದಗಳ ಆಗಮಗಳ ಉಗಮವು.

ಪದಗಳ ಸಂಘವೇ ಮಂತ್ರಗಳು. ಇವುಗಳಲ್ಲಿ ಪಂಚಬ್ರಹ್ಮಮಂತ್ರಗಳು, ಷಡಂಗಮಂತ್ರಗಳು ಎಂದು ಎರಡು ವಿಧಗಳಿರುತ್ತವೆ.

ಪಂಚಬ್ರಹ್ಮ ಮಂತ್ರಗಳು ಮೂರ್ತಿಬ್ರಹ್ಮ, ತತ್ವಬ್ರಹ್ಮ, ಭೂತಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ ಎಂದು ಐದು ಪ್ರಕಾರವಾಗಿರುತ್ತವೆ. ಸಾಕಲ್ಯ, ಶಾಂಭವ, ಸೌಖ್ಯ, ಸಾವಸ್ಯ ಸಾಯುಜಗಳೆಂಬ ಪಂಚಪ್ರಣಮಗಳು ಮೂರ್ತಿಬ್ರಹ್ಮಮಂತ್ರ ಗಳು. ಶುದ್ಧಪ್ರಸಾದ, ಮೂಲಪ್ರಸಾದ, ತತ್ವಪ್ರಸಾದ, ಆದಿಪ್ರಸಾದ, ಆತ್ಮಪ್ರಸಾದ ಎಂಬಿವು ಪಂಚಪ್ರಸಾದಗಳು, ತತ್ವಬ್ರಹ್ಮ ಮಂತ್ರಗಳು. ಲ ವ ರ ಯ ಹ ಕಾರಗಳು ಭೂತಬ್ರಹ್ಮ ಮಂತ್ರಗಳು. ತಮ್ಮ ತಮ್ಮ ಬೀಜಾಕ್ಷರಗಳಿಂದ ಯುಕ್ತವಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳೆಂಬ ಪಂಚ ಮಂತ್ರಗಳು ಪಿಂಡಬ್ರಹ್ಮ ಮಂತ್ರಗಳು. ಈ ಪಂಚಬ್ರಹ್ಮ ಮುಖಗಳಿಗೆ ಸಂಬಂಧಿಸಿ ಮೂವತ್ತೆಂಟು ಕಲೆಗಳಿದ್ದು ಅವುಗಳಿಂದ ಕೂಡಿದ ಪಂಚಮಂತ್ರಗಳು ಕಲಾಬ್ರಹ್ಮ ಮಂತ್ರಗಳು.

ಇನ್ನು ಷಡಂಗ ಮಂತ್ರಗಳು ಶಿವಾಂಗ, ಭೂತಾಂಗ, ವಿದ್ಯಾಂಗ, ಕೂಟಾಂಗ, ಶಕ್ತ್ಯಂಗ, ಸಾಮಾನ್ಯಾಂಗ ಎಂದು ಆರು ತೆರನಾಗಿರುತ್ತವೆ.

ಆಗಮಕಾರರು ಹೀಗೆ ಅನೇಕ ಭೇದವಿಭೇದಗಳನ್ನು ಕಲ್ಪಿಸಿ ಈ ಶುದ್ಧಾಧ್ವ ಗಳಿಂದ ಶಿವಾಗಮಗಳೂ ೨೦೮ ಉಪಭೇದಗಳಿಂದ ಕೂಡಿದ ೨೮ ಸಂಹಿತೆಗಳೂ ಉತ್ಪನ್ನವಾದವೆಂದು ತಿಳಿಸುತ್ತಾರೆ. ಗ್ರಂಥ ವಿಸ್ತಾರ ಭಯಕ್ಕಾಗಿ ನಾವು ಇವುಗಳನ್ನು ಇಲ್ಲಿ ವಿವರಿಸಿಲ್ಲ.

ಭುವನಾಧ್ವ : ಇವು ೨೨೪ ಇರುತ್ತವೆ. ಬ್ರಹ್ಮಾಂಡದಲ್ಲೆಲ್ಲ ಇವು ಪಸರಿಸಿರುತ್ತವೆ. ಇವು ಈ ಗ್ರಂಥದ ಪುಟ ೨೮ರಲ್ಲಿ ವಿವರಿಸಲ್ಪಟ್ಟಿವೆ.

ತತ್ವಾಧ್ವ : ಇವು ೩೬ ಇವೆ. ಇವುಗಳ ಸವಿಸ್ತಾರ ವಿವೇಚನೆಯನ್ನು ೨ನೇ ಅನುಬಂಧದಲ್ಲಿ ಮಾಡುವೆವು.

ಕಲಾಧ್ವ : ಇವು ಐದು ಇರುತ್ತವೆ. ಇವು ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯಾತೀತಗಳು ಇರುತ್ತವೆ. ಈ ಕಲೆಗಳು ಪದಾರ್ಥಗಳೊಡನೆ ಬೆರೆದು ಅವುಗಳಲ್ಲಿ ಅನೇಕ ತರದ ಪರಿಣಾಮಗಳನ್ನುಂಟು ಮಾಡುತ್ತವೆ. ಇವುಗಳ ಸಂಕ್ಷಿಪ್ತ ವಿವರವು ಏನೆಂದರೆ –

ನಿವೃತ್ತಿ ಕಲೆ : ಪರಮಾತ್ಮನ ಅರಿವು ಮನುಷ್ಯನಲ್ಲಿ ಉತ್ಪನ್ನವಾಗಲು ಈ ನಿವೃತ್ತಿಕಲೆಯು ಜಾಗ್ರತಿಯನ್ನು ಹೊಂದುತ್ತದೆ. ಆಗ ಇವನು ದುಷ್ಟವಾಸನೆಗಳನ್ನು ಬಿಟ್ಟು ಪರಮಾತ್ಮನೊಡನೆ ಕೂಡಲು ಬಯಸುತ್ತಾನೆ. ಇದರ ಅಧಿದೇವತೆಯು

ಬ್ರಹ್ಮನಿರುತ್ತಾನೆ. ಪ್ರತಿಷ್ಠಾಕಲೆ– ಈ ಕಲೆಯ ಮೂಲಕ ಮೋಕ್ಷೋನ್ಮುಖನಾದ ಆತ್ಮನು ದೃಢಚಿತ್ತನಾಗಿರುತ್ತಾನೆ. ವಿಷ್ಣುವೇ ಇಲ್ಲಿ ಅಧಿದೇವತೆಯು. ವಿದ್ಯಾಕಲೆ–ಇಲ್ಲಿ ಪಾಪಕರ್ಮಗಳು ನಾಶಹೊಂದುತ್ತವೆ. ಬುದ್ಧಿಯು ವಿಶಾಲವಾಗುತ್ತದೆ. ಮಲಗಳು ದೂರಾಗುತ್ತವೆ. ರುದ್ರನು ಇಲ್ಲಿ ಅಧಿದೇವತೆಯು. ಶಾಂತಿಕಲೆ–ಇಲ್ಲಿ ಅಹಂಕಾರವು ತೊಲಗಿ ಹೋಗುತ್ತದೆ. ಎಲ್ಲೆಲ್ಲಿಯೂ ಸಮಾಧಾನವು ನೆಲೆಗೊಳ್ಳುತ್ತದೆ. ಇದರ ಅಧಿದೇವತೆಯು ಮಹೇಶ್ವರನು. ಶಾಂತ್ಯಾತೀತಕಲೆ–ಇದರ ಮೂಲಕ ಪರಮಾತ್ಮನ ಪ್ರೇಮ ಮತ್ತು ಕರುಣೆಯನ್ನು ಮನುಷ್ಯನು ಹೊಂದಿ ಪರಮಾತ್ಮನಲ್ಲಿಯೇ ಜೀವಿಸುತ್ತಾನೆ. ಇದು ಸೌಖ್ಯದ ಪರಮಾವಧಿಯಾಗಿದೆ. ಹೀಗೆ ಕಲೆಗಳು ಮನುಷ್ಯನಲ್ಲಿ ಉಚ್ಚ ಸ್ಥಿತಿಯನ್ನುಂಟುಮಾಡಲು ಸಾಧನಗಳಾಗಿರುತ್ತವೆ. ಇವು ಜಗತ್ತಿನಲ್ಲಿ ಕೂಡ ವ್ಯಾಪಿಸಿಕೊಂಡು ಸೃಷ್ಟಿಯಲ್ಲಿ ಅನೇಕ ಬಗೆಯ ಪರಿಣಾಮಗಳನ್ನುಂಟು ಮಾಡುತ್ತವೆ.

ಭುವನಾಧ್ವ, ತತ್ವಾಧ್ವ ಮತ್ತು ಕಲಾಧ್ವ ಇವುಗಳು ಬಿಂದು ರೂಪಾಗಿರುತ್ತವೆ. ಈ ಷಡಧ್ವಗಳನ್ನು ತಿಳಿದುಕೊಂಡು ವ್ಯವಹರಿಸುವನು ಪರಮಾತ್ಮನೊಡನೆ ಬೆರೆದುಕೊಳ್ಳುತ್ತಾನೆ.

ಆದುದರಿಂದ ಪರಮಾತ್ಮನಿಗೆ ಅಧ್ವಪತಿ ಎಂಬ ಹೆಸರು ಇದೆ.

ಹೀಗೆ ಷಡಧ್ವಗಳ ಸಂಕ್ಷಿಪ್ತ ವಿವರಣೆಯು ಇದ್ದು ಇವುಗಳ ಪರಸ್ಪರ ಸಂಬಂಧವು ಈ ಗ್ರಂಥದ ೩೦ನೆಯ ಪುಟದಲ್ಲಿ ಹೇಳಲ್ಪಟ್ಟಿದೆ. ಪ್ರತಿಯೊಂದು ಅಧ್ವದಲ್ಲಿ ಅದರಲ್ಲಿ ಹೇಳಿದ ಪ್ರಕಾರ ಅನೇಕ ವಿಭಾಗಗಳಿರುತ್ತವೆ. ಈ ವಿಭಾಗಗಳು ಅನುಕ್ರಮವಾಗಿ ತಮ್ಮ ತಮ್ಮೊಳಗೆ ಬೆರೆದುಕೊಂಡು ಜಗತ್ತಿನಲ್ಲಿ ನಾನಾವಿಧ ಕಾರ್ಯಗಳನ್ನು ಮಾಡುತ್ತವೆ ಮತ್ತು ಅವೆಲ್ಲವು ಪ್ರಳಯಕಾಲದಲ್ಲಿ ಪರಶಿವನಲ್ಲಿಯೇ ಅಡಗುತ್ತವೆ.

ಈ ವಿಚಾರಗಳು ದಕ್ಷಿಣದೇಶದಲ್ಲಿರುವ ಶೈವಸಿದ್ಧಾಂತಿಗಳ ಗ್ರಂಥಗಳಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಡುವದುಂಟು. ಆದರೆ ವೀರಶೈವರು ಷಟ್‌ಸ್ಥಲಮಾರ್ಗಕ್ಕೆ ಪ್ರತ್ಯಕ್ಷ ಸಂಬಂಧಪಟ್ಟಿರುವ ವಿಷಯಗಳನ್ನು ಮಾತ್ರ ತೆಗೆದುಕೊಂಡು ಅವುಗಳನ್ನೇ ಹೆಚ್ಚಾಗಿ ವಿವರಿಸುತ್ತಾರೆ. ಅವರು ಅಧ್ವಗಳಲ್ಲಿ ತತ್ವಾಧ್ವಕ್ಕೆ ಬಹಳ ಮಹತ್ವಕೊಟ್ಟಿರುತ್ತಾರೆ. ಉಳಿದ ಅಧ್ವಗಳನ್ನು ಅವರು ತಮ್ಮ ಷಟ್‌ಸ್ಥಲಗಳ ಆಯಾ ಸ್ಥಲಗಳಲ್ಲಿ ಸೇರಿಸಿಕೊಂಡು ಬಿಟ್ಟಿರುತ್ತಾರೆ.

ಅನುಬಂಧ – ೨

೩೬ ತತ್ವಗಳು

ವೀರಶೈವರಲ್ಲಿ ೩೬ ತತ್ವಗಳಿರುತ್ತವೆ. ಶಿವಾಗಮಗಳಲ್ಲಿಯೂ ಕೂಡ ೩೬ ತತ್ವಗಳ ವಿವೇಚನೆಯು ವಿಸ್ತಾರವಾಗಿ ಮಾಡಲ್ಪಡುತ್ತದೆ. ಆದರೆ ಕೆಲವು ವಿಷಯಗಳ ಸಂಬಂಧವಾಗಿ ಈ ಉಭಯ ವಿವೇಚನೆಗಳಲ್ಲಿ ಕೆಲವು ವ್ಯತ್ಯಾಸಗಳು ತೋರಿ ಬರುತ್ತವೆ.

ಸೃಷ್ಟಿಯ ರಚನೆಯಲ್ಲಿ ವೀರಶೈವರು ಸಾದಾಖ್ಯಗಳಿಗೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಷಡಧ್ವಗಳನ್ನೂ ಅವರು ನಂಬುತ್ತಾರೆ. ಆದರೆ ಶಿವಸಿದ್ಧಾಂತಗಳು ಷಡಧ್ವಗಳಿಗೆ ಮಹತ್ವಕೊಟ್ಟು ಅವುಗಳ ಜ್ಞಾನದಿಂದ ಮೋಕ್ಷವು ಹೇಗಾಗುತ್ತದೆಂಬುದನ್ನು ಹೆಚ್ಚಾಗಿ ವಿವರಿಸುತ್ತಾರೆ. ಆದರೆ ವೀರಶೈವರು ಸಾದಾಖ್ಯಗಳಿಗೆ ಮಹತ್ವ ಕೊಟ್ಟು ಕರಣಹಸಿಗೆಯ ಜ್ಞಾನವು ಅವಶ್ಯವಾದುದೆಂದು ಹೇಳಿ ಷಟ್‌ಸ್ಥಲವನ್ನು ನಿರೂಪಿಸುತ್ತಾರೆ. ಅವರು ಆರು ಅಧ್ವಗಳಲ್ಲಿ ಬರುವ ವರ್ಣ, ಪದ, ಮಂತ್ರ ಈ ಅಧ್ವಗಳನ್ನು ಷಡಕ್ಷರ ಮಂತ್ರ ಮತ್ತು ಅದರ ಬೀಜಾಕ್ಷರಗಳಲ್ಲಿ ಸಮಾವೇಶ ಮಾಡುತ್ತಾರೆ. ಆದರೆ ಭುವನಾಧ್ವದ ವರ್ಣನೆಯು ಅವರಲ್ಲಿ ಹೆಚ್ಚಾಗಿ ಇಲ್ಲ. ಆದರೆ ಕಲಾಧ್ವದ ವರ್ಣನೆಯು ಆಯಾ ಸ್ಥಲಗಳಲ್ಲಿ ಬರುವದುಂಟು. ತತ್ವಾಧ್ವವನ್ನು ಮಾತ್ರ ಅವರು ಹೆಚ್ಚು ವಿಸ್ತಾರವಾಗಿ ನಿರೂಪಿಸುವದುಂಟು. ಆದರೆ ಇದರಲ್ಲಿ ಅವರು ಕೆಲವು ಬದಲಾವಣೆಗಳನ್ನು ಮಾಡಿ ಇವುಗಳನ್ನು ವಿವರಿಸುತ್ತಾರೆ.

ವೀರಶೈವರು ೩೬ ತತ್ವಗಳು ವಿವೇಚನೆ ಮಾಡುವಲ್ಲಿ ಅವರು ಅದರಲ್ಲಿ ಕೆಲವು ಭಾಗಗಳನ್ನು ಮಾಡುತ್ತಾರೆ. ಆತ್ಮತತ್ವ ೨೫, ವಿದ್ಯಾತತ್ವ ೧೦, ಮತ್ತು ಶಿವತತ್ವ ೧ ಹೀಗೆ ೩೬ ತತ್ವಗಳಲ್ಲಿ ಮೂರು ವಿಭಾಗಗಳನ್ನು ಮಾಡಿರುವರು. ಅವುಗಳ ವಿವರಣೆಯನ್ನು ಈ ಗ್ರಂಥದಲ್ಲಿ ವಾಚಕರು ೩೨ನೆಯ ಪುಟದಿಂದ ೩೫ನೆಯ ಪುಟಗಳ ವರೆಗೆ ನೋಡಬೇಕು. ಅಲ್ಲಿ ಇವು ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ. ಅವುಗಳನ್ನು ನಾವು ಇಲ್ಲಿ ಪುನಃ ಹೇಳುವ ಅವಶ್ಯವಿಲ್ಲ. ೨೫ ಆತ್ಮತತ್ವಗಳು ದೇಹಕ್ಕೆ ಸಂಬಂಧ ಪಟ್ಟಿವೆ. ೫ ಸಾದಾಖ್ಯಗಳು ಮತ್ತು ೫ ಕಲೆಗಳು ಕೂಡಿ, ಹತ್ತು ವಿದ್ಯಾತತ್ವಗಳಿವೆ. ಈ ವಿದ್ಯಾತತ್ವಗಳ ಸಹಾಯವನ್ನು ಮನುಷ್ಯನು ತೆಗೆದುಕೊಂಡು ತನ್ನ ಆತ್ಮತತ್ವಗಳನ್ನು ಶಿವತತ್ವದಲ್ಲಿ ಬೆರಿಸಬೇಕು. ಇದೇ ೩೬ ತತ್ವಗಳನ್ನು ತಿಳಿದು ಆಚರಿಸುವದು. ಸಾದಾಖ್ಯಗಳ ವಿವರಣೆಯು ೧೪೫ ನೆಯ ಪುಟದಲ್ಲಿ ಮತ್ತು ಕಲೆಗಳ ವಿವರಣೆಯು ೧೫೩ ನೆಯ ಪುಟದಲ್ಲಿ ಬಂದಿವೆ. ಈ ವಿವರಣೆಗಳಲ್ಲಿ ಮನುಷ್ಯನು ಜಗತ್ತಿನಲ್ಲಿ ಹೇಗೆ ಆಚರಿಸಬೇಕೆಂಬುದನ್ನು ಹೇಳಿದ್ದಾರೆ. ಮನುಷ್ಯನು ಈ ಹತ್ತು ವಿದ್ಯಾತತ್ವಗಳನ್ನು ಅಳವಡಿಸಿಕೊಂಡು ೨೫ ಆತ್ಮತತ್ವಗಳಾದ ವಾಗಾದಿ ಕರ್ಮೇಂದ್ರಿಯಗಳು. ಶ್ರೋತ್ರಾದಿ ಜ್ಞಾನೇಂದ್ರಿಯಗಳು, ಶಬ್ದಾದಿ ವಿಷಯಗಳು, ವ್ಯಾನೋದಾನ ಪಂಚವಾಯುಗಳು, ಮನವಾದಿ ಪಂಚಕಗಳು, ಇವುಗಳನ್ನು ಶಿವನಲ್ಲಿ ನಿವೃತ್ತಿಗೊಳಿಸಬೇಕು.

ಶಿವಸಿದ್ಧಾಂತಿಗಳ ೩೬ ತತ್ವಗಳು ಈ ಗ್ರಂಥದ ೨೯ನೆಯ ಪುಟದಲ್ಲಿ ವಿವರಿಸಲ್ಪಟ್ಟಿದೆ. ಅವುಗಳಾದರೂ ಅಧ್ವಗಳು. ಆದರೆ ವೀರಶೈವರು ತಮ್ಮ ೩೬ ತತ್ವಗಳು ವಿವೇಚನೆಯನ್ನು ಮಾಡುವಲ್ಲಿ ಅವುಗಳು ಅಧ್ವಗಳು ಎಂದು ಕರೆಯುವದನ್ನು ಬಿಟ್ಟಿರುತ್ತಾರೆ. ಅವು ಮೋಕ್ಷಕ್ಕೆ ಸಾಧನಗಳೆಂದು ಮಾತ್ರ ಹೇಳಿ ಷಟ್‌ಸ್ಥಲ ಮಾರ್ಗಕ್ಕೆ ಅನುಸಾರವಾಗಿ ವಿಷಯ ನಿರೂಪಣೆ ಮಾಡುವದುಂಟು.

ಶಿವಸಿದ್ಧಾಂತಗಳ ೩೬ ತತ್ವಗಳನ್ನು ನಾವು ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇವೆ.

ಅವರ ೨೫ ತತ್ವಗಳು ಯಾವವೆಂದರೆ ಪೃಥಿವ್ಯಾದಿ ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಮನ, ಬುದ್ಧಿ ಅಹಂಕಾರ, ಪ್ರಕೃತಿ, ಪುರುಷ ಈ ಎಲ್ಲ ಕೂಡಿ ಇಪ್ಪತ್ತೈದು ತತ್ವಗಳಾಗುತ್ತವೆ ಇವೆಲ್ಲ ಮಾಯೆಯಿಂದ ಹುಟ್ಟಿದವಾದುದರಿಂದ ಅವು ಅಶುದ್ಧ ತತ್ವಗಳು.

ಉಳಿದ ಹನ್ನೊಂದು ತತ್ವಗಳಲ್ಲಿ ಐದು ತತ್ವಗಳು ಮಾತ್ರ ಶಿವತತ್ವದಿಂದ ಉತ್ಪನ್ನವಾಗಿರುತ್ತವೆ. ಆದ್ದರಿಂದ ಅವು ಶುದ್ಧತತ್ವಗಳೆಂತಲೂ ಅಥವಾ ಶುದ್ಧಾಧ್ವಗಳೆಂತಲೂ ಕರೆಯಲ್ಪಡುತ್ತವೆ. ಇವು ಪರಶಿವ ಶಕ್ತಿ ಸದಾಶಿವ, ಈಶ್ವರ ಮತ್ತು ಶುದ್ಧ ವಿದ್ಯಾ ಹೀಗೆ ಇರುತ್ತವೆ. ಮುಂದಿನ ಆರು ತತ್ವಗಳು ಮಾಯೆಯಿಂದ ಹುಟ್ಟಿದುವಾದುದರಿಂದ ಅವು ಅಶುದ್ಧ ತತ್ವಗಳು, ಅವು ಯಾವವೆಂದರೆ– ಮಾಯೆ, ಕಾಲ, ನಿಯತಿ, ಕಲೆ, ವಿದ್ಯಾ, ರಾಗ ಎಂಬಿವು ಇರುತ್ತವೆ. ಇವುಗಳು ೬ ಮತ್ತು ಮೊದಲಿನವು ೨೫ ಹೀಗೆ ಒಟ್ಟು ೩೧ ತತ್ವಗಳು ಅಶುದ್ಧ ತತ್ವಗಳು. ಇವುಗಳೂ ಉಳಿದ ಐದು ಶುದ್ಧ ತತ್ವಗಳೂ ಕೂಡಿ ೩೬ ತತ್ವಗಳಾಗುತ್ತವೆ. ಇವುಗಳ ಮೂಲಕವಾಗಿಯೇ ಪ್ರಪಂಚದ ವ್ಯವಹರಣೆ ಎಂದು ಆಗಮಗ್ರಂಥಕಾರರು ಹೇಳುತ್ತಾರೆ.

ಈ ೩೬ ತತ್ವಗಳ ಸಂಕ್ಷಿಪ್ತ ವಿವರಣೆ ಏನೆಂದರೆ

ಶಿವತತ್ವ : ಪರಶಿವನೇ ಶಿವತತ್ವವು. ಈ ಶಿವತತ್ವವೇ ಪ್ರಪಂಚಕ್ಕೆ ಕಾರಣವಾಗಿರುತ್ತದೆ. ಆತನೊಬ್ಬನನ್ನೇ ಎಲ್ಲರೂ ನಂಬತಕ್ಕದ್ದು.

ಶಕ್ತಿತತ್ವ : ಪರಶಿವನಲ್ಲಿ ಶಕ್ತಿತತ್ವವು ಉದ್ಭವಿಸುತ್ತದೆ. ಈ ಶಕ್ತಿತತ್ವವೇ ಪ್ರಪಂಚಕ್ಕೆ ಉಪಾದಾನ ಕಾರಣವಾಗಿರುತ್ತದೆ. ಇದರ ಮೂಲಕವೇ ಜಗತ್ತಿನ ಉದ್ಭವವು.

ಸದಾಶಿವತತ್ವ : ಇಲ್ಲಿ ಸೃಷ್ಟಿಯ ಸಂಚಲನವು ಆರಂಭವಾಗುತ್ತದೆ. ಇಲ್ಲಿಂದ ಮುಂದೆ ಜಗತ್ತು ಪ್ರಕಟವಾಗುತ್ತ ಹೋಗುತ್ತದೆ. ಇಲ್ಲಿ 'ನಾನೇ ಈ ಪ್ರಪಂಚ' ಎಂಬ ಭಾವವು ಉತ್ಪನ್ನವಾಗುತ್ತದೆ.

ಈಶ್ವರತತ್ವ : ಇಲ್ಲಿ ಹಿಂದೆ ಹೇಳಿದ ಶಕ್ತಿಯು ಹೆಚ್ಚಿಗೆ ಪ್ರಕಟವಾಗುತ್ತದೆ. ಇಲ್ಲಿ 'ಪ್ರಪಂಚವೆಲ್ಲವೂ ನಾನೇ' ಎಂಬ ಅಹಂ ವೃತ್ತಿಯು ಮನುಷ್ಯನಲ್ಲಿ ಹುಟ್ಟುತ್ತದೆ. ಇಲ್ಲಿ ಕ್ರಿಯಾಶಕ್ತಿಯು ಹೆಚ್ಚಿಗೆ ಪ್ರಕಟವಾಗುತ್ತದೆ. ಈಶ್ವರ ತತ್ವಕ್ಕೆ ಮಹೇಶ್ವರತತ್ವವೆಂತಲೂ ಬೇರೊಂದು ಹೆಸರು ಇರುತ್ತದೆ. ಇಲ್ಲಿ ಪರಶಿವನು ಸಕಲಾವಸ್ಥೆಯಲ್ಲಿರುತ್ತಾನೆ.

ಶುದ್ಧವಿದ್ಯಾ : ಇಲ್ಲಿ ಐಕ್ಯಜ್ಞಾನವು ಅಥವಾ ಅಧ್ಯಾತ್ಮಿಕ ಜ್ಞಾನವು ಉದಯಿಸುತ್ತದೆ. ಇದು ಜಗತ್ತಿನ ಉಚ್ಚತರ ಸ್ಥಿತಿಯು. ಈ ಎಲ್ಲ ತತ್ವಗಳಿಗೆ ಶುದ್ಧಾಧ್ವಗಳೆಂಬ ಹೆಸರು. ಇವೆಲ್ಲವೂ ನಾದದಿಂದ ಉತ್ಪನ್ನವಾಗಿರುತ್ತವೆ.

ಮಾಯೆ : ಇದು ಭೇದಬುದ್ಧಿಯು. ಇದೇ ಜಗತ್ತಿಗೆ ಕಾರಣವು. ಶಿವಸಿದ್ಧಾಂತಿ

ಗಳು ಜಗತ್ತು ನಿಜವೆಂದು ತಿಳಿದಿದ್ದಾರೆ. ಆದರೆ ಮಾಯೆಯು ಈ ಭೇದಬುದ್ಧಿಗೆ ಕಾರಣ ಮಾತ್ರವಾಗಿದೆ.

ಕಾಲ : ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ರೂಪದಿಂದ ಎಣಿಕೆ ಮಾಡುವ ಜ್ಞಾನವೇ ಇದಾಗಿರುತ್ತದೆ. ಪದಾರ್ಥಗಳ ಉತ್ಪತ್ತಿಗೆ ಇದಾದರೂ ಅವಶ್ಯವು.

ನಿಯತಿ : ಪರಮೇಶ್ವರನ ವ್ಯಾಪಕಶಕ್ತಿಯು ಸಂಕುಚಿತವಾಗಲು ನಿಯತಿಯೆಂದು ಹೇಳಲ್ಪಡುತ್ತದೆ. ಇದರಿಂದ ಎಲ್ಲ ಪದಾರ್ಥಗಳು ವ್ಯವಸ್ಥೆಯನ್ನು ಹೊಂದುತ್ತವೆ. ಮನುಷ್ಯನು ಮಾಡುವ ಕರ್ಮಗಳನ್ನು ಅವನು ಅನುಭವಿಸುವಂತೆಯೂ ಇದು ಮಾಡುತ್ತದೆ.

ಕಲಾ : ಇದು ಪರಮೇಶ್ವರನ ಕರ್ತೃತ್ವಶಕ್ತಿಯು. ಇದರಿಂದ ಮನುಷ್ಯನ ಉತ್ಕೃಷ್ಟತೆಯು ಹೊರಪಡುತ್ತದೆ. ಇದು ಮನುಷ್ಯನಲ್ಲಿಯ ಚೈತನ್ಯಶಕ್ತಿಯು.

ವಿದ್ಯಾ : ಪರಮಾತ್ಮನ ಸರ್ವಜ್ಞತಾ ಶಕ್ತಿಯು ಸಂಕೋಚತ್ವವನ್ನು ಹೊಂದಲು ಅದು ವಿದ್ಯಾತತ್ವವೆಂದೆನಿಸಿಕೊಳ್ಳುತ್ತದೆ. ಇದರ ಮೂಲಕವಾಗಿಯೇ ಪುರುಷನಲ್ಲಿ ಜ್ಞಾನವು ಉಂಟಾಗುತ್ತದೆ. ಇದರಿಂದ ಪದಾರ್ಥಗಳನ್ನು ತಿಳಿಯಲು ಶಕ್ಯವಾಗುತ್ತದೆ.

ರಾಗ : ಅಭಿಲಾಷಾ ರೂಪವಾದ ಕಾರ್ಯವುಳ್ಳದೇ ರಾಗವು. ಇದು ವಿಷಯಗ್ರಹಣಶಕ್ತಿಯು. ಮನುಷ್ಯನು ಕಾರ್ಯಮಾಡುವಲ್ಲಿ ಅವನಿಗೆ ರಾಗ ಅಥವಾ ಇಚ್ಛೆ ಎಂಬುದು ಅವಶ್ಯವಾಗಿ ಬೇಕು.

ಮೇಲಿನ ಐದು ತತ್ವಗಳಲ್ಲಿ ಕಲಾ, ವಿದ್ಯಾ, ರಾಗ, ಇವು ಪ್ರಧಾನವಾಗಿದ್ದು ಅಂತರಂಗದಲ್ಲಿ ಅವು ತಮ್ಮ ಕ್ರಿಯೆಗಳನ್ನು ಮಾಡುತ್ತವೆ. ಆದರೆ ಕಾಲ ಮತ್ತು ನಿಯತಿಗಳು ಅಪ್ರಧಾನವಾಗಿದ್ದು ಬಹಿರಂಗದಲ್ಲಿ ಇವು ತಮ್ಮ ಕ್ರಿಯೆಗಳನ್ನು ಮಾಡುತ್ತವೆ.

ಪುರುಷ : ಪರಶಿವಚೈತನ್ಯವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಲಾಗಿ ಪುರುಷ ತತ್ವವೆನಿಸಿಕೊಳ್ಳುವದು. ಇಲ್ಲಿ ಇವನು ಭೋಕ್ತವಾಗಿ ಜೀವಿಸುತ್ತಾನೆ. ಆದರೆ ಪುರುಷರು ಜೀವಿಗಳಾಗಿರುತ್ತಾರೆ. ಹೀಗೆ ಆಗಮ ಗ್ರಂಥಗಳಲ್ಲಿ ಪುರುಷ ಎಂಬುದಕ್ಕೆ ಒಂದು ವಿಶೇಷಾರ್ಥವಿದೆ.

ಪ್ರಕೃತಿ : ಬುದ್ಧ್ಯಾದಿ ಪೃಥ್ವ್ಯಂತಗಳಾದ ತತ್ವಗಳಿಗೆ ಪ್ರಕೃತಿಯು ಮೂಲ ಕಾರಣವಾಗಿರುತ್ತದೆ. ಪ್ರಕೃತಿಯು ಪುರುಷನಿಗೆ ಭೋಗ್ಯವಸ್ತುವಾಗಿರುತ್ತದೆ.

ಮಾಯೆಯ ತರುವಾಯ ಕಾಲತತ್ವವು ಇದ್ದು ಈ ಕಾಲತತ್ವದಿಂದ ಪ್ರಕೃತಿಯವರೆಗೆ ಏಳು ತತ್ವಗಳು ಮಿಶ್ರಾಧ್ವಗಳೆಂದು ಹೇಳಲ್ಪಡುತ್ತವೆ.

ಬುದ್ಧಿ : ಪದಾರ್ಥಗಳನ್ನು ನಿಶ್ಚಯಿಸುವ ತತ್ವವೇ ಬುದ್ಧಿತತ್ವವು. ಇದು ಸತ್ವ ರೂಪವಾದ ಜ್ಞಾನಶಕ್ತಿಯು.

ಅಹಂಕಾರ : ನಾನು ಎಂಬ ಅಭಿಮಾನರೂಪವಾದುದೇ ಅಹಂಕಾರವು. ಅದು ರಜೋಗುಣರೂಪ ಪರಿಣಾಮವುಳ್ಳ ಇಚ್ಛಾಶಕ್ತಿಯಾಗಿರುತ್ತದೆ. ಇದರಲ್ಲಿ ಸಂಗ್ರಾಹಕ ಸ್ವಭಾವವಿರುತ್ತದೆ. ಇದರಲ್ಲಿ ಮನುಷ್ಯನ ವ್ಯಕ್ತಿತ್ವವು ತೋರಿಸಲ್ಪಡುತ್ತದೆ.

ಮನ : ಇದು ಸಂಕಲ್ಪ ವಿಕಲ್ಪಗಳನ್ನು ಉಂಟುಮಾಡುತ್ತದೆ. ಅದರ ಮೂಲಕವಾಗಿಯೇ ಪದಾರ್ಥಗಳು ಗ್ರಹಿಸಲ್ಪಡುತ್ತವೆ.

ಮನ ಅಹಂಕಾರ ಮತ್ತು ಬುದ್ಧಿ ಇವುಗಳೆಲ್ಲವೂ ಕೂಡಿದಾಗ್ಗೆ ಪದಾರ್ಥಗಳ ಜ್ಞಾನವು ಮನುಷ್ಯನಿಗೆ ಉಂಟಾಗುತ್ತದೆ.

ಜ್ಞಾನೇಂದ್ರಿಯಗಳು : ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ನಾಸಿಕ ಇವುಗಳು ಜ್ಞಾನೇಂದ್ರಿಯಗಳು.

ಕರ್ಮೇಂದ್ರಿಯಗಳು : ಇವು ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥಗಳು. ಇವು ಬಾಹ್ಯಕ್ರಿಯೆಗಳನ್ನು ಮಾಡುವಂಥವು. ಇವು ಜ್ಞಾನೇಂದ್ರಿಯಗಳಿಗೆ ಸಹಾಯಕವಾಗಿವೆ.

ತನ್ಮಾತ್ರೆಗಳು : ಇವು ಶಬ್ದ ಸ್ಪರ್ಶ, ರೂಪ, ರಸ, ಗಂಧಗಳು. ಇವು ಜ್ಞಾನೇಂದ್ರಿಯಗಳಿಗೆ ವಿಷಯಗಳಾಗಿರುತ್ತವೆ.

ಪಂಚಮಹಾಭೂತಗಳು : ಆಕಾಶ, ವಾಯು, ತೇಜ, ಆಪ್, ಪೃಥ್ವಿ ಇವು ಪಂಚಮಹಾಭೂತಗಳು. ಇವುಗಳ ಮೂಲತತ್ವಗಳು ಜಗತ್ತನ್ನು ಹುಟ್ಟಿಸಲಿಕ್ಕೆ ಕಾರಣವಾಗಿರುತ್ತವೆ.

ಈ ಮೇರೆಗೆ ೩೬ ತತ್ವಗಳು ಶಿವಸಿದ್ಧಾಂತ ಗ್ರಂಥಗಳಲ್ಲಿ ಬಹುವಿಸ್ತಾರವಾಗಿ ನಿರೂಪಿಸಲ್ಪಡುವದುಂಟು. ಅವುಗಳ ಮರ್ಮವನ್ನು ತಿಳಿಯುವದರಿಂದಲೇ ಮನುಷ್ಯನು ಪರಶಿವನಲ್ಲಿ ಬೆರೆಯುತ್ತಾನೆಂದು ಅವುಗಳಲ್ಲಿ ಹೇಳಲ್ಪಟ್ಟಿರುತ್ತದೆ.

ಸಾಂಖ್ಯರು ಮತ್ತು ಶೈವಸಿದ್ಧಾಂತಿಗಳು ಇವರಲ್ಲಿರುವ ಅನೇಕ ವಿಷಯಗಳನ್ನು ವೀರಶೈವರು ತೆಗೆದುಕೊಂಡರೂ ತಮ್ಮ ಷಟ್‌ಸ್ಥಲ ಮಾರ್ಗಕ್ಕೆ ಅನುಸಾರವಾಗಿ ಅವುಗಳಲ್ಲಿ ಆವಶ್ಯಕ ಬದಲಾವಣೆಗಳನ್ನು ಮಾಡಿ ತಮ್ಮ ೩೬ ತತ್ವಗಳನ್ನು ಬೇರೆಯಾಗಿ ನಿರೂಪಿಸಿದ್ದಾರೆ ಮತ್ತು ಈ ತತ್ವಗಳಿಗೆ ಅನುಸಾರವಾಗಿ ನಡೆದರೆ ಹೇಗೆ ಪರಮಾತ್ಮನಲ್ಲಿ ಐಕ್ಯವು ಪ್ರಾಪ್ತವಾಗುವದೆಂಬುದನ್ನೂ ನಿರ್ದೇಶಿಸಿದ್ದಾರೆ. ಇದು ಈ ಗ್ರಂಥದ ಪುಟ ೩೦–೩೬ ರಲ್ಲಿ ಹೇಳಲ್ಪಟ್ಟಿರುತ್ತದೆ.

ಅನುಬಂಧ–೩

ಪರಮಾತ್ಮನ ಬಗ್ಗೆ ವಿಚಾರಗಳು

ದೇವರು ಒಬ್ಬನೇ ಇದ್ದಾನೆ : ವೀರಶೈವರಲ್ಲಿ ದೇವರು ಒಬ್ಬನೇ ಇದ್ದಾನೆಂಬ ಅಭಿಪ್ರಾಯವು ದೃಢವಾಗಿರುತ್ತದೆ. ಈ ಬಗೆಯ ವಿಚಾರಗಳು ಉಪನಿಷಗ್ಗ್ರಂಥ

ಗಳಲ್ಲಿಯೂ ಇರುತ್ತವೆ. ಶಿವಾಗಮ ಗ್ರಂಥಗಳಲ್ಲಿಯೂ ಕೂಡ ಇವೇ ವಿಚಾರಗಳು ಕಂಡುಬರುತ್ತವೆ. ಕೆಲವರು ಶಿವಾಗಮಗಳು ಉಪನಿಷತ್ ಗ್ರಂಥಗಳಿಗಿಂತಲೂ ಹಿಂದನವೆಂದು ತಿಳಿಯುತ್ತಾರೆ. ಆದರೆ ಆಗಮ ವಾಙ್ಮಯವು ಇನ್ನೂ ಪೂರ್ಣವಾಗಿ ಸಂಶೋಧಿಸಲ್ಪಟ್ಟಿಲ್ಲ. ಆದ್ದರಿಂದ ಈ ವಿಷಯವನ್ನು ಕುರಿತು ಹೀಗೆ ಅಭಿಪ್ರಾಯ ಪಡಲು ಶಕ್ಯವಿಲ್ಲ. ವೀರಶೈವರಲ್ಲಿ ಪರಮಾತ್ಮನಿಗೆ ಪರಶಿವ, ಶಿವ, ಪರಬ್ರಹ್ಮ ಶಿವತತ್ವ ಎಂಬ ಶಬ್ದಗಳು ಉಪಯೋಗಿಸಲ್ಪಡುತ್ತವೆ.

ಶೂನ್ಯವೆಂದರೇನು ? : ವಚನಗಳಲ್ಲಿ ಪರಮಾತ್ಮನು ಸರ್ವಶೂನ್ಯ, ಶೂನ್ಯ, ಬಯಲು, ನಿರವಯ ಎಂಬ ಶಬ್ದಗಳಿಂದ ವರ್ಣಿಸಲ್ಪಟ್ಟಿರುವದು ಕಂಡುಬರುತ್ತದೆ. ಈ ಶಬ್ದಗಳ ಮೂಲಕ ವೀರಶೈವರು ಜೈನ, ಬೌದ್ಧರಂತೆ ನಿರೀಶ್ವರವಾದಿಗಳೋ ಹೇಗೆ ಎಂಬ ಸಂಶಯವು ಉಂಟಾಗಬಹುದಾಗಿದೆ. ಆದರೆ ಈ ಶಬ್ದಗಳು ಪರಮಾತ್ಮನು ನಿರಾಕಾರನಾಗಿದ್ದಾನೆಂಬ ಅರ್ಥದಲ್ಲಿ ಮಾತ್ರ ಪ್ರಯೋಗಿಸಲ್ಪಡುವದುಂಟು. ಪರಮಾತ್ಮನಿಗೆ ಆಕೃತಿಯು ಇಲ್ಲ ಎಂಬುದನ್ನು ಹೇಳುವದೇ ಈ ಶಬ್ದಗಳನ್ನು ವಚನಕಾರರು ಉಪಯೋಗಿಸುವದರ ಮುಖ್ಯ ಉದ್ದೇಶವಾಗಿರುತ್ತದೆ.

ಮಾಯೆ : ಮಾಯೆ ಈ ಶಬ್ದವು ವೀರಶೈವ ಗ್ರಂಥಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಆದರೆ ಈ ಶಬ್ದದ ಮೂಲಕ ವೀರಶೈವರು ಶಂಕರಾಚಾರ್ಯನ ಶುದ್ಧಾದ್ವೈತ ಮಾರ್ಗವನ್ನು ಒಪ್ಪಿರುವರೋ ಹೇಗೆ ಎಂಬ ಸಂಶಯವು ಬರಬಹುದಾಗಿದೆ. ಆದರೆ ವೀರಶೈವರು ಶಂಕರಾಚಾರ್ಯನ ಮಾಯಾವಾದವನ್ನು ಒಪ್ಪಿರುವದಿಲ್ಲ. ಅವರು ಅವನಂತೆ ಜಗತ್ತು ಸುಳ್ಳೆಂದು ಭಾವಿಸಿಲ್ಲ. ವೀರಶೈವ ಗ್ರಂಥಗಳಲ್ಲಿ ಮಾಯೆ ಇದರ ಅರ್ಥವು ದುಷ್ಕೃತ್ಯಗಳಿಗೆ ಎಳೆಸತಕ್ಕ ಒಂದು ಶಕ್ತಿಯು ಎಂದು ಮಾತ್ರ ಇರುತ್ತದೆ ಹಾಗೂ ಜಗತ್ತು ಪ್ರಾದುರ್ಭಾವವಾಗುವಲ್ಲಿ ಈ ಮಾಯಾಶಕ್ತಿಯು ಉತ್ಪನ್ನವಾಗುತ್ತದೆಂತಲೂ ಅದರಿಂದ ದೃಶ್ಯಜಗತ್ತು ಹುಟ್ಟುತ್ತದೆಂತಲೂ ವೀರಶೈವ ಗ್ರಂಥಗಳಲ್ಲಿ ಉಲ್ಲೇಖಗಳುಂಟು. ಸಂಸಾರಹೇಯಸ್ಥಲದಲ್ಲಿ ಮಾಯೆಯ ವಿವರಣೆಗಳು ಹೆಚ್ಚಾಗಿ ಬರುತ್ತವೆ. ಆದರೆ ಸಂಸಾರದಲ್ಲಿ ಕಂಡುಬರುವ ಕೆಡಕುಮಾರ್ಗಗಳನ್ನು ದೂರಮಾಡಬೇಕೆಂದು ಬೋಧಿಸುವದೇ ಇಲ್ಲಿ ವಚನಕಾರರ ಮುಖ್ಯ ಉದ್ದೇಶವಾಗಿರುತ್ತದೆ.

ವೀರಶೈವರಲ್ಲಿ ಇತರ ದೇವತೆಗಳ ಉಪಾಸನೆ : ವೀರಶೈವರು ವಿಷ್ಣುಮೊದಲಾದ ದೇವತೆಗಳನ್ನು ಪೂಜಿಸಬಾರದು, ಅವರು ಶಿವನೊಬ್ಬನನ್ನೇ ಪೂಜಿಸಬೇಕು ಎಂಬ ಅಭಿಪ್ರಾಯವುಳ್ಳವರೆಂಬ ತಿಳುವಳಿಕೆಯು ಸಾರ್ವತ್ರಿಕವಾಗಿದೆ. ಇಲ್ಲಿ ಶಿವ ಇದರ ಅರ್ಥವು ಪರಶಿವ ಎಂದು ತಿಳಿದರೆ ಈ ತಿಳುವಳಿಕೆಯು ತಪ್ಪಾಗಲಾರದು. ಆದರೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವ ಎಂದು ತಿಳಿದರೆ ಮಾತ್ರ ಈ ತಿಳುವಳಿಕೆಯಲ್ಲಿ ತಪ್ಪಾಗುತ್ತದೆ. ಯಾಕಂದರೆ ವೀರಶೈವರು ತ್ರಿಮೂರ್ತಿಗಳಲ್ಲಿ ಯಾರನ್ನೂ ನಂಬಬಾರದು. ಅನೇಕ ಕಡೆಗೆ ರುದ್ರ, ಪಾರ್ವತಿ ಇವರಾರೂ ದೇವರಲ್ಲೆಂದು

ವೀರಶೈವರು ಹೇಳಿದ್ದಾರೆ. ಆದರೆ ತ್ರಿಮೂರ್ತಿಗಳಿಗೆ ವೀರಶೈವರ ಷಟ್‌ಸ್ಥಲದಲ್ಲಿ ಒಂದು ವಿಶೇಷ ಸ್ಥಾನವಿದೆ. ಪಂಚಸಾದಾಖ್ಯಗಳಲ್ಲಿ ಬ್ರಹ್ಮ ವಿಷ್ಣು ರುದ್ರ ಇವರು ವಿವರಿಸಲ್ಪಟ್ಟಿದ್ದಾರೆ. ಈ ಗ್ರಂಥದಲ್ಲಿ ೧೨ನೆಯ ಪುಟ, ೧೨೩ನೆಯ ಪುಟ, ೧೪೧ನೆಯ ಪುಟಗಳನ್ನು ವಾಚಕರು ನೋಡಬೇಕು. ಇಲ್ಲಿ ಬ್ರಹ್ಮ ವಿಷ್ಣು ರುದ್ರರು ದೇವತೆಗಳೆಂದು ಉಲ್ಲೇಖಿಸಲ್ಪಟ್ಟಿರುವರು. ಆದರೆ ಈ ದೇವತೆಗಳಿಗೆ ಪರಮಾತ್ಮದ್ಯೋತಕ ಮಹತ್ವದ ಸ್ಥಾನವನ್ನು ಅವರು ಕೊಟ್ಟಿಲ್ಲ. ಈ ಎಲ್ಲ ದೇವತೆಗಳಿಗೆ ಮೇಲಿನದಾದ ಪರಮಾತ್ಮನೊಬ್ಬನನ್ನು ಮಾತ್ರ ಅವರು ನಂಬತಕ್ಕದ್ದು.

ಮೂರ್ತಿಪೂಜೆ : ವೀರಶೈವರಲ್ಲಿ ಇಷ್ಟಲಿಂಗದ ಹೊರ್ತು ಬೇರೆ ಮೂರ್ತಿ ಪೂಜೆಯು ಇಲ್ಲ. ಶೈವ ಮತ್ತು ವೀರಶೈವ ಸ್ಥಾನಗಳಿಗೆ ಅವರು ತಮ್ಮ ಆದರಣೆಯನ್ನು ಮಾತ್ರ ತೋರಿಸತಕ್ಕದ್ದು, ವಚನಕಾರರ ಮುದ್ರಿಕೆಗಳು ಪರಶಿವ ದ್ಯೋತಕವಾಗಿರುತ್ತವೆ. ಅವು ಮೂರ್ತಿಪೂಜೆಗೆ ಸಂಬಂಧಪಟ್ಟಿಲ್ಲ.

ಅನುಬಂಧ – ೪

ವೀರಶೈವ ಸಿದ್ಧಾಂತದ ಹೆಸರುಗಳು

ವೀರಶೈವ ಸಿದ್ಧಾಂತಕ್ಕೆ ಅನೇಕ ಹೆಸರುಗಳು ಕೊಡಲ್ಪಟ್ಟಿರುತ್ತವೆ. ಅವು ಯಾವುವೆಂದರೆ ಶಿವಾದ್ವೈತ, ವಿಶೇಷಾದ್ವೈತ, ಶಕ್ತಿವಿಶಿಷ್ಟಾದ್ವೈತ, ಭೇದಾಭೇದ, ದ್ವೈತಾದ್ವೈತ, ಶೂನ್ಯಸಂಪಾದನೆ ಇತ್ಯಾದಿ. ವಚನಕಾರರು ಕೆಲವು ಕಡೆಗೆ ವೀರಶೈವವು ದ್ವೈತವೂ ಅಲ್ಲ, ಅದ್ವೈತವೂ ಅಲ್ಲ ಎಂದು ಹೇಳಿರುವರು. ಅಂದರೆ ಇವುಗಳಿಗೆ ಮೀರಿದ್ದೆಂದು ಅವರ ಅಭಿಪ್ರಾಯವು. ಇದಲ್ಲದೆ, ವೀರಶೈವ ಸಿದ್ಧಾಂತದಲ್ಲಿ ಅವರು ಶೂನ್ಯವೆಂಬ ಹೆಸರನ್ನೂ ಉಪಯೋಗಿಸಿದ್ದಾರೆ. ಶೂನ್ಯಸಂಪಾದನೆ ಎಂಬ ಗ್ರಂಥದ ಹೆಸರಿನಿಂದ ಇದು ಕಂಡುಬರುತ್ತದೆ. ಕೆಲವು ಗ್ರಂಥಕಾರರು ಈ ಮತವು ಭೇದಾಭೇದ, ದ್ವೈತಾದ್ವೈತವೆಂತಲೂ ಹೇಳಿದ್ದುಂಟು. ಈ ಶಬ್ದಗಳಲ್ಲಿ ವ್ಯವಹಾರದಲ್ಲಿ ದ್ವೈತ, ಅಥವಾ ಭೇದ, ಆದರೆ ಅಂತ್ಯದಲ್ಲಿ ಅದ್ವೈತ ಅಥವಾ ಅಭೇದ ಎಂಬ ಅಭಿಪ್ರಾಯವು ಮಾತ್ರ ವ್ಯಕ್ತವಾಗುತ್ತದೆ. ವಿಶೇಷಾದ್ವೈತವೆಂಬ ಹೆಸರೂ ಉಂಟು. ಆದರೆ ಈ ಶಬ್ದದಿಂದ ಇದು ಯಾವ ಅದ್ವೈತವೆಂಬುದರ ಬೋಧವು ಚೆನ್ನಾಗಿ ಆಗುವದಿಲ್ಲ. ವೀರಶೈವವು ಶಕ್ತಿ ವಿಶಿಷ್ಟಾದ್ವೈತವೆಂದು ಹೇಳುವ ಸಾಂಪ್ರದಾಯವೂ ಇರುತ್ತದೆ. ಆದರೆ ವೀರಶೈವವು ಅಂತ್ಯದಲ್ಲಿ ಶಕ್ತಿಯು ಸಹ ಹೋಗಿ ಸಂಪೂರ್ಣ ಸಾಮರಸ್ಯವುಳ್ಳದ್ದಾಗಿ, ನೀರು ನೀರು ಬೆರೆದಂತೆ ಐಕ್ಯಸ್ಥಿತಿಯನ್ನು ಹೊಂದಬೇಕೆಂದು ಹೇಳುತ್ತದೆ. ಆದರೆ ಈ ಭಾವವು ಶಕ್ತಿವಿಶಿಷ್ಟಾದ್ವೈತದಿಂದ ಹೊರಡುವದಿಲ್ಲ. ವೀರಶೈವ ಅದ್ವೈತವು ಯಾವುದರಿಂದಲೂ ವಿಶಿಷ್ಟವಾದುದಲ್ಲ. ಶಕ್ತಿಯು ಸಾಮರಸ್ಯವನ್ನು ಹೊಂದಲು ಒಂದು ಸಾಧನಮಾತ್ರವಾಗಿರುತ್ತದೆ. ಆದರೆ ಷಟ್‌ಸ್ಥಲದಲ್ಲಿ ಶಕ್ತಿಯಷ್ಟೇ ಸಾಧನವಲ್ಲ. ಸಾಮರಸ್ಯಹೊಂದಲು ಶಕ್ತಿಯಂತೆ ಅನೇಕ ವಿಷಯಗಳ ಅವಶ್ಯಕತೆಯೂ ಉಂಟು. ಇವಾವವೆಂಬುದನ್ನು ತಿಳಿಯಬೇಕಾದರೆ ೨೧೬ ಸಕೀಲುಗಳನ್ನು ನೋಡಿರಿ.

ಆಗಮ ಗ್ರಂಥಗಳನ್ನು ನೋಡಿದಲ್ಲಿ ಇವುಗಳಲ್ಲಿ ಅದ್ವೈತ ಎಂಬ ಶಬ್ದವು ಮಾತ್ರ ಉಪಯೋಗಿಸಲ್ಪಟ್ಟಿರುವದು ಕಂಡುಬರುತ್ತದೆ. ಆದರೆ ಎಂಥ ಅದ್ವೈತವೆಂಬುದು ಅವುಗಳಲ್ಲಿ ಹೇಳಲ್ಪಟ್ಟಿಲ್ಲ.

ವಚನ ಗ್ರಂಥಗಳಲ್ಲಿಯಾದರೋ, ಸಾಮರಸ್ಯ, ಲಿಂಗೈಕ್ಯ, ಮೋಕ್ಷ, ಐಕ್ಯ ಇಂಥ ಶಬ್ದಗಳೇ ಹೆಚ್ಚಾಗಿ ತೋರಿಬರುತ್ತವೆ. ಆದರೆ ಕೆಲವು ಕಡೆಗೆ ವೀರಶೈವವು ದ್ವೈತವೂ ಅಲ್ಲ. ಅದ್ವೈತವೂ ಅಲ್ಲ ಎಂದು ಹೇಳಲ್ಪಟ್ಟಿರುತ್ತದೆ. ಕೆಲವೆಡೆ ವೀರಶೈವವು ಶಿವಾದ್ವೈತವೆಂತಲೂ ಹೇಳಲ್ಪಡುವದುಂಟು.

ವೀರಶೈವರು ತಮ್ಮ ಶಾಸ್ತ್ರದಲ್ಲಿ ಬಹು ಕಡೆಗೆ ಶಿವ ಅಥವಾ ಲಿಂಗ ಈ ಶಬ್ದಗಳಿಗೆ ಜೋಡಿಸಿ ತಮ್ಮ ಪಾರಿಭಾಷಿಕ ಶಬ್ದಗಳನ್ನು ನಿರ್ಮಿಸಿರುವರು. ಉದಾಹರಣಾರ್ಥವಾಗಿ ಶಿವಾಚಾರ, ಶಿವಾನುಭವ, ಶಿವಶಾಸ್ತ್ರ, ಶಿವಯೋಗ, ಶಿವಮೂರ್ತಿ, ಪರಶಿವ ಇತ್ಯಾದಿ. ಅದೇ ಮೇರೆಗೆ ತಮ್ಮ ಅದ್ವೈತಮಾರ್ಗವನ್ನು ಶಿವಾದ್ವೈತವೆಂದು ಅವರು ಕರೆದಿರುವರು.

ಅನುಬಂಧ–೫

ಕರಣಹಸಿಗೆ

ಕರಣಹಸಿಗೆಯು ವೀರಶೈವರ ಶಾರೀರಿಕ ಮತ್ತು ಮಾನಸಿಕಶಾಸ್ತ್ರವೆಂದು ಹೇಳಬಹುದು. ಇದು ಆಧುನಿಕ ಪಾಶ್ಚಿಮಾತ್ಯ ತತ್ವಜ್ಞಾನಿಗಳ ವಿಚಾರಗಳಿಂದ ತೀರ ಭಿನ್ನವಾಗಿ ತೋರಬಹುದು. ಆದರೆ ಅದರ ಮುಖ್ಯ ತತ್ವಗಳು ಸಾಂಖ್ಯಶ್ಯಾದ ಮೇಲೆ ಅವಲಂಬಿಸಿರುತ್ತವೆ. ಶರೀರದ ವ್ಯಾಪಾರಗಳು ಗೋಚರವಾದದ್ದರ ಮೇಲೆ ಅದರ ತತ್ವಗಳು ನಿಶ್ಚಿತಮಾಡಲ್ಪಟಿರುತ್ತವೆ. ಪಂಚೀಕರಣ ಗ್ರಂಥಗಳಲ್ಲಿ ನಿರೂಪಿಸಲ್ಪಡುವ ವಿಷಯಗಳಿಗೆ ಕರಣಹಸಿಗೆಯು ಸಂಬಂಧಪಡುತ್ತದೆ. ಕರಣಹಸಿಗೆಯಮೇಲೆ ಷಟ್‌ಸ್ಥಲದ ವಿಭಾಗಗಳು ಅವಲಂಬಿಸಿರುತ್ತವೆ. ಆದ್ದರಿಂದ ಷಟ್‌ಸ್ಥಲದಲ್ಲಿ ಈ ವಿಷಯವು ಬಹು ಮಹತ್ವದ್ದಾಗಿದೆ. ಈ ಗ್ರಂಥದಲ್ಲಿ ನಾವು ಈ ವಿಷಯಕ್ಕೆ ಸಂಬಂಧಪಟ್ಟ ಮುಖ್ಯ ಭಾಗಗಳನ್ನು ಮಾತ್ರ ಆಯ್ದು ಅವುಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಿದ್ದೇವೆ. ಈ ವಿಷಯವನ್ನು ಹೆಚ್ಚಾಗಿ ತಿಳಿಯಬೇಕೆನ್ನುವವರು ವಿಸ್ತೃತಗ್ರಂಥಗಳನ್ನು ಅವಲೋಕಿಸಬೇಕು.

ಅನುಬಂಧ –೬

ಮಾರ್ಗಕ್ರಿಯೆಗಳು ಮತ್ತು ಮೀರಿದಕ್ರಿಯೆಗಳು

ಈ ಗ್ರಂಥದಲ್ಲಿ ನಾವು ವಿವರಿಸಿದ ಮೂಲ ಗ್ರಂಥಕಾರನು ಇವುಗಳಲ್ಲಿ ಮಾರ್ಗಕ್ರಿಯೆಗಳೆಂತಲೂ ಮೀರಿದಕ್ರಿಯೆಗಳೆಂತಲೂ ಎರಡು ವಿಭಾಗಗಳನ್ನು ಮಾಡಿರುವನು. ವಚನಕಾರರು ಈ ವಿಧವಾಗಿ ಬಹುಕಡೆಗೆ ಕ್ರಿಯೆಗಳಲ್ಲಿ ವಿಭಾಗಗಳನ್ನು ಮಾಡಿರುವರು. ಆರು ಸ್ಥಲಗಳಲ್ಲಿ ಭಕ್ತಮಹೇಶ ಪ್ರಸಾದಿಸ್ಥಲಗಳಲ್ಲಿಯ

ಕ್ರಿಯೆಗಳು ಮಾರ್ಗಕ್ರಿಯೆಗಳೆಂತಲೂ ಪ್ರಾಣಲಿಂಗಿ ಶರಣ ಐಕ್ಯಸ್ಥಲಗಳಲ್ಲಿಯ ಕ್ರಿಯೆಗಳು ಮೀರಿದಕ್ರಿಯೆಗಳೆಂತಲೂ ಆಗಿಂದಾಗ್ಗೆ ಹೇಳಲ್ಪಡುತ್ತವೆ.

ಈ ಭಾಗದಲ್ಲಿ ವಿವರಿಸಿದ ಪ್ರತಿಯೊಂದು ವಿಷಯದಲ್ಲಿ ಒಂಬತ್ತು ತರಗತಿಗಳಿರುವದು ಕಂಡುಬರುತ್ತದೆ. ಈ ಪ್ರತಿಯೊಂದರಲ್ಲಿ ನಾವು ಪುನಃ ಮೂರು ವಿಭಾಗಗಳನ್ನು ಮಾಡಬಹುದು. ಮೊದಲನೆಯ ಐದು ಕ್ರಿಯೆಗಳು ದೃಶ್ಯವೆಂತಲೂ ಆರನೆಯದು ಈ ಕೆಳಗಿನ ಐದು ಕ್ರಿಯೆಗಳನ್ನು ಒಳಕೊಂಡ ಸಾಮರಸ್ಯಕ್ರಿಯೆ ಎಂತಲೂ ಅದರ ಮೇಲಿನ ಮೂರು ಕ್ರಿಯೆಗಳು ಶೂನ್ಯಸ್ಥಲಗಳಿಗೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮತರವಾದ ಕ್ರಿಯೆಗಳೆಂತಲೂ ನಾವು ಭಾವಿಸಬಹುದು. ಹೀಗೆ ವೀರಶೈವರ ಕ್ರಿಯೆಗಳಲ್ಲಿ ಮೊದಲಿನಿಂದ ಕಡೆಯವರೆಗೆ ಉತ್ತರೋತ್ತರವಾಗಿ ಒಂಬತ್ತು ಸ್ಥಲಗಳು ಮಾಡಲ್ಪಡುವದುಂಟು. ಇವುಗಳಿಗನುಸಾರವಾಗಿ ಕ್ರಿಯೆಗಳ ವಿವೇಚನೆಯೂ ಇಲ್ಲಿ ಬಂದಿರುತ್ತದೆ.

ಮೂಲ ಗ್ರಂಥಕಾರನು ಕ್ರಿಯೆಗಳಲ್ಲಿ ಇಲ್ಲಿ ಮುಖ್ಯ ಇಪ್ಪತ್ತುನಾಲ್ಕು ಗುಂಪುಗಳನ್ನು ಮಾಡಿರುವನು. ಹೀಗೆ ಮಾಡಿ ಒಂದೊಂದರಲ್ಲಿ ಒಂಬತ್ತು ಒಂಬತ್ತು ಉಪಭಾಗಗಳನ್ನು ಮಾಡಿರುವನು. ಹೀಗೆ ಒಟ್ಟು ಇನ್ನೂರು ಹದಿನಾರು ಕ್ರಿಯೆಗಳನ್ನು ಮಾಡಿ ಇವುಗಳನ್ನು ಅವನು ಸಕೀಲಗಳೆಂದು ಕರೆದಿರುವನು. ಮತ್ತು ಷಟ್‌ಸ್ಥಲಗಳಿಗನುಸಾರವಾಗಿ ಕ್ರಿಯೆಗಳ ಪರಸ್ಪರ ಸಂಬಂಧವನ್ನೂ ಅವನು ಇಲ್ಲಿ ತೋರಿಸಿರುವನು.

ಮೂಲ ಗ್ರಂಥದಲ್ಲಿಯ ವಿಷಯ ವಿವೇಚನೆಯ ಕ್ರಮದಲ್ಲಿ ನಾವು ಕೆಲವು ಬದಲಾವಣೆಗಳನ್ನು ಮಾಡಿರುತ್ತೇವೆ. ಪ್ರಗತಿಯ ಮಾರ್ಗದ ವಿವರವು ಸ್ಪಷ್ಟವಾಗಿ ತಿಳಿಯುವ ಉದ್ದೇಶದಿಂದ ನಾವು ಹೀಗೆ ಕ್ರಮವನ್ನು ಇಟ್ಟಿರುತ್ತೇವೆ. ಮಾರ್ಗಕ್ರಿಯೆಗಳ ಅಂತ್ಯದಲ್ಲಿ ಆತ್ಮರುಗಳ ವಿಕಾಸವಿರತಕ್ಕದ್ದು ಸಹಜವಾಗಿರುವದರಿಂದ ಈ ವಿಷಯವನ್ನು ಇಲ್ಲಿ ಕಡೆಗಿಟ್ಟು ಅವುಗಳ ಹಿಂದೆ ಇದಕ್ಕೆ ಪೋಷಕವಾಗಿರುವ ಸಾಧನಗಳು ವಿವೇಚಿಸಲ್ಪಟ್ಟಿರುತ್ತವೆ. ಮತ್ತು ಮೀರಿದಕ್ರಿಯೆಗಳಲ್ಲಿ ಕಡೆಗೆ ಪರಮಾತ್ಮನ ಉಚ್ಚಸ್ಥಿತಿಯ ವರ್ಣನೆ ಇರುವದು ಸಹಜವಾಗಿರುವದರಿಂದ ಇದನ್ನು ನಾವು ಕಡೆಗೆ ಇಟ್ಟಿರುತ್ತೇನೆ. ಮತ್ತು ಅದಕ್ಕೆ ಬೇಕಾಗುವ ಸಾಧನಗಳನ್ನು ಅದರ ಹಿಂದೆ ಕ್ರಮವಾಗಿ ವಿವರಿಸುತ್ತ ಬಂದಿದ್ದೇವೆ. ಆದರೆ ಮೂಲಗ್ರಂಥದಲ್ಲಿರುವ ವಿವೇಚನೆಯಲ್ಲಿ ನಾವು ಯಾವ ಬದಲಾವಣೆಯನ್ನು ಮಾಡಿಲ್ಲ.

ಈ ವಿವರಣೆಯಲ್ಲಿ ಕೆಲವು ಕ್ರಿಯೆಗಳು ನೈತಿಕವಾಗಿರುತ್ತವೆ, ಕೆಲವು ಯೌಗಿಕವಾಗಿರುತ್ತವೆ. ಮತ್ತು ಕೆಲವು [೧]"[ಲಿಂಗಮಯ]"[೧]ವಾಗಿರುತ್ತವೆ. ಅವುಗಳಿಗೂ ಷಟ್‌ಸ್ಥಲಾಚರಣೆಗೂ ಬಹಳ ಸಂಬಂಧವಿರುತ್ತದೆ. ಕ್ರಿಯೆಗಳ ಈ ವಿವೇಚನೆಯಲ್ಲಿ ಈ ಮೂರೂ ವಿಷಯಗಳ ಜೋಡಣೆಯನ್ನು ಒಂದೆಡೆಗೆ ಈ ಗ್ರಂಥದಲ್ಲಿ ಮಾಡಿದ್ದು ಕಂಡು

೧–೧ ಲೈಂಗಿಕ (ಮೂ)

ಬರುತ್ತದೆ. ಇದು ಷಟ್‌ಸ್ಥಲಗಳ ಮರ್ಮಗಳನ್ನು ತಿಳಿಯಲು ಬಹು ಸಹಾಯಕಾರಿಯಾಗಿರುವದರಿಂದ ನಾವು ಬೇರೆ ವಚನಕಾರರ ವಚನಗಳನ್ನು ಇಲ್ಲಿ ಕೊಟ್ಟಲ್ಲಿ ಗೊಂದಲವಾಗಬಹುದೆಂದು ಎಣಿಸಿ ಅವುಗಳನ್ನು ನಾವು ಇಲ್ಲಿ ಸೇರಿಸಿಲ್ಲ.

ಅನುಬಂಧ–೭

ಸಕೀಲಗಳು :

ವೀರಶೈವರ ಷಟ್‌ಸ್ಥಲದಲ್ಲಿ ಬರುವ ವಿಷಯಗಳನ್ನೂ ಅವುಗಳ ಉಪಭಾಗಗಳನ್ನೂ ನೋಡಿದರೆ ಅವುಗಳಲ್ಲಿ ಅಸಂಖ್ಯ ಪಾರಿಭಾಷಿಕ ಶಬ್ದಗಳು ಬರುವದು ಕಂಡುಬರುತ್ತದೆ. ಇಷ್ಟೇ ಅಲ್ಲ ಒಂದೇ ಶಬ್ದದ ಅರ್ಥವು ಬೇರೆ ಬೇರೆ ಸ್ಥಲಗಳಲ್ಲಿ ಬೇರೆ ಬೇರೆಯಾಗಿರುವದೂ ತೋರಿಬರುತ್ತದೆ. ಉದಾ:ಲಿಂಗ, ಸಾದಾಖ್ಯ, ಅಂಗ, ಶಿವಲಿಂಗ, ಪ್ರಸಾದಲಿಂಗ ಮುಂತಾದ ಅನೇಕ ಶಬ್ದಗಳು ಅನೇಕರೀತಿಯಾಗಿ ಬೇರೆ ಬೇರೆ ಸ್ಥಗಳಲ್ಲಿ ಹೇಳಲ್ಪಟ್ಟಿವೆ. ಈ ಗೊಂದಲವನ್ನು ದೂರಮಾಡುವ ಉದ್ದೇಶವಾಗಿ ವಚನಕಾರರು ಸಕೀಲಗಳನ್ನು ನಿರ್ಮಿಸಿದ್ದಾರೆ. ಈ ಸಕೀಲಗಳ ಮೂಲಕ ಯಾವ ಶಬ್ದವು ಅಥವಾ ವಿಷಯವು ಯಾವುದಕ್ಕೆ ಸಂಬಂಧಪಡುತ್ತದೆ, ಅದರ ಭಾವವೇನು, ಎಂಬುದನ್ನು ಸುಲಭವಾಗಿ ಗೊತ್ತುಮಾಡಿಕೊಳ್ಳಬಹುದು. ಕೆಲವು ಸಕೀಲಗಳು ವೀರಶೈವ ಸಿದ್ಧಾಂತವನ್ನು ವಿಶದಪಡಿಸುವ ಉದ್ದೇಶವಾಗಿ ಮತ್ತು ಬೇರೆ ಕೆಲವು ಆಚಾರ ವಿಷಯಗಳ ಸಂಬಂಧವನ್ನು ತೋರಿಸುವದಕ್ಕಾಗಿ ಮಾಡಲ್ಪಟ್ಟಿರುತ್ತವೆ. ಈ ಸಕೀಲಗಳ ಮೂಲಕ "ಅರ್ಥ, ಅನ್ವಯ, ಆಕಾಂಕ್ಷೆ, ಸ್ವರೂಪಾರ್ಥ, ಸಂಬಂಧಾರ್ಥ, ನಿಶ್ಚಯಾರ್ಥಗಳಿಂದ ಹಾಲುಕ್ಕಿ ಮೇಲುವರಿದೋಪಾದಿಯಲ್ಲಿ ತಮ್ಮ ಚಿದಂಗ ಸ್ವರೂಪರಾದ ಮರ್ತ್ಯಲೋಕದ ಮಹಾಜ್ಞಾನಿ ಶಿವಶರಣಗಣಂಗಳು ಅರಿದು ಆನಂದಿಸಿ ಸುಖಿಗಳಾಗುತಿಹರು" ಎಂದು ಒಬ್ಬ ವಚನಕಾರನು ಹೇಳುತ್ತಾನೆ. ಇವು ಷಡಧ್ವಸಕೀಲ, ಮೂವತ್ತಾರು ಸಕೀಲ, ನಾಲ್ವತ್ತೆಂಟು ಸಕೀಲ, ಐವತ್ತಾರು ಸಕೀಲ, ಅರುವತ್ತಾರು ಸಕೀಲ, ತೊಂಬತ್ತಾರು ಸಕೀಲ, ನೂರೆಂಟು ಸಕೀಲ, ಇನ್ನೂರು ಹದಿನಾರು ಸಕೀಲ, ಹೀಗೆ ಇರುತ್ತವೆ. ನಾವು ಈ ಗ್ರಂಥದಲ್ಲಿ ಈ ಎಲ್ಲವುಗಳನ್ನು ವರ್ಣಿಸದೆ ಅಷ್ಟವಿಧಸಕೀಲ, ನೂರೆಂಟುಸಕೀಲ, ಮತ್ತು ಇನ್ನೂರು ಹದಿನಾರು ಸಕೀಲ ಇವುಗಳನ್ನು ಮಾತ್ರ ವಿವರಿಸಿದ್ದೇವೆ. ಅವುಗಳ ಸಹಾಯದಿಂದ ಈ ಗ್ರಂಥದಲ್ಲಿ ಬರುವ ಅನೇಕ ಶಬ್ದಗಳ ಸಂಬಂಧವನ್ನು ಅರಿಯಬಹುದಾಗಿದೆ. ಅಷ್ಟವಿಧಸಕೀಲಗಳು ಹೆಚ್ಚಾಗಿ ಬಹಿರಂಗಕ್ಕೆ ಸಂಬಂಧಪಡುತ್ತವೆ. ನೂರೆಂಟು ಸಕೀಲಗಳು ಅಂತರಂಗಕ್ಕೆ ಸಂಬಂಧಪಡುತ್ತವೆ. ಇನ್ನೂರುಹದಿನಾರು ಸಕೀಲಗಳು ಎಲ್ಲಕ್ಕೂ ಹೆಚ್ಚಿಗೆ ಸೂಕ್ಷ್ಮವೂ ವ್ಯಾಪಕವೂ ಇರುತ್ತವೆ. ಇವೆಲ್ಲವು ಆಯಾ ವಿಷಯಗಳ ಸ್ವರೂಪನ್ನು ತಿಳಿಯಲಿಕ್ಕೆ ಬಹು ಸಹಾಯಕಾರಿಗಳಾಗಿವೆ. ಆದರೆ ಕೆಲವು ಸಕೀಲಗಳು ಕೇವಲ ಆಚಾರಕ್ಕೆ ಸಂಬಂಧಪಟ್ಟಿರುತ್ತವೆ. ಅವುಗಳನ್ನು ನಾವು ಇಲ್ಲಿ ವಿವರಿಸದೆ ವಚನಶಾಸ್ತ್ರಸಾರ ೩ನೇ ಭಾಗದಲ್ಲಿ ವಿವರಿಸುವೆವು.

ಅನುಬಂಧ–೮

ಷಟ್‌ಸ್ಥಲ ವಿಭಾಗಗಳು :

ಷಟ್‌ಸ್ಥಲದಲ್ಲಿ ಒಂದು, ಎರಡು, ಮೂರು, ಆರು, ಮೂವತ್ತಾರು ಹೀಗೆ ವಿಭಾಗಗಳು ಮುಖ್ಯವಾದವುಗಳು. ಇವುಗಳಲ್ಲಿ ೩ ಸ್ಥಲಗಳು ಸ್ಥೂಲಶರೀರಕ್ಕೆ, ೬ ಸ್ಥಲಗಳು ಸೂಕ್ಷ್ಮಶರೀರಕ್ಕೆ, ೩೬ ಸ್ಥಲಗಳು ಕಾರಣಶರೀರಕ್ಕೆ ಸಂಬಂಧಪಟ್ಟಿವೆ. ಆದ್ದರಿಂದ ಅವುಗಳನ್ನು ಮಾತ್ರ ನಾವು ಇಲ್ಲಿ ವಿವರಿಸಿದ್ದೇವೆ. ಇನ್ನು ೩೬ ರ ತರುವಾಯ ೨೧೬ ಸ್ಥಲಗಳೂ ಇರುತ್ತವೆ. ಇವೂ ಷಟ್‌ಸ್ಥಲದಲ್ಲಿ ವಿವೇಚಿಸಲ್ಪಡುವ ದುಂಟು. ಉದಾ: ಭಕ್ತನ ಭಕ್ತನ ಭಕ್ತ, ಭಕ್ತನ ಮಹೇಶನ ಭಕ್ತ ಇತ್ಯಾದಿ. ಆದರೆ ಇವು ಆಚಾರ ವಿಷಯಕವಾದ ಪ್ರಸಾದಕ್ಕೆ ಸಂಬಂಧಪಟ್ಟಿರುವುದಾಗಿ ತೋರುತ್ತದೆ– ಅಲ್ಲಿಯೇ ಅವು ಉಲ್ಲೇಖಿಸಲ್ಪಡುವವು. ಆದ್ದರಿಂದ ನಾವು ಅವುಗಳನ್ನು ಇಲ್ಲಿ ಉಲ್ಲೇಖಿಸಿರುವದಿಲ್ಲ; ಅವು ಆಚಾರ ವಿಷಯಕವಾಗಿರುವದರಿಂದ ಅವುಗಳನ್ನು ವಚನಶ್ಯಾಸಾರ ೩ನೇ ಭಾಗದಲ್ಲಿ ವಿವರಿಸುವೆವು.

ಷಟ್‌ಸ್ಥಲಗಳ ಮೂಲಕ ಮನುಷ್ಯನ ಅಂತರಂಗದ ಮತ್ತು ಬಹಿರಂಗದ ಎಲ್ಲ ಬಗೆಯ ಗುಣಗಳು ಮತ್ತು ವ್ಯಾಪಾರಗಳು ಬಹು ಉಚ್ಚಸ್ಥಿತಿಗೆ ಹೋಗುತ್ತವೆ. ಮನುಷ್ಯನ ವಿಕಾಸವು ಹೇಗಾಗುವದೆಂಬುದು ಈ ವಿಷಯದಲ್ಲಿ ಹೇಳಲ್ಪಡುತ್ತದೆ. ವೀರಶೈವರ ಪ್ರತಿಯೊಂದು ಧಾರ್ಮಿಕ ಗ್ರಂಥವು ಷಟ್‌ಸ್ಥಲಕ್ಕೆ ಸಂಬಂಧಪಡುತ್ತದೆ. ಅವರ ಗ್ರಂಥಕಾರರು ಮನುಷ್ಯನ ಉನ್ನತಿಯನ್ನು ಇದಕ್ಕೆ ಸಂಬಂಧಿಸಿಯೇ ಹೇಳುತ್ತಾರೆ. ಷಟ್‌ಸ್ಥಲಾಚರಣೆಯಂತೆ ಆಚರಿಸಿದ ಮನುಷ್ಯನಲ್ಲಿ ಲಿಂಗಶಕ್ತಿಯು ಅಳವಡುವದು. ಹೀಗೆ ಮನುಷ್ಯನು ಪ್ರವೃತ್ತಿಯನ್ನು ಹೊಂದಿದ ಬಳಿಕ ಅವನು ನಿವೃತ್ತಿಯನ್ನು ಹೊಂದಲು ಯೋಗ್ಯನಾಗುವನು. ಆಗ ಅವನ ಗುಣಗಳೂ ಶಕ್ತಿಗಳೂ ಆಯಾ ಲಿಂಗಗಳಲ್ಲಿ ಅಡಗಿ ಕಡೆಗೆ ಅವನು ಲಿಂಗಾಂಗಸಾಮರಸ್ಯತ್ವವನ್ನು ಹೊಂದುವನು.

ಅನುಬಂಧ–೯

ಏಕೋತ್ತರಶತಸ್ಥಲದ ವಿಭಾಗಗಳು :

ಈ ಸ್ಥಲಗಳಲ್ಲಿ ೪೪ ಅಂಗಸ್ಥಲಗಳು, ೫೭ ಲಿಂಗಸ್ಥಲಗಳು ಇರುತ್ತವೆ. ಜಕ್ಕಣಾರ್ಯನು ತನ್ನ ಏಕೋತ್ತರಶತದಲ್ಲಿ ೪೪ ಅಂಗಸ್ಥಲಗಳನ್ನು ಕ್ರಮವಾಗಿ ವಿವರಿಸುತ್ತ ಹೋಗಿ ಮುಂದೆ ೫೭ ಲಿಂಗಸ್ಥಲಗಳನ್ನು ವಿವರಿಸುತ್ತಾನೆ. ಆದರೆ ಬೇರೆ ಕೆಲವು ಗ್ರಂಥಕಾರರು ಅಂಗಸ್ಥಲದಲ್ಲಿ ಮೊದಲನೆಯದಾದ ಭಕ್ತಸ್ಥಲ ಮತ್ತು ಅದಕ್ಕೆ ಸಂಬಂಧಿಸಿದ ಆಚಾರಲಿಂಗಸ್ಥಲ ಇವುಗಳ ಭಾಗಗಳನ್ನು ಮೊದಲು ವಿವರಿಸಿ ಮುಂದೆ ೨ನೇ ೩ನೇ ಸ್ಥಲಗಳ ಅಂಗ ಲಿಂಗ ಸ್ಥಲಗಳನ್ನು ವಿವರಿಸುತ್ತ ಹೋಗುವರು. ಹೀಗೆ ಭಿನ್ನವಾಗಿ ತೋರಿಬಂದರೂ ಇದೇನು ಮಹತ್ವದ ವ್ಯತ್ಯಾಸವಲ್ಲ ಯಾಕೆಂದರೆ

ವೀರಶೈವನು ನೂರೊಂದುಸ್ಥಲಗಳ ಆಚರಣೆಗಳನ್ನೆಲ್ಲ ಒಳಕೊಳ್ಳತಕ್ಕದ್ದಾಗಿದೆ. ಅವೆಲ್ಲವೂ ಅವನಿಗೆ ವಿಕಕಾಲದಲ್ಲಿ ಅನ್ವಯಿಸಬೇಕು. ಮೊದಲು ಮಾಡತಕ್ಕ ಆಚಾರಗಳು ಮತ್ತು ಅವುಗಳ ತರುವಾಯ ಮಾಡತಕ್ಕ ಆಚಾರಗಳು ಹೀಗೆ ಭೇದಭಾವವು ಷಟ್‌ಸ್ಥಲಾಚರಣೆಯಲ್ಲಿ ಇಲ್ಲ. ನೂರೊಂದುಸ್ಥಲದ ಎಲ್ಲ ಆಚಾರಗಳೂ ಎಲ್ಲ ಸ್ಥಲಗಳಲ್ಲಿರುವವರಿಗೂ ಅನ್ವಯಿಸುತ್ತವೆ. ಇದರಿಂದ ಅವನ ಎಲ್ಲ ಗುಣಗಳೂ ಶಕ್ತಿಗಳೂ ಕ್ರಿಯೆಗಳೂ ಸರಿಯಾಗಿ ಒಗ್ಗಟ್ಟಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ.

ನೂರೊಂದುಸ್ಥಲಗಳ ವಿಚಾರಗಳು ಒಂದೇ ಇದ್ದರೂ ಅವುಗಳನ್ನು ಬೇರೆ ಬೇರೆ ಗ್ರಂಥಕಾರರು ಅನೇಕ ರೀತಿಯಿಂದ ನಿರೂಪಿಸಿದ್ದಾರೆ. ಆದರೆ ಲಿಂಗಸ್ಥಲಗಳಲ್ಲಿ ಒಂದಾದ ಜಂಗಮಲಿಂಗಸ್ಥಲದಲ್ಲಿ ಮಾತ್ರ ಭಿನ್ನತೆಯು ಕಂಡುಬರುತ್ತದೆ. ಇದರಲ್ಲಿ ಒಂಬತ್ತು ಸ್ಥಲಗಳನ್ನು ಮಾತ್ರ ವಿವರಿಸಿ, ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ ಇವುಗಳನ್ನು ಮುಂದಿನದಾದ ಪ್ರಸಾದಲಿಂಗಸ್ಥಲದಲ್ಲಿ ಹಲವು ಗ್ರಂಥಕಾರರು ಸೇರಿಸಿರುವರು. ಬೇರೆ ಕೆಲವರು ಇವುಗಳನ್ನು ಜಂಗಮಲಿಂಗದಲ್ಲಿ ಸೇರಿಸಿರುವರು. ನಾವು ವಿಚಾರದಿಂದ ನೋಡಿದರೆ ಇವು ಜಂಗಮಲಿಂಗಕ್ಕೆ ಸಂಬಂಧ ಪಡುವದರಿಂದ ನಾವು ಅವುಗಳನ್ನು ಜಂಗಮಲಿಂಗಸ್ಥಲದಲ್ಲಿಯೇ ಸೇರಿಸಿದ್ದೇವೆ. ಚನ್ನಬಸವೇಶ್ವರನ ವಚನವು ಇದನ್ನು ದೃಢಪಡಿಸುತ್ತದೆ. (ಪುಟ ೪೩೫ ನೋಡಿರಿ.)

ಏಕೋತ್ತರದ ಸ್ಥಲಗಳಲ್ಲಿ ವಿವರಿಸಿದ ಆಚರಣೆಗಳಂತೆ ನಡೆದು ಮನುಷ್ಯನು ಷಟ್‌ಸ್ಥಲಗಳನ್ನು ಸಾಧಿಸಬೇಕು. ಏಕೋತ್ತರದಲ್ಲಿ ಮನುಷ್ಯನು ಹೇಗೆ ಕ್ರಿಯೆಗಳನ್ನು ಮಾಡಬೇಕೆಂಬುದು ನಿಶ್ಚಿತಸ್ವರೂಪದಿಂದ ಹೇಳಲ್ಪಡುತ್ತದೆ. ಇವು ಕೇವಲ ಬಾಹ್ಯ ಕ್ರಿಯಾ ಕರ್ಮಗಳಲ್ಲ; ಅಂದರೆ ಆಚಾರಗಳಾಗಲಿ ಇಲ್ಲವೆ ಉಪಾಸನೆಗಳಾಗಲಿ ಅಲ್ಲ; ಇವುಗಳಲ್ಲಿ ಆಚಾರಗಳ ಮರ್ಮಗಳು ಹೇಳಲ್ಪಡುತ್ತವೆ. ಏಕೋತ್ತರವನ್ನು ತಿಳಿದಾಗಲೇ ಮನುಷ್ಯನಿಗೆ ತನ್ನ ಕ್ರಿಯೆಗಳನ್ನು ಹೇಗೆ ಮಾಡಬೇಕೆಂಬುದು ತಿಳಿಯುತ್ತದೆ. ಹಾಗೆ ತಿಳಿದು ಆಚರಿಸಿದಲ್ಲಿ ಷಟ್‌ಸ್ಥಗಳಿಗೆ ವೀರಶೈವಧರ್ಮದಲ್ಲಿ ಬಹು ಉಚ್ಚ ಸ್ಥಾನವು ಉಂಟಾಗಿದೆ.

ಏಕೋತ್ತರಶತಸ್ಥಲದಲ್ಲಿ ಬರುವ ವಿಭಾಗಗಳಲ್ಲಿ ಅನೇಕ ತರದ ವಚನಗಳು ಹೇಳಲ್ಪಡುವದುಂಟು. ಅವುಗಳನ್ನು ಆಯಾ ವಚನಕಾರರು ಸೂಚನಾತ್ಮಕವಾಗಿ, ಎಷ್ಟೋ ಸಾರೆ ಗೂಢವಾಗಿ, ಹೇಳುವರು. ಆದರೆ ಭಕ್ತಾದಿಗಳು ಅವುಗಳ ಮರ್ಮವನ್ನು ತಿಳಿದುಕೊಂಡು ತಮ್ಮ ಆಚಾರಾದಿಗಳನ್ನು ಸರಿಪಡಿಸಿಕೊಳ್ಳಬೇಕು. ಷಟ್‌ಸ್ಥಲಶಾಸ್ತ್ರದಲ್ಲಿ ಕಠೋರತರವಾದ ಅಲುಗಾಡದಂಥ ನಿರ್ಬಂಧಗಳನ್ನು ವಚನಕಾರರು ಹಾಕದೆ ಆವ ರೀತಿಯಿಂದ ಕ್ರಿಯೆಗಳನ್ನು ಮಾಡಬೇಕೆಂಬುದನ್ನು ಮಾತ್ರ ಸೂಕ್ಷ್ಮವಾಗಿ ನಿರ್ದೇಶಿಸಿ ಅವುಗಳಂತೆ ನಡೆಯುವದಕ್ಕೋಸ್ಕರ ತಮ್ಮ ತಮ್ಮ ಮಾರ್ಗಗಳನ್ನು ಕಲ್ಪಿಸಿಕೊಳ್ಳಲು ಭಕ್ತರಿಗೆ ಸ್ವತಂತ್ರತೆಯನ್ನು ಕೊಟ್ಟಿರುತ್ತಾರೆ.

ಷಟ್‌ಸ್ಥಲದಲ್ಲಿಯೂ ಏಕೋತ್ತರಶತಸ್ಥಲದಲ್ಲಿಯೂ, ಅಷ್ಟಾವರಣ ಮೊದಲಾದ ಉಪಾಸನಾ ಕಾರ್ಯಗಳಲ್ಲಿಯೂ ಕ್ರಿಯೆಗಳು ಅತ್ಯಲ್ಪವಾಗಿದ್ದರೂ ಅವುಗಳು ಭಾವಗರ್ಭಿತವಾಗಿವೆ. ಇವುಗಳನ್ನು ಮೊದಲು ತಿಳಿದುಕೊಂಡು ಭಕ್ತರು ತಮ್ಮ ಆಚಾರಗಳನ್ನು ಮತ್ತು ಕ್ರಿಯೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ಷಟ್‌ಸ್ಥಲ ಶಾಸ್ತ್ರಕಾರರ ಉದ್ದೇಶವಾಗಿರುತ್ತದೆ.

ಅನುಬಂಧ--೧೦

ಶಿವಯೋಗ :

ವೀರಶೈವರು ಯೋಗಶಾಸ್ತ್ರದ ತತ್ವಗಳನ್ನು ಅಂಗೀಕರಿಸಿ ಅವುಗಳನ್ನು ಅವರು ತಮ್ಮ ಷಟ್‌ಸ್ಥಲಾಚರಣೆಯಲ್ಲಿ ಸೇರಿಸಿರುವರು. ಆದ್ದರಿಂದ ಒಟ್ಟಾಗಿ ಈ ಆಚರಣೆಗೆ ಶಿವಾನುಭವ ಅಥವಾ ಶಿವಯೋಗ ಎಂದು ಕರೆಯಬಹುದು. ಆದರೆ ಇದರಲ್ಲಿ ಅವರು ಹಠಯೋಗದ ವಿಚಾರಗಳನ್ನು ಬಿಟ್ಟು ತಮ್ಮ ಲಿಂಗಾಂಗಸಾಮರಸ್ಯದ ದೃಷ್ಟಿಯಿಂದ ತಮ್ಮ ವಿಶೇಷ ತರದ ಯೋಗವನ್ನು ನಿರೂಪಿಸಿದ್ದಾರೆ. ಈ ಗ್ರಂಥದ ೧೩೮ ನೇ ಪುಟದಲ್ಲಿ ಕಾಣಿಸಿದ ಚಕ್ರಗಳ ವ್ಯಾಖ್ಯೆಗಳನ್ನು ನೋಡಿದರೆ ಈ ಸಂಗತಿಯು ಗೊತ್ತಾಗದೆ ಇರದು. ಇದರಂತೆಯೇ ವರ್ಣಗಳು ಪುಟ ೧೩೯, ಅಧಿದೇವತೆಗಳು ಪುಟ ೧೪೧, ಆಕೃತಿಗಳು ಪುಟ ೧೫೯, ಷಟ್‌ಚಕ್ರಗಳು ಪುಟ ೬೮, ಇವುಗಳನ್ನು ನೋಡಬೇಕು. ವೀರಶೈವರು ಸಿದ್ಧಿಗಳನ್ನು ನಿರಾಕರಿಸಿ ಕಾಯಕ, ಷಟ್‌ಸ್ಥಲಾಚರಣೆ, ಶುದ್ಧವಾದ ಸ್ಥಿರವಾದ ಏಕಾಗ್ರಮನಸ್ಸು, ಇವುಗಳಿಗೆ ಮಹತ್ವ ಕೊಟ್ಟಿದ್ದಾರೆ. ಇವುಗಳಿಂದ ಮನುಷ್ಯನಲ್ಲಿ ಲಿಂಗಕಳೆಗಳು ಆಯಾಸ್ಥಾನಗಳಲ್ಲಿ ಉದ್ಭವಿಸುತ್ತವೆ. ಅವರಿಗೆ ಕಠೋರವಾದ ಯೋಗಮಾರ್ಗಾಚಾರವು ಅನಾವಶ್ಯಕವು. ಈ ತರದ ಯೋಗಮಾರ್ಗದ ನಿರಾಕರಣೆಯು ಪ್ರಮಥರ ಕಾಲದಲ್ಲಿ ರಚಿತವಾದ ಬಸವಾದಿ ವಚನಕಾರರ ಉಕ್ತಿಗಳಲ್ಲಿ ತೋರಿಬರುತ್ತಿದೆ. ಆದರೆ ಇತ್ತೀಚೆಗೆ ರಚಿಸಲ್ಪಟ್ಟ ವಚನಗ್ರಂಥಗಳಲ್ಲಿ ಹಠಯೋಗದ ವಿಚಾರಗಳು ಹೆಚ್ಚಾಗಿ ತೋರಿಬರುತ್ತವೆ. ಆದರೆ ಈ ಬಗೆಯ ಆಚರಣೆಗಳು ಪುರಾತನ ವಚನಕಾರರ ಪದ್ಧತಿಗೆ ಮತ್ತು ವೀರಶೈವಕ್ಕೆ ಅನುಸಾರವಾದುವಲ್ಲ.

ಶಿವಯೋಗದಲ್ಲಿ ಅಷ್ಟಾವರಣಗಳ ರೀತಿಗಳು, ಲಿಂಗಪೂಜೆಯ ಕ್ರಮಗಳು, ಮಂತ್ರಗಳ ಜ್ಞಾನವು, ಈ ಅನೇಕ ವಿಷಯಗಳು ಬರುತ್ತವೆ. ಅವುಗಳು ವಚನಶಾಸ್ತ್ರಸಾರ ೩ನೇ ಭಾಗದಲ್ಲಿ ವಿವರಿಸಲ್ಪಡುವವು.

ಅನುಬಂಧ–೧೧

ಉದ್ಧರಣೆಗಳು :

ವೀರಶೈವ ಗ್ರಂಥಕಾರರು ಷಟ್‌ಸ್ಥಲದ ಮರ್ಮವನ್ನು ಹೆಚ್ಚಿಗೆ ಸ್ಪಷ್ಟಮಾಡಿ ತೋರಿಸುವ ಉದ್ದೇಶವಾಗಿ ಉದ್ಧರಣೆಗಳನ್ನು ನಿರ್ಮಿಸಿರುವರು. ಇವು ಆಕೃತಿಗಳು

ಇದ್ದು, ವಿಷಯಗಳಿಗನುಸಾರವಾಗಿ ಅವುಗಳಲ್ಲಿ ಪ್ರಣವಗಳನ್ನೂ ಷಟ್‌ಸ್ಥಲಸಿದ್ಧಾಂತ ದ್ಯೋತಕ ಶಬ್ದಗಳನ್ನೂ ಬರೆದು ವಿಷಯಗಳ ಸಂಬಂಧವನ್ನು ತೋರಿಸುತ್ತಾರೆ. ಗ್ರಂಥವಿಸ್ತಾರ ಭಯಕ್ಕಾಗಿ ಅವುಗಳನ್ನೆಲ್ಲ ನಾವು ಇಲ್ಲಿ ಉದಹರಿಸಿಲ್ಲ. ಈ ಉದ್ಧರಣೆಗಳು ೩೨ ಇರುತ್ತವೆ. ಇವುಗಳಲ್ಲಿ ಪ್ರಣವೋದ್ಧರಣೆ, ಶೂನ್ಯಲಿಂಗೋದ್ಧರಣೆ, ಷಡ್ ಬ್ರಹ್ಮೋದ್ಧರಣೆ, ಪಂಚಮೂರ್ತಿಲಿಂಗೋದ್ಧರಣೆ, ನವಚಕ್ರೋದ್ಧರಣೆ, ತತ್ವಪಂಚೀಕರಣೋದ್ಧರಣೆ, ಮಂತ್ರಪಂಚೀಕರಣೋದ್ಧರಣೆ, ಇವು ಈಗಿನ ಗ್ರಂಥದ ವಿಷಯಗಳಿಗೆ ಸಂಬಂಧಪಡುತ್ತವೆ. ಅವುಗಳಿಗೆ ವಾಚ್ಯಗಳೂ ಇರುತ್ತವೆ. ಈ ವಾಚ್ಯಗಳಲ್ಲಿ ಕೆಲವು ಈ ಗ್ರಂಥದಲ್ಲಿ ಉದಹರಿಸಲ್ಪಟಿವೆ.ಆದರೆ ಅವುಗಳ ಬಗ್ಗೆ ಮೂಲ ಗ್ರಂಥವನ್ನೇ ನೋಡಬೇಕು.

೩೨ ಉದ್ಧರಣೆಗಳು ಮುಖ್ಯವಾದವು, ಅವುಗಳಲ್ಲದೆ ಹಲವು ಅವಾಂತರ ಉದ್ಧರಣೆಗಳೂ ಉಂಟು. ಸಿದ್ಧಿಗಳನ್ನು ಬಯಸುವ ಭಾವಿಕ ಜನರು ಈ ಉದ್ಧರಣೆಗಳನ್ನು ಯಂತ್ರ ತಂತ್ರಗಳಂತೆ ಉಪಯೋಗಿಸುವದುಂಟು. ಆದರೆ ವಚನಕಾರರು ಹೀಗೆ ಎಂದೂ ಉದ್ದೇಶವನ್ನಿಟ್ಟುಕೊಂಡಿಲ್ಲ. ಷಟ್‌ಸ್ಥಲದ ತೊಡಕಿನ ಭೇದಾಭೇದಗಳು ಚೆನ್ನಾಗಿ ಜನರಿಗೆ ತಿಳಿಯಬೇಕೆಂದು ಅವರು ಅವುಗಳನ್ನು ಮಾಡಿರುವರು. ಉದ್ಧರಣೆಗಳಲ್ಲಿ ಡ್ರಾಯಿಂಗಿನ ಚಿತ್ರಗಳಂತೆ ಸುಂದರವಾದ ಬಣ್ಣಗಳನ್ನು ಲೇಪಿಸಿ ಬರೆದಿಡುವ ಸಾಂಪ್ರದಾಯವು ಇತ್ತು. ಇವುಗಳು ಅಲ್ಲಲ್ಲಿ ಈಗಲೂ ಉಪಲಬ್ಧವಿರುತ್ತವೆ. ಆದರೆ ಭಾವಿಕ ಜನರು ಅವುಗಳನ್ನು ಅನ್ನೂ ಬಹು ಗುಪ್ತವಾಗಿ ಇಟ್ಟಿರುವದು ಕಂಡುಬರುತ್ತದೆ.

ಅನುಬಂಧ–೧೨

ವೀರಶೈವರಿಗೆ ಆಧಾರ ಗ್ರಂಥಗಳು :

ವೇದೋಪನಿಷತ್ತುಗಳು : ವೀರಶೈವರು ವೇದೋಪನಿಷತ್ತುಗಳನ್ನು ಜೈನ ಬೌದ್ಧರಂತೆ ತ್ಯಜಿಸುವದಿಲ್ಲ. ಆದರೆ ತಮ್ಮ ಸಮರ್ಥನಕ್ಕಾಗಿ ಬೇಕಾಗುವ ಅವುಗಳಲ್ಲಿಯ ತತ್ವಗಳನ್ನು ಎತ್ತಿ ತೆಗೆದು ಉದಹರಿಸುವದುಂಟು. ಈ ಸಂಗತಿಯ ಬಗ್ಗೆ ಅನಾದಿ ವೀರಶೈವಸಾರಸಂಗ್ರಹ, ಉರಿಲಿಂಗಪೆದ್ದಿಯ ವಚನಗಳು, ಗಣಭಾಷ್ಯರತ್ನಮಾಲೆ ಮುಂತಾದ ಅನೇಕ ಗ್ರಂಥಗಳನ್ನು ನೋಡಬೇಕು. ಅವುಗಳಲ್ಲಿ ವೇದಾಗಮೋಪನಿಷತ್ತುಗಳಲ್ಲಿಯ ಅನೇಕ ಅವತರಣಗಳು ಬಂದಿವೆ.

ಸ್ಮೃತಿಗಳು : ಸ್ಮೃತಿಗಳು, ಬ್ರಾಹ್ಮಣಾರಣ್ಯಕ ಗ್ರಂಥಗಳು ಆಚಾರ ವಿಷಯಕವಾಗಿರುತ್ತವೆ. ಇವುಗಳಿಗೂ ವೀರಶೈವರ ಆಚಾರಗಳಿಗೂ ಮಹದಂತರವಿರುತ್ತದೆ. ಆದ್ದರಿಂದ ವೀರಶೈವರು ಈ ಗ್ರಂಥಗಳನ್ನು ಮನ್ನಿಸುವದಿಲ್ಲ.

ಸಾಂಖ್ಯಯೋಗಗಳು : ಇವುಗಳ ತತ್ವಗಳನ್ನು ವೀರಶೈವರು ಬಹಳ ಅಂಶದಿಂದ ಒಪ್ಪಿಕೊಂಡಿದ್ದಾರೆ. ಷಟ್‌ಸ್ಥಲಾಚರಣೆಯಲ್ಲಿ ಇವುಗಳ ವಿಚಾರಗಳು ಆಗಿಂದಾಗ್ಗೆ

ಬರುತ್ತವೆ. ಆದ್ದರಿಂದ ಈ ಗ್ರಂಥಗಳೂ ಕೆಲಮಟ್ಟಿಗೆ ಆಧಾರಕ್ಕೋಸ್ಕರ ತೆಗೆದು ಕೊಳ್ಳಲ್ಪಟ್ಟಿವೆ.

ಪುರಾಣಗಳು :ಪುರಾಣಗಳು ಹದಿನೆಂಟು ಇದ್ದು, ಇವುಗಳಲ್ಲಿ ಶಿವಪುರಾಣ ಗಳು ಮತ್ತು ವಿಷ್ಣುಪುರಾಣಗಳು ಎಂಬ ಎರಡು ಮುಖ್ಯ ವಿಭಾಗಗಳಿವೆ. ಶಿವ ಪುರಾಣಗಳಲ್ಲಿಯ ಅನೇಕ ವಿಷಯಗಳನ್ನು ವೀರಶೈವರು ತಮ್ಮ ಆಧಾರಕ್ಕಾಗಿ ಉದಹರಿಸುವದುಂಟು. ಹಾಗೆಯೇ ವಿಷ್ಣುಪುರಾಣಗಳಲ್ಲಿಯ ಅನೇಕ ಉಕ್ತಿಗಳನ್ನೂ ಅವರು ತಮ್ಮ ಗ್ರಂಥಗಳಲ್ಲಿ ತೆಗೆದುಕೊಂಡಿದ್ದು ತೋರಿಬರುತ್ತದೆ.

ಭಾಷ್ಯಗಳು : ನೀಲಕಂಠಭಾಷ್ಯ, ಶ್ರೀಕರಭಾಷ್ಯ ಇವುಗಳು ವೀರಶೈವರ ಭಾಷ್ಯಗಳೆಂದು ಹೇಳಲ್ಪಡುತ್ತ ಬಂದಿವೆ. ಆದರೆ ಮೂಲ ಗ್ರಂಥಗಳನ್ನು ನೋಡಿದಲ್ಲಿ ಅವುಗಳಲ್ಲಿ ಹೇಳಲ್ಪಡುವ ಸಿದ್ಧಾಂತಗಳು ಆಗಮ ಗ್ರಂಥಗಳಲ್ಲಿಯ ವಿಷಯಗಳನ್ನು ಕೆಲಮಟ್ಟಿಗೆ ಸಮರ್ಥಿಸಿದರೂ ಅವು ಪೂರ್ಣವಾಗಿ ವೀರಶೈವಪರ ಭಾಷ್ಯಗಳೆಂದು ಹೇಳಲಿಕ್ಕೆ ಬರಲಾರದು. ಅವುಗಳಲ್ಲಿ ಹೇಳಲ್ಪಟ್ಟ ಅನೇಕ ಆಚಾರಗಳು ಷಟ್‌ಸ್ಥಲಾ ಚರಣೆಗಳಿಗೆ ಹೊಂದುವದಿಲ್ಲ. ವಚನಕಾರರೂ ತಮ್ಮ ಗ್ರಂಥಗಳಲ್ಲಿ ಅಥವಾ ಉಕ್ತಿಗಳಲ್ಲಿ ಭಾಷ್ಯಗಳನ್ನು ತಮ್ಮ ಆಧಾರಕ್ಕೋಸ್ಕರ ತೆಗೆದುಕೊಂಡದ್ದರ ಉಲ್ಲೇಖಗಳು ಕಂಡುಬರುವದಿಲ್ಲ. ವೀರಶೈವ ತತ್ವಜ್ಞಾನಿಗಳು ದ್ವೈತಾದ್ವೈತದ ಚರ್ಚೆಯಲ್ಲಿ ಹೆಚ್ಚಾಗಿ ಬಿದ್ದಿಲ್ಲ. ಅವರು ಇಂಥ ತಾತ್ವಿಕ ವಿವೇಚನೆಗಳಿಗಿಂತ, ಮನಸ್ಸು, ಕ್ರಿಯೆ ಆಚರಣೆ, ಶಿವಯೋಗ ಇಂಥ ವಿಷಯಗಳ ಬಗ್ಗೆ ಹೆಚ್ಚಾಗಿ ನಿರೂಪಿಸುವದುಂಟು. ಇವುಗಳನ್ನು ವಿವರಿಸುವ ಗ್ರಂಥಗಳು ಅವರಲ್ಲಿ ಅನೇಕವಾಗಿರುತ್ತವೆ. ಅವರ ಪದ್ಯ ಗ್ರಂಥಗಳಲ್ಲಿಯೂ ಸಂಸ್ಕೃತ ಗ್ರಂಥಗಳಲ್ಲಿಯೂ ಇಂಥ ವಿಷಯಗಳೇ ಹೆಚ್ಚಾಗಿ ಬರುತ್ತವೆ. ಅವರು ಮನುಷ್ಯನ ಧ್ಯೇಯವು ಅದ್ವೈತವೆಂದು ಮಾತ್ರ ಹೇಳಿ, ಅದನ್ನು ಸಾಧಿಸುವ ರೀತಿಗಳನ್ನು ಅನೇಕ ಬಗೆಯಾಗಿ ಹೇಳುತ್ತಾರೆ. ಇದು ವೀರಶೈವ ಧರ್ಮ ಗ್ರಂಥಕಾರರ ವಿಶಿಷ್ಟತೆಯಾಗಿದೆ.

ಒಟ್ಟಿಗೆ ವೀರಶೈವ ಧರ್ಮ ಗ್ರಂಥಕಾರರು ಮೇಲೆ ಹೇಳಿದ ಯಾವ ಗ್ರಂಥವನ್ನೂ ಸಂಪೂರ್ಣವಾಗಿ ತಮ್ಮ ಆಧಾರಗಳೆಂದು ತಿಳಿದಿದ್ದು ಕಂಡುಬರುವ ದಿಲ್ಲ. ಆದರೆ ಅವರು ತಮ್ಮ ಷಟ್‌ಸ್ಥಲ ಸಿದ್ಧಾಂತಕ್ಕೆ ಅನುಕೂಲವಿರುವ ಅವುಗಳಲ್ಲಿಯ ವಿಷಯಗಳನ್ನು ತಮ್ಮ ಆಧಾರಕ್ಕಾಗಿ ಮಾತ್ರ ಆಗಿಂದಾಗ್ಗೆ ತೆಗೆದುಕೊಳ್ಳುತ್ತಿರುವದು ತೋರಿಬರುತ್ತದೆ.

ಆಗಮಗಳು :

ಆಗಮಗಳಲ್ಲಿ ಹೇಳಲ್ಪಡುವ ವಿಷಯಗಳಿಗೂ ವೀರಶೈವ ಸಿದ್ಧಾಂತಕ್ಕೂ ಬಹಳ ಸಂಬಂಧವಿರುತ್ತದೆ. ಈ ಸಂಗತಿಯು ನಿರ್ವಿವಾದವಾಗಿದೆ. ಆಗಮಮಾರ್ಗಾನ ಯಾಯಿಗಳಲ್ಲಿ ವೀರಶೈವಮತಸ್ಥರು ಎಣಿಸಲ್ಪಟ್ಟಿರುವರು. ಆದರೂ ಅವರು ಅವುಗಳಲ್ಲಿ ಕಾಣಿಸಿದ ವಿಷಯಗಳನ್ನೆಲ್ಲ ಅಂಧತೆಯಿಂದ ಸ್ವೀಕರಿಸಿರುವದಿಲ್ಲ.

ಆಗಮಗಳನ್ನು ಅವರು ಹಿಂಬಾಲಿಸುವಾಗಲೂ ಕೂಡ, ಸಾರಾಸಾರಾ ವಿಚಾರಮಾಡಿ ತಮ್ಮ ಷಟ್‌ಸ್ಥಲಮಾರ್ಗಕ್ಕೆ ಹೊಂದಿಕೆಯಾಗಿರುವಂಥ ವಿಷಯಗಳನ್ನು ಮಾತ್ರ ಅವರು ಸ್ವೀಕರಿಸುತ್ತಾರೆ. ಉಳಿದವುಗಳನ್ನು ಅವರು ಬಿಟ್ಟುಕೊಟ್ಟಿದ್ದಾರೆ. ಆಗಮಗಳು ವೀರಶೈವರಿಗೆ ಮಹತ್ವವಾದ ಗ್ರಂಥಗಳಿರುವದರಿಂದ ಅವುಗಳ ಬಗ್ಗೆ ಇಲ್ಲಿ ಸ್ವಲ್ಪ ವಿಸ್ತಾರವಾಗಿ ನಿರೂಪಿಸುವದು ಅವಶ್ಯವದೆ.

ಆಗಮ ಗ್ರಂಥಗಳಲ್ಲಿ ಶೈವ, ಶಾಕ್ತ ವೈಷ್ಣವ ಎಂಬ ಮೂರು ವಿಭಾಗಗಳಿವೆ. ಈ ಕಡೆಯ ಎರಡು ವಿಭಾಗಗಳು ವೀರಶೈವಕ್ಕೆ ಸಂಬಂಧಿಸಿದವಲ್ಲ. ಶಿವಾಗಮ ಗಳಲ್ಲಿಯೂ ಕೂಡ ಪಾಶುಪತ, ಲಕುಳ, ಸೋಮ, ಸಿದ್ಧಾಂತ ಎಂದು ಕೆಲವು ವಿಭಾಗಗಳಿರುತ್ತವೆ. ಈ ಶೈವಾಗಮಗಳು ಹಿಂದುಸ್ತಾನದಲ್ಲಿ ಬಹು ಮಹತ್ವದ ಧಾರ್ಮಿಕ ಕ್ರಾಂತಿಯನ್ನು ಮಾಡಿರುವವು. ದಕ್ಷಿಣ ದೇಶದಲ್ಲಿ ಬೌದ್ಧ ಜೈನ ಮತಗಳು ಹೆಚ್ಚಿದಾಗ ಅವುಗಳ ವರ್ಚಸ್ಸನ್ನು ಇವು ಕಡಿಮೆ ಮಾಡಿರುವವು.

ಆಗಮಗಳು ಒಟ್ಟು ಇಪ್ಪತ್ತೆಂಟು ಇದ್ದು ಅವುಗಳಲ್ಲಿ ಹತ್ತು ಶಿವಾಗಮಗಳೂ ಹದಿನೆಂಟು ರುದ್ರಾಗಮಗಳೂ ಎಂದು ಹೇಳಲ್ಪಡುತ್ತದೆ. ಪ್ರತಿಯೊಂದು ಆಗಮಕ್ಕೆ ಅನೇಕ ಉಪಾಗಮಗಳೂ ಉಂಟು. ಈ ಯಾವತ್ತೂ ಗ್ರಂಥಗಳಲ್ಲಿರುವ ಉಕ್ತಿಗಳು ಲಕ್ಷ ಅಥವಾ ಕೋಟಿಗಟ್ಟಲೆ ಇರುತ್ತವೆಂದು ಹೇಳುತ್ತಾರೆ. ಇಷ್ಟು ಸಂಖ್ಯೆಯಿಂದ ಈಗ ಉಪಲಬ್ಧವಿರದಿದ್ದರೂ ಈ ವಾಙ್ಮಯವು ಬಹು ದೊಡ್ಡದಿರುತ್ತದೆಂಬುದು ನಿಃಸ್ಸಂದೇಹವಾದದ್ದು.

ಶಿವಾಗಮಗಳಲ್ಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಜ್ಞಾನಪಾದ ಎಂದು ನಾಲ್ಕು ಮುಖ್ಯ ವಿಭಾಗಗಳು ಇರುತ್ತವೆ.

ಕ್ರಿಯಾಪಾದ : ಇದರಲ್ಲಿ ಆಚಾರ್ಯನ ನಿತ್ಯ ಕ್ರಿಯೆಗಳೂ ದೇವಾಲಯ ಗಳನ್ನು ಕಟ್ಟುವ ಪದ್ಧತಿಗಳೂ ಮೂರ್ತಿಗಳ ರಚನೆಯೂ ಮೂರ್ತಿಗಳಲ್ಲಿರುವ ಭಾಗಗಳ ವಿವರಣೆಗಳೂ ಲಿಂಗಸ್ಥಾಪನೆಯೂ ಅಲ್ಲದೆ ನಗರ ರಚನೆಯೂ ಇಂಥ ವಿಷಯಗಳು ಹೇಳಲ್ಪಡುತ್ತವೆ. ಆದರೆ ಈ ವಿಷಯಗಳು ವೀರಶೈವರಿಗೆ ಸಂಬಂಧ ಪಟ್ಟವಿರುವದಿಲ್ಲ.

ಚರ್ಯಾಪಾದ : ಇದರಲ್ಲಿ ಸ್ನಾನ ಅರ್ಚನಾದಿ ವಿಧಿಗಳು, ಅಗ್ನಿ ಕುಂಡದ ರಚನೆ, ಅಗ್ನಿ ಕಾರ್ಯಗಳು, ಹೋಮ ಹವನಾದಿಗಳು, ಹೋಮದ ಕಾಲದಲ್ಲಿ ಉಪಯೋಗಿಸತಕ್ಕ ಶಿವಮಂತ್ರಗಳು, ದೇವಾಲಯಗಳಲ್ಲಿ ಜರಗಿಸತಕ್ಕ ನಿತ್ಯೋತ್ಸವ ಗಳು, ಮಹೋತ್ಸವಗಳು, ಇಂಥ ಅನೇಕ ವಿಷಯಗಳು ಬರುತ್ತವೆ. ಇಲ್ಲಿ ವರ್ಣಾ ಶ್ರಮ ಧರ್ಮಗಳ ವಿಚಾರಗಳೂ ಬರುತ್ತವೆ. ಅಲ್ಲದೆ ಷೋಡಶ ಸಂಸ್ಕಾರಗಳು ಅಷ್ಟ ವಿಧ ವಿವಾಹಗಳು, ದಹನ ವಿಧಿಗಳು, ಸಮಾಧಿಯ ಕ್ರಿಯೆಗಳು, ಪಿತೃ ಯಜ್ಞಗಳು, ಪಿಂಡೀಕರಣವು, ದೀಕ್ಷಾವಿಧಿಗಳು ಈ ಮೊದಲಾದ ನಿತ್ಯ ನೈಮಿತ್ಯಕಾಚಾರಗಳೂ ಹೇಳಲ್ಪಡುತ್ತವೆ. ಇವುಗಳ ಮೇಲಿಂದ ಇಲ್ಲಿ ಪೂರ್ಣ ಶೈವ ಮತ್ತು ಬ್ರಾಹ್ಮಣ

ಕರ್ಮಗಳ ಮಿಶ್ರಣವು ಇರುವದು ಸ್ಪಷ್ಟವಾಗಿದೆ. ಆದರೆ ವೀರಶೈವರು ಇಂಥ ಕರ್ಮಗಳನ್ನು ತ್ಯಜಿಸಿ ಷಟ್‌ಸ್ಥಲ, ಅಷ್ಟಾವರಣ, ಶಿವಯೋಗ ಇವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಸ್ವೀಕರಿಸಿದ್ದಾರೆ.

ಯೋಗಪಾದ : ಇದರಲ್ಲಿ ಚಕ್ರಗಳ ವಿವರಣೆ, ಯಮ, ನಿಯಮ, ಮೊದ ಲಾದ ಅಷ್ಟಾಂಗಯೋಗವು ಹೇಳಲ್ಪಡುತ್ತವೆ. ವೀರಶೈವರು ಹಠಯೊಗದ ಸಾಧನೆಗಳನ್ನು ನಿರಾಕರಿಸಿರುವರು. ಆದರೆ ಯೋಗಮಾರ್ಗದಲ್ಲಿರುವ ಮಹತ್ವದ ತತ್ವಗಳನ್ನು ಮಾತ್ರ ಸ್ವೀಕರಿಸಿ ಅವುಗಳನ್ನು ತಮ್ಮ ಶಿವಯೋಗದಲ್ಲಿ ಸೇರಿಸಿ ಕೊಂಡಿರುವರು.

ಜ್ಞಾನಪಾದ : ಈ ಪಾದದಲ್ಲಿ ಪತಿ, ಪಶು, ಪಾಶ ಇವುಗಳ ವಿವರಣೆಯು ಬರುತ್ತದೆ. ಪದಾರ್ಥಗಳು ಮತ್ತು ಶಕ್ತಿ ತತ್ವಗಳು ಇವುಗಳ ವಿವರಣೆಯೂ ಹೇಳಲ್ಪಡುತ್ತವೆ. ಇವುಗಳ ಪರಸ್ಪರ ಸಂಬಂಧ ಅಂದರೆ ಶಿವ ಶಕ್ತಿ ಪತಿ ಪದಾರ್ಥ, ಪಶು ಪದಾರ್ಥ, ಪಾಶ ಪದಾರ್ಥ, ಈ ವಿಷಯಗಳ ವಿವೇಚನೆಯೂ ಬರುತ್ತದೆ. ಇವುಗಳೊಡನೆ ಮೂವತ್ತಾರು ತತ್ವಗಳ ವಿವೇಚನೆಯೂ ಶುದ್ಧಾಧ್ವ, ಮಿಶ್ರಾಧ್ವ, ಅಶುದ್ಧಾಧ್ವಗಳ ವಿವರಣೆಯೂ ಬರುತ್ತವೆ. ಮೃಗೇಂದ್ರ ಮತ್ತು ಪೌಷ್ಕರಾಗಮಗಳು ೩೬ ತತ್ವಗಳಿಗೆ ಮಹತ್ವಕೊಡುತ್ತವೆ. ಸುಪ್ರಭೇದವು ಅಧ್ವಗಳ ವಿವೇಚನೆಗೆ ಮಹತ್ವ ಕೊಡುತ್ತದೆ ಮತ್ತು ೩೬ ತತ್ವಗಳು ಅಧ್ವಗಳ ಭಾಗಗಳೆಂದು ಇಲ್ಲಿ ಹೇಳಲ್ಪಡುತ್ತವೆ. ಕಾಮಿಕ ಮತ್ತು ಸುಪ್ರಭೇದಗಳು ಅದ್ವೈತವನ್ನು ಪ್ರತಿಪಾದಿಸುತ್ತವೆ. ಸರ್ವ ಜ್ಞಾನೋತ್ತರವಾದರೂ ಅದ್ವೈತವನ್ನು ಬೋಧಿಸುತ್ತದೆ. ಆದರೆ ಪೌಷ್ಕರಾಗಮವು ದ್ವೈತಾದ್ವೈತವಾಗಿರುತ್ತದೆ. ಹೀಗೆ ಆಗಮಗಳಲ್ಲಿ ನಾನಾ ವಿಧವಾಗಿ ತತ್ವಗಳ ವಿವೇಚನೆಗಳೂ ವಿಚಾರಗಳೂ ಕಂಡುಬರುತ್ತವೆ. ಬಹುಶಃ ಎಲ್ಲ ಆಗಮಗಳಲ್ಲಿ ಶಕ್ತಿಗಳ ಪ್ರತಿಪಾದನೆಯೂ ಕೆಲವುಗಳಲ್ಲಿ ಸಾದಾಖ್ಯಗಳ ವಿವರಣೆಗಳೂ ಬಂದಿರುತ್ತವೆ.

ಕರ್ನಾಟಕ ದೇಶದಲ್ಲಿ ಈಚೆಗೆ ಪ್ರಕಟವಾಗಿರುವ ವಾತುಳ, ಪಾರಮೇಶ್ವರ ಮತ್ತು ಸೂಕ್ಷಾ ಗಮಗಳು ಸಹ ಒಂದೇ ವಿಧವಾಗಿಲ್ಲ. ಪಾರಮೇಶ್ವರಾಗಮದಲ್ಲಿ ಬ್ರಾಹ್ಮಣ ಕರ್ಮಗಳು ಹೆಚ್ಚಾಗಿ ಸೇರಿರುತ್ತವೆ. ಆದರೆ ಸೂಕ್ಷ್ಮಾಗಮದಲ್ಲಿ ವಚನ ಶಾಸ್ತ್ರದ ವಿಚಾರಗಳು ಪೂರ್ಣವಾಗಿ ಬಂದಿರುತ್ತವೆ. ಕೆಲವು ಆಗಮಗಳಲ್ಲಿ ಅನೇಕ ವಿಧ ಮಂತ್ರಗಳ ಮತ್ತು ಮುದ್ರೆಗಳ ವಿಚಾರಗಳು ಬಂದಿರುತ್ತವೆ. ಆದರೆ ಇವು ಶಾಕ್ತರ ಪದ್ಧತಿಯಂತೆ ಇವೆ.

ಈ ಎಲ್ಲ ಸಂಗತಿಗಳನ್ನು ನಾವು ನೋಡಿದಲ್ಲಿ ಶಿವಾಗಮಗಳು ಅಸಂಖ್ಯವಾಗಿದ್ದು ಅವುಗಳ ವಿವೇಚನೆಯಲ್ಲಿ ಅನೇಕ ರೀತಿಯ ವಿಷಯಗಳು ಬಂದಿರುವವಲ್ಲದೆ ಅವುಗಳಲ್ಲಿ ಭಿನ್ನಾಭಿಪ್ರಾಯಗಳೂ ಬಹಳ ಇರುತ್ತವೆ. ಆದರೆ ವೀರಶೈವ ಧರ್ಮಕ್ಕೆ ಹೊಂದಿಕೆಯಾಗಿರುವ ಅಸಂಖ್ಯ ವಿಷಯಗಳೂ ಕೂಡ ಇವುಗಳಲ್ಲಿ ಬಂದಿವೆ.

ಇಂಥವುಗಳನ್ನು ಮಾತ್ರ ವೀರಶೈವರು ತಮ್ಮ ಶಾಸ್ತ್ರದಲ್ಲಿ ತೆಗೆದುಕೊಂಡಿರುವರು. ಒಟ್ಟಿನಿಂದ ನೋಡಿದಲ್ಲಿ ಶೈವಾಗಮಗಳಲ್ಲಿ ಹೇಳಿದ ಸಂಗತಿಗಳನ್ನು ವೀರಶೈವರು ಮಾನ್ಯವೆಂದು ಅಂಧತೆಯಿಂದ ಸ್ವೀಕರಿಸಿರುವದಿಲ್ಲೆಂದು ಕಂಡುಬರುತ್ತದೆ.

ವಚನ ಗ್ರಂಥಗಳು : ಮೇಲಿನ ವಿವರಣೆಗಳಿಂದ ವೀರಶೈವರಿಗೆ ಅತ್ಯಂತ ಮಹತ್ವದ ಗ್ರಂಥಗಳೆಂದರೆ ವಚನ ಗ್ರಂಥಗಳೇ ಎಂದು ಹೇಳಬೇಕಾಗುತ್ತದೆ. ವಚನಗಳು ಕೇವಲ ಶುದ್ಧವೀರಶೈವಮಾರ್ಗವನ್ನೇ ಅನೇಕ ರೀತಿಯಿಂದ ಬೋಧಿಸುತ್ತವೆ. ಈ ಸಂಗತಿಯು ಈಗಿನ ಈ ಗ್ರಂಥದಲ್ಲಿ ವಿವರಿಸಲ್ಪಟ್ಟ ಅಸಂಖ್ಯ ವಚನಗಳಿಂದ ಪಾಚಕರಿಗೆ ಕೂಡಲೇ ತಿಳಿದುಬರದೆ ಇರಲಾರದು.

ವಚನಕಾರರು ವಿವರಿಸುವ ವೀರಶೈವ ಮಾರ್ಗದಲ್ಲಿ ಭಿನ್ನಭಿನ್ನ ಮತಗಳಿರುವ ದಿಲ್ಲ. ಎಲ್ಲ ವಚನಗಳು ಒಂದೇ ವಿಧ ಸಿದ್ಧಾಂತವನ್ನು ವಿವರಿಸುತ್ತವೆ. ಅವುಗಳು ನೈತಿಕಾಚಾರಕ್ಕೂ ವಿಚಾರಕ್ಕೂ ಹೊಂದಿಕೆಯಾಗುವಂಥವು ಇವೆ. ಅವುಗಳ ವಿವೇಚನೆ ಯಲ್ಲಿ ಸುವ್ಯವಸ್ಥೆಯು ಇದೆ. ಮತ್ತು ಅವುಗಳಲ್ಲಿ ಉಪನಿಷತ್ತುಗಳು, ಆಗಮಗಳು, ಸಾಂಖ್ಯ, ಯೋಗ, ಪುರಾಣಗಳು, ಇವುಗಲ್ಲಿಯ ಉಚ್ಚ ತತ್ವಗಳೂ ಬಂದಿವೆ. ಇವುಗಳನ್ನೆಲ್ಲ ಒಳಕೊಂಡು ಷಟ್‌ಸ್ಥಲಮಾರ್ಗವು ಸುಬೋಧವಾಗಿ ವಚನ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿದ್ದು ಕಂಡುಬರುತ್ತದೆ.

ಆದರೆ ವಚನಕಾರರ ಸಿದ್ಧಾಂತಗಳೆಲ್ಲವನ್ನು ಒಂದೆಡೆಗೆ ತಂದು ನಿರೂಪಿಸಿದ ಗ್ರಂಥವು ಅಥವಾ ಗ್ರಂಥಗಳು ನಮಗೆ ಇನ್ನೂ ದೊರೆತಿಲ್ಲ. ಆದರೆ ನಾವು ಹೆಚ್ಚಾಗಿ ಶೋಧಿಸಿದಲ್ಲಿ ಅವು ದೊರೆಯಬಹುದೆಂದು ನಮಗೆ ತೋರುತ್ತದೆ. ನಮಗೆ ಖಂಡಶಃ ದೊರೆದ ವಚನ ಗ್ರಂಥಗಳನ್ನಷ್ಟೇ ನಾವು ಪರಿಶೋಧಿಸಿದಲ್ಲಿ ಅವುಗಳಲ್ಲಿ ಒಂದು ಅತ್ಯುತ್ತಮ ತರದ ವ್ಯವಸ್ಥೆಯೂ ಒಂದು ಮಹತ್ತರ ಸಿದ್ಧಾಂತವೂ ಇರುವದು ಕಂಡುಬರುತ್ತದೆ. ಇವುಗಳನ್ನು ನಾನಾ ವಿಧವಾಗಿ ವಿಶದಪಡಿಸುವಂಥ ಸಂಸ್ಕೃತ, ಕನ್ನಡ, ತೆಲಗು, ತಮಿಳ, ಗ್ರಂಥಗಳೂ ಕೆಲವು ಉಪಲಬ್ಧವಿರುತ್ತವೆ. ಇಂಥ ಗ್ರಂಥಗಳು ನಮಗೆ ಆಧಾರ ಗ್ರಂಥಗಳಾಗಿವೆ. ಇವುಗಳಲ್ಲಿ ಕಂಡುಬಂದ ತತ್ವಗಳನ್ನು ನಾವು ಸಂಗ್ರಹಿಸಿ ವಚನಗಳ ದ್ವಾರಾ ಈ ಗ್ರಂಥದಲ್ಲಿ ನಿರೂಪಿಸಿದ್ದೇವೆ.

ವೀರಶೈವ ಪರವೆಂದು ತೋರುವ ಬೇರೆ ಕೆಲವು ಗ್ರಂಥಗಳು ಉಪಲಬ್ಧ ವಿರುತ್ತವೆ. ಆದರೆ ಅವುಗಲ್ಲಿ ಬ್ರಾಹ್ಮಣರ ಕರ್ಮಠ ಮಾರ್ಗವನ್ನು ಸಮರ್ಥಿಸುವ ವಿಷಯಗಳೂ ಇರುತ್ತವೆ. ಇವುಗಳಲ್ಲಿ ಶೈವ ಮತ್ತು ಬ್ರಾಹ್ಮಣ ಪದ್ಧತಿಗಳೊಡನೆ ವೀರಶೈವರ ಪದ್ಧತಿಗಳೂ ಮಿಶ್ರವಾಗಿರುತ್ತವೆ. ಆದರೆ ಇಂಥವುಗಳು ಆಧಾರವೆಂದು ಹೇಳಲಿಕ್ಕೆ ಬರಲಾರದು. ಇವು ಆಗಮಗಳ ಆರಂಭದ ಪಾದಗಳಾದ ಕ್ರಿಯಾ ಚರ್ಯಾಪಾದಗಳನ್ನು ಅನುಸರಿಸಿದಂತೆ ನಮಗೆ ತೋರುತ್ತದೆ.

ಅನುಬಂಧ–೧೩

ಶೈವ ವೀರಶೈವ ಭೇದಗಳು

ಶೈವರು ಆಗಮೋಕ್ತ ಧರ್ಮವನ್ನು ಪ್ರತಿಪಾಲಿಸುವವರು ಇರುತ್ತಾರೆ. ಆದರೆ ಇವರಲ್ಲಿ ಅನೇಕ ತರದ ಭೇದಗಳು ಪೂರ್ವಕಾಲದಿಂದಲೂ ಉಂಟಾದದ್ದು ಕಂಡುಬರುತ್ತದೆ. ಸೂಕ್ಷ್ಮಾಗಮದಲ್ಲಿ ಹೇಳಲ್ಪಡುವ ಭೇದಗಳು ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಪ್ರವರಶೈವ, ಅಂತ್ಯಶೈವ ಎಂದು ಇವೆ. ಇವುಗಳಲ್ಲಿ ಅನೇಕವು ಬೇರೆ ಬೇರೆ ಜಾತಿಯ ಜನರಿಗೆ ಶೈವದೀಕ್ಷೆಗಳನ್ನು ಕೊಟ್ಟದ್ದರಿಂದ ಉಂಟಾಗಿರುವಂತೆ ಕಂಡುಬರುತ್ತದೆ. ಆಚಾರಭೇದದಿಂದಲೂ ಶೈವರಲ್ಲಿ ಕೆಲವು ಭೇದಗಳು ಮಾಡಲ್ಪಟ್ಟಿವೆ. ಅವು ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ, ಈ ಶೈವರಲ್ಲಿಯ ಕೆಲವು ಪಂಗಡಗಳಲ್ಲಿ ಆಗಮೋಕ್ತ ಕರ್ಮಗಳೊಡನೆ ಬ್ರಾಹ್ಮಣ ಕರ್ಮಗಳೂ ಮಿಶ್ರವಾಗಿರುವವು. ವೀರಶೈವರಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ ಎಂದು ವರ್ಗಗಳು ಮಾಡಲ್ಪಡುವದುಂಟು. ಇವು ಆಚಾರ ಭೇದದಿಂದ ಆಗಿರುತ್ತವೆ.

ಪಾರಮೇಶ್ವರಾಗಮದಲ್ಲಿ ಆಚಾರ ಭೇದದಿಂದ ಶುದ್ಧ, ಮಿಶ್ರ, ಮಾರ್ಗ, ವೀರ, ಅವಾಂತರ ಎಂಬ ಪಂಚವಿಧಗಳು ಮಾಡಲ್ಪಟ್ಟಿವೆ. ಅಲ್ಲದೆ ಸಾಮಾನ್ಯ, ಮಿಶ್ರ, ಶುದ್ಧ, ವೀರವೆಂಬ ಭೇದಗಳೂ ಉಂಟು. ಇದೇ ಗ್ರಂಥದ ಬೇರೊಂದು ಪ್ರಕರಣದಲ್ಲಿ ವೀರಶೈವ, ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ, ಎಂತಲೂ ಭಾಗ ಮಾಡಲ್ಪಟ್ಟಿದೆ, ಅಲ್ಲದೆ ಗಾಣಪತ್ಯ. ವೈರಭದ್ರೀಯ, ಭೈರವ, ಶಾರದ, ನಾಂದಿರೇಶ, ಕೌಮಾರ, ಪೈಶಾಚ ಎಂತಲೂ ಭೇದಗಳು ಮಾಡಲ್ಪಟ್ಟಿವೆ. ಈ ಶೈವರೆಲ್ಲರೂ ತಮಗೆ ಯುಕ್ತತೋರಿದ ಪ್ರಕಾರ ಆಗಮಗಳಲ್ಲಿಯ ಆಚಾರಗಳನ್ನು ಅನುವರ್ತಿಸುವರಾಗಿರುವರು. ಪಾರಮೇಶ್ವರಾಗಮದಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಭೇದಗಳೂ ವೀರಶೈವರಲ್ಲಿ ಇದ್ದುದು ವಿವರಿಸಲ್ಪಟ್ಟಿರುತ್ತದೆ.

ನಿಜಗುಣ ಶಿವಯೋಗಿಯು ಹೇಳುವ ಭೇದಗಳು ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂದು ಇರುತ್ತವೆ. ಮತ್ತು ಈ ಶೈವ ಧರ್ಮಗಳಲ್ಲಿ ಮುಖ್ಯವಾದವುಗಳು ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಇವು ಇರುತ್ತವೆ, ನಿಜಗುಣ ಶಿವಯೋಗಿಯು ವೀರಶೈವರಲ್ಲಿ ಕ್ರಿಯಾಭೇದದಿಂದ ಸಾಮಾನ್ಯ, ವಿಶೇಷ, ನಿರಾಭಾರಿ ಎಂತಲೂ ಭಾಗಗಳನ್ನು ಮಾಡಿರುವನು.

ಮೇಲಿನ ಸಂಗತಿಗಳಿಂದ ಪುರಾತನ ಕಾಲದಲ್ಲಿ ಸಹ ಆಗಮ ಧರ್ಮ ಪ್ರತಿಪಾಲಕರಾದ ಶೈವರಲ್ಲಿ ಎಷ್ಟು ಭಿನ್ನತೆಗಳಿದ್ದವೆಂಬುದು ಕಂಡುಬರುತ್ತದೆ. ಈ ಭಿನ್ನತೆಗಳ ವಿವರವನ್ನು ತಿಳಿಯಬೇಕಾದರೆ ಈ ಮೂಲ ಗ್ರಂಥಗಳನ್ನೇ ನೋಡ ಬೇಕೆಂದು ವಾಚಕರಿಗೆ ನಾವು ಸೂಚಿಸುತ್ತೇವೆ. ನಾವು ಇವುಗಳನ್ನೆಲ್ಲ ಉಲ್ಲೇಖಿಸುವ

ಉದ್ದೇಶವು ಆಗಮಮಾರ್ಗವನ್ನು ಅನುಸರಿಸಿದ ಪಂಥಗಳಲ್ಲಿ ಐಕ್ಯಮತವಿರಲಿಲ್ಲ, ಅವುಗಳಲ್ಲಿ ಅನೇಕ ಬಗೆಯ ಮತಾಂತರಗಳು ಉತ್ಪನ್ನವಾಗಿದ್ದವು, ಎಂಬುದನ್ನು ತಿಳಿಯಪಡಿಸುವದೇ ಮುಖ್ಯವಾಗಿದೆ.

ಮುಂದೆ ೧೧–೧೨ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಶೈವಧರ್ಮದಲ್ಲಿ ಇದೇ ಬಗೆಯ ಸ್ಥಿತಿಯು ಇರುವದು ಕಂಡುಬರುತ್ತದೆ. ಆಗ ಕಾಳಾಮುಖರೂ ಲಕುಲೀಶರೂ ಆಗಮ ಧರ್ಮಾನುಯಾಯಿಗಳಲ್ಲಿ ಹೆಚ್ಚಾಗಿ ಪ್ರಬಲರಾದದ್ದು ಶಿಲಾಲೇಖಗಳಿಂದ ತಿಳಿದುಬರುತ್ತದೆ. ಅಲ್ಲದೆ ಮಾಹೇಶ್ವರರು, ಶೈವರು ಎಂಬ ಹೆಸರಿನವರೂ ಸಹ ಇದ್ದದ್ದು ತಿಳಿದುಬರುತ್ತದೆ. ಕಾಶ್ಮೀರ, ಗುರ್ಜರ ದೇಶಗಳಿಂದಲೂ ಬಹುಜನ ಶೈವರು ಕರ್ನಾಟಕಕ್ಕೆ ಈ ಕಾಲದಲ್ಲಿ ಬಂದು, ಇಲ್ಲಿ ವಾಸವಾಗಿದ್ದರೆಂದು ತಿಳಿಯಲೂ ಬಲವತ್ತರ ಕಾರಣಗಳಿವೆ. ಹಾಗೆಯೇ ಅನೇಕ ಬಗೆಯ ಶಾಕ್ತರೂ ಕಾಪಾಲಿಕರೂ ಕೂಡ ಅಲ್ಲಲ್ಲಿ ವಾಸವಾಗಿದ್ದರು.

ಮೇಲ್ಕಂಡ ವಿವರಣೆಗಳ ಮೇಲಿಂದ ಹಿಂದಿನ ಕಾಲದಲ್ಲಿ ಶೈವಮತಗಳಲ್ಲಿ ಭಿನ್ನ ಭಿನ್ನ ಸಮಾಜಗಳು ಉಂಟಾಗಿದ್ದುದೂ ಅವುಗಳಲ್ಲಿ ಅನೇಕ ಬಗೆಯಾಗಿ ಆಗಮಗಳ ಆಚಾರಗಳು ರೂಢವಾಗಿದ್ದುದೂ ಕಂಡುಬರುತ್ತದೆ.

ಆದರೆ ಸಾಂಪ್ರತಕಾಲದಲ್ಲಿ ಶೈವ ಸಮಾಜಗಳಲ್ಲಿ ಬಹುಮಟ್ಟಿಗೆ ಸುವ್ಯವಸ್ಥೆಯುಂಟಾಗಿದೆ ಎಂದು ಹೇಳಲಿಕ್ಕೆ ಪ್ರತ್ಯವಾಯವಿಲ್ಲ. ದಕ್ಷಿಣ ದೇಶದಲ್ಲಿ ಶಿವಸಿದ್ಧಾಂತಿಗಳೂ ಕರ್ನಾಟಕ ಮತ್ತು ಅದರ ನೆರೆ ಪ್ರಾಂತಗಳಲ್ಲಿ ವೀರಶೈವರೂ ಈಗ ಮಹತ್ವದ ಸಮಾಜಗಳಾಗಿವೆ. ಆದರೆ ತೆಲಗು ದೇಶದ ಉತ್ತರಭಾಗಗಳಲ್ಲಿಯೂ ಕೆಲವು ಶೈವ ಪಂಗಡಗಳಿವೆ. ಇವುಗಳ ಅನುಯಾಯಿಗಳಲ್ಲಿ ವೀರಶೈವರೂ ಆರಾಧ್ಯರೂ ಮುಖ್ಯರಾಗಿರುವರು. ಕಾಶ್ಮಿರ ದೇಶದಲ್ಲಿ ಶೈವರು ಇದ್ದರೂ ಅವರು ಈಗ ಅಲ್ಲಿ ದುರ್ಬಲ ಸಮಾಜವಾಗಿರುವರು. ಈ ಯಾವತ್ತು ಸಮಾಜಗಳು ಸ್ಥೂಲವಾಗಿ ಆಗಮಮಾರ್ಗವನ್ನು ಅನುಸರಿಸುವಂಥವಾಗಿವೆ.

ಕಾಶ್ಮೀರ ದೇಶದಲ್ಲಿ ರೂಢವಾಗಿರುವ ಆಗಮಧರ್ಮಕ್ಕೆ ತ್ರಿಕ ಅಥವಾ ಪ್ರತ್ಯಭಿಜ್ಞ ಎಂಬ ಹೆಸರು ಇರುತ್ತದೆ. ಇವರು ಅದ್ವೈತಿಗಳು. ಆದರೆ ಅವರು ಜಗತ್ತು ಮಾಯೆಯೆಂದು ತಿಳಿಯುವದಿಲ್ಲ, ಶಕ್ತಿಯ ಉದ್ಭವವನ್ನು ಒಪ್ಪುತ್ತಾರೆ. ಅವರ ಸಿದ್ಧಾಂತದಲ್ಲಿ ಪತಿ, ಪಾಶ, ಪಶು, ಇವುಗಳಿಗೆ ಮಹತ್ವದ ಸ್ಥಾನವಿದೆ. ಇದ ಕ್ಕೋಸ್ಕರವೇ ಅವರ ಸಿದ್ಧಾಂತಕ್ಕೆ 'ತ್ರಿಕ' ಎಂಬ ಹೆಸರು ಬಂದಿದೆ.

ಶಿವಸಿದ್ಧಾಂತಗಳು ತಮಿಳುದೇಶದಲ್ಲಿ ಹೆಚ್ಚಾಗಿ ಇರುತ್ತಾರೆ. ಅವರು ಪೂರ್ಣ ಶಿವೋಪಾಸಕರಾಗಿರುತ್ತಾರೆ. ಪುರಾತನ ಕಾಲದಲ್ಲಿ ಅವರು ಅದ್ವೈತಿಗಳಿರಲಿಲ್ಲ, ಆದರೆ ಮುಂದೆ ಅವರು ಕ್ರಮೇಣ ಅದ್ವೈತ ಮಾರ್ಗವನ್ನು ಅನುಸರಿಸುತ್ತ ಬಂದರು.

ವೀರಶೈವರು ಕರ್ನಾಟಕದಲ್ಲಿ ಬಹು ದೊಡ್ಡ ಸಮಾಜವಾಗಿದೆ. ಅವರು

ಅದ್ವೈತಿಗಳಾಗಿದ್ದಾರೆ. ಪರಶಿವನಲ್ಲಿ ಸಾಮರಸ್ಯವನ್ನು ಹೊಂದುವದೇ ಅವರ ಧ್ಯೇಯವಾಗಿದೆ. ಇದನ್ನು ಹೊಂದಲು ಒಂದು ಸಾಧನೆಯನ್ನು ಅವರು ಕಲ್ಪಿಸಿ ಕೊಂಡಿದ್ದು, ಅದೇ ಷಟ್‌ಸ್ಥಲ ಸಿದ್ಧಾಂತವಾಗಿರುತ್ತದೆ. ಈ ವೀರಶೈವ ಸಿದ್ಧಾಂತವು ಒಂದೇಯಾಗಿದ್ದು ಅದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ . ಅದು ನಿಶ್ಚಿತ ಸ್ವರೂಪುಳ್ಳ ದ್ದಾಗಿದೆ. ಆದರೆ ವೀರಶೈವ ಸಿದ್ಧಾಂತವನ್ನು ನಿರೂಪಿಸುವ ಷಟ್‌ಸ್ಥಲ ಗ್ರಂಥಗಳನ್ನು ಪರಿಶೀಲಿಸುವದು ಕಡಿಮೆಯಾದ ಕಾಲಗಳಲ್ಲಿ ಅದಕ್ಕೆ ಒಪ್ಪಿಗೆಯಾಗದಂತಹ ಆಚಾರ ವಿಚಾರಗಳು ಅದರಲ್ಲಿ ಸೇರಿಕೊಂಡಿದ್ದು ಕಂಡುಬರುತ್ತದೆ. ಹಾಗೆಯೇ ವೀರಶೈವರು ಅಲ್ಪ ಸಂಖ್ಯಾಕರಿದ್ದೆಡೆಗಳಲ್ಲಿ ವೀರಶೈವಕ್ಕೆ ಹೊರತಾದ ಆಚಾರಗಳು ಸೇರಿಕೊಂಡಿವೆ. ಮತ್ತು ವೇದಾಂತ ಮಾರ್ಗದಲ್ಲಿರುವ ಬ್ರಾಹ್ಮಣರ ಕರ್ಮಗಳನ್ನೂ ಆಗಮ ಮಾರ್ಗ ದಲ್ಲಿರುವ ಕ್ರಿಯಾ ಚರ್ಯಾಪಾದದೊಳಗಿನ ಆಚಾರಗಳನ್ನೂ ವೀರಶೈವ ಧರ್ಮ ದಲ್ಲಿ ಸೇರಿಸುವ ಪ್ರಯತ್ನಗಳೂ ಒಂದೊಂದು ಕಾಲದಲ್ಲಿ ನಡೆದವು. ಇಂಥ ಪ್ರಯತ್ನಗಳು ತೆಲಗು ಪ್ರಾಂತದಲ್ಲಿಯೂ ನಡೆದುದು ತೋರಿಬರುತ್ತದೆ. ಈಚೆಗೆ ವೀರಶೈವ ಧರ್ಮಗುರುಗಳು ಕೆಲವು ಪ್ರಾಂತಗಳಲ್ಲಿ ಇತರ ಸಮಾಜಗಳಲ್ಲಿಯವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟು ವೀರಶೈವರನ್ನಾಗಿ ಮಾಡಿದ್ದಾರೆ. ಇದು ದ್ರಾವಿಡ ಮತ್ತು ಮಲಯಾಳ ಪ್ರಾಂತಗಳಲ್ಲಿ ಹೆಚ್ಚಾಗಿ ತೋರಿಬರುತ್ತದೆ. ಕರ್ನಾಟಕದಲ್ಲಿಯೂ ಕೂಡ ಇದು ತೋರಿಬರುತ್ತದೆ. ಹೀಗೆ ಕೂಡಿಸಲ್ಪಟ್ಟ ಸಮಾಜಗಳಲ್ಲಿ ವೀರಶೈವಕ್ಕೆ ಹೊರತಾದ ಮಿಶ್ರಪದ್ಧತಿಗಳು ತಲೆದೋರಿವೆ. ಇದರಂತೆಯೇ ಕೆಲವೊಂದು ಕಾಲದಲ್ಲಿ ವೀರಶೈವರಲ್ಲಿಯ ಕೆಲವು ಪಂಗಡಗಳು ಕರ್ಮಠತನಕ್ಕೆ ಒಲಿದು ''ಶೀಲ''ಗಳನ್ನು ನಿರ್ಮಿಸಿಕೊಂಡು ಆಚರಿಸುತ್ತ ಬಂದವು. ಈ ಶೀಲಗಳನ್ನು ವಚನಕಾರರು ಆಗಿಂದಾಗ್ಗೆ ನಿಷೇಧಿಸುತ್ತ ಬಂದಿದ್ದಾರೆ. ಮುಂದೆ ಕೆಳದಿಯ ರಾಜರ ಕಾಲದಲ್ಲಿ ಸಹ ಅನೇಕ ಧರ್ಮಗ್ರಂಥಗಳು ರಚಿಸಲ್ಪಟ್ಟಿವೆ. ಆ ಕಾಲದಲ್ಲಿಯೂ ಮಿಶ್ರವಾದ ಹೊಸ ಪದ್ಧತಿಗಳನ್ನು ವೀರಶೈವ ಧರ್ಮದಲ್ಲಿ ಸೇರಿಸುವ ಪ್ರಯತ್ನ ಗಳೂ ನಡೆದವು. ಇವುಗಳನ್ನು ಪ್ರತಿಪಾದಿಸುವ ಗ್ರಂಥಗಳೂ ಆಗ ಕೆಲವು ಉಂಟಾದವು. ಹೀಗೆ ಅನೇಕ ಕಾರಣಗಳ ಮೂಲಕ ಬೇರೆ ಬೇರೆ ಕಡೆಗೆ ಇರುವ ವೀರಶೈವ ಸಮಾಜದಲ್ಲಿ ರೀತಿ, ನಡತೆ, ಆಚಾರಗಳು ಭಿನ್ನ ಭಿನ್ನ ತೆರನಾಗಿರುತ್ತವೆ. ಆದರೆ ಅವು ನಿಜವಾದ ವೀರಶೈವ ಧರ್ಮಕ್ಕೆ ಅನುಸಾರವಾದವುಗಳಲ್ಲ. ಮತ್ತು ಅವುಗಳನ್ನು ಪುರಸ್ಕರಿಸುವ ಗ್ರಂಥಗಳೂ ವೀರಶೈವರಿಗೆ ಗ್ರಾಹ್ಯವಾದವುಗಳಲ್ಲ.

ಆದರೆ ೧೧ನೇ ಶತಮಾನದಿಂದ ೧೫ನೇ ಶತಮಾನಗಳ ವರೆಗೆ ಉತ್ಪನ್ನವಾದ ವಚನವಾಙ್ಮಯದಲ್ಲಿ ಇಂಥ ಮಿಶ್ರಣಗಳು ಕಂಡುಬರುವದಿಲ್ಲ. ಅವು ಷಟ್‌ಸ್ಥಲ ಮಾರ್ಗವನ್ನು ಸಂಪೂರ್ಣವಾಗಿ ಹೊಂದಿಕೊಂಡಂಥವೂ ಉಚ್ಚ ವಿಚಾರವುಳ್ಳವೂ ಇವೆ. ಇವು ವೀರಶೈವರಿಗೆ ಮುಖ್ಯ ಆಧಾರ ಗ್ರಂಥಗಳಾಗಿವೆ. ಅವುಗಳ ತತ್ವಗಳನ್ನು ವಿಶದಪಡಿಸುವಂಥ ಅನೇಕ ಬಗೆಯ ವಚನ ಸಂಗ್ರಹಗಳೂ ಇತರ ಗ್ರಂಥಗಳೂ

ಕಾಲಕಾಲಕ್ಕೆ ಉಂಟಾದವು. ಅದರಂತೆಯೇ ಈ ವಾಙ್ಮಯದಲ್ಲಿಯ ತತ್ವಗಳನ್ನು ಪ್ರತಿಪಾದಿಸುವಂಥ ಅನೇಕ ಸಂಸ್ಕೃತ ಗ್ರಂಥಗಳೂ ಕೂಡ ಹೊರಟಿವೆ. ಮುಂದೆ ಜನರಿಗೋಸ್ಕರ ಅನೇಕ ಪಂಡಿತರು ಶಿವಶರಣರ ಪುರಾಣಗಳನ್ನು ರಚಿಸಿ ಅವುಗಳ ಮೂಲಕ ವೀರಶೈವ ಮತತತ್ವಗಳನ್ನು ನಿರೂಪಿಸಿದ್ದಾರೆ. ಹಾಗೆಯೇ ಅನೇಕ ರಗಳೆಗಳೂ, ತ್ರಿಪದಿಗಳೂ, ಷಟ್‌ಪದಿಗಳೂ, ಸಾಧುವರ್ಯರ ಪದಗಳೂ, ಉಂಟಾಗಿವೆ. ಹೀಗೆ ಪುರಾತನ ಪರಂಪರೆಯುಳ್ಳ ಒಂದು ಮಹತ್ತರವಾದ ವೀರಶೈವ ವಾಙ್ಮಯವು ಅಸ್ತಿತ್ವದಲ್ಲಿ ಬಂದಿದೆ. ಇವೆಲ್ಲವುಗಳು ವೀರಶೈವರಿಗೆ ಮಾನ್ಯವಾದ ಗ್ರಂಥಗಳಾಗಿವೆ.

ಅನುಬಂಧ–೧೪

ವೀರಶೈವ ಧರ್ಮದ ಉಗಮವು ಮತ್ತು ಅದರ ಪ್ರವರ್ತಕರು

ಬೌದ್ಧ, ಕ್ರಿಶ್ಚನ್, ಮುಸಲ್ಮಾನ ಧರ್ಮಗಳಂತೆ ವೀರಶೈವ ಧರ್ಮವು ಒಬ್ಬಾನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಾಪಿತವಾದುದಲ್ಲ. ಅದಕ್ಕೆ ಒಂದು ಪುರಾತನ ಪರಂಪರೆ ಇದೆ. ವೀರಶೈವ ಧರ್ಮವು ವೇದಾಗಮಗಳಿಂದ ಪ್ರಣೀತ ವಾದುದೆಂದು ಅದರಲ್ಲಿರುವ ಗ್ರಂಥಗಳಲ್ಲಿ ಆಗಿಂದಾಗ್ಗೆ ಹೇಳಲ್ಪಡುವದುಂಟು. ವೀರಶೈವ ಮತತತ್ವಗಳನ್ನು ನಾವು ವಿವೇಚಿಸಿದಲ್ಲಿ ಈ ಅಭಿಪ್ರಾಯವೇ ಬಲ ಪಡುತ್ತದೆ.ಇದರಲ್ಲಿ ವೇದೋಪನಿಷತ್ತುಗಳಲ್ಲಿಯ ಪರಬ್ರಹ್ಮದ ವಿಚಾರಗಳು ಕಂಡು ಬರುತ್ತವೆ. ಆಗಮಗಳಲ್ಲಿ ಉಕ್ತವಾಗಿರುವ ಅನೇಕ ಆಚಾರವಿಷಯಕ ಪದ್ಧತಿಗಳೂ ತತ್ವಗಳೂ ಇದರಲ್ಲಿ ಹೇಳಲ್ಪಟ್ಟಿರುತ್ತವೆ. ಷಟ್‌ಸ್ಥಲಶಾಸ್ತ್ರದ ಅನೇಕ ಸ್ಥಲಗಳಲ್ಲಿ ಯೋಗಾಭ್ಯಾಸದ ಮೂಲತತ್ವಗಳು ಕಂಡುಬರುತ್ತವೆ. ಕರಣಹಸಿಗೆಯಲ್ಲಿ ಸಾಂಖ್ಯ ಶಾಸ್ತ್ರದ ತತ್ವಗಳನ್ನು ಕಾಣಬಹುದು. ಸ್ಥಲಗಳಲ್ಲಿ ಒಂದಾದ ಸಂಸಾರ ಹೇಯಸ್ಥಲ ಮತ್ತು ಭಕ್ತಸ್ಥಲ ಇವುಗಳಲ್ಲಿ ಭಕ್ತಿಮಾರ್ಗದ ತತ್ವಗಳನ್ನೂ ನೈತಿಕಾಚಾರಗಳನ್ನೂ ಕಾಣಬಹುದು. ಷಟ್‌ಸ್ಥಲದ ಮೂರನೆಯ ಸ್ಥಲವಾದ ಪ್ರಸಾದಿಸ್ಥಲದಲ್ಲಿ ಭಗವದ್ಗೀತೆಯ ನಿಷ್ಕಾಮ ಕರ್ಮದ ಆಚರಣೆಗಳಿರುತ್ತವೆ. ಹೀಗೆ ಹಿಂದೂಧರ್ಮದ ಮಹತ್ವದ ಧರ್ಮಗ್ರಂಥಗಳಲ್ಲಿರುವ ಉದಾತ್ತತತ್ವಗಳು ವೀರಶೈವ ಧರ್ಮದಲ್ಲಿ ಪೋಣಿಸಲ್ಪಟ್ಟಿರುತ್ತವೆ. ಹಿಂದೂ ಮತಗಳಲ್ಲಿಯ ಸಾರವನ್ನು ಒಳಗೊಳ್ಳುವ ಪ್ರಯತ್ನ ಗಳು ವೀರಶೈವ ಧರ್ಮದಲ್ಲಿ ಕಾಲಕಾಲಕ್ಕೆ ಮಾಡಲ್ಪಡುತ್ತ ಬಂದಿರುತ್ತವೆ. ಆದುದ ರಿಂದ ವೀರಶೈವ ಮತವು ಕೆಲವೊಂದು ಕಾಲದಲ್ಲಿ ಒಬ್ಬಾನೊಬ್ಬ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳಿಂದ ಬುದ್ಧಿಪರಸ್ಸರವಾಗಿ ನಿರ್ಮಾಣವಾದುದೆಂದು ಹೇಳಲಿಕ್ಕೆ ಬರಲಾರದು. ವೀರಶೈವವು ಶೈವಧರ್ಮೀಯರಲ್ಲಿ ಕಾಲಕಾಲಕ್ಕೆ ಉಂಟಾದ ಉತ್ಕ್ರಾಂತಿಯ ಪರಿಣಾಮವಾಗಿದೆ. ಅದು ಮೇಲ್ಕಂಡ ಸಂಗತಿಗಳಿಂದ ಕಂಡು ಬರುತ್ತದೆ. ವೀರಶೈವ ಧರ್ಮಪ್ರಸಾರದ ಕಾರ್ಯಗಳು ೧೧ನೆಯ ಶತಮಾನದಿಂದ

೧೩ನೆಯ ಶತಮಾನದವರೆಗೆ ದಕ್ಷಿಣ ಹಿಂದುಸ್ತಾನದಲ್ಲಿ ಬಹು ಪ್ರಬಲವಾಗಿ ನಡೆಯಿತು. ಆಗ ಅಸಂಖ್ಯ ಶಿವಶರಣರು ಕರ್ನಾಟಕಾಂಧ್ರ ತಮಿಳುದೇಶಗಳಲ್ಲಿ ಉತ್ಪನ್ನರಾದರು. ಇವರಿಂದಲೇ ವೀರಶೈವ ಧರ್ಮ ತತ್ವಗಳು ಇಲ್ಲಿ ಪ್ರಸಾರ ಹೊಂದಿದವು. ಇವರಲ್ಲಿ ಹಲವರು ವೀರಶೈವ ಷಟ್‌ಸ್ಥಲ ಸ್ಥಾಪನಾಚಾರ್ಯವರ್ಯ ಎಂದು ಕರೆಯಲ್ಪಟ್ಟರೂ ಅವರು ಧರ್ಮಪ್ರವರ್ತಕರೇ ಹೊರತು ಧರ್ಮಸ್ಥಾಪಕರೆಂದು ಹೇಳಲಿಕ್ಕೆ ಬರಲಾರದು. ಹೀಗೆ ಈ ಅವಧಿಯಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದರೂ ಅದಕ್ಕೂ ಪೂರ್ವದಲ್ಲಿಯೇ ಅದರ ಉಗಮವು ಉಂಟಾಗಿತ್ತು ಆಗ ಅದರ ಸ್ವರೂಪು ಯಾವ ತರದ್ದಿತ್ತೆಂಬುದು ಇನ್ನೂ ಸಂಶೋಧಿಸಲ್ಪಡತಕ್ಕ ವಿಷಯವಾಗಿದೆ.*

■■

* ನೋಡಿ ಅನುಬಂಧ–೨೧.

ಅನುಬಂಧ–೧೫*

ಮೂವತ್ತಾರು ತತ್ವಗಳು

೧. ಪರತತ್ವ (ಮಹಾಸಾದಾಖ್ಯ+ಶಾಂತ್ಯಾತೀತೋತ್ತರ ಕಲೆ)
೨. ಶಿವಸಾದಾಖ್ಯ
೩. ಅಮೂರ್ತಸಾದಾಖ್ಯ
೪. ಮೂರ್ತಸಾದಾಖ್ಯ
೫. ಕರ್ತೃಸಾದಾಖ್ಯ
೬. ಕರ್ಮಸಾದಾಖ್ಯ
೭. ಶಾಂತ್ಯಾತೀತಕಲೆ
೮. ಶಾಂತಿಕಲೆ
೯. ವಿದ್ಯಾಕಲೆ
೧೦. ಪ್ರತಿಷ್ಠಾಕಲೆ
೧೧. ನಿವೃತ್ತಿಕಲೆ

ಪಂಚಸಾದಾಖ್ಯ ಪಂಚಕಲೆಗಳು ಕೂಡಿ ವಿದ್ಯಾತತ್ವವೆನ್ನುತ್ತಾರೆ. ಆತ್ಮತತ್ವವು ಇಪ್ಪತ್ತೈದು ತತ್ವಗಳಾಗಿ ಕೆಳಗಿನಂತೆ ವಿಕಾಸಗೊಳ್ಳುವದು.

೧)	ಆಕಾಶ	೧೦)	ಚಿತ್ತ	೧೯)	ಸ್ಪರ್ಶ
೨)	ವಾಯು	೧೧)	ನಾಶಿಕ	೨೦)	ಶಬ್ದ
೩)	ಅಗ್ನಿ	೧೨)	ನಾಲಿಗೆ	೨೧)	ಗುದ
೪)	ಜಲ	೧೩)	ನೇತ್ರ	೨೨)	ಗುಹ್ಯ
೫)	ಪೃಥ್ವಿ	೧೪)	ತ್ವಕ್ಕು	೨೩)	ಪಾದ
೬)	ಜೀವ (ಭಾವ)	೧೫)	ಶ್ರೋತ್ರ	೨೪)	ಪಾಣಿ
೭)	ಮನ	೧೬)	ಗಂಧ	೨೫)	ಬಾಯಿ
೮)	ಅಹಂಕಾರ	೧೭)	ರಸ		
೯)	ಬುದ್ಧಿ	೧೮)	ರೂಪ		

ಹೀಗೆ ಒಂದು ಪರತತ್ವ, ಹತ್ತು ವಿದ್ಯಾತತ್ವಗಳು, ಇಪ್ಪತ್ತೈದು ಆತ್ಮತತ್ವಗಳು ಕೂಡಿ ಮೂವತ್ತಾರು ತತ್ವಗಳಾಗುತ್ತವೆ.

* ಇಲ್ಲಿಂದ ೨೧ರ ವರೆಗಿನ ಅನುಬಂಧಗಳನ್ನು ಪ್ರೊ॥ ವಿ. ವೀ. ಸಂಗಮದ ರಾಣೆಬೆನ್ನೂರು ಅವರು ಬರೆದು ಸೇರಿಸಿದ್ದಾರೆ.

ಮಾನವ ದೇಹ ಸಂರಚನೆ : (Formation of Human body)

ಸ್ಥೂಲ ಪಂಚೀಕರಣ :

ಪೃಥ್ವೀತತ್ವ : ೧) ಅಸ್ಥಿ ೨) ಮಾಂಸ ೩) ತ್ವಕ್ಕು,
೪) ನರ ೫) ಕೇಶ

ಜಲತತ್ವ: ೧) ಕಫ, ೨) ಮೂತ್ರ ೩) ಪಿತ್ತ
೪) ರಕ್ತ ೫) ವೀರ್ಯ

ಅಗ್ನಿತತ್ವ: ೧) ಕ್ಷುಧ ೨) ತೃಷೆ ೩) ನಿದ್ರಾ
೪) ಆಲಸ್ಯ ೫) ಸಂಗ

ವಾಯು ತತ್ವ : ೧) ಹರಿಯುವದು (ಧಾವನಂ)
೨) ಹಾರುವದು (ವಲ್ಗನಂ)
೩) ಸುಳಿಯುವದು (ಕುಂಚನಂ)
೪) ಅಗಲುವದು (ವಿಯೋಗ)
೫) ಕೂಡುವದು (ಪ್ರಚಾರಣಂ)

ಆಕಾಶತತ್ವ : ೧) ರಾಗ ೨) ದ್ವೇಷ ೩) ಭಯ
೪) ಅಭಿಮಾನ ೫) ಮೋಹ.

ಸೂಕ್ಷ್ಮ ಪಂಚೀಕರಣ :

ಪೃಥ್ವಿತತ್ವ : ೧) ಗುದ ೨) ಗುಹ್ಯ ೩) ಪಾದ
೪) ಪಾಣಿ ೫) ಬಾಯಿ

ಜಲತತ್ವ: ೧) ಗಂಧ ೨) ರಸ ೩) ರೂಪ,
೪) ಸ್ಪರ್ಶ ೫) ಶಬ್ದ

ಅಗ್ನಿತತ್ವ: ೧) ನಾಶಿಕ ೨) ನಾಲಿಗೆ ೩) ನೇತ್ರ
೪) ತ್ವಕ್ಕು ೫) ಶ್ರೋತ್ರ (ಕಿವಿ)

ವಾಯುತತ್ವ: ೧) ಪ್ರಾಣ ೨) ಅಪಾನ ೩) ವ್ಯಾನ
೪) ಉದಾನ ೫) ಸಮಾನ

ಆಕಾಶತತ್ವ : ೧) ಚಿತ್ತ ೨) ಬುದ್ಧಿ ೩) ಅಹಂಕಾರ
೪) ಮನ ೫) ಜ್ಞಾನ

ಅಂತಃಕರಣಚತುಷ್ಟಯಗಳು :
೧) ಚಿತ್ತ ೨) ಬುದ್ಧಿ ೩) ಮನ
೪) ಅಹಂಕಾರ

ಚತುಷ್ಟಯಸಾರಾಯಗಳು :
೧) ಗುರು ೨) ಲಿಂಗ ೩) ಜಂಗಮ
೪) ಪ್ರಸಾದ

ದಶನಾಡಿಗಳು : ೧) ಇಡಾ ೨) ಪಿಂಗಳಾ ೩) ಸುಷುಮ್ನ
೪) ಗಾಂಧಾರಿ ೫) ಹಸ್ತಿಜಿಪ್ವೆ ೬) ಪೂಷೆ
೭) ಪಯಸ್ವಿನಿ ೮) ಅಲಂಬು ೯) ಲಕುಹ
೧೦) ಶಂಕಿಣಿ.

ದಶವಾಯುಗಳು :೧) ಪ್ರಾಣ ೨) ಅಪಾನ ೩) ವ್ಯಾನ
೪) ಉದಾನ ೫) ಸಮಾನ ೬) ನಾಗ
೭) ಕೂರ್ಮ ೮) ಕೃಕರ ೯) ದೇವದತ್ತ
೧೦) ಧನಂಜಯ

ದಶಚಕ್ರಗಳು : ೧) ಆಧಾರ ೨) ಸ್ವಾಧಿಷ್ಠಾನ ೩) ಮಣಿಪೂರಕ
೪) ಅನಾಹತ ೫) ವಿಶುದ್ಧಿ ೬) ಆಜ್ಞಾ
೭) ಸಹಸ್ರಾರ ೮) ಶಿಖಾ ೯) ಪಶ್ಚಿಮ
೧೦) ಅಣು

ಗುಪ್ತೋತ್ತರ

ವಾಯುಗಳು : ೧) ವೈರಂಭಣ ೨) ಮುಖ್ಯ ೩) ಪ್ರಭಂಜನ
೪) ಅಂತರ್‌ವಾಯು ೫) ಮಹಾಪ್ರಾಣ

ಅಷ್ಟಾತ್ಮಗಳು : ೧) ಜೀವಾತ್ಮ ೨) ಅಂತರಾತ್ಮ ೩) ಪರಮಾತ್ಮ
೪) ನಿರ್ಮಲಾತ್ಮ ೫) ಶುದ್ಧಾತ್ಮ ೬) ಜ್ಞಾನಾತ್ಮ
೭) ಮಹಾತ್ಮ ೮) ಭೂತಾತ್ಮ

ಅಷ್ಟತನುಗಳು : ೧) ಸ್ಥೂಲತನು ೨) ಸೂಕ್ಷ್ಮತನು ೩) ಕಾರಣತನು
೪) ನಿರ್ಮಲತನು ೫) ಆನಂದತನು ೬) ಚಿನ್ಮಯತನು
೭) ಚಿದ್ರೂಪತನು ೮) ಶುದ್ಧತನು.

ಸಪ್ತಧಾತುಗಳು : ೧) ರಸ (ಅನ್ನರಸ) ೨) ರುಧಿರ (ರಕ್ತ) ೩) ಮಾಂಸ
೪) ಮೇಧಸ್ಸು (ಕೊಬ್ಬು) ೫) ಮಜ್ಜ
೬) ಅಸ್ಥಿ ೭) ವೀರ್ಯ ಮತ್ತು ಶುಕ್ಲ

ಪಂಚಕೋಶಗಳು:೧) ಅನ್ನಮಯ ೨) ಪ್ರಾಣಮಯ ೩) ಮನೋಮಯ
೪) ವಿಜ್ಞಾನಮಯ ೫) ಆನಂದಮಯ

ಪಂಚಾಗ್ನಿಗಳು : ೧) ಉದರಾಗ್ನಿ ೨) ಮಂದಾಗ್ನಿ ೩) ಕಾಮಾಗ್ನಿ
೪) ಶೋಕಾಗ್ನಿ ೫) ವಡಬಾಗ್ನಿ

ಅಂಗ ಚತುಷ್ಟಯಗಳು :
೧) ಅಂಗ ೨) ಪ್ರತ್ಯಂಗ ೩) ಸಾಂಗಾಂಗ
೪) ಉಪಾಂಗ

ತನುತ್ರಯಗಳು : ೧) ಸ್ಥೂಲತನು ೨) ಸೂಕ್ಷ್ಮತನು ೩) ಕಾರಣತನು
ಗುಣತ್ರಯ : ೧) ಸತ್ವ ೨) ರಜ ೩) ತಮ
ಆತ್ಮತ್ರಯ : ೧) ಜೀವಾತ್ಮ ೨) ಅಂತರಾತ್ಮ ೩) ಪರಮಾತ್ಮ
ಜೀವತ್ರಯ : ೧) ವಿಶ್ವ ೨) ತೈಜಸ್ ೩) ಪ್ರಾಜ್ಞ
ಅವಸ್ಥಾತ್ರಯ : ೧) ಜಾಗ್ರ ೨) ಸ್ವಪ್ನ ೩) ಸುಷುಪ್ತಿ
ಸದ್ಭಾವತ್ರಯ: ೧) ಪ್ರಕಾಶನ ೨) ಪ್ರವರ್ತನ ೩) ಮೋಹನ
ಮನತ್ರಯ : ೧) ಮನ ೨) ಮನನ ೩) ಮನನೀಯ
ತ್ರಿಕರಣತ್ರಯ: ೧) ಮಾನಸ ೨) ವಾಚಕ ೩) ಕಾಯಕ
ಲಕ್ಷಣತ್ರಯ : ೧) ಸತ್ ೨) ಚಿತ್ ೩) ಆನಂದ

ಅಷ್ಟಮೂರ್ತಿ

ಮದಂಗಳು : ೧) ಪೃಥ್ವೀಮದ ೨) ಜಲಮದ ೩) ಅಗ್ನಿಮದ
೪) ವಾಯುಮದ ೫) ಆಕಾಶಮದ ೬) ಸೂರ್ಯಮದ
೭) ಚಂದ್ರಮದ ೮) ಆತ್ಮಮದ

ಅಂತರಂಗದ

ಅಷ್ಟಮದಗಳು : ೧) ಸಂಸ್ಥಿತಮದ ೨) ತೃಣೀಕೃತಮದ ೩) ವರ್ತಿನಿಮದ
೪) ಕ್ರೋಧಿನಿಮದ ೫) ಮೋಹಿನಿಮದ ೬) ಅತಿಚಾರಿಣಿಮದ
೭) ಗಂಧಚಾರಿಣಿಮದ ೮) ವಾಸಿನಿಮದ

ಬಹಿರಂಗ

ಅಷ್ಟಮದಗಳು: ೧) ಕುಲಮದ ೨) ಛಲಮದ ೩) ಧನಮದ
೪) ರೂಪಮದ ೫) ಯೌವನ ಮದ ೬) ವಿದ್ಯಾಮದ
೭) ರಾಜ್ಯಮದ ೮) ತಪೋಮದ

ಸಪ್ತವ್ಯಸನಗಳು : ೧) ತನುವ್ಯಸನ ೨) ಮನವ್ಯಸನ ೩) ಧನವ್ಯಸನ
೪) ರಾಜ್ಯವ್ಯಸನ ೫) ವಿಶ್ವವ್ಯಸನ ೬) ಉತ್ಸಾಹವ್ಯಸನ
೭) ಸೇವಕವ್ಯಸನ

ಷಡೂರ್ಮಿಗಳು: ೧) ಹಸಿವು ೨) ನೀರಡಿಕೆ ೩) ಶೋಕ
೪) ಮೋಹ ೫) ಜನನ ೬) ಮರಣ

ಅರಿಷಡ್

ವರ್ಗಂಗಳು : ೧) ಕಾಮ ೨) ಕ್ರೋಧ ೩) ಲೋಭ
೪) ಮೋಹ ೫) ಮದ ೬) ಮತ್ಸರ

ಷಡ್‌ಭ್ರಮೆಗಳು: ೧) ಜಾತಿ ೨) ವರ್ಣ ೩) ಆಶ್ರಮ
೪) ಕುಲ ೫) ಗೋತ್ರ ೬) ನಾಮ

ಷಡ್ಭಾವ

ವಿಕಾರಗಳು : ೧) ಅಸ್ತಿತೆ ೨) ಜಾಯತೆ ೩) ವಿವರಿಣತೆ
೪) ವಿವರ್ಧತೆ ೫) ಅಪಕ್ಷತೆ ೬) ವಿನಸ್ಯತೆ

ಪಂಚಕ್ಲೇಶಗಳು : ೧) ಅವಿದ್ಯೆ ೨) ಅಸ್ಮಿತೆ ೩) ರಾಗ
೪) ದ್ವೇಷ ೫) ಅಭಿನಿವೇಶ

ಅಹಂಕಾರತ್ರಯ: ೧) ಸಾತ್ವಿಕ ೨) ರಾಜಸ ೩) ತಾಮಸ

ಇಹಲೋಕದ

ತಾಪತ್ರಯಗಳು: ೧) ಆಧ್ಯಾತ್ಮಿಕ ೨) ಆಧಿಭೌತಿಕ ೩) ಆಧಿದೈವಿಕ

ಸ್ವರ್ಗಲೋಕದ

ತಾಪತ್ರಯಗಳು: ೧) ಕ್ಷಯ ೨) ಅತಿಶಯ ೩) ಸಾಹಸಪತನ

ದುರ್ಭಾವತ್ರಯ: ೧) ಜ್ಞಾನ ವಿಕೃತಿಭಾವ ೨) ವರ್ತನವಿಕೃತಿಭಾವ
೩) ಮೋಹನವಿಕೃತಿಭಾವ

ತ್ರಿದೋಷಗಳು : ೧) ವಾತ ೨) ಪಿತ್ತ ೩) ಕಫ

ತ್ರಿವಿಧಮಲ : ೧) ಆಣವ ೨) ಮಾಯಾ ೩) ಕಾರ್ಮಿಕ

ತ್ರಿವಿಧ

ಕರ್ಮಗಳು : ೧) ಪ್ರಾರಬ್ಧ ೨) ಸಂಚಿತ ೩) ಆಗಾಮಿ.

ಅನುಬಂಧ–೧೬

ಷೋಡಷಾಕೃತಿಗಳು : ೧) ತಾರಕಾಕೃತಿ ೨) ದಂಡಕಾಕೃತಿ
೩) ಕುಂಡಲಾಕೃತಿ ೪) ಅರ್ಧಚಂದ್ರಾಕೃತಿ
೫) ದರ್ಪಣಾಕೃತಿ ೬) ಜ್ಯೋತಿರಾಕೃತಿ
೭) ಅಖಂಡ ಜ್ಯೋತಿರಾಕೃತಿ ೮) ಅಖಂಡ ಮಹಾಜ್ಯೋತಿರಾಕೃತಿ
೯) ಅಖಂಡ ಮಹಾಪರಿಪೂರ್ಣಜ್ಯೋತಿರಾಕೃತಿ ೧೦) ನಿಃಕಳಾಕೃತಿ
೧೧) ನಿಶ್ಶೂನ್ಯಾಕೃತಿ ೧೨) ನಿರಾಲಂಬಾಕೃತಿ ೧೩) ನಿಃಪ್ರಪಂಚಾಕೃತಿ
೧೪) ನಿಜಾನಂದಾಕೃತಿ ೧೫) ನಿಃಕಾಮ್ಯಾಕೃತಿ ೧೬) ನಿರಂಜನಾಕೃತಿ

ಅಧಿದೇವತೆಗಳು : ೧) ಬ್ರಹ್ಮ ೨) ವಿಷ್ಣು ೩) ರುದ್ರ ೪) ಈಶ್ವರ
೫) ಸದಾಶಿವ ೬) ಮಹೇಶ್ವರ ೭) ಪರಮೇಶ್ವರ
೮) ಸರ್ವೇಶ್ವರ ೯) ಮಹಾದೇವ

ನವಾಂಗಗಳು : ೧) ಪೃಥ್ವಿ ೨) ಅಪ್ಪು ೩) ಅಗ್ನಿ
೪) ವಾಯು ೫) ಆಕಾಶ ೬) ಆತ್ಮಾಂಗ
೭) ತ್ಯಾಗಾಂಗ ೮) ಭೋಗಾಂಗ ೯) ಯೋಗಾಂಗ

ನವಸಾದಾಖ್ಯಗಳು : ೧) ಕರ್ಮಸಾದಾಖ್ಯ ೨) ಕರ್ತೃಸಾದಾಖ್ಯ
೩) ಮೂರ್ತಿ ಸಾದಾಖ್ಯ ೪) ಅಮೂರ್ತಿ ಸಾದಾಖ್ಯ
೫) ಶಿವಸಾದಾಖ್ಯ ೬) ಮಹಾಸಾದಾಖ್ಯ
೭) ಅಗಮ್ಯ ಸಾದಾಖ್ಯ ೮) ಅಗೋಚರ ಸಾದಾಖ್ಯ
೯) ಅಪ್ರಮಾಣ ಸಾದಾಖ್ಯ.

ನವಕಲೆಗಳು : ೧) ನಿವೃತ್ತಿಕಲೆ ೨) ಪ್ರತಿಷ್ಠಾಕಲೆ ೩) ವಿದ್ಯಾಕಲೆ
೪) ಶಾಂತಿಕಲೆ ೫) ಶಾಂತ್ಯಾತೀತ ಕಲೆ
೬) ಶಾಂತ್ಯಾತೀತೋತ್ತರ ಕಲೆ ೭) ಅನಾದಿ ಕಲೆ
೮) ನಿರ್ಮಾಯ ಕಲೆ ೯) ಅನಿರ್ವಾಚ್ಯ ಕಲೆ

ನವವೇದಗಳು : ೧) ಋಗ್ವೇದ ೨) ಯಜುರ್ವೇದ ೩) ಸಾಮವೇದ
೪) ಅಥರ್ವವೇದ ೫) ಅಜಪವೇದ ೬) ಗಾಯತ್ರಿವೇದ
೭) ಧನುರ್ವೇದ ೮) ಗಂಧರ್ವವೇದ ೯) ಸದ್ಭೋಷವೇದ

ನವನಾದಗಳು : ೧) ಭ್ರಮರನಾದ ೨) ವೀಣಾನಾದ ೩) ಘಂಟಾನಾದ
೪) ಭೇರಿನಾದ ೫) ಮೇಘನಾದ ೬) ಪ್ರಣಮನಾದ
೭) ದಿವ್ಯನಾದ ೮) ಸಿಂಹನಾದ ೯) ಮಹಾನಾದ

ಲಕ್ಷಣಗಳು : ೧) ಸತ್ತು ೨) ಚಿತ್ತು ೩) ಆನಂದ
೪) ನಿತ್ಯ ೫) ಪರಿಪೂರ್ಣ ೬) ಅಖಂಡ
೭) ಅನಾಮಯ ೮) ಅಗಮ್ಯ ೯) ಅವಿರಳ

ನವವರ್ಣಗಳು : ೧) ಪೀತ ೨) ಶ್ವೇತ ೩) ಹರಿತ
೪) ಮಾಂಜಿಷ್ಠ ೫) ಕಪೋತ ೬) ಮಾಣಿಕ್ಯ
೭) ಜ್ಯೋತಿರ್ವರ್ಣ ೮) ಮಹಾಜ್ಯೋತಿರ್ವರ್ಣ
೯) ಅಗಣಿತ ಮಹಾಜ್ಯೋತಿರ್ವರ್ಣ.

ನವಸಂಜ್ಞೆಗಳು: ೧) ಪರ ೨) ಗೂಢ ೩) ಶರೀರಸ್ಥ
೪) ಲಿಂಗಕ್ಷೇತ್ರ ೫) ಅನಾದಿವಸ್ತು ೬) ಮಹಾಸಂಜ್ಞೆ
೭) ಅಪ್ರಮಾಣ ೮) ನಿರ್ನಾಮ ೯) ಅವಿರಳ

ನವದಿಕ್ಕುಗಳು : ೧) ಪೂರ್ವ ೨) ಪಶ್ಚಿಮ ೩) ಉತ್ತರ
೪) ದಕ್ಷಿಣ ೫) ಊರ್ಧ್ವ ೬) ಪಾತಾಳ
೭) ಪಾಯು ೮) ದಿವ್ಯಾನಂದಘೋಷ ೯) ಹೃತ್ಕಮಲ.

ನವಲಿಂಗಗಳು : ೧) ಆಚಾರಲಿಂಗ ೨) ಗುರುಲಿಂಗ ೩) ಶಿವಲಿಂಗ
೪) ಜಂಗಮಲಿಂಗ ೫) ಪ್ರಸಾದಲಿಂಗ ೬) ಮಹಾಲಿಂಗ
೭) ನಿಃಕಲಲಿಂಗ ೮) ನಿಶ್ಶೂನ್ಯಲಿಂಗ ೯) ನಿರಂಜನಲಿಂಗ

ನವಾಂಗಗಳು
(ನವಸ್ಥಲಗಳು): ೧) ಭಕ್ತ ೨) ಮಹೇಶ ೩) ಪ್ರಸಾದಿ
೪) ಪ್ರಾಣಲಿಂಗಿ ೫) ಶರಣ ೬) ಐಕ್ಯ
೭) ನಿಷ್ಕಲಂಗ ೮) ನಿಶ್ಶೂನ್ಯಾಂಗ ೯) ನಿರಂಜನಾಂಗ

ನವವಿಧ ಶಕ್ತಿಗಳು: ೧) ಕ್ರಿಯಾಶಕ್ತಿ ೨) ಜ್ಞಾನಶಕ್ತಿ ೩) ಇಚ್ಛಾಶಕ್ತಿ
೪) ಆದಿಶಕ್ತಿ ೫) ಪರಾಶಕ್ತಿ ೬) ಚಿಚ್ಛಕ್ತಿ
೭) ನಿರಾಲಂಬಶಕ್ತಿ ೮) ನಿಭ್ರಾಂತಶಕ್ತಿ ೯) ನಿರವಯಶಕ್ತಿ

ನವವಿಧ
ಭಕ್ತಿಗಳು : ೧) ಶ್ರದ್ಧಾಭಕ್ತಿ ೨) ನಿಷ್ಠಾಭಕ್ತಿ ೩) ಸಾವಧಾನಭಕ್ತಿ
೪) ಅನುಭವಭಕ್ತಿ ೫) ಆನಂದಭಕ್ತಿ ೬) ಸಮರಸಭಕ್ತಿ
೭) ಪರಿಪೂರ್ಣಭಕ್ತಿ ೮) ಅಪ್ರಮಾಣಭಕ್ತಿ ೯) ನಿರವಯಭಕ್ತಿ

ನವವಿಧ
ಪ್ರಣಮಗಳು : ೧) ನಕಾರ ೨) ಮಕಾರ ೩) ಶಿಕಾರ
೪) ವಕಾರ ೫) ಯಕಾರ ೬) ಓಂಕಾರ
೭) ಬಕಾರ ೮) ಸಕಾರ ೯) ವಕಾರ

ನವವಿಧ
ಮುಖಿಗಳು : ೧) ಘ್ರಾಣ ೨) ಜಿಹ್ವೆ ೩) ನೇತ್ರ
೪) ತ್ವಕ್ ೫) ಶ್ರೋತ್ರ ೬) ಹೃದಯ
೭) ಬ್ರಹ್ಮರಂಧ್ರ ೮) ಉನ್ಮನಿ ೯) ಪಶ್ಚಿಮ

ನವವಿಧ
ಹಸ್ತಗಳು : ೧) ಸುಚಿತ್ತ ೨) ಸುಬುದ್ಧಿ ೩) ನಿರಹಂಕಾರ
೪) ಸುಮನ ೫) ಸುಜ್ಞಾನ ೬) ಸದ್ಭಾವ
೭) ನಿರ್ನಾಮ ೮) ನಿಷ್ಕಳಂಕ ೯) ನಿರಾಳ

ನವವಿಧ
ಪದಾರ್ಥಗಳು: ೧) ಗಂಧ ೨) ರಸ ೩) ರೂಪು
೪) ಸ್ಪರ್ಶನ ೫) ಶಬ್ದ ೬) ತೃಪ್ತಿ
೭) ಆನಂದ ೮) ಪರಿಪೂರ್ಣ ೯) ಅವಿರಳ

ನವವಿಧ
ಪ್ರಸಾದಗಳು : ೧) ಸುಗಂಧ ೨) ಸುರಸ ೩) ಸುರೂಪು
೪) ಸುಸ್ಪರ್ಶನ ೫) ಸುಶಬ್ದ ೬) ಸಂತೃಪ್ತಿ
೭) ನಿಃಕಲ ಪರಮಾನಂದ ೮) ನಿಜಾನಂದ ಪರಿಪೂರ್ಣ
೯) ಮಹಾಅವಿರಳಾನಂದ

ಅನುಬಂಧ–೧೭

ಷಟ್‌ಸ್ಥಲ : ೧) ಭಕ್ತ ೨) ಮಹೇಶ ೩) ಪ್ರಸಾದಿ
೪) ಪ್ರಾಣಲಿಂಗಿ ೫) ಶರಣ ೬) ಐಕ್ಯ

ಆಚಾರಲಿಂಗ
ತ್ರಿವಿಧ : ೧) ಸದಾಚಾರ ೨) ನಿಯತಾಚಾರ ೩) ಗಣಾಚಾರ

ಗುರುಲಿಂಗ
ತ್ರಿವಿಧ : ೧) ದೀಕ್ಷೆ ೨) ಶಿಕ್ಷಾ ೩) ಸ್ವಾನುಭಾವ

ಶಿವಲಿಂಗ
ತ್ರಿವಿಧ : ೧) ಇಷ್ಟಲಿಂಗ ೨) ಪ್ರಾಣಲಿಂಗ ೩) ತೃಪ್ತಿಲಿಂಗ

ಜಂಗಮಲಿಂಗ
ತ್ರಿವಿಧ : ೧) ಸ್ವಯ ೨) ಚರ ೩) ಪರ

ಪ್ರಸಾದಲಿಂಗ
ತ್ರಿವಿಧ : ೧) ಶುದ್ಧ ೨) ಸಿದ್ಧ ೩) ಪ್ರಸಿದ್ಧ

ಮಹಾಲಿಂಗ
ತ್ರಿವಿಧ : ೧) ಪಿಂಡಜ ೨) ಅಂಡಜ ೩) ಬಿಂದುಜ

ಭಕ್ತಸ್ಥಲ ತ್ರಿವಿಧ: ೧) ಗುರುಭಕ್ತ ೨) ಲಿಂಗಭಕ್ತ ೩) ಜಂಗಮಭಕ್ತ

ಮಹೇಶಸ್ಥಲ
ತ್ರಿವಿಧ : ೧) ಇಹಲೋಕವೀರ ೨) ಪರಲೋಕವೀರ ೩) ಲಿಂಗವೀರ

ಪ್ರಸಾದಸ್ಥಲ
ತ್ರಿವಿಧ : ೧) ಅರ್ಪಿತಪ್ರಸಾದಿ ೨) ಅವಧಾನಪ್ರಸಾದಿ
೩) ಪರಿಣಾಮಪ್ರಸಾದಿ

ಪ್ರಾಣಲಿಂಗಸ್ಥಲ
ತ್ರಿವಿಧ : ೧) ಆಚಾರಪ್ರಾಣಿ ೨) ಲಿಂಗಪ್ರಾಣಿ ೩) ಜಂಗಮಪ್ರಾಣಿ.

ಶರಣಸ್ಥಲ ತ್ರಿವಿಧ:೧) ಇಷ್ಟಲಿಂಗಾರ್ಚಕ ೨) ಪ್ರಾಣಲಿಂಗಾರ್ಚಕ
೩) ತೃಪ್ತಿಲಿಂಗಾರ್ಚಕ

ಐಕ್ಯಸ್ಥಲ ತ್ರಿವಿಧ: ೧) ಕಾಲಲಿಂಗೈಕ್ಯ ೨) ಜೀವಲಿಂಗೈಕ್ಯ ೩) ಭಾವಲಿಂಗೈಕ್ಯ

ಷಡ್‌ವಿಧ ಷಟ್‌ಸ್ಥಲಗಳು

ಭಕ್ತಸ್ಥಲ : ೧) ಆಚಾರಾಂಗ ೨) ಗೌರವಾಂಗ ೩) ಶಿವಾಂಗ
೪) ಚರಾಂಗ ೫) ಪ್ರಸಾದಾಂಗ ೬) ಮಹದಾಂಗ

ಮಹೇಶಸ್ಥಲ : ೧) ಆಚಾರನಿಷ್ಠೆ ೨) ಗುರುನಿಷ್ಠೆ ೩) ಲಿಂಗನಿಷ್ಠೆ
೪) ಚರನಿಷ್ಠೆ ೫) ಪ್ರಸಾದನಿಷ್ಠೆ ೬) ಮಹನ್ನಿಷ್ಠೆ

ಪ್ರಸಾದಿಸ್ಥಲ : ೧) ಆಚಾರಾವಧಾನಿ ೨) ಗೌರವಾವಧಾನಿ ೩) ಲಿಂಗಾವಧಾನಿ
೪) ಚರಾವಧಾನಿ ೫) ಪ್ರಸಾದಾವಧಾನಿ ೬) ಮಹದಾವಧಾನಿ

ಪ್ರಾಣಲಿಂಗಿಸ್ಥಲ: ೧) ಸಾಧ್ಯ ೨) ವೇದ್ಯ ೩) ಬೋಧ್ಯ
೪) ಯೋಗ್ಯ ೫) ಸನ್ನಿಹಿತ ೬) ಮಹಾನುಭಾವಿ

ಶರಣಸ್ಥಲ : ೧) ಆಯತ ೨) ಸ್ವಾಯತ ೩) ಸನ್ನಿಹಿತ
೪) ಕಳಾಗ್ರಾಹಕ ೫) ಮನೋಮಗ್ನತೆ ೬) ಘನಸಾಮರಸ್ಯ

ಐಕ್ಯ ಸ್ಥಲ : ೧) ಆಚಾರತೃಪ್ತಿ ೨) ಗೌರವತೃಪ್ತಿ ೩) ಲಿಂಗತೃಪ್ತಿ
೪) ಚರತೃಪ್ತಿ ೫) ಪ್ರಸಾದತೃಪ್ತಿ ೬) ನಿರ್ಭಾವತೃಪ್ತಿ

ಷಡ್‌ವಿಧ ಲಿಂಗಸ್ಥಲಗಳು

ಆಚಾರಲಿಂಗಸ್ಥಲ: ೧) ಕ್ರಿಯೆ ೨) ಮಂತ್ರ ೩) ನಿರೀಕ್ಷಣ
೪) ಯಜನ ೫) ಈಳನ ೬) ವೇಧಾ

ಗುರುಲಿಂಗಸ್ಥಲ: ೧) ಕ್ರಿಯಾದೀಕ್ಷೆ ೨) ಮಂತ್ರದೀಕ್ಷೆ ೩) ವೇದಾದೀಕ್ಷೆ
೪) ಬೋಧಾದೀಕ್ಷೆ ೫) ಪ್ರಸನ್ನದೀಕ್ಷೆ ೬) ನಿರ್ವಾಣದೀಕ್ಷೆ

ಶಿವಲಿಂಗಸ್ಥಲ: ೧) ಕರ ೨) ನಯನ ೩) ಮಂತ್ರ
೪) ಹೃದಯ ೫) ತ್ರಿಕೂಟ ೬) ಲಯ

ಚರಲಿಂಗಸ್ಥಲ : ೧) ಸ್ವಯ ೨) ಚರ ೩) ಪರ
೪) ಪರಿಣಾಮಿ ೫) ನಿರುಪಾಧಿಕ ೬) ಪರಿಪೂರ್ಣ

ಪ್ರಸಾದಲಿಂಗಸ್ಥಲ:೧) ಇಂದ್ರಿಯಾನಂದ ೨) ಪ್ರಾಣಾನಂದ ೩) ಜ್ಞಾನಾನಂದ
೪) ಭಾವಾನಂದ ೫) ತುರೀಯಾನಂದ ೬) ಮಹದಾನಂದ

ಮಹಾಲಿಂಗಸ್ಥಲ: ೧) ಅಂಡಾಕಾಶ ೨) ಬಿಂದ್ವಾಕಾಶ ೩) ಮಹದಾಕಾಶ
೪) ಭಾವಗಮ್ಯ ೫) ಸರ್ವತತ್ವಾಶ್ರಯ
೬) ಪರಿಪೂರ್ಣಪ್ರಕಾಶ

ಅನುಬಂಧ–೧೮

ಏಕೋತ್ತರಶತಸ್ಥಲ

ಅಂಗಸ್ಥಲಗಳು : ೪೪

ಲಿಂಗಸ್ಥಲಗಳು : ೫೭

ಅಂಗಸ್ಥಲಗಳು

ಭಕ್ತಸ್ಥಲ ೧) ಪಿಂಡಸ್ಥಲ ೯) ಭಕ್ತಿಸ್ಥಲ
೨) ಪಿಂಡಜ್ಞಾನಸ್ಥಲ ೧೦) ಉಭಯಸ್ಥಲ
೩) ಸಂಸಾರಹೇಯಸ್ಥಲ ೧೧) ತ್ರಿವಿಧ ಸಂಪತ್ತುಸ್ಥಲ

೪) ಗುರುಕರುಣಸ್ಥಲ
೫) ಲಿಂಗಧಾರಣಸ್ಥಲ
೬) ವಿಭೂತಿಸ್ಥಲ
೭) ರುದ್ರಾಕ್ಷಿಸ್ಥಲ
೮) ಪಂಚಾಕ್ಷರಿಸ್ಥಲ
೧೨) ಚತುರ್ವಿಧಸಾರಾಯಸ್ಥಲ
೧೩) ಉಪಾಧಿ ಮಾಟಸ್ಥಲ
೧೪) ನಿರುಪಾಧಿಮಾಟಸ್ಥಲ
೧೫) ಸಹಜಮಾಟಸ್ಥಲ

ಮಹೇಶಸ್ಥಲ : ೧) ಮಹೇಶ್ವರಸ್ಥಲ ೨) ಲಿಂಗನಿಷ್ಠಾಸ್ಥಲ
೩) ಪೂರ್ವಾಶ್ರಯನಿರಸನಸ್ಥಲ
೪) ವಾಗದ್ವೈತನಿರಸನಸ್ಥಲ ೫) ಆಹ್ವಾನನಿರಸನಸ್ಥಲ
೬) ಅಷ್ಟತನುಮೂರ್ತಿನಿರಸನಸ್ಥಲ
೭) ಸರ್ವಗತ ನಿರಸನಸ್ಥಲ ೮) ಶಿವಜಗನ್ಮಯಸ್ಥಲ
೯) ಭಕ್ತದೇಹಿಕಲಿಂಗಸ್ಥಲ

ಪ್ರಸಾದಿಸ್ಥಲ : ೧) ಪ್ರಸಾದಿಸ್ಥಲ ೨) ಗುರುಮಹಾತ್ಮೆಯಸ್ಥಲ
೩) ಲಿಂಗಮಹಾತ್ಮೆಯಸ್ಥಲ ೪) ಜಂಗಮಮಮಹಾತ್ಮೆಯಸ್ಥಲ
೫) ಭಕ್ತಮಹಾತ್ಮೆಯಸ್ಥಲ ೬) ಶರಣ ಮಹಾತ್ಮೆಯಸ್ಥಲ
೭) ಪ್ರಸಾದಮಹಾತ್ಮೆಯಸ್ಥಲ

ಪ್ರಾಣಲಿಂಗಿಸ್ಥಲ: ೧) ಪ್ರಾಣಲಿಂಗಿಸ್ಥಲ ೨) ಪ್ರಾಣಲಿಂಗಾರ್ಚನೆಯಸ್ಥಲ
೩) ಶಿವಯೋಗಸಮಾಧಿಸ್ಥಲ ೪) ಲಿಂಗನಿಜಸ್ಥಲ
೫) ಅಂಗನಿಜಸ್ಥಲ

ಶರಣಸ್ಥಲ : ೧) ಶರಣಸ್ಥಲ ೨) ತಾಮಸನಿರಸನಸ್ಥಲ
೩) ನಿರ್ದೇಶನಸ್ಥಲ ೪) ಶೀಲಸಂಪಾದನೆಸ್ಥಲ

ಐಕ್ಯಸ್ಥಲ : ೧) ಐಕ್ಯಸ್ಥಲ ೨) ಸರ್ವಾಚಾರ ಸಂಪತ್ತುಸ್ಥಲ
೩) ಏಕಭಾಜನಸ್ಥಲ ೪) ಸಹಭೋಜನಸ್ಥಲ

ಲಿಂಗಸ್ಥಲಗಳು

ಆಚಾರಲಿಂಗಸ್ಥಲ :

೧) ಗುರುಲಿಂಗತ್ರಿವಿಧ : ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು
೨) ಶಿವಲಿಂಗತ್ರಿವಿಧ : ಕ್ರಿಯಾಲಿಂಗ, ಜ್ಞಾನಲಿಂಗ, ಭಾವಲಿಂಗ
೩) ಜಂಗಮಲಿಂಗತ್ರಿವಿಧ : ಸ್ವಯ, ಚರ, ಪರ ಒಟ್ಟು ಒಂಬತ್ತು

ಗುರುಲಿಂಗಸ್ಥಲ :

೧) ಆಗಮಲಿಂಗತ್ರಿವಿಧ : ಕ್ರಿಯಾಗಮ, ಜ್ಞಾನಾಗಮ, ಭಾವಾಗಮ
೨) ಕಾಯಲಿಂಗತ್ರಿವಿಧ : ಸಕಾಯ, ಅಕಾಯ, ಪರಕಾಯ

೩) ಆಚಾರಲಿಂಗತ್ರಿವಿಧ : ಧರ್ಮಾಚಾರ, ಜ್ಞಾನಾಚಾರ, ಭಾವಾಚಾರ ಒಟ್ಟು ಒಂಬತ್ತು

ಶಿವಲಿಂಗಸ್ಥಲ :

೧) ಅನುಗ್ರಹಲಿಂಗತ್ರಿವಿಧ : ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ
೨) ಅರ್ಪಿತಲಿಂಗತ್ರಿವಿಧ : ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ
೩) ತನುಗುಣಲಿಂಗತ್ರಿವಿಧ : ಶಿಷ್ಯ, ಸುಶ್ರೂಷ, ಸೇವ್ಯ. ಒಟ್ಟು ಒಂಬತ್ತು

ಜಂಗಮಲಿಂಗಸ್ಥಲ :

೧) ಒಲವು ಲಿಂಗಸ್ಥಲ ತ್ರಿವಿಧ : ಜೀವಾತ್ಮ ಅಂತರಾತ್ಮ ಪರಮಾತ್ಮ
೨) ನಿರೂಪಲಿಂಗ ತ್ರಿವಿಧ : ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ
೩) ಪ್ರಸಾದಲಿಂಗ ತ್ರಿವಿಧ : ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ
೪) ಪಾದೋದಕಲಿಂಗತ್ರಿವಿಧ : ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ. ಒಟ್ಟು ಹನ್ನೆರಡು

ಪ್ರಸಾದಲಿಂಗಸ್ಥಲ :

೧) ನಿಷ್ಪತ್ತಿ ಲಿಂಗತ್ರಿವಿಧ : ಕ್ರಿಯಾನಿಷ್ಪತ್ತಿ, ಜ್ಞಾನನಿಷ್ಪತ್ತಿ, ಭಾವನಿಷ್ಪತ್ತಿ
೨) ಆಕಾಶಲಿಂಗತ್ರಿವಿಧ : ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ
೩) ಪ್ರಕಾಶಲಿಂಗತ್ರಿವಿಧ : ಕ್ರಿಯಾಪ್ರಕಾಶ, ಜ್ಞಾನಪ್ರಕಾಶ, ಭಾವಪ್ರಕಾಶ ಒಟ್ಟು ಒಂಬತ್ತು

ಮಹಾಲಿಂಗಸ್ಥಲ :

೧) ಲಿಂಗೈಕ್ಯನ ಕೊಂಡುದುಪ್ರಸಾದ
೨) ನಿಂದುದೋಗರ
೩) ಚರಾಚರನಾಸ್ತಿ
೪) ಭಾಂಡ
೫) ಭಾಜನ
೬) ಅಂಗಲೇಪನ
೭) ಸ್ವಯಪರವರಿಯದಸ್ಥಲ
೮) ಭಾವಾಭಾವ ನಷ್ಟಸ್ಥಲ
೯) ಜ್ಞಾನಶೂನ್ಯಸ್ಥಲ

ಒಟ್ಟು ಒಂಬತ್ತು

ಎಲ್ಲ ಸೇರಿ ಒಟ್ಟು ಲಿಂಗಸ್ಥಲಗಳು ಐವತ್ತೇಳು.

ಅನುಬಂಧ–೧೯

ಏಕೋತ್ತರ ಶತಸ್ಥಲದ ವಿವೇಚನೆ :

ವಚನಸಾಹಿತ್ಯ ಪರಂಪರೆಯಲ್ಲಿ ನೂರೊಂದುಸ್ಥಲ ಅಥವಾ ಏಕೋತ್ತರ ಶತಸ್ಥಲ ಪರಿಭಾವನೆ (Concept) ಎಂದಿನಿಂದ ಬಂದಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಸ್ವಲ್ಪ ಕಷ್ಟಸಾಧ್ಯವಾಗಿದೆ. ಹನ್ನೆರಡನೆಯ ಮತ್ತು ಹದಿನಾರನೆಯ ಶತಮಾನದ ಶರಣರು, ಏಕೋತ್ತರಶತಸ್ಥಲದ ಸಂರಚನೆಯ ಅಡಿಯಲ್ಲಿ, ಷಟ್‌ಸ್ಥಲ ವಿಕಾಸವನ್ನು, ಆಚರಣೆಯ ಹಂತವನ್ನಾಗಿ ಹೆಣೆದಿದ್ದಾರೆ ಎಂಬುದನ್ನು ನಂಬುವದು ಕಷ್ಟ. ಷಟ್‌ಸ್ಥಲದ ಸಾಧನೆಯ ಹಂತವು ಆರು, ಮೂವತ್ತಾರು, ಎರಡುನೂರಾ ಹದಿನಾರು ಹೀಗೆ ಸಾಗುತ್ತದೆ. ಅವುಗಳಲ್ಲಿ ಅಂಗಲಿಂಗದ ಸಾಧನೆ ಸಮಸಮವಾಗಿ ಅಂದರೆ ಸಮಸಮುಚ್ಚಯ ಸಿದ್ಧಾಂತಕ್ಕನುಗುಣವಾಗಿ ಸಾಗುತ್ತದೆ. ಆದರೆ ಏಕೋತ್ತರ ಶತಸ್ಥಲದ ಸಾಧನೆಯು ಮೊದಲು ಅಂಗಸ್ಥಲಗಳಾಗಿ, ನಂತರ ಲಿಂಗಸ್ಥಲಗಳಾಗಿ ಜರುಗುತ್ತದೆ. ಇದು ತತ್ವಜ್ಞಾನದ ದೃಷ್ಟಿಯಿಂದ ಕ್ರಮಸಮುಚ್ಚಯ ಸಾಧನೆಯೆನಿಸುವದು. ಷಟ್‌ಸ್ಥಲ ಅಥವಾ ಶೂನ್ಯಸಿದ್ಧಾಂತದ ಮೂಲಭೂತ ಸಂರಚನೆಯು ಕ್ರಮಸಮುಚ್ಚಯವಾಗದೆ, ಸಮಸಮುಚ್ಚಯವಾಗಿದೆ. ಈ ದೃಷ್ಟಿಯಿಂದ ನೋಡಿದರೆ ಏಕೋತ್ತರಶತಸ್ಥಲಸಿದ್ಧಾಂತವು, ಷಟ್‌ಸ್ಥಲ ಅಥವಾ ಶೂನ್ಯಸಿದ್ಧಾಂತಕ್ಕನುಗುಣವಾಗಿ ಪ್ರತಿಸ್ಪಂದಿಸುತ್ತಿಲ್ಲ. ಆದ್ದರಿಂದ ನೂರೊಂದುಸ್ಥಲದ ಪರಿಭಾವನೆ ಅಥವಾ ಪರಿಕಲ್ಪನೆ, ಬಸವಾದಿ ಶರಣರ ಅನುಭವವೆಂದು ಒಪ್ಪಲಿಕ್ಕಾಗದು. ಇದರ ಪರಿಭಾವನೆಯ ಪರಂಪರೆಯು ಎಂದಿನಿಂದ ಬಂದಿತೆಂಬುದನ್ನು ಷಟ್‌ಸ್ಥಲಸಿದ್ಧಾಂತದ ಅನುಭವದ ಆಧಾರದ ಮೇಲೆ ಪರಿಶೋಧಿಸಿ ನಿಷ್ಕರ್ಷಿಸಬೇಕಾಗಿದೆ. ಏಕೋತ್ತರಶತಸ್ಥಲದಲ್ಲಿ ನಲವತ್ತುನಾಲ್ಕು ಅಂಗಸ್ಥಲಗಳು ಮತ್ತು ಐವತ್ತೇಳು ಲಿಂಗಸ್ಥಲಗಳೆಂದು ವಿಭಾಜಿಸಿ ಇವುಗಳನ್ನು ಷಟ್‌ಸ್ಥಲದಲ್ಲಿ ಸಮೀಕರಿಸಲಾಗಿದೆ. ಅಂಗಸ್ಥಲಗಳು ಷಟ್‌ಸ್ಥಲದ ಆಚರಣೆಯನ್ನು ಕುರಿತು ವಿವರಿಸಲ್ಪಟ್ಟರೆ ಲಿಂಗಸ್ಥಲಗಳು ಈ ಆಚರಣೆಯ ಪರಿಣಾಮಗಳನ್ನು ಕುರಿತು ವಿವರಿಸಲ್ಪಟ್ಟಿವೆ. ಒಟ್ಟಾಗಿ ಈ ನೂರೊಂದುಸ್ಥಲಗಳು ವೀರಶೈವ ಧರ್ಮದ (ಲಿಂಗಾಯತ ಧರ್ಮದ) ಆಚರಣೆಯ ವಿಭಾಗವೆಂದು ಪರಿಗಣಿಸಲಾಗುತ್ತದೆ.

ಏಕೋತ್ತರಶತಸ್ಥಲದ ಪರಂಪರೆಯನ್ನು ಕುರಿತು ಈ ಕೆಳಗಿನ ಸಂಗತಿಗಳು ಕೇಳಿಬರುತ್ತವೆ. ಮೊಗ್ಗೆಯ ಮಾಯಿದೇವರಿಂದ ರಚಿತವಾದುದೆಂದು ಹೇಳಲ್ಪಡುವ ಏಕೋತ್ತರ ಶತಸ್ಥಲದ ರಚನೆಯ ಪ್ರಾರಂಭದಲ್ಲಿ ನೂರೊಂದುಸ್ಥಲದ ಆಚರಣೆಗಳು ಮೂರು ತೆರನಾಗಿವೆ ಎಂದು ಹೇಳಲ್ಪಡುತ್ತದೆ.

೧. ಪಾರ್ವತಿಯು ಪರಮೇಶ್ವರನನ್ನು ಕುರಿತು ಜ್ಞಾನಾಚಾರದ ಮೂರು ಬಗೆಗಳನ್ನು ಕೇಳಿದಾಗ, ಶಿವನು ನೂರೊಂದುಸ್ಥಲದ ವಿವರವನ್ನು ಪಾರ್ವತಿ ಹಾಗೂ ಪ್ರಮಥಗಣಂಗಳಿಗೆ ಕೈಲಾಸದಲ್ಲಿ ಮೊಟ್ಟಮೊದಲು ಬೋಧಿಸಿದನೆಂದು

ಹೇಳಲಾಗಿದೆ. ಇದನ್ನು ತೀವ್ರಗತಿಯ ಸ್ಥಲಾಚರಣೆಯೆಂದು ಭಾವಿಸಲಾಗಿದೆ ಹಾಗೂ ವಿಹಂಗಮನ್ಯಾಯದ ಸಾಧನೆಯೆಂದು ಹೇಳುತ್ತಾರೆ.

೨. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ನೂರೊಂದು ಸ್ಥಲದ ವಿವರವನ್ನು ಚನ್ನಬಸವಾದಿ ಶರಣರಿಗೆ ಮರ್ಕಟನ್ಯಾಯ ಶೈಲಿಯಲ್ಲಿ ಹೇಳಿದರೆಂದು ತಿಳಿಸುತ್ತಾರೆ. ಇದನ್ನು ಮಧ್ಯಗತಿಮಾರ್ಗವೆಂದು ಹಾಗೂ ಮರ್ಕಟನ್ಯಾಯವೆಂದು ಭಾವಿಸಲಾಗಿದೆ.

೩. ಹನ್ನೆರಡನೆಯ ಶತಮಾನದ ನಂತರ ನೂತನ ಗಣಂಗಳಿಗೆ ಪಿಪೀಲಿಕಾ ನ್ಯಾಯದಲ್ಲಿ–ಮಂದಗತಿ ಶೈಲಿಯಲ್ಲಿ–ನೂರೊಂದು ಸ್ಥಲದ ಆಚಾರ ವಿಭೇದಗಳನ್ನು ವಿವರಿಸಲಾಗಿದೆಯೆಂದು ಹೇಳುತ್ತಾರೆ.

ಹೀಗೇ ಈ ಪರಂಪರೆಯನ್ನು ವಿವರಿಸುತ್ತಾ ಏಕೋತ್ತರಶತಸ್ಥಲದ ಪರಂಪರೆಯು ಕೈಲಾಸದ ಶಿವನಿಂದ ಪ್ರಾರಂಭವಾಗಿ ಬಸವಾದಿ ಶರಣರಲ್ಲಿ ಮುಂದುವರೆದು ನಂತರದ ಶತಮಾನಗಳಲ್ಲಿ ಮೊಗ್ಗೆಯ ಮಾಯಿದೇವ, ಜಕ್ಕಣಾರ್ಯ, ಮಹಾಲಿಂಗದೇವ, ಹದಿನೇಳನೇ ಶತಮಾನದ ಸಿದ್ಧಲಿಂಗೇಶ್ವರ, ಗುರುಸಿದ್ಧದೇವ ಮುಂತಾದವರ ಕೃತಿಗಳಲ್ಲಿ ಉಲ್ಲೇಖಗೊಂಡು ಬಂದಿದೆ ಎಂದು ಹೇಳುತ್ತಾರೆ. ಶಿವಾಗಮಗಳಲ್ಲಿ ಸಹ ಏಕೊತ್ತರಶತಸ್ಥಲದ ಪರಂಪರೆಯು ಬಳಿಎಡಿದು ಬಂದಿದೆ. ಅದರ ಸಾರವನ್ನೇ ರೇಣುಕರು ಅಗಸ್ತ್ಯರಿಗೆ ಬೋಧಿಸಿದರೆಂದು ಸಿದ್ಧಾಂತ ಶಿಖಾಮಣಿಯ ಮೂಲಕ ಪ್ರತಿಪಾದಿಸಲಾಗುತ್ತದೆ ಹಾಗೂ ರೇಣುಕರ ಕಾಲದ ಮೇಲೆ ಈ ಸಿದ್ಧಾಂತ ಶಿಖಾಮಣಿಯು ಕ್ರಿ.ಶ.ಪೂ. ೫ನೇ ಶತಮಾನದ ಕಾಲದ್ದೆಂದು ಸಹಿತ ಕೆಲವರು ಪ್ರತಿಪಾದಿಸುತ್ತಾರೆ. ಮೇಲಿನ ಈ ಪರಂಪರೆಯು ಇತಿಹಾಸ ಹಾಗೂ ಅನುಭಾವಕ್ಕೆ ಸರಿಹೊಂದುವುದಿಲ್ಲ. ಯಾಕೆಂದರೆ–

೧) ಕೈಲಾಸದಲ್ಲಿ ಶಿವನು ಪಾರ್ವತಿಗೆ ಹಾಗೂ ಪ್ರಮಥರಿಗೆ ಜ್ಞಾನತ್ರಯಗಳನ್ನು ವಿವರಿಸುವಾಗ ಏಕೋತ್ತರಶತಸ್ಥಲ ಬೋಧಿಸಿದನೆಂಬುದಕ್ಕೆ ವೀರಶೈವೇತರ ಸಂಸ್ಕೃತ ಸಾಹಿತ್ಯದಲ್ಲಿ ಆಧಾರ ಸಿಗುವದಿಲ್ಲ.

೨) ಅದೇ ರೀತಿ ಬಸವಣ್ಣನವರು ಹನ್ನೆರಡನೆಯ ಶತಮಾನದ ಶರಣರಿಗೆ ಷಟ್‌ಸ್ಥಲದ ವಿಕಾಸವನ್ನು ಕುರಿತು ಹೇಳುವಾಗ ಏಕೋತ್ತರಶತಸ್ಥಲದ ಆಚರಣೆಯ ಪ್ರಕ್ರಿಯೆಯನ್ನು ಬೋಧಿಸಿದರೆಂಬುದಕ್ಕೆ ಹನ್ನೆಡನೇ ಶತಮಾನದ ನೈಜ ವಚನಗಳಲ್ಲಿ ಆಧಾರವಿಲ್ಲ.

೩) ಹನ್ನೆರಡನೆಯ ಶತಮಾನದ ನಂತರ ನೂತನ ಗಣಂಗಳಿಗೆ ನೂರೊಂದು ಸ್ಥಲಗಳನ್ನು ಬೋಧಿಸಿದರೆಂದು ಹೇಳಲಾಗುವ ಮೊಗ್ಗೆಯ ಮಾಯಿದೇವನದೆಂದು ಹೇಳುವ ಕೃತಿ, ಜಕ್ಕಣಾರ್ಯ ಹಾಗೂ ಮಹಾಲಿಂಗದೇವರ ಕೃತಿಗಳು, ಸಿದ್ಧಾಂತ ಶಿಖಾಮಣಿಯ ನೂರೊಂದು ಸ್ಥಲದ ವ್ಯಾಖ್ಯೆ, ಸಿದ್ಧಲಿಂಗೇಶ್ವರ ಹಾಗೂ ಗುರುಸಿದ್ಧದೇವರ ವಚನಗಳಲ್ಲಿ ಬರುವ ನೂರೊಂದುಸ್ಥಲದ ವ್ಯಾಖ್ಯೆ ಇವೆಲ್ಲವುಗಳಲ್ಲಿ

ವಿಕಸಾಮ್ಯತೆ ಇಲ್ಲ. ಸ್ವತಃ ಗುರುಸಿದ್ಧದೇವರದೆಂದು ಹೇಳುವ ಈ ಕೆಳಗಿನ ಎರಡು ವಚನಗಳಲ್ಲಿ ವಿಕೋತ್ತರಶತಸ್ಥಲದ ಸಂರಚನೆಯನ್ನು ಕುರಿತು ಭಿನ್ನ ಭಿನ್ನತರದ ವಿರೋಧಾಭಾಸದ ವಿವರವನ್ನು ಕಾಣುತ್ತೇವೆ. ವಚನಗಳು ಹೀಗಿವೆ :

[ವ.ಸಂ ೬೯೫ ಸ.ವ.ಸಂ ೧೦ ಪು ೩೮೭]
ಅಯ್ಯಾ, ಒಂದು ಅನಾದಿ ಮೂಲ ಪ್ರಣಮವೆ
ಸಾಕಾರ ಲೀಲೆಯ ಧರಿಸಿ, ಚಿದಂಗ–ಚಿದ್ಘನಲಿಂಗವಾಗಿ,
ಆ ಒಂದಂಗ ಲಿಂಗವೆ ತ್ರಿವಿಧಾಂಗ ತ್ರಿವಿಧಲಿಂಗವಾಗಿ,
ಆ ತ್ರಿವಿಧ ಲಿಂಗಾಂಗವೆ ಷಡ್ವಿಧಲಿಂಗವಾಗಿ
ಆ ಷಡ್ವಿಧ ಲಿಂಗವೆ ಛತ್ತೀಸ ಲಿಂಗವಾಗಿ
ಆ ಛತ್ತೀಸ ಲಿಂಗಾಂಗಗಳನ್ನೇ ಶ್ರದ್ಧಾದಿ ಛತ್ತೀಸ ಭಕ್ತಿಗಳಲ್ಲಿ ಕೂಟವ ಮಾಡಿ,
ಇಂತು ಲಿಂಗಾಂಗ ಭಕ್ತಿಗಳನೆ ಸತ್ಕ್ರಿಯಾ, ಸಮ್ಯಜ್ಞಾನ
ಸತ್ಯಾಯ ಸತ್ಪಾತ್ರಭಿಷದಲ್ಲಿ ಸಮರಸವ ಮಾಡಿ,
ಆ ಮಹಾಜ್ಞಾನವ ಸಾಧಿಸಿ, ಆ ಮಹಾಜ್ಞಾನದ ಬಲದಿಂದ
ಪೃಥ್ವಿತತ್ವ ಸಂಬಂಧವಾದ ಕರ್ಮೇಂದ್ರಿಯಗಳು,
ಅಪ್ಪುತತ್ವ ಸಂಬಂಧವಾದ ಜ್ಞಾನೇಂದ್ರಿಯಂಗಳು,
ಅಗ್ನಿತತ್ವ ಸಂಬಂಧವಾದ ವಿಷಯಂಗಳು,
ವಾಯುತತ್ವ ಸಂಬಂಧವಾದ ಪ್ರಾಣವಾಯುಗಳು
ಆಕಾಶತತ್ವ ಸಂಬಂಧವಾದ ಕರಣಂಗಳು
ಭಾನುತತ್ವ ಸಂಬಂಧವಾದ ಉದರವೆಂಬ ಭೂತಂಗಳು,
ಶಶಿತತ್ವ ಸಂಬಂಧವಾದ ಶ್ವೇತವರ್ಣ ಮೊದಲಾದ ವರ್ಣಂಗಳು,
ಆತ್ಮತತ್ವ ಸಂಬಂಧವಾದ ಸಮಸ್ತ ನಾದಂಗಳು,
ಇಂತು ಸಮಸ್ತ ತತ್ವಂಗಳು ಕೂಡಲಾಗಿ ನಾಲ್ವತ್ತು ತತ್ವವೆನಿಸುವವು
ಈ ತತ್ವಂಗಳ ಶಿವತತ್ವ, ಅನಾದಿ ಶಿವತತ್ವ,
ಅನಾದಿ ನಿಷ್ಕಲ ಪರಶಿವತತ್ವ, ಅನಾದಿ ನಿಷ್ಕಲ ಪರಾತ್ಪರ ಶಿವತತ್ವೆಂಬ
ಚತುರ್ವಿಧ ತತ್ವಸ್ವರೂಪ ಗುರು–ಲಿಂಗ–ಜಂಗಮ–ಪ್ರಸಾದ ಕೂಡಿಸಿ
ಆ ಮಹಾಜ್ಞಾನದಿಂ ನೋಡಿದಲ್ಲಿ ನಾಲ್ವತ್ತು ನಾಲ್ಕು ತತ್ವಸ್ವರೂಪಿನಿಂದ,
ಒಂದು ಚಿದಂಗವೆನಿಸುವುದಯ್ಯ.
ಆ ಚಿದಂಗದ ಷಟ್‌ಚಕ್ರಗಳಲ್ಲಿ ಶ್ರೀಗುರುಲಿಂಗಜಂಗಮ ಕೃಪೆಯಿಂದ
ಮೂರ್ತಿಗೊಂಡಿರುವ ಐವತ್ತಾರು ಪ್ರಣಮಂಗಳ
ಸಾಕಾರಲೀಲೆಯ ಧರಿಸಿ, ನವಕೃತಿ ಸಂಬಂಧವಾದ
ಅನಾದಿ ಮೂಲ ಪ್ರಣಮವ ಕೂಡಿ ಏಕಸ್ವರೂಪಿನಿಂದ
ಐವತ್ತೇಳು ಲಿಂಗಸ್ವರೂಪ ಪ್ರಣಮವನೊಳಗೊಂಡು
ಒಂದು ಚಿದ್ಘನಲಿಂಗವೆನಿಸುವುದಯ್ಯ.

ಇಂತು ಅಂಗಲಿಂಗವೆಂಬ ನೂರೊಂದು ಸ್ಥಲಕುಳಂಗಳ ವಿಚಾರಿಸಿ,
ಶರಣರೂಪಿನಿಂದ ತನ್ಮಾದಿ ಮಧ್ಯಾವಸಾನವ ತಿಳಿದು
ಕರ್ತೃ ಭೃತ್ಯತ್ವದ ಸದ್ಭಕ್ತಿ ವಿಚಾರವನರಿದು
ದ್ವಾದಶಾಚಾರದ ಮರ್ಮವನರಿದು
ಕರ್ತೃ ಭೃತ್ಯತ್ವಾಚಾರ ಸದ್ಭಕ್ತಿಯೆಂಬ ನಿಜಸಮಾಧಿಯಲ್ಲಿ ನಿಂದು,
ನಿರವಯಲ ಕೂಡುವಂಥಾದ್ದೇ ತತ್ಪದೀಕ್ಷೆ,
ಇಂತುಂಟೆಂದು ಶ್ರೀಗುರು ನಿಷ್ಕಳಂಕ ನಿಜಚೈತನ್ಯಮೂರ್ತಿ
ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.
[ವ.ಸಂ ೬೯೭ ಸ.ವ.ಸಂ. ೧೦ ಪು ೩೮೯]
ಅಯ್ಯ, ನಿನ್ನ ಚಿದಂಗ ಷಟ್‌ಸ್ಥಾನಂಗಳಲ್ಲಿ
ಎಪ್ಪತ್ತೈದು ತತ್ವಂಗಳು ಅಡಗಿರ್ಪವಯ್ಯ.
ಚಿದ್ಘನಲಿಂಗದ ಷಟ್‌ಸ್ಥಾನಂಗಳಲ್ಲಿ
ಹದಿನೆಂಟುತತ್ವಂಗಳು ಅಡಗಿರ್ಪವಯ್ಯ.
ಆ ಚಿದಂಗ ಚಿದ್ಘನಲಿಂಗದ ಮಧ್ಯದಲ್ಲಿ ಬೆಳಗುವ
ಅಖಂಡ ಮಹಾಜ್ಯೋತಿಪ್ರಣವದ ಷಟ್‌ಸ್ಥಾನಂಗಳಲ್ಲಿ
ಅಷ್ಟವಿಧ ತತ್ವಂಗಳು ಅಡಗಿರ್ಪವಯ್ಯ,
ಆ ತತ್ವಂಗಳ ವಿಭಾಗಯೆಂತೆಂದಡೆ;
ಪೃಥ್ವೀತತ್ವ ಇಪ್ಪತ್ತೈದು, ಅಪ್ಪುತತ್ವ ಇಪ್ಪತ್ತು
ಅಗ್ನಿತತ್ವ ಹದಿನೈದು, ವಾಯುತತ್ವ ಹತ್ತು ಆಕಾಶತತ್ವ ಐದು,
ಇಂತು ಎಪ್ಪತ್ತೈದು ತತ್ವಂಗಳು ಆತ್ಮತತ್ವ ಒಂದರಲ್ಲಿ ಅಡಗಿ,
ಇಂಥ ಅನಂತ ಅನಂತ ಆತ್ಮರು ಔದುಂಬರ ವೃಕ್ಷಕ್ಕೆ
ಫಲ ತೋರಿದೋಪಾದಿಯಲ್ಲಿ
ಆ ಚಿದಂಗಕ್ಕೆ ಅನಂತ ಆತ್ಮತತ್ವಂಗಳು ತೋರಿಕೊಂಡಿರ್ಪವು ನೋಡಾ.
ಅಂಥ ಚಿದಂಗ ಹದಿನೆಂಟು ಪ್ರಣವ ರೂಪಿನಿಂದ
ಚಿದ್ಘನ ಲಿಂಗವನಾಶ್ರೈಸಿರ್ಪುದು ನೋಡಾ.
ಆ ಚಿದ್ಘನಲಿಂಗವು ಅಷ್ಟವಿಧ ಸಕೀಲಂಗಳಿಂದ
ಅಖಂಡ ಮಹಾಜ್ಯೋತಿ ಪ್ರಣಮವನಾಶ್ರೈಸಿರ್ಪುದು ಕೋಡಾ.
ಇಂತು ನೂರೊಂದು ಸಕೀಲಂಗಳ ತತ್ವರೂಪಿನಿಂದ ತಿಳಿದು
ಅಂತು ಅಂಗಲಿಂಗಸಂಗದಲ್ಲಿ ಅಡಗಿರುವ
ನೂರೊಂದುತತ್ವ ಸಕೀಲಂಗಳ ನೂರೊಂದು ಸ್ಥಲದಲ್ಲಿ ನೆಲೆಗೊಳಿಸಿ
ಪರತತ್ವ ಲಿಂಗಲೀಲೆಯಿಂದ ನಿಂದ ನಿಲುಗಡೆಯೆ ಅನುಗ್ರಹದೀಕ್ಷೆ.
ಇಂತುಟೆಂದು ಶ್ರೀಗುರು ನಿಷ್ಕಳಂಕ ಸ್ವತಂತ್ರಮೂರ್ತಿ

ಚೆನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ
ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರ.

ಮೇಲಿನ ಈ ಎರಡು ವಚನಗಳನ್ನು ಪರಿಶೀಲಿಸಿದರೆ ಏಕೋತ್ತರಶತಸ್ಥಲದ ಸಂರಚನೆಯು ಸರಿಯಾಗಿ ಕಂಡುಬರುವದಿಲ್ಲ. ಹಾಗೆಯೇ ಮೊಗ್ಗೆಯ ಮಾಯಿದೇವರದೆಂದು ಹೇಳುವ ನೂರೊಂದುಸ್ಥಲದ ವಿವೇಚನೆಗಳು ಈ ವಿವೇಚನೆಗೆ ಸರಿಹೊಂದುವದಿಲ್ಲ. ಹೀಗೆ ತಾತ್ವಿಕವಾಗಿ ನೂರೊಂದುಸ್ಥಲ ವಿವೇಚನೆಯು ಷಟ್‌ಸ್ಥಲವಿವೇಚನೆಯಂತೆ ಸಕ್ರಮವಾಗಿರುವುದಿಲ್ಲ. ಈ ನೂರೊಂದುಸ್ಥಲದ ವಿವೇಚನೆಯ ಪರಂಪರೆಯು ಕೂಡ ನಿಜವೆಂದು ಅನಿಸುವುದಿಲ್ಲ. ನೂರೊಂದು ಸ್ಥಲಕ್ಕೆ ಸಂಬಂಧಪಟ್ಟಂತೆ ಬರೆದ ಸಮಗ್ರಸಾಹಿತ್ಯವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದು ಸಹಜಸಾಹಿತ್ಯವಲ್ಲ. ಇದನ್ನು ಯಾರೋ ಕೆಲವರು ಯಾವುದೋ ಕಾರಣಕ್ಕಾಗಿ ಬರೆದು ಕೃತ್ರಿಮ ಹಾಗೂ ಪ್ರಕ್ಷಿಪ್ತ ರೂಪದಲ್ಲಿ ಜಾರಿಗೆ ತಂದಿದ್ದಾರೆ. ಇದರ ಸಮಗ್ರ ಹಿನ್ನೆಲೆಯನ್ನು ಪರಿಶೀಲಿಸಿದರೆ ಇದು ಹತ್ತೊಂಬತ್ತನೇ ಶತಮಾನದಲ್ಲಿ ಬರೆದ ಸಾಹಿತ್ಯವೆಂದು ನನಗೆ ಅನಿಸುತ್ತದೆ. ಏಕೆಂದರೆ ಈ ಕಾಲದಲ್ಲಿ ಬ್ರಾಹ್ಮಣ ಲಿಂಗಾಯತರೊಡನೆ ಬ್ರಾಹ್ಮಣತ್ವ ಹಾಗೂ ಶೂದ್ರತ್ವದ ವಾದಗಳು ಜರುಗಿದವು. ಇದಕ್ಕೆ ಅನೇಕ ಘರ್ಷಣೆಗಳೇ ಕಾರಣಗಳಾಗಿವೆ. ಅವುಗಳನ್ನು ಕುರಿತು ಪ್ರತ್ಯೇಕ ಗ್ರಂಥ ರಚಿಸಲಿದ್ದೇನೆ. ಈ ಕಾಲದ ಲಿಂಗವಂತ ಪುರೋಹಿತಶಾಹಿಗಳು ಬ್ರಾಹ್ಮಣ ಪುರೋಹಿತಶಾಹಿಗಳೊಂದಿಗೆ ತಮ್ಮನ್ನು ಲಿಂಗೀಬ್ರಾಹ್ಮಣರೆಂದೂ, ವೀರಶೈವ ಬ್ರಾಹ್ಮಣರೆಂದೂ ಸಮರ್ಥಿಸಿಕೊಳ್ಳುತ್ತ ವಾದಕ್ಕಿಳಿದರು. ಈ ಕಾಲದಲ್ಲಿ ಲಿಂಗಾಯತರಿಗೆ ಲಿಂಗಾಯತತತ್ವದ ಸಂಸ್ಕಾರ ಹಾಗೂ ಆಚರಣೆಗಳ ವಿಧಿ ವಿಧಾನಗಳೇನೆಂದು ಪ್ರಶ್ನಿಸಲಾಯಿತು ಹಾಗೂ ಲಿಂಗಾಯತರಲ್ಲಿಯೇ ಹಿಂದೂ ಧರ್ಮದಂತೆ ಕೃತ್ರಿಮವಾದ ಅಪ್ರಾಕೃತ ವರ್ಣಾಶ್ರಮಗಳನ್ನು ಜಾರಿಗೆ ತಲಾಯಿತು. ಇವೆಲ್ಲವುಗಳಿಗೆ ಒಟ್ಟು ಉತ್ತರವಾಗಿ ಲಿಂಗಾಯತ ಧರ್ಮದ ಆಚರಣಾ ವಿಧಾನ ವೆಂದು ಏಕೋತ್ತರಶತಸ್ಥಲದ ಮೂಲಕ ಜಾರಿಗೆ ತರಲಾಯಿತು. ಈ ಮಾತುಗಳನ್ನು ಗುರುಸಿದ್ದದೇವರ ವಚನಗಳೆಂದು ಹೇಳುವ ಸಾಹಿತ್ಯ ಹಾಗೂ ಸಿದ್ಧಾಂತ ಶಿಖಾಮಣಿ ಸಾಹಿತ್ಯವು ಪ್ರತಿಪಾದಿಸುತ್ತದೆ.

ಮೊಗ್ಗೆಯ ಮಾಯಿದೇವರ ಹೆಸರಿನಲ್ಲಿರುವ ವಿಶೇಷಾರ್ಥಪ್ರಕಾಶಿಕೆಯು, ಶಿವಸಿದ್ಧಾಂತಾಗಮ (ಶಿವಸಿದ್ಧಾಂತ ತಂತ್ರ) ದಲ್ಲಿಯ ಭಾಗವೆಂದು ಹೇಳುತ್ತಾರೆ. ಅದೇ ರೀತಿ ಅವರದೆಂದು ಹೇಳುವ ಇನ್ನೊಂದು ಕೃತಿ ಅನುಭವಸೂತ್ರವು ವಾತುಲ ತಂತ್ರದ ಭಾಗವೆಂದು ಹೇಳುತ್ತಾರೆ. ಶಿವಸಿದ್ಧಾಂತತಂತ್ರವೆಂಬ ಆಗಮವೇ ಇಲ್ಲ. ಹಾಗೆಯೇ ಮೂಲ ನೈಜ ವಾತುಲಾಗಮವೆಂಬುದು ಪ್ರಾಪ್ತವಿಲ್ಲ. ಹೀಗಿದ್ದಾಗ ಅನುಭವ ಸೂತ್ರವು ಅದರಲ್ಲಿದೆ ಎಂಬುದನ್ನು ನಂಬಲು ಸಾಧ್ಯವಿಲ್ಲ.

ಇಪ್ಪತ್ತೆಂಟು ಶಿವಾಗಮಗಳಲ್ಲಿ ಏಕೋತ್ತರಶತಸ್ಥಲದ ಪರಂಪರೆ ಇದೆಯೆಂದು,

ಅದರ ಸಾರವೇ ಸಿದ್ಧಾಂತ ಶಿಖಾಮಣಿ ಎಂದು, ಅದು ರೇಣುಕರು ಹೇಳಿದ್ದೆಂದು, ರೇಣುಕರ ಕಾಲ ಕ್ರಿ. ಪೂ. ಐದನೇ ಶತಮಾನವೆಂದು, ಆದ್ದರಿಂದ ಸಿದ್ಧಾಂತ ಶಿಖಾಮಣಿಯ ಕಾಲ ಕ್ರಿ. ಪೂ ಐದನೇ ಶತಮಾನವೆಂದು ಮುಂತಾಗಿ ಪ್ರತಿಪಾದಿಸು ತ್ತಾರೆ. ಇದು ಇತಿಹಾಸಕ್ಕೆ ಸಲ್ಲದ ಮಾತು. ಇಪ್ಪತ್ತೆಂಟು ಶಿವಾಗಮಗಳು ಪ್ರಾಪ್ತವಿಲ್ಲ ವೆಂದು ಆಗಮ ಪರಿಣಿತರು ಅಭಿಪ್ರಾಯಪಡುತ್ತಾರೆ. ಲಭ್ಯವಿದ್ದ ಶಿವಾಗಮಗಳಲ್ಲಿ ವೀರಶೈವರು ಹೇಳುವ ಅಂಶಗಳಿಲ್ಲವೆಂದು ಆಗಮ ಪರಿಣಿತರಾದ ಡಾ.ನಂದೀಮಠರು ಅಭಿಪ್ರಾಯಪಡುತ್ತಾರೆ. ಹೀಗಾಗಿ ಏಕೋತ್ತರಶತಸ್ಥಲದ ಪರಂಪರೆಯು ಆಗಮಗಳ ಕಾಲದ ಪರಂಪರೆ ಎಂದು ಹೇಳುವದು ಕಾಲ ಹಾಗೂ ಇತಿಹಾಸಕ್ಕೆ ವಿರೋಧವಾದ ಮಾತು. ಹಾಗಾದರೆ ಈ ನೂರೊಂದುಸ್ಥಲದ ಪರಂಪರೆ ಎಂದಿನಿಂದ ಬಂತು ಎಂಬುದನ್ನು ಆಳವಾಗಿ ಪರಿಶೋಧಿಸಬೇಕಾಗಿದೆ. ನನಗೆ ಸದ್ಯ ಲಭ್ಯವಿದ್ದ ಆಕರಗಳ ಮೇಲಿಂದ ಹೇಳುವುದಾದರೆ ಇದು ಹದಿನೆಂಟು ಹಾಗೂ ಹತ್ತೊಂಬತ್ತನೇ ಶತಮಾನದಲ್ಲಿ ಪ್ರಚುರಗೊಂಡ ಸಾಹಿತ್ಯವಾಗಿರಬೇಕು. ಬ್ರಾಹ್ಮಣ ರೊಂದಿಗೆ ವಾದಕ್ಕಿಳಿದು ಪ್ರತಿಪಾದಿಸುವ ಪ್ರಸಂಗದಲ್ಲಿ ವೀರಶೈವ ಧರ್ಮದ ಆಚರಣೆಯ ಪ್ರಾಚೀನತೆಯನ್ನು ಪ್ರತಿಪಾದಿಸಲು, ಈ ಸಾಹಿತ್ಯವನ್ನು ರಚಿಸಿರಲಿಕ್ಕೆ ಸಾಕು.

ಈ ಸಾಹಿತ್ಯವನ್ನು ಕೈಲಾಸದಲ್ಲಿ ಶಿವನು ಪಾರ್ವತಿಗೆ ಹಾಗೂ ಪ್ರಮಥ ಗಣಂ ಗಳಿಗೆ ಬೋಧಿಸಿದನೆಂದೂ, ನಂತರ ಶಿವಾಗಮಗಳಲ್ಲಿ ಪ್ರಚಲಿತವಿದೆಯೆಂದೂ, ನಂತರ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಬೋಧಿಸದರೆಂದೂ, ಆಮೇಲೆ ಹದಿನಾಲ್ಕನೇ ಶತಮಾನದಲ್ಲಿ ಮೊಗ್ಗೆಯ ಮಾಯಿದೇವರು ಪ್ರತಿಪಾದಿಸಿದ ರೆಂದೂ, ಹದಿನೈದು, ಹದಿನಾರು ಹಾಗೂ ಹದಿನೇಳನೇ ಶತಮಾನಗಳಲ್ಲಿ ಜಕ್ಕಣಾರ್ಯ, ಮಹಾಲಿಂಗದೇವ, ಹದಿನೇಳನೇ ಶತಮಾನದ ಸಿದ್ಧಲಿಂಗೇಶ್ವರ, ಹತ್ತೊಂಬತ್ತನೇ ಶತಮಾನದ ಗುರುಸಿದ್ಧದೇವ ಮೊದಲಾದವರ ಹೆಸರಿನಲ್ಲಿ ಲಿಂಗಾಯತ ಪುರೋಹಿತಶಾಹಿಗಳು ಈ ಸಾಹಿತ್ಯವನ್ನು ಕೃತ್ರಿಮವಾಗಿ ರಚಿಸುತ್ತಾ ಹಾಗೂ ಪ್ರಕ್ಷಿಪ್ತವಾಗಿ ಸೇರಿಸುತ್ತಾ ಬಂದಿದ್ದಾರೆಂದು ನನ್ನ ಆಲೋಚನೆಯಾಗಿದೆ. ಈ ಏಕೋತ್ತರಶತಸ್ಥಲದ ಸಾಹಿತ್ಯವನ್ನು ಹನ್ನೆರಡನೇ ಶತಮಾನದ ಶರಣರ ವಚನ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡೇ ರಚಿಸಿದ್ದಾರೆ. ಇದೊಂದು ಸಂಕಲನ ಹಾಗೂ ಸಂಪಾದನೆ ಸಾಹಿತ್ಯವೆಂದು ಕಂಡುಬರುವುದು. ಸ್ವತಂತ್ರ ಹಾಗೂ ಅನುಭವ ಪೂರ್ಣವಾದ ಸ್ಥಲರಚನೆ ಇದಲ್ಲ. ವೈದಿಕ ಸಾಹಿತ್ಯದಲ್ಲಿ ಶತಪಥಬ್ರಾಹ್ಮಣವೆಂಬ ರಚನೆಯಿದೆ. ಅದಕ್ಕೆ ಸಂವಾದಿಯಾಗಿ ಈ ಸಾಹಿತ್ಯವನ್ನು ರಚಿಸಿರಲಿಕ್ಕೆ ಸಾಕು ಎಂಬ ಸಂದೇಹವಿದೆ. ಏನೇ ಆದರೂ ಈ ನನ್ನ ಅನಿಸಿಕೆಯು ಅಂತಿಮ ಸತ್ಯವೆಂಬ ಅಭಿಪ್ರಾಯ ನನ್ನದಲ್ಲ. ಇದನ್ನು ಕುರಿತು ನೈಜವಾದ ಆಧಾರಗಳು ದೊರಕಿದರೆ, ಇತಿಹಾಸ, ತತ್ವಜ್ಞಾನ ಹಾಗೂ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿ ಸತ್ಯವೆನಿಸಿದರೆ ಈ ಸಾಹಿತ್ಯವನ್ನು ನೈಜವೆಂದು ಪರಿಗ್ರಹಿಸಲು ಯಾವ ಅಭ್ಯಂತರವೂ ಇರಕೂಡದು.

ಅನುಬಂಧ–೨೦

ಟಿಪ್ಪಣಿಗಳು

೧) ಪರದಲ್ಲಿ ಶಿವನುತ್ಪತ್ಯವಾದನು ಎಂಬುದಕ್ಕೆ ನಿಃಕಲ ಪರಬ್ರಹ್ಮದಲ್ಲಿ ಮಹಾಲಿಂಗ ಉತ್ಪತ್ಯವಾಗಿಹುದು ಎಂದಾಗಬೇಕು. ಆ ಮಹಾಲಿಂಗದಲ್ಲಿ ಚಿಚ್ಛಕ್ತಿ ಯುತ್ಪತ್ಯವಾಗಿಹುದು. ಆ ಶಕ್ತಿಯಲ್ಲಿ ನಾದ ಉತ್ಪತ್ಯವಾಗಿಹುದು. ಆ ನಾದದಲ್ಲಿ ಬಿಂದು ಉತ್ಪತ್ಯವಾಗಿಹುದು. ಆ ಬಿಂದುವಿನಲ್ಲಿ ಕಳೆ ಉತ್ಪತ್ಯವಾಗಿಹುದು. ನಾದ ಬಿಂದು ಕಳೆಗಳಲ್ಲಿ ಅ ಉ ಮ ಪ್ರಣವಗಳುತ್ಪತ್ತಿ. ಇವು ಮೂರು ಒಂದಾಗಿ ಓಂಕಾರ ಉತ್ಪತ್ತಿ. ಓಂಕಾರವೇ ಮಹಾಸಾದಾಖ್ಯವಾಗಿಹುದು. ಮಹಾಸಾದಾಖ್ಯಾದಿ ಕರ್ಮಸಾದಾಖ್ಯಂತದಲ್ಲಿ ಆತ್ಮಾದಿ ಷಟ್‌ತತ್ತ್ವಗಳು ಹುಟ್ಟಿದವು. ಮಹಾಸಾದಾಖ್ಯದ ಓಂಕಾರ ಮುಖದಲ್ಲಿ ಆತ್ಮನು ಉತ್ಪತ್ಯನಾದನು. ಆ ಆತ್ಮನಿಗೆ ಮಹಾಸಾದಾಖ್ಯವು ಅಧಿದೇವತೆಯಾಗಿಹುದು. ಶಿವಸಾದಾಖ್ಯದ 'ಯ' ಕಾರ ಮುಖದಲ್ಲಿ ಆಕಾಶ ಉತ್ಪತ್ಯವಾಗಿವುದು. ಆ ಆಕಾಶಕ್ಕೆ ಶಿವಸಾದಾಖ್ಯವು ಅಧಿದೇವತೆಯಾಗಿಹುದು. ಅಮೂರ್ತಸಾದಾಖ್ಯದ ಮುಖವಾದ 'ವ' ಕಾರ ಪ್ರಣವದಲ್ಲಿ ವಾಯುತತ್ತ್ವ ಉತ್ಪತ್ಯವಾಗಿಹುದು. ಆ ವಾಯುತತ್ತ್ವಕ್ಕೆ ಅಮೂರ್ತಸಾದಾಖ್ಯವು ಅಧಿದೇವತೆಯಾಗಿಹುದು. ಮೂರ್ತಿಸಾದಾಖ್ಯದ ಶಿಕಾರ ಪ್ರಣವ ಮುಖದಲ್ಲಿ ಅಗ್ನಿ ತತ್ತ್ವ ಪುಟ್ಟಿತ್ತು. ಆ ಅಗ್ನಿ ತತ್ತಕ್ಕೆ ಮೂರ್ತಿ ಸಾದಾಖ್ಯವು ಅಧಿದೇವತೆಯಾಗಿಹುದು. ಕರ್ತೃಸಾದಾಖ್ಯದ ಮುಖವಾದ ಮಕಾರ ಪ್ರಣವದಲ್ಲಿ ಜಲತತ್ಪದುತ್ಪತ್ಯವಾಗಿಹುದು. ಆ ಜಲತತ್ವಕ್ಕೆ ಕರ್ತೃಸಾದಾಖ್ಯವು ಅಧಿದೇವತೆಯಾಗಿಹುದು. ಕರ್ಮಸಾದಾಖ್ಯದ ಮುಖವಾದ ನಕಾರ ಪ್ರಣವದಲ್ಲಿ ಪೃಥ್ವಿತತ್ವ ಉತ್ಪತ್ಯವಾಗಿಹುದು. ಆ ಪೃಥ್ವಿ ತತ್ತ್ವಕ್ಕೆ ಕರ್ಮಸಾದಾಖ್ಯವು ಅಧಿದೇವತೆಯಾಗಿಹುದು. ಮಹಾಸಾದಾಖ್ಯದ ಊರ್ಧ್ವ ಮುಖದಲ್ಲಿ ಅಸಂಖ್ಯ ಚಂದ್ರ ಸೂರ್ಯರುತ್ಪತ್ಯರಾದರು. ಹಾಗೂ ಅನಂತ ಕೋಟಿ ಬ್ರಹ್ಮಾಂಡಗಳುತ್ಪತ್ಯವಾದವು. ಹೀಗೆ ಪೌರಾಣಿಕ ಅಧಿದೇವತೆಗಳಿಗೆ ಬದಲಾಗಿ, ತಾತ್ವಿಕ ಅಧಿದೇವತೆಗಳನ್ನು ಸಂಬಂಧಿಸುವುದು ಸೂಕ್ತ.

೨) ಬ್ರಹ್ಮನೇ ಲಕ್ಷ್ಮಿಯು, ಆಕಾಶರೂಪಮಾದ ವಿಷ್ಣುವೆ ಮಹಾದೇವಿಯು, ಆತ್ಮರೂಪ ಮಾದ ಶಿವನೇ ಶಾರದೆಯು (ಮೂ). ಇಲ್ಲಿ ವಚನಕಾರರು ಬ್ರಹ್ಮವಿಷ್ಣು ದೇವತೆಗಳನ್ನು ವಾಯು, ಆಕಾಶಕ್ಕೆ ಹೊಲಿಸುವುದು ಸರಿಯಲ್ಲ, ಬ್ರಹ್ಮ, ವಿಷ್ಣುಗಳು ಪೃಥ್ವಿ, ಜಲದ ದೇವತೆಗಳು. ಸೃಷ್ಟಿ, ಸಂರಕ್ಷಣೆಯ ಕಾರ್ಯ ನಿಯಂತ್ರಣದ ಶಕ್ತಿಗಳು. ಇವು ಶೈವ ತತ್ವದ ಪರಿಭಾವನೆಗಳು. ಇದಕ್ಕೆ ದಾರ್ಶನಿಕ ಪರ್ಯಾಯ ಶಬ್ದಗಳನ್ನಾಗಿ ನಾದ, ಬಿಂದು, ಕಲೆಗಳೆಂದು ಶರಣರು ಪರಿಗ್ರಹಿಸಿ ಅವುಗಳ ಉಪನಿಷ್ಪತ್ತಿಗಳನ್ನಾಗಿ ಸಾದಾಖ್ಯಗಳನ್ನು ಬಳಸಿದ್ದಾರೆ.

೩) ಪಂಚ ವಿಷಯಂಗಳಿಂದಾದುದೇ ಶುದ್ಧತನುವು. ಪಂಚಜ್ಞಾನೇಂದ್ರಿಯಂ

ಗಳಿಂದಾದುದೇ ಚಿದ್ರೂಪತನವು. ಪಂಚ ಪ್ರಾಣವಾಯುಗಳಿಂದಾದುದೇ ಚಿನ್ಮಯ ತನುವು. ಪಂಚ ಕರಣಂಗಳಿಂದಾದುದೇ ಆನಂದತನುವು ಎಂದು ಬದಲಾವಣೆ ಯಾದರೆ ತತ್ವಕ್ಕೆ ಸರಿಹೋಗಬಹುದು.

೪) ಭಾವಾನಂದ ಸಂಗದಿಂ, ಕಾರಣ ಕಳಶರೂಪಮಾದ ಮನಸ್ಸು (ಭಾವ) ಲಯಮಾದಲ್ಲಿ ಜ್ಞಾನಾನಂದವೇ ಕಾರಣ ಮಾಗಿ ಹಾಗೂ ಸದಾನಂದವೇ ಕಾರಣ ಮಾಗಿ ಸ್ಥೂಲ, ಸೂಕ್ಷ್ಮ ಸಂಬಂಧಗಳ ಕಾರಣ ಶರೀರ, ಮನಸ್ಸು, ಜೀವರ, ಮಿಥ್ಯಾಭ್ರಮೆಯು ನಷ್ಟಮಾಗಿ, ಸದಾನಂದ, ಜ್ಞಾನಾನಂದ, ಭಾವಾನಂದ ರೂಪವಾಗುವದು.

೫) ವಸ್ತುಗಳು ಅಧಿಕವಾದಲ್ಲಿ ಅಷ್ಟಮದಗಳಾಗಿಯೂ, ವಸ್ತುಗಳು ಕೊರತೆ ಯಾದಲ್ಲಿ ಸಪ್ತ ವ್ಯಸನಗಳಾಗಿಯೂ ಜೀವನಿಗೆ ಬಾಧಿಸುವವು. ಸಪ್ತವ್ಯಸನಗಳಿಗೆ ವಿವರ :

ತನುವ್ಯಸನ : ಹಸಿವು ತೃಷೆಗಳ ಬಾಧೆ, ದೇಹ ಕ್ಷೀಣದ ಬಾಧೆ.

ಮನವ್ಯಸನ : ಪತ್ನಿ, ಪುತ್ರ, ಮಿತ್ರರ ಬಾಧೆ : ಪತ್ನಿ,ಪುತ್ರ, ಮಿತ್ರರಿಂದುಂಟಾಗುವ ಕೊರತೆಯ ಬಾಧೆ, ಹುಸಿ, ಕಳವು, ಪರಸ್ತ್ರೀಯರ ಬಾಧೆ.

ಧನವ್ಯಸನ : ಧನದ ಕೊರತೆಯ ಬಾಧೆ, ಕಾವ್ಯ ರಸವನ್ನು ಕೇಳಬೇಕು, ಸುಂದರವಾದುದನ್ನು ನೋಡಬೇಕು. ನುಡಿಸಬೇಕು. ಆಲಂಗಿಸಬೇಕು. ಭೋಗಿಸಬೇಕು ಎಂಬುದರ ಬಾಧೆ.

ಸೇವಕವ್ಯಸನ : ಹೋಗುವುದು, ಬರುವುದು, ಕೊಡುವುದು, ಕೊಳ್ಳುವುದು ಇತ್ಯಾದಿಗಳ ಕೊರತೆಯ ಬಾಧೆ. ಆನೆ, ಕುದುರೆ ಮುಂತಾದುವುಗಳ ಕೊರತೆಯ ಬಾಧೆ.

ರಾಜ್ಯವ್ಯಸನ : ಗೃಹ, ಕ್ಷೇತ್ರ ಸೀಮೆ, ರಾಜ್ಯ, ದೇಶ ಮೊದಲಾದವುಗಳ ಕೊರತೆಯ ಬಾಧೆ.

ವಿಶ್ವವ್ಯಸನ : ಛತ್ರ, ಚಾಮರ, ಅಂದಣ, ಕೀರ್ತಿ, ವಾರ್ತೆಗಳ ಬಾಧೆ.

ಉತ್ಸಾಹವ್ಯಸನ : ಸಾಧಿಸುವ, ಬೇಧಿಸುವ, ಗೆಲ್ಲುವ, ಸೋಲಿಸುವ ಮೊದಲಾದವುಗಳ ಬಾಧೆ.

೬) ಷ್ಪಡ್ಬ್ರಮೆಗಳಲ್ಲಿ–ಬಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಭ್ರಮೆ ಜಾತಿ ಹದಿನೆಂಟರೊಳಗೆ ಶ್ರೇಷ್ಠರೆಂಬುದು ಜಾತಿ ಭ್ರಮೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ–ಈ ಚತುರ್ವಿಧವು ಆಶ್ರಮ ಭ್ರಮೆಯು, ಕಮ್ಮಟಿಗ, ವಣಿಜ, ಕಮ್ಮೈತಿಗಳ ಈ ನಾಲ್ಕು ಕುಲಭ್ರಮೆಗಳೆಂದಾದರೆ ಹೆಚ್ಚು ಸೂಕ್ತ.

೭) ಕರ್ಮೇಂದ್ರಿಯ ವಿಕೃತಿಭಾವಕ್ಕೊಳಗಾಗಿ ದುರಾಚಾರದಿಂದ ವರ್ತಿಸುವುದು ವರ್ತನ ವಿಕೃತಿಭಾವ, ಜ್ಞಾನೇಂದ್ರಿಯಗಳು ವಿಕಾರಕ್ಕೊಳಗಾಗಿ ದುರ್ವಿಚಾರಗಳಿಂದ ವರ್ತಿಸುವುದು ಜ್ಞಾನ ವಿಕೃತಿಭಾವ. ಭಾವೇಂದ್ರಿಯಗಳು (ಅಂತಃಕರಣಗಳು) ವಿಕಾರಕ್ಕೊಳಗಾಗಿ ದುರ್ಭಾವಗಳಿಂದ ವರ್ತಿಸುವುದು, ಮೋಹನ ವಿಕೃತಿ ಭಾವ .

೮) ಜಲದೊಳಗಿರ್ಪ ರಸಕ್ಕೆಜಿಹ್ವೇಂದ್ರಿಯವೇ ಕಾರಣಮಾಯಿತ್ತು, ಅಗ್ನಿಯಲ್ಲಿರ್ಪ ರೂಪಿಗೆ ನೇತ್ರೇಂದ್ರಿಯವೇ ಕಾರಣಮಾಯಿತ್ತು, ವಾಯುವಿನೊಳಗಿರ್ಪ ಸ್ಪರ್ಶಕ್ಕೆ ತ್ವಗಿಂದ್ರಿಯವೇ ಕಾರಣಮಾಯಿತ್ತು, ಆಕಾಶದಲ್ಲಿರ್ಪ ಶಬ್ದಕ್ಕೆ ಶ್ರೋತ್ರೇಂದ್ರಿಯವೇ ಕಾರಣಮಾಯಿತ್ತು ಇಂತಪ್ಪ ಭಾವದಲ್ಲಿ ಚಿತ್‌ಶಕ್ತಿ ಹುಟ್ಟಲು ಭಾವವೇ ಮಹಾಲಿಂಗವಾಯಿತ್ತು, ಶಬ್ದದಲ್ಲಿಪರಾಶಕ್ತಿ ಹುಟ್ಟಲು ಶ್ರೋತ್ರವೇ ಪ್ರಸಾದಲಿಂಗವಾಯಿತ್ತು, ಸ್ಪರ್ಶನದಲ್ಲಿ ಆದಿಶಕ್ತಿ ಹುಟ್ಟಲು ತ್ವಕ್ಕೇ ಜಂಗಮ ಲಿಂಗವಾಯಿತ್ತು, ರೂಪಿನಲ್ಲಿ ಇಚ್ಛಾಶಕ್ತಿಹುಟ್ಟಲು ನೇತ್ರವೇ ಶಿವಲಿಂಗವಾಯಿತ್ತು, ರಸದಲ್ಲಿ ಜ್ಞಾನಶಕ್ತಿ ಹುಟ್ಟಲು ಘ್ರಾಣವೇ ಆಚಾರಲಿಂಗವಾಯಿತ್ತು, ಇತ್ಯಾದಿಯಾಗಿ ಹೀಗಿದ್ದರೆ ತತ್ವಕ್ಕೆ ಸರಿಹೋಗುವುದು.

೯) ಪರವಸ್ತುವಿನಿಂದ ಉತ್ಪತ್ತಿಯಾದ ವಿಶ್ವರಚನೆ, ವಿಶ್ವಕಾರ್ಯ, ವರ್ತನೆ ಹಾಗೂ ಕಾರ್ಯ ಪರಿಣಾಮ ಕುರಿತು, ಒಂಬತ್ತು ಹಂತಗಳನ್ನು ಗುರುತಿಸಲಾಗಿದೆ. ಈ ಹಂತಗಳನ್ನು ಪೌರಾಣಿಕ ಭಾಷೆಯಲ್ಲಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹಾದೇವ, ಪರಮೇಶ್ವರ, ಸರ್ವೇಶ್ವರ ಎಂದು ಹೇಳಲಾಗುವುದು. ಕಾಶ್ಮೀರಶೈವ ದಾರ್ಶನಿಕ ಭಾಷೆಯಲ್ಲಿ ಈ ಹಂತಗಳನ್ನೇ ಕರ್ಮ, ಕರ್ತೃ, ಮೂರ್ತ, ಅಮೂರ್ತ, ಶಿವ, ಮಹಾ, ಅಗಮ್ಯ, ಅಗೋಚರ, ಅಪ್ರಮಾಣ ಎಂಬ ಒಂಬತ್ತು ಸಾದಾಖ್ಯಗಳೆಂದು ಹೇಳುವರು. ಈ ಹಂತಗಳನ್ನೇ ಶರಣರು ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾ, ನಿಃಕಲ, ನಿಶ್ಶೂನ್ಯ, ನಿರಂಜನಲಿಂಗಗಳೆಂತಲೂ ಹೇಳುವರು. ವಿಶ್ವಶಾಸ್ತ್ರಕ್ಕನುಗುಣವಾಗಿ (Cosmologically) ಈ ಹಂತಗಳನ್ನೇ ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ , ಪರಮಾತ್ಮ ಎಂದು ಹೇಳಬಹುದು.

ಈ ಮೇಲ್ಕಂಡ ಒಂಬತ್ತು ಹಂತಗಳ ಅಧಿಕರ್ತೃಗಳನ್ನೇ ಅವರವರ ಕ್ರಿಯಾವ್ಯಾಪಾರವನ್ನು (Nature of work) ಗಮನಿಸಿ, ಅವರವರಿಗೆ ಈ ರೀತಿ ಕ್ರಿಯಾನಾಮಪದ ಹಾಗೂ ವಿಶೇಷಣಗಳಿಂದ ಸಂಬೋಧಿಸುತ್ತಾರೆ. ೧) ಸೃಷ್ಟಿಕರ್ತ ೨) ಸಂರಕ್ಷಣ ಕರ್ತ ೩) ಲಯಕರ್ತ ೪) ತಿರೋಧಾನಕರ್ತ ೫) ಅನುಗ್ರಹಕರ್ತ ೬) ಬೋಧಾಕರ್ತ ೭) ದೀಕ್ಷಾಕರ್ತ ೮) ಶಿಕ್ಷಾಕರ್ತ ೯) ಮೋಕ್ಷಾಕರ್ತ ಎಂದು ಮುಂತಾಗಿ.

ಅನು.	ಅಧಿದೇವತೆಗಳು	ದೇವತೆಗಳು (ಅಶಕ್ತಿಗಳು)	ಸಾದಾಖ್ಯಗಳು	ಕಲೆಗಳು	ಲಿಂಗಗಳು	ಶಕ್ತಿಗಳು
೧.	ಬ್ರಹ್ಮ	ಸರಸ್ವತಿ	ಕರ್ಮ	ನಿವೃತ್ತಿ	ಆಚಾರಲಿಂಗ	ಕ್ರಿಯಾಶಕ್ತಿ
೨.	ವಿಷ್ಣು	ಲಕ್ಷ್ಮಿ	ಕರ್ತೃ	ಪ್ರತಿಷ್ಠಾ	ಗುರುಲಿಂಗ	ಜ್ಞಾನಶಕ್ತಿ
೩.	ರುದ್ರ	ಭದ್ರಿ	ಮೂರ್ತ	ವಿದ್ಯಾ	ಶಿವಲಿಂಗ	ಇಚ್ಛಾಶಕ್ತಿ
೪.	ಈಶ್ವರ	ಕಾಳಿ	ಅಮೂರ್ತ	ಶಾಂತಿ	ಜಂಗಮಲಿಂಗ	ಆದಿಶಕ್ತಿ
೫.	ಸದಾಶಿವ	ಕಂಕಾಳಿ	ಶಿವ	ಶಾಂತ್ಯಾತೀತ	ಪ್ರಸಾದಲಿಂಗ	ಪರಾಶಕ್ತಿ
೬.	ಮಹೇಶ್ವರ	ರುದ್ರಾಣಿ	ಮಹಾ	ಶಾಂತ್ಯಾತೀತೋತ್ತರ	ಮಹಾಲಿಂಗ	ಚಿಚ್ಛಕ್ತಿ
೭.	ಪರಮೇಶ್ವರ	ಶಂಕರಿ	ಅಗಮ್ಯ	ಅನಾದಿ	ನಿಃಕಲಲಿಂಗ	ಚಿನ್ಮಾದ ಶಕ್ತಿ
೮.	ಸರ್ವೇಶ್ವರ	ಶರ್ವಾಣಿ	ಅಗೋಚರ	ನಿರ್ಮಾಮ	ನಿಃಶೂನ್ಯ	ಚಿದ್ಬಿಂದುಶಕ್ತಿ
೯.	ಮಹಾದೇವ	ಸರ್ವೇಶ್ವರೀ	ಅಪ್ರಮಾಣ	ಅನಿರ್ವಾಚ್ಯ	ನಿರಂಜನ	ಚಿತ್‌ಕಲಾಶಕಿ

೧೦) ೧. ಮಲತ್ರಯ : ಕಾರ್ಮಿಕಮಲ, ಮಾಯಾಮಲ, ಆಣವಮಲ

೨. ಗುಣತ್ರಯ : ಸತ್ವಗುಣ, ರಜೋಗುಣ, ತಮೋಗುಣ.

೩. ಮನತ್ರಯ : ಮನ, ಮನನ, ಮನನೀಯ.

೪. ಕರಣತ್ರಯ : ಕಾಯಾ, ವಾಚಾ, ಮನಸಾ ಒಂದು ವಿಧ. ಇನ್ನೊಂದು ವಿಧ: ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಭಾವೇಂದ್ರಿಯಗಳು.

೫. ಭೋಗತ್ರಯ: ಮಣ್ಣಿನ ಭೋಗ, ಹೊನ್ನಿನ ಭೋಗ, ಹೆಣ್ಣಿನ ಭೋಗ ಇದು ಒಂದು ವಿಧ. ಇನ್ನೊಂದು ವಿಧ :
ತನುಭೋಗ (ಸಪ್ತ ಧಾತುಗಳ ಭೋಗ)
ಮನಭೋಗ (ಸಕಲ ಇಂದ್ರಿಯಗಳ ಭೋಗ)
ಭಾವಭೋಗ (ನವಭಾವ–ನವರಸಗಳಭೋಗ)

೬. ಯೋಗತ್ರಯ: ಮಣ್ಣಿನಲ್ಲಿಯ ಯೋಗ (ಕೂಡುವಿಕೆ), ಹೊನ್ನಿನಲ್ಲಿಯ ಯೋಗ, ಹೆಣ್ಣಿನಲ್ಲಿಯ ಯೋಗ. ಇವನ್ನೇ ಯೋಗತ್ರಯವೆಂದು ಭಾವಿಸ ಬಹುದು. ಹಾಗೆಯೇ ಲಿಂಗಾಂಗಯೋಗದ ಪೂರ್ವಾಶ್ರಯ ದಲ್ಲಿರುವ ೧. ಕರ್ಮಯೋಗ ೨. ಜ್ಞಾನಯೋಗ ೩. ಭಕ್ತಿ ಯೋಗ ಎಂಬ ಸಾಮಾನ್ಯ ಯೋಗಗಳನ್ನೇ ಯೋಗ ತ್ರಯವೆಂದೂ ಕೂಡಾ ಭಾವಿಸಬಹುದು. ಈ ಪ್ರಾಪಂಚಿಕ ಯೋಗತ್ರಯಂಗಳನ್ನು ನೀಗಿ ೧. ಇಷ್ಟ ಲಿಂಗಯೋಗ ೨. ಪ್ರಾಣಲಿಂಗ ಯೋಗ ೩. ಭಾವ ಲಿಂಗ ಯೋಗಗಳೆಂದು ಶರಣರ ದರ್ಶನದಲ್ಲಿ ಗುರುತಿಸಬಹುದು.

೧೧) ಮಣಿಪೂರಕ ಚಕ್ರದ ವಿವರಣೆಯಲ್ಲಿ ದಶವಾಯುಗಳ ದುರ್ವರ್ತನೆಯನ್ನು ಹೇಳಲಾಗಿದೆ. ಈ ಚಕ್ರದಲ್ಲಿ 'ಅಹಂಕಾರ' ಎಂಬ ಭಾವೇಂದ್ರಿಯವು ಕಾರ್ಯಮಾಡುತ್ತದೆ. ಅಹಂ (ನಾನು) ಎಂಬ ವಿಚಾರದಿಂದ ಕಾರ್ಯಾಚರಣೆ ಗೊಳಿಸುವುದೇ ಅಹಂಕಾರ ಎಂದು ಹೇಳಬಹುದು. ಈ ಅಹಂಕಾರವು ಅಂತಃಕರಣಗಳಲ್ಲಿ ಒಂದು ಇಂದ್ರಿಯವಾಗಿ ಕಾರ್ಯಗೈಯುವದು. ಈ ಅಹಂಕಾರವು ಪಂಚ ಕರ್ಮೇಂದ್ರಿಯಗಳನ್ನು ಹಾಗೂ ಪಂಚಜ್ಞಾನೇಂದ್ರಿಯಗಳನ್ನು ಕಾರ್ಯಾಚರಣೆ ಗೊಳಿಸುವದು (Ego of the person administrates the physical and mental sense organs as per the wish of the will) ಈ ಕಾರಣದಿಂದ ಮಣಿಪೂರಕಚಕ್ರದಲ್ಲಿ ದಶವಾಯುಗಳನ್ನು ಸಂಬಂಧಿಸದೆ, ಮೇಲೆ ಹೇಳಿದ ದಶೇಂದ್ರಿಗಳನ್ನು ಸಂಬಂಧಿಸಬೇಕು. ವಾಯುಗಳನ್ನು ಅನಾಹತಚಕ್ರಕ್ಕೆ ಸಂಬಂಧಿಸಬೇಕು.

೧೨) ಅನಾಹತಚಕ್ರದಲ್ಲಿ ಪಂಚಕರ್ಮೇಂದ್ರಿಯಗಳನ್ನು ಹಾಗೂ ಪಂಚ ಜ್ಞಾನೇಂದ್ರಿಯಗಳನ್ನು ಸಂಬಂಧಿಸಲಾಗಿದೆ. ಈ ಮೊದಲು ಹೇಳಿದಂತೆ ಈ ಇಂದ್ರಿಯಗಳು ಅಗ್ನಿತತ್ವ ಸಂಬಂಧವಾದ ಮಣಿಪೂರಕಚಕ್ರಕ್ಕೆ ಸಂಬಂಧಿಸಿದವುಗಳಾಗಿವೆ. ಅನಾಹತಚಕ್ರವು ವಾಯುತತ್ವವನ್ನು ಕ್ರಿಯಾಚರಣೆಗೆ ತರುವ 'ಕ್ರಿಯಾಕೇಂದ್ರ' (working centre)ವಾಗಿದೆ. ಮುಖ್ಯವಾಯು, ಅಂತರ್ವಾಯು, ವೈರಂಭಣ, ಪ್ರಭಂಜನ, ಮಹಾಪ್ರಾಣಗಳೆಂಬ ಐದು ಮಹಾವಾಯುಗಳಲ್ಲಿ, ದಶವಾಯುಗಳಿಗೆ ಅತಿ ಸಮೀಪದ (Immediate) ಪ್ರೇರಕವಾಗಿರುವ ಮುಖ್ಯ ವಾಯು ಹಾಗೂ ಅಂತರ್ವಾಯುಗಳನ್ನು ಸೇರಿಸಿ ಒಟ್ಟು ಹನ್ನೆರಡು ವಾಯುಗಳಾದ ೧) ಪ್ರಾಣ ೨) ಅಪಾನ ೩) ವ್ಯಾನ ೪) ಉದಾನ ೫) ಸಮಾನ ೬) ನಾಗ ೭) ಕೂರ್ಮ ೮) ಕೃಕರ ೯) ದೇವದತ್ತ ೧೦) ಧನಂಜಯ ೧೧) ಮುಖ್ಯವಾಯು ೧೨) ಅಂತರ್ವಾಯು ಎಂಬವುಗಳನ್ನು ಅನಾಹತ ಚಕ್ರಕ್ಕೆ ಸಂಬಂಧಿಸುವುದು.

೧೩) ಷೋಡಶ ಭಕ್ತಿಗಳು: ೧) ಕ್ರಿಯಾಭಕ್ತಿ ೨) ಜ್ಞಾನಭಕ್ತಿ ೩) ಸದ್‌ಭಾವ ಭಕ್ತಿ ೪) ವಿಧೇಯಭಕ್ತಿ ೫) ವಿಚಾರಭಕ್ತಿ ೬) ವಿಶುದ್ಧಭಕ್ತಿ ೭) ಶ್ರದ್ಧಾಭಕ್ತಿ ೮) ನಿಷ್ಠಾಭಕ್ತಿ ೯) ಸಾವಧಾನಭಕ್ತಿ ೧೦) ಅನುಭಾವಭಕ್ತಿ ೧೧) ಆನಂದಭಕ್ತಿ ೧೨) ಸಮರಸಭಕ್ತಿ ೧೩) ನಿರವಯಭಕ್ತಿ ೧೪) ನಿರಂಜನಭಕ್ತಿ ೧೫) ಪರಿಪೂರ್ಣಭಕ್ತಿ ೧೬) ಸಹಜಭಕ್ತಿ.

ತನುಸಂಬಂಧ ಭಕ್ತಿಗಳು : ಕ್ರಿಯಾಭಕ್ತಿ, ಜ್ಞಾನಭಕ್ತಿ, ಸದ್‌ಭಾವ ಭಕ್ತಿ (ಗುರು, ಲಿಂಗ, ಜಂಗಮಭಕ್ತಿ)

ಇಂದ್ರಿಯ ಸಂಬಂಧ ಭಕ್ತಿಗಳು : ವಿದೇಹಭಕ್ತಿ, ವಿಚಾರಭಕ್ತಿ, ವಿಶುದ್ಧಭಕ್ತಿಗಳು,

ಅಂತಃಕರಣ ಭಕ್ತಿಗಳು : ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಸಾವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿ,

ಶೂನ್ಯ ಸ್ಥಲದ ಭಕ್ತಿಗಳು: ನಿರವಯಭಕ್ತಿ, ನಿರಂಜನಭಕ್ತಿ, ಪರಿಪೂರ್ಣಭಕ್ತಿ, ಸಹಜಭಕ್ತಿ

೧೪) ಚಕ್ರಗಳ ವಿವರಣೆಯು (Position, Nature, Scope and Functions of chakres) :

ವಿಶ್ವೋತ್ಪತ್ತಿ (Evolution of cosmos) ವಿಶ್ವವ್ಯಾಪಾರ (behaviour of cosmos) ವಿಶ್ವಕಾರ್ಯ ಪರಿಣಾಮ (Functional effect of cosmic behaviour)ಗಳ ಹಿನ್ನೆಲೆಯಾಗಿ ಹಾಗೂ ಪ್ರೇರಕವಾಗಿ ವರ್ತಿಸುವ ಚಿತ್‌ಚೈತನ್ಯವು (cosmic spirit) ಮನುಷ್ಯನ ಶರೀರದಲ್ಲಿರುವ, ಸುಷುಮ್ನ ನಾಡಿ ಮೂಲಕವಾಗಿ ೭೨,೦೦೦ ನಾಡಿಗಳಲ್ಲಿ ಸಂಚರಿಸುತ್ತದೆ. ಈ ಚಿತ್‌ಚೈತನ್ಯವೇ, ಶರೀರ, ವಿಷಯಗಳು, ಇಂದ್ರಿಯಗಳು, ವಾಯುಗಳು, ಅಂತಃಕರಣಗಳು, ಆತ್ಮಭಾವ, ಪರಮಾತ್ಮಭಾವದ ಮೂಲಕ ವ್ಯವಹರಿಸುವಾಗ, ಸುಷುಮ್ನನಾಡಿಯುದ್ದಕ್ಕೂ ಹಂತಹಂತವಾಗಿ ಕಾರ್ಯಮಾಡುತ್ತ ಹೋಗುವದು. ಹೀಗೆ ಹಂತಹಂತವಾಗಿ ನಿಂತು ಮೇಲೆ ಹೇಳಿದ ಭಿನ್ನಭಿನ್ನ ಶರೀರಾದಿ ಪರಮಾತ್ಮಭಾವ ಪರ್ಯಂತ, ಕ್ಷೇತ್ರಗಳಿಗೆ ಆ ಚಿತ್ ಚೈತನ್ಯವು ತನ್ನ ಶಕ್ತಿಯನ್ನು ಹಂಚಿಕೊಳ್ಳುತ್ತಾ, ತುಂಬುತ್ತಾ ಕಾರ್ಯಗೈಯ್ಯುತ್ತಾ ಹೋಗುವದು. ಈ ಹಂತಗಳಿಗೆ ಚಕ್ರಗಳೆಂದು ಕರೆಯುತ್ತಾರೆ. ಅವು ಈ ರೀತಿ ಇವೆ. ೧) ಆಧಾರ ೨) ಸ್ವಾಧಿಷ್ಠಾನ ೩) ಮಣಿಪೂರಕ ೪) ಅನಾಹತ ೫) ವಿಶುದ್ಧಿ ೬) ಆಜ್ಞಾ ೭) ಸಹಸ್ರಾರ ೮) ಶಿಖಾ ೯) ಪಶ್ಚಿಮ ೧೦) ಅಣುಚಕ್ರ. ಈ ಚಕ್ರಗಳ ಮೂಲಕವೇ ಚಿನ್ನಾದ, ಚಿದ್ಬಿಂದು, ಚಿತ್ಕಲೆ, ನಾದ, ಬಿಂದು, ಕಲೆ, ಸತ್ವ, ರಜ, ತಮಾದಿ ಗುಣಗಳು, ಶ್ವೇತಾದಿ ವರ್ಣಗಳು, ದಶಾದಿ ನಾಡಿಗಳು, ದಶವಿಧ ಭಕ್ತಿಗಳು, ದಶವಿಧ ಶಕ್ತಿಗಳು, ದಶವಿಧ ಅಂಗಗಳು, ದಶವಿಧ ಲಿಂಗಗಳು, ದಶವಿಧಪದಾರ್ಥಗಳು, ದಶವಿಧ ಪಾದೋದಕಗಳು, ಏಕಾದಶ ಪ್ರಸಾದಗಳು ಮುಂತಾಗಿ ಪ್ರಕಟವಾಗುತ್ತಾ ಕ್ರಿಯಾಶೀಲಗೊಳ್ಳುವವು.

೧೫) ವರ್ಣಗಳವ್ಯಾಖ್ಯೆ :

ವರ್ಣಗಳು ಎರಡು ವಿಧವಾಗಿವೆ. ೧) ನಾದಾತ್ಮಕವಾದ ಅಕ್ಷರವರ್ಣಗಳು. (೨) ರೂಪಾತ್ಮಕವಾದ ವರ್ಣಗಳು (ಬಣ್ಣಗಳು). ನಾದಾತ್ಮಕವಾದ ಅಕ್ಷರವರ್ಣಗಳಿಗೆ ಭಾವಾತ್ಮಕವಾದ ಗುಣಧರ್ಮಗಳಿವೆ. ಹಾಗೆಯೇ ರೂಪಾತ್ಮಕವಾದ ವರ್ಣಗಳಿಗೆ ಕ್ರಿಯಾತ್ಮಕವಾದ ಗುಣಧರ್ಮಗಳಿವೆ.

ನಾದಾತ್ಮಕವಾದ ಅಕ್ಷರ ವರ್ಣಗಳಲ್ಲಿ ಭಾವಾತ್ಮಕವಾದ ಗುಣಧರ್ಮಗಳು ಮೆಂತ್ರರೂಪವಾಗಿ ಪ್ರವಹಿಸಿ ರೂಪಾತ್ಮಕವಾದ ಬಣ್ಣಗಳಲ್ಲಿ ಕ್ರಿಯಾತ್ಮಕವಾದ ಗುಣಧರ್ಮಗಳನ್ನು ಪ್ರಚೋದಿಸುತ್ತವೆ. ಅನಾಹತನಾದದಿಂದ ನಿರಂಜನಬಣ್ಣ (ಬಣ್ಣವಿಲ್ಲದ ಬಣ್ಣ) ಉತ್ಪತ್ತಿ ಯಾಗುವದು. ಸಪ್ತವರ್ಣಾತೀತವಾದ ಬಣ್ಣರಹಿತ ಬಣ್ಣವೇ ನಿರಂಜನವರ್ಣವು. ಈ ನಿರಂಜನ ವರ್ಣದಿಂದಲೇ ಸಪ್ತವರ್ಣ,

ನವವರ್ಣ, ಸಕಲವರ್ಣಗಳ ಉತ್ಪತ್ತಿಯಾಗುವದು. ಬಿಳಿವರ್ಣವು ಮೊದಲು ಉತ್ಪತ್ತಿಯಾಗುವದು, ಕಪ್ಪುವರ್ಣವು ಅಂತಿಮವಾಗಿ ಉತ್ಪತ್ತಿಯಾಗುವದು. (Thinner most begining light is the white colour. Thicker most end light is black). ಉಳಿದ ವರ್ಣಗಳು ಮಧ್ಯಂತರ ಹಂತದಲ್ಲಿ ಉತ್ಪತ್ತಿಗೊಳ್ಳುವವು. ನಾದಾತ್ಮಕ ಗುಣ ಧರ್ಮಗಳು ಹಾಗೂ ರೂಪಾತ್ಮಕ ಗುಣಧರ್ಮಗಳು, ಸತ್ವ, ರಜ, ತಮೋಗುಣಗಳಿಗನುಸಾರವಾಗಿ ಕೆಳಗಿನಂತೆ–ವರ್ಣಗಳ ಮೂಲಕ ಹೊರ ಹೊಮ್ಮುವವು.

ಸತ್ವಗುಣ : ನಿರಂಜನ (ಸಹಜ) ವರ್ಣ, ಶ್ವೇತವರ್ಣ ಹಾಗೂ ಸುವರ್ಣಾದಿ ವರ್ಣಗಳು.

ರಜೋಗುಣ : ಕೆಂಪುವರ್ಣ, ಕಂದುವರ್ಣ ಹಾಗೂ ಹರಿತಾದಿ ವರ್ಣಗಳು.

ತಮೋಗುಣ : ನೀಲಿ, ಜಾಂಬಳಿ, ಬೂದು, ಕಪ್ಪು ಮೊದಲಾದ ವರ್ಣಗಳು.

ಈ ವರ್ಣಗಳೇ ಷಟ್‌ತತ್ವಗಳಿಗನುಸಾರವಾಗಿ ಷಟ್‌ಚಕ್ರಗಳ ಮೂಲಕ ಈ ರೀತಿ ಹೊರ ಹೊಮ್ಮುವವು.

ಆಧಾರ, ಸ್ವಾಧಿಷ್ಠಾನ ಚಕ್ರದ ಮೂಲಕ ತಮೋ ವರ್ಣಗಳು, ಮಣಿಪೂರಕ, ಅನಾಹತಚಕ್ರದ ಮೂಲಕ ರಜೋವರ್ಣಗಳು, ವಿಶುದ್ಧಿ, ಆಜ್ಞಾ ಚಕ್ರದ ಮೂಲಕ ಸತ್ವವರ್ಣಗಳು ಕಾರ್ಯಾಚರಣೆ ಗೊಳ್ಳುವವು. ಕರಣಹಸಿಗೆಯ ಪ್ರಕಾರ, ಅಂಶಾಂಶೀಭೂತವಾಗಿ ಷಟ್‌ತತ್ವಗಳು ಕ್ರಮ ವ್ಯತ್ಯಾಸ ಸಂಯೋಜನೆಯಾಗಿ ಮಾರ್ಪಾಟುಗೊಳ್ಳುವಂತೆ, ಸಕಲ ವರ್ಣಗಳು ಸಹ ಷಟ್‌ಚಕ್ರಗಳಲ್ಲಿ ಅದೇ ರೀತಿಯಾಗಿ ಸಂಯೋಜನೆಗೊಂಡು ಮಾರ್ಪಾಟುಗೊಳ್ಳುವವು. ಈ ಮಾರ್ಪಾಟಕ್ಕನುಗುಣವಾಗಿ (As per metamorphological change) ವರ್ಣಗಳು ಭಿನ್ನ–ಭಿನ್ನ ಚಕ್ರಗಳಲ್ಲಿ ಅಂತರ್‌ಬಾಹ್ಯವಾಗಿ ಭಿನ್ನಭಿನ್ನ ವರ್ಣಗಳಲ್ಲಿ ರೂಪಾಂತರಗೊಂಡು ಪ್ರಕಾಶನಕ್ಕೆ ಬರುತ್ತವೆ.

ಆಜ್ಞಾಚಕ್ರದಲ್ಲಿ : ನಿರಂಜನವರ್ಣವು ಅಂತರಂಗದಲ್ಲಿ; ಚಂದ್ರವರ್ಣ, ಶ್ವೇತವರ್ಣ, ಸ್ಪಟಿಕಾದಿ ವರ್ಣಗಳು ಬಾಹ್ಯದಲ್ಲಿ.

ವಿಶುದ್ಧಿಚಕ್ರದಲ್ಲಿ : ಸುವರ್ಣ (ಸೂರ್ಯ) ವರ್ಣವು ಅಂತರಂಗದಲ್ಲಿ; ಕಪೋತ ಹಾಗೂ ಕಪ್ಪುವರ್ಣವು ಬಾಹ್ಯದಲ್ಲಿ (ಜ್ಞಾನವೇ ಸೂರ್ಯವರ್ಣ, ಅಜ್ಞಾನವೇ ಕಪ್ಪುವರ್ಣ).

ಅನಾಹತಚಕ್ರದಲ್ಲಿ : ಮಾಂಜಿಷ್ಠವರ್ಣ ಅಂತರಂಗದಲ್ಲಿ, ತಿಳಿ ನೀಲ ಬಾಹ್ಯದಲ್ಲಿ

ಮಣಿಪೂರಕಚಕ್ರದಲ್ಲಿ : ಕೆಂಪುವರ್ಣ ಅಂತರಂಗದಲ್ಲಿ, ಬಾಹ್ಯದಲ್ಲಿ ಹರಿತ (ಹಸಿರು) ವರ್ಣ.

ಸ್ವಾಧಿಷ್ಠಾನಚಕ್ರದಲ್ಲಿ : ಅಂತರಾಳದಲ್ಲಿ ಸ್ಫೂಲಶ್ವೇತವರ್ಣಗಳು, ಬಹಿರಂಗದಲ್ಲಿ ಸ್ಫೂಲ ನೀಲ ವರ್ಣ.

ಆಧಾರ ಚಕ್ರದಲ್ಲಿ : ಅಂತರಾಳದಲ್ಲಿ ಹಳದಿ ವರ್ಣ, ಬಹಿರಂಗದಲ್ಲಿ ಕಪ್ಪುವರ್ಣ. ಹೀಗೆ ವರ್ಣಗಳ ರೂಪಾಂತರವನ್ನು ವಿವೇಚಿಸಿ ತಿಳಿದುಕೊಳ್ಳುವುದು.

೧೬) ವಿಶ್ವವ್ಯಾಪ್ತಿಯ ಕ್ಷೇತ್ರದಲ್ಲಿ ವಿಶ್ವಚೈತನ್ಯವು ವಿಶ್ವವರ್ತನೆಯ ಭಿನ್ನ ಭಿನ್ನ ಹಂತಗಳಲ್ಲಿ (Stages) ಭಿನ್ನ ಭಿನ್ನ ಅಧಿಕರ್ತೃಗಳಾಗಿ (Different Executive powers) ಹಾಗೂ ಆಯಾ ಸಂಬಂಧಪಟ್ಟ ಶಕ್ತಿಗಳಾಗಿ (Respective forces) ಕಾರ್ಯಗೈಯ್ಯುತ್ತವೆ. ಈ ಅಧಿಕರ್ತೃಗಳನ್ನೇ ಹಾಗೂ ಶಕ್ತಿಗಳನ್ನೇ ಭಾರತೀಯರು ಪೌರಾಣಿಕ ಶೈಲಿಯಲ್ಲಿ ಬ್ರಹ್ಮಾದಿ ಮಹಾದೇವನವರೆಗೆ ಒಂಬತ್ತು ಪೂಜಾರಿಗಳೆಂದೂ, ಅಧಿದೇವತೆಗಳೆಂದೂ, ಅಧಿಕರ್ತೃಗಳೆಂದೂ ಕರೆಯುತ್ತಾರೆ. ಹಾಗೆಯೇ ಸರಸ್ವತಿಯಾದಿಯಾಗಿ ಸರ್ವೇಶ್ವರಿಯವರೆಗೆ ನವವಿಧ ಶಕ್ತಿಗಳೆಂದೂ ನವವಿಧ ದೇವತೆಗಳೆಂದೂ ಸಂಬೋಧಿಸುತ್ತಾರೆ. ಈ ಅಧಿದೇವತೆ ದೇವತೆಗಳನ್ನೇ ಅರ್ಥಾತ್ ಅಧಿಕರ್ತೃ ಶಕ್ತಿಗಳನ್ನೇ ಬಸವಾದಿ ಶರಣರು, ವಿಶ್ವದ ಹಂತದಲ್ಲಿ ನವವಿಧ ಸಾದಾಖ್ಯಗಳೆಂದೂ ನವವಿಧ ಕಲೆಗಳೆಂದೂ ಗ್ರಹಿಸಿದ್ದಾರೆ. ಈ ಒಂಬತ್ತು ವಿಧ ಸಾದಾಖ್ಯ ಹಾಗೂ ಕಲೆಗಳನ್ನೇ ವ್ಯಕ್ತಿಯ ವ್ಯಕ್ತಿಗತ ಹಂತದಲ್ಲಿ ಒಂಬತ್ತು ಲಿಂಗಗಳೆಂದೂ ಹಾಗೂ ನವವಿಧ ಶಕ್ತಿಗಳೆಂದೂ ಗ್ರಹಿಸುತ್ತಾರೆ.

ಅನು.	ಅಧಿದೇವತೆಗಳು	ದೇವತೆಗಳು (ಶಕ್ತಿಗಳು)	ಸಾದಾಖ್ಯಗಳು	ಕಲೆಗಳು	ಲಿಂಗಗಳು	ಶಕ್ತಿಗಳು
೧.	ಬ್ರಹ್ಮ	ಸರಸ್ವತಿ	ಕರ್ಮ	ನಿವೃತ್ತಿ	ಆಚಾರಲಿಂಗ	ಕ್ರಿಯಾಶಕ್ತಿ
೨.	ವಿಷ್ಣು	ಲಕ್ಷ್ಮಿ	ಕರ್ತೃ	ಪ್ರತಿಷ್ಠಾ	ಗುರುಲಿಂಗ	ಜ್ಞಾನಶಕ್ತಿ
೩.	ರುದ್ರ	ಭದ್ರಿ	ಮೂರ್ತ	ವಿದ್ಯಾ	ಶಿವಲಿಂಗ	ಇಚ್ಛಾಶಕ್ತಿ
೪.	ಈಶ್ವರ	ಕಾಳಿ	ಅಮೂರ್ತ	ಶಾಂತಿ	ಜಂಗಮಲಿಂಗ	ಆದಿಶಕ್ತಿ
೫.	ಸದಾಶಿವ	ಕಂಕಾಳಿ	ಶಿವ	ಶಾಂತ್ಯಾತೀತ	ಪ್ರಸಾದಲಿಂಗ	ಪರಾಶಕ್ತಿ
೬.	ಮಹೇಶ್ವರ	ರುದ್ರಾಣಿ	ಮಹಾ	ಶಾಂತ್ಯಾತೀತೋತ್ತರ	ಮಹಾಲಿಂಗ	ಚಿಚ್ಛಕ್ತಿ
೭.	ಪರಮೇಶ್ವರ	ಶಂಕರಿ	ಅಗಮ್ಯ	ಅನಾದಿ	ನಿಃಕಲಲಿಂಗ	ಚಿನ್ನಾದ ಶಕ್ತಿ
೮.	ಸರ್ವೇಶ್ವರ	ಶರ್ವಾಣಿ	ಅಗೋಚರ	ನಿರ್ನಾಮ	ನಿಃಶೂನ್ಯ	ಚಿದ್ಬಿಂದುಶಕ್ತಿ
೯.	ಮಹಾದೇವ	ಸರ್ವೇಶ್ವರೀ	ಅಪ್ರಮಾಣ	ಅನಿರ್ವಾಚ್ಯ	ನಿರಂಜನ	ಚಿತ್‌ಕಲಾಶಕಿ

೧೭) ಪರವಸ್ತುವಿನ ಮಹಾಘನ ಚಿತ್‌ಚೈತನ್ಯವು (Absolute Spirit) ವಿಶ್ವಾತೀತವಾಗಿ, ವಿಶ್ವಾತ್ಮಕ ವಾಗಿ, ಮಾನವನಾಗಿ 83 ಲಕ್ಷ 99 ಸಾವಿರದ 999 ಜೀವರಾಶಿಗಳಾಗಿ ಹಾಗೂ ಇನ್ನುಳಿದ ಜಡವಸ್ತು ಗಳಾಗಿ, ವಿಕಾಸಗೊಂಡು ವ್ಯವಹರಿಸುತ್ತದೆ.

ವಿಶ್ವಾತೀತವಾದ, ನಿಃಕಲಂಕ, ನಿಃಶೂನ್ಯ, ನಿರಂಜನ ಮುಂತಾದ ಶೂನ್ಯಸ್ಥಲದ

ಹಂತದಲ್ಲಿ ಮಹಾದೇವನ ಸ್ವರೂಪದಲ್ಲಿ (ಮಹಾಚಿತ್‌ಸ್ವರೂಪದಲ್ಲಿ) ಪ್ರವರ್ತಿಸುವುದು ವಿಶ್ವದ ಹಂತದಲ್ಲಿ ವಿಶ್ವಚೈತನ್ಯದ ಸ್ವರೂಪದಲ್ಲಿ (ಚಿಚ್ಛಕ್ತಿಯ ಸ್ವರೂಪದಲ್ಲಿ (Form of cosmic Spirit) ಪ್ರವರ್ತಿಸುವದು.

ಮಾನವರಲ್ಲಿ ಈ ಚಿತ್‌ಚೈತನ್ಯವು ಆತ್ಮ ಹಾಗೂ ಜೀವಗಳ ಸಂಯುಕ್ತ ಸ್ವರೂಪದಲ್ಲಿ (ಜೀವಾತ್ಮ–ಚೈತನ್ಯ soul and Biospirit) ಪ್ರವರ್ತಿಸುವದು.

ಮಾನವನನ್ನು ಹೊರತುಪಡಿಸಿ 83 ಲಕ್ಷ 99 ಸಾವಿರದ 999 ಜೀವರಾಶಿಗಳಲ್ಲಿ ಈ ಚೈತನ್ಯವು, ಕೇವಲ ಜೀವಚೈತನ್ಯವಾಗಿ (Form of Biolife) ಪ್ರವಹಿಸುವದು.

ಸಕಲ ಜೀವರಾಶಿಗಳನ್ನು ಹೊರತುಪಡಿಸಿ, ಈ ಚೈತನ್ಯವು ಜಡಚೈತನ್ಯವಾಗಿ (Form of material energy) ಜಡವಸ್ತುಗಳಲ್ಲಿ ಪ್ರವರ್ತಿಸುವದು.

ಮನುಷ್ಯನ ವ್ಯಕ್ತಿತ್ವದಲ್ಲಿ ಈ ಮಹಾ ಚಿತ್‌ಚೈತನ್ಯವು ಜಡಸ್ವರೂಪದಿಂದ ಮಹಾಚೈತನ್ಯದವರೆಗಿನ ಎಲ್ಲ ಸ್ವರೂಪದ ಹಂತಗಳಲ್ಲಿ ವಿಕಾಸವಾಗುತ್ತ ಹೋಗುತ್ತದೆ. ಹೀಗೆ ವಿಕಾಸವಾಗುವ ಹಂತಗಳನ್ನು ಕುರಿತು ನವವಿಧ ಆತ್ಮರುಗಳೆಂದು ಪರಿಗ್ರಹಿಸುತ್ತಾರೆ. ಇವು ನಿವೃತ್ತಿ ಮಾರ್ಗದಲ್ಲಿ ನವತನು ಹಾಗೂ ನವತತ್ವಗಳ ಮೂಲಕ ಪರಿಶುದ್ಧಗೊಳ್ಳುತ್ತ ಹೋಗುತ್ತವೆ.

ಈ ವಿಕಾಸಕ್ರಮವು ಸ್ಥೂಲ, ಸೂಕ್ಷ್ಮ ಕಾರಣ ಶರೀರಾತ್ಮಕವಾಗಿ ವಿಕಾಸವಾಗುವಾಗ ಜೀವಾತ್ಮ, ಅಂತರಾತ್ಮ, ಪರಮಾತ್ಮವೆಂದು ಸಂಬೋಧಿಸುತ್ತಾರೆ. ಇಲ್ಲಿ ಪರಮಾತ್ಮವೆಂದರೆ, ಶೂನ್ಯ ಸ್ಥಲದಲ್ಲಿ ಭಾವಿಸುವ ಪರಮಾತ್ಮನ ಪರ್ಯಾಯ ಭಾವವಲ್ಲ. ಇದೇ ರೀತಿ ನವಆತ್ಮರುಗಳ ವಿಕಾಸವನ್ನು ಈ ಕೆಳಗಿನಂತೆ ಮನಗಾಣಬಹುದು.

೧. ಜೀವಾತ್ಮ : ಪಂಚಭೂತಗಳ ಹಾಗೂ ಅವುಗಳ ಸಾರವಾದ ಪಂಚ ವಿಷಯಗಳನ್ನು ಸ್ಥೂಲತನುವಿನ ಮೂಲಕ ಕೇವಲ ಜಡ ಭೋಗದಲ್ಲಿ ಮುಳುಗಿರುವವನೇ ಜೀವಾತ್ಮನು.

೨. ಅಂತರಾತ್ಮ : ಸ್ಥೂಲತನುವಿನ ಜಡಭೋಗದಲ್ಲಿಯೂ ತೃಪ್ತಿಕಾಣದೆ, ಸೂಕ್ಷ್ಮತನುವಿನ ದಶೇಂದ್ರಿಯಗಳ ಹಾಗೂ ದಶವಾಯುಗಳ ಮೂಲಕ, ರಾಗ ಮೋಹಾದಿಗಳ ಭೋಗದಲ್ಲಿ ಒಂದೆಡೆ ಮುಳುಗುತ್ತಾ ಇನ್ನೊಂದೆಡೆ ಅದರಲ್ಲಿಯೂ ತೃಪ್ತಿಕಾಣದೆ ಪರಮಾತ್ಮನ ಕಡೆಗೆ ಚಿಂತಿಸುವದೇ ಅಂತರಾತ್ಮವು.

೩. ಪರಮಾತ್ಮ : ಸೂಕ್ಷ್ಮತನುವಿನ ಮೋಹದ ಭೋಗದಲ್ಲಿಯೂ ತೃಪ್ತಿಕಾಣದೆ; ಆತ್ಮನ ಮುಂದಿನ ಹಂತದ ಅಂದರೆ ಪರಮ ಆತ್ಮನ ಹಂತದ ಸ್ಥಿತಿಯನ್ನು ಕುರಿತು ಅಂತರಾತ್ಮನು ದೀರ್ಘವಾಗಿ ಚಿಂತಿಸುವದೇ ಪರಮಾತ್ಮನ ಸ್ಥಿತಿಯು.

೪. ನಿರ್ಮಲಾತ್ಮ : ತ್ರಿಮಲಗಳನ್ನು ನಿವಾರಿಸಿ, ಪಂಚವಿಷಯಗಳನ್ನು ನಿರ್ಮಲಗೊಳಿಸಿ ವರ್ತಿಸುವ ಆತ್ಮಚೈತನ್ಯವೇ ನಿರ್ಮಲಾತ್ಮ.

೫. ಶುದ್ಧಾತ್ಮ : ಪಂಚಕರ್ಮೇಂದ್ರಿಯಗಳನ್ನು ಹಾಗೂ ಪಂಚಜ್ಞಾನೇಂದ್ರಿಯಗಳನ್ನು ಶುದ್ಧಗೊಳಿಸಿ ವರ್ತಿಸುವದೇ ಶುದ್ಧಾತ್ಮವು.

೬. ಜ್ಞಾನಾತ್ಮವು : ಚಿತ್ತಾದಿ ಪಂಚಅಂತಃಕರಣಗಳನ್ನು ಆಕಾಶತತ್ವದ ಜ್ಞಾನದಿಂದ ಪವಿತ್ರಗೊಳಿಸಿ ವರ್ತಿಸುವದೇ ಜ್ಞಾನಾತ್ಮವು.

೭. ಮಹಾತ್ಮ : ಆತ್ಮತತ್ವದಲ್ಲಿ ಮಿಶ್ರವಾಗಿರುವ ಅಹಂಭಾವವನ್ನು ನೀಗಿ, ನಿರಹಂಭಾವದಿಂದ ಸಕಲ ಜೀವ ರಾಶಿಗಳಿಗೆ ಲೇಸನ್ನು ಬಯಸುವದೇ ಮಹಾತ್ಮತ್ವವು.

೮. ದಿವ್ಯಾತ್ಮ : ಸಕಲಜೀವ ರಾಶಿಗಳಲ್ಲಿಯೂ ಹಾಗೂ ಸಕಲ ಭೂತಗಳಲ್ಲಿಯೂ ಪರಮಾತ್ಮನನ್ನೇ ಕಾಣುತ್ತ (ಅನುಭವಿಸುತ್ತ) ವರ್ತಿಸುವದೇ ದಿವ್ಯಾತ್ಮವು.

೯. ಚಿನ್ಮಯಾತ್ಮ : ಪರವಸ್ತುವಿನಲ್ಲಿ ಮಹಾಚೈತನ್ಯ ಸ್ವರೂಪನಾಗಿ, ನಿರಂಜನನಾಗಿ, ಸಮರಸನಾಗಿ ಪ್ರಕಾಶಿಸುವದೇ ಚಿನ್ಮಯಾತ್ಮವು.

೧೮) ''ಲೀಲೆಯಾದೊಡೆ ಉಮಾಪತಿ, ಲೀಲೆ ಮುಗಿದೊಡೆ ಸ್ವಯಂಭು'' ಎಂಬ ಅನುಭಾವೋಕ್ತಿಯಂತೆ, ಪರವಸ್ತುವು (Absolute God) ಲೀಲೆದೋರಿದಾಗ ವಿಶ್ವಾತೀತವಾದ ಶೂನ್ಯವು ನಿರ್ಮಾಣವಾಗುವುದು. ಆ ಶೂನ್ಯದಿಂದ, ಮಹಾಲಿಂಗವು ಅರ್ಥಾತ್ ವಿಶ್ವವು ನಿರ್ಮಾಣವಾಗುವದು. ಈ ಮಹಾಲಿಂಗವು ಪೂರ್ಣವಾದ, ಶಾಂತ್ಯಾತೀತೋತ್ತರವಾದ ಮಹಾಪ್ರಕಾಶವು. ಈ ಮಹಾ ಪ್ರಕಾಶವೇ ಘನೀಭೂತವಾಗುತ್ತಾ ಆರು ಹಂತಗಳನ್ನು ತಾಳುವದು. ಸೃಷ್ಟಿ, ಸಂರಕ್ಷಣ, ಲಯ (ಲೀನ), ತಿರೋಧಾನ (ಪುನರುತ್ಪತ್ತಿ), ಅನುಗ್ರಹ (ಪುನಃಸ್ಮರಣೆ ಹಾಗೂ ಶಿವಸ್ಮರಣೆ), ಆತ್ಮ ಭೋಧೆ ಎಂಬ ಆರು ಕ್ರಿಯಾ ವ್ಯಾಪಾರಗಳಿಗೆ ಕಾರಣೀಭೂತವಾಗುತ್ತ ಆರು ಸ್ವರೂಪಗಳನ್ನು ತಾಳುವದು. ಈ ಹಿಂದೆ ಹೇಳಿದಂತೆ, ಈ ಆರು ಸ್ವರೂಪಗಳಿಗೆ ದಾರ್ಶನಿಕ ಭಾಷೆಯಲ್ಲಿ ಕರ್ಮಾದಿ ಆರು ಸಾದಾಖ್ಯಗಳೆಂದು ಗ್ರಹಿಸುತ್ತಾರೆ. ಪೌರಾಣಿಕ ಭಾಷೆಯಲ್ಲಿ ಇವುಗಳನ್ನೇ ಬ್ರಹ್ಮಾದಿ ಆರು ಅಧಿದೇವತೆಗಳೆಂದು ಹೇಳುತ್ತಾರೆ. ಶೂನ್ಯಸ್ಥಲದ ಅಗಮ್ಯ, ಅಗೋಚರ, ಅಪ್ರಮಾಣ, ಈ ಮೂರು ಸ್ವರೂಪಗಳನ್ನು ಸೇರಿಸಿ ನವವಿಧಸಾದಾಖ್ಯಗಳೆಂದು ಪರಿಗಣಿಸುತ್ತಾರೆ. ಈ ಸಾದಾಖ್ಯಗಳ ಅಂತರಾಳದಲ್ಲಿ ಅವಿನಾಭಾವ ಸಂಬಂಧದಿಂದೊಡಗೂಡಿ, ನವವಿಧ ಸಾದಾಖ್ಯಗಳ ಕಾರ್ಯ ವ್ಯಾಪಾರಕ್ಕೆ ಪ್ರೇರಕಶಕ್ತಿಗಳಾಗಿ, ನವವಿಧಕಲೆಗಳು ಕಾರ್ಯಮಾಡುತ್ತವೆ.

ಬ್ರಹ್ಮಾಂಡಾಂತರ್ಗತವಾದ ಈ ನವವಿಧ ಸಾದಾಖ್ಯಗಳು ಹಾಗೂ ನವವಿಧಕಲೆಗಳೇ ಮಾನವನ ಮಂತ್ರಮಯ ಶರೀರದಲ್ಲಿ ನವವಿಧ ಶಕ್ತಿಗಳಾಗಿ ಕಾರ್ಯಮಾಡುತ್ತವೆ.

೧೯) ಪರವಸ್ತುವಿನಲ್ಲಿ ಅನಾಹತನಾದದಿಂದ, ಶೂನ್ಯಾದಿ ಕ್ಷಕಾರಾಂತ ಅಕ್ಷರಗಳು ವರ್ಣಗಳು ಉತ್ಪತ್ತಿಯಾಗುವವು. ಈ ಅಕ್ಷರ ವರ್ಣಗಳಿಂದ, ಪ್ರಕಾಶಮಯವಾದ, ನವವಿಧ ಆಕೃತಿಗಳು ಉತ್ಪತ್ತಿಯಾಗುವವು. ಈ ಆಕೃತಿಗಳೇ ಚಿದ್ಬಿಂದು ಹಾಗೂ ಬಿಂದುವಿನ ತತ್ವಕ್ಕೆ ಸೇರಿರುತ್ತವೆ. ಈ ನವವಿಧ ಆಕೃತಿಗಳಿಂದ ನವವಿಧ ರೂಪಾದಿ ಬಣ್ಣಗಳು ಉತ್ಪತ್ತಿಯಾಗುವವು. ಈ ಬಣ್ಣಗಳು ಚಿತ್ಕಲೆ ಹಾಗೂ ಕಲಾ ತತ್ವಕ್ಕೆ ಸೇರಿರುತ್ತವೆ. ನವವಿಧ ಆಕೃತಿಗಳೇ ನವವಿಧ ಪ್ರಕಾಶದ ಸ್ವರೂಪಗಳನ್ನು ಹೊಂದುತ್ತವೆ. ಅವುಗಳ ಪ್ರವೃತ್ತಿಯ ಕ್ರಮ ಹೀಗಿದೆ: ೧) ನಿರಂಜನಾಕೃತಿ ೨) ನಿಃಶೂನ್ಯಾಕೃತಿ ೩) ನಿಃಕಲಾಕೃತಿ ೪) ಜ್ಯೋತಿರಾಕೃತಿ ೫) ದರ್ಪಣಾಕೃತಿ ೬) ಅರ್ಧಚಂದ್ರಾಕೃತಿ ೭) ಅರ್ಧಕುಂಡಲಾಕೃತಿ ೮) ದಂಡಕಾಕೃತಿ ೯) ತಾರಕಾಕೃತಿ.

ಶೂನ್ಯಸ್ಥಲದ ಮೊದಲಿನ ಮೂರು ಆಕೃತಿಗಳು, ಚಿನ್ನಾದ, ಚಿದ್ಬಿಂದು, ಚಿತ್‌ಕಲೆಗಳ, ಸ್ವರೂಪಾಂತರದಲ್ಲಿ ಇರುತ್ತವೆ. ಈ ಆಕೃತಿಗಳು, ಶ್ವೇತರಹಿತ, ಶ್ವೇತಾತೀತವಾದ, ಬಣ್ಣವಿಲ್ಲದ ಬಣ್ಣದ ಸ್ವರೂಪಗಳನ್ನು ಹೊಂದಿರುತ್ತವೆ. ಈ ಮೂರು ಆಕೃತಿಗಳೇ ಅಗಮ್ಯ, ಅಗೋಚರ, ಅಪ್ರಮಾಣ ಸಾದಾಖ್ಯಗಳಿಗೆ ಕಾರಣೀಭೂತವಾಗುವವು.

ವಿಶ್ವದ ಹಾಗೂ ಮಾನವನ ವ್ಯಕ್ತಿತ್ವದ ಹಂತದಲ್ಲಿ ಇನ್ನುಳಿದ ಆರು ಆಕೃತಿಗಳು ಈ ರೀತಿ ಮೈದೋರುವವು. ವಿಶ್ವದ ಸಾದಾಖ್ಯಗಳ ಹಾಗೂ ವ್ಯಕ್ತಿಯ ಷಡುಸ್ಥಲದ ಆರು ಹಂತಗಳಲ್ಲಿ ಈ ಆಕೃತಿಗಳು; ಶ್ವೇತಾದಿ ಕಪ್ಪಿನವರೆಗಿನ ಎಲ್ಲ ಬಣ್ಣಗಳ ಹಾಗೂ ಸಕಲ ವಸ್ತುಗಳ ರೂಪಾಕಾರ ದರ್ಶನಕ್ಕೆ ಕಾರಣೀ ಭೂತವಾಗುತ್ತವೆ. ಈ ಹಂತದಲ್ಲಿ ಪ್ರವೃತ್ತಿಮಯವಾಗಿ ಈ ಆಕೃತಿಗಳನ್ನು ಕೆಳಗಿನಂತೆ ಹೆಸರಿಸಬಹುದು.

೧) ಜ್ಯೋತಿರಾಕೃತಿ ೨) ದರ್ಪಣಾಕೃತಿ (ಬಿಂದ್ವಾಕೃತಿ) ೩) ಅರ್ಧಚಂದ್ರಾಕೃತಿ ೪) ಕುಂಡಲಾಕೃತಿ ೫) ದಂಡಕಾಕೃತಿ ೬) ತಾರಕಾಕೃತಿ.

ಈ ಆಕೃತಿಗಳ ಸ್ವರೂಪ ವಿವರಣೆಯನ್ನು ಸಂಕ್ಷಿಪ್ತವಾಗಿ ಹೀಗೆ ಗ್ರಹಿಸಬಹುದು. ೧) ಆತ್ಮಜ್ಞಾನವೇ ಜ್ಯೋತಿರಾಕೃತಿ ೨) ದರ್ಪಣವು ವಸ್ತುಗಳ ದರ್ಶನವನ್ನು ಮಾಡಿಸುವಂತೆ, ಸೂರ್ಯನು ಸಕಲ ಜಗತ್ತಿಗೆ ಬೆಳಕು ನೀಡಿ ದರ್ಶಿಸುವಂತೆ ಮಾಡುವನು. ಆದ್ದರಿಂದ ಈ ನಿರ್ಮಳ ಪ್ರಕಾಶಕ್ಕೆ ದರ್ಪಣಾಕೃತಿ ಎಂದು ಹೇಳಬಹುದು. ೩) ಸೂರ್ಯನಿಲ್ಲದಿದ್ದಾಗ ಸೂರ್ಯನ ಅಂದಾಜು ಅರ್ಧಪ್ರಮಾಣದ ಪ್ರಕಾಶವನ್ನಾದರೂ ಜಗತ್ತಿಗೆ ನೀಡುವ ಪ್ರಕಾಶಕ್ಕೆ ಅರ್ಧಚಂದ್ರಾಕೃತಿ ಎಂದು ಹೆಸರಿಸಬಹುದು. ೪) ಸಕಲ ವಸ್ತುಗಳಲ್ಲಿ ಅಡಗಿರುವ ಗುಪ್ತ ಅಗ್ನಿಯು, ಸೂರ್ಯಚಂದ್ರಾದಿಗಳ ಪ್ರಕಾಶಕ್ಕಿಂತ ಅರ್ಧೋಪಾದಿಯಲ್ಲಿರುವದರಿಂದ ಅದಕ್ಕೆ ಅರ್ಧಕುಂಡಲಾಕೃತಿ ಎಂದು ಭಾವಿಸಬಹುದು. ೫) ಜಲದೊಳಗೆ ಇರುವ ಅಗ್ನಿಯು, ಬುದ್ಧಿಯ ಸ್ವರೂಪವನ್ನು ಪಡೆದು ವಸ್ತುಗಳನ್ನು

ನೇರವಾಗಿ ನಿಶ್ಚಯಿಸುವದರಿಂದ, ಈ ನಿಶ್ಚಯಿಸುವ ಬೆಳಕಿಗೆ, ದಂಡಕಾಕೃತಿ ಎಂದು ಭಾವಿಸಬಹುದು. ೬) ಆಕಾಶದಲ್ಲಿ ಸೂರ್ಯಚಂದ್ರಾದಿಗಳು ಇಲ್ಲದಿದ್ದಾಗ ಅಂಧ ಕಾರದಲ್ಲಿ ನಕ್ಷತ್ರಗಳಂತೆ ಮಿಣುಕು– ಮಿಣುಕು ಬೆಳಕನ್ನು ನೀಡಿ ದಾರಿ ತೋರಿಸುವ ಪ್ರಕಾಶವೇ ತಾರಕಾಕೃತಿಯೆಂದು ಕರೆಯಬಹುದು.

೨೦) ನವದಿಕ್ಕುಗಳ ವಿವರಣೆಯು: ಪರವಸ್ತುವಿನಿಂದ ಹೊರಹೊಮ್ಮಿದ ಮಹಾ ಚಿತ್‌ಚೈತನ್ಯವು, ನಿಃಕಲ, ನಿಃಶೂನ್ಯ, ನಿರಂಜನವೆಂಬ ಮೂರು ಹಂತಗಳಲ್ಲಿ ದಿಕ್ಕುಗಳನ್ನು ನಿರ್ಮಿಸುವದಿಲ್ಲ. ಮುಂದಿನ ಮಹಾಲಿಂಗದ ಅಂತಸ್ತಿನಲ್ಲಿ (stage) ಬಯಲು (space) ಉತ್ಪತ್ತಿಯಾಗುವದು. ಈ ಬಯಲಿನಲ್ಲಿ ವಿಶ್ವಚೈತನ್ಯವು (cosmic spirit) ಅಷ್ಟಕೋನದ ರೂಪದಲ್ಲಿ (0ctagon) ವರ್ತಿಸುವದು. ವಿಶ್ವದ ಈ ಅಷ್ಟಕೋನಗಳೇ ಅಷ್ಟದಿಕ್ಕುಗಳಾಗಿ ಪರಿವರ್ತನೆಗೊಳ್ಳುವವು. ಇವುಗಳನ್ನು ಹೀಗೆ ವಿವರಿಸುತ್ತಾರೆ. ೧) ಪೂರ್ವ, ೨) ಆಗ್ನೇಯ, ೩) ದಕ್ಷಿಣ, ೪) ನೈಋತ್ಯ ೫) ಪಶ್ಚಿಮ ೬) ವಾಯವ್ಯ ೭) ಉತ್ತರ ೮) ಈಶಾನ್ಯ.

ವಿಶ್ವದಲ್ಲಿಯ ಈ ಎಂಟು ದಿಕ್ಕುಗಳನ್ನು ನಿಯಂತ್ರಿಸುವ, ವಿಶ್ವಶಕ್ತಿ ಕೇಂದ್ರಗಳಿಗೆ (universal controlling power centres) ಅಷ್ಟದಿಕ್‌ಪಾಲಕರೆಂದು, ಪೌರಾಣಿಕ ಭಾಷೆಯಲ್ಲಿ ಹೇಳುತ್ತಾರೆ. ಆ ಕೇಂದ್ರಗಳನ್ನು ನಿಯಂತ್ರಿಸುವ ದೇವತೆಗಳು ಈ ರೀತಿ ಇರುತ್ತವೆ.

೧) ಇಂದ್ರ ೨) ಅಗ್ನಿ ೩) ಯಮ ೪) ನೈರುತ್ಯ
೫) ವರುಣ ೬) ವಾಯವ್ಯ ೭) ಕುಬೇರ ೮) ಈಶಾನ್ಯ.

ಮಾನವನ ಶರೀರದಲ್ಲಿ ಈ ಎಂಟು ದಿಕ್ಕುಗಳ ಪರಿಣಾಮವು, ಭಾವಾತ್ಮಕವಾಗಿ ಅನಾಹತಚಕ್ರದ ಎಂಟು ದಳಗಳ ಮೇಲಾಗುವದು. ಈ ಎಂಟು ದಿಕ್ಕುಗಳಿಂದ ಪ್ರಭಾವಿತವಾದ ಎಂಟು ದಳಗಳ ಮೇಲೆ ಜೀವಹಂಸನು ಹರಿದಾಡುತ್ತಿರುವನು. ಪ್ರತಿಯೊಂದು ದಿಕ್ಕಿನ ದಳದ ಮೇಲೆ ಜೀವನು ಸಂಚರಿಸುತ್ತಿರುವಾಗ ಆಯಾ ಎಂಟು ಪ್ರಕಾರದ ಗುಣಧರ್ಮಗಳನ್ನು ಜೀವನು ಅನುಭವಿಸುತ್ತಾನೆ. ಅವುಗಳನ್ನು ಕೆಳಗಿನಂತೆ ವಿವರಿಸಬಹುದು.

೧) ಪೂರ್ವದಿಕ್ಕಿನ ದಳದ ಮೇಲೆ ಜೀವನು ಸಂಚರಿಸುವಾಗ ಗುಣಿಯಾಗುವನು.
೨) ಆಗ್ನೇಯದಿಕ್ಕಿನಲ್ಲಿ ಹಸಿವೆಯಾಗುವುದು.
೩) ದಕ್ಷಿಣದಿಕ್ಕಿನಲ್ಲಿ ದುರಾಚಾರಿಯಾಗುವನು.
೪) ನೈರುತ್ಯದಿಕ್ಕಿನಲ್ಲಿ ಕೋಪಿಷ್ಟನಾಗುವನು.
೫) ಪಶ್ಚಿಮದಿಕ್ಕಿನಲ್ಲಿ ನಿದ್ರಾಲಸ್ಯಕ್ಕೆ ಒಳಗಾಗುವನು.
೬) ವಾಯವ್ಯದಿಕ್ಕಿನಲ್ಲಿ ಚಂಚಲನಾಗುವನು

೭) ಉತ್ತರದಿಕ್ಕಿನಲ್ಲಿ ಧರ್ಮಶೀಲನಾಗುವನು.

೮) ಈಶಾನ್ಯದಿಕ್ಕಿನ ದಳದಲ್ಲಿ ವಿಷಯಲೋಲುಪನಾಗುವನು.

೯) ಊರ್ಧ್ವದಿಕ್ಕು : ಈ ದಿಕ್ಕಿನಲ್ಲಿ ದೋಷದಿಂದ ಬಿಡುಗಡೆಹೊಂದಿ, ಜೀವನ ಅನಾಹತಚಕ್ರದ (ಹೃತ್‌ಕಮಲದ) ಮಧ್ಯಕ್ಕೆ ಬಂದು, ಸುಷುಮ್ನ ಮಾರ್ಗದಿಂದ ಊರ್ಧ್ವಕ್ಕೇರಿದಾಗ ಜೀವನು ಭಕ್ತಿಪರನಾಗಿ ಸಾಮರಸ್ಯ ದೆಡೆಗೆ ಸಾಗುವನು.

೧೦) ಅಧೋದಿಕ್ಕು : ಈ ಒಂಬತ್ತು ದಿಕ್ಕುಗಳಲ್ಲದೆ, ಜೀವನು ಈಶಾನ್ಯದಿಕ್ಕನ್ನು ದಾಟಿ ಅತಿ ವಿಷಯಲೋಲುಪತೆಯನ್ನು ಮೀರಿ, ಅತಿ ಪಾಪಿಷ್ಟನಾದಾಗ, ಜೀವನು ಅಧೋದ್ವಾರದ ಅಧೋ ದಿಕ್ಕಿನಲ್ಲಿ ದುಃಖಿಸುತ್ತಾ ಸಾಗುವನು.

೨೧) ಜ್ಞಾನವು ನಾಲ್ಕು ಪ್ರಕಾರವಾಗಿದೆ : ೧) ವಸ್ತುಜನ್ಯವಾದುದು ೨) ಇಂದ್ರಿಯ ಜನ್ಯವಾದುದು ೩) ನಾದಜನ್ಯವಾದುದು ೪) ಆತ್ಮಜನ್ಯವಾದುದು.

೧) ಸ್ಥೂಲಶರೀರ ಹಾಗೂ ಕರ್ಮೇಂದ್ರಿಯಗಳ ಮುಖಾಂತರ ಪಂಚ ವಿಷಯಗಳ ಸಂಪರ್ಕದಿಂದುಂಟಾದ ಜ್ಞಾನವು ವಸ್ತುಜನ್ಯವಾದುದು.

೨) ಪಂಚಜ್ಞಾನೇಂದ್ರಿಯಗಳು ಹಾಗೂ ದಶವಾಯುಗಳಿಂದ ಮನ ಹಾಗೂ ಅಹಂಕಾರಗಳ ಮೂಲಕ ಅರಿಯಲ್ಪಡುವ ಜ್ಞಾನವು ಇಂದ್ರಿಯಜನ್ಯ ಜ್ಞಾನವು.

೩) ಆಕಾಶತತ್ವದ ಬಯಲಿನ ನಾದತತ್ವದಿಂದ ಉಂಟಾಗುವ ಜ್ಞಾನವು ನಾದಜನ್ಯವಾದುದು. ಇದು ಜ್ಞಾತೃವಿನಿಂದ (ಜೀವನಿಂದ) ಅರಿಯಲ್ಪಡುವದು.

೪) ಹಾಗೆಯೇ ಆತ್ಮನ ಮಥನದಿಂದ ಉಂಟಾಗುವ ಜ್ಞಾನಕ್ಕೆ 'ವೇದ' ಎಂದು ಅನುಭಾವದ ಪರಿಭಾಷೆಯಲ್ಲಿ ಹೇಳುವರು.

ಈ ಆತ್ಮಜ್ಞಾನವು ಅರ್ಥಾತ್ ವೇದಜ್ಞಾನವು ವಿಶ್ವದ ಹಂತದಲ್ಲಿ ನವವಿಧವಾಗಿದೆ: ೧) ಸೃಷ್ಟಿ ೨) ಸಂರಕ್ಷಣ ೩) ಲಯ ೪) ತಿರೋಧಾನ ೫) ಅನುಗ್ರಹ ೬) ಆತ್ಮ ಬೋಧೆ ೭) ನಿಃಕಲ ೮) ನಿಃಶೂನ್ಯ ೯) ನಿರಂಜನ ಎಂಬ ನವವಿಧ ಅಂತಸ್ತುಗಳನ್ನು ಅರಿದು ಆಚರಿಸುವ ಜ್ಞಾನಾಚರಣೆಗೆ ನವವಿಧ ವೇದ ಅಥವಾ ನವವಿಧ ಜ್ಞಾನದ ಪ್ರಕಾರಗಳೆಂದು ಹೇಳಬಹುದು.

೧) ಸೃಷ್ಟಿಜ್ಞಾನ (knowledge of generation) ೨) ಸಂರಕ್ಷಣಜ್ಞಾನ (Knoledge of protection) ೩) ಲಯಜ್ಞಾನ (Knowledge of destruction) ೪) ತಿರೋಧಾನಜ್ಞಾನ (Knowledge of regeneration) ೫) ಅನುಗ್ರಹ ಜ್ಞಾನ (Knowledge of blessings) ೬) ಆತ್ಮಜ್ಞಾನ (Knowledge of soul)

೭) ನಿಃಕಲಜ್ಞಾನ (Knowledge of super soul) ೮) ನಿಃಶೂನ್ಯಜ್ಞಾನ (Knowledge of Supreme soul) ೯) ನಿರಂಜನಜ್ಞಾನ (Knowledge of Absolute) ಹೀಗೆ ವಿಶ್ವದ ಹಂತದ ಒಂಬತ್ತು ಪ್ರಕಾರದ ಕ್ರಿಯಾ ಕಲಾಪಗಳ ಜ್ಞಾನಾನುಭವವನ್ನೇ ನವವಿಧ ವೇದಗಳೆಂದು ಕರೆಯಬಹುದು.

ಈ ಹಂತಗಳ ಕೇಂದ್ರ ನಿಯಂತ್ರಕ ಶಕ್ತಿಗಳನ್ನೇ ಪೌರಾಣಿಕ ಭಾಷೆಯಲ್ಲಿ ಬ್ರಹ್ಮಾದಿ ದೇವತೆಗಳೆಂದು ಸಂಬೋಧಿಸುತ್ತಾರೆ.

ಪರವಸ್ತುವಿನ ಮಹಾಚೈತನ್ಯದಿಂದ ಹೊರಹೊಮ್ಮಿದ ಪ್ರಕಾಶದ ನವವಿಧ ಆಕೃತಿಗಳಿಂದ ಈ ವೇದ ಜ್ಞಾನವು ಪ್ರಕಟವಾಗುವದು. ನವವಿಧ ಪ್ರಕಾಶದ ಆಕೃತಿಗಳಿಗೆ ಜ್ಞಾನದ ಮುಖಂಗಳು (ಜ್ಞಾನ ದ್ವಾರಗಳು) ಉತ್ಪತ್ತಿಯಾಗುವವು. ಈ ಮುಖಗಳನ್ನೇ ಹೀಗೆ ಹೆಸರಿಸುವರು.

೧) ಸದ್ಯೋಜಾತ ೨) ವಾಮದೇವ ೩) ಅಘೋರ ೪) ತತ್ಪುರುಷ ೫) ಈಶಾನ ೬) ಊರ್ಧ್ವ ಹೃದಯ ೭) ಚಿತ್ಕಲೆ ೮) ಚಿದ್ಬಿಂದು ೯) ಚಿನ್ನಾದ. ಹೀಗೆ ನವವಿಧ ಮುಖಂಗಳನ್ನು ಅನುಭಾವದಿಂದ ಅರಿಯುವದು.

೨೨) ಕಲೆ ಎಂಬುದು ರಚನೆ, ಆಕಾರ ಹಾಗೂ ರೂಪಗಳನ್ನು ಉಂಟು ಮಾಡುವ ಶಕ್ತಿವಿಶೇಷವು. ನಾದವು ಭಾವೋತ್ಪತ್ತಿಗೆ ಕಾರಣವಾದರೆ ಬಿಂದುವು ಸಾಕಾರ ನಿರಾಕಾರದ ಮಧ್ಯಂತರದ ಸ್ವರೂಪವು. ಸಾಕಾರವು ಪ್ರಾರಂಭವಾಗುವುದೇ ಬಿಂದುವಿನಿಂದ. ಸಾಕಾರವು ಕಲೆಯಲ್ಲಿ ಪೂರ್ಣವಾಗುವುದು. ವಸ್ತುಗಳಿಗೆ ರೂಪಾಕಾರವನ್ನು ನೀಡುವದೇ ಕಲಾಶಕ್ತಿಯು. ಪರಬ್ರಹ್ಮನಲ್ಲಿ ಚಿತ್‌ಕಲೆಯು ಮೈದೋರಿದ ನಂತರ ಚಿನ್ನಾದ, ಚಿದ್‌ಬಿಂದು, ಮೂಲಚಿತ್ತು ಮೂರನ್ನು ಸೇರಿಸಿಕೊಂಡು, ಚಿತ್‌ಕಲೆಯು ವಿಶ್ವಮಯ ಮಹಲಿಂಗದ ರೂಪವನ್ನು ತಾಳುವದು. ಈ ಲಿಂಗವು ಮಹಾಜ್ಯೋತಿರಾಕೃತಿಯನ್ನು ತಾಳುವದು. ಇದೇ ಶಾಂತ್ಯಾತೀತೋತ್ತರಕಲೆಯು ಮತ್ತು ಐದು ಕಲೆಗಳಾಗಿ ರೂಪಗೊಳ್ಳುವದು. ಅವು ಹೀಗೆ ಇವೆ. (೧) ಶಾಂತ್ಯಾತೀತಕಲೆ (೨) ಶಾಂತಿಕಲೆ (೩) ವಿದ್ಯಾಕಲೆ (೪) ಪ್ರತಿಷ್ಠಾಕಲೆ (೫) ನಿವೃತ್ತಿಕಲೆ. ವಿಶ್ವದ ಹಂತದಲ್ಲಿರುವ ಈ ಆರು ಕಲೆಗಳು ವ್ಯಕ್ತಿಯ ಹಂತದಲ್ಲಿ ಆರು ಅಂಗಗಳಾಗಿ, ಆರು ಅಂಗಗತ ಶಕ್ತಿಗಳಾಗಿ ರೂಪ ಗೊಳ್ಳುತ್ತವೆ. ಇವುಗಳನ್ನೇ ಅನುಕ್ರಮವಾಗಿ ಭಕ್ತ ಮಹೇಶ, ಪ್ರಸಾದಿ, ಪ್ರಾಣ ಲಿಂಗಿ, ಶರಣ, ಐಕ್ಯವೆಂದೂ ಹಾಗೂ ಶ್ರದ್ಧಾ, ನಿಷ್ಠಾ, ಸಾವಧಾನ, ಅನುಭಾವ, ಆನಂದ, ಸಮರಸವೆಂಬ ಆರು ಭಕ್ತಿಗಳ ಸ್ವರೂಪವನ್ನು ತಾಳುವದು.

ನಿವೃತ್ತಿ ಕಲೆಯೇ ಶ್ರದ್ಧಾಭಕ್ತಿಯಾಗಿ, ಚಿತ್ತಕೋಶದಲ್ಲಿ ಅಡಗಿರುವ ಕರ್ಮವಾಸನೆಯನ್ನು ಕಳೆದು ಪಂಚಕರ್ಮೇಂದ್ರಿಯಗಳನ್ನು ಶುದ್ಧಮಾಡಿ, ಸದಾಚಾರದಲ್ಲಿ ಶ್ರದ್ಧೆಯನ್ನುಂಟುಮಾಡುವದೇ ನಿವೃತ್ತಿ ಕಲೆಯ ಕರ್ತವ್ಯವಾಗಿ

ರುತ್ತದೆ. ಪ್ರವೃತ್ತಿ ಸುಖದಿಂದ ಬಿಡುಗಡೆಗೊಳಿಸಿ ಅಂತರ್ಮುಖಗೊಳಿಸುವದೆ ನಿವೃತ್ತಿ ಕಲೆಯ ಮೂಲ ಗುರಿಯಾಗಿರುತ್ತದೆ. ಇದೇ ರೀತಿ ಇನ್ನುಳಿದ ಕಲೆಗಳ ಪರ್ಯಾಯ ರೂಪಗಳಾದ, ನಿಷ್ಕಾದಿ ಸಮರಸ ಭಕ್ತಿಗಳು ಸಂಬಂಧಪಟ್ಟ ಆಯಾಯ ಪಂಚಭೂತ ಗಳ ಇಂದ್ರಿಯಗಳನ್ನೂ ಹಾಗೂ ಘಟಕಗಳನ್ನೂ ಪರಿಶುದ್ಧಗೊಳಿಸುತ್ತ ಸುಬುದ್ಧಿ, ನಿರಹಂಕಾರ, ಸುಮನಸ್ಸು, ಸುಜ್ಞಾನ, ಸಮರಸ ಭಾವಗಳನ್ನು ಉಂಟು ಮಾಡುತ್ತವೆ. ಶಾಂತ್ಯಾತೀತೋತ್ತರ ಕಲೆಯ ನಂತರ ಪರವಸ್ತುವಿನಲ್ಲಿ ಉದ್ಭವವಾಗುವ ಚಿತ್‌ಕಲೆ, ಚಿತ್‌ಬಿಂದು, ಚಿನ್ನಾದವೆಂಬ ತ್ರಿವಿಧ ಕಲೆಗಳು ಸತ್ ಚಿತ್ ಆನಂದವೆಂಬ ತ್ರಿವಿಧ ಸ್ವರೂಪಗಳನ್ನು ಸಾಧಕನಿಗೆ ಸಿದ್ಧಿಸಿಕೊಡುತ್ತವೆ. ಹೀಗೆ ನವವಿಧ ಕಲೆಗಳು ವ್ಯಕ್ತಿಗತ ಹಂತದಲ್ಲಿ ತಾತ್ವಿಕವಾಗಿ ಕಾರ್ಯಗೈಯುತ್ತವೆ. ಈ ಕಾರ್ಯಾಚರಣೆಯನ್ನು ಅರ್ಚನೆಯ ಕಾಲದಲ್ಲಿ ಹೀಗೆ ಅಳವಡಿಸಿಕೊಳ್ಳುವುದೆಂಬುದನ್ನು ಸ್ಥೂಲವಾಗಿ ಮೇಲಿನ ಕಲೆಗಳು ಎಂಬ ವಿಭಾಗದಲ್ಲಿ ವಿವರಿಸಿದ್ದಾರೆ.

೨೩) 'ಮುಖಗಳು' ಎಂಬ ಈ ವಿಭಾಗದಲ್ಲಿ ಪರಮಾತ್ಮನ ಲಿಂಗಚೈತನ್ಯವು ಯಾವ ಯಾವ ಮಾಧ್ಯಮ ವಾಗಿ ಹೊರಹೊಮ್ಮಿ ಕಾರ್ಯಗೈಯ್ಯುವ ಇಂದ್ರಿಯ ಗಳಿಗೆ ಹಾಗೂ ಉನ್ಮನೇಂದ್ರಿಯಗಳಿಗೆ ಮುಖಗಳೆಂದು ಕರೆಯುತ್ತಾರೆ. ಲಿಂಗ ಚೈತನ್ಯವು ಪ್ರಕೃತಿಶಕ್ತಿಯ ಮೂಲಕವಾಗಿ ಪ್ರವೃತ್ತಿಮಯವಾಗಿಯೂ, ಚಿಚ್ಛಕ್ತಿ ಮೂಲಕವಾಗಿ ನಿವೃತ್ತಿಮಯವಾಗಿಯೂ ಕಾರ್ಯಗೈಯ್ಯುತ್ತದೆ. ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯ ಮುಂತಾದ ಇಂದ್ರಿಯಗಳು. ಪ್ರವೃತ್ತಿ ಹಾಗೂ ನಿವೃತ್ತಿ ಎರಡೂ ಪ್ರಕ್ರಿಯೆಗಳಿಗೆ ಮಾಧ್ಯಮವಾಗಿ ಅಂದರೆ ಮುಖಗಳಾಗಿ ಕಾರ್ಯಮಾಡುತ್ತವೆ. ಈ ಇಂದ್ರಿಯಗಳು ಪ್ರವೃತ್ತಿಗೆ ಮುಖಗಳಾಗಿ ವರ್ತಿಸಿದಾಗ ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿ ಎಂಬ ವಿಷಯಸುಖಗಳನ್ನು ಅನುಭವಿಸು ತ್ತವೆ. ಇವೇ ಇಂದ್ರಿಯಂಗಳು ನಿವೃತ್ತಿಗೆ ಮುಖಗಳಾಗಿ ವರ್ತಿಸಿದಾಗ ವಿಷಯಗಳನ್ನು ಮಂತ್ರಚೇತನದ ಪ್ರಭಾವದಿಂದ ಪ್ರಸಾದೀಕರಿಸಿಕೊಂಡು ಸುಗಂಧ, ಸುರಸ, ಸುರೂಪು, ಸುಸ್ಪರ್ಶ, ಸುಶಬ್ದ ಸಂತೃಪ್ತಿ ಎಂಬ ಪ್ರಸಾದಸುಖಗಳನ್ನು ಪಡೆಯುತ್ತವೆ.

ಸತ್ಕ್ರಿಯೆ, ಸುಜ್ಞಾನ, ಸದ್ಭಾವಗಳು, ಬ್ರಹ್ಮರಂಧ್ರ, ಶಿಖಾ, ಪಶ್ಚಿಮ, ಮುಂತಾದವುಗಳ ಮೂಲಕ ಲಿಂಗಚೈತನ್ಯದ (ಚಿತ್ ಚೈತನ್ಯದ) ನಿತ್ಯಾನಂದ ಪರಿಪೂರ್ಣವಾದ, ಅಖಂಡಾನಂದವೆಂಬ ಪ್ರಸಾದ ಪ್ರಕಾಶವನ್ನು ಪಡೆಯಲು ಮುಖಗಳಾಗಿರುತ್ತವೆ.

೨೪) ಪದಾರ್ಥಗಳು : ಈ ವಿಭಾಗದಲ್ಲಿ ನವವಿಧ ಪದಾರ್ಥಗಳ ವಿವರಣೆ ಇದೆ. ವಿಶ್ವದರೂಪಾತ್ಮಕವಾದ ಘಟಕಗಳಿಗೆ ಪದಾರ್ಥಗಳೆಂದು ಕರೆಯುತ್ತಾರೆ. 'ಪದಾರ್ಥ' ಎಂಬ ಸಂಯುಕ್ತ ಶಬ್ದದಲ್ಲಿ ಪದ+ಅರ್ಥ ಎಂಬ ಎರಡು ಶಬ್ದಗಳಿವೆ. ಪದವೆಂದರೆ ನಿಶ್ಚಿತಭಾವ ಸಂಕೇತವನ್ನು ಕೊಡುವ ಶಬ್ದ. ಅರ್ಥವೆಂದರೆ ಈ

ಭಾವದೊಳಗೆ ಹುದುಗಿರುವ ವಿವರಣೆ. ಹೀಗೆ ಪದಾರ್ಥದ ಗೂಢಾರ್ಥವನ್ನು ವಿವೇಚಿಸಿದಾಗ ವಿಶ್ವದ ಎಲ್ಲ ವಸ್ತುಮಯ ಪದಾರ್ಥಗು ಚಿದ್‌ಭಾವಶಕ್ತಿಯಿಂದಲೇ ಉತ್ಪನ್ನವಾಗಿವೆ. ಈ ಎಲ್ಲ ವಸ್ತುಗಳನ್ನು ಒಂಬತ್ತು ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ. ಇವುಗಳನ್ನೇ ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಆತ್ಮ ಸತ್, ಚಿತ್, ಆನಂದ ಎಂದು ಗುರ್ತಿಸುತ್ತಾರೆ. ಈ ಒಂಬತ್ತು ತತ್ವಗಳ ಸಾರಗಳನ್ನೇ ನವವಿಧ ಪದಾರ್ಥಗಳೆಂದು ಪರಿಗ್ರಹಿಸುತ್ತಾರೆ. ಈ ನವವಿಧ ಸಾರಗಳನ್ನೇ ಅಂತರ್ ಬಾಹ್ಯ ಇಂದ್ರಿಯಗಳು ಪದಾರ್ಥ–ಪ್ರಸಾದಗಳೆಂದು ಅಂತಃಕರಣ ಹಾಗೂ ಆತ್ಮನಿಗೆ ಅರ್ಪಿಸುತ್ತವೆ.

ಅಂತಃಕರಣಗಳ ಅಂತರಂಗದ ಕೇಂದ್ರಗಳಾದ ನವವಿಧಚಕ್ರಗಳನ್ನು ರುದ್ರತತ್ವದ ಅಧಿಷ್ಠಾನ ಕೇಂದ್ರಗಳೆಂದು ಪರಿಭಾವಿಸಿ ನವವಿಧ ಪದಾರ್ಥಗಳ ವಿವರಣೆಯನ್ನು ಈ ವಿಭಾಗದಲ್ಲಿ ಕೊಡಲಾಗಿದೆ.

ರುದ್ರ ಶಬ್ದವು ವೇದಗಳಲ್ಲಿ, ಪುರಾಣಗಳಲ್ಲಿ, ವಿಶ್ವೋತ್ಪತ್ತಿ ಸಾಹಿತ್ಯದಲ್ಲಿ ಭಿನ್ನ ಭಿನ್ನ ಅರ್ಥದೊಂದಿಗೆ ಪ್ರಯೋಗಿಸಲ್ಪಟ್ಟಿದೆ. ವೇದಗಳಲ್ಲಿ ರುದ್ರನು ರಕ್ಷಣಾ ದೇವತೆಯಾಗಿ, ಪುರಾಣಗಳಲ್ಲಿ ನಾಶ ಅಥವಾ ಲಯದ ದೇವತೆಯಾಗಿ, ವಿಶ್ವೋತ್ಪತ್ತಿ ಸಾಹಿತ್ಯದಲ್ಲಿ ವಿಶ್ವಸೃಷ್ಟಿಯ ವಿವಿಧ ಘಟಕಗಳ ನಿರ್ಮಾತೃ ದೇವತೆಗಳಾಗಿಯೂ ಪ್ರಯೋಗಿಸಲ್ಪಟ್ಟಿದೆ.

ಈ ವಿಭಾಗದ ಟೀಕಾಕಾರರು ನವಚಕ್ರಗಳ ಭಿನ್ನ ಭಿನ್ನ ದಳಗಳಿಗೆ ರುದ್ರ ಶಬ್ದವನ್ನು ಪರ್ಯಾಯವಾಗಿ ಪ್ರಯೋಗಿಸಿದ್ದಾರೆ. ಈ ರುದ್ರ ಶಬ್ದವು ಯಜ್ಞಾದಿಗಳಲ್ಲಿ ಭಾವಿಸಲ್ಪಡುವ ರುದ್ರನಲ್ಲ ಎಂಬುದನ್ನು ಗಮನಿಸಬೇಕು.

ವಚನಶಾಸ್ತ್ರಗಳಲ್ಲಿ ಕೆಲವೆಡೆ ರುದ್ರ ಶಬ್ದವು ಪರವಸ್ತು, ಪರಶಿವ, ಪರಬ್ರಹ್ಮನಿಗೆ ಪರ್ಯಾಯವಾಗಿ ಪ್ರಯೋಗಿಸಲ್ಪಟ್ಟಿದೆ.

ಇಲ್ಲಿ ಎಂಟನೆಯ ಹಾಗೂ ಒಂಬತ್ತನೆಯ ಪದಾರ್ಥಗಳಾದ ಪರಿಪೂರ್ಣ ಪದಾರ್ಥ ಹಾಗೂ ಅವಿರಳ ಪದಾರ್ಥಕ್ಕೆ ಬದಲಾಗಿ ಕ್ರಮವಾಗಿ ನಿತ್ಯಾನಂದ ಪದಾರ್ಥ ಹಾಗೂ ಪರಿಪೂರ್ಣಾನಂದ ಪದಾರ್ಥವೆಂದು ಪ್ರಯೋಗಿಸಬಹುದು.

ಈ ನವವಿಧ ಪದಾರ್ಥಗಳನ್ನು ಅಂತರಂಗದಲ್ಲಿರುವ ೧) ಜೀವಾತ್ಮ ೨) ಅಂತರಾತ್ಮ ೩) ಪರಮಾತ್ಮ ೪) ನಿರ್ಮಲಾತ್ಮ ೫) ಶುದ್ಧಾತ್ಮ ೬) ಜ್ಞಾನಾತ್ಮ ೭) ಮಹಾತ್ಮ ೮) ದಿವ್ಯಾತ್ಮ ೯) ಚಿನ್ಮಯಾತ್ಮ ಎನ್ನುವ ಆತ್ಮ–ಪರಮಾತ್ಮನ ವಿವಿಧ ಸ್ವರೂಪಗಳಿಗೆ ಅರ್ಪಿಸುವ ಪದಾರ್ಥಗಳನ್ನು ಧಾರ್ಮಿಕ ಶೈಲಿಯಲ್ಲಿ ವಿವೇಚಿಸಿದ್ದಾರೆ.

೨೫) ಪ್ರಸಾದಗಳು ಎಂಬ ವಿಭಾಗದಲ್ಲಿ ಚತುರ್ವಿಧಬಿಂದುಲಿಂಗಂಗಳು, ಷಡ್ವಿಧಧಾತುಲಿಂಗಗಳು, ದಶವಿಧ ಕ್ಷೇತ್ರಲಿಂಗಗಳು, ದ್ವಾದಶ ವಿಕೃತಿಲಿಂಗಗಳು, ಷೋಡಶ ಕಲಾಲಿಂಗಗಳು, ಉಭಯ ವಿದ್ಯಾಲಿಂಗಗಳು, ಶತಸಹಸ್ರ ಶಿವಕಳೆ

ಲಿಂಗಗಳು, ತ್ರಿವಿಧ ವಿವೇಕಲಿಂಗಗಳು, ನಿರಂಜನಲಿಂಗವು ಎಂದು ಒಂಬತ್ತು ಪ್ರಕಾರದ ಪ್ರಸಾದವನ್ನು ಅರ್ಪಿಸುವ ಲಿಂಗಗಳನ್ನು ನಿರೂಪಿಸಿದ್ದಾರೆ. ಈ ಲಿಂಗಗಳನ್ನು ಕ್ರಮವಾಗಿ ಆಧಾರಚಕ್ರದ ನಾಲ್ಕು ದಳಗಳಿಗೆ, ಸ್ವಾಧಿಷ್ಠಾನಚಕ್ರದ ಆರು ದಳಗಳಿಗೆ, ಮಣಿಪೂರಕಚಕ್ರದ ಹತ್ತುದಳಗಳಿಗೆ, ಅನಾಹತಚಕ್ರದ ಹನ್ನೆರಡು ದಳಗಳಿಗೆ, ವಿಶುದ್ಧಿಚಕ್ರದ ಹದಿನಾರು ದಳಗಳಿಗೆ, ಆಜ್ಞಾಚಕ್ರದ ಎರಡು ದಳಗಳಿಗೆ, ಸಹಸ್ರಾರದ ಸಹಸ್ರದಳಗಳಿಗೆ, ಶಿಖಾಚಕ್ರದ ಮೂರುದಳಗಳಿಗೆ, ಪಶ್ಚಿಮಚಕ್ರದ ಒಂದು ದಳಕ್ಕೆ ಪದಗಳನ್ನಾಗಿ ಸಂಬೋಧಿಸಿದ್ದಾರೆ ಎಂಬುದನ್ನು ಗಮನಿಸಬೇಕು.

೨೬) ಈ ವಿಭಾಗದ ವಿವರಣೆಯಲ್ಲಿ ಪರವಸ್ತುವಿನ ಲಕ್ಷಣಗಳನ್ನು ಕುರಿತು ವಿವರಿಸಲಾಗಿದೆ. ಈ ವಿವರಣೆಯು ತಾತ್ವಿಕವಾಗಿರದೆ ಕೇವಲ ಗುಣಾತ್ಮಕವಾಗಿದೆ. ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳು ಆತ್ಮ ಹಾಗೂ ಪಂಚಭೂತಗಳಿಂದ ಕೂಡಿದ ಷಟ್‌ತತ್ವಗಳಿಂದ ನಿರ್ಮಾಣವಾಗಿವೆ. ಈ ಷಟ್‌ತತ್ವಗಳು ಸಾದಾಖ್ಯಗಳು ಹಾಗೂ ಕಲೆಗಳಿಂದ ಕೂಡಿದ ವಿಶ್ವದಿಂದ ನಿರ್ಮಾಣವಾಗಿವೆ. ಈ ವಿಶ್ವಕ್ಕೆ ಲಿಂಗಾಯತರ ಧಾರ್ಮಿಕ ಭಾಷೆಯಲ್ಲಿ ಮಹಾಲಿಂಗವೆಂದು ಕರೆಯುತ್ತಾರೆ. ಈ ಮಹಾಲಿಂಗವು ಚಿನ್ನಾದ, ಚಿದ್‌ಬಿಂದು, ಚಿತ್‌ಕಲೆ ಹಾಗೂ ಮೂಲ ಚಿಚ್ಛಕ್ತಿಯಿಂದೊಡಗೂಡಿ ಹೆಪ್ಪುಗಟ್ಟಿ ನಿರ್ಮಾಣವಾಗಿದೆ. ಈ ಮೂಲ ಚಿಚ್ಛಕ್ತಿ ಹಾಗೂ ಪರವಸ್ತು ಅವಿನಾಭಾವ ಸಂಬಂಧದಿಂದ ಇರುತ್ತವೆ. ಈ ಮೂಲ ಚಿಚ್ಛಕ್ತಿಯ ಹಂತದ ಪರವಸ್ತುವಿನ ನಿಲುವು ನಿರಾಮಯ, ನಿರಾಲಂಬ, ಸಹಜವೆಂದು ಮೂರು ತೆರನಾಗಿರುತ್ತದೆ. ಈ ಪರವಸ್ತುವು ಲೀಲೆದೋರಿದಾಗ ಆರು ಲಕ್ಷಣಗಳನ್ನು ಹೊಂದಿರುತ್ತದೆ. ಅವು ೧) ಸತ್ ೨) ಚಿತ್ ೩) ಆನಂದ ೪) ನಿತ್ಯ ೫) ಪರಿಪೂರ್ಣ ೬) ಅಖಂಡ. ಇವುಗಳನ್ನೇ ಪರವಸ್ತುವಿನ ಪರಬ್ರಹ್ಮದ ಪರಶಿವನ ಲೀಲಾಮುಖದ ಲಕ್ಷಣಗಳೆಂದು ಕರೆಯುತ್ತಾರೆ. ಲೀಲೆದೋರದ ಮುನ್ನಿನ ಮೂರು ಲಕ್ಷಣಗಳಾದ ನಿರಾಮಯ, ನಿರಾಲಂಬ, ಸಹಜ ಇವುಗಳನ್ನು ಸೇರಿಸಿದರೆ ಒಟ್ಟು ಒಂಬತ್ತು ಲಕ್ಷಣಗಳಾಗುತ್ತವೆ. ಹೀಗೆ ತಾತ್ವಿಕವಾಗಿ ಒಂಬತ್ತು ಲಕ್ಷಣಗಳನ್ನು ಅರಿಯಬೇಕು.

ಸಹಜ ಲಕ್ಷಣ : ಇದು ಪರವಸ್ತುವಿನ ಮೂಲ ಲಕ್ಷಣವಾಗಿದೆ. ಸಮುದ್ರದ ಆಳದಲ್ಲಿರುವ ನೀರು ವಾಯುವಿನ ಯಾವ ಸಂಪರ್ಕವೂ ಇಲ್ಲದೆ ಹೇಗೆ ನಿಶ್ಚಲವಾಗಿರುತ್ತದೆಯೋ ಹಾಗೆ ಪರವಸ್ತು ಲೀಲೆಯ ಕಂಪನ ಇಲ್ಲದೆ ನಿಃಶಬ್ದವಾಗಿರುತ್ತದೆ. ಇದಕ್ಕೆ ಸಹಜ ಲಕ್ಷಣವೆನ್ನುತ್ತಾರೆ. ಇದನ್ನೇ ಪ್ರಭುದೇವರು ''ನೀನು ಇದ್ದೆಯಲ್ಲ ಇಲ್ಲದಂತೆ'' ಎಂದು ಚಿತ್ರಿಸುತ್ತಾರೆ.

ನಿರಾಲಂಬ ಲಕ್ಷಣ : ಸಹಜ ಲಕ್ಷಣದಲ್ಲಿ ಪರವಸ್ತುವಿನ ಸ್ವಯಂ ಪ್ರೇರಣೆಯಿಂದ ಮೂಲ ಚಿತ್‌ಶಕ್ತಿಯು (ಚಿಚ್ಛಕ್ತಿ) ಉತ್ಪನ್ನವಾಗುತ್ತದೆ. ಹಾಗೂ ಈ ಪರವಸ್ತುವಿನ ಅಸ್ತಿತ್ವಕ್ಕೆ ಬೇರೆ ಯಾವುದೇ ಆಧಾರವಾಗಿರದೆ ತನ್ನಷ್ಟಕ್ಕೆ ತಾನೇ ಆಧಾರವಾಗಿರುತ್ತದೆ. ಈ ಹಂತದ ಲಕ್ಷಣಕ್ಕೆ ನಿರಾಲಂಬ ಅಥವಾ ಸ್ವಯಂಭು ಲಕ್ಷಣವೆಂದು

ಕರೆಯುತ್ತಾರೆ. ಮೂಲ ಚಿತ್ತುವಿನ ಅಂಕುರವು ಪರವಸ್ತುವನ್ನು ಹೊರತುಪಡಿಸಿ ಬೇರೆ ಶಕ್ತಿಯ ಸಹಾಯದಿಂದಾಗುವದಿಲ್ಲ. ಪರವಸ್ತುವಿನ ಸಹಜ ಲಕ್ಷಣದಿಂದ ಪರವಸ್ತುವಿನ ಸ್ವಯಂ ಪ್ರೇರಣೆಯಿಂದ ಈ ಅಂಕುರವು ತೋರುತ್ತದೆ. ಆದ್ದರಿಂದಲೇ ಇದಕ್ಕೆ ನಿರಾಲಂಬವೆಂದು ಕರೆಯುತ್ತಾರೆ. ಎಂಬತ್ತುನಾಲ್ಕುಲಕ್ಷ ಜೀವರಾಶಿಗಳು ಪುರುಷ ಹಾಗೂ ಸ್ತ್ರೀ ಎಂಬ ಪರಸ್ಪರ ವಿರುದ್ಧ ಬೀಜಾಣುಗಳ ಸಂಯೋಗದಿಂದ ಹುಟ್ಟುತ್ತವೆ. ಆದರೆ ಮೂಲ ಚಿಚ್ಛಕ್ತಿ ಹಾಗೂ ಪರವಸ್ತು ಎರಡೂ ಬೇರೆ ಬೇರೆ ವಸ್ತುಗಳಲ್ಲ, ಪ್ರತ್ಯೇಕ ಜನಕಾಂಗಲಿಂಗಗಳಿಗೆ ಸೇರಿದವುಗಳಲ್ಲ. ದೀಪ ದೀಪ್ತಿಯ ಹಾಗೆ ಎರಡೂ ಅವಿನಾಭಾವವಾಗಿಯೇ ಇದ್ದು ಮೂಲ ಚಿತ್ತುವಿನ ಉದಯವಾಗುತ್ತದೆ. ಇದಕ್ಕೆ ನಿರಾಲಂಬ ಲಕ್ಷಣವೆಂದು ಕರೆಯುತ್ತಾರೆ.

ನಿರಾಮಯ ಲಕ್ಷಣ : ಮೂಲ ಚಿಚ್ಛಕ್ತಿಯ ಉದಯವು (ಅಂಕುರವು) ನಿರಾಲಂಬ ಲಕ್ಷಣದಲ್ಲಾದರೆ ಇದರ ಪೂರ್ಣವಿಕಾಸವು ನಿರಾಮಯ ಹಂತದಲ್ಲಾಗುತ್ತದೆ. ಇದನ್ನೇ ಮಹಾಚಿತ್ ಎಂದು ಕರೆಯುತ್ತಾರೆ. ಈ ಚಿಚ್ಛಕ್ತಿಯು ಖಂಡವಿಲ್ಲದ ಅಖಂಡಸ್ವರೂಪವನ್ನು ಹೊಂದಿರುತ್ತದೆ. ಕಲಂಕವಿಲ್ಲದ (ಕಪ್ಪು ಇಲ್ಲದ,) ನಿಷ್ಕಲಂಕ ರೂಪವನ್ನು ಹೊಂದಿರುತ್ತದೆ. ಆದ್ದರಿಂದಲೇ ಇದಕ್ಕೆ ನಿರಾಮಯ, ನಿರಾಮಲ (ನಿರಾಮಳ) ಎಂದು ಕರೆಯುತ್ತಾರೆ. ಈ ಮೂಲ ಚಿಚ್ಛಕ್ತಿಯಲ್ಲಿಯೇ ಚಿನ್ನಾದ, ಚಿತ್ ಬಿಂದು, ಚಿತ್‌ಕಲೆಗಳು ಉತ್ಪತ್ತಿಯಾಗುತ್ತವೆ. ಇವುಗಳನ್ನೇ ಪರ್ಯಾಯವಾಗಿ ನಿರಂಜನ, ನಿಃಶೂನ್ಯ, ನಿಷ್ಕಲ (ನಿರವಯ)ಗಳೆಂದು ಕರೆಯಬಹುದು.

ಅಖಂಡ ಲಕ್ಷಣ: ಮೂಲ ಚಿತ್ತು ಚಿನ್ನಾದ, ಚಿತ್‌ಬಿಂದು, ಚಿತ್‌ಕಲೆ ಈ ನಾಲ್ಕೂ ಸೇರಿ ಆನಂದ ಪ್ರಕಾಶದ ಮಹಾಸ್ಫೋಟವಾಗುವದು. ಈ ಬೆಳಕಿನ ಸ್ಫೋಟದ ರೂಪವು ಅಖಂಡ ಗೋಳಕಾಕಾರಮಯವಾಗಿರುವದು. ಇದನ್ನೇ ವಿಜ್ಞಾನವು ಮಹಾಸ್ಫೋಟ (Big Bang) ಎಂದು ಕರೆಯುತ್ತದೆ. ಈ ಹಂತವನ್ನೇ ಅಖಂಡ ಲಕ್ಷಣವೆಂದು ಕರೆಯುತ್ತಾರೆ. ಈ ಹಂತದಲ್ಲಿ ಆನಂದವು ಅನಾದ್ಯನಂತ ಮಯವಾಗಿರುವದು. ಈ ಆನಂದದ ರಸವು ಶಾಂತ್ಯಾತೀತೋತ್ತರಮಯವಾಗಿರುವದು. ಈ ಅಖಂಡ ಲಕ್ಷಣದಲ್ಲಿ ಸಹಜ, ನಿರಾಲಂಬ, ನಿರಾಮಯ, ನಿರಂಜನ, ನಿಃಶೂನ್ಯ, ನಿಷ್ಕಲಾದಿಗಳು ಹೆಪ್ಪುಗಟ್ಟಿ ಅಖಂಡಾಕಾರವನ್ನು (Intinite form) ಪಡೆಯುತ್ತವೆ. ಹೀಗಾಗಿ ಈ ಅಖಂಡ ಲಕ್ಷಣದಲ್ಲಿ ಮೇಲೆ ಹೇಳಿದ ಆರೂ ಲಕ್ಷಣಗಳು ಏಕೀಕೃತವಾಗಿರುತ್ತವೆ (United) ಎಂಬುದನ್ನು ಗಮನಿಸಬೇಕು.

ಪರಿಪೂರ್ಣ ಲಕ್ಷಣ : ಆನಂದಭಾವ, ಆನಂದಪ್ರಕಾಶ ಅಥವಾ ಆನಂದ ಭಾವಮಯರಸವು ಸುತ್ತಲೂ ಎಲ್ಲೆಡೆಯೂ ತೆರಹಿಲ್ಲದೆ (Entire Space) ತುಂಬಿಕೊಂಡಿರುವದೇ ಪರಿಪೂರ್ಣ ಲಕ್ಷಣವಾಗಿರುತ್ತದೆ. ಚಿದಾಕಾಶಕ್ಕೆ ಆನಂದ ಕೋಶವೆಂದು ಕರೆಯಬಹುದು. ಈ ಆನಂದಕೋಶದಲ್ಲಿ ಆನಂದವು ಪರಿಪೂರ್ಣವಾಗಿ ವ್ಯಾಪಿಸಿರುವುದೇ ಪರಿಪೂರ್ಣ ಲಕ್ಷಣವು. ಆನಂದವು ಕೇವಲ ಪೂರ್ಣವಾದರೆ

ಸಾಲದು. ಆಳ, ಅಗಲ, ಎತ್ತರ ಈ ಮೂರು ವಿಸ್ತೀರ್ಣದಲ್ಲಿಯೂ ತುಂಬಿಕೊಂಡಾಗ ಪರಿಪೂರ್ಣ ಲಕ್ಷಣವೆನ್ನುತ್ತಾರೆ. ಈ ಪರಿಪೂರ್ಣಾನಂದವು ಶಾಂತ್ಯಾತೀತಮಯ ವಾಗಿರುತ್ತದೆ.

ನಿತ್ಯ ಲಕ್ಷಣ : ಆನಂದವು ತ್ರಿಕಾಲಾತೀತವಾಗಿ ಪ್ರತಿ ಕ್ಷಣದಲ್ಲಿಯೂ ಇರುವ ಹಂತಕ್ಕೆ ನಿತ್ಯ ಲಕ್ಷಣವೆಂದು ಕರೆಯುತ್ತಾರೆ. ಈ ನಿತ್ಯಾನಂದಕ್ಕೆ ಕಾಲ ಕರ್ಮದ ಬಾಧೆ ಇರುವದಿಲ್ಲ. ಈ ನಿತ್ಯಾನಂದ ಲಕ್ಷಣಕ್ಕೆ ನಿತ್ಯಮುಕ್ತಿಯೆಂದು ಕರೆಯುತ್ತಾರೆ. ಈ ನಿತ್ಯಾನಂದ ಲಕ್ಷಣವು ಕೇವಲ ಶಾಂತಿಮಯವಾಗಿರುತ್ತದೆ.

ಆನಂದ ಲಕ್ಷಣ : ಆನಂದವು ಪ್ರಕಾಶಮಯವಾಗಿಯೂ, ಭಾವಮಯ ವಾಗಿಯೂ ಇರುತ್ತದೆ. ಈ ಆನಂದವು ಸುಖ ದುಃಖಗಳ ಬಾಧೆ ಇಲ್ಲದೆ ಸ್ಥಿರವಾದಾಗ ಇಂಥ ಸ್ಥಿತಿಗೆ ಆನಂದ ಲಕ್ಷಣವೆನ್ನುತ್ತಾರೆ. ಇಂಥ ಆನಂದ ಸ್ಥಿತಿ–ಉಂಟಾದಾಗ ಭಾವವು ಸುಜ್ಞಾನಭಕ್ತಿಯಾಗಿ ಪರಿವರ್ತನೆಗೊಳ್ಳುವುದು. ಈ ಭಕ್ತಿಯು ಆತ್ಮವಿದ್ಯಾ ಕಲೆಯಿಂದೊಡಗೂಡಿ ಅಹಂಭಾವದಿಂದ ಸಂಪೂರ್ಣ ಬಿಡುಗಡೆ ಹೊಂದಿರುತ್ತದೆ. ಹೀಗೆ ಸುಜ್ಞಾನಭಕ್ತಿಯುತವಾದ ಭಾವವೇ ಆನಂದ ಲಕ್ಷಣವು.

ಚಿತ್‌ಲಕ್ಷಣ : ಜ್ಞಾನವು ಎರಡು ವಿಧವಾಗಿದೆ. ಒಂದು ತನ್ನಿಂದ ತಾನೇ ಸ್ಫುರಣವಾಗುವಂತಹದು. ಇದಕ್ಕೆ ಸಮ್ಯಕ್‌ಜ್ಞಾನವೆಂತಲೂ, ಲಿಂಗಜ್ಞಾನವೆಂತಲೂ ಕರೆಯುತ್ತಾರೆ. ಹಾಗೂ ಸ್ವಯಂಭು ಜ್ಞಾನವೆಂತಲೂ (Inborn Knowledge) ಕರೆಯುತ್ತಾರೆ. ಇದು ಅಂತಃಪ್ರಜ್ಞೆಯಿಂದ ಉದ್ಭವವಾಗುತ್ತದೆ. ಇನ್ನೊಂದು ಬಾಹ್ಯ ಮಾಧ್ಯಮಗಳಿಂದ ಪ್ರಾಪ್ತವಾಗುವ ಜ್ಞಾನವು. ಇದಕ್ಕೆ ಶಬ್ದಜ್ಞಾನ, ಇಂದ್ರಿಯ ಜ್ಞಾನ, ಆಪ್ತವಾಕ್ಯಜ್ಞಾನವೆಂತಲೂ ಕರೆಯಬಹುದು. ತನ್ನಿಂದ ತಾನೇ ಉದ್ಭವವಾಗುವ ಚಿದ್‌ಜ್ಞಾನಸ್ಥಿತಿಗೆ ಚಿತ್‌ಲಕ್ಷಣವೆಂದು ಕರೆಯುತ್ತಾರೆ. ಈ ಚಿತ್, ಅಂತಃಕರಣದ ಚಿತ್ ಅಲ್ಲ. ಹಾಗೂ ಮಹಲಿಂಗದಲ್ಲಿರುವ ಚಿತ್‌ಶಕ್ತಿಯೂ ಅಲ್ಲ. ಕೇವಲ ಸ್ವಯಂಭೂತ ಸುಜ್ಞಾನಶಕ್ತಿ (Power of Intuitional Knowledge) ಎಂಬುದನ್ನು ಗಮನಿಸ ಬೇಕು.

ಸತ್ ಲಕ್ಷಣ : ವಿಶ್ವಗತ ಪ್ರಕೃತಿಯ ಎಲ್ಲ ವಸ್ತುಗಳಲ್ಲಿ ಸತ್ವ, ರಜೋ, ತಮೋ ಮೂರು ಗುಣಗಳಿರುತ್ತವೆ. ಈ ಸತ್ವಗುಣದ ಶಕ್ತಿಯನ್ನೇ 'ಸತ್' ಎಂದು ಕರೆಯುವರು. ಈ ಸತ್ ಶಕ್ತಿಯು ಸತ್ಕ್ರಿಯಾಚೇತನಮಯವಾಗಿರುವದು. ಈ ಸತ್ಕ್ರಿಯಾಚೇತನವೇ ಎಲ್ಲ ವಸ್ತುಗಳ ಚಲನ, ವರ್ತನ, ವ್ಯವಹಾರಕ್ಕೆ ಕಾರಣ ವಾಗಿರುವದು. ಇಂಥ ಸತ್ಕ್ರಿಯಾ ಶಕ್ತಿಗೆ (Power of action) ಸತ್ ಲಕ್ಷಣವೆಂದು ಕರೆಯುತ್ತಾರೆ. ಈ ಸತ್‌ಕ್ರಿಯಾ ಲಕ್ಷಣದಲ್ಲಿ ತಮೋ ಹಾಗೂ ರಜೋ ಗುಣಗಳನ್ನು ನಿವೃತ್ತಿಗೊಳಿಸುವ ಅಂದರೆ ತೆಗೆದುಹಾಕುವ ಶಕ್ತಿ ಇರುತ್ತದೆ. ಈ ಮೂಲಕ ಶಾಶ್ವತ ಸುಖದೆಡೆಗೆ ಕರೆದೊಯ್ಯುವ ಪ್ರವೃತ್ತಿ ಇರುತ್ತದೆ.

ಈ ಗ್ರಂಥದಲ್ಲಿ ಲಕ್ಷಣಗಳು ಎಂಬ ವಿಭಾಗದಲ್ಲಿ ಟೀಕಾಕರ್ತನು ಒಂಬತ್ತು ಲಕ್ಷಣಗಳಿಂದ ಪ್ರೇರಿತರಾಗಿ ಆಚರಿಸುವ ಆಚರಣೆಯನ್ನು ಮಾತ್ರ ಚಿತ್ರಿಸಿದ್ದಾನೆ. ಅನಾಮಯ, ಅಗಮ್ಯ, ಅವಿರಳ ಈ ಮೂರು ಲಕ್ಷಣಗಳು ತಾತ್ವಿಕವಾಗಿಲ್ಲ. ಇವುಗಳಿಗೆ ಬದಲಾಗಿ ಸಹಜ, ನಿರಾಲಂಬ, ನಿರಾಮಯ ಎಂದಿದ್ದರೆ ಸೂಕ್ತ.

೨೭) ಸಂಜ್ಞೆ ಎಂದರೆ ನಾಮ ಹಾಗೂ ನಾಮಪದವೆಂದರ್ಥ. ಶಕ್ತಿಯು ರೂಪು ಅಥವಾ ಆಕಾರವನ್ನು ತಳೆದಾಗ ಅದು ವಸ್ತುವೆಂದೆನಿಸುವದು. ಆ ವಸ್ತುವನ್ನು ಸಂಬೋಧಿಸುವ ಪದಕ್ಕೆ ನಾಮಪದವೆನ್ನುತ್ತಾರೆ. ಈ ನಾಮಪದವನ್ನೇ ಸಂಜ್ಞೆ ಎಂದು ಕರೆಯುತ್ತಾರೆ. ರೂಪವು ನಾದ, ವರ್ಣ, ಅಕ್ಷರ, ಗುಣ ಹಾಗೂ ಆಕಾರದ ರೂಪವನ್ನು ತಾಳುತ್ತದೆ. ವರ್ಣವು ನಾದಮಯವಾಗಿಯೂ ಹಾಗೂ ಆಕಾರಮಯ ವಾಗಿಯೂ ಇರುತ್ತದೆ. ಅನಾಹತ ಹಾಗೂ ಅನಾಹತ ನಾದಗಳ ರೂಪಗಳಿಗೆ ವರ್ಣ ಹಾಗೂ ವರ್ಣಮಾಲೆ ಎಂದು ಕರೆಯುತ್ತಾರೆ. ಬಿಳಿಯಿಂದ ಹಿಡಿದು ಕಪ್ಪುವರ್ಣದ ವರೆಗಿನ ಬಣ್ಣಗಳಿಗೆ ವರ್ಣಗಳೆಂದು ಕರೆಯುತ್ತಾರೆ. ಈ ಎರಡೂ ಪ್ರಕಾರದ ವರ್ಣಗಳಿಗೆ ಕಲೆ ಎಂದು ಕರೆಯುತ್ತಾರೆ. ಚಿಚ್ಛಕ್ತಿಯಿಂದ ಲೀಲೆ ಪ್ರಾರಂಭವಾದಾಗ ವಿಶ್ವಾತೀತ ಹಂತದಲ್ಲಿ ಮೂರು ಪ್ರಕಾರದ ಸಂಜ್ಞೆಗಳು ಲೀಲೆದೋರುತ್ತವೆ. ಅವುಗಳು ಹೀಗಿವೆ. ೧) ನಿರಂಜನ ೨) ನಿಃಶೂನ್ಯ, ೩) ಶೂನ್ಯ. ಚಿಚ್ಛಕ್ತಿಯು ಚಿನ್ನಾದ, ಚಿದ್ಬಿಂದು, ಚಿತ್‌ಕಲೆ ಎಂಬ ತ್ರಿವಿಧಕಲೆಗಳು ಹಾಗೂ ಅಗಮ್ಯ, ಅಗೋಚರ, ಅಪ್ರಮಾಣಗಳೆಂಬ ತ್ರಿವಿಧ ಸಾದಾಖ್ಯಗಳಿಂದ ಕೂಡಿ ಕೊಂಡು ಮಹಾಲಿಂಗ ರೂಪವನ್ನು ತಾಳುವದು. ಮಹಾಲಿಂಗದಿಂದೊಡಗೂಡಿ ಪರಾ, ಗೂಢ, ಆತ್ಮ ಪ್ರಾಣ, ಶರೀರವೆಂಬ ಆರು ಸಂಜ್ಞೆಗಳನ್ನು ಪರವಸ್ತು ಹೊಂದುವದು. ಹೀಗೆ ಪರವಸ್ತುವು ಒಂಬತ್ತು ವಿಧದ ನಾಮ ರೂಪಗಳನ್ನು ಅಂದರೆ ಸಂಜ್ಞೆಗಳನ್ನು ಹೊಂದುವದು. ಅವುಗಳ ವಿವರ ಹೀಗಿದೆ.

ನಿರಂಜನಸಂಜ್ಞೆ : ಅಪ್ರಮಾಣಸಾದಾಖ್ಯ ಹಾಗೂ ಚಿನ್ನಾದವೆಂಬ ಕಲೆಯಿಂ ದೊಡಗೂಡಿದ ಸಂಜ್ಞೆಯೇ ನಿರಂಜನ ಸಂಜ್ಞೆ ಎಂದೆನಿಸುವದು. ಈ ನಿರಂಜನ ಸಂಜ್ಞೆಯು ಚಿನ್ನಾದ ಹಾಗೂ ಆನಂದಮಯ ಪ್ರಕಾಶದಿಂದ ಒಡಗೂಡಿರು ತ್ತದೆ. ಈ ಆನಂದಮಯ ಪ್ರಕಾಶವು ಭೌತಿಕ ವರ್ಣಾತೀತವಾದ ವರ್ಣವಾಗಿರುತ್ತದೆ. ಆದ್ದರಿಂದಲೇ ಇದಕ್ಕೆ ನಿರಂಜನವರ್ಣವೆಂದು ಕರೆಯುತ್ತಾರೆ. ಈ ವರ್ಣವು ತಿಳಿಬೆಳದಿಂಗಳಿಗಿಂತಲೂ ಅತಿ ತಿಳಿಯಾಗಿರುತ್ತದೆ ಹಾಗೂ ಶಾಂತ್ಯಾತೀತೋತ್ತತೀತ ವರ್ಣವೆಂದೆನಿಸುವದು. ಇದು ಅಪ್ರಮಾಣವಾಗಿರುತ್ತದೆ.

ನಿಶ್ಶೂನ್ಯಸಂಜ್ಞೆ : ಅಗೋಚರಸಾದಾಖ್ಯ ಹಾಗೂ ಚಿದ್‌ಬಿಂದು ಕಲೆಯಿಂದೊಡ ಗೂಡಿದುದೇ ನಿಶ್ಶೂನ್ಯ ಸಂಜ್ಞೆಯು. ಇದು ಅನಾಹತನಾದದಿಂದ ಉತ್ಪತ್ತಿಯಾದ ಮಹಾಜ್ಞಾನದಿಂದೊಡಗೂಡಿರುವದು. ಈ ಮಹಾಜ್ಞಾನವು (transcedental Knowledge) ಬುದ್ಧಿ ಜ್ಞಾನೇಂದ್ರಿಯಗಳಿಗೆ ನಿಲುಕುವಂತಹುದಲ್ಲ. ಶುದ್ಧಾತ್ಮ

ದ್ವಾರದಿಂದ ಮಾತ್ರ ತಿಳಿಯಲು ಸಾಧ್ಯ. ಈ ಮಹಾಜ್ಞಾನ ರೂಪವೇ ನಿಶ್ಶೂನ್ಯವೆಂಬ ನಾಮವನ್ನು ತಳೆದು ನಿಶ್ಶೂನ್ಯವೆಂಬ ಸಂಜ್ಞೆ ಎಂದೆನಿಸುವದು.

ಶೂನ್ಯಸಂಜ್ಞೆ : ಅಗಮ್ಯಸಾದಾಖ್ಯ ಹಾಗೂ ಚಿತ್‌ಕಲೆಯಿಂದೊಡಗೂಡಿ ಶೂನ್ಯವೆಂಬ ನಾಮವನ್ನು ತಳೆದು ಶೂನ್ಯ ಸಂಜ್ಞೆ ಎಂದೆನಿಸುವದು. ಇಲ್ಲಿ ಸತ್‌ಚೇತನವು ಸಾತ್ವಿಕ ಸೌಂದರ್ಯ ರೂಪದ ನಿಷ್ಕಲಾ ರೂಪವನ್ನು ತಾಳುವದು. ಇಲ್ಲಿ ನಿಷ್ಕಲ ಎಂದರೆ ಕಲಾರಹಿತ ಎಂದು ಅರ್ಥವಲ್ಲ ಭೌತಿಕವಾದ ಷೋಡಶ ಕಲೆಗಳನ್ನು ದಾಟಿದ ಚಿತ್‌ಕಲೆ ಎಂದರ್ಥ. ಈ ಚಿತ್‌ಕಲೆಯಲ್ಲಿ ಚಿಚ್ಛಕ್ತಿ ಚಿನ್ಮಾದ ಚಿದ್‌ಬಿಂದುಗಳು ಹೆಪ್ಪುಗಟ್ಟಿ ಘನೀಭೂತವಾಗಿರುತ್ತವೆ. ಹೀಗೆ ಚಿತ್‌ಕಲೆಯೇ ಅಗಮ್ಯವಾಗಿ ಶೂನ್ಯವೆಂಬ ಸಂಜ್ಞೆ ಎಂದೆನಿಸುವದು.

೨೮) ೧೦೮ ಸಕೀಲಗಳು: ಬೇರೆ ಬೇರೆ ತತ್ವಗಳ, ಬೇರೆ ಬೇರೆ ಇಂದ್ರಿಯಗಳ, ಬೇರೆ ಬೇರೆ ಶರೀರಗಳ (ಸ್ಥೂಲ, ಸೂಕ್ಷ್ಮ ಕಾರಣ) ಅಂತರ್ ಸಂಬಂಧದಿಂದ (Intercombination & relation) ಅಂತರ್ ಮಾರ್ಪಾಟಿನ ಕ್ರಿಯೆಗಳು (actions of inter modifications) ಜರಗುತ್ತವೆ. ಈ ಸಂಕೀರ್ಣ ವ್ಯವಸ್ಥೆಯನ್ನು (Complexed System) ಕುರಿತು ಸಕೀಲಗಳೆಂದು ಕರೆಯುತ್ತಾರೆ. ಈ ಸಕೀಲಗಳು ಎಂಟು, ನೂರೆಂಟು, ಇನ್ನೂರು ಹದಿನಾರು ಹೀಗೆ ಬೇರೆ ಬೇರೆ ವಿಧವಾಗಿರುತ್ತವೆ.

ಅಷ್ಟವಿಧ ಸಕೀಲಗಳು : ಷಟ್‌ಸ್ಥಲಾತ್ಮಕವಾಗಿ ಎಂಟು ತತ್ವ ಹಾಗೂ ಇಂದ್ರಿಯಗಳ ಸಂಬಂಧದಿಂದುಂಟಾಗುತ್ತವೆ.

ನೂರೆಂಟು ಸಕೀಲಗಳು : ಷಟ್‌ಸ್ಥಲದಲ್ಲಿ ಹದಿನೆಂಟು ತತ್ವ ಹಾಗೂ ಇಂದ್ರಿಯಗಳ ಸಂಬಂಧದಿಂದ ಹಾಗೂ ಮಾರ್ಪಾಟಿನಿಂದ ಉಂಟಾಗುತ್ತವೆ.

ಇನ್ನೂರು ಹದಿನಾರು ಸಕೀಲಗಳು : ಷಟ್‌ಸ್ಥಲದಲ್ಲಿ ಮೂವತ್ತಾರು ತತ್ವಗಳ ಮತ್ತು ಇಂದ್ರಿಯಗಳ ಸಂಬಂಧದಿಂದ ಹಾಗೂ ಮಾರ್ಪಾಟಿನಿಂದ ಉತ್ಪತ್ತಿಯಾಗುತ್ತವೆ.

ಸಕೀಲಗಳು ತಾತ್ವಿಕವಾಗಿ ೧) ತತ್ವಸಕೀಲಗಳು ೨) ಲಿಂಗಸಕೀಲಗಳು ೩) ಅಂಗಸಕೀಲಗಳು ೪) ವಿಷಯ (ಪ್ರಕೃತಿ) ಸಕೀಲಗಳು ೫) ಮಾಯಾಸಕೀಲಗಳು ಎಂದು ಐದು ವಿಧವಾಗಿ ವಿಭಜನೆಗೊಳ್ಳುತ್ತವೆ.

೧) ತತ್ವ ಸಕೀಲಗಳು : ೧) ಪರವಸ್ತು ೨) ಷಡ್ವಿಧ ಸ್ವರೂಪಗಳು ೩) ಷಡ್ವಿಧ ಲಕ್ಷಣ ೪) ಚಿಚ್ಛಕ್ತಿಗಳು ೫) ಮಹಾಲಿಂಗ ೬) ಆರು ಸಾದಾಖ್ಯಗಳು ೭) ಆರು ಕಲೆಗಳು.

೨) ಲಿಂಗ ಸಕೀಲಗಳು : ೧) ಮಹಾಲಿಂಗ ೨) ಮೂರು ಲಿಂಗಗಳು ೩) ಆರು ಲಿಂಗಗಳು ೪) ಆರು ಶಕ್ತಿಗಳು ೫) ಆರು ಪ್ರಣವಗಳು ೬) ಆರು ಮುಖಗಳು ೭) ಆರು ಪ್ರಸಾದಗಳು ಮುಂತಾದವುಗಳು.

೩) ಅಂಗ ಸಕೀಲಗಳು : ೧) ಮೂರು ಅಂಗಗಳು ೨) ಮೂರು ಆತ್ಮಗಳು ೩) ಆರು ಚಕ್ರಗಳು ೪) ಆರು ಸ್ಥಲಗಳು ೫) ಆರು ಶಕ್ತಿಗಳು ೬) ಆರು ಹಸ್ತಗಳು ಮುಂತಾದವುಗಳು.

೪) ವಿಷಯ ಸಕೀಲಗಳು : ೧) ಷಡ್‌ವಿಧ ಭೂತಗಳು ೨) ಷಡ್ವಿಧ ವಿಷಯಗಳು ೩) ಮೂರು ಶರೀರಗಳು ೪) ಷಡ್ವಿಧ ಧಾತುಗಳು ೫) ಷಡ್ವಿಧ ಕರ್ಮೇಂದ್ರಿಯಗಳು ೬) ಷಡ್ವಿಧ ಜ್ಞಾನೇಂದ್ರಿಯಗಳು ೭) ಷಡ್ವಿಧ ವಾಯುಗಳು ೮) ಷಡ್ವಿಧ ಅಂತಃಕರಣಗಳು ಇವು ವಿಷಯ ಸಕೀಲಕ್ಕೆ ಸಂಬಂಧಪಡುತ್ತವೆ.

೫) ಮಾಯಾ ಸಕೀಲಗಳು : ೧) ಅಹಂ, ೨) ಮಮಕಾರ ೩) ತ್ರಿವಿಧಮಲ ೪) ತಾಪತ್ರಯ ೫) ತ್ರಿವಿಧಗುಣಗಳು ೬) ಈಷಣತ್ರಯಗಳು ೭) ಅವಸ್ಥಾತ್ರಯಗಳು ೮) ಅಹಂಕಾರತ್ರಯಗಳು ೯) ದುರ್ಭಾವತ್ರಯಗಳು ೧೦) ತ್ರಿದೋಷಗಳು ೧೧) ಕರ್ಮತ್ರಯ ೧೨) ವಂಚಕತ್ರಯ ೧೩) ಚತುರ್ವಿಧಫಲ, ೧೪) ಚತುರ್ವಿಧ ಪದವಿ ೧೫) ಪಂಚಕ್ಲೇಶ ೧೬) ಅರಿಷಡ್‌ವರ್ಗ ೧೭) ಷಡೂರ್ಮೆ ೧೮) ಷಡ್‌ಭ್ರಮೆ ೧೯) ಷಡ್‌ಭಾವವಿಕಾರ ೨೦) ಸಪ್ತವ್ಯಸನ ೨೧) ಅಷ್ಟಮದ ೨೨) ದ್ವಾದಶಭ್ರಮೆ ಮುಂತಾದವುಗಳು.

೨೧೬ ಸಕೀಲಗಳು

೨೯) ಶ್ರೀ ಷಣ್ಮುಖ ಶಿವಯೋಗಿಗಳ ಪ್ರಶಿಷ್ಯರಲ್ಲಿ ಒಬ್ಬರು ೨೧೬ ಸಕೀಲಗಳನ್ನೊಳಗೊಂಡ ಈ ಸಮಗ್ರ ವಚನ ವ್ಯಾಖ್ಯಾನವನ್ನು ಬರೆದಿದ್ದಾರೆ.

ಪರವಸ್ತು ವಿಶ್ವಾಕಾರವನ್ನು ತಾಳಿ (Universal form), ಜಗದಾಕಾರವನ್ನು ತಾಳಿ (global form), ಮನುಷ್ಯರೂಪವನ್ನು ಹೊಂದಿ (Human form) ೩೬ ತತ್ವಗಳ ವಿಭಜನೀಕರಣ ಹಾಗೂ ಸಮೀಕರಣ ಹೊಂದುತ್ತ (Process of analysis and synthesis) ಆರು ಸ್ಥಲಗಳಲ್ಲಿ ನಿರೂಪಣ ಹಾಗೂ ಸಾಮರಸ್ಯಗೊಳ್ಳುತ್ತ ಸಾಗುವದು. ಈ ಪ್ರಕ್ರಿಯೆಯ ಕ್ರಮಾನುಗತಿಯು (Seqential order of process) ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳಲ್ಲಿ ಸಕೀಲಗೊಳ್ಳುತ್ತ (Coordinated) ಒಂದೊಂದು ಸ್ಥಲದಲ್ಲಿ ೩೬ ತತ್ವಗಳ ಸ್ವರೂಪವನ್ನು ಹೊಂದಿ, ಆರು ಸ್ಥಲಗಳಲ್ಲಿ ವಿಕಾಸವಾಗುತ್ತ ಸಾಗಿದಾಗ ೨೧೬ ಸಕೀಲಗಳ ಸ್ವರೂಪವನ್ನು ಪಡೆಯುತ್ತದೆ.

ಈ ೩೬ ತತ್ವಗಳು ಮೂರು ಶರೀರಗಳಲ್ಲಿ ಒಂದೊಂದು ಶರೀರದಲ್ಲಿ ೧೨ ರಂತೆ ಸ್ವರೂಪವನ್ನು ಕೆಳಗಿನಂತೆ ಪಡೆಯುತ್ತವೆ.

ಸ್ಥೂಲ ಶರೀರದಲ್ಲಿ : ೧. ಆಕೃತಿ ೨. ಭೂತ ೩. ಸ್ಥಾನ ೪. ಚಕ್ರ ೫. ವಾಯು ೬. ದಳ ೭. ಮುಖ ೮. ಅವಸ್ಥೆ ೯. ಕೂಟ ೧೦. ಮಾಟ ೧೧. ಪದಾರ್ಥ ೧೨. ಅರ್ಪಣ.

ಸೂಕ್ಷ್ಮ ಶರೀರದಲ್ಲಿ : ೧. ಬ್ರಹ್ಮ ೨. ಸಾದಾಖ್ಯ ೩. ದಿಕ್ಕು ೪. ಅಂಗ ೫. ಭಕ್ತಿ ೬. ವರ್ಣ ೭. ಅಕ್ಷರ ೮. ಆಚಾರ ೯. ಹಸ್ತ ೧೦. ಪ್ರಸಾದ ೧೧. ದ್ರವ್ಯ ೧೨. ಗುರಿ.

ಕಾರಣ ಶರೀರದಲ್ಲಿ : ೧. ಅಧಿದೇವತೆ ೨. ಲಿಂಗ ೩. ಶಕ್ತಿ ೪. ಪ್ರಣವ ೫. ಪ್ರಭೆ ೬. ಮಂತ್ರ ೭. ಪ್ರಸಾದಮಂತ್ರ ೮. ಸಂಜ್ಞೆ ೯. ಲಕ್ಷಣ, ೧೦. ಕಲೆ ೧೧. ಲಿಂಗಮುಖ (ಶಿವನ ಮುಖ) ೧೨. ವೇದ (ಅನುಭವ).

ಈ ವಚನ ವ್ಯಾಖ್ಯಾನದಲ್ಲಿ ಬರುವ ದಿಕ್ಕುಗಳನ್ನು ಷಟ್ಸ್ಥಲಕ್ಕನುಗುಣವಾಗಿ ೧. ಅಧೋದಿಕ್ಕು (ಪಾತಾಳ) ೨. ಪೂರ್ವ ೩. ದಕ್ಷಿಣ ೪. ಉತ್ತರ ೫. ಪಶ್ಚಿಮ ೬. ಊರ್ಧ್ವ ಹೀಗೆ ಕ್ರಮಗೊಳಿಸಲಾಗಿದೆ. ಅಧೋ ಹಾಗೂ ಊರ್ಧ್ವ ದಿಕ್ಕುಗಳ ಮಧ್ಯದಲ್ಲಿ ಪೂರ್ವ, ದಕ್ಷಿಣ, ಉತ್ತರ, ಪಶ್ಚಿಮ ದಿಕ್ಕುಗಳು ಕ್ರಮಗೊಳ್ಳುತ್ತವೆ. ದಕ್ಷಿಣ, ಉತ್ತರ ದಿಕ್ಕುಗಳು ಪೂರ್ವ ಪಶ್ಚಿಮಗಳ ಮಧ್ಯದಲ್ಲಿ ಕ್ರಮಗೊಳ್ಳುತ್ತವೆ. ಜೀವಾತ್ಮನು ಅಂತರಂಗದಲ್ಲಿ ನಿವೃತ್ತ ಮುಖವಾಗಿ ನಿಂತಾಗ ಅಧೋ ದಿಕ್ಕಿನಿಂದ ಊರ್ಧ್ವ ದಿಕ್ಕಿನ ಕಡೆಗೆ ಆರು ಸ್ಥಲಗಳ ಮೂಲಕ ಸಾಗುತ್ತಾನೆ. ಈ ವಿಚಾರ ವನ್ನಿಟ್ಟುಕೊಂಡು ಇಲ್ಲಿ ದಿಕ್ಕುಗಳನ್ನು ಕ್ರಮಗೊಳಿಸಲಾಗಿದೆ ಎಂಬುದನ್ನು ಗಮನಿಸಬೇಕಾಗಿ ವಿನಂತಿ.

ತತ್ವಸಕೀಲ, ಲಿಂಗಸಕೀಲ, ಅಂಗಸಕೀಲ, ವಿಷಯಸಕೀಲ ಹಾಗೂ ಮಾಯಾ ಸಕೀಲ ಈ ಐದು ವಿಧ ಸಕೀಲಗಳೇ ಅಂತರ್ ಮಿಶ್ರಣಗೊಂಡು ಏಕವಿಧ, ಎರಡು ವಿಧ, ಮೂರು ವಿಧ, ನಾಲ್ಕು ವಿಧ, ಐದು ವಿಧ, ಆರು ವಿಧ, ಏಳು ವಿಧ, ಎಂಟು ವಿಧ, ಒಂಬತ್ತು ವಿಧ, ಹತ್ತು ವಿಧ, ಹನ್ನೊಂದು ವಿಧ, ಹನ್ನೆರಡು ವಿಧ, ಹದಿನಾರು ವಿಧ, ಮೂವತ್ತಾರು ವಿಧ, ನಲವತ್ತೆಂಟು ವಿಧ, ತೊಂಬತ್ತಾರು ವಿಧ, ನೂರಾ ಎಂಟು ವಿಧ, ಎರಡು ನೂರು ಹದಿನಾರು ವಿಧ ಸಕೀಲಗಳಾಗಿ ಮಾರ್ಪಾಟುಗೊಳ್ಳುತ್ತ ಕಾರ್ಯಗೈಯ್ಯುತ್ತವೆ.

ಏಕವಿಧ ಸಕೀಲ : ಇದರಲ್ಲಿ ಪರವಸ್ತುವು, ಮಹಾಲಿಂಗ, ಆತ್ಮನ ಸ್ವರೂಪ, ಮಾಯೆ, ಲಕ್ಷಣ ಕ್ರಿಯಾದಿಗಳು ಸಕೀಲವಾಗಿ ಪ್ರವರ್ತಿಸುತ್ತವೆ.

ದ್ವಿವಿಧ ಸಕೀಲ : ಇದರಲ್ಲಿ ಪರವಸ್ತು ಚಿಚ್ಛಕ್ತಿ ಲಿಂಗ–ಅಂಗ, ಜೀವ–ದೇಹ, ಅಹಂಕಾರ ಮಮಕಾರಗಳ ಕ್ರಿಯೆಗಳು ಸಕೀಲಗಳಾಗಿ ಪ್ರವರ್ತಿಸುತ್ತವೆ.

ತ್ರಿವಿಧ ಸಕೀಲ : ಇದರಲ್ಲಿ ಮೂರು ಅಂಗ, ಮೂರು ಲಿಂಗ, ಮೂರು ಜೀವ, ಮೂರು ದೇಹಗಳ (ಶರೀರಗಳು), ಮೂರು ಮಲ ಮುಂತಾದವುಗಳ ಕ್ರಿಯೆಗಳು ಸಕೀಲವಾಗಿ ವರ್ತಿಸುತ್ತವೆ.

ನಾಲ್ಕುವಿಧ ಸಕೀಲ : ಇದರಲ್ಲಿ ಮೂಲಚಿತ್ತು ಜಿನ್ನಾದ, ಚಿದ್ಬಿಂದು, ಚಿತ್ಕಲೆ, ಮಹಾಸಾದಾಖ್ಯ; ನಾದ, ಬಿಂದು, ಕಲೆ, ಚಿತ್ತ ಬುದ್ಧಿ ಅಹಂಕಾರ; ಮನ, ಗುರು,

ಲಿಂಗ, ಜಂಗಮ, ಪ್ರಸಾದ; ಚತುರ್ವಿಧ ಫಲ ಪದವಿ, ಚತುರ್ವಿಧ ಅಹಂಭ್ರಮೆಗಳು, ಚತುರ್ಯೋನಿಗಳು, ಚತುರ್ವಿಧ ಪುರುಷಾರ್ಥಗಳು ಇವುಗಳ ಕ್ರಿಯೆಗಳು ಸಕೀಲಗಳಾಗಿ ವರ್ತಿಸುತ್ತವೆ.

ಐದು ವಿಧ ಸಕೀಲ : ಇದರಲ್ಲಿ ಮಹಾಚಿತ್ತು ಚಿಚ್ಛಕ್ತಿ, ಚಿನ್ನಾದ ಚಿದ್ಬಿಂದು, ಚಿತ್ಕಲೆ; ಪಂಚಸಾದಾಖ್ಯ, ಪಂಚಕಲೆಗಳು, ಪಂಚ ಅಂತಃಕರಣಗಳು, ಪಂಚ ವಾಯುಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ವಿಷಯಗಳು, ಪಂಚ ಕರ್ಮೇಂದ್ರಿಯಗಳು, ಪಂಚಭೂತಗಳು, ಪಂಚಕೋಶಗಳು, ಪಂಚಕ್ಲೇಶಗಳು, ಪಂಚಮಹಾಪಾತಕಗಳು, ಪಂಚಸೂತಕಗಳು, ಪಂಚಜ್ಞಾನಗಳು ಇವುಗಳ ಕ್ರಿಯಾದಿಗಳು ಸಕೀಲಗಳಾಗಿ ವರ್ತಿಸುತ್ತವೆ.

ಆರುವಿಧ ಸಕೀಲಗಳು : ಇವುಗಳಲ್ಲಿ ಪರವಸ್ತುವಿನ ಸಹಜ, ನಿರಾಲಂಬ, ನಿರಾಮಯ, ನಿರಂಜನ, ನಿಃಶೂನ್ಯ, ಶೂನ್ಯವೆಂಬ ಆರು ಸ್ವರೂಪಗಳು, ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ, ಅಖಂಡವೆಂಬ ಆರು ಲಕ್ಷಣಗಳು, ಷಟ್‌ಸಾದಾಖ್ಯ, ಷಟ್‌ಕಲೆಗಳು, ಆರು ಲಿಂಗ, ಆರು ಅಂಗಗಳು, ಆರು ಶಕ್ತಿ ಆರು ಭಕ್ತಿಗಳು, ಆರು ಮುಖಗಳು, ಆರು ಹಸ್ತಗಳು, ಆರು ಚಕ್ರಗಳು, ಆರು ಪದಾರ್ಥಗಳು, ಆರು ಪ್ರಸಾದಗಳು, ಆರು ಭೂತಗಳು, ಆರು ವಿಷಯಗಳು, ಆರು ಪ್ರಣವಗಳು, ಆರು ಆಕೃತಿಗಳು, ಅರಿಷಡ್ ವರ್ಗಗಳು, ಷಡೂರ್ಮೆಗಳು, ಮುಂತಾದವುಗಳ ಕ್ರಿಯೆಗಳು ಸಕೀಲಗಳಾಗಿ ವರ್ತಿಸುತ್ತವೆ.

ಏಳು ವಿಧ ಸಕೀಲ : ಇವುಗಳಲ್ಲಿ ಶೂನ್ಯಲಿಂಗ ಮತ್ತು ಆರು ಲಿಂಗಗಳು ಕೂಡಿ ಸಪ್ತವಿಧಲಿಂಗಗಳು, ಸಹಜ ಮತ್ತು ಆರು ಭಕ್ತಿಗಳು ಕೂಡಿ ಸಪ್ತವಿಧ ಭಕ್ತಿಗಳು, ಸಪ್ತವಿಧ ತನು (ಪಂಚಭೂತ +ಆತ್ಮ+ಸಹಸ್ರಾರ ವೆಂಬ ಕಾಯಗಳು) ಸಪ್ತವ್ಯಸನ, ಮುಂತಾದವುಗಳ ಕ್ರಿಯೆಗಳು ಸಕೀಲಗಳಾಗಿ ವರ್ತಿಸುತ್ತವೆ.

ಎಂಟು ವಿಧ ಸಕೀಲ : ಇವುಗಳಲ್ಲಿ ಅಷ್ಟಾತ್ಮಗಳು, ಅಷ್ಟತನುಗಳು, ಅಷ್ಟಾವರಣಗಳು, ಅಷ್ಟಮದಗಳು ಇವುಗಳ ಕ್ರಿಯೆಗಳು ಸಕೀಲವಾಗಿ ವರ್ತಿಸುತ್ತವೆ.

ಒಂಬತ್ತು ವಿಧ ಸಕೀಲ : ಇಲ್ಲಿ ನವವಿಧ ಲಿಂಗಗಳು, ನವವಿಧ ತನುಗಳು, ನವವಿಧ ಶಕ್ತಿಗಳು, ನವವಿಧ ಭಕ್ತಿಗಳು, ನವವಿಧ ಚಕ್ರಗಳು, ನವವಿಧ ಲಕ್ಷಣಗಳು, ನವವಿಧ ಸಂಜ್ಞೆಗಳು, ನವವಿಧ ಪ್ರಣವಗಳು, ನವವಿಧ ಆಕೃತಿಗಳು, ನವವಿಧ ಪದಾರ್ಥಗಳು, ನವವಿಧ ಪ್ರಸಾದಗಳು, ನವವಿಧ ಕಲೆಗಳು, ನವವಿಧ ಮುಖಗಳು, ನವವಿಧ ದಿಕ್ಕುಗಳು, ನವವಿಧ ನಾದಗಳು ಮುಂತಾದವುಗಳ ಕ್ರಿಯೆಗಳು ಸಕೀಲಗಳಾಗಿ ವರ್ತಿಸುತ್ತವೆ.

ಹತ್ತು ವಿಧ ಸಕೀಲಗಳು : ಇದರಲ್ಲಿ ದಶವಿಧ ದಿಕ್ಕುಗಳಲ್ಲಿ, ದಶವಿಧ ನಾಡಿಗಳು, ದಶವಿಧ ವಾಯುಗಳು, ದಶವಿಧ ನಾದಗಳು, ದಶವಿಧ ಪಾದೋದಕಗಳು, ದಶವಿಧ

ಚಕ್ರಗಳು, ದಶವಿಧ ಪ್ರಣವಗಳು, ದಶವಿಧ ಭವಿಗಳು (ಅರಿಷಡ್‌ವರ್ಗಗಳು +ಆಶೆ, ಆಮಿಷ, ಹೊನ್ನು, ಮಣ್ಣು) ಇವುಗಳ ಕ್ರಿಯೆಗಳು ಸಕೀಲಂಗಳಾಗಿ ವರ್ತಿಸುತ್ತವೆ.

ಹನ್ನೊಂದು ವಿಧ ಸಕೀಲಗಳು : ಇಲ್ಲಿ ಹನ್ನೊಂದು ವಿಧ ಲಿಂಗತತ್ವಗಳು, ಹನ್ನೊಂದು ವಿಧ ಪ್ರಸಾದಗಳು, ಹನ್ನೊಂದು ವಿಧ ಭವಿಗಳು (ಅರಿಷಡ್ ವರ್ಗಗಳು, ಆಶೆ, ಆಮಿಷ, ಹೊನ್ನು, ಹೆಣ್ಣು, ಮಣ್ಣು) ಇವುಗಳ ಕಾರ್ಯಗಳು ಸಕೀಲಗಳಾಗಿ ವರ್ತಿಸುತ್ತವೆ.

ಹನ್ನೆರಡು ವಿಧ ಸಕೀಲಗಳು : ಇಲ್ಲಿ, ದ್ವಾದಶ ಲಿಂಗಗಳು, ದ್ವಾದಶ ಪ್ರಣವ ಗಳು, ದ್ವಾದಶ ಅಂಗಗಳು, ದ್ವಾದಶ ಭ್ರಮೆಗಳು (ಸಂಶಯ ಭ್ರಮೆ, ಸಂಧಾನ ಭ್ರಮೆ, ಸಿಲುಕು ಭ್ರಮೆ, ವಿಪರೀತ ಭ್ರಮೆ, ಬಹಿರ್ಮುಖ ಭ್ರಮೆ, ಅವಿವೇಕ ಭ್ರಮೆ, ಕರ್ಮ ಭ್ರಮೆ, ನಿತ್ಯಭ್ರಮೆ, ಅನಿತ್ಯ ಭ್ರಮೆ, ವಾಗದ್ವೈತ ಭ್ರಮೆ, ತಂತ್ರಭ್ರಮೆ, ಅಹಂಭ್ರಮೆ) ಇವುಗಳ ಕ್ರಿಯೆಗಳು ಸಕೀಲಗಳಾಗಿ ವರ್ತಿಸುತ್ತವೆ.

ಹದಿನಾರು ವಿಧ ಸಕೀಲಗಳು : ಇವುಗಳಲ್ಲಿ ಪೋಡಶ ಭಕ್ತಿಗಳು, ಚಂದ್ರನ ಷೋಡಶಕಲೆಗಳು, ಷೋಡಶೋಪಚಾರಗಳು, ಅಂತರಂಗ– ಬಹಿರಂಗದ ಷೋಡಶಮದಗಳು. ಇವುಗಳ ಕ್ರಿಯೆಗಳು ಸಕೀಲಂಗಳಾಗಿ ವರ್ತಿಸುತ್ತವೆ.

ಮೂವತ್ತಾರು ಸಕೀಲಗಳು : ಇಲ್ಲಿ ಅಂಗ, ಲಿಂಗ,– ಶಕ್ತಿ,–ಭಕ್ತಿ –ಹಸ್ತ,– ಮುಖ, ಈ ಆರು ತತ್ವಗಳು ಆರು ಸ್ಥಲಗಳಲ್ಲಿ ಮೂವತ್ತಾರು ಸಕೀಲಗಳಾಗಿ ವರ್ತಿಸು ತ್ತವೆ.

ನಲವತ್ತೆಂಟು ಸಕೀಲಗಳು : ಇಲ್ಲಿ ಅಂಗ–ಲಿಂಗ,–ಶಕ್ತಿ –ಭಕ್ತಿ –ಹಸ್ತ– ಮುಖ–ಪದಾರ್ಥ– ಪ್ರಸಾದ ಈ ಎಂಟು ತತ್ವಗಳು ಆರು ಸ್ಥಲಗಳಲ್ಲಿ ನಲವತ್ತೆಂಟು ವಿಧವಾಗಿ ವರ್ತಿಸುತ್ತವೆ. ಇವುಗಳಿಗೆ ಅಷ್ಟವಿಧ ಸಕೀಲಗಳೆಂದೂ ಕರೆಯುತ್ತಾರೆ.

ತೊಂಬತ್ತಾರು ವಿಧ ಸಕೀಲಗಳು : ಇಲ್ಲಿ ಆಕೃತಿ, ಪ್ರಣಮ, ಚಕ್ರ, ಅಂಗ, ಹಸ್ತ ಲಿಂಗ, ಮುಖ, ಶಕ್ತಿ ಭಕ್ತಿ ಪದಾರ್ಥ, ಪ್ರಸಾದ, ಕಲೆ, ಸಾದಾಖ್ಯ, ಲಕ್ಷಣ, ಸಂಜ್ಞೆ, ವೇದ ಈ ಹದಿನಾರು ತತ್ವಗಳು ಪ್ರತಿಯೊಂದು ಸ್ಥಲದಲ್ಲಿ ಕಾರ್ಯ ಮಾಡುತ್ತ ಆರು ಸ್ಥಲಗಳಿಗೆ ೯೬ ಸಕೀಲಗಳಾಗಿ ಕಾರ್ಯಗೈಯುತ್ತವೆ. ಇದನ್ನು ಷೋಡಶವಿಧ ಸಕೀಲಗಳೆಂದು ಕರೆಯುತ್ತಾರೆ.

೧೦೮ ವಿಧ ಸಕೀಲಗಳು : ಇಲ್ಲಿ ಆಕೃತಿ, ಪ್ರಣವ, ಚಕ್ರ, ಅಂಗ, ವರ್ಣ, ಭೂತ, ಹಸ್ತ, ಲಿಂಗ, ಮುಖ, ಶಕ್ತಿ, ಭಕ್ತಿ, ಪದಾರ್ಥ, ಪ್ರಸಾದ, ಕಲೆ, ಸಾದಾಖ್ಯ, ಲಕ್ಷಣ, ಸಂಜ್ಞೆ, ವೇದ ಈ ೧೮ ತತ್ವಗಳು ಮಹತ್ ಇಷ್ಟಲಿಂಗದ ಆರು ಭಾಗಗಳಾದ ಆರು ಸ್ಥಲಗಳಲ್ಲಿ ೧೦೮ ಸಕೀಲಗಳಾಗಿ ಕಾರ್ಯ ಗೈಯುತ್ತವೆ. ಇವುಗಳಿಗೆ ಅಷ್ಟಾದಶ ವಿಧ ಸಕೀಲಗಳೆಂದೂ ಕರೆಯಬಹುದು.

೨೧೬ ವಿಧ ಸಕೀಲಂಗಳು : ಭೂತ, ಶಕ್ತಿ, ವಾಯು, ಅವಸ್ಥೆ, ಅಧಿದೇವತೆ, ಸ್ಥಾನ, ಅಂಗ, ಚಕ್ರ, ದಳ, ವರ್ಣ, ಅಕ್ಷರ, ಆಕೃತಿ, ಪ್ರಣವ, ಲಿಂಗ, ವರ್ಣದ ಪ್ರಭೆ, ಮಂತ್ರಾಕ್ಷರ, ಮುಖ, ಹಸ್ತ, ಭಕ್ತಿ ಪದಾರ್ಥ, ಪ್ರಸಾದ ಮಂತ್ರ, ಅರ್ಪಣ, ಪ್ರಸಾದ, ಆಚಾರ, ಲಕ್ಷಣ, ಸಾದಾಖ್ಯ, ಕಲೆ, ಸಂಜ್ಞೆ, ದಿಕ್ಕು, ಪರವಸ್ತುವಿನ ಮುಖ, ವೇದ, ಬ್ರಹ್ಮ ಕೂಟ, ಮಾಟ, ಗುರಿ, ದ್ರವ್ಯ, ಹೀಗೆ ೩೬ ಸಕೀಲ ತತ್ವಂಗಳು ಮಹತ್ ಇಷ್ಟಲಿಂಗದ ಆರು ಹಂತಗಳಾದ ಆರು ಸ್ಥಲಗಳಲ್ಲಿ ೨೧೬ ಸಕೀಲಂಗಳಾಗಿ ಕಾರ್ಯಗೈಯ್ಯುತ್ತವೆ. ಇವುಗಳನ್ನು ಷಟ್‌ತ್ರಿಂಶತ್‌ವಿಧ ಸಕೀಲಂಗಳೆಂದೂ ಕರೆಯಬಹುದು.

ಈ ಮೇಲೆ ಹೇಳಿದ ಸಮಗ್ರ ಸಕೀಲಂಗಳಲ್ಲಿ ೧ ರಿಂದ ೧೬ ರ ವರೆಗಿನ ಸಕೀಲಗಳ ವಿವರಣೆಯಲ್ಲಿ ತತ್ವ, ಲಿಂಗ, ಅಂಗ, ವಿಷಯ (ಪ್ರಕೃತಿ) ಮಾಯೆ ಮುಂತಾದ ಐದು ಸಕೀಲಗಳನ್ನು ಕೂಡಿಸಿ ನಿರೂಪಿಸಲ್ಪಟ್ಟಿರುತ್ತದೆ. ಮುಂದೆ ಮೂವತ್ತಾರು, ನಲವತ್ತೆಂಟು, ತೊಂಬತ್ತಾರು, ನೂರುಎಂಟು, ಎರಡುನೂರುಹದಿ ನಾರು ಸಕೀಲಂಗಳಲ್ಲಿ ಮಾಯಾ ಸಕೀಲಗಳನ್ನು ಹೊರತುಪಡಿಸಿ ನಿರೂಪಿಸಲ್ಪಟ್ಟಿರು ತ್ತವೆ. ಈ ಸಕೀಲಂಗಳಲ್ಲಿ ಅನುಕ್ರಮ, ಕ್ರಮಾನುಗತಿ (Serial and Sequential order), ಸಮಾನಾಂತರ ಕ್ರಮ (Parallel order), ಲಂಬಾಂತರ ಕ್ರಮ (Vertical orders), ಅವರೋಹಣ ಕ್ರಮ (descending order), ಆರೋಹಣ ಕ್ರಮ, (ascending order), ಇವೆಲ್ಲ ವಚನಗಳಲ್ಲಿ ಸರಿಯಾಗಿ ಬಂದಿಲ್ಲ. ವಿಸ್ತಾರ ಭಯದಿಂದ ಇವುಗಳನ್ನು ವಿವರಿಸಲಾಗಿಲ್ಲ. ಇವುಗಳನ್ನು ಅನುಭಾವದಿಂದ ಗುರುತಿಸಿ ಆಚರಿಸಬೇಕಾಗುತ್ತದೆ.

ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಆತ್ಮ ಈ ಷಟ್‌ತತ್ವಗಳ ವರ್ಣಗಳು ಎರಡು ರೀತಿಯಲ್ಲಿ ಪ್ರಕಟಗೊಳ್ಳುವವು.

೧. ಮೂಲ ವರ್ಣಗಳು (Core colours)

೨. ಪ್ರಭಾವರ್ಣಗಳು (ಬಾಹ್ಯ ವರ್ಣಗಳು) (radiated colours)

ಷಟ್ ತತ್ವಗಳಿಗನುಗುಣವಾಗಿ ಮೂಲ ವರ್ಣಗಳನ್ನು ಹೀಗೆ ಕ್ರಮಗೊಳಿಸಲಾಗಿದೆ.

೧. ಹಳದಿ	೨. ಶ್ವೇತ
೩. ಕುಂಕುಮ	೪. ಹಸಿರು
೫. ಕಪ್ಪು (ಕಪೋತ)	೬. ಕೆಂಪು (ಮಾಣಿಕ್ಯ)

ಅದೇ ರೀತಿ ಪ್ರಭಾವರ್ಣಗಳನ್ನು ಈ ರೀತಿ ಕ್ರಮಗೊಳಿಸಲಾಗಿದೆ.

೧. ಕಪ್ಪು	೨. ನೀಲ
೩. ಹರಿತ	೪. ಮಾಂಜಿಷ್ಟ
೫. ಶುಕ್ತಿ (ಮುತ್ತಿನ ಸಿಂಪಿನ ಬಿಳಿರಜತ)	೬. ವಜ್ರ (ತಿಳಿ ಶ್ವೇತ)

೩೦) ಆರು ಲಿಂಗಸ್ಥಲ ಎಂಬ ಅಧ್ಯಾಯದಲ್ಲಿ ಆರುಶಕ್ತಿಗಳ ವಿವೇಚನೆ

೧) ಈ ಶಕ್ತಿಗಳ ವಿವೇಚನೆಯಲ್ಲಿ, ಜ್ಞಾನ ಶಕ್ತಿಯಲ್ಲಿ ಐದು ಜ್ಞಾನೇಂದ್ರಿಯಗಳನ್ನು ಹಾಗೂ ಇಚ್ಛಾಶಕ್ತಿಯಲ್ಲಿ ಐದು ವಿಷಯಂಗಳು ವಿವೇಚಿಸಲ್ಪಟ್ಟಿವೆ. ಈ ವಿವೇಚನೆಯು ತಿರುವು ಮುರುವಾಗಿವೆ ಎಂದು ನಮ್ಮ ಅಭಿಪ್ರಾಯ. ಜಲ ತತ್ವಕ್ಕೆ ಪಂಚವಿಷಯಗಳನ್ನು ಹಾಗೂ ಅಗ್ನಿತತ್ವಕ್ಕೆ ಪಂಚಜ್ಞಾನೇಂದ್ರಿಯಗಳನ್ನು ಸಂಬಂಧಿಸಿದರೆ ಒಳಿತು. ಏಕೆಂದರೆ ಜಲತತ್ವವು ತನ್ನ ಕರ್ಮವಾದ (ಕ್ರಿಯೆಯಾದ) ಪಿಂಡೀಕರಣದ ಮೂಲಕ ಐದುತತ್ವಗಳ ಸಾರವನ್ನು ಸಂಗ್ರಹಿಸುವದು. ಆದ್ದರಿಂದ ಐದುವಿಷಯಗಳು ಜಲತತ್ವದ ಬುದ್ಧಿಶಕ್ತಿಯಾದ ಜ್ಞಾನಶಕ್ತಿಗೆ ಸಂಬಂಧಿಸುವವು. ಅದೇ ರೀತಿ ಅಗ್ನಿತತ್ವದ ಮೂಲ ಶಕ್ತಿಯು ಇಚ್ಛಾಶಕ್ತಿಯಾಗಿರುವದು. ಈ ಇಚ್ಛಾಶಕ್ತಿಯು ಮನಾದೇಶಶಕ್ತಿಯಾಗಿ (execution of will power) ಮನಸ್ಸಿನ ಆದೇಶವನ್ನು ಆಚರಣೆಗೆ ತರುತ್ತದೆ. ಹೀಗಾಗಿ ಇದು ಮನಸ್ಸಿನ ಸಂಕಲ್ಪ ಶಕ್ತಿಯಾಗಿ ವರ್ತಿಸುತ್ತದೆ. ಈ ಇಚ್ಛಾಶಕ್ತಿಯ ವರ್ತನೆಯನ್ನು ನಾವು ಜ್ಞಾನೇಂದ್ರಿಯಗಳ ಮೂಲಕ ಕಾರ್ಯಗೈಯ್ಯುವದನ್ನು ಕಾಣುತ್ತೇವೆ. ಹೀಗಾಗಿ ಜ್ಞಾನೇಂದ್ರಿಯಗಳು ಇಚ್ಛಾಶಕ್ತಿಗೆ ಸಂಬಂಧ ಪಡುತ್ತವೆ. ಪಂಚ ವಿಷಯಗಳು ಸ್ಥೂಲವಾಗಿರುತ್ತವೆ. ಪಂಚ ಜ್ಞಾನೇಂದ್ರಿಯಗಳು ರೂಪಮಯವಾಗಿರುತ್ತವೆ. ಹೀಗಾಗಿ ಪಂಚವಿಷಯಗಳು ಸ್ಥೂಲತತ್ವವಾದ ಜಲತತ್ವಕ್ಕೂ, ಪಂಚಜ್ಞಾನೇಂದ್ರಿಯಗಳು ಸೂಕ್ಷ್ಮ ತತ್ವವಾದ ಅಗ್ನಿತತ್ವಕ್ಕೂ ಸಂಬಂಧಿಸಲ್ಪಡಬೇಕೆಂಬುದು ನಮ್ಮ ಅಭಿಪ್ರಾಯ.

(೨) ಆದಿಶಕ್ತಿಯ ಪರಿಚ್ಛೇದದಲ್ಲಿ ಪಂಚವಾಯುಗಳು, ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣವೆಂಬ ಪಂಚಲಕ್ಷಣ ಸ್ವರೂಪವನ್ನು ಪಡೆದು ನಿವೃತ್ತಿ ಹೊಂದುವವೆಂದು ನಿರೂಪಿಸಲ್ಪಟ್ಟಿದೆ. ಇದು ಸರಿಯಾದ ವಿವೇಚನೆಯಲ್ಲ ಎಂದೆನಿಸುವದು. ಈ ಸ್ಥೂಲಪಂಚವಾಯುಗಳು ಮಹಾಕಾರಣವಾಯುಗಳಾದ ವೈರಂಭಣ, ಮುಖ್ಯವಾಯು, ಪ್ರಭಂಜನ, ಅಂತರವಾಯು, ಮಹಾಪ್ರಾಣ ವಾಯುಗಳೆಂಬ ಸುಶುಮ್ನನಾಳದ ವಾಯುಗಳಾಗಿ ಪರಿವರ್ತನೆಗೊಂಡು ನಿವೃತ್ತಿಯನ್ನು ಹೊಂದುತ್ತವೆ.

(೩) ಅದೇ ರೀತಿ ಚಿಚ್ಛಕ್ತಿಯ ಪ್ರಕರಣದಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ ಎಂಬ ಭಾವಾದಿಕರಣಂಗಳು ಭಕ್ತಿ, ಹಸ್ತ, ಲಿಂಗ, ಮುಖ, ಪದಾರ್ಥ ಮುಂತಾಗಿ ನಿವೃತ್ತಿ ಹೊಂದುವವೆಂದು ವಿವೇಚಿಸಲಾಗಿದೆ. ಆದರೆ ಈ ಭಾವಾದಿ ಕರಣಂಗಳು ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಎಂಬ ಲಕ್ಷಣಗಳಾಗಿ ನಿವೃತ್ತಿ ಹೊಂದುವವೆಂದು ನಮ್ಮ ಅಭಿಪ್ರಾಯವಾಗಿದೆ.

೩೧) ಈ ವಚನದಲ್ಲಿ ಕೆಳಗಿನಂತೆ ಅನುಭವ ನಿಷ್ಪತ್ತಿಯನ್ನು ಮಾಡಬೇಕು. ಆಕಾರ, ಉಕಾರ, ಮಕಾರ ಪ್ರಣವಗಳಿಂದ ಕ್ರಮವಾಗಿ ನಾದ, ಬಿಂದು, ಕಲೆಗಳು ಉತ್ಪತ್ತಿಯಾಗುವವು. ನಾದ ಬಿಂದು, ಕಲೆಗಳಿಂದ ಕ್ರಮವಾಗಿ ಭಾವ, ಮನ,

ಶರೀರಗಳು ಉತ್ಪತ್ತಿಯಾಗುವವು. ಭಾವ, ಮನ, ಶರೀರದಿಂದ ಕ್ರಮವಾಗಿ ಭಕ್ತಿ ಜ್ಞಾನ, ಕ್ರಿಯೆಗಳು ಉತ್ಪತ್ತಿಯಾಗುವವು. ನಾದ, ಬಿಂದು, ಕಲೆಗಳಲ್ಲಿ ಕ್ರಮವಾಗಿ ಮಹಾಲಿಂಗಾದಿ ಆರುಲಿಂಗಗಳು ಉತ್ಪತ್ತಿ ಹೊಂದುವವು. ಆರುಲಿಂಗಗಳಿಂದ ಕ್ರಮವಾಗಿ ಚಿಚ್ಛಕ್ತಿಯಾದಿ ಆರುಶಕ್ತಿಗಳು ಉತ್ಪತ್ತಿಯಾಗುವವು. ಗುರುವಿನಿಂದ ಶರೀರ, ಲಿಂಗದಿಂದ ಮನಸ್ಸು, ಜಂಗಮದಿಂದ ಭಾವಗಳು ಪರಿಶುದ್ಧಗೊಳ್ಳುತ್ತವೆ. ಈ ಕ್ರಮವಿಡಿದು ಈ ವಚನವನ್ನು ಅರ್ಥೈಸಬೇಕು.

೩೨) ಸುಚಿತ್ತ : ಜನ್ಮ ಜನ್ಮಾಂತರದಿಂದ ಸಂಚಿತ, ಪ್ರಾರಬ್ಧ, ಆಗಾಮಿಕರ್ಮ ವಾಸನೆಗನುಗುಣವಾಗಿ ವರ್ತಿಸುವ ಚಿತ್ತವೇ ಕುಚಿತ್ತವು. ಗುರು ಲಿಂಗ ಜಂಗಮ ಪ್ರಸಾದಿಂದ ಈ ವಾಸನೆಯಳಿದು ಸತ್ಯಶುದ್ಧ ಕ್ರಿಯೆಯನ್ನಾಚರಿಸುವ ಚಿತ್ತವೇ ಸುಚಿತ್ತವು.

ಸುಬುದ್ಧಿ : ಹೊನ್ನು, ಹೆಣ್ಣು, ಮಣ್ಣು, ಪರದೈವ, ಪರನಿಂದೆ, ಪರಹಿಂಸೆ ಮೊದಲಾದವುಗಳ ಮೋಹದಿಂದ ಆಚರಿಸುವ ಬುದ್ಧಿಯೇ ಕುಬುದ್ಧಿಯು. ಗುರು ಲಿಂಗ, ಜಂಗಮ ಪಾದೋದಕದಿಂದ ಕುಬುದ್ಧಿಯು ನಷ್ಟವಾಗಿ, ಲಿಂಗನಿಷ್ಠಾ ಪರನಾಗಿ, ಸಮತೆ, ವಿನಯ, ಕರುಣಾದಿ ಗುಣಗಳಿಂದ ಆಚರಿಸುವ ಬುದ್ಧಿಯೇ ಸುಬುದ್ಧಿಯು.

ನಿರಹಂಕಾರ : ನಾನು, ನನ್ನದು, ನನ್ನಿಂದ ಎಂಬ ತಾಮಸ, ರಾಜಸ, ಸಾತ್ವಿಕ ಅಹಂಕಾರದಿಂದ ವರ್ತಿಸುವದೇ ಅಹಂಕಾರ ಗುಣವು. ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದದಿಂದ ಈ ಗುಣಗಳು ಕೆಟ್ಟು ತನು, ಮನ, ಭಾವಗಳಲ್ಲಿ ಪ್ರಸನ್ನತೆಯಿಂದ ವರ್ತಿಸುವದೇ ನಿರಹಂಕಾರವು.

ಸುಮನ : ಮನ, ಮನನ, ಮನನೀಯವೆಂಬ ತ್ರಿವಿಧ ಮನಸ್ಸ್ವರೂಪದಲ್ಲಿ ಸಂಕಲ್ಪ, ವಿಕಲ್ಪ, ಭ್ರಮೆಗಳಿಂದ ವರ್ತಿಸುವದೇ ಕುಮನವು. ಇಷ್ಟ, ಪ್ರಾಣ, ಭಾವ ಲಿಂಗಗಳ ಸಂಬಂಧದಿಂದ ಕುಮನಸ್ಸು ನಷ್ಟವಾಗಿ ಸತ್ಪ್ರಾಣ, ಚಿತ್ಪ್ರಾಣ, ಪ್ರಾಣಲಿಂಗ ವಾಗಿ ವರ್ತಿಸುವದೇ ಸುಮನಸ್ಸೆಂದೆನಿಸುವುದು.

ಸುಜ್ಞಾನ : ವಿಶ್ವ, ತೇಜಸ, ಪ್ರಾಜ್ಞ ಎಂಬ ಜೀವತ್ರಯನು ಮರೆವು, ಅವಿವೇಕ, ಅರೆಜ್ಞಾನಗಳಿಂದ ಕೂಡಿದ 'ಜೀವನ' ವರ್ತನೆಯೇ ಅಜ್ಞಾನವು. ಮಂತ್ರಾನು ಸಂಧಾನದಿಂದ ಅಜ್ಞಾನವು ನಷ್ಟವಾಗಿ ಸ್ವಸ್ವರೂಪ ಜ್ಞಾನವಾಗುವದೇ ಸುಜ್ಞಾನವು.

ಸದ್ಭಾವ : ದುರ್ವರ್ತನ, ದುರ್ಮೋಹನ, ಅಹಂಭಾವದಿಂದ ವರ್ತಿಸು ವದೇ ದುರ್ಭಾವವು. ಸತ್, ಚಿತ್, ಆನಂದವೆಂಬ ಶುದ್ಧಾತ್ಮ ಗುಣಗಳ ಸಂಬಂಧ ದಿಂದ ದುರ್ಭಾವ ನಷ್ಟವಾಗಿ ಸದ್ವರ್ತನ, ಪ್ರಕಾಶನ, ನಿರಹಂಭಾವದಿಂದ ವರ್ತಿಸು ವದೇ ಸದ್ಭಾವವೆಂದೆನಿಸುವದು.

ಈ ಮೂರನೇ ವಚನದಲ್ಲಿ ಆರು ಅಂತಃಕರಣಗಳ ವಿವರಣೆಯು ಧಾರ್ಮಿಕ

ಶೈಲಿಯಲ್ಲಿ ಅಸವ್ಯವಸ್ತವಾಗಿ ಬಂದಿದೆ. ಇದನ್ನು ದಾರ್ಶನಿಕ ಶೈಲಿಯಲ್ಲಿ ವ್ಯವಸ್ಥಿತವಾಗಿ ಮೇಲಿನಂತೆ ವಿವರಿಸುವದೇ ಸೂಕ್ತವೆಂಬುದು ನಮ್ಮ ಅನಿಸಿಕೆ.

ಅನುಬಂಧ–೨೧

ವೀರಶೈವ ಧರ್ಮದ ಉತ್ಪತ್ತಿ ಹಾಗೂ ಸ್ಥಾಪಕರು

ಈ ಗ್ರಂಥದಲ್ಲಿ ಡಾ॥ ಫ. ಗು. ಹಳಕಟ್ಟಿಯವರು ಅನುಬಂಧ ೧೩ರಲ್ಲಿ ಶೈವ–ವೀರಶೈವ ಭೇದಗಳನ್ನು ಕುರಿತು ಹಾಗೂ ಅನುಬಂಧ ೧೪ರಲ್ಲಿ 'ವೀರಶೈವ ಧರ್ಮದ ಉಗಮ ಮತ್ತು ಪ್ರವರ್ತಕರು, ಎಂಬ ವಿಷಯ ಬರೆದಿದ್ದಾರೆ. ಅನುಬಂಧ ೧೩ರಲ್ಲಿ ಶೈವ ಮತ್ತು ವೀರಶೈವ ಭೇದಗಳನ್ನು ಕುರಿತು ಬರೆಯುವಾಗ ಸೂಕ್ಷ್ಮಾಗಮ ಮತ್ತು ಪಾರಮೇಶ್ವರಾಗಮಗಳ ಆಧಾರ ತೆಗೆದುಕೊಳ್ಳುತ್ತ ಇವುಗಳನ್ನು ಆಧರಿಸಿ 'ವೀರಶೈವವು ಆಗಮ ಮೂಲ'ವೆಂದು ಭಾವಿಸುತ್ತಾರೆ. ಹೀಗೆ ಭಾವಿಸುತ್ತ ಸಾಮಾನ್ಯ ಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವವೆಂಬ ವಿಭಜನೆಯೊಂದಿಗೆ ವೀರಶೈವವು ಶೈವದ ಒಂದು ಭಾಗವಾಗಿತ್ತೆಂದು ತಿಳಿಯುತ್ತಾರೆ. ಅದೇ ರೀತಿ ವೀರಶೈವರಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಭೇದಗಳು ಮುಂತಾಗಿ ಇವೆ ಎಂದು ಉಲ್ಲೇಖಿಸುವರು.

ಅನುಬಂಧ ೧೪ರಲ್ಲಿ, ಬೌದ್ಧ, ಕ್ರೈಸ್ತ ಇಸ್ಲಾಂ ಧರ್ಮಗಳಂತೆ ವೀರಶೈವ ಧರ್ಮವು ಒಬ್ಬಾನೊಬ್ಬ ವ್ಯಕ್ತಿಯಿಂದ ಸ್ಥಾಪಿತವಾದುದಲ್ಲ. ಅದಕ್ಕೆ ಒಂದು ಪುರಾತನ ಪರಂಪರೆಯಿದೆ. ವೇದಾಗಮಗಳಲ್ಲಿ ಅಲಲ್ಲಿ ಹೇಳಲ್ಪಡುವದುಂಟು. ವೀರಶೈವ ಮತ ತತ್ವಗಳ ಅಂಶಗಳು ವೇದೋಪನಿಷತ್ ಆಗಮಗಳಲ್ಲಿ ಕಂಡುಬರುತ್ತವೆ. ಪರಬ್ರಹ್ಮದ ವಿಚಾರಗಳು, ಆಚಾರ ವಿಷಯಕ ಪದ್ಧತಿಗಳು, ಷಟ್‌ಸ್ಥಲ ಶಾಸ್ತ್ರದ ಯೋಗಭ್ಯಾಸದ ಮೂಲತತ್ವಗಳು ಈ ಗ್ರಂಥಗಳಲ್ಲಿ ಕಂಡುಬರುತ್ತವೆ. ಕರಣಹಸಿಗೆಯಲ್ಲಿ ಸಾಂಖ್ಯ ಶಾಸ್ತ್ರದ ತತ್ವಗಳನ್ನು ಕಾಣಬಹುದು. ಪ್ರಸಾದಿಸ್ಥಲದಲ್ಲಿ ಭಗವದ್ಗೀತೆಯ ನಿಷ್ಕಾಮ ಕರ್ಮದ ಆಚರಣೆಗಳಿವೆ. ಹೀಗಾಗಿ ಹಿಂದೂಧರ್ಮದ ಗ್ರಂಥಗಳಲ್ಲಿರುವ ಉದಾತ್ತ ತತ್ವಗಳು ವೀರಶೈವ ಧರ್ಮದಲ್ಲಿ ಪೋಣಿಸಲ್ಪಟ್ಟಿರುತ್ತವೆ ಎಂಬ ಅಭಿಪ್ರಾಯಪಡುತ್ತ ವೀರಶೈವ ಧರ್ಮವು ಒಂದು ಪುರಾತನಧರ್ಮವೆಂದು ಭಾವಿಸುತ್ತಾರೆ.

ಕ್ರಿ.ಶ. ೧೯ ಹಾಗೂ ೨೦ನೇ ಶತಮಾನಗಳಲ್ಲಿ ಹಿಂದೂ ಕಕ್ಷೆಯಲ್ಲಿ ಹಿಂದೂ ಬ್ರಾಹ್ಮಣ ಪುರೋಹಿತಶಾಹಿಗಳು ಹಾಗೂ ವೀರಶೈವರ (ಲಿಂಗಾಯತ) ಮಧ್ಯ ಬ್ರಾಹ್ಮಣ–ಶೂದ್ರತ್ವದ ಸಂಘರ್ಷ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಹಳೇಮೈಸೂರ ವಿಭಾಗದಲ್ಲಿ ಜನಗಣತಿಯ ಕಾಲಕ್ಕೆ (ಕ್ರಿ. ಶ. ೧೮೮೧) ಶೂದ್ರರ ಸಾಲಿಗೆ ವೀರಶೈವರನ್ನೂ ಸೇರಿಸಿದರು. ಹಾಗೆಯೇ ಉತ್ತರ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕದಲ್ಲಿ ೨೦ನೇ ಶತಮಾನದ ಆರಂಭದಲ್ಲಿ ವೀರಶೈವರನ್ನು ಶೂದ್ರರೆಂದು ಪರಿಗಣಿಸಿ, ಹಿಂದೂ ದೇವಾಲಯಗಳ ಗರ್ಭಗುಡಿಗಳಲ್ಲಿ ಪ್ರವೇಶ

ನಿರಾಕರಣೆ (ಬನವಾಸಿಯಲ್ಲಿ ಶ್ರೀ ಎಸ್. ಕೆ. ಒಡೆಯರವರ ಪ್ರಕರಣ) ಮತ್ತು ರುದ್ರಾಭಿಷೇಕವನ್ನು ಮಾಡುವದನ್ನು ನಿರ್ಭಂದಿಸಿ ಇವರ ಮೇಲೆ ಮೊಕದ್ದಮೆ ಹೂಡಲಾಯಿತು. ಇಂಥಹ ಸಂದರ್ಭಗಳಲ್ಲಿ ವೀರಶೈವ ಪುರೋಹಿತಶಾಹಿಗಳು 'ತಾವು ಶೂದ್ರರಲ್ಲ, ಲಿಂಗೀಬ್ರಾಹ್ಮಣರೆಂದು ಸಾಧಿಸಹತ್ತಿದರು. ಇದಕ್ಕಾಗಿಯೇ ಕೃತ್ರಿಮವಾದ 'ಲಿಂಗಿಬ್ರಾಹ್ಮಣ' ಸಾಹಿತ್ಯ ಈ ಕಾಲದಲ್ಲಿ ರಚಿಸ ಲ್ಪಟ್ಟಿತು.

೧೯ನೇ ಶತಮಾನದ ಪ್ರಾರಂಭದಲ್ಲಿ ವೀರಶೈವರಲ್ಲಿಯೇ ಭಕ್ತ–ಮಾಹೇಶ್ವರ ಕೃತ್ರಿಮ ವರ್ಗದ ಸಂಘರ್ಷ ಪ್ರಾರಂಭವಾಯಿತು. ಹಿಂದುಗಳಲ್ಲಿ ವರ್ಣಾಶ್ರಮ ಗಳಿರುವಂತೆ ವೀರಶೈವರಲ್ಲಿಯೂ ಅಪ್ರಾಕೃತ ವರ್ಣಾಶ್ರಮಗಳಿವೆ ಎಂದು ಲಿಂಗವಂತ ಪುರೋಹಿತಶಾಹಿಗಳು ಸಾಧಿಸಹತ್ತಿದರು. ಇದರಿಂದ ವೀರಶೈವರಲ್ಲಿ 'ಅಯ್ಯಾಚಾರ' ಎಂಬ (ಮಾಹೇಶ್ವರದೀಕ್ಷೆ) ಕೃತ್ರಿಮ ದೀಕ್ಷೆ ಪ್ರಾರಂಭವಾಯಿತು. ಈ ಹಿಂದೂಕಕ್ಷೆಯ ಬ್ರಾಹ್ಮಣ–ಶೂದ್ರವಾದ, ವೀರಶೈವಕಕ್ಷೆಯ ಭಕ್ತ–ಮಾಹೇಶ್ವರ ವಾದಗಳು ವೀರಶೈವವು ಪುರಾತನವೆಂದು ಸಾಧಿಸಲಿಕ್ಕೆ ಮೂಲ ಕಾರಣಗಳಾದವು. ಇದಕ್ಕೆ ಪೋಷಕವಾಗಿ ಸಂಸ್ಕೃತದಲ್ಲಿ ವೀರಶೈವ ಕೃತ್ರಿಮ ಸಾಹಿತ್ಯವು ಲಿಂಗಾಯತ ಪುರೋಹಿತ ಶಾಹಿಗಳಿಂದ ರಚಿಸಲ್ಪಟ್ಟಿತು. ಅದೇ ರೀತಿಯಲ್ಲಿ ಬ್ರಿಟಿಶ್ ಸರಕಾರಕ್ಕೆ ವೀರಶೈವ ಮತ ಸ್ಥಾಪನೆ ಕುರಿತುಕೃತ್ರಿಮಸಾಹಿತ್ಯದ ವಿವರಣೆ ನೀಡಲಾಯಿತು. ಇದು ಸಹ ವೀರಶೈವವು ಬಸವ ಪೂರ್ವಯುಗದ್ದೆಂದು ಹೇಳಲು ಕಾರಣವಾಯಿತು. ಈ ಮೇಲಿನ ಮತ್ತು ಇನ್ನೂ ಮುಂತಾದ ಕಾರಣಗಳಿಗಾಗಿ ವೀರಶೈವಪರ ಕೃತ್ರಿಮ ಸಾಹಿತ್ಯ ರಚನೆಯಾಯಿತು.

ಈ ಸಾಹಿತ್ಯದ ಮೂಲಕ ವೀರಶೈವವು ವೇದೋಪನಿಷತ್ ಆಗಮಗಳ ಕಾಲಕ್ಕೆ ಇತ್ತೆಂದು ಸಾಧಿಸಹತ್ತಿದರು. ಕೆಲವು ವೇದ ಮಂತ್ರಗಳ ಅರ್ಥವನ್ನು ದೀರ್ಘವಾಗಿ ಹಿಗ್ಗಿಸಿ ವೀರಶೈವಪರ ಅರ್ಥ ನೀಡಹತ್ತಿದರು. ಹಾಗೆಯೇ ವೀರಶೈವಪರವೆಂದು ಸಾಧಿಸುವ ಕೃತ್ರಿಮವಾದ ಉಪನಿಷತ್ತುಗಳು, ಆಗಮಗಳು, ಸಂಹಿತೆಗಳು, ಭಾಷ್ಯ ಗಳು, ಚಂದ್ರಿಕೆಗಳು, ಸಿದ್ಧಾಂತಶಿಖಾಮಣಿ, ಶೈವಪುರಾಣಗಳ ಉತ್ತರ ಭಾಗಗಳು ಮುಂತಾದ ಕೃತ್ರಿಮ ಸಾಹಿತ್ಯವನ್ನು ಸಂಸ್ಕೃತದಲ್ಲಿ ರಚಿಸಿದರು. ಅವುಗಳನ್ನೇ ಪ್ರಾಚೀನತೆಗಾಗಿ ಆಧಾರವೆನ್ನುತ್ತಿದ್ದಾರೆ.

ವೀರಶೈವರಲ್ಲಿ ಸಂಸ್ಕೃತ ಹಾಗೂ ಆಗಮ ಪಂಡಿತರಾದ ಡಾ॥ ಶಿ. ಚ. ನಂದೀಮಠ, ಶ್ರೀ ಸಿದ್ಧಾರಾಮಪ್ಪ ಪಾವಟೆ, ಪ್ರೊ. ಎಮ್. ಆರ್. ಸಾಖರೆ, ಶ್ರೀ ಕೆ. ಚನ್ನಮಲ್ಲಿಕಾರ್ಜುನ ಮುಂತಾದವರು ಈ ವೀರಶೈವಪರ ವೇದೋಪನಿಷತ್ ಆಗಮ ಸಾಹಿತ್ಯವನ್ನು ನೈಜವೆಂದು ನಂಬುವದಿಲ್ಲ. ಪ್ರೊ. ಶಿ. ಶಿ. ಬಸವನಾಳರು ಸಹ 'ಬಸವ ಪೂರ್ವ'ದ ವೀರಶೈವವನ್ನು ಒಪ್ಪುವದಿಲ್ಲ.

ಈಗ ನನಗೆ ಈ ವಿಷಯದಲ್ಲಿ 'ಬಸವಪೂರ್ವ'ಯುಗದ ವೀರಶೈವ ವಾದವನ್ನು ನಿರಾಕರಿಸಲು ಐತಿಹಾಸಿಕ ದಾಖಲೆಗಳು ದೊರಕಿವೆ. ಈ ಕೆಲವು ದಾಖಲೆಗಳು

ಡಾ|| ಫ. ಗು. ಹಳಕಟ್ಟಿಯವರ ಕಾಲದ ವಿದ್ವಾಂಸರಿಗೆ ದೊರಕಿದ್ದಿಲ್ಲ. ಹೀಗಾಗಿ ಅವರಿಗೆ ವೀರಶೈವ ಉಗಮ ಮತ್ತು ಪ್ರವರ್ತಕರ ಬಗ್ಗೆ ಸಂಶಯವಿತ್ತು. ಅಂಥಹದೇ ಸಂಶಯವು ಈ ಗ್ರಂಥದ ಅನುಬಂಧ ೧೩ ಮತ್ತು ೧೪ರಲ್ಲಿ ವ್ಯಕ್ತವಾಗಿದೆ.

ಯಾವುದೇ ಧರ್ಮದ ಉಗಮವು ವ್ಯಕ್ತಿ ಹಾಗೂ ತತ್ವ ಮೂಲವಾಗಿರುತ್ತದೆ. ಕ್ರೈಸ್ತ – ಬೌದ್ಧ – ಶೈವ – ವೈಷ್ಣವ–ಶಾಕ್ತ–ಸೌರ–ಗಾಣಪತ್ಯ–ಜೈನ ಮುಂತಾದ ಧರ್ಮ ಹಾಗೂ ಮತಗಳು ವ್ಯಕ್ತಿ ಹಾಗೂ ದೇವತಾಮೂಲಗಳಾಗಿವೆ. ಹಿಂದೂ, ಇಸ್ಲಾಮ್, ಶಿಖ್, ಫಾರ್ಸಿ, ವೀರಶೈವ (ಲಿಂಗಾಯತ) ಮತಗಳು ತತ್ವ ಹಾಗೂ ಸಂಸ್ಕೃತಿಮೂಲವಾಗಿವೆ. ಇಸ್ಲಾಂ, ಸಿಖ್, ಫಾರ್ಸಿ ಧರ್ಮಗಳ ಸ್ಥಾಪಕರುಗಳು ಕ್ರಮವಾಗಿ ಮಹಮ್ಮದಪೈಗಂಬರ, ಗುರುನಾನಕ, ಝರತ್ರುಷ್ಟ್ರರು ಎಂದು ಆಯಾ ಧರ್ಮದ ಅನುಯಾಯಿಗಳು ಒಪ್ಪುತ್ತಾರೆ. ಹಾಗೆಯೇ ತಾತ್ವಿಕ ಮತ್ತು ಐತಿಹಾಸಿಕ ಕಾರಣಗಳಿಗಾಗಿ ಬಸವೇಶ್ವರರನ್ನು ವೀರಶೈವ (ಲಿಂಗಾಯತ) ಧರ್ಮಸ್ಥಾಪಕರೆಂದು ಒಪ್ಪಲೇ ಬೇಕಾಗುತ್ತದೆ. ಈ ವಿಷಯ ಕುರಿತು ನಾನು 'ಬಸವೇಶ್ವರರೇ ಲಿಂಗಾಯತ ಧರ್ಮ ಸ್ಥಾಪಕರು' ಎಂಬ ಕೃತಿಯನ್ನು ರಚಿಸಿದ್ದೇನೆ. ಅದರಲ್ಲಿ ಐತಿಹಾಸಿಕ ಹಾಗೂ ತಾತ್ವಿಕ ದಾಖಲೆಗಳನ್ನು ನೋಡಬಹುದು.

ಸಂಸ್ಕೃತದಲ್ಲಿ ರಚಿತವಾದ ವೀರಶೈವ ಕೃತ್ರಿಮ ಸಾಹಿತ್ಯದ ಆಕರಗಳನ್ನು ವೀರಶೈವದ 'ಬಸವ ಪೂರ್ವಯುಗದ ಕೃತ್ರಿಮಪ್ರಾಚೀನತೆಗಾಗಿ, ವಚನ ಸಾಹಿತ್ಯ, ವೀರಶೈವ ಕಾವ್ಯ ಸಾಹಿತ್ಯದಲ್ಲಿ ಪ್ರಕ್ಷಿಪ್ತವಾಗಿ ಸೇರಿಸಲಾಯಿತು. ಹಾಗೆಯೇ ತೆಲಗು–ತಮಿಳು– ಮರಾಠಿ ಭಾಷೆಗಳ ವೀರಶೈವ ಸಾಹಿತ್ಯದಲ್ಲಿಯೂ ಸೇರಿಸ ಲಾಯಿತು. ಈ ಎಲ್ಲ ವಿವರಣೆಗಳನ್ನು ಪರಿಗಣಿಸಿದರೆ ಈ ೧೩–೧೪ನೇ ಅನುಬಂಧ ಗಳಲ್ಲಿರುವ ಅಭಿಪ್ರಾಯವನ್ನು ಒಪ್ಪಲಿಕ್ಕೆ ಆಗುವದಿಲ್ಲ. ಡಾ|| ಫ. ಗು. ಹಳಕಟ್ಟಿ ಯವರೇ ಸ್ವತಃ ಬಸವ ಪೂರ್ವದಲ್ಲಿ ವೀರಶೈವದ ಉಗಮವಿತ್ತು ಹಾಗೂ ಅದರ ಸ್ವರೂಪ ಯಾವ ತೆರನಾಗಿತ್ತೆಂಬುದು ಇನ್ನೂ ಸಂಶೋಧಿಸಲ್ಪಡತಕ್ಕ ವಿಷಯವಾಗಿದೆ ಎಂದು ಅನುಬಂಧ ೧೪ ರ ಕೊನೆಯಲ್ಲಿ ಬರೆಯುತ್ತಾರೆ. ಅಂತೆಯೆ ಇತ್ತೀಚಿನ ಸಂಶೋಧನೆಗಳು ಬಸವಪೂರ್ವದಲ್ಲಿ ವೀರಶೈವವಿದ್ದಿಲ್ಲವೆಂದು ಸಿದ್ಧಪಡಿಸುವವು.

ಐತಿಹಾಸಿಕ ಕಾರಣಗಳಿಗಾಗಿ ವೀರಶೈವದ ಉಗಮವು ಪುರಾತನವೆಂದು ಡಾ|| ಫ. ಗು. ಹಳಕಟ್ಟಿಯವರು ನಂಬುತ್ತಿಲ್ಲ; ಪರಬ್ರಹ್ಮದ ವಿಚಾರ, ಯೋಗ ವಿಷಯದ ತತ್ವಗಳು, ನಿಷ್ಕಾಮ ಕರ್ಮದ ಹೋಲಿಕೆ ಮುಂತಾದ ತಾತ್ವಿಕ ಅಂಶದ ವಿಷಯಗಳು ವೇದ–ಉಪನಿಷತ್–ಆಗಮ–ಭಗವದ್ಗೀತೆ ಮುಂತಾದವುಗಳಲ್ಲಿ ಕಂಡುಬರುವದರಿಂದ, ಪುರಾತನವಿರಬಹುದೆಂದು ಊಹಿಸುತ್ತಾರೆ. ಆದರೆ ಇವರು ಆಧಾರವೆಂದು ನಂಬಿರುವ ಸೂಕ್ಷ್ಮಾಗಮ–ಪಾರಮೇಶ್ವರಾಗಮ, ಇತರ ವೀರಶೈವ ಸಂಸ್ಕೃತ ಸಾಹಿತ್ಯವು ಸಂಶೋಧನೆಯ ಮೂಲಕ ಇತ್ತೀಚಿನದೆಂದು ಸಿದ್ಧವಾಗುತ್ತಿದೆ.

ವೇದ–ಉಪನಿಷತ್–ಆಗಮ ಮುಂತಾದವುಗಳ ವೀರಶೈವ ಪರ

ಉಲ್ಲೇಖಗಳು ವೀರಶೈವೇತರಿಂದ ಪ್ರಕಾಶಿತಗೊಂಡ ವೇದ–ಉಪನಿಷತ್–ಆಗಮ–ಪುರಾಣ ಗ್ರಂಥಗಳಲ್ಲಿ ಸಿಗುವದಿಲ್ಲ. ಆದ್ದರಿಂದ ಈ ವೀರಶೈವಪರ ಸಂಸ್ಕೃತ ಸಾಹಿತ್ಯವು ವೀರಶೈವ ಪುರೋಹಿತ ಶಾಹಿಗಳಿಂದ ಇತ್ತೀಚಿಗೆ (೧೯–೨೦ನೇ ಶತಮಾನಗಳಲ್ಲಿ) ಬರೆಯಿಸಲ್ಪಟ್ಟಿದೆ.

ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಕೆಲವು ಅಂಶಗಳು ಉಪನಿಷತ್ ಹಾಗೂ ಬಾದರಾಯಣನ ಬ್ರಹ್ಮಸೂತ್ರಗಳಲ್ಲಿಯೂ ಕಂಡುಬರುತ್ತವೆ. ಹೀಗೆಂದ ಮಾತ್ರಕ್ಕೆ ಉಪನಿಷತ್‌ಕಾರರನ್ನು ಬಾದರಾಯಣರನ್ನು ಅದ್ವೈತ ಮತಸ್ಥಾಪಕರೆಂದು ಕರೆಯ ಬಹುದೆ ? ಅದೇ ರೀತಿ ವೀರಶೈವ ತತ್ವಜ್ಞಾನದ ಸಮಾಂತರ ಕೆಲವು ಹೋಲಿಕೆಗಳು ಹಿಂದಿನ ಸಾಹಿತ್ಯದಲ್ಲಿ ಕಂಡುಬಂದರೆ ಆಗ ವೀರಶೈವ ಧರ್ಮವಿತ್ತೆಂದು ಐತಿಹಾಸಿಕ ಕಾರಣಗಳಿಲ್ಲದೇ ನಂಬಲಿಕ್ಕಾಗುವದಿಲ್ಲ. ಶೈವದ ವಿಕಾಸವಾಗಿ ಹಾಗೂ ಭಾರತೀಯ ಸಂಸ್ಕೃತಿಯ ವಿಕಾಸವಾಗಿ ವೀರಶೈವ ಧರ್ಮವು ೧೨ನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿತು. ಬಸವೇಶ್ವರರೇ ಈ ಧರ್ಮ ಸ್ಥಾಪಕರು ಎಂಬುದು ಐತಿಹಾಸಿಕವಾಗಿ ಸಿದ್ಧವಾಗಿದೆ.

■■

ಗದುಗಿನಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಹೃದಯಭಾಗ ಪುಸ್ತಕಸಂಸ್ಕೃತಿ. ಮೊದಲಿನಿಂದಲೂ ಅನ್ನದಾಸೋಹಕ್ಕೆ ಹೆಸರಾದ ವೀರಶೈವ ಮಠಗಳು ೨೦ನೆಯ ಶತಮಾನದ ಕರ್ನಾಟಕಕ್ಕೆ ನೀಡಿದ ದೊಡ್ಡ ಕಾಣಿಕೆ ಶಿಕ್ಷಣ ದಾಸೋಹ. ಇದರಮುಂದುವರಿಕೆ ಪುಸ್ತಕದಾಸೋಹ.

ವೀರಶೈವ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿ ಈ ೨೫ ವರ್ಷಗಳಲ್ಲಿ ವಿಶ್ವವಿದ್ಯಾಲಯ ಪ್ರಸಾರಾಂಗಗಳ ರೀತಿಯಲ್ಲಿ ದುಡಿದ ಶ್ರೀಮಠವು ಪ್ರಕಟಿಸುತ್ತಿರುವ ಪುಸ್ತಕಗಳು ಜನಸಾಮಾನ್ಯರ ಹಾಗೂ ವಿದ್ವಜ್ಜನರ ಗಮನ ಸೆಳೆದಿವೆ. ಈ ಶತಮಾನದ ವೀರಶೈವ ಪ್ರಕಟಣೆಗಳಲ್ಲಿಯೇ ದೊಡ್ಡ ಸಾಧನೆ 'ವೀರಶೈವ ಪುಣ್ಯಪುರುಷ ಮಾಲೆ'ಯ ಕೃತಿಗಳು ಮತ್ತು ವಚನ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಮೂರನೆಯ ಘಟ್ಟವೆಂಬ ಕೀರ್ತಿಗೆ ಪಾತ್ರವಾದ ವಚನಸಾಹಿತ್ಯಕುರಿತಕೃತಿಗಳು.

ಕರ್ನಾಟಕದಲ್ಲಿ ಕೆಲವು ಮಠಗಳು ಅನ್ನದಾಸೋಹಕ್ಕೆ ಇನ್ನು ಕೆಲವು ಶಿಕ್ಷಣ ದಾಸೋಹಕ್ಕೆ ಹೆಸರಾದರೆ ಗದುಗಿನ ಶ್ರೀಮಠವು ಪುಸ್ತಕದಾಸೋಹಕ್ಕೆ ಪ್ರಸಿದ್ಧ.

ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಪುಸ್ತಕದ ಜಗದ್ಗುರುಗಳು ಎಂದೇ ಖ್ಯಾತರಾಗಿದ್ದಾರೆ. ಪೂಜ್ಯರ ಶೂನ್ಯ ಪೀಠಾರೋಹಣದ ೨೫ ವರ್ಷಗಳ ರಜತ ಮಹೋತ್ಸವ ಸಂದರ್ಭದಲ್ಲಿ ೨೫ ಪುಸ್ತಕಗಳು ಬೆಳಕುಕಾಣುತ್ತಿವೆ.

ಪುಸ್ತಕದಜಗದ್ಗುರುಗಳಿಗೆಇದುಪುಸ್ತಕ ಸಂಮಾನ.